ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ ಸಂಖ್ಯಾ ೧೯

ಶ್ರೀ ಸ್ಕಾಂದಮಹಾಪುರಾಣಂ

೭

ಪ್ರಭಾಸಖಂಡಂ

ಪ್ರಭಾಸಕ್ಷೇತ್ರಮಾಹಾತ್ಮ್ಯಂ

(ಭಾಗ ೧)

(ಮೂಲ ಮತ್ತು ಅನುವಾದ ಸಹಿತ)

ಅನುವಾದಕ

ಆಸ್ಥಾನ ವಿದ್ವಾನ್

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್,

ಮೈಸೂರು.

೧೯೫೭

ಅರಿಕೆ

ಭಗವತ್ಕೃಪೆಯಿಂದ ಅಷ್ಟಾದಶ ಪುರಾಣಗಳಲ್ಲಿ ಬೃಹತ್ತಮವಾದ ಶ್ರೀ ಸ್ಕಾಂದ ಮಹಾಪುರಾಣದಲ್ಲಿ ಈ ಇಪ್ಪತ್ತೆಂಟನೆಯ ಸಂಪುಟದಿಂದ ಕಡೆಯದಾದ ಪ್ರಭಾಸಖಂಡ ಪ್ರಾರಂಭವಾಗಿದೆ. ಇದರಲ್ಲಿ ಮೂರು ಭಾಗಗಳಿವೆ ; ಪ್ರಭಾಸಕ್ಷೇತ್ರಮಾಹಾತ್ಮ್ಯ, ವಸ್ತ್ರಾಪಥ (ಗಿರಿನಾರ) ಕ್ಷೇತ್ರಮಾಹಾತ್ಮ್ಯ, ಅರ್ಬುದಖಂಡ—ಎಂದು. ಇವುಗಳಲ್ಲಿ ಮೊದಲನೆಯದು ಪ್ರಭಾಸಕ್ಷೇತ್ರಮಾಹಾತ್ಮ್ಯವು ಬಹಳ ದೊಡ್ಡದು. ಇದು ಎರಡು ಸಂಪುಟಗಳಲ್ಲಿ ಮುಗಿಯುತ್ತದೆ. ಉಳಿದೆರಡು ಭಾಗಗಳು ಮೂರನೆಯ ಭಾಗದಲ್ಲಿ ಸಂಪೂರ್ಣವಾಗುವುದು. ಅಂತು ಈ ಮಹಾಪುರಾಣ ಮೂವತ್ತು ಸಂಪುಟಗಳಲ್ಲಿ ಪರಿಸಮಾಪ್ತಿಗೊಳ್ಳುತ್ತದೆ.

ಪ್ರಭಾಸಕ್ಷೇತ್ರ ಈಗಿನ ಗುಜರಾತ್ ಪ್ರಾಂತ್ಯದಲ್ಲಿ ಪ್ರಸಿದ್ಧವಾಗಿದೆ. ಇಲ್ಲಿಯೇ ಪ್ರಾಚೀನ ಭಾರತದಲ್ಲಿ ವಿಖ್ಯಾತವಾಗಿ ಅನೇಕ ಚಾರಿತ್ರಕ ಸಂಗತಿಗಳಿಗೆ ಆಕರವೆನಿಸಿದ್ದ ಸೋಮನಾಥ ದೇವಾಲಯವಿದ್ದುದು. ಈ ದೇವಾಲಯವನ್ನು ವಿಗ್ರಹ ವಿಧ್ವೇಷಿ ಮಹಮದ್‌ಘಸ್ನಿ ಕೊಳ್ಳೆಹೊಡೆದನೆಂಬ ಸಂಗತಿ ಚರಿತ್ರೆಯಲ್ಲಿ ಸುವಿದಿತವಾಗಿದೆ. ಈಚೆಗೆ ಮಹಿಮಾಸ್ಪದವಾದ ಈ ದೇವಾಲಯದ ಜೀರ್ಣೋದ್ಧಾರ ಮಹಾಕಾರ್ಯ ಭಾರತಕ್ಕೆ ಸ್ವಾತಂತ್ರ್ಯಬಂದಮೇಲೆ, ಈಗ ಮೂರು ವರ್ಷಗಳ ಕೆಳಗೆ ನಡೆದು ಆ ಕ್ಷೇತ್ರ, ಭಕ್ತಾದಿಗಳ ಯಾತ್ರಾದಿಕಾರ್ಯಗಳಿಗೆ ಅನುವಾಗಿದೆ ಎಂಬ ಸಂಗತಿಯನ್ನಿಲ್ಲಿ ಸಂತೋಷದಿಂದ ಸೂಚಿಸಬಹುದಾಗಿದೆ. ಈ ಕ್ಷೇತ್ರದ ಸುತ್ತಮುತ್ತಣ ಶಿವಾಲಯಗಳ ವರ್ಣನೆಗಳು ಮಧ್ಯ ಮಧ್ಯದಲ್ಲಿ ಇತರ ಆಖ್ಯಾನೋಪಾಖ್ಯಾನಗಳ ವಿವರಣೆಗಳು ಬರುತ್ತವೆ. ಈ ಸಂಪುಟದಲ್ಲಿ ಪ್ರಭಾಸಕ್ಷೇತ್ರಮಾಹಾತ್ಮ್ಯದ ನೂರಇಪ್ಪತ್ತೈದು ಅಧ್ಯಾಯಗಳು ಮಾತ್ರ ಮುಗಿದಿವೆ. ಉಳಿದಭಾಗ ಇಪ್ಪತ್ತೊಂಬತ್ತನೆಯ ಸಂಪುಟದಲ್ಲಿ ಮುಗಿಸಲಾಗುವುದು.

ಇಂತಹ ಅನೇಕಾನೇಕ ಕ್ಷೇತ್ರಮಾಹಾತ್ಮ್ಯಗಳ ಸಂಪುಟವೆನಿಸಿರುವ ಈ ಮಹಾಪುರಾಣವನ್ನು ಕನ್ನಡದ ಅನುವಾದದೊಡನೆ ಪ್ರಕಟಿಸಲು ಪ್ರೇರೇಪಿಸಿ ಕನ್ನಡಿಗರೆಲ್ಲರಿಗೂ ಮಹೋಪಕೃತಿಯೆನ್ನಿಸಗಿ ಅವರೆಲ್ಲರ ಚಿರಕೃತಜ್ಞತೆಗೆ ಪಾತ್ರರಾಗಿರುವ ನಮ್ಮನ್ನಾಳುವ ಶ್ರೀಮದ್ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ.,ಜಿ.ಸಿ.ಎಸ್.ಐ. ಮಹಾಪ್ರಭುಗಳವರಿಗೆ ಪರಮೇಶ್ವರನು ಇತೋಪ್ಯತಿಶಯವಾದ ಸಮಸ್ತ ಸನ್ಮಂಗಳಗಳನ್ನೂ ದಯೆಪಾಲಿಸಿ ಸಂರಕ್ಷಿಸಲೆಂದು ಸಂಪ್ರಾರ್ಥಿಸುತ್ತೇನೆ.

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ

ವಿಷಯಾನುಕ್ರಮಣಿಕೆ

			ಪುಟ ಸಂಖ್ಯೆ
ಮೊದಲನೆಯ ಅಧ್ಯಾಯ—			
ಪ್ರಶ್ನಾಧ್ಯಾಯ ವರ್ಣನ	....	....	೧—೬
ಎರಡನೆಯ ಅಧ್ಯಾಯ—			
ಪುರಾಣ ಪುಸ್ತಕದಾನ ಫಲವರ್ಣನ	....	....	೭—೨೨
ಮೂರನೆಯ ಅಧ್ಯಾಯ—			
ದೇವೀಪ್ರಶ್ನವರ್ಣನ	....	....	೨೩—೪೪
ನಾಲ್ಕನೆಯ ಅಧ್ಯಾಯ—			
ಕ್ಷೇತ್ರಫಲವರ್ಣನ	....	....	೪೫—೬೩
ಐದನೆಯ ಅಧ್ಯಾಯ—			
ಕ್ಷೇತ್ರಸ್ಥರ್ಷಿ ದೇವಗಣವರ್ಣನ	....	....	೬೪—೭೧
ಆರನೆಯ ಅಧ್ಯಾಯ—			
ಶ್ರೀಸೋಮೇಶ್ವರ ಮಹಿಮಾನುವರ್ಣನ	....	....	೭೨—೮೭
ಏಳನೆಯ ಅಧ್ಯಾಯ—			
ಶ್ರೀಸೋಮನಾಥ ಪ್ರಾದುರ್ಭಾವವರ್ಣನ	....	....	೮೮—೯೪
ಎಂಟನೆಯ ಅಧ್ಯಾಯ—			
ಶ್ರೀಸೋಮೇಶ್ವರೈಶ್ವರ್ಯವರ್ಣನ	....	....	೯೫—೯೯
ಒಂಬತ್ತನೆಯ ಅಧ್ಯಾಯ—			
ಶ್ರೀಹರಿಸ್ಥಿತಿಪ್ರಶ್ನವರ್ಣನ	....	....	೧೦೦—೧೦೯
ಹತ್ತನೆಯ ಅಧ್ಯಾಯ—			
ಸರ್ವಕ್ಷೇತ್ರೋತ್ತಮತ್ವವರ್ಣನ	....	....	೧೧೦—೧೧೮
ಹನ್ನೊಂದನೆಯ ಅಧ್ಯಾಯ—			
ರಾಜಭಟ್ಟಾರಕೋತ್ಪತ್ತಿವರ್ಣನ	....	....	೧೧೯—೧೩೪
ಹನ್ನೆರಡನೆಯ ಅಧ್ಯಾಯ—			
ಯಮೇಶ್ವರೋತ್ಪತ್ತಿವರ್ಣನ	....	....	೧೩೫—೧೩೬
ಹದಿಮೂರನೆಯ ಅಧ್ಯಾಯ—			
ಅರ್ಕಸ್ಥಲೋತ್ಪತ್ತಿವರ್ಣನ	....	....	೧೩೭—೧೬೩

			ಪುಟಸಂಖ್ಯೆ
ಹದಿನಾಲ್ಕನೆಯ ಅಧ್ಯಾಯ—			
ಸಿದ್ಧೇಶ್ವರೋತ್ಪತ್ತಿವರ್ಣನ	....	....	೧೬೩—೧೬೮
ಹದಿನೈದನೆಯ ಅಧ್ಯಾಯ—			
ಪಾಪನಾಶನೋತ್ಪತ್ತಿವರ್ಣನ	....	....	೧೬೯
ಹದಿನಾರನೆಯ ಅಧ್ಯಾಯ—			
ಪಾತಾಲವಿವರ ಸುನಂದಾದಿ ಮಾತೃಗಣೋತ್ಪತ್ತಿವರ್ಣನ		....	೧೭೦—೧೭೪
ಹದಿನೇಳನೆಯ ಅಧ್ಯಾಯ—			
ಅರ್ಕಸ್ಥಳ ಪೂಜಾವಿಧಾನಾದಿವರ್ಣನ	....	....	೧೭೫—೨೦೪
ಹದಿನೆಂಟನೆಯ ಅಧ್ಯಾಯ—			
ಶಿವಶಿರೋಭೂಷಣ ಚಂದ್ರೋತ್ಪತ್ತಿವರ್ಣನ	....	....	೨೦೫—೨೦೮
ಹತ್ತೊಂಬತ್ತನೆಯ ಅಧ್ಯಾಯ—			
ಶ್ರೀ ವಿಷ್ಣ್ವವತಾರವರ್ಣನ	....	....	೨೦೯—೨೨೩
ಇಪ್ಪತ್ತನೆಯ ಅಧ್ಯಾಯ—			
ಚಂದ್ರೋತ್ಪತ್ತಿವರ್ಣನ	....	....	೨೨೪—೨೩೪
ಇಪ್ಪತ್ತೊಂದನೆಯ ಅಧ್ಯಾಯ—			
ಶಿವಾರಾಧನೋಪದೇಶವರ್ಣನ	....	....	೨೩೫—೨೪೭
ಇಪ್ಪತ್ತೆರಡನೆಯ ಅಧ್ಯಾಯ—			
ಸೋಮವರಪ್ರದಾನವರ್ಣನ	....	....	೨೪೮—೨೬೬
ಇಪ್ಪತ್ತಮೂರನೆಯ ಅಧ್ಯಾಯ—			
ಸೋಮೇಶ್ವರ ಪ್ರತಿಷ್ಠಾ ಮಾಹಾತ್ಮ್ಯವರ್ಣನ	....	....	೨೬೭—೨೮೬
ಇಪ್ಪತ್ತನಾಲ್ಕನೆಯ ಅಧ್ಯಾಯ—			
ಸೋಮವಾರವ್ರತ ಮಾಹಾತ್ಮ್ಯವರ್ಣನ	....	....	೨೮೭—೩೧೪
ಇಪ್ಪತ್ತೈದನೆಯ ಅಧ್ಯಾಯ—			
ಗಂಧರ್ವನಕನ್ಯಾವೃತ್ತಾಂತವರ್ಣನ	....	....	೩೧೫—೩೨೩
ಇಪ್ಪತ್ತಾರನೆಯ ಅಧ್ಯಾಯ—			
ಗಂಧರ್ವೇಶ್ವರ ಮಾಹಾತ್ಮ್ಯವರ್ಣನ	....	....	೩೨೪
ಇಪ್ಪತ್ತೇಳನೆಯ ಅಧ್ಯಾಯ—			
ಗಂಧರ್ವಸೇನೇಶ್ವರ ಮಾಹಾತ್ಮ್ಯವರ್ಣನ	....	....	೩೨೫

ಪುಟಸಂಖ್ಯೆ

ಇಪ್ಪತ್ತೆಂಟನೆಯ ಅಧ್ಯಾಯ—
ತೀರ್ಥಯಾತ್ರಾ ವಿಧಾನವರ್ಣನ ೩೨೬–೩೪೬

ಇಪ್ಪತ್ತೊಂಬತ್ತನೆಯ ಅಧ್ಯಾಯ—
ಸಮುದ್ರೋದಕಾಪೇಯತಾ ಕಾರಣವರ್ಣನ ೩೪೭–೩೬೨

ಮೂವತ್ತನೆಯ ಅಧ್ಯಾಯ—
ಸೋಮೇಶ್ವರ ಪೂಜಾಮಹಾತ್ಮ್ಯವರ್ಣನ ೩೬೩–೩೬೬

ಮೂವತ್ತೊಂದನೆಯ ಅಧ್ಯಾಯ—
ದೇವಕೃತ ಸ್ವಸ್ವಾಸ್ತ್ರ ಸಮರ್ಪಣವರ್ಣನ ೩೬೭–೩೭೦

ಮೂವತ್ತೆರಡನೆಯ ಅಧ್ಯಾಯ—
ವಡವಾನಲವಂಚನ ವೃತ್ತಾಂತವರ್ಣನ ೩೭೧–೩೯೦

ಮೂವತ್ತಮೂರನೆಯ ಅಧ್ಯಾಯ—
ಸರಸ್ವತೀ ವೃತ್ತಾಂತವರ್ಣನ ೩೯೧–೪೦೭

ಮೂವತ್ತನಾಲ್ಕನೆಯ ಅಧ್ಯಾಯ—
ಸರಸ್ವತ್ಯವತಾರ ಮಹಿಮಾವರ್ಣನ ೪೦೮–೪೧೪

ಮೂವತ್ತೈದನೆಯ ಅಧ್ಯಾಯ—
ಅಗ್ನಿತೀರ್ಥ ಮಾಹಾತ್ಮ್ಯವರ್ಣನ ೪೧೫–೪೩೩

ಮೂವತ್ತಾರನೆಯ ಅಧ್ಯಾಯ—
ಪ್ರಾಚೀಸರಸ್ವತೀ ಮಾಹಾತ್ಮ್ಯವರ್ಣನ ೪೩೪–೪೪೩

ಮೂವತ್ತೇಳನೆಯ ಅಧ್ಯಾಯ—
ಕಂಕಣಮಾಹಾತ್ಮ್ಯವರ್ಣನ ೪೪೪–೪೪೮

ಮೂವತ್ತೆಂಟನೆಯ ಅಧ್ಯಾಯ—
ಕಪರ್ದಿವಿನಾಯಕಮಾಹಾತ್ಮ್ಯವರ್ಣನ ೪೪೯–೪೫೮

ಮೂವತ್ತೊಂಬತ್ತನೆಯ ಅಧ್ಯಾಯ—
ಕೇದಾರೇಶ್ವರಲಿಂಗಮಾಹಾತ್ಮ್ಯವರ್ಣನ ೪೫೯–೪೬೮

ನಲವತ್ತನೆಯ ಅಧ್ಯಾಯ—
ಭೀಮೇಶ್ವರಮಾಹಾತ್ಮ್ಯವರ್ಣನ ೪೬೯–೪೭೧

ನಲವತ್ತೊಂದನೆಯ ಅಧ್ಯಾಯ—
ಭೈರವೇಶ್ವರಮಾಹಾತ್ಮ್ಯವರ್ಣನ ೪೭೨–೪೭೩

	ಪುಟಸಂಖ್ಯೆ
ನಲವತ್ತೆರಡನೆಯ ಅಧ್ಯಾಯ— ಚಂಡೀಶಮಾಹಾತ್ಮ್ಯವರ್ಣನ	೪೭೪_೪೭೬
ನಲವತ್ತಮೂರನೆಯ ಅಧ್ಯಾಯ— ಆದಿತ್ಯೇಶ್ವರಮಾಹಾತ್ಮ್ಯವರ್ಣನ	೪೭೭_೪೭೮
ನಲವತ್ತನಾಲ್ಕನೆಯ ಅಧ್ಯಾಯ— ಸೋಮೇಶ್ವರಮಾಹಾತ್ಮ್ಯವರ್ಣನ	೪೭೯
ನಲವತ್ತೈದನೆಯ ಅಧ್ಯಾಯ— ಅಂಗಾರೇಶ್ವರಮಾಹಾತ್ಮ್ಯವರ್ಣನ	೪೮೦_೪೮೧
ನಲವತ್ತಾರನೆಯ ಅಧ್ಯಾಯ— ಬುಧೇಶ್ವರಮಾಹಾತ್ಮ್ಯವರ್ಣನ	೪೮೨_೪೮೩
ನಲವತ್ತೇಳನೆಯ ಅಧ್ಯಾಯ— ಬೃಹಸ್ಪತೀಶ್ವರಮಾಹಾತ್ಮ್ಯವರ್ಣನ	೪೮೪_೪೮೫
ನಲವತ್ತೆಂಟನೆಯ ಅಧ್ಯಾಯ— ಶುಕ್ರೇಶ್ವರಮಾಹಾತ್ಮ್ಯವರ್ಣನ	೪೮೬_೪೮೮
ನಲವತ್ತೊಂಬತ್ತನೆಯ ಅಧ್ಯಾಯ— ಶನೈಶ್ಚರೇಶ್ವರಮಾಹಾತ್ಮ್ಯವರ್ಣನ	೪೮೯_೪೯೮
ಐವತ್ತನೆಯ ಅಧ್ಯಾಯ— ರಾಹ್ವೀಶ್ವರಮಾಹಾತ್ಮ್ಯವರ್ಣನ	೪೯೯_೫೦೦
ಐವತ್ತೊಂದನೆಯ ಅಧ್ಯಾಯ— ಕೇತ್ವೀಶ್ವರಮಾಹಾತ್ಮ್ಯವರ್ಣನ	೫೦೧_೫೦೩
ಐವತ್ತೆರಡನೆಯ ಅಧ್ಯಾಯ— ಸಿದ್ಧೇಶ್ವರಮಾಹಾತ್ಮ್ಯವರ್ಣನ	೫೦೪_೫೦೫
ಐವತ್ತಮೂರನೆಯ ಅಧ್ಯಾಯ— ಕಪಿಲೇಶ್ವರಮಾಹಾತ್ಮ್ಯವರ್ಣನ	೫೦೬_೫೦೭
ಐವತ್ತನಾಲ್ಕನೆಯ ಅಧ್ಯಾಯ— ಗಂಧರ್ವೇಶ್ವರಮಾಹಾತ್ಮ್ಯವರ್ಣನ	೫೦೮_೫೦೯
ಐವತ್ತೈದನೆಯ ಅಧ್ಯಾಯ— ವಿಮಲೇಶ್ವರಮಾಹಾತ್ಮ್ಯವರ್ಣನ	೫೧೦_೫೧೧

	ಪುಟಸಂಖ್ಯೆ
ಐವತ್ತಾರನೆಯ ಅಧ್ಯಾಯ—	
ಘಸಘನೇಶ್ವರಮಾಹಾತ್ಮ್ಯವರ್ಣನ	೫೧೨_೫೧೩
ಐವತ್ತೇಳನೆಯ ಅಧ್ಯಾಯ—	
ವರಾರೋಹಾಮಾಹಾತ್ಮ್ಯವರ್ಣನ	೫೧೪_೫೧೭
ಐವತ್ತೆಂಟನೆಯ ಅಧ್ಯಾಯ—	
ಅಜಾಪಾಲೇಶ್ವರಮಾಹಾತ್ಮ್ಯವರ್ಣನ	೫೧೮_೫೨೬
ಐವತ್ತೊಂಬತ್ತನೆಯ ಅಧ್ಯಾಯ—	
ಅಜಾದೇವೀಮಾಹಾತ್ಮ್ಯವರ್ಣನಂ	೫೨೭_೫೩೦
ಅರುವತ್ತನೆಯ ಅಧ್ಯಾಯ—	
ಮಂಗಲಾಮಾಹಾತ್ಮ್ಯವರ್ಣನ	೫೩೧_೫೩೩
ಅರುವತ್ತೊಂದನೆಯ ಅಧ್ಯಾಯ—	
ಲಲಿತೋಮಾವಿಶಾಲಾಕ್ಷೀಮಾಹಾತ್ಮ್ಯವರ್ಣನ	೫೩೪_೫೩೬
ಅರುವತ್ತೆರಡನೆಯ ಅಧ್ಯಾಯ—	
ಚತ್ವರಾದೇವೀಮಾಹಾತ್ಮ್ಯವರ್ಣನ	೫೩೭_೫೩೮
ಅರುವತ್ತಮೂರನೆಯ ಅಧ್ಯಾಯ—	
ಝೈರಪೇಶ್ವರಮಾಹಾತ್ಮ್ಯವರ್ಣನ	೫೩೯_೫೪೦
ಅರುವತ್ತನಾಲ್ಕನೆಯ ಅಧ್ಯಾಯ—	
ಲಕ್ಷ್ಮೀಶ್ವರಮಾಹಾತ್ಮ್ಯವರ್ಣನ	೫೪೧
ಅರುವತ್ತೈದನೆಯ ಅಧ್ಯಾಯ—	
ಪಾಷಪೇಶ್ವರಮಾಹಾತ್ಮ್ಯವರ್ಣನ	೫೪೨
ಅರುವತ್ತಾರನೆಯ ಅಧ್ಯಾಯ—	
ಅರ್ಘೇಶ್ವರಮಾಹಾತ್ಮ್ಯವರ್ಣನ	೫೪೩_೫೪೪
ಅರುವತ್ತೇಳನೆಯ ಅಧ್ಯಾಯ—	
ಕಾಮೇಶ್ವರಮಾಹಾತ್ಮ್ಯವರ್ಣನ	೫೪೫_೫೪೬
ಅರುವತ್ತೆಂಟನೆಯ ಅಧ್ಯಾಯ—	
ಗೌರೀತಪೋವನಮಾಹಾತ್ಮ್ಯವರ್ಣನ	೫೪೭_೫೫೧
ಅರವತ್ತೊಂಬತ್ತನೆಯ ಅಧ್ಯಾಯ—	
ಗೌರೀಶ್ವರಮಾಹಾತ್ಮ್ಯವರ್ಣನ	೫೫೨_೫೫೩

			ಪುಟಸಂಖ್ಯೆ
ಎಪ್ಪತ್ತನೆಯ ಅಧ್ಯಾಯ—			
ವರುಣೇಶ್ವರಮಾಹಾತ್ಮ್ಯವರ್ಣನ	....	....	೫೫೪—೫೫೬
ಎಪ್ಪತ್ತೊಂದನೆಯ ಅಧ್ಯಾಯ—			
ಉಷೇಶ್ವರಮಾಹಾತ್ಮ್ಯವರ್ಣನ	....	....	೫೫೭—೫೫೮
ಎಪ್ಪತ್ತೆರಡನೆಯ ಅಧ್ಯಾಯ—			
ಜಲವಾಸಗಣಪತಿಮಾಹಾತ್ಮ್ಯವರ್ಣನ	....	......	೫೫೯
ಎಪ್ಪತ್ತಮೂರನೆಯ ಅಧ್ಯಾಯ—			
ಕುಮಾರೇಶ್ವರಮಾಹಾತ್ಮ್ಯವರ್ಣನ	....	......	೫೬೦—೫೬೧
ಎಪ್ಪತ್ತನಾಲ್ಕನೆಯ ಅಧ್ಯಾಯ—			
ಶಾಕಲ್ಯೇಶ್ವರಮಾಹಾತ್ಮ್ಯ ವರ್ಣನ	......	......	೫೬೩—೫೬೫
ಎಪ್ಪತ್ತೈದನೆಯ ಅಧ್ಯಾಯ—			
ಕಲಕಲೇಶ್ವರ ಮಾಹಾತ್ಮ್ಯವರ್ಣನ	....	....	೫೬೬—೫೭೦
ಎಪ್ಪತ್ತಾರನೆಯ ಅಧ್ಯಾಯ—			
ಲಕುಲೀಶಲಿಂಗದ್ವಯಮಾಹಾತ್ಮ್ಯವರ್ಣನ	....	......	೫೭೧—೫೭೩
ಎಪ್ಪತ್ತೇಳನೆಯ ಅಧ್ಯಾಯ—			
ಉತ್ತಂಕೇಶ್ವರಮಾಹಾತ್ಮ್ಯವರ್ಣನ	......	......	೫೭೩
ಎಪ್ಪತ್ತೆಂಟನೆಯ ಅಧ್ಯಾಯ—			
ವೈಶ್ವಾನರೇಶ್ವರಮಾಹಾತ್ಮ್ಯವರ್ಣನ	......	....	೫೭೪—೫೭೫
ಎಪ್ಪತ್ತೊಂಬತ್ತನೆಯ ಅಧ್ಯಾಯ—			
ಲಕುಲೀಶ್ವರಮಾಹಾತ್ಮ್ಯವರ್ಣನ	....	....	೫೭೬—೫೭೭
ಎಂಬತ್ತನೆಯ ಅಧ್ಯಾಯ—			
ಗೌತಮೇಶ್ವರಮಾಹಾತ್ಮ್ಯವರ್ಣನ	....	....	೫೭೮—೫೭೯
ಎಂಬತ್ತೊಂದನೆಯ ಅಧ್ಯಾಯ—			
ದೈತ್ಯಸೂದನಮಾಹಾತ್ಮ್ಯವರ್ಣನ	.....	....	೫೮೦—೫೮೮
ಎಂಬತ್ತೆರಡನೆಯ ಅಧ್ಯಾಯ—			
ಚಕ್ರತೀರ್ಥೋತ್ಪತ್ತಿವರ್ಣನ	....	....	೫೮೯—೫೯೧
ಎಂಬತ್ತಮೂರನೆಯ ಅಧ್ಯಾಯ—			
ಯೋಗೇಶ್ವರೀಮಾಹಾತ್ಮ್ಯವರ್ಣನ	....	....	೫೯೩—೬೦೧

			ಪುಟಸಂಖ್ಯೆ
ಎಂಬತ್ತನಾಲ್ಕನೆಯ ಅಧ್ಯಾಯ—			
ಆದಿನಾರಾಯಣಮಾಹಾತ್ಮ್ಯವರ್ಣನ	....	....	೬೦೨_೬೦೭
ಎಂಬತ್ತೈದನೆಯ ಅಧ್ಯಾಯ—			
ಸನ್ನಿಹಿತ್ಯಾಮಹಾತ್ಮ್ಯವರ್ಣನ	....	....	೬೦೮_೬೧೧
ಎಂಬತ್ತಾರನೆಯ ಅಧ್ಯಾಯ—			
ಪಾಂಡವೇಶ್ವರಮಾಹಾತ್ಮ್ಯವರ್ಣನ	....	....	೬೧೨_೬೧೩
ಎಂಬತ್ತೇಳನೆಯ ಅಧ್ಯಾಯ—			
ಭೂತೇಶ್ವರಮಾಹಾತ್ಮ್ಯವರ್ಣನ	....	....	೬೧೪_೬೧೭
ಎಂಬತ್ತೆಂಟನೆಯ ಅಧ್ಯಾಯ—			
ನೀಲರುದ್ರಮಾಹಾತ್ಮ್ಯವರ್ಣನ	....	....	೬೧೮_೬೧೯
ಎಂಬತ್ತೊಂಬತ್ತನೆಯ ಅಧ್ಯಾಯ—			
ಕಪಾಲೀಶ್ವರ ಮಾಹಾತ್ಮ್ಯವರ್ಣನ	....	....	೬೨೦_೬೨೧
ತೊಂಬತ್ತನೆಯ ಅಧ್ಯಾಯ—			
ವೃಷವಾಹನೇಶ್ವರಮಾಹಾತ್ಮ್ಯವರ್ಣನ	....	....	೬೨೨_೬೨೭
ತೊಂಬತ್ತೊಂದನೆಯ ಅಧ್ಯಾಯ—			
ತ್ರ್ಯಂಬಕೇಶ್ವರಮಾಹಾತ್ಮ್ಯವರ್ಣನ	....	......	೬೨೮_೬೩೦
ತೊಂಬತ್ತೆರಡನೆಯ ಅಧ್ಯಾಯ—			
ಅಘೋರೇಶ್ವರಮಾಹಾತ್ಮ್ಯವರ್ಣನ	....	....	೬೩೧_೬೩೨
ತೊಂಬತ್ತಮೂರನೆಯ ಅಧ್ಯಾಯ—			
ಮಹಾಕಾಲೇಶ್ವರಮಾಹಾತ್ಮ್ಯವರ್ಣನ	....	....	೬೩೩_೬೩೫
ತೊಂಬತ್ತನಾಲ್ಕನೆಯ ಅಧ್ಯಾಯ—			
ಭೈರವೇಶ್ವರಮಾಹಾತ್ಮ್ಯವರ್ಣನ	......	......	೬೩೬_೬೩೮
ತೊಂಬತ್ತೈದನೆಯ ಅಧ್ಯಾಯ—			
ಮೃತ್ಯುಂಜಯಮಾಹಾತ್ಮ್ಯವರ್ಣನ	......	......	೬೩೯_೬೪೧
ತೊಂಬತ್ತಾರನೆಯ ಅಧ್ಯಾಯ—			
ಕಾಮೇಶ್ವರಮಾಹಾತ್ಮ್ಯವರ್ಣನ	......	......	೬೪೨_೬೪೪
ತೊಂಬತ್ತೇಳನೆಯ ಅಧ್ಯಾಯ—			
ಯೋಗೇಶ್ವರಮಾಹಾತ್ಮ್ಯವರ್ಣನ	......	......	೬೪೫_೬೪೭

ಪುಟಸಂಖ್ಯೆ

ತೊಂಬತ್ತೆಂಟನೆಯ ಅಧ್ಯಾಯ—
ಪೃಥ್ವೀಶ್ವರ (ಚಂದ್ರೇಶ್ವರ) ಮಾಹಾತ್ಮ್ಯವರ್ಣನ .... ೬೪೮—೬೫೩

ತೊಂಬತ್ತೊಂಬತ್ತನೆಯ ಅಧ್ಯಾಯ—
ದಂಡಪಾಣಿಚಕ್ರಧರಮಾಹಾತ್ಮ್ಯವರ್ಣನ .... ೬೫೪—೬೬೦

ನೂರನೆಯ ಅಧ್ಯಾಯ—
ಸಾಂಬನಿಗೆ ದುರ್ವಾಸನಶಾಪಪ್ರದಾನವರ್ಣನ .... ೬೬೧—೬೬೩

ನೂರೊಂದನೆಯ ಅಧ್ಯಾಯ—
ಸಾಂಬಾದಿತ್ಯಮಾಹಾತ್ಮ್ಯವರ್ಣನ .... ೬೬೪—೬೭೫

ನೂರೆರಡನೆಯ ಅಧ್ಯಾಯ—
ಕಂಟಕಶೋಧಿನೀ ಮಾಹಾತ್ಮ್ಯವರ್ಣನ .... ೬೭೬—೬೭೭

ನೂರಮೂರನೆಯ ಅಧ್ಯಾಯ—
ಕಪಾಲೇಶ್ವರಮಾಹಾತ್ಮ್ಯವರ್ಣನ .... ೬೭೮—೬೮೩

ನೂರನಾಲ್ಕನೆಯ ಅಧ್ಯಾಯ—
ಕೋಟೀಶ್ವರಮಾಹಾತ್ಮ್ಯವರ್ಣನ .... ೬೮೩—೬೮೪

ನೂರಐದನೆಯ ಅಧ್ಯಾಯ—
ಬ್ರಹ್ಮಮಾಹಾತ್ಮ್ಯವರ್ಣನ .... ೬೮೫—೬೯೬

ನೂರಆರನೆಯ ಅಧ್ಯಾಯ—
ಬ್ರಾಹ್ಮಣಪ್ರಶಂಸಾವರ್ಣನ .... ೬೯೭—೭೦೮

ನೂರೇಳನೆಯ ಅಧ್ಯಾಯ—
ಬಾಲರೂಪಿಬ್ರಹ್ಮಮಾಹಾತ್ಮ್ಯವರ್ಣನ .... ೭೦೯—೭೨೫

ನೂರೆಂಟನೆಯ ಅಧ್ಯಾಯ—
ಪ್ರತ್ಯೂಷೇಶ್ವರಮಾಹಾತ್ಮ್ಯವರ್ಣನ .... ೭೨೬—೭೨೮

ನೂರಒಂಬತ್ತನೆಯ ಅಧ್ಯಾಯ—
ಅನಿಲೇಶ್ವರಮಾಹಾತ್ಮ್ಯವರ್ಣನ .... ೭೨೯—೭೩೦

ನೂರಹತ್ತನೆಯ ಅಧ್ಯಾಯ—
ಪ್ರಭಾಸೇಶ್ವರಮಾಹಾತ್ಮ್ಯವರ್ಣನ .... ೭೩೧—೭೩೩

ನೂರಹನ್ನೊಂದನೆಯ ಅಧ್ಯಾಯ—
ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನ .... ೭೩೪—೭೪೦

			ಪುಟಸಂಖ್ಯೆ
ನೂರಹನ್ನೆರಡನೆಯ ಅಧ್ಯಾಯ—			
ಲಕ್ಷ್ಮಣೇಶ್ವರಮಾಹಾತ್ಮ್ಯವರ್ಣನ	......	....	೭೪೧_೭೪೨
ನೂರಹದಿಮೂರನೆಯ ಅಧ್ಯಾಯ—			
ಜಾನಕೀಶ್ವರಮಾಹಾತ್ಮ್ಯವರ್ಣನ	....	....	೭೪೩_೭೪೪
ನೂರಹದಿನಾಲ್ಕನೆಯ ಅಧ್ಯಾಯ—			
ಪಾವನಸ್ವಾಮಿಮಾಹಾತ್ಮ್ಯವರ್ಣನ	......	......	೭೪೫_೭೪೬
ನೂರಹದಿನೈದನೆಯ ಅಧ್ಯಾಯ—			
ಪುಷ್ಕರೇಶ್ವರಮಾಹಾತ್ಮ್ಯವರ್ಣನ	....	....	೭೪೭
ನೂರಹದಿನಾರನೆಯ ಅಧ್ಯಾಯ—			
ಶಂಖೋದಕ ಕುಂಡೇಶ್ವರೀಗೌರಿಮಾಹಾತ್ಮ್ಯವರ್ಣನ		....	೭೪೮_೭೪೯
ನೂರಹದಿನೇಳನೆಯ ಅಧ್ಯಾಯ—			
ಭೂತನಾಥೇಶ್ವರಮಾಹಾತ್ಮ್ಯವರ್ಣನ	....	....	೭೫೦_೭೫೧
ನೂರಹದಿನೆಂಟನೆಯ ಅಧ್ಯಾಯ—			
ಗೋಸ್ಯಾದಿತ್ಯಮಾಹಾತ್ಮ್ಯವರ್ಣನ	....	....	೭೫೨_೭೫೮
ನೂರಹತ್ತೊಂಬತ್ತನೆಯ ಅಧ್ಯಾಯ—			
ಬಲಾತಿಬಲದೈತ್ಯಘ್ನಿಮಾಹಾತ್ಮ್ಯವರ್ಣನ	....	....	೭೫೯_೭೬೯
ನೂರಇಪ್ಪತ್ತನೆಯ ಅಧ್ಯಾಯ—			
ಗೋಪೀಶ್ವರಮಾಹಾತ್ಮ್ಯವರ್ಣನ	....	....	೭೭೦
ನೂರಇಪ್ಪತ್ತೊಂದನೆಯ ಅಧ್ಯಾಯ—			
ಜಾಮದಗ್ನೀಶ್ವರಮಾಹಾತ್ಮ್ಯವರ್ಣನ	....	....	೭೭೧_೭೭೩
ನೂರಇಪ್ಪತ್ತೆರಡನೆಯ ಅಧ್ಯಾಯ—			
ಚಿತ್ರಾಂಗದೇಶ್ವರಮಾಹಾತ್ಮ್ಯವರ್ಣನ	....	....	೭೭೪_೭೭೫
ನೂರಇಪ್ಪತ್ತಮೂರನೆಯ ಅಧ್ಯಾಯ—			
ರಾವಣೇಶ್ವರಮಾಹಾತ್ಮ್ಯವರ್ಣನ	....	....	೭೭೬_೭೮೦
ನೂರಇಪ್ಪತ್ತನಾಲ್ಕನೆಯ ಅಧ್ಯಾಯ—			
ಸೌಭಾಗ್ಯೇಶ್ವರಮಾಹಾತ್ಮ್ಯವರ್ಣನ	....	....	೭೮೧_೭೮೩
ನೂರಇಪ್ಪತ್ತೈದನೆಯ ಅಧ್ಯಾಯ—			
ಸೌಷೋಸೇಶ್ವರಮಾಹಾತ್ಮ್ಯವರ್ಣನ	....	....	೭೮೨_೭೮೩

॥ ಶ್ರೀಃ ॥

॥ ಶ್ರೀ ಶಂಕರಃ ಶಂಕರಃ ॥

ಶ್ರೀ ಸ್ಕಾಂದಮಹಾಪುರಾಣಂ

ಅಥ ಪ್ರಭಾಸಖಂಡಂ ಪ್ರಾರಭ್ಯತೇ

ಪ್ರಭಾಸಕ್ಷೇತ್ರಮಾಹಾತ್ಮ್ಯಂ

ಓಂ ನಮಃ ಶ್ರೀಪರಮಾತ್ಮನೇ ಪರಮಪುರುಷೋತ್ತಮಾಯ ।
ಓಂ ನಮೋ ಹರಿಹರ ಹಿರಣ್ಯಗರ್ಭೇಭ್ಯೋ ನಮೋ ವ್ಯಾಸವಾಲ್ಮೀಕಿ
ಶುಕಪರಾಶರೇಭ್ಯಃ ॥

ಅಥ ಪ್ರಥಮೋಽಧ್ಯಾಯಃ

ಪ್ರಶ್ನಾಧ್ಯಾಯ ವರ್ಣನಂ

ವ್ಯಾಸ ಉವಾಚ :—

ಯಶ್ಚಾದ್ಯಃ ಪುರುಷಃ ಪುರಾಣ ಇತಿ ಯಃ ಸಂಸ್ತೂಯತೇ ಸರ್ವತಃ
ಸೋಮೇಶಃ ಸುರಸಂಯುತಃ ಕ್ಷಿತಿತಲೇ ಯೈರ್ವೀಕ್ಷಿತೋ ಹೀಕ್ಷಣೈಃ ।
ತೇ ತೀರ್ತ್ವಾ ವಿತತಾಂತರಂ ಭವಭಯಂ ಭೂತ್ಯಾಽಭಿಸಂಭೂಷಿತಾಃ
ಸ್ವರ್ಗಂ ಯಾನವರೈಃ ಪ್ರಯಾಂತಿ ಸುಕೃತೈರ್ಯಜ್ಞೈರ್ಯಥಾ ಯಜ್ವಿನಃ॥

ಕನ್ನಡದ ಅನುವಾದ

ಪ್ರಶ್ನಾಧ್ಯಾಯವರ್ಣನ

ಉತ್ತಮ ಪುರುಷನಾದ ಶ್ರೀ ಪರಮಾತ್ಮನಿಗೆ ನಮಸ್ಕಾರವು. ಬ್ರಹ್ಮ ವಿಷ್ಣು ಮಹೇಶ್ವರರಿಗೂ, ವ್ಯಾಸ, ವಾಲ್ಮೀಕಿ, ಶುಕ, ಪರಾಶರ ಮುನಿವರ್ಯರಿಗೂ ನಮಸ್ಕಾರವು.

೧. ವ್ಯಾಸನು ಹೇಳುತ್ತಾನೆ:—ಅನಾದಿಪುರುಷನೂ, ಸರ್ವಸ್ತುತ್ಯನೂ, ದೇವತಾ ಸಹಿತನೂ ಆದ ಸೋಮೇಶ್ವರನನ್ನು ಸಾಕ್ಷಾತ್ಕರಿಸಿದ ಪುಣ್ಯಶಾಲಿಗಳು, ಯಾಗ ಮಾಡಿದ ಸುಕೃತಿಗಳು ಪುಣ್ಯಗಳಿಂದ ಸ್ವರ್ಗವನ್ನು ಸೇರುವಂತೆ ಸಂಸಾರ ಭಯವನ್ನು ತ್ಯಜಿಸಿ ದಿವ್ಯಕಾಂತಿಯಿಂದಲಂಕೃತರಾಗಿ ಉತ್ತಮ ವಿಮಾನಗಳನ್ನೇರಿ ಸ್ವರ್ಗವನ್ನು ಸೇರುವರು.

ಪ್ರಸರದ್ಬಿಂದುನಾದಾಯ ಶುದ್ಧಾಮೃತಮಯಾತ್ಮನೇ ।
ಷಟ್ತ್ರಿಂಶತ್ತತ್ತ್ವದೇಹಾಯ ನಮಶ್ಚಿನ್ಮಾತ್ರಮೂರ್ತಯೇ ॥ ೨ ॥
ಅಮೃತೇನೋದರಸ್ಥೇನ ಮ್ರಿಯಂತೇ ಸರ್ವದೇವತಾಃ ।
ಕಂಠಸ್ಥಿತವಿಷೇಣಾಪಿ ಯೋ ಜೀವತಿ ಸ ಪಾತು ವಃ ॥ ೩ ॥
ಸತ್ರಾಂತೇ ಸೂತಮನಘಂ ನೈಮಿಷೇಯಾ ಮಹರ್ಷಯಃ ।
ಪುರಾಣಸಂಹಿತಾಂ ಪುಣ್ಯಾಂ ಪಪ್ರಚ್ಛೂ ರೋಮಹರ್ಷಣಂ ॥ ೪ ॥
ತ್ವಯಾ ಸೂತ ಮಹಾಬುದ್ಧೇ ಭಗವಾನ್ ಬ್ರಹ್ಮವಿತ್ತಮಃ ।
ಇತಿಹಾಸಪುರಾಣಾರ್ಥೇ ವ್ಯಾಸಃ ಸಮ್ಯಗುಪಾಸಿತಃ ॥ ೫ ॥
ತಸ್ಯ ತೇ ಸರ್ವರೋಮಾಣಿ ವಚಸಾ ಹರ್ಷಿತಾನಿ ಯತ್ ।
ದ್ವೈಪಾಯನಸ್ಯಾನುಭಾವಾತ್ತತೋಽಭೂ ರೋಮಹರ್ಷಣಃ ॥ ೬ ॥
ಭವಂತಮೇವ ಪ್ರಥಮಂ ವ್ಯಾಜಹಾರ ಸ್ವಯಂ ಪ್ರಭುಃ ।
ಮುನೀನಾಂ ಸಂಹಿತಾಂ ವಕ್ತುಂ ವ್ಯಾಸಃ ಪೌರಾಣಿಕೀಂ ಕಥಾಂ ॥ ೭ ॥
ತ್ವಂ ಹಿ ಸ್ವಾಯಂಭುವೇ ಯಜ್ಞೇ ಸುತ್ಯಾಹೇ ವಿತತೇ ಹರಿಃ ।
ಸಂಭೂತಃ ಸಂಹಿತಾಂ ವಕ್ತುಂ ಸ್ವಾಂಶೇನ ಪುರುಷೋತ್ತಮಃ ॥ ೮ ॥

---

೨. ಬಿಂದುನಾದ ಸ್ವರೂಪನೂ, ಅಮೃತಮಯನೂ, ಮೂವತ್ತಾರು ತತ್ವಗಳ ಶರೀರನೂ, ಜ್ಞಾನಮಾತ್ರದೇಹನೂ ಆಗಿರುವ ಆ ಸೋಮೇಶ್ವರನಿಗೆ ನಮಸ್ಕಾರವು.

೩. ಅಮೃತವನ್ನು ಕುಡಿದ ದೇವತೆಗಳೂ ಮೃತಿಯನ್ನೈದುವರು. ಸೋಮೇಶ್ವರನು ಕಂಠದಲ್ಲಿ ವಿಷವನ್ನಿಟ್ಟುಕೊಂಡಿದ್ದರೂ ಬದುಕಿರುವನು. ಅಂಥ ಪರಮೇಶ್ವರನು ನಮ್ಮನ್ನೂ ನಿಮ್ಮನ್ನೂ ಕಾಪಾಡಲಿ.

೪. ನೈಮಿಷಾರಣ್ಯನಿವಾಸಿಗಳಾದ ಮಹರ್ಷಿಗಳು ಸತ್ರದ ಕೊನೆಯಲ್ಲಿ ದೋಷರಹಿತನೂ, ರೋಮಹರ್ಷಣನೆಂಬ ಹೆಸರನ್ನು ಪಡೆದವನೂ ಆದ ಸೂತನನ್ನು ಕುರಿತು ಪುಣ್ಯಕರವಾದ ಪುರಾಣವನ್ನು ಹೇಳಬೇಕೆಂದು ಕೇಳಿಕೊಂಡರು.

೫. "ಪ್ರಾಜ್ಞನಾದ ಸೂತನೆ! ನೀನು ಪೂಜ್ಯನೂ, ಬ್ರಹ್ಮಜ್ಞಾನಿಯೂ ಆದ ವ್ಯಾಸಮಹರ್ಷಿಯನ್ನು ಇತಿಹಾಸ, ಪುರಾಣಗಳನ್ನರಿಯಲೋಸುಗ ಚೆನ್ನಾಗಿ ಸೇವಿಸಿರುವೆ.

೬. ಆ ಬಾದರಾಯಣನ ವಚನದಿಂದ ನೀನು ರೋಮಾಂಚಗೊಂಡುದರಿಂದ ರೋಮಹರ್ಷಣ ಎಂಬ ಹೆಸರನ್ನು ಪಡೆದಿರುವೆ.

೭. ವ್ಯಾಸಮುನಿವರ್ಯನು ಮುನಿಗಳಿಗೆ ಪುರಾಣವನ್ನು ತಿಳಿಸುವುದಕ್ಕಾಗಿ ಮೊದಲು ನಿನ್ನನ್ನು ಕುರಿತು ಪುರಾಣಗಳನ್ನು ಹೇಳಿರುವನು.

೮. ನೀನು ಸ್ವಯಂಭುವಿನ ಯಜ್ಞದಲ್ಲಿ ಸುತ್ಯಾಹಸ್ಸಿನಲ್ಲಿ ಪುರಾಣವನ್ನು ಹೇಳಲು ತನ್ನ ಅಂಶದಿಂದ ಆವಿರ್ಭವಿಸಿದ ಪುರುಷೋತ್ತಮನಾದ ವಿಷ್ಣುವಾಗಿರುವೆ.

ತಸ್ಮಾದ್ಭವಂತಂ ಪೃಚ್ಛಾಮಃ ಪುರಾಣೇ ಸ್ಕಂದಕೀರ್ತಿತೇ ।
ಪ್ರಭಾಸಕ್ಷೇತ್ರಮಾಹಾತ್ಮ್ಯೇ ಬ್ರಾಹ್ಮೀ ಯಾತ್ರಾ ಶ್ರುತಾ ಪುರಾ ॥ ೯ ॥
ಅಧುನಾ ವೈಷ್ಣವೀಂ ರೌದ್ರೀಂ ಯಾತ್ರಾಂ ಸರ್ವಾರ್ಥಸಂಯುತಾಂ ।
ವಕ್ತುಮರ್ಹಸಿ ಚಾಸ್ಮಾಕಂ ಪುರಾಣಾರ್ಥವಿಶಾರದ ॥ ೧೦ ॥
ಮುನೀನಾಂ ವಚನಂ ಶ್ರುತ್ವಾ ಸೂತಃ ಪೌರಾಣಿಕೋತ್ತಮಃ ।
ಪ್ರಣಮ್ಯ ಶಿರಸಾ ಪ್ರಾಹ ವ್ಯಾಸಂ ಸತ್ಯವತೀಸುತಂ ॥ ೧೧ ॥

ರೋಮಹರ್ಷಣ ಉವಾಚ :—

ಶ್ರೀವತ್ಸಾಂಕಂ ಜಗದ್ಯೋನಿಂ ಹರಿಮೋಂಕಾರರೂಪಿಣಂ ।
ಅಪ್ರಮೇಯಂ ಗುರುಂ ದೇವಂ ನಿರ್ಮಲಂ ನಿರ್ಮಲಾಶ್ರಯಂ ॥ ೧೨ ॥
ಹಂಸಂ ಶುಚಿಷದಂ ವ್ಯೋಮ ವ್ಯಾಪಕಂ ಸರ್ವದಂ ಶಿವಂ ।
ಉದಾಸೀನಂ ನಿರಾಯಾಸಂ ನಿಷ್ಪ್ರಪಂಚಂ ನಿರಂಜನಂ ॥ ೧೩ ॥
ಶೂನ್ಯಂ ಬಿಂದುಸ್ವರೂಪಂ ತು ಧ್ಯೇಯಂ ಧ್ಯಾನವಿವರ್ಜಿತಂ ।
ಅಸ್ತಿ ನಾಸ್ತೀತಿ ಯಂ ಪ್ರಾಹುಃ ಸುದೂರೇ ಚಾಂತಿಕೇ ಚ ಯತ್ ॥೧೪ ॥

---

೯. ಆದುದರಿಂದ ನಿನ್ನನ್ನು ಕೇಳುತ್ತೇವೆ. ಹಿಂದೆ ನಾವು ಸ್ಕಾಂದ ಪುರಾಣದ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ ಬ್ರಾಹ್ಮೀಯಾತ್ರೆಯನ್ನು ಕೇಳಿದ್ದೇವೆ.

೧೦. ಪುರಾಣಾರ್ಥನಿಪುಣನಾದ ಎಲೈ ಸೂತನೆ ! ಈಗ ನೀನು ನಮಗೆ ಸಕಲಾರ್ಥಗಳಿಂದ ತುಂಬಿದ ವೈಷ್ಣವೀ, ರೌದ್ರೀ ಯಾತ್ರೆಗಳನ್ನು ಹೇಳಲರ್ಹನಾಗಿರುವೆ."

೧೧. ಪೌರಾಣಿಕರಲ್ಲಿ ಉತ್ತಮನಾದ ಸೂತಮುನಿವರನು ಮುನಿಗಳ ಆ ಮಾತನ್ನು ಕೇಳಿ ಸತ್ಯವತಿಯ ತನಯನಾದ ವ್ಯಾಸಮಹರ್ಷಿಗೆ ತಲೆಬಾಗಿ ಇಂತೆಂದನು :—

೧೨–೨೦. ರೋಮಹರ್ಷಣನು (ಸೂತನು) ಹೇಳುತ್ತಾನೆ :—ಶ್ರೀವತ್ಸವೆಂಬ ಮಚ್ಚೆಯುಳ್ಳವನೂ, ಜಗತ್ಕಾರಣನೂ, ಓಂಕಾರ ಸ್ವರೂಪನೂ, ಅಪರಿಮಿತನೂ, ಉಪದೇಶಕನೂ, ಪ್ರಕಾಶಮಯನೂ, ಶುದ್ಧನೂ, ಪರಿಶುದ್ಧವಾದ ಸ್ಥಾನವುಳ್ಳವನೂ, ಪಾಪವನ್ನು ಪರಿಹರಿಸುವ ಹಂಸರೂಪನೂ, ಪುಣ್ಯಕ್ಷೇತ್ರದಲ್ಲಿ ವಾಸಿಸುವನೂ, ಸರ್ವ ವ್ಯಾಪಿಯೂ, ಎಲ್ಲವನ್ನೂ ದಯೆಗೈಯುವವನೂ, ಮಂಗಳಕರನೂ, ಉದಾಸೀನನೂ ಆಯಾಸವಿಲ್ಲದವನೂ, ಜಗತ್ತಿನ ಸಂಬಂಧರಹಿತನೂ, ದೋಷಹೀನನೂ, ಶೂನ್ಯನೂ, ಬಿಂದುರೂಪನೂ, ಧ್ಯಾನಿಸಲು ಯೋಗ್ಯನೂ, ಯಾರನ್ನೂ ಧ್ಯಾನಿಸದವನೂ, "ಇದ್ದಾನೆ ಇಲ್ಲ ದೂರದಲ್ಲಿದ್ದಾನೆ ಹತ್ತಿರದಲ್ಲಿದ್ದಾನೆ" ಎಂಬ ವಿವಾದಗಳಿಗೆ ವಿಷಯನೂ, ಮನಸ್ಸಿನಿಂದ ಗ್ರಹಿಸಲರ್ಹನೂ, ಉತ್ತಮ ಪ್ರಾಪ್ಯಸ್ಥಾನ ಸ್ವರೂಪನೂ ಪುರುಷನಾಮಕನೂ. ಜಗತ್ಸ್ವರೂಪನೂ, ಹೃದಯಕಮಲದಲ್ಲಿರುವವನೂ, ತೇಜೋರೂಪನೂ, ಇಂದ್ರಿಯ

ಮನೋಗ್ರಾಹ್ಯಂ ಪರಂ ಧಾಮ ಪುರುಷಾಖ್ಯಂ ಜಗನ್ಮಯಂ ।
ಹೃತ್ಪಂಕಜಸಮಾಸೀನಂ ತೇಜೋರೂಪಂ ನಿರಿಂದ್ರಿಯಂ ॥ ೧೫ ॥

ಏವಂವಿಧಂ ನಮಸ್ಕೃತ್ಯ ಪರಮಾತ್ಮಾನಮೀಶ್ವರಂ ।
ಕಥಾಂ ವದಿಷ್ಯೇ ದ್ವಿವಿಧಾಂ ದ್ವಿಶರೀರಾಂ ತಥೈವ ತು ॥ ೧೬ ॥

ದಿವ್ಯಭಾಷಾಸನೋಪೇತಾಂ ವೇದಾದ್ಯಧಿಷ್ಠಾನಸಂಯುತಾಂ ।
ಪಂಚಸಂಧಿಸಮಾಯುಕ್ತಾಂ ಷಡಲಂಕಾರಭೂಷಿತಾಂ ॥ ೧೭ ॥

ಸಪ್ತಸಾಧನ ಸಂಯುಕ್ತಾಂ ರಸಾಷ್ಟಗುಣರಂಜಿತಾಂ ।
ಗುಣೈರ್ನವಭಿರಾಕೀರ್ಣಾಂ ದಶದೋಷವಿವರ್ಜಿತಾಂ ॥ ೧೮ ॥

ವಿಭಾಷಾಭೂಷಿತಾಂ ತದ್ವದೇಕಾಯತ್ತಾಂ ಮನೋಹರಾಂ ।
ಪಂಚಕಾರಣಸಂಯುಕ್ತಾಂ ಚತುಷ್ಕರಣಸಂಮತಾಂ ॥ ೧೯ ॥

ಪುನಶ್ಚ ದ್ವಿವಿಧಾಂ ತದ್ವಜ್ಜ್ಞಾನಸಂದೋಹದಾಯಿನೀಂ ।
ವ್ಯಾಸೇನ ಕಥಿತಾಂ ಪುಣ್ಯಾಂ ಶೃಣುಧ್ವಂ ಪಾಪನಾಶಿನೀಂ ॥ ೨೦ ॥

ಯಾಂ ಶ್ರುತ್ವಾ ಪಾಪಕರ್ಮಾಪಿ ಗಚ್ಛೇದ್ಧಿ ಪರಮಾಂ ಗತಿಂ ।
ದುಃಖತ್ರಯವಿನಿರ್ಮುಕ್ತಃ ಸರ್ವಾತಂಕವಿವರ್ಜಿತಃ ॥೨೧ ॥

ನ ನಾಸ್ತಿಕೇ ಕಥಾಂ ಪುಣ್ಯಾಮಿಮಾಂ ಬ್ರೂಯಾತ್ಕದಾಚನ ।
ಶ್ರದ್ದಧಾನಾಯ ಶಾಂತಾಯ ಕೀರ್ತನೀಯಾ ದ್ವಿಜಾತಯೇ ॥ ೨೨ ॥

ರಹಿತನೂ, ಪರಮಾತ್ಮನೂ ಆದ ಆ ನಾರಾಯಣನಿಗೆರಗಿ ಎರಡು ವಿಧವೂ, ಎರಡು ಶರೀರವುಳ್ಳದ್ದೂ, ದಿವ್ಯಭಾಷೆಯಿಂದ ಸಹಿತವೂ, ವೇದಪ್ರತಿಪಾದ್ಯವೂ, ಪಂಚ ಸಂಧಿಯಿಂದ ಕೂಡಿದುದೂ, ಆರು ಅಲಂಕಾರಗಳುಳ್ಳದ್ದೂ, ಏಳು ಸಾಧನಗಳಿಂದ ಸಹಿತವೂ, ಅಷ್ಟರಸಗಳುಳ್ಳದ್ದೂ, ಒಂಬತ್ತು ಗುಣಗಳಿಂದ ವ್ಯಾಪ್ತವೂ, ದಶ ದೋಷರಹಿತವೂ, ವಿವಿಧ ಭಾಷೆಗಳಿಂದ ಅಲಂಕೃತವೂ, ಮನೋಹರವೂ, ಐದು ಕಾರಣಗಳು, ನಾಲ್ಕು ಕರಣಗಳಿಂದ ಕೂಡಿರುವುದೂ, ಎರಡು ವಿಧವೂ, ಜ್ಞಾನ ವನ್ನೀಯುವುದೂ, ವ್ಯಾಸನು ಹೇಳಿರುವುದೂ ಪಾಪಗಳನ್ನು ನೀಗಿಸುವುದೂ, ಪುಣ್ಯಕರವೂ ಆದ ಕಥೆಯನ್ನು ಕೇಳಿರಿ

೨೧. ಪಾಪಿಯೂ ಈ ಕಥೆಯನ್ನು ಕೇಳಿ ತ್ರಿವಿಧ ದುಃಖರಹಿತನೂ, ಸಮಸ್ತ ವಾದ ಆತಂಕಗಳಿಂದ ವರ್ಜಿತನೂ ಆಗಿ ಉತ್ತಮಗತಿಯನ್ನು ಪಡೆಯುವನು.

೨೨. ಪುಣ್ಯಕರವಾದ ಈ ಕಥೆಯನ್ನು ನಾಸ್ತಿಕನಿಗೆ ಹೇಳಬಾರದು. ಶ್ರದ್ಧೆ ಯಿಂದ ಕೇಳುವವನೂ, ಶಾಂತನೂ ಆದ ದ್ವಿಜನಿಗೆ ಹೇಳಬೇಕು.

ನಿಷೇಕಾದಿಃ ಶ್ಮಶಾನಾಂತೋ ಮಂತ್ರೈರ್ಯಸ್ಯೋದಿತೋ ವಿಧಿಃ ।
ತಸ್ಯ ಶಾಸ್ತ್ರೇಽಧಿಕಾರೋಽಸ್ತಿ ಜ್ಞೇಯೋ ನಾನ್ಯಸ್ಯ ಕಸ್ಯಚಿತ್ ॥ ೨೩ ॥
ಚತುಃಪಕ್ಷಾವದಾತಸ್ಯ ವಿಶುದ್ಧಿರ್ಬ್ರಾಹ್ಮಣಸ್ಯ ಚ ।
ಸದ್ವೃತ್ತಸ್ಯಾಧಿಕಾರೋಽಸ್ತಿ ಶಾಸ್ತ್ರೇಽಸ್ಮಿನ್ವೇದಸಮ್ಮತೇ ॥ ೨೪ ॥
ಯಥಾ ಸುರಾಣಾಂ ಪ್ರವರೋ ದೇವದೇವೋ ಮಹೇಶ್ವರಃ ।
ನದೀನಾಂ ಚ ಯಥಾ ಗಂಗಾ ವರ್ಣಾನಾಂ ಬ್ರಾಹ್ಮಣೋ ಯಥಾ ॥ ೨೫ ॥
ಅಕ್ಷರಾಣಾಂ ತು ಸರ್ವೇಷಾಮೋಂಕಾರಃ ಪ್ರಥಮೋ ಯಥಾ ।
ಪೂಜ್ಯಾನಾಂ ತು ಯಥಾ ಮಾತಾ ಗುರೂಣಾಂ ಚ ಯಥಾ ಪಿತಾ ।
ತಥೈವ ಸರ್ವಶಾಸ್ತ್ರಾಣಾಂ ಪ್ರಧಾನಂ ಸ್ಕಂದಕೀರ್ತಿತಂ ॥ ೨೬ ॥
ಪುರಾ ಕೈಲಾಸಶಿಖರೇ ಬ್ರಹ್ಮಾದೀನಾಂ ಚ ಸನ್ನಿಧೌ ।
ಸ್ಕಾಂದಂ ಪುರಾಣಂ ಕಥಿತಂ ಪಾರ್ವತ್ಯಗ್ರೇ ಪಿನಾಕಿನಾ ॥ ೨೭ ॥
ಪಾರ್ವತ್ಯಾ ಷಣ್ಮುಖಸ್ಯಾಗ್ರೇ ತೇನ ನಂದಿಗಣಾಯ ವೈ ।
ನಂದಿನಾ ತು ಕುಮಾರಾಯ ತೇನ ವ್ಯಾಸಾಯ ಧೀಮತೇ ॥ ೨೮ ॥
ವ್ಯಾಸೇನ ಮೇ ಸಮಾಖ್ಯಾತಂ ಭವದ್ಭ್ಯೋಽಹಂ ಪ್ರಕೀರ್ತಯೇ ॥ ೨೯ ॥

---

೨೩. ಗರ್ಭಾಧಾನ ಮೊದಲ್ಗೊಂಡು ಔರ್ಧ್ವದೈಹಿಕದವರೆಗಿನ ಸಂಸ್ಕಾರಗಳಿಗೆ ಅರ್ಹನಾದ ದ್ವಿಜನು ಈ ಪುರಾಣಶ್ರವಣಮಾಡಲು ಅಧಿಕಾರಿಯು. ಇತರರು ಅಧಿಕಾರಿಗಳಲ್ಲ.

೨೪. ನಾಲ್ಕು ಪಕ್ಷಗಳಲ್ಲಿ ಶುದ್ಧನಾಗಿ ಸದಾಚಾರ ಸಂಪನ್ನನಾದ ಬ್ರಾಹ್ಮಣನಿಗೆ ವೇದಾವಿರುದ್ಧವಾದ ಈ ಶಾಸ್ತ್ರದಲ್ಲಿ ಅಧಿಕಾರವಿರುವುದು.

೨೫–೨೬. ಸುರರಲ್ಲಿ ಮಹೇಶ್ವರನೂ, ನದಿಗಳಲ್ಲಿ ಗಂಗೆಯೂ. ಜಾತಿಗಳಲ್ಲಿ ಬ್ರಾಹ್ಮಣನೂ, ಸಕಲಾಕ್ಷರಗಳಲ್ಲಿ ಓಂಕಾರವೂ, ಪೂಜ್ಯರಲ್ಲಿ ತಾಯಿಯೂ, ಗುರುಗಳಲ್ಲಿ ತಂದೆಯೂ ಉತ್ತಮನಾಗಿರುವಂತೆ ಸಕಲ ಶಾಸ್ತ್ರಗಳಲ್ಲಿ ಸ್ಕಾಂದಪುರಾಣವು ಮುಖ್ಯವಾದುದು.

೨೭. ಹಿಂದೆ ಕೈಲಾಸ ಶಿಖರದಲ್ಲಿ ಮಹೇಶ್ವರನು ಪಾರ್ವತಿಯ ಮುಂದೆ ಬ್ರಹ್ಮಾದಿ ದೇವತೆಗಳ ಸಮ್ಮುಖದಲ್ಲಿ ಈ ಸ್ಕಾಂದಪುರಾಣವನ್ನು ಹೇಳಿದನು.

೨೮–೨೯. ಪಾರ್ವತಿಯು ಸ್ಕಂದನಿಗೂ, ಅವನು ನಂದಿಗೂ, ನಂದಿಯು ಕುಮಾರನಿಗೂ, ಕುಮಾರನು ವ್ಯಾಸನಿಗೂ, ವ್ಯಾಸನು ನನಗೂ ಹೇಳಿರುವ ಈ ಪುರಾಣವನ್ನು ನಾನು ನಿಮಗೆ ಹೇಳುವೆನು.

ಯೂಯಂ ಸದ್ಭಾವಸಂಯುಕ್ತಾ ಯತಃ ಸರ್ವೇ ಮಹರ್ಷಯಃ ।
ತೇನ ಮೇ ಭಾಷಿತುಂ ಶ್ರದ್ಧಾ ಭವತಾಂ ಸ್ಕಂದಸಂಹಿತಾಂ ॥ ೩೦ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಶ್ನಾಽಧ್ಯಾಯವರ್ಣನಂ ನಾಮ
ಪ್ರಥಮೋಽಧ್ಯಾಯಃ

---

೩೦. ನೀವು ಸಾಧುಗಳಾದ ಮುನಿವರ್ಯರಾದುದರಿಂದ ಈ ಸ್ಕಾಂದ ಪುರಾಣವನ್ನು ನಿಮಗೆ ಹೇಳಲು ನನಗೆ ಬಹು ಶ್ರದ್ಧೆಯುಂಟಾಗಿರುವುದು.

ಇಲ್ಲಿಗೆ ಎಂಬತ್ತೊಂದು ಸಾಸಿರ ಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೇ
ಪ್ರಭಾಸ ಖಂಡದ ಮೊದಲನೆ ಪ್ರಭಾಸಕ್ಷೇತ್ರ ಮಹಾತ್ಮ್ಯದಲ್ಲಿ ಪ್ರಶ್ನಾಧ್ಯಾಯ
ವರ್ಣನವೆಂಬ ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ದ್ವಿತೀಯೋಽಧ್ಯಾಯಃ

ಪುರಾಣಪುಸ್ತಕದಾನ ಫಲವರ್ಣನಂ

ಋಷಯ ಊಚುಃ :—

ಕಥಾಯಾ ಲಕ್ಷಣಂ ಬ್ರೂಹಿ ಗುಣದೋಷಾನ್ ಸವಿಸ್ತರಾನ್ ।
ಆರ್ಷೇಯಪೌರುಷೇಯಾಣಾಂ ಕಾವ್ಯಚಿಹ್ನಪರೀಕ್ಷಣಂ ।
ಕಥಂ ಜ್ಞೇಯಂ ಮಹಾಬುದ್ಧೇ ಶ್ರೋತುಮಿಚ್ಛಾಮಹೇ ವಯಂ ॥ ೧ ॥

ಸೂತ ಉವಾಚ :—

ಅಥ ಸಂಕ್ಷೇಪತೋ ವಕ್ಷ್ಯೇ ಪುರಾಣಾನಾಮನುಕ್ರಮಂ ।
ಲಕ್ಷಣಂ ಚೈವ ಸಂಖ್ಯಾಂ ಚ ಉಕ್ತಭೇದಾಂಸ್ತಥೈವ ಚ ॥ ೨ ॥
ಪುರಾ ತಪಶ್ಚಚಾರೋಗ್ರಮಮರಾಣಾಂ ಪಿತಾಮಹಃ ।
ಆವಿರ್ಭೂತಾಸ್ತತೋ ವೇದಾಃ ಸಷಡಂಗಪದಕ್ರಮಾಃ ॥ ೩ ॥
ತತಃ ಪುರಾಣಮಖಿಲಂ ಸರ್ವಶಾಸ್ತ್ರಮಯಂ ಧ್ರುವಂ ।
ನಿತ್ಯಶಬ್ದಮಯಂ ಪುಣ್ಯಂ ಶತಕೋಟಿಪ್ರವಿಸ್ತರಂ ॥ ೪ ॥

ಕನ್ನಡದ ಅನುವಾದ

ಪುರಾಣ ಪುಸ್ತಕದಾನ ಫಲವರ್ಣನ

೧. ಋಷಿಗಳು ಹೇಳುತ್ತಾರೆ :—ಪ್ರಾಜ್ಞನಾದ ಸೂತನೆ ! ಆರ್ಷೇಯ ಪೌರುಷೇಯ ಕಾವ್ಯಗಳನ್ನು ಗುರುತಿಸಲು ಸಾಧನವಾದ ಕಥೆಯ ಲಕ್ಷಣವನ್ನೂ, ಗುಣ ದೋಷಗಳನ್ನೂ ವಿಸ್ತಾರವಾಗಿ ನಮಗೆಹೇಳು. ನಾವು ಇದನ್ನು ಕೇಳಬಯಸುವೆವು.

೨. ಸೂತನು ಹೇಳುತ್ತಾನೆ:—ಈಗ ಪುರಾಣಗಳ ಲಕ್ಷಣವನ್ನೂ, ಪ್ರಭೇದಗಳನ್ನೂ ಸಂಗ್ರಹವಾಗಿ ಕ್ರಮದಿಂದ ಹೇಳುವೆನು.

೩. ಹಿಂದೆ ದೇವಪಿತಾಮಹನಾದ ಚತುರ್ಮುಖನು ಘೋರ ತಪಸ್ಸನ್ನಾಚರಿಸಿದನು. ಆಗ ಅವನ ಮುಖದಿಂದ ಷಡಂಗ, ಪದ, ಕ್ರಮಗಳೊಡನೆ ವೇದಗಳು ಆವಿರ್ಭವಿಸಿದುವು.

೪. ಅನಂತರ ಸಮಸ್ತಶಾಸ್ತ್ರಸ್ವರೂಪವೂ, ನಿತ್ಯಶಬ್ದಗಳಿಂದ ರಚಿತವೂ, ಪುಣ್ಯಕರವೂ, ನೂರುಕೋಟಿ ಸಂಖ್ಯೆಗಳಿಂದ ವಿಸ್ತರವೂ, ಆದ ಸಕಲ ಪುರಾಣಗಳು ಹುಟ್ಟಿದುವು.

ನಿರ್ಗತಂ ಬ್ರಹ್ಮಣೋ ವಕ್ತ್ರಾದ್ಬ್ರಾಹ್ಮಂ ವೈಷ್ಣವಮೇವ ಚ ।
ಶೈವಂ ಭಾಗವತಂ ಚೈವ ಭವಿಷ್ಯಂ ನಾರದೀಯಕಂ ॥ ೫ ॥

ಮಾರ್ಕಂಡೇಯಮಥಾಗ್ನೇಯಂ ಬ್ರಹ್ಮವೈವರ್ತಮೇವ ಚ ।
ಲೈಂಗಂ ತಥಾ ಚ ವಾರಾಹಂ ಸ್ಕಾಂದಂ ವಾಮನಮೇವ ಚ ॥ ೬ ॥

ಕೌರ್ಮ್ಯಂ ಮಾತ್ಸ್ಯಂ ಗಾರುಡಂ ಚ ವಾಯವೀಯಮನಂತರಂ ।
ಅಷ್ಟಾದಶಂ ಸಮುದ್ದಿಷ್ಟಂ ಸರ್ವಪಾತಕನಾಶನಂ ॥ ೭ ॥

ಏಕಮೇವ ಪುರಾ ಹ್ಯಾಸೀದ್ಬ್ರಹ್ಮಾಂಡಂ ಶತಕೋಟಿಧಾ ॥ ೮ ॥

ತತೋಽಷ್ಟಾದಶಧಾ ಕೃತ್ವಾ ವೇದವ್ಯಾಸೋ ಯುಗೇ ಯುಗೇ ।
ಪ್ರಖ್ಯಾಪಯತಿ ಲೋಕೇಽಸ್ಮಿನ್ ಸಾಕ್ಷಾನ್ನಾರಾಯಣಾಂಶಜಃ ॥ ೯ ॥

ಅನ್ಯಾನ್ಯುಪಪುರಾಣಾನಿ ಮುನಿನಾ ಕಥಿತಾನಿ ತು ।
ತಾನಿ ವಃ ಕಥಯಿಷ್ಯಾಮಿ ಸಂಕ್ಷೇಪಾದವಧಾರ್ಯತಾಂ ॥ ೧೦ ॥

ಆದ್ಯಂ ಸನತ್ಕುಮಾರೋಕ್ತಂ ನಾರಸಿಂಹಮತಃ ಪರಂ ।
ತೃತೀಯಂ ಸ್ಕಾಂದಮುದ್ದಿಷ್ಟಂ ಕುಮಾರೇಣಾನುಭಾಷಿತಂ ॥ ೧೧ ॥

ಚತುರ್ಥಂ ಶಿವಧರ್ಮಾಖ್ಯಂ ಸಾಕ್ಷಾನ್ನಂದೀಶಭಾಷಿತಂ ।
ದುರ್ವಾಸಸೋಕ್ತಮಾಶ್ಚರ್ಯಂ ನಾರದೋಕ್ತಮತಃ ಪರಂ ॥ ೧೨ ॥

೫–೮. ಆ ಪುರಾಣಗಳು, ಬ್ರಾಹ್ಮ, ವೈಷ್ಣವ, ಶೈವ, ಭಾಗವತ, ಭವಿಷ್ಯ, ನಾರದೀಯ, ಮಾರ್ಕಂಡೇಯ, ಆಗ್ನೇಯ, ಬ್ರಹ್ಮವೈವರ್ತ, ಲೈಂಗ, ವಾರಾಹ, ಸ್ಕಾಂದ, ವಾಮನ, ಕೌರ್ಮ್ಯ, ಮಾತ್ಸ್ಯ, ಗಾರುಡ, ವಾಯವೀಯ, ಬ್ರಹ್ಮಾಂಡವೆಂದು ಹದಿನೆಂಟು ಸಂಖ್ಯೆಗಳಾಗಿರುವುವು. ಮೊದಲು ಈ ಪುರಾಣಗಳು ಶತಕೋಟಿ ವಿಸ್ತಾರವಾದ ಬ್ರಹ್ಮಾಂಡ ಪುರಾಣವಾಗಿಯೇ ಇದ್ದುವು.

೯. ಇವುಗಳನ್ನು ನಾರಾಯಣಾಂಶಸಂಭೂತನಾದ ವೇದವ್ಯಾಸ ಮುನಿಯು ಈ ಲೋಕದಲ್ಲಿ ಪ್ರತಿಯುಗದಲ್ಲಿಯೂ, ಹದಿನೆಂಟು ಬಗೆಯಾಗಿ ವಿಭಾಗಿಸಿ ಪ್ರಸಿದ್ಧಿಗೊಳಿಸುವನು.

೧೦. ಮುನಿಯು ಹೇಳಿದ ಇತರ ಉಪಪುರಾಣಗಳನ್ನೂ ನಿಮಗೆ ಸಂಕ್ಷೇಪವಾಗಿ ಹೇಳುವೆನು. ಸಾವಧಾನ ಮನಸ್ಸಿನಿಂದ ಕೇಳಿರಿ.

೧೧–೧೫. ಅವುಗಳಲ್ಲಿ ಸನತ್ಕುಮಾರನು ಹೇಳಿದುದು ಮೊದಲನೆಯದು. ಎರಡನೆಯದು ನರಸಿಂಹಪುರಾಣವು. ಮೂರನೆಯದು ಕುಮಾರಸ್ವಾಮಿಯು ಮರಳಿ ನುಡಿದ ಸ್ಕಾಂದಪುರಾಣವು. ನಾಲ್ಕನೆಯದು ನಂದೀಶ್ವರನು ಹೇಳಿದ ಶಿವಧರ್ಮ

ಕಾಪಿಲಂ ಮಾನವಂ ಚೈವ ತಥೈವೋಶನಸೇರಿತಂ ।
ಬ್ರಹ್ಮಾಂಡಂ ವಾರುಣಂ ಚಾನ್ಯತ್ಕಾಲಿಕಾಹ್ವಯಮೇವ ಚ ॥ ೧೩ ॥
ಮಾಹೇಶ್ವರಂ ತಥಾ ಸಾಂಬಂ ಸೌರಂ ಸರ್ವಾರ್ಥಸಂಚಯಂ ।
ಪರಾಶರೋಕ್ತಂ ಪರಮಂ ಮಾರೀಚಂ ಭಾರ್ಗವಾಹ್ವಯಂ ॥ ೧೪ ॥
ಏತಾನ್ಯುಪಪುರಾಣಾನಿ ಕಥಿತಾನಿ ದ್ವಿಜೋತ್ತಮಾಃ ॥ ೧೫ ॥

ಋಷಯ ಊಚುಃ :—

ಪುರಾಣಸಂಖ್ಯಾಮಾಚಕ್ಷ್ವ ಸೂತ ವಿಸ್ತರತಃ ಕ್ರಮಾತ್ ।
ದಾನಧರ್ಮಮಶೇಷಜ್ಞ ಯಥಾವದನುಪೂರ್ವಶಃ ॥ ೧೬ ॥

ಸೂತ ಉವಾಚ :—

ಇದಮೇವ ಪುರಾಣೇಽಸ್ಮಿನ್ ಪುರಾಣಪುರುಷಸ್ತದಾ ।
ಯದುಕ್ತವಾನ್ ಸ ವಿಶ್ವಾತ್ಮಾ ಮನವೇ ತನ್ನಿಬೋಧತ ॥ ೧೭ ॥
ಪುರಾಣಂ ಸರ್ವಶಾಸ್ತ್ರಾಣಾಂ ಬ್ರಹ್ಮಾಂಡಂ ಪ್ರಥಮಂ ಸ್ಮೃತಂ ।
ಅನಂತರಂ ಚ ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿರ್ಗತಾಃ ॥ ೧೮ ॥
ಪುರಾಣಮೇಕಮೇವಾಽಽಸೀತ್ತಸ್ಮಿನ್ಕಲ್ಪಾಂತರೇ ತಥಾ ।
ತ್ರಿವರ್ಗಸಾಧನಂ ಪುಣ್ಯಂ ಶತಕೋಟಿಪ್ರವಿಸ್ತರಂ ॥ ೧೯ ॥

ಪುರಾಣವು. ಹೀಗೆಯೇ ದುರ್ವಾಸ, ನಾರದ, ಕಪಿಲ, ಮನು ಉಶನಸರು ಹೇಳಿದ ಉಪಪುರಾಣಗಳೂ, ಬ್ರಹ್ಮಾಂಡ, ವಾರುಣ, ಕಾಲಿಕಾ, ಮಾಹೇಶ್ವರ, ಸಾಂಬ, ಸೌರ, ಪರಾಶರ, ಮಾರೀಚ, ಭಾರ್ಗವವೆಂಬ ಉಪಪುರಾಣಗಳೂ ಇರುವುವು.

೧೬. ಋಷಿಗಳು ಹೇಳುತ್ತಾರೆ :—ಸರ್ವಜ್ಞನಾದ ಸೂತನೆ ! ಪುರಾಣಸಂಖ್ಯೆಯನ್ನೂ, ದಾನಧರ್ಮ ವಿಷಯಗಳನ್ನೂ ಕ್ರಮದಿಂದ ವಿಸ್ತಾರವಾಗಿ ನಮಗೆ ಹೇಳು.

೧೭. ಸೂತನು ಹೇಳುತ್ತಾನೆ :—ಪುರಾಣ ಪುರುಷನಾದ ಆ ಚತುರ್ಮುಖನು ಮನುವನ್ನು ಕುರಿತು ನುಡಿದ ಈ ಮಾತನ್ನೇ ಪುರಾಣವನ್ನಾಗಿ ತಿಳಿಯಿರಿ.

೧೮. ಸಕಲ ಶಾಸ್ತ್ರಗಳಲ್ಲಿ ಬ್ರಹ್ಮಾಂಡಪುರಾಣವು ಪ್ರಧಾನವಾದುದು. ಬಳಿಕ ಆ ಬ್ರಹ್ಮನ ಮುಖಗಳಿಂದ ವೇದಗಳು ಹೊರಟುವು.

೧೯. ಆ ಕಲ್ಪದಲ್ಲಿ ಧರ್ಮಾರ್ಥಕಾಮಗಳಿಗೆ ಸಾಧನವೂ, ಪುಣ್ಯಕರವೂ, ಶತಕೋಟಿ ಸಂಖ್ಯೆಗಳಿಂದ ವಿಸ್ತಾರವೂ ಆದ ಆ ಬ್ರಹ್ಮಾಂಡ ಪುರಾಣವೊಂದೇ ಇದ್ದಿತು.

ವಿನಿರ್ದಗ್ಧೇಷು ಲೋಕೇಷು ಕೃಷ್ಣೇನಾಽನಂತರೂಪಿಣಾ ।
ಸಾಂಗಾಂಶ್ಚ ಚತುರೋ ವೇದಾನ್ ಪುರಾಣನ್ಯಾಯವಿಸ್ತರಂ ॥ ೨೦ ॥
ಮೀಮಾಂಸಾಂ ಧರ್ಮಶಾಸ್ತ್ರಂ ಚ ಪರಿಗೃಹ್ಯಾತ್ಮಸಾತ್ಕೃತಂ ।
ಮತ್ಸ್ಯರೂಪೇಣ ಚ ಪುನಃ ಕಲ್ಪಾದಾವುದಕಾರ್ಣವೇ ॥ ೨೧ ॥
ಅಶೇಷಮೇವ ಕಥಿತಂ ಬ್ರಹ್ಮಣೇ ದಿವ್ಯಚಕ್ಷುಷೇ ।
ಬ್ರಹ್ಮಾ ಜಗಾದ ಚ ಮುನೀಂಸ್ತ್ರಿಕಾಲಜ್ಞಾನದರ್ಶನಃ ॥ ೨೨ ॥
ಪ್ರವೃತ್ತಿಃ ಸರ್ವಶಾಸ್ತ್ರಾಣಾಂ ಪುರಾಣಸ್ಯಾಽಭವತ್ತತಃ ॥ ೨೩ ॥
ತತಃ ಕಾಲಕ್ರಮೇಣಾಽಸೌ ವ್ಯಾಸರೂಪಧರೋ ಹರಿಃ ।
ಅಷ್ಟಾದಶಪುರಾಣಾನಿ ಸಂಕ್ಷೇಪ್ಸ್ಯತಿ ಯುಗೇ ಯುಗೇ ॥ ೨೪ ॥
ಚತುರ್ಲಕ್ಷಪ್ರಮಾಣಾನಿ ದ್ವಾಪರೇ ದ್ವಾಪರೇ ಸದಾ ।
ತದಾಽಷ್ಟಾದಶಧಾ ಕೃತ್ವಾ ಭೂರ್ಲೋಕೇಽಸ್ಮಿನ್ ಪ್ರಭಾಷತೇ ॥ ೨೫ ॥
ಅದ್ಯಾಽಪಿ ದೇವಲೋಕೇ ತು ಶತಕೋಟಿಪ್ರವಿಸ್ತರಂ ।
ತದರ್ಥೋಽತ್ರ ಚತುರ್ಲಕ್ಷಃ ಸಂಕ್ಷೇಪೇಣ ನಿವೇಶಿತಃ ॥ ೨೬ ॥
ಪುರಾಣಾನಿ ದಶಾಽಷ್ಟೌ ಚ ಸಾಂಪ್ರತಂ ತದಿಹೋಚ್ಯತೇ ।
ನಾಮತಸ್ತಾನಿ ವಕ್ಷ್ಯಾಮಿ ಸಂಖ್ಯಾಂ ಚ ಮುನಿಸತ್ತಮಾಃ ॥ ೨೭ ॥

೨೦–೨೩. ಅನಂತರೂಪಿಯಾದ ವಿಷ್ಣುವಿನಿಂದ ಲೋಕಗಳು ಭಸ್ಮವಾಗಲು ಮತ್ಸ್ಯರೂಪಿಯಾದ ಆ ನಾರಾಯಣನು ಸಾಂಗವೇದಗಳು, ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರಗಳನ್ನು ತನ್ನ ಅಧೀನವಾಗಿಟ್ಟುಕೊಂಡು ಕಲ್ಪಾದಿಯಲ್ಲಿ ಮಹಾಸಾಗರದಲ್ಲಿ ದಿವ್ಯಜ್ಞಾನಿಯಾದ ಚತುರ್ಮುಖನಿಗೆ ಸಂಪೂರ್ಣವಾಗಿ ಹೇಳಿದನು. ತ್ರಿಕಾಲಜ್ಞಾನಿಯಾದ ಆ ಬ್ರಹ್ಮನು ಅದನ್ನು ಮುನಿಗಳಿಗೆ ಹೇಳಿದನು. ಬಳಿಕ ಸಕಲ ಶಾಸ್ತ್ರಗಳೂ, ಪುರಾಣಗಳೂ ಉದ್ಭವಿಸಿದುವು.

೨೪. ಬಳಿಕ ಕಾಲಕ್ರಮದಿಂದ ಪ್ರತಿಯುಗದಲ್ಲಿಯೂ ವ್ಯಾಸರೂಪಿಯಾದ ನಾರಾಯಣನು ಹದಿನೆಂಟು ಪುರಾಣಗಳನ್ನು ಸಂಗ್ರಹಿಸುವನು.

೨೫. ಅವನು ಈ ಭೂಲೋಕದಲ್ಲಿ ಪ್ರತಿ ದ್ವಾಪರಯುಗಗಳಲ್ಲಿ ನಾಲ್ಕುಲಕ್ಷ ಗ್ರಂಥಪರಿಮಾಣಗಳಾದ ಈ ಪುರಾಣಗಳನ್ನು ಹದಿನೆಂಟು ಬಗೆಯಾಗಿ ವಿಭಾಗಿಸುವನು.

೨೬. ಈಗಲೂ ಈ ಪುರಾಣಗಳು ನೂರುಕೋಟಿ ಗ್ರಂಥಗಳಿಂದ ದೇವಲೋಕದಲ್ಲಿ ವಿಸ್ತಾರಗೊಂಡಿರುವುವು. ಈ ಭೂಲೋಕದಲ್ಲಿ ಆ ನೂರುಕೋಟಿ ಗ್ರಂಥಗಳ ಅರ್ಥವೇ ನಾಲ್ಕುಲಕ್ಷ ಗ್ರಂಥಗಳಾಗಿ ಸಂಗ್ರಹಿಸಲ್ಪಟ್ಟಿವೆ.

೨೭. ಮುನಿವರ್ಯರೆ! ಈಗ ಆ ಪುರಾಣಗಳು ಹದಿನೆಂಟು ವಿಧವಾಗಿವೆ. ಅವುಗಳ ಹೆಸರನ್ನು ಹೇಳುವೆನು.

ಬ್ರಹ್ಮಣಾಽಭಿಹಿತಂ ಪೂರ್ವಂ ಯಾವನ್ಮಾತ್ರಂ ಮರೀಚಯೇ ।
ಬ್ರಾಹ್ಮಂ ತದ್ದಶಸಾಹಸ್ರಂ ಪುರಾಣಂ ತದಿಹೋಚ್ಯತೇ ॥ ೨೮ ॥
ಲಿಖಿತ್ವಾ ತಚ್ಚ ಯೋ ದದ್ಯಾಜ್ಜಲಧೇನುಸಮನ್ವಿತಂ ।
ವೈಶಾಖ್ಯಾಂ ಪೌರ್ಣಮಾಸ್ಯಾಂ ಚ ಬ್ರಹ್ಮಲೋಕೇ ಮಹೀಯತೇ ॥ ೨೯ ॥
ಏತದೇವ ಯದಾ ಪದ್ಮಮಭೂದ್ಧೈರಣ್ಮಯಂ ಜಗತ್ ।
ತದ್ವೃತ್ತಾಂತಾಶ್ರಯಾಂತಂ ತತ್ಪಾದ್ಮಮಿತ್ಯುಚ್ಯತೇ ಬುಧೈಃ ॥ ೩೦ ॥
ಪಾದ್ಮಂ ತತ್ಪಂಚಪಂಚಾಶತ್ಸಹಸ್ರಾಣೀಹ ಪಠ್ಯತೇ ।
ತತ್ಪುರಾಣಂ ಚ ಯೋ ದದ್ಯಾತ್ಸುವರ್ಣಕಮಲಾನ್ವಿತಂ ॥
ಜ್ಯೇಷ್ಠೇ ಮಾಸಿ ತಿಲೈರ್ಯುಕ್ತಂ ಸೋಽಶ್ವಮೇಧಫಲಂ ಲಭೇತ್ ॥ ೩೧ ॥
ವಾರಾಹಕಲ್ಪವೃತ್ತಾಂತಮಧಿಕೃತ್ಯ ಪರಾತ್ಪರಃ ।
ಯತ್ರಾಽಽಹ ಧರ್ಮಾನಖಿಲಾಂಸ್ತದುಕ್ತಂ ವೈಷ್ಣವಂ ವಿದುಃ ॥ ೩೨ ॥
ಚರಿತ್ರೈರಂಚಿತಂ ವಿಷ್ಣೋಸ್ತಲ್ಲೋಕೇ ವೈಷ್ಣವಂ ವಿದುಃ ।
ತ್ರಯೋವಿಂಶತಿಸಾಹಸ್ರಂ ಪುರಾಣಂ ತತ್ಪ್ರಕೀರ್ತಿತಂ ॥ ೩೩ ॥
ತದಾಷಾಢೇ ಚ ಯೋ ದದ್ಯಾದ್ಘೃತಧೇನುಸಮನ್ವಿತಂ ।
ಪೌರ್ಣಮಾಸ್ಯಾಂ ವಿಶುದ್ಧಾಯಾಂ ಸ ಪದಂ ಯಾತಿ ವೈಷ್ಣವಂ ॥ ೩೪ ॥

---

೨೮. ಹಿಂದೆ ಬ್ರಹ್ಮನು ಮರೀಚಿಮುನಿಗೆ ಹೇಳಿದ ಹತ್ತುಸಾವಿರ ಗ್ರಂಥಗಳುಳ್ಳ ಪುರಾಣವು ಬ್ರಾಹ್ಮವೆನ್ನಿಸಿಕೊಳ್ಳುವುದು.

೨೯. ಈ ಪುರಾಣವನ್ನು ಬರೆದು ವೈಶಾಖ ಶುದ್ಧ ಪೂರ್ಣಿಮಾ ದಿನ ಜಲ, ಗೋವುಗಳೊಡನೆ ದಾನಮಾಡಿದವನು ಬ್ರಹ್ಮಲೋಕದಲ್ಲಿ ಪೂಜ್ಯನಾಗುವನು.

೩೦. ಸುವರ್ಣಮಯವೂ ಪದ್ಮರೂಪವೂ ಆದ ಈ ಪ್ರಪಂಚದ ವೃತ್ತಾಂತವನ್ನು ಪ್ರತಿಪಾದಿಸುವ ಪುರಾಣವು ಪಾದ್ಮವೆನ್ನಿಸಿಕೊಳ್ಳುವುದು.

೩೧. ಐವತ್ತೈದುಸಾವಿರ ಗ್ರಂಥಗಳುಳ್ಳ ಈ ಪದ್ಮಪುರಾಣವನ್ನು ಬರೆದು ಸುವರ್ಣಕಮಲ, ತಿಲಗಳೊಡನೆ ಜ್ಯೇಷ್ಠಮಾಸದಲ್ಲಿ ದಾನಮಾಡಿದವನು ಅಶ್ವಮೇಧ ಯಾಗದ ಫಲವನ್ನು ಪಡೆಯುವನು.

೩೨–೩೩. ಸರ್ವೋತ್ತಮನಾದ ನಾರಾಯಣನು ವರಾಹಕಲ್ಪದ ವೃತ್ತಾಂತವನ್ನುದ್ದೇಶಿಸಿ ಸಕಲ ಧರ್ಮವನ್ನು ಹೇಳಿರುವ ಆ ವಿಷ್ಣುವಿನ ಚರಿತೆಯನ್ನು ಪ್ರತಿಪಾದಿಸುವ ಪುರಾಣವು ವೈಷ್ಣವವೆನ್ನಿಸಿಕೊಳ್ಳುವುದು. ಇದರಲ್ಲಿ ಇಪ್ಪತ್ತುಮೂರುಸಾವಿರ ಗ್ರಂಥಗಳಿರುವುವು.

೩೪. ಆಷಾಢ ಶುದ್ಧ ಹುಣ್ಣಿಮೆಯ ದಿನ ಘೃತ, ಧೇನುಗಳೊಡನೆ ಈ ಪುರಾಣವನ್ನು ದಾನಮಾಡಿದವನು ವಿಷ್ಣುಲೋಕವನ್ನು ಸೇರುವನು.

ಶ್ರುತಕಲ್ಪಪ್ರಸಂಗೇನ ಧರ್ಮಾನ್ ವಾಯುರಥಾಽಬ್ರವೀತ್ ।
ಯತ್ರ ತದ್ವಾಯವೀಯಂ ಸ್ಯಾದ್ರುದ್ರಮಾಹಾತ್ಮ್ಯ ಸಂಯುತಂ ॥ ೩೫ ॥
ಚತುರ್ವಿಂಶತಿಸಾಹಸ್ರಂ ನಾನಾವೃತ್ತಾಂತಸಂಯುತಂ ।
ಧರ್ಮಾರ್ಥಕಾಮಮೋಕ್ಷೈಶ್ಚ ಸಾಧುವೃತ್ತಸಮನ್ವಿತಂ ॥ ೩೬ ॥
ಶ್ರಾವಣ್ಯಾಂ ಶ್ರಾವಣೇ ಮಾಸಿ ಗುಡಧೇನುಸಮನ್ವಿತಂ ।
ಯೋ ದದ್ಯಾದ್ದಧಿಸಂಯುಕ್ತಂ ಬ್ರಾಹ್ಮಣಾಯ ಕುಟುಂಬಿನೇ ॥
ಶಿವಲೋಕೇ ಸ ಪೂತಾತ್ಮಾ ಕಲ್ಪಮೇಕಂ ವಸೇನ್ನರಃ ॥ ೩೭ ॥
ಪುನಃ ಸಂಜಾಯತೇ ಮರ್ತ್ಯೋ ಬ್ರಾಹ್ಮಣೋ ವೇದವಿತ್ತಮಃ ।
ವೇದವಿದ್ಯಾರ್ಥತತ್ವಜ್ಞೋ ವ್ಯಾಖ್ಯಾತತ್ವಾರ್ಥವಿತ್ತಮಃ ॥ ೩೮ ॥
ಯತ್ರಾಧಿಕೃತ್ಯ ಗಾಯತ್ರೀಂ ವರ್ಣ್ಯತೇ ಧರ್ಮವಿಸ್ತರಃ ।
ವೃತ್ರಾಸುರವಧೋಪೇತಂ ತದ್ಭಾಗವತಮುಚ್ಯತೇ ॥ ೩೯ ॥
ಸಾರಸ್ವತಸ್ಯ ಕಲ್ಪಸ್ಯ ಮಧ್ಯೇ ಯೇ ಸ್ಯುರ್ನರಾಮರಾಃ ।
ತದ್ವೃತ್ತಾಂತೋದ್ಭವಂ ಪುಣ್ಯಂ ಪುಣ್ಯೋದ್ವಾಹಸಮನ್ವಿತಂ ॥ ೪೦ ॥
ಲಿಖಿತ್ವಾ ತಚ್ಚ ಯೋ ದದ್ಯಾದ್ಧೇಮಸಿಂಹಸಮನ್ವಿತಂ ।
ಪೌರ್ಣಮಾಸ್ಯಾಂ ಪ್ರೌಷ್ಠಪದ್ಯಾಂ ಸ ಯಾತಿ ಪರಮಾಂ ಗತಿಂ ॥ ೪೧ ॥

---

೩೫. ವಾಯುವು ಶ್ರುತಕಲ್ಪದ ಪ್ರಸ್ತಾವದಿಂದ ಧರ್ಮವನ್ನು ಹೇಳಿರುವುದೂ, ರುದ್ರನ ಮಾಹಾತ್ಮ್ಯದಿಂದ ಕೂಡಿರುವುದೂ ಆದ ಪುರಾಣವು ವಾಯುಪುರಾಣವು.

೩೬–೩೭. ಇಪ್ಪತ್ತು ನಾಲ್ಕುಸಾವಿರ ಗ್ರಂಥವುಳ್ಳದ್ದೂ, ಅನೇಕ ವೃತ್ತಾಂತಗಳು, ಧರ್ಮಾರ್ಥಕಾಮಮೋಕ್ಷಗಳು, ಸಜ್ಜನರ ವೃತ್ತಾಂತಗಳು–ಇವುಗಳಿಂದ ಕೂಡಿರುವುದೂ ಆಗಿರುವ ಈ ವಾಯುಪುರಾಣವನ್ನು ಶ್ರಾವಣ ಶುದ್ಧ ಹುಣ್ಣಿಮೆಯ ದಿನ ಬೆಲ್ಲ ಗೋವು, ಮೊಸರುಗಳೊಡನೆ ಸಂಸಾರಿಯಾದ ಬ್ರಾಹ್ಮಣನಿಗೆ ದಾನಮಾಡಿದವನು ಪರಿಶುದ್ಧನಾಗಿ ಶಿವಲೋಕದಲ್ಲಿ ಒಂದು ಕಲ್ಪಕಾಲ ವಾಸಮಾಡುವನು.

೩೮. ಮರಳಿ ವೇದವಿದ್ಯೆಯ ಅರ್ಥವನ್ನರಿತವನೂ, ವ್ಯಾಖ್ಯಾನತತ್ವಜ್ಞನೂ ಆದ ಬ್ರಾಹ್ಮಣನಾಗಿ ಜನಿಸುವನು.

೩೯. ಗಾಯತ್ರಿಯನ್ನುದ್ದೇಶಿಸಿ ಧರ್ಮವನ್ನು ವರ್ಣಿಸುವುದೂ, ವೃತ್ರಾಸುರನ ವಧೆಯಿಂದ ಕೂಡಿದುದೂ ಆಗಿರುವುದು ಭಾಗವತ ಪುರಾಣವು.

೪೦–೪೧. ಸಾರಸ್ವತಕಲ್ಪದ ಮಧ್ಯದಲ್ಲಿರುವ ನರಾಮರರ ವೃತ್ತಾಂತವನ್ನು ಬೋಧಿಸುವ ಪುಣ್ಯಕರವಾದ ವಿವಾಹೋತ್ಸವದಿಂದ ಕೂಡಿರುವ ಈ ಭಾಗವತಪುರಾಣವನ್ನು ಬರೆದು ಸುವರ್ಣಸಿಂಹದೊಡನೆ ಭಾದ್ರಪದ ಶುದ್ಧ ಪೂರ್ಣಿಮೆಯ ದಿನ ದಾನ ಮಾಡುವವನು ಉತ್ತಮಗತಿಯನ್ನು ಪಡೆಯುವನು.

ಅಷ್ಟಾದಶ ಸಹಸ್ರಾಣಿ ಪುರಾಣಂ ತತ್ಪ್ರಕೀರ್ತಿತಂ || ೪೨ ||
ಯತ್ರಾಽಽಹ ನಾರದೋ ಧರ್ಮಾನ್ ಬೃಹತ್ಕಲ್ಪಾಶ್ರಯಾಂಸ್ತ್ವಿಹ ।
ಪಂಚವಿಂಶತ್ಸಹಸ್ರಾಣಿ ನಾರದೀಯಂ ತದುಚ್ಯತೇ || ೪೩ ||
ತದಿಷೇ ಪಂಚದಶ್ಯಾಂ ತು ಯೋ ದದ್ಯಾದ್ಧೇನುಸಂಯುತಂ ।
ಉತ್ತಮಾಂ ಸಿದ್ಧಿಮಾಪ್ನೋತಿ ಇಹಲೋಕೇ ಪರತ್ರ ಚ ।
ಸರ್ವಾನ್ಕಾಮಾನವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ || ೪೪ ||
ಯತ್ರಾಽಧಿಕೃತ್ಯ ಶಕುನೀನ್ ಧರ್ಮಾಧರ್ಮವಿಚಾರಣಂ ।
ಪುರಾಣಂ ನವಸಾಹಸ್ರಂ ಮಾರ್ಕಂಡೇಯಂ ತದುಚ್ಯತೇ || ೪೫ ||
ಪರಿಲಿಖ್ಯ ಚ ಯೋ ದದ್ಯಾತ್ಸೌವರ್ಣಕರಿಸಂಯುತಂ ।
ಕಾರ್ತಿಕ್ಯಾಂ ಪೌಂಡರೀಕಸ್ಯ ಯಜ್ಞಸ್ಯ ಫಲಭಾಗ್ಭವೇತ್ || ೪೬ ||
ಯತ್ತದೀಶಾನಕಲ್ಪಸ್ಯ ವೃತ್ತಾಂತಮಧಿಕೃತ್ಯ ಚ ।
ವಸಿಷ್ಠಾಯಾಽಗ್ನಿನಾ ಪ್ರೋಕ್ತಮಾಗ್ನೇಯಂ ತತ್ಪ್ರಚಕ್ಷತೇ || ೪೭ ||
ಲಿಖಿತ್ವಾ ತಚ್ಚ ಯೋ ದದ್ಯಾದ್ಧೇಮಪದ್ಮಸಮನ್ವಿತಂ ।
ಮಾರ್ಗಶೀರ್ಷೇ ವಿಧಾನೇನ ತಿಲಧೇನುಯುತಂ ತಥಾ ||
ತಚ್ಚ ಷೋಡಶಸಾಹಸ್ರಂ ಸರ್ವಕ್ರತುಫಲಪ್ರದಂ || ೪೮ ||

---

೪೨. ಈ ಭಾಗವತ ಪುರಾಣವು ಹದಿನೆಂಟುಸಾವಿರ ಗ್ರಂಥಗಳುಳ್ಳದು.

೪೩. ನಾರದಮುನಿಯು ಬೃಹತ್ಕಲ್ಪದ ಧರ್ಮವನ್ನು ವರ್ಣಿಸಿರುವ ಇಪ್ಪತ್ತೈದು ಸಾವಿರ ಗ್ರಂಥಗಳುಳ್ಳದು ನಾರದ ಪುರಾಣವು

೪೪. ಇದನ್ನು ಆಶ್ವಿನಮಾಸದ ಹುಣ್ಣಿಮೆಯ ದಿನ ಗೋವಿನೊಡನೆ ದಾನ ಮಾಡಿದವನು ಇಹಪರಗಳಲ್ಲಿ ಸಕಲೇಷ್ಟಾರ್ಥಗಳನ್ನು ಪಡೆದು ಉತ್ತಮ ಸಿದ್ಧಿಯನ್ನು ಹೊಂದುವನು.

೪೫. ಪಕ್ಷಿಗಳನ್ನುದ್ದೇಶಿಸಿ ಧರ್ಮಾಧರ್ಮಗಳನ್ನು ವರ್ಣಿಸುವ ಒಂಬತ್ತು ಸಾವಿರ ಗ್ರಂಥಗಳುಳ್ಳದು ಮಾರ್ಕಂಡೇಯ ಪುರಾಣವು.

೪೬. ಇದನ್ನು ಬರೆದು ಸುವರ್ಣದ ಆನೆಯೊಡನೆ ಕಾರ್ತಿಕಮಾಸದ ಹುಣ್ಣಿಮೆಯ ದಿನ ದಾನಮಾಡುವವನು ಪೌಂಡರೀಕ ಯಜ್ಞದ ಫಲವನ್ನು ಪಡೆಯುವನು.

೪೭. ಈಶಾನಕಲ್ಪದ ವೃತ್ತಾಂತವನ್ನುದ್ದೇಶಿಸಿ ಅಗ್ನಿಯು ವಸಿಷ್ಠನಿಗೆ ಹೇಳಿರುವುದು ಆಗ್ನೇಯ ಪುರಾಣವು.

೪೮. ಹದಿನಾರುಸಾವಿರ ಗ್ರಂಥಗಳುಳ್ಳ ಈ ಆಗ್ನೇಯಪುರಾಣವನ್ನು ಬರೆದು ಚಿನ್ನದ ತಾವರೆ, ಎಳ್ಳು, ಗೋವು ಇವುಗಳೊಡನೆ ಮಾರ್ಗಶೀರ್ಷಮಾಸದ ಹುಣ್ಣಿಮೆಯ ದಿನ ದಾನಮಾಡುವವನು ಸಕಲ ಯಜ್ಞಗಳ ಫಲವನ್ನು ಪಡೆಯುವನು.

ಯತ್ರಾಽಧಿಕೃತ್ಯ ಮಾಹಾತ್ಮ್ಯಮಾದಿತ್ಯಸ್ಯ ಚತುರ್ಮುಖಃ ।
ಅಘೋರಕಲ್ಪವೃತ್ತಾಂತಪ್ರಸಂಗೇನ ಜಗತ್ಪತಿಃ ॥
ಮನವೇ ಕಥಯಾಮಾಸ ಭೂತಗ್ರಾಮಸ್ಯ ಲಕ್ಷಣಂ ॥ ೪೯ ॥

ಚತುರ್ದಶ ಸಹಸ್ರಾಣಿ ತಥಾ ಪಂಚ ಶತಾನಿ ಚ ।
ಭವಿಷ್ಯಚರಿತಪ್ರಾಯಂ ಭವಿಷ್ಯಂ ತದಿಹೋಚ್ಯತೇ ॥ ೫೦ ॥

ತತ್ಪೌಷಮಾಸಿ ಯೋ ದದ್ಯಾತ್ಪೌರ್ಣಮಾಸ್ಯಾಂ ವಿಮತ್ಸರಃ ।
ಗುಡಕುಂಭಸಮಾಯುಕ್ತಮಗ್ನಿಷ್ಟೋಮಫಲಂ ಲಭೇತ್ ॥ ೫೧ ॥

ರಥಂತರಸ್ಯ ಕಲ್ಪಸ್ಯ ವೃತ್ತಾಂತಮಧಿಕೃತ್ಯ ಚ ।
ಪ್ರೋಕ್ತಂ ಬ್ರಹ್ಮವರಾಹಸ್ಯ ಚರಿತಂ ವರ್ಣ್ಯತೇಽತ್ರ ಚ ॥ ೫೨ ॥

ತದಷ್ಟಾದಶಸಾಹಸ್ರಂ ಬ್ರಹ್ಮವೈವರ್ತಮುಚ್ಯತೇ ।
ಪುರಾಣಂ ಬ್ರಹ್ಮವೈವರ್ತಂ ಯೋ ದದ್ಯಾದ್ಬ್ರಾಹ್ಮಣೋತ್ತಮೇ ॥
ಮಾಘಮಾಸೇ ಪೌರ್ಣಮಾಸ್ಯಾಂ ಬ್ರಹ್ಮಲೋಕೇ ಮಹೀಯತೇ ॥ ೫೩ ॥

ಯತ್ರಾಽಗ್ನಿಲಿಂಗಮಧ್ಯಸ್ಥಃ ಪ್ರಾಹ ದೇವೋ ಮಹೇಶ್ವರಃ ।
ಧರ್ಮಾರ್ಥಕಾಮಮೋಕ್ಷಾರ್ಥಾನಾಗ್ನೇಯಮಧಿಕೃತ್ಯ ಚ ॥ ೫೪ ॥
ಕಲ್ಪಂ ತಲ್ಲೈಂಗಮಿತ್ಯುಕ್ತಂ ಪುರಾಣಂ ಬ್ರಹ್ಮಣಾ ಸ್ವಯಂ ॥ ೫೫ ॥

೪೯–೫೦. ಬ್ರಹ್ಮನು ಅಘೋರಕಲ್ಪದ ವೃತ್ತಾಂತದ ಪ್ರಸ್ತಾವದಿಂದ ಸೂರ್ಯನ ಮಾಹಾತ್ಮ್ಯವನ್ನುದ್ದೇಶಿಸಿ ಪ್ರಾಣಿಗಳ ಲಕ್ಷಣಗಳನ್ನೂ, ಭವಿಷ್ಯತ್ಕಾಲದ ಚರಿತೆಯನ್ನೂ ಮನುವಿಗೆ ವರ್ಣಿಸಿ ಹೇಳಿರುವ ಹದಿನಾಲ್ಕು ಸಾವಿರದ ಐನೂರು ಗ್ರಂಥಗಳುಳ್ಳದು ಭವಿಷ್ಯಪುರಾಣವು.

೫೧. ಇದನ್ನು ಪುಷ್ಯ ಶುದ್ಧ ಹುಣ್ಣಿಮೆಯ ದಿನ ಮಾತ್ಸರ್ಯವಿಲ್ಲದೆ ಗುಡಕುಂಭದೊಡನೆ ದಾನಮಾಡುವವನು ಅಗ್ನಿಷ್ಟೋಮ ಫಲವನ್ನು ಪಡೆಯುವನು.

೫೨–೫೩. ಸಾವರ್ಣಿಯು ನಾರದನನ್ನು ಕುರಿತು ರಥಂತರಕಲ್ಪದ ವೃತ್ತಾಂತವನ್ನುದ್ದೇಶಿಸಿ ಕೃಷ್ಣ ಮಾಹಾತ್ಮ್ಯವನ್ನೂ, ಬ್ರಹ್ಮವರಾಹಚರಿತೆಯನ್ನೂ ವರ್ಣಿಸಿರುವ ಹದಿನೆಂಟುಸಾವಿರ ಗ್ರಂಥಗಳುಳ್ಳದು ಬ್ರಹ್ಮವೈವರ್ತಪುರಾಣವು. ಈ ಪುರಾಣವನ್ನು ಮಾಘ ಶುದ್ಧ ಪೂರ್ಣಿಮೆಯ ದಿನ ದಾನಮಾಡಿದವನು ಬ್ರಹ್ಮಲೋಕದಲ್ಲಿ ಪೂಜ್ಯನಾಗುವನು.

೫೪–೫೫. ಅಗ್ನಿಲಿಂಗದಲ್ಲಿರುವ ಮಹೇಶ್ವರನು ಆಗ್ನೇಯಕಲ್ಪವನ್ನುದ್ದೇಶಿಸಿ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಹೇಳಿರುವ ಪುರಾಣವನ್ನು ಬ್ರಹ್ಮನು ತಾನೇ ಲೈಂಗಪುರಾಣವೆಂದಿರುವನು.

ತದೇಕಾದಶಸಾಹಸ್ರಂ ಫಾಲ್ಗುನ್ಯಾಂ ಯಃ ಪ್ರಯಚ್ಛತಿ ।
ತಿಲಧೇನುಸಮಾಯುಕ್ತಂ ಸ ಯಾತಿ ಶಿವಸಾಮ್ಯತಾಂ ॥ ೫೬ ॥

ಮಹಾವರಾಹಸ್ಯ ಪುನರ್ಮಾಹಾತ್ಮ್ಯಮಧಿಕೃತ್ಯಚ ।
ವಿಷ್ಣುನಾಽಭಿಹಿತಂ ಕ್ಷೋಣ್ಯೈ ತದ್ವಾರಾಹಮಿಹೋಚ್ಯತೇ ॥ ೫೭ ॥

ಮಾನವಸ್ಯ ಪ್ರಸಂಗೇನ ಧನ್ಯಸ್ಯ ಮುನಿಸತ್ತಮಾಃ ।
ಚತುರ್ವಿಂಶತ್ಸಹಸ್ರಾಣಿ ತತ್ಪುರಾಣಮಿಹೋಚ್ಯತೇ ॥ ೫೮ ॥

ಕಾಂಚನಂ ಗರುಡಂ ಕೃತ್ವಾ ತಿಲಧೇನುಸಮನ್ವಿತಂ ।
ಪೌರ್ಣಮಾಸ್ಯಾಮಥೋ ದದ್ಯಾದ್ಬ್ರಾಹ್ಮಣಾಯ ಕುಟುಂಬಿನೇ ॥
ವಾರಾಹಸ್ಯ ಪ್ರಸಾದೇನ ಪದಮಾಪ್ನೋತಿ ವೈಷ್ಣವಂ ॥ ೫೯ ॥

ಯತ್ರ ಮಾಹೇಶ್ವರಾನ್ ಧರ್ಮಾನಧಿಕೃತ್ಯ ಚ ಷಣ್ಮುಖಂ ।
ಕಲ್ಪೇ ತತ್ಪುರುಷೇ ವೃತ್ತೇ ಚರಿತ್ರೈರುಪಬೃಂಹಿತಂ ॥ ೬೦ ॥

ಸ್ಕಾಂದಂ ನಾಮ ಪುರಾಣಂ ತದೇಕಾಽಶೀತಿ ನಿಗದ್ಯತೇ ।
ಸಹಸ್ರಾಣಿ ಶತಂ ಚೈಕಮಿತಿ ಮರ್ತ್ಯೇಷು ಪಠ್ಯತೇ ॥ ೬೧ ॥

ಪರಿಲೇಖ್ಯ ಚ ಯೋ ದದ್ಯಾದ್ಧೇಮಶೂಲಸಮನ್ವಿತಂ ।
ಶೈವಂ ಸ ಪದಮಾಪ್ನೋತಿ ಮಕರೋಪಗಮೇ ರವೇಃ ॥ ೬೨ ॥

---

೫೬. ಹನ್ನೊಂದುಸಾವಿರ ಗ್ರಂಥಗಳುಳ್ಳ ಈ ಲೈಂಗಪುರಾಣವನ್ನು ಫಾಲ್ಗುನ ಶುದ್ಧ ಹುಣ್ಣಿಮೆಯ ದಿನ ಎಳ್ಳು, ಆಕಳು ಇವುಗಳೊಡನೆ ದಾನಮಾಡುವವನು ಶಿವಸಾಮ್ಯವನ್ನೈದುವನು.

೫೭-೫೮. ಮಹಾವಿಷ್ಣುವು ಭೂದೇವಿಯನ್ನು ಕುರಿತು ಪುಣ್ಯವಂತನಾದ ಮಾನವನ ಪ್ರಸ್ತಾವದಿಂದ ಮಹಾ ವರಾಹನ ಮಾಹಾತ್ಮ್ಯವನ್ನುದ್ದೇಶಿಸಿ ಹೇಳಿರುವ ಇಪ್ಪತ್ತುನಾಲ್ಕುಸಾವಿರ ಗ್ರಂಥಗಳುಳ್ಳದು ವಾರಾಹ ಪುರಾಣವು.

೫೯. ಈ ಪುರಾಣವನ್ನು ಸುವರ್ಣದ ಗರುಡ, ತಿಲ, ಧೇನು ಇವುಗಳೊಡನೆ ಹುಣ್ಣಿಮೆಯ ದಿನ ಸಂಸಾರಿಯಾದ ಬ್ರಾಹ್ಮಣನಿಗೆ ದಾನಮಾಡುವವನು ವರಾಹನ ಅನುಗ್ರಹದಿಂದ ವೈಕುಂಠಲೋಕವನ್ನು ಪಡೆಯುವನು.

೬೦-೬೧. ತತ್ಪುರುಷಕಲ್ಪದಲ್ಲಿ ಷಣ್ಮುಖನನ್ನು ಕುರಿತು ಮಾಹೇಶ್ವರ ಧರ್ಮಗಳನ್ನು ಹೇಳಿರುವ ಉತ್ತಮಚರಿತೆಗಳಿಂದ ತುಂಬಿದ ಎಂಬತ್ತೊಂದು ಸಾವಿರದ ನೂರು ಗ್ರಂಥಗಳುಳ್ಳದು ಸ್ಕಾಂದಪುರಾಣವು.

೬೨. ಸೂರ್ಯನು ಮಕರರಾಶಿಯಲ್ಲಿರುವಾಗ ಈ ಪುರಾಣವನ್ನು ಬರೆದು ಸುವರ್ಣ ಶೂಲದೊಡನೆ ದಾನಮಾಡುವವನು ಶಿವಲೋಕವನ್ನು ಸೇರುವನು.

ತ್ರಿವಿಕ್ರಮಸ್ಯ ಮಾಹಾತ್ಮ್ಯಮಧಿಕೃತ್ಯ ಚತುರ್ಮುಖಃ ।
ತ್ರಿವರ್ಗಮಭ್ಯಧಾತ್ತತ್ತು ವಾಮನಂ ಪರಿಕೀರ್ತಿತಂ ॥ ೬೩ ॥
ಪುರಾಣಂ ದಶಸಾಹಸ್ರಂ ಕೌರ್ಮಕಲ್ಪಾನುಗಂ ಶಿವಂ ॥ ೬೪ ॥
ಯಃ ಶರದ್ವಿಷುವೇ ದದ್ಯಾದ್ಧೇಮವಸ್ತ್ರಸಮನ್ವಿತಂ ।
ಕ್ಷ್ಮಾಮಾವೃತಯುತಂ ಧೇನ್ವಾ ಸ ಪದಂ ಯಾತಿ ವೈಷ್ಣವಂ ॥ ೬೫ ॥
ಯಚ್ಚ ಧರ್ಮಾರ್ಥಕಾಮಾನಾಂ ಮೋಕ್ಷಸ್ಯ ಚ ರಸಾತಲೇ ।
ಮಾಹಾತ್ಮ್ಯಂ ಕಥಯಾಮಾಸ ಕೂರ್ಮರೂಪೀ ಜನಾರ್ದನಃ ॥ ೬೬ ॥
ಇಂದ್ರದ್ಯುಮ್ನಪ್ರಸಂಗೇನ ಋಷೀಣಾಂ ಶಕ್ರಸನ್ನಿಧೌ ।
ಸಪ್ತದಶ ಸಹಸ್ರಾಣಿ ಲಕ್ಷ್ಮೀಕಲ್ಪಾನುಷಂಗಿಕಂ ॥ ೬೭ ॥
ಯೋ ದದ್ಯಾದಯನೇ ಕೌರ್ಮಂ ಹೇಮಕೂರ್ಮಸಮನ್ವಿತಂ ।
ಗೋಸಹಸ್ರಪ್ರದಾನಸ್ಯ ಸ ಫಲಂ ಪ್ರಾಪ್ನುಯಾನ್ನರಃ ॥ ೬೮ ॥
ಶ್ರುತೀನಾಂ ಯತ್ರ ಕಲ್ಪಾದೌ ಪ್ರವೃತ್ತ್ಯರ್ಥಂ ಜನಾರ್ದನಃ ।
ಮತ್ಸ್ಯರೂಪೀ ಚ ಮನವೇ ನರಸಿಂಹೋಪವರ್ಣನಂ ॥ ೬೯ ॥
ಅಧಿಕೃತ್ಯಾಬ್ರವೀತ್ಸಪ್ತಕಲ್ಪವೃತ್ತಂ ಮುನಿವ್ರತಾಃ ।
ತನ್ಮಾತ್ಸ್ಯಮಿತಿ ಜಾನೀಧ್ವಂ ಸಹಸ್ರಾಣಿ ಚತುರ್ದಶ ॥ ೭೦ ॥

೬೩–೬೪. ಬ್ರಹ್ಮನು ತ್ರಿವಿಕ್ರಮನ ಮಾಹಾತ್ಮ್ಯವನ್ನುದ್ದೇಶಿಸಿ ಧರ್ಮ, ಅರ್ಥ, ಕಾಮಗಳನ್ನು ಕೌರ್ಮ ಕಲ್ಪದಲ್ಲಿರುವ ಶಿವನನ್ನು ಕುರಿತು ಹೇಳಿರುವ ಹತ್ತು ಸಾವಿರ ಗ್ರಂಥಗಳುಳ್ಳದು ವಾಮನ ಪುರಾಣವು.

೬೫. ಈ ಪುರಾಣವನ್ನು ಶರದ್ವಿಷುವಿನ ದಿನ ಸುವರ್ಣವಸ್ತ್ರ, ನಾರುಬಟ್ಟೆ, ಆಕಳು ಇವುಗಳೊಡನೆ ದಾನಮಾಡಿದವನು ವೈಕುಂಠಲೋಕವನ್ನು ಹೊಂದುವನು.

೬೬–೬೭. ಕೂರ್ಮರೂಪಿಯಾದ ನಾರಾಯಣನು ಪಾತಾಳದಲ್ಲಿ ಇಂದ್ರದ್ಯುಮ್ನ ರಾಜನ ಪ್ರಸ್ತಾವದಿಂದ ಋಷಿಗಳ ಮತ್ತು ಇಂದ್ರನ ಸನ್ನಿಧಿಯಲ್ಲಿ ಲಕ್ಷ್ಮೀಕಲ್ಪದಲ್ಲಿ ಧರ್ಮಾರ್ಥಕಾಮಮೋಕ್ಷಗಳ ಮಾಹಾತ್ಮ್ಯವನ್ನು ಹೇಳಿರುವ ಹದಿನೇಳುಸಾವಿರ ಗ್ರಂಥಗಳುಳ್ಳದು ಕೂರ್ಮಪುರಾಣವು.

೬೮. ಈ ಕೂರ್ಮಪುರಾಣವನ್ನು ಅಯನಸಂಕ್ರಾಂತಿಯಲ್ಲಿ ಸುವರ್ಣದ ಆಮೆಯೊಡನೆ ದಾನಮಾಡಿದ ಮಾನವನು ಸಾವಿರ ಗೋವುಗಳನ್ನು ದಾನಮಾಡಿದ ಪುಣ್ಯವನ್ನು ಪಡೆಯುವನು.

೬೯-೭೦. ಎಲೈ ಮುನಿಗಳೆ! ಮತ್ಸ್ಯರೂಪಿಯಾದ ನಾರಾಯಣನು ಕಲ್ಪಾದಿಯಲ್ಲಿ ವೇದಗಳ ಪ್ರಚಾರಕ್ಕಾಗಿ ನರಸಿಂಹವರ್ಣನೆಯನ್ನುದ್ದೇಶಿಸಿ ಏಳು ಕಲ್ಪಗಳ ವೃತ್ತಾಂತವನ್ನು ಹೇಳಿರುವ ಹದಿನಾಲ್ಕುಸಾವಿರ ಗ್ರಂಥಗಳುಳ್ಳದು ಮಾತ್ಸ್ಯಪುರಾಣವೆಂದು

ವಿಷುವೇ ಹೈಮಮತ್ಸ್ಯೇನ ಧೇನ್ವಾ ಕ್ಷೌಮಯುಗಾನ್ವಿತಂ ।
ಯೋ ದದ್ಯಾತ್ಪೃಥಿವೀ ತೇನ ದತ್ತಾ ಭವತಿ ಚಾಽಖಿಲಾ ॥ ೭೧ ॥
ಯದಾ ವಾ ಗರುಡೇ ಕಲ್ಪೇ ವಿಶ್ವಾಂಡಾದ್ಗರುಡೋಽಭವತ್ ।
ಅಧಿಕೃತ್ಯಾಽಬ್ರವೀತ್ಕೃಷ್ಣೋ ಗಾರುಡಂ ತದಿಹೋಚ್ಯತೇ ॥ ೭೨ ॥
ತದಷ್ಟಾದಶ ಚೈಕಂ ಚ ಸಹಸ್ರಾಣೀಹ ಪಠ್ಯತೇ ।
ಸ್ವರ್ಣಹಂಸಸಮಾಯುಕ್ತಂ ಯೋ ದದ್ಯಾದಯನೇ ಪರೇ ।
ಸ ಸಿದ್ಧಿಂ ಲಭತೇ ಮುಖ್ಯಾಂ ಶಿವಲೋಕೇ ಚ ಸಂಸ್ಥಿತಿಂ ॥ ೭೩ ॥
ಬ್ರಹ್ಮಾ ಬ್ರಹ್ಮಾಂಡಮಾಹಾತ್ಮ್ಯಮಧಿಕೃತ್ಯಾಽಬ್ರವೀತ್ಪುನಃ ।
ತಚ್ಚ ದ್ವಾದಶಸಾಹಸ್ರಂ ಬ್ರಹಾಂಡಂ ದ್ವಿಶತಾಧಿಕಂ ॥ ೭೪ ॥
ಭವಿಷ್ಯಾಣಾಂ ಚ ಕಲ್ಪಾನಾಂ ಶ್ರೂಯತೇ ಯತ್ರ ವಿಸ್ತರಃ ।
ತದ್ಬ್ರಹಾಂಡಂ ಪುರಾಣಂ ತು ಬ್ರಹ್ಮಣಾ ಸಮುದಾಹೃತಂ ॥ ೭೫ ॥
ಯೋ ದದ್ಯಾತ್ತು ವ್ಯತೀಪಾತ ಊರ್ಣಾಯುಗಸಮನ್ವಿತಂ ।
ರಾಜಸೂಯಸಹಸ್ರಸ್ಯ ಫಲಮಾಪ್ನೋತಿ ಮಾನವಃ ॥ ೭೬ ॥
ಹೇಮಧೇನ್ವಾಯುತಂ ತಚ್ಚ ಬ್ರಹ್ಮಲೋಕಫಲಪ್ರದಂ ।
ಚತುರ್ಲಕ್ಷಮಿದಂ ಪ್ರೋಕ್ತಂ ವ್ಯಾಸೇನಾಽದ್ಭುತಕರ್ಮಣಾ ॥ ೭೭ ॥

---

೭೧. ಇದನ್ನು ಸಂವತ್ಸರಾರಂಭದ ದಿನ ಚಿನ್ನದ ಮೀನು, ಗೋವು, ಎರಡು ನಾರುಬಟ್ಟೆ ಇವುಗಳೊಡನೆ ದಾನಮಾಡಿದವನು ಸಮಸ್ತ ಭೂಮಿಯನ್ನೂ ದಾನ ಮಾಡಿದ ಫಲವನ್ನು ಪಡೆಯುವನು.

೭೨. ಗರುಡಕಲ್ಪದಲ್ಲಿ ಬ್ರಹ್ಮಾಂಡದಿಂದ ಗರುಡನು ಉದ್ಭವಿಸಿದಾಗ ಅವನ ನ್ನುದ್ದೇಶಿಸಿ ನಾರಾಯಣನು ಹೇಳಿರುವ ಪುರಾಣವು ಗರುಡಪುರಾಣವು.

೭೩. ಹತ್ತೊಂಬತ್ತುಸಾವಿರ ಗ್ರಂಥಗಳುಳ್ಳ ಈ ಪುರಾಣವನ್ನು ಅಯನ ಸಂಕ್ರಾಂತಿಯಲ್ಲಿ ಸುವರ್ಣಹಂಸದೊಡನೆ ದಾನಮಾಡಿದವನು ಉತ್ತಮ ಸಿದ್ಧಿಯನ್ನು ಪಡೆದು ಶಿವಲೋಕದಲ್ಲಿ ವಾಸಿಸುವನು.

೭೪–೭೫. ಬ್ರಹ್ಮನು ಬ್ರಹ್ಮಾಂಡಮಾಹಾತ್ಮ್ಯವನ್ನುದ್ದೇಶಿಸಿ ಭವಿಷ್ಯಕಲ್ಪಗಳ ವೃತ್ತಾಂತವನ್ನು ಹೇಳಿರುವ ಹನ್ನೆರಡುಸಾವಿರದ ಇನ್ನೂರು ಗ್ರಂಥಗಳುಳ್ಳ ಪುರಾಣವು ಬ್ರಹ್ಮಾಂಡಪುರಾಣವು.

೭೬–೭೭. ವ್ಯತೀಪಾತದಲ್ಲಿ ಈ ಪುರಾಣವನ್ನು ಎರಡು ಉಣ್ಣೆಬಟ್ಟೆ, ಸುವರ್ಣ ಗೋವು ಇವುಗಳೊಡನೆ ದಾನಮಾಡಿದ ಮಾನವನು ಬ್ರಹ್ಮಲೋಕವಾಸವನ್ನೀಯುವ ಸಾವಿರ ರಾಜಸೂಯಯಾಗಗಳ ಫಲವನ್ನು ಹೊಂದುವನು. ಆಶ್ಚರ್ಯವಾದ ಕಾರ್ಯವುಳ್ಳ

ಇದಂ ಲೋಕಹಿತಾರ್ಥಾಯ ಸಂಕ್ಷಿಪ್ತಂ ದ್ವಾಪರೇ ದ್ವಿಜಾಃ ॥ ೭೮ ॥
ಇದಮದ್ಯಾಽಪಿ ದೇವೇಷು ಶತಕೋಟಿಪ್ರವಿಸ್ತರಂ ।
ಉಪಭೇದಾನ್ ಪ್ರವಕ್ಷ್ಯಾಮಿ ಲೋಕೇ ಯೇ ಸಂಪ್ರತಿಷ್ಠಿತಾಃ ॥ ೭೯ ॥
ಪಾದ್ಮೇ ಪುರಾಣೇ ಯತ್ಪ್ರೋಕ್ತಂ ನಾರಸಿಂಹೋಪವರ್ಣನಂ ।
ತಚ್ಚಾಽಷ್ಟಾದಶಸಾಹಸ್ರಂ ನಾರಸಿಂಹಮಿಹೋಚ್ಯತೇ ॥ ೮೦ ॥
ನಂದಿನೇ ಯತ್ರ ಮಾಹಾತ್ಮ್ಯಂ ಕಾರ್ತಿಕೇಯೇನ ವರ್ಣಿತಂ ।
ಲೋಕೇ ನಂದಿಪುರಾಣಂ ವೈ ಖ್ಯಾತಮೇತದ್ದ್ವಿಜೋತ್ತಮಾಃ ॥ ೮೧ ॥
ಯತ್ರ ಸಾಂಬಂ ಪುರಸ್ಕೃತ್ಯ ಭವಿಷ್ಯತಿ ಕಥಾನಕಂ ।
ಪ್ರೋಚ್ಯತೇ ತತ್ಪುನರ್ಲೋಕೇ ಸಾಂಬಮೇವ ಮುನಿವ್ರತಾಃ ॥ ೮೨ ॥
ಏವಮಾದಿತ್ಯಸಂಜ್ಞಂ ತು ತತ್ರೈವ ಪರಿಪಠ್ಯತೇ ।
ಅಷ್ಟಾದಶಭ್ಯಸ್ತು ಪೃಥಕ್ಪುರಾಣಂ ಯಚ್ಚ ದೃಶ್ಯತೇ ।
ವಿಜಾನೀಧ್ವಂ ದ್ವಿಜಶ್ರೇಷ್ಠಾಸ್ತದೇತೇಭ್ಯೋ ವಿನಿರ್ಗತಂ ॥ ೮೩ ॥
ಪಂಚಾಂಗಾನಿ ಪುರಾಣಸ್ಯ ಚಾಖ್ಯಾನಮಿತರತ್ಸ್ಮೃತಂ ।
ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುವಂಶಚರಿತಂ ಪುರಾಣಂ ಪಂಚಲಕ್ಷಣಂ ॥ ೮೪ ॥

ವ್ಯಾಸನು ದ್ವಾಪರಯುಗದಲ್ಲಿ ಹೀಗೆ ನಾಲ್ಕುಲಕ್ಷ ಗ್ರಂಥಗಳುಳ್ಳ ಪುರಾಣಗಳನ್ನು ಲೋಕಹಿತಕ್ಕಾಗಿ ಸಂಗ್ರಹಿಸಿ ಹೇಳಿರುವನು.

೭೯. ಈ ಪುರಾಣವು ಈಗಲೂ ದೇವಲೋಕದಲ್ಲಿ ನೂರುಕೋಟಿ ಗ್ರಂಥಗಳಿಂದ ಪ್ರಸಿದ್ಧವಾಗಿದೆ. ಈಗ ಭೂಲೋಕದಲ್ಲಿರುವ ಉಪಪುರಾಣಗಳ ಪ್ರಭೇದಗಳನ್ನು ತಿಳಿಸುವೆನು.

೮೦. ಪದ್ಮಪುರಾಣದಲ್ಲಿ ಉಕ್ತವಾಗಿರುವ ನರಸಿಂಹವರ್ಣನೆಯು ಹದಿನೆಂಟು ಸಾವಿರ ಗ್ರಂಥಗಳುಳ್ಳ ನಾರಸಿಂಹ ಪುರಾಣವೆನಿಸಿಕೊಂಡಿರುವುದು.

೮೧. ಎಲೈ ದ್ವಿಜವರ್ಯರೆ! ಇಲ್ಲಿ ಕುಮಾರಸ್ವಾಮಿಯು ನಂದಿಗೆ ಹೇಳಿದ ಮಾಹಾತ್ಮ್ಯವು ಪ್ರಪಂಚದಲ್ಲಿ ನಂದಿಪುರಾಣವೆಂದು ಪ್ರಸಿದ್ಧವಾಗಿದೆ.

೮೨. ಈ ಪದ್ಮಪುರಾಣದಲ್ಲಿ ಸಾಂಬನನ್ನು ಕುರಿತು ಹೇಳಿದ ಕಥೆಯು ಸಾಂಬ ಪುರಾಣವೆಂದೇ ಲೋಕದಲ್ಲಿ ಹೇಳಲ್ಪಡುವುದು.

೮೩. ಹೀಗೆ ಆದಿತ್ಯಪುರಾಣವೂ ಅಲ್ಲಿಯೇ ಹೇಳಲ್ಪಟ್ಟಿರುವುದು. ಈ ಹದಿನೆಂಟು ಪುರಾಣಗಳಿಗಿಂತ ಬೇರೆಯಾಗಿ ಕಾಣುವ ಪುರಾಣಗಳು ಈ ಪುರಾಣಗಳ ಶಾಖೆಗಳೆಂದೇ ತಿಳಿಯಿರಿ.

೮೪. ಈ ಪುರಾಣಗಳಿಗೆ ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ, ವಂಶಾನುವಂಶ ಚರಿತ ಎಂಬ ಐದು ಅಂಗಗಳಿರುವುವು. ಇವುಗಳಿಲ್ಲದುವು ಆಖ್ಯಾನಗಳು.

ಬ್ರಹ್ಮವಿಷ್ಣ್ವರ್ಕರುದ್ರಾಣಾಂ ಮಾಹಾತ್ಮ್ಯಂ ಭುವನಸ್ಯ ಚ ।
ಸಂಹಾರಶ್ಚ ಪ್ರದೃಶ್ಯೇತ ಪುರಾಣಂ ಪಂಚಲಕ್ಷಣಂ ॥ ೮೫ ॥
ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚ ಪರಿಕೀರ್ತ್ಯತೇ ।
ಸರ್ವೇಷ್ವಪಿ ಪುರಾಣೇಷು ತದ್ವಿರೂಢೇ ಚ ಯತ್ಫಲಂ ॥ ೮೬ ॥
ಸಾತ್ವಿಕೇಷು ಚ ಕಲ್ಪೇಷು ಮಾಹಾತ್ಮ್ಯಮಧಿಕಂ ಹರೇಃ ।
ರಾಜಸೇಷುಚ ಮಾಹಾತ್ಮ್ಯಮಧಿಕಂ ಬ್ರಹ್ಮಣೋ ವಿದುಃ ॥ ೮೭ ॥
ತದ್ವದಗ್ನೇ ಚ ಮಾಹಾತ್ಮ್ಯಂ ತಾಮಸೇಷು ಶಿವಸ್ಯ ಹಿ ।
ಸಂಕೀರ್ಣೇ ಚ ಸರಸ್ವತ್ಯಾಃ ಪಿತೄಣಾಂ ಚ ನಿಗದ್ಯತೇ ॥ ೮೮ ॥
ಚತುರ್ಭಿರ್ಭಗವಾನ್ ವಿಷ್ಣುರ್ದ್ವಾಭ್ಯಾಂ ಬ್ರಹ್ಮಾ ತಥಾ ರವಿಃ ।
ಅಷ್ಟಾದಶಪುರಾಣೇಷು ಶೇಷೇಷು ಭಗವಾಂಛಿವಃ ॥ ೮೯ ॥
ವೇದವನ್ನಿಶ್ಚಲಂ ಮನ್ಯೇ ಪುರಾಣಂ ವೈ ದ್ವಿಜೋತ್ತಮಾಃ ।
ವೇದಾಃ ಪ್ರತಿಷ್ಠಿತಾಃ ಸರ್ವೇ ಪುರಾಣೇ ನಾತ್ರ ಸಂಶಯಃ ॥ ೯೦ ॥
ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಚಾಲಯಿಷ್ಯತಿ ।
ಇತಿಹಾಸಪುರಾಣೈಸ್ತು ನಿಶ್ಚಲೋಽಯಂ ಕೃತಃ ಪುರಾ ॥ ೯೧ ॥

---

೮೫. ಐದು ಲಕ್ಷಣಗಳುಳ್ಳ ಈ ಪುರಾಣದಲ್ಲಿ ಬ್ರಹ್ಮ, ವಿಷ್ಣು, ಸೂರ್ಯ, ರುದ್ರರ ಮಾಹಾತ್ಮ್ಯವೂ, ಲೋಕಸಂಹಾರವೂ ವರ್ಣಿತವಾಗಿರುವುದು.

೮೬. ಸಕಲ ಪುರಾಣಗಳಲ್ಲಿಯೂ ಧರ್ಮ, ಅರ್ಥ, ಕಾಮ, ಮೋಕ್ಷಗಳೂ ಅವುಗಳು ಸ್ಥಿರಗೊಂಡರೆ ಆಗುವ ಪ್ರಯೋಜನವೂ ವರ್ಣಿತವಾಗಿದೆ.

೮೭–೮೮. ಸಾತ್ವಿಕ ಕಲ್ಪಗಳಲ್ಲಿ ನಾರಾಯಣನ ಮಾಹಾತ್ಮ್ಯವು ಹೆಚ್ಚಾಗಿಯೂ, ರಾಜಸಕಲ್ಪಗಳಲ್ಲಿ ಬ್ರಹ್ಮನ ಮಾಹಾತ್ಮ್ಯವು ಅಧಿಕವಾಗಿಯೂ, ತಾಮಸ ಕಲ್ಪಗಳಲ್ಲಿ ಶಿವನ ಮಾಹಾತ್ಮ್ಯವು ಹೆಚ್ಚಾಗಿಯೂ, ಮಿಶ್ರಕಲ್ಪಗಳಲ್ಲಿ ಸರಸ್ವತಿ, ಮತ್ತು ಪಿತೃಗಳ ಮಾಹಾತ್ಮ್ಯವು ಅಧಿಕವಾಗಿಯೂ ವರ್ಣಿತವಾಗಿದೆ.

೮೯. ನಾಲ್ಕು ಪುರಾಣಗಳಲ್ಲಿ ವಿಷ್ಣುವೂ, ಎರಡು ಪುರಾಣಗಳಲ್ಲಿ ಬ್ರಹ್ಮ ಸೂರ್ಯರೂ, ಉಳಿದ ಪುರಾಣಗಳಲ್ಲಿ ಶಿವನೂ ವರ್ಣಿಸಲ್ಪಟ್ಟಿರುವರು.

೯೦. ಎಲೈ ಬ್ರಾಹ್ಮಣವರ್ಯರೆ! ಪುರಾಣವೂ ವೇದಗಳಂತೆ ನಿತ್ಯವಾದುದೆಂದು ತಿಳಿಯುತ್ತೇನೆ. ಈ ಪುರಾಣದಲ್ಲಿ ಸಕಲ ವೇದಗಳೂ ನೆಲೆಸಿರುವುವು.

೯೧. ಇವನು ನನ್ನನ್ನು ಚಾಂಚಲ್ಯಗೊಳಿಸುವನೆಂದು ವೇದವು ಮೂಢನಿಗೆ ಹೆದರುವುದು. ಈ ವೇದವು ಹಿಂದೆ ಇತಿಹಾಸ ಪುರಾಣಗಳಿಂದ ಸ್ಥಿರಗೊಳಿಸಲ್ಪಟ್ಟಿದೆ.

ಯನ್ನ ದೃಷ್ಟಂ ಹಿ ವೇದೇಷು ನ ದೃಷ್ಟಂ ಸ್ಮೃತಿಷು ದ್ವಿಜಾಃ ।
ಉಭಯೋರ್ಯನ್ನ ದೃಷ್ಟಂ ಚ ತತ್ಪುರಾಣೇಷು ಗೀಯತೇ ॥ ೯೨ ॥
ಯೋ ವೇದ ಚತುರೋ ವೇದಾನ್ ಸಾಂಗೋಪನಿಷದೋ ದ್ವಿಜಃ ।
ಪುರಾಣಂ ನೈವ ಜಾನಾತಿ ನ ಚ ಸ ಸ್ಯಾದ್ವಿಚಕ್ಷಣಃ ॥ ೯೩ ॥
ಅಷ್ಟಾದಶಪುರಾಣಾನಿ ಕೃತ್ವಾ ಸತ್ಯವತೀಸುತಃ ॥
ಭಾರತಾಖ್ಯಾನಮಕರೋದ್ವೇದಾರ್ಥೈರುಪಬೃಂಹಿತಂ ॥ ೯೪ ॥
ಲಕ್ಷೇಣೈಕೇನ ತತ್ಪ್ರೋಕ್ತಂ ದ್ವಾಪರಾಂತೇ ಮಹಾತ್ಮನಾ ॥
ವಾಲ್ಮೀಕಿನಾ ಚ ಯತ್ಪ್ರೋಕ್ತಂ ರಾಮೋಪಾಖ್ಯಾನಮುತ್ತಮಂ ॥ ೯೫ ॥
ಬ್ರಹ್ಮಣಾ ವಿಹಿತಂ ಯಚ್ಚ ಶತಕೋಟಿಪ್ರವಿಸ್ತರಂ ॥
ಆಹ ತನ್ನಾರದಾಯೈವ ತೇನ ವಾಲ್ಮೀಕಯೇ ಪುನಃ ॥ ೯೬ ॥
ವಾಲ್ಮೀಕಿನಾ ಚ ಲೋಕೇ ತು ಧರ್ಮಕಾಮಾರ್ಥಸಾಧಕಂ ॥ ೯೭ ॥
ಏವಂ ಸಪಾದಾಃ ಪಂಚೈತೇ ಲಕ್ಷಾಃ ಪುಣ್ಯಾಃ ಪ್ರಕೀರ್ತಿತಾಃ ।
ಪುರಾತನಸ್ಯ ಕಲ್ಪಸ್ಯ ಪುರಾಣೇ ತು ವಿದುರ್ಬುಧಾಃ ॥ ೯೮ ॥
ಇತಿಹಾಸಪುರಾಣಾನಿ ಭಿದ್ಯಂತೇ ಕಾಲಗೌರವಾತ್ ।
ಸ್ಕಾಂದಂ ತಥಾ ಚ ಬ್ರಹ್ಮಾಂಡಂ ಪುರಾಣಂ ಲೈಂಗಮೇವ ಚ ॥ ೯೯ ॥

---

೯೨. ದ್ವಿಜರೆ! ವೇದ, ಮತ್ತು ಸ್ಮೃತಿಗಳಲ್ಲಿ ಕಾಣದಿರುವುದು ಸಹ ಪುರಾಣಗಳಲ್ಲಿ ಪ್ರತಿಪಾದಿತವಾಗಿರುವುದು.

೯೩. ವಿಪ್ರನು ವೇದಾಂಗಗಳು, ಉಪನಿಷತ್ತುಗಳು ಇವುಗಳೊಡನೆ ನಾಲ್ಕು ವೇದಗಳನ್ನರಿತವನಾದರೂ ಪುರಾಣವನ್ನು ತಿಳಿಯದೆ ಇದ್ದರೆ ಪಂಡಿತನಾಗಲಾರನು.

೯೪. ಸತ್ಯವತೀತನಯನಾದ ವ್ಯಾಸನು ಹದಿನೆಂಟು ಪುರಾಣಗಳನ್ನು ರಚಿಸಿ ವೇದಾರ್ಥಗಳಿಂದ ತುಂಬಿರುವ ಮಹಾಭಾರತವನ್ನು ನಿರ್ಮಿಸಿದನು.

೯೫–೯೭. ದ್ವಾಪರಯುಗದ ಕೊನೆಯಲ್ಲಿ ಮಹಾತ್ಮನಾದ ವ್ಯಾಸನು ರಚಿಸಿದ ಆ ಮಹಾಭಾರತವು ಒಂದುಲಕ್ಷಗ್ರಂಥವುಳ್ಳದು. ಬ್ರಹ್ಮನು ನೂರುಕೋಟಿ ಗ್ರಂಥಗಳಿಂದ ವಿಸ್ತರಗೊಂಡ ರಾಮಾಯಣವನ್ನು ರಚಿಸಿ ನಾರದನಿಗೆ ಅದನ್ನು ಹೇಳಿದನು. ನಾರದನು ವಾಲ್ಮೀಕಿಗೆ ನುಡಿದನು. ವಾಲ್ಮೀಕಿಯು ಭೂಲೋಕದಲ್ಲಿ ಧರ್ಮ, ಅರ್ಥ ಮತ್ತು ಕಾಮಗಳಿಗೆ ಸಾಧಕವಾದ ಆ ರಾಮಾಯಣವನ್ನು ಪ್ರಖ್ಯಾತಿಗೊಳಿಸಿದನು.

೯೮. ಹೀಗೆ ಹಿಂದಿನ ಕಲ್ಪದಲ್ಲಿ ಪ್ರಾಜ್ಞರು, ಪುರಾಣೇತಿಹಾಸಗಳು ಐದುಲಕ್ಷದ ಇಪ್ಪತ್ತೈದುಸಾವಿರ ಗ್ರಂಥಗಳುಳ್ಳವೆಂದು ತಿಳಿದಿದ್ದರು.

೯೯–೧೦೦. ಕಾಲಗೌರವದಿಂದ ಇತಿಹಾಸ ಪುರಾಣಗಳು ಬೇರೆಯಾಗುವುವು. ವಿಪ್ರವರ್ಯರೆ! ವಾರಾಹಕಲ್ಪದಲ್ಲಿ ಸ್ಕಾಂದ, ಬ್ರಹ್ಮಾಂಡ, ಲೈಂಗಪುರಾಣಗಳು ಬೇರೆ

ವಾರಾಹಕಲ್ಪೇ ವಿಪ್ರೇಂದ್ರಾಸ್ತೇಷಾಂ ಭೇದಃ ಪ್ರವರ್ತತೇ ।
ಅಷ್ಟಾದಶಪ್ರಕಾರೇಣ ಬ್ರಹ್ಮಾಂಡಂ ಭಿನ್ನಮೇವ ಹಿ ॥ ೧೦೦ ॥
ಅಷ್ಟಾದಶಪುರಾಣಾನಿ ತೇನ ಜಾತಾನಿ ಭೂತಲೇ ।
ಲೈಂಗಮೇಕಾದಶವಿಧಂ ಪ್ರಭಿನ್ನಂ ದ್ವಾಪರೇ ಶುಭಂ ॥ ೧೦೧ ॥
ಸ್ಕಾಂದಂ ತು ಸಪ್ತಧಾ ಭಿನ್ನಂ ವೇದವ್ಯಾಸೇನ ಧೀಮತಾ ।
ಏಕಾಽಶೀತಿಸಹಸ್ರಾಣಿ ಶತಂಚೈಕಂ ತು ಸಂಖ್ಯಯಾ ॥ ೧೦೨ ॥
ತಸ್ಯಾಽಽದ್ಯೋ ಯೋ ವಿಭಾಗಸ್ತು ಸ್ಕಂದಮಾಹಾತ್ಮ್ಯಸಂಯುತಃ ।
ಮಾಹೇಶ್ವರಃ ಸಮಾಖ್ಯಾತೋ ದ್ವಿತೀಯೋ ವೈಷ್ಣವಃ ಸ್ಮೃತಃ ॥ ೧೦೩ ॥
ತೃತೀಯೋ ಬ್ರಹ್ಮಣಃ ಪ್ರೋಕ್ತಃ ಸೃಷ್ಟಿಸಂಕ್ಷೇಪಸೂಚಕಃ ।
ಕಾಶೀಮಾಹಾತ್ಮ್ಯಸಂಯುಕ್ತಶ್ಚತುರ್ಥಃ ಪರಿಪಠ್ಯತೇ ॥ ೧೦೪ ॥
ರೇವಾಯಾಃ ಪಂಚಮೋ ಭಾಗಃ ಸೋಜ್ಜಯಿನ್ಯಾಃ ಪ್ರಕೀರ್ತಿತಃ ।
ಷಷ್ಠಃ ಕಲ್ಪೋ ನಾಗರಶ್ಚ ತೀರ್ಥಮಾಹಾತ್ಮ್ಯಸೂಚಕಃ ॥ ೧೦೫ ॥
ಸಪ್ತಮೋ ಯೋ ವಿಭಾಗೋಽಯಂ ಸ್ಮೃತಃ ಪ್ರಾಭಾಸಿಕೋ ದ್ವಿಜಾಃ ।
ಸರ್ವೇ ದ್ವಾದಶಸಾಹಸ್ರಾ ವಿಭಾಗಾಃ ಸಂಪ್ರಕೀರ್ತಿತಾಃ ॥ ೧೦೬ ॥
ಅಸ್ಮಿನ್ ಪ್ರಾಭಾಸಿಕಃ ಸರ್ವೇ ವರ್ಣ್ಯತೇ ಕ್ಷೇತ್ರವಿಸ್ತರಃ ।
ತೀರ್ಥಾನಾಂ ಚೈವ ಮಾಹಾತ್ಮ್ಯಂ ಮಾಹಾತ್ಮ್ಯಂ ಶಂಕರಸ್ಯ ಚ ॥ ೧೦೭ ॥

ಯಾದುವು. ಬ್ರಹ್ಮಾಂಡಪುರಾಣವು ಹದಿನೆಂಟು ಬಗೆಯಾಗಿರುವುದಷ್ಟೆ.

೧೦೧. ಆ ಬ್ರಹ್ಮಾಂಡಪುರಾಣದಿಂದಲೇ ಇತರ ಹದಿನೆಂಟು ಪುರಾಣಗಳು ಉಂಟಾದುವು. ದ್ವಾಪರಯುಗದಲ್ಲಿ ಲೈಂಗಪುರಾಣವು ಹನ್ನೊಂದು ವಿಧವಾಯಿತು.

೧೦೨. ಎಂಬತ್ತೊಂದುಸಾವಿರದ ಒಂದುನೂರು ಗ್ರಂಥಗಳುಳ್ಳ ಸ್ಕಾಂದಪುರಾಣವನ್ನು ವೇದವ್ಯಾಸನು ಏಳು ವಿಧವಾಗಿ ವಿಭಾಗಿಸಿರುವನು.

೧೦೩-೧೦೬. ಅವುಗಳಲ್ಲಿ ಮೊದಲನೆಯದು ಸ್ಕಂದಮಾಹಾತ್ಮ್ಯಪ್ರಧಾನ ಮಾಹೇಶ್ವರಖಂಡವು. ಎರಡನೆಯದು ವೈಷ್ಣವಖಂಡವು. ಮೂರನೆಯದು ಸಂಕ್ಷೇಪವಾಗಿ ಸೃಷ್ಟಿಕ್ರಮವನ್ನು ಸೂಚಿಸುವ ಬ್ರಾಹ್ಮಖಂಡವು. ನಾಲ್ಕನೆಯದು ಕಾಶೀಮಾಹಾತ್ಮ್ಯವುಳ್ಳ ಕಾಶೀಖಂಡವು, ಐದನೆಯದು ಉಜ್ಜಯಿನಿಯನ್ನು ವರ್ಣಿಸುವ ರೇವಾಖಂಡವು, ಆರನೆಯದು ತೀರ್ಥಮಾಹಾತ್ಮ್ಯವನ್ನು ಬೋಧಿಸುವ ನಾಗರಖಂಡವು. ಏಳನೆಯದು ಪ್ರಭಾಸಖಂಡವು. ಈ ಎಲ್ಲಾ ಖಂಡಗಳು ಸಾಮಾನ್ಯವಾಗಿ ಹನ್ನೆರಡು ಸಾವಿರ ಗ್ರಂಥಗಳುಳ್ಳುವು.

೧೦೭-೧೦೮. ಈ ಪ್ರಭಾಸಖಂಡದಲ್ಲಿ ಸಕಲಕ್ಷೇತ್ರಗಳೂ, ತೀರ್ಥಗಳ ಮಾಹಾತ್ಮ್ಯವೂ, ಶಂಕರನವೈಭವವೂ, ಇತರ ಸುರರ ಮಾಹಾತ್ಮ್ಯವೂ ವರ್ಣಿತ

ಅನ್ಯೇಷಾಂ ಚೈವ ದೇವಾನಾಂ ಮಾಹಾತ್ಮ್ಯಂ ಚ ಪ್ರಕೀರ್ತ್ಯತೇ ।
ಇತಿ ಭೇದಃ ಪುರಾಣಾನಾಂ ಸಂಕ್ಷೇಪಾತ್ಕಥಿತೋ ದ್ವಿಜಾಃ ॥ ೧೦೮ ॥
ಇಮಮಷ್ಟಾದಶಾನಾಂ ತು ಪುರಾಣಾನಾಮನುಕ್ರಮಂ ।
ಯಃ ಪಠೇದ್ಧವ್ಯಕವ್ಯೇಷು ಸ ಯಾತಿ ಭವನಂ ಹರೇಃ ॥ ೧೦೯ ॥

ಇದಂ ಪವಿತ್ರಂ ಹಿ ಯಶೋನಿಧಾನ
ಮಿದಂ ಪಿತೄಣಾಮಪಿ ವಲ್ಲಭಂ ಚ ।
ಇದಂ ಚ ದೇವೇಷ್ವಮೃತಾಯ ನಿತ್ಯ
ಮಿದಂ ಮಹಾಪಾತಕಹೃಚ್ಚ ಪುಂಸಾಂ ॥ ೧೧೦ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಸಂಖ್ಯಾಕಾಷ್ಟಾದಶಮಹಾಪುರಾಣೋಪಪುರಾಣವರ್ಣನ
ಪೂರ್ವಕ ಪುರಾಣಪುಸ್ತಕದಾನಫಲವರ್ಣನಂ ನಾಮ
ದ್ವಿತೀಯೋಽಧ್ಯಾಯಃ

ವಾಗಿವೆ. ಎಲೈ ಬ್ರಾಹ್ಮಣರೆ! ಹೀಗೆ ಸಂಕ್ಷೇಪವಾಗಿ ಪುರಾಣಗಳ ಪ್ರಭೇದಗಳನ್ನು ಹೇಳಿರುವೆನು.

೧೦೯. ಈ ಹದಿನೆಂಟು ಪುರಾಣಗಳ ಅನುಕ್ರಮಣಿಕೆಯನ್ನು ಹವ್ಯಕವ್ಯಗಳಲ್ಲಿ (ದೇವಪಿತೃಕಾರ್ಯಗಳಲ್ಲಿ) ಪಠಿಸುವ ಮಾನವನು ವೈಕುಂಠವನ್ನು ಸೇರುವನು.

೧೧೦. ಇದು ಪವಿತ್ರಕೀರ್ತಿಗೆ ಕಾರಣವೂ, ಪಿತೃಪ್ರಿಯವೂ, ದೇವತೆಗಳಿಗೆ ಅಮೃತದಂತಿರುವುದೂ, ಮಾನವರ ಮಹಾಪಾತಕವನ್ನು ನೀಗಿಸುವುದೂ ಆಗಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸ ಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಹಾತ್ಮ್ಯದಲ್ಲಿ
ಸಸಂಖ್ಯಾಕಾಷ್ಟಾದಶ ಮಹಾ ಪುರಾಣೋಪಪುರಾಣ ವರ್ಣನ
ಪೂರ್ವಕ ಪುರಾಣಪುಸ್ತಕದಾನಫಲವರ್ಣನವೆಂಬ
ಎರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತೃತೀಯೋಽಧ್ಯಾಯಃ

ದೇವೀಪ್ರಶ್ನವರ್ಣನಂ

ಋಷಯ ಊಚುಃ :—

ಕಥಿತೋ ಭವತಾ ಸರ್ಗಃ ಪ್ರತಿಸರ್ಗಸ್ತಥೈವ ಚ ।
ವಂಶಾನುವಂಶಚರಿತಂ ಪುರಾಣಾನಾಮನುಕ್ರಮಃ ॥ ೧ ॥
ಮನ್ವಂತರಪ್ರಮಾಣಂ ಚ ಬ್ರಹ್ಮಾಂಡಸ್ಯ ಚ ವಿಸ್ತರಃ ।
ಜ್ಯೋತಿಶ್ಚಕ್ರಸ್ವರೂಪಂ ಚ ಯಥಾವದನುವರ್ಣಿತಂ ।
ಶ್ರೋತುಮಿಚ್ಛಾಮಹೇ ತ್ವತ್ತಃ ಸಾಂಪ್ರತಂ ತೀರ್ಥವಿಸ್ತರಂ ॥ ೨ ॥
ಪೃಥಿವ್ಯಾಂ ಯಾನಿ ತೀರ್ಥಾನಿ ಪಾಪಘ್ನಾನಿ ಶುಭಾನಿ ಚ ।
ತಾನಿ ಸೂತಜ ಕಾರ್ತ್ಸ್ನ್ಯೇನ ಯಥಾವದ್ವಕ್ತುಮರ್ಹಸಿ ॥ ೩ ॥

ಸೂತ ಉವಾಚ:—

ಇದಂ ಪೃಷ್ಟಂ ಪುರಾ ದೇವ್ಯಾ ಕೈಲಾಸಶಿಖರೋತ್ತಮೇ ।
ನಾನಾಧಾತುವಿಚಿತ್ರಾಂಗೇ ನಾನಾರತ್ನಸಮನ್ವಿತೇ ॥ ೪ ॥
ನಾನಾದ್ರುಮಲತಾಕೀರ್ಣೇ ನಾನಾಪುಷ್ಪೋಪಶೋಭಿತೇ ।
ಯಕ್ಷವಿದ್ಯಾಧರಾಕೀರ್ಣೇ ಹ್ಯಪ್ಸರೋಗಣಸೇವಿತೇ ॥ ೫ ॥

ಕನ್ನಡದ ಅನುವಾದ

ದೇವೀಪ್ರಶ್ನವರ್ಣನ

೧–೩. ಋಷಿಗಳು ಹೇಳುತ್ತಾರೆ.— ಸೂತ! ನೀನು ಸರ್ಗ, ಪ್ರತಿಸರ್ಗ, ವಂಶಾನುವಂಶಚರಿತ, ಪುರಾಣಗಳ ಅನುಕ್ರಮಣಿಕೆ, ಮನ್ವಂತರಗಳ ಪ್ರಮಾಣ, ಬ್ರಹ್ಮಾಂಡದ ವಿಸ್ತಾರ, ನಕ್ಷತ್ರ ಮಂಡಲದ ಸ್ವರೂಪ ಇವುಗಳನ್ನು ವರ್ಣಿಸಿರುವೆ. ಈಗ ನಿನ್ನಿಂದ ತೀರ್ಥಗಳ ಮಾಹಾತ್ಮ್ಯವನ್ನು ಕೇಳಬಯಸುವೆವು.

೩. ಭೂಮಿಯಲ್ಲಿರುವ ಪಾಪಗಳನ್ನು ಪರಿಹರಿಸುವ ಶುಭತೀರ್ಥಗಳನ್ನು ಸಮಗ್ರವಾಗಿ ಹೇಳಲರ್ಹನಾಗಿದ್ದೀಯೆ.

೪–೫. ಸೂತನು ಹೇಳುತ್ತಾನೆ:—ಹಿಂದೆ ನಾನಾಬಗೆಯಾದ ಗೈರಿಕಾದಿಧಾತುಗಳಿಂದ ವಿಚಿತ್ರವೂ, ನಾನಾ ರತ್ನಗಳಿಂದ ಕೂಡಿರುವುದೂ, ನಾನಾವಿಧ ವೃಕ್ಷಲತೆಗಳಿಂದ ವ್ಯಾಪ್ತವೂ, ಬಗೆ ಬಗೆಯ ಪುಷ್ಪಗಳಿಂದ ಪ್ರಕಾಶಿಸುವುದೂ, ಯಕ್ಷವಿದ್ಯಾಧರರಿಂದ ತುಂಬಿರುವುದೂ, ಅಪ್ಸರಸ್ತ್ರೀಯರಿಂದ ಸೇವಿಸಲ್ಪಟ್ಟದ್ದೂ ಆಗಿರುವ ಕೈಲಾಸ ಶಿಖರದಲ್ಲಿ ಪಾರ್ವತಿಯು ಈ ಪ್ರಶ್ನೆಯನ್ನು ಕೇಳಿರುವಳು.

ತತ್ರ ಬ್ರಹ್ಮಾ ಚ ವಿಷ್ಣುಶ್ಚ ಸ್ಕಂದನಂದಿಗಣೇಶ್ವರಾಃ ।
ಚಂದ್ರಾದಿತ್ಯೌ ಗ್ರಹೈಃ ಸಾರ್ಧಂ ನಕ್ಷತ್ರಧ್ರುವಮಂಡಲಂ ॥ ೬ ॥
ವಾಯುಶ್ಚ ವರುಣಶ್ಚೈವ ಕುಬೇರೋ ಧನದಸ್ತಥಾ ।
ಈಶಾನಶ್ಚಾಗ್ನಿರಿಂದ್ರಶ್ಚ ಯಮೋ ನಿರ್ಋತಿರೇವ ಚ ॥ ೭ ॥
ಸರಿತಃ ಸಾಗರಾಃ ಸರ್ವೇ ಪರ್ವತಾ ಉರಗಾಸ್ತಥಾ ।
ಬ್ರಾಹ್ಮ್ಯಾದ್ಯಾ ಮಾತರಶ್ಚೈವ ಋಷಯಶ್ಚ ತಪೋಧನಾಃ ॥ ೮ ॥
ಮೂರ್ತಿಮಂತಿ ಚ ತೀರ್ಥಾನಿ ಕ್ಷೇತ್ರಾಣ್ಯಾಯತನಾನಿ ಚ ।
ದಾನವಾಸ್ಸುರದೈತ್ಯಾಶ್ಚ ಪಿಶಾಚಾ ಭೂತರಾಕ್ಷಸಾಃ ॥ ೯ ॥
ತತ್ರ ಸಿಂಹಾಸನಂ ದಿವ್ಯಂ ಶತಯೋಜನವಿಸ್ತೃತಂ ।
ಸೂರ್ಯಕೋಟಿಸಮಪ್ರಖ್ಯಂ ಮಣಿಮೌಕ್ತಿಕಮಂಡಿತಂ ॥ ೧೦ ॥
ಪದ್ಮನೀಲೋತ್ಪಲೋಪೇತಂ ಸಿದ್ಧಕಿನ್ನರಸೇವಿತಂ ।
ಶ್ವೇತಾತಪತ್ರಕೋಟೀಭಿಃ ಪ್ರಚ್ಛಾದಿತದಿಗಂತರಂ ॥ ೧೧ ॥
ಲಕ್ಷಾಯುತಸಹಸ್ರೈಶ್ಚ ರುದ್ರಕೋಟಿಭಿರಾವೃತಂ ।
ತನ್ಮಧ್ಯೇ ಸರ್ವತೋಭದ್ರಂ ಸಿಂಹದ್ವಾರೈಃ ಸುತೋರಣೈಃ ॥ ೧೨ ॥
ಸ್ವಚ್ಛಮೌಕ್ತಿಕಸಂಕಾಶಂ ಪ್ರಾಕಾರಶಿಖರಾವೃತಂ ।
ನಂದೀಶ್ವರಮಹಾಕಾಲದ್ವಾರಪಾಲಗಣೈರ್ವೃತಂ ॥ ೧೩ ॥

೬-೯. ಆಗ ಅಲ್ಲಿ ಬ್ರಹ್ಮ, ವಿಷ್ಣು, ಸ್ಕಂದ, ನಂದಿ, ಗಣೇಶ, ಚಂದ್ರ, ಸೂರ್ಯಾದಿ ಗ್ರಹಗಳು, ನಕ್ಷತ್ರಧ್ರುವಮಂಡಲಗಳು, ವಾಯು, ವರುಣ, ಕುಬೇರ, ಈಶಾನ, ಅಗ್ನಿ, ಇಂದ್ರ, ಯಮ, ನಿರ್ಋತಿ, ನದಿಗಳು, ಸಮುದ್ರಗಳು, ಸಕಲ ಪರ್ವತಗಳು, ಉರಗಗಳು, ಬ್ರಾಹ್ಮ್ಯಾದಿಮಾತೃಗಳು, ಋಷಿಗಳು, ಶರೀರಧಾರಿಗಳಾದ ತೀರ್ಥಕ್ಷೇತ್ರಗಳು, ದೇವಾಲಯಗಳು, ದೇವದಾನವರು, ದೈತ್ಯರು, ಪಿಶಾಚಗಳು, ಭೂತಗಳು, ರಾಕ್ಷಸರು, ಇವರೆಲ್ಲರೂ ನೆರೆದಿದ್ದರು.

೧೦-೨೪. ಅಲ್ಲದೆ ನೂರು ಯೋಜನವಿಸ್ತಾರವುಳ್ಳುದೂ, ಕೋಟಿ ಸೂರ್ಯರಿಗೆ ಸಮವಾದ ಕಾಂತಿಯುಳ್ಳುದೂ, ರತ್ನ ಮುತ್ತುಗಳಿಂದ ಕೆತ್ತಲ್ಪಟ್ಟುದೂ, ಪದ್ಮ ನೀಲೋತ್ಪಲಗಳಿಂದ ಕೂಡಿರುವುದೂ, ಸಿದ್ಧ ಕಿನ್ನರರಿಂದ ಸೇವಿಸಲ್ಪಟ್ಟುದೂ, ಅನೇಕ ಕೋಟಿ ಶ್ವೇತಚ್ಛತ್ರಗಳಿಂದ ಮುಚ್ಚಲ್ಪಟ್ಟ ದಿಕ್ಕುಗಳುಳ್ಳುದೂ, ಅನೇಕ ಕೋಟಿ ರುದ್ರರಿಂದ ಸುತ್ತಲ್ಪಟ್ಟುದೂ, ಆದ ದಿವ್ಯಸಿಂಹಾಸನವು ಅಲ್ಲಿ ಕಂಗೊಳಿಸುತ್ತಿದ್ದಿತು. ಅದರ ಮಧ್ಯದಲ್ಲಿ ಮನೋಹರವಾದ ತೋರಣಗಳಿಂದ ವಿರಾಜಿಸುವ ಸಿಂಹದ್ವಾರಗಳಿಂದ ಮಂಗಳಕರವಾದುದೂ, ಶುದ್ಧಮುಕ್ತಾಫಲದಂತಿರುವುದೂ, ಪ್ರಾಕಾರ ಶಿಖರಗಳಿಂದ ಕಂಗೊಳಿಸುವುದೂ, ನಂದೀಶ್ವರ ಮಹಾಕಾಲ ಮೊದಲಾದ ದ್ವಾರಪಾಲಕರ ಸಮೂಹವುಳ್ಳುದೂ,

ಕಿಂಕಿಣೀಜಾಲಮುಖರೈಃ ಸತ್ಪತಾಕೈರಲಂಕೃತಮ್ ।
ವಿತಾನಛತ್ರಖಂಡೈಶ್ಚ ಮುಕ್ತಾದಾಮಪ್ರಲಂಬಿತೈಃ ॥ ೧೪ ॥
ಘಂಟಾಚಾಮರಶೋಭಾಢ್ಯೈ ದರ್ಪಣೈಶ್ಚೋಪಶೋಭಿತಮ್ ।
ಕಲಶೈರ್ದ್ವಾರವಿನ್ಯಸ್ತರತ್ನಪಲ್ಲವಸಂಯುತೈಃ ॥ ೧೫ ॥
ಚಿತ್ರಿತಂ ಚಿತ್ರಶಾಸ್ತ್ರಜ್ಞೈ ರತ್ನಚೂರ್ಣೈಃ ಸಮುಜ್ಜ್ವಲೈಃ ।
ಸ್ವಸ್ತಿಕೈಃ ಪತ್ರವಲ್ಯಾದ್ಯೈರ್ಲಿಂಗೋದ್ಭವಲತಾದಿಭಿಃ ॥ ೧೬ ॥
ಶತಸಿಂಹಾಸನಾಕೀರ್ಣಂ ವೇದಿಕಾಭಿಶ್ಚ ಶೋಭಿತಮ್ ।
ಆಸೀನೈ ರುದ್ರವೃಂದೈಶ್ಚ ರುದ್ರಕನ್ಯಾಕದಂಬಕೈಃ ॥ ೧೭ ॥
ಲಕ್ಷಪತ್ರದಲಾಢ್ಯೈಶ್ಚ ಶ್ವೇತಪದ್ಮೈಶ್ಚ ಭೂಷಿತಮ್ ।
ಅಪ್ಸರೋಭಿಃ ಸಮಾಕೀರ್ಣಂ ಪುಷ್ಪಪ್ರಕರವಿಸ್ತೃತಮ್ ॥ ೧೮ ॥
ಧೂಪಿತಂ ಧೂಪವರ್ತೀಭಿಃ ಕುಂಕುಮೋದಕಸೇಚಿತಮ್ ।
ವಂಶವೀಣಾಮೃದಂಗೈಶ್ಚ ಗೋಮುಖೈರ್ಮುಖವಾದನೈಃ ॥ ೧೯ ॥
ಶಂಖಭೇರೀನಿನಾದೇನ ದುಂದುಭಿಧ್ವನಿತೇನ ಚ ।
ಗರ್ಜದ್ಭಿರ್ಗಣವೃಂದೈಶ್ಚ ಮೇಘಸ್ತನಿತನಿಃಸ್ವನೈಃ ॥ ೨೦ ॥
ಗಣಾನಾಂ ಸ್ತೋತ್ರಶಬ್ದೇನ ಸಾಮವೇದರವೇಣ ಚ ।
ಪ್ರೇಕ್ಷಣೀಯೈರ್ಮಹಾನಾದೈರ್ಗೇಯಹುಂಕಾರಶೋಭಿತಮ್ ॥ ೨೧ ॥
ವೃಷನರ್ದಿತಶಬ್ದೇನ ಗಜವಾಜಿರವೇಣ ಚ ।
ಕಾಂಚೀನೂಪುರಶಬ್ದೇನ ಸಮಾಕೀರ್ಣದಿಗಂತರಮ್ ॥ ೨೨ ॥

ಕಿರುಘಂಟೆಗಳ ಸಮೂಹಗಳಿಂದ ಶಬ್ದಮಾಡುವ ಧ್ವಜಗಳಿಂದ ಅಲಂಕೃತವಾದುದೂ, ಮೇಲ್ಗಟ್ಟು, ಮುತ್ತಿನಸರಗಳು, ಘಂಟೆಗಳು, ಚಾಮರಗಳು ಕನ್ನಡಿಗಳು ಇವುಗಳಿಂದ ವಿರಾಜಿಸುವುದೂ, ಬಾಗಿಲನಲ್ಲಿಟ್ಟ ರತ್ನದ ತಳಿರುಗಳುಳ್ಳ ಕಲಶಗಳಿಂದ ಮಂಡಿತ ವಾದುದೂ, ಚಿತ್ರಶಾಸ್ತ್ರವನ್ನರಿತವರು ಉಜ್ಜ್ವಲವಾದ ರತ್ನಗಳ ಪುಡಿಗಳಿಂದ ರಚಿಸಿದ ಸ್ವಸ್ತಿಕ, ಪತ್ರ, ಲತೆ ಮೊದಲಾದವುಗಳಿಂದ ಚಿತ್ರಿತವಾದುದೂ, ನೂರಾರು ಸಿಂಹಾಸನ ಗಳುಳ್ಳುದೂ, ಜಗಲಿಗಳಿಂದ ರಾರಾಜಿಸುವುದೂ,ಕುಳಿತಿರುವ ರುದ್ರರಗುಂಪು, ರುದ್ರ ಕನ್ಯೆ ಯರ ಸಮೂಹ, ಲಕ್ಷದಳಗಳುಳ್ಳ ಶ್ವೇತಕಮಲ ಇವುಗಳಿಂದ ಮಂಡಿತವಾದುದೂ, ಅಪ್ಸ ರೆಯರಿಂದವ್ಯಾಪ್ತವಾದುದೂ, ಹೂವುಗಳಿಂದ ತುಂಬಿರುವುದೂ ಧೂಪದ ಬತ್ತಿಗಳಿಂದ ಸುಗಂಧವಾದುದೂ, ಕುಂಕುಮಜಲದಿಂದ ನೆನೆಯಿಸಲ್ಪಟ್ಟುದೂ, ಕೊಳಲು, ವೀಣೆ, ಮದ್ದಲೆ, ಗೋಮುಖ ವಾದ್ಯಗಳಿಂದಲೂ, ಶಂಖ, ನಗಾರಿ ಶಬ್ದಗಳಿಂದಲೂ, ದುಂದು ಭಿಯ ಧ್ವನಿಯಿಂದಲೂ, ಗುಡುಗಿನಂತೆ ಧ್ವನಿಮಾಡುವ ಗಣಗಳ ಗುಂಪಿನಿಂದಲೂ, ಗಣಗಳ ಸ್ತೋತ್ರಶಬ್ದದಿಂದಲೂ, ಸಾಮವೇದದ ಧ್ವನಿಯಿಂದಲೂ, ಗಾನ ಹುಂಕಾರ ಧ್ವನಿಯಿಂದಲೂ, ವೃಷಭ, ಆನೆ, ಕುದುರೆ, ಡಾಬು, ನೂಪುರಗಳ ಶಬ್ದದಿಂದಲೂ

ಸರ್ವಸಂಪತ್ಕರಂ ಶ್ರೀಮಚ್ಛಂಕರಸ್ಯೈವ ಮಂದಿರಂ ।
ವಂಶವೀಣಾಮೃದಂಗೈಶ್ಚ ನಾದಿತಂ ತತ್ರ ತತ್ರ ಹ ॥
ಋಗ್ವೇದೋ ಮೂರ್ತಿಮಾಂಶ್ಚೈವ ಶಕ್ರನೀಲಸಮದ್ಯುತಿಃ ॥ ೨೩ ॥
ದಿವ್ಯಗಂಧಾನುಲಿಪ್ತಾಂಗೋ ದಿವ್ಯಾಭರಣಭೂಷಿತಃ ।
ಸಂಸ್ಥಿತಃ ಪೂರ್ವತಸ್ತಸ್ಯ ದೀಪ್ಯಮಾನಃ ಸ್ವತೇಜಸಾ ॥ ೨೪ ॥
ಉತ್ತರೇಣ ಯಜುರ್ವೇದಃ ಶುದ್ಧಸ್ಫಟಿಕಸನ್ನಿಭಃ ।
ದಿವ್ಯಕುಂಡಲಧಾರೀ ಚ ಮಹಾಕಾಯೋ ಮಹಾಭುಜಃ ॥ ೨೫ ॥
ಸ್ಥಿತಃ ಪಶ್ಚಿಮದಿಗ್ಭಾಗೇ ಸಾಮವೇದಃ ಸನಾತನಃ ।
ರಕ್ತಾಂಬರಧರಃ ಶ್ರೀಮಾನ್‌ಪದ್ಮರಾಗಸಮಪ್ರಭಃ ॥ ೨೬ ॥
ಸ್ರಗ್ದಾಮಧಾರೀ ಚಿತ್ರಶ್ಚ ಗೀತಭೂಷಣಭೂಷಿತಃ ।
ಅಥರ್ವಾಽಂಜನವಚ್ಛ್ಯಾಮಃ ಸ್ಥಿತೋ ದಕ್ಷಿಣತಸ್ತಥಾ ॥ ೨೭ ॥
ಪಿಂಗಾಕ್ಷೋ ಲೋಹಿತಗ್ರೀವೋ ಹರಿಕೇಶೋ ಮಹಾತನುಃ ।
ಇತಿಹಾಸಷಡಂಗಾನಿ ಪುರಾಣಾನ್ಯಖಿಲಾನಿ ಚ ॥ ೨೮ ॥
ವೇದೋಪನಿಷದಶ್ಛಂದೋ ಮೀಮಾಂಸಾರಣ್ಯಕಂ ತಥಾ ।
ಸ್ವಾಹಾಕಾರವಷಟ್ಕಾರೌ ರಹಸ್ಯಾನಿ ತಥೈವ ಚ ॥ ೨೯ ॥

ತುಂಬಿದ ದಿಗಂತಗಳುಳ್ಳದೂ, ಸಕಲಸಂಪತ್ತನ್ನುಂಟುಮಾಡುವುದೂ ಆದ ಶ್ರೀಮಹೇಶ್ವರನ ಆಲಯವಿರುವುದು. ಆ ಮಹೇಶ್ವರಾಲಯದ ಪೂರ್ವದಿಕ್ಕಿನಲ್ಲಿ ಋಗ್ವೇದವು ಶರೀರವನ್ನು ತಾಳಿ ಇಂದ್ರನೀಲಮಣಿಯಂತೆ ಕಾಂತಿಯುಳ್ಳದೂ, ದಿವ್ಯಗಂಧಲಿಪ್ತಾಂಗವುಳ್ಳದೂ, ದಿವ್ಯಾಭರಣಗಳಿಂದ ಅಲಂಕಾರಗೊಂಡುದೂ ಆಗಿ ತನ್ನ ತೇಜಸ್ಸಿನಿಂದ ಕಂಗೊಳಿಸುತ್ತಿರುವುದು.

೨೫. ಉತ್ತರ ದಿಕ್ಕಿನಲ್ಲಿ ಯಜುರ್ವೇದವು ದೊಡ್ಡ ದೇಹವುಳ್ಳದೂ, ನಿರ್ಮಲವಾದ ಸ್ಫಟಿಕಮಣಿಯಂತಿರುವುದೂ, ದಿವ್ಯ ಕುಂಡಲವನ್ನು ಧರಿಸಿರುವುದೂ, ಉದ್ದವಾದ ತೋಳುಗಳುಳ್ಳದೂ ಆಗಿ ವಿರಾಜಿಸುತ್ತಿರುವುದು.

೨೬–೨೯. ಪಶ್ಚಿಮ ದಿಕ್ಕಿನಲ್ಲಿ ಅನಾದಿಯಾದ ಸಾಮವೇದವು ಕೆಂಪುಬಟ್ಟೆಯನ್ನುಟ್ಟು, ಪದ್ಮರಾಗಮಣಿಯಂತೆ ಕಾಂತಿಯುಳ್ಳದಾಗಿ, ಹೂವಿನ ಮಾಲೆಯನ್ನು ಧರಿಸಿ, ಗಾನದಿಂದ ಮನೋಹರವಾಗಿ ನೆಲಸಿರುವುದು. ದಕ್ಷಿಣ ದಿಕ್ಕಿನಲ್ಲಿ ಕಾಡಿಗೆಯಂತೆ ಕಪ್ಪಗಿರುವ ಅಥರ್ವಣವೇದವು ಹಳದಿಯ ಕಣ್ಣುಳ್ಳದೂ, ಕೆಂಪು ಕುತ್ತಿಗೆಯುಳ್ಳದೂ, ಹಸುರು ಕೂದಲುಳ್ಳದೂ, ದೊಡ್ಡದೇಹವುಳ್ಳದೂ ಆಗಿ ಬೆಳಗುತ್ತಿರುವುದು. ಹೀಗೆಯೇ ಇತಿಹಾಸಗಳೂ ವೇದಗಳ ಆರು ಅಂಗಗಳೂ, ಸಕಲ ಪುರಾಣಗಳೂ, ವೇದ, ಉಪನಿಷತ್, ಛಂದಸ್ಸುಗಳೂ, ಮೀಮಾಂಸಾ, ಆರಣ್ಯಕಗಳೂ, ಸ್ವಾಹಾಕಾರ ವಷಟ್ಕಾರಗಳೂ, ಇವುಗಳ ರಹಸ್ಯಗಳೂ ನೆಲೆಸಿರುವುವು.

ಏತೈಃ ಸಮನ್ವಿತೈಶ್ಚೈವ ತತ್ರ ಬ್ರಹ್ಮಾ ಸ್ವಯಂ ಸ್ಥಿತಃ ।
ಶಕ್ತಿರೂಪಧರೈರ್ಮಂತ್ರೈರ್ಯೋಗೈಶ್ವರ್ಯಸಮನ್ವಿತೈಃ ॥ ೩೦ ॥
ಸಹಸ್ರಪತ್ರಕಮಲೈರಂಕಿತೈಃ ಸುರಪೂಜಿತೈಃ ।
ಪೂಜಿತೈರ್ಗಣರುದ್ರೈಶ್ಚ ಬ್ರಹ್ಮವಿಷ್ಣ್ವಿಂದ್ರವಂದಿತೈಃ ॥ ೩೧ ॥
ಚಾಮರಾಕ್ಷೇಪವ್ಯಜನೈರ್ವೀಜಿತೈಶ್ಚ ಸಮಂತತಃ ।
ಶೋಭಿತಶ್ಚ ಸದಾ ಶ್ರೀಮಾಂಶ್ಚಂದ್ರಕೋಟಿಸಮಪ್ರಭಃ ॥ ೩೨ ॥
ಜ್ಞಾನಾಮೃತಸುತೃಪ್ತಾತ್ಮಾ ಯೋಗೈಶ್ವರ್ಯಪ್ರಸಾದಕಃ ।
ಯೋಗೀಂದ್ರಮಾನಸಾಂಭೋಜರಾಜಹಂಸೋ ದ್ವಿಜೋತ್ತಮಃ ॥ ೩೩ ॥
ಅಜ್ಞಾನತಿಮಿರಧ್ವಂಸೀ ಷಟ್ತ್ರಿಂಶತ್ತತ್ತ್ವಭೂಷಣಃ ।
ಸರ್ವಸೌಖ್ಯಪ್ರದಾತಾ ಚ ತತ್ರಾಸ್ತೇ ಚಂದ್ರಶೇಖರಃ ॥ ೩೪ ॥
ತಸ್ಯೋತ್ಸಂಗಗತಾ ದೇವೀ ತಪ್ತಕಾಂಚನಸಪ್ರಭಾ ।
ಪೂಜಿತಾ ಯೋಗಿನೀವೃಂದೈಃ ಸಾಧಕೈಃ ಸುರಕಿನ್ನರೈಃ ॥ ೩೫ ॥
ಸರ್ವಲಕ್ಷಣಸಂಪೂರ್ಣಾ ಸರ್ವಾಭರಣಭೂಷಿತಾ ।
ಯೋಗಸಿದ್ಧಿಪ್ರದಾ ನಿತ್ಯಂ ಮೋಕ್ಷಾಭ್ಯುದಯದಾಯಿನೀ ॥ ೩೬ ॥
ಸೌಭಾಗ್ಯಕದಲೀಕಂದಮೂಲಬೀಜಂ ಚ ಪಾರ್ವತೀ ।

೩೦–೩೪. ಇವುಗಳೊಡನೆ ಆ ಪ್ರದೇಶದಲ್ಲಿ ಬ್ರಹ್ಮದೇವನೂ ಸಾಕ್ಷಾತ್ತಾಗಿ ವಿರಾಜಿಸುತ್ತಿರುವನು. ಶಕ್ತಿರೂಪಗಳನ್ನು ಧರಿಸಿ ಯೋಗಸಂಪತ್ತಿನಿಂದ ಸಮನ್ವಿತಗಳಾಗಿ, ಸಹಸ್ರದಳ ಕಮಲಗಳಿಂದ ಶೋಭಿಸುತ್ತ, ದೇವತಾ ಸಮೂಹಗಳಿಂದಲೂ, ಶಿವರುದ್ರಗಣಗಳಿಂದಲೂ, ಬ್ರಹ್ಮಾ ವಿಷ್ಣು ಮಹೇಂದ್ರರಿಂದಲೂ, ನಮಸ್ಕೃತಗಳಾಗಿ ಚಾಮರ ವ್ಯಜನಗಳಿಂದ ಸುತ್ತಲೂ ಬೀಸಲ್ಪಡುತ್ತಿರುವ ಮಂತ್ರಾಭಿಮಾನಿ ದೇವತೆಗಳಿಂದ ಸತತವೂ ಕಂಗೊಳಿಸುತ್ತಿರುವವನೂ ಭಕ್ತರಿಗೆ ಯೋಗ ಸಂಪತ್ತನ್ನು ಅನುಗ್ರಹಿಸುವವನೂ, ಯೋಗೀಂದ್ರರ ಹೃದಯ ಕಮಲಗಳಿಗೆ ರಾಜಹಂಸಸ್ವರೂಪನೂ ಬ್ರಾಹ್ಮಣೋತ್ತಮನೂ, ಅಜ್ಞಾನಾಂಧಕಾರವನ್ನು ನಾಶಗೊಳಿಸುವವನೂ, ಮೂವತ್ತಾರು ತತ್ತ್ವಗಳಿಂದಲಂಕೃತನೂ, ಸಕಲಸೌಖ್ಯಗಳನ್ನೂ ಅನುಗ್ರಹಿಸುವವನೂ ಕೋಟಿ ಚಂದ್ರರಿಗೆ ಸಮವಾದ ಕಾಂತಿಯುಳ್ಳವನೂ ಆದ ಚಂದ್ರಮೌಳೀಶ್ವರನು ಅಲ್ಲಿ ನೆಲೆಸಿರುವನು.

೩೫–೩೮. ಆ ಮಹೇಶ್ವರನ ತೊಡೆಯಲ್ಲಿ ಕುಳಿತಿರುವವಳೂ, ಸುವರ್ಣದಂತೆ ಕಾಂತಿಯುಳ್ಳವಳೂ, ಯೋಗಿನಿಯರಿಂದಲೂ, ಯೋಗಿಗಳಿಂದಲೂ, ದೇವಕನ್ನರರಿಂದಲೂ ಪೂಜಿಸಲ್ಪಟ್ಟವಳೂ, ಸಮಸ್ತ ಲಕ್ಷಣಗಳಿಂದ ತುಂಬಿರುವವಳೂ ಸಕಲ ಭೂಷಣಭೂಷಿತಳೂ ಯಾವಾಗಲೂ ಯೋಗಸಿದ್ಧಿಯನ್ನೂ, ಮೋಕ್ಷವನ್ನೂ ಕೊಡುವವಳೂ, ಸೌಭಾಗ್ಯವೆಂಬ ಬಾಳೆಯ ಗಡ್ಡೆಗೆ ಬೀಜದಂತಿರುವ

ದೇವಸ್ಯ ಮುಖಮಾಲೋಕ್ಯ ವಿಸ್ಮಿತಾ ಚಾರುಲೋಚನಾ ॥ ೩೭ ॥
ಆನಂದಭಾವಂ ಸಂಜ್ಞಾಯ ಆನಂದಾಸ್ರಾವಿಲೇಕ್ಷಣಂ ।
ಉವಾಚ ದೇವೀ ಮಧುರಂ ಕೃತಾಂಜಲಿಪುಟಾ ಸತೀ ॥ ೩೮ ॥
ದೇವ್ಯುವಾಚ :—
ಜನ್ಮಕೋಟಿಸಹಸ್ರಾಣಿ ಜನ್ಮಕೋಟಿಶತಾನಿ ಚ ।
ಶೋಧಿತಸ್ತ್ವಂ ಜಗನ್ನಾಥ ಮಯಾ ಪ್ರಾಣನಚಿಂತಯಾ ॥ ೩೯ ॥
ಅರ್ಧಾಂಗಸಂಸ್ಥಯಾ ಹ್ಯಪಿ ತ್ವದ್ವಕ್ತ್ರಧ್ಯಾನಕಾಮ್ಯಯಾ ।
ತಥಾಪಿ ತೇ ಜಗನ್ನಾಥ ನಾಂತೋ ಲಬ್ಧೋ ಮಹೇಶ್ವರ ॥ ೪೦ ॥
ಅನಂತರೂಪಿಣೇ ತುಭ್ಯಂ ದೇವದೇವ ನಮೋಽಸ್ತು ತೇ ।
ನಮೋ ವೇದರಹಸ್ಯಾಯ ನಮೋ ವೇದೈಃ ಸ್ತುತಾಯ ಚ ॥ ೪೧ ॥
ಶ್ಮಶಾನರತಿನಿತ್ಯಾಯ ನಮೋ ಗಗನಚಾರಿಣೇ ।
ಜ್ಯೇಷ್ಠಸಾಮರಹಸ್ಯಾಯ ಶತರುದ್ರಪ್ರಿಯಾಯ ಚ ॥ ೪೨ ॥
ನಮೋ ವೃಷಕೃತಾಂಕಾಯ ಯಜುರ್ವೇದಧರಾಯ ಚ ।
ಬ್ರಹ್ಮಾಂಡಕೋಟಿಸಂಲಗ್ನಮಾಲಿನೇ ಗಗನಾತ್ಮನೇ ॥ ೪೩ ॥

ವಳೂ ಮನೋಹರವಾದ ಲೋಚನಗಳುಳ್ಳವಳೂ ಆದ ಪಾರ್ವತಿಯು ಆನಂದಬಾಷ್ಪದಿಂದ ತುಂಬಿರುವ ಪತಿಯ ಮುಖವನ್ನೀಕ್ಷಿಸಿ ಅವನ ಆನಂದಭಾವವನ್ನು ತಿಳಿದು ಹಸನ್ಮುಖಳಾಗಿ ಕೈ ಮುಗಿದುಕೊಂಡು ಇಂಪಾಗಿ ಇಂತೆಂದಳು.

೩೯–೪೦. ದೇವಿಯು ಹೇಳುತ್ತಾಳೆ:—ಜಗದೊಡೆಯನಾದ ಓ ಮಹೇಶ್ವರ! ನಾನು ನಿನ್ನ ಅರ್ಧಾಂಗಿಯಾಗಿದ್ದರೂ ನಿನ್ನ ವದನಧ್ಯಾನದ ಬಯಕೆಯಿಂದಲೂ, ಬದುಕುವಚಿಂತೆಯಿಂದಲೂ ಅನೇಕ ಕೋಟಿ ಜನ್ಮಗಳಕಾಲ ನಿನ್ನನ್ನು ಪರಿಶೋಧಿಸಿದೆನು. ಆದರೂ ಇನ್ನೂ ಕೊನೆಗಾಣಲಿಲ್ಲ.

೪೧. ಎಲೈ ಅನಂತ ರೂಪಿಯಾದ ಶಂಕರನೆ! ನಿನಗೆ ನಮಸ್ಕಾರವು. ವೇದದ ರಹಸ್ಯ ಸ್ವರೂಪನೂ, ವೇದಗಳಿಂದ ಸ್ತೋತ್ರಮಾಡಲ್ಪಟ್ಟವನೂ ಆದ ಓ ಮಹೇಶ್ವರ! ನಿನಗೆ ನಮಸ್ಕಾರವು.

೪೨. ಯಾವಾಗಲೂ ಶ್ಮಶಾನದಲ್ಲಿ ಪ್ರೀತಿಯುಳ್ಳವನೂ, ಆಕಾಶದಲ್ಲಿ ಸಂಚರಿಸುವವನೂ, ಜ್ಯೇಷ್ಠಸಾಮದ ರಹಸ್ಯಸ್ವರೂಪನೂ, ಶತರುದ್ರಮಂತ್ರಗಳಲ್ಲಿ ಪ್ರೀತಿಯುಳ್ಳವನೂ ಆದ ಎಲೈ ಶಂಕರ! ನಿನಗೆ ನಮಸ್ಕಾರವು.

೪೩. ವೃಷಭಧ್ವಜನೂ, ಯಜುರ್ವೇದಧಾರಿಯೂ, ಅನೇಕ ಕೋಟಿ ಬ್ರಹ್ಮಾಂಡಗಳ ತುದಿಗಳುಳ್ಳವನೂ, ಆಕಾಶಸ್ವರೂಪನೂ ಆದ ಶಂಕರ! ನಿನಗೆ ನಮಸ್ಕಾರವು.

ಮಣಿಚಿತ್ರಿತಕಂಠಾಯ ನಮಃ ಸರ್ವಾರ್ಥಸಿದ್ಧಯೇ ।
ನಮೋ ವೇದಸ್ವರೂಪಾಯ ದ್ವಿಜಸಿದ್ಧಿಪ್ರಿಯಾಯ ಚ ॥ ೪೪ ॥
ಪುಂಸ್ತ್ರೀವಿಕಾರರೂಪಾಯ ನಮಶ್ಚಂದ್ರಾರ್ಧಧಾರಿಣೇ ।
ನಮೋಽಗ್ನಯೇ ಸಹೋಮಾಯ ಆದಿತ್ಯವರುಣಾಯ ಚ ॥ ೪೫ ॥
ಪೃಥಿವ್ಯೈ ಚಾಂತರಿಕ್ಷಾಯ ವಾಯವೇ ದೀಕ್ಷಿತಾಯ ಚ ।
ಸಂಯೋಗಾಯ ವಿಯೋಗಾಯ ಧಾತ್ರೇ ಕರ್ತ್ರೇಽಪಹಾರಿಣೇ ॥ ೪೬ ॥
ಪ್ರದೀಪ್ತಶೂಲಹಸ್ತಾಯ ಬ್ರಹ್ಮದಂಡಧರಾಯ ಚ ।
ನಮಃ ಪತೀನಾಂ ಪತಯೇ ಮಹತಾಂ ಪತಯೇ ನಮಃ ॥ ೪೭ ॥
ನಮಃ ಕಾಲಾಗ್ನಿರುದ್ರಾಯ ಸಪ್ತಲೋಕನಿವಾಸಿನೇ ।
ತ್ವಂ ಗತಿಃ ಸರ್ವಭೂತಾನಾಂ ಭೂತಾನಾಂ ಪತಯೇ ನಮಃ ॥ ೪೮ ॥
ನಮಸ್ತೇ ಭಗವನ್ರುದ್ರ ನಮಸ್ತೇ ಭಗವಂಛಿವ ।
ನಮಸ್ತೇ ಪರತಃ ಶ್ರೇಷ್ಠ ನಮಸ್ತೇ ಪರತಃ ಪರ ॥ ೪೯ ॥
ಜಿಹ್ವಾಚಾಪಲ್ಯಭಾವೇನ ಖೇದಿತೋಽಸಿ ಮಯಾ ಪ್ರಭೋ ।
ತತ್ಕ್ಷಂತವ್ಯಂ ಮಹೇಶಾನ ಜ್ಞಾನದಿವ್ಯ ನಮೋಽಸ್ತು ತೇ ॥ ೫೦ ॥

---

೪೪. ರತ್ನಗಳಿಂದಲಂಕಾರಗೊಂಡ ಕುತ್ತಿಗೆಯುಳ್ಳವನೂ, ಸಕಲೇಷ್ಟಾರ್ಥ ಸಿದ್ಧಿರೂಪನೂ, ವೇದಸ್ವರೂಪನೂ, ದ್ವಿಜರ ಇಷ್ಟಸಿದ್ಧಿಯಲ್ಲಿ ಪ್ರೀತಿಯುಳ್ಳವನೂ ಆದ ಓ ಮಹೇಶ್ವರ! ನಿನಗೆ ವಂದನೆ.

೪೫. ಸ್ತ್ರೀಪುರುಷರೂಪನೂ, ಅರ್ಧಚಂದ್ರಧಾರಿಯೂ, ಉಮೆಯಿಂದ ಕೂಡಿರುವವನೂ, ಅಗ್ನಿ, ಸೂರ್ಯ, ವರುಣರೂಪನೂ ಆದ ಎಲೈ ಶಂಕರನೆ! ನಿನಗೆ ನಮಸ್ಕಾರವು.

೪೬. ಭೂಮಿ, ಆಕಾಶ, ವಾಯು, ಯಜ್ಞದೀಕ್ಷಿತ, ಸಂಯೋಗ ವಿಯೋಗಗ-ರೂಪನೂ, ಸೃಷ್ಟಿ, ಸ್ಥಿತಿ, ಲಯಕಾರಿಯೂ ಆದ ಓ ಶಂಕರ! ನಿನಗೆ ನಮಸ್ಕಾರವು.

೪೭. ಝುಳಪಿಸುವ ಶೂಲವನ್ನು ಹಿಡಿದವನೂ, ಬ್ರಹ್ಮದಂಡಧಾರಿಯೂ, ನಾಥರಿಗೂ ನಾಥನೂ, ಮಹಾತ್ಮರಿಗೆ ಒಡೆಯನೂ ಆದ ಶಂಕರನೆ! ನಿನಗೆ ನಮಸ್ಕಾರವು.

೪೮. ಪ್ರಳಯಕಾಲದ ಅಗ್ನಿಯಂತೆ ಭಯಂಕರನೂ, ಸಪ್ತಲೋಕಗಳಲ್ಲಿ ವಾಸಿಸುವವನೂ, ಪ್ರಾಣಿಗಳಿಗೆ (ಭೂತಗಳಿಗೆ) ಒಡೆಯನೂ, ಆದ ಶಂಕರ! ಸಕಲಪ್ರಾಣಿಗಳಿಗೆ ರಕ್ಷಕನು ನೀನೆ.

೪೯. ಉತ್ತಮ ವಸ್ತುಗಳಿಗಿಂತ ಉತ್ತಮನಾದ ರುದ್ರನೆ! ನಿನಗೆ ನಮಸ್ಕಾರವು.

೫೦. ದಿವ್ಯಜ್ಞಾನಿಯಾದ ಮಹೇಶ್ವರ! ನಾನು ನಿನ್ನನ್ನು ನಾಲಿಗೆಯ ಚಪಲತೆಯಿಂದ ವ್ಯಥೆಗೊಳಿಸಿರುವೆನು. ನೀನು ಅದನ್ನು ಕ್ಷಮಿಸು. ನಿನಗೆ ನಮಸ್ಕಾರವು.

ಈಶ್ವರ ಉವಾಚ :—
ಮಮೋತ್ಸಂಗಸ್ಥಿತಾ ದೇವಿ ಕಿಂ ತ್ವಂ ಸಾಸ್ರಾವಿಲೇಕ್ಷಣಾ ।
ಅದ್ಯಾಽಪಿ ಕಿಮಪೂರ್ಣಂ ತೇ ತತ್ಸರ್ವಂ ಕರವಾಣ್ಯಹಂ ॥ ೫೧ ॥
ವರಂ ಬ್ರವೀಹಿ ಭದ್ರಂ ತೇ ಸ್ತವೇನಾನೇನ ಸುವ್ರತೇ ।
ದದಾಮಿ ತೇ ನ ಸಂದೇಹಃ ಶೋಕಂ ತ್ಯಜ ಮಹೇಶ್ವರಿ ॥ ೫೨ ॥
ನಿಷ್ಕಲೇ ಸಕಲೇ ದೇವಿ ಸ್ಥೂಲೇ ಸೂಕ್ಷ್ಮೇ ಚರಾಚರೇ ।
ನ ತತ್ಪಶ್ಯಾಮಿ ದೇವೇಶಿ ಯತ್ತ್ವಯಾ ರಹಿತಂ ಭವೇತ್ ॥ ೫೩ ॥
ಅಹಂ ತೇ ಹೃದಯೇ ಗೌರಿ ತ್ವಂ ಚ ಮೇ ಹೃದಿ ಸಂಸ್ಥಿತಾ ।
ಅಹಂ ಭ್ರಾತಾ ಚ ಪುತ್ರಶ್ಚ ಬಂಧುರ್ಭರ್ತಾ ತಥೈವ ಚ ॥ ೫೪ ॥
ತ್ವಂ ತು ಮೇ ಭಗನೀ ಭಾರ್ಯಾ ದುಹಿತಾ ಬಾಂಧವೀ ಸ್ನುಷಾ ।
ಅಹಂ ಯಜ್ಞಪತಿರ್ಯಜ್ವಾ ತ್ವಂ ಚ ಶ್ರದ್ಧಾ ಸದಕ್ಷಿಣಾ ॥ ೫೫ ॥
ಓಂಕಾರೋಽಹಂ ವಷಟ್ಕಾರಃ ಸಾಮಾಽಹಮೃಗ್ಯಜುಸ್ತಥಾ ।
ಅಹಮಗ್ನಿಶ್ಚ ಹೋತಾ ಚ ಯಜಮಾನಸ್ತಥೈವ ಚ ॥ ೫೬ ॥
ಅಧ್ವರ್ಯುರಹಮುದ್ಗಾತಾ ಬ್ರಹ್ಮಾಽಹಂ ಬ್ರಹ್ಮವಿತ್ತಥಾ ।
ತ್ವಂ ತು ದೇವ್ಯರಣೀ ಚೈವ ಪತ್ನೀ ತು ಪರಿಕೀರ್ತ್ಯಸೇ ॥ ೫೭ ॥

---

೫೧. ಈಶ್ವರನು ಹೇಳುತ್ತಾನೆ:—ದೇವಿ! ನನ್ನ ತೊಡೆಯಲ್ಲಿ ಕುಳಿತಿರುವ ನೀನು ಏತಕ್ಕೆ ಕಣ್ಣೀರನ್ನು ಸುರಿಸುತ್ತಿರುವೆ? ಈಗಲೂ ಪೂರ್ಣವಾಗದಿರುವ ನಿನ್ನ ಅಭೀಷ್ಟ ವೇನು? ಅದನ್ನು ನಾನು ನೆರವೇರಿಸುವೆನು.

೫೨. ಮಹೇಶ್ವರಿ! ನಿನ್ನೀ ಸ್ತೋತ್ರದಿಂದ ಪ್ರಸನ್ನನಾಗಿರುವೆನು. ನಿನಗೆ ಮಂಗಳವಾಗಲಿ. ವರವನ್ನು ಕೇಳಿಕೊ. ನಿಶ್ಚಯವಾಗಿಯೂ ಅದನ್ನು ಕೊಡುವೆನು. ದುಃಖಿಸಬೇಡ.

೫೩. ಅಸಂಪೂರ್ಣಳೂ, ಸಂಪೂರ್ಣಳೂ ಸ್ಥೂಲಳೂ, ಸೂಕ್ಷ್ಮಳೂ, ಚರಾಚರ ಜಗತ್ತಿನ ಸ್ವರೂಪಳೂ, ಆದ ಓ ದೇವೇಶಿಯೆ! ನೀನಿಲ್ಲದಿರುವ ಸ್ಥಳವನ್ನು ನೋಡಲಿಲ್ಲ.

೫೪. ಗೌರಿ! ನಾನು ನಿನ್ನ ಹೃದಯದಲ್ಲಿರುವೆನು. ನೀನು ನನ್ನ ಹೃದಯದಲ್ಲಿ ರುವೆ. ನಾನು ನಿನಗೆ ಸಹೋದರನೂ, ಪುತ್ರನೂ, ಬಂಧುವೂ, ಪತಿಯೂ, ಆಗಿರುವೆನು.

೫೫. ನೀನು ನನಗೆ ಸಹೋದರಿಯೂ, ಪತ್ನಿಯೂ, ಮಗಳೂ, ಬಂಧುವೂ, ಸೊಸೆಯೂ ಆಗಿರುವೆ. ನಾನು ಯಜ್ಞದೊಡೆಯನೂ, ಯಜಮಾನನೂ, ಆಗಿರುವೆನು. ನೀನು ದಕ್ಷಿಣೆಯಿಂದ ಕೂಡಿದ ಶ್ರದ್ಧೆಯಾಗಿರುವೆ.

೫೬–೫೭. ನಾನು ಓಂಕಾರನೂ, ವಷಟ್ಕಾರನೂ, ಋಗ್ಯಜುಸ್ಸಾಮವೇದ ರೂಪನೂ, ಅಗ್ನಿಯೂ, ಹೋಮಮಾಡುವವನೂ, ಅಧ್ವರ್ಯವೂ, ಉದ್ಗಾತನೂ, ಬ್ರಹ್ಮನೂ, ಬ್ರಹ್ಮಜ್ಞಾನಿಯೂ, ಆಗಿರುವೆನು. ನೀನು ಅರಣಿಯೂ, ಪತ್ನಿಯೂ ಆಗಿರುವೆ.

ಸ್ವಾಹಾ ಸ್ವಧಾ ಚ ಸುಶ್ರೋಣಿ ತ್ವಯಿ ಸರ್ವಂ ಪ್ರತಿಷ್ಠಿತಂ ।
ಅಹಮಿಷ್ಟೋ ಮಹಾಯಜ್ಞಃ ಪೂರ್ವೋ ಯಜ್ಞಸ್ತ್ವಮುಚ್ಯಸೇ॥ ೫೮ ॥
ಪುರುಷೋಽಹಂ ವರಾರೋಹೇ ಪ್ರಕೃತಿಸ್ತ್ವಂ ನಿಗದ್ಯಸೇ ।
ಅಹಂ ವಿಷ್ಣುರ್ಮಹಾವೀರ್ಯಸ್ತ್ವಂ ಲಕ್ಷ್ಮೀರ್ಲೋಕಭಾವಿನೀ ॥ ೫೯ ॥
ಅಹಮಿಂದ್ರೋ ಮಹಾತೇಜಾಃ ಪ್ರಾಚೀ ತ್ವಂ ಪರಮೇಶ್ವರೀ ।
ಪ್ರಜಾಪತೀನಾಂ ರೂಪೇಣ ಸರ್ವದಾಹಂ ವ್ಯವಸ್ಥಿತಃ ॥ ೬೦ ॥
ತೇಷಾಂ ಯಾ ನಾಯಿಕಾಸ್ತಾಸ್ತ್ವಂ ರೂಪೈಸ್ತೈಸ್ತೈರವಸ್ಥಿತಾ ।
ದಿವಸೋಽಹಂ ಮಹಾದೇವಿ ರಜನೀ ತ್ವಂ ನಿಗದ್ಯಸೇ ॥ ೬೧ ॥
ನಿಮೇಷೋಽಹಂ ಮುಹೂರ್ತಶ್ಚ ತ್ವಂ ಕಲಾ ಸಿದ್ಧಿರೇವ ಚ ।
ಅಹಂ ತೇಜೋಽಧಿಕಃ ಸೂರ್ಯಸ್ತ್ವಂ ತು ಸಂಧ್ಯಾ ಪ್ರಕೀರ್ತ್ಯಸೇ ॥ ೬೨ ॥
ಅಹಂ ಬೀಜಧರಃ ಶ್ರೇಷ್ಠಸ್ತ್ವಂ ತು ಕ್ಷೇತ್ರಂ ವರಾನನೇ।
ಅಹಂ ವನಸ್ಪತಿಃ ಪ್ಲಕ್ಷಸ್ತ್ವಂ ವನಸ್ಪತಿರುಚ್ಯಸೇ ॥ ೬೩ ॥
ಶೇಷರೂಪಧರೋ ನಿತ್ಯೋ ಫಣಾಮಣಿವಿಭೂಷಿತಃ ।
ರೇವತೀ ತ್ವಂ ವಿಶಾಲಾಕ್ಷಿ ಮದವಿಭ್ರಮಲೋಚನಾ ॥ ೬೪ ॥

---

೫೮. ಸುಂದರಿಯೆ! ಸ್ವಾಹಾಸ್ವಧೆಗಳೆಲ್ಲವೂ ನಿನ್ನಲ್ಲಿರುವುವು. ನಾನು ಮಹಾ ಯಜ್ಞಸ್ವರೂಪನು. ನೀನು ಪೂರ್ವಯಜ್ಞ ಳೆನಿಸಿರುವೆ.

೫೯. ದೇವಿ! ನಾನು ಪುರುಷನು, ನೀನು ಪ್ರಕೃತಿಯು. ನಾನು ಅತಿಪರಾಕ್ರಮಶಾಲಿಯಾದ ವಿಷ್ಣುವು. ನೀನು ಲೋಕಗಳನ್ನು ಸೃಜಿಸುವ ಮಹಾಲಕ್ಷ್ಮಿಯಾಗಿರುವೆ.

೬೦. ಪರಮೇಶ್ವರಿ! ಅತಿ ತೇಜಸ್ವಿಯವಾದ ಇಂದ್ರನು ನಾನು. ನೀನು ಪೂರ್ವ ದಿಕ್ಕು. ನಾನು ಸಕಲ ಬ್ರಹ್ಮಸ್ವರೂಪನಾಗಿರುವೆನು.

೬೧. ನೀನು ಆ ಬ್ರಹ್ಮರ ಪತ್ನಿಯರಾಗಿರುವೆ. ಮಹಾದೇವಿ ! ನಾನು ದಿವಸ ರೂಪನು. ನೀನು ರಾತ್ರಿಯೆನಿಸಿರುವೆ.

೬೨. ನಿಮೇಷ ಮುಹೂರ್ತರೂಪನು. ನಾನು ನೀನು ಕಲಾಸಿದ್ಧರೂಪಳು. ನಾನು ಅಧಿಕ ತೇಜಸ್ಸುಳ್ಳ ಸೂರ್ಯನು. ನೀನು ಸಂಧ್ಯೆಯೆನ್ನಿಸಿಕೊಳ್ಳುವೆ.

೬೩. ಸೃಷ್ಟಿ ಬೀಜವನ್ನು ಧರಿಸಿರುವವನು ನಾನು. ನೀನು ಕ್ಷೇತ್ರರೂಪಳು. ನಾನು ಬಸರೀ ಮರ. ನೀನು ವನಸ್ಪತಿ.

೬೪. ನಿತ್ಯಳಾದ ಓ ದೇವಿಯೆ! ನಾನು ಹೆಡೆಗಳ ರತ್ನಗಳಿಂದ ಅಲಂಕೃತನಾದ ಮಹಾ ಶೇಷನು. ನೀನು ಮದಿರಾಕ್ಷಿಯಾದ ರೇವತಿಯು.

ಮೋಕ್ಷೋಽಹಂ ಸರ್ವದುಃಖಾನಾಂ ತ್ವಂ ತು ದೇವಿ ಪರಾ ಗತಿಃ।
ಅಪಾಂ ಪತಿರಹಂ ಭದ್ರೇ ತ್ವಂ ತು ದೇವಿ ಸರಿದ್ವರಾ ॥ ೬೫ ॥
ವಡವಾಗ್ನಿರಹಂ ಭದ್ರೇ ತ್ವಂ ತು ದೀಪ್ತಿಃ ಪ್ರಕೀರ್ತಿತಾ ।
ಪ್ರಜಾಪತಿರಹಂ ಕರ್ತಾ ತ್ವಂ ಪ್ರಜಾಪ್ರಕೃತಿಸ್ತಥಾ ॥ ೬೬ ॥
ನಾಗಾನಾಮಧಿಪಶ್ಚಾಽಹಂ ಪಾತಾಲತಲವಾಸಿನಾಂ ।
ತ್ವಂ ನಾಗೀ ನಾಗರಾಜೋಽಹಂ ಸಹಸ್ರಫಣಭೂಷಿತಃ ॥ ೬೭ ॥
ನಿಶಾಕರವರಶ್ಚಾಽಹಂ ಶ್ರೇಷ್ಠಾ ತ್ವಂ ರಜನೀಕರೀ ।
ಕಾಮೋಽಹಂ ಕಾಮದೋ ದೇವಿ ತ್ವಂ ರತಿಃ ಸ್ಮೃತಿರೇವ ಚ ॥ ೬೮ ॥
ದುರ್ವಾಸಾಶ್ಚಾಪ್ಯಹಂ ಭದ್ರೇ ತ್ವಂ ಕ್ಷಮಾ ಸಮುಚಾರಿಣೀ ।
ಲೋಭಮೋಹತಪಶ್ಚಾಽಹಂ ತ್ವಂ ಕೃಷ್ಣಾ ತಾಮಸೀ ಸ್ಮೃತಾ ॥ ೬೯ ॥
ಕಕುದ್ಮಾನ್ ವೃಷಭಶ್ಚಾಽಹಂ ಯೋಗಮಾತಾ ತಪಸ್ವಿನೀ ।
ವಾಯುರಪ್ಯಹಮವ್ಯಕ್ತಸ್ತ್ವಂ ಗತಿರ್ಮದಸೂದನೀ ॥ ೭೦ ॥
ಅಹಂ ಮೋಚಯಿತಾ ಲೋಭೇ ನಿರ್ಮಮಯ ತ್ವಂ ಯಶಸ್ವಿನಿ ।
ನಯೋಽಹಂ ಸರ್ವಕಾರ್ಯೇಷು ನೀತಿಸ್ತ್ವಂ ಕಮಲೇಕ್ಷಣಾ ॥ ೭೧ ॥

---

೬೫. ನಾನು ಸಕಲ ದುಃಖಗಳ ಮೋಕ್ಷರೂಪನು. ನೀನು ಉತ್ತಮಗತಿ ಸ್ವರೂಪಳು. ನದೀಪತಿಯಾದ ಸಮುದ್ರನು ನಾನು. ನೀನು ಉತ್ತಮ ನದಿಯು.

೬೬. ಮಂಗಳಕರಳೆ! ನಾನು ಬಡಬಾಗ್ನಿಯು. ನೀನು ಅಗ್ನಿ ಜ್ವಾಲೆಯು. ನಾನು ಜಗತ್ತನ್ನು ಸೃಜಿಸುವ ಬ್ರಹ್ಮನು. ನೀನು ಪ್ರಜೆಯೂ, ಪ್ರಕೃತಿಯೂ ಆಗಿರುವೆ.

೬೭. ನಾನು ಪಾತಾಳನಿವಾಸಿಗಳಾದ ನಾಗಗಳಿಗೆ ಒಡೆಯನಾದ ಸಾವಿರ ಹೆಡೆಗಳುಳ್ಳ ನಾಗರಾಜನು. ಆ ನಾಗರಾಜನ ಪತ್ನಿಯು ನೀನು.

೬೮. ನಾನು ಚಂದ್ರನು. ನೀನು ಬೆಳದಿಂಗಳು. ನಾನು ಕಾಮನೂ, ಕಾಮದನೂ ಆಗಿರುವೆನು. ನೀನು ರತಿಯೂ, ಸ್ಮೃತಿಯೂ ಆಗಿರುವೆ.

೬೯. ನಾನು ದುರ್ವಾಸ ಮುನಿಯು. ನೀನು ಕ್ಷಮೆಯು. ನಾನು ಲೋಭಮೋಹ ತಪೋರೂಪನು. ನೀನು ತಮೋಗುಣ ಪ್ರಚುರವಾದ ಆಶೆಯು.

೭೦. ನಾನು ಧರ್ಮಸ್ವರೂಪನಾದ ವೃಷಭನು. ನೀನು ಯೋಗಮಾತೆಯು. ವಾಯುವು. ನೀನು ಮದವನ್ನು ಕೆಡಿಸುವ ಗತಿಯು.

೭೧. ನಾನು ಆಶೆಯನ್ನು ಬಿಡಿಸುವವನು. ನೀನು ನಿರ್ಮಮೆಯು. ನಾನು ಸಕಲಕಾರ್ಯಗಳಲ್ಲಿ ನ್ಯಾಯರೂಪನು. ಕಮಲಾಕ್ಷಿಯಾದ ನೀನು ನೀತಿಯು.

ಅಹಮನ್ನಂ ಚ ಭೋಕ್ತಾ ಚ ಓಷಧೀ ತ್ವಂ ನಿಗದ್ಯಸೇ ।
ಅಹಮಗ್ನಿಶ್ಚ ಧೂಮಶ್ಚ ತ್ವಮೂಷ್ಮಾ ಜ್ವಾಲಮೇವ ಚ ॥ ೭೨ ॥
ಅಹಂ ಸಂವರ್ತಕೋ ಮೇಘಸ್ತ್ವಂ ಚ ಧಾರಾ ಹ್ಯನೇಕಶಃ ।
ಅಹಂ ಮುನೀನಾಂ ರೂಪೇಣ ತ್ವಂ ತತ್ಪತ್ನೀ ಪ್ರಕೀರ್ತಿತಾ ॥ ೭೩ ॥
ಅಹಂ ಸಂಸಾರಕರ್ತಾ ವೈ ತ್ವಂ ತು ಸೃಷ್ಟಿರ್ವರಾನನೇ ।
ಅಹಂ ಶುಕ್ರಾಸ್ಥಿರೋಮಾಣಿ ತ್ವಂ ಮಜ್ಜಾ ಬಲಮೇವ ಚ ॥ ೭೪ ॥
ಪರ್ಜನ್ಯೋಽಹಂ ಮಹಾಭಾಗೇ ತ್ವಂ ವೃಷ್ಟಿಃ ಪರಮೇಶ್ವರಿ ।
ಅಹಂ ಸಂವತ್ಸರೋ ದೇವಿ ತ್ವಮೃತುಃ ಪರಿಕೀರ್ತಿತಾ ॥ ೭೫ ॥
ಅಹಂ ಕೃತಯುಗೋ ದೇವಿ ತ್ವಂ ತು ತ್ರೇತಾ ನಿಗದ್ಯಸೇ ।
ಯುಗೋಽಹಂ ದ್ವಾಪರಃ ಶ್ರೀಮಾಂಸ್ತ್ವಂ ಕಲಿಃ ಪರಮೇಶ್ವರಿ ॥ ೭೬ ॥
ಆಕಾಶಶ್ಚಾಪ್ಯಹಂ ಭದ್ರೇ ಪೃಥಿವೀ ತ್ವಮಿಹೋಚ್ಯಸೇ ।
ಅಹಮದೃಶ್ಯಮೂರ್ತಿಶ್ಚ ದೃಶ್ಯಮೂರ್ತಿಸ್ತ್ವಮುಚ್ಯಸೇ ॥ ೭೭ ॥
ವರದೋಽಹಂ ವರಾರೋಹೇ ಮಂತ್ರಸ್ತ್ವಮಿತಿ ಚೋಚ್ಯಸೇ ।
ಅಹಂ ದ್ರಷ್ಟಾ ಚ ಶ್ರೋತಾ ಚ ತ್ವಂ ದೃಶ್ಯಾ ಶ್ರುತಿರೇವ ಜ ॥ ೭೮ ॥

---

೭೨. ಅನ್ನವೂ, ಅದನ್ನು ತಿನ್ನುವ ಭೋಕ್ತೃವೂ ನಾನು. ನೀನು ಫಲವನ್ನು ಬಿಟ್ಟ ಕೂಡಲೆ ಒಣಗುವ ಬಳ್ಳಿಯು. ಬೆಂಕಿ ಮತ್ತು ಹೊಗೆಗಳು ನಾನು. ನೀನು ಬಿಸಿ ಮತ್ತು ಉರಿಗಳು.

೭೩. ನಾನು ಸಂವರ್ತಕವೆಂಬ ಮೋಡವು. ನೀನು ಮಳೆಯವಿವಿಧ ಧಾರೆಗಳು. ನಾನು ಮುನಿಯು, ನೀನು ಮುನಿ ಪತ್ನಿಯು.

೭೪. ನಾನು ಸಂಸಾರಕರ್ತನು, ಸುಂದರಿಯೆ! ನೀನು ಸೃಷ್ಟಿರೂಪಳು. ನಾನು ಶುಕ್ರ, ಅಸ್ಥಿ, ರೋಮಗಳು. ನೀನು ಮಜ್ಜಾ ಶಕ್ತಿಗಳು.

೭೫. ಪರಮೇಶ್ವರಿ! ನಾನು ಮೋಡವು, ನೀನು ಮಳೆಯು. ನಾನು ಸಂವತ್ಸರವು. ನೀನು ಋತುವು.

೭೬. ದೇವಿ! ನಾನು ಕೃತಯುಗವು. ನೀನು ತ್ರೇತಾಯುಗವು. ನಾನು ದ್ವಾಪರ ಯುಗವು. ನೀನು ಕಲಿಯುಗವು.

೭೭. ನಾನು ಆಕಾಶವು. ನೀನು ಭೂಮಿಯು. ಅದೃಶ್ಯಶರೀರನು ನಾನು. ನೀನು ದೃಶ್ಯಶರೀರಳು.

೭೮. ಎಲೈ ಉತ್ತಮಾಂಗನೆಯೆ! ನಾನು ವರವನ್ನೀಯುವನು. ನೀನು ಮಂತ್ರ ಸ್ವರೂಪಿಣಿಯು. ನಾನು ನೋಡುವವನು ಮತ್ತು ಕೇಳುವನು. ನೀನು ದೃಶ್ಯವು ಮತ್ತು ಶ್ರುತಿಯು.

ಅಹಂ ವಕ್ತಾ ರಮಯಿತಾ ತ್ವಂ ವಾಚ್ಯಾ ಪರಮೇಶ್ವರಿ ।
ಅಹಂ ಶ್ರೋತಾ ಚ ಗಾತಾ ಚ ತ್ವಂ ಗೀತಿರ್ಗೇಯಮೇವ ಚ ॥ ೭೯ ॥
ಅಹಂ ಘ್ರಾತಾ ಚ ಗಂಧಶ್ಚ ತ್ವಂ ತು ನಿಘ್ರಾಣಮೇವ ಚ ।
ಅಹಂ ಸ್ಪರ್ಶಯಿತಾ ಕರ್ತಾ ಸ್ಪರ್ಶ್ಯಸ್ತ್ವಂ ಸೃಷ್ಟಮೇವ ಚ ॥ ೮೦ ॥
ಅಹಂ ಸರ್ವಮಿದಂ ಭೂತಂ ತ್ವಂ ತು ದೇವಿ ನ ಸಂಶಯಃ ।
ಸ್ರಷ್ಟಾಽಹಂ ತವ ದೇವೇಶಿ ತ್ವಂ ಸೃಜಸ್ಯಖಿಲಂ ಜಗತ್ ॥ ೮೧ ॥
ತ್ವಯಾ ಮಯಾ ಚ ದೇವೇಶಿ ಓತಪ್ರೋತಮಿದಂ ಜಗತ್ ।
ಏಕಧಾ ದಶಧಾ ಚೈವ ತಥಾ ಶತಸಹಸ್ರಧಾ ॥ ೮೨ ॥
ಐಶ್ವರ್ಯೇಣ ತು ಸಂಯುಕ್ತೌ ಸರ್ವಪ್ರಾಣಿಷ್ವವಸ್ಥಿತೌ ॥
ಅಹಂ ತ್ವಂ ಚ ವಿಶಾಲಾಕ್ಷಿ ಸತತಂ ಸಂಪ್ರತಿಷ್ಠಿತೌ ॥ ೮೩ ॥
ಕ್ರೀಡಾಮಿ ಕ್ರೀಡಯಾ ದೇವಿ ತ್ವಯಾ ಸಾರ್ಧಂ ವರಾನನೇ ।
ತ್ವಂ ಧೃತಿರ್ಧಾರಿಣೀ ಲಕ್ಷ್ಮೀಃ ಕಾಂತಾ ಮತ್ಪ್ರಕೃತಿರ್ಧ್ರುವಂ ॥ ೮೪ ॥
ರತಿಃ ಸ್ಮೃತಿಃ ಕಾಮಚಾರೀ ಮಮ ಚಾಂಗನಿವಾಸಿನೀ ।
ದೇವಿ ಕಿಂ ಬಹುನೋಕ್ತೇನ ಪ್ರಾಣೇಭ್ಯೋಽಪಿ ಗರೀಯಸೀ ॥ ೮೫ ॥

---

೭೯. ಪರಮೇಶ್ವರಿ! ನಾನು ಹೇಳುವವನೂ ವಿನೋದ ಪಡುವವನೂ ಆಗಿರುವೆನು. ನೀನು ವಾಚ್ಯಳು. ನಾನು ಕೇಳುವವನೂ, ಹಾಡುವವನೂ ಆಗಿದ್ದೇನೆ. ನೀನು ಗಾನವೂ, ಹಾಡೂ ಆಗಿರುವೆ.

೮೦. ಗಂಧವನ್ನು ಗ್ರಹಿಸುವವನೂ ಗಂಧವೂ ನಾನು. ನೀನು ಆ ಗಂಧವನ್ನು ಗ್ರಹಿಸುವ ಮೂಗು. ನಾನು ಮುಟ್ಟುವವನೂ, ಸೃಷ್ಟಿಮಾಡುವವನೂ ಆಗಿರುವೆನು. ನೀನು ಸ್ಪೃಶ್ಯಳೂ, ಸೃಷ್ಟಳೂ ಆಗಿರುವೆ.

೮೧. ದೇವಿ! ನಾನೂ ನೀನೂ ಈ ಎಲ್ಲ ಪ್ರಾಣಿಗಳ ಸ್ವರೂಪರು. ನಾನು ನಿನ್ನನ್ನು ಸೃಜಿಸುವವನು. ನೀನು ಸಕಲಪ್ರಪಂಚವನ್ನು ಸೃಷ್ಟಿಮಾಡುವೆ.

೮೨. ದೇವೇಶಿ! ನನ್ನಿಂದಲೂ ನಿನ್ನಿಂದಲೂ ಈ ಜಗತ್ತು ಒಂದು ವಿಧವಾಗಿಯೂ, ಹತ್ತು ವಿಧವಾಗಿಯೂ, ನೂರು ಬಗೆಯಾಗಿಯೂ ಪರಸ್ಪರ ಸಂಬದ್ಧವಾಗಿರುವುದು.

೮೩. ವಿಶಾಲಾಕ್ಷಿ! ನಾನೂ ನೀನೂ ಐಶ್ವರ್ಯದಿಂದ ಸಹಿತರಾಗಿ ಯಾವಾಗಲೂ ಸಕಲ ಪ್ರಾಣಿಗಳಲ್ಲಿ ನೆಲೆಸಿರುವೆವು.

೮೪. ಸುಂದರಿ! ನಾನು ನಿನ್ನೊಡನೆ ವಿನೋದಪಡುವೆನು. ಧೃತಿ, ಧಾರಿಣೀ, ಲಕ್ಷ್ಮೀರೂಪಳಾದ ನೀನು, ನನಗೆ ಪ್ರಿಯಳಾದ ಪ್ರಕೃತಿಯು.

೮೫. ರತಿಸ್ಮೃತಿರೂಪಳಾದ ನೀನು ನನ್ನ ಅರ್ಧಾಂಗಿಯಾಗಿ ಕಾಮಚಾರಿಣಿಯಾಗಿರುವೆ, ದೇವಿ! ಹೆಚ್ಚು ಹೇಳಿ ಪ್ರಯೋಜನವೇನು? ನೀನು ನನ್ನ ಪ್ರಾಣಕ್ಕಿಂತಲೂ ಶ್ರೇಷ್ಠಳು.

ವರಂ ವರಯ ದೇವೇಶಿ ಯತ್ಕಿಂಚಿನ್ಮನಸಿ ಸ್ಥಿತಂ ।
ತತ್ತೇ ದದಾಮಿ ತುಷ್ಟೋಽಹಂ ಯದ್ಯಪಿ ಸ್ಯಾತ್ಸುದುರ್ಲಭಂ ॥ ೮೬ ॥

ದೇವ್ಯುವಾಚ:—

ಧನ್ಯಾಽಹಂ ಕೃತಪುಣ್ಯಾಽಹಂ ತಪಃ ಸುಚರಿತಂ ಮಯಾ ।
ಯತ್ತ್ವಯಾಽಹಂ ಜಗನ್ನಾಥ ಹರ್ಷದೃಷ್ಟ್ಯಾಽವಲೋಕಿತಾ ॥ ೮೭ ॥
ಯದಿ ತುಷ್ಟೋಽಸಿ ಮೇ ದೇವ ವರಂ ದಾತುಂ ಮನೋಚ್ಛಸಿ ।
ತನ್ಮೇ ಕಥಯ ದೇವೇಶ ಸಾಂಪ್ರತಂ ತೀರ್ಥವಿಸ್ತರಂ ॥ ೮೮ ॥
ಪೃಥಿವ್ಯಾಂ ಯಾನಿ ತೀರ್ಥಾನಿ ಪಾಪಘ್ನಾನಿ ಶಿವಾನಿ ಚ ।
ತಾನಿ ದೇವೇಶ ಕಾರ್ತ್ಸ್ನ್ಯೇನ ಯಥಾವದ್ವಕ್ತುಮರ್ಹಸಿ ॥ ೮೯ ॥

ಈಶ್ವರ ಉವಾಚ:—

ಶೃಣು ದೇವಿ ಪ್ರವಕ್ಷ್ಯಾಮಿ ತೀರ್ಥಮಾಹಾತ್ಮ್ಯಮುತ್ತಮಂ ।
ಸರ್ವಪಾಪಹರಂ ನೃಣಾಂ ಪುಣ್ಯಂ ದೇವರ್ಷಿಸತ್ಕೃತಂ ॥ ೯೦ ॥
ತೀರ್ಥಾನಾಂ ದರ್ಶನಂ ಶ್ರೇಷ್ಠಂ ಸ್ನಾನಂ ಚೈವ ಸುರೇಶ್ವರಿ ।
ಶ್ರವಣಂ ಚ ಪ್ರಶಂಸಂತಿ ಸದೈವ ಋಷಿಸತ್ತಮಾಃ ॥ ೯೧ ॥

---

೮೬. ದೇವೇಶಿ! ನಿನ್ನ ಮನಸ್ಸಿನಲ್ಲಿರುವ ಅಭೀಷ್ಟವನ್ನು ಕೇಳಿಕೊ. ಅದು ಅಸಾಧ್ಯವಾದರೂ ಸಂತುಷ್ಟನಾದ ನಾನು ಅದನ್ನು ನಿನಗೆ ಕೊಡುವೆನು.

೮೭. ದೇವಿಯು ಹೇಳುತ್ತಾಳೆ;—ಜಗನ್ನಾಥ! ನೀನು ಪ್ರಸನ್ನ ದೃಷ್ಟಿಯಿಂದ ನನ್ನನ್ನು ನೋಡಿದ್ದರಿಂದ ನಾನು ಪುಣ್ಯವಂತಳೂ ಪುಣ್ಯವನ್ನಾಚರಿಸಿದವಳೂ ತಪಸ್ಸನ್ನು ಮಾಡಿದವಳೂ ಆದೆನು.

೮೮. ನಾಥ! ನೀನು ಸಂತುಷ್ಟನಾಗಿ ವರವನ್ನುಕೊಡಬಯಸುವುದಾದರೆ ಈಗ ನನಗೆ ತೀರ್ಥವೃತ್ತಾಂತವನ್ನು ಹೇಳುವವನಾಗು.

೮೯. ಈಗ ಭೂಮಿಯಲ್ಲಿರುವ ಪಾಪಪರಿಹಾರಕವೂ, ಮಂಗಳಕರವೂ ಆದ ತೀರ್ಥಗಳನ್ನೆಲ್ಲ ನೀನು ನನಗೆ ಹೇಳಬೇಕು.

೯೦. ಈಶ್ವರನು ಹೇಳುತ್ತಾನೆ:—ದೇವಿ! ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವುದೂ, ಪುಣ್ಯಕರವೂ, ದೇವರ್ಷಿಗಳಿಂದ ಸತ್ಕರಿಸಲ್ಪಟ್ಟುದೂ ಆದ ತೀರ್ಥಗಳ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೯೧. ತೀರ್ಥಗಳ ಶ್ರೇಷ್ಠವಾದ ದರ್ಶನವನ್ನೂ, ಸ್ನಾನವನ್ನೂ, ಶ್ರವಣವನ್ನೂ ಮುನಿವರ್ಯರು ಹೊಗಳುತ್ತಾರೆ.

ಪೃಥಿವ್ಯಾಂ ನೈಮಿಷಂ ತೀರ್ಥಮಂತರಿಕ್ಷೇ ಚ ಪುಷ್ಕರಂ ।
ಕೇದಾರಂ ಚ ಪ್ರಯಾಗಂ ಚ ವಿಪಾಶಾ ಚೋರ್ಮಿಲಾ ತಥಾ ॥ ೯೨ ॥
ಕರ್ಣವೇಣಾ ಮಹಾದೇವಿ ಚಂದ್ರಭಾಗಾ ಸರಸ್ವತೀ ।
ಗಂಗಾಸಾಗರಸಂಭೇದಸ್ತಥಾ ವಾರಾಣಸೀ ಶುಭಾ ॥ ೯೩ ॥
ಅರ್ಘತೀರ್ಥಂ ಸಮಾಖ್ಯಾತಂ ಗಂಗಾದ್ವಾರಂ ತಥೈವ ಚ ।
ಹಿಮಸ್ಥಾನಂ ಮಹಾತೀರ್ಥಂ ತಥಾ ಮಾಯಾಪುರೀ ಶುಭಾ ॥ ೯೪ ॥
ಶತಭದ್ರಾ ಮಹಾಭಾಗಾ ಸಿಂಧುಶ್ಚೈವ ಮಹಾನದೀ ।
ಐರಾವತೀ ಚ ಕಪಿಲಾ ಶೋಣಶ್ಚೈವ ಮಹಾನದಃ ॥ ೯೫ ॥
ಪಯೋಧಿಃ ಕೌಶಿಕೀ ತದ್ವತ್ತಥಾ ಗೋದಾವರೀ ಶುಭಾ ।
ದೇವಖಾತಂ ಗಯಾ ಚೈವ ತಥಾ ದ್ವಾರಾವತೀ ಶುಭಾ ॥ ೯೬ ॥
ಪ್ರಭಾಸಂ ಚ ಮಹಾತೀರ್ಥಂ ಸರ್ವಪಾತಕನಾಶನಂ ॥ ೯೭ ॥
ಏವಮಾದೀನಿ ತೀರ್ಥಾನಿ ಯಾನಿ ಸಂತಿ ಮಹೀತಲೇ ।
ತಾನಿ ದೃಷ್ಟ್ವಾ ತು ದೇವೇಶಿ ಪುನರ್ಜನ್ಮ ನ ವಿಂದತೇ ॥ ೯೮ ॥
ತಿಸ್ರಃ ಕೋಟ್ಯೋಽರ್ಧಕೋಟೀ ಚ ತೀರ್ಥಾನಾಮಿಹ ಭೂತಲೇ ।
ಸಂಜಾತಾನಿ ಪವಿತ್ರಾಣಿ ಸರ್ವಪಾಪಹರಾಣಿ ಚ ॥ ೯೯ ॥
ಗಂತವ್ಯಾನಿ ಮಹಾದೇವಿ ಸ್ವಧರ್ಮಸ್ಯ ವಿವೃದ್ಧಯೇ ।
ಅಶಕ್ಯಾನಿ ಶಿವಾನ್ಯೇವಂ ಗಂತುಂ ಚೈವ ಸುರೇಶ್ವರಿ ।
ಮನಸಾ ತಾನಿ ಸರ್ವಾಣಿ ಗಂತವ್ಯಾನಿ ಸಮಾಹಿತೈಃ ॥ ೧೦೦ ॥

೯೨–೯೮. ಮಹಾದೇವಿ! ಭೂಮಿಯಲ್ಲಿರುವ ನೈಮಿಷಾರಣ್ಯ, ಆಕಾಶದಲ್ಲಿರುವ ಪುಷ್ಕರತೀರ್ಥ, ಕೇದಾರ, ಪ್ರಯಾಗ, ವಿಪಾಶಾ, ಊರ್ಮಿಲಾ, ಕರ್ಣವೇಣಾ, ಚಂದ್ರಭಾಗಾ, ಸರಸ್ವತೀ, ಗಂಗಾಸಾಗರಸಂಗಮ, ಕಾಶೀ, ಅರ್ಘತೀರ್ಥ, ಗಂಗಾದ್ವಾರ, ಹಿಮಸ್ಥಾನಮಹಾತೀರ್ಥ, ಮಾಯಾಪುರೀ, ಶತಭದ್ರಾ, ಮಹಾನದಿಯಾದ ಸಿಂಧು, ಇರಾವತೀ, ಕಪಿಲಾ, ಶೋಣಮಹಾನದ, ಸಮುದ್ರ, ಕೌಶಿಕೀ, ಗೋದಾವರೀ, ದೇವಖಾತ, ಗಯಾ, ದ್ವಾರಾವತೀ ಸಕಲಪಾಪಗಳನ್ನು ಪರಿಹರಿಸುವ ಪ್ರಭಾಸತೀರ್ಥ ಇವೇ ಮೊದಲಾದ ಸಕಲ ತೀರ್ಥಗಳನ್ನು ನೋಡಿದವನು ಮರಳಿ ಜನಿಸುವುದಿಲ್ಲ.

೯೯. ಭೂಮಿಯಲ್ಲಿ ಸಕಲ ಪಾಪಗಳನ್ನು ನೀಗಿಸುವ ಪವಿತ್ರಕರಗಳಾದ ಮೂರುವರೆ ಕೋಟಿ ತೀರ್ಥಗಳು ಇರುವುವು.

೧೦೦. ಸುರೇಶ್ವರಿ! ಮಾನವನು ತನ್ನ ಧರ್ಮದ ವೃದ್ಧಿಗಾಗಿ ಈ ತೀರ್ಥಗಳಲ್ಲಿ ಯಾತ್ರೆಯನ್ನು ಮಾಡಬೇಕು. ಇವುಗಳಿಗೆ ಹೋಗಲು ಸಾಧ್ಯವಾಗದಿದ್ದರೆ ಸಾವಧಾನ ಮನಸ್ಸಿನಿಂದ ಇವುಗಳ ಧ್ಯಾನವನ್ನಾದರೂ ಮಾಡಬೇಕು.

ದೇವ್ಯುವಾಚಃ—

ಭಗವನ್ ಪ್ರಾಣಿನಃ ಸರ್ವೇ ಸರ್ವೋಪದ್ರವಸಂಕುಲಾಃ ।
ಅಲ್ಪಾಯುಷಃ ಸದಾ ಬದ್ಧಾ ವ್ಯಾಮೋಹೈರ್ಮದಿರೋದ್ಭವೈಃ ॥ ೧೦೧ ॥
ತ್ರೇತಾಯಾಂ ದ್ವಾಪರೇ ಚೈವ ಕಿಂ ನು ವೈ ದಾರುಣೇ ಕಲೌ ।
ತಸ್ಮಾತ್ತೇಷಾಂ ಹಿತಾರ್ಥಾಯ ತತ್ತೀರ್ಥಂ ತ್ವಂ ಪ್ರಕೀರ್ತಯ ।
ಯೇನ ದೃಷ್ಟೇನ ಸರ್ವೇಷಾಂ ತೀರ್ಥಾನಾಂ ಲಭ್ಯತೇ ಫಲಂ ॥ ೧೦೨ ॥
ಏವಮುಕ್ತಸ್ತು ಪಾರ್ವತ್ಯಾ ಪ್ರಹಸ್ಯ ಪರಮೇಶ್ವರಃ ।
ಉವಾಚ ಪರಯಾ ಪ್ರೀತ್ಯಾ ವಾಚಾ ಮಧುರಯಾ ಪ್ರಭುಃ ॥ ೧೦೩ ॥

ಈಶ್ವರ ಉವಾಚಃ—

ತ್ವಮೇವ ಹಿ ಚರಾಃ ಪ್ರಾಣಾಃ ಸರ್ವಸ್ಯ ಜಗತೋಽರಣಿಃ ।
ತ್ವಯಾ ವಿರಹಿತೋ ದೇವಿ ಮುಹೂರ್ತಮಪಿ ನೋತ್ಸಹೇ ॥ ೧೦೪ ॥
ಶಿವಸ್ಯ ಚ ತಥಾ ಶಕ್ತೇರಂತರಂ ನಾಸ್ತಿ ಪಾರ್ವತಿ ।
ನ ತದಸ್ತಿ ಮಹಾದೇವಿ ಯನ್ನ ಜಾನಾಸಿ ಶೋಭನೇ ॥ ೧೦೫ ॥
ತ್ವಯಾ ವಿನಾಽಹಂ ನ ಕ್ವಾಸ್ಮಿ ನ ತ್ವಂ ದೇವಿ ಮಯಾ ವಿನಾ ।
ಚಂದ್ರಚಂದ್ರಿಕಯೋರ್ಯದ್ವದಗ್ನೇರುಷ್ಣತ್ವಮೇವ ಹಿ ॥ ೧೦೬ ॥

೧೦೧–೧೦೨. ದೇವಿಯು ಹೇಳುತ್ತಾಳೆ:—ಪೂಜ್ಯನೆ! ಸಕಲಪ್ರಾಣಿಗಳೂ ತ್ರೇತಾ ದ್ವಾಪರ ಯುಗಗಳಲ್ಲಿ ಎಲ್ಲಬಗೆಯ ತೊಂದರೆಗಳಿಗೂ ಈಡಾಗಿ ಅಲ್ಪಾಯುಸ್ಸುಳ್ಳವೂ, ಮದ್ಯದಿಂದುಂಟಾದ ಭ್ರಾಂತಿಯಿಂದ ಕೂಡಿದುವೂ ಆಗಿರುವುವು. ಎಂದ ಮೇಲೆ ಭಯಂಕರವಾದ ಕಲಿಯುಗದಲ್ಲಿ ಹೇಳಬೇಕಾದುದೇನು? ಆದುದರಿಂದ ಅವುಗಳ ಹಿತಕ್ಕಾಗಿ ಆಯಾ ತೀರ್ಥಗಳ ಮಹಾತ್ಮ್ಯವನ್ನು ನೀನು ಹೇಳಬೇಕು ಅವುಗಳ ದರ್ಶನದಿಂದ ಆ ಪ್ರಾಣಿಗಳು ಪುಣ್ಯಫಲವನ್ನು ಪಡೆಯುವುವು.

೧೦೩. ಪಾರ್ವತಿಯು ಹೀಗೆ ನುಡಿಯಲು ಪರಮೇಶ್ವರನು ನಕ್ಕು ಅತಿ ಸಂತೋಷದಿಂದ ಮಧುರವಾಗಿ ಇಂತೆಂದನು.

೧೦೪. ಈಶ್ವರನು ಹೇಳುತ್ತಾನೆ:—ದೇವಿ! ಸಮಸ್ತ ಜಗತ್ತಿಗೆ ಅರಣಿಯಂತಿರುವ (ಅಗ್ನಿಯನ್ನುಂಟುಮಾಡುವ ಕಟ್ಟಿಗೆ ಯಂತಿರುವ) ನೀನು ಸಂಚರಿಸುವ ನನ್ನ ಪ್ರಾಣವು, ನಿನ್ನನ್ನು ಬಿಟ್ಟು ನಾನು ಒಂದು ಮುಹೂರ್ತಕಾಲವೂ ಉತ್ಸಾಹದಿಂದಿರಲಾರೆ.

೧೦೫. ಪಾರ್ವತಿ! ಶಿವಶಕ್ತಿಯರಿಗೆ ಭೇದವಿಲ್ಲ, ನಿನಗೆ ತಿಳಿಯದಿರುವುದು ಪ್ರಪಂಚದಲ್ಲಿ ಯಾವುದೂ ಇಲ್ಲ.

೧೦೬. ದೇವಿ! ಚಂದ್ರನು ಬೆಳದಿಂಗಳನ್ನು ಬಿಟ್ಟಿರದಂತೆಯೂ, ಅಗ್ನಿಯು ಉಷ್ಣವನ್ನು ಬಿಟ್ಟಿರದಂತೆಯೂ ನಿನ್ನನ್ನಗಲಿ ನಾನೂ, ನನ್ನನ್ನಗಲಿ ನೀನೂ ಎಲ್ಲಿಯೂ ಇರುವುದಿಲ್ಲ.

ತವ ದೇವಿ ಮಮಾಽಪೀಹ ನಾಽಸ್ತಿ ಚೈವಾಂತರಂ ಪ್ರಿಯೇ ।
ಸರ್ವಂ ಚೈವ ಸುರೇಶಾನಿ ಯಥಾವತ್ಕಥಯಾಮ್ಯಹಂ ॥ ೧೦೭ ॥
ರಹಸ್ಯಾನಾಂ ರಹಸ್ಯಂ ತು ಗೋಪನೀಯಂ ಪ್ರಯತ್ನತಃ ।
ನಾಸ್ತಿಕಾಯ ನ ದಾತವ್ಯಂ ನ ಚ ಪಾಪರತಾಯ ಚ ॥ ೧೦೮ ॥
ದಾತವ್ಯಂ ಭಕ್ತಿಯುಕ್ತಾಯ ಸ್ವಶಿಷ್ಯಾಯ ಸುತಾಯ ವಾ ।
ಪೂರ್ವಮೇವ ಮಯಾ ಖ್ಯಾತಂ ಸಾರಾತ್ಸಾರತರಂ ಪ್ರಿಯೇ ॥ ೧೦೯ ॥
ತೀರ್ಥೋಪನಿಷದಃ ಖ್ಯಾತಾ ಲಿಂಗೋಪನಿಷದಸ್ತಥಾ ।
ಯೋಗೋಪನಿಷದೋ ದೇವಿ ಪೂರ್ವಂ ವೈ ಕಥಿತಾಸ್ತವ ॥ ೧೧೦ ॥

ಪಾರ್ವತ್ಯುವಾಚ:—

ಕ್ಲೇಶೇನಾಽಪಿ ನ ಸಿದ್ಧ್ಯಂತಿ ಕಾಂಕ್ಷಮಾಣಾಃ ಪರಂ ಪದಂ ।
ಯೋನೀರ್ಭ್ರಮಂತೋ ದೃಶ್ಯಂತೇ ನರಾ ನಾಸ್ತಿಕವೃತ್ತಯಃ ॥ ೧೧೧ ॥
ತೀರ್ಥವ್ರತಾನಿ ಸೇವಂತೇ ಪ್ರತ್ಯಯೋ ನೈವ ಜಾಯತೇ ।
ಮೋಹಿತಂ ತು ಜಗತ್ಪೂರ್ವಂ ಮಿಥ್ಯಾಜ್ಞಾನೇನ ಶಂಕರ ॥ ೧೧೨ ॥
ಕಿಂ ತೇ ಫಲಂ ಸುರಶ್ರೇಷ್ಠ ಜಗದ್ವ್ಯಾಮೋಹನೇ ಕೃತೇ ॥ ೧೧೩ ॥

---

೧೦೭. ಪ್ರಿಯಳೆ! ನನಗೂ ನಿನಗೂ ಭೇದವಿಲ್ಲ, ಸುರೇಶ್ವರಿ! ಎಲ್ಲವನ್ನೂ ನಿನಗೆ ನಾನು ಹೇಳುವೆನು.

೧೦೮. ರಹಸ್ಯಗಳಲ್ಲಿ ಅತಿ ರಹಸ್ಯವಾದುದೂ, ಪ್ರಯತ್ನದಿಂದ ಗುಟ್ಟಾಗಿರಿಸಲು ಉಚಿತವಾದುದೂ ಆದ ಈ ವಿಷಯವನ್ನು ನಾಸ್ತಿಕನಿಗೂ ಪಾಪಿಷ್ಠನಿಗೂ ಹೇಳಬಾರದು.

೧೦೯. ಭಕ್ತಿಯುಳ್ಳ ತನ್ನ ಶಿಷ್ಯನಿಗೊ ಅಥವಾ ಮಗನಿಗೊ ಮಾತ್ರ ಹೇಳತಕ್ಕದು ಪ್ರಿಯಳೆ! ಅತಿ ಶ್ರೇಷ್ಠವಾದ ಈ ರಹಸ್ಯವನ್ನು ಹಿಂದೆಯೇ ಹೇಳಿರುವೆನು.

೧೧೦. ದೇವಿ! ನಿನಗೆ ಹಿಂದೆ ಪ್ರಖ್ಯಾತವಾದ ತೀರ್ಥ, ಲಿಂಗ ಮತ್ತು ಉಪನಿಷತ್ತುಗಳ ವಿಚಾರವನ್ನು ಹೇಳಿರುವೆನು.

೧೧೧. ಪಾರ್ವತಿಯು ಹೇಳುತ್ತಾಳೆ:—ಮನುಷ್ಯರು ಉತ್ತಮ ಸ್ಥಾನವನ್ನು ಕಷ್ಟದಿಂದ ಅಪೇಕ್ಷಿಸುತ್ತಿದ್ದರೂ ಆ ಸ್ಥಾನವು ಸಿದ್ಧಿಸುವುದಿಲ್ಲ. ನಾಸ್ತಿಕರಾದ ನರರು ಅನೇಕ ಯೋನಿಗಳಲ್ಲಿ ಜನಿಸುತ್ತಿರುವುದನ್ನು ನಾವು ನೋಡುತ್ತೇವೆ.

೧೧೨. ಮನುಷ್ಯರು ತೀರ್ಥಗಳನ್ನು ಸೇವಿಸುತ್ತಿದ್ದರೂ, ವ್ರತಗಳನ್ನು ಆಚರಿಸುತ್ತಿದ್ದರೂ ಅವರಿಗೆ ಅವುಗಳಲ್ಲಿ ನಂಬಿಕೆಯುಂಟಾಗುವುದಿಲ್ಲ. ಶಂಕರ! ಪ್ರಪಂಚವೆಲ್ಲ ಮಿಥ್ಯಾಜ್ಞಾನದಿಂದ ಮೋಹಗೊಂಡಿವೆ.

೧೧೩. ಸುರೋತ್ತಮನಾದ ಶಂಕರನೆ! ಪ್ರಪಂಚವನ್ನು ವ್ಯಾಮೋಹಗೊಳಿಸಿದ್ದರಿಂದ ನಿನಗೇನು ಪ್ರಯೋಜನ ?

ಸಾರಾತ್ಸಾರತರಂ ನಾಥ ತವ ಪ್ರಾಣಪ್ರಿಯಂ ಹಿ ಯತ್ ।
ತನ್ಮೇ ಕಥಯ ದೇವೇಶ ಪ್ರಿಯಾಽಹಂ ಯದಿ ತೇ ಪ್ರಭೋ ॥ ೧೧೪ ॥
ಇತ್ಯುಕ್ತಃ ಸ ತಯಾ ದೇವ್ಯಾ ಶ್ರೀಕಂಠಃ ಸುರನಾಯಕಃ ।
ಪ್ರಹಸ್ಯೋವಾಚ ಭಗವಾನ್ ಗಂಭೀರಾರ್ಥಮಿದಂ ವಚಃ ॥ ೧೧೫ ॥

ಈಶ್ವರ ಉವಾಚ:—

ಶೃಣುಷ್ವಾವಹಿತಾ ಭೂತ್ವಾ ಪೃಷ್ಟೋಽಹಂ ಯತ್ತ್ವಯಾಽಧುನಾ ।
ನಿಷ್ಫಲಂ ತತ್ಪ್ರವಕ್ಷ್ಯಾಮಿ ವಸ್ತುತತ್ತ್ವಂ ಯಥಾಸ್ಥಿತಂ ॥ ೧೧೬ ॥
ಪೂರ್ವಮುಕ್ತಾನಿ ತೀರ್ಥಾನಿ ಯಾನಿ ತೇ ಸುರಸುಂದರಿ ।
ತಿಸ್ರಃ ಕೋಟ್ಯೋಽರ್ಧಕೋಟೀ ಚ ಬ್ರಹ್ಮಾಂಡೇ ಸಚರಾಚರೇ ॥ ೧೧೭ ॥
ತೇಷಾಂ ಚ ಗೋಪಿತಂ ತೀರ್ಥಂ ಪ್ರಭಾಸಂ ಚೈವ ಸುವ್ರತೇ ॥ ೧೧೮ ॥
ಏವಮುಕ್ತಂ ಮಹಾದೇವಿ ಪ್ರಭಾಸಂ ಕ್ಷೇತ್ರಮುತ್ತಮಂ ।
ದೃಷ್ಟ್ವಾ ಸಂಸ್ಕಾರರಹಿತಾಃ ಕಲೌ ಪಾಪೇನ ಮೋಹಿತಾಃ ॥ ೧೧೯ ॥
ರಾಜಸಾಸ್ತಾಮಸಾಶ್ಚೈವ ಪಾಪೋಪಹತಚೇತಸಃ ।
ಪರದಾರ ಪರದ್ರವ್ಯ ಪರಹಿಂಸಾರತಾ ನರಾಃ ॥ ೧೨೦ ॥
ಉದ್ವೇಗಂ ಚ ಪರಂ ಯಾಂತಿ ಪ್ರತಪ್ಯಂತಿ ಯತಸ್ತತಃ ।
ಆತ್ಮಸಂಭಾವಿತಾ ಮೂಢಾ ಮಿಥ್ಯಾಜ್ಞಾನೇನ ಮೋಹಿತಾಃ ।
ವರ್ಣಾಶ್ರಮವಿರುದ್ಧಂ ತು ತೀರ್ಥೇ ಕುರ್ವಂತಿ ಯೋಽಧಮಾಃ ॥ ೧೨೧ ॥

---

೧೧೪. ನಾಥ ! ನಾನು ನಿನಗೆ ಪ್ರಿಯಳಾಗಿದ್ದರೆ ನಿನಗೆ ಅತ್ಯಂತ ಪ್ರಿಯವೂ ಸಾರತರವೂ ಆದ ತೀರ್ಥದ ವಿಷಯವನ್ನು ನನಗೆ ಹೇಳು.

೧೧೫. ದೇವಿಯು ಹೀಗೆ ನುಡಿಯಲು ಸುರನಾಯಕನಾದ ಶಂಕರನು ನಕ್ಕು ಗಂಭೀರವಾದ ಅರ್ಥವುಳ್ಳ ಈ ಮಾತನ್ನು ಹೇಳಿದನು.

೧೧೬. ಈಶ್ವರನು ಹೇಳುತ್ತಾನೆ:—ನೀನು ನನ್ನನ್ನು ಕೇಳಿದುದರಿಂದ ನಾನು ಈಗ ಯಥಾಸ್ಥಿತವಾದ ವಸ್ತುತತ್ತ್ವವನ್ನು ಹೇಳುವೆನು. ನೀನು ಅದನ್ನು ಸಾವಧಾನ ಮನಸ್ಸಿನಿಂದ ಕೇಳು.

೧೧೭–೧೨೧. ಸುರಸುಂದರಿ ! ನಾನು ಹಿಂದೆ ನಿನಗೆ ಬ್ರಹ್ಮಾಂಡದಲ್ಲಿರುವ ಮೂರುವರೆ ಕೋಟಿ ತೀರ್ಥಗಳನ್ನು ಹೇಳಿ ಅವುಗಳಲ್ಲಿ ಉತ್ತಮವಾದ ಪ್ರಭಾಸಕ್ಷೇತ್ರವನ್ನು ಮಾತ್ರ ಮರೆಮಾಚಿರುವೆನು. ಕಲಿಯುಗದಲ್ಲಿ ಸಂಸ್ಕಾರವಿಲ್ಲದವರೂ, ಪಾಪದಿಂದ ಮೋಹಗೊಂಡವರೂ ರಾಜಸತಾಮಸರೂ ಆದ ಮಾನವರು ಪರಸ್ತ್ರೀ ಪರದ್ರವ್ಯಗಳಲ್ಲಿ ಆಸಕ್ತರಾಗಿ ಪರರಿಗೆ ಹಿಂಸೆಗೈಯುತ್ತ ಅತ್ಯಂತವಾಗಿ ವ್ಯಥೆಗೊಳ್ಳುತ್ತಾರೆ. ಮಿಥ್ಯಾಜ್ಞಾನದಿಂದ ಮೋಹಗೊಂಡ ಮೂಢರಾದ ಆ ಮನುಷ್ಯರು ತಮಗೆ ಸಮಾನರಿಲ್ಲವೆಂದರಿತು ತೀರ್ಥದಲ್ಲಿ ವರ್ಣಾಶ್ರಮವಿರುದ್ಧವಾದ ಕಾರ್ಯವನ್ನೆಸಗುವರು.

ತೀರ್ಥಯಾತ್ರಾಂ ಪ್ರಕುರ್ವಂತಿ ದಂಭೇನ ಕಪಟೇನ ಚ ।
ತೀರ್ಥೇ ಮೃತಾ ನ ಸಿದ್ಧ್ಯಂತಿ ತೇ ನರಾ ವರವರ್ಣಿನಿ ॥ ೧೨೨ ॥
ಏತದರ್ಥಂ ಮಯಾ ದೇವಿ ತೀರ್ಥಾನಿ ವಿವಿಧಾನಿ ಚ ।
ಲಿಂಗಾನಿ ಚೈವ ಸುಶ್ರೋಣಿ ಗೋಪಿತಾನಿ ಪ್ರಯತ್ನತಃ ।
ನ ಸಿದ್ಧಿದಾನಿ ದೇವೇಶಿ ಕಲೌ ಕಲ್ಮಷಕಾರಿಣಾಂ ॥ ೧೨೩ ॥
ಯೇ ನರಾಸ್ತು ಜಿತಕ್ರೋಧಾ ಜಿತಲೋಭಾ ಜಿತೇಂದ್ರಿಯಾಃ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾऽದಂಭಮತ್ಸರಾಃ ॥ ೧೨೪ ॥
ಮದ್ಭಾವಭಾವಿತಾ ದೇವಿ ತೀರ್ಥಂ ಸೇವಂತಿ ಸುವ್ರತಾಃ ।
ತೇಷಾಂ ಚೈವ ಹಿತಾರ್ಥಾಯ ಕಥಯಾಮಿ ಯಶಸ್ವಿನಿ ॥ ೧೨೫ ॥
ಪ್ರಭಾಸಮಿತಿ ವಿಖ್ಯಾತಂ ಕ್ಷೇತ್ರಂ ತ್ರೈಲೋಕ್ಯವಂದಿತಂ ।
ತತ್ಕ್ಷೇತ್ರಂ ನೈವ ಜಾನಂತಿ ಮಮ ಮಾಯಾವಿಮೋಹಿತಾಃ ॥ ೧೨೬ ॥
ಪರೋऽಹಂ ತ್ವೇಕಚಿತ್ತೈರ್ಯೈ ಬಹುಜನ್ಮಭಿರರ್ಚಿತಃ ।
ತೇ ವಿದಂತಿ ಪರಂ ಕ್ಷೇತ್ರಂ ಪ್ರಭಾಸಂ ಪಾಪನಾಶನಂ ॥ ೧೨೭ ॥
ಮದ್ಭಾವಭಾವಿತಾ ದೇವಿ ಮಮ ವ್ರತನಿಷೇವಿಣಃ ।
ತೇಷಾಂ ಪ್ರಭಾಸಿಕಂ ಕ್ಷೇತ್ರಂ ವಿದಿತಂ ನಾऽತ್ರ ಸಂಶಯಃ ॥ ೧೨೮ ॥

---

೧೨೨. ಆ ಮೂಢರು ಅಹಂಕಾರದಿಂದಲೂ ಕಪಟದಿಂದಲೂ ತೀರ್ಥಯಾತ್ರೆಯನ್ನೇನೋ ಮಾಡುತ್ತಾರೆ. ತೀರ್ಥದಲ್ಲಿ ಮೃತರಾಗಿ ಉತ್ತಮ ಸಿದ್ಧಿಯನ್ನು ಮಾತ್ರ ಪಡೆಯುವುದಿಲ್ಲ.

೧೨೩. ಸುಂದರಿ ! ಇದಕ್ಕಾಗಿಯೇ ನಾನು ನಾನಾವಿಧವಾದ ತೀರ್ಥಗಳನ್ನೂ ಶಿವಲಿಂಗಗಳನ್ನೂ ಪ್ರಯತ್ನದಿಂದ ರಹಸ್ಯವಾಗಿಟ್ಟಿರುವೆನು. ಅವು ಪಾಪಿಗಳಿಗೆ ಕಲಿಯುಗದಲ್ಲಿ ಸಿದ್ಧಿಪ್ರದಗಳಾಗುವುದಿಲ್ಲ.

೧೨೪–೧೨೫. ದೇವಿ ! ಕೋಪವನ್ನೂ ಲೋಭವನ್ನೂ, ಇಂದ್ರಿಯಗಳನ್ನೂ ಜಯಿಸಿದವರೂ, ದಂಭಮಾತ್ಸರ್ಯಗಳಿಲ್ಲದವರೂ, ನನ್ನಲ್ಲಿ ಭಕ್ತಿಯುಳ್ಳವರೂ ಆಗಿ ತೀರ್ಥವನ್ನು ಸೇವಿಸುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಹಿತಕ್ಕಾಗಿ ಆ ತೀರ್ಥಗಳನ್ನು ಹೇಳುವೆನು.

೧೨೬. ನನ್ನ ಮಾಯೆಯಿಂದ ಮೋಹಗೊಂಡ ಮೂಢರು ತ್ರಿಲೋಕ್ಯ ಪೂಜಿತವಾದ ಪ್ರಭಾಸವೆಂದು ಪ್ರಸಿದ್ಧವಾದ ಆ ಕ್ಷೇತ್ರವನ್ನು ತಿಳಿಯುವುದಿಲ್ಲ.

೧೨೭. ಅನೇಕ ಜನ್ಮಗಳಲ್ಲಿ ಒಮ್ಮನಸ್ಸಿನಿಂದ ಸರ್ವೋತ್ತಮನಾದ ನನ್ನನ್ನು ಅರ್ಚಿಸಿದ ನನ್ನ ಭಕ್ತರು ಮಾತ್ರ ಪಾಪವನ್ನು ಪರಿಹರಿಸುವ ಆ ಪ್ರಭಾಸ ಕ್ಷೇತ್ರವನ್ನರಿತಿರುವರು.

೧೨೮. ನನ್ನಲ್ಲಿ ಭಕ್ತಿಯುಳ್ಳವರೂ, ನನ್ನ ವ್ರತವನ್ನು ಅನುಷ್ಠಾನ ಮಾಡಿದವರೂ ಆದ ಮಾನವರಿಗೆ ಮಾತ್ರ ಆ ಪ್ರಭಾಸ ಕ್ಷೇತ್ರವು ತಿಳಿದಿರುವುದು.

ಯಮೈಶ್ಚ ನಿಯಮೈರ್ಯುಕ್ತಾ ಅಹಂಕಾರವಿವರ್ಜಿತಾಃ ।
ತೇಷಾಮರ್ಥೇ ವದಿಷ್ಯಾಮಿ ತವ ಪ್ರಶ್ನಂ ಸುದುರ್ಲಭಂ ।
ಬ್ರಹ್ಮವಿಷ್ಣ್ವಿಂದ್ರದೇವಾನಾಂ ಪುರಾಣಂ ಕಥಿತಂ ಮಯಾ ॥ ೧೨೯ ॥
ಸೋಽಹಂ ದೇವಿ ವದಿಷ್ಯಾಮಿ ಕರ್ಣಂ ದೇಹಿ ವರಾನನೇ ।
ಪೃಥಿವ್ಯಾಮಪಿ ಸರ್ವೇಷಾಂ ತೀರ್ಥಾನಾಂ ಸುರಸುಂದರಿ ॥ ೧೩೦ ॥
ಏಕಂ ಮೇ ವಲ್ಲಭಂ ತತ್ರ ಪ್ರಭಾಸಂ ಕ್ಷೇತ್ರಮುತ್ತಮಂ ।
ತಸ್ಮಿಂಶ್ಚೈವ ಮಹಾಕ್ಷೇತ್ರೇ ತೀರ್ಥೈಃ ಸೋಮೇನ ಪೂಜಿತಃ ।
ವರಾಂಸ್ತಸ್ಮೈ ಪ್ರದಾಯಾಽಥ ಸದೈಕಾಂತೇ ಸ್ಥಿತೋ ಹ್ಯಹಂ ॥ ೧೩೧ ॥
ತೇನ ಗುಹ್ಯಂ ಕೃತಂ ಸ್ಥಾನಂ ತವ ದೇವಿ ಪ್ರಕಾಶಿತಂ ।
ತತ್ರ ಮೇ ಯೋಗಯುಕ್ತಸ್ಯ ದಿವ್ಯಂ ಲಿಂಗಂ ಬಭೂವ ಹ ॥ ೧೩೨ ॥
ದಿವ್ಯತೇಜಸ್ಸಮಾಯುಕ್ತಂ ವಹ್ನಿಮೇಖಲಮಂಡಿತಂ ।
ಲಕ್ಷಮಾತ್ರಸ್ಥಿತಂ ಶಾಂತಂ ದುರ್ನಿರೀಕ್ಷ್ಯಂ ತು ಮಾನವೈಃ ॥ ೧೩೩ ॥
ಇಚ್ಛಾಜ್ಞಾನಕ್ರಿಯಾಖ್ಯಾಶ್ಚ ತಿಸ್ರೋ ವೈ ಶಕ್ತಯಶ್ಚ ಯಾಃ ।
ತಸ್ಮಾಲ್ಲಿಂಗಾತ್ಸಮುತ್ಪನ್ನಾ ಜಗತ್ಕರ್ತೃತ್ವಹೇತವೇ ॥ ೧೩೪ ॥

೧೨೯–೧೩೧. ದೇವಿ ! ಯಮನಿಯಮಗಳಿಂದ ಸಹಿತರಾಗಿ ಅಹಂಕಾರವನ್ನು ತ್ಯಜಿಸಿದ ಜನರಿಗೋಸ್ಕರ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ. ನಿನಗೆ ಬ್ರಹ್ಮ, ವಿಷ್ಣು, ಇಂದ್ರರ ಪುರಾಣವನ್ನು ಈ ಮೊದಲೇ ಹೇಳಿದ್ದೇನೆ. ಪೃಥಿವಿಯಲ್ಲಿರುವ ಸಕಲ ತೀರ್ಥಗಳಲ್ಲಿ ಉತ್ತಮವಾದ ಪ್ರಭಾಸಕ್ಷೇತ್ರವೊಂದು ನನಗೆ ಪ್ರಿಯವಾದುದು. ಅದನ್ನು ಈಗ ನಾನು ಹೇಳುವೆನು. ಕಿವಿಗೊಟ್ಟು ಕೇಳು. ಆ ಕ್ಷೇತ್ರದಲ್ಲಿ ಸೋಮನು ನನ್ನ ತೀರ್ಥಗಳಿಂದ ಪೂಜಿಸಿದನು. ನಾನು ಅವನಿಗೆ ವರಗಳನ್ನಿತ್ತು ಅಲ್ಲಿಯ ರಹಸ್ಯ ಸ್ಥಳದಲ್ಲಿ ಯಾವಾಗಲೂ ನೆಲೆಸಿರುವೆನು.

೧೩೨–೧೩೩. ಅದರಿಂದ ರಹಸ್ಯಸ್ಥಾನವಾದ ಆ ಕ್ಷೇತ್ರವನ್ನು ನಿನಗೆ ಪ್ರಕಾಶಗೊಳಿಸಿದೆನು. ಅಲ್ಲಿ ಯೋಗಾಸಕ್ತನಾದ ನನ್ನ ದಿವ್ಯ ತೇಜಸ್ಸಿನಿಂದ ಕೂಡಿರುವುದೂ, ಅಗ್ನಿರೂಪವಾದ ಒಡ್ಯಾಣದಿಂದ ಅಲಂಕಾರಗೊಂಡುದೂ, ಶಾಂತವೂ, ಮಾನವರಿಗೆ ನೋಡಲಶಕ್ಯವೂ ಆದ ದಿವ್ಯಲಿಂಗವು ಉದ್ಭವಿಸಿರುವುದು.

೧೩೪. ಜಗತ್ತಿನ ಸೃಷ್ಟಿಗಾಗಿ ಆ ಲಿಂಗದಿಂದ ಇಚ್ಛಾ, ಜ್ಞಾನ, ಕ್ರಿಯೆಗಳೆಂಬ ಮೂರು ಶಕ್ತಿಗಳು ಹುಟ್ಟಿದುವು.

ತಸ್ಮಿಂಲ್ಲಿಂಗೇ ಲಯಂ ಯಾತಿ ಜಗದೇತಚ್ಚರಾಚರಂ ।
ಪುನಸ್ತೇನೈವ ಸಂಭೂತಂ ದೃಶ್ಯತೇ ಸಚರಾಚರಂ ॥ ೧೩೫ ॥
ಗುಹ್ಯಂ ಚೈವ ತು ಸಂಭೂತಂ ನ ಕಶ್ಚಿದ್ವೇದ ತತ್ಪರಂ ।
ಜನ್ಮಾಭ್ಯಾಸೇನ ತಲ್ಲಿಂಗಂ ಜ್ಞಾಯತೇ ಭುವಿ ಮಾನವೈಃ ॥ ೧೩೬ ॥
ಕ್ಷೇತ್ರಂ ಪ್ರಭಾಸಿಕಂ ಪ್ರೋಕ್ತಂ ಕ್ಷೇತ್ರಜ್ಞೋಽಹಂ ನ ಸಂಶಯಃ ।
ತತ್ರ ಸೋಮೇಶನಾಮ್ನಾಽಹಮಸ್ಮಿನ್ ಕ್ಷೇತ್ರಂ ವರಾನನೇ ॥ ೧೩೭ ॥
ಮಮಾಂಶಸಂಭವಾ ಯೇ ಚ ಅಸ್ಮಿನ್ ಕ್ಷೇತ್ರೇ ಸಮುದ್ಭವಾಃ ।
ತೇಷಾಂ ತು ವಿದಿತಂ ಲಿಂಗಂ ಪೂರ್ವಕಲ್ಪೇ ತು ಭೈರವಂ ॥ ೧೩೮ ॥
ಅನ್ಯೈರಪಿ ಯುಗೈರ್ದೇವಿ ಇದಂ ಲಿಂಗಂ ಸುದುರ್ಲಭಂ ।
ಘೋರೇ ಕಲಿಯುಗೇ ಪಾಪೇ ವಿಶೇಷೇಣ ಚ ದುರ್ಲಭಂ ॥ ೧೩೯ ॥
ಅನ್ಯನ್ನಿದರ್ಶನಂ ತತ್ರ ತತ್ಪ್ರವಕ್ಷ್ಯಾಮಿ ಪಾರ್ವತಿ ॥ ೧೪೦ ॥
ಕಲೌ ಯುಗೇ ಮಹಾಘೋರೇ ಹೇತುವಾದರತಾ ನರಾಃ ।
ವದಿಷ್ಯಂತಿ ಮಹಾಪಾಪಾಃ ಸರ್ವೇ ಪಾಖಂಡಸಂಸ್ಥಿತಾಃ ॥ ೧೪೧ ॥

---

೧೩೫. ಚರಾಚರಾತ್ಮಕವಾದ ಈ ಪ್ರಪಂಚವು ಆ ಲಿಂಗದಲ್ಲಿ ಲಯವಾಗುವುದು. ಮರಳಿ ಆದರಿಂದ ಹುಟ್ಟಿ ದೃಷ್ಟಿಗೋಚರವಾಗುವುದು.

೧೩೬. ಉತ್ಕೃಷ್ಟವಾದ ಆ ಲಿಂಗವು ಗುಹ್ಯವಾಗಿರುವುದನ್ನು ಯಾರೂ ಅರಿಯರು. ಪ್ರಪಂಚದಲ್ಲಿ ಅನೇಕ ಜನ್ಮಗಳಲ್ಲಿ ನನ್ನಲ್ಲಿ ಭಕ್ತಿಯುಳ್ಳ ಮಾನವರು ಮಾತ್ರ ಅದನ್ನು ತಿಳಿಯುವರು.

೧೩೭. ಸುಂದರಿ ! ಪ್ರಭಾಸವು ಕ್ಷೇತ್ರವೆನಿಸಿರುವುದು. ನಾನು ಅದನ್ನರಿತ ಕ್ಷೇತ್ರಜ್ಞನು. ಅಲ್ಲಿ ನಾನು ಸೋಮೇಶನೆಂಬ ಹೆಸರಿನಿಂದ ನೆಲೆಸಿರುವೆನು.

೧೩೮. ಹಿಂದಿನ ಕಲ್ಪದಲ್ಲಿ ಭೈರವವೆಂದು ಪ್ರಸಿದ್ಧವಾದ ಈ ಲಿಂಗವನ್ನು ಆ ಕ್ಷೇತ್ರದಲ್ಲಿ ನನ್ನ ಅಂಶದಿಂದ ಹುಟ್ಟಿದವರುಮಾತ್ರ ಅರಿತಿರುವರು.

೧೩೯. ದೇವಿ ! ಇತರ ಯುಗಗಳಲ್ಲಿ ಈ ಲಿಂಗವು ದುರ್ಲಭವಾದುದು. ಪಾಪಿಷ್ಠವಾದ ಈ ಘೋರ ಕಲಿಯುಗದಲ್ಲಿಯಂತೂ ಅದು ಅತ್ಯಂತ ದುರ್ಲಭವಾದುದು.

೧೪೦. ಪಾರ್ವತಿ ! ಮತ್ತೊಂದು ದೃಷ್ಟಾಂತವನ್ನು ಹೇಳುವೆನು.

೧೪೧. ಅತಿ ಘೋರವಾದ ಕಲಿಯುಗದಲ್ಲಿ ಯುಕ್ತಿವಾದನಿರತರಾದ ನರರು ಅತಿಪಾಪಿಗಳಾಗಿ ಪಾಷಂಡಮತವನ್ನವಲಂಬಿಸಿ ಹೀಗೆ ಹೇಳುವರು.

ಮಿಥ್ಯಾ ಚೈತತ್ಕೃತಂ ಸರ್ವಂ ಮೂರ್ಖೈಶ್ಚಾಽಪಿ ಪ್ರಕೀರ್ತಿತಂ ।
ಕ್ವ ಕ್ಷೇತ್ರಂ ಕ್ವ ಪ್ರಭಾವಶ್ಚ ಕುತ್ರ ವೈ ಸಂತಿ ದೇವತಾಃ ॥ ೧೪೨ ॥
ಸರ್ವಂ ಚಾಽಪಿ ತಥಾಲೀಕಂ ಮೂರ್ಖೈಶ್ಚಾಽಪಿ ಪ್ರಕೀರ್ತಿತಂ॥ ॥ ೧೪೩ ॥
ಏವಂ ಮೂರ್ಖಾ ವದಿಷ್ಯಂತಿ ಪ್ರಹಸಿಷ್ಯಂತಿಚಾಽಪರೇ ।
ನಾರಕಾ ನಾಸ್ತಿಕಾ ಲೋಕಾಃ ಪಾಪೋಪಹತಚೇತಸಃ ।
ಸಿದ್ಧಿಂ ನೈವ ಪ್ರಯಾಸ್ಯಂತಿ ಸಂಪ್ರಾಪ್ತೇ ತು ಕಲೌ ಯುಗೇ ॥ ೧೪೪ ॥
ತೀರ್ಥೇ ಚೈವ ಮೃತಾ ಯೇ ತು ಶಿವನಿಂದಾಪರಾಯಣಾಃ ।
ತಿರ್ಯಗ್ಯೋನಿಪ್ರಸೂತಾಶ್ಚ ದೃಶ್ಯಂತೇ ಸರ್ವಯೋಷಿಷು ॥ ೧೪೫ ॥
ಏತಸ್ಮಾತ್ಕಾರಣಾದ್ದೇವಿ ತೀರ್ಥೇ ಚೈವ ಸುದುಃಖಿತಾಃ ।
ದೃಶ್ಯಂತೇ ಯುಗಮಾಹಾತ್ಮ್ಯಾತ್ಸತ್ಯಶೌಚ ವಿವರ್ಜಿತಾಃ ॥ ೧೪೬ ॥
ಇದಂ ಹಿ ಕಾರಣಂ ಪ್ರೋಕ್ತಂ ಕ್ಷೇತ್ರಾಣಾಂ ಚೈವ ಗೋಪನೇ
ಏತತ್ತೇ ಕಥಿತಂ ಸರ್ವಂ ಸಿದ್ಧಿರ್ಯೇನ ಸುದುರ್ಲಭಾ ॥ ೧೪೭ ॥
ಯುಗೇ ಯುಗೇತು ತೀರ್ಥಾನಿ ಕೀರ್ತಿತಾನಿ ಸುರೇಶ್ವರಿ ।
ತೇಷಾಂ ಮೇ ವಲ್ಲಭಂ ದೇವಿ ಪ್ರಭಾಸಂ ಕ್ಷೇತ್ರಮೇವ ಚ ॥೧೪೮ ॥

೧೪೨–೧೪೩. ಕ್ಷೇತ್ರವೆಲ್ಲಿ ? ಮಾಹಾತ್ಮ್ಯವೆಲ್ಲಿ ? ದೇವತೆಗಳೆಲ್ಲಿರುವರು ? ಮೂರ್ಖರು ಹೇಳಿದ ಈ ಮಾತುಗಳೆಲ್ಲವೂ ಸುಳ್ಳು.

೧೪೪. ಹೀಗೆ ಮೂರ್ಖರು ಹೇಳಿದರೆ, ಇನ್ನು ಇತರರು ಹಾಸ್ಯ ಮಾಡುವರು. ಕಲಿಯುಗವು ಬರಲು ನರಕಯೋಗ್ಯರೂ, ನಾಸ್ತಿಕರೂ, ಪಾಪಬುದ್ಧಿಯುಳ್ಳವರೂ ಆದ ಜನರು ಸಿದ್ಧಿಯನ್ನು ಹೊಂದುವುದಿಲ್ಲ.

೧೪೫. ಶಿವನಿಂದೆಯಲ್ಲಿ ನಿರತರಾದ ನರರು ತೀರ್ಥದಲ್ಲಿ ಮೃತರಾಗಿ ಪಶು ಪಕ್ಷಿ ಮೊದಲಾದ ಜಾತಿಗಳಲ್ಲಿ ಜನಿಸುವರು.

೧೪೬. ದೇವಿ ! ಈ ಕಾರಣದಿಂದಲೇ ತೀರ್ಥಗಳಲ್ಲಿಯೇ ಯುಗ ಮಾಹಾತ್ಮ್ಯ ಯಿಂಧ ಸತ್ಯಶೌಚವಿಲ್ಲದ ದುಃಖಿತರಾದ ಮಾನವರನ್ನು ಕಾಣುವೆವು.

೧೪೭. ಕ್ಷೇತ್ರಗಳನ್ನು ಗೋಪನಮಾಡುವುದಕ್ಕೂ, ಸಿದ್ಧಿಯು ದುರ್ಲಭ ವಾಗುವುದಕ್ಕೂ ಕಾರಣವನ್ನೆಲ್ಲ ನಿನಗೆ ಹೇಳಿರುವೆನು.

೧೪೮. ದೇವಿ ಯುಗಯುಗಗಳಲ್ಲಿ ಪ್ರಸಿದ್ಧಿಗೊಂಡ ತೀರ್ಥಗಳಲ್ಲಿ ಪ್ರಭಾಸ ಕ್ಷೇತ್ರವು ನನಗೆ ಪ್ರಿಯವಾದುದು.

ಇತ್ಯೇತತ್ಕಥಿತಂ ದೇವಿ ರಹಸ್ಯಂ ಪಾಪನಾಶನಂ ।
ಕ್ಷೇತ್ರಬೀಜಂ ಮಹಾದೇವಿ ಕಿಮನ್ಯತ್ಪರಿಪೃಚ್ಛಸಿ ॥ ೧೪೯ ॥

ಇದಂ ಮಹಾಪಾತಕನಾಶನಂ ಯೇ
ಶ್ರೋಷ್ಯಂತಿ ವೈ ಕ್ಷೇತ್ರಮಹಾಪ ಭಾವಂ ।
ತೇ ಚಾಪ್ಯಪಿ ಯಾಸ್ಯಂತಿ ಮಮ ಪ್ರಭಾವಾ
ತ್ರಿವಿಷ್ಟಪಂ ಪುಣ್ಯಜನಾಧಿವಾಸಂ ॥ ೧೫೦ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ
ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ
ಪ್ರಭಾಸಕ್ಷೇತ್ರಮಹಾತ್ಮ್ಯೇ ದೇವೀ
ಪ್ರಶ್ನವರ್ಣನಂನಾಮ
ಚತುರ್ಥೋಽಧ್ಯಾಯಃ

---

೧೪೯. ದೇವಿ! ಪಾಪನಾಶಕವೂ, ರಹಸ್ಯವೂ ಆಗಿರುವ ಈ ಕ್ಷೇತ್ರದ ಮೂಲವನ್ನು ನಿನಗೆ ಹೇಳಿದ್ದೇನೆ. ಬೇರೆ ಏನನ್ನು ಪ್ರಶ್ನೆಮಾಡುವೆ ?

೧೫೦. ಮಹಾಪಾತಕವನ್ನು ಪರಿಹರಿಸುವ ಈ ಕ್ಷೇತ್ರಗಳ ಮಾಹಾತ್ಮ್ಯವನ್ನು ಕೇಳ ಬಯಸುವ ಮನುಷ್ಯರು ನನ್ನ ಪ್ರಭಾವದಿಂದ ಪುಣ್ಯವಂತರು ವಾಸಿಸುವ ಸ್ವರ್ಗವನ್ನು ಸೇರುವರು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ದೇವೀ
ಪ್ರಶ್ನನ ವರ್ಣನವೆಂಬ
ಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಚತುರ್ಥೋಽಧ್ಯಾಯಃ

ಕ್ಷೇತ್ರಫಲವರ್ಣನಂ

ಸೂತ ಉವಾಚ :—

ಏವಂ ಮುನೀಂದ್ರಾಃ ಕಥಿತೇ ಪ್ರಭಾವೇ ಶಂಕರೇಣ ತು ।
ಪುನಃ ಪಪ್ರಚ್ಛ ಸಾ ದೇವೀ ಕೃತಾಂಜಲಿಪುಟಾ ಸತೀ ॥ ೧ ॥

ದೇವ್ಯುವಾಚ:—

ದೇವದೇವ ಜಗನ್ನಾಥ ಕ್ಷೇತ್ರತೀರ್ಥಮಯ ಪ್ರಭೋ ।
ಪ್ರಭಾಸಕ್ಷೇತ್ರಮಾಹಾತ್ಮ್ಯಂ ವಿಸ್ತರಾತ್ಕಥಯಸ್ವ ಮೇ ॥ ೨ ॥
ಕಥಂ ತುಷ್ಯಸಿ ಮರ್ತ್ಯಾನಾಂ ಕ್ಷೇತ್ರೇ ತತ್ರ ವಿಚೇತಸಾಂ ।
ಜಪ್ತಂ ದತ್ತಂ ಹುತಂ ಯಿಷ್ಟಂ ತಪಸ್ತಪ್ತಂ ಕೃತಂ ಚ ಯತ್
ಪ್ರಭಾಸೇ ತು ಮಹಾಕ್ಷೇತ್ರೇ ಕಸ್ಮಾತ್ತತ್ರಾಕ್ಷಯಂ ಭವೇತ್ ॥ ೩ ॥
ಜಾತ್ಯಂತರಸಹಸ್ರೇಷು ಯತ್ಪಾಪಂ ಪೂರ್ವಸಂಚಿತಂ ।
ತತ್ಕಥಂ ಕ್ಷಯಮಾಪ್ನೋತಿ ತನ್ಮಮಾಚಕ್ಷ್ವ ಶಂಕರ ॥ ೪ ॥
ಯದಿ ಪ್ರಭಾಸಂ ಸರ್ವೇಷಾಂ ತೀರ್ಥಾನಾಂ ಪ್ರವರಂ ಮತಂ ।
ಕಿಮನ್ಯೈರ್ಬಹುಭಿಸ್ತತ್ರ ಕರ್ತವ್ಯಂ ತೀರ್ಥವಿಸ್ತರೈಃ ॥ ೫ ॥

ಕನ್ನಡ ಅನುವಾದ

ಕ್ಷೇತ್ರ ಪ್ರಮಾಣವರ್ಣನ

೧. ಸೂತನು ಹೇಳುತ್ತಾನೆ :—ಮುನಿವರ್ಯರೆ ! ಶಂಕರನು ಹೀಗೆ ಕ್ಷೇತ್ರ ಮಾಹಾತ್ಮ್ಯವನ್ನು ಹೇಳಲು ಪಾರ್ವತಿಯು ಕೈಮುಗಿದುಕೊಂಡು ಮರಳಿ ಪ್ರಶ್ನಿಸಿದಳು.

೨. ದೇವಿಯು ಹೇಳುತ್ತಾಳೆ :—ಜಗದೊಡೆಯನೂ ಕ್ಷೇತ್ರ, ತೀರ್ಥಗಳ ಸ್ವರೂಪನೂ ಆದ ಓ ಮಹೇಶ್ವರ! ನೀನು ನನಗೆ ಪ್ರಭಾಸಕ್ಷೇತ್ರ ಮಾಹಾತ್ಮ್ಯವನ್ನು ವಿಸ್ತಾರವಾಗಿ ಹೇಳು.

೩. ಮಹೇಶ್ವರ ! ಆ ಪ್ರಭಾಸಕ್ಷೇತ್ರದಲ್ಲಿ ನೀನು ಮೂಢಮಾನವರಿಗೆ ಹೇಗೆ ಪ್ರಸನ್ನನಾಗುವೆ ? ಆ ಕ್ಷೇತ್ರದಲ್ಲಿ ಮಾಡಿದ ಜಪ, ದಾನ, ಹೋಮ, ಯಜ್ಞ, ತಪಸ್ಸು ಇವುಗಳು ಯಾವ ಕಾರಣದಿಂದ ಅಕ್ಷಯವಾಗುವುವು ?

೪. ಶಂಕರ ! ಅನೇಕ ಜಾತಿಗಳಲ್ಲಿ ಹಿಂದೆ ಮಾಡಿದ ಪಾಪಗಳು ಹೇಗೆ ಕ್ಷಯಿಸುವುವು ? ಅದನ್ನು ನನಗೆ ಹೇಳು.

೫. ಪ್ರಭಾಸವೊಂದೇ ಸಕಲ ತೀರ್ಥಗಳಲ್ಲಿ ಉತ್ತಮವಾದರೆ ಅನೇಕ ಇತರ ತೀರ್ಥಗಳಿಂದಾಗತಕ್ಕದೇನು ?

ಏಕಂ ಯದಿ ಭವೇತ್ತೀರ್ಥಂ ಮನೋ ನಿಃಸಂಶಯಂ ಭವೇತ್ ।
ಬಹುತ್ವೇ ಸತಿ ತೀರ್ಥಾನಾಂ ಮನೋ ವಿಚಲತೇ ನೃಣಾಂ ॥ ೬ ॥
ತಸ್ಮಾತ್ಸರ್ವಂ ಪರಿತ್ಯಜ್ಯ ತೀರ್ಥಜಾಲಂ ಸವಿಸ್ತರಂ ।
ಪ್ರಭಾಸಸ್ಯೈವ ಮಾಹಾತ್ಮ್ಯಂ ಕಥಯಸ್ವ ಸುರೇಶ್ವರ ॥ ೭ ॥
ಕ್ಷೇತ್ರಪ್ರಮಾಣಂ ಸೀಮಾಂ ಚ ಕ್ಷೇತ್ರಸಾರಂ ಹಿ ಯತ್ಪ್ರಭೋ ।
ವಕ್ತುಮರ್ಹಸಿ ತತ್ಸರ್ವಂ ಪರಂ ಕೌತೂಹಲಂ ಹಿ ಮೇ ॥ ೮ ॥

ಈಶ್ವರ ಉವಾಚ: —

ಶೃಣು ದೇವಿ ಪ್ರವಕ್ಷ್ಯಾಮಿ ಕ್ಷೇತ್ರಾಣಾಂ ಕ್ಷೇತ್ರಮುತ್ತಮಂ ।
ಸರ್ವಕ್ಷೇತ್ರೇಷು ಯತ್ಕ್ಷೇತ್ರಂ ಪ್ರಭಾಸಂ ತು ಪ್ರಿಯಂ ಮಮ ॥ ೯ ॥
ಪ್ರಭಾಸೇ ತು ಪರಾ ಸಿದ್ಧಿಃ ಪ್ರಭಾಸೇ ತು ಪರಾ ಗತಿಃ ॥
ಯತ್ರ ಸನ್ನಿಹಿತೋ ನಿತ್ಯಮಹಂ ಭದ್ರೇ ನಿರಂತರಂ ॥ ೧೦ ॥
ತಸ್ಯ ಪ್ರಮಾಣಂ ವಕ್ಷ್ಯಾಮಿ ಸರ್ವಸೀಮಾಸಮನ್ವಿತಂ ।
ಕ್ಷೇತ್ರಂ ತು ತ್ರಿವಿಧಂ ಪ್ರೋಕ್ತಂ ತತ್ತೇ ವಕ್ಷ್ಯಾಮ್ಯನುಕ್ರಮಾತ್ ॥ ೧೧ ॥
ಕ್ಷೇತ್ರಂ ಪೀಠಂ ಗರ್ಭಗೃಹಂ ಪ್ರಭಾಸಸ್ಯ ಪ್ರಕೀರ್ತ್ಯತೇ ।
ಯಥಾಕ್ರಮಂ ಫಲಂ ತಸ್ಯ ಕೋಟಿ ಕೋಟಿಗುಣಂ ಸ್ಮೃತಂ ॥ ೧೨ ॥

---

೬. ತೀರ್ಥವೊಂದೇ ಇದ್ದರೆ ಮನಸ್ಸು ಸ್ಥಿರವಾದೀತು. ತೀರ್ಥಗಳು ಬಹಳವಾಗಿದ್ದರೆ ಮಾನವರ ಮನಸ್ಸು ಚಂಚಲವಾಗುವುದು.

೭. ಸುರನಾಥ! ಆದುದರಿಂದ ಸಕಲ ತೀರ್ಥಗಳನ್ನೂ ಬಿಟ್ಟು ಪ್ರಭಾಸ ತೀರ್ಥದ ಮಾಹಾತ್ಮ್ಯವನ್ನು ಮಾತ್ರ ನನಗೆ ಹೇಳು.

೮. ಸ್ವಾಮಿನ್! ಕ್ಷೇತ್ರದ ಪ್ರಮಾಣವನ್ನೂ, ಎಲ್ಲೆಯನ್ನೂ, ಸಾರವನ್ನೂ ಸಂಪೂರ್ಣವಾಗಿ ನನಗೆ ಹೇಳು. ನಾನು ಅತ್ಯಂತ ಕುತೂಹಲಗೊಂಡಿದ್ದೇನೆ.

೯. ಈಶ್ವರನು ಹೇಳುತ್ತಾನೆ:—ದೇವಿ! ಹೇಳುವೆನು ಕೇಳು. ಸಮಸ್ತ ಕ್ಷೇತ್ರಗಳಲ್ಲಿ ಉತ್ತಮವಾದ ಪ್ರಭಾಸಕ್ಷೇತ್ರವು ನನಗೆ ಪ್ರಿಯವಾದುದು.

೧೦. ಆ ಪ್ರಭಾಸಕ್ಷೇತ್ರದಲ್ಲಿ ಉತ್ತಮಸಿದ್ಧಿಯೂ, ಗತಿಯೂ ಲಭಿಸುವುದು. ಮಂಗಳಕರಳೆ! ನಾನು ಯಾವಾಗಲೂ ಅಲ್ಲಿ ಸನ್ನಿಹಿತನಾಗಿರುವೆನು.

೧೧. ಎಲ್ಲೆಯೊಡನೆ ಆ ಕ್ಷೇತ್ರದ ಸಮಸ್ತ ಪ್ರಮಾಣವನ್ನೂ (ಅಳತೆಯನ್ನು) ಹೇಳುವೆನು. ಕ್ಷೇತ್ರವು ಮೂರು ವಿಧವು. ಅದನ್ನು ನಿನಗೆ ಕ್ರಮವಾಗಿ ತಿಳಿಸುವೆನು.

೧೨. ಪ್ರಭಾಸ ಕ್ಷೇತ್ರವು ಕ್ಷೇತ್ರ, ಪೀಠ, ಗರ್ಭಗೃಹವೆಂದು ಮೂರು ಬಗೆಯಾಗಿರುವುದು. ಅವುಗಳ ಫಲವು ಕ್ರಮವಾಗಿ ಕೋಟಿ ಮಡಿಯಷ್ಟು ಹೆಚ್ಚಾಗಿರುವುವು.

ಕ್ಷೇತ್ರಂ ತು ಪ್ರಥಮಂ ಪ್ರೋಕ್ತಂ ತಚ್ಚ ದ್ವಾದಶಯೋಜನಮ್ ।
ಪಂಚಯೋಜನಮಾನೇನ ಕ್ಷೇತ್ರಪೀಠಂ ಪ್ರಕೀರ್ತಿತಮ್ ॥ ೧೩ ॥
ಗರ್ಭಗೃಹಂ ಚ ಗವ್ಯೂತಿಃ ಕರ್ಣಿಕಾ ಸಾ ಮಮ ಪ್ರಿಯಾ ।
ಕ್ಷೇತ್ರಸೀಮಾಂ ಪ್ರವಕ್ಷ್ಯಾಮಿ ಶೃಣು ದೇವಿ ಯಥಾಕ್ರಮಮ್ ॥ ೧೪ ॥
ಆಯಾಮವ್ಯಾಸತಶ್ಚೈವ ಆದಿಮಧ್ಯಾಂತಸಂಸ್ಥಿತಮ್ ॥
ಪೂರ್ವೇ ತಪ್ತೋದಕಸ್ವಾಮೀ ಪಶ್ಚಿಮೇ ಮಾಧವಃ ಸ್ಮೃತಃ ॥ ೧೫ ॥
ದಕ್ಷಿಣೇ ಸಾಗರಸ್ತದ್ವದ್ಭದ್ರಾ ನದ್ಯುತ್ತರೇ ಮತಾ ।
ಏವಂ ಸೀಮಾ ಸಮಾಯುಕ್ತಂ ಕ್ಷೇತ್ರಂ ದ್ವಾದಶಯೋಜನಮ್ ॥ ೧೬ ॥
ಏತತ್ಪ್ರಾಭಾಸಿಕಂ ಕ್ಷೇತ್ರಂ ಸರ್ವಪಾತಕನಾಶನಮ್ ॥
ತನ್ಮಧ್ಯೇ ಪೀಠಿಕಾ ಪ್ರೋಕ್ತಾ ಪಂಚಯೋಜನವಿಸ್ತೃತಾ ॥ ೧೭ ॥
ನ್ಯಂಕುಮತ್ಯಾಃ ಪರೇಣೈವ ವಜ್ರಿಣ್ಯಾಃ ಪೂರ್ವತಸ್ತಥಾ ।
ಮಾಹೇಶ್ವರ್ಯಾ ದಕ್ಷಿಣತಃ ಸಮುದ್ರೋತ್ತರತಸ್ತಥಾ ॥ ೧೮ ॥
ಆಯಾಮವ್ಯಾಸತಶ್ಚೈವ ಪಂಚಯೋಜನವಿಸ್ತರಮ್ ।
ಪೀಠಮೇತತ್ಸಮಾಖ್ಯಾತಮಥೋ ಗರ್ಭಗೃಹಂ ಶೃಣು ॥ ೧೯ ॥

೧೩–೧೬. ಆ ಕ್ಷೇತ್ರವು ಹನ್ನೆರಡು ಗಾವುದಗಳ ಪ್ರಮಾಣವುಳ್ಳುದು. ಪೀಠವು ಐದು ಗಾವುದಗಳ ಪ್ರಮಾಣವಾದುದು. ಗರ್ಭಗೃಹವು ನಾಲ್ಕು ಮೈಲಿ ಪ್ರಮಾಣವುಳ್ಳುದು. ಅದು ನನಗೆ ಪ್ರಿಯವಾದುದು. ಆ ಕ್ಷೇತ್ರದ ಆದಿ, ಮಧ್ಯ, ಅಂತ್ಯದಲ್ಲಿರುವ ಉದ್ದಗಲದಿಂದ ಎಲ್ಲೆಯನ್ನು ಹೇಳುವೆನು, ಕೇಳು. ಪೂರ್ವದಿಕ್ಕಿನಲ್ಲಿ ತಪ್ತೋದಕಸ್ವಾಮಿಯೂ, ಪಶ್ಚಿಮದಲ್ಲಿ ಮಾಧವನೂ, ದಕ್ಷಿಣದಲ್ಲಿ ಸಮುದ್ರವೂ, ಉತ್ತರದಲ್ಲಿ ಭದ್ರಾನದಿಯೂ ಇರುವುದು. ಹೀಗೆ ಎಲ್ಲೆಯಿಂದ ಕೂಡಿದ ಆ ಕ್ಷೇತ್ರವು ಹನ್ನೆರಡು ಗಾವುದಗಳ ಪ್ರಮಾಣವುಳ್ಳುದು.

೧೭. ಈ ಪ್ರಭಾಸಕ್ಷೇತ್ರವು ಸಕಲ ಪಾಪಗಳನ್ನೂ ಪರಿಹರಿಸುವುದು. ಅದರ ನಡುವೆ ಇರುವ ಪೀಠವು ಐದು ಗಾವುದ ವಿಸ್ತಾರವಾದುದು.

೧೮–೧೯. ನ್ಯಂಕುಮತೀನದಿಯ ಪಶ್ಚಿಮದಲ್ಲಿಯೂ, ವಜ್ರಿಣಿಯ ಪೂರ್ವದಿಕ್ಕಿನಲ್ಲಿಯೂ, ಮಾಹೇಶ್ವರಿಯ ದಕ್ಷಿಣದಲ್ಲಿಯೂ, ಸಮುದ್ರದ ಉತ್ತರದಲ್ಲಿಯೂ ಇರುವ ಈ ಪೀಠವು ಉದ್ದಗಲದಿಂದ ಐದು ಗಾವುದ ವಿಸ್ತಾರವಾದುದು. ಅನಂತರ ಗರ್ಭಗೃಹವನ್ನು ಕೇಳು.

ದಕ್ಷಿಣೋತ್ತರತೋ ಯಾವತ್ಸಮುದ್ರಾತ್ಕೌರವೇಶ್ವರೀ ।
ಪೂರ್ವಪಶ್ಚಿಮತೋ ಯಾವದ್ಗೋಮುಖಾಚ್ಚಾಶ್ವಮೇಧಿಕಂ ।
ಏತದ್ಗರ್ಭಗೃಹಂ ಪ್ರೋಕ್ತಂ ಕೈಲಾಸಾನ್ಮಮ ವಲ್ಲಭಂ ॥ ೨೦ ॥
ಅತ್ರಾಂತರೇ ತು ದೇವೇಶಿ ಯಾನಿ ತೀರ್ಥಾನಿ ಭೂತಲೇ ।
ವಾಪೀಕೂಪತಡಾಗಾನಿ ದೇವತಾಯತನಾನಿ ಚ ॥ ೨೧ ॥
ಸರಾಂಸಿ ಸರಿತಶ್ಚೈವ ಪಲ್ವಲಾನಿ ಹ್ರದಾಸ್ತಥಾ ।
ತಾನಿ ಮೇಧ್ಯಾನಿ ಸರ್ವಾಣಿ ಸರ್ವಪಾಪಹರಾಣಿ ಚ ॥ ೨೨ ॥
ಯತ್ರ ತತ್ರ ನರಃ ಸ್ನಾತ್ವಾ ಸ್ವರ್ಗಲೋಕೇ ಮಹೀಯತೇ ॥
ಕ್ಷೇತ್ರಸ್ಯ ಪ್ರಥಮೋ ಭಾಗೋ ಮೇಧ್ಯೋ ಮಾಹೇಶ್ವರಃ ಸ್ಮೃತಃ ॥ ೨೩ ॥
ದ್ವಿತೀಯೋ ವೈಷ್ಣವೋ ಭಾಗೋ ಬ್ರಹ್ಮಭಾಗಸ್ತೃತೀಯಕಃ ।
ತೀರ್ಥಾನಾಂ ಕೋಟಿರೇಕಾ ತು ಬ್ರಾಹ್ಮೇ ಭಾಗೇ ವ್ಯವಸ್ಥಿತಾ ॥ ೨೪ ॥
ವೈಷ್ಣವೇ ಕೋಟಿರೇಕಾ ತು ತೀರ್ಥಾನಾಂ ವರವರ್ಣಿನಿ ।
ಸಾರ್ಧಕೋಟಿಸ್ತು ಸಂಪ್ರೋಕ್ತಾ ರುದ್ರಭಾಗೇ ಚ ಮಧ್ಯತಃ ॥ ೨೫ ॥
ಏವಂ ದೇವಿ ಸಮಾಖ್ಯಾತಂ ತತ್ಕ್ಷೇತ್ರಂ ಹಿ ತ್ರಿದೈವತಂ ।
ಗುಹ್ಯಾದ್ಗುಹ್ಯತರಂ ಕ್ಷೇತ್ರಂ ಮಮ ಪ್ರಿಯತರಂ ಶುಭೇ ॥ ೨೬ ॥

---

೨೦. ಸಮುದ್ರದಿಂದ ದಕ್ಷಿಣೋತ್ತರದಲ್ಲಿರುವ ಕೌರವೇಶ್ವರಿಯೂ, ಗೋಮುಖದಿಂದ ಪೂರ್ವ ಪಶ್ಚಿಮದಲ್ಲಿರುವ ಅಶ್ವಮೇಧಿಕವೂ ಗರ್ಭಗೃಹದ ಎಲ್ಲೆಯಾಗಿರುವುದು. ಇದು ಕೈಲಾಸಕ್ಕಿಂತ ನನಗೆ ಪ್ರಿಯವಾದುದು.

೨೧-೨೨. ದೇವೇಶಿ ! ಈ ಮಧ್ಯದಲ್ಲಿರುವ ಭೂಭಾಗದಲ್ಲಿನೆಲೆಸಿರುವ ಸಕಲ ತೀರ್ಥಗಳೂ, ವಾಪೀ, ಕೂಪ ತಟಾಕ ದೇವಾಲಯ, ಸರೋವರ, ನದಿ, ಕಲ್ಯಾಣಿ ಮಡುಗಳೂ ಎಲ್ಲವೂ ಪವಿತ್ರವೂ, ಸಕಲ ಪಾಪ ಪರಿಹಾರಕವೂ ಆಗಿರುವುವು.

೨೩-೨೫. ಇವುಗಳಲ್ಲಿ ಎಲ್ಲಿಯಾದರೂ ಮನುಷ್ಯನು ಮಿಂದರೆ ಅವನು ಸ್ವರ್ಗ ಲೋಕದಲ್ಲಿ ಪೂಜ್ಯನಾಗುವನು. ಆ ಕ್ಷೇತ್ರದ ಮೊದಲನೆಯ ಭಾಗವು ಪವಿತ್ರವಾದ ಮಾಹೇಶ್ವರ ಭಾಗವೆಂದೂ, ಎರಡನೆಯದು ವೈಷ್ಣವಭಾಗವೆಂದೂ, ಮೂರನೆಯದು ಬ್ರಹ್ಮಭಾಗವೆಂದೂ ವಿಖ್ಯಾತವಾಗಿದೆ. ಈ ಬ್ರಾಹ್ಮಭಾಗದಲ್ಲಿ ಒಂದು ಕೋಟಿ ತೀರ್ಥಗಳೂ, ವೈಷ್ಣವಭಾಗದಲ್ಲಿ ಒಂದು ಕೋಟಿ ತೀರ್ಥಗಳೂ, ಮಧ್ಯದಲ್ಲಿರುವ ರುದ್ರಭಾಗದಲ್ಲಿ ಒಂದುವರೆ ಕೋಟಿ ತೀರ್ಥಗಳೂ, ನೆಲೆಸಿರುವುವು.

೨೬. ದೇವಿ ! ಹೀಗೆ ಬ್ರಹ್ಮ ವಿಷ್ಣು ಮಹೇಶ್ವರರೆಂಬ ಮೂರು ದೇವತೆಗಳುಳ್ಳ ಆ ತೀರ್ಥವನ್ನು ಹೇಳಿರುವೆನು. ಅತಿಗುಹ್ಯವಾದ ಆ ತೀರ್ಥವು ನನಗೆ ಅತ್ಯಂತ ಪ್ರಿಯವಾದುದು.

ತಿಸ್ರಃ ಕೋಟ್ಯೋಽರ್ಧಕೋಟಿಶ್ಚ ಕ್ಷೇತ್ರೇ ಪ್ರೋಕ್ತಾ ವಿಭಾಗತಃ ।
ಯಾತ್ರಾ ತು ತ್ರಿವಿಧಾ ಜ್ಞೇಯಾ ತಾಂ ಶೃಣುಷ್ವ ವರಾನನೇ ॥ ೨೭ ॥
ರೌದ್ರೀ ತು ಪ್ರಥಮಾ ಯಾತ್ರಾ ವೈಷ್ಣವೀ ಚ ದ್ವಿತೀಯಿಕಾ ।
ಬ್ರಾಹ್ಮೀ ತೃತೀಯಾ ಸಂಖ್ಯಾತಾ ಸರ್ವಪಾತಕನಾಶಿನೀ ॥ ೨೮ ॥
ಬ್ರಾಹ್ಮೇ ವಿಭಾಗೇ ಸಂಪ್ರೋಕ್ತಾ ಇಚ್ಛಾಶಕ್ತಿರ್ವರಾನನೇ ।
ಕ್ರಿಯಾ ಚ ವೈಷ್ಣವೇ ಭಾಗೇ ದ್ವಿತೀಯೇ ತು ಪ್ರಕೀರ್ತಿತಾ ॥ ೨೯ ॥
ರೌದ್ರೇ ಭಾಗೇ ತೃತಿಯೇ ತು ಜ್ಞಾನಶಕ್ತಿರ್ವರಾನನೇ ।
ಯದಿ ಪಾಪೋ ಯದಿ ಶಠೋ ಯದಿ ನೈಷ್ಕೃತಿಕೋ ನರಃ ॥ ೩೦ ॥
ನಿರ್ಮುಕ್ತಃ ಸರ್ವಪಾಪೇಭ್ಯೋ ಮಧ್ಯಭಾಗೇ ವಸೇತ್ತು ಯಃ ।
ಹಿಮವಂತಂ ಪರಿತ್ಯಜ್ಯ ಪರ್ವತಂ ಗಂಧಮಾದನಂ ॥ ೩೧ ॥
ಕೈಲಾಸಂ ನಿಷಧಂ ಚೈವ ಮೇರುಪೃಷ್ಠಂ ಮಹಾದ್ಯುತಿಂ ।
ರಮ್ಯಂ ತ್ರಿಶಿಖರಂ ಚೈವ ಮಾನಸಂ ಚ ಮಹಾಗಿರಿಂ ॥ ೩೨ ॥
ದೇವೋದ್ಯಾನಾನಿ ರಮ್ಯಾಣಿ ನಂದನಂ ವನಮೇವ ಚ ।
ಸ್ವರ್ಗಸ್ಥಾನಾನಿ ರಮ್ಯಾಣಿ ತೀರ್ಥಾನ್ಯಾಯತನಾನಿ ಚ ।
ತಾನಿ ಸರ್ವಾಣಿ ಸಂತ್ಯಜ್ಯ ಪ್ರಭಾಸೇ ತು ರತಿರ್ಮಮ ॥ ೩೩ ॥

---

೨೭. ಆ ಕ್ಷೇತ್ರದಲ್ಲಿ ವಿಭಾಗ ಕ್ರಮದಿಂದ ನೆಲಸಿರುವ ಮೂರುವರೆಕೋಟಿ ತೀರ್ಥಗಳನ್ನು ಹೇಳಿರುವೆನು. ಸುಂದರಿ ! ಆ ತೀರ್ಥಯಾತ್ರೆಯೂ ಮೂರು ಬಗೆಯಾಗಿರುವುದು. ಅದನ್ನು ಕೇಳು.

೨೮. ರೌದ್ರೀ, ವೈಷ್ಣವೀ, ಬ್ರಾಹ್ಮೀ ಎಂದು ಸಕಲ ಪಾತಕಗಳನ್ನು ನಾಶಗೊಳಿಸುವುವು ಮೂರು ಬಗೆಯಾಗಿರುವುವು ಆ ಯಾತ್ರೆಗಳು.

೨೯-೩೩. ಸುಂದರಿ ! ಬ್ರಾಹ್ಮಭಾಗದಲ್ಲಿ ಇಚ್ಛಾಶಕ್ತಿಯೂ, ಎರಡನೆಯ ವೈಷ್ಣವಭಾಗದಲ್ಲಿ ಕ್ರಿಯಾಶಕ್ತಿಯೂ, ಮೂರನೆಯ ರೌದ್ರಭಾಗದಲ್ಲಿ ಜ್ಞಾನಶಕ್ತಿಯೂ, ಇರುವುದು. ಮಧ್ಯಭಾಗದಲ್ಲಿ ವಾಸಿಸುವ ನರನು ಪಾಪಿಯಾಗಲಿ, ಮೂರ್ಖನಾಗಲಿ, ಪ್ರಾಯಶ್ಚಿತ್ತವಿಲ್ಲದವನಾಗಲಿ ಅವನು ಸಕಲ ಪಾಪಗಳಿಂದಲೂ ಮುಕ್ತನಾಗುವನು. ಹಿಮಾಲಯ, ಗಂಧಮಾದನಪರ್ವತ, ಕೈಲಾಸ, ನಿಷಧ, ಮೇರು, ತ್ರಿಶಿಖರವುಳ್ಳ ಮಾನಸ ಮಹಾಗಿರಿ, ರಮ್ಯವಾದ ದೇವೋದ್ಯಾನ, ನಂದನವನ, ಮನೋಹರವಾದ ಸ್ವರ್ಗಪ್ರದೇಶಗಳು, ತೀರ್ಥಗಳು, ದೇವಾಲಯಗಳು ಇವುಗಳನ್ನೆಲ್ಲಾ ಬಿಟ್ಟು ಆ ಪ್ರಭಾಸದಲ್ಲಿ ನನಗೆ ಅತ್ಯಂತ ಪ್ರೀತಿಯಿರುವುದು.

ಯಸ್ತತ್ರ ವಸತೇ ದೇವಿ ಸಂಯತಾತ್ಮಾ ಸಮಾಹಿತಃ ।
ತ್ರಿಕಾಲಮಪಿ ಭುಂಜಾನೋ ವಾಯುಭಕ್ಷಸಮೋ ಭವೇತ್ ॥ ೩೪ ॥
ವಿಘ್ನೈರಾಲೋಡ್ಯಮಾನೋಽಪಿ ಯಃ ಪ್ರಭಾಸಂ ನ ಮುಂಚತಿ ।
ಸ ಮುಂಚತಿ ಜರಾಂ ಮೃತ್ಯುಂ ಜನ್ಮಚಕ್ರಮಶಾಶ್ವತಂ ॥ ೩೫ ॥
ಜನ್ಮಾಂತರಶತೈರ್ದೇವಿ ಯೋಗೋ ವಾ ಯದಿ ಲಭ್ಯತೇ ।
ಮೋಕ್ಷಸ್ಯ ಚ ಸಹಸ್ರೇಣ ಜನ್ಮನಾಂ ಲಭ್ಯತೇ ನ ಚ ॥ ೩೬ ॥
ಪ್ರಭಾಸೇ ತು ಮಹಾದೇವಿ ಯೇ ಸ್ಥಿತಾ ಕೃತನಿಶ್ಚಯಾಃ ।
ಏಕೇನ ಜನ್ಮನಾ ತೇಷಾಂ ಮೋಕ್ಷೋ ನೈವಾತ್ರ ಸಂಶಯಃ ॥ ೩೭ ॥
ಪ್ರಭಾಸೇ ತು ಸ್ಥಿತಾ ಯೇ ವೈ ಬ್ರಾಹ್ಮಣಾಃ ಸಂಶಿತವ್ರತಾಃ ।
ಮೃತ್ಯುಂಜಯೇನ ಸಂಯುಕ್ತಂ ಜಪಂತಿ ಶತರುದ್ರಿಯಂ ॥ ೩೮ ॥
ಕಾಲಾಗ್ನಿರುದ್ರಸಾನ್ನಿಧ್ಯೇ ದಕ್ಷಿಣಾಂ ದಿಶಮಾಶ್ರಿತಾಃ ।
ಜ್ಞಾನಂ ಚೋತ್ಪದ್ಯತೇ ತತ್ರ ಷಣ್ಮಾಸಾಭ್ಯಂತರೇಣ ತು ॥ ೩೯ ॥
ಶಿವಸ್ತು ಪ್ರೋಚ್ಯತೇ ವೇದೋ ನಾಮಪರ್ಯಾಯವಾಚಕೈಃ ।
ತಸ್ಯ ಚಾತ್ಮಸ್ವರೂಪಂ ತು ಶತರುದ್ರಂ ಪ್ರಕೀರ್ತಿತಂ ॥ ೪೦ ॥

---

೩೪. ದೇವಿ ! ಆ ತೀರ್ಥದಲ್ಲಿ ಜಿತೇಂದ್ರಿಯನಾಗಿಯೂ, ಸಮಾಧಾನ ಚಿತ್ತವುಳ್ಳವನಾಗಿಯೂ ವಾಸಿಸುವವನು ಮೂರು ಹೊತ್ತು ಊಟಮಾಡುತ್ತಿದ್ದರೂ ಗಾಳಿ ಮಾತ್ರ ಆಹಾರವುಳ್ಳ ಮುನಿಯಂತಾಗುವನು.

೩೫. ವಿಘ್ನಗಳಿಂದ ಪೀಡಿತನಾದರೂ ಆ ಕ್ಷೇತ್ರವನ್ನು ತ್ಯಜಿಸದ ಮಾನವನು ಮುಪ್ಪು, ಮರಣ, ಅಸ್ಥಿರವಾದ ಜನ್ಮ ಇವುಗಳನ್ನು ಬಿಡುವನು.

೩೬. ದೇವಿ ! ಒಂದುವೇಳೆ ಅನೇಕ ಜನ್ಮಗಳಿಂದಾಗಲಿ ಯೋಗವು ಲಭಿಸೀತು. ಆದರೆ ಸಾವಿರ ಜನ್ಮಗಳಿಂದಲೂ ಮೋಕ್ಷವು ದೊರೆಯುವುದಿಲ್ಲ.

೩೭. ಮಹಾದೇವಿ ! ಪ್ರಭಾಸಕ್ಷೇತ್ರದಲ್ಲಿ ದೃಢವಾಗಿ ನೆಲೆಸಿದ ಮಾನವರು ಒಂದು ಜನ್ಮದಲ್ಲಿಯೇ ಮೋಕ್ಷವನ್ನು ನಿಶ್ಚಯವಾಗಿಯೂ ಪಡೆಯುವರು.

೩೮-೩೯. ಆ ಪ್ರಭಾಸಕ್ಷೇತ್ರದಲ್ಲಿರುವ ತೀಕ್ಷ್ಣವ್ರತವುಳ್ಳ ಬ್ರಾಹ್ಮಣರು ಕಾಲಾಗ್ನಿ ರುದ್ರನ ಹತ್ತಿರ ದಕ್ಷಿಣ ದಿಕ್ಕಿನಲ್ಲಿ ಕುಳಿತು ಮೃತ್ಯುಂಜಯ ಮಂತ್ರದೊಡನೆ ಶತರುದ್ರಿಯವನ್ನು ಜಪಿಸಿದರೆ (ಪಾರಾಯಣ ಮಾಡಿದರೆ) ಅವರಿಗೆ ಆರು ತಿಂಗಳಲ್ಲಿ ಜ್ಞಾನೋದಯವಾಗುವುದು.

೪೦. ನಾಮಧೇಯದ ಪರ್ಯಾಯಶಬ್ದದಿಂದ ಶಿವನು ವೇದವೆನ್ನಿಸಿಕೊಳ್ಳುವನು. (ವೇದವೆಂಬುದು ಶಿವನಿಗೆ ಮತ್ತೊಂದು ನಾಮವು) ಆ ಶಿವನ ಆತ್ಮಸ್ವರೂಪವೇ ಶತರುದ್ರವು.

ಕಲ್ಪೇಷು ವೇದಾಶ್ಚ ಪುನಃ ಪುನರಾವರ್ತಕಾಃ ಸ್ಮೃತಾಃ ।
ಮಂತ್ರಾಶ್ಚೈವ ತಥಾ ದೇವಿ ಮುಕ್ತ್ವಾ ತು ಶತರುದ್ರಿಯಂ ॥ ೪೧ ॥
ಈದೃಶಂ ಚೈವ ತು ಮಂತ್ರೇಣ ಮಾಮೇವ ಹಿ ಯಜಂತಿ ಯೇ ।
ಪ್ರಭಾಸಕ್ಷೇತ್ರಮಾಸಾದ್ಯ ತೇ ಮುಕ್ತಾ ನಾಽತ್ರ ಸಂಶಯಃ ॥ ೪೨ ॥
ಸಮಂತ್ರೋಽಮಂತ್ರಕೋ ವಾಽಪಿ ಯಸ್ತತ್ರ ವಸತೇ ನರಃ ।
ಸೋಽಪಿ ಯಾಂ ಗತಿಮಾಪ್ನೋತಿ ಯಜ್ಞೈರ್ದಾನೈರ್ನ ಸಾಧ್ಯತೇ ॥ ೪೩ ॥
ಅಸ್ಮಿನ್ ಕ್ಷೇತ್ರೇ ಸ್ವಯಂಭೂಶ್ಚ ಸ್ಥಿತಸ್ಸಾಕ್ಷಾನ್ಮಹೇಶ್ವರಃ ।
ರುದ್ರಾಣಾಂ ಕೋಟಯಶ್ಚೈವ ಪ್ರಭಾಸೇ ಸಂವ್ಯವಸ್ಥಿತಾಃ ॥ ೪೪ ॥
ಧ್ಯಾಯಮಾನಾಸ್ತಥೋಂಕಾರಃ ಸ್ಥಿತಾಃ ಸೋಮೇಶದಕ್ಷಿಣೇ ॥ ೪೫ ॥
ಬ್ರಹ್ಮಾಂಡೋದರಮಧ್ಯೇ ತು ಯಾನಿ ತೀರ್ಥಾನಿ ಸುವ್ರತೇ ।
ಸೋಮೇಶ್ವರಂ ಗಮಿಷ್ಯಂತಿ ವೈಶಾಖಸ್ಯ ಚತುರ್ದಶೀ ॥ ೪೬ ॥
ಮನೋಬುದ್ಧಿರಹಂಕಾರಃ ಕಾಮಕ್ರೋಧೌ ತಥಾಽಪರೇ ।
ಏತೇ ರಕ್ಷಂತಿ ಸತತಂ ಸೋಮೇಶಂ ಪಾಪನಾಶನಂ ॥ ೪೭ ॥
ನ ಸಾ ಗತಿಃ ಕುರುಕ್ಷೇತ್ರೇ ಗಂಗಾದ್ವಾರೇ ತ್ರಿಪುಷ್ಕರೇ ।
ಯಾ ಗತಿರ್ವಿಹಿತಾ ಪುಂಸಾ ಪ್ರಭಾಸಕ್ಷೇತ್ರವಾಸಿನಾಂ ॥ ೪೮ ॥

---

೪೧. ದೇವಿ ! ಕಲ್ಪಗಳಲ್ಲಿ ಶತರುದ್ರಿಯವನ್ನು ಬಿಟ್ಟು ಉಳಿದ ವೇದಗಳೂ ಮಂತ್ರಗಳೂ ಪುನರಾವೃತ್ತಿಯನ್ನು ಹೊಂದುವುವು.

೪೨. ಆ ಪ್ರಭಾಸಕ್ಷೇತ್ರವನ್ನು ಹೊಂದಿ ಸ್ತುತ್ಯನಾದ ನನ್ನನ್ನು ಶತರುದ್ರಿಯ ಮಂತ್ರದಿಂದ ಪೂಜಿಸುವವರು ಮುಕ್ತರಾಗುವರು.

೪೩. ಆ ಕ್ಷೇತ್ರದಲ್ಲಿ ವಾಸಿಸುವವನು ಮಂತ್ರವನ್ನು ಜಪಿಸಲಿ ಜಪಿಸದಿರಲಿ ಅವನು ಯಜ್ಞದಾನಗಳಿಂದ ಹೊಂದಲಸಾಧ್ಯವಾದ ಗತಿಯನ್ನು ಪಡೆಯುವನು.

೪೪–೪೫. ಆ ಕ್ಷೇತ್ರದಲ್ಲಿ ಬ್ರಹ್ಮನೂ, ಮಹೇಶ್ವರನೂ ಇರುವರು. ಕೋಟಿ ರುದ್ರರು ಸೋಮೇಶ್ವರನ ದಕ್ಷಿಣದಲ್ಲಿ ಓಂಕಾರವನ್ನು ಧ್ಯಾನಿಸುತ್ತಿರುವರು.

೪೬. ವೈಶಾಖಮಾಸದ ಚತುರ್ದಶಿಯ ದಿನ ಬ್ರಹ್ಮಾಂಡದಲ್ಲಿರುವ ಸಮಸ್ತ ತೀರ್ಥಗಳೂ ಸೋಮೇಶ್ವರನೆಡೆಗೆ ಹೋಗುವುವು.

೪೭. ಮನಸ್ಸು, ಬುದ್ಧಿ, ಅಹಂಕಾರ, ಕಾಮ, ಕ್ರೋಧ ಮೊದಲಾದವು ಪಾಪನಾಶಕನಾದ ಸೋಮೇಶ್ವರನನ್ನು ಯಾವಾಗಲೂ ರಕ್ಷಿಸುವುವು.

೪೮. ಪ್ರಭಾಸಕ್ಷೇತ್ರದಲ್ಲಿ ವಾಸಿಸುವ ಜನರಿಗೆ ಲಭಿಸುವ ಉತ್ತಮಗತಿಯು ಕುರುಕ್ಷೇತ್ರ, ಗಂಗಾದ್ವಾರ, ತ್ರಿಪುಷ್ಕರಗಳಲ್ಲಿ ಲಭಿಸುವುದಿಲ್ಲ.

ತಿರ್ಯಗ್ಯೋನಿಗತಾಃ ಸತ್ವಾ ಯೇ ಪ್ರಭಾಸೇ ಕೃತಾಲಯಾಃ ।
ಕಾಲೇನ ನಿಧನಂ ಪ್ರಾಪ್ತಾಸ್ತೇಽಪಿ ಯಾಂತಿ ಪರಾಂ ಗತಿಂ ॥ ೪೯ ॥
ತದ್ಗುಹ್ಯಂ ದೇವದೇವಸ್ಯ ತತ್ತೀರ್ಥಂ ತತ್ತಪೋವನಂ ।
ತತ್ರ ಬ್ರಹ್ಮಾದಯೋ ದೇವಾ ನಾರಾಯಣಪುರೋಗಮಾಃ ॥ ೫೦ ॥
ಯೋಗಿನಶ್ಚ ತಥಾ ಸಾಂಖ್ಯಾ ಭಗವಂತಂ ಸನಾತನಂ ।
ಉಪಾಸತೇ ಪ್ರಭಾಸೇ ತು ಮದ್ಭಕ್ತಾ ಮತ್ಪರಾಯಣಾಃ ॥ ೫೧ ॥
ಅಷ್ಟೌ ಮಾಸಾನ್ ವಿಹಾರಃ ಸ್ಯಾದ್ಯತೀನಾಂ ಸಂಯತಾತ್ಮನಾಂ ।
ಏಕೇ ಚ ಚತುರೋ ಮಾಸಾನಷ್ಟೌ ವಾ ನಿಯತಂ ವಸೇತ್ ॥ ೫೨ ॥
ಪ್ರಭಾಸೇ ತು ಪ್ರವಿಷ್ಟಾನಾಂ ವಿಹಾರಸ್ತು ನ ವಿದ್ಯತೇ ।
ಅತ್ರ ಯೋಗಶ್ಚ ಮೋಕ್ಷಶ್ಚ ಪ್ರಾಪ್ಯತೇ ದುರ್ಲಭೋ ನರೈಃ ॥ ೫೩ ॥
ತಸ್ಮಾತ್ಪ್ರಭಾಸಂ ಸಂತ್ಯಜ್ಯ ನಾಽನ್ಯದ್ಗಚ್ಛೇತ್ತಪೋವನಂ ।
ಪ್ರಭಾಸಂ ಯೇ ನ ಸೇವಂತೇ ಮೂಢಾಸ್ತೇ ತಮಸಾವೃತಾಃ ॥ ೫೪ ॥
ವಿಣ್ಮೂತ್ರರೇತಸಾಂ ಮಧ್ಯೇ ಸಂಭವಂತಿ ಪುನಃಪುನಃ ।
ಕಾಮಃ ಕ್ರೋಧಸ್ತಥಾ ಲೋಭೋ ದಂಭಃ ಸ್ತಂಭೋಽಥ ಮತ್ಸರಃ ॥೫೫॥
ನಿದ್ರಾ ತಂದ್ರಾ ತಥಾಽಲಸ್ಯಂ ಪೈಶುನ್ಯಮಿತಿ ತೇ ದಶ ।
ಏತೇ ರಕ್ಷಂತಿ ಸತತಂ ಸೋಮೇಶಂ ತೀರ್ಥನಾಯಕಂ ॥ ೫೬ ॥

---

೪೯. ಆ ಪ್ರಭಾಸದಲ್ಲಿ ವಾಸಿಸುವ ಪಶುಪಕ್ಷಿಗಳೂ ಕಾಲಾಂತರದಲ್ಲಿ ಮರಣವನ್ನು ಹೊಂದಿ ಉತ್ತಮಗತಿಯನ್ನು ಪಡೆಯುವುವು.

೫೦–೫೧. ಅದು ಮಹೇಶ್ವರನ ರಹಸ್ಯ ಪ್ರದೇಶವೂ, ತೀರ್ಥವೂ, ತಪೋವನವೂ ಆಗಿರುವುದು. ಅಲ್ಲಿ ನಾರಾಯಣ ಬ್ರಹ್ಮ ಮೊದಲಾದ ದೇವತೆಗಳೂ, ಯೋಗಿಗಳೂ, ಸಾಂಖ್ಯರೂ ನನ್ನಲ್ಲಿ ಭಕ್ತಿಯುಳ್ಳವರಾಗಿ ಅನಾದಿಯಾದ ಸೋಮೇಶ್ವರನನ್ನು ಸೇವಿಸುತ್ತಾರೆ.

೫೨. ಇಂದ್ರಿಯಜಯಿಗಳಾದ ಯೋಗಿಗಳು ಎಂಟು ತಿಂಗಳು ಸಂಚರಿಸಿ ಒಂದೆಡೆಯಲ್ಲಿ ನಾಲ್ಕು ತಿಂಗಳು ಅಥವಾ ಎಂಟು ತಿಂಗಳು ನಿಯಮದಿಂದ ವಾಸಿಸಬೇಕು.

೫೩. ಪ್ರಭಾಸವನ್ನು ಪ್ರವೇಶಿಸಿದ ಯೋಗಿಗಳೂ ಸಂಚರಿಸಬೇಕಾಗಿರುವುದಿಲ್ಲ. ಇಲ್ಲಿ ಮನುಷ್ಯರು ದುರ್ಲಭವಾದ ಯೋಗಮೋಕ್ಷಗಳನ್ನು ಪಡೆಯುವರು.

೫೪–೫೬. ಆದುದರಿಂದ ಪ್ರಭಾಸವನ್ನು ಬಿಟ್ಟು ಬೇರೆ ತಪೋವನಕ್ಕೆ ಹೋಗಬಾರದು. ತಮೋಗುಣದಿಂದ ಪ್ರಭಾಸವನ್ನು ಸೇವಿಸದ ಮೂಢರು ಮಲ, ಮೂತ್ರ, ರೇತಸ್ಸುಗಳ ನಡುವೆ ಮರಳಿ ಜನಿಸುವರು. ಕಾಮ, ಕ್ರೋಧ, ದಂಭ, ಸ್ತಂಭ (ಮೋಹ) ಮಾತ್ಸರ್ಯ, ನಿದ್ರೆ, ತಂದ್ರಾ, (ಮೂರ್ಛೆ) ಆಲಸ್ಯ, ಚಾಡಿಹೋಕತನ ಇವುಗಳು ಯಾವಾಗಲೂ ತೀರ್ಥಸ್ವಾಮಿಯಾದ ಸೋಮೇಶ್ವರನನ್ನು ರಕ್ಷಿಸುವುವು.

ನ ಪ್ರಭಾಸೇ ಮೃತಃ ಕಶ್ಚಿನ್ನರಕಂ ಯಾತಿ ಕಿಲ್ಬಿಷೀ ।
ಯಾವಜ್ಜೀವಂ ನರೋ ಯಸ್ತು ವಸತೇ ಕೃತನಿಶ್ಚಯಃ ॥ ೫೭ ॥
ಅಗ್ನಿಹೋತ್ರೈಶ್ಚ ಸನ್ನ್ಯಾಸೈರಾಶ್ರಮೈಶ್ಚ ಸುಪಾಲಿತೈಃ ।
ತ್ರಿದಂಡೈರೇಕದಂಡೈಶ್ಚ ಶೈವೈಃ ಪಾಶುಪತೈರಪಿ ॥ ೫೮ ॥
ಏತೈರನ್ಯೈಶ್ಚ ಯತಿಭಿಃ ಪ್ರಾಪ್ಯತೇ ಯತ್ಫಲಂ ಶುಭಂ ।
ತತ್ಸರ್ವಂ ಲಭ್ಯತೇ ದೇವಿ ಶ್ರೀಸೋಮೇಶ್ವರಯಾತ್ರಯಾ ॥ ೫೯ ॥
ಏಕೋ ಹ್ಯರ್ಚಯತೇ ಲಿಂಗಂ ತಪಸ್ಯತಿ ತಥಾಪರಃ ।
ತಯೋರ್ಮಧ್ಯೇ ತು ಶ್ರೇಷ್ಠೋ ಯಃ ಸೋಮೇಶಂ ಚ ಪ್ರಪೂಜಯೇತ್
ಯತ್ತದ್ಯೋಗೇ ಚ ಸಾಂಖ್ಯೇ ಚ ಸಿದ್ಧಾಂತೇ ಪಂಚರಾತ್ರಿಕೇ ।
ಅನ್ಯೈಶ್ಚ ಶಾಸ್ತ್ರೈರ್ವಿಜ್ಞೇಯ ಪ್ರಭಾಸೇ ಸಂವ್ಯವಸ್ಥಿತಂ ॥ ೬೧ ॥
ಲಿಂಗೇ ಚೈವ ಸ್ಥಿತಂ ಸರ್ವಂ ಜಗದೇತಚ್ಚರಾಚರಂ ।
ತಸ್ಮಾಲ್ಲಿಂಗೇ ಸದಾ ದೇವಃ ಪೂಜನೀಯಃ ಪ್ರಯತ್ನತಃ ॥ ೬೨ ॥
ಮಮೈವ ಸಾ ಪರಾ ಮೂರ್ತಿಃ ಶ್ರೀಸೋಮೇಶಾಖ್ಯಯಾ ಸ್ಥಿತಾ ।
ತೇನ ಚೈವಾತ್ಮನಾತ್ಮಾನಮಾರಾಧನಪರೋ ಹ್ಯಹಂ ॥ ೬೩ ॥

೫೭–೫೯. ಪ್ರಭಾಸ ತೀರ್ಥದಲ್ಲಿ ಮೃತನಾದ ಯಾವ ಪಾಪಿಯೂ ನರಕವನ್ನು ಹೊಂದುವುದಿಲ್ಲ. ಇಲ್ಲಿ ಮರಣ ಕಾಲದವರೆಗೆ ಸ್ಥಿರವಾಗಿ ವಾಸಿಸಿದ ನರನು ಶ್ರೀ ಸೋಮೇಶ್ವರನ ಯಾತ್ರೆಯಿಂದ ಅಗ್ನಿಹೋತ್ರಿಗಳೂ, ತ್ರಿದಂಡ ಏಕದಂಡ ಸನ್ನ್ಯಾಸಿಗಳೂ, ಶೈವರೂ, ಪಾಶುಪತರೂ, ಇತರ ಯತಿಗಳೂ ಪಡೆಯುವ ಫಲವನ್ನು ಹೊಂದುವನು.

೬೦. ಶಿವಲಿಂಗವನ್ನು ಪೂಜಿಸುವ ಮತ್ತು ಶಿವನನ್ನು ಕುರಿತು ತಪಸ್ಸನ್ನು ಮಾಡುವವರಿಬ್ಬರ ಮಧ್ಯದಲ್ಲಿ ಸೋಮೇಶ್ವರನನ್ನು ಪೂಜಿಸುವವನೇ ಶ್ರೇಷ್ಠನು.

೬೧. ಯೋಗ, ಸಾಂಖ್ಯ ಸಿದ್ಧಾನ್ತಗಳಲ್ಲಿಯೂ, ಪಾಂಚರಾತ್ರಾಗಮದಲ್ಲಿಯೂ, ಇತರ ಶಾಸ್ತ್ರಗಳಲ್ಲಿಯೂ ಪ್ರತಿಪಾದ್ಯವಾದ ವಿಷಯವು ಪ್ರಭಾಸ ಕ್ಷೇತ್ರದಲ್ಲಿರುವದು.

೬೨. ಈ ಸೋಮೇಶ್ವರಲಿಂಗದಲ್ಲಿ ಸಮಸ್ತ ಚರಾಚರ ಜಗತ್ತು ನೆಲೆಸಿರುವುದು. ಆದುದರಿಂದ ಯಾವಾಗಲೂ ಲಿಂಗದಲ್ಲಿ ಮಹೇಶ್ವರನನ್ನು ಪ್ರಯತ್ನದಿಂದ ಪೂಜಿಸಬೇಕು.

೬೩. ನನ್ನ ಉತ್ತಮ ಮೂರ್ತಿಯೇ ಸೋಮೇಶ್ವರನೆಂಬ ಹೆಸರಿನಿಂದ ಆ ಕ್ಷೇತ್ರದಲ್ಲಿ ನೆಲಸಿರುವುದು. ಆದುದರಿಂದ ನಾನು ನನ್ನನ್ನೇ ಆರಾಧಿಸುತ್ತಿರುವೆನು.

ಅನೇಕಜನ್ಮಸಾಹಸ್ರೈರ್ಭ್ರಮಮಾಣಸ್ತು ಜನ್ಮಭಿಃ ।
ಕಸ್ತಾಂ ಪ್ರಾಪ್ನೋತಿ ವೈ ಮುಕ್ತಿಂ ವಿನಾ ಸೋಮೇಶಪೂಜನಾತ್ ॥ ೧೪ ॥
ಯತ್ಕಿಂಚಿದಶುಭಂ ಕರ್ಮ ಕೃತಂ ಮಾನುಷಬುದ್ಧಿನಾ ।
ತತ್ಸರ್ವಂ ವಿಲಯಂ ಯಾತಿ ಶ್ರೀಸೋಮೇಶ್ವರಪೂಜನಾತ್ ॥ ೧೫ ॥
ಅನೇಕಜನ್ಮಕೋಟೀಭಿರ್ಜಂತುಭಿರ್ಯತ್ಕೃತಂ ಹ್ಯಘಂ ।
ತತ್ಸರ್ವಂ ನಾಶಮಾಯಾತಿ ಶ್ರೀಸೋಮೇಶ್ವರಪೂಜನಾತ್ ॥ ೧೬ ॥
ತೀರ್ಥಾನಿ ಯಾನಿ ಲೋಕೇಽಸ್ಮಿನ್ ಸೇವ್ಯಂತೇ ಪಾಪಮೋಕ್ಷಿಭಿಃ ।
ತಾನಿ ಸರ್ವಾಣಿ ಶುದ್ಧ್ಯರ್ಥಂ ಪ್ರಭಾಸೇ ಸಂವಿಶಂತಿ ಹಿ ॥ ೧೭ ॥
ಯೋಽಸೌ ಕಾಲಾಗ್ನಿರುದ್ರಸ್ತು ಪ್ರೋಚ್ಯತೇ ವೇದವಾದಿಭಿಃ ।
ಸೋಽಯಂ ಭೈರವನಾಮ್ನಾ ತು ಪ್ರಭಾಸೇ ಸಂವ್ಯವಸ್ಥಿತಃ ॥ ೧೮ ॥
ಜನಾನಾಂ ದುಷ್ಕೃತಂ ಸರ್ವಂ ಕ್ಷೇತ್ರಮಧ್ಯೇ ವ್ಯವಸ್ಥಿತಃ ।
ಭೈರವಂ ರೂಪಮಾಸ್ಥಾಯ ನಾಶಯಾಮಿ ಸುರೇಶ್ವರಿ ॥ ೧೯ ॥
ಜಗತ್ಸರ್ವಂ ಚರಿತ್ವಾ ತು ಸ್ಥಿತೋಽಹಂ ಸಚರಾಚರಂ ।
ತೇನ ಭೈರವನಾಮಾಽಹಂ ಪ್ರಭಾಸೇ ಸಂವ್ಯವಸ್ಥಿತಃ ॥ ೨೦ ॥

---

೧೪. ಅನೇಕ ಸಾವಿರ ಜನ್ಮಗಳಲ್ಲಿ ಅಲೆಯುತ್ತಿರುವ ಯಾವ ಮನುಷ್ಯನು ತಾನೇ ಸೋಮೇಶ್ವರನ ಪೂಜೆಯಿಲ್ಲದೆ ಮೋಕ್ಷವನ್ನು ಹೊಂದುವನು ?

೧೫. ಮನುಷ್ಯನು ಬುದ್ಧಿಪೂರ್ವಕವಾಗಿ ಮಾಡಿದ ಅಶುಭ ಕರ್ಮಗಳೆಲ್ಲ ಸೋಮೇಶ್ವರನ ಪೂಜೆಯಿಂದ ನಾಶವಾಗುವುದು.

೧೬. ಪ್ರಾಣಿಗಳು ಅನೇಕ ಕೋಟಿ ಜನ್ಮಗಳಲ್ಲಿ ಮಾಡಿದ ಪಾಪವೆಲ್ಲ ಸೋಮೇಶ್ವರನ ಪೂಜೆಯಿಂದ ಪರಿಹಾರವಾಗುವುದು.

೧೭. ಈ ಲೋಕದಲ್ಲಿ ಪಾಪ ಪರಿಹಾರವನ್ನು ಅಪೇಕ್ಷಿಸುವ ಮಾನವರು ಸೇವಿಸುವ ತೀರ್ಥಗಳೆಲ್ಲ ಶುದ್ಧಿಗಾಗಿ ಪ್ರಭಾಸದಲ್ಲಿ ನೆಲೆಸಿರುವುವು.

೧೮. ವೇದಜ್ಞರು ಹೇಳುವ ಕಾಲಾಗ್ನಿರುದ್ರನೇ ಭೈರವನೆಂಬ ಹೆಸರಿನಿಂದ ಪ್ರಭಾಸತೀರ್ಥದಲ್ಲಿರುವನು.

೧೯. ಸುರೇಶ್ವರಿ ! ನಾನು ಆ ಕ್ಷೇತ್ರದ ಮಧ್ಯದಲ್ಲಿ ಭೈರವನ ರೂಪದಿಂದ ನೆಲೆಸಿ ಜನರ ಪಾಪವನ್ನೆಲ್ಲ ಪರಿಹರಿಸುವೆನು.

೨೦. ನಾನು ಚರಾಚರ ಜಗತ್ತನ್ನೆಲ್ಲ ಸಂಚರಿಸಿ ಬಂದು ಆ ಪ್ರಭಾಸ ಕ್ಷೇತ್ರದಲ್ಲಿರುವೆನು. ಆದ್ದರಿಂದ ನನಗೆ ಭೈರವನೆಂಬ ಹೆಸರು ಬಂದಿರುವುದು.

ಅಗ್ನಿನಾ ಯತ್ರ ತಪ್ತಂ ತು ದಿವ್ಯಾಬ್ದಾನಾಂ ಚತುರ್ಯುಗಂ ।
ಮೇಘವಾಹನಕಲ್ಪೇ ತು ತತ್ರ ಲಿಂಗಂ ಬಭೂವ ಹ ॥ ೭೧ ॥
ಅಗ್ನಿಮೀಡೇತಿ ವೇದೋಕ್ತಪ್ರಭಾವಃ ಸುರಸುಂದರಿ ।
ಕಾಲಾಗ್ನಿರುದ್ರನಾಮಾ ಚ ದೇವೈಃ ಸರ್ವೈರುದಾಹೃತಂ ॥ ೭೨ ॥
ಅಗ್ನೀಶಾನೇತಿ ದೇವೇಶಿ ನಾಮತ್ರಿತಯಮುಚ್ಯತೇ ।
ಕಲ್ಪೇ ಕಲ್ಪೇ ತು ನಾಮಾನಿ ಕಥಿತುಂ ನೈವ ಶಕ್ಯತೇ ।
ಅಸಂಖ್ಯತ್ವಾಚ್ಚ ಕಲ್ಪಾನಾಂ ಬ್ರಹ್ಮಣಾಂ ಚ ವರಾನನೇ ॥ ೭೩ ॥
ಏವಂ ಚೈವ ರಹಸ್ಯಂ ಚ ಮಹಾಗೋಪ್ಯಂ ವರಾನನೇ ।
ಸ್ನೇಹಾನ್ಮಹತ್ಯಾ ಭಕ್ತ್ಯಾ ಚ ಮಯಾ ತೇ ಪರಿಕೀರ್ತಿತಂ ॥ ೭೪ ॥
ಏಕತಸ್ತು ಜಗತ್ಸರ್ವಂ ಕರ್ಮಕಾಂಡೇ ಪ್ರತಿಷ್ಠಿತಂ ।
ಯಜ್ಞದಾನತಪೋಹೋಮೈಃ ಸ್ವಾಧ್ಯಾಯೈಃ ಪಿತೃತರ್ಪಣೈಃ ॥ ೭೫ ॥
ಉಪವಾಸೈರ್ವ್ರತೈಃ ಕೃಚ್ಛ್ರೈಶ್ಚಾಂದ್ರಾಯಣಶತೈಸ್ತಥಾ ।
ಷಡ್ರಾತ್ರೈಶ್ಚ ತ್ರಿರಾತ್ರೈಶ್ಚ ತೀರ್ಥಾದಿಗಮನೈಃ ಪರೈಃ ॥ ೭೬ ॥
ಆಶ್ರಮೈರ್ವಿವಿಧಾಕಾರೈರ್ಯತಿಭಿರ್ಬ್ರಹ್ಮಚಾರಿಭಿಃ ।
ವಾನಪ್ರಸ್ಥೈರ್ಗೃಹಸ್ಥೈಶ್ಚ ವೇದಕರ್ಮಪರಾಯಣೈಃ ॥ ೭೭ ॥
ಅನ್ಯೈಶ್ಚ ವಿವಿಧಾಕಾರೈರ್ಲೋಕಮಾರ್ಗಸ್ಥಿತೈಃ ಶುಭೈಃ ।
ನ ತತ್ಪದಂ ಪರಂ ದೇವಿ ಶಕ್ಯಂ ವೀಕ್ಷಯಿತುಂ ಕ್ವಚಿತ್ ॥ ೭೮ ॥

---

೭೧. ಮೇಘವಾಹನ (ಇಂದ್ರ) ಕಲ್ಪದಲ್ಲಿ ಅಗ್ನಿಯು ಆ ಕ್ಷೇತ್ರದಲ್ಲಿ ನಾಲ್ಕು ಯುಗಗಳ ಕಾಲ ತಪಸ್ಸನ್ನಾಚರಿಸಿದ್ದರಿಂದ ಅಲ್ಲಿ ಲಿಂಗವುದ್ಭವಿಸಿತು.

೭೨-೭೩. ಎಲೌ ಸುರಾಂಗನೆಯೆ ! ವೇದದಿಂದ ಅಗ್ನಿಮೀಡನೆಂದೂ, ದೇವತೆಗಳಿಂದ ಕಾಲಾಗ್ನಿರುದ್ರನೆಂದೂ, ಅಗ್ನೀಶಾನನೆಂದೂ ಆ ಲಿಂಗವು ಮೂರು ನಾಮಧೇಯಗಳನ್ನು ಪಡೆದಿರುವುದು. ಬ್ರಹ್ಮರೂ, ಕಲ್ಪಗಳೂ, ಅಸಂಖ್ಯಾತವಾದ್ದರಿಂದ ಪ್ರತಿಕಲ್ಪಗಳಲ್ಲಿ ಆ ಶಿವಲಿಂಗವು ಹೊಂದಿದ ಹೆಸರನ್ನು ಹೇಳಲು ಸಾಧ್ಯವಿಲ್ಲ.

೭೪. ಸುಂದರಿ ! ಈ ರಹಸ್ಯವು ಗೋಪ್ಯವಾದುದು. ನಾನು ನಿನ್ನಲ್ಲಿರುವ ಸ್ನೇಹದಿಂದಲೂ, ಅತಿಶಯಭಕ್ತಿಯಿಂದಲೂ ನಿನಗೆ ಇದನ್ನು ಹೇಳಿರುವೆನು.

೭೫-೭೮. ಒಂದೆಡೆಯಲ್ಲಿ ಜಗತ್ತೆಲ್ಲ ಕರ್ಮಕಾಂಡವನ್ನವಲಂಬಿಸಿರುವುದು. ಯತಿಗಳು, ಬ್ರಹ್ಮಚಾರಿಗಳು, ವಾನಪ್ರಸ್ಥರು, ಗೃಹಸ್ಥರು, ವೇದೋಕ್ತ ಕರ್ಮಗಳಲ್ಲಿ ಆಸಕ್ತರಾದವರು, ಇತರ ಲೋಕಮಾರ್ಗದಲ್ಲಿ ನಿರತರಾದ ನಾನಾ ಬಗೆಯ ಜನರು ಇವರಿಗೆ ಯಜ್ಞ, ದಾನ, ತಪಸ್ಸು, ಹೋಮ, ವೇದಾಧ್ಯಯನ, ಪಿತೃತರ್ಪಣ,

ಯಾವನ್ನ ಚಾರ್ಚಯೇದ್ದೇವಿ ಸೋಮೇಶಂ ಲಿಂಗನಾಯಕಂ ।
ಲೀಲಯಾ ಪ್ಯಾಪಿ ತ್ರೈದೃಗ್ದೃಷ್ಟಂ ತತ್ಪದಂ ದುರ್ಲಭಂ ಪರಂ ॥ ೭೯ ॥
ಪೂಜಿತೋ ಯ್ಯೈರ್ಜಗನ್ನಾಥಃ ಸೋಮೇಶಃ ಕಿಲ ಭೈರವಃ ।
ತಿರ್ಯಗ್ಯೋನಿಗತಾ ಯೇ ತು ಪಶುಪಕ್ಷಿಪಿಪೀಲಿಕಾಃ ॥ ೮೦ ॥
ಅಂತರ್ಜಲಗತಾ ಯೇ ತು ಕೃಮಿಕೀಟ ಪತಂಗಕಾಃ ।
ಸ್ಥಾವರಾ ಜಂಗಮಾಶ್ಚಾನ್ಯೇ ಮನುಷ್ಯಾಃ ಪಶವಃ ಸ್ತ್ರಿಯಃ ॥ ೮೧ ॥
ಬಾಲಾ ವೃದ್ಧಾಸ್ತಥಾ ಷಂಢಾಃ ಶ್ವಾನಗರ್ದಭವಾಯಸಾಃ ।
ಚಂಡಾಲಾಃ ಪುಕ್ಕಸಾಃ ಶೂದ್ರಾ ಮ್ಲೇಚ್ಛಾ ಯೇಽನ್ಯೇ ವಿಯೋನಿಜಾಃ ॥
ಮೂರ್ಖಾಸ್ತು ಪಂಡಿತಾಶ್ಚಾಪಿ ಯೇ ಚಾನ್ಯೇ ಕುತ್ಸಿತಾ ಭುವಿ ।
ತೇ ಸರ್ವೇ ಮುಕ್ತಿಮಾಯಾಂತಿ ಪ್ರಭಾಸೇ ಯೇ ಮೃತಾಃ ಶುಭೇ ॥ ೮೩ ॥
ಕಾಲಾನಲಸ್ಯ ರುದ್ರಸ್ಯ ಕಾಲರಾಜೇನ ಚಾಗ್ನಿನಾ ।
ದಗ್ಧಾಸ್ತೇ ಜಂತವಃ ಸರ್ವೇ ಪ್ರಭಾಸೇ ಯೇ ಮೃತಾಃ ಶುಭೇ ॥ ೮೪ ॥
ದುರ್ಲಭಂ ತು ಮಮ ಕ್ಷೇತ್ರಂ ಪ್ರಭಾಸಂ ದೇವಿ ಪಾಪಿನಾಂ ।
ನ ತತ್ರ ಲಭತೇ ಮೃತ್ಯುಂ ಪಾಪಾತ್ಮಾ ಲೋಕವಂದಿತೇ ॥ ೮೫ ॥
ಮಯಾ ದಕ್ಷಿಣಭಾಗೇ ಚ ವಿಘ್ನೇಶಃ ಸಂಪ್ರತಿಷ್ಠಿತಃ ।
ಉತ್ತರೇ ದಂಡಪಾಣಿಸ್ತು ಕ್ಷೇತ್ರಮೇತಚ್ಚ ರಕ್ಷತಿ ॥ ೮೬ ॥

ಉಪವಾಸ, ವ್ರತ, ಸಮಸ್ತ ಚಾಂದ್ರಾಯಣಗಳು ಆರು ರಾತ್ರಿ ಮೂರು ರಾತ್ರಿಗಳ ತೀರ್ಥ ಯಾತ್ರೆಗಳು, ನಾನಾವಿಧ ಆಶ್ರಮಗಳು ಇವುಗಳನ್ನಾಚರಿಸಿದರೂ ಸೋಮೇಶ್ವರ ಲಿಂಗವನ್ನರ್ಚಿಸದಿದ್ದರೆ ಆ ಉತ್ತಮ ಮೋಕ್ಷ ಸ್ಥಾನವನ್ನು ನೋಡಲು ಸಾಧ್ಯವಿಲ್ಲ.

೮೦–೮೪. ಪಶು ಪಕ್ಷಿಗಳು, ಜಲಚರ ಪ್ರಾಣಿಗಳು, ಕೃಮಿ, ಕೀಟ, ಪತಂಗಗಳು, ಇತರ ಸ್ಥಾವರ ಜಂಗಮಗಳು, ಪುರುಷರು, ಹೆಂಗಸರು, ಬಾಲಕರು, ಮುದುಕರು, ನಪುಂಸಕರು, ನಾಯಿ, ಕತ್ತೆ, ಕಾಗೆಗಳು, ಚಂಡಾಲರು, ಮಾದಿಗರು, ಶೂದ್ರರು, ಮ್ಲೇಚ್ಛರು, ಇತರ ವಿಲೋಮ ಜಾತಿಯವರು, ಮೂರ್ಖರು, ಪಂಡಿತರು, ದುಷ್ಟರು ಇವರೆಲ್ಲರೂ ಆ ಕ್ಷೇತ್ರದಲ್ಲಿ ಸೋಮೇಶ್ವರನನ್ನು ಪೂಜಿಸಿ ಮೃತರಾದರೆ ಅವರು ಕಾಲಾಗ್ನಿರುದ್ರನ ಅಗ್ನಿಯಿಂದ ದಗ್ಧರಾಗಿ ಮೋಕ್ಷವನ್ನು ಪಡೆಯುವರು.

೮೫. ದೇವಿ ! ಪಾಪಿಗಳಿಗೆ ನನ್ನ ಪ್ರಭಾಸಕ್ಷೇತ್ರವು ಹೊಂದಲಶಕ್ಯವಾದುದು. ಪಾಪಿಷ್ಠನು ಲೋಕಪೂಜ್ಯವಾದ ಆ ಕ್ಷೇತ್ರದಲ್ಲಿ ಮರಣವನ್ನು ಹೊಂದುವುದಿಲ್ಲ.

೮೬. ನಾನು ದಕ್ಷಿಣಭಾಗದಲ್ಲಿ ವಿಘ್ನೇಶನನ್ನು ಸ್ಥಾಪಿಸಿರುವೆನು. ಉತ್ತರ ಭಾಗದಲ್ಲಿರುವ ದಂಡಪಾಣಿಯು ಈ ಕ್ಷೇತ್ರವನ್ನು ರಕ್ಷಿಸುತ್ತಾನೆ.

ತಥಾಽನ್ಯೇ ಗಣಪಾಃ ಸರ್ವೇ ಮದಾಜ್ಞಾವಶವರ್ತಿನಃ ।
ಕ್ಷೇತ್ರಂ ರಕ್ಷಂತಿ ದೇವೇಶಿ ತೇಷಾಂ ನಾಮಾನಿ ಮೇ ಶೃಣು ॥ ೮೭ ॥
ಮಹಾಬಲಸ್ತು ಚಂಡೀಶೋ ಘಂಟಾಕರ್ಣಸ್ತು ಗೋಮುಖಃ ।
ವಿನಾಯಕೋ ಮಹಾನಾದಃ ಕಾಕವಕ್ತ್ರಃ ಶುಭೇಕ್ಷಣಃ ।
ಏಕಾಕ್ಷೋ ದುಂದುಭಿಶ್ಚಂಡಸ್ತಾಲಜಂಘಸ್ತಥೈವ ಚ ॥ ೮೮॥
ಭೂಮಿದಂಡಶ್ಚ ಚಂಡಶ್ಚ ಶಂಕುಕರ್ಣಶ್ಚ ವೈಧೃತಿಃ ।
ತಾಲಚಂಡೋ ಮಹಾತೇಜಾ ವಿಕಟಾಸ್ಯೋ ಹಯಾನನಃ ॥ ೮೯ ॥
ಹಸ್ತಿವಕ್ತ್ರಃ ಶ್ವಾನವಕ್ತ್ರೋ ಬಿಡಾಲವದನಸ್ತಥಾ ।
ಸಿಂಹವ್ಯಾಘ್ರಮುಖಾಶ್ಚಾಽನ್ಯೇ ವೀರಭದ್ರಾದಯಸ್ತಥಾ ॥ ೯೦ ॥
ವಿನಾಯಕಂ ಪುರಸ್ಕೃತ್ಯ ದೇವದೇವಂ ಕಪರ್ದಿನಂ ।
ಏಕಾದಶ ತಥಾ ಕೋಟ್ಯೋ ನಿಯುತಾನಿ ತ್ರಯೋದಶ ॥ ೯೧ ॥
ಅರ್ಬುದಂ ಚ ಗಣಾನಾಂ ಚ ಪ್ರಭಾಸಂ ಕ್ಷೇತ್ರಮಾಶ್ರಿತಾಃ ।
ದ್ವಾರಿದ್ವಾರಿ ಪ್ರಚಂಡಾಸ್ತೇ ಶೂಲಮುದ್ಗರಪಾಣಯಃ ॥ ೯೨ ॥
ಪ್ರಭಾಸಕ್ಷೇತ್ರಂ ರಕ್ಷಂತಿ ದೇವದೇವಸ್ಯ ವೈ ಗೃಹಂ ।
ನ ಕಶ್ಚಿದ್ದುಷ್ಟಬುದ್ಧ್ಯಾ ತು ಪ್ರವಿಶೇದಿತಿ ಸಂಸ್ಥಿತಿಃ ॥ ೯೩ ॥
ಶತಕೋಟಿಗಣೈಶ್ಚಾಽಪಿ ಪೂರ್ವದ್ವಾರಿ ತು ಸಂವೃತಃ ।
ಅಟ್ಟಹಾಸೋ ಗಣೋ ನಾಮ ಪ್ರಭಾಸಂ ತತ್ರ ರಕ್ಷತಿ ॥ ೯೪ ॥

---

೮೭. ದೇವೇಶಿ ! ಇತರ ಎಲ್ಲಾ ಗಣಾಧಿಪತಿಗಳೂ ನನ್ನ ಅಪ್ಪಣೆಯಂತೆ ಕ್ಷೇತ್ರವನ್ನು ರಕ್ಷಿಸುತ್ತಿದ್ದಾರೆ. ಅವರ ಹೆಸರನ್ನು ಹೇಳುತ್ತೇನೆ, ಕೇಳು.

೮೮–೯೦. ಮಹಾಬಲ, ಚಂಡೀಶ, ಘಂಟಾಕರ್ಣ, ಗೋಮುಖ, ವಿನಾಯಕ, ಮಹಾನಾದ, ಕಾಕವಕ್ತ್ರ, ಶುಭೇಕ್ಷಣ, ಏಕಾಕ್ಷ, ದುಂದುಭಿ ಚಂಡ, ತಾಲಜಂಘ, ಭೂಮಿದಂಡ, ಶಂಕುಕರ್ಣ, ವೈಧೃತಿ, ತಾಲಚಂಡ, ಹಯಾನನ, ಹಸ್ತಿವಕ್ತ್ರ, ಶ್ವಾನವಕ್ತ್ರ, ಬಿಡಾಲಮುಖ, ಸಿಂಹಮುಖ, ವ್ಯಾಘ್ರಮುಖ, ವೀರಭದ್ರ ಮೊದಲಾದವರೆ ಆ ಗಣಾಧಿಪತಿಗಳು.

೯೧–೯೩. ವಿನಾಯಕನನ್ನೂ, ಮಹೇಶ್ವರನನ್ನೂ ಮುಂದಿರಿಸಿಕೊಂಡು ಪ್ರಭಾಸ ಕ್ಷೇತ್ರದಲ್ಲಿ ನೆಲೆಸಿರುವ ಇಪ್ಪತ್ತುಮೂರು ಕೋಟಿ ಮೂವತ್ತು ಲಕ್ಷ ಗಣಗಳು ತ್ರಿಶೂಲ, ಮುದ್ಗರಗಳನ್ನು ಧರಿಸಿ ಪ್ರತಿಬಾಗಿಲಿನಲ್ಲಿಯೂ ನಿಂತು ಮಹೇಶ್ವರನ ಮನೆಯಾದ ಪ್ರಭಾಸಕ್ಷೇತ್ರವನ್ನು ಯಾರೂ ದುಷ್ಟಬುದ್ಧಿಯಿಂದ ಪ್ರವೇಶಿಸಬಾರದೆಂದು ರಕ್ಷಿಸುತ್ತಿದ್ದಾರೆ.

೯೪. ಅಟ್ಟಹಾಸನೆಂಬ ಗಣನಾಯಕನು ನೂರುಕೋಟಿ ಶಿವಗಣಗಳೊಡನೆ ಪೂರ್ವದ್ವಾರದಲ್ಲಿ ಪ್ರಭಾಸವನ್ನು ರಕ್ಷಿಸುತ್ತಾನೆ.

ಕಾಲಾಕ್ಷೋ ಭೀಷಣಶ್ಚಂಡೋ ವೃತೋಽಷ್ಟಾದಶಕೋಟಿಭಿಃ ।
ಘಂಟಾಕರ್ಣಗಣೋ ನಾಮ ದಕ್ಷಿಣಂ ದ್ವಾರಮಾಶ್ರಿತಃ ॥ ೯೫ ॥
ಪಶ್ಚಿಮದ್ವಾರಮಾಶ್ರಿತ್ಯ ಸ್ಥಿತವಾನ್ ವಿಷ್ವರೋ ಗಣಃ ।
ದಂಡಪಾಣಿಃ ಸ್ಥಿತಸ್ತತ್ರ ದೇವದೇವಸ್ಯ ಚೋತ್ತರೇ ॥ ೯೬ ॥
ಯೋಗಕ್ಷೇಮಮಂ ವಹನ್ನಿತ್ಯಂ ಪ್ರಭಾಸೇ ಭಾವಿತಾತ್ಮನಾಂ ।
ಭೀಷಣಾಕ್ಷಸ್ತಥೈಶಾನ್ಯಾಮಾಗ್ನೇಯ್ಯಾಂ ಛಾಗವಕ್ತ್ರಕಃ ॥ ೯೭ ॥
ನೈರ್ಋತ್ಯಾಂ ಚಂಡನಾದಸ್ತು ವಾಯವ್ಯಾಂ ಭೈರವಾನನಃ ।
ನಂದೀ ಚೈವ ಮಹಾಕಾಲೋ ದಂಡಪಾಣಿರ್ವಿನಾಯಕಃ ॥ ೯೮ ॥
ಏತೇಽಂಗರಕ್ಷಕಾ ಮಧ್ಯೇ ಶತಕೋಟಿಗಣೈರ್ವೃತಾಃ ।
ಏವಂ ರಕ್ಷಂತಿ ಬಹವೋ ಹ್ಯಸಂಖ್ಯೇಯಾ ಗಣೇಶ್ವರಾಃ ॥ ೯೯ ॥
ಕಲಿಕಲ್ಮಷಸಂಭೂತ್ಯಾ ಯೇಷಾಂ ಚೋಪಹತಾ ಮತಿಃ ।
ನ ತೇಷಾಂ ತದ್ಭವೇದ್ಗಮ್ಯಂ ಸ್ಥಾನಮರ್ಧೇಂದುಮೌಲಿನಃ ॥ ೧೦೦ ॥
ಗಂಧರ್ವೈಃ ಕಿನ್ನರೈರ್ಯಕ್ಷೈರಪ್ಸರೋಭಿಸ್ತಥೋರಗೈಃ ।
ಸಿದ್ಧೈಃ ಸಂಪೂಜ್ಯ ದೇವೇಶಂ ಸೋಮೇಶಂ ಪಾಪನಾಶನಂ ॥ ೧೦೧ ॥

---

೯೫ ಕರಿಗಣ್ಣುಗಳುಳ್ಳವನೂ, ಭಯಂಕರನೂ, ಅತಿಕೋಪಿಷ್ಠನೂ ಆದ ಘಂಟಾಕರ್ಣನೆಂಬವನು ಹದಿನೆಂಟುಕೋಟಿ ಗಣಗಳೊಡನೆ ದಕ್ಷಿಣದ ಬಾಗಿಲನಲ್ಲಿರುವನು.

೯೬–೯೯. ವಿಷ್ಟರನು ಪಶ್ಚಿಮದ್ವಾರದಲ್ಲಿಯೂ, ದಂಡಪಾಣಿಯು ಉತ್ತರ ದ್ವಾರದಲ್ಲಿಯೂ ನೆಲೆಸಿ ಅಲ್ಲಿರುವ ಭಕ್ತರ ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತಿರುವರು. ಈಶಾನ್ಯದಿಕ್ಕಿನಲ್ಲಿ ಭೀಷಣಾಕ್ಷನೂ, ಆಗ್ನೇಯದಲ್ಲಿ ಛಾಗಮುಖನೂ (ಆಡಿನಂತೆ ಮುಖವುಳ್ಳವನೂ) ನೈರ್ಋತ್ಯದಲ್ಲಿ ಚಂಡನಾದನೂ, ವಾಯವ್ಯದಲ್ಲಿ ಭೈರವಾನನನೂ, ಮಧ್ಯದಲ್ಲಿ ನಂದಿ, ಮಹಾಕಾಲ, ದಂಡಪಾಣಿ, ವಿನಾಯಕರೂ ಹೀಗೆ ಅಸಂಖ್ಯಾತರಾದ ಗಣನಾಯಕರು ಅಂಗರಕ್ಷಕರಾಗಿ ನೂರು ಕೋಟಿ ಗಣಗಳೊಡನೆ ಆ ಕ್ಷೇತ್ರವನ್ನು ರಕ್ಷಿಸುತ್ತಿದ್ದಾರೆ.

೧೦೦. ಕಲಿಕಾಲದ ದೋಷದಿಂದ ಮೂಢರಾದ ಮಾನವರು ಆ ಮಹೇಶ್ವರನ ಸ್ಥಾನಕ್ಕೆ ಹೋಗಲಾರರು.

೧೦೧–೧೦೨. ಗಂಧರ್ವರು, ಕಿನ್ನರರು, ಯಕ್ಷರು, ಅಪ್ಸರರು, ನಾಗರು, ಸಿದ್ಧರು ಇವರು ಅದೃಶ್ಯರಾಗಿ ಪಾಪವನ್ನು ಪರಿಹರಿಸುವ ಸೋಮೇಶ್ವರನನ್ನು ಪೂಜಿಸಿ

ಅಂತರ್ಧಾನಂ ಗತೈರ್ನಿತ್ಯಂ ಪ್ರಭಾಸಂ ತು ನಿಷೇವ್ಯತೇ ।
ಸಪ್ತಲೋಕೇಷು ಯೇ ಸಂತಿ ಸಿದ್ಧಾಃ ಪಾತಾಲವಾಸಿನಃ ।
ಪ್ರದಕ್ಷಿಣಂ ತೇ ಕುರ್ವಂತಿ ಸೋಮೇಶಂ ಕಾಲಭೈರವಂ ॥ ೧೦೨ ॥
ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ಲಾಕುಲಿಂ ಭಾರಭೂತಿಂ ಚ ಆಷಾಢಿಂ ದಂಡಮೇವ ಚ ॥ ೧೦೩ ॥
ಪುಷ್ಕರಂ ನೈಮಿಷಂ ಚೈವ ಅಮರೇಶಂ ತಥಾಽಪರಂ ।
ಭೈರವಂ ಮಧ್ಯಮಂ ಕಾಲಂ ಕೇದಾರಂ ಕಣವೀರಕಂ ॥ ೧೦೪ ॥
ಹರಿಚಂದ್ರಸ್ತು ಶೈಲೇಶಸ್ತಥಾ ವಸ್ತ್ರಾಂತಿಕೇಶ್ವರಃ ।
ಅಟ್ಟಹಾಸಂ ಮಹೇಂದ್ರಂ ಚ ಶ್ರೀಶೈಲಂ ಚ ಗಯಾಂ ತಥಾ ॥ ೧೦೫ ॥
ಏತಾನಿ ಸರ್ವತೀರ್ಥಾನಿ ದೇವಂ ಸೋಮೇಶ್ವರಂ ಪ್ರಭುಂ ।
ಪ್ರದಕ್ಷಿಣಂ ಪ್ರಕುರ್ವಂತಿ ತತ್ರ ಲಿಂಗಂ ಸ್ತುವಂತಿ ಚ ॥ ೧೦೬ ॥
ಬ್ರಹ್ಮಾ ಜನಾರ್ದನಶ್ಚಾಽನ್ಯೇ ಯೇ ದೇವಾ ಜಗತಿ ಸ್ಥಿತಾಃ ।
ಅಗ್ನಿಲಿಂಗಸಮೀಪಸ್ಥಾಃ ಸಂಧ್ಯಾಕಾಲೇ ಸ್ತುವಂತಿ ಚ ॥ ೧೦೭ ॥
ಷಷ್ಟಿಕೋಟಿಸಹಸ್ರಾಣಿ ಷಷ್ಟಿಕೋಟಿಶತಾನಿ ಚ ।
ಸರ್ವೇ ಸೋಮೇಶ್ವರಂ ಯಾಂತಿ ಮಾಘಕೃಷ್ಣಚತುರ್ದಶೀಂ ॥ ೧೦೮ ॥
ತಸ್ಮಿನ್ಕಾಲೇ ಚ ಯೋ ದದ್ಯಾತ್ಸೋಮೇಶೇ ಘೃತಕಂಬಲಂ ॥ ೧೦೯ ॥

ಪ್ರಭಾಸ ಕ್ಷೇತ್ರವನ್ನು ಸೇವಿಸುತ್ತಾರೆ. ಏಳು ಲೋಕದಲ್ಲಿರುವವರೂ, ಪಾತಾಳ ನಿವಾಸಿಗಳಾದ ಸಿದ್ಧರೂ ಸೋಮೇಶ್ವರನನ್ನು ಪ್ರದಕ್ಷಿಣೆಗೈಯ್ಯುತ್ತಾರೆ.

೧೦೩–೧೦೬. ಭೂಮಿಯಲ್ಲಿರುವ ಲಾಕುಲಿ, ಭಾರಭೂತಿ, ಆಷಾಢಿ, ದಂಡ, ಪುಷ್ಕರ, ನೈಮಿಷ, ಅಮರೇಶ, ಭೈರವ, ಮಧ್ಯಮ, ಕಾಲ, ಕೇದಾರ, ಕಣವೀರಕ, ಹರಿಚಂದ್ರ, ಶೈಲೇಶ, ವಸ್ತ್ರಾಂತಿಕೇಶ್ವರ, ಅಟ್ಟಹಾಸ, ಮಹೇಂದ್ರ, ಶ್ರೀಶೈಲ. ಗಯಾ ಮೊದಲಾದ ತೀರ್ಥಗಳೂ, ಪವಿತ್ರ ದೇವಾಲಯಗಳೂ ಸೋಮೇಶ್ವರನನ್ನು ಪ್ರದಕ್ಷಿಣೆ ಮಾಡಿ ಸ್ತೋತ್ರಮಾಡುತ್ತವೆ.

೧೦೭. ಜಗತ್ತಿನಲ್ಲಿರುವ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳು ಸಂಧ್ಯಾಕಾಲದಲ್ಲಿ ಅಗ್ನಿಲಿಂಗದ ಸಮೀಪದಲ್ಲಿದ್ದವರಾಗಿ ಸೋಮೇಶ್ವರನನ್ನು ಸ್ತೋತ್ರ ಮಾಡುತ್ತಾರೆ.

೧೦೮. ಮಾಘ ಕೃಷ್ಣ ಚತುರ್ದಶಿಯದಿನ ಅರುವತ್ತು ಕೋಟಿ ಸಾವಿರ ಮತ್ತು ಅರುವತ್ತು ಕೋಟಿನೂರು ತೀರ್ಥಗಳು ಸೋಮೇಶ್ವರನೆಡೆಗೆ ಹೋಗುವುವು.

೧೦೯–೧೧೧. ಆ ಶಿವರಾತ್ರಿಯ ದಿನ ಘೃತ, ರಸವಸ್ತು, ಎಳ್ಳು, ಹಾಲು, ಕರ್ಪೂರದಿಂದ ಸುವಾಸನೆಗೊಂಡ ನೀರು, ಕುಂಕುಮಕೇಸರಿ ಇವುಗಳನ್ನು ಸೇರಿಸಿ

ಘೃತಂ ರಸಂ ತಿಲಾನ್ ದುಗ್ಧಂ ಜಲಂ ಚಂದ್ರಾಧಿವಾಸಿತಂ ।
ಏಕತ್ರ ಕೃತ್ವಾ ಕಾಶ್ಮೀರಮಿತ್ಯೇತಧ್ಘೃತಕಂಬಲಂ ॥ ೧೧೦ ॥
ಶಿವರಾತ್ರ್ಯಾಂ ತು ಕರ್ತವ್ಯಮೇತದ್ಗೋಪ್ಯಂ ಮಮ ಪ್ರಿಯಂ ।
ಏವಂ ಕೃತೇ ಚ ಯತ್ಪುಣ್ಯಂ ಗದಿತುಂ ತನ್ನ ಶಕ್ಯತೇ ॥ ೧೧೧ ॥
ತ್ರತ್ರ ದಕ್ಷಿಣಭಾಗೇ ತು ಸ್ವಯಂ ಭೂತವಿನಾಯಕಂ ।
ಪ್ರಥಮಂ ಪೂಜಯೇದ್ದೇವಿ ಯದೀಚ್ಛೇತ್ಸಿದ್ಧಿಮಾತ್ಮನಃ ॥ ೧೧೨ ॥
ಊಷರಾಣಾಂ ಚ ಸರ್ವೇಷಾಂ ಪ್ರಭಾಸಕ್ಷೇತ್ರಮೂಷರಂ ।
ಪೀಠಾನಾಂ ಚೈವ ಪೀಠಂ ಚ ಕ್ಷೇತ್ರಾಣಾಂ ಕ್ಷೇತ್ರಮುತ್ತಮಂ ।
ಸಂದೇಹಾನಾಂ ಚ ಸರ್ವೇಷಾಮಯಂ ಸಂದೇಹ ಉತ್ತಮಃ ॥ ೧೧೩ ॥
ಯೇ ಕೇಚಿದ್ಯೋಗಿನಃ ಸಂತಿ ಶತಕೋಟಿಪ್ರವಿಸ್ತರಾಃ ।
ತೇಷಾಂ ಕ್ಷೇತ್ರೇ ಪ್ರಭಾಸೇ ತು ರತಿರ್ನಾನ್ಯತ್ರ ಕುತ್ರಚಿತ್ ॥ ೧೧೪ ॥
ಲಿಂಗಾದೀಶಾನಭಾಗೇ ತು ಸಂಸ್ಥಿತಾ ಸುರಸುಂದರಿ ॥ ೧೧೫॥
ಮಯಾ ಯಾ ಕಥಿತಾ ತುಭ್ಯಮುಮಾ ನಾಮ ಕಲಾ ಶುಭಾ ।
ಸಾ ಸತೀ ಪ್ರೋಚ್ಯತೇ ದೇವಿ ದಕ್ಷಸ್ಯ ದುಹಿತಾ ಪುರಾ ॥ ೧೧೬ ॥

ಮಾಡಿದ ಘೃತಕಂಬಲವನ್ನು ಸೋಮೇಶ್ವರನಿಗೆ ಅರ್ಪಿಸಬೇಕು. ಹೀಗೆ ನನಗೆ ಪ್ರಿಯವಾದ ಈ ಗೋಪ್ಯವಸ್ತುವನ್ನು ಅರ್ಪಿಸಿದವನ ಪುಣ್ಯವನ್ನು ಹೇಳಲು ಶಕ್ಯವಲ್ಲ.

೧೧೨. ದೇವಿ ! ಇಷ್ಟಸಿದ್ಧಿಯನ್ನಪೇಕ್ಷಿಸುವ ಅಲ್ಲಿ ದಕ್ಷಿಣ ದಿಕ್ಕಿನಲ್ಲಿರುವ ಗಣೇಶನನ್ನು ಮಾನವನು ಅರ್ಚಿಸಬೇಕು.

೧೧೩. ಪ್ರಭಾಸವು ಊಷರಕ್ಷೇತ್ರಗಳಲ್ಲಿ ಬಹುಮುಖ್ಯವಾದ ಊಷರಕ್ಷೇತ್ರವೂ ಪೀಠಗಳಲ್ಲಿ ಉತ್ತಮ ಪೀಠವೂ, ಕ್ಷೇತ್ರಗಳಲ್ಲಿ ಉತ್ತಮ ಕ್ಷೇತ್ರವೂ, ಸಂದೇಹ ಸ್ಥಾನಗಳಲ್ಲಿ ಉತ್ತಮ ಸಂದೇಹಸ್ಥಾನವೂ ಆಗಿರುವುದು.

೧೧೪. ಪ್ರಪಂಚದಲ್ಲಿರುವ ಅನೇಕ ಕೋಟಿ ಯೋಗಿಗಳು ಪ್ರಭಾಸ ಕ್ಷೇತ್ರದಲ್ಲಿ ಪ್ರೀತಿಯುಳ್ಳವರಾಗಿರುವರು. ಬೇರೆ ಯಾವ ಕ್ಷೇತ್ರದಲ್ಲಿಯೂ ಪ್ರೀತಿಯುಳ್ಳವರಾಗಿರುವುದಿಲ್ಲ.

೧೧೫–೧೧೬. ಸುರಸುಂದರಿ ! ನಾನು ನಿನಗೆ ಹೇಳಿರುವ ಮಂಗಳಕರಳಾದ ಉಮೆಯೆಂಬುವಳು ಶಿವಲಿಂಗದ ಈಶಾನ್ಯ ದಿಕ್ಕಿನಲ್ಲಿರುವಳು. ಅವಳು ಹಿಂದೆ ದಕ್ಷನ ಮಗಳಾದ ಸತಿಯೆಂಬವಳಾಗಿದ್ದಳು.

ದಕ್ಷಕೋಪಾಚ್ಛರೀರಂ ತು ಸಂತ್ಯಜ್ಯ ಪರಮಾ ಕಲಾ ।
ಹಿಮವಂತಗೃಹೇ ಜಾತಾ ಉಮಾನಾಮ್ನಾ ಚ ವಿಶ್ರುತಾ ॥ ೧೧೭ ॥
ತೇನ ದೇವಿ ತ್ವಯಾ ಸಾರ್ಧಂ ತತ್ರಸ್ಥಾ ವರದಾಃ ಸ್ಮೃತಾಃ ।
ನವಕೋಟ್ಯಸ್ತು ಚಾಮುಂಡಾಸ್ತಸ್ಮಿನ್ ಕ್ಷೇತ್ರೇ ಸ್ಥಿತಾಃ ಸ್ವಯಂ ॥ ೧೧೮ ॥
ಚೈತ್ರೇ ಮಾಸಿ ಸಿತಾಷ್ಟಮ್ಯಾಂ ತತ್ರ ತ್ವಾಂ ಯದಿ ಪೂಜಯೇತ್ ।
ಏಕವಿಂಶತಿಜನ್ಮಾನಿ ದಾರಿದ್ರ್ಯಂ ತಸ್ಯ ನೋ ಭವೇತ್ ॥ ೧೧೯ ॥
ಅಮಾ ಸೋಮೇನ ಸಂಯುಕ್ತಾ ಕದಾಚಿದ್ಯದಿ ಲಭ್ಯತೇ ।
ತಸ್ಯಾಂ ಸೋಮೇಶ್ವರಂ ದೃಷ್ಟ್ವಾ ಕೋಟಿಯಜ್ಞಫಲಂ ಲಭೇತ್ ॥ ೧೨೦ ॥
ಏತತ್ಕ್ಷೇತ್ರಂ ಮಹಾಗುಹ್ಯಂ ಸರ್ವಪಾತಕನಾಶನಂ ।
ರುದ್ರಾಣಾಂ ಕೋಟಯೋ ಯತ್ರ ಏಕಾದಶ ಸಮಾಸತೇ ॥ ೧೨೧ ॥
ದ್ವಾದಶಾತ್ರ ದಿನೇಶಾನಾಂ ವಸವೋಽಷ್ಟೌ ಸಮಾಗತಾಃ ।
ಗಂಧರ್ವಯಕ್ಷರಕ್ಷಾಂಸಿ ಅಸಂಖ್ಯಾತಾ ಗಣೇಶ್ವರಾಃ ॥ ೧೨೨ ॥
ಉಮಾಽಪಿ ತತ್ರ ಪಾರ್ಶ್ವಸ್ಥಾ ಸರ್ವದೇವೈಸ್ತು ಸಂಸ್ತುತಾ ।
ನಂದೀ ಚ ಗಣನಾಥೋ ಯೋ ದೇವದೇವಸ್ಯ ಶೂಲಿನಃ ॥ ೧೨೩ ॥
ಮಹಾಕಾಲಸ್ಯ ಯೇ ಚಾಽನ್ಯೇ ಗಣಪಾಃ ಸಂತಿ ಪಾರ್ಶ್ವಗಾಃ ।
ಗಂಗಾ ಚ ಯಮುನಾ ಚೈವ ತಥಾ ದೇವೀ ಸರಸ್ವತೀ ॥ ೧೨೪ ॥

---

೧೧೭. ಉತ್ತಮಕಲೆಯಾದ ಸತಿಯು ದಕ್ಷನ ಮೇಲೆ ಕೋಪದಿಂದ ದೇಹವನು ತ್ಯಜಿಸಿ ಹಿಮಾಲಯನ ಮನೆಯಲ್ಲಿ ಉಮೆಯೆಂಬ ಹೆಸರಿನಿಂದ ಜನಿಸಿದಳು.

೧೧೮. ದೇವಿ ! ನಿನ್ನೊಡನೆ ಅಲ್ಲಿ ವರವನ್ನೀಯುವ ಒಂಬತ್ತು ಕೋಟಿ ಚಾಮುಂಡಿಯರಿರುವರು.

೧೧೯. ಅಲ್ಲಿ ಚೈತ್ರಮಾಸದ ಶುದ್ಧಾಷ್ಟಮಿಯ ದಿನ ನಿನ್ನನ್ನು ಪೂಜಿಸಿದವನು ಇಪ್ಪತ್ತೊಂದು ಜನ್ಮಗಳಲ್ಲಿ ಬಡವನಾಗುವುದಿಲ್ಲ.

೧೨೦. ಸೋಮವಾರದಿಂದ ಸೇರಿದ ಅಮಾವಾಸ್ಯೆಯ ದಿನ ಸೋಮೇಶ್ವರನ ದರ್ಶನವನ್ನು ಮಾಡಿದವನು ಕೋಟಿ ಯಜ್ಞಗಳ ಫಲವನ್ನು ಪಡೆಯುವನು.

೧೨೧–೧೨೨. ಇದು ಸಕಲ ಪಾಪಗಳನ್ನು ಪರಿಹರಿಸುವ ಮಹಾಗುಹ್ಯ ಕ್ಷೇತ್ರವಾಗಿರುವುದು. ಇಲ್ಲಿ ಹನ್ನೊಂದು ಕೋಟಿ ರುದ್ರರೂ, ದ್ವಾದಶಾವಿತ್ಯರೂ, ಅಷ್ಟವಸುಗಳೂ, ಗಂಧರ್ವ, ಯಕ್ಷ, ರಾಕ್ಷಸರೂ, ಲೆಕ್ಕವಿಲ್ಲದಷ್ಟು ಗಣನಾಯಕರೂ ಇರುವರು.

೧೨೩–೧೨೭. ಅಲ್ಲಿ ಸಕಲ ದೇವತೆಗಳಿಂದ ಸ್ತುತಿಸಲ್ಪಟ್ಟ ಉಮೆಯೂ ಪಾರ್ಶ್ವದಲ್ಲಿರುವಳು. ಮಹೇಶ್ವರನ ಗಣನಾಯಕನಾದ ನಂದಿಯೂ, ಅವನ ಪಕ್ಕದಲ್ಲಿರುವ

ಅನ್ಯಾಶ್ಚ ಸರಿತಃ ಪುಣ್ಯಾ ನದಾಶ್ಚೈವ ಹ್ರದಾಸ್ತಥಾ ।
ಸಮುದ್ರಾಃ ಪರ್ವತಾಃ ಕೂಪಾ ವನಸ್ಪತಯ ಏವ ಚ ॥ ೧೨೫ ॥
ಸ್ಥಾವರಂ ಜಂಗಮಂ ಚೈವ ಪ್ರಭಾಸೇ ತು ಸಮಾಗತಂ ।
ಅನ್ಯೇ ಚೈವ ಗಣಾಸ್ತತ್ರ ಪ್ರಭಾಸೇ ಸಂವ್ಯವಸ್ಥಿತಾಃ ॥ ೧೨೬ ॥
ನ ಮಯಾ ಕಥಿತಾಃ ಸರ್ವ ಉದ್ದೇಶೇನ ಕ್ವಚಿತ್ಕ್ವಚಿತ್ ।
ಭಕ್ತ್ಯಾ ಪರಮಯಾ ಯುಕ್ತೋ ದೇವಿದೇವ ವಿನಾಯಕಂ ।
ತೃತೀಯಂ ಪೂಜಯೇತ್ತತ್ರ ವಾಂಛೇತ್ ಕ್ಷೇತ್ರಫಲಂ ಯದಿ ॥ ೧೨೭ ॥
ದ್ವಾದಶೈವಂ ತಥಾ ಚಾಷ್ಟೌ ಚತ್ವಾರಿಂಶಚ್ಚ ಕೋಟಯಃ ।
ನದೀನಾಮಗ್ನಿತೀರ್ಥಸ್ಯ ದ್ವಾರೇ ತಿಷ್ಠಂತಿ ಭಾಮಿನಿ ॥ ೧೨೮ ॥
ನಿರ್ಮಾಲ್ಯಲಂಘನಂ ಕಿಂಚಿದಜ್ಞಾನಾದ್ಯದಿ ವೈ ಕೃತಂ ।
ತತ್ಸರ್ವಂ ವಿಲಯಂ ಯಾತಿ ಅಗ್ನಿತೀರ್ಥಸ್ಯ ದರ್ಶನಾತ್ ॥ ೧೨೯ ॥
ದೇವಿ ಕಿಂ ಬಹುನೋಕ್ತೇನ ಕ್ಷೇತ್ರಮೇತನ್ಮಹಾಪ್ರಭಂ ।
ನ ತೇ ವರ್ಣಯಿತುಂ ಶಕ್ಯಂ ಕಲ್ಪಕೋಟಿಶತೈರಪಿ ॥ ೧೩೦ ॥
ಯೇ ಚಾಂತರಿಕ್ಷೇ ಭುವಿ ಯೇ ಚ ದೇವಾ
ಸ್ತೀರ್ಥಾನಿ ವೈ ಯಾನಿ ದಿಗಂತರೇಷು ।
ಕ್ಷೇತ್ರಂ ಪ್ರಭಾಸಂ ಪ್ರವರಂ ಹಿ ತೇಷಾಂ
ಸೋಮೇಶ್ವರಂ ದೇವಿ ತಥಾ ವರಿಷ್ಠಂ ॥ ೧೩೧ ॥

ಇತರ ಗಣನಾಯಕರೂ, ಗಂಗಾ, ಯಮುನಾ, ಸರಸ್ವತೀ ನದಿಗಳೂ, ಇತರ ನದೀ, ನದ, ಹ್ರದಗಳೂ, ಸಮುದ್ರ, ಪರ್ವತ, ಕೂಪ, ವನಸ್ಪತಿಗಳೂ, ಇತರ ಸ್ಥಾವರ, ಜಂಗಮಗಳೂ, ಶಿವಗಣಗಳೂ ಆ ಪ್ರಭಾಸ ಕ್ಷೇತ್ರದಲ್ಲಿ ನೆಲೆಸಿರುವುವು.

೧೨೭. ನಾನು ಎಲ್ಲವನ್ನೂ ಹೇಳಲಿಲ್ಲ. ಉದ್ದಿಷ್ಟವಾದ ಕೆಲವನ್ನು ಮಾತ್ರ ಹೇಳಿರುವೆನು. ಅಲ್ಲಿ ಕ್ಷೇತ್ರಫಲವನ್ನು ಅಪೇಕ್ಷಿಸುವ ನರನು ಉತ್ತಮ ಭಕ್ತಿಯಿಂದ ಮೂರನೆಯ ವಿನಾಯಕನನ್ನು ಪೂಜಿಸಬೇಕು.

೧೨೮. ದೇವಿ ! ಅರುವತ್ತುಕೋಟಿ ನದಿಗಳು ಆ ಅಗ್ನಿತೀರ್ಥದ ಬಾಗಿಲಿನಲ್ಲಿರುವುವು.

೧೨೯. ಅಜ್ಞಾನದಿಂದ ಶಿವನ ನಿರ್ಮಾಲ್ಯವನ್ನು ತಿರಸ್ಕಾರಮಾಡಿದವನ ಪಾಪವು ಅಗ್ನಿತೀರ್ಥದ ದರ್ಶನದಿಂದ ನಾಶವಾಗುವುದು.

೧೩೦. ದೇವಿ ! ಹೆಚ್ಚು ಹೇಳಿ ಪ್ರಯೋಜನವೇನು? ಅತ್ಯಂತ ಪ್ರಭಾವವುಳ್ಳ ಈ ಕ್ಷೇತ್ರವನ್ನು ನಿನಗೆ ಬಣ್ಣಿಸಲು ನೂರು ಕೋಟಿ ಕಲ್ಪಗಳಿಂದಲೂ ಸಾಧ್ಯವಿಲ್ಲ.

೧೩೧. ಭೂಮಿ, ಆಕಾಶ, ದಿಕ್ಕುಗಳ ಪ್ರದೇಶಗಳಲ್ಲಿರುವ ದೇವತೆಗಳಲ್ಲಿ ಸೋಮೇಶ್ವರನೂ, ತೀರ್ಥಗಳಲ್ಲಿ ಪ್ರಭಾಸಕ್ಷೇತ್ರವೂ ಉತ್ತಮವಾದುದು.

ಯೇ ಚಾಂಡಜಾಶ್ಚೋದ್ಭಿಜಾಶ್ಚೈವ ಜೀವಾಃ
ಸಸ್ವೇದಜಾಶ್ಚೈವ ಜರಾಯುಜಾಶ್ಚ ।
ದೇವಿ ಪ್ರಭಾಸೇ ತು ಗತಾಸ್ಸರ್ವೋಽಥ
ಮುಕ್ತಿಂ ಪರಂ ಯಾಂತಿ ನ ಸಂಶಯೋಽತ್ರ ॥ ೧೩೨ ॥
ಇತಿ ನಿಗದಿತಮೇತದ್ದೇವದೇವಸ್ಯ ಚಿತ್ರಂ
ಚರಿತಮಿದಮಚಿಂತ್ಯಂ ದೇವಿ ತೇ ಶಂಕರಸ್ಯ ।
ಕಲಿಕಲುಷವಿದಾರಂ ಸರ್ವಲೋಕೋಽಪಿ ಯಾಯಾ
ದ್ಯದಿ ಪಠತಿ ಶೃಣೋತಿ ಸ್ತೌತಿ ನಿತ್ಯಂ ಯ ಇತ್ಥಂ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕ್ಷೇತ್ರಪ್ರಮಾಣವರ್ಣನಂ ನಾಮ
॥ ಚತುರ್ಥೋಽಧ್ಯಾಯಃ ॥

---

೧೩೨. ದೇವಿ ! ಮೊಟ್ಟೆಯಿಂದ ಹುಟ್ಟುವ ಪಕ್ಷಿ ಮೊದಲಾದವುಗಳೂ, ವೃಕ್ಷ ಸಸ್ಯಗಳೂ, ಬೆವರಿಂದುಂಟಾಗುವ ಹೇನು ಮೊದಲಾದುವುಗಳೂ, ಮನುಷ್ಯರೂ ಪ್ರಭಾಸಕ್ಷೇತ್ರದಲ್ಲಿ ಮೃತಿಯನ್ನು ಹೊಂದಿದರೆ ಮುಕ್ತಿಯನ್ನೈದುವರು. ಸಂದೇಹವಿಲ್ಲ.

೧೩೩. ದೇವಿ ! ಹೀಗೆ ನಿನಗೆ ದೇವತೆಗಳಿಗೆ ಒಡೆಯನಾದ ಶಂಕರನ ಆಶ್ಚರ್ಯಕರವೂ, ಅಚಿಂತ್ಯವೂ ಆದ ಚರಿತೆಯನ್ನು ಹೇಳಿರುವೆನು. ಯಾವಾಗಲೂ ಇದನ್ನು ಪಠಿಸುವವರೂ, ಕೇಳುವವರೂ, ಸ್ತೋತ್ರ ಮಾಡುವವರೂ ಕಲಿಕಲ್ಮಷದಿಂದ ಮುಕ್ತರಾಗುವರು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕ್ಷೇತ್ರಪ್ರಮಾಣವರ್ಣನವೆಂಬ
ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಮೋಽಧ್ಯಾಯಃ

ಕ್ಷೇತ್ರಸ್ಥರ್ಷಿದೇವಗಣವರ್ಣನಂ

ಸೂತ ಉವಾಚ :—

ಇತ್ಯೇವಮುಕ್ತೇ ವಿಪ್ರೇಂದ್ರಾ ಶಂಕರೇಣ ಮಹಾತ್ಮನಾ ।
ಪುನಃ ಪಪ್ರಚ್ಛ ಸಾ ದೇವೀ ಹರ್ಷಸಂಪೂರ್ಣಮಾನಸಾ ॥ ೧ ॥

ದೇವ್ಯುವಾಚ:—

ದೇವದೇವ ಜಗನ್ನಾಥ ಸರ್ವಪ್ರಾಣಿಹಿತಾಯ ವೈ ।
ಪ್ರಭಾಸಕ್ಷೇತ್ರಮಾಹಾತ್ಮ್ಯಂ ವಿಸ್ತರಾದ್ವದ ಮೇ ಪ್ರಭೋ ॥ ೨ ॥

ಈಶ್ವರ ಉವಾಚ :—

ಅನ್ಯದ್ದೃಷ್ಟಾಂತರೂಪಂ ತೇ ಕಥಯಾಮಿ ಯಶಸ್ವಿನಿ ।
ಯೇನ ಸೃಷ್ಟಂ ಮಹಾದೇವಿ ಕ್ಷೇತ್ರಮೇತನ್ಮಮ ಪ್ರಿಯಂ ॥ ೩ ॥
ಯಾ ಗತಿರ್ಧ್ಯಾಯತಾಂ ನಿತ್ಯಂ ನಿಃಸಂಗಾನಾಂ ಚ ಯೋಗಿನಾಂ ।
ಸೈವಂ ಸಂತ್ಯಜತಾಂ ಪ್ರಾಣಾನ್ ಪ್ರಭಾಸೇ ತು ಪರಾ ಗತಿಃ ॥ ೪ ॥

ಕನ್ನಡದ ಅನುವಾದ

ಕ್ಷೇತ್ರಸ್ಥರ್ಷಿದೇವಗಣವರ್ಣನ

೧. ಸೂತನು ಹೇಳುತ್ತಾನೆ :—ದ್ವಿಜವರ್ಯರೇ ! ಮಹಾತ್ಮನಾದ ಶಂಕರನು ಹೀಗೆ ಹೇಳಲು ಆ ಪಾರ್ವತಿಯು ಸಂತೋಷದಿಂದ ತುಂಬಿದ ಮನಸ್ಸುಳ್ಳವಳಾಗಿ ಮರಳಿ ಪ್ರಶ್ನಿಸಿದಳು.

೨. ದೇವಿಯು ಹೇಳುತ್ತಾಳೆ :—ಜಗನ್ನಾಥ ! ಸಕಲ ಪ್ರಾಣಿಗಳ ಹಿತಕ್ಕಾಗಿ ಪ್ರಭಾಸ ಕ್ಷೇತ್ರಮಾಹಾತ್ಮ್ಯೆಯವನ್ನು ನನಗೆ ವಿಸ್ತಾರವಾಗಿ ಹೇಳು.

೩. ಈಶ್ವರನು ಹೇಳುತ್ತಾನೆ:— ಎಲೌ ಕೀರ್ತಿಶಾಲಿನಿಯೆ ! ನನಗೆ ಪ್ರಿಯವಾದ ಆ ಪ್ರಭಾಸ ಕ್ಷೇತ್ರವನ್ನು ನಿರ್ಮಿಸಲು ಕಾರಣವನ್ನು ದೃಷ್ಟಾಂತ ಸಹಿತವಾಗಿ ಹೇಳುವೆನು.

೪. ಭಗವದ್ಧ್ಯಾನಪರಾಯಣರೂ, ವಿಷಯಸಂಬಂಧವಿಲ್ಲದವರೂ ಆದ ಯೋಗಿಗಳಿಗೆ ಉಂಟಾಗುವ ಉತ್ತಮ ಗತಿಯು ಆ ಪ್ರಭಾಸ ಕ್ಷೇತ್ರದಲ್ಲಿ ಮರಣ ಹೊಂದುವವರಿಗುಂಟಾಗುವುದು.

ಅನೇಕಕಲ್ಪಸ್ಥಾಯೀ ಚ ಮಾರ್ಕಂಡೇಯೋ ಮಹಾತಪಾಃ ।
ಸೋಽಪಿ ದೇವಂ ವಿರೂಪಾಕ್ಷಂ ಪ್ರಭಾಸೇ ತು ಸದಾರ್ಚತಿ ॥ ೫ ॥
ಅಟಿತ್ವಾ ಸರ್ವತೀರ್ಥಾನಿ ಪ್ರಭಾಸಂ ನೈವ ಮುಂಚತಿ ।
ದುರ್ವಾಸಾಶ್ಚ ಮಹಾತೇಜಾ ಲಿಂಗಸ್ಯಾರಾಧನೋದ್ಯತಃ ।
ನ ಮುಂಚತಿ ಕ್ಷಣಂ ದೇವಿ ತತ್ಕ್ಷೇತ್ರಂ ಶಶಿಮೌಲಿನಃ ॥ ೬ ॥
ಭರದ್ವಾಜೋ ಮರೀಚಿಶ್ಚ ಮುನಿಶ್ಚೋದ್ದಾಲಕಸ್ತಥಾ ।
ಕ್ರತುಶ್ಚೈವ ವಸಿಷ್ಠಶ್ಚ ಕಶ್ಯಪೋ ಭೃಗುರೇವ ಚ ॥ ೭ ॥
ದಕ್ಷಶ್ಚೈವ ತು ಸಾವರ್ಣಿರ್ಯಮಶ್ಚಾಂಗಿರಸಸ್ತಥಾ ।
ಶುಕೋ ವಿಭಾಂಡಕಶ್ಚೈವ ಋಷ್ಯಶೃಂಗೋಽಥ ಗೋಭಿಲಃ ॥ ೮ ॥
ಗೌತಮಶ್ಚ ಋಚೀಕಶ್ಚ ಅಗಸ್ತ್ಯಃ ಶೌನಕೋ ಮಹಾನ್ ।
ನಾರದೋ ಜಮದಗ್ನಿಶ್ಚ ವಿಶ್ವಾಮಿತ್ರೋಽಥ ಲೋಮಶಃ ॥ ೯ ॥
ಅನ್ಯೇ ಚ ಋಷಯಶ್ಚೈವ ದಿವ್ಯಾ ದೇವರ್ಷಯಸ್ತಥಾ ।
ನ ಮುಂಚಂತಿ ಮಹಾಕ್ಷೇತ್ರಂ ಲಿಂಗಸ್ಯಾರಾಧನೋದ್ಯತಾಃ ॥ ೧೦ ॥
ಅಹಂ ತತ್ರೈವ ತಿಷ್ಠಾಮಿ ಲಿಂಗಾರಾಧನತತ್ಪರಃ ।
ನ ಮುಂಚಾಮಿ ಮಹಾಕ್ಷೇತ್ರಂ ಸತ್ಯಂ ಸತ್ಯಂ ವರಾನನೇ ॥ ೧೧ ॥

---

೫. ಅನೇಕ ಕಲ್ಪಗಳ ಚಿರಂಜೀವಿಯೂ ಅತಿತಪಸ್ವಿಯೂ ಆದ ಮಾರ್ಕಂಡೇಯನೂ ಆ ಪ್ರಭಾಸಕ್ಷೇತ್ರದಲ್ಲಿ ಸೋಮೇಶ್ವರನನ್ನು ಯಾವಾಗಲೂ ಪೂಜಿಸುತ್ತಿರುವನು.

೬. ಅತ್ಯಂತ ತೇಜಸ್ವಿಯೂ, ಶಿವಲಿಂಗಪೂಜೆಯಲ್ಲಿ ಉದ್ಯುಕ್ತನೂ ಆದ ದುರ್ವಾಸಮುನಿಯು ಸಕಲ ಕ್ಷೇತ್ರಗಳಲ್ಲಿಯೂ ಸಂಚರಿಸಿ ಆ ಮಹೇಶ್ವರನ ಪ್ರಭಾಸ ಕ್ಷೇತ್ರಕ್ಕೆ ಬಂದು ಅದನ್ನು ಕ್ಷಣಕಾಲವೂ ಬಿಡುವುದಿಲ್ಲ.

೭–೧೦. ಭರದ್ವಾಜ, ಮರೀಚಿ, ಉದ್ದಾಲಕ, ಕ್ರತು, ವಸಿಷ್ಠ, ಕಶ್ಯಪ, ಭೃಗು, ದಕ್ಷ, ಸಾವರ್ಣಿ, ಯಮ, ಆಂಗಿರಸ, ಶುಕ, ವಿಭಾಂಡಕ, ಋಷ್ಯಶೃಂಗ, ಗೋಭಿಲ, ಗೌತಮ, ಋಚೀಕ, ಅಗಸ್ತ್ಯ, ಶೌನಕ, ನಾರದ, ಜಮದಗ್ನಿ, ವಿಶ್ವಾಮಿತ್ರ, ಲೋಮಶರೂ, ಇತರ ದಿವ್ಯರ್ಷಿಗಳೂ, ದೇವರ್ಷಿಗಳೂ ಸೋಮೇಶ್ವರಲಿಂಗದ ಆರಾಧನೆಯಲ್ಲಿ ಉದ್ಯುಕ್ತರಾಗಿ ಆ ಪ್ರಭಾಸ ಮಹಾಕ್ಷೇತ್ರವನ್ನು ಬಿಡುವುದಿಲ್ಲ.

೧೧. ಸುಮುಖಿ ! ನಾನೂ ಆ ಸೋಮೇಶ್ವರಲಿಂಗದ ಪೂಜೆಯಲ್ಲಿ ನಿರತನಾಗಿ ಅಲ್ಲಿಯೇ ನೆಲಸಿರುತ್ತೇನೆ. ಸತ್ಯವಾಗಿಯೂ ಆ ಮಹಾಕ್ಷೇತ್ರವನ್ನು ಬಿಡುವುದಿಲ್ಲ.

ಸರ್ವತೀರ್ಥಾನಿ ದೇವೇಶಿ ಮಯಾ ದೃಷ್ಟಾನಿ ಭೂತಲೇ ।
ಪ್ರಭಾಸೇನ ಸಮಂ ಕ್ಷೇತ್ರಂ ನೈವ ದೃಷ್ಟಂ ಕದಾಚನ ॥ ೧೨ ॥
ದೇವಿ ಷಷ್ಟಿಸಹಸ್ರಾಣಿ ಯಾಜ್ಞವಲ್ಕ್ಯಪುರಸ್ಕೃತಾಃ ।
ಜಪಂ ಕುರ್ವಂತಿ ರುದ್ರಾಣಾಂ ಚಂದ್ರಭಾಗಾಂ ವ್ಯವಸ್ಥಿತಾಃ ॥ ೧೩ ॥
ಚತ್ವಾರಿಂಶತ್ಸಹಸ್ರಾಣಿ ಋಷೀಣಾಮೂರ್ಧ್ವರೇತಸಾಂ
ದೇವಿಕಾತಟಮಾಶ್ರಿತ್ಯ ಜಪಂತಿ ಶತರುದ್ರಿಯಂ ॥ ೧೪ ॥
ಕೋಟಿಯಶ್ಚೈವ ಪಂಚಾಶನ್ಮುನೀನಾಮೂರ್ಧ್ವರೇತಸಾಂ ।
ಉಮಾಪತಿಂ ಸಮಾಸಾದ್ಯ ಲಿಂಗಂ ತತ್ರೈವ ಸಂಸ್ಥಿತಂ ॥ ೧೫ ॥
ರುದ್ರಾಣಾಂ ಕೋಟಿಜಾಪ್ಯಂ ತು ಕೃತಂ ತತ್ರೈವ ತೈಃ ಪುರಾ ।
ಕೋಟಿಸ್ತತ್ರೈವ ಸಂಸಿದ್ಧಾಸ್ತಸ್ಮಿಂಲ್ಲಿಂಗೇ ನ ಸಂಶಯಃ ॥ ೧೬ ॥
ಶತಂ ಚೈವ ಸಹಸ್ರಾಣಾಂ ದೇವೇಶಂ ಶಶಿಭೂಷಣಂ ।
ಪೂಜಯಂತಿ ಮಹಾಸಿದ್ಧಾ ಮಮ ಕ್ಷೇತ್ರನಿಷೇವಿಣಃ ॥ ೧೭ ॥
ವೇದಾಂತೇಷು ಚ ಯತ್ಪ್ರೋಕ್ತಂ ಫಲಂ ಚೈವ ಮಹರ್ಷಿಭಿಃ ।
ತತ್ಫಲಂ ಸಕಲಂ ತತ್ರ ಚಂದ್ರಭೂಷಣದರ್ಶನಾತ್ ॥ ೧೮ ॥

---

೧೨. ದೇವೇಶಿ ! ನಾನು ಭೂಮಿಯಲ್ಲಿರುವ ಸಕಲ ತೀರ್ಥಗಳನ್ನೂ ನೋಡಿರುವೆನು. ಒಂದಾವೃತ್ತಿಯೂ ಪ್ರಭಾಸಕ್ಕೆ ಸಮವಾದ ಕ್ಷೇತ್ರವನ್ನು ನೋಡಲಿಲ್ಲ.

೧೩. ದೇವಿ ! ಅಲ್ಲಿ ಅರವತ್ತು ಸಾವಿರ ಮಂದಿ ಋಷಿಗಳು ಯಾಜ್ಞವಲ್ಕ್ಯನನ್ನು ಮುಂದಿರಿಸಿಕೊಂಡು ಚಂದ್ರಭಾಗದಲ್ಲಿ ನೆಲೆಸಿ ರುದ್ರಜಪವನ್ನು ಮಾಡುತ್ತಾರೆ.

೧೪. ಬ್ರಹ್ಮಚಾರಿಗಳಾದ ನಲವತ್ತು ಸಾವಿರ ಋಷಿಗಳು ದೇವಿಕಾತಟದಲ್ಲಿ ಶತರುದ್ರಿಯವನ್ನು ಜಪಿಸುತ್ತಾರೆ.

೧೫–೧೬. ಬ್ರಹ್ಮಚಾರಿಗಳಾದ ಐವತ್ತು ಕೋಟಿ ಮುನಿಗಳು ಹಿಂದೆ ಆ ಪ್ರಭಾಸದಲ್ಲಿರುವ ಲಿಂಗದಲ್ಲಿ ನೆಲೆಸಿರುವ ಮಹೇಶ್ವರನನ್ನು ಹೊಂದಿ ಶತರುದ್ರಿಯವನ್ನು ಕೋಟಿ ಸಾರಿ ಜಪಿಸಿದರು. ಆದರಿಂದ ಆ ಲಿಂಗದಲ್ಲಿ ಕೋಟಿರುದ್ರರು ನೆಲೆಸಿದರು.

೧೭. ನನ್ನ ಕ್ಷೇತ್ರನಿವಾಸಿಗಳಾದ ಸಿದ್ಧಯೋಗಿಗಳು ಒಂದು ಅಲ್ಲಿ ಲಕ್ಷ ಮಹೇಶ್ವರರನ್ನು ಪೂಜಿಸುತ್ತಾರೆ.

೧೮. ಮಹರ್ಷಿಗಳು ವೇದಾಂತಗಳಲ್ಲಿ ಹೇಳಿದ ಸಕಲಫಲಗಳನ್ನೂ ಆ ಕ್ಷೇತ್ರದಲ್ಲಿ ಚಂದ್ರಮೌಳೀಶ್ವರನ ದರ್ಶನದಿಂದ ಪಡೆಯುವರು.

ಅಗ್ನಿತೀರ್ಥೇ ಋಷೀಣಾಂ ತು ಕೋಟಿಃ ಸಾಗ್ರಾ ಸ್ಥಿತಾ ಶುಭೇ ।
ರುದ್ರೇಶ್ವರೇ ಸ್ಮೃತಂ ಲಕ್ಷಂ ಕಪರ್ದೀಶೇ ತಥೈವ ಚ ॥ ೧೯ ॥
ರತ್ನೇಶ್ವರೇ ಸಹಸ್ರಂ ತು ಋಷೀಣಾಮೂರ್ಧ್ವರೇತಸಾಂ
ಅರ್ಕಸ್ಥಲೇ ಮಹಾಪುಣ್ಯೇ ಕೋಟಿಃ ಸಾಗ್ರಾ ಸ್ಥಿತಾ ಶುಭೇ ॥ ೨೦ ॥
ಷಷ್ಟಿಶ್ಚೈವ ಸಹಸ್ರಾಣಿ ತತ್ರ ಸಿದ್ಧೇಶ್ವರೇ ಸ್ಥಿತಾಃ ।
ಸಪ್ತ ಚೈವ ಸಹಸ್ರಾಣಿ ಮಾರ್ಕಂಡೇಯೇ ತು ಸಂಸ್ಥಿತಾಃ ॥ ೨೧ ॥
ಸರಸ್ವತ್ಯಾಂ ಬ್ರಹ್ಮಕುಂಡೇಽಸಂಖ್ಯಾತಾ ಮುನಯಃ ಸ್ಮೃತಾಃ ।
ದಶಾರ್ಬುದಸಹಸ್ರಾಣಿ ಕೋಟಿತ್ರಿತಯಮೇವ ಚ ॥ ೨೨ ॥
ಋಷಯಸ್ತತ್ರ ತಿಷ್ಠಂತಿ ಯತ್ರ ಪ್ರಾಚೀ ಸರಸ್ವತೀ ।
ಬ್ರಹ್ಮಹತ್ಯಾ ಗತಾ ಯತ್ರ ಶಂಕರಸ್ಯ ಚ ತತ್ಕ್ಷಣಾತ್ ॥ ೨೩ ॥
ಕಾಯಃ ಸುವರ್ಣತಾಂ ಪ್ರಾಪ ಕಪಾಲಂ ಪತಿತಂ ಕರಾತ್ ।
ಜ್ಞಾತ್ವೈವಂ ಶಂಕಿನಾ ಪೂರ್ವಂ ಕೃತಂ ತತ್ರ ಮಹಾತಪಃ ॥ ೨೪ ॥
ತುಷ್ಟಃ ಶ್ರೀಶಂಕರೋ ದೇವೋ ಲಿಂಗವಾಸ ವರೇಣ ತು ।
ಕೋಟಿಯಜ್ಞಫಲಂ ಸ್ನಾನೇ ಪ್ರಾಚ್ಯಾಂ ಲಿಂಗಸ್ಯ ಪೂಜನೇ ॥ ೨೫ ॥

೧೯—೨೩. ಮಂಗಳಕರಳೆ ! ಅಗ್ನಿತೀರ್ಥದಲ್ಲಿ ಒಂದು ಕೋಟಿ ಋಷಿಗಳೂ, ರುದ್ರೇಶ್ವರ ಮತ್ತು ಕಪರ್ದೀಶದಲ್ಲಿ ಒಂದು ಲಕ್ಷ ಋಷಿಗಳೂ, ರತ್ನೇಶ್ವರದಲ್ಲಿ ಸಾವಿರ ಋಷಿಗಳೂ, ಪುಣ್ಯಕರವಾದ ಅರ್ಕಸ್ಥಳದಲ್ಲಿ ಕೋಟಿ ಋಷಿಗಳೂ, ಸಿದ್ಧೇಶ್ವರದಲ್ಲಿ ಅರುವತ್ತು ಸಾವಿರ ಮುನಿಗಳೂ, ಮಾರ್ಕಂಡೇಯದಲ್ಲಿ ಏಳುಸಾವಿರ ಋಷಿಗಳೂ, ಸರಸ್ವತಿಯಲ್ಲಿಯೂ, ಬ್ರಹ್ಮಕುಂಡದಲ್ಲಿಯೂ ಅಸಂಖ್ಯಾತ ಋಷಿಗಳೂ ಇರುವರು ಹೀಗೆ ಆ ಕ್ಷೇತ್ರದಲ್ಲಿ ಹತ್ತುಸಾವಿರ ಅರ್ಬುದದ ಮೂರುಕೋಟಿ ಋಷಿಗಳು ಇರುವರು. ಆ ಕ್ಷೇತ್ರದ ಪೂರ್ವ ದಿಕ್ಕಿನಲ್ಲಿರುವ ಸರಸ್ವತೀತೀರ್ಥದಲ್ಲಿ ಶಂಕರನ ಬ್ರಹ್ಮಹತ್ಯೆಯು ಕೂಡಲೆ ಪರಿಹಾರವಾಗಿರುವುದು.

೨೪. ಅಲ್ಲಿ ಶಂಕರನ ಶರೀರವು ಚಿನ್ನವಾಯಿತು. ಬ್ರಹ್ಮಕಪಾಲವು ಕೈಯಿಂದ ಬಿದ್ದಿತು. ಇದನ್ನರಿತು ಶಂಕಿಯು ಅಲ್ಲಿ ಅತಿಶಯವಾದ ತಪಸ್ಸನ್ನು ಮಾಡಿದನು.

೨೫. ಅದರಿಂದ ಸಂತುಷ್ಟನಾದ ಶ್ರೀ ಶಂಕರನು ಲಿಂಗದಲ್ಲಿ ಸನ್ನಿಹಿತನಾಗಿರುವೆನೆಂದು ವರವನ್ನಿತ್ತನು. ಪೂರ್ವದಿಕ್ಕಿನಲ್ಲಿ ಸ್ನಾನಮಾಡುವುದರಿಂದಲೂ, ಲಿಂಗವನ್ನು ಪೂಜಿಸುವುದರಿಂದಲೂ ಕೋಟಿ ಯಜ್ಞಮಾಡಿದ ಫಲವು ಲಭಿಸುವುದು.

ಪಿಂಡೇ ಗಯಾಶತಗುಣಮಮಾಸೋಮಯುತೇ ದಿನೇ ।
ಭೂತಾಯಾಂ ಪಿಂಡದಸ್ತತ್ರ ಕುಲಕೋಟಿಂ ಸಮುದ್ಧರೇತ್ ॥ ೨೬ ॥
ಯೇ ಚಾತ್ರ ಮಲನಾಶಾಯ ನಿಮಂಕ್ಷ್ಯಂತಿ ಚ ಮಾನವಾಃ ।
ದಶಗೋದಾನಜಂ ಪುಣ್ಯಂ ತೇಷಾಮಪಿ ಭವಿಷ್ಯತಿ ॥ ೨೭ ॥
ಪಾದೇನ ವಾ ಕ್ರೀಡಮಾನಾ ಜಲಂ ಲಿಪ್ಸಂತಿ ಯೇ ನರಾಃ ।
ತೇಷಾಮಪಿ ಶ್ರಾದ್ಧಫಲಂ ವಿಧಿವತ್ಸಂಭವಿಷ್ಯತಿ ।
ತತ್ರ ಲಿಂಗಾನಿ ಪೂಜ್ಯಾನಿ ಶೂಲಭೇದಾದಿಕಾನಿ ತು ॥ ೨೮ ॥
ಏವಂ ವಿಕಲ್ಪ್ಯ ಲಿಂಗಾನಿ ಅಶ್ವಮೇಧಫಲಾನಿ ತು ।
ದರ್ಶನೇನಾಽಪಿ ಸರ್ವೇಷಾಂ ಸ್ಪರ್ಶಾದ್ದ್ವಿಗುಣಂ ಫಲಂ ॥ ೨೯ ॥
ಏವಂ ತುಷ್ಟೋ ಜಗನ್ನಾಥಃ ಸ್ಥಿತಃ ಪ್ರಾಚೀವನೇ ಧ್ರುವಂ ।
ಮನೋಽಪಿ ಯೇ ಕರಿಷ್ಯಂತಿ ಸ್ನಾನದಾನೇಷು ಕಾ ಕಥಾ ॥ ೩೦ ॥
ತೇಷಾಂ ತುಷ್ಟೋ ಜಗನ್ನಾಥಃ ಶಂಕರೋ ನೀಲಲೋಹಿತಃ ।
ತ್ರಿಂಶತ್ಕೋಟಿಗಣಸ್ತತ್ರ ಪ್ರಾಚೀಂ ರಕ್ಷಂತಿ ಸರ್ವತಃ ॥ ೩೧ ॥

---

೨೬. ಅಲ್ಲಿ ಪಿಂಡದಾನ ಮಾಡಿದರೆ ಗಯೆಯಲ್ಲಿ ಪಿಂಡದಾನ ಮಾಡಿದುದಕ್ಕಿಂತ ನೂರರಷ್ಟು ಹೆಚ್ಚು ಪುಣ್ಯವು ಲಭಿಸುವುದು. ಸೋಮವಾರದಿಂದ ಕೂಡಿದ ಅಮಾವಾಸ್ಯೆಯೂ ದಿನವೂ, ಕೃಷ್ಣ ಪಕ್ಷ ಚತುರ್ದಶೀ ದಿನವೂ ಪಿಂಡಪ್ರದಾನ ಮಾಡಿದವನು ಕೋಟಿ ಕುಲವನ್ನು ಉದ್ಧರಿಸುವನು.

೨೭. ಕೊಳೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಸ್ನಾನ ಮಾಡಿದ ಮಾನವರು ಹತ್ತು ಗೋದಾನಗಳನ್ನು ಮಾಡಿದ ಪುಣ್ಯವನ್ನು ಪಡೆಯುವರು.

೨೮. ಆಡುತ್ತ ಕಾಲಿನಿಂದ ನೀರನ್ನು ಮುಟ್ಟಿದ ಮಾನವರಿಗೂ ವಿಧ್ಯುಕ್ತವಾಗಿ ಶ್ರಾದ್ಧ ಮಾಡಿದ ಪುಣ್ಯವು ಲಭಿಸುವುದು. ಅಲ್ಲಿ ಶೂಲಭೇದವೇ ಮೊದಲಾದ ಲಿಂಗಗಳು ಪೂಜ್ಯವಾದುವು.

೨೯. ಈ ಪ್ರಕಾರ ಕಲ್ಪಿಸಿದ ಲಿಂಗಗಳನ್ನು ದರ್ಶನ ಮಾಡಿದವರಿಗೆ ಅಶ್ವಮೇಧ ಯಾಗದ ಫಲವೂ, ಸ್ಪರ್ಶಮಾಡಿದವರಿಗೆ ಅದರ ಇಮ್ಮಡಿ ಫಲವೂ ಲಭಿಸುವುದು

೩೦–೩೧. ಹೀಗೆ ಸಂತುಷ್ಟನಾದ ಶಂಕರನು ಪ್ರಾಚೀವನದಲ್ಲಿ ಸ್ಥಿರವಾಗಿ ನೆಲೆಸಿರುವನು. ಅಲ್ಲಿಗೆ ಹೋಗಲು ಮನಸ್ಸನ್ನು ಮಾಡಿದವರ ವಿಷಯದಲ್ಲಿಯೂ ಆ ಶಂಕರನು ಸಂತುಷ್ಟನಾಗುವನು. ಸ್ನಾನ ದಾನಮಾಡಿದವರಲ್ಲಿ ಸಂತುಷ್ಟನಾಗುವನೆಂದು ಹೇಳಬೇಕಾಗಿಲ್ಲ. ಮೂವತ್ತು ಕೋಟಿ ಶಿವಗಣಗಳು ಆ ಪ್ರಾಚಿಯನ್ನು ಕಾಪಾಡುವುವು.

ಮಹಾಪಾಪಸಮಾಚಾರಃ ಪಾಪಿಷ್ಠೋ ನಾಽತಿಕಿಲ್ಬಿಷೀ ।
ಘುಣಾಕ್ಷರಮಿವ ಪ್ರಾಣಾನ್ ಪ್ರಾಚ್ಯಾಂ ಮುಕ್ತ್ವಾ ಶಿವಂ ವ್ರಜೇತ್ ॥ ೩೨ ॥
ದಧಿ ಕಂಬಲದಾನಂ ತು ತತ್ರ ದೇಯಂ ದ್ವಿಜೋತ್ತಮೇ ।
ಕಥಿತಂ ಪಾಪಶಮನಂ ಸಾರಾತ್ಸಾರತರಂ ಧ್ರುವಂ ॥ ೩೩ ॥
ಅಧುನಾ ಸಂಪ್ರವಕ್ಷ್ಯಾಮಿ ಹಿರಣ್ಯಸ್ಯ ಮಹೋದಯಂ ।
ದುರ್ವಾಸಸಾತಪಸ್ತಪ್ತಂ ತತ್ರ ಸೂರ್ಯಃ ಪ್ರತಿಷ್ಠಿತಃ ॥ ೩೪ ॥
ಕೋಟಿರೇಕಾ ತು ತತ್ರೈವ ಋಷೀಣಾಮೂರ್ಧ್ವರೇತಸಾಂ ।
ಚತುರ್ವಿಂಶತಿತತ್ವಾನಾಮಧಿಕೋ ಬಲರೂಪಧೃಕ್ ॥ ೩೫ ॥
ಯತ್ರ ತಿಷ್ಠತಿದೇವೇಶಿ ಭೃಗುಕೋಟಿಸಮನ್ವಿತಃ ।
ಅನ್ಯತ್ರ ಬ್ರಾಹ್ಮಣಾನಾಂ ತು ಕೋಟ್ಯಾ ಯಚ್ಚ ಫಲಂ ಲಭೇತ್ ॥ ೩೬ ॥
ಬ್ರಹ್ಮಸ್ಥಾನೇ ತಥೈಕೇನ ಭೋಜಿತೇನ ತು ತತ್ಫಲಂ ।
ಏವಂ ಜ್ಞಾತ್ವಾ ಮಹಾದೇವಿ ತತ್ರ ತಿಷ್ಠಾಮಿ ನಿರ್ವೃತಃ ॥ ೩೭ ॥
ಕೋಟಿಭಿರ್ದೇವಋಷಿಭಿರ್ದೇವೈಃ ಸಹ ಸಮಾವೃತಃ ।
ತೀರ್ಥಾನಿ ತತ್ರ ತಿಷ್ಠಂತಿ ಅಂತರ್ಭೂತಾನಿ ವೈ ಕಲೌ ॥ ೩೮ ॥

---

೩೨. ಅತ್ಯಂತ ಪಾಪಿಷ್ಠನಾದ ಆಚಾರವುಳ್ಳ ಮಾನವನೂ ದುಂಬಿಯು ಕೊರೆದ ಅಕ್ಷರದಂತೆ ಪ್ರಾಚಿಯಲ್ಲಿ ಪ್ರಾಣವನ್ನು ಬಿಟ್ಟು ಶಿವನನ್ನು ಸೇರುವನು.

೩೩. ಅಲ್ಲಿ ಬ್ರಾಹ್ಮಣೋತ್ತಮರಿಗೆ ದಧಿಕಂಬಲದಾನವನ್ನು ಕೊಡಬೇಕು. ಇದು ಪಾಪವನ್ನು ಪರಿಹರಿಸುವುದರಲ್ಲಿ ಅತಿ ಶ್ರೇಷ್ಠವಾದುದು.

೩೪. ಈಗ ಹಿರಣ್ಯತೀರ್ಥದ ಮಾಹಾತ್ಮ್ಯವನ್ನು ಹೇಳುವೆನು. ಅಲ್ಲಿ ದುರ್ವಾಸನು ತಪಸ್ಸನ್ನಾಚರಿಸಿರುವನು. ಸೂರ್ಯನೂ ಅಲ್ಲಿ ನೆಲಸಿರುವನು.

೩೫–೩೭. ಅಲ್ಲಿಯೇ ಒಂದು ಕೋಟಿ ಬ್ರಹ್ಮಚಾರಿಗಳಾದ ಋಷಿಗಳು ನೆಲೆಸಿರು ವರು. ಇಪ್ಪತ್ತುನಾಲ್ಕು ತತ್ವಗಳಿಗಿಂತ ಅಧಿಕನಾಗಿ ಮಹಾಬಲರೂಪಗಳುಳ್ಳ ಶಂಕರನು ಕೋಟಿ ಜನ ಭೃಗುಗಳೊಡನೆ ನೆಲಸಿರುವನು. ಆ ಬ್ರಹ್ಮಸ್ಥಾನದಲ್ಲಿ ಒಬ್ಬಬ್ರಾಹ್ಮಣನಿಗೆ ಭೋಜನ ಮಾಡಿಸಿದ್ದರಿಂದ ಬೇರೆ ಕಡೆಯಲ್ಲಿ ಕೋಟಿ ಬ್ರಾಹ್ಮಣರಿಗೆ ಭೋಜನ ಮಾಡಿಸಿದ ಫಲವು ಲಭಿಸುವುದು. ಮಹಾದೇವಿ ! ನಾನು ಇದನ್ನರಿತು ಅಲ್ಲಿಯೇ ಸುಖದಿಂದಿರುವೆನು.

೩೮. ಕಲಿಯುಗದಲ್ಲಿ ಕೋಟಿ ಜನ ದೇವರ್ಷಿಗಳು ಮತ್ತು ದೇವತೆಗಳೊನೆ ಆ ಪ್ರಭಾಸ ತೀರ್ಥದಲ್ಲಿ ತೀರ್ಥಗಳು ಅಡಗಿಕೊಂಡಿರುವುವು.

ತತ್ರ ಕ್ಷೇತ್ರೇ ಮಹಾರಮ್ಯೇ ಯತ್ರ ಸೋಮೇಶ್ವರಃ ಸ್ಥಿತಃ ।
ಮಮ ದೇವಿ ಗಣೌ ಖ್ಯಾತೌ ತು ವಿಭ್ರಮಃ ಸಂಭ್ರಮಃ ಪರಃ ॥ ೩೯ ॥
ತೌ ಚಾತ್ರ ಕ್ಷೇತ್ರಸಂಸ್ಥಾನಾಂ ಲೋಕಾನಾಂ ಭ್ರಮವಿಭ್ರಮೈಃ ।
ಯೋಜಯಂತಿ ಸದಾ ಚಿತ್ತಂ ವಿಕಲ್ಪಾನೈಕ್ಯಸಂಕುಲಂ ॥ ೪೦ ॥
ವಿನಾಯಕೋಪಸರ್ಗಾಶ್ಚ ದಶ ದೋಷಾಸ್ತಥಾ ಪರೇ ।
ಏವಂ ಕ್ಷೇತ್ರಂ ತು ರಕ್ಷಂತಿ ಪಾಪಿನಾಂ ದುಷ್ಟಚೇತಸಾಂ ॥ ೪೧ ॥
ದಂಡಪಾಣಿಂ ತು ಯೇ ಭಕ್ತ್ಯಾ ಪಶ್ಯಂತೀಹ ನರೋತ್ತಮಾಃ ।
ನ ತೇಷಾಂ ಜಾಯತೇ ವಿಘ್ನಂ ತತ್ರ ಕ್ಷೇತ್ರನಿವಾಸಿನಾಂ ॥ ೪೨ ॥
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ವೈ ವರ್ಣಸಂಕರಾಃ ।
ಅಕಾಮಾ ವಾ ಸಕಾಮಾ ವಾ ಪ್ರಭಾಸೇ ಯೇ ಮೃತಾಃ ಶುಭೇ ॥ ೪೩ ॥
ಚಂದ್ರಾರ್ಧಮೌಲಿನಃ ಸರ್ವೇ ಲಲಾಟಾಕ್ಷಾ ವೃಷಧ್ವಜಾಃ ।
ಶಿವೇ ಮಮ ಪುರೇ ದಿವ್ಯೇ ಜಾಯಂತೇ ತತ್ರ ಮಾನವಾಃ ॥ ೪೪ ॥
ಯಸ್ತತ್ರ ವಸತೇ ವಿಪ್ರಃ ಸಂಯತಾತ್ಮಾ ಸಮಾಹಿತಃ ।
ತ್ರಿಕಾಲಮಪಿ ಭುಂಜಾನೋ ವಾಯುಭಕ್ಷಸಮೋಭವೇತ್ ॥ ೪೫ ॥

೩೯–೪೦. ದೇವಿ ! ಸೋಮೇಶ್ವರನಿರುವ ಆ ಕ್ಷೇತ್ರದಲ್ಲಿ ವಿಭ್ರಮ ಸಂಭ್ರಮ ಎಂಬ ಇಬ್ಬರು ಶಿವಗಣಗಳು ಅಲ್ಲಿರುವ ಜನರ ಮನಸ್ಸಿಗೆ ಭ್ರಮ ವಿಭ್ರಮಗಳಿಂದ ಅನೇಕ ವಿಕಲ್ಪಗಳನ್ನು ಉಂಟುಮಾಡುವರು.

೪೧. ಹಾಗೆಯೇ ವಿನಾಯಕಾದಿಗಳೂ, ಹತ್ತು ದೋಷಗಳೂ ದುಷ್ಟಾತ್ಮರಾದ ಪಾಪಿಗಳಿಂದ ಕ್ಷೇತ್ರವನ್ನು ರಕ್ಷಿಸುತ್ತವೆ.

೪೨. ಇಲ್ಲಿ ದಂಡಪಾಣಿಯನ್ನು ಭಕ್ತಿಯಿಂದ ನೋಡುತ್ತ ವಾಸಿಸುತ್ತಿರುವ ಜನರಿಗೆ ವಿಘ್ನವುಂಟಾಗುವುದಿಲ್ಲ.

೪೩–೪೪. ಮಂಗಳಕರವಾದ ಆ ಪ್ರಭಾಸಕ್ಷೇತ್ರದಲ್ಲಿ ಇಚ್ಛೆಯಿಂದಾಗಲಿ, ಇಚ್ಛೆಯಿಲ್ಲದೆಯಾಗಲಿ ಮೃತರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸಂಕರ ಜಾತಿಯವರು ಎಲ್ಲರೂ ಚಂದ್ರಮೌಳಿಗಳೂ, ಫಾಲನೇತ್ರರೂ, ವೃಷಭಧ್ವಜರೂ ಆಗಿ ಮಂಗಳಕರವಾದ ನನ್ನ ದಿವ್ಯ ಪಟ್ಟಣದಲ್ಲಿ ಜನಿಸುವರು.

೪೫. ಆ ಪ್ರಭಾಸಕ್ಷೇತ್ರದಲ್ಲಿ ಜಿತೇಂದ್ರಿಯನೂ, ಸಮಾಧಾನಗೊಂಡ ಮನಸ್ಸುಳ್ಳವನೂ ಆಗಿ ವಾಸಿಸುವ ಬ್ರಾಹ್ಮಣನು ಮೂರು ಹೊತ್ತು ಊಟಮಾಡುತ್ತಿದ್ದರೂ ಗಾಳಿ ಮಾತ್ರ ಆಹಾರವುಳ್ಳ ಮುನಿಗೆ ಸಮಾನನಾಗುವನು.

ಮೇರೋಃ ಶಕ್ಯಾ ಗುಣಾ ವಕ್ತುಂ ದ್ವೀಪಾನಾಂ ಚ ಗುಣಾಸ್ತಥಾ ।
ಸಮುದ್ರಾಣಾಂ ಚ ಸರ್ವೇಷಾಂ ಶಕ್ಯಾ ವಕ್ತುಂ ಗುಣಾಃ ಪ್ರಿಯೇ ॥ ೪೬ ॥
ಆದಿದೇವಸ್ಯ ದೇವೇಶಿ ಮಹೇಶಸ್ಯ ಮಹಾಪ್ರಭೋಃ ।
ಶಕ್ಯಾ ನೈವ ಗುಣಾ ವಕ್ತುಂ ವರ್ಷಕೋಟಿಶತೈರಪಿ ॥ ೪೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ
ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ
ಪ್ರಭಾಸಕ್ಷೇತ್ರಮಾಹಾತ್ಮ್ಯೇ ಕ್ಷೇತ್ರಸ್ಥರ್ಷಿದೇವ
ಗಣ ವರ್ಣನಂ ನಾಮ
॥ ಪಂಚಮೋಽಧ್ಯಾಯಃ ॥

೪೬-೪೭. ಪ್ರಿಯಳೆ ! ಮೇರುಪರ್ವತ, ದ್ವೀಪಗಳು, ಸಕಲ ಸಮುದ್ರಗಳು, ಮತ್ತು ಮಹಾ ಪ್ರಭುವಾದ ಮಹೇಶ್ವರನ ಶಕ್ತಿಯಗುಣಗಳನ್ನು ವರ್ಣಿಸಲು ನೂರು ಕೋಟಿ ವರ್ಷಗಳಿಂದಲೂ ಸಾಧ್ಯವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕ್ಷೇತ್ರಸ್ಥ ಋಷಿ, ದೇವ, ಗಣವರ್ಣನವೆಂಬ
ಐದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಷ್ಠೋಽಧ್ಯಾಯಃ

ಶ್ರೀ ಸೋಮೇಶ್ವರಮಹಿಮಾನುವರ್ಣನಂ

ದೇವ್ಯುವಾಚ:—

ಅತ್ಯದ್ಭುತಂ ಮಹಾದೇವ ಮಾಹಾತ್ಮ್ಯಂ ಕಥಿತಂ ಮಮ ।
ಅಪೂರ್ವಂ ದೇವದೇವೇಶ ಕದಾಚಿನ್ನ ಶ್ರುತಂ ಮಯಾ ॥ ೧ ॥
ಬ್ರಹ್ಮಾಂಡೇ ಯಾನಿ ಲಿಂಗಾನಿ ಕೀರ್ತಿತಾನಿ ತ್ವಯಾ ಮಮ ।
ತೇಷಾಂ ಪ್ರಭಾವೇನಾಧಿಕ್ಯಂ ಸೋಮೇಶೇ ತತ್ಕಥಂ ವದ ॥ ೨ ॥
ಕಿಂ ಪ್ರಭಾವೋ ಮಹಾದೇವ ಕ್ಷೇತ್ರಸ್ಯ ಚ ಸುರೇಶ್ವರ ।
ತನ್ಮೇ ಬ್ರೂಹಿ ಸುರೇಶಾನ ಯಾಥಾತಥ್ಯಂ ಮಮಾಗ್ರತಃ ॥ ೩ ॥

ಈಶ್ವರ ಉವಾಚ:—

ಅತಃ ಪರಂ ಪ್ರವಕ್ಷ್ಯಾಮಿ ರಹಸ್ಯಂ ಪರಮಂ ತವ ।
ಪ್ರಭಾಸಕ್ಷೇತ್ರಮಾಹಾತ್ಮ್ಯಂ ಸೋಮೇಶಸ್ಯ ವರಾನನೇ ॥ ೪ ॥
ತೀರ್ಥಾನಾಂ ಪರಮಂ ತೀರ್ಥಂ ವ್ರತಾನಾಂ ಪರಮಂ ವ್ರತಂ ।
ಜಾಪ್ಯಾನಾಂ ಪರಮಂ ಜಾಪ್ಯಂ ಧ್ಯಾನಾನಾಂ ಧ್ಯಾನಮುತ್ತಮಂ ॥ ೫ ॥

ಕನ್ನಡ ಅನುವಾದ

ಶ್ರೀ ಸೋಮೇಶ್ವರಮಹಿಮಾನುವರ್ಣನ

೧. ದೇವಿಯು ಹೇಳುತ್ತಾಳೆ :—ಮಹೇಶ್ವರ ! ನಾನು ಹಿಂದಾವಾಗಲೂ ಕೇಳದ ಮಹಾದೇವನ ಅದ್ಭುತವಾದ ಅಪೂರ್ವ ಮಾಹಾತ್ಮ್ಯವನ್ನು ನೀನು ನನಗೆ ಹೇಳಿರುವೆ.

೨. ನೀನು ನನಗೆ ಹೇಳಿರುವ ಬ್ರಹ್ಮಾಂಡದ ಎಲ್ಲ ಶಿವಲಿಂಗಗಳಿಗಿಂತಲೂ ಅಧಿಕವಾದ ಮಾಹಾತ್ಮ್ಯವು ಸೋಮೇಶ್ವರನಲ್ಲಿ ಹೇಗೆ ಸಂಭವಿಸಿತು ? ಅದನ್ನು ನನಗೆ ಹೇಳು.

೩. ಸುರೇಶ್ವರ ! ಆ ಮಹಾದೇವನ ಕ್ಷೇತ್ರಮಾಹಾತ್ಮ್ಯವು ಎಂತಹದು ? ಎಂಬುದನ್ನೂ ನನಗೆ ಹೇಳು.

೪. ಈಶ್ವರನು ಹೇಳುತ್ತಾನೆ :—ಸುಮುಖಿ ! ನಿನಗೆ ಇನ್ನು ಮುಂದೆ ಪ್ರಭಾಸದ ಮತ್ತು ಸೋಮೇಶ್ವರನ ರಹಸ್ಯವಾದ ಉತ್ತಮ ಮಾಹಾತ್ಮ್ಯವನ್ನು ಹೇಳುವೆನು.

೫—೬. ಆ ಮಾಹಾತ್ಮ್ಯವು ತೀರ್ಥಗಳಲ್ಲಿ ಉತ್ತಮತೀರ್ಥವೂ, ವ್ರತಗಳಲ್ಲಿ ಉತ್ತಮ ವ್ರತವೂ, ಜಪಗಳಲ್ಲಿ ಉತ್ತಮ ಜಪವೂ, ಧ್ಯಾನಗಳಲ್ಲಿ ಉತ್ತಮ ಧ್ಯಾನವೂ,

ಯೋಗಾನಾಂ ಪರಮೋ ಯೋಗೋ ರಹಸ್ಯಂ ಪರಮಂ ಮಹತ್ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಶೃಣು ಹ್ಯೇಕಮನಾ ಪ್ರಿಯೇ ॥ ೬ ॥
ಸೋಮೇಶಂ ಪರಮಂ ಸ್ಥಾನಂ ಪಂಚವಕ್ತ್ರಸಮನ್ವಿತಂ ।
ಏತಲ್ಲಿಂಗಂ ನ ಮುಂಚಾಮಿ ಸತ್ಯಂ ಸತ್ಯಂ ಮಯೋದಿತಂ ॥ ೭ ॥
ಯಚ್ಚ ತತ್ಪರಮಂ ದೇವಿ ಧ್ರುವಮಕ್ಷಯಮವ್ಯಯಂ ।
ಸೋಮೇಶಂ ತದ್ವಿಜಾನೀಹಿ ಮಾ ವಿಕಲ್ಪಮನಾ ಭವ ॥ ೮ ॥
ನಿರ್ಭಯಂ ನಿರ್ಮಲಂ ನಿತ್ಯಂ ನಿರಪೇಕ್ಷಂ ನಿರಾಶ್ರಯಂ ।
ನಿರಂಜನಂ ನಿಷ್ಪ್ರಪಂಚಂ ನಿಃಸಂಗಂ ನಿರುಪದ್ರವಂ ॥ ೯ ॥
ತಲ್ಲಿಂಗಮಿತಿ ಜಾನೀಹಿ ಪ್ರಭಾಸೇ ಸಂವ್ಯಸ್ಥಿತಂ ।
ಅಪವರ್ಗಮವಿಜ್ಞೇಯಂ ಮನೋರಮ್ಯಮನಾಮಯಂ ॥ ೧೦ ॥
ನಿತ್ಯಂ ಚ ಕಾರಣಂ ದೇವಂ ಮುಖಘ್ನಂ ಸರ್ವತೋಮುಖಂ ।
ಶಿವಂ ಸರ್ವಾತ್ಮಕಂ ಸೂಕ್ಷ್ಮಮನಾದ್ಯಂ ಯಚ್ಚ ದೈವತಂ ॥ ೧೧ ॥
ಆತ್ಮೋಪಲಬ್ಧಿವಿಜ್ಞೇಯಂ ಚಿತ್ತಚಿಂತಾವಿವರ್ಜಿತಂ ।
ಗಮಾಗಮವಿನಿರ್ಮುಕ್ತಂ ಬಹಿರಂತಶ್ಚ ಕೇವಲಂ ॥ ೧೨ ॥

ಯೋಗಗಳಲ್ಲಿ ಉತ್ತಮ ಯೋಗವೂ ಆಗಿರುವುದು. ಅದನ್ನು ನಿನಗೆ ಹೇಳುವೆನು. ಒಮ್ಮನಸ್ಸಿನಿಂದ ಕೇಳು.

೭. ಐದು ಮುಖಗಳುಳ್ಳ ಸೋಮೇಶ್ವರ ಲಿಂಗವನ್ನು ಸತ್ಯವಾಗಿಯೂ ನಾನು ತೊರೆಯುವುದಿಲ್ಲ.

೮. ದೇವಿ ! ಆ ಸೋಮೇಶ್ವರನು ಉತ್ತಮನೂ ಶಾಶ್ವತನೂ ವಿಕಾರ ರಹಿತನೂ, ಆಗಿರುವನೆಂದು ತಿಳಿ. ವಿಕಲ್ಪವಾದ ಮನಸ್ಸುಳ್ಳವಳಾಗಬೇಡ.

೯–೨೦. ಪ್ರಭಾಸದಲ್ಲಿರುವ ಆ ಸೋಮೇಶ್ವರನು ಭಯವಿಲ್ಲದವನೂ, ಶುದ್ಧನೂ, ಶಾಶ್ವತನೂ, ಇತರಾಪೇಕ್ಷೆಯಿಲ್ಲದವನೂ ಆಶ್ರಯರಹಿತನೂ, ದೋಷರಹಿತನೂ, ಪ್ರಪಂಚ ಭಿನ್ನನೂ, ವಿಷಯಸಂಗದೂರನು ಉಪದ್ರವವಿಲ್ಲದವನೂ, ಮೋಕ್ಷಸ್ವರೂಪನೂ, ತಿಳಿಯ ಲಶಕ್ಯನೂ, ಮನೋಹರನೂ, ರೋಗರಹಿತನೂ, ಕಾರಣನೂ ಸರ್ವಪ್ರಕಾಶಕನೂ, ದಕ್ಷಯಜ್ಞನಾಶಕನೂ, ಸರ್ವದಿಕ್ಕುಗಳಲ್ಲಿಯೂ ಮುಖವುಳ್ಳವನೂ, ಸರ್ವಸ್ವರೂಪನೂ ಸೂಕ್ಷ್ಮನೂ, ಆದಿರಹಿತನೂ, ಆತ್ಮಸಾಕ್ಷಾತ್ಕಾರದಿಂದ ತಿಳಿಯಲರ್ಹನೂ, ಚಿಂತೆಯಿಲ್ಲ ದವನೂ, ಗಮನಾಗಮನರಹಿತನೂ, ಒಳಗೂ ಹೊರಗೂ ಒಂದೇ ರೂಪವುಳ್ಳವನೂ, ಸ್ತುತಿಗೆ ಅವಿಷಯನೂ, ಶುದ್ಧಸ್ವರೂಪನೂ, ಪ್ರಕಟರೂಪನೂ, ಜ್ಞಾನದಿಂದ ವಿರಾಜಿಸು ವವನೂ, ಅವಕಾಶಸಹಿತನೂ, ಶಬ್ದರೂಪನೂ, ವೇದಾಂತವೇದ್ಯನೂ, ದೇವತೆಗಳಿಗೆ

ಆತ್ಮೋಪಲಬ್ಧಿವಿಷಯಂ ಸ್ತುತಿಗೋಚರವರ್ಜಿತಂ ।
ನಿಷ್ಕಲಂ ವಿಮಲಾತ್ಮಾನಂ ಪ್ರಕಟಂ ಜ್ಞಾನದೀಪಕಂ ॥ ೧೩ ॥
ತಲ್ಲಿಂಗಮಿತಿ ಜಾನೀಹಿ ಪ್ರಭಾಸೇ ಸುರಸುಂದರಿ ।
ನಿರಾವಕಾಶರಹಿತಂ ಶಬ್ದಂ ಶಬ್ದಾಂತಗೋಚರಂ ॥ ೧೪ ॥
ನಿಷ್ಕಲಂ ವಿಮಲಂ ದೇವಂ ದೇವದೇವಂ ಸುರಾತ್ಮಕಂ ।
ಹೇತುಪ್ರಮಾಣರಹಿತಂ ಕಲ್ಪನಾಭಾವವರ್ಜಿತಂ ॥ ೧೫ ॥
ಚಿತ್ತಾವಲೋಕವಿಷಯಂ ಬಹಿರಂತರಸಂಸ್ಥಿತಂ ।
ಪ್ರಭಾಸೇ ತಂ ವಿಜಾನೀಹಿ ಪ್ರಣವಂ ಲಿಂಗರೂಪಿಣಂ ॥ ೧೬ ॥
ಅನಿಷ್ಪಂದಂ ಮಹಾತ್ಮಾನಂ ನಿರಾನಂದಾವಲೋಕನಂ ।
ಲೋಕಾವಲೋಕಮಾರ್ಗಸ್ಥಂ ವಿಶುದ್ಧಜ್ಞಾನಕೇವಲಂ ॥ ೧೭ ॥
ವಿದ್ಯಾವಿಶೇಷಮಾರ್ಗಸ್ಥಮನೇಕಾಕಾರಸಂಜ್ಞಿತಂ ।
ಸ್ವಭಾವಭಾವನಾಗ್ರಾಹ್ಯಂ ಭಾವಾತೀತಮಲಕ್ಷಣಂ ॥ ೧೮ ॥
ವಾಕ್ಪ್ರಪಂಚಾದಿರಹಿತಂ ನಿಷ್ಪ್ರಪಂಚಾತ್ಮಕಂ ಶಿವಂ ।
ಜ್ಞಾನಜ್ಞೇಯಾವಲೋಕಸ್ಥಂ ಹೇತ್ವಾಭಾಸವಿವರ್ಜಿತಂ ॥ ೧೯ ॥
ಅನಾಹತಂ ಶಬ್ದಗತಂ ಶಬ್ದಾದಿಗಣಸಂಭವಂ ।
ಏವಂ ಸೋಮೇಶ್ವರಂ ವಿದ್ಧಿ ಪ್ರಭಾಸೇ ಲಿಂಗರೂಪಿಣಂ ॥ ೨೦ ॥
ಶಬ್ದಬ್ರಹ್ಮಗತಂ ಶಾಂತಂ ಸ ಶಬ್ದಾಂತಗಮಾಸ್ಪದಂ ।
ಸರ್ವಾತಿರಿಕ್ತವಿಷಯಂ ಸರ್ವಧ್ಯಾನಪದೇ ಸ್ಥಿತಂ ॥ ೨೧ ॥

ದೇವತೆಯೂ, ದೇವರೂಪನೂ, ಯುಕ್ತಿಪ್ರಮಾಣಗಳಿಗೆ ಸಿಕ್ಕದವನೂ, ಕಲ್ಪರಹಿತನೂ, ಜ್ಞಾನವಿಷಯನೂ, ಪ್ರಾಣಿಗಳ ಒಳಗೂ ಹೊರಗೂ ನೆಲಸಿರುವವನೂ, ನಿಶ್ಚಲನೂ, ಮಹಾತ್ಮನೂ, ಆನಂದ ಸ್ವರೂಪನೂ, ಪ್ರಕಾಶರಹಿತನೂ, ಜನರ ದೃಷ್ಟಿಮಾರ್ಗದಲ್ಲಿರುವವನೂ, ವಿಶುದ್ಧಜ್ಞಾನರೂಪನೂ,ಜ್ಞಾನಮಾರ್ಗವರ್ತಿಯೂ, ಅನೇಕಾಕಾರಗಳಿಂದ ಅನೇಕ ನಾಮಗಳನ್ನು ಪಡೆದವನೂ, ಚೇತನ ಸ್ವಭಾವದ ಭಾವನೆಯಿಂದರಿಯಲು ಮಾತ್ರ ಶಕ್ಯನೂ,ಭಾವನೆಗೆ ಒಳಪಡದವನೂ, ಲಕ್ಷಣವಿಲ್ಲದವನೂ, ವಾಗಗೋಚರನೂ, ಪ್ರಪಂಚಭಿನ್ನನೂ, ಜ್ಞಾನಮಯನೂ, ಜ್ಞೇಯ ಪ್ರಕಾಶಸ್ಥಿತನೂ, ದುಷ್ಟಯುಕ್ತಿಗಳಿಗೆ ಅವಿಷಯನೂ ದುಃಖಾದಿ ಉಪದ್ರವರಹಿತೂ, ಶಬ್ದ ನಿಷ್ಠನೂ, ಶಬ್ದ ಮೊದಲಾದುವುಗಳ ಸಮೂಹದಿಂದ ಹುಟ್ಟಿದವನೂ ಆಗಿರುವನು.

೨೧–೩೫. ಅಲ್ಲದೆ ಆ ಸೋಮೇಶ್ವರನು ಶಬ್ದಬ್ರಹ್ಮಾಂತರ್ಯಾಮಿಯೂ ಶಾಂತನೂ, ವೇದಾನ್ತಗಮ್ಯನೂ, ಸಕಲಾಶ್ರಯನೂ, ಸಕಲ ವಿಷಯಗಳನ್ನತಿಕ್ರಮಿಸಿದವನೂ, ಸಕಲ ಜನರ ಧ್ಯಾನಕ್ಕೆವಿಷಯನೂ, ಅನಾದಿಯೂ, ನಾಶರಹಿತನೂ, ಪ್ರಮಾಣ

ಅನಾದಿಮಚ್ಯುತಂ ದಿವ್ಯಂ ಪ್ರಮಾಣಾತೀತಗೋಚರಂ ।
ಅಧಶ್ಚೋರ್ಧ್ವಂಗತಂ ನಿತ್ಯಂ ಜೀವಾಖ್ಯಂ ದೇಹಸಂಸ್ಥಿತಂ ॥ ೨೨ ॥
ಹೃದಾದಿದ್ವಾದಶಾಂತಸ್ಥಂ ಪ್ರಾಣಾಪಾನೋದಯಾಸ್ತಗಂ ।
ಅಗ್ರಾಹ್ಯಮಿಂದ್ರಿಯಾತ್ಮಾನಂ ನಿಷ್ಕಲಂಕಾತ್ಮಕಂ ವಿಭುಂ ॥ ೨೩ ॥
ಸ್ವರಾದಿವ್ಯಂಜನಾತೀತಂ ವರ್ಣಾದಿಪರಿವರ್ಜಿತಂ ।
ವಾಚಾಮವಾಚ್ಯವಿಷಯಮಹಂಕಾರಾರ್ಥರೂಪಿಣಂ ॥ ೨೪ ॥
ಅಪ್ರತರ್ಕ್ಯಮನುಚ್ಚಾರ್ಯಂ ಕಲನಾಕಾಲವರ್ಜಿತಂ ।
ನಿಃಶಬ್ದಂ ನಿಶ್ಚಲಂ ಸೌಮ್ಯಂ ದೇಹಾತೀತಪರಾತ್ಪರಂ ॥ ೨೫ ॥
ಭೂತಾವಗ್ರಹರಹಿತಂ ಭಾವಾಭಾವವಿವರ್ಜಿತಂ ।
ಅವಿಜ್ಞೇಯಂ ಪರಂ ಸೂಕ್ಷ್ಮಂ ಪಂಚಪಂಚಾದಿಸಂಭವಂ ॥ ೨೬ ॥
ಅಪ್ರಮೇಯಮನಂತಾಖ್ಯಮಕ್ಷಯಂ ಕಾಮರೂಪಿಣಂ ।
ಪ್ರಭವಂ ಸರ್ವಭೂತಾನಾಂ ಬೀಜಾಂಕುರಸಮುದ್ಭವಂ ॥ ೨೭ ॥
ವ್ಯಾಪಕಂ ಸರ್ವಕಾಮಾಖ್ಯಮಕ್ಷರಂ ಪರಮಂ ಮಹತ್ ।
ಸ್ಥೂಲಸೂಕ್ಷ್ಮವಿಭಾಗಸ್ಥಂ ವ್ಯಕ್ತಾವ್ಯಕ್ತಂ ಸನಾತನಂ ॥ ೨೮ ॥
ಕಲ್ಪಕಲ್ಪಾಂತರರಹಿತಮನಾದಿನಿಧನಂ ಮಹತ್ ।
ಮಹಾಭೂತಂ ಮಹಾಕಾಯಂ ಶಿವಂ ನಿರ್ವಾಣಭೈರವಂ ॥ ೨೯ ॥
ಏವಂ ಸದಾಶಿವಂ ವಿದ್ಧಿ ಪ್ರಭಾಸೇ ಲಿಂಗರೂಪಿಣಂ ।
ಯೋಗಕ್ರಿಯಾವಿನಿರ್ಮುಕ್ತಂ ಮೃತ್ಯುಂಜಯಮನಾದಿಮತ್ ॥ ೩೦ ॥
ಸರ್ವೋಪಸರ್ಗರಹಿತಂ ಸರ್ವತೋವ್ಯಾಪಕಂ ಶಿವಂ ।
ಅವ್ಯಕ್ತಂ ಪರತೋ ನಿತ್ಯಂ ಕೇವಲಂ ದ್ವೈತವರ್ಜಿತಂ ॥ ೩೧ ॥
ಅನನ್ಯತೇಜಸಾಕ್ರಾಂತಂ ಪ್ರಭಾಸಕ್ಷೇತ್ರವಾಸಿನಾಂ ।
ಭೂರಿಸ್ವಯಂಪ್ರಭಪ್ರಖ್ಯಂ ಸರ್ವತೋಜೋಽಧಿಕಂ ಹರಂ ॥ ೩೨ ॥
ಶರಣ್ಯಂ ದೇವಮೀಶಾನಮೋಂಕಾರಂ ಶಿವರೂಪಿಣಂ ।
ದೇವದೇವಂ ಮಹಾದೇವಂ ಪಂಚವಕ್ತ್ರಂ ವೃಷಧ್ವಜಂ ॥ ೩೩ ॥

ಗಳಿಗೆ ಅವಿಷಯನೂ, ಮೇಲೂ ಕೆಳಗೂ ವ್ಯಾಪಿಸಿರುವವನೂ, ಪ್ರಾಣಿಗಳ ದೇಹದಲ್ಲಿದ್ದು ಜೀವನೆಂದು ಹೆಸರನ್ನು ಪಡೆದವನೂ, ಹೃದಯ ಮೊದಲಾದ ದ್ವಾದಶ ಸ್ಥಾನಗಳಲ್ಲಿರುವವನೂ, ಪ್ರಾಣ, ಅಪಾನ, ಉದಯ, ಅಸ್ತಗಳಲ್ಲಿರುವವನೂ, ಇಂದ್ರಿಯ ಸ್ವರೂಪನೂ, ಸ್ವರ, ವ್ಯಂಜನವರ್ಣಗಳನ್ನು ಅತಿಕ್ರಮಿಸಿದವನೂ, ಅಹಂಕಾರದ ಅರ್ಥಸ್ವರೂಪನೂ, ಊಹಿಸಲಶಕ್ಯನೂ, ಉಚ್ಚರಿಸಲಾಗದವನೂ, ಕಾಲಗಣನೆಯಿಲ್ಲದವನೂ, ಶಬ್ದ ಚಲನೆಗಳಿಲ್ಲದವನೂ, ಸೌಮ್ಯನೂ, ದೇಹವನ್ನು ಅತಿಕ್ರಮಿಸಿದವನೂ ಉತ್ತಮರಿಗಿಂತ ಉತ್ತಮನೂ, ಪಂಚಭೂತಗಳನ್ನು ಅತಿಕ್ರಮಿಸಿದವನೂ,

ನಿರ್ಗಲಂ ಮಾನಸಾತೀತಂ ಭಾವಗ್ರಾಹ್ಯಮನೂಪಮಂ ।
ಸದಾ ಶಾಂತಂ ವಿರೂಪಾಕ್ಷಂ ಶೂಲಹಸ್ತಂ ಜಟಾಧರಂ ॥ ೩೪ ॥
ಹೃತ್ಪದ್ಮಕೋಶಮಧ್ಯಸ್ಥಂ ಶೂನ್ಯರೂಪಂ ನಿರಂಜನಂ ।
ಏವಂ ಸದಾಶಿವಂ ವಿದ್ಧಿ ಪ್ರಭಾಸೇ ಲಿಂಗರೂಪಿಣಂ ॥ ೩೫ ॥
ಯೋಽಸೌ ಪರಾತ್ಪರೋ ದೇವೋ ಹಂಸಾಖ್ಯಃ ಪರಿಕೀರ್ತಿತಃ ।
ನಾದಾಖ್ಯಃ ಸುವ್ರತೇ ದೇವಿ ಸೋಽಸ್ಮಿನ್ ಸ್ಥಾನೇ ಸ್ಥಿತಃ ಸ್ವಯಂ ॥ ೩೬ ॥
ಏತದಾದಿ ಸ್ವರೂಪಂ ಚ ಮಯಾ ಯೋಗಬಲೇನ ತು ।
ವಿಜ್ಞಾತಂ ದೇವಿ ಗದಿತಂ ದಿವ್ಯಮಾತ್ಮಾನಮಾತ್ಮನಾ ॥ ೩೭ ॥
ಋಗ್ವೇದಸ್ಥಸ್ತು ಪೂರ್ವಾಹ್ನೇ ಮಧ್ಯಾಹ್ನೇ ಯಜುಷಿ ಸ್ಥಿತಃ ।
ಅಪರಾಹ್ನೇ ತು ಸಾಮಸ್ಥೋ ಹ್ಯಥರ್ವಸ್ಥೋ ನಿಶಾಗಮೇ ॥ ೩೮ ॥

ತಡೆಯಿಲ್ಲದವನೂ, ಸ್ಥಿತಿನಾಶರಹಿತನೂ, ತಿಳಿಯಲಶಕ್ಯನೂ, ಅತಿಸೂಕ್ಷ್ಮನೂ ಇಪ್ಪತ್ತೈದು ತತ್ವಗಳಿಗಿಂತ ಮೊದಲೇ ಜನಿಸಿದವನೂ. ಅನಂತ ನಾಮಧೇಯನೂ, ಸ್ವೇಚ್ಛಾರೂಪಿಯೂ, ಸಕಲ ಪ್ರಾಣಿಗಳನ್ನು ಸೃಜಿಸುವವನೂ, ಬೀಜ ಮೊಳಕೆಗಳಿಗೆ ಕಾರಣನೂ, ಸರ್ವವ್ಯಾಪಕನೂ, ಸಕಲ ಕಾಮನೆಂಬ ಹೆಸರುಳ್ಳವನೂ, ಸ್ಥೂಲ ಸೂಕ್ಷ್ಮವಿಭಾಗಗಳಲ್ಲಿರುವವನೂ, ವ್ಯಕ್ತನೂ, ಅಸ್ಪಷ್ಟನೂ, ಕಲ್ಪ ಕಲ್ಪಾಂತಗಳಿಲ್ಲದವನೂ, ಆದ್ಯಂತರಹಿತನೂ, ಮಹಾಭೂತರೂಪನೂ, ಮಹಾ ದೇಹವುಳ್ಳವನೂ, ಭಯಂಕರನೂ, ಯೋಗಕ್ರಿಯೆಗಳಿಗೆ ಅಗೋಚರನೂ, ಮೃತ್ಯುವನ್ನು ಜಯಿಸಿದವನೂ, ಅನಾದಿಯೂ, ಸಕಲಸೃಷ್ಟಿರಹಿತನೂ, ಸರ್ವತ್ರವ್ಯಾಪಕನೂ, ಭೇದರಹಿತನೂ, ಅಸಾಧಾರಣ ತೇಜಸ್ವಿಯೂ, ಸ್ವಯಂ ಪ್ರಕಾಶರೂಪನೂ, ಸಕಲ ತೇಜಸ್ಸುಗಳಿಗಿಂತ ಅಧಿಕನೂ, ರಕ್ಷಕನೂ, ಓಂಕಾರರೂಪನೂ, ಐದು ಮುಖಗಳುಳ್ಳವನೂ, ವೃಷಭಧ್ವಜನೂ, ಮನಸ್ಸಿಗೆ ಅವಿಷಯನೂ ಅಸಮಾನನೂ, ವಿರೂಪಾಕ್ಷನೂ, ತ್ರಿಶೂಲವನ್ನು ಹಿಡಿದವನೂ, ಜಟೆಯನ್ನು ಧರಿಸಿದವನೂ, ಹೃದಯಕಮಲದಲ್ಲಿರುವವನೂ, ರೂಪರಹಿತನೂ, ಆಗಿ ವಿರಾಜಿಸುತ್ತಿರುವನು.

೩೬. ದೇವಿ ! ಸರ್ವೋತ್ತಮನೂ, ಹಂಸನಾಮಕನೂ, ನಾದಾಖ್ಯನೂ ಆದ ಆ ಸೋಮೇಶ್ವರನು ಆ ಪ್ರಭಾಸಕ್ಷೇತ್ರದಲ್ಲಿ ನೆಲೆಸಿರುವನು.

೩೭. ದೇವಿ ! ಇವೇ ಮೊದಲಾದ ಸ್ವರೂಪವುಳ್ಳ ಆ ಪರಮಾತ್ಮನನ್ನು ನಾನು ಯೋಗಬಲದಿಂದರಿತು ನಿನಗೆ ಹೇಳಿರುವೆನು.

೩೮. ಅವನು ಪೂರ್ವಾಹ್ಣದಲ್ಲಿ ಋಗ್ವೇದದಲ್ಲಿಯೂ, ಮಧ್ಯಾಹ್ನದಲ್ಲಿ ಯಜುರ್ವೇದದಲ್ಲಿಯೂ, ಅಪರಾಹ್ಣದಲ್ಲಿ ಸಾಮವೇದದಲ್ಲಿಯೂ, ರಾತ್ರಿಯಲ್ಲಿ ಅಥರ್ವವೇದದಲ್ಲಿಯೂ ಪ್ರತಿಷ್ಠಿತನಾಗಿರುವನು.

ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಃ ಪರಸ್ತಾತ್ ।
ತಮೇವ ವಿದಿತ್ವಾ ನ ಭವೇತ್ತು ಮೃತ್ಯು
ರ್ನಾಽನ್ಯಃ ಪಂಥಾ ವಿದ್ಯತೇ ವೈ ಜನಾನಾಂ ॥ ೩೯ ॥
ಇತೀರಿತಸ್ತೇ ತು ಮಹಾಪ್ರಭಾವಃ
ಸೋಮೇಶಲಿಂಗಸ್ಯ ಕೃತೈಕದೇಶಃ ।
ವೃತಂ ನ ಚಾಽಬ್ದೈರ್ಬಹುಭಿಃ ಸಹಸ್ರೈ
ರ್ವಕ್ತುಂ ಚ ಕೇನಾಽಪಿ ಮುಖೈರ್ನ ಶಕ್ಯಂ ॥ ೪೦ ॥

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋಽಪೀದಂ ಪಠೇದ್ಯದಿ ।
ನಿರ್ಮುಕ್ತಃ ಸರ್ವಪಾಪೇಭ್ಯಃ ಸರ್ವಾನ್ ಕಾಮಾನವಾಪ್ನುಯಾತ್ ॥ ೪೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀ ಸೋಮೇಶ್ವರಮಹಿಮಾನುವರ್ಣನಂ ನಾಮ
ಷಷ್ಠೋಽಧ್ಯಾಯಃ

---

೩೯. ನಾನು ಮಹಾಪುರುಷನೂ, ಆದಿತ್ಯವರ್ಣನೂ, ತಮೋಗುಣರಹಿತನೂ, ಆದ ಈ ಸೋಮೇಶ್ವರನನ್ನರಿತಿರುವೆನು. ಇವನನ್ನು ತಿಳಿದವನು ಮೃತ್ಯು ವಶನಾಗಲಾರನು. ಜನರಿಗೆ ಇವನನ್ನು ಬಿಟ್ಟರೆ ಮೋಕ್ಷಕ್ಕೆ ಬೇರೆ ದಾರಿಯಿಲ್ಲ.

೪೦. ಹೀಗೆ ನಿನಗೆ ಸೋಮೇಶ್ವರನ ಕೆಲವು ಮಹಿಮೆಗಳನ್ನು ಹೇಳಿರುವೆನು. ಸಂಪೂರ್ಣ ಮಾಹಾತ್ಮ್ಯೆಯನ್ನು ಅನೇಕ ವರ್ಷಕಾಲ ಸಾವಿರ ಬಾಯಿಗಳಿಂದಲೂ ಹೇಳಲು ಸಾಧ್ಯವಿಲ್ಲ.

೪೧. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿ ಯಾವನಾಗಲಿ ಇದನ್ನು ಪಠಿಸಿದರೆ ಅವನು ಸಕಲ ಪಾಪ ಮುಕ್ತನಾಗಿ ಸಮಸ್ತ ಇಷ್ಟಾರ್ಥಗಳನ್ನೂ ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸ ಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಹಾತ್ಮ್ಯದಲ್ಲಿ
ಶ್ರೀ ಸೋಮೇಶ್ವರಮಹಿಮಾನುವರ್ಣನವೆಂಬ
ಆರನೆಯಅಧ್ಯಾಯವು ಮುಗಿದುದು.

ಶ್ರೀಃ

ಸಪ್ತಮೋಽಧ್ಯಾಯಃ

ಶ್ರೀ ಸೋಮನಾಥಪ್ರಾದುರ್ಭಾವವರ್ಣನಂ

ಸೂತಉವಾಚ :—

ಏವಂ ತತ್ರ ತದಾ ದೇವೀ ಶ್ರುತ್ವಾ ಮಾಹಾತ್ಮ್ಯಮುತ್ತಮಂ ।
ಹರ್ಷೋತ್ಕಂಠಿತಯಾ ವಾಚಾ ಪುನಃ ಪಪ್ರಚ್ಛ ಶಂಕರಂ ॥ ೧ ॥

ದೇವ್ಯುವಾಚ :—

ದೇವದೇವ ಜಗನ್ನಾಥ ಭಕ್ತಾನುಗ್ರಹಕಾರಕ ।
ಸಮಸ್ತಜ್ಞಾನಸಂಪನ್ನ ನಮಸ್ತೇಽಸ್ತು ಮಹೇಶ್ವರ ॥ ೨ ॥

ನಮೋಽಸ್ತು ವೈತ್ರಿಪುರಪ್ರಹರ್ತ್ರೇ
ಮಹಾತ್ಮನೇ ತಾರಕಮರ್ದನಾಯ ।
ನಮೋಽಸ್ತು ತೇ ಕ್ಷೀರಸಮುದ್ರಶಾಯಿನೇ
ಶಿಶೋರ್ಮುನೀಂದ್ರಸ್ಯ ಸಮಾಹಿತಸ್ಯ ॥ ೩ ॥

ಕನ್ನಡ ಅನುವಾದ

ಶ್ರೀ ಸೋಮನಾಥಪ್ರಾದುರ್ಭಾವವರ್ಣನ

೧. ಸೂತನು ಹೇಳುತ್ತಾನೆ :—ಹೀಗೆ ದೇವಿಯು ಆ ಸೋಮೇಶ್ವರನ ಮಾಹಾತ್ಮ್ಯವನ್ನು ಕೇಳಿ ಸಂತೋಷದಿಂದ ಔತ್ಸುಕ್ಯಗೊಂಡು ಮರಳಿ ಶಂಕರನನ್ನು ಈರೀತಿ ಪ್ರಶ್ನಿಸಿದನು.

೨. ದೇವಿಯು ಹೇಳುತ್ತಾಳೆ :—ಜಗದೊಡೆಯನೂ, ಭಕ್ತರಿಗೆ ಅನುಗ್ರಹವನ್ನು ಮಾಡುವವನೂ, ಸಕಲ ಜ್ಞಾನಗಳಿಂದ ತುಂಬಿರುವವನೂ, ಆದ ಓ ಮಹೇಶ್ವರ! ನಿನಗೆ ನಮಸ್ಕಾರವು.

೩. ತ್ರಿಪುರಾಂತಕನೂ, ತಾರಕಾಸುರನನ್ನು ಸಂಹರಿಸಿದವನೂ ಕ್ಷೀರಸಮುದ್ರದಲ್ಲಿ ಮಲಗಿದವನೂ, ಸಮಾಧಿನಿರತನಾದ ಮುನೀಂದ್ರನ ಶಿಶುವೂ ಆದ ಎಲೈ ಶಂಕರನೇ ! ನಿನಗೆ ನಮಸ್ಕಾರವು.

ನಮೋಽಸ್ತು ತೇ ಸರ್ವಜಗದ್ವಿಧಾತ್ರೇ
ಸರ್ವತ್ರ ಸರ್ವಾತ್ಮಕ ಸರ್ವಕರ್ತ್ರೇ ।
ನಮೋ ಭವಾಯಾಽಸ್ತು ನಮೋಽಭವಾಯ
ನಮೋಽಸ್ತು ತೇ ಸರ್ವಗತಾಯ ನಿತ್ಯಂ ॥ ೪ ॥

ಈಶ್ವರ ಉವಾಚ:—

ಕಿಂ ದೇವಿ ಪೃಚ್ಛಸೇಽದ್ಯಾಽಪಿ ಸರ್ವಂ ತೇ ಕಥಿತಂ ಮಯಾ ।
ಸಂದಿಗ್ಧಮಸ್ತಿ ಕಿಂಚಿಚ್ಚೇತ್ ಪುನಃ ಪೃಚ್ಛಸ್ವ ಭಾಮಿನಿ ॥ ೫ ॥

ದೇವ್ಯುವಾಚ:—

ಸೋಮೇಶ್ವರೇತಿ ಯನ್ನಾಮ ಕಸ್ಮಿನ್ ಕಾಲೇ ಬಭೂವ ತತ್ ।
ಕಿಂ ನಾಮಾಽಗ್ರೇಽಭವಲ್ಲಿಂಗಂ ನಾಮ ಕಿಂ ಭವಿತಾಽಧುನಾ ॥ ೬ ॥
ಏವಂ ಯಸ್ಯ ಪ್ರಭಾವೋ ವೈ ನೋಕ್ತಃ ಪೂರ್ವಂ ತ್ವಯಾ ವಿಭೋ ।
ಅನ್ಯೇಷಾಂ ತೀರ್ಥದೇವಾನಾಂ ಮಾಹಾತ್ಮ್ಯಂ ವರ್ಣಿತಂ ತ್ವಯಾ ।
ನ ತ್ವೀದೃಶಂ ತು ಕಥಿತಂ ಶ್ರೀಸೋಮೇಶಸ್ಯ ಯಾದೃಶಂ ॥ ೭ ॥

ಈಶ್ವರ ಉವಾಚ:—

ಪೂರ್ವಮೇವಾಽಹಮೇವಾಽಸಂ ಸ್ಪರ್ಶಲಿಂಗಸ್ವರೂಪವಾನ್ ।
ನ ಚ ಮಾಂ ತತ್ವತೋ ವೇದ ಜನಃ ಕಶ್ಚಿದಿಹೇಶ್ವರಿ ॥ ೮ ॥

---

೪. ಸಕಲ ಜಗತ್ತುಗಳನ್ನು ಸೃಜಿಸಿದವನೂ, ಸರ್ವಸ್ವರೂಪನೂ, ಸರ್ವವನ್ನೂ ಸೃಜಿಸುವವನೂ, ಭವಾಭವರೂಪನೂ, ಸರ್ವವ್ಯಾಪಿಯೂ ಆದ ಶಂಕರ ! ನಿನಗೆ ನಮಸ್ಕಾರವು.

ಈಶ್ವರನು ಹೇಳುತ್ತಾನೆ :—ದೇವಿ ! ಈಗಲೂ ಏನನ್ನು ಕೇಳುವೆ ? ನಾನು ನಿನಗೆ ಎಲ್ಲವನ್ನೂ ಹೇಳಿರುವೆನು. ಏನಾದರೂ ಸಂದೇಹವಿದ್ದರೆ ಮರಳಿ ಕೇಳು.

೬. ದೇವಿಯು ಹೇಳುತ್ತಾಳೆ :—ಆ ಲಿಂಗವು ಯಾವಾಗ ಸೋಮೇಶ್ವರನೆಂದು ಪ್ರಸಿದ್ಧವಾಯಿತು. ಮೊದಲು ಯಾವ ಹೆಸರುಳ್ಳುದಾಗಿದ್ದಿತು. ಈಗ ಯಾವ ಹೆಸರನ್ನು ಪಡೆಯುವುದು ?

೭. ಸ್ವಾಮಿ ನೀನು ಹಿಂದೆ ಇತರ ತೀರ್ಥದೇವತೆಗಳ ಮಹಾತ್ಮ್ಯವನ್ನು ಹೇಳಿರುವೆ. ಈ ಸೋಮೇಶ್ವರನ ಮಾಹಾತ್ಮ್ಯವನ್ನು ಹೇಳಲಿಲ್ಲ.

೮. ಈಶ್ವರನು ಹೇಳುತ್ತಾನೆ :—ದೇವಿ ! ನಾನು ಹಿಂದೆ ಇಲ್ಲಿ ಸ್ಪರ್ಶಲಿಂಗ ಸ್ವರೂಪವುಳ್ಳವನಾಗಿ ಇದ್ದೇ ಇದ್ದೆನು. ಯಾವ ಮನುಷ್ಯನೂ ನನ್ನ ನಿಜಸ್ವರೂಪವನ್ನು ತಿಳಿಯಲಿಲ್ಲ.

ಮಹಾಕಲ್ಪೇ ತು ಸಂಜಾತೇ ಬ್ರಹ್ಮಣಃ ಪ್ರತಿಸಂಚರೇ ।
ನಾಮಭಾವಂ ಭವೇದನ್ಯದ್ದೇವಿ ಲಿಂಗೇ ಪುನಃಪುನಃ ॥ ೯ ॥
ಅತೀತಂ ಬ್ರಹ್ಮಣಾಂ ಷಟ್ಕಂ ಸಪ್ತಮೋಽಯಂ ಪ್ರಜಾಪತಿಃ ।
ವರ್ತತೇ ಯೋಽಧುನಾ ದೇವಿ ಶತಾನಂದ ಇತಿ ಶ್ರುತಃ ॥ ೧೦ ॥
ಅಸ್ಮಿನ್ ಬ್ರಹ್ಮಣಿ ದೇವೇಶಿ ಸಂಜಾತೇ ಹ್ಯಷ್ಟವಾರ್ಷಿಕೇ ।
ತದಾ ಕಾಲಾತ್ಸಮಾರಭ್ಯ ಸೋಮೇಶ ಇತಿ ವಿಶ್ರುತಃ ॥ ೧೧ ॥
ಅತೀತೇಷು ಚ ದೇವೇಶಿ ಬ್ರಹ್ಮಸುಪ್ತಲಯಾದನು ।
ಬಭೂವುರ್ಯಾನಿ ನಾಮಾನಿ ತಾನಿ ತ್ವಂ ಶೃಣು ಪಾರ್ವತಿ ॥ ೧೨ ॥
ಆದ್ಯೋ ವಿರಂಚಿನಾಮಾಽಸೀದ್ಯದಾ ಬ್ರಹ್ಮಾ ಪಿತಾಮಹಃ ।
ಮೃತ್ಯುಂಜಯಸ್ತದಾ ನಾಮ ಸೋಮನಾಥಸ್ಯ ಕೀರ್ತಿತಂ ॥ ೧೩ ॥
ದ್ವಿತೀಯೋಽಭೂದ್ಯದಾ ಬ್ರಹ್ಮಾ ಪದ್ಮಭೂರಿತಿ ವಿಶ್ರುತಃ ।
ತದಾ ಕಾಲಾಗ್ನಿರುದ್ರೇತಿ ನಾಮ ಪ್ರೋಕ್ತಂ ಶುಭೇಽಂಬಿಕೇ ॥ ೧೪ ॥
ತೃತೀಯೋಽಭೂದ್ಯದಾ ಬ್ರಹ್ಮಾ ಸ್ವಯಂಭೂರಿತಿ ವಿಶ್ರುತಃ ।
ಅಮೃತೇಶೇತಿ ದೇವಸ್ಯ ತದಾ ನಾಮ ಪ್ರಕೀರ್ತಿತಂ ॥ ೧೫ ॥

---

೯. ಬ್ರಹ್ಮರು ವ್ಯತ್ಯಾಸಗೊಳ್ಳುವ ಮಹಾ ಕಲ್ಪವು ಉಂಟಾಗಲು ಈ ಲಿಂಗಕ್ಕೆ ತಿರುಗಿ ಬೇರೆ ಹೆಸರುಂಟಾಗುವುದು.

೧೦. ದೇವಿ ! ಈಗ ಆರು ಜನ ಬ್ರಹ್ಮರು ಕಳೆದು ಏಳನೆಯ ಶತಾನಂದನೆಂಬ ಬ್ರಹ್ಮನಿರುವನು.

೧೧. ಈ ಬ್ರಹ್ಮನು ಎಂಟು ವರ್ಷ ವಯಸ್ಸುಳ್ಳವನಾಗಲು ಅಂದಿನಿಂದ ಈ ಲಿಂಗವು ಸೋಮೇಶವೆಂದು ಪ್ರಸಿದ್ಧವಾಯಿತು.

೧೨. ದೇವೇಶಿ ! ಕಳೆದ ಕಲ್ಪಗಳಲ್ಲಿ ಯಾವ ಯಾವ ಹೆಸರುಗಳಾದುವುವೆಂಬುದನ್ನು ಕೇಳು.

೧೩. ಮೊದಲನೆಯ ವಿರಂಚನೆಂಬ ಬ್ರಹ್ಮನ ಕಾಲದಲ್ಲಿ ಈ ಲಿಂಗಕ್ಕೆ ಮೃತ್ಯುಂಜಯವೆಂದು ಹೆಸರಾಯಿತು.

೧೪. ದೇವಿ! ಎರಡನೆಯ ಪದ್ಮಭೂ ಎಂಬ ಬ್ರಹ್ಮನ ಕಾಲದಲ್ಲಿ ಕಾಲಾಗ್ನಿರುದ್ರ ಎಂದು ಹೆಸರಾಯಿತು.

೧೫. ಮೂರನೆಯ ಸ್ವಯಂಭೂ ಎಂಬ ಬ್ರಹ್ಮನ ಕಾಲದಲ್ಲಿ ಅಮೃತೇಶ ಎಂದು ಹೆಸರಾಯಿತು.

ಚತುರ್ಥೋಽಭೂದ್ಯದಾ ಬ್ರಹ್ಮಾ ಪರಮೇಷ್ಠೀತಿ ವಿಶ್ರುತಃ ।
ಅನಾಮಯೇತಿ ದೇವಸ್ಯ ತದಾ ನಾಮ ಸ್ಮೃತಂ ಶುಭೇ ॥ ೧೬ ॥
ಪಂಚಮೋಽಭೂದ್ಯದಾ ಬ್ರಹ್ಮಾ ಸುರಜ್ಯೇಷ್ಠ ಇತಿ ಸ್ಮೃತಂ ।
ಕೃತ್ತಿವಾಸೇತಿ ದೇವಸ್ಯ ನಾಮ ಪ್ರೋಕ್ತಂ ತದಾಂಬಿಕೇ ॥ ೧೭ ॥
ಷಷ್ಠಶ್ಚಾಽಭೂದ್ಯದಾ ಬ್ರಹ್ಮಾ ಹೇಮಗರ್ಭ ಇತಿ ಶ್ರುತಃ ।
ತದಾ ಭೈರವನಾಥೇತಿ ನಾಮ ದೇವಸ್ಯ ಕೀರ್ತಿತಂ ॥ ೧೮ ॥
ಅಯಂ ಯೋ ವರ್ತತೇ ಬ್ರಹ್ಮಾ ಶತಾನಂದ ಇತಿ ಸ್ಮೃತಃ ।
ಸೋಮನಾಥೇತಿ ದೇವಸ್ಯ ವರ್ತತೇ ನಾಮ ಸಾಂಪ್ರತಂ ॥ ೧೯ ॥
ಅತಃ ಪರಃ ಚತುರ್ವಕ್ತ್ರೋ ಬ್ರಹ್ಮಾ ಯೋ ಭವಿತಾ ಯದಾ ।
ಪ್ರಾಣನಾಥೇತಿ ದೇವಸ್ಯ ತದಾ ನಾಮ ಭವಿಷ್ಯತಿ ॥ ೨೦ ॥
ಅತೀತಾ ಯೇ ವಿಧಾತಾರೋ ಭವಿಷ್ಯಂತಿ ಚ ಯೇಽಧುನಾ ।
ತಾವತ್ತದ್ವರ್ತತೇ ನಾಮ ಯಾವದನ್ಯೋಽಷ್ಟವಾರ್ಷಿಕಃ ।
ಸಂಧ್ಯಾಸಂಧ್ಯಾಂಶಭೇದೇನ ವಿಷ್ಣ್ವನಂತಸನಾತನಾಃ ॥ ೨೧ ॥
ಏವಂ ನಾಮಾನಿ ದೇವಸ್ಯ ಸಂಕ್ಷೇಪಾತ್ಕೀರ್ತಿತಾನಿ ಮೇ ।
ವಿಸ್ತರಾತ್ಕಥಿತುಂ ನೈವ ಶಕ್ಯಂತೇ ಕಾಲಗೌರವಾತ್ ॥ ೨೨ ॥

---

೧೬. ನಾಲ್ಕನೆಯ ಪರಮೇಷ್ಠಿಯೆಂಬ ಬ್ರಹ್ಮನ ಕಾಲದಲ್ಲಿ ಅನಾಮಯ ಎಂಬ ಹೆಸರಾಯಿತು.

೧೭. ದೇವಿ ! ಐದನೆಯ ಸುರಜ್ಯೇಷ್ಠನೆಂಬ ಬ್ರಹ್ಮನ ಕಾಲದಲ್ಲಿ ಕೃತ್ತಿವಾಸನೆಂದು ಹೆಸರಾಯಿತು.

೧೮. ಆರನೆಯ ಹೇಮಗರ್ಭಬ್ರಹ್ಮನ ಕಾಲದಲ್ಲಿ ಭೈರವನಾಥನೆಂಬ ನಾಮಧೇಯವಾಯಿತು.

೧೯. ಈಗ ಶತಾನಂದನೆಂಬ ಬ್ರಹ್ಮನಿರುವನು. ಈ ಲಿಂಗಕ್ಕೆ ಸೋಮನಾಥ ಎಂಬ ಹೆಸರಾಗಿರುವುದು.

೨೦. ಇನ್ನು ಮುಂದೆ ಚತುರ್ವಕ್ತ್ರನೆಂಬ ಬ್ರಹ್ಮನು ಬರುವನು. ಆಗ ಈ ಲಿಂಗಕ್ಕೆ ಪ್ರಾಣನಾಥ ಎಂಬ ಹೆಸರಾಗುವುದು.

೨೧. ಹಿಂದಿನ ಬ್ರಹ್ಮರು ಕಳೆದು ಮುಂದಿನ ಬ್ರಹ್ಮರು ಬರುವಾಗ ಹೊಸ ಬ್ರಹ್ಮನಿಗೆ ಎಂಟು ವರ್ಷ ವಯಸ್ಸಾಗುವವರೆಗೆ ಸಂಧಿಕಾಲದ ಭೇದದಿಂದ ಈ ಲಿಂಗಕ್ಕೆ ವಿಷ್ಣು, ಅನಂತ, ಸನಾತನ ಎಂಬ ಹೆಸರು ಇರುತ್ತದೆ.

೨೨. ದೇವಿ ! ಹೀಗೆ ಸಂಕ್ಷೇಪವಾಗಿ ಪರಮೇಶ್ವರನ ಹೆಸರುಗಳ ಹೇಳಿರುವೆನು. ಹೆಚ್ಚು ಕಾಲವು ಬೇಕಾಗುವುದರಿಂದ ವಿಸ್ತಾರವಾಗಿ ಹೇಳಲು ಸಾಧ್ಯವಿಲ್ಲ.

ದೇವ್ಯುವಾಚ:—
ಆಶ್ಚರ್ಯಂ ದೇವದೇವೇಶ ಯತ್ತ್ವಯಾ ಕಥಿತಂ ಪ್ರಭೋ ।
ಪೂರ್ವೋಕ್ತಾನಿ ಚ ನಾಮಾನಿ ನ ಸ್ಮರಂತಿ ಚ ಮೇ ಕಥಂ ॥ ೨೩ ॥
ಏತದ್ವಿಸ್ತರತೋ ಬ್ರೂಹಿ ಕಾರಣಂ ಚ ಜಗತ್ಪತೇ ।
ಸರ್ವಭೂತಹಿತಾರ್ಥಾಯ ಮಮಾನುಗ್ರಹಕಾಮ್ಯಯಾ ॥ ೨೪ ॥
ಈಶ್ವರ ಉವಾಚ:—
ಕಲ್ಪೇ ಕಲ್ಪೇ ಮಹಾದೇವಿ ಅವತಾರಂ ಕರೋಷಿ ಯತ್ ।
ತೇನ ತೇ ಸ್ಮರಣಂ ನಾಸ್ತಿ ಪ್ರಭಾವಾತ್ಪ್ರಕೃತೇಃ ಪ್ರಿಯೇ ॥ ೨೫ ॥
ತತ್ತ್ವಾವರಣಮಧ್ಯೇ ತು ತತ್ತ್ವಾದ್ಯಾ ತ್ವಂ ಪ್ರತಿಷ್ಠಿತಾ ।
ಸಾಽವತೀರ್ಯಾಂಡಮಧ್ಯೇ ತು ಮಯಾ ಸಾರ್ಧಂ ವರಾನನೇ ॥ ೨೬ ॥
ಅನುಗ್ರಹಾರ್ಥಂ ಲೋಕಾನಾಂ ಪ್ರಾದುರ್ಭೂತಾ ಪುನಃಪುನಃ ।
ಆದ್ಯೇ ಕಲ್ಪೇ ಜಗನ್ಮಾತಾ ಜಗದ್ಯೋನಿರ್ದ್ವಿತೀಯಕೇ ॥ ೨೭ ॥
ತೃತೀಯೇ ಶಾಂಭವೀ ನಾಮ ಚತುರ್ಥೇ ವಿಶ್ವರೂಪಿಣೀ ।
ಪಂಚಮೇ ನಂದಿನೀ ನಾಮ ಷಷ್ಠೇ ಚೈವ ಗಣಾಂಬಿಕಾ ॥ ೨೮ ॥

---

೨೩. ದೇವಿಯು ಹೇಳುತ್ತಾಳೆ:—ಮಹೇಶ್ವರ! ನೀನು ಹೇಳಿರುವುದು ಆಶ್ಚರ್ಯಕರವಾಗಿದೆ. ನೀನು ಹಿಂದೆ ಹೇಳಿದ ನನ್ನ ಹೆಸರುಗಳ ಸ್ಮರಣೆಯು ಏಕೆ ಬರಲಿಲ್ಲ?

೨೪. ಜಗದೊಡೆಯನಾದ ಓ ಶಂಕರನೆ! ಸಕಲ ಪ್ರಾಣಿಗಳ ಹಿತಕ್ಕಾಗಿಯೂ, ನನಗೆ ಅನುಗ್ರಹ ಮಾಡಲಿಚ್ಛೆಯಿಂದಲೂ ಇದರ ಕಾರಣವನ್ನು ವಿಸ್ತಾರವಾಗಿ ಹೇಳು.

೨೫. ಈಶ್ವರನು ಹೇಳುತ್ತಾನೆ:—ಪ್ರಿಯಳಾದ ಮಹಾದೇವಿಯೆ! ನೀನು ಪ್ರತಿ ಕಲ್ಪದಲ್ಲಿಯೂ ಅವತಾರವನ್ನು ಮಾಡುವುದರಿಂದ ಪ್ರಕೃತಿಯ ಪ್ರಭಾವದಿಂದ ನಿನಗೆ ಆ ನಾಮಗಳ ಸ್ಮರಣೆಯು ಇರುವುದಿಲ್ಲ.

೨೬–೩೩. ಇಪ್ಪತ್ತನಾಲ್ಕು ತತ್ವಗಳ ಮೊದಲನೆಯವಳಾದ ನೀನು ಬ್ರಹ್ಮಾಂಡ ಮಧ್ಯದಲ್ಲಿ ಲೋಕದ ಅನುಗ್ರಹಕ್ಕಾಗಿ ನನ್ನೊಡನೆ ಮತ್ತೆ ಮತ್ತೆ ಅವತಾರಮಾಡುವೆ. ನೀನು ಮೊದಲನೆಯ ಕಲ್ಪದಲ್ಲಿ ಜಗನ್ಮಾತೆಯೂ, ದ್ವಿತೀಯ ಕಲ್ಪದಲ್ಲಿ ಜಗದ್ಯೋನಿಯೂ, ಮೂರನೆಯ ಕಲ್ಪದಲ್ಲಿ ಶಾಂಭವಿಯೂ, ನಾಲ್ಕನೆಯ ಕಲ್ಪದಲ್ಲಿ ವಿಶ್ವರೂಪಿಣಿಯೂ, ಐದನೆಯ ಕಲ್ಪದಲ್ಲಿ ನಂದಿನಿಯೂ, ಆರನೆಯ ಕಲ್ಪದಲ್ಲಿ ಗಣಾಂಬಿಕೆಯೂ, ಏಳನೆಯ ಕಲ್ಪದಲ್ಲಿ ವಿಭೂತಿಯೂ, ಎಂಟನೆಯ ಕಲ್ಪದಲ್ಲಿ ಸುಭೂತಿಯೂ, ಒಂಬತ್ತನೆಯ ಕಲ್ಪದಲ್ಲಿ ಆನಂದೆಯೂ, ಹತ್ತನೆಯ ಕಲ್ಪದಲ್ಲಿ ವಾಮಲೋಚನೆಯೂ, ಹನ್ನೊಂದನೆಯ ಕಲ್ಪದಲ್ಲಿ ವರಾರೋಹೆಯೂ, ಹನ್ನೆರಡನೆಯಕಲ್ಪದಲ್ಲಿ ಸುಮಂಗಲೆಯೂ, ಹದಿಮೂರನೆಯಕಲ್ಪದಲ್ಲಿ ಮಹಾಮಾಯೆಯೂ,

ವಿಭೂತಿಃ ಸಪ್ತಮೇ ಕಲ್ಪೇ ಸುಭೂತಿಶ್ಚಾಷ್ಟಮೇ ತದಾ ।
ಆನಂದಾ ನವಮೇ ಕಲ್ಪೇ ದಶಮೇ ವಾಮಲೋಚನಾ । || ೨೯ ||
ಏಕಾದಶೇ ವರಾರೋಹಾ ದ್ವಾದಶೇ ಚ ಸುಮಂಗಲಾ ।
ಕಲ್ಪೇ ತ್ರಯೋದಶೇ ಚೈವ ಮಹಾಮಾಯಾ ಹ್ಯುದಾಹೃತಾ || ೩೦ ||
ತತಶ್ಚತುರ್ದಶೇ ಕಲ್ಪೇಽನಂತಾ ನಾಮ ಪ್ರಕೀರ್ತಿತಾ ।
ಭೂತಮಾತಾ ಪಂಚದಶೇ ಷೋಡಶೇ ಚೋತ್ತಮಾ ಸ್ಮೃತಾ || ೩೧ ||
ತತಃ ಸಪ್ತದಶೇ ಕಲ್ಪೇ ಪಿತೃಕಲ್ಪೇ ತು ವಿಶ್ರುತಾ ।
ದಕ್ಷಸ್ಯ ದುಹಿತಾ ಜಾತಾ ಸತೀ ನಾಮ್ನೀ ಮಹಾಪ್ರಭಾ || ೩೨ ||
ಅಪಮಾನಾತ್ತು ದಕ್ಷಸ್ಯ ಸ್ವಾಂ ತನೂಮುತ್ಸೃಜತ್ಪುನಃ ।
ಉಮಾಂ ಕಲಾಂ ತು ಚಂದ್ರಸ್ಯ ಪುರಾಪೂರ್ಯ ಚ ಸಂಸ್ಥಿತಾ || ೩೩ ||
ತತಃ ಪ್ರವೃತ್ತೇ ವಾರಾಹೇ ಕಲ್ಪೇ ತ್ವಂ ಸುರಸುಂದರಿ ।
ಪುನರ್ಹಿಮವತಾರಾಧ್ಯ ದುಹಿತಾ ತ್ವಮತಃ ಕೃತಾ || ೩೪ ||
ತತೋ ದೇವ್ಯದ್ಭುತಂ ತಪ್ತ್ವಾ ತಪಃ ಪರಮದುಶ್ಚರಂ ।
ಭರ್ತಾರಂ ಮಾಂ ಪುನಃ ಪ್ರಾಪ್ಯ ಪಾರ್ವತೀತಿ ನಿಗದ್ಯಸೇ || ೩೫ ||
ಕೈಲಾಸನಿಲಯಶ್ಚಾಽಹಂ ತ್ವಯಾ ಸಾರ್ಧಂ ವರಾನನೇ ।
ಕ್ರೀಡಾಮಿ ತವ ದೇವೇಶಿ ಯಾವತ್ಕಲ್ಪಾವಸಾನಕಂ || ೩೬ ||
ಇದಂ ಚತುರ್ಗುಣಂ ಪ್ರಾಪ್ಯ ದ್ವಾಪರೇ ವಿಷ್ಣುನಾ ಸಹ ।
ಮಹಿಷಸ್ಯ ವಧಾರ್ಥಾಯ ಉತ್ಪನ್ನಾ ಕೃಷ್ಣಪಿಂಗಲಾ || ೩೭ ||

ಹದಿನಾಲ್ಕನೆಯ ಕಲ್ಪದಲ್ಲಿ ಅನಂತೆಯೂ, ಹದಿನೈದನೆಯ ಕಲ್ಪದಲ್ಲಿ ಭೂತಮಾತೆಯೂ, ಹದಿನಾರನೆಯ ಕಲ್ಪದಲ್ಲಿ ಉತ್ತಮೆಯೂ ಆಗಿರುವೆ. ಹದಿನೇಳನೆಯ ಪಿತೃಕಲ್ಪದಲ್ಲಿ ಸತೀಎಂಬ ಹೆಸರಿನಿಂದ ಪ್ರಸಿದ್ಧಳಾದ ದಕ್ಷಪ್ರಜಾಪತಿಯ ಮಗಳಾಗಿ ಜನಿಸಿ ತಂದೆಯಿಂದುಂಟಾದ ಅಪಮಾನದಿಂದ ಶರೀರವನ್ನು ತ್ಯಜಿಸಿ ಮರಳಿ ಚಂದ್ರನ ಉಮಾ ಎಂಬ ಕಲೆಯನ್ನು ಪೂರ್ತಿಗೊಳಿಸಿ ನೆಲೆಸಿದೆ.

೩೪. ಸುಂದರಿ! ವಾರಾಹಕಲ್ಪವು ಮೊದಲಾಗಲು ನೀನು ಹಿಮವಂತನಿಂದ ಆರಾಧಿತಳಾಗಿ ಅವನ ಮಗಳಾದೆ.

೩೫. ಬಳಿಕ ನೀನು ಅದ್ಭುತವಾದ ತಪಸ್ಸನ್ನು ಮಾಡಿ ನನ್ನನ್ನು ಪತಿಯನ್ನಾಗಿ ಪಡೆದು ಪಾರ್ವತಿಯೆಂದು ಹೆಸರುಗೊಂಡೆ.

೩೬. ದೇವಿ! ಈಗ ನಾನು ನಿನ್ನೊಡನೆ ಕೈಲಾಸದಲ್ಲಿ ನೆಲೆಸಿ ಕಲ್ಪಾವಸಾನದ ವರೆಗೆ ವಿನೋದಪಡುತ್ತಿರುವೆನು.

೩೭. ನೀನು ದ್ವಾಪರಯುಗದಲ್ಲಿ ಮಹಿಷಾಸುರನ ವಧೆಗಾಗಿ ವಿಷ್ಣುವಿನೊಡನೆ ನೀಲವರ್ಣಳೂ ಪಿಂಗಲವರ್ಣಳೂ ಆಗಿ ಜನಿಸಿದೆ.

ಕಾತ್ಯಾಯನೀತಿ ದುರ್ಗೇತಿ ವಿವಿಧೈರ್ನಾಮಪರ್ಯಯೈಃ ।
ನವಕೋಟಿಪ್ರಭೇದೇನ ಜಾತಾಽಸಿ ವಸುಧಾತಲೇ ॥ ೩೮ ॥
ಯಾನಿ ತೇ ಕಲ್ಪನಾಮಾನಿ ಪೂರ್ವಮುಕ್ತಾನಿ ಸುಂದರಿ ।
ತಾನಿ ತ್ರಯೋದಶಾಕಲ್ಪಾದುದಕ್ತಾತ್ಕಥಿತಾನಿ ಮೇ ॥ ೩೯ ॥
ಅತೀತಾನಿ ಭವಿಷ್ಯಾಣಿ ವರ್ತಮಾನಾನಿ ಸುಂದರಿ ।
ಏವಂ ಜ್ಞೇಯಾನಿ ಸರ್ವಾಣಿ ಬ್ರಹ್ಮಕಲ್ಪಾಽವಧಿ ಪ್ರಿಯೇ ॥ ೪೦ ॥
ದೇವ್ಯುವಾಚ:—
ಸೋಮನಾಥೇತಿ ಯನ್ನಾಮ ತ್ವಯಾ ಪೂರ್ವಮುದಾಹೃತಂ ।
ತತ್ಕಥಂ ನಿಶ್ಚಲಂ ನಾಮ ಮನ್ಯತೇ ತ್ರಿಪುರಾಂತಕ ॥ ೪೧ ॥
ಅಸಂಖ್ಯತ್ವಾಚ್ಚ ಚಂದ್ರಾಣಾಂ ಜನ್ಮನಾಮ ಪ್ರಭೇದತಃ ।
ಮನ್ವಂತರೇ ತು ಸಂಜಾತೇ ಯುಗಾನಾಮೇಕಸಪ್ತತೌ ॥ ೪೨ ॥
ಚಂದ್ರಸೂರ್ಯಾದಯೋ ದೇವಾಃ ಸಂಹ್ರಿಯಂತೇ ಪುನಃ ಪುನಃ ।
ಸಪ್ತರ್ಷಯಃ ಸುರಾಃ ಶಕ್ರೋ ಮನುಸ್ತತ್ಸೂನವೋ ನೃಪಾಃ ॥ ೪೩ ॥
ಏಕಕಾಲಂ ಚ ಸೃಜ್ಯಂತೇ ಸಂಹ್ರಿಯಂತೇ ಚ ಪೂರ್ವವತ್ ।
ಏತನ್ಮೇ ಸಂಶಯಂ ದೇವ ಯಥಾವದ್ವಕ್ತುಮರ್ಹಸಿ ॥ ೪೪ ॥

---

೩೮. ನೀನು ಭೂಮಿಯಲ್ಲಿ ಕಾತ್ಯಾಯಿನೀ, ದುರ್ಗಾ ಮೊದಲಾದ ನಾನಾವಿಧಗಳಾದ ಹೆಸರುಗಳಿಂದ ಒಂಬತ್ತು ಕೋಟಿ ವಿಧವಾಗಿ ಹುಟ್ಟಿರುವೆ.

೩೯. ಸುಂದರಿ ! ಹಿಂದೆ ನಾನು ನಿನಗೆ ಹದಿಮೂರನೆಯ ಕಲ್ಪದ ಮೇಲಿನ ನಿನ್ನ ಆ ಕಲ್ಪನಾಮಗಳನ್ನು ಹೇಳಿರುವೆನು.

೪೦. ಪ್ರಿಯಳೆ ! ಹೀಗೆಯೇ ಬ್ರಹ್ಮಕಲ್ಪದ ವರೆಗಣ ಭೂತಭವಿಷ್ಯದ್ವರ್ತಮಾನ ಕಾಲಗಳ ಸಕಲ ರೂಪಗಳನ್ನೂ ತಿಳಿಯಬೇಕು.

೪೧. ದೇವಿಯು ಹೇಳುತ್ತಾಳೆ:—ಎಲೈ ತ್ರಿಪುರನಾಶಕನೆ! ನೀನು ಹಿಂದೆ ಹೇಳಿದ ಸೋಮನಾಥನೆಂಬ ಹೆಸರು ಸ್ಥಿರವಾದುದು ಹೇಗೆ ?

೪೨–೪೪. ಜನ್ಮ ನಾಮಗಳ ಪ್ರಭೇದದಿಂದ ಚಂದ್ರರು ಅಸಂಖ್ಯಾತರಾಗಿರುವರು. ಎಪ್ಪತ್ತೊಂದು ಯುಗಗಳ ಮನ್ವಂತರವಾಗಲು ಚಂದ್ರಸೂರ್ಯಾದಿ ದೇವತೆಗಳು ಮತ್ತೆ ಮತ್ತೆ ನಾಶವಾಗುವರು. ಸಪ್ತರ್ಷಿಗಳೂ, ಇಂದ್ರನೂ, ಮನುವೂ, ಅವರ ಮಕ್ಕಳೂ, ಒಂದೇ ಸಮಯದಲ್ಲಿ ಹುಟ್ಟುವರು; ಹಿಂದಿನಂತೆ ನಾಶವಾಗುವರು. ಈ ವಿಷಯದಲ್ಲಿ ನನಗೆ ಸಂದೇಹವುಂಟಾಗಿದೆ. ಯಥಾರ್ಥವನ್ನು ತಿಳಿಸು.

ಈಶ್ವರ ಉವಾಚ :—

ಸಾಧು ಪೃಷ್ಟಂ ತ್ವಯಾ ದೇವಿ ರಹಸ್ಯಂ ಪಾಪನಾಶನಂ ।
ಯನ್ನ ಕಸ್ಯಚಿದಾಖ್ಯಾತಂ ತತ್ತೇ ವಕ್ಷ್ಯಾಮ್ಯಶೇಷತಃ ॥ ೪೫ ॥
ಅಯಂ ಯೋ ವರ್ತತೇ ಬ್ರಹ್ಮಾ ಶತಾನಂದ ಇತಿ ಶ್ರುತಃ ।
ತಸ್ಯ ಚೈವಾಷ್ಟಮೇ ವರ್ಷೇ ಮನುರ್ಯಃ ಪ್ರಥಮೋ ಭವೇತ್ ॥ ೪೬ ॥
ತಸ್ಮಿನ್ಮನ್ವಂತರೇ ದೇವಿ ಯಶ್ಚಾಽಽದೌ ರೋಹಿಣೀಪತಿಃ ।
ಸಮುದ್ರಗರ್ಭಾತ್ಸಂಜಾತಃ ಸಲಕ್ಷ್ಮೀಕೌಸ್ತುಭಾದಿಭಿಃ ॥ ೪೭ ॥
ತೇನ ಚಾಽಽರಾಧಿತಂ ಲಿಂಗಂ ಕಾಲಭೈರವನಾಮತಃ ।
ಮಹತಾ ತಪಸಾ ಪೂರ್ವಂ ಯುಗಾನಿ ಚ ಚತುರ್ದಶ ॥ ೪೮ ॥
ತಸ್ಯಾದ್ಭುತಂ ತಪೋ ದೃಷ್ಟ್ವಾ ತುಷ್ಟೋಽಹಂ ತಸ್ಯ ಸುಂದರಿ ।
ವರಂ ವೃಣೀಷ್ವೇತಿ ಮಯಾ ಸ ಚ ಪ್ರೋಕ್ತೋ ನಿಶಾಕರಃ ॥ ೪೯ ॥
ಸಹೋವಾಚ ತದಾ ದೇವಿ ಭಕ್ತ್ಯಾ ಸಂಸ್ತುತ್ಯ ಮಾಂ ಶುಭೇ ॥ ೫೦ ॥

ಚಂದ್ರ ಉವಾಚ :—

ಯದಿ ಪ್ರಸನ್ನೋ ದೇವೇಶ ವರಾರ್ಹೋ ಯದಿ ವಾಽಪ್ಯಹಂ ।
ಸೋಮನಾಥೇತಿ ತೇ ನಾಮ ಭೂಯಾದ್ಬ್ರಹ್ಮಾವಧಿ ಪ್ರಭೋ ॥ ೫೧ ॥

---

೪೫. ಈಶ್ವರನು ಹೇಳುತ್ತಾನೆ :—ದೇವಿ ! ನಾನು ಹಿಂದೆ ಯಾರಿಗೂ ಹೇಳದ ಪಾಪವನ್ನು ಪರಿಹರಿಸುವ ಈ ರಹಸ್ಯ ವಿಷಯವನ್ನು ಕುರಿತು ಚೆನ್ನಾಗಿ ಪ್ರಶ್ನೆ ಮಾಡಿರುವೆ. ಅದನ್ನು ಸಂಪೂರ್ಣವಾಗಿ ನಿನಗೆ ಹೇಳುವೆನು.

೪೬. ಈ ಶತಾನಂದಬ್ರಹ್ಮನ ಎಂಟನೆಯ ವರ್ಷದಲ್ಲಿ ಮೊದಲನೆ ಮನುವು ಜನಿಸಿದನು.

೪೭. ಆ ಮನ್ವಂತರದಲ್ಲಿ ಮೊದಲು ರೋಹಿಣೀಪತಿಯಾದ ಚಂದ್ರನು ಲಕ್ಷ್ಮಿ ಕೌಸ್ತುಭಾದಿಗಳೊಡನೆ ಸಮುದ್ರದಿಂದ ಜನಿಸಿದನು.

೪೮. ಅವನು ಮಹಾ ತಪಸ್ಸನ್ನಾಚರಿಸುತ್ತ ಹದಿನಾಲ್ಕು ಯುಗಗಳ ಕಾಲ ಕಾಲಭೈರವನೆಂದು ಆಗ ಪ್ರಸಿದ್ಧವಾದ ಶಿವಲಿಂಗವನ್ನು ಪೂಜಿಸಿದನು.

೪೯. ಸುಂದರಿ ! ಲಿಂಗಸ್ವರೂಪಿಯಾದ ನಾನು ಅವನ ಅದ್ಭುತ ತಪಸ್ಸಿಗೆ ಮೆಚ್ಚಿ ವರವನ್ನು ಕೇಳಿಕೋ ಎಂದೆನು.

೫೦. ದೇವಿ ! ಆಗ ಅವನು ಭಕ್ತಿಯಿಂದ ನನ್ನನ್ನು ಸ್ತುತಿಸಿ ಇಂತೆಂದನು.

೫೧. ಚಂದ್ರನು ಹೇಳುತ್ತಾನೆ :—ಸ್ವಾಮಿ ! ನೀನು ಪ್ರಸನ್ನನಾಗಿದ್ದರೆ ನಾನು ನಿನ್ನ ವರಕ್ಕೆ ಯೋಗ್ಯನಾಗಿದ್ದರೆ ಈ ಬ್ರಹ್ಮನ ಅವಸಾನದವರೆಗೆ ನಿನಗೆ ಸೋಮನಾಥ ಎಂದು ಹೆಸರಾಗಲಿ.

ಯೇ ಕೇಚಿಚ್ಚಪಿತಾರೋಽನ್ಯೇ ಮನ್ವಂತೇ ಶೀತರಶ್ಮಯಃ ।
ತೇಷಾಂ ಭವತು ದೇವೇಶ ದೇವೋಽಯಂ ಕುಲದೇವತಾ ॥ ೫೨ ॥
ಆರಾಧಯಂತು ತೇ ಸರ್ವೇ ಕ್ಷೇತ್ರೇಽಸ್ಮಿನ್ ಸಂಸ್ಥಿತಾ ವಿಭೋ ।
ಸ್ವಕೀಯಾಯುಃಪ್ರಮಾಣೇನ ಬ್ರಹ್ಮಣಃ ಪ್ರಲಯಾದನು ॥ ೫೩ ॥
ಸೋಮನಾಥೇತಿ ತೇ ನಾಮ ಬ್ರಹ್ಮಾಂಡೇ ಸಚರಾಚರೇ ।
ಖ್ಯಾತಿಂ ಪ್ರಯಾತು ದೇವೇಶ ತೇಜೋಲಿಂಗ ನಮೋಽಸ್ತು ತೇ ॥ ೫೪ ॥

ಈಶ್ವರ ಉವಾಚ :—

ಏವಮಸ್ತ್ವಿತ್ಯಹಂ ಪ್ರೋಚ್ಯ ಪುನರ್ಲಿಂಗೇ ಲಯಂಗತಃ ।
ಏತತ್ತೇ ಕಾರಣಂ ದೇವಿ ಪ್ರೋಕ್ತಂ ಸರ್ವಮಶೇಷತಃ ॥ ೫೫ ॥
ನಿಃಸಂದಿಗ್ಧಂ ತು ಸಂಕ್ಷೇಪಾತ್ಪುರಾ ಪೃಷ್ಟಂ ಯತಸ್ತ್ವಯಾ ।
ಉದ್ದೇಶಮಾತ್ರಂ ಕಥಿತಂ ಶ್ರೀಸೋಮೇಶಗುಣಾನ್ಪ್ರತಿ ।
ಸಮುದ್ರಸ್ಯೇವ ರತ್ನಾನಾಮಚಿಂತ್ಯಸ್ತಸ್ಯ ವಿಸ್ತರಃ ॥ ೫೬ ॥
ಮೋಹನಂ ತದಭಕ್ತಾನಾಂ ಭಕ್ತಾನಾಂ ಬುದ್ಧಿವರ್ಧನಂ ।
ಮೂಢಾಸ್ತೇ ನೈವ ಪಶ್ಯಂತಿ ಸ್ವರೂಪಂ ಮಮ ಮೋಹಿತಾಃ ॥ ೫೭ ॥

---

೫೨. ದೇವೇಶ ! ನೀನು ಮುಂದಿನ ಮನ್ವಂತರದಲ್ಲಿ ಜನಿಸುವ ಚಂದ್ರರಿಗೆ ಕುಲದೇವತೆಯಾಗು.

೫೩. ಅವರೆಲ್ಲ ಈ ಕ್ಷೇತ್ರದಲ್ಲಿ ವಾಸಿಸುತ್ತ ತಮ್ಮ ಆಯುಸ್ಸಿನ ಕಾಲದಲ್ಲಿ ಬ್ರಹ್ಮಪ್ರಳಯದವರೆಗೆ ನಿನ್ನನ್ನು ಪೂಜಿಸುತ್ತಿರಲಿ.

೫೪. ದೇವತೆಗಳೊಡೆಯನಾದ ಓ ಶಂಕರ! ಈ ಬ್ರಹ್ಮಾಂಡದಲ್ಲಿ ಸೋಮನಾಥ ನೆಂಬ ನಿನ್ನ ಹೆಸರು ಪ್ರಸಿದ್ಧವಾಗಲಿ. ನಿನಗೆ ನಮಸ್ಕಾರವು.

೫೫. ಈಶ್ವರನು ಹೇಳುತ್ತಾನೆ :— ನಾನು ಹಾಗೆಯೇ ಆಗಲೆಂದು ಹೇಳಿ ಪುನಃ ಆ ಲಿಂಗದಲ್ಲಿ ಅಡಗಿಹೋದೆನು. ದೇವಿ! ಹೀಗೆ ಆ ಶಿವಲಿಂಗಕ್ಕೆ ಸೋಮ ನಾಥವೆಂಬ ಹೆಸರು ಬರಲು ಕಾರಣವನ್ನು ನಿನಗೆ ಸಂಪೂರ್ಣವಾಗಿ ಹೇಳಿರುವೆನು.

೫೬. ಹಿಂದೆ ನೀನು ಸಂಕ್ಷೇಪವಾಗಿ ಕೇಳಿದ್ದರಿಂದ ಸೋಮನಾಥನ ಗುಣವನ್ನು ಕುರಿತು ಉದ್ದೇಶ ಮಾತ್ರವನ್ನು ಹೇಳಿದೆನು. ಸಮುದ್ರದ ರತ್ನದಂತೆ ಅವನ ಗುಣ ಗಳ ವಿಸ್ತಾರವು ಅಚಿಂತ್ಯವಾದುದು.

೫೭. ಭಕ್ತರಲ್ಲದವರಿಗೆ ಮೋಹವನ್ನುಂಟುಮಾಡುವುದೂ, ಭಕ್ತರಿಗೆ ಬುದ್ಧಿ ಯನ್ನು ಹೆಚ್ಚಿಸುವುದೂ ಆದ ನನ್ನ ಸ್ವರೂಪವನ್ನು ಮೂಢರು ಅಜ್ಞಾನದಿಂದ ಕಾಣು ವುದಿಲ್ಲ.

ದೇವ್ಯುವಾಚ :—
ಈದೃಶಂ ಯಸ್ಯ ಮಾಹಾತ್ಮ್ಯಂ ತೇಜೋಲಿಂಗಸ್ಯ ಶಂಕರ ।
ಕುತ್ರ ತಿಷ್ಠತಿ ತಲ್ಲಿಂಗಂ ಕ್ಷೇತ್ರೇ ತಸ್ಮಿನ್ ಸುರೇಶ್ವರ ॥ ೫೮ ॥
ಈಶ್ವರ ಉವಾಚ :—
ಶೃಣು ದೇವಿ ಪ್ರಯತ್ನೇನ ಶ್ರುತ್ವಾ ಚೈವಾವಧಾರಯ ।
ಪ್ರಭಾಸಂ ಪರಮಂ ದೇವಿ ಕ್ಷೇತ್ರಮೇತನ್ಮಮ ಪ್ರಿಯಂ ॥ ೫೯ ॥
ದೇವಾನಾಮಪಿ ಸಂಸ್ಥಾನಂ ತಚ್ಚ ದ್ವಾದಶಯೋಜನಂ ।
ಪಂಚ ಯೋಜನಮಾನೇನ ಪೀಠಂ ತತ್ರ ಪ್ರಕೀರ್ತಿತಂ ॥ ೬೦ ॥
ತನ್ಮಧ್ಯೇ ಮದ್ಗೃಹಂ ದೇವಿ ತಚ್ಚ ಗವ್ಯೂತಿಮಾತ್ರಕಂ ।
ಸಮುದ್ರಸ್ಯೋತ್ತರೇ ದೇವಿ ದೇವಿಕಾಮುಖಸಂಜ್ಞಿತಂ ॥ ೬೧ ॥
ವಜ್ರಿಣ್ಯಾಃ ಪೂರ್ವತಶ್ಚೈವ ಯಾವನ್ನ್ಯಂಕುಮತೀ ನದೀ ।
ಚತುಷ್ಟಯಂ ಚ ವಿಸ್ತಾರಾದಾಯಾಮಾತ್ಪಂಚಯೋಜನಂ ॥ ೬೨ ॥
ಕ್ಷೇತ್ರಪೀಠಮಿತಿ ಪ್ರೋಕ್ತಮತೋ ಗರ್ಭಗೃಹಂ ಶೃಣು ।
ಸಮುದ್ರಾತ್ಕೌರವೀ ಯಾವದ್ದಕ್ಷಿಣೋತ್ತರಮಾನತಃ ।
ಪೂರ್ವಪಶ್ಚಿಮತೋ ಜ್ಞೇಯಂ ಗೋಮುಖಾದಾಶ್ವಮೇಧಿಕಂ ॥ ೬೩ ॥
ಏತನ್ಮಮ ಗೃಹಂ ದೇವಿ ನ ತ್ಯಜಾಮಿ ಕದಾಚನ ।
ತಸ್ಯ ಮಧ್ಯೇ ಸ್ಥಿತಂ ಲಿಂಗಂ ಯತ್ರ ತತ್ತೇ ಪ್ರಕೀರ್ತಿತಂ ॥ ೬೪ ॥

---

೫೮. ದೇವಿಯು ಹೇಳುತ್ತಾಳೆ:—ಶಂಕರ ! ಆ ತೇಜೋಲಿಂಗದ ಮಾಹಾತ್ಮ್ಯವು ಇಂತಹುದಾದರೆ ಆ ಕ್ಷೇತ್ರದಲ್ಲಿ ಆ ಲಿಂಗವು ಎಲ್ಲಿರುವುದು ?

೫೯. ಈಶ್ವರನು ಹೇಳುತ್ತಾನೆ :—ದೇವಿ ! ಪ್ರಯತ್ನದಿಂದ ಕೇಳು. ನಿಶ್ಚಯ ಮಾಡಿಕೊ. ಆ ಉತ್ತಮ ಪ್ರಭಾಸಕ್ಷೇತ್ರವು ನನಗೆ ಪ್ರಿಯವಾದುದು.

೬೦. ದೇವತೆಗಳ ವಾಸಸ್ಥಳವಾದ ಆ ಕ್ಷೇತ್ರವು ಹನ್ನೆರಡು ಗಾವುದ ವಿಸ್ತೀರ್ಣ ವಾಗಿದೆ. ಅಲ್ಲಿರುವ ಪೀಠವು ಐದು ಯೋಜನ ಪ್ರಮಾಣವುಳ್ಳದು

೬೧. ಅದರ ಮಧ್ಯದಲ್ಲಿ ಸಮುದ್ರದ ಉತ್ತರದಲ್ಲಿ ದೇವಿಕಾಮುಖವೆಂಬ ನಾಲ್ಕು ಮೈಲಿಗಳ ವಿಸ್ತೀರ್ಣದ ನನ್ನ ಆಲಯವಿರುವುದು.

೬೨–೬೩. ವಜ್ರಿಣೀನದಿಯು ಪೂರ್ವದಲ್ಲಿ ನ್ಯಂಕುಮತೀನದಿಯುವರೆಗೆ ನಾಲ್ಕು ಯೋಜನಗಳ ಅಗಲವೂ, ಐದು ಯೋಜನಗಳ ಉದ್ದವೂ ಆಗಿರುವಕ್ಷೇತ್ರ ಪೀಠವಿರುವುದು. ಗರ್ಭಗೃಹವು ದಕ್ಷಿಣೋತ್ತರಸಮುದ್ರದಿಂದ ಕೌರವೀನದಿಯುವರೆಗೂ, ಪೂರ್ವ ಪಶ್ಚಿಮ, ಗೋಮುಖದಿಂದ ಅಶ್ವಮೇಧಿಕದವರೆಗೂ ವಿಸ್ತೀರ್ಣವಾಗಿರುವುದು.

೬೪. ದೇವಿ! ನಾನು ನನ್ನೀಗೃಹವನ್ನು ಯಾವಾಗಲೂ ಬಿಡುವುದಿಲ್ಲ. ಅದರ ಮಧ್ಯದಲ್ಲಿರುವ ಲಿಂಗವನ್ನು ನಿನಗೆ ಹೇಳಿರುವೆನು.

ವಾರುಣೀಂ ದಿಶಮಾಶ್ರಿತ್ಯ ಸಾಗರಸ್ಯ ಚ ಸನ್ನಿಧೌ ।
ಕೃತಸ್ಮರಸ್ಯಾಪರತೋ ಧನ್ವಂತರಶತತ್ರಯೇ ॥ ೬೫ ॥
ಲಿಂಗಂ ಮಹಾಪ್ರಭಾವಂ ತು ಸ್ವಯಂಭೂತಂ ವ್ಯವಸ್ಥಿತಂ ।
ತತ್ರ ಸನ್ನಿಹಿತೋ ದೇವಃ ಶಂಕರಃ ಪರಮೇಶ್ವರಃ ॥ ೬೬ ॥
ಏತಸ್ಮಿನ್ನಂತರೇ ದೇವಿ ಸೋಮೇಶಸ್ಯ ಸಮೀಪತಃ ।
ಚತುರ್ದಶೇ ವಿಭಾಗೇ ತು ಧನುಷಾಂ ಚ ಶತದ್ವಯಂ ॥ ೬೭ ॥
ಸಮಂತಾನ್ಮಂಡಲಾಕಾರಾ ಕರ್ಣಿಕಾ ಸಾ ಮಮ ಪ್ರಿಯಾ ।
ತಸ್ಯಾಂ ಯೇ ಪ್ರಾಣಿನಃ ಸರ್ವೇ ಮೃತಾಃ ಕಾಲೇನ ಪಾರ್ವತಿ ॥ ೬೮ ॥
ಕೃಮಿಕೀಟಪತಂಗಾದ್ಯಾ ಜೀವಾ ಉತ್ತಮ ಮಧ್ಯಮಾಃ ।
ನಿರ್ಧೂತಕಲ್ಮಷಾಃ ಸರ್ವೇ ಯಾಂತಿ ಲೋಕಂ ಮಮಾಽಪಿ ತೇ ॥ ೬೯ ॥
ಉತ್ತರಂ ದಕ್ಷಿಣಂ ಚಾಽಪಿ ಅಯನಂ ನ ವಿಚಾರಯೇತ್ ।
ಸರ್ವಸ್ತೇಷಾಂ ಶುಭಃ ಕಾಲೋ ಯೇ ಮೃತಾಃ ಕ್ಷೇತ್ರಮಧ್ಯತಃ ॥ ೭೦ ॥
ಆದಿನಾಥೇನ ಶರ್ವೇಣ ಸರ್ವಪ್ರಾಣಿಹಿತಾಯ ವೈ ।
ಆದ್ಯತತ್ತ್ವಾನ್ಯಥಾನೀಯ ಕ್ಷೇತ್ರಮೇತನ್ಮಹಾಪ್ರಭಂ ।
ಪ್ರಭಾಸಿತಂ ಮಹಾದೇವಿ ಯತ್ರ ಸಿದ್ಧ್ಯಂತಿ ಮಾನವಾಃ ॥ ೭೧ ॥

೬೫-೬೬. ಪಶ್ಚಿಮ ದಿಕ್ಕಿನಲ್ಲಿ ಸಮುದ್ರದ ಹತ್ತಿರ ಕೃತಸ್ಮರದ ಪಶ್ಚಿಮದಲ್ಲಿ ಮುನ್ನೂರು ಬಿಲ್ಲಿನ ದೂರದಲ್ಲಿಸ್ವಯಂವ್ಯಕ್ತವಾದ ಮಹಾ ವೈಭವವುಳ್ಳ ಶಿವಲಿಂಗ ವಿರುವುದು. ಅದರಲ್ಲಿ ಪರಮೇಶ್ವರನಾದ ಶಂಕರನು ಸನ್ನಿಹಿತನಾಗಿರುವನು.

೬೭-೬೯. ದೇವಿ ! ಇವರ ಮಧ್ಯದಲ್ಲಿ ಸೋಮೇಶ್ವರನ ಬಳಿಯಲ್ಲಿ ಹದಿನಾಲ್ಕು ವಿಭಾಗದಿಂದ ಕೂಡಿದ ಇನ್ನೂರು ಬಿಲ್ಲಿನ ಪರಿಮಾಣವುಳ್ಳ ಸುತ್ತಲೂ ಗುಂಡಗಿರು ವುದೂ ನನಗೆ ಅತ್ಯಂತ ಪ್ರಿಯವಾದುದೂ ಆದ ಕರ್ಣಿಕೆಯಿರುವುದು. ಅದರ ಮೃತಿ ಗೊಂಡ ಕೃಮಿ, ಕೀಟ, ಪತಂಗ ಮೊದಲಾದ ಉತ್ತಮ ಮಧ್ಯಮ ಪ್ರಾಣಿಗಳೆಲ್ಲವೂ ಪಾಪರಹಿತವಾಗಿ ನನ್ನ ಲೋಕವನ್ನು ಸೇರುವುವು.

೭೦. ಕ್ಷೇತ್ರ ಮಧ್ಯದಲ್ಲಿ ಮೃತರಾದವರಿಗೆ ಉತ್ತರಾಯಣ ದಕ್ಷಿಣಾಯನ ಕಾಲ ವಿಚಾರವಿಲ್ಲದೆ ಎಲ್ಲ ಕಾಲವೂ ಮಂಗಳಕರವಾಗಿರುವುದು.

೭೧. ಆದಿಸ್ವಾಮಿಯಾದ ಶಂಕರನಿಂದ ಸಕಲ ಪ್ರಾಣಿಗಳ ಹಿತಕ್ಕಾಗಿ ಮೊದಲಿನ ತತ್ವಗಳನ್ನು ತಂದು ಈ ಕ್ಷೇತ್ರವು ಪ್ರಕಾಶಗೊಳಿಸಲ್ಪಟ್ಟಿತು. ಇದರಲ್ಲಿ ಮಾನವರು ಸಿದ್ಧಿಯನ್ನು ಪಡೆಯುವರು.

ಹನ್ಯಮಾನೋಽಪಿ ಯೋ ವಿದ್ವಾನ್ ವಸೇದ್ವಿಘ್ನಶತೈರಪಿ ।
ಕೃತಪ್ರತಿಜ್ಞೋ ದೇವೇಶಿ ಯಾವಜ್ಜೀವಂ ಸುರೇಶ್ವರಿ ॥ ೭೨ ॥
ಸ ಗಚ್ಛೇತ್ಪರಮಂ ಸ್ಥಾನಂ ಯತ್ರ ಗತ್ವಾ ನ ಶೋಚತಿ ।
ತಸ್ಯ ಕ್ಷೇತ್ರಸ್ಯ ಮಾಹಾತ್ಮ್ಯಾತ್ ಸ್ಥಾಣೋಶ್ಚಾಽದ್ಭುತಕರ್ಮಣಃ ॥ ೭೩ ॥
ಕೃತ್ವಾ ಪಾಪಸಹಸ್ರಾಣಿ ಪಶ್ಚಾತ್ಸಂತಾಪಮೇತಿ ವೈ ।
ಪ್ರಭಾಸೇ ತು ವಿಯುಜ್ಯೇತ ನ ಸೋಂತಕಪುರೀಂ ವ್ರಜೇತ್ ॥ ೭೪ ॥
ಜ್ಞಾತ್ವಾ ಕಲಿಯುಗಂ ಘೋರಂ ಹಾಹಾಭೂತಮಚೇತನಂ ।
ನಿಯುಕ್ತಸ್ತತ್ರ ದೇವೇಶಿ ರಕ್ಷಾರ್ಥಂ ವಿಘ್ನನಾಯಕಃ ॥ ೭೫ ॥
ಯೇ ತು ಬ್ರಾಹ್ಮಣವಿದ್ವಿಷ್ಟಾಃ ಶಿವಭಕ್ತಿವಿತಂಡಕಾಃ ।
ಬ್ರಹ್ಮಘ್ನಾಶ್ಚ ಕೃತಘ್ನಾಶ್ಚ ತಥಾ ನೈಷ್ಕೃತಿಕಾಶ್ಚ ಯೇ ॥ ೭೬ ॥
ಲೋಕದ್ವಿಷ್ಟಾ ಗುರುದ್ವಿಷ್ಟಾಸ್ತೀರ್ಥಾಯತನಕಂಟಕಾಃ ।
ಸರ್ವಪಾಪರತಾಶ್ಚೈವ ಯೇ ಚಾಽನ್ಯೇ ತು ವಿಕುತ್ಸಿತಾಃ ॥ ೭೭ ॥
ರಕ್ಷಣಾರ್ಥಂ ಹ ವೈ ತೇಷಾಂ ನಿಯುಕ್ತೋ ವಿಘ್ನನಾಯಕಃ ।
ಕಾಲಾಗ್ನಿರುದ್ರಪಾರ್ಶ್ವೇ ತು ರುದ್ರತುಲ್ಯಪರಾಕ್ರಮಃ ॥ ೭೮ ॥

೭೨–೭೩. ಸುರೇಶ್ವರಿಯೆ ! ವಿದ್ವಾಂಸನು ಅನೇಕ ವಿಘ್ನಗಳಿಂದ ತೊಂದರೆಗೊಳಿಸಲ್ಪಟ್ಟರೂ ಪ್ರತಿಜ್ಞೆಯನ್ನು ಮಾಡಿ ಮರಣಕಾಲದವರೆಗೆ ಇಲ್ಲಿ ವಾಸಮಾಡಿದರೆ ಅವನು ಆ ಕ್ಷೇತ್ರ ಮತ್ತು ಶಂಕರನ ಮಾಹಾತ್ಮ್ಯದಿಂದ ದುಃಖರಹಿತವಾದ ಉತ್ತಮ ಸ್ಥಾನಕ್ಕೆ ಹೋಗುವನು.

೭೪. ಅನೇಕ ಪಾಪಗಳನ್ನು ಮಾಡಿ ಅನಂತರ ಪಶ್ಚಾತ್ತಾಪಗೊಂಡು ಪ್ರಭಾಸ ಕ್ಷೇತ್ರದಲ್ಲಿ ಮೃತನಾದವನು ಯಮನಗರಿಗೆ ಹೋಗುವುದಿಲ್ಲ.

೭೫. ದೇವೇಶಿ ! ಭಯಂಕರವಾದ ಕಲಿಯುಗವು ಬರುವುದೆಂದರಿತು ಅಲ್ಲಿ ರಕ್ಷಣೆಗಾಗಿ ವಿಘ್ನರಾಜನು ನೇಮಿಸಲ್ಪಟ್ಟಿರುವನು.

೭೬–೭೮. ಬ್ರಾಹ್ಮಣ ದ್ವೇಷಿಗಳೂ, ಶಿವಭಕ್ತಿ ವಿಷಯದಲ್ಲಿ ವಾದಿಸುವವರೂ, ಬ್ರಹ್ಮಹತ್ಯೆ ಮಾಡಿದವರೂ, ಕೃತಘ್ನರೂ, ಪ್ರಾಯಶ್ಚಿತ್ತವಿಲ್ಲದವರೂ, ಲೋಕಗುರು ದ್ವೇಷಿಗಳೂ. ತೀರ್ಥ, ದೇವಾಲಯಗಳನ್ನು ಹಾಳುಮಾಡುವವರೂ, ಸಕಲ ಪಾಪ ನಿರತರೂ, ದುಷ್ಟರೂ ಆದ ಜನರಿಂದ ರಕ್ಷಿಸುವುದಕ್ಕಾಗಿ ಕಾಲಾಗ್ನಿರುದ್ರನ ಸನ್ನಿಧಿಯಲ್ಲಿ ರುದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಗಣೇಶನನ್ನು ಸ್ಥಾಪಿಸಿರುವೆನು.

ಕ್ಷೇತ್ರಂ ರಕ್ಷತಿ ದೇವೇಶಿ ಪಾಪಿಷ್ಠಾನಾಂ ನಿಯಾಮಕಃ ।
ಮ್ರಿಯಂತೇ ಯದಿ ಬ್ರಹ್ಮಘ್ನಾಸ್ತಥಾ ಪಾತಕಿನೋ ನರಾಃ ॥ ೭೯ ॥
ಕ್ಷೇತ್ರೇ ಚಾಽಸ್ಮಿನ್ನರಾರೋಹೇ ತೇಷಾಂ ದೇವಿ ಗತಿಂ ಶೃಣು ।
ದಶವರ್ಷಸಹಸ್ರಾಣಿ ದಿವ್ಯಾನಿ ಕಮಲೇಕ್ಷಣೇ ॥ ೮೦ ॥
ದಾಸೀಪುತ್ರಾಶ್ಚ ಜಾಯಂತೇ ತದಂತೇ ಬ್ರಹ್ಮರಾಕ್ಷಸಾಃ ।
ತತಃ ಪಾಪಕ್ಷಯೇ ದೇವಿ ಪುನರ್ಯಾಂತಿ ವಿಯೋನಿತಾಂ ॥ ೮೧ ॥
ತಸ್ಮಾತ್ಸರ್ವಪ್ರಯತ್ನೇನ ಪಾಪಂ ತತ್ರ ನ ಕಾರಯೇತ್ ।
ಅನ್ಯತ್ರಾವರ್ತಿತಂ ಪಾಪಂ ಕ್ಷೇತ್ರೇ ಚಾಽಸ್ಮಿನ್ ವಿನಶ್ಯತಿ ॥ ೮೨ ॥
ಅಸ್ಮಿನ್ ಪುನಃ ಕೃತಂ ಪಾಪಂ ಪೈಶಾಚನರಕಾವಹಂ ।
ಭಕ್ತಾನುಕಂಪೀ ಭಗವಾಂಸ್ತಿರ್ಯಗ್ಯೋನಿಗತೇಷ್ವಪಿ ॥ ೮೩ ॥
ದದಾತಿ ಪರಮಂ ಸ್ಥಾನಂ ನ ತು ಬ್ರಹ್ಮದ್ವಿಷಾಂ ಪ್ರಿಯೇ ।
ಯೇ ಚ ಧ್ಯಾನಂ ಸಮಾಸಾದ್ಯ ಯುಕ್ತಾತ್ಮಾನಃ ಸಮಾಹಿತಾಃ ॥ ೮೪ ॥
ಸನ್ನಿಯಮ್ಯೇಂದ್ರಿಯಗ್ರಾಮಂ ಜಪಂತಿ ಶತರುದ್ರಿಯಂ ।
ಪ್ರಭಾಸೇ ತು ಸ್ಥಿತಾ ದೇವಿ ತೇ ಕೃತಾರ್ಥಾ ನ ಸಂಶಯಃ ॥ ೮೫ ॥
ಯದಿ ಗಚ್ಛೇನ್ನರಃ ಕಶ್ಚಿತ್ಪ್ರಭಾಸಂ ಕ್ಷೇತ್ರಮುತ್ತಮಂ ।
ತಮುಪಾಯಂ ಪ್ರಕುರ್ವೀತ ನಿರ್ಗಚ್ಛೇನ್ನ ಪುನರ್ಯಥಾ ॥ ೮೬ ॥

೭೯-೮೧. ದೇವೇಶಿ ! ಪಾಪಿಷ್ಠರನ್ನು ಶಿಕ್ಷಿಸುವ ಆ ಗಣೇಶನು ಆ ಕ್ಷೇತ್ರವನ್ನು ಕಾಪಾಡುತ್ತಾನೆ. ಬ್ರಹ್ಮಹತ್ಯೆಯನ್ನು ಮಾಡಿದವರೂ, ಪಾತಕಿಗಳೂ ಆ ಕ್ಷೇತ್ರದಲ್ಲಿ ಮೃತರಾದರೆ ಅವರಿಗಾಗುವ ಗತಿಯನ್ನು ಕೇಳು. ಕಮಲಾಕ್ಷಿ! ಅವರು ದಿವ್ಯ ದಶ ಸಾವಿರ ವರ್ಷಗಳಕಾಲ ದಾಸಿಯ ಮಕ್ಕಳಾಗಿದ್ದು ಅವಸಾನದಲ್ಲಿ ಬ್ರಹ್ಮರಾಕ್ಷಸರಾಗುವರು. ಬಳಿಕ ಪಾಪವು ನೀಗಲು ಮುಕ್ತರಾಗುವರು.

೮೨. ಆದುದರಿಂದ ಸಮಸ್ತ ಪ್ರಯತ್ನದಿಂದಲೂ ಅಲ್ಲಿ ಪಾಪವನ್ನೆಸಗಬಾರದು. ಇತರ ಕಡೆಗಳಲ್ಲಿ ಮಾಡಿದ ಪಾಪವು ಈ ಕ್ಷೇತ್ರದಲ್ಲಿ ನಾಶವಾಗುವುದು.

೮೩-೮೫. ಈ ಕ್ಷೇತ್ರದಲ್ಲಿ ಮಾಡಿದ ಪಾಪವು ಪಿಶಾಚ ಜನ್ಮವನ್ನೂ ನರಕವನ್ನೂ ಉಂಟುಮಾಡುವುದು. ಭಕ್ತರಲ್ಲಿ ದಯಾಳುವಾದ ಶ್ರೀ ಶಂಕರನು ಪಶುಪಕ್ಷಿಗಳಿಗೂ ಉತ್ತಮ ಸ್ಥಾನವನ್ನು ಕೊಡುವನು. ಆದರೆ ಬ್ರಹ್ಮದ್ವೇಷಿಗಳಿಗೆ ಉತ್ತಮ ಸ್ಥಾನವನ್ನು ಕೊಡುವುದಿಲ್ಲ. ಇಂದ್ರಿಯಗಳನ್ನು ಜಯಿಸಿ ಸಮಾಧಾನಗೊಂಡ ಮನಸ್ಸಿನಿಂದ ಧ್ಯಾನನಿರತರಾಗಿ ಶತರುದ್ರಿಯವನ್ನು ಜಪಿಸುತ್ತ ಪ್ರಭಾಸದಲ್ಲಿ ವಾಸಿಸುವವರು ಧನ್ಯರು.

೮೬. ಮಾನವನು ಪ್ರಭಾಸಕ್ಷೇತ್ರಕ್ಕೆ ಹೋದರೆ ಅಲ್ಲಿಂದ ಹಿಂದಿರುಗದಿರುವುದಕ್ಕೆ ಉಪಾಯವನ್ನು ಮಾಡಬೇಕು.

ಏತದ್ಗೋಪ್ಯಂ ವರಾರೋಹೇ ನ ದೇಯಂ ಯಸ್ಯ ಕಸ್ಯಚಿತ್ ।
ಗೋಪನೀಯಮಿದಂ ಶಾಸ್ತ್ರಂ ಯಥಾಪ್ರಾಣಾಃ ಸ್ವಕಾಃ ಪ್ರಿಯೇ ॥ ೮೭ ॥
ಯೇನೇದಂ ವಿಹಿತಂ ಶಾಸ್ತ್ರಂ ಪ್ರಭಾಸಕ್ಷೇತ್ರದೀಪಕಂ ।
ಸ ಶಿವಶ್ಚೈವ ವಿಜ್ಞೇಯೋ ಮಾನುಷೀಂ ಪ್ರಕೃತಿಂ ಸ್ಥಿತಃ ॥ ೮೮ ॥
ತಸ್ಯ ವಿಗ್ರಹಸಂಸ್ಥೋಽಹಂ ಸದಾ ತಿಷ್ಠಾಮಿ ಪಾರ್ವತಿ ।
ವಂದಿತಃ ಪೂಜಿತೋ ಧ್ಯಾತೋ ಯಥಾಽಹಂ ನಾಽತ್ರ ಸಂಶಯಃ ॥ ೮೯ ॥
ಕಲೌ ಚ ದುರ್ಲಭಂ ದೇವಿ ಪ್ರಭಾಸಕ್ಷೇತ್ರಮುತ್ತಮಂ ।
ಇದಾನೀಂ ತವ ಸ್ನೇಹೇನ ವಿಶೇಷಂ ಕಥಯಾಮಿ ವೈ ।
ಸತ್ಯಂ ಸತ್ಯಂ ಪುನಃಸತ್ಯಂ ತ್ರಿಃಸತ್ಯಂ ಸುರಸುಂದರಿ ॥ ೯೦ ॥
ಯಾನಿ ಲಿಂಗಾನಿ ಭೂರ್ಲೋಕೇ ಸೋಮೇಶಸ್ತೇಷು ಮೇ ಪ್ರಿಯಃ ।
ಅಸ್ಮಿಂಲ್ಲಿಂಗೇ ಗುಣಾ ಯೇ ತು ತೇ ದೇವಿ ವಿದಿತಾ ಮಮ ॥ ೯೧ ॥
ಅಹಮೇವ ವಿಜಾನಾಮಿ ನಾನ್ಯೋ ವೇದ ಕಥಂಚನ ।
ಅನ್ಯೇಷು ಚೈವ ಲಿಂಗೇಷು ಅಹಂ ಪೂಜ್ಯಃ ಸುರಾಸುರೈಃ ॥ ೯೨ ॥
ಲಿಂಗಂ ಚೇಮಂ ಪುನರ್ದೇವಿ ಪೂಜಯಾಮೋ ವಯಂ ಸ್ವಯಂ ॥ ೯೩ ॥

---

೮೭. ಪ್ರಿಯಳೆ ! ಇದು ಬಹು ಗುಟ್ಟಾದ ವಿಷಯವು. ಇದನ್ನು ಯಾರಿಗೂ ಹೇಳ ಬಾರದು. ತನ್ನ ಪ್ರಾಣದಂತೆ ಈ ಶಾಸ್ತ್ರವನ್ನು ರಕ್ಷಿಸಬೇಕು.

೮೮. ಪ್ರಭಾಸಕ್ಷೇತ್ರವನ್ನು ಪ್ರಕಾಶಗೊಳಿಸುವ ಈ ಶಾಸ್ತ್ರವನ್ನು ರಚಿಸಿದವನು ಮನುಷ್ಯದೇಹವನ್ನು ಆಶ್ರಯಿಸಿದ ಮಹೇಶ್ವರನೇ.

೮೯. ಪಾರ್ವತಿ ! ಆ ವಿಗ್ರಹದಲ್ಲಿ ಯಾವಾಗಲೂ ಸನ್ನಿಹಿತನಾಗಿರುವ ನನ್ನನ್ನು ಎಲ್ಲರೂ ನಮಸ್ಕರಿಸುವರು, ಪೂಜಿಸುವರು, ಮತ್ತು ಧ್ಯಾನಿಸುವರು. ಈ ವಿಷಯ ದಲ್ಲಿ ಸಂದೇಹವಿಲ್ಲ.

೯೦. ದೇವಿ ! ಕಲಿಯುಗದಲ್ಲಿ ಉತ್ತಮವಾದ ಪ್ರಭಾಸಕ್ಷೇತ್ರವು ದುರ್ಲಭ ವಾದುದು. ಇದು ಸತ್ಯ. ಈಗ ನಿನಗೆ ಪ್ರೀತಿಯಿಂದ ಇದರವಿಶೇಷವನ್ನು ಹೇಳುತ್ತೇನೆ.

೯೧–೯೩. ಭೂಲೋಕದಲ್ಲಿರುವ ಶಿವಲಿಂಗಗಳಲ್ಲಿ ಸೋಮೇಶಲಿಂಗವು ನನಗೆ ಪ್ರಿಯವಾದುದು. ದೇವಿ ! ಇದರಲ್ಲಿರುವ ಗುಣಗಳು ನನಗೆ ತಿಳಿದಿವೆ. ನನ್ನ ಹೊರತು ಬೇರೆ ಯಾರಿಗೂ ತಿಳಿಯದು. ಇತರ ಶಿವಲಿಂಗಗಳಲ್ಲಿ ದೇವಾಸುರರು ನನ್ನನ್ನು ಪೂಜಿಸುತ್ತಾರೆ. ಈ ಶಿವಲಿಂಗವನ್ನಾದರೂ ನಾನೂ ಪೂಜಿಸುವೆನು.

ಯಸ್ಮಿನ್ಕಾಲೇ ನ ವೈ ಬ್ರಹ್ಮಾ ನ ಭೂಮಿರ್ನ ದಿವಾಕರಃ ।
ಸರ್ವಂ ಚೈವ ಜಗನ್ನಾಥ ತಸ್ಮಿನ್ಕಾಲೇ ಯಶಸ್ವಿನಿ ॥ ೯೪ ॥
ಇಮಂ ಲಿಂಗಂ ಪರಂ ಚೈವ ಬ್ರಹ್ಮಣಃ ಪ್ರಲಯೇ ತದಾ ॥
ಭಾವಿನೀಂ ವೃತ್ತಿಮಾಸ್ಥಾಯ ಇದಂ ಸ್ಥಾನಂ ತು ರಕ್ಷತಿ ॥ ೯೫ ॥
ದಶಕೋಟ್ಯಸ್ತು ಲಿಂಗಾನಾಂ ಗಂಗಾದ್ವಾರಾದ್ವರಾನನೇ ।
ಆಗತ್ಯ ತಾನಿ ಮಧ್ಯಾಹ್ನೇ ಲಿಂಗೇಽಸ್ಮಿನ್ ಯಾಂತಿ ಸಂಲಯಂ ॥ ೯೬ ॥
ಪೃಥಿವ್ಯಾಂ ಯಾನಿ ತೀರ್ಥಾನಿ ಗಗನಸ್ಥಾನಿ ಯಾನಿ ತು ।
ಸ್ನಾನಾರ್ಥಮಸ್ಯ ಲಿಂಗಸ್ಯ ಸಮಾಗಚ್ಛಂತಿ ಸರ್ವದಾ ॥ ೯೭ ॥
ಧನ್ಯಾಸ್ತು ಖಲು ತೇ ಮರ್ತ್ಯಾಃ ಪ್ರಭಾಸೇ ಸಂವ್ಯವಸ್ಥಿತಾಃ ।
ಸೋಮೇಶ್ವರಂ ಯೇ ದ್ರಕ್ಷ್ಯಂತಿ ಸಂಸಾರಭಯಮೋಚನಂ ॥ ೯೮ ॥
ದೇವಿ ಸೋಮೇಶ್ವರಂ ಲಿಂಗಂ ಯೇ ಸ್ಮರಿಷ್ಯಂತಿ ಭಾವಿತಾಃ ।
ಸರ್ವಪಾಪಕ್ಷಯಸ್ತೇಷಾಂ ಭವಿಷ್ಯತಿ ನ ಸಂಶಯಃ ॥ ೯೯ ॥

ಏತತ್ ಸತ್ಯಂ ಪ್ರಿಯತಮಂ ಮಮ ದೇವಿ ನಿತ್ಯಂ
ಕ್ಷೇತ್ರಂ ಪವಿತ್ರಮೃಷಿಸಿದ್ಧಗಣಾಭಿರಮ್ಯಂ ।
ಅಸ್ಮಿನ್ ಮೃತಾಃ ಸಕಲಜೀವಮೃತೋಽಪಿ ದೇವಿ
ಸ್ವರ್ಗಾತ್ಪರಂ ಸಮುಪಯಾಂತಿ ನ ಸಂಶಯೋಽತ್ರ ॥

೯೪–೯೫. ಯಾವ ಸಮಯದಲ್ಲಿ ಬ್ರಹ್ಮ, ಭೂಮಿ, ಸೂರ್ಯರೂ, ಎಲ್ಲವೂ ಏನೂ ಇರುವುದಿಲ್ಲವೊ ಆ ಸಮಯದಲ್ಲಿ ಈ ಲಿಂಗವು ಮುಂದಿನ ಜಗತ್ತಿನ ವ್ಯಾಪಾರವನ್ನು ಆಶ್ರಯಿಸಿ ಈ ಸ್ಥಾನವನ್ನು ರಕ್ಷಿಸುವುದು.

೯೬. ಸುಮುಖಿ ! ಮಧ್ಯಾಹ್ನಕಾಲದಲ್ಲಿ ಗಂಗಾದ್ವಾರದಿಂದ ಹತ್ತು ಕೋಟಿ ಲಿಂಗಗಳು ಬಂದು ಈ ಸೋಮೇಶ್ವರ ಲಿಂಗದಲ್ಲಿ ಅಡಗಿ ಹೋಗುವುವು.

೯೭. ಭೂಮಿ, ಆಕಾಶಗಳಲ್ಲಿರುವ ತೀರ್ಥಗಳು ಸ್ನಾನಕ್ಕೋಸ್ಕರವಾಗಿ ಯಾವಾಗಲೂ ಈ ಲಿಂಗದೆಡೆಗೆ ಬರುತ್ತವೆ.

೯೮. ಸಂಸಾರಭಯವನ್ನು ಪರಿಹರಿಸುವ ಈ ಸೋಮೇಶ್ವರನನ್ನು ನೋಡುವ ಈ ಪ್ರಭಾಸಕ್ಷೇತ್ರವಾಸಿಗಳಾದ ಮನುಷ್ಯರು ಧನ್ಯರು.

೯೯. ದೇವಿ ! ಸೋಮೇಶ್ವರ ಲಿಂಗವನ್ನು ಸ್ಮರಿಸುವ ಭಕ್ತರ ಸಕಲ ಪಾಪಗಳೂ ನಾಶವಾಗುವುವು.

೧೦೦. ದೇವಿ! ಪವಿತ್ರವೂ, ಋಷಿಗಳು, ಸಿದ್ಧರು ಇವರ ಸಮೂಹದಿಂದ ಪರಿವೃತವಾಗಿ ಮನೋಹರವೂ ಆಗಿರುವ ಈ ಕ್ಷೇತ್ರವು ನನಗೆ ಅತ್ಯಂತ ಪ್ರಿಯವಾದುದು. ಇದರಲ್ಲಿ ಮೃತರಾದವರೆಲ್ಲ ಸ್ವರ್ಗಕ್ಕಿಂತಲೂ ಉತ್ತಮವಾದ ಲೋಕವನ್ನು ಪಡೆಯುವರು.

ಯಂ ದೇವಾ ನ ವಿಜಾನಂತಿ ಬ್ರಹ್ಮವಿಷ್ಣು ಪುರೋಗಮಾಃ ।
ನ ಸಾಂಖ್ಯೇನ ನ ಯೋಗೇನ ನೈವ ಪಾಶುಪತೇನ ಚ ॥ ೧೦೧ ॥
ಕೈವಲ್ಯಂ ನಿಷ್ಕಲಂ ಯತ್ತದಸ್ಮಿಂಲ್ಲಿಂಗೇ ಶು ಲಭ್ಯತೇ ।
ತಾವದ್ಭ್ರಮಂತಿ ಸಂಸಾರೇ ದೇವಾದ್ಯಾಸ್ತು ಯಶಸ್ವಿನಿ ॥ ೧೦೨ ॥
ಯಾವತ್ಸೋಮೇಶ್ವರಂ ದೇವಂ ನ ವಿಂದಂತಿ ತ್ರಿಲೋಚನಂ ।
ಕ್ಷೇತ್ರಂ ಪ್ರಭಾಸಮಿತ್ಯುಕ್ತಂ ಕ್ಷೇತ್ರಜ್ಞೋಽಹಂ ನ ಸಂಶಯಃ ॥ ೧೦೩ ॥

ಏವಂ ತವೋಕ್ತಂ ನನು ಬೋಧನಾಯ
ಸೋಮೇಶ್ವರಸ್ಯೈವ ಮಹಾಪ್ರಭಾವಂ ।
ಯೇ ವೈ ಪಠಿಷ್ಯಂತಿ ನರಾ ನಿತಾಂತಂ
ಯಾಸ್ಯಂತಿ ತೇ ತತ್ಪದಮಿಂದುಮೌಲೇಃ ॥ ೧೦೪ ॥
ಸೋಮೇಶ್ವರಂ ದೇವವರಂ ಮನುಷ್ಯಾ
ಯೇ ಭಕ್ತಿಮಂತಃ ಶರಣಂ ಪ್ರಪನ್ನಾಃ ।
ತೇ ಘೋರರೂಪೇ ಚ ಭಯಾವಹೇ ಚ
ಸಂಸಾರ ಚಕ್ರೇ ನ ಪುನರ್ಭ್ರಮಂತಿ ॥ ೧೦೫ ॥
ಯೇ ದಕ್ಷಿಣಾಮೂರ್ತಿಮುಪಾಶ್ರಿತಾಃ ಸ್ಯು
ರ್ಜಪಂತಿ ನಿತ್ಯಂ ಶತರುದ್ರಿಯಂ ದ್ವಿಜಾಃ ।
ತೇಽಸ್ಮಿನ್ ಭವೇ ನೈವ ಪುನರ್ಭವಂತಿ
ಸಂಸಾರಪಾರಂ ಪರಮಂ ಗತಾ ವೈ ॥ ೧೦೬ ॥

೧೦೧–೧೦೩. ಬ್ರಹ್ಮವಿಷ್ಣು ಮೊದಲಾದ ದೇವತೆಗಳು ಸಾಂಖ್ಯಯೋಗ ಪಾಶುಪತ ಶಾಸ್ತ್ರಗಳಿಂದರಿಯದ ಮೋಕ್ಷವು ಈ ಸೋಮೇಶ್ವರ ಲಿಂಗದಲ್ಲಿ ಲಭಿಸುವುದು. ದೇವತೆಗಳೇ ಮೊದಲಾದವರು ಸೋಮೇಶ್ವರನನ್ನು ಹೊಂದುವವರೆಗೆ ಸಂಸಾರದಲ್ಲಿ ತಿರುಗುತ್ತಿರುವರು. ಕ್ಷೇತ್ರವೆಂದರೆ ಪ್ರಭಾಸವು ಕ್ಷೇತ್ರವೇ! ಕ್ಷೇತ್ರಜ್ಞನೆಂದರೆ ನಾನೇ!

೧೦೪. ಈ ಸೋಮೇಶ್ವರನ ಮಹಾತ್ಮ್ಯವನ್ನು ತಿಳಿವಳಿಕೆಗಾಗಿ ನಿನಗೆ ಹೇಳಿರುತ್ತೇನೆ. ಇದನ್ನು ಓದುವವರು ಚಂದ್ರಮೌಲೀಶ್ವರನ ಸ್ಥಾನವನ್ನು ಸೇರುವರು.

೧೦೫. ಭಕ್ತಿಯಿಂದ ಸೋಮೇಶ್ವರನನ್ನು ಮರೆಹೊಕ್ಕವರು ಘೋರಸಂಸಾರ ಚಕ್ರದಲ್ಲಿ ಮರಳಿ ಸಂಚರಿಸುವುದಿಲ್ಲ.

೧೦೬. ಸೋಮೇಶ್ವರನನ್ನು ಆಶ್ರಯಿಸಿ ಶತರುದ್ರಿಯವನ್ನು ಜಪಿಸಿದ ಬ್ರಾಹ್ಮಣರು ಸಂಸಾರ ಸಾಗರದ ದಡವನ್ನು ಸೇರಿ ಮತ್ತೆ ಜನಿಸುವುದಿಲ್ಲ.

ಉದ್ದೇಶಮಾತ್ರಂ ಕಥಿತೋ ಮಯಾ ತೇ
ಶ್ರೀಸೋಮನಾಥಸ್ಯ ಕೃತ್ಯೈಕದೇಶಃ ।
ಅಬ್ದೈರನೇಕೈರ್ಬಹುಭಿರ್ಯುಗೈರ್ವಾ
ನ ಶಕ್ಯಮೇಕೇನ ಮುಖೇನ ವಕ್ತುಂ ॥ ೧೦೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀಸೋಮನಾಥಪ್ರಾದುರ್ಭಾವವರ್ಣನಂ ನಾಮ
॥ ಸಪ್ತಮೋಽಧ್ಯಾಯಃ ॥

---

೧೦೭. ಶ್ರೀಸೋಮನಾಥನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಅದನ್ನು ಅನೇಕ ವರ್ಷಗಳಿಂದಾಗಲಿ, ಅನೇಕ ಯುಗಗಳಿಂದಾಗಲಿ ಒಂದು ಮುಖದಿಂದಲೇ ಹೇಳಲು ಸಾಧ್ಯವಿಲ್ಲ,

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶ್ರೀ ಸೋಮನಾಥಪ್ರಾದುರ್ಭಾವವರ್ಣನವೆಂಬ
ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಮೋಽಧ್ಯಾಯಃ

ಸೋಮೇಶ್ವರೈಶ್ವರ್ಯವರ್ಣನಂ

ದೇವ್ಯುವಾಚ:—
ಪುನಃ ಕಥಯ ದೇವೇಶ ಮಾಹಾತ್ಮ್ಯಂ ಲೋಕಶಂಕರ ।
ಶ್ರೀಸೋಮೇಶ್ವರದೇವಸ್ಯ ಸರ್ವಪಾತಕನಾಶನಂ ।
ಬ್ರಹ್ಮವಿಷ್ಣ್ವೀಶದೈವತ್ಯಂ ತಥಾಽತ್ರ ತ್ರಿತಯಂ ವದ ॥ ೧ ॥
ಈಶ್ವರ ಉವಾಚ:—
ಶೃಣುಷ್ವೈಕಮನಾ ಭೂತ್ವಾ ಮಮ ಗೋಪ್ಯಂ ಪುರಾತನಂ ।
ತಸ್ಮಿಂಲ್ಲಿಂಗೇ ಚ ಯದ್ವೃತ್ತಮಾಶ್ಚರ್ಯಂ ಪರಮಂ ಮಹತ್ ॥ ೨ ॥
ಷಷ್ಟಿಕೋಟಿಸಹಸ್ರಾಣಿ ಋಷೀಣಾಮೂರ್ಧ್ವರೇತಸಾಂ ।
ತಸ್ಮಿಂಲ್ಲಿಂಗೇ ಪ್ರವಿಷ್ಟಾನಿ ಘೃತಾಹುತಿರಿವಾಽನಲೇ ॥ ೩ ॥
ಸಿದ್ಧಿರ್ವೃದ್ಧಿಸ್ತಥಾ ತುಷ್ಟಿರೃದ್ಧಿಃ ಪುಷ್ಟಿಸ್ತು ಪಂಚಮೀ ।
ಕೀರ್ತಿಃ ಶಾಂತಿಸ್ತಥಾ ಲಕ್ಷ್ಮೀಸ್ತಸ್ಮಿಂಲ್ಲಿಂಗೇ ಸಮುತ್ಥಿತಾ ॥ ೪ ॥

ಕನ್ನಡದ ಅನುವಾದ

ಸೋಮೇಶ್ವರೈಶ್ವರ್ಯವರ್ಣನ

೧. ದೇವಿಯು ಹೇಳುತ್ತಾಳೆ —ದೇವೇಶ ! ಮರಳಿ ಸಕಲ ಪಾಪವನ್ನು ಪರಿಹರಿಸುವ ಬ್ರಹ್ಮ, ವಿಷ್ಣು, ಶಿವಸ್ವರೂಪವಾದ ಶ್ರೀ ಸೋಮೇಶ್ವರನ ಮಾಹಾತ್ಮ್ಯವನ್ನು ಹೇಳು.

೨. ಈಶ್ವರನು ಹೇಳುತ್ತಾನೆ: —ಆ ಸೋಮೇಶ್ವರಲಿಂಗದ ಗೋಪ್ಯವೂ, ಅನಾದಿಯೂ, ಆಶ್ಚರ್ಯಕರವೂ ಆದ ವೃತ್ತಾಂತವನ್ನು ಸಾವಧಾನ ಮನಸ್ಸಿನಿಂದ ಕೇಳು.

೩. ಬ್ರಹ್ಮಚಾರಿಗಳಾದ ಅರುವತ್ತು ಕೋಟಿ ಸಾವಿರ ಋಷಿಗಳು ಆ ಲಿಂಗದಲ್ಲಿ ಅಗ್ನಿಯಲ್ಲಿ ಆಜ್ಯಾಹುತಿಯಂತೆ ಸೇರಿರುವರು.

೪. ಸಿದ್ಧಿ, ವೃದ್ಧಿ, ತುಷ್ಟಿ, ಋದ್ಧಿ, ಪುಷ್ಟಿ, ಕೀರ್ತಿ, ಶಾಂತಿ, ಲಕ್ಷ್ಮೀ ಇವುಗಳು ಆ ಲಿಂಗದಲ್ಲಿ ಹುಟ್ಟಿದುವು.

ಸಪ್ತಕೋಟ್ಯಸ್ತು ಮಂತ್ರಾಣಾಂ ಸಿದ್ಧೀನಾಂ ಚೈವ ಸಂಭವಃ ।
ದಿವ್ಯಯೋಗರಸಾಶ್ಚಾಽನ್ಯೇ ದಿವ್ಯೌಷಧಿರಸಾಯನಾಃ ॥ ೫ ॥
ಗಾರುಡಂ ಭೂತತಂತ್ರಂ ಚ ಖೇಚರ್ಯೋರ್ ವ್ಯಂತರೀಸ್ತಥಾ ।
ತೇ ಸರ್ವೇ ಸಹ ಯೋಗೇನ ತಸ್ಮಾಲ್ಲಿಂಗಾತ್ಸಮುತ್ಥಿತಾಃ ॥ ೬ ॥
ಅನ್ಯಾಶ್ಚೈವ ತು ಯಾಃ ಕಾಶ್ಚಿತ್ಸಿದ್ಧಯೋಽಷ್ಟೌ ಪ್ರಕೀರ್ತಿತಾಃ ।
ತಾಃ ಸರ್ವಾಃ ಸಹ ಲಿಂಗೇನ ತಸ್ಮಾತ್ ಸ್ಥಾನಾತ್ಸಮುತ್ಥಿತಾಃ ॥ ೭ ॥
ಅನ್ಯದ್ದೇವಿ ಪ್ರವಕ್ಷ್ಯಾಮಿ ಅತ್ರ ಸಿದ್ಧಿಂ ಗತಾಸ್ತು ಯೇ ।
ಮಮಾಂಶಸಂಭವಾಃ ಪ್ರಾಪ್ತಾ ಅಸ್ಮಿಂಲ್ಲಿಂಗೇ ಲಯಂ ಗತಾಃ ॥ ೮ ॥
ತೇಷಾಂ ಚ ವಿಕ್ರಮಾನ್ ಸರ್ವಾನ್ ಪ್ರವಕ್ಷ್ಯಾಮ್ಯನುಪೂರ್ವಶಃ ।
ಪುರಾಕ್ರಮಾ ಗ್ರಹಾ ಮುಂಡಾ ಗುಡಕಾಶ್ಚ ಸಹೇತುಕಾಃ ॥ ೯ ॥
ವಿಮಲಾ ದಂಡಿಕಾಶ್ಚೈವ ಸಪ್ತೈತೇ ಕುತ್ಸಿಕಾಃ ಸ್ಮೃತಾಃ ।
ಅಸ್ಮಿಂಲ್ಲಿಂಗೇ ಪುರಾ ಸಿದ್ಧಾ ಯೋಗಾತ್ಪಾಶುಪತಾನ್ಮಮ ॥ ೧೦ ॥
ರುದ್ರೋ ವಿಪ್ರಸ್ತಥಾ ದಾನಶ್ಚಂದ್ರೋ ಮಂಥೋಽವಲೋಕಕಃ ।
ಸೂರ್ಯಾವಲೋಕಶ್ಚೇತಿ ಗಾರ್ಗೇಯಾಃ ಸಪ್ತ ಕೀರ್ತಿತಾಃ ॥ ೧೧ ॥
ಸೋಮೇಶ್ವರೇ ಚ ತೇ ಸಿದ್ಧಾಃ ಪ್ರಭಾಸೇ ವರವರ್ಣಿನಿ ।
ಮೂಕಮನ್ಯಃ ಶಿವಶ್ಚೈವ ಪ್ರಕಾಶಂ ಕಪಿಲಸ್ತಥಾ ॥ ೧೨ ॥

---

೫. ಏಳು ಕೋಟಿ ಮಂತ್ರಗಳೂ, ಸಿದ್ಧಿಗಳೂ, ದಿವ್ಯಯೋಗಗಳೂ, ದಿವ್ಯೌಷಧಿ ರಸಾಯನಗಳೂ, ಗಾರುಡ, ಭೂತತಂತ್ರಗಳೂ, ಆಕಾಶ ಸಂಚಾರಿಗಳಾದ ಬ್ರಹ್ಮ ರಾಕ್ಷಸಗಳೂ ಯೋಗದೊಡನೆ ಆ ಲಿಂಗದಿಂದ ಹುಟ್ಟಿದುವು.

೭. ಅಣಿಮಾದ್ಯಷ್ಟ ಸಿದ್ಧಿಗಳೂ ಆ ಕ್ಷೇತ್ರದಲ್ಲಿ ಲಿಂಗದೊಡನೆ ಜನಿಸಿದುವು.

೮. ದೇವಿ ! ಮತ್ತೊಂದು ವಿಷಯವನ್ನು ಹೇಳುವೆನು. ನನ್ನ ಅಂಶದಿಂದ ಹುಟ್ಟಿದವರು ಇಲ್ಲಿ ಸಿದ್ಧಿಯನ್ನು ಪಡೆದು ಈ ಲಿಂಗದಲ್ಲಿ ಅಡಗಿರುವರು.

೯–೧೦. ಅವರನ್ನೆಲ್ಲ ಕ್ರಮವಾಗಿ ಹೇಳುವೆನು. ಪುರಾಕ್ರಮ, ಗ್ರಹ, ಮುಂಡ, ಗುಡಕ, ಹೇತುಕ ವಿಮಲ, ದಂಡಿಕಾ ಎಂಬ ಏಳು ವಿಧ ಕುತ್ಸಿತರು ಹಿಂದೆ ಈ ಲಿಂಗದಲ್ಲಿ ಪಾಶುಪತಯೋಗದಿಂದ ಸಿದ್ಧರಾಗಿರುವರು.

೧೧–೧೩. ಹಾಗೆಯೇ ರುದ್ರ, ವಿಪ್ರ, ದಾನ, ಚಂದ್ರ, ಮಂಥ, ಅವಲೋಕಕ, ಸೂರ್ಯಾವಲೋಕಕ, ಎಂಬ ಏಳು ವಿಧಗಾರ್ಗೇಯರು, ಪ್ರಭಾಸದಲ್ಲಿರುವಸೋಮೇಶ್ವರ ದಲ್ಲಿ ಸಿದ್ಧರಾಗಿರುವರು. ಹಾಗೆಯೇ ಮೂಕಮನ್ಯ, ಶಿವ, ಪ್ರಕಾಶ, ಕಪಿಲ,

ಸತ್ಕುಲಃ ಕರ್ಣಿಕಾರಶ್ಚ ಪೌರುಷೇಯೌಃ ಪ್ರಕೀರ್ತಿತಾಃ ।
ಸೋಮೇಶ್ವರೇ ಪುರಾ ಸಿದ್ಧಾಃ ಪ್ರಭಾಸೇ ಪಾಪನಾಶನೇ ॥ ೧೩ ॥
ಯುಗೇ ಯುಗೇ ಪುರಾಽಸಿದ್ಧಾಸ್ತಸ್ಮಿಂಲ್ಲಿಂಗೇ ಪ್ರಿಯೇ ಮಮ ।
ಏತೇ ಚಾಽನ್ಯೇ ಚ ಯೇ ವಿಪ್ರಾ ಭವಿಷ್ಯಂತಿ ಕಲೌ ಯುಗೇ ॥ ೧೪ ॥
ತತ್ರ ಸಿದ್ಧಿಂ ಗಮಿಷ್ಯಂತಿ ದುರ್ಲಭಾಂ ತ್ರಿದಶೈರಪಿ ।
ಏತತ್ತೇ ಸರ್ವಮಾಖ್ಯಾತಂ ತಲ್ಲಿಂಗಂ ಸಿದ್ಧಿದಂ ಪರಂ ॥ ೧೫ ॥
ದುರ್ಲಭಂ ಸರ್ವಮರ್ತ್ಯಾನಾಂ ಪ್ರಭಾಸೇ ತು ವ್ಯವಸ್ಥಿತಂ ।
ನ ಚ ಕಶ್ಚಿದ್ವಿಜಾನಾತಿ ಅಶುಭೈಃ ಕರ್ಮಭಿರ್ವೃತಃ ॥ ೧೬ ॥
ಗ್ರಹದೋಷಾಸ್ತು ಯೇ ಕೇಚಿದ್ಭೂತದೋಷಾಸ್ತಥಾ ಪರೇ ।
ಡಾಕಿನೀ ಪ್ರೇತವೇತಾಲಾ ರಾಕ್ಷಸಾ ಗ್ರಹಪೂತನಾಃ ॥ ೧೭ ॥
ಜ್ವರಭೂತಗ್ರಹಾಶ್ಚಾಽನ್ಯೇ ಹ್ಯತಿಸಾರಭಗಂದರಾಃ ।
ಅಶ್ಮರೀ ಮೂತ್ರಕೃಚ್ಛ್ರಂ ಚ ರೋಗಾಶ್ಚಾಽನ್ಯೇ ಸಹಸ್ರಶಃ ॥ ೧೮ ॥
ದುರ್ನಾಮಕಾಸ್ತಥಾ ಚಾಽನ್ಯೇ ಕುಷ್ಠರೋಗಾಸ್ತಥಾ ಪರೇ ।
ಕ್ಷಯರೋಗಾಸ್ತಥಾ ಚಾಽನ್ಯೇ ವಾತಗುಲ್ಮಾಸ್ತಥೈವ ಚ ।
ಅನ್ಯೇ ಚೈವ ತು ಯೇ ಕೇಚಿದ್ವ್ಯಾಧಯಸ್ತು ಪ್ರಕೀರ್ತಿತಾಃ ॥ ೨೦ ॥

ಪೂರ್ವದಲ್ಲಿ ತಪಸ್ಸಿನಿಂದ ಸಿದ್ಧರಾಗಿರುವ ಸತ್ಕುಲ, ಕರ್ಣಿಕಾರ ಎಂಬ ಪೌರುಷೇಯರು ಪಾಪವನ್ನು ಪರಿಹರಿಸುವವರಾಗಿ ಪ್ರಭಾಸದಲ್ಲಿ ನೆಲಸಿರುವರು.

೧೪–೧೫. ನನಗೆ ಪ್ರಿಯವಾದ ಆ ಶುಭಲಿಂಗದಲ್ಲಿ ಪ್ರತಿ ಯುಗದಲ್ಲಿಯೂ ಸಿದ್ಧಿಯನ್ನು ಹೊಂದದಿರುವವರೂ, ಇನ್ನೂ ಕಲಿಯುಗದಲ್ಲಿ ಹುಟ್ಟುವ ಇತರ ಬ್ರಾಹ್ಮಣರೂ ದೇವತೆಗಳಿಗೂ ದುರ್ಲಭವಾದ ಸಿದ್ಧಿಯನ್ನು ಪಡೆಯುತ್ತಾರೆ. ನಿನಗೆ ಹೀಗೆ ಸಿದ್ಧಿಪ್ರದವಾದ ಆ ಉತ್ತಮ ಲಿಂಗದ ವಿಷಯವನ್ನೆಲ್ಲ ಹೇಳಿರುವೆನು.

೧೬. ಸಮಸ್ತ ಮಾನವರಿಗೂ ದುರ್ಲಭವಾದ ಪ್ರಭಾಸದಲ್ಲಿರುವ ಸೋಮೇಶ್ವರ ಲಿಂಗವನ್ನು ದುಷ್ಕರ್ಮಿಯಾದ ಯಾವನೂ ತಿಳಿಯುವುದಿಲ್ಲ.

೧೭–೨೧. ಗ್ರಹದೋಷ ಭೂತದೋಷಗಳೂ, ಡಾಕಿನೀಪ್ರೇತಬೇತಾಳಗಳೂ, ರಾಕ್ಷಸರೂ, ಗ್ರಹಪೂತನೆಯರೂ, ಜ್ವರ, ಭೂತಗ್ರಹಗಳೂ, ಅತಿಸಾರ, ಭಗಂದರ, ಬಹುಮೂತ್ರ, ಮೂತ್ರಕೃಚ್ಛ್ರ, ಮೂಲವ್ಯಾಧಿ, ಕುಷ್ಠ, ಕ್ಷಯ, ವಾತ,

ಸೋಮೇಶ್ವರಂ ಸಮಾಸಾದ್ಯ ತಸ್ಯ ಲಿಂಗಸ್ಯ ದರ್ಶನಾತ್ ।
ಸರ್ವ ಏವ ವಿನಶ್ಯಂತಿ ವಹ್ನೌ ಕ್ಷಿಪ್ತಮಿವೇಂಧನಂ ॥ ೨೧ ॥
ಉಪಸರ್ಗಾಶ್ಚ ಯೇ ಚಾನ್ಯೇ ಸರ್ಪಘೋಣಪವೃಶ್ಚಿಕಾಃ ।
ಸರ್ವೇ ತತ್ರ ವಿನಶ್ಯಂತಿ ಶ್ರೀಸೋಮೇಶ್ವರದರ್ಶನಾತ್ ॥ ೨೨ ॥
ಯೋಽಸೌ ಸೋಮೇಶ್ವರೋ ನಾಮ್ನಾ ಪಶ್ಚಿಮೋ ಭೈರವಃ ಸ್ಮೃತಃ ।
ಕಾಲಾಗ್ನಿರುದ್ರನಾಥೇತಿ ಪರ್ಯಾಯೈರ್ನಾಮಭಿಃ ಶ್ರುತಃ ॥ ೨೩ ॥
ತಸ್ಮಿಂಸ್ತಿಷ್ಠಾಮಿ ದೇವೇಶಿ ಭಕ್ತಾಽನುಗ್ರಹಕಾರಕಃ ।
ಸರ್ವಂ ಚ ದುಷ್ಕೃತಂ ನೃಣಾಂ ಭಕ್ಷಯಾಮಿ ನ ಸಂಶಯಃ ॥ ೨೪ ॥
ಯೋಽಸೌ ಪ್ರಾಣಃ ಶರೀರಸ್ಥೋ ದೇಹಿನಾಂ ದೇಹಸಂಚರಃ ।
ಬ್ರಹ್ಮಾಂಡಮೇತದ್ಯಸ್ಯಾಂತರೇಕೋ ಯಶ್ಚಾಽಪ್ಯನೇಕಧಾ ॥ ೨೫ ॥
ವೇದಾಃ ಸರ್ವೇಽಪಿ ಯಂ ದೇವಂ ಪ್ರಶಂಸಂತಿ ಮಹರ್ಷಯಃ ।
ಪರಸ್ಯ ಬ್ರಹ್ಮಣೋ ರೂಪಂ ಯಸ್ಯ ದ್ವಾರೇಣ ಲಭ್ಯತೇ ॥ ೨೬ ॥
ಸೋಽಯಂ ದೇವಿ ಮಹಾದೇವಃ ಪ್ರಭಾಸೇ ಸಂವ್ಯವಸ್ಥಿತಃ ।
ಯಥಾ ಗುಪ್ತಂ ಗೃಹೇ ರತ್ನಂ ನ ಕಶ್ಚಿದ್ವಿಂದತೇ ನರಃ ॥ ೨೭ ॥

ಗುಲ್ಮರೋಗಗಳೇ ಅಲ್ಲದೆ, ರೋಗಗಳೂ ಸೋಮೇಶ್ವರಲಿಂಗದ ಶುಭದರ್ಶನದಿಂದ ಬೆಂಕಿಯಲ್ಲಿ ಸೆದ ಕಟ್ಟಿಗೆಯಂತೆ ಕೂಡಲೆ ನಾಶವಾಗುವುವು.

೨೨. ಇವೆ ಅಲ್ಲದೆ ಇತರ ಅಡಚಣೆಗಳೂ, ಹಾವು, ಚೇಳು ಮೊದಲಾದ ಕ್ರೂರ ಜಂತುಗಳೂ ಸೋಮೇಶ್ವರನ ದರ್ಶನಮಾತ್ರದಿಂದಲೆ ನಾಶವಾಗುವುವು.

೨೩–೨೪. ದೇವಿ ! ಸೋಮೇಶ್ವರ, ಭೈರವ, ಕಾಲಾಗ್ನಿರುದ್ರ ಎಂಬ ಹೆಸರನ್ನು ಪಡೆದ ಆ ಲಿಂಗದಲ್ಲಿ ಭಕ್ತರಿಗೆ ಅನುಗ್ರಹವನ್ನು ಮಾಡುವ ನಾನು ನೆಲೆಸಿ ನರರ ಸಕಲ ಪಾಪಗಳನ್ನೂ ನಾಶಗೊಳಿಸುವೆನು.

೨೫–೨೭. ಪ್ರಾಣಿಗಳ ದೇಹಗಳಲ್ಲಿ ಪ್ರಾಣರೂಪದಿಂದ ಸಂಚರಿಸುವವನೂ, ಬ್ರಹ್ಮಾಂಡವನ್ನು ತನ್ನ ಉದರದಲ್ಲಿಟ್ಟುಕೊಂಡಿರುವವನೂ, ಒಬ್ಬನಾದರೂ ಅನೇಕ ರೂಪದಿಂದ ಮೆರೆಯುವವನೂ, ಸಕಲ ವೇದ ಪ್ರತಿಪಾದ್ಯನೂ, ಮಹರ್ಷಿಗಳಿಗೆ ಪರಬ್ರಹ್ಮಸ್ವರೂಪವನ್ನು ತೋರಿಸುವವನೂ ಆದ ಮಹೇಶ್ವರನು ಪ್ರಭಾಸದಲ್ಲಿರುವನು. ಮನೆಯೊಳಗೆ ಗುಪ್ತವಾಗಿ ಹುದುಗಿಕೊಂಡಿರುವ ರತ್ನವನ್ನು ಮನುಷ್ಯನು ಪಡೆಯದಿರುವಂತೆ ಪ್ರಭಾಸದಲ್ಲಿ ರತ್ನದಂತಿರುವ ಆ ನನ್ನ ಲಿಂಗವನ್ನು ತಿಳಿಯುವುದಿಲ್ಲ. ಆ ಲಿಂಗವು ಹಿಂದಿನ

ಪ್ರಭಾಸೇ ತು ಸ್ಥಿತಂ ತದ್ವದ್ರತ್ನಭೂತಂ ಗೃಹೇ ಮಮ ।
ತಚ್ಚ ಲಿಂಗಂ ಪುರಾ ಕಲ್ಪೇ ಸಪ್ತಪಾತಾಲಭೇದಕಂ ॥ ೨೮ ॥
ಕಥಿತಂ ಕೋಟಿಸೂರ್ಯಸ್ಯ ಪ್ರಲಯಾಽನಲಸನ್ನಿಭಂ ।
ತೇನ ಕಾಲಾಗ್ನಿರುದ್ರೇತಿ ಪ್ರೋಕ್ತಂ ಸೋಮೇಶ್ವರಃ ಪುರಾ ॥ ೨೯ ॥
ಇತಿ ದೇವಿ ಸಮಾಸೇನ ಕಥಿತಂ ತವ ಪಾರ್ವತಿ ।
ಸೋಮೇಶ್ವರಸ್ಯ ಮಾಹಾತ್ಮ್ಯಂ ಸರ್ವಪಾತಕನಾಶನಂ ॥ ೩೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀ ಸೋಮೇಶ್ವರೈಶ್ವರ್ಯವರ್ಣನಂ ನಾಮ
ಅಷ್ಟಮೋಽಧ್ಯಾಯಃ

ಕಲ್ಪದಲ್ಲಿ ಸಪ್ತ ಪಾತಾಲಗಳನ್ನು ಭೇದಿಸುವುದೂ, ಕೋಟಿಸೂರ್ಯರಂತೆಯೂ, ಪ್ರಳಯಕಾಲದ ಅಗ್ನಿಯಂತೆಯೂ ಪ್ರಕಾಶಿಸುವುದೂ ಆಗಿರುವುದರಿಂದಲೇ ಕಾಲಾಗ್ನಿ ರುದ್ರನೆಂಬ ಹೆಸರನ್ನು ಪಡೆದಿರುವುದು.

೩೦. ಪಾರ್ವತಿ ! ಹೀಗೆ ನಿನಗೆ ಸಂಕ್ಷೇಪವಾಗಿ ಸಕಲ ಪಾಪಗಳನ್ನು ಪರಿಹರಿಸುವ ಸೋಮೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸ ಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಶ್ರೀ ಸೋಮೇಶ್ವರೈಶ್ವರ್ಯವರ್ಣನವೆಂಬ
ಎಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವಮೋಽಧ್ಯಾಯಃ

ಶ್ರೀಹರಿಸ್ಥಿತಿಪ್ರಶ್ನವರ್ಣನಂ

ದೇವ್ಯುವಾಚ :—

ದಿವ್ಯಂ ತೇಜೋ ನಮಸ್ಯಾಮಿ ಯನ್ಮೇ ದೃಷ್ಟಂ ಪುರಾತನೇ ।
ಕಾಲಾಗ್ನಿರುದ್ರಮಧ್ಯಸ್ಥಂ ಪ್ರಭಾಸೇ ಶಂಕರೋದ್ಭವಂ ॥ ೧ ॥

ಯೋ ವೇದಸಂಘೈರ್ಋಷಿಭಿಃ ಪುರಾಣೈ
ರ್ವೇದೋಕ್ತಯೋಗೈರಪಿ ಇಜ್ಯಮಾನಃ ।
ತಂ ದೇವದೇವಂ ಶರಣಂ ವ್ರಜಾಮಿ
ಸೋಮೇಶ್ವರಂ ಪಾಪವಿನಾಶಹೇತುಂ ॥ ೨ ॥

ದೇವದೇವ ಜಗನ್ನಾಥ ಭಕ್ತಾಽನುಗ್ರಹಕಾರಕ ।
ಸಂಶಯೋ ಹೃದಿ ಮೇ ಕಶ್ಚಿತ್ತಂ ಭವಾನ್‌ಛೇತ್ತುಮರ್ಹಸಿ ॥ ೩ ॥

ಈಶ್ವರ ಉವಾಚ :—

ಕಃ ಸಂಶಯಃ ಸಮುತ್ಪನ್ನಸ್ತವ ದೇವಿ ಯಶಸ್ವಿನಿ ।
ತನ್ಮೇ ಕಥಯ ಕಲ್ಯಾಣಿ ತತ್ಸರ್ವಂ ಕಥಯಾಮ್ಯಹಂ ॥ ೪ ॥

ಕನ್ನಡದ ಅನುವಾದ

ಶ್ರೀಹರಿಸ್ಥಿತಿಪ್ರಶ್ನವರ್ಣನ

೧. ದೇವಿಯು ಹೇಳುತ್ತಾಳೆ:—ಹಿಂದೆ ನಾನು ನೋಡಿದ ಪ್ರಭಾಸಕ್ಷೇತ್ರದಲ್ಲಿ ಕಾಲಾಗ್ನಿರುದ್ರನಮಧ್ಯದಲ್ಲಿರುವ ಶಂಕರನ ದಿವ್ಯ ತೇಜಸ್ಸನ್ನು ನಮಸ್ಕಾರ ಮಾಡುವೆನು.

೨. ವೇದಗಳ ಸಮೂಹಗಳಿಂದಲೂ, ಋಷಿಗಳಿಂದಲೂ, ಪುರಾಣಗಳಿಂದಲೂ, ವೇದೋಕ್ತಯೋಗಗಳಿಂದಲೂ ಪೂಜ್ಯನಾದವನೂ ಪಾಪವನ್ನು ಪರಿಹರಿಸುವವನೂ ಆದ ಸೋಮೇಶ್ವರನನ್ನು ಮರೆಹೋಗುವೆನು.

೩. ಜಗದೊಡೆಯನೂ, ಭಕ್ತರಿಗೆ ಅನುಗ್ರಹವನ್ನು ಮಾಡುವವನೂ, ಆದ ಓ ಮಹಾದೇವ! ನನ್ನ ಮನಸ್ಸಿಗೊಂದು ಸಂಶಯವುಂಟಾಗಿದೆ. ನೀನು ಅದನ್ನು ಪರಿಹರಿಸಬೇಕು.

೪. ಈಶ್ವರನು ಹೇಳುತ್ತಾನೆ:—ದೇವಿ ! ನಿನಗೆ ಏನು ಸಂಶಯವುಂಟಾಗಿದೆ? ಅದನ್ನು ನನಗೆ ಹೇಳು. ನಿನಗೆ ಎಲ್ಲವನ್ನೂ ಹೇಳುವೆನು.

ದೇವ್ಯುವಾಚ :—

ಯದಿ ತ್ವಂ ಚ ಮಹಾದೇವೋ ಮುಂಡಮಾಲಾ ಕಥಂ ಕೃತಾ ।
ಅನಾದಿನಿಧನೋ ಧಾತಾ ಸೃಷ್ಟಿಸಂಹಾರಕಾರಕಃ ॥ ೫ ॥
ತತೋ ವಿಹಸ್ಯ ದೇವೇಶಃ ಶಂಕರೋ ವಾಕ್ಯಮಬ್ರವೀತ್ ।
ಅನೇಕಮುಂಡಕೋಟೀಭಿರ್ಯಾ ಮೇ ಮಾಲಾ ವಿರಾಜತೇ ॥ ೬ ॥
ನಾರಾಯಣಸಹಸ್ರಾಣಾಂ ಬ್ರಹ್ಮಣಾಮಯುತಸ್ಯ ಚ ।
ಕೃತಾ ಶಿರಃಕರೋಟೀಭಿರನಾದಿನಿಧನಾ ತತಃ ॥ ೭ ॥
ಅನ್ಯೋ ವಿಷ್ಣುಶ್ಚ ಭವತಿ ಅನ್ಯೋ ಬ್ರಹ್ಮಾ ಭವತ್ಯಪಿ ।
ಕಲ್ಪೇ ಕಲ್ಪೇ ಮಯಾ ಸೃಷ್ಟಃ ಕಲ್ಪೇ ವಿಷ್ಣುಃ ಪ್ರಜಾಪತಿಃ ॥ ೮ ॥
ಅಹಮೇವಂವಿಧೋ ದೇವಿ ಕ್ಷೇತ್ರೇ ಪ್ರಾಭಾಸಿಕೇ ಸ್ಥಿತಃ ।
ಕಾಲಾಗ್ನಿಲಿಂಗಮೂಲೇ ತು ಮುಂಡಮಾಲಾವಿಭೂಷಿತಃ ॥ ೯ ॥
ಅಕ್ಷಸೂತ್ರಧರಃ ಶಾಂತ ಆದಿಮಧ್ಯಾಂತವರ್ಜಿತಃ ।
ಪದ್ಮಾಸನಸ್ಥೋ ವರದೋ ಹಿಮಕುಂದೇಂದು ಸನ್ನಿಭಃ ॥ ೧೦ ॥
ಮಮ ವಾಮೇ ಸ್ಥಿತೋ ವಿಷ್ಣುರ್ದಕ್ಷಿಣೇ ಚ ಪಿತಾಮಹಃ ।
ಜಠರೇ ಚತುರೋ ವೇದಾಃ ಹೃದಯೇ ಬ್ರಹ್ಮ ಶಾಶ್ವತಂ ॥ ೧೧ ॥

---

೫. ದೇವಿಯು ಹೇಳುತ್ತಾಳೆ:—ನೀನು ಆದ್ಯಂತ ರಹಿತನೂ, ಲೋಕದ ಸೃಷ್ಟಿ ಸ್ಥಿತಿ, ಸಂಹಾರಗಳನ್ನು ಮಾಡುವವನೂ ಆದ ಮಹಾ ದೇವನಾದರೆ ಮುಂಡಮಾಲೆಯನ್ನು ಏಕೆ ಧರಿಸಿರುವೆ ?

೬—೭. ಬಳಿಕ ಶಂಕರನು ನಕ್ಕು ಇಂತೆಂದನು. ಅನೇಕ ಕೋಟಿ ಮುಂಡಲಗಳಿಂದ ವಿರಾಜಿಸುವ ಈ ಮಾಲೆಯು ಸಾವಿರ ನಾರಾಯಣ, ಮತ್ತು ಹತ್ತು ಸಾವಿರ ಬ್ರಹ್ಮರ ತಲೆಬುರುಡೆಗಳಿಂದ ಶಾಶ್ವತವಾಗಿ ಮಾಡಲ್ಪಟ್ಟಿರುವುದು.

೮. ಪ್ರತಿಕಲ್ಪಗಳಲ್ಲಿಯೂ ನಾನು ಸೃಷ್ಟಿಸಿದ ಬ್ರಹ್ಮ, ವಿಷ್ಣುಗಳು ಬೇರೆಬೇರೆಯಾಗಿರುತ್ತಾರೆ.

೯. ದೇವಿ ! ಇಂತಹ ನಾನು ಪ್ರಭಾಸಕ್ಷೇತ್ರದಲ್ಲಿರುವ ಕಾಲಾಗ್ನಿಲಿಂಗದ ಬುಡದಲ್ಲಿ ಮುಂಡಮಾಲೆಯಿಂದ ಅಲಂಕೃತನಾಗಿರುವೆನು.

೧೦—೧೧. ಅಕ್ಷಸೂತ್ರವನ್ನು ಧರಿಸಿದವನೂ, ಶಾಂತನೂ, ಆದಿ, ಮಧ್ಯ ಅಂತ್ಯವಿಲ್ಲದವನೂ, ಪದ್ಮಾಸನದಲ್ಲಿ ಕೂತಿರುವವನೂ, ಹಿಮ, ಕುಂದಪುಷ್ಪ, ಚಂದ್ರರಿಗೆ ಸಮಾನನೂ ಆದ ವಿಷ್ಣುವು ನನ್ನ ಎಡಭಾಗದಲ್ಲಿಯೂ, ಬ್ರಹ್ಮನು ಬಲಭಾಗದಲ್ಲಿಯೂ ಇರುವರು. ಹೊಟ್ಟೆಯಲ್ಲಿ ನಾಲ್ಕು ವೇದಗಳೂ, ಹೃದಯದಲ್ಲಿ ಪರ

ಅಗ್ನಿಃ ಸೋಮಶ್ಚ ಸೂರ್ಯಶ್ಚ ಲೋಚನೇಷು ವ್ಯವಸ್ಥಿತಾಃ ॥ ೧೨ ॥
ಏವಂವಿಧೋ ಮಹಾದೇವಿ ಪ್ರಭಾಸೇ ಸಂವ್ಯವಸ್ಥಿತಃ ।
ಅಪ್ಯತತ್ತ್ವಾತ್ಸಮಾನೀತೇ ಮಾ ತೇಽಭೂತ್ಸಂಶಯಃ ಕ್ವಚಿತ್ ॥ ೧೩ ॥
ಏವಮುಕ್ತಾ ತದಾ ದೇವೀ ಹರ್ಷಗದ್ಗದಯಾ ಗಿರಾ ।
ತುಷ್ಟಾವ ದೇವದೇವೇಶಂ ಭಕ್ತ್ಯಾ ಪರಮಯಾ ಯುತಾ ॥ ೧೪ ॥

ದೇವ್ಯುವಾಚ :—

ಜಯದೇವ ಮಹಾದೇವ ಸರ್ವಭಾವನ ಈಶ್ವರ ।
ನಮಸ್ತೇಽಸ್ತು ಸುರೇಶಾಯ ಪರಮೇಶಾಯ ವೈ ನಮಃ ॥ ೧೫ ॥
ಅನಾದಿಸೃಷ್ಟಿಕರ್ತ್ರೇ ಚ ನಮಃ ಸರ್ವಗತಾಯ ಚ ।
ಸರ್ವಸ್ಥಾಯ ನಮಸ್ತುಭ್ಯಂ ಧಾಮ್ನಾಂ ಧಾಮ್ನೇ ನಮೋಽಸ್ತು ತೇ॥ ೧೬ ॥
ಷಡಂತಾಯ ನಮಸ್ತುಭ್ಯಂ ದ್ವಾದಶಾಂತಾಯ ತೇ ನಮಃ ।
ಹಂಸಭೇದ ನಮಸ್ತುಭ್ಯಂ ನಮಸ್ತುಭ್ಯಂ ಚ ಮೋಕ್ಷದ ॥ ೧೭ ॥
ಇತಿ ಸ್ತುತಸ್ತದಾ ದೇವ್ಯಾ ಪ್ರಚಲಚ್ಚಂದ್ರಶೇಖರಃ ।
ತತಸ್ತುಷ್ಟಸ್ತು ಭಗವಾನಿದಂ ವಚನಮಬ್ರವೀತ್ ॥ ೧೮ ॥

ಈಶ್ವರ ಉವಾಚ :—

ಸಾಧು ಸಾಧು ಮಹಾಪ್ರಾಜ್ಞೇ ತುಷ್ಟೋಽಹಂ ವ್ರಿಯತಾಂ ವರಃ ॥ ೧೯ ॥

ಬ್ರಹ್ಮನೂ, ಕಣ್ಣುಗಳಲ್ಲಿ ಅಗ್ನಿ, ಚಂದ್ರ, ಸೂರ್ಯರೂ, ನೆಲಸಿರುವರು.

೧೩. ಜಲತತ್ವದಿಂದುದಯಿಸಿದ ಎಲೌ ಮಹಾದೇವಿಯೆ! ಇಂತಹ ನಾನು ಪ್ರಭಾಸಕ್ಷೇತ್ರದಲ್ಲಿ ನೆಲಸಿರುವೆನು. ನೀನು ಸಂಶಯಪಡಬೇಡ.

೧೪. ಮಹೇಶ್ವರನು ಹೀಗೆನ್ನಲು ದೇವಿಯು ಸಂತೋಷಗೊಂಡು ಗದ್ಗದ ಕಂಠದಿಂದ ಅತ್ಯಂತ ಭಕ್ತಿಪೂರ್ವಕವಾಗಿ ಪರಮೇಶ್ವರನನ್ನು ಸ್ತುತಿಸಿದಳು.

೧೫. ದೇವಿಯು ಹೇಳುತ್ತಾಳೆ:—ಸಕಲವನ್ನೂ ಸೃಜಿಸುವವನೂ, ದೇವತೆಗಳೊಡೆಯನೂ ಆದ ಓ ಪರಮೇಶ್ವರ! ನಿನಗೆ ನಮಸ್ಕಾರವು.

೧೬. ಅನಾದಿ ಸೃಷ್ಟಿಕರ್ತನೂ, ಸರ್ವವ್ಯಾಪಿಯೂ, ಸಕಲ ವಸ್ತುಗಳಲ್ಲಿರುವವನೂ, ಆಶ್ರಯಸ್ಥಾನಗಳಿಗೆ ಆಶ್ರಯನೂ ಆದ ಮಹೇಶ್ವರ! ನಿನಗೆ ನಮಸ್ಕಾರವು.

೧೭. ಷಡಂತನೂ, ದ್ವಾದಶಾಂತನೂ, ಹಂಸಭೇದನೂ, ಮೋಕ್ಷದಾಯಕನೂ ಆದ ನಿನಗೆ ನಮಸ್ಕಾರವು.

೧೮. ದೇವಿಯು ಹೀಗೆ ಸ್ತುತಿಸಲು ಚಂದ್ರಮೌಳೀಶ್ವರನು ಸಂತುಷ್ಟನಾಗಿ ಇಂತೆಂದನು.

೧೯. ಈಶ್ವರನು ಹೇಳುತ್ತಾನೆ:—ಮಹಾಪ್ರಾಜ್ಞಳಾದ ಓ ದೇವಿ! ನಾನು ಸಂತುಷ್ಟನಾಗಿರುವೆನು. ವರವನ್ನು ಕೇಳಿಕೊ.

ದೇವ್ಯುವಾಚ :—
ಯದಿ ತುಷ್ಟೋಽಸಿ ದೇವೇಶ ವರಾರ್ಹಾ ಯದಿ ವಾಪ್ಯಹಂ ।
ಪ್ರಭಾಸಕ್ಷೇತ್ರಮಾಹಾತ್ಮ್ಯಂ ಪುನರ್ವಿಸ್ತರತೋ ವದ ॥ ೨೦ ॥
ಭೂತೇಶ ಭಗವಾನ್ ವಿಷ್ಣುರ್ದೈತ್ಯಾನಾಮಂತಕಾಗ್ರಣೀಃ ।
ಸ ಕಸ್ಮಾದ್ದ್ವಾರಕಾಂ ಹಿತ್ವಾ ಪ್ರಭಾಸಕ್ಷೇತ್ರಮಾಶ್ರಿತಃ ॥ ೨೧ ॥
ಷಷ್ಟಿತೀರ್ಥಸಹಸ್ರಾಣಿ ಷಷ್ಟಿಕೋಟಿಶತಾನಿ ಚ ।
ದ್ವಾರಕಾಮಧ್ಯಸಂಸ್ಥಾನಿ ಕಥಂ ನ್ಯಕ್ಕೃತವಾನ್ ಹರಿಃ ॥ ೨೨ ॥
ಅಮರೈರಾವೃತಾಂ ಪುಣ್ಯಾಂ ಪುಣ್ಯಕೃದ್ಭಿರ್ನಿಷೇವಿತಾಂ ।
ಏವಂ ತಾಂ ದ್ವಾರಕಾಂ ತ್ಯಕ್ತ್ವಾ ಪ್ರಭಾಸಂ ಕಥಮಾಗತಃ ॥ ೨೩ ॥
ದೇವಮಾನುಷಯೋರ್ನೇತಾ ದ್ಯೋರ್ಭುವೋಃ ಪ್ರಭವೋ ಹರಿಃ ।
ಕಿಮರ್ಥಂ ದ್ವಾರಕಾಂ ತ್ಯಕ್ತ್ವಾ ಪ್ರಭಾಸೇ ನಿಧನಂ ಗತಃ ॥ ೨೪ ॥
ಯಶ್ಚಕ್ರಂ ವರ್ತಯತ್ಯೇಕೋ ಮಾನುಷಾಣಾಂ ಮನೋಮಯಂ ।
ಪ್ರಭಾಸೇ ಸ ಕಥಂ ಕಾಲಂ ಚಕ್ರೇ ಚಕ್ರಭೃತಾಂ ವರಃ ॥ ೨೫ ॥

---

೨೦. ದೇವಿಯು ಹೇಳುತ್ತಾಳೆ:—ದೇವತೆಗಳಿಗೊಡೆಯನಾದ ಮಹೇಶ್ವರನೆ! ನೀನು ತುಷ್ಟನಾಗಿದ್ದರೆ, ನಾನು ವರಕ್ಕೆ ಯೋಗ್ಯಳಾಗಿದ್ದರೆ ಪ್ರಭಾಸಕ್ಷೇತ್ರಮಾಹಾತ್ಮ್ಯವನ್ನು ಇನ್ನೂ ವಿಸ್ತಾರವಾಗಿ ಹೇಳು.

೨೧. ಮಹಾದೇವ! ದೈತ್ಯನಾಶಕನಾದ ಮಹಾವಿಷ್ಣುವು ದ್ವಾರಕಾಪಟ್ಟಣವನ್ನು ತ್ಯಜಿಸಿ ಪ್ರಭಾಸಕ್ಷೇತ್ರವನ್ನೇಕೆ ಆಶ್ರಯಿಸಿದನು?

೨೨. ಆ ವಿಷ್ಣುವು ದ್ವಾರಕೆಯ ಮಧ್ಯದಲ್ಲಿರುವ ಅರುವತ್ತು ಸಾವಿರದ ಅರುವತ್ತು ಕೋಟಿ ನೂರು ತೀರ್ಥಗಳನ್ನು ಹೇಗೆ ತಿರಸ್ಕರಿಸಿದನು ?

೨೩. ದೇವತೆಗಳಿಂದ ತುಂಬಿರುವುದೂ, ಪುಣ್ಯಕರವೂ, ಪುಣ್ಯವಂತರಿಂದ ಆಶ್ರಯಿಸಲ್ಪಟ್ಟುದೂ, ಆದ ಆ ದ್ವಾರಕೆಯನ್ನು ಬಿಟ್ಟು ಆ ವಿಷ್ಣುವು ಪ್ರಭಾಸಕ್ಕೆ ಹೇಗೆ ಬಂದನು. ?

೨೪. ದೇವತೆಗಳಿಗೂ, ಮನುಷ್ಯರಿಗೂ ನಾಯಕನೂ, ಆಕಾಶಭೂಮಿಗಳಿಗೆ ಉತ್ಪತ್ತಿಕಾರಣನೂ ಆದ ವಿಷ್ಣುವು ದ್ವಾರಕೆಯನ್ನು ಬಿಟ್ಟು ಪ್ರಭಾಸದಲ್ಲಿ ನಿರ್ವಾಣ ಹೊಂದಿದ್ದೇಕೆ ?

೨೫. ಮನುಷ್ಯರ ಮನಸ್ಸಿನ ರೂಪವಾದ ಚಕ್ರವನ್ನು ತಿರುಗಿಸುವವನೂ, ಚಕ್ರಧಾರಿಗಳಲ್ಲಿ ಶ್ರೇಷ್ಠನೂ ಆದ ವಿಷ್ಣುವು ಪ್ರಭಾಸಕ್ಷೇತ್ರದಲ್ಲಿ ಮೃತನಾದುದೆಂತು ?

ಗೋಪ್ತಾಯನಂ ಯಃ ಕುರುತೇ ಜಗತಃ ಸಾರ್ವಲೌಕಿಕಂ ।
ಸ ಕಥಂ ಭಗವಾನ್ ವಿಷ್ಣುಃ ಪ್ರಭಾಸಕ್ಷೇತ್ರಮಾಶ್ರಿತಃ ॥ ೨೬ ॥
ಯೋಂತಕಾಲೇ ಜಲಂ ಪೀತ್ವಾ ಕೃತ್ವಾ ತೋಯಮಯಂ ವಪುಃ ।
ಲೋಕಮೇಕಾರ್ಣವಂ ಚಕ್ರೇ ದೃಷ್ಟ್ವಾ ದೃಷ್ಟೇನ ಚಾಽಽತ್ಮನಾ ॥ ೨೭ ॥
ಸ ಕಥಂ ಪಂಚತಾಂ ಪ್ರಾಪ ಪ್ರಭಾಸೇ ಪಾರ್ವತೀಪತೇ ।
ಯಃ ಪುರಾಣೇ ಪುರಾಣಾತ್ಮಾ ವಾರಾಹಂ ವಪುರಾಸ್ಥಿತಃ ॥ ೨೮ ॥
ಉದ್ದಧಾರ ಮಹೀಂ ಕೃತ್ಸ್ನಾಂ ಸಶೈಲವನಕಾನನಾಂ ।
ಸ ಕಥಂ ತ್ಯಕ್ತವಾನ್ ಗಾತ್ರಂ ಪ್ರಭಾಸೇ ಪಾಪನಾಶನೇ ॥ ೨೯ ॥
ಯೇನ ಸಿಂಹಂ ವಪುಃ ಕೃತ್ವಾ ಹಿರಣ್ಯಕಶಿಪುರ್ಹತಃ ।
ಸ ಕಥಂ ದೇವದೇವೇಶಃ ಪ್ರಭಾಸಂ ಕ್ಷೇತ್ರಮಾಶ್ರಿತಃ ॥ ೩೦ ॥
ಸಹಸ್ರಚರಣಂ ದೇವಂ ಸಹಸ್ರಾಕ್ಷಂ ಮಹಾಪ್ರಭಂ ।
ಸಹಸ್ರಶಿರಸಂ ವೇದಾ ಯಮಾಹುರ್ವೈ ಯುಗೇ ಯುಗೇ ॥ ೩೧ ॥
ತತ್ಯಾಜ ಸ ಕಥಂ ದೇವಃ ಪ್ರಭಾಸೇ ಸ್ವಂ ಕಲೇವರಂ ।
ನಾಭ್ಯರಣ್ಯಾಂ ಸಮುದ್ಭೂತಂ ಯಸ್ಯ ಪೈತಾಮಹಂ ಗೃಹಂ ॥ ೩೨ ॥

---

೨೬. ಪ್ರಪಂಚದ ಸಮಸ್ತ ಜನರನ್ನೂ ಕಾಪಾಡುವ ಪೂಜ್ಯನಾದ ಆ ವಿಷ್ಣುವು ಹೇಗೆ ಪ್ರಭಾಸಕ್ಷೇತವನ್ನಾಶ್ರಯಿಸಿದನು ?

೨೭–೨೯. ಅವಸಾನಕಾಲದಲ್ಲಿ ನೀರನ್ನು ಕುಡಿದು ಜಲಮಯವಾದ ಶರೀರವನ್ನು ನಿರ್ಮಿಸಿ ತನ್ನ ದೃಷ್ಟಿಯಿಂದ ಪ್ರಪಂಚವನ್ನು ಒಂದು ಸಮುದ್ರವನ್ನಾಗಿ ಮಾಡಿದ ಆ ವಿಷ್ಣುವು ಪ್ರಭಾಸಕ್ಷೇತ್ರದಲ್ಲಿ ಹೇಗೆ ಮರಣ ಹೊಂದಿದನು ? ಪುರಾಣಪ್ರತಿಪಾದ್ಯನೂ ವರಾಹರೂಪವನ್ನು ಧರಿಸಿದವನು ಪರ್ವತ ಸಹಿತವಾದ ಸಕಲ ಭೂಮಿಯನ್ನು ಉದ್ಧಾರ ಮಾಡಿದವನೂ ಆದ ಆ ವಿಷ್ಣುವು ಪಾಪವನ್ನು ಪರಿಹರಿಸುವ ಪ್ರಭಾಸದಲ್ಲಿ ಶರೀರವನ್ನು ಹೇಗೆ ತ್ಯಜಿಸಿದನು ?

೩೦. ನರಸಿಂಹ ರೂಪವನ್ನು ತಾಳಿ ಹಿರಣ್ಯಕಶಿಪುವನ್ನು ಕೊಂದ ಆ ವಿಷ್ಣುವು ಹೇಗೆ ಪ್ರಭಾಸಕ್ಷೇತ್ರವನ್ನು ಆಶ್ರಯಿಸಿದನು ?

೩೧–೩೨. ಯಾವನನ್ನು ವೇದಗಳು ಪ್ರತಿಯುಗದಲ್ಲಿಯೂ ಸಾವಿರ ಪಾದ, ಕಣ್ಣು, ತಲೆಗಳುಳ್ಳವನನ್ನಾಗಿಯೂ ಅತಿಶಯ ಕಾಂತಿಯುಳ್ಳವನಾಗಿಯೂ ಹೇಳುವವೋ; ಆ ವಿಷ್ಣುವು ಪ್ರಭಾಸದಲ್ಲಿ ಹೇಗೆ ತನ್ನ ಶರೀರವನ್ನು ತ್ಯಜಿಸಿದನು ? ಆ ವಿಷ್ಣುವಿನ ನಾಭಿಯೆಂಬ ಅರಣಿಯಿಂದ ಹುಟ್ಟಿದ ಬ್ರಹ್ಮನ ಮನೆಯಾದ ಕಮಲವು ಲೋಕವೆಲ್ಲ

ಏಕಾರ್ಣವಗತೇ ಲೋಕೇ ತತ್ಪಂಕಜಮುಪಂಕಜಂ ।
ಯೇನೋದ್ಧೃತಂ ಕ್ಷಣೇನೈವ ಪ್ರಭಾಸಸ್ಥಃ ಸ ಕಿಂ ಹರಿಃ ॥ ೩೩ ॥
ಉತ್ತರಾಂಶೇ ಸಮುದ್ರಸ್ಯ ಕ್ಷೀರೋದಸ್ಯಾಽಮೃತೋದಧೇಃ ।
ಯಃ ಶೇತೇ ಶಾಶ್ವತಂ ಯೋಗಮಾಸ್ಥಾಯ ಪರವೀರಹಾ ।
ಸ ಕಥಂ ತ್ಯಕ್ತವಾನ್ ದೇಹಂ ಪ್ರಭಾಸೇ ಪರಮೇಶ್ವರಃ ॥ ೩೪ ॥
ಹವ್ಯಾದಾನ್ಯಃ ಸುರಾಂಶ್ಚಕ್ರೇ ಕವ್ಯಾದಾಂಶ್ಚ ಪಿತೄನಪಿ ।
ಸ ಕಥಂ ದೇವದೇವೇಶಃ ಪ್ರಭಾಸಂ ಕ್ಷೇತ್ರಮಾಶ್ರಿತಃ ॥ ೩೫ ॥
ಯುಗಾನುರೂಪಂ ಯಃ ಕೃತ್ವಾ ರೂಪಂ ಲೋಕಹಿತಾಯ ವೈ ।
ಧರ್ಮಮುದ್ಧರತೇ ದೇವಃ ಸ ಕಥಂ ಕ್ಷೇತ್ರಮಾಶ್ರಿತಃ ॥ ೩೬ ॥
ತ್ರಯೋ ವರ್ಣಾಸ್ತ್ರಯೋ ಲೋಕಾಸ್ತ್ರೈವಿದ್ಯಂ ಪಾಠಕಾಸ್ತ್ರಯಃ ।
ತ್ರೈಕಾಲ್ಯಂ ತ್ರೀಣಿ ಕರ್ಮಾಣಿ ತ್ರಯೋ ದೇವಾಸ್ತ್ರಯೋ ಗುಣಾಃ ।
ಸೃಷ್ಟಂ ಯೇನ ಪುರಾ ದೇವಃ ಸ ಕಥಂ ಕ್ಷೇತ್ರಮಾಶ್ರಿತಃ ॥ ೩೭ ॥
ಯಾ ಗತಿರ್ಧರ್ಮಯುಕ್ತಾನಾಮಗತಿಃ ಪಾಪಕರ್ಮಣಾಂ ।
ಚಾತುರ್ವರ್ಣ್ಯಸ್ಯ ಪ್ರಭವಶ್ಚಾತುರ್ವರ್ಣ್ಯಸ್ಯ ರಕ್ಷಿತಾ ॥ ೩೮ ॥

ಒಂದೇ ಸಮುದ್ರವಾಗಲು ಪ್ರಪಂಚವೆಲ್ಲ ನಾಶಹೊಂದಿತು. ಆಗ ಅದನ್ನು ಒಂದು ಕ್ಷಣದಲ್ಲಿ ಉದ್ಧರಿಸಿದ ವಿಷ್ಣುವು ಹೇಗೆ ಪ್ರಭಾಸವಾಸಿಯಾದನು ?

೩೪. ಸಮುದ್ರದ ಉತ್ತರ ಭಾಗದಲ್ಲಿರುವ ಕ್ಷೀರಸಮುದ್ರದಲ್ಲಿ ಸ್ಥಿರವಾದ ಯೋಗವನ್ನು ಆಶ್ರಯಿಸಿ ಮಲಗಿರುವ ಆ ವಿಷ್ಣುವು ಪ್ರಭಾಸದಲ್ಲಿ ಹೇಗೆ ದೇಹವನ್ನು ತ್ಯಜಿಸಿದನು ?

೩೫. ದೇವತೆಗಳನ್ನು ಹವ್ಯವನ್ನು ಭಕ್ಷಿಸುವವರನ್ನಾಗಿಯೂ, ಪಿತೃಗಳನ್ನು ಕವ್ಯವನ್ನು ಭಕ್ಷಿಸುವವರನ್ನಾಗಿಯೂ ಮಾಡಿದ ಆ ವಿಷ್ಣುವು ಪ್ರಭಾಸಕ್ಷೇತ್ರವನ್ನು ಹೇಗೆ ಆಶ್ರಯಿಸಿದನು ?

೩೬. ಲೋಕಹಿತಕ್ಕಾಗಿಯುಗಾನು ಗುಣವಾದ ರೂಪವನ್ನು ಧರಿಸಿ ಧರ್ಮವನ್ನು ಉದ್ಧರಿಸುವ ಆ ವಿಷ್ಣುವು ಪ್ರಭಾಸ ಕ್ಷೇತ್ರವನ್ನು ಹೇಗೆ ಆಶ್ರಯಿಸಿದನು.

೩೭. ಮೂರು ವರ್ಣಗಳು, ಲೋಕಗಳ ವಿದ್ಯೆಗಳು, ಪಾಠಕರು, ಕಾಲಗಳು, ಕರ್ಮಗಳು, ದೇವತೆಗಳು, ಗುಣಗಳು ಇವುಗಳನ್ನು ಸೃಜಿಸಿದ ವಿಷ್ಣುವು ಪ್ರಭಾಸು ಕ್ಷೇತ್ರವನ್ನು ಹೇಗೆ ಆಶ್ರಯಿಸಿದನು.

೩೮–೩೯. ಧರ್ಮಿಷ್ಠರಿಗೆ ಉತ್ತಮಗತಿಯನ್ನು ಕೊಡುವವನೂ, ಪಾಪಿಗಳಿಗೆ ಅಧೋಗತಿಯನ್ನು ಕೊಡುವವನೂ, ನಾಲ್ಕುಜಾತಿಗಳನ್ನು ಸೃಜಿಸಿ ಅವುಗಳನ್ನು

ಚಾತುರ್ವಿದ್ಯಸ್ಯ ಯೋ ವೇತ್ತಾ ಚಾತುರಾಶ್ರಮ್ಯಸಂಸ್ಥಿತಃ ।
ಕಸ್ಮಾತ್ಸ ದ್ವಾರಕಾಂ ಹಿತ್ವಾ ಪ್ರಭಾಸೇ ಪಂಚತಾಂ ಗತಃ ॥ ೩೯ ॥
ದಿಗಂತರಂ ನಭೋ ಭೂಮಿರಾಪೋ ವಾಯುರ್ವಿಭಾವಸುಃ ।
ಚಂದ್ರಸೂರ್ಯದ್ವಯಂ ಜ್ಯೋತಿರ್ಯುಗೇಶಃ ಕ್ಷಣದಾತನುಃ ॥ ೪೦ ॥
ಯಃ ಪರಂ ಶ್ರೂಯತೇ ಜ್ಯೋತಿರ್ಯಃ ಪರಂ ಶ್ರೂಯತೇ ತಪಃ ।
ಯಃ ಪರಂ ಪರತಃ ಪ್ರೋಕ್ತಃ ಪರಂ ಯಃ ಪರಮಾತ್ಮವಾನ್ ॥ ೪೧ ॥
ಆದಿತ್ಯಾದಿಶ್ಚ ಯೋ ದಿವ್ಯೋ ಯಶ್ಚ ದೈತ್ಯಾಂತಕೋ ವಿಭುಃ ।
ಸ ಕಥಂ ದೇವಕೀಸೂನುಃ ಪ್ರಭಾಸೇ ಸಿದ್ಧಿಮೀಯಿವಾನ್ ॥ ೪೨ ॥
ಯುಗಾಂತೇ ಚಾಂತಕೋ ಯಶ್ಚ ಯಶ್ಚ ಲೋಕಾಂತಕಾಂತಕಃ ।
ಸೇತುರ್ಯೋ ಲೋಕಸತ್ತ್ವಾನಾಂ ಮೇಧ್ಯೋ ಯೋ ಮೇಧ್ಯಕರ್ಮಣಾಂ ॥
ವೇತ್ತಾ ಯೋ ವೇದವಿದುಷಾಂ ಪ್ರಭುರ್ಯಃ ಪ್ರಭವಾತ್ಮನಾಂ ।
ಸೋಮಭೂತಸ್ತು ಭೂತಾನಾಮಗ್ನಿಭೂತೋಽಗ್ನಿವರ್ತ್ಮನಾಂ ॥ ೪೪ ॥
ಮನುಷ್ಯಾಣಾಂ ಮನೋಭೂತಸ್ತಪೋಭೂತಸ್ತಪಸ್ವಿನಾಂ ।
ವಿನಯೋ ನಯಭೂತಾನಾಂ ತೇಜಸ್ತೇಜಸ್ವಿನಾಮಪಿ ॥ ೪೫ ॥

ರಕ್ಷಿಸುವವನೂ, ಚತುರ್ವಿದ್ಯೆಯನ್ನರಿತವನೂ, ನಾಲ್ಕು ಆಶ್ರಮಗಳಲ್ಲಿದ್ದವನೂ, ಆದ ಆ ವಿಷ್ಣುವು ದ್ವಾರಕೆಯನ್ನು ಬಿಟ್ಟು ಪ್ರಭಾಸದಲ್ಲಿ ಮರಣ ಹೊಂದಿದ್ದು ಹೇಗೆ?

೪೦–೪೨. ದಿಕ್ಕು ಆಕಾಶ, ಭೂಮಿ, ನೀರು, ವಾಯು, ಅಗ್ನಿ, ಚಂದ್ರ ಸೂರ್ಯರೂಪನೂ, ಯುಗಾಧಿಪತಿಯೂ ರಾತ್ರಿರೂಪದೇಹವುಳ್ಳವನೂ, ಉತ್ತಮ ತೇಜಸ್ಸೂ, ಉತ್ತಮ ತಪಸ್ಸೂ, ಸರ್ವೋತ್ತಮನೂ, ಪರಮಾತ್ಮರೂಪನೂ, ದೈತ್ಯ ನಾಶಕನೂ ಆದ ದೇವಕೀತನಯನಾದ ಕೃಷ್ಣನು ಪ್ರಭಾಸಕ್ಷೇತ್ರದಲ್ಲಿ ಹೇಗೆ ಸಿದ್ಧಿ ಯನ್ನೈದಿದನು ?

೪೩–೪೬. ಯುಗಾವಸಾನದಲ್ಲಿ ಯಮರೂಪನೂ, ಯಮನಿಗೂ ಅಂತಕನೂ, ಲೋಕದ ನೆಲೆಗೆ ಕಾರಣನೂ, ಪವಿತ್ರಕರ್ಮಗಳಲ್ಲಿ ಪವಿತ್ರನೂ, ವೇದವನ್ನರಿತವರನ್ನು ಬಲ್ಲವನೂ, ಸೃಷ್ಟಿಸುವವರಿಗೆ ಸ್ವಾಮಿಯೂ, ಪ್ರಾಣಿಗಳಿಗೆ ಚಂದ್ರನೂ, ಅಗ್ನಿಮಾರ್ಗ ದಲ್ಲಿರುವವರಿಗೆ ಅಗ್ನಿಯೂ, ಮನುಷ್ಯರ ಮನಸ್ಸಿನ ರೂಪನೂ, ಮುನಿಗಳ ತಪೋ ರೂಪನೂ, ವಿಷಯವುಳ್ಳವರಿಗೆ ವಿನಯನೂ, ತೇಜಸ್ವಿಗಳಿಗೆ ತೇಜೋರೂಪನೂ,

ವಿಗ್ರಹೋ ವಿಗ್ರಹಾಣಾಂ ಯೋ ಗತಿರ್ಗತಿಮತಾಮಪಿ ।
ಸ ಕಥಂ ದ್ವಾರಕಾಂ ಹಿತ್ವಾ ಪ್ರಭಾಸಕ್ಷೇತ್ರಮಾಶ್ರಿತಃ ॥ ೪೬ ॥
ಆಕಾಶಪ್ರಭವೋ ವಾಯುರ್ವಾಯುಪ್ರಾಣೋ ಹುತಾಶನಃ ।
ದೇವಾ ಹುತಾಶನಪ್ರಾಣಾಃ ಪ್ರಾಣೋಽಗ್ನೇರ್ಮಧುಸೂದನಃ ।
ಸ ಕಥಂ ಪದ್ಮಜಪ್ರಾಣಃ ಪ್ರಭಾಸಂ ಕ್ಷೇತ್ರಮಾಶ್ರಿತಃ ॥ ೪೭ ॥

ಸೂತ ಉವಾಚ :—

ಇತಿ ಪ್ರೋಕ್ತಸ್ತದಾ ದೇವ್ಯಾ ಶಂಕರೋ ಲೋಕಶಂಕರಃ ।
ಉವಾಚ ಪ್ರಹಸನ್ವಾಕ್ಯಂ ಪಾರ್ವತೀಂ ದ್ವಿಜಸತ್ತಮಾಃ ॥ ೪೮ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಪ್ರಭಾಸಕ್ಷೇತ್ರವಿಸ್ತರಂ ।
ರಹಸ್ಯಂ ಸರ್ವಪಾಪಘ್ನಂ ದೇವಾನಾಮಪಿ ದುರ್ಲಭಂ ॥ ೪೯ ॥
ದೇವಿ ಕ್ಷೇತ್ರಾಣ್ಯನೇಕಾನಿ ಪೃಥಿವ್ಯಾಂ ಸಂತಿ ಭಾಮಿನಿ ।
ತೀರ್ಥಾನಿ ಕೋಟಿಸಂಖ್ಯಾನಿ ಪ್ರಭಾವಸ್ತೇಷು ಸಂಖ್ಯಯಾ ॥ ೫೦ ॥
ಅಸಂಖ್ಯೇಯಪ್ರಭಾವಂ ಹಿ ಪ್ರಭಾಸಂಪರಿಕೀರ್ತಿತಂ ।
ಬ್ರಹ್ಮತತ್ವಂ ವಿಷ್ಣುತತ್ವಂ ರೌದ್ರತತ್ವಂ ತಥೈವ ಚ ॥ ೫೧ ॥

ದೇಹಗಳಿಗೆ ದೇಹನೂ, ಉತ್ತಮಗತಿಯನ್ನೈದಿದವರಿಗೂ ಪ್ರಾಪ್ಯನೂ ಆದ ವಿಷ್ಣುವು ದ್ವಾರಕೆಯನ್ನು ತ್ಯಜಿಸಿ ಹೇಗೆ ಪ್ರಭಾಸಕ್ಷೇತ್ರವನ್ನಾಶ್ರಯಿಸಿದನು ?

೪೭. ವಾಯುವು ಆಕಾಶದಿಂದ ಹುಟ್ಟಿರುವುದು. ಅಗ್ನಿಯು ವಾಯುವಿನ ಪ್ರಾಣವು. ದೇವತೆಗಳು ಅಗ್ನಿಯಪ್ರಾಣಗಳೂ. ಅಗ್ನಿಗೆ ಪ್ರಾಣಭೂತನೂ, ಬ್ರಹ್ಮನಿಗೆ ಪ್ರಾಣದಾತನೂ ಆದ ಆ ವಿಷ್ಣುವು ಪ್ರಭಾಸಕ್ಷೇತ್ರವನ್ನು ಹೇಗೆ ಆಶ್ರಯಿಸಿದನು.

೪೮. ಸೂತನು ಹೇಳುತ್ತಾನೆ—ದ್ವಿಜವರ್ಯರೆ! ಪಾರ್ವತಿಯು ಹೀಗೆ ಪ್ರಶ್ನಿಸಲು ಲೋಕಕ್ಕೆ ಮಂಗಳವನ್ನುಂಟುಮಾಡುವ ಆ ಶಂಕರನು ನಗುತ್ತ ಅವಳನ್ನು ಕುರಿತು ಇಂತೆಂದನು.

೪೯. ಈಶ್ವರನು ಹೇಳುತ್ತಾನೆ:—ದೇವಿ! ಸಕಲ ಪಾಪವನ್ನು ಪರಿಹರಿಸುವುದೂ, ದೇವತೆಗಳಿಗೆಲ್ಲ ಪ್ರಿಯವೂ, ರಹಸ್ಯವೂ ಆದ ಆ ಪ್ರಭಾಸಕ್ಷೇತ್ರದ ಮಾಹಾತ್ಮ್ಯವನ್ನು ವಿಸ್ತಾರವಾಗಿ ಹೇಳುವೆನು ಕೇಳು.

೫೦–೫೨. ದೇವಿ! ಭೂಮಿಯಲ್ಲಿ ಅನೇಕಕ್ಷೇತ್ರಗಳೂ, ಕೋಟಿ ತೀರ್ಥಗಳೂ ಇರುವುವು. ಅವುಗಳಲ್ಲಿ ಪ್ರಭಾಸಕ್ಷೇತ್ರದ ಮಾಹಾತ್ಮ್ಯವು ಅಸಂಖ್ಯಾಕವಾದುದು.

ತತ್ರ ಭೂಯಃ ಸಮಾಯೋಗೋ ದುರ್ಲಭೋಽನ್ಯೇಷು ಪಾರ್ವತಿ ।
ಪ್ರಭಾಸೇ ದೇವದೇವೇಶಿ ತತ್ವಾನಾಂ ತ್ರಿತಯಂ ಸ್ಥಿತಂ ॥ ೫೨ ॥
ಚತುರ್ವಿಂಶತಿತತ್ವೈಶ್ಚ ಬ್ರಹ್ಮಾ ಲೋಕಪಿತಾಮಹಃ ।
ಬಾಲರೂಪೀ ಚ ನಾಮ್ನಾಂ ಚ ತತ್ರ ಸ್ಥಾನೇ ಸ್ಥಿತಃ ಸ್ವಯಂ ॥ ೫೩ ॥
ಪಂಚವಿಂಶತಿತತ್ವಾನಾಮಧಿಪೋ ದೇವತಾಗ್ರಣೀಃ ।
ತಸ್ಮಿನ್ ಸ್ಥಾನೇ ಸ್ಥಿತಃ ಸಾಕ್ಷಾದ್ದೈತ್ಯಾನಾಮಂತಕಃ ಶುಭೇ ॥ ೫೪ ॥
ಅಹಂ ದೇವಿ ತ್ವಯಾ ಸಾರ್ಧಂ ಷಟ್ತ್ರಿಂಶತ್ತತ್ವಸಂಯುತಃ ।
ನಿವಸಾಮಿ ಮಹಾಭಾಗೇ ಪ್ರಭಾಸೇ ಪಾಪನಾಶನೇ ॥ ೫೫ ॥
ಏವಂ ತತ್ವಮಯಂ ಕ್ಷೇತ್ರಂ ಸರ್ವತೀರ್ಥಮಯಂ ಶುಭಂ ।
ಪ್ರಭಾಸಮೇವ ಜಾನೀಹಿ ಮಾಕಾರ್ಷೀಃ ಸಂಶಯಂ ಕ್ವಚಿತ್ ॥ ೫೬ ॥
ಅಪಿ ಕೀಟಪತಂಗಾ ಯೇ ಮ್ರಿಯಂತೇ ತತ್ರ ಯೇ ನರಾಃ ।
ತೇಽಪಿ ಯಾಂತಿ ಪರಂ ಸ್ಥಾನಂ ನಾತ್ರ ಕಾರ್ಯಾ ವಿಚಾರಣಾ ॥ ೫೭ ॥
ಸ್ತ್ರಿಯೋ ಮ್ಲೇಚ್ಛಾಶ್ಚ ಶೂದ್ರಾಶ್ಚ ಪಶವಃ ಪಕ್ಷಿಣೋ ಮೃಗಾಃ ।
ಪ್ರಭಾಸೇ ತು ಮೃತಾ ದೇವಿ ಶಿವಲೋಕಂ ವ್ರಜಂತಿ ತೇ ॥ ೫೮ ॥

ಇಲ್ಲಿ ಇತರ ಕ್ಷೇತ್ರಗಳಲ್ಲಿ ದುರ್ಲಭವಾದ ಬ್ರಹ್ಮ, ವಿಷ್ಣು, ರುದ್ರ ತತ್ವಗಳು ಒಟ್ಟಿಗೆ ಸೇರಿರುವುವು.

೫೩. ಪ್ರಪಂಚ ಪಿತಾಮಹನಾದ ಬ್ರಹ್ಮನು ಬಾಲರೂಪದಿಂದ ಇಪ್ಪತ್ತನಾಲ್ಕು ತತ್ವಗಳೊಡನೆ ಅಲ್ಲಿರುವನು.

೫೪. ಇಪ್ಪತ್ತುನಾಲ್ಕು ತತ್ವಗಳಿಗೆ ಒಡೆಯನೂ ದೈತ್ಯನಾಶಕನೂ ಆದ ವಿಷ್ಣುವು ಅಲ್ಲಿರುವನು.

೫೫. ದೇವಿ! ಪಾಪನಾಶಕವಾದ ಆ ಪ್ರಭಾಸದಲ್ಲಿ ನಾನು ನಿನ್ನೊಡನೆಯೂ, ಮೂವತ್ತಾರು ತತ್ವಗಳೊಡನೆಯೂ ನೆಲೆಸಿರುವೆನು.

೫೬. ಹೀಗೆ ಆ ಪ್ರಭಾಸಕ್ಷೇತ್ರವು ತತ್ವರೂಪವೂ, ಸಕಲ ತೀರ್ಥರೂಪವೂ ಆಗಿರುವುದೆಂದು ತಿಳಿ. ಸಂಶಯಪಡಬೇಡ.

೫೭. ಅಲ್ಲಿ ಕೀಟ ಪತಂಗಗಳೂ, ಮನುಷ್ಯರೂ ಮೃತರಾದರೆ ಅವರು ಉತ್ತಮ ಸ್ಥಾನವನ್ನು ಪಡೆಯುವರು. ಈ ವಿಷಯದಲ್ಲಿ ವಿಚಾರವಿಲ್ಲ.

೫೮. ಹೆಂಗಸರು, ಮ್ಲೇಚ್ಛರು, ಶೂದ್ರರು, ಪಶುಪಕ್ಷಿಗಳು ಇವರು ಆ ಪ್ರಭಾಸದಲ್ಲಿ ಮೃತರಾದರೆ ಶಿವಲೋಕಕ್ಕೆ ತೆರಳುವರು.

ಕಾಮಕ್ರೋಧೇನ ಯೇ ಬದ್ಧಾ ಲೋಭೇನ ಚ ವಶೀಕೃತಾಃ ।
ಅಜ್ಞಾನತಿಮಿರಾಕ್ರಾಂತಾ ಮಾಯಾತತ್ವೇ ಚ ಸಂಸ್ಥಿತಾಃ ॥ ೫೯ ॥
ಕಾಲಪಾಶೇನ ಯೇ ಬದ್ಧಾಸ್ತೃಷ್ಣಾಜಾಲೇನ ಮೋಹಿತಾಃ ।
ಅಧರ್ಮನಿರತಾ ಯೇ ಚ ಯೇ ಚ ತಿಷ್ಠಂತಿ ಪಾಪಿನಃ ॥ ೬೦ ॥
ಬ್ರಹ್ಮಘ್ನಾಶ್ಚ ಕೃತಘ್ನಾಶ್ಚ ಯೇ ಚಾಽನ್ಯೇ ಗುರುತಲ್ಪಗಾಃ ।
ಮಹಾಪಾತಕಿನಶ್ಚಾಽಪಿ ತೇ ಯಾಂತಿ ಪರಮಾಂ ಗತಿಂ ॥ ೬೧ ॥
ಮಾತೃಹಂತಾ ನರೋ ಯಸ್ತು ಪಿತೃಹಂತಾ ತಥೈವ ಚ ।
ತೇ ಸರ್ವೇ ಮುಕ್ತಿಮಾಯಾಂತಿ ಕಿಂ ಪುನಶ್ಶುಭಕಾರಿಣಃ ॥ ೬೨ ॥
ಇತಿ ಜ್ಞಾತ್ವಾ ಮಹಾದೇವಿ ದೈತ್ಯಾನಾಮಂತಕೋ ಹರಿಃ ।
ಪ್ರಭಾಸಕ್ಷೇತ್ರಮಾಸಾದ್ಯ ತ್ಯಕ್ತವಾನ್ ಸ್ವಂ ಕಲೇವರಂ ॥ ೬೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ
ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ
ಪ್ರಭಾಸಕ್ಷೇತ್ರಮಾಹಾತ್ಮ್ಯೇ ಶ್ರೀಹರಿಸ್ಥಿತಿ
ಪ್ರಶ್ನವರ್ಣನಂನಾಮ
ನವಮೋಽಧ್ಯಾಯಃ

೫೯–೬೧. ಕಾಮ ಕ್ರೋಧವುಳ್ಳವರೂ, ಲೋಭಿಗಳೂ, ಅಜ್ಞಾನಿಗಳೂ, ಮಾಯೆಯಿಂದ ಮೂಢರಾದವರೂ, ಯಮಪಾಶದಿಂದ ಕಟ್ಟಲ್ಪಟ್ಟವರೂ, ಆಶೆಯಿಂದ ಮೋಹಗೊಂಡವರೂ, ಅಧರ್ಮದಲ್ಲಿ ಆಸಕ್ತರೂ, ಪಾಪಿಷ್ಠರೂ ಬ್ರಹ್ಮಹತ್ಯೆ ಮಾಡಿದವರೂ, ಕೃತಘ್ನರೂ, ಗುರುತಲ್ಪಗಾಮಿಗಳೂ ಅಲ್ಲಿ ಮೃತರಾದರೂ ಉತ್ತಮಗತಿಯನ್ನು ಪಡೆಯುವರು.

೬೨. ತಾಯಿತಂದೆಗಳನ್ನು ಕೊಂದವರೂ ಆ ಕ್ಷೇತ್ರದಲ್ಲಿ ಮೋಕ್ಷವನ್ನು ಪಡೆಯುವರು. ಪುಣ್ಯವನ್ನು ಮಾಡಿದವರ ವಿಷಯವನ್ನು ಹೇಳಬೇಕಾಗಿರುವುದಿಲ್ಲ.

೬೩. ಮಹಾದೇವಿ! ದೈತ್ಯನಾಶಕನಾದ ವಿಷ್ಣುವು ಇದನ್ನರಿತು ಪ್ರಭಾಸಕ್ಷೇತ್ರವನ್ನು ಸೇರಿ ತನ್ನ ಶರೀರವನ್ನು ತ್ಯಜಿಸಿದನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಶ್ರೀಹರಿಸ್ಥಿತಿಪ್ರಶ್ನವರ್ಣನವೆಂಬ
ಒಂಬತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ದಶಮೋಽಧ್ಯಾಯಃ

ಸರ್ವಕ್ಷೇತ್ರೋತ್ಪತ್ತಿವರ್ಣನಂ

ಈಶ್ವರ ಉವಾಚ:—

ಅನ್ಯಚ್ಚ ಕಥಯಿಷ್ಯಾಮಿ ರಹಸ್ಯಂ ತವ ಭಾಮಿನಿ ।
ಯನ್ನ ಕಸ್ಯ ಚಿದಾಖ್ಯಾತಂ ತತ್ತೇ ವಚ್ಮಿ ವರಾನನೇ ॥ ೧ ॥
ಪೃಥ್ವೀಭಾಗೇ ಸ್ಥಿತೋ ಬ್ರಹ್ಮಾ ಅಪಾಂ ಭಾಗೇ ಜನಾರ್ದನಃ ।
ತೇಜೋ ಭಾಗಸ್ಥಿತೋ ರುದ್ರೋ ವಾಯುಭಾಗೇ ತಥೇಶ್ವರಃ ॥ ೨ ॥
ಆಕಾಶಭಾಗಸಂಸ್ಥಾನೇ ಸ್ಥಿತಃ ಸಾಕ್ಷಾತ್ಸದಾಶಿವಃ ॥ ೩ ॥
ಯಸ್ಯ ಯಸ್ಯೈವ ಯೋ ಭಾಗಸ್ತಸ್ಮಿಂಸ್ತೀರ್ಥಾನಿ ಯಾನಿ ವೈ ।
ತಸ್ಯ ತಸ್ಯ ನ ಸಂದೇಹಃ ಸ ಸ ಏವೇಶ್ವರಃ ಸ್ಮೃತಃ ॥ ೪ ॥
ಭಾಗಲಂಡಂ ದುಗಂಡಂ ಚ ಮಾಕೋಟಂ ಮಂಡಲೇಶ್ವರಂ ।
ಕಾಲಿಂಜರಂ ವಸಂ ಚೈವ ಶಂಕುಕರ್ಣಂ ಸ್ಥಲೇಶ್ವರಂ ॥ ೫ ॥
ಶೂಲೇಶ್ವರಂ ಚ ವಿಖ್ಯಾತಂ ಪೃಥ್ವೀತತ್ತ್ವೇ ಚ ಸಂಸ್ಥಿತಂ ।
ಹರಿಶ್ಚಂದ್ರಂ ಚ ಶ್ರೀಶೈಲಂ ಜಲ್ಪೇಶೋಽನ್ನಾಂತಿಕೇಶ್ವರಂ ॥ ೬ ॥

ಕನ್ನಡದ ಅನುವಾದ

ಸರ್ವಕ್ಷೇತ್ರೋತ್ಪತ್ತಿವರ್ಣನ

೧. ಈಶ್ವರನು ಹೇಳುತ್ತಾನೆ:—ದೇವಿ ! ಯಾರಿಗೂ ಹೇಳದಿರುವ ಮತ್ತೊಂದು ರಹಸ್ಯವನ್ನು ನಿನಗೆ ಹೇಳುವೆನು.

೨-೩. ಪೃಥ್ವೀಭಾಗದಲ್ಲಿ ಬ್ರಹ್ಮನೂ, ಜಲಭಾಗದಲ್ಲಿ ಜನಾರ್ದನನೂ, ತೇಜಸ್ಸಿನ ಭಾಗದಲ್ಲಿ ರುದ್ರನೂ, ವಾಯುಭಾಗದಲ್ಲಿ ಈಶ್ವರನೂ ಆಕಾಶ ಭಾಗದಲ್ಲಿ ಸದಾಶಿವನೂ ಇರುವನು.

೪. ಯಾವನ ಭಾಗದಲ್ಲಿ ಯಾವ ಅರ್ಥವಿರುವುದೊ, ಆ ತೀರ್ಥಗಳಿಗೆ ಆ ಭಾಗದವನು ಅಧಿಪತಿಯು.

೫-೭. ಭಾಗದಂಡ, ದುಗಂಡ, ಮಾಕೋಟ, ಮಂಡಲೇಶ್ವರ, ಕಾಲಿಂಜರ, ವಸ, ಶಂಕುಕರ್ಣ, ಸ್ಥಲೇಶ್ವರ, ಇವುಗಳೆಲ್ಲ ಪೃಥ್ವೀತತ್ತ್ವದಲ್ಲಿರುವುವು. ಹರಿಶ್ಚಂದ್ರ,

ಮಹಾಕಾಲಂ ಮಧ್ಯಮಂ ಚ ಕೇದಾರಂ ಭೈರವಂ ತಥಾ ।
ಪವಿತ್ರಾಷ್ಟಕಮೇತದ್ಧಿ ಜಲಸಂಸ್ಥಂ ವರಾನನೇ ॥ ೭ ॥
ಅಮರೇಶಂ ಪ್ರಭಾಸಂ ಚ ನೈಮಿಷಂ ಪುಷ್ಕರಂ ತಥಾ ।
ಆಷಾಢಿಂ ಚೈವ ದಂಡಿಂ ಚ ಭಾರಭೂತಿಂ ಚ ಲಾಂಗಲಂ ॥ ೮ ॥
ಆದಿಗುಹ್ಯಾಷ್ಟಕಂ ಹ್ಯೇತತ್ತೇಜಸ್ತತ್ತ್ವೇ ಪ್ರತಿಷ್ಠಿತಂ ।
ಗಯಾ ಚೈವ ಕುರುಕ್ಷೇತ್ರಂ ತೀರ್ಥಂ ಕನಖಲಂ ತಥಾ ॥ ೯ ॥
ವಿಮಲಂ ಚಾಽಟ್ಟಹಾಸಂ ಚ ಮಾಹೇಂದ್ರಂ ಭೀಮಸಂಜ್ಞಕಂ ।
ಗುಹ್ಯಾದ್ಗುಹ್ಯತರಂ ಹ್ಯೇತತ್ಪ್ರೋಕ್ತಂ ವಾಯ್ವಷ್ಟಕಂ ತವ ॥ ೧೦ ॥
ವಸ್ತ್ರಾಪಥಂ ರುದ್ರಕೋಟಿಜ್ಯೇಷ್ಠೇಶ್ವರಂ ಮಹಾಲಯಂ ।
ಗೋಕರ್ಣಂ ರುದ್ರಕರ್ಣಂ ಚ ವರ್ಣಾಖ್ಯಂ ಸ್ಥಾಪಸಂಜ್ಞಕಂ ॥ ೧೧ ॥
ಪವಿತ್ರಾಷ್ಟಕಮೇತದ್ಧಿ ಆಕಾಶಸ್ಥಂ ವರಾನನೇ ।
ಏತಾನಿ ತತ್ತ್ವತೀರ್ಥಾನಿ ಸರ್ವಾಣಿ ಕಥಿತಾನಿ ವೈ ॥ ೧೨ ॥
ಯೋ ಯಸ್ಮಿನ್ ದೇವತಾತತ್ತ್ವೇ ಸಾ. ತನ್ಮಾಹಾತ್ಮ್ಯಸೂಚಿಕಾ ।
ಔದಕಂ ಚ ಮಹಾತತ್ತ್ವಂ ವಿಷ್ಣೋಶ್ಚಾಽತಿಪ್ರಿಯಂ ಪ್ರಿಯೇ ॥ ೧೩ ॥

ಶ್ರೀಶೈಲ, ಜಲ್ಪೇಶ, ಅನ್ನಾಂತಿಕೇಶ್ವರ, ಮಹಾಕಾಲ. ಮಧ್ಯಮ, ಕೇದಾರ, ಭೈರವ, ಎಂಬ ಪವಿತ್ರಾಷ್ಟಕಗಳು ಜಲತತ್ವದಲ್ಲಿರುವುವು.

೮–೧೦. ಅಮರೇಶ, ಪ್ರಭಾಸ, ನೈಮಿಷ, ಪುಷ್ಕರ, ಆಷಾಢಿ, ದಂಡಿ, ಭಾರಭೂತಿ, ಲಾಂಗಲ ಎಂಬ ಎಂಟು ಆದಿಗುಹ್ಯಗಳು ತೇಜಸ್ತತ್ವದಲ್ಲಿರುವುವು. ಗಯೆ, ಕುರುಕ್ಷೇತ್ರ, ತೀರ್ಥ, ಕನಖಲ, ವಿಮಲ, ಅಟ್ಟಹಾಸ. ಮಾಹೇಂದ್ರ, ಭೀಮ, ಎಂಬ ಎಂಟು ಅತಿ ಗುಹ್ಯವಾದ ವಾಯ್ವಷ್ಟಕಗಳು.

೧೧–೧೨. ವಸ್ತ್ರಾಪಥ, ರುದ್ರಕೋಟಿ, ಜ್ಯೇಷ್ಠೇಶ್ವರ, ಮಹಾಲಯ, ಗೋಕರ್ಣ, ರುದ್ರಕರ್ಣ, ವರ್ಣ, ಸ್ಥಾಪ ಎಂಬ ಪವಿತ್ರಾಷ್ಟಕಗಳು ಆಕಾಶದಲ್ಲಿರುವುವು. ದೇವಿ ! ಹೀಗೆ ಸಕಲ ತತ್ವತೀರ್ಥಗಳನ್ನು ನಿನಗೆ ಹೇಳಿರುವೆನು.

೧೩. ಯಾವ ತತ್ವಕ್ಕೆ ಯಾವನು ದೇವತೆಯೊ, ಅವನು ಆ ತತ್ವದ ಮಾಹಾತ್ಮ್ಯವನ್ನು ಸೂಚಿಸುವವನು. ಉದಕ ಮಹಾ ತತ್ವವು ವಿಷ್ಣುವಿಗೆ ಅತಿಪ್ರಿಯವಾದುದು.

ಜಲಶಾಯೀ ಸ್ಮೃತಸ್ತೇನ ನಾರಾಯಣ ಇತಿ ಶ್ರುತಿಃ ।
ಆಪ್ಯತತ್ವೇ ತು ತೀರ್ಥಾನಿ ಯಾನಿ ಪ್ರೋಕ್ತಾನಿ ತೇ ಮಯಾ ॥ ೧೪ ॥
ತಾನಿ ಪ್ರಿಯಾಣಿ ದೇವೇಶಿ ಧ್ರುವಂ ನಾರಾಯಣಸ್ಯ ವೈ ।
ಔಪ್ಯಕಂ ಚೈವ ಯತ್ತತ್ವಂ ತಸ್ಮಿನ್ ಪ್ರಾಭಾಸಿಕಂ ಸ್ಮೃತಂ ॥ ೧೫ ॥
ತತ್ರ ದೇವೋ ಲಯಂ ಯಾತಿ ಹರಿರ್ಜನ್ಮನಿ ಜನ್ಮನಿ ।
ಸ ವಾಸುದೇವಃ ಸೂಕ್ಷ್ಮಾತ್ಮಾ ಪರಾತ್ಪರತರೇ ಸ್ಥಿತಃ ॥ ೧೬ ॥
ಸ ಶಿವಃ ಪರಮಂ ವ್ಯೋಮ ಅನಾದಿನಿಧನೋ ವಿಭುಃ ।
ತಸ್ಮಾತ್ಪರತರಂ ನಾಸ್ತಿ ಸರ್ವಶಾಸ್ತ್ರಾಗಮೇಷು ಚ ॥ ೧೭ ॥
ಸಿದ್ಧಾಂತಾಗಮವೇದಾಂತದರ್ಶನೇಷು ವಿಶೇಷತಃ ।
ತೇಷು ಚೈವ ನ ಭಿನ್ನಸ್ತು ಮಯಾ ಸಾರ್ಧಂ ಯಶಸ್ವಿನಿ ॥ ೧೮ ॥
ತಸ್ಮಿನ್ ಸ್ಥಾನೇ ಹರೇಃ ಸಾಕ್ಷಾತ್ಪ್ರತ್ಯಕ್ಷೇಣ ತು ಸಂಸ್ಥಿತಃ ।
ಲಿಂಗೈಶ್ಚತುರ್ಭಿಸ್ಸಂಯುಕ್ತೋ ಜ್ಞಾಯತೇ ನ ಚ ಕೇನಚಿತ್ ॥ ೧೯ ॥
ಮೋಕ್ಷಾರ್ಥಂ ನೈಷ್ಠಿಕೈರ್ವರ್ಣೈರ್ವ್ರತೈಶ್ಚೈವ ತು ಯತ್ಫಲಂ ।
ತತ್ಫಲಂ ಸಮವಾಪ್ನೋತಿ ಭಲ್ಲುಕಾತೀರ್ಥದರ್ಶನಾತ್ ॥ ೨೦ ॥
ಗೋಚರ್ಮಮಾತ್ರಂ ತತ್ಸ್ಥಾನಂ ಸಮಂತಾತ್ಪರಿಮಂಡಲಂ ।
ನ ಹಿ ಕಶ್ಚಿದ್ವಿಜಾನಾತಿ ವಿನಾಶಾಸ್ತ್ರೇಣ ಭಾಮಿನಿ ॥ ೨೧ ॥

೧೪–೧೬. ಆದರಿಂದ ನಾರಾಯಣನು ಜಲಶಾಯೀ ಎಂದು ಶ್ರುತಿಯು ಸಾರಿರುವುದು. ನಿನಗೆ ನಾನು ಹೇಳಿದ ಆಪ್ಯತತ್ವದ ತೀರ್ಥಗಳೆಲ್ಲ ನಾರಾಯಣನಿಗೆ ಪ್ರಿಯವಾದುವು. ಉದಕತತ್ವಗಳಲ್ಲಿ ಪ್ರಾಭಾಸಿಕವೂ ಸೇರಿರುವುದು. ಅದರಲ್ಲಿ ಉತ್ತಮ ವಸ್ತುಗಳಿಗಿಂತ ಉತ್ತಮನಾದ ಸೂಕ್ಷ್ಮರೂಪಿಯಾದ ಆ ವಾಸುದೇವನು ಪ್ರತಿ ಜನ್ಮದಲ್ಲಿಯೂ ಲಯವಾಗುವನು.

೧೭. ಆ ನಾರಾಯಣನೇ ಆದ್ಯಂತ ರಹಿತನೂ, ವ್ಯಾಪ್ತನೂ ಆದ ಶಿವನು. ಸಕಲ ಶಾಸ್ತ್ರಾಗಮಗಳಲ್ಲಿ ಅವನಿಗಿಂತ ಉತ್ತಮನಿಲ್ಲ.

೧೮. ದೇವಿ ! ಸಿದ್ಧಾಂತ, ವೇದ, ವೇದಾಂತ, ದರ್ಶನಗಳಲ್ಲಿ ಪ್ರತಿಪಾದ್ಯನಾದ ಆ ವಿಷ್ಣುವು ನನಗಿಂತ ಬೇರೆಯವನಲ್ಲ.

೧೯. ಆ ಪ್ರಭಾಸ ಕ್ಷೇತ್ರದಲ್ಲಿ ವಿಷ್ಣುವು ನಾಲ್ಕು ಲಿಂಗಗಳೊಡನೆ ಪ್ರತ್ಯಕ್ಷವಾಗಿರುವನು. ಆದರೆ ಯಾರೂ ಅವನನ್ನು ಅರಿತಿಲ್ಲ.

೨೦. ಭಲ್ಲುಕಾತೀರ್ಥದ ದರ್ಶನದಿಂದ ಮಾನವನೂ ಮೋಕ್ಷಕ್ಕೋಸ್ಕರ ವ್ರತವನ್ನಾಚರಿಸುವ ನೈಷ್ಠಿಕ ಬ್ರಹ್ಮಚಾರಿಗಳು ಪಡೆಯುವ ಫಲವನ್ನೂ ಹೊಂದುವನು.

೨೧. ಗೋಚರ್ಮಪ್ರಮಾಣದಿಂದ ಮಂಡಲಾಕಾರವಾದ ಆ ತೀರ್ಥವನ್ನು ಶಾಸ್ತ್ರ ಸಹಾಯವಿಲ್ಲದೆ ಯಾವನೂ ತಿಳಿಯುವುದಿಲ್ಲ.

ವಿಷುವಂ ವಹತೇ ತತ್ರ ನ್ಯೂಣಾಮದ್ಯಾಪಿ ಪಾರ್ವತಿ ।
ಪಂಚಲಿಂಗಾನಿ ತತ್ರೈವ ಪಂಚವಕ್ತ್ರಾಣಿ ಕಾನಿಚಿತ್ ॥ ೨೨ ॥
ಕುಕ್ಕುಟಾಂಡಕಮಾನಾನಿ ಮಹಾಸ್ಥೂಲಾನಿ ಕಾನಿಚಿತ್ ।
ಸರ್ಪೇಣ ವೇಷ್ಟಿತಾನ್ಯೇವ ಚಿಹ್ನಿತಾನಿ ತ್ರಿಶೂಲಿಭಿಃ ॥ ೨೩ ॥
ತೇಷಾಂ ದರ್ಶನಮಾತ್ರೇಣ ಕೋಟಿಲಿಂಗಾರ್ಚನಂ ಫಲಂ ।
ತಸ್ಮಾದಿದಂ ಮಹಾಕ್ಷೇತ್ರಂ ಬ್ರಹ್ಮಾದ್ಯೈಃ ಸೇವ್ಯತೇ ಸದಾ ॥ ೨೪ ॥
ಶ್ರುತಿಮದ್ಭಿಶ್ಚ ವಿಪ್ರೇಂದ್ರೈಃ ಸಂಸಿದ್ಧೈಶ್ಚ ತಪಸ್ವಿಭಿಃ ।
ಪ್ರತಿಮಾಸಂ ತಥಾಷ್ಟಮ್ಯಾಂ ಪ್ರತಿಮಾಸಂ ಚತುರ್ದಶೀಂ ॥ ೨೫ ॥
ಶಶಿಭಾನೂಪರಾಗೇ ವಾ ಕಾರ್ತಿಕ್ಯಾಂ ತು ವಿಶೇಷತಃ ।
ಪ್ರಭಾಸಸ್ಥಾನಿ ಲಿಂಗಾನಿ ಪ್ರಪೂಜ್ಯಂತೇ ವರಾನನೇ ॥ ೨೬ ॥
ಸನ್ನಿಹತ್ಯಾಂ ಕುರುಕ್ಷೇತ್ರೇ ಸರ್ವಸ್ತೀರ್ಥಾಯುತೈಃ ಸಹ ।
ಪುಷ್ಕರಂ ನೈಮಿಷಂ ಚೈವ ಪ್ರಯಾಗಂ ಸಂಪೃಥೂದಕಂ ॥ ೨೭ ॥
ಷಷ್ಟಿತೀರ್ಥಸಹಸ್ರಾಣಿ ಷಷ್ಟಿಕೋಟಿಶತಾನಿ ಚ ।
ಮಾಘ್ಯಾಂ ಮಾಘ್ಯಾಂ ಸಮೇಷಂತಿ ಸರಸ್ವತ್ಯಬ್ಧಿಸಂಗಮೇ ॥ ೨೮ ॥

೨೨–೨೩. ಪಾರ್ವತಿ ! ಆಕ್ಷೇತ್ರದಲ್ಲಿ ಈಗಲೂ ಮಾನವರಿಗೆ ಸಮನಾದ ಹಗಲು ರಾತ್ರಿಗಳ ದಿನಗಳು ನಡೆಯುತ್ತಿವೆ. ಅಲ್ಲಿ ಕೆಲವು ಶಿವಲಿಂಗಗಳು ಐದುಮುಖವುಳ್ಳವೂ, ಕೆಲವು ಕೋಳಿಯಮೊಟ್ಟೆಯ ಪ್ರಮಾಣದವೂ, ಕೆಲವು ಅತಿ ದೊಡ್ಡವೂ. ಕೆಲವು ಸರ್ಪದಿಂದ ಸುತ್ತಲ್ಪಟ್ಟವೂ, ಕೆಲವು ತ್ರಿಶೂಲಗಳುಳ್ಳವೂ ಆಗಿರುವುವು.

೨೪. ಅವುಗಳ ದರ್ಶನದಿಂದ ಕೋಟಿಲಿಂಗಗಳನ್ನು ಪೂಜಿಸಿದ ಫಲವು ಲಭಿಸುವುದು. ಆದುದರಿಂದ ಈ ಮಹಾಕ್ಷೇತ್ರವನ್ನು ಬ್ರಹ್ಮಾದಿ ದೇವತೆಗಳು ಸೇವಿಸುವರು.

೨೫–೨೬. ವೇದಾಧ್ಯಯನಸಂಪನ್ನರಾದ ಬ್ರಾಹ್ಮಣರೂ, ತಪಸ್ಸಿದ್ಧಿಯನ್ನು ಪಡೆದ ಮುನಿಗಳೂ, ಪ್ರತಿತಿಂಗಳ ಅಷ್ಟಮೀ ಚತುರ್ಥೀ ದಿನಗಳಲ್ಲಾಗಲಿ, ಚಂದ್ರ ಸೂರ್ಯರ ಗ್ರಹಣಕಾಲದಲ್ಲಾಗಲಿ, ಕಾರ್ತಿಕ ಮಾಸದ ಹುಣ್ಣಿಮೆಯ ದಿನದಲ್ಲಾಗಲಿ ಪ್ರಭಾಸದಲ್ಲಿರುವ ಶಿವಲಿಂಗಗಳನ್ನು ಪೂಜಿಸುತ್ತಾರೆ.

೨೭–೨೮. ಸನ್ನಿಹತೀನದಿಯಲ್ಲಿಯೂ, ಕುರುಕ್ಷೇತ್ರದಲ್ಲಿಯೂ, ಸರಸ್ವತೀ ಸಾಗರ ಸಂಗಮದಲ್ಲಿಯೂ ಪುಷ್ಕರ, ನೈಮಿಷ, ಪ್ರಯಾಗ, ಸಂಪೃಥೂದಕ ತೀರ್ಥಗಳು ಅರುವತ್ತು ಸಾವಿರದ ಅರುವತ್ತುಕೋಟಿನೂರು ತೀರ್ಥಗಳೊಡನೆ ಪ್ರತಿಮಾಘ ಮಾಸದ ಪೂರ್ಣಿಮಾ ದಿನದಲ್ಲಿ ಸೇರುವುವು.

ಸ್ಮರಣಾತ್ತಸ್ಯ ತೀರ್ಥಸ್ಯ ನಾಮಸಂಕೀರ್ತನಾದಪಿ ।
ಮೃತ್ಯುಕಾಲಭವಾದ್ವಾಽಪಿ ಪಾಪಂ ತ್ಯಕ್ಷ್ಯಂತಿ ಸುವ್ರತೇ ॥ ೨೯ ॥
ಆವರ್ತಸಾರಂ ಸೌಮ್ಯಂ ಚ ತಥಾ ಭುವನಭೂಷಣಂ ।
ದಿವ್ಯಂ ಪಾಂಚನದಂ ಪುಣ್ಯಮಾದಿಗುಹ್ಯಂ ಮಹೋದಯಂ ॥ ೩೦ ॥
ಸಿದ್ಧರತ್ನಾಕರಂ ನಾಮ ಸಮುದ್ರಾವರಣಂ ತಥಾ ।
ಧರ್ಮಾಕಾರಂ ಕಲಾಧಾರಂ ಶಿವಗರ್ಭಗೃಹಂ ತಥಾ ॥ ೩೧ ॥
ಸರ್ವದೇವನಿವೇಶಂ ಚ ಸರ್ವಪಾತಕನಾಶನಂ ।
ಅಸ್ಯ ಕ್ಷೇತ್ರಸ್ಯ ನಾಮಾನಿ ಕಲ್ಪೇ ಕಲ್ಪೇ ಪೃಥಕ್ಪ್ರಿಯೇ ॥ ೩೨ ॥
ಅಯಾಮಾದೀನಿ ಜಾನೀಹಿ ಗುಹ್ಯಾನಿ ಸುರಸುಂದರಿ ।
ಆದ್ಯೇ ಕಲ್ಪೇ ಪುರಾ ದೇವಿ ಪ್ರಮೋದನಮಿತಿ ಸ್ಮೃತಂ ॥ ೩೩ ॥
ನಂದನಂ ಪರಿತಸ್ತಸ್ಯ ತಸ್ಯಾಽಪಿ ಪರತಃ ಶಿವಂ ।
ಶಿವಾತ್ಪರತರಂ ಚೋಗ್ರಂ ಭದ್ರಿಕಂ ಪರತಃ ಪುನಃ ॥ ೩೪ ॥
ಸಮಿಂಧನಂ ಪರಂ ತಸ್ಮಾತ್ ಕಾಮದಂ ಚ ತತಃ ಪರಂ ।
ಸಿದ್ಧಿದಂ ಚಾಽಪಿ ಧರ್ಮಜ್ಞಂ ವೈಶ್ವರೂಪಂ ಚ ಮುಕ್ತಿದಂ ॥ ೩೫ ॥
ತಥಾ ಶ್ರೀಪದ್ಮನಾಭಂ ತು ಶ್ರೀವತ್ಸಂ ತು ಮಹಾಪ್ರಭಂ ।
ತಥಾ ಚ ಪಾಪಸಂಹಾರಂ ಸರ್ವಕಾಮಪ್ರದಂ ತಥಾ ॥ ೩೬ ॥

---

೨೯. ಮಾನವನು ಮರಣ ಕಾಲದಲ್ಲುಂಟಾದ ಆ ತೀರ್ಥದ ಸ್ಮರಣೆಯಿಂದಲೂ, ಅವರ ಪವಿತ್ರ ನಾಮವನ್ನು ಸಂಕೀರ್ತನಮಾಡುವುವುದರಿಂದಲೂ ಪಾಪಮುಕ್ತನಾಗುವನು.

೩೦–೩೨. ಆವರ್ತಸಾರ, ಸೌಮ್ಯ, ಭುವನಭೂಷಣ, ಪಾಂಚನದ, ಆದಿಗುಹ್ಯ, ಮಹೋದಯ, ಸಿದ್ಧರತ್ನಾಕರ, ಸಮುದ್ರಾವರಣ, ಧರ್ಮಾಕಾರ, ಕಲಾಧಾರ, ಶಿವಗರ್ಭಗೃಹ, ಸರ್ವವೇದ ನಿವೇಶ ಎಂಬುದಾಗಿ ಪಾಪವನ್ನು ಪರಿಹರಿಸುವ ಈ ಕ್ಷೇತ್ರದ ನಾಮಗಳು ಪ್ರತಿಕಲ್ಪದಲ್ಲಿಯೂ ಪ್ರತ್ಯೇಕವಾಗಿವೆ.

೩೩–೩೮. ಸುಂದರಿ ! ಈ ಕ್ಷೇತ್ರದ ದೈರ್ಘ್ಯ ಮೊದಲಾದುವುಗಳು ರಹಸ್ಯವಾದುವು ಎಂದು ತಿಳಿ. ದೇವಿ ! ಪ್ರಮೋದನ, ನಂದನ, ಶಿವ, ಉಗ್ರ, ಭದ್ರಿಕ, ಸಮಿಂಧನ ಕಾಮದ, ಸಿದ್ಧಿದ, ಧರ್ಮಜ್ಞ, ವೈಶ್ವರೂಪ, ಶ್ರೀ ಪದ್ಮನಾಭ, ಶ್ರೀವತ್ಸ, ಮಹಾಪ್ರಭ, ಪಾಪಸಂಹಾರ, ಸರ್ವಕಾಮಪ್ರದ, ಮೋಕ್ಷಪ್ರದ, ಮೋಕ್ಷಮಾರ್ಗ,

ಮೋಕ್ಷಮಾರ್ಗಂ ವರಾರೋಹೇ ತಥಾ ದೇವಿ ಸುದರ್ಶನಂ ।
ಧರ್ಮಗರ್ಭಂ ತು ಧರ್ಮಾಣಾಂ ಪ್ರಭಾಸಂ ಪಾಪನಾಶನಂ ।
ಅತಃ ಪರಂ ಭವಂತೀಹ ಉತ್ಪಲಾವರ್ತಿಕಾನಿ ಚ ॥ ೩೭ ॥
ಕ್ಷೇತ್ರಸ್ಯ ಮಧ್ಯೇ ಯದ್ದೇವಿ ಮಮ ಗರ್ಭಗೃಹಂ ಸ್ಮೃತಂ ।
ತಸ್ಯ ನಾಮಾನಿ ತೇ ದೇವಿ ಕಥಿತಾನ್ಯಾನುಪೂರ್ವಶಃ ॥ ೩೮ ॥
ಶ್ರುತ್ವಾ ನಾಮಾನ್ಯಶೇಷಾಣಿ ಕ್ಷೇತ್ರಮಾಹಾತ್ಮ್ಯಮೇವ ಚ ।
ತೇಷಾಂ ತು ವಾಂಛಿತಾ ಸಿದ್ಧಿರ್ಭವಿಷ್ಯತಿ ನ ಸಂಶಯಃ ॥ ೩೯ ॥
ಏತತ್ಕೀರ್ತಯಮಾನಸ್ಯ ತ್ರಿಕಾಲಂ ತು ಮಹೋದಯಂ ।
ಸಂಧ್ಯಾಕಾಲಾಂತರಂ ಪಾಪಮಹೋರಾತ್ರಂ ವಿನಶ್ಯತಿ ॥ ೪೦ ॥
ಅಪಿ ವೈ ದಾಂಭಿಕಾಶ್ಚೈವ ಯೇ ವಸಂತ್ಯಲ್ಪಬುದ್ಧಯಃ ।
ಮೂಢಾ ಜೀವನಿಕಾ ವಿಪ್ರಾಸ್ತೇಽಪಿ ಯಾಂತಿ ಮೃತಾ ದಿವಂ ॥ ೪೧ ॥
ಅಸ್ಯ ಕ್ಷೇತ್ರಸ್ಯ ಮಧ್ಯೇ ತು ರವಿಯೋಜನಮಧ್ಯತಃ ।
ಉಪಕ್ಷೇತ್ರಾಣಿ ದೇವೇಶಿ ಸಂತ್ಯನ್ಯಾನಿ ಸಹಸ್ರಶಃ ॥ ೪೨ ॥
ಕಾನಿಚಿತ್ಪದ್ಮರೂಪಾಣಿ ಯವಾಕಾರಾಣಿ ಕಾನಿಚಿತ್ ।
ಷಟ್ಕೋಣಾನಿ ತ್ರಿಕೋಣಾನಿ ದಂಡಾಕಾರಾಣಿ ಕಾನಿಚಿತ್ ॥ ೪೩ ॥

ಸುದರ್ಶನ, ಧರ್ಮಗರ್ಭ, ಪ್ರಭಾಸ, ಉತ್ಪಲ, ಆವರ್ತಿಕ ಎಂಬ ಈ ಕ್ಷೇತ್ರದ ಮಧ್ಯದಲ್ಲಿರುವ ನನ್ನ ಗರ್ಭಗೃಹದ ಹೆಸರುಗಳನ್ನು ಕ್ರಮವಾಗಿ ಹೇಳಿರುವೆನು.

೩೯. ಈ ಸಮಗ್ರನಾಮಗಳನ್ನೂ, ಕ್ಷೇತ್ರಮಾಹಾತ್ಮ್ಯವನ್ನೂ ಕೇಳಿದ ಮಾನವರ ಬಯಸಿದ ಇಷ್ಟಸಿದ್ಧಿಯು ನಿಜವಾಗಿಯೂ ಇಡೆರುವುದು.

೪೦. ತ್ರಿ ಸಂಧ್ಯಾಕಾಲಗಳಲ್ಲಿ ಪುಣ್ಯಕರವಾದ ಈ ಕ್ಷೇತ್ರ ನಾಮಗಳನ್ನು ಹೇಳುವವನು ಹಗಲು ರಾತ್ರಿಗಳಲ್ಲಿ (ದಿನದಲ್ಲಿ) ಮಾಡಿದ ಪಾಪವೆಲ್ಲ ಪರಿಹಾರವಾಗುವುದು.

೪೧. ದಾಂಭಿಕನೂ, ಅಲ್ಪಬುದ್ಧಿಯುಳ್ಳವರೂ, ಮೂಢರೂ, ಜೀವನ ಮಾಡುವುದರಲ್ಲಿಯೇ ಆಸಕ್ತರೂ, ಆದ ಬ್ರಾಹ್ಮಣರು ಇಲ್ಲಿ ಮೃತರಾದರೆ ಅವರೂ ಸ್ವರ್ಗವನ್ನೇಸೆರುವರು.

೪೨. ಈ ಕ್ಷೇತ್ರದ ಮಧ್ಯದಲ್ಲಿ ಹನ್ನೆರಡು ಯೋಜನ ದೂರದಲ್ಲಿ ಇತರ ಸಾವಿರಾರು ಸಣ್ಣ ಪುಟ್ಟ ಕ್ಷೇತ್ರಗಳಿರುವುವು.

೪೩–೪೪. ಅವುಗಳಲ್ಲಿ ಕೆಲವು ಪದ್ಮರೂಪಗಳೂ, ಕೆಲವು ಯವಧಾನ್ಯರೂಪಗಳೂ, ಕೆಲವು ಷಟ್ಕೋಣಗಳೂ, ಕೆಲವು ದಂಡಾಕಾರಗಳೂ, ಇನ್ನು ಕೆಲವು

ಚಂದ್ರಬಿಂಬಾರ್ಧಭೇದಾನಿ ಚತುರಸ್ರಪ್ರಭೇದತಃ ।
ಬ್ರಹ್ಮಾದಿದೈವತಾನೀಶೇ ಕ್ಷೇತ್ರಮಧ್ಯೇ ಸ್ಥಿತಾನಿ ತು ॥ ೪೪ ॥

ಕಾನಿಚಿದ್ಯೋಜನಾರ್ಧಾನಿ ತದರ್ಧಾರ್ಧಾನಿ ಕಾನಿಚಿತ್ ।
ನಿವರ್ತನ ಪ್ರಮಾಣೇನ ದಂಡಮಾನೇನ ಕಾನಿಚಿತ್ ॥ ೪೫ ॥

ಗೋಚರ್ಮಮಾನಮಧ್ಯಾನಿ ಕಾನಿಚಿದ್ಧನುಷಾಂತರಂ ।
ಯಜ್ಞೋಪವೀತಮಾತ್ರಾಣಿ ಪ್ರಭಾಸೇ ಸಂತಿ ಕೋಟಿಶಃ ॥ ೪೬ ॥

ಅಂಗುಲ್ಯಷ್ಟಮಭಾಗೋಽಪಿ ನಭೋಽಸ್ತಿ ಕಮಲೇಕ್ಷಣೇ ।
ನ ಸಂತಿ ಯಸ್ಮಿಂಸ್ತೀರ್ಥಾನಿ ದಿವ್ಯಾನಿ ಚ ನಭಸ್ತಲೇ ॥ ೪೭ ॥

ಪ್ರಭಾಸಕ್ಷೇತ್ರಮಾಸಾದ್ಯ ತಿಷ್ಠಂತಿ ಪ್ರಲಯಾದನು ।
ಕೇದಾರೇ ಚೈವ ಯಲ್ಲಿಂಗಂ ಯಚ್ಚ ದೇವಿ ಮಹಾಲಯೇ ॥ ೪೮ ॥

ಮಧ್ಯಮೇಶ್ವರಸಂಸ್ಥಂ ಚ ತಥಾ ಪಾಶುಪತೇಶ್ವರಂ ।
ಶಂಕುಕರ್ಣೇಶ್ವರಂ ಚೈವ ಭದ್ರೇಶ್ವರಮಥಾಽಪಿ ಚ ॥ ೪೯ ॥

ಸೋಮೇಶ್ವರಮಥೈಕಾಗ್ರಂ ಕಾಲೇಶ್ವರಮಜೇಶ್ವರಂ ।
ಭೈರವೇಶ್ವರಮೀಶಾನಂ ತಥಾ ಕಾಯಾವರೋಹಣಂ ॥ ೫೦ ॥

ಅರ್ಧ ಚಂದ್ರಾಕಾರಗಳೂ, ಕೆಲವು ನಾಲ್ಕು ಮೂಲೆಗಳುಳ್ಳವೂ ಆಗಿರುವುವು ಬ್ರಹ್ಮಾದಿಗಳು ಅಭಿಮಾನಿ ದೇವತೆಗಳಾಗುಳ್ಳ ಅವೆಲ್ಲಾ ಆ ಪ್ರಭಾಸಕ್ಷೇತ್ರದಲ್ಲಿ ನೆಲಸಿರುವುವು.

೪೫–೪೬. ಅವುಗಳಲ್ಲಿ ಕೆಲವು ಅರ್ಧಯೋಜನದುದ್ದವುಳ್ಳವೂ, ಕೆಲವು ಅರೆ ಕಾಲುಯೋಜನದುದ್ದವುಳ್ಳವೂ, ಕೆಲವು ಕೋಲಿನ ಉದ್ದವುಳ್ಳವೂ, ಕೆಲವು ಗೋ ಚರ್ಮದಷ್ಟು ಮಧ್ಯಪ್ರದೇಶವುಳ್ಳವೂ, ಕೆಲವು ಬಿಲ್ಲಿನ ಪ್ರಮಾಣವುಳ್ಳವೂ, ಮತ್ತೆ ಕೆಲವು ಯಜ್ಞೋಪವೀತದಷ್ಟು ಪ್ರಮಾಣವುಳ್ಳವೂ, ಆಗಿರುವುವು.

೪೭. ಕಮಲಾಕ್ಷಿ! ದಿವ್ಯತೀರ್ಥಗಳಿಲ್ಲದಿರುವ ಬೆರಳಿನ ಎಂಟನೆಯ ಒಂದು ಭಾಗದಷ್ಟು ಆಕಾಶವೂ ಸಹ ಆ ಕ್ಷೇತ್ರದಲ್ಲಿರುವುದಿಲ್ಲ.

೪೮–೫೨. ಸ್ವೇಚ್ಛಾರೂಪಿಗಳಾದ ಕೋಟಿ ರುದ್ರರಿರುವ ಕೇದಾರ, ಮಹಾಲಯ, ಮಧ್ಯಮೇಶ್ವರ, ಪಾಶುಪತೇಶ್ವರ, ಶಂಕುಕರ್ಣೇಶ್ವರ, ಭದ್ರೇಶ್ವರ, ಸೋಮೇಶ್ವರ ಕಾಲೇಶ್ವರ, ಅಜೇಶ್ವರ, ಭೈರವೇಶ್ವರ, ಈಶಾನ, ಕಾಯಾವರೋಹಣ, ಚಾಪಟೇಶ್ವರ ಬದರಿಕಾಶ್ರಮ, ರುದ್ರಕೋಟಿ, ಮಹಾಕೋಟಿ, ಶ್ರೀಪರ್ವತ, ಕಾಪಾಲೀ, ಕರವೀರ,

ಚಾಪಟೇಶ್ವರಕಂ ಪುಣ್ಯಂ ತಥಾ ಬದರಿಕಾಶ್ರಮಂ ।
ರುದ್ರಕೋಟಿರ್ಮಹಾಕೋಟಿಸ್ತಥಾ ಶ್ರೀಪರ್ವತಂ ಶುಭಂ ॥ ೫೧ ॥
ಕಾಪಾಲೀ ಚೈವ ದೇವೇಶಃ ಕರವೀರಂ ತಥಾ ಪುನಃ ।
ಓಂಕಾರಂ ಪರಮಂ ಪುಣ್ಯಂ ವಶಿಷ್ಠಾಶ್ರಮಮೇವ ಚ ।
ಯತ್ರ ಕೋಟಿಃ ಸ್ಮೃತಾ ದೇವಿ ರುದ್ರಾಣಾಂ ಕಾಮರೂಪಿಣಾಂ ॥ ೫೨ ॥
ಯಾನಿ ಚಾನ್ಯಾನಿ ಸ್ಥಾನಾನಿ ಪುಣ್ಯಾನಿ ಮಮ ಭೂತಲೇ ॥
ಪ್ರಯಾಗಂ ಪುರತಃ ಕೃತ್ವಾ ಪ್ರಭಾಸೇ ನಿವಸಂತಿ ಚ ॥ ೫೩ ॥
ಉತ್ತರೇ ರವಿಪುತ್ರೀ ತು ದಕ್ಷಿಣೇ ಸಾಗರಂ ಸ್ಮೃತಂ ।
ದಕ್ಷಿಣೋತ್ತರಮಾನೋಽಯಂ ಕ್ಷೇತ್ರಸ್ಯಾಸ್ಯ ಪ್ರಕೀರ್ತಿತಃ ॥ ೫೪ ॥
ರುಕ್ಮಿಣ್ಯಾಃ ಪೂರ್ವತಶ್ಚೈವ ತಪ್ತತೋಯಾಚ್ಚ ಪಶ್ಚಿಮೇ ।
ಪೂರ್ವಪಶ್ಚಿಮಮಾನೋಽಯಂ ಪ್ರಭಾಸಸ್ಯ ಪ್ರಕೀರ್ತಿತಃ ॥ ೫೫ ॥
ಏತದಂತರಮಾಸಾದ್ಯ ತೀರ್ಥಾನಿ ಸುರಸುಂದರಿ ।
ಪಾತಾಲಾದಿಕಟಾಹಾಂತಂ ತಾನಿ ತತ್ರ ವಸಂತಿ ವೈ ॥ ೫೬ ॥
ಏವಂ ಜ್ಞಾತ್ವಾ ಮಹಾದೇವಿ ಸರ್ವದೇವಮಯೋ ಹರಿಃ ।
ಪ್ರಭಾಸಕ್ಷೇತ್ರಮಾಸಾದ್ಯ ತತ್ಯಾಜ ಸ್ವಂ ಕಲೇವರಂ ॥ ೫೭ ॥

ಓಂಕಾರ, ವಸಿಷ್ಠಾಶ್ರಮ ಇವುಗಳು ಪ್ರಭಾಸಕ್ಷೇತ್ರದಲ್ಲಿ ಪ್ರಲಯಕಾಲದವರೆಗೆ ಇರುತ್ತವೆ.

೫೩. ಭೂಮಿಯಲ್ಲಿರುವ ಇತರ ತೀರ್ಥಗಳೂ ಪ್ರಯಾಗಕ್ಷೇತ್ರವನ್ನು ಮುಂದಿರಿಸಿ ಕೊಂಡು ಪ್ರಭಾಸದಲ್ಲಿ ವಾಸಿಸುತ್ತವೆ.

೫೪. ಈ ಪ್ರಭಾಸಕ್ಷೇತ್ರದ ಉತ್ತರ ಭಾಗದಲ್ಲಿ ಯಮುನಾ ನದಿಯೂ, ದಕ್ಷಿಣ ಭಾಗದಲ್ಲಿ ಸಮುದ್ರವೂ ಇರುವುವು. ಹೀಗೆ ಇದು ದಕ್ಷಿಣೋತ್ತರದ ಅಳತೆಯಾಗಿರುವುದು.

೫೫. ಈ ಕ್ಷೇತ್ರದ ಪಶ್ಚಿಮದಲ್ಲಿ ರುಕ್ಮಿಣೀನದಿಯೂ, ಪೂರ್ವದಲ್ಲಿ ತಪ್ತತೋಯಾ ನದಿಯೂ ಇರುವುದು. ಹೀಗೆ ಪೂರ್ವಪಶ್ಚಿಮದ ಪ್ರಮಾಣವಾಗಿರುವುದು.

೫೬. ಸುಂದರಿ ! ಈ ಮಧ್ಯಪ್ರದೇಶದಲ್ಲಿ ಪಾತಾಳದಿಂದ ಬ್ರಹ್ಮಾಂಡದ ತುದಿಯ ವರೆಗಿರುವ ಸಕಲ ತೀರ್ಥಗಳೂ ನೆಲಸಿರುವುವು.

೫೭. ಮಹಾದೇವಿ ! ಸರ್ವದೇವತಾಸ್ವರೂಪನಾದ ವಿಷ್ಣುವು ಇದನ್ನರಿತು ಪ್ರಭಾಸಕ್ಷೇತ್ರವನ್ನು ಆಶ್ರಯಿಸಿ ತನ್ನ ಶರೀರವನ್ನು ತೊರೆದನು.

ದಿವ್ಯಂ ಮಮೇದಂ ಚರಿತಂ ಹಿ ರೌದ್ರಂ
ಶ್ರೋಷ್ಯಂತಿ ಯೇ ಪರ್ವಸು ವಾ ಸದಾ ವಾ ।
ತೇ ಚಾಽಪಿ ಯಾಸ್ಯಂತಿ ಮಮ ಪ್ರಸಾದಾ
ತ್ರಿವಿಷ್ಟಪಂ ಪುಣ್ಯಜನಾಧಿವಾಸಂ ॥ ೫೮ ॥
ಇತಿ ಕಥಿತಮಶೇಷಮೇವ ಚಿತ್ರಂ
ಚರಿತಮಿದಂ ತವ ದೇವಿ ಪುಣ್ಯಯುಕ್ತಂ ।
ಇತರಮಪಿ ತವಾಽತಿವಲ್ಲಭಂ ಯ
ದ್ವದ ಕಥಯಾಮಿ ಮಹೋದಯಂ ಮುನೀನಾಂ ॥೫೯॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಭಾಸಕ್ಷೇತ್ರಸ್ಯ ಸರ್ವಕ್ಷೇತ್ರೋತ್ತಮತ್ವವರ್ಣನಂ ನಾಮ
ದಶಮೋಽಧ್ಯಾಯಃ

---

೫೮. ಈ ನನ್ನ ದಿವ್ಯ ಚರಿತೆಯನ್ನು ಪರ್ವಕಾಲದಲ್ಲಿಯಾಗಲಿ, ಯಾವಾಗಲೇ ಆಗಲಿ ಕೇಳುವವರು ನನ್ನ ಅನುಗ್ರಹದಿಂದ ಪುಣ್ಯವಂತರು ವಾಸಿಸುವ ಸ್ವರ್ಗಲೋಕ ವನ್ನು ಸೇರುವರು.

೫೯. ದೇವಿ! ಹೀಗೆ ಆಶ್ಚರ್ಯಕರವೂ, ಪುಣ್ಯಪ್ರದವೂ ಆದ ಈ ಚರಿತ್ರೆಯನ್ನೆಲ್ಲ ನಿನಗೆ ಹೇಳಿರುವೆನು. ನಿನಗೆ ಪ್ರಿಯವಾದುದು ಬೇರೆಯಾವುದಾದರೂ ಇದ್ದರೆ ಕೇಳು. ಮುನಿಗಳಿಗೂ ಪುಣ್ಯಪ್ರದವಾದ ಆ ವಿಚಾರವೆಲ್ಲವನ್ನು ಹೇಳುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪ್ರಭಾಸಕ್ಷೇತ್ರದ ಸರ್ವಕ್ಷೇತ್ರೋತ್ತಮತ್ವವರ್ಣನವೆಂಬ
ಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಏಕಾದಶೋಽಧ್ಯಾಯಃ ॥

ರಾಜಭಟ್ಟಾರಕೋತ್ಪತ್ತಿ ವರ್ಣನಂ

ಸೂತ ಉವಾಚ:—

ಇತಿ ಪ್ರೋಕ್ತಾ ತದಾ ದೇವಿ ವಿಸ್ಮಯೋತ್ಫುಲ್ಲಲೋಚನಾ ।
ರೋಮಾಂಚಕಂಚುಕಾ ಸುಭ್ರೂಃ ಪುನಃ ಪಪ್ರಚ್ಛ ಭೂಸುರಾಃ ॥ ೧ ॥

ದೇವ್ಯುವಾಚ :—

ಧನ್ಯಾಽಹಂ ಕೃತಪುಣ್ಯಾಽಹಂ ತಪಃ ಸುಚರಿತಂ ಮಯಾ ।
ಯದೇಷ ಕ್ಷೇತ್ರಮಹಿಮಾ ಮಹಾದೇವಾನ್ಮಯಾ ಶ್ರುತಃ ॥ ೨ ॥
ಭಗವನ್ ದೇವದೇವೇಶ ಸಂಸಾರಾರ್ಣವತಾರಕ ।
ಪೃಷ್ಟಂ ತು ಯನ್ಮಯಾ ಪೂರ್ವಂ ತತ್ಸರ್ವಂ ಕಥಿತಂ ಹರ ॥ ೩ ॥
ಪುನಶ್ಚ ದೇವದೇವೇಶ ತ್ವದ್ವಾಕ್ಯಾಽಮೃತರಂಜಿತಾ ।
ನ ತೃಪ್ತಿಮಧಿಗಚ್ಛಾಮಿ ದೇವದೇವ ಮಹೇಶ್ವರ ॥ ೪ ॥

ಕನ್ನಡದ ಅನುವಾದ

ರಾಜಭಟ್ಟಾರಕೋತ್ಪತ್ತಿ ವರ್ಣನ

೧. ಸೂತನು ಹೇಳುತ್ತಾನೆ—ಎಲೈ ಬ್ರಾಹ್ಮಣರೆ ! ಮಹೇಶ್ವರನು ಹೀಗೆ ಹೇಳಲು ಪಾರ್ವತಿಯು ಆಶ್ಚರ್ಯದಿಂದ ಅರಳಿದ ಕಣ್ಣುಗಳುಳ್ಳವಳೂ, ರೋಮಾಂಚ ಗೊಂಡವಳು ಆಗಿ ತಿರುಗಿ ಆತನನ್ನು ಪ್ರಶ್ನಿಸಿದಳು.

೨. ದೇವಿಯು ಹೇಳುತ್ತಾಳೆ:—ಮಹಾದೇವ ! ನಾನು ನಿನ್ನಿಂದ ಕ್ಷೇತ್ರ ಮಹಿಮೆಯನ್ನು ಕೇಳಿದುದರಿಂದ ಧನ್ಯಳೂ ಪುಣ್ಯಮಾಡಿದವಳೂ, ತಪಸ್ಸನ್ನಾಚರಿಸಿ ದವಳೂ ಆದೆನು.

೩. ಸಂಸಾರಸಾಗರತಾರಕನಾದ ಓ ಮಹೇಶ್ವರ ! ನಾನು ಹಿಂದೆ ಕೇಳಿದು ದನ್ನೆಲ್ಲ ನೀನು ಹೇಳಿರುವೆ.

೪. ಮಹಾದೇವ ! ನಿನ್ನ ಮಾತೆಂಬ ಅಮೃತದಿಂದ ಸಂತೋಷಗೊಂಡ ನಾನು ತೃಪ್ತಳಾಗಲಿಲ್ಲ.

ಕಿಂಚಿತ್ಪ್ರಷ್ಟುಮನಾಶ್ಚಾಽಸ್ಮಿ ಪ್ರಭಾಸಕ್ಷೇತ್ರವಿಸ್ತರಂ ।
ತನ್ಮೇ ಕಥಯ ಕಾಮೇಶ ದಯಾಂ ಕೃತ್ವಾ ಜಗತ್ಪ್ರಭೋ ॥ ೫ ॥

ಈಶ್ವರ ಉವಾಚ :—

ಪೃಥಿವ್ಯಾ ಮಧ್ಯಗರ್ಭಸ್ಥಂ ಜಂಬೂದ್ವೀಪಮಿತಿ ಸ್ಮೃತಂ ।
ತಚ್ಚ ಮೇ ವೈ ನವಧಾ ಭಿನ್ನಂ ವರ್ಷಭೇದೇನ ಸುಂದರಿ ॥ ೬ ॥
ತಸ್ಯಾದ್ಯಂ ಭಾರತಂ ವರ್ಷಂ ತಚ್ಚಾಽಪಿ ನವಧಾ ಸ್ಮೃತಂ ।
ನವಯೋಜನಸಾಹಸ್ರಂ ದಕ್ಷಿಣೋತ್ತರಮಾನತಃ ॥ ೭ ॥
ಅಶೀತಿಶ್ಚ ಸಹಸ್ರಾಣಿ ಪೂರ್ವಪಶ್ಚಾಯತಂ ಸ್ಮೃತಂ ।
ಉತ್ತರೇ ಹಿಮವಾನಸ್ತಿ ಕ್ಷೀರೋದೋ ದಕ್ಷಿಣೇ ಸ್ಮೃತಃ ॥ ೮ ॥
ಏತಸ್ಮಿನ್ನಂತರೇ ದೇವಿ ಭಾರತಂ ಕ್ಷೇತ್ರಮುತ್ತಮಂ ।
ಕೃತಂ ತ್ರೇತಾ ದ್ವಾಪರಂ ಚ ತಿಷ್ಯಂ ಯುಗಚತುಷ್ಟಯಂ ॥ ೯ ॥
ಅತ್ರೈವೇಷಾ ಯುಗಾವಸ್ಥಾ ಚತುರ್ವರ್ಣಾಶ್ಚ ವೈ ಜನಾಃ ।
ಚತ್ವಾರಿ ತ್ರೀಣಿ ಚ ದ್ವೇ ಚ ತಥೈವೈಕಂ ಶರಚ್ಛತಂ ॥ ೧೦ ॥
ಜೀವಂತ್ಯತ್ರ ನರಾ ದೇವಿ ಕೃತತ್ರೇತಾದಿಷು ಕ್ರಮಾತ್ ।
ಯದೇತತ್ಪಾರ್ಥಿವಂ ಪದ್ಮಂ ಚತುಷ್ಪತ್ರಂ ಮಯೋದಿತಂ ॥ ೧೧ ॥
ವರ್ಷಾಣಿ ಭಾರತಾದ್ಯಾನಿ ಪತ್ರಾಣ್ಯಸ್ಯ ಚತುರ್ದಿಶಂ ।
ಭಾರತಂ ಕೇತುಮಾಲಂ ಚ ಕುರುಭದ್ರಾಶ್ವಮೇವ ಚ ॥ ೧೨ ॥

---

೫. ಪ್ರಭಾಸಕ್ಷೇತ್ರದ ಮಾಹಾತ್ಮ್ಯವು ವಿಸ್ತಾರವನ್ನು ಸ್ವಲ್ಪ ಕೇಳಬಯಸುವೆನು. ಜಗತ್ಸ್ವಾಮಿಯಾದ ಪ್ರಿಯನೆ! ದಯೆಯಿಟ್ಟು ನನಗೆ ಅದನ್ನು ಹೇಳು.

೬. ಈಶ್ವರನು ಹೇಳುತ್ತಾನೆ:—ಸುಂದರಿ! ಭೂಮಿಯ ಮಧ್ಯದಲ್ಲಿ ಖಂಡಭೇದದಿಂದ ಒಂಬತ್ತು ವಿಧವಾದ ವಿಭಕ್ತವಾಗಿರುವ ಜಂಬೂದ್ವೀಪವಿರುವುದು.

೭–೮. ಆ ಒಂಬತ್ತು ಖಂಡಗಳಲ್ಲಿ ಮೊದಲನೆಯ ಭಾರತವರ್ಷವು ಒಂಬತ್ತು ಬಗೆಯಾಗಿದೆ. ಇವು ದಕ್ಷಿಣೋತ್ತರ ಒಂಬತ್ತುಸಾವಿರ ಗಾವುದವೂ, ಪೂರ್ವಪಶ್ಚಿಮ ಎಂಬತ್ತು ಸಾವಿರ ಗಾವುದವೂ ವಿಸ್ತೀರ್ಣವಾಗಿದೆ. ಇದರ ಉತ್ತರದಲ್ಲಿ ಹಿಮಾಲಯವೂ, ದಕ್ಷಿಣದಲ್ಲಿ ಕ್ಷೀರಸಮುದ್ರವೂ ಇದೆ.

೯–೧೨. ಇದರ ಮಧ್ಯದಲ್ಲಿ ಉತ್ತಮವಾದ ಭಾರತ ದೇಶವು ಇರುವುದು. ಇಲ್ಲಿ ಕೃತ, ತ್ರೇತಾ, ದ್ವಾಪರ, ಕಲಿಯೆಂಬ ನಾಲ್ಕು ಯುಗಗಳೂ, ನಾಲ್ಕು ವರ್ಣಗಳೂ ಇವೆ. ಇಲ್ಲಿ ಕೃತಾದಿಯುಗಗಳಲ್ಲಿ ಜನರು ಕ್ರಮವಾಗಿ ನಾನೂರು, ಮುನ್ನೂರು, ಇನ್ನೂರು, ನೂರು ವರ್ಷಗಳಕಾಲ ಜೀವಿಸುವರು. ಭಾರತ, ಕೇತುಮಾಲ, ಕುರು, ಭದ್ರಾಶ್ವವೆಂಬ ವರ್ಷಗಳು ನಾನು ನಿನಗೆ ಹೇಳಿದ ನಾಲ್ಕು ದಳಗಳುಳ್ಳ ಪದ್ಮದ ನಾಲ್ಕು ದಿಕ್ಕಿನ ದಳಗಳು.

ಭಾರತಂ ನಾಮ ಯದ್ವರ್ಷಂ ದಾಕ್ಷಿಣಾತ್ಯಂ ಮಯೋದಿತಂ ।
ದಕ್ಷಿಣಾಪರತೋ ಯಸ್ಯ ಪೂರ್ವೇಣ ಚ ಮಹೋದಧಿಃ ।
ಹಿಮವಾನುತ್ತರೇಣಾಽಸ್ಯ ಕಾರ್ಮುಕಸ್ಯ ಯಥಾ ಗುಣಃ ॥ ೧೩ ॥
ತದೇತದ್ಭಾರತಂ ವರ್ಷಂ ಸರ್ವಬೀಜಂ ವರಾನನೇ ।
ತತ್ಕರ್ಮಭೂಮಿರ್ನಾಽನ್ಯತ್ರ ಸಂಪ್ರಾಪ್ತಿಃ ಪುಣ್ಯಪಾಪಯೋಃ ॥ ೧೪ ॥
ದೇವಾನಾಮಪಿ ದೇವೇಶಿ ಸದ್ಯೈವೈಷ ಮನೋರಥಃ ।
ಅಪಿ ಮಾನುಷ್ಯಮಾಪ್ಸ್ಯಾಮೋ ಭಾರತೇ ಪ್ರತ್ಯುತ ಕ್ಷಿತೌ ॥ ೧೫ ॥
ಭದ್ರಾಽಶ್ವೇಽಶ್ವಶಿರಾ ವಿಷ್ಣುರ್ಭಾರತೇ ಕೂರ್ಮಸಂಸ್ಥಿತಃ ।
ವರಾಹಃ ಕೇತುಮಾಲೇ ಚ ಮತ್ಸ್ಯರೂಪಸ್ತಥೋತ್ತರೇ ॥ ೧೬ ॥
ತೇಷು ನಕ್ಷತ್ರವಿನ್ಯಾಸಾದ್ವಿಷಯಾಃ ಸಮವಸ್ಥಿತಾಃ ।
ಚತುರ್ಷ್ವಪಿ ಮಹಾದೇವಿ ವಿಗ್ರಹೋ ನವ ಪಾದಕಃ ॥ ೧೭ ॥
ಭಾರತೋ ಯೋ ಮಹಾದೇವಿ ಕೂರ್ಮರೂಪೇಣ ಸಂಸ್ಥಿತಃ ।
ನಕ್ಷತ್ರಗ್ರಹವಿನ್ಯಾಸಂ ತಸ್ಯ ತೇ ಕಥಯಾಮ್ಯಹಂ ॥ ೧೮ ॥
ಪ್ರಾಙ್ಮುಖೋ ಭಗವಾನ್ ದೇವೋ ಕೂರ್ಮರೂಪೀ ವ್ಯವಸ್ಥಿತಃ ।
ಆಕ್ರಮ್ಯ ಭಾರತಂ ವರ್ಷಂ ನವಭೇದಮಿದಂ ಪ್ರಿಯೇ ॥ ೧೯ ॥

---

೧೩. ನಾನು ಹೇಳಿದ ಈ ಭಾರತವರ್ಷವು ದಕ್ಷಿಣದಿಕ್ಕಿನಲ್ಲಿರುವುದು. ಇದರ ಪೂರ್ವ, ದಕ್ಷಿಣ, ಪಶ್ಚಿಮ, ದಿಕ್ಕುಗಳಲ್ಲಿ ಸಮುದ್ರವೂ, ಉತ್ತರ ದಿಕ್ಕಿನಲ್ಲಿ ಹಿಮಾಲಯವೂ ಬಿಲ್ಲಿನ ಹಗ್ಗದಂತಿರುವುವು.

೧೪. ಸುಮುಖಿ ! ಸಮಸ್ತಕ್ಕೂ ಕಾರಣವಾದ ಭಾರತವರ್ಷವು ಕರ್ಮಭೂಮಿಯು. ಬೇರೆ ಕಡೆಯಲ್ಲಿ ಪುಣ್ಯಪಾಪಗಳು ಉಂಟಾಗುವುದಿಲ್ಲ.

೧೫. ದೇವಿ ! ದೇವತೆಗಳೂ ಭಾರತಭೂಮಿಯಲ್ಲಿ ಮನುಷ್ಯರಾಗಿ ಹುಟ್ಟಬೇಕೆಂದು ಅಪೇಕ್ಷಿಸುವರು.

೧೬. ವಿಷ್ಣುವು ಭದ್ರಾಶ್ವದಲ್ಲಿ ಹಯಗ್ರೀವನಾಗಿಯೂ ಭಾರತವರ್ಷದಲ್ಲಿ ಕೂರ್ಮನಾಗಿಯೂ, ಕೇತುಮಾಲದಲ್ಲಿ ವರಾಹನಾಗಿಯೂ, ಕುರುವರ್ಷದಲ್ಲಿ ಮತ್ಸ್ಯರೂಪನಾಗಿಯೂ ವಿರಾಜಿಸುತ್ತಿರುವನು.

೧೭. ಅವುಗಳಲ್ಲಿ ನಕ್ಷತ್ರವಿನ್ಯಾಸದ ಕ್ರಮದಿಂದ ದೇಶಗಳಿರುವುವು. ನಾಲ್ಕು ವರ್ಷಗಳಲ್ಲಿಯೂ ವಿಗ್ರಹವು ಒಂಬತ್ತು ಪಾದಗಳುಳ್ಳದು.

೧೮. ನಾನು ಕೂರ್ಮರೂಪದಿಂದಿರುವ ಭಾರತವರ್ಷದಲ್ಲಿ ನಕ್ಷತ್ರ ವಿನ್ಯಾಸದ ಕ್ರಮವನ್ನು ನಿನಗೆ ಹೇಳುವೆನು.

೧೯. ಪ್ರಿಯಳೆ ! ಪೂಜ್ಯನಾದ ಕೂರ್ಮರೂಪಿ ವಿಷ್ಣುವು ಒಂಬತ್ತು ಬಗೆಯಾದ ಈ ಭಾರತವರ್ಷವನ್ನು ಆಕ್ರಮಿಸಿ ಪೂರ್ವಾಭಿಮುಖವಾಗಿ ನೆಲೆಸಿರುವನು.

ನವಧಾ ಸಂಸ್ಥಿತಸ್ಯಾಽಸ್ಯ ನಕ್ಷತ್ರಾಣಿ ನಿಬೋಧ ಮೇ ।
ಕೃತ್ತಿಕಾ ರೋಹಿಣೀ ಸೌಮ್ಯಂ ತೃತೀಯಂ ಕೂರ್ಮಪೃಷ್ಠಗಂ ॥ ೨೦ ॥
ರೌದ್ರಂ ಪುನರ್ವಸುಃ ಪುಷ್ಯಂ ನಕ್ಷತ್ರತ್ರಿತಯಂ ಮುಖೇ ।
ಆಶ್ಲೇಷಾಖ್ಯಂ ತಥಾ ಪೈತ್ರಂ ಫಾಲ್ಗುನೀ ಪ್ರಥಮಾ ಪ್ರಿಯೇ ॥೨೧॥
ನಕ್ಷತ್ರತ್ರಿತಯಂ ಪಾದಮಾಶ್ರಿತಂ ಪೂರ್ವದಕ್ಷಿಣಂ ॥
ಫಾಲ್ಗುನೀ ಚೋತ್ತರಾ ಹಸ್ತಂ ಚಿತ್ರಾ ಚರ್ಕ್ಷತ್ರಯಂ ಸ್ಮೃತಂ ॥ ೨೨ ॥
ಕೂರ್ಮಸ್ಯ ದಕ್ಷಿಣೇ ಕುಕ್ಷೌ ಚರ್ಕ್ಷಪಾದಂ ತಥಾಽಪರಂ ।
ಸ್ವಾತೀ ವಿಶಾಖಾ ಮೈತ್ರಂ ಚ ನೈರ್ಋತೇ ತ್ರಿತಯಂ ಸ್ಮೃತಂ ॥ ೨೩ ॥
ಐಂದ್ರಂ ಮೂಲಂ ತಥಾಷಾಢಾ ಪೃಷ್ಠೇ ತು ತ್ರಿತಯಂ ಸ್ಮೃತಂ ।
ಆಷಾಢಾ ಶ್ರಾವಣಂ ಚೈವ ಧನಿಷ್ಠಾ ಚಾಽತ್ರ ಶಬ್ದಿತಾ ॥ ೨೪ ॥
ನಕ್ಷತ್ರತ್ರಿತಯಂ ಪಾದೇ ವಾಯವ್ಯೇ ತು ಯಶಸ್ವಿನಿ ।
ವಾರುಣಂ ಚೈವ ನಕ್ಷತ್ರಂ ತಥಾ ಪ್ರೋಷ್ಠಪದಾದ್ವಯಂ ॥ ೨೫ ॥
ಕೂರ್ಮಸ್ಯ ವಾಮಕುಕ್ಷೌ ತು ತ್ರಿತಯಂ ಸಂಸ್ಥಿತಂ ಪ್ರಿಯೇ ।
ರೇವತೀ ಚಾಶ್ವಿದೈವತ್ಯಂ ಯಾಮ್ಯಂ ಚರ್ಕ್ಷಮಿತಿ ತ್ರಯಂ ॥
ಈಶಪಾದೇ ಸಮಾಖ್ಯಾತಂ ಶುಭಾಽಶುಭಫಲಂ ಶೃಣು ॥೨೬॥
ಯಸ್ಯರ್ಕ್ಷಸ್ಯ ಪತಿರ್ಯೋ ವೈ ಗ್ರಹಸ್ತಸ್ಯಾನ್ಯತೋ ಭಯಂ ।
ತದ್ದೇಶಸ್ಯ ಮಹಾದೇವಿ ತಥೋತ್ಕರ್ಷೇ ಶುಭಾಗಮಃ ॥ ೨೭ ॥

೨೦–೨೬. ಒಂಬತ್ತು ಬಗೆಯಾದ ಈ ಭಾರತವರ್ಷದಲ್ಲಿರುವ ಕೂರ್ಮರೂಪಿಯಾದ ವಿಷ್ಣುವಿನಲ್ಲಿ ನಕ್ಷತ್ರಗಳು ನೆಲೆಸಿರುವ ಕ್ರಮವನ್ನು ನನ್ನಿಂದ ತಿಳಿದುಕೊ. ಕೃತ್ತಿಕಾ, ರೋಹಿಣಿ, ಮೃಗಶಿರಾ ನಕ್ಷತ್ರಗಳು ಕೂರ್ಮನ ಬೆನ್ನಿನಲ್ಲಿರುವುವು. ಆರ್ದ್ರಾ, ಪುನರ್ವಸು, ಪುಷ್ಯ ನಕ್ಷತ್ರಗಳು ಮುಖದಲ್ಲಿಯೂ, ಆಶ್ಲೇಷಾ, ಮಾಘಾ, ಪುಬ್ಬಾ ನಕ್ಷತ್ರಗಳು ಆಗ್ನೇಯ ಪಾದದಲ್ಲಿಯೂ, ಉತ್ತರಾ, ಹಸ್ತಾ, ಚಿತ್ತಾ ನಕ್ಷತ್ರಗಳು ಹೊಟ್ಟೆಯ ಬಲಭಾಗದಲ್ಲಿಯೂ, ಸ್ವಾತೀ. ವಿಶಾಖಾ, ಅನೂರಾಧಾ ನಕ್ಷತ್ರಗಳು ನೈಋತ್ಯ ಪಾದದಲ್ಲಿಯೂ, ಜ್ಯೇಷ್ಠಾ, ಮೂಲಾ, ಪೂರ್ವಾಷಾಢಾ ನಕ್ಷತ್ರಗಳು ಪೃಷ್ಠದಲ್ಲಿಯೂ, ಆಷಾಢಾ, ಶ್ರವಣ, ಧನಿಷ್ಠಾ ನಕ್ಷತ್ರಗಳು ವಾಯವ್ಯ ಪಾದದಲ್ಲಿಯೂ, ಶತಭಿಷಾ, ಪೂರ್ವಾಭಾದ್ರಾ, ಉತ್ತರಾಭಾದ್ರಾ ನಕ್ಷತ್ರಗಳು ಹೊಟ್ಟೆಯ ಎಡಭಾಗದಲ್ಲಿಯೂ, ರೇವತೀ, ಅಶ್ವಿನೀ, ಭರಣೀ ನಕ್ಷತ್ರಗಳು ಈಶಾನ್ಯಪಾದದಲ್ಲಿಯೂ ಇರುವುವು. ಇದರ ಶುಭಾಶುಭಫಲಗಳನ್ನು ಕೇಳು.

೨೭. ದೇವಿ ! ಯಾವ ನಕ್ಷತ್ರಕ್ಕೆ ಯಾವ ಗ್ರಹವು ಅಧಿಪತಿಯೋ ಅವನು ನೀಚನಾಗಿದ್ದರೆ ಆ ದೇಶಕ್ಕೆ ಭಯವೂ, ಉಚ್ಚನಾಗಿದ್ದರೆ ಶುಭಪ್ರಾಪ್ತಿಯೂ ಆಗುವುದು.

ಏಷ ಕೂರ್ಮೋ ಮಯಾ ಖ್ಯಾತೋ ಭಾರತೇ ಭಗವಾನಿಹ ।
ನಾರಾಯಣೋ ಹ್ಯಚಿಂತ್ಯಾತ್ಮಾ ಯತ್ರ ಸರ್ವಂ ಪ್ರತಿಷ್ಠಿತಂ ॥ ೨೮ ॥
ಮೇಷವೃಷೌ ಹೃದೋ ಮಧ್ಯೇ ಮುಖೇ ಚ ಮಿಥುನಾದಿಕೌ ।
ಪ್ರಾಗ್ದಕ್ಷಿಣೇ ತಥಾ ಪಾದೇ ಕರ್ಕಸಿಂಹೌ ವ್ಯವಸ್ಥಿತೌ ॥ ೨೯ ॥
ಸಿಂಹಕನ್ಯಾತುಲಾಶ್ಚೈವ ಕುಕ್ಷೌ ರಾಶಿತ್ರಯಂ ಸ್ಮೃತಂ ।
ಘಟೋಽಥ ವೃಶ್ಚಿಕಾಶ್ಚೋಭೌ ಪಾದೇ ದಕ್ಷಿಣಪಶ್ಚಿಮೇ ॥ ೩೦ ॥
ಪುಚ್ಛೇ ತು ವೃಶ್ಚಿಕಶ್ಚೈವ ಸಧನುಶ್ಚ ವ್ಯವಸ್ಥಿತಃ ।
ವಾಯವ್ಯೇ ವಾಮಪಾದೇ ಚ ಧನುರ್ಗ್ರಾಹಾದಿಕಂ ತ್ರಯಂ ॥ ೩೧ ॥
ಕುಂಭಮೀನೌ ತಥಾ ಚಾಽಸ್ಯ ಉತ್ತರಾಂ ಕುಕ್ಷಿಮಾಶ್ರಿತೌ ।
ಮೀನಮೇಷೌ ಮಹಾದೇವಿ ಪಾದೇ ಪೂರ್ವೋತ್ತರೇ ಸ್ಥಿತೌ ॥ ೩೨ ॥
ಕೂರ್ಮದೇಶಾಂಸ್ತಥರ್ಕ್ಷಾಣಿ ದೇಶೇಷ್ವೇತೇಷ ವೈ ಪ್ರಿಯೇ ।
ರಾಶಯಶ್ಚ ತಥರ್ಕ್ಷೇಷು ಗ್ರಹಾ ರಾಶಿವ್ಯವಸ್ಥಿತಾಃ ॥ ೩೩ ॥
ತಸ್ಮಾದ್ಗ್ರಹರ್ಕ್ಷಪೀಡಾಸು ದೇಶಪೀಡಾಂ ವಿನಿರ್ದಿಶೇತ್ ।
ತತ್ರ ಸ್ನಾನಂ ಪ್ರಕುರ್ವಂತಿ ದಾನಂ ಹೋಮಾದಿಕಂ ತಥಾ ॥ ೩೪ ॥

---

೨೮. ಭಾರತವರ್ಷದಲ್ಲಿ ಕೂರ್ಮರೂಪಿಯಾದ ನಾರಾಯಣನು ಇರುವ ಕ್ರಮವನ್ನು ಹೇಳಿರುವೆನು. ಇವನಲ್ಲಿ ಎಲ್ಲವೂ ನೆಲೆಸಿರುವುದು.

೨೯–೩೨. ಮೇಷ, ವೃಷಭ, ಮಿಥುನ ರಾಶಿಗಳು ಈ ಕೂರ್ಮನ ಹೃದಯದ ಮಧ್ಯದಲ್ಲಿಯೂ, ಮತ್ತು ಮುಖದಲ್ಲಿಯೂ, ಕರ್ಕಟಕ ಸಿಂಹ ರಾಶಿಗಳು ಆಗ್ನೇಯ ಪಾದದಲ್ಲಿಯೂ, ಸಿಂಹ, ಕನ್ಯಾ, ತುಲಾರಾಶಿಗಳು ಹೊಟ್ಟೆಯಲ್ಲಿಯೂ, ಕುಂಭ, ವೃಶ್ಚಿಕ ರಾಶಿಗಳು ನೈಋತ್ಯಪಾದದಲ್ಲಿಯೂ, ವೃಶ್ಚಿಕ ಧನೂರಾಶಿಗಳು ಬಾಲದಲ್ಲಿಯೂ, ಧನುಸ್ಸು, ಮಕರ, ಕುಂಭರಾಶಿಗಳು ವಾಯವ್ಯ ಪಾದದಲ್ಲಿಯೂ, ಕುಂಭ ಮೀನ ರಾಶಿಗಳು ಉತ್ತರ ರೋದರದಲ್ಲಿಯೂ, ಮೀನ ಮೇಷ ರಾಶಿಗಳು ಈಶಾನ್ಯಪಾದದಲ್ಲಿಯೂ, ಇರುವುವು.

೩೩. ಕೂರ್ಮದ ಈ ಪ್ರದೇಶಗಳಲ್ಲಿ ನಕ್ಷತ್ರಗಳೂ, ನಕ್ಷತ್ರಗಳಲ್ಲಿ ರಾಶಿಗಳೂ, ರಾಶಿಗಳಲ್ಲಿ ಗ್ರಹಗಳೂ ಇರುವುವು.

೩೪. ಆದುದರಿಂದ ಗ್ರಹ ನಕ್ಷತ್ರಗಳ ಪೀಡೆಗಳಲ್ಲಿ ದೇಶಕ್ಕೆ ಪೀಡೆಯಾಗುವುದು. ಆ ಸಮಯದಲ್ಲಿ ಜನರು ಸ್ನಾನ, ದಾನ, ಹೋಮಾದಿಗಳನ್ನು ಮಾಡುವರು.

ಸ ಏಷ ವೈಷ್ಣವಃ ಪಾದೋ ದೇವಿ ಮಧ್ಯೇ ಗ್ರಹೋಽಸ್ಯ ಯಃ ।
ನಾರಾಯಣಾಖ್ಯೋಽಚಿಂತ್ಯಾತ್ಮಾ ಕಾರಣಂ ಜಗತಃ ಪ್ರಭುಃ ॥ ೩೫ ॥
ಭೌಮಶುಕ್ರಬುಧೇಂದ್ವರ್ಕಬುಧಶುಕ್ರಮಹೀಸುತಾಃ ।
ಗುರುಮಂದಾಸುರಾಚಾರ್ಯಾ ಮೇಷಾದೀನಾಮಧೀಶ್ವರಾಃ ॥ ೩೬ ॥
ಏವಂ ವಿಧೋ ಮಹಾದೇವಿ ಕೂರ್ಮರೂಪೀ ಜನಾರ್ದನಃ ।
ತಸ್ಯ ನೈರ್ಋತಪಾದೇ ತು ಸೌರಾಷ್ಟ್ರ ಇತಿ ವಿಶ್ರುತಃ ॥ ೩೭ ॥
ಸ ಚೈವಂ ನವಧಾ ಭಿನ್ನಃ ಪುರಭೇದೇನ ಸುಂದರಿ ।
ತಸ್ಯ ಯೋ ನವಮೋ ಭಾಗಃ ಸಾಗರಸ್ಯ ಚ ಸನ್ನಿಧೌ ॥ ೩೮ ॥
ಪ್ರಭಾಸ ಇತಿ ವಿಖ್ಯಾತೋ ಮಮ ದೇವಿ ಪ್ರಿಯಃ ಸದಾ ।
ಯೋಜನಾನಾಂ ದಶ ದ್ವೇ ಚ ವಿಸ್ತೀರ್ಣಃ ಪರಿಮಂಡಲಂ ॥ ೩೯ ॥
ಮಧ್ಯೇಽಸ್ಯ ಪೀಠಿಕಾ ಪ್ರೋಕ್ತಾ ಪಂಚಯೋಜನವಿಸ್ತೃತಾ ।
ತನ್ಮಧ್ಯೇ ಮದ್ಗೃಹಂ ದೇವಿ ತಿಷ್ಠತ್ಯುದಧಿಸನ್ನಿಧೌ ॥ ೪೦ ॥
ತಸ್ಯ ಮಧ್ಯೇ ಮಹಾದೇವಿ ಲಿಂಗರೂಪೋ ವಸಾಮ್ಯಹಂ ॥ ೪೧ ॥
ಕೃತಸ್ಮರಾತ್ಪಶ್ಚಿಮತೋ ಧನುಷಾಂ ಚ ಶತತ್ರಯೇ ।
ವಸಾಮಿ ತತ್ರ ದೇವೇಶಿ ತ್ವಯಾ ಸಹ ವರಾನನೇ ॥ ೪೨ ॥

---

೩೫. ದೇವಿ ! ಈ ಕೂರ್ಮನಲ್ಲಿರುವ ಗ್ರಹ ವಿಷ್ಣುವಿನ ಪಾದವು. ಆ ವಿಷ್ಣುವು ಅಚಿಂತ್ಯನೂ, ಜಗತ್ತಿಗೆ ಕಾರಣನೂ ಆಗಿರುವನು.

೩೬. ಮೇಷಾದಿ ರಾಶಿಗಳಿಗೆ ಕ್ರಮವಾಗಿ ಅಂಗಾರಕ,ಶುಕ್ರ, ಬುಧ,ಚಂದ್ರ ಗುರುಗಳು, ಸೂರ್ಯ ಬುಧ, ಶುಕ್ರ, ಅಂಗಾರಕ, ಗುರು ಶನಿ, ಶುಕ್ರರು ಅಧಿಪತಿಗಳು.

೩೭. ಇಂತಹ ಕೂರ್ಮರೂಪಿಯಾದ ವಿಷ್ಣುವಿನ ನೈರ್ಋತ್ಯ ದಿಕ್ಕಿನ ಪಾದದಲ್ಲಿ ಸೌರಾಷ್ಟ್ರ ದೇಶವಿರುವುದು.

೩೮–೩೯. ಸುಂದರಿ ! ಹೀಗೆ ಪಟ್ಟಣದ ಭೇದದಿಂದ ಒಂಬತ್ತು ವಿಧವಾದ ಆ ಸಮುದ್ರದ ಹತ್ತಿರವಿರುವ ಒಂಬತ್ತನೆಯ ಭಾಗವು ನನಗೆ ಪ್ರಿಯವಾದ ಪ್ರಭಾಸವೆಂದು ಪ್ರಸಿದ್ಧವಾಗಿದೆ. ಇದರ ಸುತ್ತಳತೆಯು ಹನ್ನೆರಡು ಗಾವುದವಾಗಿರುವುದು.

೪೦. ದೇವಿ ! ಇದರ ಮಧ್ಯದಲ್ಲಿ ಐದುಯೋಜನ ವಿಸ್ತೀರ್ಣದ ಪೀಠವಿರುವುದು. ಅದರ ಮಧ್ಯದಲ್ಲಿ ಸಮುದ್ರದ ಹತ್ತಿರ ನನ್ನ ಮನೆಯಿರುವುದು.

೪೧. ಅದರ ಮಧ್ಯದಲ್ಲಿ ಲಿಂಗರೂಪಿಯಾದ ನಾನು ವಾಸಿಸುತ್ತೇನೆ.

೪೨. ಸುಮುಖಿ ! ಅಲ್ಲಿ ಕೃತಸ್ಮರ ನಗರದ ಪಶ್ಚಿಮದಲ್ಲಿ ನೂರು ಬಿಲ್ಲಿನ ದೂರದಲ್ಲಿ ನಾನು ನಿನ್ನೊಡನೆ ವಾಸಿಸುವೆನು.

ತನ್ಮೇ ಸ್ಥಾನಂ ಮಹಾದೇವಿ ಕೈಲಾಸಾದಪಿ ವಲ್ಲಭಂ ।
ಗೋಚರ್ಮಮಾತ್ರಂ ತತ್ರಾಪಿ ಮಹಾಗೋಪ್ಯಂ ವರಾನನೇ ॥ ೪೩ ॥
ಅಕಥ್ಯಂ ದೇವದೇವೇಶಿ ತವ ಸ್ನೇಹಾತ್ಪ್ರಕಾಶಿತಂ ।
ಏತತ್ಪ್ರಾಭಾಸಿಕಂ ಕ್ಷೇತ್ರಂ ಪ್ರಭಯಾ ದೀಪಿತಂ ಮಮ ॥ ೪೪ ॥
ತೇನ ಪ್ರಭಾಸಮಿತ್ಯುಕ್ತಮಾದಿಕಲ್ಪೇ ವರಾನನೇ ।
ದ್ವಿತೀಯೇ ತು ಪ್ರಭಾ ಲಬ್ಧಾ ಸರ್ವೈರ್ದೇವೈಃ ಸವಾಸವೈಃ ॥ ೪೫ ॥
ಮಮ ಪ್ರಭಾ ಭಾ ದೇವೇಶಿ ತೇನ ಪ್ರಾಭಾಸಿಕಂ ಸ್ಮೃತಂ ।
ಪ್ರಭಾವವಂತೋ ದೇವೇಶಿ ಯತ್ರ ಸಂತಿ ಮಹಾಸುರಾಃ ॥ ೪೬ ॥
ಅಥವಾ ತೇನ ಲೋಕೇಷು ಪ್ರಭಾಸಮಿತಿ ಕೀರ್ತ್ಯತೇ ।
ಪ್ರಥಮಂ ಭಾಸತೇ ದೇವಿ ಸರ್ವೇಷಾಂ ಭುವಿ ತೇಜಸಾಂ ।
ತೀರ್ಥಾನಾಮಾದಿತೀರ್ಥಂ ಯತ್ಪ್ರಭಾಸಂ ತೇನ ಕೀರ್ತಿತಂ ॥ ೪೭ ॥
ಪ್ರಕೃಷ್ಟಂ ಭಾನುರಥವಾ ಭಾಸಿತೋ ವಿಶ್ವಕರ್ಮಣಾ ।
ಯತ್ರ ಸಾಕ್ಷಾತ್ಪ್ರಭಾಪಾತೋ ಜಾತಃ ಪ್ರಾಭಾಸಿಕಂ ತತಃ ॥ ೪೮ ॥
ಅಥವಾ ದಕ್ಷಸಂಶಪ್ತೇನೇಂದುನಾ ನಿಷ್ಪ್ರಭೇಣ ಚ ।
ತತ್ರ ದೇವಿ ಪ್ರಭಾ ಲಬ್ಧಾ ತೇನ ಪ್ರಾಭಾಸಿಕಂ ಸ್ಮೃತಂ ।
ಪ್ರೋದ್ಧೃತ್ಯ ಭಾರತೀ ದೇವಿ ಹ್ಯೌರ್ವಾಗ್ನಿಂ ವಡವಾನಲಂ ॥ ೪೯ ॥

---

೪೩. ಮಹಾದೇವಿ ! ಅಲ್ಲಿರುವ ಗೋಚರ್ಮ ಪ್ರಮಾಣದ ಅತಿ ಗೋಪ್ಯವಾದ ನನ್ನ ಆ ಸ್ಥಾನವು ಕೈಲಾಸಕ್ಕಿಂತಲೂ ನನಗೆ ಪ್ರಿಯವಾದುದು.

೪೪–೪೬. ದೇವೇಶಿ ! ಯಾರಿಗೂ ಹೇಳಬಾರದ ರಹಸ್ಯವಾದ ಈ ಪ್ರಭಾಸ ಕ್ಷೇತ್ರವನ್ನು ನಾನು ನಿನ್ನಲ್ಲಿರುವ ಸ್ನೇಹದಿಂದ ಹೇಳಿರುವೆನು. ಇದು ನನ್ನ ಪ್ರಭೆಯಿಂದ ಪ್ರಕಾಶಗೊಂಡುದರಿಂದ ಆದಿಕಲ್ಪದಲ್ಲಿ ಪ್ರಭಾಸವೆಂದು ಪ್ರಸಿದ್ಧಿಗೊಂಡಿತು. ಎರಡನೆಯ ಕಲ್ಪದಲ್ಲಿ ಇಂದ್ರನೇ ಮೊದಲಾದ ದೇವತೆಗಳು ಇಲ್ಲಿ ನನ್ನ ಪ್ರಭೆಯಂತಿರುವ ಪ್ರಭೆಯನ್ನು ಹೊಂದಿದ ಕಾರಣ ಪ್ರಾಭಾಸಿಕವೆಂದಾಯಿತು. ಇಲ್ಲಿ ಪ್ರಭೆಯುಳ್ಳ ಮಹಾದೈತ್ಯರು ನೆಲೆಸಿರುವರು.

೪೭. ಅಥವಾ ಭೂಮಿಯಲ್ಲಿ ಸಕಲ ತೇಜಸ್ಸುಗಳಿಗಿಂತ ಮೊದಲು ಪ್ರಕಾಶ ಗೊಂಡು ತೀರ್ಥಗಳಲ್ಲಿ ಮೊದಲನೆ ತೀರ್ಥವಾಗಿರುವುದರಿಂದ ಪ್ರಭಾಸವೆಂದಾಯಿತು.

೪೮. ಅಥವಾ ವಿಶ್ವಕರ್ಮನು ಸೂರ್ಯನನ್ನು ಪ್ರಕಾಶಗೊಳಿಸಿ ಪ್ರಭೆಯನ್ನುಂಟು ಮಾಡಿದ್ದರಿಂದ ಪ್ರಾಭಾಸಿಕವೆಂದಾಯಿತು.

೪೯–೫೦. ಅಥವಾ ದಕ್ಷನಿಂದ ಶಾಪವನ್ನು ಹೊಂದಿದ ಪ್ರಭೆಯಿಲ್ಲದ ಚಂದ್ರನು ಇಲ್ಲಿ ಪ್ರಭೆಯನ್ನು ಹೊಂದಿದ್ದರಿಂದ ಪ್ರಾಭಾಸಿಕವೆಂದಾಯಿತು. ಅಥವಾ ಭಾರತೀ

ಅಥವಾತೇನ ದೇವೇಶಿ ಪ್ರಭಾಸಮಿತಿ ಕೀರ್ತ್ಯತೇ ।
ಪ್ರಕೃಷ್ಟಾ ಭಾರತೀ ಬ್ರಾಹ್ಮೀ ವಿಪ್ರೋಕ್ತಾ ಶ್ರೂಯತೇಽಧ್ವನಿ ।
ಸದಾ ಯತ್ರ ಮಹಾದೇವಿ ಪ್ರಭಾಸಂ ತೇನ ಕೀರ್ತಿತಂ ॥ ೫೦ ॥
ಪ್ರೋಲ್ಲಸದ್ವೀಚಿಭಿರ್ಭಾತಿ ಸರ್ವದಾ ಸಾಗರಃ ಪ್ರಿಯೇ ।
ತೇನ ಪ್ರಭಾಸನಾಮೇತಿ ತ್ರಿಷು ಲೋಕೇಷು ವಿಶ್ರುತಂ ॥ ೫೧ ॥
ಪ್ರತ್ಯಕ್ಷಂ ಭಾಸ್ಕರೋ ಯತ್ರ ಸದಾ ತಿಷ್ಠತಿ ಭಾಮಿನಿ ।
ತೇನ ಪ್ರಭಾಸನಾಮೇತಿ ಪ್ರಸಿದ್ಧಿಮಗಮತ್ ಕ್ಷಿತೌ ॥ ೫೨ ॥
ಪ್ರಕೃಷ್ಟಂ ಭಾವಿನಾಂ ಸರ್ವಂ ಕಾಮಂ ತತ್ರ ದದ್ಯಾಮ್ಯಹಂ ।
ತೇನ ಪಭಾಸನಾಮೇತಿ ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೫೩ ॥
ಕಲ್ಪಭೇದೇನ ನಾಮಾನಿ ತಥೈವ ಸುರಸುಂದರಿ ।
ನಿರುಕ್ತಭೇದೈರ್ಬಹುಧಾ ಭಿದ್ಯಂತೇ ಕಾರಣೈಃ ಪ್ರಿಯೇ ।
ಪ್ರಭಾಸಮಿತಿ ಯನ್ನಾಮ ದಾತವ್ಯಂ ನಿಶ್ಚಲಂ ಸ್ಮೃತಂ ॥ ೫೪ ॥
ಆಪ್ತತ್ತ್ವೇಸಂಸ್ಥಿತಂ ದೇವಿ ವಿಷ್ಣೋರಾದ್ಯಕಲೇವರೇ ।
ಇತಿ ತೇ ಕಥಿತಂ ದೇವಿ ಸಂಕ್ಷೇಪಾತ್ ಕ್ಷೇತ್ರಕಾರಣಂ ॥ ೫೫ ॥

ದೇವಿಯು ಬಡವಾಗ್ನಿಯನ್ನು ಉದ್ಧರಿಸಿದ್ದರಿಂದ ಪ್ರಭಾಸವೆಂದಾಯಿತು. ಮಹಾದೇವಿ! ಅಥವಾ ವಿಪ್ರರು ಪಾರಾಯಣ ಮಾಡಿದ ವೇದ ಪಾರಾಯಣ ಧ್ವನಿಯು ಆಕ್ಷೇತ್ರದ ದಾರಿಯಲ್ಲಿ ಯಾವಾಗಲೂ ಕೇಳುವುದರಿಂದ ಅದು ಪ್ರಭಾಸವೆಂದಾಯಿತು.

೫೧. ಅಥವಾ ಸಮುದ್ರವು ಯಾವಾಗಲೂ ಅಲ್ಲಿ ಪ್ರಕಾಶಮಾನವಾದ ಅಲೆಗಳಿಂದ ಕಂಗೊಳಿಸುವ ಕಾರಣ ಪ್ರಭಾಸವೆಂದು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಯಿತು.

೫೨. ಆ ಕ್ಷೇತ್ರದಲ್ಲಿ ಸೂರ್ಯನು ಯಾವಾಗಲೂ ಪ್ರತ್ಯಕ್ಷನಾಗಿರುವುದರಿಂದ ಪ್ರಭಾಸವೆಂದು ಪ್ರಸಿದ್ಧಿಗೊಂಡಿತು.

೫೩. ನಾನು ಅಲ್ಲಿ ಧ್ಯಾನಿಸುವ ಭಕ್ತರ ಉತ್ತಮಾಭೀಷ್ಟವನ್ನು ಈಡೇರಿಸಿ ಕೊಡುವುದರಿಂದ ಆ ತೀರ್ಥವು ಪ್ರಭಾಸವೆಂದು ಪ್ರಸಿದ್ಧವಾಯಿತು.

೫೪. ದೇವಿ ! ಪ್ರತಿಕಲ್ಪದಲ್ಲಿಯೂ ಹಿಂದೆ ಹೇಳಿದ ಪ್ರಭೇದಗಳಿಂದಲೂ ಕಾರಣಗಳಿಂದಲೂ ಈ ಕ್ಷೇತ್ರದ ಹೆಸರುಗಳು ಬೇರೆಯಾಗುವುವು. ಪ್ರಭಾಸವೆಂಬ ಹೆಸರು ಮಾತ್ರ ಸ್ಥಿರವಾಗಿರುವುದು.

೫೫. ದೇವಿ ! ಈ ಕ್ಷೇತ್ರವು ವಿಷ್ಣುವಿನ ಮೊದಲಿನ ಶರೀರವಾದ ಜಲತತ್ತ್ವದಲ್ಲಿರುವುದು. ಹೀಗೆ ನಿನಗೆ ಸಂಕ್ಷೇಪವಾಗಿ ಕ್ಷೇತ್ರದ ಕಾರಣವನ್ನು ಕೇಳಿರುವೆನು.

ಪುನಸ್ತೇ ಕಥಯಾಮ್ಯದ್ಯ ಯತ್ಪೃಚ್ಛಸಿ ವರಾನನೇ ।
ತದ್ಬ್ರೂಹಿ ಶೀಘ್ರಂ ಕಲ್ಯಾಣಿ ಯತ್ತೇ ಮನಸಿ ವರ್ತತೇ ॥ ೫೬ ॥
ದೇವ್ಯುವಾಚಃ—
ಅಸ್ಮಿನ್ಕಲ್ಪೇ ಯಥಾ ಜಾತಂ ಕ್ಷೇತ್ರಂ ಪ್ರಾಭಾಸಿಕಂ ಹರ ।
ತನ್ಮೇ ವಿಸ್ತರಶೋ ಬ್ರೂಹಿ ಉತ್ಪತ್ತಿಂ ಕಾರಣಂ ತಥಾ ॥ ೫೭ ॥
ಈಶ್ವರ ಉವಾಚಃ—
ಶೃಣು ದೇವಿ ಪ್ರವಕ್ಷ್ಯಾಮಿ ಯಥಾವತ್ಕ್ಷೇತ್ರಕಾರಣಂ ।
ಯಚ್ಛ್ರುತ್ವಾ ಮಾನವೋ ಭಕ್ತ್ಯಾ ಮುಚ್ಯತೇ ಸರ್ವಪಾತಕೈಃ ॥ ೫೮ ॥
ಆದಿಕ್ಷೇತ್ರಸ್ಯ ಮಾಹಾತ್ಮ್ಯಂ ರಹಸ್ಯಂ ಪಾಪನಾಶನಂ ।
ಕಥಯಿಷ್ಯೇ ವರಾರೋಹೇ ತವ ಸ್ನೇಹೇನ ಭಾಮಿನಿ ॥ ೫೯ ॥
ಅಸ್ಮಿನ್ ಕಲ್ಪೇ ತು ಯದ್ದೇವಿ ಆದಾವೇವ ವರಾನನೇ ।
ಸ್ವಾಯಂಭವೇ ಮನೌ ತತ್ರ ಬ್ರಹ್ಮಣಃ ಸೃಜತಃ ಪುರಾ ॥ ೬೦ ॥
ದಕ್ಷಿಣಾಲ್ಲೋಚನಾಜ್ಜಾತಃ ಪೂರ್ವಂ ಸೂರ್ಯ ಇತಿ ಪ್ರಿಯೇ ।
ತತಃ ಕಾಲಾಂತರೇ ತಸ್ಯ ಭಾರ್ಯೇ ದ್ವೇ ಚ ಬಭೂವತುಃ ॥ ೬೧ ॥
ತಯೋಸ್ತು ರಾಜ್ಞೀ ದ್ಯೌರ್ಜ್ಞೇಯಾ ನಿಕ್ಷುಭಾ ಪೃಥಿವೀ ಸ್ಮೃತಾ ।
ಸೌಮ್ಯಮಾಸಸ್ಯಸಪ್ತಮ್ಯಾಂ ದ್ಯೌಃ ಸೂರ್ಯೇಣ ಚ ಯುಜ್ಯತೇ ॥ ೬೨ ॥

---

೫೬. ಸುಮುಖಿ ! ಮರಳಿ ನೀನು ಏನು ಪ್ರಶ್ನೆಮಾಡಿದರೂ ಅದಕ್ಕೆ ಉತ್ತರ ವನ್ನೀಯುವೆನು. ಶೀಘ್ರವಾಗಿ ನಿನ್ನ ಮನಸ್ಸಿನಲ್ಲಿರುವುದನ್ನು ಹೇಳು.

೫೭. ದೇವಿಯು ಕೇಳುತ್ತಾಳೆ:—ಮಹೇಶ್ವರ ! ಈ ಕಲ್ಪದಲ್ಲಿ ಪ್ರಭಾಸಕ್ಷೇತ್ರ ಹೇಗೆ ಉಂಟಾಯಿತು ? ಅದರ ಉತ್ಪತ್ತಿ ಕ್ರಮವನ್ನೂ, ಕಾರಣವನ್ನೂ ವಿಸ್ತಾರವಾಗಿ ಹೇಳು.

೫೮. ಈಶ್ವರನು ಹೇಳುತ್ತಾನೆ:—ದೇವಿ ! ಕೇಳು ಈ ಕ್ಷೇತ್ರದ ಉತ್ಪತ್ತಿ ಗೆ ಕಾರಣವನ್ನು ಹೇಳುವೆನು. ಇದನ್ನು ಕೇಳಿದ ಮಾನವನು ಸಕಲ ಪಾಪಗಳಿಂದಲೂ ಮುಕ್ತನಾಗುವನು.

೫೯. ಪ್ರಿಯಳೆ ! ನನಗೆ ನಿನ್ನಲ್ಲಿರುವ ಪ್ರೀತಿಯಿಂದ ಆದಿ ಕ್ಷೇತ್ರವಾದ ಈ ಪ್ರಭಾಸದ ರಹಸ್ಯವೂ, ಪಾಪಪರಿಹಾರಕವೂ ಆದ ಮಾಹಾತ್ಮ್ಯವನ್ನು ಹೇಳುವೆನು.

೬೦-೬೨. ದೇವಿ! ಈ ಪೂರ್ವದಲ್ಲಿ ಸ್ವಾಯಂಭುವಮನುವಿನ ಕಲ್ಪದ ಆದಿಯಲ್ಲಿ ಜಗತ್ತನ್ನು ಸೃಜಿಸುತ್ತಿದ್ದ ಬ್ರಹ್ಮನ ಬಲಗಣ್ಣಿನಿಂದ ಸೂರ್ಯನುಹುಟ್ಟಿದನು. ಬಳಿಕ ಕಾಲ ಕ್ರಮದಿಂದ ಅವನಿಗೆ ಆಕಾಶ ಭೂಮಿಗಳೆಂಬ ಇಬ್ಬರು ಪತ್ನಿಯರಾದರು. ಸೂರ್ಯನ ಮಾರ್ಗಶೀರ್ಷಮಾಸದ ಸಪ್ತಮಿಯ ದಿನ ಆಕಾಶದೊಡನೆ (ದ್ಯೌ ಒಡನೆ) ಸೇರುವನು.

ಮಾಘಮಾಸೇ ತು ಸಪ್ತಮ್ಯಾಂ ಮಹ್ಯಾ ಸಹ ಭವೇದ್ರವಿಃ ।
ಭೂಶ್ಚಾಽಽದಿತ್ಯಶ್ಚ ಭಗವಾನ್ ಗಚ್ಛತೇ ಸಂಗಮಂ ತದಾ ॥ ೬೩ ॥
ಋತುಸ್ನಾತಾ ಮಹೀ ತತ್ರ ಗರ್ಭಂ ಗೃಹ್ಣಾಂತಿ ಭಾಸ್ಕರಾತ್ ।
ದ್ಯೌರ್ಜಲಂ ಸೂಯತೇ ಗರ್ಭಂ ವರ್ಷಾಸ್ವಿಹ ಚ ಭೂತಲೇ ॥ ೬೪ ॥
ತತಸ್ತ್ರೈಲೋಕ್ಯವೃತ್ತ್ಯರ್ಥಂ ಮಹೀ ಸಸ್ಯಾನಿ ಸೂಯತೇ ।
ಸಸ್ಯೋಪಯೋಗಾತ್ಸಂಹೃಷ್ಟಾ ಜುಹ್ವತ್ಯಾಹುತಿಭಿರ್ದ್ವಿಜಾಃ ॥ ೬೫ ॥
ಸ್ವಾಹಾಕಾರಸ್ವಧಾಕಾರೈರ್ಯಜಂತಿ ಪಿತೃದೇವತಾಃ ।
ನಿಃಕ್ಷುಭಃಕುರುತೇ ಯಸ್ಮಾದ್ಗರ್ಭೌಷಧಿಸುಧಾವೃತೈಃ ॥ ೬೬ ॥
ಮರ್ತ್ಯಾನ್ ಪಿತ್ರ್ಯಾಂಶ್ಚ ದೇವಾಂಶ್ಚ ತೇನ ಭೂರ್ನಿಕ್ಷುಭಾ ಸ್ಮೃತಾ ।
ಯಥಾ ರಾಜ್ಞೀ ಚ ಸಂಜಾತಾ ಯ ಸ್ಯಚೇಯಂ ಸುತಾ ಮತಾ ॥ ೬೭ ॥
ಅಪತ್ಯಾನಿ ಚ ಯಾನ್ಯಸ್ಯಾಸ್ತಾನಿ ವಕ್ಷ್ಯಾಮ್ಯಶೇಷತಃ ।
ಮರೀಚಿರ್ಬ್ರಹ್ಮಣಃ ಪುತ್ರೋ ಮಾರೀಚಃ ಕಶ್ಯಪಃ ಸ್ಮೃತಃ ॥ ೬೮ ॥
ತಸ್ಮಾದ್ಧಿರಣ್ಯಕಶಿಪುಃ ಪ್ರಹ್ಲಾದಸ್ತಸ್ಯ ಚಾಽಽತ್ಮಜಃ ।
ಪ್ರಹ್ಲಾದಸ್ಯ ಸುತೋ ನಾಮ್ನಾ ವಿರೋಚನ ಇತಿ ಸ್ಮೃತಃ ॥ ೬೯ ॥

---

೬೩. ಹಾಗೆಯೇ ಮಾಘಮಾಸದ ಸಪ್ತಮಿಯ ದಿನ ಆ ಸೂರ್ಯನು ಭೂಮಿಯೊಡನೆ ಸೇರುವನು.

೬೪. ಋತುಸ್ನಾನಮಾಡಿದ ಭೂಮಿಯು ಆಗ ಸೂರ್ಯನಿಂದ ಗರ್ಭವನ್ನು ಧರಿಸುವಳು. ಗರ್ಭವನ್ನು ಧರಿಸಿದ ಆಕಾಶವು ಮಳೆಗಾಲದಲ್ಲಿ ಭೂಮಿಯಲ್ಲಿ ನೀರನ್ನು ಸುರಿಸುವುದು.

೬೫-೬೮. ಬಳಿಕ ಈ ಭೂಮಿಯು ಮೂರುಲೋಕದ ಪ್ರಾಣಿಗಳ ಜೀವನಕ್ಕಾಗಿ ಸಸ್ಯಗಳನ್ನು ಹೆರುವಳು. ಆ ಸಸ್ಯಗಳ ಉಪಯೋಗದಿಂದ ಸಂತುಷ್ಟರಾದ ಬ್ರಾಹ್ಮಣರು ಆಹುತಿಗಳಿಂದ ಸ್ವಾಹಾಕಾರ ಸ್ವಧಾಕಾರವನ್ನುಚ್ಚರಿಸಿ ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಹೋಮಿಸುವರು. ಈ ಭೂಮಿಯು ತನ್ನ ಗರ್ಭವಾದ ಸಸ್ಯಗಳೆಂಬ ಅಮೃತದಿಂದ ಮನುಷ್ಯ, ಪಿತೃ, ದೇವತೆಗಳನ್ನು ತೃಪ್ತಿಗೊಳಿಸಿ ಹಸಿವಿಲ್ಲದವರನ್ನಾಗಿ ಮಾಡುವುದರಿಂದ ನಿಕ್ಷುಭಾ ಎಂದು ಪ್ರಸಿದ್ಧಳಾದಳು. ಈ ಭೂಮಿಯು ಮಹಾರಾಜ್ಞಿಯಾದುದು ಹೇಗೆ? ಈಕೆ ಯಾರ ಮಗಳು? ಎಂಬುದನ್ನೂ ಇವಳ ಮಕ್ಕಳನ್ನೂ ಸಂಪೂರ್ಣವಾಗಿ ಹೇಳುವೆನು. ಬ್ರಹ್ಮನ ಮಗನಾದ ಮರೀಚಿಯಿಂದ ಕಶ್ಯಪನು ಜನಿಸಿದನು.

೬೯. ಅವನಿಂದ ಹಿರಣ್ಯಕಶಿಪುವೂ, ಅವನಿಂದ ಪ್ರಹ್ಲಾದನೂ, ಅವನಿಂದ ವಿರೋಚನನೂ ಹುಟ್ಟಿದನು.

ವಿರೋಚನಸ್ಯ ಭಗಿನೀ ಸಂಜ್ಞಾಯಾ ಜನನೀ ತು ಸಾ
ಹಿರಣ್ಯಕಶಿಪೋಃ ಪೌತ್ರೀ ದಿತೇಃ ಪುತ್ರಸ್ಯ ಸಾ ಸ್ಮೃತಾ || ೭೦ ||
ಸಾ ವಿಶ್ವಕರ್ಮಣಃ ಪತ್ನೀ ಪ್ರಾಹ್ಲಾದೀ ಪ್ರೋಚ್ಯತೇ ಬುಧೈಃ || ೭೧ ||
ಅಥ ನಾಮ್ನಾಽತಿರೂಪೇತಿ ಮರೀಚಿದುಹಿತಾ ಶುಭಾ ।
ಪತ್ನೀ ಹ್ಯಂಗಿರಸಃ ಸಾ ತು ಜನನೀ ಚ ಬೃಹಸ್ಪತೇಃ || ೭೨ ||
ಬೃಹಸ್ಪತೇಸ್ತು ಭಗನೀ ವಿಶ್ರುತಾ ಬ್ರಹ್ಮವಾದಿನೀ ।
ಪ್ರಭಾಸಸ್ಯ ತು ಸಾ ಪತ್ನೀ ವಸೂನಾಮಷ್ಟಮಸ್ಯ ವೈ || ೭೩ ||
ಪ್ರಸೂತಾ ವಿಶ್ವಕರ್ಮಾಣಂ ಸರ್ವಶಿಲ್ಪವತಾಂ ವರಂ ।
ಸ ಚೈವ ನಾಮ್ನಾ ತ್ವಷ್ಟಾ ತು ಪುನಸ್ತ್ರಿದಶವಾರ್ಧಕಿಃ || ೭೪ ||
ದೇವಾಚಾರ್ಯಸ್ಯ ತಸ್ಯೇಯಂ ದುಹಿತಾ ವಿಶ್ವಕರ್ಮಣಃ ।
ಸುರೇಣುರಿತಿ ವಿಖ್ಯಾತಾ ತ್ರಿಷು ಲೋಕೇಷು ಭಾಮಿನೀ || ೭೫ ||
ಪ್ರಾಹ್ಲಾದಪುತ್ರೀ ಯಾ ಪ್ರೋಕ್ತಾ ಭಾರ್ಯಾ ವಷ್ಟುಸ್ತು ಸಾ ಸ್ಮೃತಾ ।
ತಸ್ಯಾಂ ಸ ಜನಯಾಮಾನ ಪುತ್ರೀಸ್ತಾ ಲೋಕಮಾತರಃ || ೭೬ ||
ರಾಜ್ಞೀ ಸಂಜ್ಞಾ ಚ ದ್ಯೌಸ್ತ್ವಷ್ಟ್ರೀ ಪ್ರಭಾ ಸೈವ ವಿಭಾವ್ಯತೇ ।
ತಸ್ಯಾಸ್ತು ವಲಯಾ ಛಾಯಾ ನಿಕ್ಷುಭಾ ಸಾ ಮಹೀಯಸೀ || ೭೭ ||

೭೦–೭೧. ವಿರೋಚನನ ಸಹೋದರಿಯೂ, ಸಂಜ್ಞೆಯ ತಾಯಿಯೂ ದ್ವಿತೀಯ ತನಯನಾದ ಹಿರಣ್ಯಕಶಿಪುವಿನ ಮೊಮ್ಮಗಳೂ, ಆದ ಪ್ರಹ್ಲಾದನ ಮಗಳು ವಿಶ್ವಕರ್ಮನ ಪತ್ನಿಯಾಗಿ ಪ್ರಾಹ್ಲಾದಿಯೆಂದು ಪ್ರಸಿದ್ಧಳಾದಳು.

೭೨. ಮರೀಚಿಯ ಮಗಳಾದ ಅತಿರೂಪೆಯು ಅಂಗಿರಸ್ಸನ ಪತ್ನಿಯಾಗಿ ಬೃಹಸ್ಪತಿಗೆ ತಾಯಿಯಾದಳು.

೭೩. ಬೃಹಸ್ಪತಿಯ ಸಹೋದರಿಯೂ ಬ್ರಹ್ಮಜ್ಞಾನವುಳ್ಳವಳೂ ಆದ ವಿಶ್ರುತೆಯು ಪ್ರಭಾಸನೆಂಬ ಎಂಟನೆಯ ವಸುವಿನ ಪತ್ನಿಯಾದಳು

೭೪. ಅವಳು ಸಕಲ ಶಿಲ್ಪಿಗಳಲ್ಲಿ ಉತ್ತಮನಾದ ವಿಶ್ವಕರ್ಮನನ್ನು ಹೆತ್ತಳು. ದೇವತೆಗಳ ಬಡಗಿಯಾದ ಆ ವಿಶ್ವಕರ್ಮನು ತ್ವಷ್ಟೃ ಎಂಬ ಹೆಸರಿನಿಂದ ಪ್ರಸಿದ್ಧಿಗೊಂಡನು.

೭೫. ಬೃಹಸ್ಪತಿಯ ಮಗಳೂ ಮೂರು ಲೋಕಗಳಲ್ಲಿ ಪ್ರಸಿದ್ಧಳೂ ಆದ ಸುರೇಣು ವೆಂಬುವಳು ವಿಶ್ವಕರ್ಮನಿಗೆ ಸತಿಯಾದಳು.

೭೬. ವಿಶ್ವಕರ್ಮನ ಮತ್ತೊಬ್ಬ ಹೆಂಡತಿಯಾದ ಪ್ರಾಹ್ಲಾದಿಯು ಪತಿಯಿಂದ ಲೋಕಮಾತೆಯರಾದ ಕನ್ಯೆಯರನ್ನು ಪಡೆದಳು.

೭೭. ಆ ಕನ್ಯೆಯೇ ರಾಜ್ಞೀ, ಸಂಜ್ಞಾ, ದ್ಯೌ, ತ್ವಷ್ಟ್ರೀ ಪ್ರಭಾಯೆಂದು ಪ್ರಸಿದ್ಧಳು. ಅವಳ ವರ್ತುಳಾಕಾರವಾದ ಛಾಯೆಯು ಬಹಳ ದೊಡ್ಡದಾಗಿರುವುದು.

ಸಾ ತು ಭಾರ್ಯಾ ಭಗವತೀ ಮಾರ್ತಂಡಸ್ಯ ಮಹಾತ್ಮನಃ ।
ಸಾಧ್ವೀ ಪತಿವ್ರತಾ ದೇವೀ ರೂಪಯೌವನಶಾಲಿನೀ ॥ ೭೮ ॥
ನ ತು ತಾಂ ನರರೂಪೇಣ ಭಾರ್ಯಾಂ ಭಜತಿ ವೈ ಪುರಾ ।
ಆದಿತ್ಯಸ್ಯೇಹತಸ್ತತ್ತ್ವಂ ಮಹತಾ ಸ್ವೇನ ತೇಜಸಾ ॥ ೭೯ ॥
ಗಾತ್ರೇಷ್ವಪ್ರತಿರೂಪೇಷು ಮಾಸಿಕಾಂತಮಿವಾಽಭವತ್ ।
ಸಂಜ್ಞಾ ಚ ರವಿಣಾ ದೃಷ್ಟ್ವಾ ನಿಮೀಲಯತಿ ಲೋಚನೇ ।
ಯತಸ್ತತಃ ಸರೋಷೋಽರ್ಕಃ ಸಂಜ್ಞಾಂ ವಚನಮಬ್ರವೀತ್ ॥ ೮೦ ॥

ರವಿರುವಾಚ :—

ಮಯಿ ದೃಷ್ಟೇ ಸದಾ ಯಸ್ಮಾತ್ಕುರುಷೇ ನೇತ್ರಸಂಕ್ಷಯಂ ।
ತಸ್ಮಾಜ್ಜನಿಷ್ಯಸೇ ಮೂಢೇ ಪ್ರಜಾಸಂಯಮನಂ ಯಮಂ ॥ ೮೧ ॥

ಈಶ್ವರ ಉವಾಚ :—

ತತಃ ಸಾ ಚಪಲಾಂ ದೃಷ್ಟಿಂ ದೇವೀ ಚಕ್ರೇ ಭಯಾಕುಲಾ ।
ವಿಲೋಲಿತದೃಶಂ ದೃಷ್ಟ್ವಾ ಪುನರಾಹ ಚ ತಾಂ ರವಿಃ ॥ ೮೨ ॥

ರವಿರುವಾಚ :—

ಯಸ್ಮಾದ್ವಿಲೋಲಿತಾ ದೃಷ್ಟಿರ್ಮಯಿ ದೃಷ್ಟೇ ತ್ವಯಾ ಪುನಃ ।
ತಸ್ಮಾದ್ವಿಲೋಲಾಂ ತನಯಾಂ ನದೀಂ ತ್ವಂ ಪ್ರಸವಿಷ್ಯಸಿ ॥ ೮೩ ॥

---

೭೮. ಸೌಂದರ್ಯ, ಯೌವನವುಳ್ಳವಳೂ ಪತಿವ್ರತೆಯೂ ಆದ ಆ ಸಂಜ್ಞೆಯು ಮಹಾತ್ಮನಾದ ಸೂರ್ಯನಿಗೆ ಹೆಂಡತಿಯಾದಳು.

೭೯. ಸೂರ್ಯನು ಮನುಷ್ಯರೂಪದಿಂದ ಆ ಪತ್ನಿಯನ್ನು ಸೇರುತ್ತಿರಲಿಲ್ಲ. ಸುಂದರವಾದ ಅವಳ ದೇಹವು ತೇಜಸ್ಸಿನ ತಾಪದಿಂದ ಅತ್ಯಂತ ಕಪ್ಪಾಯಿತು.

೮೦. ಸೂರ್ಯನನ್ನು ನೋಡಿದ ಕೂಡಲೆ ಸಂಜ್ಞೆಯು ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದುದರಿಂದ ಕುಪಿತನಾದ ಅವನು ಆ ಸಂಜ್ಞೆಯನ್ನು ಕುರಿತು ಇಂತೆಂದನು.

೮೧. ಸೂರ್ಯನು ಹೇಳುತ್ತಾನೆ:—ಮೂಢಳೆ ! ನಾನು ನೋಡಿದ ಕೂಡಲೆ ನೀನು ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿರುವುದರಿಂದ ಪ್ರಜೆಗಳನ್ನು ಸಂಹರಿಸುವ ಯಮನನ್ನು ಹಡೆಯುವೆ.

೮೨. ಬಳಿಕ ಆ ಸಂಜ್ಞೆಯು ಭಯದಿಂದ ಚಪಲದೃಷ್ಟಿಯುಳ್ಳವಳಾಗಲು ಸೂರ್ಯನು ಅದನ್ನು ಕಂಡು ಮರಳಿ ಇಂತೆಂದನು

೮೩. ಸೂರ್ಯನು ಹೇಳುತ್ತಾನೆ :—ನಾನು ನೋಡಿದ ಕೂಡಲೆ ನೀನು ದೃಷ್ಟಿಯನ್ನು ಚಂಚಲಗೊಳಿಸಿದ್ದರಿಂದ ಚಂಚಲನದೀರೂಪಳಾದ ಮಗಳನ್ನು ಪಡೆಯುವೆ.

ಈಶ್ವರ ಉವಾಚ :—
ತತಸ್ತಸ್ಯಾಸ್ತು ಸಂಜಜ್ಞೇ ಭರ್ತೃಶಾಪೇನ ತೇನ ವೈ ।
ಯಮಶ್ಚ ಯಮುನಾ ಚೇಯಂ ಪ್ರಖ್ಯಾತಾ ಸುಮಹಾನದೀ ।
ತೃತೀಯಂ ಚ ಸುತಂ ಜಜ್ಞೇ ಶ್ರಾದ್ಧದೇವಂ ಮನುಂ ಶುಭಂ ॥ ೮೪ ॥
ಸಾಽಪಿ ಸಂಜ್ಞಾ ರವೇಸ್ತೇಜೋ ಗೋಲಾಕಾರಂ ಮಹಾಪ್ರಭಂ ।
ಅಸಹಂತೀ ಚ ಸಾ ಚಿತ್ತೇ ಚಿಂತಯಾಮಾಸ ವೈ ತದಾ ॥ ೮೫ ॥
ಕಿಂ ಕರೋಮಿ ಕ್ವ ಯಾಸ್ಯಾಮಿ ಕ್ವ ಗತಾಯಾಶ್ಚ ನಿರ್ವೃತಿಃ ।
ಭವೇನ್ಮಮ ಕಥಂ ಭರ್ತಾ ಕೋಪಮರ್ಕಶ್ಚ ನೇಷ್ಯತಿ ॥ ೮೬ ॥
ಇತಿ ಸಂಚಿಂತ್ಯ ಬಹುಧಾ ಪ್ರಜಾಪತಿಸುತಾ ತದಾ ।
ಬಹುಮೇನೇ ಮಹಾಭಾಗಾ ಪಿತೃಸಂಶ್ರಯಮೇವ ಚ ॥ ೮೭ ॥
ತತಃ ಪಿತೃಗೃಹಂ ಗಂತುಂ ಕೃತಬುದ್ಧಿರ್ಯಶಸ್ವಿನೀ ।
ಛಾಯಾಮಯೀಮಾತ್ಮತನುಂ ಪ್ರತ್ಯಂಗಮಿವ ನಿರ್ಮಿತಾಂ ॥ ೮೮ ॥
ಸಮ್ಮುಖಂ ಪ್ರೇಕ್ಷ್ಯ ತಾಂ ದೇವೀಂ ಸ್ವಾಂ ಛಾಯಾಂ ವಾಕ್ಯಮಬ್ರವೀತ್ ॥
ಸಂಜ್ಞೋವಾಚ—
ಅಹಂ ಯಾಸ್ಯಾಮಿ ಭದ್ರಂ ತೇ ಸ್ವಕಂ ಚ ಭವನಂ ಪಿತುಃ ।
ನಿರ್ವಿಕಾರಂ ತ್ವಯಾ ತ್ವತ್ರ ಸ್ಥೇಯಂ ಮಚ್ಛಾಸನಾಚ್ಛುಭೇ ॥ ೯೦ ॥

---

೮೪. ಈಶ್ವರನು ಹೇಳುತ್ತಾನೆ:—ಬಳಿಕ ಆ ಪತಿಯ ಶಾಪದಿಂದ ಸಂಜ್ಞೆಗೆ ಯಮ, ಯಮುನಾ ನದಿ, ಮನು ಎಂದು ಮೂವರು ಮಕ್ಕಳು ಜನಿಸಿದರು.

೮೫. ಆ ಸಂಜ್ಞೆಯು ಸೂರ್ಯನ ಗೋಳಾಕಾರವಾದ ಅತಿತೇಜಸ್ಸನ್ನು ತಡೆಯಲಾರದೆ ಮನಸ್ಸಿನಲ್ಲಿಯೆ ಹೀಗೆ ಯೋಚಿಸಿದಳು.

೮೬. " ಏನುಮಾಡಲಿ. ಎಲ್ಲಿಗೆ ಹೋಗಲಿ. ಎಲ್ಲಿಗೆ ಹೋದರೆ ನನಗೆ ಸೌಖ್ಯವಾಗುವುದು. ನನ್ನ ಪತಿಯಾದ ಭಾಸ್ಕರನ ಕೋಪವು ಹೇಗೆ ಶಮನವಾಗುವುದು ?"

೮೭. ವಿಶ್ವಕರ್ಮನ ಮಗಳಾದ ಸಂಜ್ಞೆಯು ಹೀಗೆ ಬಹಳ ಕಾಲ ಆಲೋಚಿಸಿ ತಂದೆಯನ್ನು ಮರೆಹೋಗುವುದೇ ಲೇಸೆಂದು ನಿಶ್ಚಯಿಸಿದಳು.

೮೮–೮೯. ಬಳಿಕ ತವರುಮನೆಗೆ ಹೋಗಲು ನಿಶ್ಚಯಿಸಿದ ಆ ಸಂಜ್ಞೆಯು ತನ್ನ ಪ್ರತಿದೇಹದಂತೆ ಛಾಯಾದೇವಿಯನ್ನು ನಿರ್ಮಿಸಿದಳು. ಬಳಿಕ ತನ್ನ ಮುಂದಿರುವ ಛಾಯಾದೇವಿಯನ್ನು ಕಂಡು ಇಂತೆಂದಳು.

ಇಮೌ ಚ ಬಾಲಕೌ ಮಹ್ಯಂ ಕನ್ಯಾ ಚ ವರವರ್ಣಿನೀ ।
ಸಂಭಾವ್ಯಾ ನೈವ ಚಾಖ್ಯೇಯಮಿದಂ ಭಗವತೇ ತ್ವಯಾ ॥ ೯೧ ॥
ಪೃಷ್ಟಯಾಽಪಿ ನ ವಾಚ್ಯಂ ತೇ ತಥ್ಯೇತದ್ಗಮನಂ ಮಮ ।
ತೇನಾಽಸ್ಮಿ ನಾಮ ಸಂಜ್ಞೇತಿ ವಾಚ್ಯಸೇ ತತ್ತ್ರತಿಷ್ಠಯಾ ॥ ೯೨ ॥

ಛಾಯೋವಾಚ—

ಆಕೇಶಗ್ರಹಣಾದ್ದೇವಿ ಆ ಶಾಪಾನ್ನೈವ ಕರ್ಹಿಚಿತ್ ।
ಆಖ್ಯಾಸ್ಯಾಮಿ ಮತಂ ತುಭ್ಯಂ ಗಮ್ಯತಾಂ ಯತ್ರ ವಾಂಛಿತಂ ॥ ೯೩ ॥

ಈಶ್ವರ ಉವಾಚ—

ಇತ್ಯುಕ್ತಾ ಸಾ ತದಾ ದೇವೀ ಜಗಾಮ ಭವನಂ ಪಿತುಃ ।
ದದರ್ಶ ತತ್ರ ತ್ವಷ್ಟಾರಂ ತಪಸಾ ಧೂತಕಲ್ಮಷಂ ॥ ೯೪ ॥
ಬಹುಮಾನಾಚ್ಚ ತೇನಾಽಪಿ ಪೂಜಿತಾ ವಿಶ್ವಕರ್ಮಣಾ ।
ವರ್ಷಾಣಾಂ ಚ ಸಹಸ್ರಂತು ವಸಮಾನಾ ಪಿತುರ್ಗೃಹೇ ।
ತಸ್ಥೌ ಪಿತೃಗೃಹೇ ಸಾ ಚ ಕಿಂಚಿತ್ಕಾಲಮನಿಂದಿತಾ ॥ ೯೫ ॥

---

೯೦. ಸಂಜ್ಞೆಯು ಹೇಳುತ್ತಾಳೆ:—ಎಲೌ ಮಂಗಳಕರಳೆ! ನಾನು ನನ್ನ ತವರು ಮನೆಗೆ ಹೋಗುವೆನು. ನೀನು ನನ್ನ ಅಪ್ಪಣೆಯಂತೆ ಇಲ್ಲಿ ನಿಶ್ಚಲಳಾಗಿರಬೇಕು.

೯೧. ಈ ಇಬ್ಬರು ಬಾಲಕರನ್ನೂ, ಈ ಕನ್ಯೆಯನ್ನೂ ನೀನು ಲಾಲನೆಮಾಡಬೇಕು. ಪೂಜ್ಯನಾದ ಭಾಸ್ಕರನಿಗೆ ಈ ವಿಷಯವನ್ನು ಹೇಳಬೇಡ.

೯೨. ಅವನು ಕೇಳಿದರೂ ನಾನು ತಂದೆಮನೆಗೆ ಹೋಗಿರುವುದನ್ನು ತಿಳಿಸಬೇಡ. ಅವನು ಸಂಜ್ಞೆಯೆಂದು ಕರೆದರೆ ನಾನೇ ಸಂಜ್ಞೆಯೆಂದು ತಿಳಿದು ಉತ್ತರಕೊಡು.

೯೩. ಛಾಯೆಯು ಹೇಳುತ್ತಾಳೆ—ದೇವಿ! ನನ್ನ ತಲೆಗೂದಲನ್ನು ಸೂರ್ಯನು ಹಿಡಿದೆಳೆದು ಶಾಪವನ್ನು ಕೊಡುವವರೆಗೂ ನಿನ್ನ ಅಭಿಪ್ರಾಯವನ್ನು ಆತನಿಗೆ ಹೇಳುವುದಿಲ್ಲ. ನಿನಗೆ ಇಷ್ಟಬಂದ ಸ್ಥಳಕ್ಕೆ ಹೋಗು.

೯೪. ಈಶ್ವರನು ಹೇಳುತ್ತಾನೆ—ಛಾಯೆಯು ಹೀಗೆನ್ನಲು ಆ ಸಂಜ್ಞೆಯು ತಂದೆಯ ಮನೆಗೆ ಹೋಗಿ ತಪಸ್ಸಿನಿಂದ ಪಾಪವನ್ನು ಪರಿಹರಿಸಿಕೊಂಡ ಆ ವಿಶ್ವಕರ್ಮನನ್ನು ಕಂಡಳು.

೯೫. ಆ ವಿಶ್ವಕರ್ಮನು ಬಹುಮಾನದಿಂದ ಆ ಸಂಜ್ಞೆಯನ್ನು ಪೂಜಿಸಲು ಅವಳು ತಂದೆಯ ಮನೆಯಲ್ಲಿ ಸಾವಿರ ವರ್ಷಕಾಲ ವಾಸಮಾಡಲಿಚ್ಛೆಯಿಂದ ಸ್ವಲ್ಪ ಕಾಲವಿದ್ದಳು.

ತತಸ್ತಾಂ ಪ್ರಾಹ ಚಾರ್ವಂಗೀಂ ಪಿತಾ ನಾತಿಚಿರೋಷಿತಾಂ ।
ಸ್ತುತ್ವಾ ತು ತನಯಾಂ ಪ್ರೇಮ್ಣಾ ಬಹುಮಾನಪುರಸ್ಸರಂ ॥ ೯೬ ॥
ವಿಶ್ವಕರ್ಮೋವಾಚ—
ತ್ವಾಮೇವ ಪಶ್ಯತೋ ವತ್ಸೇ ದಿನಾನಿ ಸುಬಹೂನ್ಯಪಿ ।
ಮುಹೂರ್ತಾರ್ಧಸಮಾನಿ ಸ್ಯುಃ ಕಿಂ ತು ಧರ್ಮೋ ವಿಲುಪ್ಯತೇ ॥ ೯೭ ॥
ಬಾಂಧವೇಷು ಚಿರಂ ವಾಸೋ ನಾರೀಣಾಂ ನ ಯಶಸ್ಕರಃ ।
ಮನೋರಥಾ ಬಾಂಧವಾನಾಂ ನಾರ್ಯಾ ಭರ್ತೃಗೃಹೇ ಸ್ಥಿತಿಃ ॥ ೯೮ ॥
ಸಾ ತ್ವಂ ತ್ರೈಲೋಕ್ಯನಾಥೇನ ಭರ್ತ್ರಾ ಸೂರ್ಯೇಣ ಸಂಯುತಾ ।
ಪಿತುರ್ಗೃಹೇ ಚಿರಂ ಕಾಲಂ ವಸ್ತುಂ ನಾಽರ್ಹಸಿ ಪುತ್ರಿಕೇ ॥ ೯೯ ॥
ತತ್ತ್ವಂ ಭರ್ತೃಗೃಹಂ ಗಚ್ಛ ದೃಷ್ಟೋಽಹಂ ಪೂಜಿತಾಸಿ ಮೇ ।
ಪುನರಾಗಮನಂ ಕಾರ್ಯಂ ದರ್ಶನಾಯ ಶುಚಿಸ್ಮಿತೇ ॥ ೧೦೦ ॥
ಈಶ್ವರ ಉವಾಚ—
ಇತ್ಯುಕ್ತಾ ಸಾ ತದಾ ಪಿತ್ರಾ ಗಚ್ಛ ಗಚ್ಛೇತಿ ಸಾ ಪುನಃ ।
ಸಂಪೂಜಯಿತ್ವಾ ಪಿತರಂ ವಡವಾರೂಪಧಾರಿಣೀ ॥ ೧೦೧ ॥

---

೯೬. ಬಳಿಕ ತಂದೆಯು ಸ್ವಲ್ಪಕಾಲದಿಂದ ತನ್ನ ಮನೆಯಲ್ಲಿ ವಾಸಿಸುತ್ತಿದ್ದ ಆ ಸಂಜ್ಞೆಯನ್ನು ಹೊಗಳಿ ಅವಳನ್ನು ಕುರಿತು ಪ್ರೀತಿಬಹುಮಾನಗಳಿಂದ ಇಂತೆಂದನು.

೯೭. ವಿಶ್ವಕರ್ಮನು ಹೇಳುತ್ತಾನೆ:—ಮಗು ! ನಿನ್ನನ್ನು ಅನೇಕ ದಿನಗಳಿಂದ ನೋಡುತ್ತಿದ್ದರೂ ಆ ದಿನಗಳು ಅರ್ಧಮುಹೂರ್ತದಂತಾಗುವುವು. ಆದರೆ ಧರ್ಮವು ಕೆಡುವುದು.

೯೮. ಹೆಂಗಸರು ಬಂಧುಗಳ ಮನೆಯಲ್ಲಿ ಹೆಚ್ಚುಕಾಲ ವಾಸಿಸುವುದು ಕೀರ್ತಿಕರವಲ್ಲ. ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿರಬೇಕೆಂದು ಬಂಧುಗಳು ಬಯಸುವರು.

೯೯. ತ್ರೈಲೋಕ್ಯನಾಥನಾದ ಸೂರ್ಯನ ಪತ್ನಿಯಾದ ನೀನು ತಂದೆಯ ಮನೆಯಲ್ಲಿ ಹೆಚ್ಚುಕಾಲ ವಾಸಮಾಡಲರ್ಹಳಲ್ಲ.

೧೦೦. ನಾನು ನಿನ್ನನ್ನು ನೋಡಿ ಪೂಜಿಸಿರುವೆನು. ಆದುದರಿಂದ ನೀನು ಪತಿಯಮನೆಗೆ ತೆರಳು. ನನ್ನನ್ನು ನೋಡಲು ಮರಳಿ ಬರಬಹುದು.

೧೦೧–೧೦೩. ಈಶ್ವರನು ಹೇಳುತ್ತಾನೆ—ಹೀಗೆ ತಂದೆಯು ಹೋಗು ಹೋಗೆಂದು ಹೇಳಲು ಆ ಸಂಜ್ಞೆಯು ಅವನನ್ನು ಅರ್ಚಿಸಿ ಮೇರುವಿನ ಉತ್ತರದಿಕ್ಕಿ

ಮೇರೋರುತ್ತರತಸ್ತತ್ರ ವರ್ಷಂ ಯದ್ಧನುಷಾಕೃತಿ ।
ಉತ್ತರಾಃ ಕುರವೋ ಲೋಕೇ ಪ್ರಖ್ಯಾತಾ ಯೇ ಯಶಸ್ವಿನಿ ॥ ೧೦೨ ॥
ತತ್ರ ತೇಪೇ ತಪಃ ಸಾಧ್ವೀ ನಿರಾಹಾರಾಽಶ್ವರೂಪಿಣೀ ।
ಏತಸ್ಮಿನ್ನಂತರೇ ದೇವಿ ತಸ್ಯಾಶ್ಛಾಯಾ ವಿವಸ್ವತಃ ॥ ೧೦೩ ॥
ಸಮೀಪಸ್ಥಾ ತದಾ ದೇವೀ ಸಂಜ್ಞಾಯಾ ವಾಕ್ಯತತ್ಪರಾ ।
ತಸ್ಯಾಂ ಚ ಭಗವಾನ್ ಸೂರ್ಯೋ ದ್ವಿತೀಯಾಯಾಂ ದಿವಸ್ಪತಿಃ ॥೧೦೪॥
ಸಂಜ್ಞೇಯಮಿತಿ ಮನ್ವಾನೋ ರೂಪೌದಾರ್ಯೇಣ ಮೋಹಿತಃ ।
ತಸ್ಯಾಂ ಚ ಜನಯಾಮಾಸ ದ್ವೌ ಪುತ್ರೌ ಕನ್ಯಕಾಂ ತಥಾ ॥ ೧೦೫ ॥
ಪೂರ್ವಂ ಯಸ್ತು ಮನೋಸ್ತುಲ್ಯಃ ಸಾವರ್ಣಿಸ್ತೇನ ಸೋಽಭವತ್ ।
ಯಃ ಸೂರ್ಯಾತ್ಪ್ರಥಮಂ ಜಾತಃ ಪುತ್ರಯೋಃ ಸುರಸುಂದರಿ ॥ ೧೦೬ ॥
ದ್ವಿತೀಯೋ ಯೋಽಭವಚ್ಚಾಽನ್ಯಃ ಸ ಗ್ರಹೋಽಭೂಚ್ಛನೈಶ್ಚರಃ ।
ಕನ್ಯಾಽಭೂತ್ತಪತೀ ಯಾ ತಾಂ ವವ್ರೇ ಸಂವರಣೋ ನೃಪಃ ॥ ೧೦೭ ॥
ತಾಪೀ ನಾಮ ನದೀ ಚೇಯಂ ವಿಂಧ್ಯಮೂಲಾದ್ವಿನಿಃಸೃತಾ ।
ನಿತ್ಯಂ ಪುಣ್ಯಜಲಾ ಸ್ನಾನೇ ಪಶ್ಚಿಮೋದಧಿಗಾಮಿನೀ ॥ ೧೦೮ ॥
ಅನ್ಯಾ ಚೈವ ತಥಾ ಭದ್ರಾ ಜಾತಾ ಪುತ್ರೀ ಮಹಾಪ್ರಭಾ ।
ಸಂಜ್ಞಾ ತು ಪಾರ್ಥಿವೀ ಛಾಯಾ ಆತ್ಮಜಾನಾಂ ಯಥಾಽಕರೋತ್ ॥

ನಲ್ಲಿರುವ ಉತ್ತರ ಕುರುದೇಶದಲ್ಲಿ ಹೆಣ್ಣು ಕುದುರೆಯರೂಪವನ್ನು ತಾಳಿ ಆಹಾರವಿಲ್ಲದೆ ತಪಸ್ಸನ್ನಾಚರಿಸಿದಳು. ಈ ಮಧ್ಯದಲ್ಲಿ ಸೂರ್ಯನ ಹತ್ತಿರವಿದ್ದು ಸಂಜ್ಞೆಯಂತೆಯೆ ಮಾತನಾಡುವ ಛಾಯೆಯ ರೂಪದಿಂದ ಮೋಹಗೊಂಡಸೂರ್ಯನು ಆ ಛಾಯೆಯನ್ನು ಸಂಜ್ಞೆಯಂದೇ ಅರಿತು ಅವಳಲ್ಲಿ ಇಬ್ಬರು ಪುತ್ರರನ್ನೂ, ಒಬ್ಬ ಕನ್ಯೆಯನ್ನೂ ಪಡೆದನು.

೧೦೬. ದೇವಿ ! ಸೂರ್ಯನಿಂದ ಛಾಯೆಯಲ್ಲಿ ಜನಿಸಿದ ಪುತ್ರರಲ್ಲಿ ಮೊದಲು ಹುಟ್ಟಿದ ಮನುವಿಗೆ ಸಮಾನವಾದ ಬಾಲಕನು ಸಾವರ್ಣಿಯೆಂಬ ಹೆಸರನ್ನು ಪಡೆದನು.

೧೦೭. ಎರಡನೆಯವನು ಶನಿಗ್ರಹನಾದನು. ಮೂರನೆಯವಳಾದ ತಪತಿಯೆಂಬ ಕನ್ಯೆಯನ್ನು ಸಂವರಣನೆಂಬ ದೊರೆಯು ಮದುವೆ ಮಾಡಿಕೊಂಡನು

೧೦೮–೧೧೦. ವಿಂಧ್ಯಪರ್ವತದ ಬುಡದಿಂದ ಹೊರಟಿರುವುದೂ, ಯಾವಾಗಲೂ ಪುಣ್ಯಕರವಾದ ನೀರುಳ್ಳುದೂ, ಪಶ್ಚಿಮಸಮುದ್ರವನ್ನು ಸೇರುವುದೂ, ಆದ ತಾಪೀಯೆಂಬ ನದಿಯೂ ಆ ಛಾಯೆಯ ಮತ್ತೊಬ್ಬ ಪುತ್ರಿಯಾಗಿರುವಳು. ಛಾಯೆಯು

ಸ್ನೇಹಂ ನ ಪೂರ್ವಜಾತಾನಾಂ ತಥಾ ಕೃತವತೀ ಸತೀ ।
ಲಾಲನಾದ್ಯುಪಭೋಗೇಷು ವಿಶೇಷಮನುವಾಸರಂ ॥ ೧೧೦ ॥
ಯಥಾ ಸ್ವೇಷ್ವನುವರ್ತೇತ ನ ತಥಾಽನ್ಯೇಷು ಭಾಮಿನೀ ।
ಮನುಸ್ತು ಕ್ಷಾಂತವಾಂಸ್ತಸ್ಯಾ ಭವಿಷ್ಯೋ ಯೋ ಹಿ ಪಾರ್ವತಿ ॥ ೧೧೧ ॥
ಮೇರೌ ತಿಷ್ಠತಿ ಸೋಽದ್ಯಾಽಪಿ ತಪಃ ಕುರ್ವನ್ವರಾನನೇ ।
ಸರ್ವಂ ತತ್ಕ್ಷಾಂತವಾನ್ ಮಾತುರ್ಯಮಸ್ತಸ್ಯಾ ನ ಚಕ್ಷಮೇ ॥ ೧೧೨ ॥
ಬಹುಶೋ ಯಾಚಮಾನಸ್ತು ಛಾಯಯಾಽತೀವ ಕೋಪಿತಃ ।
ಸ ವೈ ಕೋಪಾಚ್ಚ ಬಾಲ್ಯಾಚ್ಚ ಭಾವಿನೋಽರ್ಥಸ್ಯ ವೈ ಬಲಾತ್ ॥ ೧೧೩ ॥
ತಾಡನಾಯ ತತಃ ಕೋಪಾತ್ಪಾದಸ್ತೇನ ಸಮುದ್ಯತಃ ।
ತಥಾ ಪುನಃ ಕ್ಷಾಂತಿಮತಾ ನ ತು ದೇಹೇ ನಿಪಾತಿತಃ ॥ ೧೧೪ ॥
ಪದಾ ಸಂತರ್ಜಯಾಮಾಸ ಛಾಯಾಂ ಸಂಜ್ಞಾಸುತೋ ಯಮಃ ॥೧೧೫॥
ತಂ ಶಶಾಪ ತತಶ್ಛಾಯಾ ಕ್ರುದ್ಧಾ ಸಾ ಪಾರ್ಥಿವೀ ಭೃಶಂ ।
ಕಿಂಚಿತ್ಪ್ರಸ್ಫುರಮಾಣೋಷ್ಠೀ ವಿಚಲತ್ಪಾಣಿಪಲ್ಲವಾ ॥ ೧೧೬ ॥

ಛಾಯೋವಾಚ :—

ಪಿತುಃ ಪತ್ನೀಮಮರ್ಯಾದ ಯನ್ಮಾಂ ತರ್ಜಯಸೇ ಪದಾ ।
ಭುವಿ ತಸ್ಮಾದಯಂ ಪಾದಸ್ತವಾಽದ್ಯೈವ ಪತಿಷ್ಯತಿ ॥ ೧೧೭ ॥

ಲಾಲನಾದಿಗಳಿಂದ ತನ್ನ ಮಕ್ಕಳನ್ನು ಪ್ರತಿದಿನವೂ ಉಪಚರಿಸಿದಂತೆ ಸಂಜ್ಞೆಯ ಮಕ್ಕಳನ್ನು ಉಪಚರಿಸಲಿಲ್ಲ.

೧೧೧–೧೧೪. ಇದನ್ನು ಮನುವು ಸಹಿಸಿದನು. ಅವನು ಈಗಲೂ ಮೇರು ಪರ್ವತದಲ್ಲಿ ತಪಸ್ಸನ್ನಾಚರಿಸುತ್ತಿರುವನು. ಯಮನು ಮಾತ್ರ ಸಹಿಸಲಿಲ್ಲ. ಆ ಯಮನು ಭೋಜನ ವಸ್ತುಗಳನ್ನು ಕೊಡಬೇಕೆಂದು ಛಾಯೆಯನ್ನು ಬಹುವಾಗಿ ಬೇಡಿಕೊಂಡರೂ ಅವಳು ಕೊಡದಿರಲು ಅತ್ಯಂತ ಕುಪಿತನಾಗಿ ಬಾಲಕನಾದುದರಿಂದಲೂ, ಮುಂದೆ ಆಗತಕ್ಕ ಅನರ್ಥದ ಬಲದಿಂದಲೂ ಆ ಛಾಯೆಯನ್ನು ಒದೆಯುವುದಕ್ಕಾಗಿ ಕಾಲನ್ನು ಹಿಂದಕ್ಕೆ ತೆಗೆದನು.

೧೧೫–೧೧೬. ಸಂಜ್ಞಾಸುತನಾದ ಯಮನು ಕಾಲಿನಿಂದ ಛಾಯೆಯನ್ನು ಬೆದರಿಸಿದ್ದರಿಂದ ಅವಳು ಅತ್ಯಂತ ಕೋಪಗೊಂಡು ಸ್ವಲ್ಪ ಅದುರುತ್ತಿರುವ ತುಟಿಯುಳ್ಳವಳೂ, ನಡುಗುತ್ತಿರುವ ಕೈಯುಳ್ಳವಳೂ ಆಗಿ ಆ ಯಮನನ್ನು ಶಪಿಸಿದಳು.

೧೧೭. ಛಾಯೆಯು ಹೇಳುತ್ತಾಳೆ:—ಮರ್ಯಾದೆಯಿಲ್ಲದ ಎಲವೋ ಯಮನೆ ! ನೀನು ನಿನ್ನ ತಂದೆಯ ಪತ್ನಿಯಾದ ನನ್ನನ್ನು ಕಾಲಿನಿಂದ ಬೆದರಿಸಿದುದರಿಂದ ನಿನ್ನೀ ಪಾದವು ಈಗಲೇ ಭೂಮಿಯಲ್ಲಿ ಬೀಳುವುದು.

ಈಶ್ವರ ಉವಾಚ:—

ಯಮಸ್ತು ತೇನ ಶಾಪೇನ ಭೃಶಂ ಪೀಡಿತಮಾನಸಃ ।
ಮನುನಾ ಸಹ ಧರ್ಮಾತ್ಮಾ ಪಿತ್ರೇ ಸರ್ವಂ ನ್ಯವೇದಯತ್ ॥ ೧೧೮ ॥

ಯಮ ಉವಾಚ—

ತಾತೈತನ್ಮಹದಾಶ್ಚರ್ಯಂ ನ ದೃಷ್ಟಮಿಹ ಕೇನಚಿತ್ ।
ಮಾತಾ ವಾತ್ಸಲ್ಯಮುತ್ಸೃಜ್ಯ ಶಾಪಂ ಪುತ್ರೇ ಪ್ರಯಚ್ಛತಿ ॥ ೧೧೯ ॥
ಸ್ನೇಹೇನ ತುಲ್ಯಮಸ್ಮಾಸು ಮಾತಾದ್ಯ ನೈವ ವರ್ತತೇ ।
ವಿಸೃಜ್ಯ ಜ್ಯಾಯಸೋ ಯಸ್ಮಾತ್ಕನೀಯಸ್ಸು ಬುಭೂಷತಿ ॥ ೧೨೦ ॥
ತಸ್ಯಾ ಮಯೋದ್ಯತಃ ಪಾದೋ ನ ತು ದೇಹೇ ನಿಪಾತಿತಃ ।
ಬಾಲ್ಯಾದ್ವಾ ಯದಿ ವಾ ಮೋಹಾತ್ತದ್ಭವಾನ್ ಕ್ಷಂತುಮರ್ಹತಿ ॥ ೧೨೧ ॥
ಶಪ್ತೋಽಹಂ ತಾತ ಕೋಪೇನ ತಯಾ ಸುತ ಇತಿ ಸ್ಫುಟಂ ।
ಅತೋ ನ ಮಹ್ಯಂ ಜನನೀ ಸಾ ಭವೇದ್ವದತಾಂ ವರ ॥ ೧೨೨ ॥
ನಿರ್ಗುಣೇಷ್ವಪಿ ಪುತ್ರೇಷು ನ ಮಾತಾ ನಿರ್ಗುಣಾ ಭವೇತ್ ।
ಪಾದಸ್ತೇ ಪತತಾಂ ಪುತ್ರ ಕಥಮೇತತ್ತಯೋದಿತಂ ॥ ೧೨೩ ॥

---

೧೧೮. ಈಶ್ವರನು ಹೇಳುತ್ತಾನೆ:—ಆ ಶಾಪದಿಂದ ಯಮನು ಅತ್ಯಂತ ವ್ಯಥೆಗೊಂಡು ಮನುವಿನೊಡನೆ ಎಲ್ಲವನ್ನೂ ತಂದೆಯಾದ ಸೂರ್ಯನಿಗೆ ತಿಳಿಸಿದನು.

೧೧೯. ಯಮನು ಹೇಳುತ್ತಾನೆ:—ತಂದೆಯೆ! ತಾಯಿಯು ಮಗನಲ್ಲಿ ಪ್ರೀತಿಯಿಲ್ಲದೆ ಶಾಪವನ್ನೀಯುವುದನ್ನು ಯಾರೂ ಕಾಣಲಿಲ್ಲ.! ಇದು ಅತ್ಯಂತ ಆಶ್ಚರ್ಯಕರವಾಗಿದೆ.

೧೨೦. ಮಾತೆಯು ಈಗ ದೊಡ್ಡಮಕ್ಕಳಾದ ನಮ್ಮನ್ನು ತೊರೆದು ಚಿಕ್ಕವರಲ್ಲಿ ಪ್ರೀತಿಯುಳ್ಳವಳಾದ್ದರಿಂದ ಅವಳು ಮಕ್ಕಳೆಲ್ಲರಲ್ಲ ಸಮಾನ ಪ್ರೀತಿಯುಳ್ಳವಳಾಗಲಿಲ್ಲ.

೧೨೧. ನಾನು ಕೋಪಗೊಂಡು ಅವಳನ್ನು ಒದೆಯುವುದಕ್ಕೆ ಕಾಲನ್ನೆತ್ತಿದೆನು. ಆದರೆ ಒದೆಯಲಿಲ್ಲ. ನಾನು ಬಾಲತ್ವದಿಂದಾಗಲಿ, ಮೂಢತನದಿಂದಾಗಲಿ, ಮಾಡಿದ ಈ ಅಕಾರ್ಯವನ್ನು ನೀನು ಕ್ಷಮಿಸಬೇಕು.

೧೨೨. ಅವಳು ಕೋಪದಿಂದ ಮಗನಾದ ನನ್ನನ್ನು ಶಪಿಸಿದ್ದರಿಂದ ನನಗೆ ತಾಯಿಯಾಗಿರಲಾರಳು.

೧೨೩. ಮಕ್ಕಳು ಗುಣವಿಲ್ಲದವರಾದರೂ ತಾಯಿಯು ಅವರಲ್ಲಿ ದುಷ್ಟಳಾಗಲಾರಳು. ಪುತ್ರ! ನಿನ್ನ ಕಾಲು ಭೂಮಿಯಲ್ಲಿ ಬೀಳಲಿ ಎಂದು ತಾಯಿಯಾದ ಅವಳು ಹೇಗೆ ಹೇಳಿದಳು?

ತವ ಪ್ರಸಾದಾಚ್ಚರಣೋ ನ ಪತೇದ್ಭಗವನ್ ಯಥಾ ।
ಮಾತೃಶಾಪಾದಯಂ ಮೇಽದ್ಯ ತಥಾ ಚಿಂತಯ ಗೋಪತೇ ॥ ೧೨೪ ॥
ರವಿರುವಾಚ—
ಅಸಂಶಯಂ ಮಹತ್ಪುತ್ರ ಭವಿಷ್ಯತ್ಯತ್ರ ಕಾರಣಂ ।
ಯೇನ ತೇ ಹ್ಯಾವಿಶತ್ಕ್ರೋಧೋ ಧರ್ಮಜ್ಞಸ್ಯ ಮಹಾತ್ಮನಃ ॥ ೧೨೫ ॥
ಸರ್ವೇಷಾಮೇವ ಶಾಪಾನಾಂ ಪ್ರತಿಘಾತೋಽಪಿ ವಿದ್ಯತೇ ।
ನ ತು ಮಾತ್ರಾಭಿಶಪ್ತಾನಾಂ ಕ್ವಚಿಚ್ಛಾಪನಿವರ್ತನಂ ॥ ೧೨೬ ॥
ನ ಯುಕ್ತಮೇತನ್ಮಿಥ್ಯಾ ತು ಕರ್ತುಂ ಮಾತುರ್ವಚಸ್ತವ ।
ಕಿಂಚಿತ್ತೇ ಸಂವಿಧಾಸ್ಯಾಮಿ ಪುತ್ರಸ್ನೇಹಾದನುಗ್ರಹಂ ॥ ೧೨೭ ॥
ಕೃಮಯೋ ಮಾಂಸಮಾದಾಯ ಪ್ರಯಾಸ್ಯಂತಿ ಮಹೀತಲಂ ।
ಕೃತಂ ತಸ್ಯಾ ವಚಃ ಸತ್ಯಂ ತ್ವಂ ಚ ತ್ರಾತೋ ಭವಿಷ್ಯಸಿ ॥ ೧೨೮ ॥
ಈಶ್ವರ ಉವಾಚ—
ಆದಿತ್ಯಸ್ತ್ವಬ್ರವೀಚ್ಛಾಯಾಂ ಕಿಮರ್ಥಂ ತನಯೇಷು ವೈ ।
ತುಲ್ಯೇಷ್ವಪ್ಯಧಿಕಃ ಸ್ನೇಹ ಏಕತ್ರ ಕ್ರಿಯತೇ ತ್ವಯಾ ॥ ೧೨೯ ॥

---

೧೨೪. ಸೂರ್ಯದೇವ! ನೀನು ಅನುಗ್ರಹಿಸಿ ತಾಯಿಯ ಶಾಪದಿಂದ ನನ್ನ ಕಾಲು ಬೀಳದಂತಾಗಲು ಉಪಾಯವನ್ನು ಚಿಂತಿಸು.

೧೨೫. ಸೂರ್ಯನು ಹೇಳುತ್ತಾನೆ:—ಮಗು! ಧರ್ಮವನ್ನರಿತ ನಿನಗೆ ಕೋಪ ಬಂದುದರಿಂದ ನಿಶ್ಚಯವಾಗಿಯೂ ಇದಕ್ಕೆ ದೊಡ್ಡ ಕಾರಣವಿರುವುದು.

೧೨೬. ಸಮಸ್ತಶಾಪಗಳಿಗೂ ಪರಿಹಾರವಿರುವುದು. ಆದರೆ ತಾಯಿಯ ಶಾಪಕ್ಕೆ ಪರಿಹಾರವಿಲ್ಲ.

೧೨೭. ತಾಯಿಯ ವಚನವನ್ನು ಸುಳ್ಳುಮಾಡುವುದು ನಿನಗೆ ಯುಕ್ತವಲ್ಲ. ನಿನ್ನಲ್ಲಿರುವ ಪ್ರೀತಿಯಿಂದ ನಾನು ಸ್ವಲ್ಪ ಅನುಗ್ರಹ ಮಾಡುವೆನು.

೧೨೮. ಕೃಮಿಗಳು ನಿನ್ನ ಕಾಲಿನ ಮಾಂಸವನ್ನು ತೆಗೆದುಕೊಂಡು ಭೂಮಿಗೆ ಹೋಗುವುವು. ಇದರಿಂದ ಆ ತಾಯಿಯ ಮಾತು ಸತ್ಯವಾಗುವುದು. ನೀನೂ ರಕ್ಷಿಸಲ್ಪಡುವೆ.

೧೨೯. ಆದಿತ್ಯನು ಛಾಯೆಯನ್ನು ಕುರಿತು ಇಂತೆಂದನು. ನೀನು ಮಕ್ಕಳು ಸಮಾನರಾದರೂ ಒಬ್ಬನಲ್ಲಿ ಮಾತ್ರ ಏಕೆ ಅಧಿಕ ಪ್ರೀತಿಮಾಡುತ್ತಿರುವೆ?

ನೂನಂ ನ ಚೈಷಾಂ ಜನನೀ ತ್ವಂ ಸಂಜ್ಞಾ ಕ್ವಾಽಪಿ ಸಾ ಗತಾ ।
ವಿಕಲೇಷ್ವಪ್ಯಪತ್ಯೇಷು ನ ಮಾತಾ ಶಾಪದಾ ಭವೇತ್ ॥ ೧೩೦ ॥
ಅಪಿ ದೋಷಸಹಸ್ರಾಣಿ ಯದಿ ಪುತ್ರಃ ಸಮಾಚರೇತ್ ।
ಪ್ರಾಣದ್ರೋಹೇಽಪಿ ನಿರತೋ ನ ಮಾತಾ ಪಾಪಮಾಚರೇತ್ ॥
ತಸ್ಮಾತ್ಸತ್ಯಂ ಮಮ ಬ್ರೂಹಿ ಮಾ ಶಾಪವಶಗಾ ಭವ ॥ ೧೩೧ ॥
ಈಶ್ವರ ಉವಾಚ—
ತಂ ಶಪ್ತುಮುದ್ಯತಂ ದೃಷ್ಟ್ವಾ ಛಾಯಾಸಂಜ್ಞಾ ದಿನಾಧಿಪಂ ।
ಭಯೇನ ಕಂಪತೀ ದೇವೀ ಯಥಾ ವೃತ್ತಂ ಮಹಾಸತೀ ॥ ೧೩೨ ॥
ಸಾ ಚಾಽಽಹ ತನಯಾ ತ್ವಷ್ಟುರಹಂ ಸಂಜ್ಞಾ ವಿಭಾವಸೋ ।
ಪತ್ನೀ ತವ ತ್ವಯಾ ಪತ್ಯಾ ಪತಿಯುಕ್ತಾ ದಿವಾಕರ ॥ ೧೩೩ ॥
ಇತ್ಥಂ ವಿವಸ್ವತಃ ಸಾ ತು ಬಹುಶಃ ಪೃಚ್ಛತೋಽನ್ಯಥಾ ।
ನ ವಾಚಾ ಭಾಷತೇ ಕ್ರುದ್ಧಃ ಶಾಪಂ ದಾತುಂ ಸಮುದ್ಯತಃ ॥ ೧೩೪ ॥
ಶಾಪೋದ್ಯತಕರಂ ದೃಷ್ಟ್ವಾ ಸೂರ್ಯಂ ಛಾಯಾ ವಿವಸ್ವತಃ ।
ಕಥಯಾಮಾಸ ತತ್ಸರ್ವಂ ಸಂಜ್ಞಾಯಾಃ ಸುವಿಚೇಷ್ಟಿತಂ ॥ ೧೩೫ ॥
ತಚ್ಛ್ರುತ್ವಾ ಭಗವಾನ್ ಸೂರ್ಯೋ ಜಗಾಮ ತ್ವಷ್ಟುರಾಲಯಂ ।
ತತಃ ಸಂಪೂಜಯಾಮಾಸ ತದಾ ತ್ರೈಲೋಕ್ಯಪೂಜಿತಂ ॥ ೧೩೬ ॥

---

೧೩೦. ನಿಶ್ಚಯವಾಗಿಯೂ ನೀನು ಇವರ ತಾಯಿಯಲ್ಲ. ಇವರ ತಾಯಿಯಾದ ಸಂಜ್ಞೆಯು ಎಲ್ಲಿಯೋ ಹೋಗಿರಬೇಕು. ಮಕ್ಕಳು ದುಷ್ಟರಾದರೂ ತಾಯಿಯು ಅವರಿಗೆ ಶಾಪವನ್ನು ಕೊಡಲಾರಳು.

೧೩೧. ಪ್ರಾಣಹಿಂಸೆಯಲ್ಲಿ ಆಸಕ್ತನಾದ ಮಗನು ಅನೇಕ ತಪ್ಪುಗಳನ್ನೆಸಗಿದರೂ ತಾಯಿಯು ಅವನಿಗೆ ಕೆಟ್ಟದನ್ನು ಮಾಡಲಾರಳು. ಆದುದರಿಂದ ನೀನು ನಿಜವನ್ನು ಹೇಳು. ನನ್ನ ಶಾಪಕ್ಕೀಡಾಗಬೇಡ.

೧೩೨–೧೩೩. ಈಶ್ವರನು ಹೇಳುತ್ತಾನೆ:—ಹಿಗೇಹೇಳಿ ಶಪಿಸಲುದ್ಯುಕ್ತನಾದ ದಿನಕರನನ್ನು ಕಂಡು ಛಾಯೆಯು ಭಯದಿಂದ ನಡುಗುತ್ತ “ಎಲೈ ವಿಭಾವಸುವೆ ನಾನು ವಿಶ್ವಕರ್ಮನಮಗಳಾದ ಸಂಜ್ಞೆ, ನಿನ್ನಪತ್ನಿ” ಎಂದಳು.

೧೩೪. ಹೀಗೆ ಭಾಸ್ಕರನು ಬಹುವಾಗಿ ಪ್ರಶ್ನಿಸಿದರೂ ಅವಳು ದಿಟವನ್ನು ನುಡಿಯದಿರಲು ಅವನು ಕುಪಿತನಾಗಿ ಶಪಿಸಲು ಉದ್ಯುಕ್ತನಾದನು !

೧೩೫. ಛಾಯೆಯು ಶಪಿಸಲೆತ್ತಿದ ಕೈಯುಳ್ಳ ಸೂರ್ಯನನ್ನು ಕಂಡು ಸಂಜ್ಞೆಯ ವೃತ್ತಾಂತವನ್ನೆಲ್ಲ ಇದ್ದುದನ್ನಿದ್ದಂತೆ ಹೇಳಿಬಿಟ್ಟಳು.

೧೩೬–೧೩೭. ಅದನ್ನು ಕೇಳಿ ಪೂಜ್ಯನಾದ ಸೂರ್ಯನು ವಿಶ್ವಕರ್ಮನ ಮನೆಗೆ ತೆರಳಿದನು. ಆಗ ವಿಶ್ವಕರ್ಮನು ತ್ರೈಲೋಕ್ಯಪೂಜ್ಯನೂ, ಕೋಪದಿಂದ ಸುಡಲಿಚ್ಛಿಸಿ

ನಿರ್ದಗ್ಧುಕಾಮಂ ರೋಷೇಣ ಸಾಂತ್ವಯಾಮಾಸ ಪಾರ್ವತಿ ।
ಭಾಸ್ವಂತಂ ನಿಜಯಾ ದೀಪ್ತ್ಯಾ ನಿಜಗೇಹಮುಪಾಗತಂ ।
ಕ್ವ ಸಂಜ್ಞೇತಿ ಚ ಪೃಚ್ಛಂತಂ ಕಥಯಾಮಾಸ ವಿಶ್ವಕೃತ್ ॥ ೧೩೭ ॥
ವಿಶ್ವಕರ್ಮೋವಾಚ;—
ಆಗತೈವ ಹಿ ಮೇ ವೇಶ್ಮ ಭವತಾ ಶ್ರೂಯತಾಂ ವಚಃ ।
ವಿಖ್ಯಾತಂ ತೇಜಸಾಽಽಢ್ಯಂ ತ ಇದಂ ರೂಪಂ ಸುದುಃಸಹಂ ॥ ೧೩೮ ॥
ಅಸಹಂತೀ ತತಃ ಸಂಜ್ಞಾ ವನೇ ಚರತಿ ವೈ ತಪಃ ।
ದ್ರಕ್ಷ್ಯಸೇ ತಾಂ ಭವಾನದ್ಯ ಸ್ವಭಾರ್ಯಾಂ ಶುಭಚಾರಿಣೀಂ ॥ ೧೩೯ ॥
ರೂಪಾರ್ಥಂ ಚರತೀಽರಣ್ಯಂ ಚರಂತೀ ಸುಮಹತ್ತಪಃ ।
ಮತಂ ಮೇ ಬ್ರಹ್ಮಣೋ ವಾಕ್ಯಾದ್ಯದಿ ತೇ ದೇವ ರೋಚತೇ ।
ರೂಪಂ ನಿರ್ವರ್ತಯಾಮ್ಯದ್ಯ ತವ ಕಾಂತಂ ದಿವಸ್ಪತೇ ॥ ೧೪೦ ॥
ಈಶ್ವರ ಉವಾಚ;—
ಯತೋ ಹಿ ಭಾಸ್ವತೋ ರೂಪಂ ಪ್ರಾಗಾಸೀತ್ಪರಿಮಂಡಲಂ ।
ತತಸ್ತಥೇತಿ ತಂ ಪ್ರಾಹ ತ್ವಷ್ಟಾರಂ ಭಗವಾನ್ ಹರಿಃ ॥ ೧೪೧ ॥
ವಿಶ್ವಕರ್ಮಾ ತ್ವನುಜ್ಞಾತಃ ಶಾಕದ್ವೀಪೇ ವಿವಸ್ವತಾ ।
ಭೂಮಿಮಾರೋಪ್ಯ ತತ್ತೇಜಃ ಶಾತನಾಯೋಪಚಕ್ರಮೇ ॥ ೧೪೨ ॥

ದವನೂ, ಕಿರಣಗಳಿಂದ ಕಂಗೊಳಿಸುತ್ತಿರುವವನೂ ಆದ ಆ ಆದಿತ್ಯನನ್ನು ಸಮಾಧಾನಗೊಳಿಸಿ ಸಂಜ್ಞೆಯು ಎಲ್ಲಿ ಎಂದು ಕೇಳುತ್ತಿರುವ ಅವನನ್ನು ಕುರಿತು ಇಂತೆಂದನು.

೧೩೮—೧೪೧. ವಿಶ್ವಕರ್ಮನು ಹೇಳುತ್ತಾನೆ:—ಎಲೈ ಸೂರ್ಯನೆ! ಕೇಳು. ಆ ಸಂಜ್ಞೆಯು ನನ್ನ ಮನೆಗೆ ಬಂದಿದ್ದಳು. ಅವಳು ಈಗ ತೇಜಸ್ಸಿನಿಂದ ದೇದೀಪ್ಯಮಾನವಾದ ನಿನ್ನೀರೂಪವನ್ನು ಸಹಿಸಲಾರದೆ ನಿನಗೆ ಒಳ್ಳೆಯ ರೂಪವನ್ನುಂಟುಮಾಡಲೋಸುಗ ಕಾಡಿನಲ್ಲಿ ತಪಸ್ಸನ್ನಾಚರಿಸುತ್ತಿರುವಳು. ಈಗ ನೀನು ಸದಾಚಾರ ಸಂಪನ್ನೆಯಾದ ನಿನ್ನ ಪತ್ನಿಯನ್ನು ನೋಡುವೆ. ಬ್ರಹ್ಮನ ಮಾತಿನಂತೆ ನನ್ನ ಅಭಿಪ್ರಾಯವು ನಿನಗೆ ಇಷ್ಟವಾದರೆ ನಿನಗೀಗ ಸುಂದರ ರೂಪವನ್ನುಂಟುಮಾಡುವೆನು.

೧೪೧. ಈಶ್ವರನು ಹೇಳುತ್ತಾನೆ:—ಸೂರ್ಯನು ಸಹಿಸಲಾರದ ತನ್ನ ರೂಪವನ್ನು ಪರಿವರ್ತಿಸಬಹುದೆಂದು ವಿಶ್ವಕರ್ಮನನ್ನು ಕುರಿತು ಹೇಳಿದನು.

೧೪೨. ವಿಶ್ವಕರ್ಮನು ಸೂರ್ಯನ ಅನುಮತಿಯನ್ನು ಪಡೆದು ಅವನ ತೇಜಸ್ಸನ್ನು ಶಾಕದ್ವೀಪದಲ್ಲಿ ಭೂಮಿಯಲ್ಲಿರಿಸಿ ಕಡೆಮಾಡಲಾರಂಭಿಸಿದನು.

ಭ್ರಮತಾಽಶೇಷ ಜಗತಾಮಧಿಭೂತೇನ ಭಾಸ್ವತಾ ।
ಸಮುದ್ರಾ ದ್ರವಿಣೋಪೇತಾಶ್ಚುಕ್ಷುಭುಶ್ಚ ಸಮಂತತಃ ॥ ೧೪೩ ॥
ಭ್ರಮತಾ ಖಲು ದೇವೇಶಿ ಸ ಚಂದ್ರಗ್ರಹತಾರಕಂ ।
ಅಧೋಗತಿ ಮಹಾಭಾಗೇ ಬಭೂವಾಕ್ಷಿಪ್ತಮಾಕುಲಂ ॥ ೧೪೪ ॥
ವಿಕ್ಷಿಪ್ತಸಲಿಲಾಃ ಸರ್ವೇ ಬಭೂವುಶ್ಚ ತಥಾ ನದಾಃ ।
ವ್ಯಭಿದ್ಯಂತ ತಥಾ ಶೈಲಾಃ ಶೀರ್ಣಸಾನುನಿಬಂಧನಾಃ ॥ ೧೪೫ ॥
ಧ್ರುವಾರಾಣ್ಯವಿಶೇಷಾಣಿ ಧಿಷ್ಣ್ಯಾನಿ ವರವರ್ಣಿನಿ ।
ಭ್ರಾಮ್ಯದ್ರಶ್ಮಿನಿಬದ್ಧಾನಿ ಅಧೋ ಜಗ್ಮುಃ ಸಹಸ್ರಶಃ ॥ ೧೪೬ ॥
ವ್ಯಶೀರ್ಯಂತ ಮಹಾಮೇಘಾ ಘೋರಾರಾವವಿರಾವಿಣಃ ।
ಭಾಸ್ವದ್ಭ್ರಮಣವಿಭ್ರಾಂತ ಭೂಮ್ಯಾಕಾಶಮಹೀತಲಂ ॥ ೧೪೭ ॥
ಜಗದಾಕುಲಮತ್ಯರ್ಥಂ ತದಾಽಽಸೀದ್ವರವರ್ಣಿನಿ ।
ತ್ರೈಲೋಕ್ಯೇ ಸಕಲೇ ದೇವಿ ಭ್ರಮಮಾಣೇ ಮಹರ್ಷಯಃ ।
ದೇವಾಶ್ಚ ಬ್ರಹ್ಮಣಾ ಸಾರ್ಧಂ ಭಾಸ್ವಂತಮಭಿತುಷ್ಟುವುಃ ॥ ೧೪೮ ॥

---

೧೪೩. ಸಮಸ್ತ ಜಗತ್ತುಗಳಿಗೂ ಒಡೆಯನಾದ ಸೂರ್ಯಭಗವಂತನು ಸುತ್ತುತ್ತಿರಲು ನಾನಾ ರತ್ನಗಳಿಂದ ಕೂಡಿದ ಸಪ್ತಸಮುದ್ರಗಳು ಎಲ್ಲೆಡೆಯಲ್ಲಿಯೂ ಅಲ್ಲೋಲ ಕಲ್ಲೋಲವಾದುವು.

೧೪೪. ದೇವೇಶಿ ! ಹೀಗೆ ಸೂರ್ಯನು ಭ್ರಮಿಸುತ್ತಿರಲು ಚಂದ್ರ, ಗ್ರಹ, ನಕ್ಷತ್ರಗಳೆಲ್ಲ ಚದರಿ ಕೆಳಗೆ ಬಿದ್ದವು.

೧೪೫. ನದಿಗಳೆಲ್ಲ ಕಲಕಿಹೋದ ಜಲವುಳ್ಳವಾಗಿ ನಡುಗಿಹೋದುವು. ಬೆಟ್ಟಗಳು ತಪ್ಪಲುಗಳೊಡನೆ ಸೀಳಿಹೋದುವು.

೧೪೬. ಪ್ರಿಯಳೆ ! ದೃಢರಾಗಿ ನೆಲೆಸಿರುವ ಅರಣ್ಯ ವಿಶೇಷಗಳೂ ಮನೆಗಳೂ ತಿರುಗುತ್ತಿರುವ ಸೂರ್ಯನ ಕಿರಣ ಕಾಂತಿಗೆ ಸಿಕ್ಕಿ ಕೆಳಗಿಳಿದುಹೋದುವು.

೧೪೭. ದೊಡ್ಡ ದೊಡ್ಡ ಮೇಘಗಳು ಭಯಂಕರವಾಗಿ ಗರ್ಜಿಸುತ್ತ ನುಚ್ಚುನುರಿಯಾದುವು. ಸೂರ್ಯನು ಹೀಗೆ ಪ್ರಚಂಡವಾಗಿ ವಿಭ್ರಮಿಸುತ್ತಿರಲು ಭೂಮ್ಯಾಕಾಶಗಳುಳ್ಳ ಅಖಂಡ ಪ್ರಪಂಚವೇ ಅತ್ಯಂತ ವ್ಯತ್ಯಾಸಗೊಂಡಿತು.

೧೪೮. ಹೀಗೆ ಮೂರುಲೋಕಗಳು ಸಂಪೂರ್ಣವಾಗಿ ತಿರುಗುತ್ತಿರಲು ಮಹರ್ಷಿಗಳೂ, ದೇವತೆಗಳೂ ಬ್ರಹ್ಮನೊಡನೆ ಸೂರ್ಯನನ್ನು ಸ್ತೋತ್ರಮಾಡಿದರು.

ದೇವಾ ಊಚುಃ—

ಆದಿದೇವೋಽಸಿ ದೇವಾನಾಂ ಜಾತಮೇತತ್ಸ್ವಯಂ ತವ ।
ಸರ್ಗಸ್ಥಿತ್ಯಂತ ಕಾಲೇಷು ತ್ರಿಧಾ ಭೇದೇನ ತಿಷ್ಠಸಿ ॥ ೧೪೯ ॥
ಸ್ವಸ್ತಿ ತೇऽಸ್ತು ಜಗನ್ನಾಥ ಘರ್ಮವರ್ಷಹಿಮಾಕರ ।
ಇಂದ್ರ ಆಗಮ್ಯ ತಂ ದೇವಂ ಲಿಖ್ಯಮಾನಮಥಾಸ್ತುವೀತ್ ॥
ಜಯ ದೇವ ಜಗತ್ಸ್ವಾಮಿಂಜಯ ದೇವ ಜಗತ್ಪತೇ ॥ ೧೫೦ ॥
ಋಷಯಶ್ಚ ತತಃ ಸಪ್ತ ವಸಿಷ್ಠಾತ್ರಿಪುರೋಗಮಾಃ ।
ತುಷ್ಟುವುರ್ವಿವಿಧೈಃ ಸ್ತೋತ್ರೈಃ ಸ್ವಸ್ತಿ ಸ್ವಸ್ತೀತಿವಾದಿನಃ ।
ವೇದೋಕ್ತಿಭಿರಥಾಗ್ರ್ಯಾಭಿರ್ವಾಲಖಿಲ್ಯಾಶ್ಚ ತುಷ್ಟುವುಃ ॥ ೧೫೧ ॥

ವಾಲಖಿಲ್ಯಾ ಊಚುಃ —

ನಮಸ್ತ ಋಕ್ಸ್ವರೂಪಾಯ ಸಾಮರೂಪಾಯ ತೇ ನಮಃ ।
ಯಜುಃಸ್ವರೂಪರೂಪಾಯ ಸಾಮ್ನಾಂ ಧಾಮಗತೇ ನಮಃ ॥ ೧೫೨ ॥
ಜ್ಞಾನೈಕರೂಪದೇಹಾಯ ನಿರ್ಧೂತತಮಸೇ ನಮಃ ।
ಶುದ್ಧಜ್ಯೋತಿಃಸ್ವರೂಪಾಯ ತ್ರಿಮೂರ್ತಾಯಾಮಲಾತ್ಮನೇ ॥ ೧೫೩ ॥

---

೧೪೯. "ಭಾಸ್ಕರ ! ನೀನು ದೇವತೆಗಳಲ್ಲಿ ಮೊದಲನೆಯವನಾಗಿರುವೆ. ಈ ಪ್ರಪಂಚವು ನಿನ್ನಿಂದಲೆ ಉಂಟಾಯಿತು. ನೀನು ಸೃಷ್ಟಿ, ಸ್ಥಿತಿ, ಲಯಕಾಲಗಳಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರೆಂಬ ಮೂರು ರೂಪಗಳನ್ನು ತಾಳಿ ಬೆಳಗುವೆ.

೧೫೦. ಉಷ್ಣ, ಮಳೆ, ಹಿಮಗಳಿಗೆ ಆಶ್ರಯನೂ ಜಗದೊಡೆಯನೂ ಆದ ಓ ದಿನಕರ ! ನಿನಗೆ ಮಂಗಳವಾಗಲಿ" ಬಳಿಕ ಇಂದ್ರನು ಪ್ರಪಂಚವನ್ನೇ ಕಿರಣಗಳಿಂದ ಒರೆಯುತ್ತಿರುವ ಸೂರ್ಯನನ್ನು ಹೀಗೆ ಸ್ತುತಿಸಿದನು. "ಆ ಜಗತ್ತಿಗೆ ಸ್ವಾಮಿಯಾದ ಎಲೈ ಸೂರ್ಯನೆ ! ಜಯಿಸು"

೧೫೧. ಬಳಿಕ ವಸಿಷ್ಠ, ಅತ್ರಿಮೊದಲಾದ ಸಪ್ತರ್ಷಿಗಳು ಸ್ವಸ್ತಿಯನ್ನು ಹೇಳುತ್ತ ವಿವಿಧಸ್ತೋತ್ರಗಳಿಂದ ಆತನನ್ನು ಸ್ತುತಿಸಿದರು. ಅನಂತರ ವಾಲಖಿಲ್ಯರು ಉತ್ಕೃಷ್ಟವಾದ ವೇದವಚನಗಳಿಂದ ಹೊಗಳಿದರು.

೧೫೨. ವಾಲಖಿಲ್ಯರು ಹೇಳುತ್ತಾರೆ—ಋಗ್ಯಜುಸ್ಸಾಮ ರೂಪನೂ, ಸಾಮ ಗಳಿಗೆ ಆಶ್ರಯನೂ ಆದ ಎಲೈ ಸೂರ್ಯ ಭಗವಂತನೆ ! ನಿನಗೆ ನಮಸ್ಕಾರವು.

೧೫೩. ಜ್ಞಾನಮಾತ್ರದೇಹನೂ, ತಮಸ್ಸನ್ನು ನಾಶಗೊಳಿಸುವವನೂ, ಶುದ್ಧ ತೇಜಸ್ಸ್ವರೂಪನೂ, ತ್ರಿಮೂರ್ತಿರೂಪನೂ, ನಿರ್ಮಲಾತ್ಮನೂ ಆದ ನಿನಗೆ ನಮಸ್ಕಾರವು.

ವರಿಷ್ಠಾಯ ವರೇಣ್ಯಾಯ ಸರ್ವಸ್ಮೈ ಪರಮಾತ್ಮನೇ ।
ನಮೋಽಖಿಲ ಜಗದ್ವ್ಯಾಪಿರೂಪಾಯಾಽನಂತಮೂರ್ತಯೇ ॥ ೧೫೪ ॥
ಸರ್ವಕಾರಣಭೂತಾಯ ನಿಷ್ಠಾಯ ಜ್ಞಾನಚೇತಸಾಂ ।
ನಮಃ ಸೂರ್ಯಸ್ವರೂಪಾಯ ಪ್ರಕಾಶಾಲಕ್ಷ್ಯರೂಪಿಣೇ ॥ ೧೫೫ ॥
ಭಾಸ್ಕರಾಯ ನಮಸ್ತುಭ್ಯಂ ತಥಾ ದಿನಕೃತೇ ನಮಃ ।
ಸರ್ವಸ್ಮೈ ಹೇತವೇ ಚೈವ ಸಂಧ್ಯಾಜ್ಯೋತ್ಸ್ನಾಕೃತೇ ನಮಃ ॥ ೧೫೬ ॥
ತ್ವಂ ಸರ್ವಮೇತದ್ಭಗವಂಜಗಚ್ಚ ಭ್ರಮತಾ ತ್ವಯಾ ।
ಭ್ರಮತ್ಯಾವಿಶ್ವಮಖಿಲಂ ಬ್ರಹ್ಮಾಂಡಂ ಸಚರಾಚರಂ ।
ತ್ವದಂಶುಭಿರಿದಂ ಸರ್ವಂ ಸ್ಪೃಷ್ಟಂ ವೈ ಜಾಯತೇ ಶುಚಿ ॥ ೧೫೭ ॥
ಕ್ರಿಯತೇ ತ್ವತ್ಕರಸ್ಪರ್ಶೈರ್ಜಲಾದೀನಾಂ ಪವಿತ್ರತಾ ॥ ೧೫೮ ॥
ಹೋಮದಾನಾದಿಕೋ ಧರ್ಮೋ ನೋಪಕಾರಾಯ ಜಾಯತೇ ।
ತಾತ ಯಾವನ್ನ ಸಂಯೋಗಿ ಜಗದೇತತ್ತ್ವದಂಶುಭಿಃ ॥ ೧೫೯ ॥
ಋಚಸ್ತೇ ಸಕಲಾಹ್ಯೇತಾಸ್ತಥಾ ಯಾನಿ ಯಜೂಂಷಿ ಚ ।
ಸಕಲಾನಿ ಚ ಸಾಮಾನಿ ನಿಪತಂತಿ ತ್ವದಂಗತಃ ॥ ೧೬೦ ॥

---

೧೫೪. ಉತ್ತಮನೂ, ಸರ್ವಸ್ವರೂಪನೂ, ಪರಮಾತ್ಮನೂ, ಸಮಸ್ತಜಗತ್ತುಗಳನ್ನು ವ್ಯಾಪಿಸಿರುವರೂಪುವುಳ್ಳವನೂ, ನಾಶವಿಲ್ಲದ ದೇಹವುಳ್ಳವನೂ ಆದ ಓ ಭಾಸ್ಕರ! ನಿನಗೆ ನಮಸ್ಕಾರವು.

೧೫೫. ಸಮಸ್ತಕ್ಕೂ ಕಾರಣನೂ, ಜ್ಞಾನಿಗಳಿಗೆ ಧ್ಯೇಯನಾದವನೂ, ಪ್ರಕಾಶದಿಂದ ಕಾಣದ ರೂಪವುಳ್ಳವನೂ ಆದ ಎಲೈ ಆದಿತ್ಯನೆ! ನಿನಗೆ ನಮಸ್ಕಾರವು.

೧೫೬. ಸಕಲಕಾರಣನೂ, ಸಂಧ್ಯಾಕಾಲ, ಬೆಳದಿಂಗಳುಗಳನ್ನುಂಟುಮಾಡುವವನೂ ಆದ ದಿನಕರನೆ! ನಿನಗೆ ನಮಸ್ಕಾರವು.

೧೫೭. ಪೂಜ್ಯನೆ! ನೀನು ತಿರುಗುತ್ತಿರುವಾಗ ಈ ಚರಾಚರಾತ್ಮಕವಾದ ಸಮಸ್ತ ಬ್ರಹ್ಮಾಂಡವು ತಿರುಗುವುದು. ನಿನ್ನ ಕಿರಣಗಳ ಸ್ಪರ್ಶದಿಂದ ಪ್ರಪಂಚವೆಲ್ಲ ಶುದ್ಧವಾಗುವುದು.

೧೫೮-೧೫೯. ನಿನ್ನಕಿರಣಗಳಿಂದಲೆ ನೀರು ಮೊದಲಾದುವುಗಳು ಪವಿತ್ರವಾಗುವುವು. ಪ್ರಪಂಚಕ್ಕೆ ನಿನ್ನ ಕಾಂತಿಗಳ ಸ್ಪರ್ಶವಾಗುವವರೆಗೆ ಹೋಮ ದಾನ ಮೊದಲಾದ ಧಾರ್ಮಿಕಕಾರ್ಯಗಳು ಸಫಲವಾಗುವುದಿಲ್ಲ.

೧೬೦. ಋಗ್ಯಜುಸ್ಸಾಮಗಳೆಂಬ ವೇದಗಳೆಲ್ಲ ನಿನ್ನ ಅಂಗದಿಂದಲೇ ಹೊರಡುವುವು.

ಋಙ್ಮಯಸ್ತ್ವಂ ಜಗನ್ನಾಥ ತ್ವಮೇವ ಚ ಯಜುರ್ಮಯಃ ।
ಯತಃ ಸಾಮಮಯಶ್ಚೈವ ತತೋ ನಾಥ ತ್ರಯೀಮಯಃ ॥ ೧೬೧ ॥
ತ್ವಮೇವ ಬ್ರಹ್ಮಣೋ ರೂಪಂ ಪರಂ ಚಾಽಪರಮೇವ ಚ ।
ಮೂರ್ತಾಮೂರ್ತಂ ತಥಾ ಸೂಕ್ಷ್ಮಂ ಸ್ಥೂಲಂ ರೂಪೇಣ ಸಂಸ್ಥಿತಃ ॥
ನಿಮೇಷ ಕಾಷ್ಠಾದಿಮಯಃ ಕಾಲರೂಪಕ್ಷಣಾತ್ಮಕಃ ।
ಪ್ರಸೀದ ಸ್ವೇಚ್ಛಯಾ ರೂಪಂ ಸ್ವಂ ತೇಜಃ ಶಮನಂ ಕುರು ।
ತ್ವಂ ದೇವ ಜಗತಾಂ ಹೇತೋರ್ದುಃಖಂ ಸಹಸಿ ದುಃಸಹಂ ॥ ೧೬೩ ॥
ತ್ವಂ ನಾಥ ಮೋಕ್ಷಿಣಾಂ ಮೋಕ್ಷೋ ಧ್ಯೇಯಸ್ತ್ವಂ ಧ್ಯಾಯತಾಂ ವರಃ ।
ತ್ವಂ ಗತಿಃ ಸರ್ವಭೂತಾನಾಂ ಕರ್ಮಕಾಂಡನಿವರ್ತಿನಾಂ ॥ ೧೬೪ ॥
ಶಂ ಪ್ರಜಾಭ್ಯೋಽಸ್ತು ದೇವೇಶ ಶನ್ನೋಽಸ್ತು ಜಗತಾಂ ಪತೇ ॥ ೧೬೫ ॥

ತ್ವಂ ಧಾತಾ ವಿಸೃಜಸಿ ವಿಶ್ವಮೇಕ ಏವ
ತ್ವಂ ಪಾತಾ ಸ್ಥಿತಿಕರಣಾಯ ಸಂಪ್ರವೃತ್ತಃ ।
ತ್ವಯ್ಯಂತೇ ಲಯಮಖಿಲಂ ಪ್ರಯಾತಿ ಚೈತ
ತ್ತ್ವತ್ತೋಽನ್ಯೋ ನ ಹಿ ತಪನಾಸ್ತಿ ಸರ್ವದಾತಾ ॥೧೬೬॥

---

೧೬೧. ಸ್ವಾಮಿ ! ನೀನು ಋಗ್ಯಜುಸ್ಸಾಮವೇದರೂಪನಾದುದರಿಂದ ತ್ರಯೀ ಸ್ವರೂಪನಾಗಿರುವೆ.

೧೬೨. ನೀನೇ ಪರಾಪರಬ್ರಹ್ಮರೂಪನು. ಹಾಗೆಯೇ ಮೂರ್ತ, ಅಮೂರ್ತ, ಸ್ಥೂಲ, ಸೂಕ್ಷ್ಮರೂಪನೂ ಆಗಿರುವೆ.

೧೬೩. ನೀನು ನಿಮಿಷ, ಕಾಷ್ಠ, ಕ್ಷಣಾತ್ಮಕವಾದ ಕಾಲರೂಪನು. ನೀನು ಪ್ರಸನ್ನನಾಗಿ ನಿನ್ನ ತೇಜಸ್ಸನ್ನು ಶಾಂತಗೊಳಿಸು. ದೇವ! ನೀನು ಜಗತ್ತಿಗಾಗಿ ಸಹಿಸಲಾಗದ ಕಷ್ಟವನ್ನು ಸಹಿಸುತ್ತಿರುವೆ.

೧೬೪. ಸ್ವಾಮಿ! ನೀನು ಮೋಕ್ಷಾರ್ಥಿಗಳಿಗೆ ಮೋಕ್ಷರೂಪನೂ, ಧ್ಯಾನಿಸುವವರಿಗೆ ಧ್ಯೇಯನೂ, ಕರ್ಮಕಾಂಡವನ್ನು ನೆರವೇರಿಸುವ ಸಕಲಪ್ರಾಣಿಗಳಿಗೆ ಗತಿಯೂ ಆಗಿರುವೆ.

೧೬೫–೧೬೬. ದೇವೇಶ ! ಪ್ರಜೆಗಳಿಗೆ ಸುಖವಾಗಲಿ. ಜಗದೊಡೆಯ ! ನಮಗೆ ಸೌಖ್ಯವಾಗಲಿ. ಸ್ರಷ್ಟೃವಾದ ನೀನೊಬ್ಬನೇ ಪ್ರಪಂಚವನ್ನು ಸೃಷ್ಟಿಮಾಡುವೆ. ನೀನೇ ಪ್ರಪಂಚವನ್ನು ಪಾಲಿಸಲುದ್ಯುಕ್ತನಾಗಿರುವೆ. ಅವಸಾನ ಕಾಲದಲ್ಲಿ ಎಲ್ಲವೂ ನಿನ್ನಲ್ಲಿಯೆ ಲಯವಾಗುವುದು. ಎಲೈ ಸೂರ್ಯನೆ! ನಿನಗಿಂತಲೂ ಬೇರೆ ಸಕಲಪ್ರದವಾದ ದೇವತೆಯಿಲ್ಲ.

ತ್ವಂ ಬ್ರಹ್ಮಾ ಹರಿಹರಸಂಜ್ಞಿತಸ್ತ್ವಮಿಂದ್ರೋ
ವಿತ್ತೇಶಃ ಪಿತೃಪಿತರಂಬುಪಃ ಸಮೀರಃ ।
ಸೋಮೋಽಗ್ನಿರ್ಗಗನಮಹಾಧರಾದಿರೂಪಃ
ಕಿಂ ನ ತ್ವಂ ಸಕಲಮನೋರಥಪ್ರದಾತಾ ॥ ೧೬೭ ॥
ಯಜ್ಞೈಸ್ತ್ವಾಮನುದಿನಮಾತ್ಮಕರ್ಮಸಕ್ತಾ
ಸ್ತುನ್ವಂತೋ ವಿವಿಧಪದೈರ್ದ್ವಿಜಾ ಯಜಂತಿ ।
ಧ್ಯಾಯಂತಃ ಸವಿನಯಚೇತಸೋ ಭವಂತಂ
ಯೋಗಸ್ಥಾಃ ಪರಮಪದಂ ಪ್ರಯಾಂತಿ ಮರ್ತ್ಯಾಃ ॥
ತಪಸಿ ಪಚಸಿ ವಿಶ್ವಂ ಪಾಸಿ ಭಸ್ಮೀ ಕರೋಷಿ
ಪ್ರಕಟಯಸಿ ಮಯೂಖೈರ್ಹ್ಲಾದಯಸ್ಯಂಶುಗರ್ಭೈಃ ।
ಸೃಜಸಿ ಕಮಲಜನ್ಮಾ ಪಾಲಯಸ್ಯಚ್ಯುತಾಖ್ಯಃ
ಕ್ಷಪಯಸಿ ಚ ಯುಗಾಂತೇ ರುದ್ರರೂಪಸ್ತ್ವಮೇಕಃ ॥

ಈಶ್ವರ ಉವಾಚ—

ಲಿಖಮಾನಸ್ತತೋ ಭಾನುಂ ವಿಶ್ವಕರ್ಮಾ ಪ್ರಜಾಪತಿಃ ।
ಉದ್ಭೂತಪುಲಕಃ ಸ್ತೋತ್ರಮಿದಂ ಚಕ್ರೇ ವಿವಸ್ವತಃ ॥ ೧೭೦ ॥

---

೧೬೭. ದಿನಕರ ! ಬ್ರಹ್ಮ, ವಿಷ್ಣು, ಮಹೇಶ್ವರ, ಇಂದ್ರ, ಕುಬೇರ, ಯಮ, ವರುಣ, ವಾಯು, ಚಂದ್ರ ಅಗ್ನಿ, ಆಕಾಶ, ಭೂಮಿ ಮೊದಲಾದ ದೇವತಾ ರೂಪನಾದ ನೀನು ಸಕಲೇಷ್ಟಾರ್ಥಗಳನ್ನೂ ಕೊಡುವವನಲ್ಲವೆ ?

೧೬೮. ತಮ್ಮ ಕರ್ಮಗಳಲ್ಲಿ ಆಸಕ್ತರಾದ ಬ್ರಾಹ್ಮಣರು ನಾನಾ ಬಗೆಯ ವಾಕ್ಯಗಳಿಂದ ನಿನ್ನನ್ನು ಸ್ತುತಿಸುತ್ತ ಯಜ್ಞಗಳಿಂದ ಪೂಜಿಸುತ್ತಾರೆ. ಯೋಗಾಭ್ಯಾಸ ನಿರತರಾದ ಮಾನವರು ವಿನಯದಿಂದ ನಿನ್ನನ್ನು ಧ್ಯಾನಿಸುತ್ತ ಮೋಕ್ಷವನ್ನು ಪಡೆಯುತ್ತಾರೆ.

೧೬೯. ದಿನಕರ ! ನೀನು ಪ್ರಪಂಚವನ್ನು ಸಂತಾಪಗೊಳಿಸುವೆ, ಕಾಪಾಡುವೆ, ಬೂದಿಮಾಡುವೆ, ಸ್ಪಷ್ಟಗೊಳಿಸುವೆ, ಜಲವುಳ್ಳ ಕಿರಣಗಳಿಂದ ಸಂತೋಷಗೊಳಿಸುವೆ, ನೀನೊಬ್ಬನೆ ಬ್ರಹ್ಮನಾಗಿ ಸೃಜಿಸುವೆ, ವಿಷ್ಣುವಾಗಿ ಕಾಪಾಡುವೆ, ರುದ್ರನಾಗಿ ಯುಗದ ಕೊನೆಯಲ್ಲಿ ನಾಶಮಾಡುವೆ.

೧೭೦. ಈಶ್ವರನು ಹೇಳುತ್ತಾನೆ:—ವಿಶ್ವಕರ್ಮನು ಸೂರ್ಯನನ್ನು ಉಜ್ಜುತ್ತ ರೋಮಾಂಚಗೊಂಡವನಾಗಿ ಅವನನ್ನು ಹೀಗೆ ಸ್ತುತಿಸಿದನು.

ವಿವಸ್ವತೇ ಪ್ರಣತಜನಾನುಕಂಪಿನೇ
ಮಹಾತ್ಮನೇ ಸಮಜವಸಪ್ತಸಪ್ತಯೇ ।
ಸತೇಜಸೇ ಕಮಲಕುಲಾಲಿಬಂಧವೇ
ಸದಾ ತಮಃಪಟಲಪಟಾವಪಾಟಿನೇ ॥ ೧೭೧ ॥

ಪಾವನಾತಿಶಯಸರ್ವಚಕ್ಷುಷೇ
ನೈಕಕಾಮವಿಷಯಪ್ರದಾಯಿನೇ ।
ಭಾಸುರಾಮಲಮಯೂಖಮಾಲಿನೇ
ಸರ್ವಭೂತಹಿತಕಾರಿಣೇ ನಮಃ ॥ ೧೭೨ ॥

ಅಜಾಯ ಲೋಕತ್ರಯಭಾವನಾಯ
ಭೂತಾತ್ಮನೇ ಗೋಪತಯೇ ವೃಷಾಯ ।
ನಮೋ ಮಹಾಕಾರುಣಿಕೋತ್ತಮಾಯ
ಸೂರ್ಯಾಯ ವಸ್ತುಪ್ರಭವಾಲಯಾಯ ॥ ೧೭೩ ॥

ವಿವಸ್ವತೇ ಜ್ಞಾನಭೃತೇಽಂತರಾತ್ಮನೇ
ಜಗತ್ಪ್ರತಿಷ್ಠಾಯ ಜಗದ್ಧಿತೈಷಿಣೇ ।
ಸ್ವಯಂಭುವೇ ನಿರ್ಮಲಲೋಕಚಕ್ಷುಷೇ
ಸುರೋತ್ತಮಾಯಾಮಿತತೇಜಸೇ ನಮಃ ॥ ೧೭೪ ॥

೧೭೧–೧೭೨. ನಮಸ್ಕಾರಮಾಡಿದ ಭಕ್ತರಲ್ಲಿ ದಯೆಯುಳ್ಳವನೂ, ಮಹಾತ್ಮನೂ ಸಮವಾದ ವೇಗವುಳ್ಳ ಏಳು ಕುದುರೆಗಳುಳ್ಳವನೂ, ತೇಜಸ್ಸಿನಿಂದ ಕೂಡಿದವನೂ, ಕಮಲಗಳ ಸಮೂಹ, ದುಂಬಿವಿಂಡುಗಳಿಗೆ ಬಂಧುವೂ, ಯಾವಾಗಲೂ ಕತ್ತಲೆಯ ಸಮೂಹವೆಂಬ ಬಟ್ಟೆಯನ್ನು ಸೀಳುವವನೂ, ಪವಿತ್ರವೂ, ಅತಿಶಯವೂ ಆದ ಸಕಲ ನೇತ್ರಗಳುಳ್ಳವನೂ, ಅನೇಕ ಇಷ್ಟಾರ್ಥಗಳನ್ನು ಕೊಡುವವನೂ, ಪ್ರಕಾಶಮಾನವಾದ ಶುದ್ಧ ಕಿರಣಗಳುಳ್ಳವನೂ, ಸಕಲ ಪ್ರಾಣಿಗಳಿಗೆ ಹಿತವನ್ನುಂಟುಮಾಡುವವನೂ ಆದ ಎಲೈ ಸೂರ್ಯನೆ! ನಿನಗೆ ನಮಸ್ಕಾರವು.

೧೭೩. ಉತ್ಪತ್ತಿಯಿಲ್ಲದವನೂ, ಮೂರು ಲೋಕಗಳನ್ನು ಸೃಜಿಸಿದವನೂ, ಪಂಚಭೂತಸ್ವರೂಪನೂ, ಕಿರಣಗಳಿಗಧಿಪತಿಯೂ, ಧರ್ಮರೂಪನೂ, ಅತ್ಯಂತದಯಾಳುವೂ, ಪದಾರ್ಥ ಸೃಷ್ಟಿಗೆ ಆಶ್ರಯನೂ ಆದ ಓ ಭಾಸ್ಕರನೆ ! ನಿನಗೆ ನಮಸ್ಕಾರವು.

೧೭೪. ಜ್ಞಾನಿಯೂ, ಪರಮಾತ್ಮನೂ, ಜಗತ್ತಿನ ಸ್ಥಿತಿಗೆ ಕಾರಣನೂ, ಪ್ರಪಂಚದ ಹಿತವನ್ನು ಬಯಸುವವನೂ, ಲೋಕಕ್ಕೆ ನಿರ್ಮಲ ನೇತ್ರದಂತಿರುವವನೂ, ದೇವೋತ್ತಮನೂ, ಅತ್ಯಂತ ತೇಜಸ್ವಿಯೂ ಆದ ಸೂರ್ಯದೇವ! ನಿನಗೆ ನಮಸ್ಕಾರವು.

ಕ್ಷಣಮುದಯಾಚಲಭಾಲಿತಾರ್ಚಿಃ
ಸುರಗಣಗೀತಿಗರಿಷ್ಠಗೀತಃ ।
ತ್ವಮುತ ಮಯೂಖಸಹಸ್ರವ
ಜ್ಜಗತಿ ವಿಕಾಸಿತಪದ್ಮನಾಭಃ ॥ ೧೭೫ ॥

ತವ ತಿಮಿರಾಸವಪಾನಮದಾ
ದ್ಭವತಿ ವಿಲೋಹಿತವಿಗ್ರಹತಾ ।
ಮಿಹಿರವಿಭಾಸತಯಾ ಸುತರಾಂ
ತ್ರಿಭುವನ ಭಾವನಮಾತ್ರಪರಃ ॥ ೧೭೬ ॥

ರಥಮಾರುಹ್ಯ ಸಮಾವಯವಂ
ರುಚಿರವಿಕಲಿತದಿವ್ಯಹಯಂ ।
ಸತತಮರಿಬಲೇ ಭಗವಂ
ಶ್ಚರಸಿ ಜಗದ್ಧಿತಬದ್ಧರಸಃ ॥ ೧೭೭ ॥

ಅಮೃತಮಯೇನ ರಸೇನ ಸಮಂ
ವಿಬುಧಪಿತೄನಪಿ ತರ್ಪಯಸೇ ।
ಅರಿಗಣ ಸೂದನ ತೇನ ತವ
ಪ್ರಣತಿಮುಪೇತ್ಯ ಲಿಖಾಮಿ ವಪುಃ ॥ ೧೭೮ ॥

---

೧೭೫. ಉದಯ ಪರ್ವತವನ್ನು ಬೆಳಗಿದ ಕಾಂತಿಯುಳ್ಳವನೂ, ದೇವತೆಗಳಿಂದ ಗಾನಮಾಡಲ್ಪಟ್ಟ ಹಾಡುಗಳುಳ್ಳವನೂ, ಅನೇಕ ಕಿರಣಗಳುಳ್ಳವನೂ ಆದ ನೀನು ಪ್ರಪಂಚದಲ್ಲಿ ವಿಷ್ಣುವನ್ನು ಪ್ರಕಾಶಗೊಳಿಸಿರುವೆ.

೧೭೬. ದಿನಕರ ! ಕತ್ತಲೆಯೆಂಬ ಮದ್ಯ ಪಾನದಿಂದ ಮದಿಸಿ ನಿನ್ನ ದೇಹವು ಕೆಂಪಾಗುವುದು. ನೀನು ಪ್ರಕಾಶದಿಂದ ಮೂರು ಲೋಕವನ್ನು ಪ್ರಕಾಶಗೊಳಿಸಲು ಆಸಕ್ತನಾಗಿರುವೆ.

೧೭೭. ನೀನು ವ್ಯತ್ಯಾಸವಾಗದಪ್ಪೂ, ಮನೋಹರವಾದುದೂ, ಸಮಾನವಾದ ಅವಯವಗಳುಳ್ಳದೂ ಆದ ರಥವನ್ನೇರಿ ಯಾವಾಗಲೂ ಪ್ರಪಂಚಕ್ಕೆ ಹಿತವನ್ನುಂಟು ಮಾಡುವುದರಲ್ಲಿ ಪ್ರೀತಿಯುಳ್ಳವನಾಗಿ ಶತ್ರುಸೈನ್ಯದಲ್ಲಿ ಸಂಚರಿಸುವೆ.

೧೭೮. ಶತ್ರುಸಂಹಾರಕನಾದ ಓ ಭಾಸ್ಕರ ! ನೀನು ಅಮೃತರೂಪವಾದ ನೀರಿನಿಂದ ದೇವತೆಗಳನ್ನೂ, ಪಿತೃಗಳನ್ನೂ ಸಂತೋಷಗೊಳಿಸುವೆ. ಆದುದರಿಂದ ನಿನ್ನನ್ನು ವಂದಿಸಿ ನಿನ್ನ ಶರೀರವನ್ನು ಉಜ್ಜಿ ಕೃಶಗೊಳಿಸುತ್ತೇನೆ.

ಶುಭಸಮವರ್ಣಮಯಂ ರಚಿತಂ
ತವ ಪದಪಾಂಸುಪವಿತ್ರತಮಂ ।
ನತಜನವತ್ಸಲ ಮಾಂ ಪ್ರಣತಂ
ತ್ರಿಭುವನಪಾವನ ಪಾಹಿ ರವೇ ॥ ೧೭೯ ॥

ಇತಿ ಸಕಲಜಗತ್ಪ್ರಸೂತಿಭೂತಂ
ತ್ರಿಭುವನಭಾವನಧಾಮಹೇತುಮೇಕಂ ।
ರವಿಮಖಿಲಜಗತ್ಪ್ರದೀಪಭೂತಂ
ತ್ರಿದಶವರಂ ಪ್ರಣತೋಽಸ್ಮಿ ದೇವದೇವಂ ॥ ೧೮೦ ॥

ಈಶ್ವರ ಉವಾಚ :—

ಹಾಹಾಹೂಹೂಶ್ಚ ಗಂಧರ್ವೌ ನಾರದಸ್ತುಂಬುರುಸ್ತಥಾ ।
ಉಪಗಾತುಂ ಸಮಾರಬ್ಧಾ ಗಾಂಧರ್ವಕುಶಲಾ ರವಿಂ ॥ ೧೮೧ ॥
ಷಡ್ಜಮಧ್ಯಮಗಾಂಧಾರಗ್ರಾಮತ್ರಯವಿಶಾರದಾಃ ।
ಮೂರ್ಛನಾಭಿಶ್ಚ ತಾನೈಶ್ಚ ಸುಪ್ರಯೋಗೈಃ ಸುಖಪ್ರದಂ ॥ ೧೮೨ ॥
ಸಪ್ತಸ್ವರವಿನಿರ್ವೃತ್ತಂ ಯತಿತ್ರಯವಿಭೂಷಿತಂ ।
ಸಪ್ತಧಾತುಸಮಾಯುಕ್ತಂ ಷಡ್ಜಾತಿತ್ರಿಗುಣಾಶ್ರಯಂ ॥ ೧೮೩ ॥

---

೧೭೯. ನಮಸ್ಕರಿಸಿದ ಜನರಲ್ಲಿ ಪ್ರೀತಿಯುಳ್ಳವನೂ, ಮೂರುಲೋಕಗಳಲ್ಲಿ ಪವಿತ್ರನೂ ಆದ ದಿನಕರ! ನೀನು ಪಾದಧೂಳಿಯಿಂದ ಅತ್ಯಂತ ಪವಿತ್ರನಾದ ಈ ಜಗತ್ತನ್ನು ಸಮಾನ ಬಣ್ಣವುಳ್ಳದನ್ನಾಗಿ ಮಾಡಿರುವೆ. ನಿನಗೆ ನಮಸ್ಕಾರ ಮಾಡಿದ ನನ್ನನ್ನು ಕಾಪಾಡು.

೧೮೦. ಹೀಗೆ ಸಕಲಜಗತ್ತಿಗೆ ಕಾರಣನೂ, ಮೂರುಲೋಕಗಳನ್ನು ಪ್ರಕಾಶಗೊಳಿಸುವ ಕಿರಣಗಳಿಗೆ ಕಾರಣನೂ, ಸಮಸ್ತಜಗತ್ತುಗಳಿಗೆ ದೀಪದಂತಿರುವವನೂ, ದೇವಶ್ರೇಷ್ಠನೂ ಆದ ಓ ಸೂರ್ಯದೇವ! ನಿನ್ನನ್ನು ನಮಸ್ಕರಿಸುವೆನು.

೧೮೧. ಈಶ್ವರನು ಹೇಳುತ್ತಾನೆ:—ಸಂಗೀತದಲ್ಲಿ ನಿಪುಣರಾದ ಹಾಹಾ ಹೂಹೂ ಎಂಬ ಗಂಧರ್ವರೂ, ನಾರದತುಂಬುರು ಮುನಿಗಳೂ ಸೂರ್ಯನನ್ನುದ್ದೇಶಿಸಿ ಹಾಡುವುದಕ್ಕಾರಂಭಿಸಿದರು.

೧೮೨–೧೮೮. ಷಡ್ಜ, ಮಧ್ಯಮ, ಗಾಂಧಾರವೆಂಬ ಮೂರು ಸ್ವರಗಳಲ್ಲಿ ನಿಪುಣರಾದ ಗಾಯಕರು ಆರೋಹಣಾವರೋಹಣಗಳಿಂದಲೂ, ತಾನಗಳಿಂದಲೂ, ಸುಖಕರವೂ, ಏಳು ಸ್ವರಗಳಿಂದುಂಟಾದುದೂ, ಮೂರು ಯತಿಗಳುಳ್ಳದೂ, ಸಪ್ತಧಾತುಗಳೆಂಬ

ಚತುರ್ಗೀತಸಮಾಯುಕ್ತಂ ಚತುರ್ವರ್ಣಸಮುತ್ಥಿತಂ ।
ಚತುರ್ವರ್ಣಪ್ರತೀಕಾರಂ ಸಪ್ತಾಽಲಂಕಾರಭೂಷಿತಂ ॥ ೧೪೪ ॥
ತ್ರಿಸ್ಥಾನಶುದ್ಧಂ ತ್ರಿಲಯಂ ಸಮ್ಯಕ್ಕಾಲವ್ಯವಸ್ಥಿತಂ ।
ಚಿತ್ತೇ ಚಿತ್ತೇ ಚ ನೃತ್ಯೇ ಚ ರಸೇಷು ಲಯಸಂಯುತಂ ॥ ೧೪೫ ॥
ಚತುರ್ವಿಂಶದ್ಗುಣೈರ್ಯುಕ್ತಂ ಜಗುರ್ಗೀತಂ ಚ ಗಾಯನಾಃ ।
ವಿಶ್ವಾಚೀ ಚ ಘೃತಾಚೀ ಚ ಉರ್ವಶ್ಯಥ ತಿಲೋತ್ತಮಾ ॥ ೧೪೬ ॥
ಮೇನಕಾ ಸಹಜನ್ಯಾ ಚ ರಂಭಾಚಾಽಪ್ಸರಸಾಂ ವರಾ ।
ಚತುರ್ವಿಧಪದಂ ತಾಲಂ ತ್ರಿಃಪ್ರಕಾರಂ ಲಯತ್ರಯಂ ॥ ೧೪೭ ॥
ಯತಿತ್ರಯಂ ತಥಾಽಽತೋದ್ಯಂ ನಾಟ್ಯಂ ಚೈವ ಚತುರ್ವಿಧಂ ।
ನನೃತುರ್ಜಗತಾಮೀಶೇ ಲಿಖ್ಯಮಾನೇ ವಿಭಾವಸೌ ॥ ೧೪೮ ॥
ಭಾವಾನ್ಭಾವವಿಶಾರದ್ಯಃ ಕುರ್ವಂತ್ಯೋ ವಿಧಿವದ್ಬಹೂನ್ ।
ದೇವದುಂದುಭಯಃ ಶಂಖಾಃ ಶತಶೋಽಥ ಸಹಸ್ರಶಃ ॥ ೧೪೯ ॥
ಅನಾಹತಾ ಮಹಾದೇವಿ ನೇದಿರೇ ಘನನಿಃಸ್ವನಾಃ ।
ಗಾಯದ್ಭಿಶ್ಚೈವ ಗಂಧರ್ವೈರ್ನೃತ್ಯದ್ಭಿಶ್ಚಾಽಪ್ಸರೋಗಣೈಃ ॥ ೧೫೦ ॥

ಸ್ವರಗಳಿಂದ ಕೂಡಿದುದೂ, ಆರುಜಾತಿಗಳಾದ ಮೂರು ಗುಣಗಳುಳ್ಳುದೂ, ನಾಲ್ಕು ಗೀತಗಳಿಂದ ಕೂಡಿದುದೂ, ನಾಲ್ಕುವರ್ಣಗಳಿಂದುಂಟಾದುದೂ, ನಾಲ್ಕು ವರ್ಣಗಳ ಪ್ರತಿಕ್ರಿಯೆಯುಳ್ಳದೂ, ಏಳು ಅಲಂಕಾರಗಳಿಂದ ಅಲಂಕಾರಗೊಂಡುದೂ ಮೂರು ಸ್ಥಾನಗಳಿಂದ ಶುದ್ಧವಾದುದೂ, ಮೂರುಲಯವುಳ್ಳದೂ, ಸರಿಯಾದ ಕಾಲವ್ಯವಸ್ಥೆಯುಳ್ಳದೂ, ಮನಸ್ಸಿನಲ್ಲಿಯೂ ನೃತ್ಯದಲ್ಲಿಯೂ, ರಸಗಳಲ್ಲಿಯೂ, ಲಯದಿಂದ ಕೂಡಿರುವುದೂ, ಇಪ್ಪತ್ತನಾಲ್ಕು ಗುಣವುಳ್ಳುದೂ ಆದ ಹಾಡನ್ನು ಹಾಡಿದರು. ವಿಶ್ವಾಚೀ, ಘೃತಾಚೀ, ಉರ್ವಶೀ, ತಿಲೋತ್ತಮಾ, ಮೇನಕಾ, ಸಹಜನ್ಯಾ, ರಂಭಾ ಮೊದಲಾದ ದೇವವೇಶ್ಯೆಯರು ಜಗದೀಶನಾದ ಸೂರ್ಯನು ಉಜ್ಜಲ್ಪಡುತ್ತಿರಲು ನಾಲ್ಕು ಪಾದವುಳ್ಳದೂ, ಮೂರುತಾಲವುಳ್ಳುದೂ, ಮೂರು ಲಯವುಳ್ಳದೂ, ಮೂರು ಯತಿಗಳುಳ್ಳುದೂ, ಆದವಾದ್ಯವನ್ನು ಬಾರಿಸಿದರು. ಮತ್ತು ನಾಲ್ಕು ವಿಧ ನಾಟ್ಯವನೂ ಅಭಿನಯಿಸಿದರು.

೧೪೯–೧೫೨. ಅವರು ಬಹುವಿಧವಾದ ಭಾವಗಳನ್ನು ಪ್ರಕಟಿಸಿದರು. ದೇವಿ! ದೇವತೆಗಳ ಸಾವಿರಾರು ನಗಾರಿಗಳೂ, ಶಂಖಗಳೂ, ತಾವಾಗಿಯೇ ಮೊಳಗಿದುವು. ಗಂಧರ್ವರು ಹಾಡುತ್ತಲೂ, ಅಪ್ಸರರು ಕುಣಿಯುತ್ತಲೂ ಕೊಳಲು, ವೀಣೆ, ಝುರ್ಝರ, ಪಣವ, ಪುಷ್ಕರ, ಮೃದಂಗ, ಪಟಹ, ಆನಕಗಳನ್ನು ಕೈಮುಗಿದು ಭಕ್ತಿ

ಅವಾದ್ಯಂತ ತತಸ್ತತ್ರ ವೇಣುವೀಣಾದಿಝರ್ಝರಾಃ ।
ಪಣವಾಃ ಪುಷ್ಕರಾಶ್ಚೈವ ಮೃದಂಗಪಟಹಾನಕಾಃ ॥ ೧೯೧ ॥
ತೂರ್ಯವಾದಿತ್ರಘೋಷೈಶ್ಚ ಸರ್ವಂ ಕೋಲಾಹಲೀಕೃತಂ ।
ತತಃ ಕೃತಾಂಜಲಿಪುಟಾ ಭಕ್ತಿನಮ್ರಾತ್ಮಮೂರ್ತಯಃ ॥ ೧೯೨ ॥
ತತಃ ಕಲಕಲೇ ತಸ್ಮಿನ್ ಸರ್ವದೇವಸಮಾಗಮೇ ।
ಸಂವತ್ಸರಂ ಭ್ರಮಸ್ಥಸ್ಯ ವಿಶ್ವಕರ್ಮಾ ರವೇಸ್ತತಃ ॥ ೧೯೩ ॥
ತೇಜಸಃ ಶಾತನಂ ಚಕ್ರೇ ಸ್ತೂಯಮಾನಸ್ಯ ದೈವತೈಃ ।
ದೇವಂ ಚಕ್ರೇ ಸಮಾರೋಪ್ಯ ಭ್ರಾಮಯಾಮಾಸ ಸೂತ್ರಭೃತ್ ॥ ೧೯೪ ॥
ಮೃತ್ಪಿಂಡವತ್ಕುಲಾಲಸ್ಯ ಸಂಸ್ಪೃಶನ್ ಕ್ಷುರಧಾರಯಾ ।
ಪತಂಗಸ್ಯ ಸ್ತವಂ ಕುರ್ವನ್ ವಿಶ್ವಕರ್ಮಾ ದಿವಸ್ಪತೇಃ ॥ ೧೯೫ ॥
ತೇಜಸಃ ಷೋಡಶಂ ಭಾಗಂ ಮಂಡಲಸ್ಥಮಧಾರಯತ್ ।
ಶಾತಿತಂ ತಸ್ಯ ತತ್ತೇಜೋ ಯಾವತ್ಪಾದೌ ವರಾನನೇ ॥ ೧೯೬ ॥
ಯತ್ತಸ್ಯ ಋಙ್ಮಯಂ ತೇಜಸ್ತತ್ಪ್ರಭಾಸೇಽಪತತ್ಪ್ರಿಯೇ ।
ಯಜುರ್ಮಯೇನ ದೇವೇಶಿ ಭಾವಿತಾ ದ್ಯೌರ್ಮಹಾಪ್ರಭೋಃ ॥ ೧೯೭ ॥
ಸ್ವರ್ಗಂ ಸಾಮಮಯೇನಾಪಿ ಭೂರ್ಭುವಸ್ಸ್ವರಿತಿ ಸ್ಥಿತಂ ।
ತತಸ್ತೈಸ್ತೇಜಸೋ ಭಾಗೈರ್ದಶಭಿಃ ಪಂಚಭಿಸ್ತಥಾ ॥ ೧೯೮ ॥

ಯಿಂದ ಬಾರಿಸಿದರು. ಹೀಗೆ ವೀಣೆ, ಮೃದಂಗ, ಕೊಳಲು, ತಾಲಗಳ ಶಬ್ದಗಳಿಂದ ಬಹಳ ಗದ್ದಲವಾಯಿತು.

೧೯೩–೧೯೬. ಬಳಿಕ ಆ ಗದ್ದಲದಲ್ಲಿ ಸಕಲ ದೇವತೆಗಳು ನೆರೆದು ಸ್ತುತಿ ಸುತ್ತಿರಲು ವಿಶ್ವಕರ್ಮನು ಒಂದು ವರ್ಷಕಾಲ ಸೂರ್ಯನನ್ನು ಕುಂಬಾರನು ಮಣ್ಣಿನ ಮುದ್ದೆಯನ್ನು ಚಕ್ರದಲ್ಲಿಟ್ಟು ತಿರುಗಿಸುವಂತೆ ಚಕ್ರದಲ್ಲಿರಿಸಿ ಕತ್ತರಿಯ ಅಲಗಿನಿಂದ ಮುಟ್ಟುತ್ತಲೂ, ಸ್ತುತಿಗೆಯ್ಯುತ್ತಲೂ ಸಾಣೆಹಿಡಿದನು.

೧೯೭. ಹೀಗೆ ಅವನು ಸೂರ್ಯನ ಮಂಡಲದಲ್ಲಿ ಹದಿನಾರನೆಯ ಒಂದು ಭಾಗ ತೇಜಸ್ಸನ್ನುಳಿಸಿ ಉಳಿದ ಭಾಗಗಳನ್ನು ಸಾಣೆ ಹಿಡಿದನು. ಸಾಣೆ ಹಿಡಿದ ಭಾಗಗಳಲ್ಲಿ ಋಗ್ವೇದ ರೂಪವಾದ ತೇಜಸ್ಸು ಪ್ರಭಾಸದಲ್ಲಿ ಬಿದ್ದಿತು. ಆ ಸೂರ್ಯನ ಯಜುರ್ವೇದ ರೂಪವಾದ ತೇಜಸ್ಸಿನಿಂದ ಆಕಾಶವಾಯಿತು.

೧೯೮–೨೦೧. ಸಾಮಮಯ ಭಾಗದಿಂದ ಸ್ವರ್ಗವಾಯಿತು. ಹೀಗೆ ಭೂರ್ಭುವ ಸ್ವರ್ಲೋಕಗಳು ಹುಟ್ಟಿದ ಮೇಲೆ ಆ ತೇಜಸ್ಸಿನ ಹದಿನೈದು ಭಾಗಗಳಿಂದ ವಿಷ್ಣುವಿನ

ತೇನ ವೈ ನಿರ್ಮಿತಂ ಚಕ್ರಂ ವಿಷ್ಣೋಃ ಶೂಲಂ ಹರಸ್ಯ ಚ ।
ಮಹಾಪ್ರಭಂ ಮಹಾಕಾಯಂ ಶಿಬಿಕಾ ಧನದಸ್ಯ ಚ ॥ ೧೯೯ ॥
ದಂಡಃ ಪ್ರೇತಪತೇಃ ಶಕ್ತಿರ್ದೇವಸೇನಾಪತೇಸ್ತಥಾ ।
ಅನ್ಯೇಷಾಂ ಚ ಸುರಾಣಾಂ ಚ ಅಸ್ತ್ರಾಣ್ಯುಕ್ತಾನಿ ಯಾನಿ ವೈ ॥ ೨೦೦ ॥
ಯಕ್ಷವಿದ್ಯಾಧರಾಣಾಂ ಚ ತಾನಿ ಚಕ್ರೇ ಸ ವಿಶ್ವಕೃತ್ ।
ತತಃ ಷೋಡಶಮಂ ಭಾಗಂ ಬಿಭರ್ತಿ ಭಗವಾನ್ ರವಿಃ ।
ತತ್ತೇಜೋ ರವಿಭಾಗಶ್ಚ ಖಸ್ಥೋ ವಿಚರತಿ ಪ್ರಿಯೇ ॥ ೨೦೧ ॥
ಇತಿ ಶಾತಿತತೇಜಾಃ ಸ ಶ್ವಶುರೇಣಾತಿಶೋಭನಂ ।
ವಪುರ್ದಧಾರ ಮಾರ್ತಂಡಃ ಪುಷ್ಪಬಾಣಮನೋರಮಂ ॥ ೨೦೨ ॥
ತತಃ ಸುರೂಪಧೃಗ್ಭಾನುರುತ್ತರಾನಗಮತ್ಕುರೂನ್ ।
ದದೃಶೇ ತತ್ರ ಸಂಜ್ಞಾಂ ತು ವಡವಾರೂಪಧಾರಿಣೀಂ ॥ ೨೦೩ ॥
ಅಪಾಪಾಂ ಸರ್ವಭೂತಾನಾಂ ತಪಸಾ ನಿಯಮೇನ ಚ ।
ಸಾ ಚ ದೃಷ್ಟ್ವಾ ತಮಾಯಾಂತಂ ಪರಪುಂಸೋ ವಿಶಂಕಯಾ ॥ ೨೦೪ ॥
ತತಶ್ಚ ನಾಸಿಕಾಯೋಗೇ ತಯೋಸ್ತತ್ರ ಸಮೇತಯೋಃ ।
ನಾಸತ್ಯದಸ್ರೌ ತನಯಾವಶ್ವವಕ್ತ್ರೌ ವಿನಿರ್ಗತೌ ॥ ೨೦೫ ॥

ಚಕ್ರವೂ, ಹರನ ತ್ರಿಶೂಲವೂ, ಕುಬೇರನ ಪಲ್ಲಕ್ಕಿಯೂ ಯಮನ ದಂಡವೂ, ಕುಮಾರಸ್ವಾಮಿಯ ಶಕ್ತಿಯೂ, ಇತರ ದೇವತೆಗಳ ಮತ್ತು ಯಕ್ಷ, ವಿದ್ಯಾಧರರ ಆಯುಧಗಳೂ ನಿರ್ಮಿತವಾದುವು. ಹದಿನಾರನೆಯ ಭಾಗವನ್ನು ಸೂರ್ಯನು ಧರಿಸಿ ಸಂಚರಿಸುತ್ತಿರುವನು.

೨೦೨. ಮಾವನಾದ ವಿಶ್ವಕರ್ಮನು ಹೀಗೆ ಸಾಣೆಹಿಡಿದು ಸೂರ್ಯನ ತೇಜಸ್ಸನ್ನು ಕಡಿಮೆ ಮಾಡಲು ಅವನು ಮನ್ಮಥನಂತೆ ಸುಂದರವಾದ ದೇಹವುಳ್ಳವನಾದನು.

೨೦೩–೨೦೪. ಬಳಿಕ ಸುಂದರ ರೂಪನಾದ ಸೂರ್ಯನು ಉತ್ತರ ಕುರುದೇಶಕೆ ಸಾಗಿ ಅಲ್ಲಿ ತಪಸ್ಸಿನಿಂದಲೂ, ನಿಯಮದಿಂದಲೂ ಸಕಲ ಪ್ರಾಣಿಗಳಿಗೆ ಹಿತವನ್ನು ಮಾಡಿದವಳೂ, ವಡವಾರೂಪವನ್ನು ಧರಿಸಿದವಳೂ ಆದ ಸಂಜ್ಞೆಯನ್ನು ಕಂಡನು. ಅವಳು ಬರುತ್ತಿರುವ ಅಶ್ವರೂಪವನ್ನು ಧರಿಸಿದ ಆ ಸೂರ್ಯನನ್ನು ಕಂಡು ಪರಪುರುಷನೆಂಬ ಶಂಕೆಯಿಂದ ಅವನ ಎದುರಾಗಿ ಹೋದಳು.

೨೦೫. ಅಲ್ಲಿ ಒಟ್ಟಿಗೆ ಸೇರಿದ ಅವರಿಬ್ಬರ ಮೂಗುಗಳು ಪರಸ್ಪರ ಒಟ್ಟಿಗೆ ಕೂಡಲು ಅಶ್ವಮುಖರಾದ ಅಶ್ವಿನೀ ದೇವತೆಗಳು ಅವರಿಂದ ಹೊರ ಹೊರಟರು.

ರೇತಸೋಽಂತೇ ಚ ರೇವಂತಃ ಖಡ್ಗೀ ಛತ್ರೀ ತನುತ್ರಭೃತ್ ।
ಪಿತುರ್ಗೃಹ್ಯೋತ್ತಮಂ ಸೋಽಶ್ವಂ ಜಾತಮಾತ್ರಃ ಪಲಾಯತ ॥ ೨೦೬ ॥
ಸ ತಸ್ಮಿನ್ ಸಕೃದಾರೂಢಸ್ತಮಶ್ವಂ ನೈವ ಮುಂಚತಿ ।
ತತೋಽರ್ಕೇಣ ಸಮಾದಿಷ್ಟೌ ದಂಡನಾಯಕಪಿಂಗಲೌ ॥ ೨೦೭ ॥
ಅಶ್ವಂ ಪ್ರತ್ಯಾನಯಧ್ವಂ ಮೇ ಮಾ ಬಲಾಚ್ಛಿದ್ರತೋಽಸ್ಯ ತು ।
ಪಾರ್ಶ್ವಸ್ಥೌ ತಿಷ್ಠತಸ್ತಸ್ಯ ಅಶ್ವಛಿದ್ರಾಭಿಕಾಂಕ್ಷಿಣೌ ॥ ೨೦೮ ॥
ನ ಚ ಛಿದ್ರಂ ಲಭೇತೇ ತೌ ತಸ್ಯಾಽದ್ಯಾಪಿ ಮಹಾತ್ಮನಃ ।
ಅಗ್ರೇ ಗಚ್ಛತಿ ರೇವಂತೇ ಪೃಷ್ಠಗೌ ದಂಡಪಿಂಗಲೌ ॥ ೨೦೯ ॥
ಉತ್ತರೇಭ್ಯಃ ಕುರುಭ್ಯಸ್ತು ನಿರ್ಗತೌ ವೇಗವತ್ತರೌ ।
ದಕ್ಷಿಣಂ ಭಾರತಂ ಪ್ರಾಪ್ತೌ ಯತ್ರ ಕ್ಷೇತ್ರಂ ಪ್ರಭಾಸಿಕಂ ॥ ೨೧೦ ॥
ಅತ್ಯರ್ಥಂ ವೇಗಖಿನ್ನೌ ತೌ ಸ ಚ ರೇವಂತಕೋಽಪಿ ಹಿ ।
ಪ್ರಸ್ವಿನ್ನಗಾತ್ರಃ ಸೋಚ್ಛ್ವಾಸೋ ರೇವಂತಸ್ತತ್ರ ಸಂಸ್ಥಿತಃ ॥ ೨೧೧ ॥

---

೨೦೬. ಅವರಿಬ್ಬರ ರೇತಸ್ಸೇಚನವಾದ ಕೂಡಲೆ ಖಡ್ಗ, ಛತ್ರ, ಕವಚಗಳನ್ನು ಧರಿಸಿದ ರೇವಂತನೆಂಬ ತನಯನು ಜನಿಸಿದನು. ಅವನು ಕೂಡಲೆ ತಂದೆಯ ಕುದುರೆಯನ್ನು ತೆಗೆದುಕೊಂಡು ಓಡಿಹೋದನು.

೨೦೭—೨೧೦. ಆ ರೇವಂತನು ಒಂದಾವೃತ್ತಿ ಆ ಸೂರ್ಯನ ಕುದುರೆಯನ್ನೇರಿ ಇಳಿಯಲೇ ಇಲ್ಲ. ಆಗ ಸೂರ್ಯನು ಅವಕಾಶವನ್ನರಿತು ಬಲಾತ್ಕರಿಸದೆ ನನ್ನ ಕುದುರೆಯನ್ನು ಹಿಂದಕ್ಕೆ ತೆಗೆದುಕೊಂಡು ಬನ್ನಿರಿ ಎಂದು ದಂಡನಾಯಕ ಪಿಂಗಲರಿಗೆ ಆಜ್ಞೆ ಮಾಡಿದನು. ಅವರು ಅಶ್ವವನ್ನು ಹಿಡಿಯಲು ಅವಕಾಶವನ್ನು ನಿರೀಕ್ಷಿಸುತ್ತ ಅವನ ಪಕ್ಕದಲ್ಲಿದ್ದರೂ ಅವಕಾಶವನ್ನು ಹೊಂದಲಿಲ್ಲ. ಆ ದಂಡ ಪಿಂಗಲರು ಮುಂದೆ ಸಾಗುತ್ತಿರುವ ಆ ರೇವಂತನನ್ನು ಹಿಂಬಾಲಿಸುತ್ತ ವೇಗದಿಂದ ಉತ್ತರಕುರು ದೇಶದಿಂದ ಹೊರಟ ಪ್ರಾಭಾಸ ಕ್ಷೇತ್ರವು ನೆಲೆಸಿರುವ ದಕ್ಷಿಣ ಭಾರತ ದೇಶವನ್ನು ಸೇರಿದರು.

೨೧೧. ಅವರು ಅತ್ಯಂತ ವೇಗದಿಂದ ಖೇದಗೊಂಡರು. ಆ ರೇವಂತನೂ ಬೆವರು ಸುರಿಯುತ್ತಿರುವ ಶರೀರವುಳ್ಳವನೂ, ನಿಟ್ಟುಸಿರುಬಿಡುವವನೂ ಆಗಿ ಅಲ್ಲಿಯೇ ನಿಂತನು.

ಮುಹೂರ್ತೇನ ಸಮಾಕ್ರಾಂತಂ ಲಕ್ಷಯೋಜನಮಂಡಲಂ ।
ಉತ್ತರಾದ್ದಕ್ಷಿಣಂ ದೇವಿ ರೇವಂತೇನ ಮಹಾತ್ಮನಾ ॥ ೨೧೨ ॥

ಸ್ವಿನ್ನಗಾತ್ರಸ್ತತೋ ದೇವಿ ಪ್ರಭಾಸೇ ಸಮುಪಸ್ಥಿತಃ ।
ದಂಡಪಿಂಗಲಸಂಯುಕ್ತೋ ಹ್ಯಶ್ವಾರೂಢಃ ಸ ತಿಷ್ಠತಿ ॥ ೨೧೩ ॥

ಸಾವಿತ್ರ್ಯಾ ನೈರ್ಋತೇ ಭಾಗೇ ನಾಽತಿದೂರೇ ವ್ಯವಸ್ಥಿತಃ ।
ರಾಜ್ಞೀ ಪುತ್ರೋ ಯತೋ ದೇವಿ ರಾಜಾ ಭಟ್ಟಾರಕಸ್ತತಃ ॥ ೨೧೪ ॥

ಲೋಕೇ ಖ್ಯಾತಿಂ ಸಮಾಯಾತಿ ರಾಜಭಟ್ಟಾರಿಕೇತಿ ಚ ।
ಗುಹ್ಯಭಟ್ಟಾರಕತ್ವೇ ಚ ರೇವಂತೋ ವಿನಿಯೋಜಿತಃ ॥ ೨೧೫ ॥

ಏವಮುಕ್ತ್ವೇತ್ಯಾಹ ತತೋ ಭಗವಾಂಲ್ಲೋಕತಾಪನಃ ।
ತ್ವಮಪ್ಯಶೇಷಲೋಕಸ್ಯ ಪೂಜ್ಯೋ ವತ್ಸ ಭವಿಷ್ಯಸಿ ॥ ೨೧೬ ॥

ಅರಣ್ಯೇ ಚ ಮಹಾದಾವೇ ವೈರಿದಸ್ಯುಭಯೇಷು ಚ ।
ತ್ವಾಂ ಸ್ಮರಿಷ್ಯಂತಿ ಯೇ ಮರ್ತ್ಯಾ ಮೋಕ್ಷ್ಯಂತೇ ತೇ ಮಹಾಽಽಪದಃ ॥

---

೨೧೨. ರೇವಂತನು ಒಂದು ಮುಹೂರ್ತಕಾಲದಲ್ಲಿಯೇ ಉತ್ತರದಿಕ್ಕಿನಿಂದ ಹೊರಟು ಲಕ್ಷಯೋಜನದ ದೇಶವನ್ನು ಆಕ್ರಮಿಸಿದನು.

೨೧೩. ದೇವಿ ! ಆ ರೇವಂತನು ಬೆವರಿದ ದೇಹವುಳ್ಳವನಾಗಿ ದಂಡಪಿಂಗಲಕ ರೊಡನೆ ಅಶ್ವವನ್ನೇರಿ ನಿಂತನು.

೨೧೪–೨೧೫. ಸಾವಿತ್ರೀನದಿಯ ಸಮೀಪದಲ್ಲಿ ನೆಲೆಸಿದ ಆ ರೇವಂತನು ರಾಣಿಯ ಮಗನಾದುದರಿಂದ ರಾಜಭಟ್ಟಾರಕನೆಂದೂ, ಗುಹ್ಯಭಟ್ಟಾರಕನೆಂದೂ ಲೋಕದಲ್ಲಿ ಪ್ರಸಿದ್ಧಿಗೊಂಡನು.

೨೧೬. ಬಳಿಕ ಪೂಜ್ಯನಾದ ಸೂರ್ಯನು ಅಲ್ಲಿಗೆ ಬಂದು "ಮಗು ! ನೀನೂ ಸಮಸ್ತಜನಗಳಿಗೆ ಮಾನ್ಯನಾಗುವೆ.

೨೧೭. ಕಾಡ್ಕಿಚ್ಚು, ಶತ್ರು, ಕಳ್ಳರಭಯ ಸಂಭವಿಸಿದಾಗ ನಿನ್ನನ್ನು ಸ್ಮರಿಸಿದ ಜನರು ಆ ಮಹಾವಿಪತ್ತಿನಿಂದ ಪಾರಾಗುವರು.

ಕ್ಷೇಮಸಮೃದ್ಧಿಂ ಸುಖಂ ರಾಜ್ಯಮಾರೋಗ್ಯಂ ಕೀರ್ತಿಮುನ್ನತಿಂ ।
ನರಾಣಾಮತಿತುಷ್ಟಸ್ತ್ವಂ ಪೂಜಿತಸ್ಸಂಪ್ರದಾಸ್ಯಸಿ ॥ ೨೧೮ ॥

ಅಶ್ವಿನೌ ದೇವಭಿಷಜೌ ಕೃತೌ ಪಿತ್ರಾ ಮಹಾತ್ಮನಾ ।
ಧರ್ಮದೃಷ್ಟಿರ್ಯಮಶ್ಚಾಽಸೌ ಸಮೋ ಮಿತ್ರೇ ತಥಾಽಹಿತೇ ॥ ೨೧೯ ॥

ತತೋ ನಿಯೋಗಂ ತಂ ಚಾಽಸ್ಯ ಚಕಾರ ತಿಮಿರಾಽಪಹಃ ।
ಯಮುನಾಂ ಚ ನದೀಂ ಚಕ್ರೇ ಕಲಿಂದಾಂತರವಾಹಿನೀಂ ॥ ೨೨೦ ॥

ಛಾಯಾಸಂಜ್ಞಾಸುತಶ್ಚಾಽಪಿ ಸಾವರ್ಣಿಸ್ತು ಮಹಾಯಶಾಃ ।
ಭಾವ್ಯಃ ಸೋಽನಾಗತೇ ಕಾಲೇ ಮನುಃ ಸಾವರ್ಣಿಕೋಽಷ್ಟಮಃ ॥ ೨೨೧ ॥

ಮೇರುಪೃಷ್ಠೇ ತಪೋ ಘೋರಮದ್ಯಾಽಪಿ ಚರತಿ ಪ್ರಭುಃ ।
ಭ್ರಾತಾ ಶನೈಶ್ಚರಸ್ತಸ್ಯ ಗ್ರಹೋಽಭೂಚ್ಚ ಪ್ರಿಯೇ ಧ್ರುವಂ ॥ ೨೨೨ ॥

ಏವಂ ತೇಭ್ಯೋ ವರಾನ್ ದತ್ವಾ ರೇವಂತಸ್ಯಾಽಪಿ ಭಾಸ್ಕರಃ ।
ಪುನರ್ನಾಮನಿರುಕ್ತಂ ಸ ರೇವಂತಸ್ಯಾಽಕರೋತ್ಪ್ರಭುಃ ॥ ೨೨೩ ॥

ಏವಂ ಗಚ್ಛತ್ಯಸೌ ಯಸ್ಮಾತ್ಸಂಜ್ಞಾಯಾಃ ಶಾಂತಿದಃ ಸುತಃ ।
ಅಶ್ವಾನಾಮಾಧಿಪತ್ಯೇ ತು ಭಾನುನಾ ಚ ನಿಯೋಜಿತಃ ॥ ೨೨೪ ॥

---

೨೧೮. ನಿನ್ನನ್ನು ಪೂಜಿಸಿದ ಜನರಲ್ಲಿ ಸಂತುಷ್ಟನಾದ ನೀನು, ಕ್ಷೇಮ, ಸಂಪತ್ಸಮೃದ್ಧಿ, ರಾಜ್ಯ, ಸುಖ, ಆರೋಗ್ಯ, ಕೀರ್ತಿ, ಅಭ್ಯುದಯಗಳನ್ನು ಕೊಡುವೆ.

೨೧೯–೨೨೦. ಸೂರ್ಯನು ಹೀಗೆಂದು ಅಶ್ವಿನೀ ದೇವತೆಗಳನ್ನು ದೇವತೆಗಳ ವೈದ್ಯರನ್ನಾಗಿಸಿ ಯಮನಿಗೆ ಶತ್ರುಮಿತ್ರರಲ್ಲಿ ಸಮವಾಗಿ ವರ್ತಿಸಬೇಕೆಂದು ಕಟ್ಟು ಮಾಡಿದನು. ಯಮುನೆಯನ್ನು ಕಳಿಂಗಪರ್ವತದ ಮಧ್ಯದಲ್ಲಿ ಹರಿಯುವ ನದಿ ಯನ್ನಾಗಿ ಮಾಡಿದನು.

೨೨೧–೨೨೨. ಛಾಯೆಯ ತನಯಾದ ಸಾವರ್ಣಿಯು ಮುಂದೆ ಎಂಟನೆಯ ಮನುವಾಗುವನು. ಅವನು ಈಗಲೂ ಮೇರು ಪರ್ವತದಲ್ಲಿ ತಪಸ್ಸನ್ನಾಚರಿಸುತ್ತಿರು ವನು. ಇವನ ಸಹೋದರನಾದ ಶನಿಯು ಗ್ರಹವಾದನು.

೨೨೩–೨೨೪. ಸೂರ್ಯನು ಹೀಗೆ ಅವರಿಗೂ ರೇವಂತನಿಗೂ ವರವನ್ನಿತ್ತು ಸಂಜ್ಞೆಯ ಮಗನಾದ ಇವನು ಹೀಗೆ ಹೋಗುತ್ತಿರುವುದರಿಂದ ರೇವಂತನೆಂಬ ಅನ್ವರ್ಥನಾಮವನ್ನು ಧರಿಸಲಿ ಎಂದು ನಾಮನಿರ್ವಚನ ಮಾಡಿ ಅವನನ್ನು ಕುದುರೆ ಗಳಿಗೆ ಅಧಿಪತಿಯನ್ನಾಗಿ ನೇಮಿಸಿದನು.

ಕ್ಷೇಮೇಣ ಗಚ್ಛತೇಽಧ್ವಾನಂ ಯಸ್ತು ಪೂಜಯತೇ ಪಥಿ ।
ಸುಖಪ್ರಸಾದ್ಯೋ ಮರ್ತ್ಯಾನಾಂ ಸದಾ ಚ ವರವರ್ಣಿನಿ ॥ ೨೨೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರಾಜಭಟ್ಟಾರಕೋತ್ಪತ್ತಿವರ್ಣನಂ ನಾಮ
॥ ಏಕಾದಶೋಽಧ್ಯಾಯಃ ॥

---

೨೨೫. ಪ್ರಿಯಳೆ ! ಸುಲಭವಾಗಿ ಪ್ರಸನ್ನನಾಗುವ ಈ ರೇವಂತನನ್ನು ಪ್ರಯಾಣಿಕನಾದ ಮಾನವನು ದಾರಿಯಲ್ಲಿ ಪೂಜಿಸಿದರೆ ಅವರ ಪ್ರಮಾಣವು ಸುಗಮವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ರಾಜಭಟ್ಟಾರಕೋತ್ಪತ್ತಿವರ್ಣನವೆಂಬ
ಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾದಶೋಽಧ್ಯಾಯಃ

ಯಮೇಶ್ವರೋತ್ಪತ್ತಿವರ್ಣನಂ

ಈಶ್ವರ ಉವಾಚ:—

ಯಾ ಸಂಜ್ಞಾ ಯಾ ಸ್ಮೃತಾ ರಾಜ್ಞೀ ಛಾಯಾ ಯಾ ಸಾ ತು ನಿಕ್ಷುಭಾ ।
ರಾಜೃ ದೀಪ್ತೌ ಸ್ಮೃತೋ ಧಾತೂ ರಾಜಾ ರಾಜತಿ ಯಃ ಸದಾ ॥ ೧ ॥
ಅಧಿಕಂ ಸರ್ವಭೂತೇಭ್ಯಸ್ತಸ್ಮಾದ್ರಾಜಾ ಸ ಉಚ್ಯತೇ ।
ರಾಜಪತ್ನೀ ತು ಯಸ್ಮಾತ್ತಸ್ಮಾದ್ರಾಜ್ಞೀ ಪ್ರಕೀರ್ತಿತಾ ॥ ೨ ॥
ಕ್ಷುಭ ಸಂಚಲನೇ ಧಾತುರ್ನಿಶ್ಚಲಾ ತೇನ ನಿಕ್ಷುಭಾ ।
ಭವಂತಿ ಹ್ಯಥವಾ ಹ್ಯಸ್ಮಾತ್ಸ್ವಾಂಗೀಯಾಃ ಕ್ಷುದ್ವಿವರ್ಜಿತಾಃ ॥ ೩ ॥
ಛಾಯಾ ತಾಂ ವಿಶತೇ ದಿವ್ಯಾ ಸ್ಮೃತಾ ಸಾ ತೇನ ನಿಕ್ಷುಭಾ ।
ಸಾಂಪ್ರತಂ ವರ್ತತೇ ಯೋಽಯಂ ಮನುರ್ಲೋಕೇ ಮಹಾಮತೇ ॥ ೪ ॥
ತಸ್ಯಾನ್ವವಾಯೇ ಜಾತಸ್ತು ಶಂಖಚಕ್ರಗದಾಧರಃ ।
ಯಮಸ್ತು ಮಾತ್ರಾ ಸಂಶಪ್ತೋ ಹೀನಪಾದೋ ಧರಾತಲೇ ॥ ೫ ॥
ಪ್ರಭಾಸಕ್ಷೇತ್ರಮಾಸಾದ್ಯ ಚಕಾರ ವಿಪುಲಂ ತಪಃ ।
ವರ್ಷಾಣಾಮಯುತಂ ಸಾಗ್ರಂ ಲಿಂಗಂ ಪೂಜಿತವಾನ್ ಪ್ರಿಯೇ ॥ ೬ ॥

ಕನ್ನಡದ ಅನುವಾದ

ಯಮೇಶ್ವರೋತ್ಪತ್ತಿವರ್ಣನ

೧-೬. ಈಶ್ವರನು ಹೇಳುತ್ತಾನೆ:—ಸೂರ್ಯನು ಸಕಲ ಪ್ರಾಣಿಗಳಿಗಿಂತ ಅಧಿಕವಾಗಿ ಪ್ರಕಾಶಿಸುತ್ತ ದೀಪ್ತ್ಯರ್ಥವನ್ನುಕೊಡುವ ರಾಜೃಧಾತುವಿನಿಂದಾದ ರಾಜಾ ಎಂಬ ನಾಮಧೇಯವನ್ನು ಪಡೆದುದರಿಂದ ಅವನ ಪತ್ನಿಯಾದ ಸಂಜ್ಞೆಯು ರಾಜ್ಞೀ ನಾಮಕಳಾದಳು. ಛಾಯೆಯು ನಿಶ್ಚಲಳಾದುದರಿಂದಾಗಲಿ, ಅವಳ ಮಕ್ಕಳು ಹಸಿವಿಲ್ಲದವರಾದ್ದರಿಂದಾಗಲಿ ಸಂಚಲನಾರ್ಥಕ ನಿಪೂರ್ವಕ ಕ್ಷುಭ ಧಾತುವಿನಿಂದಾದ ನಿಕ್ಷುಭಾ ಎಂಬ ದಿವ್ಯನಾಮವನ್ನು ಹೊಂದಿದಳು. ಈಗ ಲೋಕದಲ್ಲಿರುವ ಮನುವಿನ ವಂಶದಲ್ಲಿ ಜನಿಸಿದ ಶಂಖ ಚಕ್ರ ಗದೆಗಳನ್ನು ಧರಿಸಿದ ಯಮನು ತಾಯಿಯ ಶಾಪದಿಂದ ಪಾದಹೀನನಾಗಿ ಪ್ರಭಾಸಕ್ಷೇತ್ರವನ್ನು ಸೇರಿ ಹತ್ತುಸಾವಿರ ವರ್ಷಗಳ ಕಾಲ ತಪಸ್ಸನ್ನಾಚರಿಸುತ್ತ ಸೋಮೇಶ ಲಿಂಗವನ್ನು ಪೂಜಿಸಿದನು.

ತುಷ್ಟಶ್ಚಾಽಹಂ ತತಸ್ತಸ್ಯ ವರಾಣಾಂ ಚ ಶತಂ ದದೌ ।
ಅದ್ಯಾಽಪಿ ತತ್ರ ದೇವೇಶಿ ಯಮೇಶ್ವರಮಿತಿ ಶ್ರುತಂ ।
ಯಮದ್ವಿತೀಯಾಯಾಂ ದೃಷ್ಟ್ವಾ ಯಮಲೋಕಂ ನ ಪಶ್ಯತಿ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಯಮೇಶ್ವರೋತ್ಪತ್ತಿವರ್ಣನಂ ನಾಮ
॥ ದ್ವಾದಶೋಽಧ್ಯಾಯಃ ॥

---

೭. ದೇವಿ ! ನಾನು ಆ ಪೂಜೆಯಿಂದ ಸಂತುಷ್ಟನಾಗಿ ಆ ಯಮನಿಗೆ ನೂರು ವರಗಳನ್ನಿತ್ತನು. ಈಗಲೂ ಯಮೇಶ್ವರವೆಂದು ಪ್ರಸಿದ್ಧವಾದ ಆ ಲಿಂಗವನ್ನು ಯಮ ದ್ವಿತೀಯಾ ದಿನ ನೋಡಿದವನು ಯಮಲೋಕವನ್ನು ಕಾಣುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಯಮೇಶ್ವರೋತ್ಪತ್ತಿವರ್ಣನವೆಂಬ
ಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ತ್ರಯೋದಶೋಽಧ್ಯಾಯಃ

ಅರ್ಕಸ್ಥಲೋತ್ಪತ್ತಿವರ್ಣನಂ

ದೇವ್ಯುವಾಚ :—

ಯದಾ ಭ್ರಮಿಸ್ಥಃ ಸವಿತಾ ತಕ್ಷಿತಃ ಕ್ಷುರಧಾರಯಾ ।
ಶ್ವಶುರೇಣ ಮಹಾದೇವ ಜಾಮಾತಾಪ್ರೀತಿಪೂರ್ವಕಂ ॥ ೧ ॥
ತತ್ತೇಜಃ ಶಾತಿತಂ ಭೂರಿ ಪ್ರಭಾಸೇ ಯತ್ಪಪಾತ ವೈ ।
ತದಭೂತ್ಕಿಂ ತದಾ ದೇವ ಪ್ರಭಾಸಾತ್ಕಥಯಸ್ವ ಮೇ ॥ ೨ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಸೂರ್ಯಮಾಹಾತ್ಮ್ಯಮುತ್ತಮಂ ।
ಯಚ್ಛ್ರುತ್ವಾ ಮಾನವೋ ಭಕ್ತ್ಯಾ ಮುಚ್ಯತೇ ಸರ್ವಪಾತಕೈಃ ॥ ೩ ॥
ದೇಹಾವತಾರೋ ದೇವಸ್ಯ ಪ್ರಭಾಸೇಽರ್ಕಸ್ಥಲಸ್ಯ ಚ ।
ಪುರಾಣಾಖ್ಯಾನಮಾಚಕ್ಷೇ ತವ ದೇವಿ ಯಶಸ್ವಿನಿ ॥ ೪ ॥

ಕನ್ನಡದ ಅನುವಾದ

ಅರ್ಕಸ್ಥಲೋತ್ಪತ್ತಿವರ್ಣನ

೧—೨. ದೇವಿಯು ಹೇಳುತ್ತಾಳೆ:—ಮಹಾದೇವ! ವಿಶ್ವಕರ್ಮನು ಸೂರ್ಯನನ್ನು ಚಕ್ರದಲ್ಲಿಟ್ಟು ಪ್ರೀತಿಯಿಂದ ಕತ್ತರಿಯಿಂದ ಸಾಣೆಹಿಡಿಯುವಾಗ ಆ ಸೂರ್ಯನ ತೇಜಸ್ಸು ಪ್ರಭಾಸಕ್ಷೇತ್ರದಲ್ಲಿ ಬಹುವಾಗಿ ಬಿದ್ದಿತಷ್ಟೆ. ಆ ತೇಜಸ್ಸು ಪ್ರಭಾಸದಿಂದ ಏನಾಯಿತು ? ಅದನ್ನು ನನಗೆ ಹೇಳು.

೩. ಈಶ್ವರನು ಹೇಳುತ್ತಾನೆ:—ದೇವಿ! ಉತ್ತಮವಾದ ಸೂರ್ಯ ಮಾಹಾತ್ಮ್ಯವನ್ನು ಹೇಳುವೆನು. ಇದನ್ನು ಭಕ್ತಿಯಿಂದ ಕೇಳಿದ ಮನುಷ್ಯನು ಸಮಸ್ತ ಪಾಪಗಳಿಂದ ಮುಕ್ತನಾಗುವನು.

೪. ಕೀರ್ತಿಮತಿಯಾದ ಪ್ರಿಯಳೆ! ನಿನಗೆ ಸೂರ್ಯನ ದೇಹ, ಅರ್ಕಸ್ಥಲ ಇವುಗಳ ಉತ್ಪತ್ತಿಯ ಕಥೆಯನ್ನು ಹೇಳುವೆನು.

ಶಾಕದ್ವೀಪೇ ಮಹಾದೇವಿ ಭ್ರಮಿಸ್ಥಸ್ಯ ತದಾ ರವೇಃ ।
ವರ್ಷಾಣಾಂ ತು ಶತಂ ಸಾಗ್ರಂ ತಕ್ಷ್ಯಮಾಣೇ ವಿಭಾವಸೌ ॥ ೫ ॥

ಯದಾದ್ಯಭಾಗಜಂ ತೇಜಸ್ತತ್ಪ್ರಭಾಸೇಽಪತತ್ಪ್ರಿಯೇ ।
ಪತಿತಂ ತತ್ರ ತತ್ತೇಜಃ ಸ್ಥಲಾಕಾರಂ ವ್ಯಜಾಯತ ॥ ೬ ॥

ಜಾಂಬೂನದಮಯಂ ದೇವಿ ತತ್ಪೂರ್ವಮಭವತ್ಕ್ಷಿತೌ ।
ತಿಷ್ಯಮಾಹಾತ್ಮ್ಯಯೋಗೇನ ಶೈಲೀಭೂತಂ ಚ ಸಾಂಪ್ರತಂ ॥ ೭ ॥

ತತ್ರ ಚಾರ್ಕಮಯಂ ರೂಪಂ ಕೃತ್ವಾ ದೇವೋ ದಿವಾಕರಃ ।
ಉತ್ಪನ್ನಃ ಸರ್ವಭೂತಾನಾಂ ಹಿತಾಯ ಧರಣೀತಲೇ ॥ ೮ ॥

ಹಿರಣ್ಯಗರ್ಭನಾಮೇತಿ ಕೃತೇ ಸೂರ್ಯೇತಿ ಕೀರ್ತಿತಂ ।
ತ್ರೇತಾಯಾಂ ಸವಿತಾ ನಾಮ ದ್ವಾಪರೇ ಭಾಸ್ಕರಃ ಸ್ಮೃತಃ ॥ ೯ ॥

ಕಲೌ ಚಾರ್ಕಸ್ಥಲೋ ನಾಮ ತ್ರಿಷು ಲೋಕೇಷು ಕೀರ್ತಿತಃ ।
ಅವತೀರ್ಣಮಿದಂ ದೇವಿ ಸ್ವಯಮೇವ ಪ್ರತಿಷ್ಠಿತಂ ॥ ೧೦ ॥

ಯದಾ ಸ್ವಾರೋಚಿಷೋ ದೇವಿ ದ್ವಿತೀಯೋಽಭೂನ್ಮನುಃ ಪುರಾ ।
ತಸ್ಮಿನ್ಕಾಲೇಽವತೀರ್ಣೋಽಸೌ ದೇವಸ್ತತ್ರ ದಿವಾಕರಃ ॥ ೧೧ ॥

೫-೬. ಶಾಕದ್ವೀಪದಲ್ಲಿ ನೂರುವರ್ಷಗಳಕಾಲ ವಿಶ್ವಕರ್ಮನು ಸೂರ್ಯನನ್ನು ಇಟ್ಟು ಸಾಣೆ ಹಿಡಿಯುತ್ತಿರಲು ಪ್ರಭಾಸದಲ್ಲಿ ಬಿದ್ದ ಅವನ ತೇಜಸ್ಸು ಸ್ಥಳದ ಆಕಾರವುಳ್ಳುದಾಯಿತು.

೭. ದೇವಿ ! ಅದು ಮೊದಲು ಭೂಮಿಯಲ್ಲಿ ಸುವರ್ಣಮಯವಾಗಿದ್ದಿತು. ಈಗ ಅದು ಕಲಿಮಾಹಾತ್ಮ್ಯದಿಂದ ಪರ್ವತವಾಗಿರುವುದು.

೮-೧೦. ಸೂರ್ಯನು ಅಲ್ಲಿ ಸಕಲ ಪ್ರಾಣಿಗಳ ಹಿತಕ್ಕಾಗಿ ಅರ್ಕರೂಪದಿಂದ ಆವಿರ್ಭವಿಸಿ ಹಿರಣ್ಯಗರ್ಭನೆಂದು ಹೆಸರನ್ನು ಪಡೆದನು ಬಳಿಕ ಅವನು ಕೃತಯುಗದಲ್ಲಿ ಸೂರ್ಯನೆಂದೂ, ತ್ರೇತಾಯುಗದಲ್ಲಿ ಸವಿತೃವೆಂದೂ, ದ್ವಾಪರಯುಗದಲ್ಲಿ ಭಾಸ್ಕರನೆಂದೂ, ಕಲಿಯುಗದಲ್ಲಿ ಅರ್ಕಸ್ಥಲವೆಂದೂ ಪ್ರಸಿದ್ಧಿಗೊಂಡು ತಾನೇ ಸ್ಥಿರವಾಗಿ ನೆಲೆಸಿದನು.

೧೧-೧೪. ಆ ಸೂರ್ಯನು ಆ ಕ್ಷೇತ್ರದಲ್ಲಿ ಸ್ವಾರೋಚಿಷನೆಂಬ ಎರಡನೆಯ ಮನುವಿನ ಕಾಲದಲ್ಲಿ ಅವತರಿಸಿ ಮಾನವರಿಗೆ ಭಕ್ತಿಮುಕ್ತಿಗಳನ್ನೀಯುವವನೂ, ಆಗಿರುವನು. ಅವನ ತೇಜಸ್ಸಿನಿಂದುಂಟಾದ ಧೂಳು ದಕ್ಷಿಣೋತ್ತರ ದಿಕ್ಕುಗಳಲ್ಲಿ

ಭುಕ್ತಿಮುಕ್ತಿಪ್ರದೋ ದೇವಿ ವ್ಯಾಧಿದುಃಖವಿನಾಶಕೃತ್ ।
ತಸ್ಯ ತೇಜೋದ್ಭವೈರ್ವ್ಯಾಪ್ತಂ ರೇಣುಭಿಃ ಪಂಚಯೋಜನಂ ॥ ೧೨ ॥
ದಕ್ಷಿಣೋತ್ತರತೋ ದೇವಿ ಪಂಚ ಪೂರ್ವಾಽಪರೇಣ ತು ।
ಉತ್ತರೇಣ ಸಮುದ್ರಸ್ಯ ಯಾವನ್ಮಾಹೇಶ್ವರೀ ನದೀ ॥ ೧೩ ॥
ನ್ಯಂಕುಮತ್ಯಾಶ್ಚಾಽಪರತೋ ಯಾವದೇವ ಕೃತಸ್ಮರಂ ।
ಏತದ್ವ್ಯಾಪ್ತಂ ಮಹಾದೇವಿ ತತ್ತೇಜೋರೇಣುಭಿಃ ಶುಭೈಃ ॥ ೧೪ ॥
ತಸ್ಯ ಸೂಕ್ಷ್ಮಾ ಪ್ರಭಾ ಯಾ ತು ಆದಿತೇಜೋವಿನಿಃಸೃತಾ ।
ತಯಾ ವ್ಯಾಪ್ತಂ ಮಹಾದೇವಿ ಯಾವದ್ದ್ವಾದಶಯೋಜನಂ ॥ ೧೫ ॥
ಉತ್ತರೇ ಭಾಸ್ಕರಸುತಾ ದಕ್ಷಿಣೇ ಸರಿತಾಂ ಪತಿಃ ।
ಪೂರ್ವಪಶ್ಚಿಮತೋ ದೇವಿ ರುಕ್ಮಿಣೀದ್ವಿತಯಂ ಸ್ಮೃತಂ ॥ ೧೬ ॥
ಏತಸ್ಮಿನ್ನಂತರೇ ದೇವಿ ಸೌರಂ ತೇಜಃ ಪ್ರಸರ್ಪಿತಂ ।
ತೇನ ಪಾವಿತ್ರ್ಯಮಾಪೀತಂ ಕ್ಷೇತ್ರಂ ದ್ವಾದಶಯೋಜನಂ ॥ ೧೭ ॥
ತಸ್ಯ ಮಧ್ಯಸ್ಯ ಯನ್ಮಧ್ಯಂ ತದ್ಗೃಹಂ ಮಮ ಸುಂದರಿ ।
ತೇಜೋಮಂಡಲಮಧ್ಯಸ್ಥಂ ಮಮ ಸ್ಥಾನಂ ಮಹೇಶ್ವರಿ ॥ ೧೮ ॥
ಚಕ್ಷುರ್ಮಂಡಲಮಧ್ಯೇ ತು ಯಥಾ ದೇವಿ ಕನೀನಿಕಾ ।
ಪೂರ್ವಪಶ್ಚಿಮತೋ ದೇವಿ ಗೋಮುಖಾದಾಶ್ವಮೇಧಿಕಂ ॥ ೧೯ ॥

ಸಮುದ್ರದಿಂದ ಮಾಹೇಶ್ವರೀ ನದಿಯವರೆಗೆ ಐದು ಯೋಜನ ದೂರದಲ್ಲಿಯೂ, ಪೂರ್ವಪಶ್ಚಿಮ ದಿಕ್ಕುಗಳಲ್ಲಿ ನ್ಯಂಕುಮತೀನದಿಯಿಂದ ಕೃತಸ್ಮರದವರೆಗೆ ಐದು ಯೋಜನ ದೂರದಲ್ಲಿಯೂ ವ್ಯಾಪಿಸಿರುವುದು.

೧೫. ಆ ಸೂರ್ಯನ ಆದಿತೇಜಸ್ಸಿನಿಂದ ಹೊರಟ ಸೂಕ್ಷ್ಮಪ್ರಭೆಯು ಹನ್ನೆರಡು ಗಾವುದ ದೂರವ್ಯಾಪಿಸಿರುವುದು.

೧೬–೧೭. ಉತ್ತರ ದಿಕ್ಕಿನಲ್ಲಿ ಯಮುನಾ ನದಿಯವರೆಗೂ, ದಕ್ಷಿಣದಿಕ್ಕಿನಲ್ಲಿ ಸಮುದ್ರದವರೆಗೂ ಪೂರ್ವಪಶ್ಚಿಮದಲ್ಲಿ ಎರಡು ರುಕ್ಮಿಣೀ ನದಿಗಳವರೆಗೂ ವ್ಯಾಪಿಸಿ ಹನ್ನೆರಡು ಯೋಜನ ವಿಸ್ತಾರವಾದ ಈ ಪ್ರಭಾಸಕ್ಷೇತ್ರವು ಸೂರ್ಯನ ತೇಜಸ್ಸು ಹರಡಿರುವುದರಿಂದ ಪವಿತ್ರವಾಗಿರುವುದು

೧೮–೨೦. ದೇವಿ! ಕಣ್ಣಿನ ಮಧ್ಯದಲ್ಲಿ ಗುಡ್ಡಿರುವಂತೆ ಆ ಕ್ಷೇತ್ರದ ಮಧ್ಯದಲ್ಲಿ ನಡುವೆ ತೇಜೋಮಂಡಲದ ಮಧ್ಯದಲ್ಲಿರುವ ನನ್ನ ಮನೆಯಿರುವುದು. ಪೂರ್ವಪಶ್ಚಿಮ

ದಕ್ಷಿಣೋತ್ತರತೋ ದೇವಿ ಸಮುದ್ರಾತ್ಕೌರವೇಶ್ವರೀಂ ।
ಏತಸ್ಮಿನ್ನಂತರೇಕ್ಷೇತ್ರೇ ಕ್ಷೇತ್ರಜ್ಞೋಽಹಂ ವರಾನನೇ ॥ ೨೦ ॥
ಯಸ್ಮಾದರ್ಕಸ್ಯ ತೇಜೋಭಿರ್ಭಾಸಿತಂ ಮಮ ತದ್ಗೃಹಂ ।
ತಸ್ಮಾತ್ಪ್ರಭಾಸನಾಮೇತಿ ಕಲ್ಪೇಽಸ್ಮಿನ್ ಪ್ರಥಿತಂ ಪ್ರಿಯೇ ॥ ೨೧ ॥
ತತ್ರ ಪಶ್ಯತ ಯಃ ಸೂರ್ಯಮರ್ಕರೂಪಂ ನರೋತ್ತಮಃ ॥
ಸರ್ವಪಾಪವಿದೈರ್ಮುಕ್ತಃ ಸೂರ್ಯಲೋಕೇ ಮಹೀಯತೇ ॥ ೨೨ ॥
ಸ ಸ್ನಾತಃ ಸರ್ವತೀರ್ಥೇಷು ತೇನ ಚೇಷ್ಟಂ ಮಹಾಮಖೈಃ ।
ಸರ್ವದಾನಾನಿ ದತ್ತಾನಿ ಪೂರ್ವಜಾಸ್ತೇನ ತೋಷಿತಾಃ ॥ ೨೩ ॥
ಅರ್ಕರೂಪೀ ಯತಃ ಸೂರ್ಯಸ್ತತ್ರ ಜಾತೋ ಮಹಿತಲೇ ।
ತಸ್ಮಾತ್ತ್ಯಾಜ್ಯಃ ಸದಾ ಚಾಽರ್ಕೋ ಭೋಜನೇಽತ್ರ ನ ಸಂಶಯಃ ॥ ೨೪ ॥
ಯೋ ದೃಷ್ಟ್ವಾಽರ್ಕಸ್ಥಲಂ ಮರ್ತ್ಯಶ್ಚಾಽರ್ಕಪತ್ರೇಷು ಭುಂಜತಿ ।
ಗೋಮಾಂಸಭಕ್ಷಣಂ ತೇನ ಕೃತಂ ಭವತಿ ಭಾಮಿನಿ ॥ ೨೫ ॥

ದಲ್ಲಿ ಗೋಮುಖದಿಂದ ಅಶ್ವಮೇಧಿಕದವರೆಗೂ, ದಕ್ಷಿಣೋತ್ತರದಲ್ಲಿ ಸಮುದ್ರದಿಂದ ಕೌರವೇಶ್ವರಿಯವರೆಗೂ ಇರುವ ಕ್ಷೇತ್ರದಲ್ಲಿ ಕ್ಷೇತ್ರಜ್ಞನಾದ ನಾನಿರುವೆನು.

೨೧. ಪ್ರಿಯಳೆ! ಅರ್ಕನ ತೇಜಸ್ಸಿನಿಂದ ನನ್ನ ಮನೆಯಾದ ಆ ಕ್ಷೇತ್ರವು ಪ್ರಕಾಶಗೊಂಡುದರಿಂದ ಈ ಕಲ್ಪದಲ್ಲಿ ಪ್ರಭಾಸವೆಂದು ಪ್ರಖ್ಯಾತವಾಯಿತು.

೨೨. ಆ ಪ್ರಭಾಸಕ್ಷೇತ್ರದಲ್ಲಿರುವ ಅರ್ಕವೃಷ(ಎಕ್ಕದಗಿಡ)ರೂಪನಾದ ಸೂರ್ಯನನ್ನು ನೋಡುವ ಮನುಷ್ಯನು ಸಕಲ ಪಾಪ ಮುಕ್ತನಾಗಿ ಸೂರ್ಯಲೋಕದಲ್ಲಿ ಪೂಜ್ಯನಾಗುವನು.

೨೩. ಅವನು ಸಕಲತೀರ್ಥಗಳಲ್ಲಿ ಮಿಂದವನೂ, ಅನೇಕ ಯಜ್ಞಗಳನ್ನು ಮಾಡಿದವನೂ, ಸಕಲ ದಾನಗಳನ್ನು ಕೊಟ್ಟವನೂ, ಪಿತೃಗಳನ್ನು ಸಂತೋಷಗೊಳಿಸಿದವನೂ ಆಗುವನು.

೨೪. ಸೂರ್ಯನು ಭೂಮಿಯಲ್ಲಿ ಎಕ್ಕದ ಗಿಡವಾಗಿ ಹುಟ್ಟಿದುದರಿಂದ ಎಕ್ಕದೆಲೆಯಲ್ಲಿ ಯಾವಾಗಲೂ ಭೋಜನಮಾಡಬಾರದು.

೨೫. ಪ್ರಿಯಳೆ! ಅರ್ಕಸ್ಥಳವನ್ನು ನೋಡಿ ಎಕ್ಕದೆಲೆಯಲ್ಲಿ ಊಟಮಾಡುವವನು ಗೋಮಾಂಸವನ್ನು ಭಕ್ಷಿಸಿದವನಂತಾಗುವನು.

ಭಕ್ಷಿತೋ ಭಾಸ್ಕರಸ್ತೇನ ಸ ಕುಷ್ಠೀ ಜಾಯತೇ ನರಃ ।
ತಸ್ಮಾತ್ಸರ್ವಪ್ರಯತ್ನೇನ ಚಾಽರ್ಕಪತ್ರಾಣಿ ವರ್ಜಯೇತ್ ॥ ೨೬ ॥
ಯಾತ್ರಾಯಾಂ ಪ್ರಥಮಂ ದೇವಿ ದೃಷ್ಟೋ ಯೇನಾಽರ್ಕಭಾಸ್ಕರಃ ।
ತಂ ದೃಷ್ಟ್ವಾ ಮಹಿಷೀಂ ದದ್ಯಾದ್ಬ್ರಾಹ್ಮಣಾಯ ವಿಪಶ್ಚಿತೇ ॥ ೨೭ ॥
ತಾಮ್ರವರ್ಣಾಂ ರಕ್ತವಸ್ತ್ರಾಂ ತತಸ್ತುಷ್ಯತಿ ಭಾಸ್ಕರಃ ।
ತಸ್ಯ ಚೈವ ತು ಸಾನ್ನಿಧ್ಯೇ ವಹ್ನಿಕೋಣೇ ವ್ಯವಸ್ಥಿತಂ ॥ ೨೮ ॥
ನಾಽತಿದೂರೇ ಮಹಾಭಾಗೇ ಸಿದ್ಧೇಶ್ವರಮಿತಿ ಸ್ಮೃತಂ ।
ಸರ್ವಸಿದ್ಧಿಪ್ರದಂ ದೇವಿ ಲಿಂಗಂ ತ್ರೈಲೋಕ್ಯಪೂಜಿತಂ ॥ ೨೯ ॥
ಜೈಗೀಷವ್ಯೇಶ್ವರಂ ನಾಮ ಪೂರ್ವಂ ಕೃತಯುಗೇಽಭವತ್ ।
ಕಲೌ ಸಿದ್ಧೇಶ್ವರಮಿತಿ ಪ್ರಸಿದ್ಧಿಮಗಮತ್ಪ್ರಿಯೇ ॥ ೩೦ ॥
ತಂ ದೃಷ್ಟ್ವಾ ಮನುಜೋ ದೇವಿ ಸರ್ವಸಿದ್ಧಿಮವಾಪ್ನುಯಾತ್ ।
ತತ್ರೈವ ದೇವದೇವೇಶಿ ನಾಽತಿದೂರೇ ವ್ಯವಸ್ಥಿತಂ ॥ ೩೧ ॥
ಸೂರ್ಯದಕ್ಷಿಣನೈರ್ಋತ್ಯೇ ಪಾತಾಲವಿವರಂ ಪ್ರಿಯೇ ।
ಮಂದೇಹಾ ರಾಕ್ಷಸಾ ಯತ್ರ ತಥಾ ಶಾಲಕಟಂಕಟಾಃ ॥ ೩೨ ॥

---

೨೬. ಅಲ್ಲದೆ ಅವನು ಸೂರ್ಯನನ್ನು ಭಕ್ಷಿಸಿದವನಂತಾಗುವುದರಿಂದ ಕುಷ್ಠ ರೋಗಿಯಾಗುವನು. ಆದುದರಿಂದ ಸಕಲ ಪ್ರಯತ್ನದಿಂದ ಅರ್ಕಪತ್ರಗಳನ್ನು ಭುಂಜಿಸ ಬಾರದು.

೨೭–೨೯. ಮೊದಲು ಯಾತ್ರಾಕಾಲದಲ್ಲಿ ಅರ್ಕಭಾಸ್ಕರನನ್ನು ಕಂಡವನು ವಿದ್ವಾಂಸನಾದ ಬ್ರಾಹ್ಮಣನಿಗೆ ಕೆಂಪುಬಣ್ಣದ ಬಟ್ಟೆಯನ್ನು ಹೊದಿಸಿದ ಕೆಂಪು ಎಮ್ಮೆಯನ್ನು ದಾನಮಾಡಿದರೆ ಭಾಸ್ಕರನು ಸಂತುಷ್ಟನಾಗುವನು. ಅವನ ಹತ್ತಿರದಲ್ಲಿ ಆಗ್ನೇಯ ಮೂಲೆಯಲ್ಲಿ ಸಕಲ ಸಿದ್ಧಿಯನ್ನೀಯುವ ಮೂರು ಲೋಕದಲ್ಲಿ ಪೂಜ್ಯನಾದ ಸಿದ್ಧೇಶ್ವರವೆಂಬ ಲಿಂಗವಿರುವುದು.

೩೦. ಪ್ರಿಯಳೇ! ಈ ಶಿವಲಿಂಗವು ಹಿಂದೆ ಕೃತಯುಗದಲ್ಲಿ ಜೈಗೀಷವ್ಯೇಶ್ವರನೆಂಬ ಹೆಸರುಳ್ಳದಾಗಿದ್ದಿತು. ತರುವಾಯ ಈ ಕಲಿಯುಗದಲ್ಲಿ ಸಿದ್ಧೇಶ್ವರವೆಂದು ಪ್ರಸಿದ್ಧ ವಾಯಿತು.

೩೧–೩೨. ಈ ಲಿಂಗವನ್ನು ನೋಡಿದ ಮಾನವನು ಸಕಲ ಸಿದ್ಧಿಯನ್ನೂ ಪಡೆಯುವನು. ದೇವಿ! ಅಲ್ಲಿಯೇ ಸಮೀಪದಲ್ಲಿ ಭಾಸ್ಕರನ ನೈರ್ಋತ್ಯ ದಿಕ್ಕಿನಲ್ಲಿ ಪಾತಾಳರಂಧ್ರವಿರುವುದು. ಇಲ್ಲಿ ಹಿಂದೆ ಮಂದೇಹ, ಶಾಲಕಟಂಕಟ ಎಂಬ ರಾಕ್ಷಸರು

ಸೂರ್ಯಸ್ಯ ತೇಜಸಾ ದಗ್ಧಾಃ ಪಾತಾಲಮಗಮನ್ ಪುರಾ ।
ಕಲೌ ತದ್ದ್ವಾರಮೇವಾಽಸ್ತಿ ನ ಪಾತಾಲೇ ಗತಿಃ ಪ್ರಿಯೇ ॥ ೩೩ ॥
ಯೋಗಿನ್ಯಸ್ತತ್ರ ರಕ್ಷಂತಿ ಬ್ರಾಹ್ಮ್ಯಾದ್ಯಾ ಮಾತರಸ್ತಥಾ ।
ಮಾಘೇ ಕೃಷ್ಣಚತುರ್ದಶ್ಯಾಂ ರಾತ್ರೌ ಮಾತೃಗಣಾನ್ ಯಜೇತ್ ।
ಬಲಿಪುಷ್ಪೋಪಹಾರೈಶ್ಚ ತತಃ ಸಿದ್ಧಿರ್ಭವಿಷ್ಯತಿ ॥ ೩೪ ॥
ಇತಿ ಹಿ ಸಕಲಧರ್ಮಭಾವಹೇತೋ
ಹರಕಮಲಾಸನ ವಿಷ್ಣುಸಂಸ್ತುತಸ್ಯ ।
ತನುಪರಿಲಿಖನಂ ನಿಶಮ್ಯ ಭಾನೋ
ವ್ರಜತಿ ದಿವಾಕರಲೋಕಮಾಯುಷೋಽಂತೇ ॥ ೩೫ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ
ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ
ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅರ್ಕಸ್ಥಲೋತ್ಪತ್ತಿವರ್ಣನಂನಾಮ
ತ್ರಯೋದಶೋಽಧ್ಯಾಯಃ

ಸೂರ್ಯನ ತೇಜಸ್ಸಿನಿಂದ ಸುಡಲ್ಪಟ್ಟು ಪಾತಾಳಕ್ಕೆ ಹೋಗಿರುವರು. ಕಲಿಯುಗದಲ್ಲಿ ಆ ದ್ವಾರಮಾತ್ರವಿರುವುದು. ಪಾತಾಳಕ್ಕೆ ಹೋಗಲು ಸಾಧ್ಯವಿಲ್ಲ.

೩೪. ಆ ದ್ವಾರವನ್ನು ಯೋಗಿನಿಯರೂ, ಬ್ರಾಹ್ಮೀಮೊದಲಾದ ಮಾತೆಯರೂ ರಕ್ಷಿಸುತ್ತಾರೆ. ಮಾಘಕೃಷ್ಣಚತುರ್ದಶಿಯ ದಿನ ರಾತ್ರಿ ಬಲಿಯಿಂದಲೂ, ಪುಷ್ಪಗಳಿಂದಿಲೂ ಆ ಮಾತೃಗಣಗಳನ್ನು ಪೂಜಿಸಿದರೆ ಇಷ್ಟಾರ್ಥವು ಸಿದ್ಧಿಸುವುದು.

೩೫. ಹೀಗೆ ಸಕಲ ಧರ್ಮಗಳಿಗೆ ಕಾರಣನೂ, ಬ್ರಹ್ಮ, ವಿಷ್ಣು, ಮಹೇಶ್ವರರಿಂದ ಪೂಜಿಸಲ್ಪಟ್ಟವನೂ ಆದ ಸೂರ್ಯನ ದೇಹ ಪರಿಲಿಖ್ಯನವನ್ನು ಕೇಳಿದ ಮನುಷ್ಯನು ಮರಣಾನಂತರದಲ್ಲಿ ಸೂರ್ಯಲೋಕವನ್ನು ಸೇರುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸ ಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಅರ್ಕಸ್ಥಲೋತ್ಪತ್ತಿವರ್ಣನವೆಂಬ
ಹದಿಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಚತುರ್ದಶೋಽಧ್ಯಾಯಃ

ಸಿದ್ಧೇಶ್ವರೋತ್ಪತ್ತಿವರ್ಣನಂ

ದೇವ್ಯುವಾಚ:—

ಯದೇತದ್ಭವತಾ ಪ್ರೋಕ್ತಂ ಮಾಹಾತ್ಮ್ಯಂ ಸೂರ್ಯದೈವತಂ ।
ತನ್ಮೇ ವಿಸ್ತರತೋ ಬ್ರೂಹಿ ದೇವದೇವ ಜಗತ್ಪತೇ ॥ ೧ ॥
ಕಥಮರ್ಕಸ್ಥಲೋ ಭೂತಃ ಪ್ರಭಾಸಕ್ಷೇತ್ರಭೂಷಣಃ ।
ಪೂಜನೀಯೋ ಮಹಾದೇವಃ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೨ ॥
ಕೇ ಮಂತ್ರಾಃ ಕಿಂ ವಿಧಾನಂ ತು ಕೇಷು ಪರ್ವಸು ಪೂಜಯೇತ್ ।
ಜೈಗೀಷವ್ಯೇಶ್ವರೋ ಭೂತ್ವಾ ಹ್ಯಭೂತ್ಸಿದ್ಧೇಶ್ವರಃ ಕಥಂ ।
ತನ್ಮೇ ಕಥಯ ದೇವೇಶ ವಿಸ್ತರಾತ್ಸರ್ವಮೇವ ಹಿ ॥ ೩ ॥
ಪಾತಾಲೇ ವಿವರಂ ತತ್ರ ಯೋಗಿನ್ಯಸ್ತತ್ರ ಕಿಂ ಪುರಾ ।
ತಥಾ ಮಾತೃಗಣಶ್ಚೈವ ಕಥಮೇತದಭೂತ್ಪುರಾ ॥ ೪ ॥

ಕನ್ನಡದ ಅನುವಾದ

ಸಿದ್ಧೇಶ್ವರೋತ್ಪತ್ತಿವರ್ಣನ

೧. ದೇವಿಯು ಹೇಳುತ್ತಾಳೆ:—ಜಗದೊಡೆಯನಾದ ಎಲೈ ಮಹಾದೇವನೆ! ನೀನು ಹೇಳಿದ ಸೂರ್ಯನ ಮಾಹಾತ್ಮ್ಯವನ್ನು ನನಗೆ ವಿಸ್ತಾರವಾಗಿ ಹೇಳು.

೨. ಪ್ರಭಾಸಕ್ಷೇತ್ರಕ್ಕೆ ಅಲಂಕಾರವಾದ ಅರ್ಕಸ್ಥಳವು ಹೇಗುಂಟಾಯಿತು? ಯಾತ್ರೆಯ ಫಲವನ್ನು ಬಯಸುವ ಮನುಷ್ಯರು ಮಹಾದೇವನನ್ನು ಹೇಗೆ ಪೂಜಿಸಬೇಕು?

೩. ಆ ಪೂಜೆಯ ಮಂತ್ರವೂ, ಕ್ರಮವೂ, ಯಾವುದು? ಯಾವ ಪರ್ವಗಳಲ್ಲಿ ಪೂಜಿಸಬೇಕು. ಆ ಪರಮೇಶ್ವರನು ಮೊದಲು ಜೈಗೀಷವ್ಯೇಶ್ವರನಾಗಿ ಅನಂತರ ಸಿದ್ಧೇಶ್ವರನಾದುದೆಂತು? ಅದನ್ನೆಲ್ಲ ನನಗೆ ವಿಸ್ತಾರವಾಗಿ ಹೇಳು.

೪. ಹಿಂದೆ ಆ ಪ್ರದೇಶದಲ್ಲಿ ಪಾತಾಳ ದ್ವಾರವು ಹೇಗಾಯಿತು? ಯೋಗಿನಿಯರೂ, ಮಾತೆಯರೂ ಉಂಟಾದುದು ಹೇಗೆ?

ಏತತ್ಸರ್ವಮಶೇಷೇಣ ದಯಾಂ ಕೃತ್ವಾ ಜಗತ್ಪತೇ ।
ಮಮಾಚಕ್ಷ್ವ ವಿರೂಪಾಕ್ಷ ಯದ್ಯಹಂ ತೇ ಪ್ರಿಯಾ ಹರ ॥ ೫ ॥

ಈಶ್ವರ ಉವಾಚ:—

ಸಾಧು ಪೃಷ್ಟಂ ತ್ವಯಾ ದೇವಿ ಕಥಯಾಮಿ ಸಮಾಸತಃ ।
ಸಿದ್ಧೇಶ್ವರೋ ಹ್ಯಭೂದ್ಯೇನ ಜೈಗೀಷವ್ಯೇಶ್ವರೋ ಹರಃ ॥ ೬ ॥
ಪೂಜಾವಿಧಾನಂ ವಿಸ್ತೀರ್ಯೆ ತನ್ಮೇ ನಿಗದತಃ ಶೃಣು ।
ಆಸೀದಸ್ಮಿನ್ ಕೃತೇ ದೇವಿ ಸರ್ವಜ್ಞಾನವಿಶಾರದಃ ॥ ೭ ॥
ಪುತ್ರಃ ಶತಶಲಾಕಸ್ಯ ಜೈಗೀಷವ್ಯ ಇತಿ ಶ್ರುತಃ ।
ಪ್ರಭಾಸಕ್ಷೇತ್ರಮಾಸಾದ್ಯ ಸ ಚಕ್ರೇ ದುಶ್ಚರಂ ತಪಃ ॥ ೮ ॥
ಅತಿಷ್ಠದ್ವಾಯುಭಕ್ಷಶ್ಚ ವರ್ಷಾಣಾಂ ಶತಕಂ ಕಿಲ ।
ಅಂಬುಭಕ್ಷಃ ಸಹಸ್ರಂ ತು ಶಾಕಾಹಾರೋಽಯುತಂ ತಥಾ ॥ ೯ ॥
ಚಾಂದ್ರಾಯಣಸಹಸ್ರಂ ಚ ಕೃತಂ ಸಾಂತಪನಂ ಪುನಃ ।
ಶೋಷಯಿತ್ವಾ ಮಿತಾಹಾರೋ ದಿಗ್ವಾಸಾಃ ಸಮಪದ್ಯತ ॥ ೧೦ ॥
ಪೂರ್ವೇ ಕಲ್ಪೇ ಸ್ವಯಂ ಭೂತಂ ಮಹೋದಯಮಿತಿ ಶ್ರುತಂ ।
ಸ ಲಿಂಗಂ ದೇವದೇವಸ್ಯ ಪತಿಷ್ಠಾಪ್ಯಾರ್ಚಯನ್ನಪಿ ॥ ೧೧ ॥

---

೫. ಜಗದೀಶನಾದ ಓ ವಿರೂಪಾಕ್ಷ! ನಾನು ನಿನಗೆ ಪ್ರಿಯಳಾದರೆ ಇದನ್ನೆಲ್ಲ ನನಗೆ ಹೇಳುವವನಾಗು.

೬–೮. ಈಶ್ವರನು ಹೇಳುತ್ತಾನೆ:—ದೇವಿ! ನೀನು ಚೆನ್ನಾಗಿ ಕೇಳಿರುವೆ. ಜೈಗೀಷವ್ಯೇಶ್ವರನು ಸಿದ್ಧೇಶ್ವರನು ಹೇಗಾದನೆಂಬುದನ್ನೂ ಅವನ ಪೂಜೆಯ ಕ್ರಮವನ್ನೂ ವಿಸ್ತಾರವಾಗಿ ಹೇಳುವೆನು. ಅದನ್ನು ಕೇಳು. ದೇವಿ! ಈ ಕೃತಯುಗ ದಲ್ಲಿ ಶತಶಲಾಕನ ತನಯನೂ ಸರ್ವಜ್ಞಾನ ವಿಶಾರದನೂ, ಆದ ಜೈಗೀಷನೆಂಬುವನು ಈ ಪ್ರಭಾಸಕ್ಷೇತ್ರದಲ್ಲಿ ಘೋರ ತಪಸ್ಸನ್ನಾಚರಿಸಿದನು.

೯. ಅವನು ನೂರು ವರ್ಷಗಳ ಕಾಲ ವಾಯುಭಕ್ಷನಾಗಿಯೂ, ಸಾವಿರ ವರ್ಷ ಜಲವನ್ನು ಮಾತ್ರ ಕುಡಿಯುವವನಾಗಿಯೂ, ಹತ್ತು ಸಾವಿರ ವರ್ಷ ಶಾಕ ಮಾತ್ರ ಆಹಾರವುಳ್ಳವನಾಗಿಯೂ ಜೀವಿಸಿದನು.

೧೦. ಸಹಸ್ರ ಚಾಂದ್ರಾಯಣವ್ರತವನ್ನೂ, ಸಾಂತಪನವ್ರತವನ್ನೂ ಆಚರಿಸುತ್ತ ಮಿತಾಹಾರದಿಂದ ದೇಹವನ್ನು ಒಣಗಿಸಿ ಅವನು ದಿಗಂಬರನಾದನು.

೧೧–೧೩. ಹಾಗೆಯೇ ಹಿಂದಿನ ಕಲ್ಪದಲ್ಲಿ ಸ್ವಯಂವ್ಯಕ್ತವಾದ ಮಹೋದಯ ವೆಂದು ಪ್ರಸಿದ್ಧಿಗೊಂಡ ಮಹೇಶ್ವರನ ಲಿಂಗವನ್ನು ಪ್ರತಿಷ್ಠೆಮಾಡಿ ಅರ್ಚಿಸುತ್ತ ಭಸ್ಮ

ಭಸ್ಮಶಾಯೀ ಭಸ್ಮದಿಗ್ಧೋ ನೃತ್ತಗೀತೈರತೋಷಯತ್ ।
ಜಪೇನ ವೃಷನಾದೈಶ್ಚ ತಪಸಾ ಭಾವಿತಃ ಶುಚಿಃ ॥ ೧೨ ॥
ತಮೇವಂ ತೋಷಯಾಣಂ ತು ಭಕ್ತ್ಯಾ ಪರಮಯಾ ಯುತಂ ।
ಭಗವಾಂಶ್ಚ ತಮುಭ್ಯೇತ್ಯ ಇದಂ ವಚನಮುಬ್ರವೀತ್ ॥ ೧೩ ॥
ಜೈಗೀಷವ್ಯ ಮಹಾಬುದ್ಧೇ ಪಶ್ಯ ಮಾಂ ದಿವ್ಯಚಕ್ಷುಷಾ ।
ತುಷ್ಟೋಽಸ್ಮಿ ವರದಶ್ಚಾಽಹಂ ಬ್ರೂಹಿ ಯತ್ತೇ ಮನೋಗತಂ ॥ ೧೪ ॥
ಸ ಏವಮುಕ್ತೋ ದೇವೇನ ದೇವಂ ದೃಷ್ಟ್ವಾ ತ್ರಿಲೋಚನಂ ।
ಪ್ರಣಮ್ಯ ಶಿರಸಾ ಪಾದಾವಿದಂ ವಚನಮುಬ್ರವೀತ್ ॥ ೧೫ ॥

ಜೈಗೀಷವ್ಯ ಉವಾಚ:—

ಭಗವನ್ ದೇವದೇವೇಶ ಮಮ ತುಷ್ಟೋ ಯದಿ ಪ್ರಭೋ ।
ಜ್ಞಾನಯೋಗಂ ಹಿ ಮೇ ದೇಹಿ ಯಃ ಸಂಸಾರನಿಕೃಂತನಂ ॥ ೧೬ ॥
ಭಗವನ್ನಾಽನ್ಯದಿಚ್ಛಾಮಿ ಯೋಗಾತ್ಪರತರಂ ಹಿತಂ ।
ತ್ವಯಿ ಭಕ್ತಿಶ್ಚ ನಿತ್ಯಂ ಮೇ ದೇವ್ಯಾಂ ಸ್ಕಂದೇ ಗಣೇಶ್ವರೇ ॥ ೧೭ ॥

ದಲ್ಲಿ ಮಲಗುವವನೂ, ಭಸ್ಮಲಿಪ್ತನೂ ಆಗಿ ನೃತ್ಯಗಾನಗಳಿಂದಲೂ, ಜಪದಿಂದಲೂ, ಪುಣ್ಯಕರವಾದ ವೇದಘೋಷಗಳಿಂದಲೂ, ತಪಸ್ಸಿನಿಂದಲೂ, ಅತಿಭಕ್ತಿಯಿಂದ ಶಿವನನ್ನು ಸಂತೋಷಗೊಳಿಸಲು ಶಿವನು ಪ್ರತ್ಯಕ್ಷನಾಗಿ ಜೈಗೀಷವ್ಯನೆದುರಾಗಿ ಬಂದು ಇಂತೆಂದನು.

೧೪. "ಪ್ರಾಜ್ಞನಾದ ಜೈಗೀಷವ್ಯ! ನೀನು ನನ್ನನ್ನು ದಿವ್ಯದೃಷ್ಟಿಯಿಂದ ನೋಡು. ನಾನು ನಿನಗೆ ಒಲಿದಿರುವೆನು. ವರವನ್ನು ಕೊಡುವೆನು. ನಿನ್ನ ಮನೋರಥವನ್ನು ತಿಳಿಸು."

೧೫. ಹೀಗೆ ಹೇಳಿದ ತ್ರಿಲೋಚನನಾದ ಪರಮೇಶ್ವರನನ್ನು ನೋಡಿ ಜೈಗೀಷವ್ಯನು, ಶಂಕರನ ಪಾದಗಳಿಗೆರಗಿ ಇಂತೆಂದನು.

೧೬. ಜೈಗೀಷವ್ಯನು ಹೇಳುತ್ತಾನೆ;—ಪೂಜ್ಯನಾದ ಪರಮೇಶ್ವರನೇ! ನನ್ನಲ್ಲಿ ನೀನು ಸಂತುಷ್ಟನಾಗಿದ್ದ ಪಕ್ಷದಲ್ಲಿ ಸಂಸಾರವನ್ನು ದಾಟಿಸತಕ್ಕ ಯಾವ ಜ್ಞಾನಯೋಗವನ್ನು ನನಗೆ ಅನುಗ್ರಹಿಸಿ ತಿಳಿಸು.

೧೭–೧೯. ಜ್ಞಾನಯೋಗಕ್ಕಿಂತಲೂ ಬೇರೆಯದನ್ನು ನಾನು ಅಪೇಕ್ಷಿಸುವುದಿಲ್ಲ. ನಿನ್ನಲ್ಲಿ ಮತ್ತು, ಪಾರ್ವತೀ, ಕುಮಾರಸ್ವಾಮಿ, ಮತ್ತು ಗಣಪತಿಗಳಲ್ಲಿಯೂ ನನಗೆ ಭಕ್ತಿಯು ಸ್ಥಿರವಾಗಿರಲಿ. ರೋಗಬಾಧೆಯೂ, ಅಪಮಾನವೂ ಸಂತಾಪವೂ

ನ ಚ ವ್ಯಾಧಿಭಯಂ ಭೂಯಾನ್ನ ಚ ತೇಜೋಽಪಮಾನತಾ ।
ಅನುತ್ಸೇಕಂ ತಥಾ ಕ್ಷಾಂತಿಂ ದಮಂ ಶಮಮಥಾಽಪಿ ಚ ॥ ೧೮ ॥
ಏತಾನ್ವರಾನ್ಮಹಾದೇವ ತ್ವದಿಚ್ಛಾಮಿ ತ್ರಿಲೋಚನ ॥ ೧೯ ॥

ಈಶ್ವರ ಉವಾಚ:—

ಅಜರಶ್ಚಾಽಮರಶ್ಚೈವ ಸರ್ವಶೋಕವಿವರ್ಜಿತಃ ।
ಮಹಾಯೋಗೀ ಮಹಾವೀರ್ಯೋ ಯೋಗೈಶ್ವರ್ಯಸಮನ್ವಿತಃ ॥ ೨೦ ॥
ಪ್ರಭಾವಾಚ್ಚಾಽಸ್ಯ ಕ್ಷೇತ್ರಸ್ಯ ಗುಹ್ಯಸ್ಯ ಮಮ ಶಾಶ್ವತಂ ।
ಯೋಗಾಷ್ಟಗುಣಮೈಶ್ವರ್ಯಂ ಪ್ರಾಪ್ಸ್ಯಸೇ ಪರಮಂ ಮಹತ್ ॥ ೨೧ ॥
ಭವಿಷ್ಯಸಿ ಮುನಿಶ್ರೇಷ್ಠ ಯೋಗಾಚಾರ್ಯಃ ಸುವಿಶ್ರುತಃ ॥ ೨೨ ॥
ಯಶ್ಚೇದಂ ತ್ವತ್ಕೃತಂ ಲಿಂಗಂ ನಿಯಮೇನಾರ್ಚಯಿಷ್ಯತಿ ।
ಸರ್ವಪಾಪವಿನಿರ್ಮುಕ್ತೋ ಯೋಗಂ ದಿವ್ಯಮವಾಪ್ಸ್ಯತಿ ॥ ೨೩ ॥
ಜೈಗೀಷವ್ಯಗುಹಾಂ ಚೇಮಾಂ ಪ್ರಾಪ್ಯ ಯೋಗಂ ಕರೋತಿ ಯಃ ।
ಸ ಸಪ್ತರಾತ್ರಾದ್ಯುಕ್ತಾತ್ಮಾ ಸಂಸಾರಂ ಸಂತರಿಷ್ಯತಿ ॥ ೨೪ ॥

ಉಂಟಾಗದಿರಲಿ. ಕ್ಷಾಂತಿಯೂ, ದಮವೂ, ಶಮವೂ, ನೆಲಸಲಿ. ಈ ವರಗಳನ್ನು ಪರಮೇಶ್ವರನೇ! ನಾನು ಅಪೇಕ್ಷಿಸುತ್ತೇನೆ.

೨೦–೨೨. ಈಶ್ವರನು ಹೇಳುತ್ತಾನೆ:—ಎಲೈ ಋಷಿಯೇ! ನೀನು ಜರಾರಹಿತನಾಗಿಯೂ, ಅಮರನಾಗಿಯೂ, ದುಃಖಗಳನ್ನು ನೀಗಿದವನಾಗಿಯೂ, ಮಹಾಯೋಗಿಯಾಗಿಯೂ, ಮಹಾಬಲಿಷ್ಠನಾಗಿಯೂ, ಯೋಗರೂಪವಾದ ಐಶ್ವರ್ಯದಿಂದ ಕೂಡಿದವನಾಗಿಯೂ ಆಗುವೆ. ರಹಸ್ಯವಾದ ಈ ಕ್ಷೇತ್ರದ ಮಹಿಮೆಯಿಂದ ಶಾಶ್ವತವಾದ ಎಂಟು ಗುಣಗಳಿಂದ ಕೂಡಿದ ಯೋಗದಿಂದ ಉತ್ತಮವಾದ ಐಶ್ವರ್ಯವನ್ನು ಪಡೆಯುವೆ. ಮುನಿಶ್ರೇಷ್ಠನೇ! ಯೋಗಾಚಾರ್ಯನೆಂದು ಪ್ರಸಿದ್ಧನಾಗುವೆ.

೨೩. ನಿನ್ನಿಂದ ಸ್ಥಾಪಿಸಲ್ಪಟ್ಟ ಈ ಶಿವಲಿಂಗವನ್ನು ಯಾರು ನಿಯಮದಿಂದ ಪೂಜಿಸುತ್ತಾರೋ, ಅವರು ಪಾಪಗಳಿಂದ ಬಿಡುಗಡೆ ಹೊಂದಿ ದಿವ್ಯವಾದ ಯೋಗವನ್ನು ಹೊಂದುವರು.

೨೪. ಯಾರು ಜೈಗೀಷವ್ಯಗುಹೆಯನ್ನು ಪ್ರವೇಶಿಸಿ ಯೋಗಾಭ್ಯಾಸವನ್ನು ಮಾಡುವರೋ, ಅವರು ಏಳು ರಾತ್ರಿಗಳಲ್ಲಿಯೇ ಸಂಸಾರ ದುಃಖವನ್ನು ದಾಟಿದವರಾಗುವರು.

ಮಾಸೇನ ಪೂರ್ವಜಾತಿಂ ಚ ಜನ್ಮಾತೀತಂ ಚ ವೇತ್ಸ್ಯತಿ ।
ಏಕರಾತ್ರಾತ್ತನುಂ ಶುದ್ಧಾಂ ದ್ವಾಭ್ಯಾಂ ತಾರಯತೇ ಪಿತೃನ್
ತ್ರಿರಾತ್ರೇಣ ವ್ಯತೀತೇನ ತ್ವಪರಾನ್ ಸಪ್ತ ತಾರಯೇತ್ ॥ ೨೫ ॥
ಪುನಶ್ಚ ತವ ವಿಪ್ರರ್ಷೇ ಅಜೇಯತ್ವಂ ಚ ಯೋಗಿಭಿಃ ।
ಇಚ್ಛತೋ ದರ್ಶನಂ ಚೈವ ಭವಿಷ್ಯತಿ ಚ ತೇ ಮಮ ॥ ೨೬ ॥
ಇತಿ ದೇವೋ ವರಾನ್ ದತ್ವಾ ತತ್ರೈವಾಂತರಧೀಯತ ।
ಏತತ್ಕೃತಯುಗೇ ವೃತ್ತಂ ತವ ದೇವಿ ಪ್ರಭಾಷಿತಂ ॥ ೨೭ ॥
ತ್ರೇತಾಯುಗೇ ಮಹಾದೇವಿ ದ್ವಾಪರೇಽಪಿ ತಥೈವ ಚ ।
ಕಲಿಯುಗಪ್ರವೇಶೇ ತು ವಾಲಖಿಲ್ಯಾ ಮಹರ್ಷಯಃ ॥ ೨೮ ॥
ಅಸ್ಮಿನ್ ಪ್ರಾಭಾಸಿಕೇ ಕ್ಷೇತ್ರೇ ಸೂರ್ಯಸ್ಥಲಸಮೀಪತಃ ।
ಆರಾಧಯಂತೋ ದೇವೇಶಂ ಗುಹಾಮಧ್ಯನಿವಾಸಿನಂ ॥ ೨೯ ॥
ಅಷ್ಟಾಽಶೀತಿಸಹಸ್ರಾಣಿ ಋಷಯಶ್ಚೋರ್ಧ್ವರೇತಸಃ ।
ವರ್ಷಾಽಯುತಂ ತಪಸ್ತಪ್ತ್ವಾ ಸಿದ್ಧಿಂ ಜಗ್ಮುಸ್ತದಾತ್ಮಿಕಾಂ ॥ ೩೦ ॥

---

೨೫. ಈ ಗುಹೆಯಲ್ಲಿ ಒಂದು ತಿಂಗಳು ವಾಸಮಾಡುವಿಕೆಯಿಂದ ಪೂರ್ವದ ಜಾತಿಯನ್ನೂ, ಹಿಂದಿನ ಜನ್ಮಗಳನ್ನೂ ತಿಳಿಯುವನು. ಒಂದು ರಾತ್ರಿ ವಾಸ ಮಾಡುವಿಕೆಯಿಂದ ಶರೀರವು ಪವಿತ್ರಗೊಳ್ಳುವುದು. ಎರಡು ರಾತ್ರಿ ವಾಸಮಾಡುವಿಕೆಯಿಂದ ಪಿತೃಗಳು ಉದ್ಧಾರವಾಗುವರು. ಮೂರು ರಾತ್ರಿಗಳ ವಾಸದಿಂದ ಕಳೆದ ಏಳು ತಲೆಯವರೂ ಉದ್ಧಾರವಾಗುವರು.

೨೬. ನೀನು ಯೋಗಿಗಳಿಗೆ ಅಜೇಯನಾಗಿರುವೆ. ನೀನು ಬಯಸಿದಾಗ ನಾನು ನಿನಗೆ ದರ್ಶನವನ್ನೀಯುವೆನು.

೨೭. ಹೀಗೆ ಮಹೇಶ್ವರನು ಜೈಗೀಷವ್ಯನಿಗೆ ವರವನ್ನಿತ್ತು ಅಲ್ಲಿಯೇ ಅಂತರ್ಧಾನನಾದನು. ದೇವಿ! ಹೀಗೆ ಕೃತಯುಗದಲ್ಲಿ ನಡೆದ ವೃತ್ತಾಂತವನ್ನು ನಿನಗೆ ಹೇಳಿರುವೆನು.

೨೮–೩೦. ಮಹಾದೇವಿ ! ತ್ರೇತಾ, ದ್ವಾಪರ, ಕಲಿಯುಗಗಳಲ್ಲಿಯೂ ಈ ಪ್ರಭಾಸಕ್ಷೇತ್ರದಲ್ಲಿ ವಾಲಖಿಲ್ಯಾಋಷಿಗಳೂ, ಬ್ರಹ್ಮಚಾರಿಗಳಾದ ಎಂಬತ್ತೆಂಟುಸಾವಿರ ಮುನಿಗಳೂ ಸೂರ್ಯಸ್ಥಳದ ಸಮೀಪದಲ್ಲಿ ಗುಹೆಯ ಮಧ್ಯದಲ್ಲಿರುವ ಮಹೇಶ್ವರನನ್ನು ಪೂಜಿಸುತ್ತ ಹತ್ತು ಸಾವಿರ ವರ್ಷಕಾಲ ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದರು.

ತತಃ ಸಿದ್ಧೇಶ್ವರಂ ಲಿಂಗಂ ಕಲೌ ಖ್ಯಾತಂ ವರಾನನೇ ।
ಯದಾ ಸೋಮೇನ ಸಂಯುಕ್ತಾ ಕೃಷ್ಣಾ ಶಿವಚತುರ್ದಶೀ ।
ತದೈವ ತಸ್ಯ ದೇವಸ್ಯ ದರ್ಶನಂ ದೇವಿ ದುರ್ಲಭಂ ॥ ೩೧ ॥
ಬ್ರಹ್ಮಾಂಡಂ ಸಕಲಂ ದತ್ವಾ ಯತ್ಪುಣ್ಯಮುಪಜಾಯತೇ ।
ತತ್ಪುಣ್ಯಂ ಲಭತೇ ದೇವಿ ಸಿದ್ಧಲಿಂಗಸ್ಯ ಪೂಜನಾತ್ ॥ ೩೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಿದ್ಧೇಶ್ವರೋತ್ಪತ್ತಿವರ್ಣನಂ ನಾಮ
॥ ಚತುರ್ದಶೋಽಧ್ಯಾಯಃ ॥

---

೩೧. ಆದ್ದರಿಂದ ಕಲಿಯುಗದಲ್ಲಿ ಆ ಲಿಂಗವು ಸಿದ್ಧೇಶ್ವರವೆಂದು ವಿಖ್ಯಾತವಾಯಿತು. ಸೋಮವಾರವು ಕೃಷ್ಣಪಕ್ಷ ಚತುರ್ದಶಿಯಿಂದ ಸೇರಿದರೆ ಅಲ್ಲಿ ಆ ಸಿದ್ಧೇಶ್ವರನ ದರ್ಶನವು ದುರ್ಲಭವಾದುದು.

೩೨. ಸಿದ್ಧೇಶ್ವರನನ್ನು ಪೂಜಿಸಿದ ಮಾನವನು ಸಮಸ್ತ ಬ್ರಹ್ಮಾಂಡವನ್ನೂ ದಾನಮಾಡಿದ ಪುಣ್ಯವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಿದ್ಧೇಶ್ವರೋತ್ಪತ್ತಿವರ್ಣನವೆಂಬ
ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚದಶೋಽಧ್ಯಾಯಃ

ಪಾಪನಾಶನೋತ್ಪತ್ತಿವರ್ಣನಂ

ಈಶ್ವರ ಉವಾಚ:—

ತಸ್ಯಾಗ್ನೇಯೇ ತು ದೇವೇಶಿ ಆರುಣೇನ ಪ್ರತಿಷ್ಠಿತಂ ।
ಧನುಷಾಂ ಚ ತ್ರಯೇ ತತ್ರ ಸಿದ್ಧಲಿಂಗಸಮೀಪತಃ ॥ ೧ ॥
ಸೂರ್ಯಸಾರಥಿನಾ ತತ್ರ ಲಿಂಗಂ ದೇವಿ ಪ್ರತಿಷ್ಠಿತಂ ।
ಕಲೌ ಪಾಪಹರಂ ನಾಮ ದರ್ಶನಾತ್ಪಾಪನಾಶನಂ ॥ ೨ ॥
ಚೈತ್ರಮಾಸತ್ರಯೋದಶ್ಯಾಂ ಶುಕ್ಲಾಯಾಂ ವರವರ್ಣಿನಿ ।
ಪೂಜಯೇದ್ವಿಧಿವದ್ಭಕ್ತ್ಯಾ ಪೌಂಡರೀಕಫಲಂ ಲಭೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಾಪನಾಶನೋತ್ಪತ್ತಿವರ್ಣನಂ ನಾಮ
ಪಂಚದಶೋಽಧ್ಯಾಯಃ

ಕನ್ನಡದ ಅನುವಾದ

ಪಾಪನಾಶನೋತ್ಪತ್ತಿವರ್ಣನ

೧–೨. ಈಶ್ವರನು ಹೇಳುತ್ತಾನೆ:—ದೇವಿ! ಆ ಸಿದ್ಧೇಶ್ವರನಿಗೆ ಆಗ್ನೇಯ ದಿಕ್ಕಿನಲ್ಲಿ ಮೂರು ಬಿಲ್ಲಿನ ದೂರದಲ್ಲಿ ಕಲಿಯುಗದಲ್ಲಿ ಸೂರ್ಯನ ಸಾರಥಿಯಾದ ಅರುಣನು ಪಾಪವನ್ನು ಪರಿಹರಿಸುವ ಪಾಪಹರನೆಂಬ ಲಿಂಗವನ್ನು ಪ್ರತಿಷ್ಠೆ ಮಾಡಿದನು.

೩. ಪ್ರಿಯಳೆ! ಚೈತ್ರಶುಕ್ಲತ್ರಯೋದಶೀಯದಿನ ಈ ಲಿಂಗವನ್ನು ಪೂಜಿಸಿದ ಮನುಷ್ಯನು ಪೌಂಡರೀಕ ಯಾಗದ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಪಾಪನಾಶನೋತ್ಪತ್ತಿವರ್ಣನವೆಂಬ
ಹದಿನೈದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಷೋಡಶೋಽಧ್ಯಾಯಃ

ಪಾತಾಲವಿವರಸುನಂದಾದಿಮಾತೃಗಣೋತ್ಪತ್ತಿವರ್ಣನಂ

ಈಶ್ವರ ಉವಾಚ :—

ಪಾತಾಲವಿವರಸ್ಯಾಽಪಿ ಮಾಹಾತ್ಮ್ಯಂ ಶೃಣು ಸಾಂಪ್ರತಂ ।
ಪೂರ್ವಪೃಷ್ಟಂ ಮಹಾದೇವಿ ಬ್ರಹ್ಮಣಾ ವಿಶ್ವಕರ್ಮಣಾ ॥ ೧ ॥
ತಮೋಭಾವೇ ಸಮುತ್ಪನ್ನೇ ಜಾತಾಸ್ತತ್ರೈವ ರಾಕ್ಷಸಾಃ ।
ಸೂರ್ಯಸ್ಯ ದ್ವೇಷಿಣಃ ಸರ್ವೇ ಹ್ಯಸಂಖ್ಯಾತಾ ಮಹಾಬಲಾಃ ॥ ೨ ॥
ತೇ ತು ದೃಷ್ಟ್ವಾ ಮಹಾತ್ಮಾನಂ ಸಮುದ್ಯಂತಂ ದಿವಾಕರಂ ।
ತೇ ಧೂಮ್ರಪ್ರಮುಖಾಃ ಸರ್ವೇ ಜಹಸುಃ ಸೂರ್ಯಮಂಜಸಾ ॥ ೩ ॥
ಅಸ್ಮಾಕಮಂತಕಃ ಕೋಽಯಂ ವಿದ್ಯತೇ ಪಾಪಕರ್ಮಕೃತ್ ।
ಇತ್ಯೂಚುರ್ವಿವಿಧಾ ವಾಚಃ ಸೂರ್ಯಸ್ಯಾಗ್ರೇ ಸ್ಥಿತಾಸ್ತದಾ ॥ ೪ ॥
ಇತಿ ಶ್ರುತ್ವಾ ತದಾ ದೇವಃ ಕ್ರೋಧಪ್ರಸ್ಫುರಿತಾಧರಃ ॥
ರಾಕ್ಷಸಾನಾಂ ವಚಶ್ಚೈವ ಭಕ್ಷ್ಯಮಾಣೋ ದಿವಾಕರಃ ॥ ೫ ॥

ಕನ್ನಡದ ಅನುವಾದ

ಪಾತಾಲವಿವರಸುನಂದಾದಿಮಾತೃಗಣೋತ್ಪತ್ತಿವರ್ಣನ

೧-೨. ಈಶ್ವರನು ಹೇಳುತ್ತಾನೆ:—ದೇವಿ ! ಈಗ ಹಿಂದೆ ಪ್ರಶ್ನಿಸಿದ ಪಾತಾಳ ದ್ವಾರದ ಮಾಹಾತ್ಮ್ಯವನ್ನು ಕೇಳು. ವಿಶ್ವಕರ್ಮನಿಂದ ತಮಃಪದಾರ್ಥವು ಉಂಟಾಗಲು ಅಲ್ಲಿಯೇ ಸೂರ್ಯನ ದ್ವೇಷಿಗಳಾದ ಅನೇಕ ಮಂದಿ ಬಲಶಾಲಿಗಳಾದ ರಾಕ್ಷಸರು ಹುಟ್ಟಿದರು.

೩. ಧೂಮ್ರಮೊದಲಾದ ಆ ರಾಕ್ಷಸರೆಲ್ಲ ಉದಯಿಸುತ್ತಿರುವ ಮಹಾತ್ಮನಾದ ದಿವಾಕರನನ್ನು ನೋಡಿ ಅತ್ಯಂತವಾಗಿ ನಕ್ಕರು.

೪. ಅವರು ಸೂರ್ಯನ ಮುಂದೆ ನಿಂತು ನಮ್ಮನ್ನು ಕೊಲ್ಲುವ ಇವನೊಬ್ಬ ಪಾಪಿಯು ಉದಯಿಸುತ್ತಿರುವನು ಎಂಬುದೇ ಮೊದಲಾದ ನಾನಾ ಮಾತುಗಳನ್ನಾಡಿದರು.

೫-೬. ಆಗ ಕತ್ತಲೆಯೆಂಬ ಆನೆಗೆ ಸಿಂಹದಂತಿರುವ ಸೂರ್ಯನು ಆ ರಾಕ್ಷಸರ

ತತಃ ಕ್ರೋಧಾಭಿಭೂತೇನ ಚಕ್ಷುಷಾ ಚಾಽವಲೋಕಯತ್ ।
ಸ ಕ್ರೂರರಕ್ಷಃಕ್ಷಯಕೃತ್ತಿಮಿರದ್ವಿಪಕೇಸರೀ ॥ ೬ ॥

ಮಹಾಂಶುಮಾನ್ ಖಗಃ ಸೂರ್ಯಸ್ತದ್ವಿನಾಶಮಚಿಂತಯತ್ ।
ಅಜಾನನ್ನಂತತಶ್ಛಿದ್ರಂ ರಾಕ್ಷಸಾನಾಂ ದಿವಸ್ಪತಿಃ ॥ ೭ ॥

ಸ ಧರ್ಮವಿಚ್ಯುತಾನ್ ದೃಷ್ಟ್ವಾ ಪಾಪೋಪಹತಚೇತಸಃ ।
ಏವಂ ಸಂಚಿಂತ್ಯ ಭಗವಾನ್ ದಧ್ಯೌ ಧ್ಯಾನಂ ಪ್ರಭಾಕರಃ ॥ ೮ ॥

ಅಜಾನಂಸ್ತೇಜಸಾಗ್ರಸ್ತಂ ತ್ರೈಲೋಕ್ಯಂ ರಜನೀಚರೈಃ ।
ತತಸ್ತೇ ಭಾನುನಾ ದೃಷ್ಟಾಃ ಕ್ರೋಧಾಧ್ಮಾತೇನ ಚಕ್ಷುಷಾ ॥ ೯ ॥

ನಿಪೇತುರಂಬರಭ್ರಷ್ಟಾಃ ಕ್ಷೀಣಪುಣ್ಯಾ ಇವ ಗ್ರಹಾಃ ।
ರಾಕ್ಷಸೈರ್ವೀಕ್ಷಿತೋ ಧೂಮ್ರೋ ನಿಪತಂಛುಶುಭೇಽಂಬರಾತ್ ॥ ೧೦ ॥

ಅರ್ಧಪಕ್ವಂ ಯಥಾ ತಾಲಫಲಂ ಕಪಿಭಿರಾವೃತಂ ।
ಯದೃಚ್ಛಯಾ ನಿಪೇತುಸ್ತೇ ಯಂತ್ರಮುಕ್ತಾ ಯಥೋಪಲಾಃ ॥ ೧೧ ॥

ತತೋ ವಾಯುವಶಾದ್ಭ್ರಷ್ಟಾ ಭಿತ್ತ್ವಾ ಭೂಮಿಂ ರಸಾತಲಂ ।
ಜಗ್ಮುಸ್ತೇ ಕ್ಷೇತ್ರಮಾಸಾದ್ಯ ಪ್ರಭಾಸಂ ವರವರ್ಣಿನಿ ॥ ೧೨ ॥

ಈ ಮಾತನ್ನು ಕೇಳಿ ಅಯಾಗಿಕೋಪಗೊಂಡು ನಡುಗುತ್ತಿರುವ ತುಟಿಯುಳ್ಳವನಾಗಿ ಅವರನ್ನು ಕೊಲ್ಲಲು ಕಣ್ಣಿನಿಂದೊಮ್ಮೆ ನೋಡಿದನು.

೭. ಸೂರ್ಯನು ಆರಾಕ್ಷಸರಲ್ಲಿ ಛಿದ್ರವನ್ನರಿಯದಿದ್ದುದರಿಂದ ಅವರನ್ನು ಕೊಲ್ಲುವ ಉಪಾಯವೇನೆಂದು ಆಲೋಚಿಸಿದನು.

೮–೯. ಅವನು ಧರ್ಮಭ್ರಷ್ಟರೂ, ಪಾಪಿಷ್ಠರೂ ಆದ ಅವರನ್ನು ನೋಡಿ ಚಿಂತಿಸಿ ಅವರ ತೇಜಸ್ಸಿನಿಂದ ಆಕ್ರಾಂತವಾದ ಮೂರು ಲೋಕವನ್ನೂ ತಿಳಿಯದೆ ಕ್ರೋಧ ದೃಷ್ಟಿಯಿಂದ ಅವರನ್ನು ನೋಡಿದನು.

೧೦–೧೧. ಆಗ ಆ ರಾಕ್ಷಸರು ಆಕಸ್ಮಿಕವಾಗಿ ಯಂತ್ರದಿಂದ ಬಿಡಲ್ಪಟ್ಟ ಕಲ್ಲು ಗಳಂತೆಯೂ ಆಕಾಶದಿಂದ ನಷ್ಟವಾದ ಪುಣ್ಯವುಳ್ಳ ಗ್ರಹಗಳು ಬೀಳುವಂತೆಯೂ ನೆಲಕ್ಕುರುಳಿಬಿದ್ದರು. ಆ ರಾಕ್ಷಸರಿಂದ ಸುತ್ತಲ್ಪಟ್ಟ ಧೂಮ್ರನು ಆಕಾಶದಿಂದ ಬೀಳುತ್ತ ಕಪಿಗಳು ಸುತ್ತಿಕೊಂಡಿರುವ ಅರ್ಧಮಾಗಿದ ತಾಳೆ ಹಣ್ಣಿನಂತೆ ಪ್ರಕಾಶಿಸಿದನು.

೧೨. ಬಳಿಕ ಆ ರಾಕ್ಷಸರು ಗಾಳಿಯಿಂದ ಪ್ರಭಾಸಕ್ಷೇತ್ರವನ್ನು ಹೊಂದಿ ಭೂಮಿ ಯನ್ನು ಭೇದಿಸಿಕೊಂಡು ಪಾತಾಳಕ್ಕೆ ತೆರಳಿದರು.

ಯತ್ರ ಚಾರ್ಕಸ್ಥಲೋ ದೇವಃ ಸರ್ವಸಿದ್ಧಿಪ್ರದಾಯಕಃ ।
ತತ್ಸಾನ್ನಿಧ್ಯಸ್ಥಿತಂ ದೇವಿ ಪಾತಾಲವಿವರಂ ಮಹತ್ ॥ ೧೩ ॥
ಅನ್ಯಾನಿ ಕೋಟಿಶಃ ಸಂತಿ ತಾನಿ ಲುಪ್ತಾನಿ ಭಾಮಿನಿ ।
ಕೃತಸ್ಮರಾತ್ಸಮಾರಭ್ಯ ಯಾವದರ್ಕಸ್ಥಲೋ ರವಿಃ ॥ ೧೪ ॥
ದೇವಮಾತುರ್ವರಂ ಪ್ರಾಪ್ಯ ಸಿದ್ಧಯೋಽಷ್ಟೌ ವ್ಯವಸ್ಥಿತಾಃ ।
ಏತಸ್ಮಿನ್ನಂತರೇ ದೇವಿ ಸೂರ್ಯಕ್ಷೇತ್ರಮುದಾಹೃತಂ ॥ ೧೫ ॥
ಸೂರ್ಯಸ್ಯ ತೇಜಸೋ ದೇವಿ ಮಧ್ಯಭಾಗಂ ಹಿ ತತ್ ಸ್ಮೃತಂ ।
ಸರ್ವಂ ಹೇಮಮಯಂ ದೇವಿ ನಾಽಪುಣ್ಯಸ್ತತ್ರ ವೀಕ್ಷತೇ ॥ ೧೬ ॥
ವಿವರಾಣಾಂ ಶತಂ ಚೈಕಂ ಸ್ಪರ್ಶಾಶ್ಚೈವ ತು ಕೋಟಿಶಃ ।
ತತ್ರ ಸಂತಿ ಮಹಾದೇವಿ ಸಿದ್ಧೇಶಸ್ತು ಪ್ರರಕ್ಷತಿ ॥ ೧೭ ॥
ಇದಂ ಕ್ಷೇತ್ರಂ ಮಹಾದೇವಿ ಪ್ರಿಯಂ ಸೂರ್ಯಸ್ಯ ಸರ್ವದಾ ।
ಸೂರ್ಯಪರ್ವಣಿ ಸಂಪ್ರಾಪ್ತೇ ಕುರುಕ್ಷೇತ್ರಾಧಿಕಂ ಪ್ರಿಯೇ ॥ ೧೮ ॥
ಬ್ರಾಹ್ಮೀ ಚೈವ ಹಿರಣ್ಯಾ ಚ ಸಂಗಮಶ್ಚ ಮಹೋದಧೇಃ ।
ಏತತ್ತ್ರಿಸಂಗಮಂ ದೇವಿ ಕೋಟಿತೀರ್ಥಫಲಪ್ರದಂ ॥ ೧೯ ॥

---

೧೩. ಸಕಲ ಸಿದ್ಧಿಯನ್ನೀಯುವ ಅರ್ಕಸ್ಥಳದ ಸೂರ್ಯನ ಬಳಿಯಲ್ಲಿ ಈ ಪಾತಾಳದ ಮಹಾವಿವರವಿರುವುದು.

೧೪. ಪ್ರಿಯಳೆ! ಕೃತಸ್ಮರದಿಂದಾರಂಭಿಸಿ ಅರ್ಕಸ್ಥಳದವರೆಗೆ ಅನೇಕ ಕೋಟಿ ಪಾತಾಳ ವಿವರಗಳಿದ್ದುವು. ಅವು ಈಗ ಲುಪ್ತವಾಗಿವೆ.

೧೫–೧೬. ಇಲ್ಲಿ ಅಷ್ಟಸಿದ್ಧಿಗಳು ದೇವತೆಗಳ ತಾಯಿಯಾದ ಅದಿತಿಯ ವರವನ್ನು ಪಡೆದು ನೆಲೆಸಿರುವುವು. ಇದರ ಮಧ್ಯದಲ್ಲಿ ಸೂರ್ಯನ ತೇಜಸ್ಸಿನ ಮಧ್ಯ ಭಾಗವಾದ ಸೂರ್ಯಕ್ಷೇತ್ರವಿರುವುದು. ಇದು ಸಂಪೂರ್ಣವಾಗಿ ಸುವರ್ಣಮಯ ವಾದುದು. ಇದನ್ನು ಪುಣ್ಯಮಾಡದವನು ನೋಡಲಾರನು.

೧೭. ಮಹಾದೇವಿ! ಅಲ್ಲಿ ನೂರೊಂದು ವಿವರಗಳೂ, ಕೋಟಿ ಸ್ಪರ್ಶಶಿಲೆಗಳೂ ಇರುವುವು. ಇವುಗಳನ್ನು ಸಿದ್ಧೇಶನು ರಕ್ಷಿಸುವನು.

೧೮–೧೯. ದೇವಿ! ಈ ಕ್ಷೇತ್ರವು ಸೂರ್ಯನಿಗೆ ಪ್ರಿಯವಾದುದು. ಸೂರ್ಯ ಗ್ರಹಣ ಕಾಲದಲ್ಲಿ ಕುರುಕ್ಷೇತ್ರಕ್ಕಿಂತಲೂ ಶ್ರೇಷ್ಠವಾದ ಈ ಕ್ಷೇತ್ರದಲ್ಲಿ ಬ್ರಾಹ್ಮೀ, ಹಿರಣ್ಯಾ, ಸಮುದ್ರ ಇವುಗಳ ಸಂಗಮವಾಗುವುದರಿಂದ ಇದು ಕೋಟಿ ತೀರ್ಥಗಳ ಫಲವನ್ನೀಯುವುದು.

ದೇವಮಾತಾ ಚ ತತ್ರೈವ ಮಂಕೀಶಸ್ತತ್ರ ತಿಷ್ಠತಿ ।
ನಾಗಸ್ಥಾನಂ ನಗಸ್ಥಾನಂ ತತ್ರೈವ ಸಮುದಾಹೃತಂ ॥ ೨೦ ॥
ಇತಿ ಸಂಕ್ಷೇಪತಃ ಪ್ರೋಕ್ತಮರ್ಕಸ್ಥಲಮಹೋದಯಂ ।
ರಾಕ್ಷಸಾನಾಂ ಚ ಸಂಪಾತಾದಭೂಚ್ಚ ವಿವರಂ ಯಥಾ ॥ ೨೧ ॥
ಅನ್ಯಾನಿ ತತ್ರ ದೇವೇಶಿ ಲುಪ್ತಾನಿ ವಿವರಾಣಿ ವೈ ।
ಏವಂ ತು ಪ್ರಕಟಂ ತತ್ರ ದೃಶ್ಯತೇಽದ್ಯಾಽಪಿ ಭಾಮಿನಿ ॥ ೨೨ ॥
ಶ್ರೀಮುಖಂ ನಾಮ ತದ್ದ್ವಾರಂ ರಕ್ಷ್ಯತೇ ಮಾತೃಭಿಃ ಪ್ರಿಯೇ ।
ವರ್ಷಮೇಕಂ ಚತುರ್ದಶ್ಯಾಂ ನಿಯಮಾದ್ಯಸ್ತು ಪೂಜಯೇತ್ ॥ ೨೩ ॥
ತತ್ರ ಮಾತೃಗಣಾನ್ ದೇವಿ ಸುನಂದಾದ್ಯಾನ್ವಿಧಾನತಃ ।
ಪಶುಪುಷ್ಪೋಪಹಾರೈಶ್ಚ ಧೂಪದೀಪೈಸ್ತಥೋತ್ತಮೈಃ ।
ವಿಪ್ರಾಣಾಂ ಭೋಜನೈರ್ದೇವಿ ತಸ್ಯ ಸಿದ್ಧಿರ್ಭವಿಷ್ಯತಿ ॥ ೨೪ ॥
ತಸ್ಮಾತ್ಸರ್ವಪ್ರಯತ್ನೇನ ತತ್ರಾರ್ಕಸ್ಥಲಸನ್ನಿಧೌ ।
ಪೂಜಯೇನ್ಮಾತರಃ ಸರ್ವಾ ಯದೀಚ್ಛೇತ್ಸಿದ್ಧಿಮಾತ್ಮನಃ ॥ ೨೫ ॥
ಏತಾಸ್ತು ಮಾತರೋ ದೇವಿ ಸುನಂದಾಗಣನಾಮತಃ ।
ಖ್ಯಾತಿಂ ಯಾಂತಿ ಪ್ರಭಾಸೇ ತು ಕ್ಷೇತ್ರೇಽಸ್ಮಿನ್ ವರವರ್ಣಿನಿ ॥ ೨೬ ॥

---

೨೦. ಅಲ್ಲಿಯೇ ದೇವಮಾತೆ, ಮಂಕೀಶ, ನಾಗಸ್ಥಾನ. ನಗಸ್ಥಾನ ಇವುಗಳಿರುವುವು.

೨೧. ಹೀಗೆ ಸಂಕ್ಷೇಪವಾಗಿ ಅರ್ಕಸ್ಥಳದ ಮಾಹಾತ್ಮ್ಯವನ್ನೂ, ರಾಕ್ಷಸರು ಬಿದ್ದುದರಿಂದಾದ ಪಾತಾಳ ವಿವರ ವಿಚಾರವನ್ನೂ ಹೇಳಿರುವೆನು.

೨೨. ದೇವಿ! ಅಲ್ಲಿ ಇತರ ವಿವರಗಳು ಲುಪ್ತವಾಗಿವೆ. ಒಂದು ಮಾತ್ರ ಈಗಲೂ ಸ್ಪಷ್ಟವಾಗಿದೆ.

೨೩–೨೪. ಪ್ರಿಯಳೆ! ಶ್ರೀಮುಖವೆಂಬ ಆ ದ್ವಾರವನ್ನು ಸುನಂದಾದಿ ಮಾತೆಯರು ಕಾಪಾಡುವರು. ಒಂದು ವರ್ಷಕಾಲ ಚತುರ್ದಶೀಯದಿನ ನಿಯಮದಿಂದ ಸುನಂದಾದಿ ಮಾತೆಯರನ್ನು ಪಶು ಪುಷ್ಪಗಳಿಂದಲೂ, ಧೂಪದೀಪಗಳಿಂದಲೂ ಪೂಜಿಸಿ ಬ್ರಾಹ್ಮಣರನ್ನು ಭೋಜನ ಮಾಡಿಸಿದರೆ ಮನೋಭೀಷ್ಟವು ಸಿದ್ಧಿಸುವುದು.

೨೫. ಆದುದರಿಂದ ತನ್ನ ಇಷ್ಟಸಿದ್ಧಿಯನ್ನು ಬಯಸುವ ಮಾನವನು ಸಕಲ ಪ್ರಯತ್ನಗಳಿಂದ ಅರ್ಕಸ್ಥಳದ ಸಮೀಪದಲ್ಲಿ ಸಮಸ್ತ ಮಾತೆಯರನ್ನೂ ಪೂಜಿಸಬೇಕು.

೨೬. ದೇವಿ! ಈ ಪ್ರಭಾಸಕ್ಷೇತ್ರದಲ್ಲಿ ಈ ಮಾತೆಯರು ಸುನಂದಾಗಣವೆಂಬ ಹೆಸರಿನಿಂದ ಪ್ರಸಿದ್ಧಿಗೊಂಡಿರುವರು.

ಏತತ್ಸಂಕ್ಷೇಪತಃ ಪ್ರೋಕ್ತಂ ಪಾತಾಲೋತ್ತರಮಧ್ಯತಃ ।
ತಚ್ಛ್ರುತ್ವಾ ಮುಚ್ಯತೇ ದೇವಿ ಸರ್ವಪಾಪೇಭ್ಯೋ ನರೋತ್ತಮಃ ॥ ೨೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇಽರ್ಕಸ್ಥಲ
ಮಾಹಾತ್ಮ್ಯೇ ಪಾತಾಲವಿವರಸುನಂದಾದಿ
ಮಾತೃಗಣೋತ್ಪತ್ತಿವರ್ಣನಂ ನಾಮ
ಷೋಡಶೋಽಧ್ಯಾಯಃ

---

೨೭. ಪಾತಾಳದ ಉತ್ತರ ದಿಕ್ಕಿನ ಮಧ್ಯದಲ್ಲಿರುವ ಈ ವಿವರವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳಿದ ಮಾನವೋತ್ತಮನು ಸಕಲ ಪಾಪಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದುಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿರುವಅರ್ಕಸ್ಥಳಮಾಹಾತ್ಮ್ಯದಲ್ಲಿ
ಪಾತಾಳವಿವರಸುನಂದಾದಿ
ಮಾತೃಗಣೋತ್ಪತ್ತಿವರ್ಣನವೆಂಬ
ಹದಿನಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತದಶೋಽಧ್ಯಾಯಃ

ಅರ್ಕಸ್ಥಲಪೂಜಾವಿಧಾನಾದಿವರ್ಣನಂ

ಈಶ್ವರ ಉವಾಚ :—

ಅಥ ಪೂಜಾವಿಧಾನಂ ತೇ ಕಥಯಾಮಿ ಯಶಸ್ವಿನಿ ।
ಅರ್ಕಸ್ಥಲಸ್ಯ ದೇವಸ್ಯ ಯಥಾ ಪೂಜ್ಯೋ ನರೋತ್ತಮೈಃ ॥ ೧ ॥
ಸರ್ವೇಷಾಮೇವ ದೇವಾನಾಮಾದಿರಾದಿತ್ಯ ಉಚ್ಯತೇ ।
ಆದಿಕರ್ತಾ ತ್ವಸೌ ಯಸ್ಮಾದಾದಿತ್ಯಸ್ತೇನ ಚೋಚ್ಯತೇ ॥ ೨ ॥
ನಾಽಽದಿತ್ಯೇನ ವಿನಾ ರಾತ್ರಿರ್ನ ದಿವಾ ನ ಚ ತರ್ಪಣಂ ।
ನ ಧರ್ಮೋ ವೈ ನ ಚಾಽಧರ್ಮೋ ನ ಸಂತಿಷ್ಠೇಚ್ಚರಾಽಚರಂ ॥ ೩ ॥
ಆದಿತ್ಯಃ ಪಾಲಯೇತ್ಸರ್ವಮಾದಿತ್ಯಃ ಸೃಜತೇ ಸದಾ ।
ಆದಿತ್ಯಃ ಸಂಹರೇತ್ಸರ್ವಂ ತಸ್ಮಾದೇವ ತ್ರಯೀಮಯಃ ॥ ೪ ॥
ಆರಾಧನವಿಧಿಂ ತಸ್ಯ ಭಾಸ್ಕರಸ್ಯ ಮಹಾತ್ಮನಃ ।
ಕಥಯಾಮಿ ಮಹಾದೇವಿ ವೇದೋಕ್ತೈರ್ಮಂತ್ರವಿಸ್ತರೈಃ ।
ತಂ ಶೃಣುಷ್ವ ವರಾರೋಹೇ ಸರ್ವಪಾಪಪ್ರಣಾಶನಂ ॥ ೫ ॥

ಕನ್ನಡದ ಅನುವಾದ

ಅರ್ಕಸ್ಥಲಪೂಜಾವಿಧಾನಾದಿವರ್ಣನ

೧. ಪ್ರಿಯಳೆ! ಮಾನವರು ಅರ್ಕಸ್ಥಳದಲ್ಲಿ ಆದಿತ್ಯನನ್ನು ಪೂಜಿಸುವ ವಿಧಿಯನ್ನು ನಿನಗೆ ಹೇಳುವೆನು.

೨. ಆದಿತ್ಯನು ಸಕಲ ದೇವತೆಗಳಲ್ಲಿಯೂ ಆದಿದೇವನಾಗಿರುವನು. ಇವನು ಮೊದಲನೆಯ ಸೃಷ್ಟಿಕರ್ತನಾದ್ದರಿಂದ ಆದಿತ್ಯನೆಂಬ ಹೆಸರನ್ನು ಪಡೆದಿರುವನು.

೩. ಸೂರ್ಯನಿಲ್ಲದಿದ್ದರೆ ರಾತ್ರಿ, ಹಗಲು, ತರ್ಪಣ ಧರ್ಮಾಧರ್ಮಗಳು, ಚರಾಚರ ಜಗತ್ತು ಯಾವುವೂ ಇರಲಾರವು.

೪. ಈ ಸೂರ್ಯನು ಎಲ್ಲವನ್ನೂ ಕಾಪಾಡುವುದರಿಂದಲೂ, ಸೃಷ್ಟಿಸುವುದರಿಂದಲೂ, ಸಂಹರಿಸುವುದರಿಂದಲೂ ವೇದತ್ರಯ ಸ್ವರೂಪನೆನಿಸಿರುವನು.

೫ ಮಹಾದೇವಿ! ಮಹಾತ್ಮನಾದ ಆ ಸೂರ್ಯನನ್ನು ವೇದೋಕ್ತ ಮಂತ್ರಗಳಿಂದ ಪೂಜಿಸುವ ಕ್ರಮವನ್ನು ಹೇಳುವೆನು. ಸಕಲ ಪಾಪಗಳನ್ನೂ ಪರಿಹರಿಸುವ ಆ ಪೂಜಾಕ್ರಮವನ್ನು ಕೇಳು.

ಮೂರ್ತಿಸ್ಥಃ ಪೂಜ್ಯತೇ ಯೇನ ವಿಧಾನೇನ ಮಹೇಶ್ವರಿ ।
ದ್ವಾದಶಾತ್ಮಾ ಯಥಾ ಸೂರ್ಯಸ್ತತ್ತೇ ವಕ್ಷ್ಯಾಮ್ಯಶೇಷತಃ ॥ ೬ ॥
ಮುಖಶುದ್ಧಿಂ ಚ ಕೃತ್ವಾಽಽದೌ ಸ್ನಾನಂ ಕೃತ್ವಾ ವಿಶೇಷತಃ ।
ವಸ್ತ್ರಶುದ್ಧಿಂ ದೇಹಶುದ್ಧಿಂ ಕೃತ್ವಾ ಸೂರ್ಯಂ ಸ್ಪೃಶೇತ್ತತಃ ॥ ೭ ॥
ದಂತಕಾಷ್ಠವಿಧಾನಂ ತು ಪ್ರಥಮಂ ಕಥಯಾಮಿ ತೇ ।
ಮಧೂಕೇ ಪುತ್ರಲಾಭಃ ಸ್ಯಾದರ್ಕೇ ನೇತ್ರಸುಖಂ ಪ್ರಿಯೇ ॥ ೮ ॥
ವಕ್ತೃತ್ವಂ ವೈ ಬದರ್ಯಾಂ ಚ ಬೃಹತ್ಯಾ ದುರ್ಜನಾನ್ ಜಯೇತ್ ।
ಐಶ್ವರ್ಯಂ ಚ ಭವೇದ್ಬಿಲ್ವೇ ಖದಿರೇ ಚ ನ ಸಂಶಯಃ ॥ ೯ ॥
ರೋಗಕ್ಷಯಃ ಕದಂಬೇ ತು ಅರ್ಥಲಾಭೋಽತಿಮುಕ್ತಕೇ ।
ಗುರುತಾಂ ಯಾತಿ ಸರ್ವತ್ರ ಆಟರೂಷಕಸಂಭವೈಃ ॥ ೧೦ ॥
ಜಾತಿಪ್ರಧಾನತಾಂ ಜಾತಾವಶ್ವತ್ಥೇ ಯಚ್ಛತೇ ಯಶಃ ।
ಶ್ರಿಯಂ ಪ್ರಾಪ್ನೋತಿ ನಿಖಿಲಾಂ ಶಿರೀಷಸ್ಯ ನಿಷೇವಣಾತ್ ॥ ೧೧ ॥
ಪ್ರಿಯಂಗುಂ ಸೇವಮಾನಸ್ಯ ಸೌಭಾಗ್ಯಂ ಪರಮಂ ಭವೇತ್ ।
ಅಭೀಪ್ಸಿತಾರ್ಥಸಿದ್ಧಿಃ ಸ್ಯಾನ್ನಿತ್ಯಂ ಪ್ಲಕ್ಷನಿಷೇವಣಾತ್ ॥ ೧೨ ॥

---

೬ ದ್ವಾದಶಸ್ವರೂಪನಾದ ಮೂರ್ತಿಯಲ್ಲಿ ಸನ್ನಿಹಿತನಾಗಿರುವ ಸೂರ್ಯನನ್ನು ಪೂಜಿಸುವ ವಿಧಿಯನ್ನು ಸಂಪೂರ್ಣವಾಗಿ ಹೇಳುವೆನು.

೭. ಮೊದಲು ಮುಖವನ್ನು ತೊಳೆದುಕೊಂಡು ಚೆನ್ನಾಗಿ ಮಿಂದು ಬಟ್ಟೆ ದೇಹಗಳನ್ನು ಶುದ್ಧಮಾಡಿಕೊಂಡು ಬಳಿಕ ಸೂರ್ಯನನ್ನು ಮುಟ್ಟಬೇಕು.

೮. ಮೊದಲು ಹಲ್ಲುಗಳನ್ನು ಉಜ್ಜಿಕೊಳ್ಳುವ ಕಾಷ್ಠದ ರೀತಿಯನ್ನು ಹೇಳುವೆನು. ಪ್ರಿಯಳೆ! ಇಪ್ಪೆಕಡ್ಡಿಯಿಂದ ಹಲ್ಲುಗಳನ್ನು ಉಜ್ಜಿಕೊಂಡರೆ ಪುತ್ರಪ್ರಾಪ್ತಿಯೂ, ಎಕ್ಕದ ಕಡ್ಡಿಯಿಂದ ನೇತ್ರಸೌಖ್ಯವೂ, ಉಂಟಾಗುವುದು.

೯–೧೨. ಎಲಚೀಕಡ್ಡಿಯಿಂದ ವಾಗ್ಮಿತ್ವವೂ, ರಾಮಗುಳ್ಳದಕಡ್ಡಿಯಿಂದ ದುರ್ಜನ ಜಯವೂ, ಬಿಲ್ವದಕಡ್ಡಿಯಿಂದ ಐಶ್ವರ್ಯವೂ, ಖದಿರೆ ಕಡ್ಡಿಯಿಂದ ಸಂಶಯ ಪರಿಹಾರವೂ, ಈಚಲ ಕಡ್ಡಿಯಿಂದ ರೋಗನಾಶವೂ, ಹೊಂಗೆ ಕಡ್ಡಿಯಿಂದ ದ್ರವ್ಯಲಾಭವೂ, ಆಟರೂಷಕಡ್ಡಿಯಿಂದ ಎಲ್ಲೆಡೆಯಲ್ಲಿ ಗುರುತ್ವವೂ, ಜಾಜಿಕಡ್ಡಿಯಿಂದ ಜಾತಿಯಲ್ಲಿ ಪ್ರಧಾನತೆಯೂ, ಅಶ್ವತ್ಥದ ಕಡ್ಡಿಯಿಂದ ಕೀರ್ತಿಯೂ, ಬಾಗೆ ಕಡ್ಡಿಯಿಂದ ಸಕಲ ಸಂಪತ್ತೂ, ಪ್ರಿಯಂಗುವಿನ ಕಡ್ಡಿಯಿಂದ ಉತ್ತಮ ಸೌಭಾಗ್ಯವೂ, ಬಸರೀಕಡ್ಡಿಯಿಂದ ಇಷ್ಟಾರ್ಥಸಿದ್ಧಿಯೂ ಆಗುವುದು.

ನ ಪಾಟಿತಂ ಸಮಶ್ನೀಯಾದ್ದಂತಕಾಷ್ಠಂ ನ ಸವ್ರಣಂ ।
ನ ಚೋರ್ಧ್ವಶುಷ್ಕಂ ವಕ್ರಂ ವಾ ನೈವ ಚ ತ್ವಗ್ವಿವರ್ಜಿತಂ ॥ ೧೩ ॥
ವಿತಸ್ತಿಮಾತ್ರಮಶ್ನೀಯಾದ್ದೀರ್ಘಂ ಹ್ರಸ್ವಂ ಚ ವರ್ಜಯೇತ್ ।
ಉದಙ್ಮುಖೋ ವಾ ಪ್ರಾಙ್ಮುಖಃ ಸುಖಾಸೀನೋಽಥ ವಾಗ್ಯತಃ ॥ ೧೪ ॥
ಕಾಮಂ ಯಥೇಷ್ಟಂ ಹೃದಯೇ ಕೃತ್ವಾ ಸಮಭಿಮಂತ್ರ್ಯ ಚ ।
ಮಂತ್ರೇಣಾನೇನ ಮತಿಮಾನಶ್ನೀಯಾದ್ದಂತಧಾವನಂ ॥ ೧೫ ॥
ವರಂ ದತ್ವಾಽಭಿಜಾನಾಸಿ ಕಾಮಂ ಚೈವ ವನಸ್ಪತೇ।
ಸಿದ್ಧಿಂ ಪ್ರಯಚ್ಛ ಮೇ ನಿತ್ಯಂ ದಂತಕಾಷ್ಠ ನಮೋಽಸ್ತು ತೇ ॥ ೧೬ ॥
ತ್ರೀನ್ ವಾರಾನ್ ಪರಿಜಪ್ಯೈವಂ ಭಕ್ಷಯೇದ್ದಂತಧಾವನಂ ।
ಪಶ್ಚಾತ್ಪ್ರಕ್ಷಾಲ್ಯ ತತ್ಕಾಷ್ಠಂ ಶುಚೌ ದೇಶೇ ವಿನಿಕ್ಷಿಪೇತ್ ॥ ೧೭ ॥
ದಂತಕಾಷ್ಠೇನ ದೇವೇಶಿ ನ ಜಿಹ್ವಾಂ ಪರಿಮಾರ್ಜಯೇತ್ ।
ಪೃಥಕ್ ಪೃಥಕ್ ತದಾ ಕಾರ್ಯಂ ಯದೀಚ್ಛೇದ್ವಿಪುಲಂ ಯಶಃ ॥ ೧೮ ॥
ಅಂಗುಲ್ಯಾ ದಂತಕಾಷ್ಠಂ ಚ ಪ್ರತ್ಯಕ್ಷಂ ಲವಣಂ ಚ ಯತ್ ।
ಮೃತ್ತಿಕಾಭಕ್ಷಣಂ ಚೈವ ತುಲ್ಯಂ ಗೋಮಾಂಸಭಕ್ಷಣೈಃ ॥ ೧೯ ॥

---

೧೩. ಸೀಳಿರುವುದೂ, ಗಾಯಗೊಂಡುದೂ, ಮೇಲ್ಗಡೆ ಒಣಗಿರುವುದೂ, ವಕ್ರವಾಗಿರುವುದೂ ಆಗಿರುವ ಕಡ್ಡಿಯಿಂದ ಹಲ್ಲುಗಳನ್ನು ಉಜ್ಜಿಕೊಳ್ಳಬಾರದು.

೧೪–೧೫. ಉದ್ದವೂ, ಹ್ರಸ್ವವೂ ಆಗಿರದ ಗೇಣುದ್ದದ ಕಡ್ಡಿಯನ್ನು ಉಪಯೋಗಿಸಬೇಕು. ಉತ್ತರ ಅಥವಾ ಪೂರ್ವಾಭಿಮುಖವಾಗಿ ಸುಖದಿಂದ ಕುಳಿತು ಮೌನದಿಂದ ಹೃದಯದಲ್ಲಿ ಇಷ್ಟಾರ್ಥವನ್ನು ಚಿಂತಿಸುತ್ತ ಈ ಮಂತ್ರದಿಂದ ಅಭಿಮಂತ್ರಿಸಿದ ಕಡ್ಡಿಯಿಂದ ಹಲ್ಲುಗಳನ್ನು ಉಜ್ಜಿಕೊಳ್ಳಬೇಕು.

೧೬. ದಂತಕಾಷ್ಠ! ನನ್ನ ಇಷ್ಟಾರ್ಥವನ್ನರಿತಿರುವೆ. ನನಗೆ ವರವನ್ನಿತ್ತು ಇಷ್ಟಾರ್ಥವನ್ನು ನೀಡು. ನಿನಗೆ ನಮಸ್ಕಾರವು.

೧೭. ಈ ಮಂತ್ರವನ್ನು ಮೂರುಸಾರಿ ಜಪಿಸಿ ಹಲ್ಲುಗಳನ್ನು ಉಜ್ಜಿಕೊಂಡು ಕಾಷ್ಠವನ್ನು ತೊಳೆದು ಅದನ್ನು ಶುದ್ಧವಾದ ಸ್ಥಳದಲ್ಲಿಡಬೇಕು.

೧೮. ದೇವೇಶಿ! ದಂತಕಾಷ್ಠದಿಂದ ನಾಲಿಗೆಯನ್ನು ಉಜ್ಜಬಾರದು. ಅತಿಶಯ ಕೀರ್ತಿಯನ್ನಪೇಕ್ಷಿಸುವುದಾದರೆ ಹಲ್ಲುಗಳನ್ನೂ ನಾಲಿಗೆಯನ್ನೂ ಬೇರೆಬೇರೆ ಕಡ್ಡಿಗಳಿಂದ ಉಜ್ಜಿಕೊಳ್ಳಬೇಕು.

೧೯. ಬೆರಳಿನಿಂದಲೂ, ಉಪ್ಪಿನಿಂದಲೂ, ಮಣ್ಣಿನಿಂದಲೂ ಹಲ್ಲುಗಳನ್ನು ಉಜ್ಜಿಕೊಂಡರೆ ಗೋಮಾಂಸವನ್ನು ಭಕ್ಷಿಸಿದ ಪಾಪವುಂಟಾಗುವುದು.

ಮುಖೇ ಪರ್ಯುಷಿತೇ ನಿತ್ಯಂ ಭವತ್ಯಪ್ರಯತೋ ದ್ವಿಜಃ
ತಸ್ಮಾಚ್ಛುಷ್ಕಮಥಾರ್ದ್ರಂ ವಾ ಭಕ್ಷಯೇದ್ದಂತಧಾವನಂ ॥ ೨೦ ॥
ವರ್ಜಿತೇ ದಿವಸೇ ಚೈವ ಗಂಡೂಷಾಂಶ್ಚೈವ ಷೋಡಶ ।
ತತ್ತತ್ಪದ್ಮಸುಗಂಧೈರ್ವಾ ಮುಖಶುದ್ಧಿಂ ಚ ಕಾರಯೇತ್ ॥ ೨೧ ॥
ಮುಖಶುದ್ಧಿಮಕೃತ್ವಾ ಯೋ ಭಾಸ್ಕರಂ ಸ್ಪೃಶತಿ ದ್ವಿಜಃ ।
ತ್ರೀಣಿ ವರ್ಷಸಹಸ್ರಾಣಿ ಸ ಕುಷ್ಠೀ ಜಾಯತೇ ನರಃ ॥ ೨೨ ॥
ಏವಂ ವಸ್ತ್ರಾದಿ ಸಂಶೋಧ್ಯ ತತಃ ಸ್ನಾನಂ ಸಮಾಚರೇತ್ ।
ಶುಚೌ ಮನೋರಮೇ ಸ್ಥಾನೇ ಸಂಗೃಹ್ಯಾಽಸ್ತ್ರೇಣ ಮೃತ್ತಿಕಾಂ ॥ ೨೩ ॥
ಸಾನುಸ್ವಾರೋಕಾರಯುತೋ ಹಕಾರಃ ಫಟ್ ಸಮನ್ವಿತಃ ।
ಅನೇನಾಽಸ್ತ್ರೇಣ ಸಂಗೃಹ್ಯ ಸ್ನಾನಂ ತತ್ರ ಸಮಾಚರೇತ್ ॥ ೨೪ ॥
ಭಾಗತ್ರಯಂ ತು ಸಂಶುದ್ಧಂ ತೃಣಪಾಷಾಣವರ್ಜಿತಂ ।
ಏಕಮಸ್ತ್ರೇಣ ಚಾಽಽಲಭ್ಯ ತಥಾಽನ್ಯಂ ಭಾಸ್ಕರೇಣ ತು ॥ ೨೫ ॥
ಅಂಗೈಶ್ಚೈವ ತೃತೀಯಂ ತು ಅಭಿಮಂತ್ರ್ಯ ಸಕೃತ್ಸಕೃತ್ ।
ಜಪ್ತ್ವಾಽಸ್ತ್ರೇಣ ಕ್ಷಿಪೇದ್ದಿಕ್ಷು ನಿರ್ವಿಘ್ನಂ ತು ಜಲಂ ಭವೇತ್ ॥ ೨೬ ॥

---

೨೦. (ಮುಖವು ತಂಗಳಾದರೆ) ಮುಖವನ್ನು ತೊಳೆಯದಿದ್ದರೆ ಬ್ರಾಹ್ಮಣನು ಅಶುದ್ಧನಾಗುವನು. ಆದುದರಿಂದ ಕಡ್ಡಿಯು ಒಣಗಿರಲಿ ಅಥವಾ ಹಸಿಯಾಗಿರಲಿ ಅದರಿಂದ ಹಲ್ಲುಗಳನ್ನು ಉಜ್ಜಿಕೊಳ್ಳಬೇಕು.

೨೧. ಹಲ್ಲನ್ನು ಉಜ್ಜಬಾರದ ದಿನದಲ್ಲಿ ಹದಿನಾರು ಗಂಡೂಷಗಳಿಂದಾಗಲಿ, ತಾವರೆಯ ಸುವಾಸನೆಯಿಂದಾಗಲಿ ಬಾಯಿಯನ್ನು ಶುದ್ಧಮಾಡಿಕೊಳ್ಳಬೇಕು.

೨೨. ಬಾಯಿಯನ್ನು ತೊಳೆಯದೆ ಸೂರ್ಯನನ್ನು ಮುಟ್ಟುವ ದ್ವಿಜನು ಮೂರು ಸಾವಿರ ವರ್ಷಕಾಲ ಕುಷ್ಠರೋಗಿಯಾಗಿರುವನು.

೨೩–೨೪. ಹೀಗೆ ಬಟ್ಟೆಮೊದಲಾದುವುಗಳನ್ನು ಮಡಿಮಾಡಿಕೊಂಡು ಶುದ್ಧವೂ, ಮನೋಹರವೂ ಆದ ಸ್ಥಳದಿಂದ "ಓಂ ಹುಂ ಫಟ್" ಎಂದುಚ್ಚರಿಸಿ ಆಯುಧದಿಂದ ಗೆದಮಣ್ಣಿನಿಂದ ಸ್ನಾನಮಾಡಬೇಕು

೨೫–೨೬. ಹೀಗೆ ಸ್ನಾನಮಾಡುವಾಗ ಹುಲ್ಲುಕಲ್ಲುಗಳಿಲ್ಲದ ಶುದ್ಧವಾದ ಮೂರು ಭಾಗ ಮಣ್ಣನ್ನು ತೆಗೆದುಕೊಂಡು ಮೊದಲನೆಯ ಭಾಗವನ್ನು ಅಸ್ತ್ರದಿಂದ ತೆಗೆದು, ಎರಡನೆಯ ಭಾಗವನ್ನು ಸೂರ್ಯನಿಗೆ ತೋರಿಸಿ, ಮೂರನೆಯ ಭಾಗವನ್ನು ಅಂಗಗಳಿಂದ ಅಭಿಮಂತ್ರಿಸಿ ಅಸ್ತ್ರದಿಂದ ಒಂದೊಂದುಸಾರಿ ಜಪಿಸಿ ದಿಕ್ಕುಗಳಿಗೆಸೆದು ಜಲವನ್ನು ನಿರ್ವಿಘ್ನಗೊಳಿಸಬೇಕು.

ಸೂರ್ಯತೀರ್ಥದ್ವಿತೀಯೇನ ತೃತೀಯೇನ ಸಕೃತ್ಸಕೃತ್ ।
ಗುಂಠಯಿತ್ವಾ ತತಃ ಸ್ನಾಯಾದ್ರವಿತೀರ್ಥೇನ ಮಾನವಃ ॥ ೨೭ ॥
ತೂರ್ಯಶಂಖನಿನಾದೇನ ಧ್ಯಾತ್ವಾ ದೇವಂ ದಿವಾಕರಂ ।
ಸ್ನಾತ್ವಾ ರಾಜೋಪಚಾರೇಣ ಪುನರಾಚಮ್ಯ ಯತ್ನತಃ ॥ ೨೮ ॥
ಸ್ನಾನಂ ಕೃತ್ವಾ ತತೋ ದೇವಿ ಮಂತ್ರರಾಜೇನ ಸಂಯುತಂ ।
ಹರೇಫೌ ಬಿಂದುಲಕ್ಷ್ಮೀಶ್ಚ ತಥಾಽನ್ಯೋ ದೀರ್ಘಯಾ ಸಹ ॥ ೨೯ ॥
ಮಾತ್ರಯಾ ರೇಫಸಂಯುಕ್ತೋ ಹಕಾರೋ ಬಿಂದುನಾ ಸಹ ।
ಸಕಾರಃ ಸವಿಸರ್ಗಸ್ತು ಮಂತ್ರರಾಜೋಽಯಮುಚ್ಯತೇ ॥ ೩೦ ॥
ತತಸ್ತು ತರ್ಪಯೇನ್ಮಂತ್ರಾನ್ ಸರ್ವಾಸ್ತಾಂಸ್ತು ಕರಾಗ್ರಜೈಃ ।
ತುಲಲಾದೂರ್ಧ್ವತೋ ದೇವಾನ್ ಸವ್ಯೇನ ಚ ಮುನೀಂಸ್ತಥಾ ।
ಪಿತ್ರಾಂಶ್ಚೈವಾಽಪಸವ್ಯೇನ ಹೃದ್ಬೀಜೇನ ಪ್ರತರ್ಪಯೇತ್ ॥ ೩೧ ॥
ಯದ್ಗೀತಂ ಪ್ರವರಂ ಲೋಕೇ ಅಕ್ಷರಾಣಾಂ ಮನೀಷಿಭಿಃ ।
ಏಕೋನವಿಂಶಂ ಮಾತ್ರಾಯಾ ಅಕ್ಷರಂ ತತ್ಪ್ರಕೀರ್ತಿತಂ ॥ ೩೨ ॥
ಏವಂ ಸ್ನಾತ್ವಾ ವಿಧಾನೇನ ಸಂಧ್ಯಾಂ ವಂದೇದ್ವಿಧಾನತಃ ।
ತತೋ ವಿದ್ವಾನ್ ಕ್ಷಿಪೇತ್ಪಶ್ಚಾದ್ಭಾಸ್ಕರಾಯೋದಕಾಂಜಲಿಂ ॥ ೩೩ ॥

---

೨೭. ಎರಡನೆಯ ಸೂರ್ಯತೀರ್ಥಮೃತ್ತಿಕೆಯಿಂದಲೂ, ಮೂರನೆಯ ರವಿತೀರ್ಥ ಮೃತ್ತಿಕೆಯಿಂದಲೂ ಒಂದೊಂದಾವೃತ್ತಿ ಲೇಪನಮಾಡಿಕೊಂಡು ಸ್ನಾನಮಾಡಬೇಕು.

೨೮–೩೦. ತುತ್ತೂರಿ, ಶಂಖ, ವಾದ್ಯಗಳ ಧ್ವನಿಯಿಂದ ಸೂರ್ಯನನ್ನು ಧ್ಯಾಸಿಸಿ. ಮಿಂದು ರಾಜೋಪಚಾರದಿಂದ ಪೂಜಿಸಿ ಮರಳಿ ಆಚಮನಮಾಡಿ “[illegible] ಹ್ರೀಂ ಸಃ” ಎಂಬ ಉತ್ತಮ ಮಂತ್ರದಿಂದ ಸ್ನಾನಮಾಡಬೇಕು.

೩೧. ಬಳಿಕ ಕೈಯ ಐದು ಬೆರಳುಗಳ ಮೇಲ್ಭಾಗದಿಂದ ಆಯಾ ಮಂತ್ರಗಳನ್ನುಚ್ಚರಿಸಿ ಸವ್ಯದಿಂದ ದೇವತೆಗಳನ್ನೂ, ಋಷಿಗಳನ್ನೂ, ಅಪಸವ್ಯದಿಂದ ಪಿತೃಗಳನ್ನೂ, ಹೃದ್ಬೀಜವನ್ನುಚ್ಚರಿಸಿ ತರ್ಪಣಮಾಡಬೇಕು.

೩೨. ಇಪ್ಪತ್ತೊಂದು ಮಾತ್ರೆಗಳುಳ್ಳ ಈ ಹೃದ್ಬೀಜವನ್ನು ಜ್ಞಾನಿಗಳು ಅಕ್ಷರಗಳಲ್ಲಿ ಉತ್ತಮವಾದುವೆಂದು ಹೇಳುವರು.

೩೩. ಹೇಗೆ ಶಾಸ್ತ್ರೋಕ್ತವಾಗಿ ಸ್ನಾನಮಾಡಿ ಸಂಧ್ಯಾವಂದನೆಮಾಡಿ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು.

ಜಪೇಚ್ಚ ತ್ರ್ಯಕ್ಷರಂ ಮಂತ್ರಂ ಷಣ್ಮುಖಂ ಚ ಯದೃಚ್ಛಯಾ ।
ಮಂತ್ರರಾಜೇತಿ ಯಃ ಪೂರ್ವಂ ತವಾಽಽಖ್ಯಾತೋ ಮಯಾ ಪ್ರಿಯೇ ॥
ಪಶ್ಚಾತ್ತೀರ್ಥೇನ ಮಂತ್ರಾಸ್ತು ಸಂಹೃತ್ಯ ಹೃದಯೇ ನ್ಯಸೇತ್ ।
ಮಂತ್ರೈರಾತ್ಮಾನಮೇಕತ್ರ ಕೃತ್ವಾ ಚಾರ್ಘ್ಯಂ ಪ್ರದಾಪಯೇತ್ ॥ ೩೫ ॥
ರಕ್ತಚಂದನಗಂಧೈಸ್ತು ಶುಚಿಃ ಸ್ನಾತೋ ಮಹೀತಲೇ ।
ಕೃತ್ವಾ ಮಂಡಲಕಂ ವೃತ್ತಮೇಕಚಿತ್ತೋ ವ್ಯವಸ್ಥಿತಃ ॥ ೩೬ ॥
ಗೃಹೀತ್ವಾ ಕರವೀರಾಣಿ ತಾಮ್ರೇ ಸಂಸ್ಥಾಪ್ಯ ಭಾಜನೇ ।
ತಿಲತಂಡುಲಸಂಯುಕ್ತಂ ಕುಶಗಂಧೋದಕೇನ ತು ॥ ೩೭ ॥
ರಕ್ತಚಂದನಧೂಪೇನ ಯುಕ್ತಮರ್ಘ್ಯೋಪಸಾಧಿತಂ ।
ಕೃತ್ವಾ ಶಿರಸಿ ತತ್ಪಾತ್ರಂ ಜಾನುಭ್ಯಾಮವನಿಂ ಗತಃ ॥ ೩೮ ॥
ಮೂಲಮಂತ್ರೇಣ ಸಂಯುಕ್ತಮರ್ಘ್ಯಂ ದದ್ಯಾಚ್ಚ ಭಾನವೇ ।
ಮುಚ್ಯತೇ ಸರ್ವಪಾಪೈಸ್ತು ಯೋ ಹ್ಯೇವಂ ವಿನಿವೇದಯೇತ್ ॥ ೩೯ ॥
ಯದ್ಯುಗಾದಿಸಹಸ್ರೇಣ ವ್ಯತೀಪಾತಶತೇನ ಚ ॥
ಅಯನಾನಾಂ ಸಹಸ್ರೇಣ ಯತ್ಫಲಂ ಜ್ಯೇಷ್ಠಪುಷ್ಕರೇ ।
ತತ್ಫಲಂ ಸಮವಾಪ್ನೋತಿ ಸೂರ್ಯಾಯಾರ್ಘ್ಯನಿವೇದನೇ ॥ ೪೦ ॥

---

೩೪. ಪ್ರಿಯಳೇ ! ನಾನು ಹಿಂದೆ ಮಂತ್ರರಾಜವೆಂದು ಹೇಳಿದ ಮೂರು ಅಕ್ಷರದ ಮಂತ್ರವನ್ನು ಸ್ಕಂದನನ್ನುದ್ದೇಶಿಸಿ ಜಪಿಸಬೇಕು.

೩೫. ಬಳಿಕ ಒಮ್ಮನಸ್ಸಿನಿಂದ ಮಂತ್ರಗಳನ್ನು ಹೃದಯದಲ್ಲಿ ಚಿಂತಿಸುತ್ತ ತೀರ್ಥದಿಂದ ಅರ್ಘ್ಯವನ್ನು ಕೊಡಬೇಕು.

೩೬–೩೯. ಮಿಂದು ಶುದ್ಧನಾಗಿ ಕೆಂಪು ಚಂದನದಿಂದ ನೆಲದ ಮೇಲೆ ವರ್ತುಲ ಮಂಡಲವನ್ನು ಮಾಡಿ ಏಕಚಿತ್ತನಾಗಿ ಕಣಿಗಿಲೆ ಹೂವನ್ನು ತಾಮ್ರದ ಪಾತ್ರೆಯಲ್ಲಿಟ್ಟು ಎಳ್ಳು, ಅಕ್ಕಿ, ದರ್ಭೆ, ಗಂಧೋದಕ, ರಕ್ತಚಂದನ, ಧೂಪ ಇವುಗಳಿಂದ ಕೂಡಿದ ಆ ಪಾತ್ರೆಯನ್ನು ತಲೆಯಲ್ಲಿ ಧರಿಸಿ ಮೊಣಕಾಲೂರಿ ಮೂಲ ಮಂತ್ರದಿಂದ ಸೂರ್ಯನಿಗೆ ಅರ್ಘ್ಯವನ್ನಿತ್ತರೆ ಸಕಲ ಪಾಪಮುಕ್ತನಾಗುವನು.

೪೦. ಸೂರ್ಯನಿಗೆ ಅರ್ಘ್ಯವನ್ನು ಕೊಡುವುದರಿಂದ ಜ್ಯೇಷ್ಠಪುಷ್ಕರದಲ್ಲಿ ಸಹಸ್ರ ಯುಗಾದಿಗಳಲ್ಲಿಯೂ, ನೂರು ವ್ಯತೀಪಾತಗಳಲ್ಲಿಯೂ, ಸಾವಿರ ಅಯನಗಳಲ್ಲಿಯೂ ಮಾಡಿದ ಪುಣ್ಯವು ಲಭಿಸುವುದು.

ದೀಕ್ಷಾಮಂತ್ರವಿಹೀನೋಽಪಿ ಭಕ್ತ್ಯಾ ಸಂವತ್ಸರೇಣ ತು ।
ಫಲಮರ್ಘ್ಯೇಣ ವೈ ದೇವಿ ಲಭತೇ ನಾಽತ್ರ ಸಂಶಯಃ ॥ ೪೧ ॥
ಯಃ ಪುನರ್ದೀಕ್ಷಿತೋ ವಿದ್ವಾನ್ ವಿಧಿನಾಽರ್ಘ್ಯಂ ನಿವೇದಯೇತ್ ।
ನಾಽಸೌ ಸಂಭವತೇ ಭೂಯಃ ಪ್ರಲಯಂ ಯಾತಿ ಭಾಸ್ಕರೇ ॥ ೪೨ ॥
ಇಹ ಜನ್ಮನಿ ಸೌಭಾಗ್ಯಮಾಯುರಾರೋಗ್ಯಸಂಪದಂ ।
ಅಚಿರಾಲ್ಲಭತೇ ದೇವಿ ಸಭಾರ್ಯಃ ಸುಖಭಾಜನಂ ॥ ೪೩ ॥
ಏವಂ ಸ್ನಾನವಿಧಿಃ ಪ್ರೋಕ್ತಃ ಸೌರಃ ಸಂಕ್ಷೇಪತಸ್ತವ ।
ಹಿತಾಯ ಮಾನವೇಂದ್ರಾಣಾಂ ಸರ್ವಪಾಪಪ್ರಣಾಶನಃ ॥ ೪೪ ॥
ಅಥವಾ ವೇದಮಾರ್ಗೇಣ ಕುರ್ಯಾತ್ಸ್ನಾನಂ ದ್ವಿಜೋತ್ತಮಃ ।
ಯದ್ಯೇವಂ ಮಂತ್ರವಿಸ್ತಾರೇ ಹ್ಯಶಕ್ತೋ ದೀಕ್ಷಯಾ ವಿನಾ ॥ ೪೫ ॥

ಈಶ್ವರ ಉವಾಚ :—

ಅಥ ಪೂಜಾವಿಧಾನಂ ತೇ ಕಥಯಾಮಿ ಯಶಸ್ವಿನಿ ।
ವೇದಮಾರ್ಗೇಣ ದಿವ್ಯೇನ ಬ್ರಾಹ್ಮಣಾನಾಂ ಹಿತಾಯ ವೈ ॥ ೪೬ ॥
ಏವಂ ಸಂಭೃತಸಂಭಾರಃ ಪುಷ್ಪಾದಿಪ್ರಗುಣೀಕೃತಃ ।
ತತ ಆವಾಹಯೇದ್ಭಾನುಂ ಸ್ಥಾಪಯೇತ್ಕರ್ಣಿಕೋಪರಿ ॥ ೪೭ ॥

---

೪೧. ಈ ಹಿಂದೆ ಹೇಳಿದ ದೀಕ್ಷೆ, ಮಂತ್ರಗಳಿಲ್ಲದವನೂ ಸಹ ಒಂದು ವರ್ಷ ಕಾಲ ಭಕ್ತಿಯಿಂದ ಸೂರ್ಯನಿಗೆ ಅರ್ಘ್ಯವನ್ನಿತ್ತರೆ ಪುಣ್ಯವನ್ನು ಪಡೆಯುವನು

೪೨. ದೀಕ್ಷೆಗೊಂಡ ವಿದ್ವಾಂಸನು ವಿಧಿಯಿಂದ ಅರ್ಘ್ಯವನ್ನಿತ್ತರೆ ಅವನು ಮರಳಿ ಹುಟ್ಟದೆ ಸೂರ್ಯನಲ್ಲಿಯೇ ಲಯವಾಗುವನು.

೪೩. ಅಲ್ಲದೆ ಈ ಜನ್ಮದಲ್ಲಿ ಸೌಭಾಗ್ಯ, ಆಯುಸ್ಸು, ಆರೋಗ್ಯ ಸಂಪತ್ತುಗಳನ್ನು ಶೀಘ್ರವಾಗಿ ಪಡೆದು ಪತ್ನಿಸಹಿತನಾಗಿ ಸುಖಿಯಾಗುವನು.

೪೪. ಹೀಗೆ ನಿನಗೆ ಸಕಲ ಪಾಪಗಳನ್ನು ಪರಿಹರಿಸುವ ಸೌರಸ್ನಾನ ವಿಧಿಯನ್ನು ರಾಜರಹಿತಕ್ಕಾಗಿ ಸಂಕ್ಷೇಪವಾಗಿ ಹೇಳಿರುವೆನು.

೪೫. ಹೀಗೆ ದೀಕ್ಷೆಯಿಲ್ಲದೆ ವಿಸ್ತಾರವಾಗಿ ಮಂತ್ರವನ್ನು ಹೇಳಲಶಕ್ತನು ವೇದೋಕ್ತಮಾರ್ಗದಿಂದ ಸ್ನಾನಮಾಡಬೇಕು.

೪೬. ಈಶ್ವರನು ಹೇಳುತ್ತಾನೆ:—ದೇವಿ! ಬಳಿಕ ಬ್ರಾಹ್ಮಣರ ಹಿತಕ್ಕಾಗಿ ವೇದೋಕ್ತಮಾರ್ಗದಿಂದ ಪೂಜೆಯ ಕ್ರಮವನ್ನು ನಿನಗೆ ಹೇಳುವೆನು.

೪೭. ಮೇಲೆ ಹೇಳಿದ ರೀತಿಯಲ್ಲಿಯೇ ಪುಷ್ಪಾದಿ ಸಾಮಗ್ರಿಗಳನ್ನು ಶೇಖರಿಸಿಕೊಂಡು ಕರ್ಣಿಕೆಯ ಮೇಲೆ ಸೂರ್ಯನನ್ನು ಆವಾಹನೆಮಾಡಿ ಸ್ಥಾಪಿಸಬೇಕು.

ಉಪಸ್ಥಾನಂ ತು ವೈ ಕೃತ್ವಾ ಮಂತ್ರೇಣಾನೇನ ಸುವ್ರತೇ ।
ಉದುತ್ಯಂ ಜಾತವೇದಸಮಿತಿ ಮಂತ್ರಃ ಸಂಪರಿಕೀರ್ತಿತಃ ॥ ೪೮ ॥
ಅಗ್ನಿಂ ದೂತೇತಿ ಮಂತ್ರೇಣ ಅನೇನಾವಾಹ್ಯ ಭಾಮಿನಿ ।
ಆಕೃಷ್ಣೇನ ರಜಸಾ ಮಂತ್ರೇಣಾನೇನ ವಾಽರ್ಚಯೇತ್ ॥ ೪೯ ॥
ಹಸಃ ಶುಚಿಷದಿತಿ ಮಂತ್ರೇಣಾನೇನ ಪೂಜಯೇತ್ ।
ಅಪತ್ಯೇತೇತಿ ಮಂತ್ರೇಣ ಸೂರ್ಯಂ ದೇವಿ ಪ್ರಪೂಜಯೇತ್ ॥ ೫೦ ॥
ಅದೃಶ್ರಮಸ್ಯ ಚೈತೇನ ಸೂರ್ಯಂ ದೇವಿ ಸಮರ್ಚಯೇತ್ ।
ತರಣಿರ್ವಿಶ್ವದರ್ಶೇತಿ ಅನೇನ ಸತತಂ ಜಪಂ ॥ ೫೧ ॥
ಚಿತ್ರಂ ದೇವಾನಾಮುದೇತಿ ಭದ್ರಾಂ ದೇವೀಂ ಸದಾರ್ಚಯೇತ್ ।
ವಿಭೂತಿಮರ್ಚಯೇನ್ನಿತ್ಯಂ ಯೇನಾಪಾವಕಚಕ್ಷಸಾ ॥ ೫೨ ॥
ವಿದ್ಯಾಮೇಷಿರಜಸ್ಪೃಥ್ವಿತ್ಯನೇನ ವಿಮಲಾಂ ಸದಾ ।
ಅಮೋಘಾಂ ಪೂಜಯೇನ್ನಿತ್ಯಂ ಮಂತ್ರೇಣಾನೇನ ಸುವ್ರತೇ ॥ ೫೩ ॥
ಸಪ್ತ ತ್ವಾ ಹರಿತೋಽನೇನ ಸಿದ್ಧಿದಾಂ ಸರ್ವಕರ್ಮಸು ।
ವಿದ್ಯುತಾಮರ್ಚಯೇದ್ದೇವಂ ಸಪ್ತ ತ್ವಾ ಹರಿತೇನ ಚ ॥ ೫೪ ॥
ನವಮೀಂ ಪೂಜಯೇದ್ದೇವೀಂ ಸತತಂ ಸರ್ವತೋಮುಖೀಂ ।
ಮಂತ್ರೇಣಾನೇನ ವೈ ದೇವಿ ಉದ್ವಯಂತಮಿತೀಹ ವೈ ॥ ೫೫ ॥

೪೮—೫೧. "ಉದುತ್ಯಂ ಜಾತವೇದಸಂ" ಇತ್ಯಾದಿ ಮಂತ್ರದಿಂದ ಉಪಸ್ಥಾನಗೈದು "ಅಗ್ನಿಂ ದೂತೇತಿ" ಮಂತ್ರದಿಂದ ಆವಾಹನೆಮಾಡಿ "ಆಕೃಷ್ಣೇನ ರಜಸಾ" ಇತ್ಯಾದಿ ಮಂತ್ರದಿಂದಲೂ, "ಹಂಸಃ ಶುಚಿಷ" ದಿತ್ಯಾದಿ ಮಂತ್ರದಿಂದಲೂ, "ಅಪತ್ಯೇತಿ" ಮಂತ್ರದಿಂದಲೂ, "ಅದೃಶ್ರಮಸ್ಯೇ"ತ್ಯಾದಿ ಮಂತ್ರದಿಂದಲೂ, ಪೂಜಿಸಬೇಕು. "ತರಣಿರ್ವಿಶ್ವದರ್ಶೇತಿ" ಮಂತ್ರವನ್ನು ಜಪಿಸಬೇಕು.

೫೨—೫೫. "ಚಿತ್ರಂ ದೇವಾನಾಂ" ಇತ್ಯಾದಿ ಮಂತ್ರದಿಂದ ಭದ್ರಾದೇವಿಯನ್ನೂ, "ಯೇನಾಪಾವಕಚಕ್ಷಸಾ" ಎಂಬ ಮಂತ್ರದಿಂದ ವಿಭೂತಿದೇವಿಯನ್ನೂ, "ವಿದ್ಯಾಮೇಷಿ ರಜಸ್ಪೃಥು" ಇತ್ಯಾದಿ ಮಂತ್ರದಿಂದ ವಿಮಲೆಯನ್ನೂ, "ಸಪ್ತ ತ್ವಾ ಹರಿತಃ" ಇತ್ಯಾದಿ ಮಂತ್ರದಿಂದ ಸಕಲ ಕರ್ಮಗಳಲ್ಲಿ ಸಿದ್ಧಿಯನ್ನೀಯುವ ಅಮೋಘೆಯನ್ನೂ, "ಸಪ್ತ ತ್ವಾ ಹರಿತೇನ" ಇತ್ಯಾದಿ ಮಂತ್ರದಿಂದ ವಿದ್ಯುತೆಯನ್ನೂ, "ಉದ್ವಯಂತ" ಇತ್ಯಾದಿ ಮಂತ್ರದಿಂದ ನವಮೀದೇವಿಯನ್ನೂ ಅರ್ಚಿಸಬೇಕು.

ಉದ್ಯನ್ನದ್ಯಮಿತ್ರಮಹಃ ಪ್ರಥಮಮಕ್ಷರಂ ಜಪೇತ್ ।
ದ್ವಿತೀಯಂ ಪೂಜಯೇದ್ದೇವಿ ಶುಕೇಷು ಮೇ ಹರಿಮೇತಿ ವೈ ॥ ೫೬ ॥
ಉದಗಾದಯಮಾದಿತ್ಯೋ ಹ್ಯನೇನಾಪಿ ತೃತೀಯಕಂ ।
ತತ್ಸವಿತುರ್ವರೇಣ್ಯೇತಿ ಚತುರ್ಥಂ ಪರಿಕೀರ್ತಿತಂ ॥ ೫೭ ॥
ಮಹಾಹಿವ್ರೋ ಮಹಾಯೇತಿ ಪಂಚಮಂ ಪರಿಕೀರ್ತಿತಂ ।
ಹಿರಣ್ಯಗರ್ಭಃ ಸಮವರ್ತತ ಷಷ್ಠಂ ಬೀಜಂ ಪ್ರಕೀರ್ತಿತಂ ॥ ೫೮ ॥
ಸವಿತಾ ಪಶ್ಚಾತಾತ್ ಸವಿತಾ ಸಪ್ತಮಂ ವರವರ್ಣಿನಿ ।
ಏವಂ ಬೀಜಾನಿ ವಿನ್ಯಸ್ಯ ಆದಿತ್ಯಂ ಸ್ಥಾಪಯೇಚ್ಛುಭೇ ॥ ೫೯ ॥
ಆದಿತ್ಯಂ ಸ್ಥಾಪಯಿತ್ವಾ ತು ಪಶ್ಚಾದಂಗಾನಿ ವಿನ್ಯಸೇತ್ ॥ ೬೦ ॥
ಆಗ್ನೇಯ್ಯಾಂ ಹೃದಯಂ ನ್ಯಸ್ಯ ಐಶಾನ್ಯಾಂ ತು ಶಿರೋ ನ್ಯಸೇದ್ ।
ನೈರ್ಋತ್ಯಾಂ ತು ಶಿಖಾಂ ಚೈವ ಕವಚಂ ವಾಯುಗೋಚರೇ ॥ ೬೧ ॥
ಅಸ್ತ್ರಂ ದಿಶಾಸು ವಿನ್ಯಸ್ಯ ಸ್ವಬೀಜೇನ ತು ಕರ್ಣಿಕಾಂ ।
ಅಮೋಸಿ ಪ್ರಾಣಿತೇನೇತಿ ಅನೇನ ಹೃದಯಂ ಯಜೇತ್ ॥ ೬೨ ॥
ಶಿರಸ್ತು ಪೂಜಯೇದ್ದೇವಿ ಆಯುಷ್ಯಂ ವರ್ಚಸೇತಿ ವೈ ।
ಗಾಯತ್ರ್ಯಾ ತು ಶಿಖಾಂ ಪೂಜ್ಯ ನೈರ್ಋತ್ಯಾಂ ತು ವ್ಯವಸ್ಥಿತಾಂ ॥ ೬೩ ॥

೫೬–೫೯. "ಉದ್ಯನ್ನದ್ಯಮಿತ್ರಮಹಃ" ಎಂಬ ಮಂತ್ರದಿಂದ ಪ್ರಥಮ ಬೀಜಾಕ್ಷರವನ್ನೂ, "ಶುಕೇಸು ಮೇ ಹರಿಮಾಣಂ" ಇತ್ಯಾದಿ ಮಂತ್ರದಿಂದ ದ್ವಿತೀಯಾಕ್ಷರವನ್ನೂ "ಉದಗಾದಯಮಾದಿತ್ಯ" ಇತ್ಯಾದಿ ಮಂತ್ರದಿಂದ ತೃತೀಯ ಬೀಜಾಕ್ಷರವನ್ನೂ, "ತತ್ಸವಿತುರ್ವರೇಣ್ಯಂ" ಇತ್ಯಾದಿ ಮಂತ್ರದಿಂದ ಚತುರ್ಥಬೀಜಾಕ್ಷರವನ್ನೂ, "ಮಹಾಹಿವ್ರೋ ಮಹಾಯ"ಇತ್ಯಾದಿ ಮಂತ್ರದಿಂದ ಪಂಚಮಬೀಜಾಕ್ಷರವನ್ನೂ, "ಹಿರಣ್ಯಗರ್ಭಃ ಸಮ ವರ್ತತ" ಇತ್ಯಾದಿ ಮಂತ್ರದಿಂದ ಆರನೆಯ ಬೀಜಾಕ್ಷರವನ್ನೂ, "ಸವಿತಾ ಪಶ್ಚಾತಾತ್ಸವಿತಾ" ಇತ್ಯಾದಿ ಮಂತ್ರದಿಂದ ಸಪ್ತಮಬೀಜಾಕ್ಷರವನ್ನೂ ಪೂಜಿಸಿ ಆದಿತ್ಯನನ್ನು ಪ್ರತಿಷ್ಠೆಮಾಡಬೇಕು.

೬೦. ಹೀಗೆ ಆದಿತ್ಯನನ್ನು ಪ್ರತಿಷ್ಠೆಮಾಡಿ ತರುವಾಯ ಅಂಗನ್ಯಾಸವನ್ನು ಮಾಡಬೇಕು.

೬೧–೬೭. ಆಗ್ನೇಯ ದಿಕ್ಕಿನಲ್ಲಿ ಹೃದಯವನ್ನೂ, ಈಶಾನ್ಯ ದಿಕ್ಕಿನಲ್ಲಿ ಶಿರಸ್ಸನ್ನೂ, ನೈಋತ್ಯ ದಿಕ್ಕಿನಲ್ಲಿ ಶಿಖೆಯನ್ನೂ, ವಾಯುವ್ಯ ದಿಕ್ಕಿನಲ್ಲಿ ಕವಚವನ್ನೂ, ಪೂರ್ವಾದಿ ದಿಕ್ಕುಗಳಲ್ಲಿ ಅಸ್ತ್ರವನ್ನೂ, ಕರ್ಣಿಕೆಯನ್ನೂ ವಿನ್ಯಾಸ ಮಾಡಿ "ಅಮೋಸಿ ಪ್ರಾಣಿತೇನ" ಇತ್ಯಾದಿ ಮಂತ್ರದಿಂದ ಹೃದಯವನ್ನೂ, "ಆಯುಷ್ಯಂ ವರ್ಚಸೇ"ಇತ್ಯಾದಿ

ಜೀಮೂತಸ್ಯೇವ ಭವತಿ ಪ್ರತ್ಯೇಕಂ ಕವಚಂ ಯಜೇತ್ ।
ಧನ್ವನ್ನಾಗಾ ಧನ್ವನೇತಿ ಅನೇನಾಽಸ್ತ್ರಂ ಸದಾಽರ್ಚಯೇತ್ ॥ ೬೪ ॥
ನೇತ್ರಂ ತು ಪೂಜಯೇದ್ದೇವಿ ಅಶ್ವಿನಾ ತೇಜಸೇತಿ ಚ ।
ಬಾಹ್ಯತಃ ಪೂರ್ವತಃ ಸೋಮಂ ದಕ್ಷಣೇನ ಬುಧಂ ತಥಾ ॥ ೬೫ ॥
ಪಶ್ಚಿಮೇನ ಗುರುಂ ನ್ಯಸ್ಯ ಉತ್ತರೇಣ ಚ ಭಾರ್ಗವಂ ।
ಆಗ್ನೇಯ್ಯಾಂ ಮಂಗಲಂ ನ್ಯಸ್ಯ ನೈರ್ಋತ್ಯಾಂ ತು ಶನೈಶ್ಚರಂ ॥ ೬೬ ॥
ವಾಯುವ್ಯಾಂ ತು ನ್ಯಸೇದ್ರಾಹುಂ ಕೇತುಮೀಶಾನಗೋಚರೇ ।
ಆಪ್ಯಾಯಸ್ವೇತಿ ಮಂತ್ರೇಣ ದೇವಿ ಸೋಮಂ ಸದಾಽರ್ಚಯೇತ್ ॥ ೬೭ ॥
ಉದ್ಬುಧ್ಯಧ್ವಂ ಮಹಾದೇವಿ ಬುಧಂ ತತ್ರ ಸದಾಽರ್ಚಯೇತ್ ।
ಬೃಹಸ್ಪತೇತಿ ಮಂತ್ರೇಣ ಪೂಜಯೇತ್ಸತತಂ ಗುರುಂ ॥ ೬೮ ॥
ಶುಕ್ರಃ ಶುಶುಕ್ವಾನಿತಿ ಚ ಭಾರ್ಗವಂ ದೇವಿ ಪೂಜಯೇತ್ ।
ಅಗ್ನಿರ್ಮೂರ್ಧೇತಿ ಮಂತ್ರೇಣ ಸದಾ ಮಂಗಲಮರ್ಚಯೇತ್ ॥ ೬೯ ॥
ಶಮಗ್ನಿರಿತಿ ಮಂತ್ರೇಣ ಪೂಜಯೇದ್ಭಾಸ್ಕರಾತ್ಮಜಂ ।
ಕಯಾನಶ್ಚಿತ್ರೇತಿ ಮಂತ್ರೇಣ ದೇವಿ ರಾಹುಂ ಸದಾರ್ಚಯೇತ್ ॥ ೭೦ ॥

ಮಂತ್ರದಿಂದ ಶಿರಸ್ಸನ್ನೂ, ನೈಋತ್ಯ ದಿಕ್ಕಿನಲ್ಲಿರುವ ಶಿಖೆಯನ್ನು ಗಾಯತ್ರಿಯಿಂದಲೂ, "ಜೀಮೂತಸ್ಯೇವ ಭವತಿ"ಇತ್ಯಾದಿ ಮಂತ್ರದಿಂದ ಕವಚವನ್ನೂ "ಧನ್ವನ್ನಾಗಾಧನ್ವನಾ" ಎಂಬ ಮಂತ್ರದಿಂದ ಅಸ್ತ್ರವನ್ನೂ, "ಅಶ್ವಿನಾ ತೇಜಸಾ"ಇತ್ಯಾದಿ ಮಂತ್ರದಿಂದ ನೇತ್ರವನ್ನೂ ಪೂಜಿಸಬೇಕು. ಹೊರಗಡೆ ಪೂರ್ವ ದಿಕ್ಕಿನಲ್ಲಿ ಸೋಮನನ್ನೂ, ದಕ್ಷಿಣ ದಿಕ್ಕಿನಲ್ಲಿ ಬುಧನನ್ನೂ, ಪಶ್ಚಿಮದಲ್ಲಿ ಗುರುವನ್ನೂ, ಉತ್ತರದಲ್ಲಿ ಶುಕ್ರನನ್ನೂ, ಆಗ್ನೇಯ ದಿಕ್ಕಿನಲ್ಲಿ ಮಂಗಲನನ್ನೂ, ನೈಋತ್ಯ ದಿಕ್ಕಿನಲ್ಲಿ ಶನೈಶ್ಚರನನ್ನೂ, ವಾಯುವ್ಯ ದಿಕ್ಕಿನಲ್ಲಿ ರಾಹುವನ್ನೂ, ಈಶಾನ್ಯ ದಿಕ್ಕಿನಲ್ಲಿ ಕೇತುವನ್ನೂ, ಪ್ರತಿಷ್ಠೆ ಮಾಡಿ " ಆಪ್ಯಾಯಸ್ವ" ಇತ್ಯಾದಿ ಮಂತ್ರದಿಂದ ಚಂದ್ರನನ್ನು ಪೂಜಿಸಬೇಕು.

೬೮-೭೨. "ಉದ್ಬುಧ್ಯಧ್ವಂ" ಇತ್ಯಾದಿ ಮಂತ್ರದಿಂದ ಬುಧನನ್ನೂ, "ಬೃಹಸ್ಪತೆ" ಇತ್ಯಾದಿ ಮಂತ್ರದಿಂದ ಗುರುವನ್ನೂ, "ಶುಕ್ರಃ ಶುಶುಕ್ವಾನ್" ಇತ್ಯಾದಿ ಮಂತ್ರದಿಂದ ಶುಕ್ರನನ್ನೂ, " ಅಗ್ನಿರ್ಮೂರ್ಧಾ " ಇತ್ಯಾದಿ ಮಂತ್ರದಿಂದ ಅಂಗಾರಕನನ್ನೂ, " ಶಮಗ್ನಿ " ಎಂಬ ಮಂತ್ರದಿಂದ ಶನೈಶ್ಚರನನ್ನೂ, "ಕಯಾನಶ್ಚಿತ್ರ" ಇತ್ಯಾದಿ ಮಂತ್ರದಿಂದ ರಾಹುವನ್ನೂ, " ಕೇತುಂಕೃಣ್ವ " ಎಂಬ ಮಂತ್ರದಿಂದ ಕೇತುವನ್ನೂ ಪೂಜಿಸಬೇಕು. ಹೊರಗಡೆ ಪೂರ್ವದಿಕ್ಕಿನಲ್ಲಿ ಶುಕ್ರನನ್ನೂ, ದಕ್ಷಿಣದಲ್ಲಿ

ಕೇತುಂ ಕೃಣ್ವೇತಿ ಕೇತುಂ ವೈ ಸತತಂ ಪೂಜಯೇದ್ಬುಧಃ ।
ಬಾಹ್ಯತಃ ಪೂರ್ವತಃ ಶುಕ್ರಂ ದಕ್ಷಿಣೇನ ಯಮಂ ತಥಾ ॥ ೭೦ ॥
ಐಶಾನ್ಯಾಮೀಶ್ವರಂ ವಿಂದ್ಯಾದಾಗ್ನೇಯ್ಯಾಮಗ್ನಿರುಚ್ಯತೇ ।
ನೈರ್ಋತೇತಿ ವಿರೂಪಾಕ್ಷಂ ಪವನಂ ವಾಯುಗೋಚರೇ ॥ ೭೨ ॥
ತಮುಷ್ಟವಾಮ ಇತಿ ವೈ ಹ್ಯನೇನೇಂದ್ರಮಥಾರ್ಚಯೇತ್ ।
ಉದೀರತಾಮವರೇತಿ ಸದಾ ವೈವಸ್ವತಂ ಯಜೇತ್ ॥ ೭೩ ॥
ತತ್ವಾಯಾಮೀತಿ ಮಂತ್ರೇಣ ವರುಣಂ ದೇವಿ ಪೂಜಯೇತ್ ।
ಇಂದ್ರಾಸೋಮಾವತ ಇತಿ ಮಂತ್ರೇಣ ಧನದಂ ಯಜೇತ್ ॥ ೭೪ ॥
ಪಾವಕಂ ಪೂಜಯೇದ್ದೇವಿ ಅಗ್ನಿಮೀಳೇ ಪುರೋಹಿತಂ ।
ರಕ್ಷೋಹಣಂ ವಾಜಿನೇತಿ ವಿರೂಪಾಕ್ಷಂ ಸದಾರ್ಚಯೇತ್ ॥ ೭೫ ॥
ವಾಯವಾಯಾಹಿ ಮಂತ್ರೇಣ ವಾಯುಂ ದೇವಿ ಸದಾರ್ಚಯೇತ್ ।
ಯಥಾಕ್ರಮಮಿಮಾನ್ ದೇವಿ ಸರ್ವಾನ್ ವೈ ಪೂಜಯೇದ್ಬುಧಃ ॥ ೭೬ ॥
ಬಾಹ್ಯತಃ ಪೂರ್ವತೋ ದೇವಿ ಇಂದ್ರಾದೀನಾಂ ಸಮಂತತಃ ।
ರಕ್ತವರ್ಣಂ ಮಹಾತೇಜಂ ಸಿತಪದ್ಮೋಪರಿಸ್ಥಿತಂ ॥ ೭೭ ॥

ಯಮನನ್ನೂ, ಐಶಾನ್ಯ ದಿಕ್ಕಿನಲ್ಲಿ ಈಶ್ವರನನ್ನೂ, ಆಗ್ನೇಯ ದಿಕ್ಕಿನಲ್ಲಿ ಅಗ್ನಿಯನ್ನೂ, ನೈರ್ಋತ್ಯದಲ್ಲಿ ವಿರೂಪಾಕ್ಷನನ್ನೂ, ವಾಯವ್ಯದಲ್ಲಿ ವಾಯುವನ್ನೂ ಪ್ರತಿಷ್ಠೆ ಮಾಡಬೇಕು.

೭೩–೭೬. "ತಮುಷ್ಟುವಾಮ" ಎಂಬ ಮಂತ್ರದಿಂದ ಇಂದ್ರನನ್ನೂ, "ಉದೀರತಾಮವರ" ಎಂಬ ಮಂತ್ರದಿಂದ ಯಮನನ್ನೂ, "ತತ್ವಾಯಾಮಿ" ಎಂಬ ಮಂತ್ರದಿಂದ ವರುಣನನ್ನೂ, "ಇಂದ್ರಾಸೋಮಾವತ" ಎಂಬ ಮಂತ್ರದಿಂದ ಕುಬೇರನನ್ನೂ, "ಅಗ್ನಿಮೀಳೇ ಪುರೋಹಿತಂ" ಎಂಬ ಮಂತ್ರದಿಂದ ಅಗ್ನಿಯನ್ನೂ, "ರಕ್ಷೋಹಣಂವಾಜಿನ" ಎಂಬ ಮಂತ್ರದಿಂದ ವಿರೂಪಾಕ್ಷನನ್ನೂ, "ವಾಯವಾಯಾಹಿ" ಮಂತ್ರದಿಂದ ವಾಯುವನ್ನೂ ಪೂಜಿಸಬೇಕು.

೭೭–೭೯. ಹೀಗೆ ಹೊರಗಡೆ ಸುತ್ತಲೂ ಇಂದ್ರಾದಿ ದೇವತೆಗಳಿರಲು ಒಳಗಡೆ ರಕ್ತವರ್ಣನೂ, ಮಹಾತೇಜಸ್ವಿಯೂ, ಶ್ವೇತಪದ್ಮದ ಮೇಲಿರುವವನೂ, ಸಮಸ್ತ ಲಕ್ಷಣಗಳಿಂದ ಸಹಿತನೂ, ಸಕಲಾಭರಣಭೂಷಿತನೂ, ಎರಡು ತೋಳುಗಳುಳ್ಳವನೂ, ಒಂದು ಮುಖವುಳ್ಳವನೂ, ಸೌಮ್ಯವಾದ ಪಂಚ ವಸ್ತುಗಳನ್ನು ಧರಿಸಿದ

ಸರ್ವಲಕ್ಷಣಸಂಯುಕ್ತಂ ಸರ್ವಾಭರಣಭೂಷಿತಂ ।
ದ್ವಿಭುಜಂ ಚೈಕವಕ್ತ್ರಂ ಚ ಸೌಮ್ಯಪಂಚಕಧೃಕ್ಕರಂ ॥ ೭೮ ॥
ವರ್ತುಲಂ ತೇಜಬಿಂಬಂ ತು ಮಧ್ಯಸ್ಥಂ ರಕ್ತವಾಸಸಂ ।
ಆದಿತ್ಯಸ್ಯ ತ್ವಿದಂ ರೂಪಂ ಸರ್ವಲೋಕೇಷು ಪೂಜಿತಂ ।
ಧ್ಯಾತ್ವಾ ಸಂಪೂಜಯೇನ್ನಿತ್ಯಂ ಸ್ಥಂಡಿಲಂ ಮಂಡಲಾಶ್ರಯಂ ॥ ೭೯ ॥

ದೇವ್ಯುವಾಚ:—

ಮಂಡಲಸ್ಥಃ ಸುರಶ್ರೇಷ್ಠ ವಿಧಿನಾ ಯೇನ ಭಾಸ್ಕರಃ ।
ಪೂಜತೇ ಮಾನವೈರ್ಭಕ್ತ್ಯಾ ಸ ವಿಧಿಃ ಕಥಿತಸ್ತ್ವಯಾ ॥ ೮೦ ॥
ಪೂಜ್ಯಯೇದ್ವಿಧಿನಾ ಯೇನ ಭಾಸ್ಕರಂ ಪದ್ಮಸಂಭವಂ ।
ಮೂರ್ತಿಸ್ಥಂ ಸರ್ವಗಂ ದೇವಂ ತನ್ಮೇ ಕಥಯ ಶಂಕರ ॥ ೮೧ ॥

ಈಶ್ವರ ಉವಾಚ:—

ಸಾಧು ಸಾಧು ಮಹಾದೇವಿ ಸಾಧು ಪೃಷ್ಟೋಽಸ್ಮಿ ಸುವ್ರತೇ ।
ಶೃಣುಷ್ವೈಕಮನಾ ದೇವಿ ಮೂರ್ತಿಸ್ಥಂ ಯೇನ ಪೂಜಯೇತ್ ॥ ೮೨ ॥
ಇಷೇತ್ವೇತಿ ಚ ಮಂತ್ರೇಣ ಉತ್ತಮಾಂಗಂ ಸದಾರ್ಚಯೇತ್ ।
ಅಗ್ನಿಮೀಳೇತಿ ಮಂತ್ರೇಣ ಪೂಜಯೇದ್ದಕ್ಷಿಣಂ ಕರಂ ॥ ೮೩ ॥

ಕೈಯುಳ್ಳವನೂ, ವರ್ತುಲಾಕಾರನಾದವನೂ, ಕೆಂಪು ವಸ್ತ್ರವುಳ್ಳವನೂ, ಆದ ಸೂರ್ಯನ ಸಕಲ ಲೋಕಪೂಜ್ಯವಾದ ರೂಪವನ್ನು ಧ್ಯಾನಿಸಿ ಈ ಸೂರ್ಯಮಂಡಲವಿರುವ ಶುದ್ಧ ಭೂಮಿಯನ್ನು ಯಾವಾಗಲೂ ಅರ್ಚಿಸಬೇಕು.

೮೦. ದೇವಿಯು ಹೇಳುತ್ತಾಳೆ :—ಸುರೋತ್ತಮನಾದ ಪ್ರಿಯನೆ ! ಮಾನವರು ಮಂಡಲದಲ್ಲಿರುವ ಸೂರ್ಯನನ್ನು ಭಕ್ತಿಯಿಂದ ಪೂಜಿಸುವ ವಿಧಿಯನ್ನು ನೀನು ಹೇಳಿರುವೆ.

೮೧. ಶಂಕರ ! ಮೂರ್ತಿಯಲ್ಲಿರುವವನೂ, ಪದ್ಮದಿಂದ ಹುಟ್ಟಿರುವವನೂ, ಸರ್ವತ್ರ ಇರುವವನೂ ಆಗಿರುವ ಸೂರ್ಯನನ್ನು ಪೂಜಿಸುವ ವಿಧಾನವನ್ನು ಹೇಳು.

೮೨. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಚೆನ್ನಾಗಿ ಪ್ರಶ್ನಿಸಿರುವೆ. ಮೂರ್ತಿಯಲ್ಲಿ ಸನ್ನಿಹಿತನಾಗಿರುವ ಸೂರ್ಯನನ್ನು ಪೂಜಿಸುವ ವಿಧಿಯನ್ನು ಒಮ್ಮನಸ್ಸಿನಿಂದ ಕೇಳು.

೮೩–೮೪. "ಇಷತ್ವಾ" ಎಂಬ ಮಂತ್ರದಿಂದ ಸೂರ್ಯನ ಶಿರಸ್ಸನ್ನೂ, "ಅಗ್ನಿಮೀಳೆ" ಎಂಬ ಮಂತ್ರದಿಂದ ಬಲಗೈಯನ್ನೂ, "ಅಗ್ನ ಆಯಾಹಿ" ಎಂಬ ಮಂತ್ರ

ಅಗ್ನ ಆಯಾಹಿ ಮಂತ್ರೇಣ ಪಾದೌ ದೇವಸ್ಯ ಪೂಜಯೇತ್ ।
ಅಜಿಘ್ರೇತಿ ಚ ಮಂತ್ರೇಣ ಪೂಜಯೇತ್ಪುಷ್ಪಮಾಲಯಾ ॥ ೮೪ ॥
ಯೋಗೇಯೋಗೇತಿ ಮಂತ್ರೇಣ ಮುಕ್ತಪುಷ್ಪಾಂಜಲಿಂ ಕ್ಷಿಪೇತ್ ।
ಸಮುದ್ರಾಗಚ್ಛ ಯತ್ಪ್ರೋಕ್ತಮನೇನ ಸ್ನಾಪಯೇದ್ರವಿಂ ॥ ೮೫ ॥
ಇಮಂ ಮೇ ಗಂಗೇತಿ ಯತ್ಪ್ರೋಕ್ತಮನೇನಾಽಪಿ ಚ ಭಾಮಿನಿ ।
ಸಮುದ್ರಜ್ಯೇತಿ ಮಂತ್ರೇಣ ಕ್ಷಾಲಯೇದ್ವಿಧಿವದ್ರವಿಂ ॥ ೮೬ ॥
ಸಿನೀವಾಲೀತಿ ಮಂತ್ರೇಣ ಸ್ನಾಪಯೇಚ್ಛಂಖವಾರಿಣಾ ।
ಯಜ್ಞಂ ಯಜ್ಞೇತಿ ಮಂತ್ರೇಣ ಕಷಾಯೈಃ ಪರಿರಕ್ಷಯೇತ್ ॥ ೮೭ ॥
ಸ್ನಾಪಯೇತ್ಪಯಸಾ ದೇವಿ ಆಪ್ಯಾಯಸ್ವೇತಿ ಮಂತ್ರತಃ ।
ದಧಿಕ್ರಾವ್ಣೇತಿ ವೈ ದಧ್ನಾ ಸ್ನಾಪಯೇದ್ವಿಧಿವದ್ರವಿಂ ॥ ೮೮ ॥
ಇಮಂ ಮೇ ಗಂಗೇತಿ ಯತ್ಪ್ರೋಕ್ತಮನೇನಾಽಪಿ ಚ ಭಾಮಿನಿ ।
ಸಮುದ್ರಜ್ಯೇತಿ ಮಂತ್ರೇಣ ಸ್ನಾನಮೌಷಧಿಭಿಃ ಸ್ಮೃತಂ ॥ ೮೯ ॥
ಉದ್ವರ್ತಯೇತ್ತತೋ ಭಾನುಂ ದ್ವಿಪಪಾಭಿರ್ವರಾನನೇ ।
ಮಾನಸ್ತೋಕೇತಿ ಮಂತ್ರೇಣ ಯುಗಪತ್ಸ್ನಾನಮಾಚರೇತ್ ॥ ೯೦ ॥

ದಿಂದ ಪಾದಗಳನ್ನೂ ಪೂಜಿಸಬೇಕು. "ಅಜಿಘ್ರ" ಇತ್ಯಾದಿ ಮಂತ್ರದಿಂದ ಪುಷ್ಪಮಾಲೆಯಿಂದ ಅರ್ಚನೆಮಾಡಬೇಕು.

೮೫–೮೬. "ಯೋಗೇ ಯೋಗೇ" ಎಂಬ ಮಂತ್ರದಿಂದ ಬಿಡಿಹೂವಿನಿಂದ ಸೂರ್ಯನನ್ನು ಪೂಜಿಸಬೇಕು. "ಸಮುದ್ರಾಗಚ್ಛ" ಎಂಬ ಮಂತ್ರದಿಂದ ಅಭಿಷೇಕ ಮಾಡಬೇಕು. "ಇಮಂ ಮೇ ಗಂಗೇ" ಎಂಬ ಮಂತ್ರದಿಂದಲೂ, "ಸಮುದ್ರಜ್ಯೇಷ್ಠ" ಇತ್ಯಾದಿ ಮಂತ್ರದಿಂದಲೂ ಸೂರ್ಯನನ್ನು ತೊಳೆಯಬೇಕು.

೮೭. "ಸಿನೀವಾಲೀ" ಇತ್ಯಾದಿ ಮಂತ್ರದಿಂದ ಶಂಖೋದಕದಿಂದ ಅಭಿಷೇಕ ಮಾಡಬೇಕು. "ಯಜ್ಞಂ ಯಜ್ಞ" ಎಂಬ ಮಂತ್ರದಿಂದ ಕಷಾಯಗಳಿಂದ ರಕ್ಷೆಯನ್ನು ಮಾಡಬೇಕು.

೮೮–೮೯. "ಆಪ್ಯಾಯಸ್ವ" ಇತ್ಯಾದಿ ಮಂತ್ರದಿಂದ ಕ್ಷೀರದಿಂದಲೂ, "ದಧಿಕ್ರಾವ್ಣೋ"ಇತ್ಯಾದಿ ಮಂತ್ರದಿಂದ ಮೊಸರಿನಿಂದಲೂ ಅಭಿಷೇಕ ಮಾಡಬೇಕು. "ಇಮಂ ಮೇಗಂಗೇ" ಇತ್ಯಾದಿ ಮಂತ್ರದಿಂದಲೂ, "ಸಮುದ್ರಜ್ಯೇಷ್ಠ" ಇತ್ಯಾದಿ ಮಂತ್ರದಿಂದಲೂ ಓಷಧಿಗಳಿಂದ ಸ್ನಾನಮಾಡಿಸಬೇಕು.

೯೦. ಬಳಿಕ ಸೂರ್ಯನನ್ನು "ದ್ವಿಪಪಾಭಿಃ"ಇತ್ಯಾದಿ ಮಂತ್ರದಿಂದ ಉಜ್ಜಬೇಕು. ತರುವಾಯ" ಮಾನಸ್ತೋಕೇ" ಇತ್ಯಾದಿ ಮಂತ್ರದಿಂದ ಒಂದೇಸಲಸ್ನಾನಮಾಡಿಸಬೇಕು

ವಿಷ್ಣೋರರಾಟಮಂತ್ರೇಣ ಸ್ನಾಪಯೇದ್ಗಂಧವಾರಿಣಾ ।
ಸೌವರ್ಣೇನ ತು ಮಂತ್ರೇಣ ಅರ್ಘ್ಯಂ ಪಾದ್ಯಂ ನಿವೇದಯೇತ್ ॥ ೯೧ ॥
ಇದಂ ವಿಷ್ಣುರ್ವಿಚಕ್ರಮೇ ಮಂತ್ರೇಣಾರ್ಘ್ಯಂ ಪ್ರದಾಪಯೇತ್ ।
ವೇದೋಸೀತಿ ಚ ಮಂತ್ರೇಣ ಉಪವೀತಂ ಪ್ರದಾಪಯೇತ್ ॥ ೯೨ ॥
ಬೃಹಸ್ಪತೇತಿ ಮಂತ್ರೇಣ ದದ್ಯಾದ್ವಸ್ತ್ರಾಣಿ ಭಾನವೇ ।
ಯೇನ ಶ್ರಿಯಂ ಪ್ರಕುರ್ವಾಣಃ ಪುಷ್ಪಮಾಲಾಂ ಪ್ರಪೂಜಯೇತ್ ॥ ೯೩ ॥
ಧೂರಸೀತಿ ಚ ಮಂತ್ರೇಣ ಧೂಪಂ ದದ್ಯಾತ್ಸಗುಗ್ಗುಲಂ ।
ಸಮಿದ್ಧೋಂಜನಮಂತ್ರೇಣ ಅಂಜನಂ ತು ಪ್ರದಾಪಯೇತ್ ॥ ೯೪ ॥
ಯುಂಜಾನ ಇತಿ ಮಂತ್ರೇಣ ಭಾನುಂ ರೋಚನಮಾಲಭೇತ್ ।
ಆರಾತ್ರಿಕಂ ಚ ಕುರ್ಯಾದ್ದೀರ್ಘಾಯುತ್ವಾಯ ವೈ ಪುನಃ ॥ ೯೫ ॥
ಸಹಸ್ರಶೀರ್ಷಾ ಪುರುಷಃ ಸೂರ್ಯಂ ಶಿರಸಿ ಪೂಜಯೇತ್ ।
ಶಂಭವಾಯೇತಿ ಮಂತ್ರೇಣ ರವೇರ್ನೇತ್ರೇ ಪರಾಮೃಶೇತ್ ॥ ೯೬ ॥

---

೯೧. "ವಿಷ್ಣೋರರಾಟ" ಇತ್ಯಾದಿ ಮಂತ್ರದಿಂದ ಗಂಧೋದಕದಿಂದ ಸ್ನಾನ ಮಾಡಿಸಿ "ಸೌವರ್ಣ" ಇತ್ಯಾದಿ ಮಂತ್ರದಿಂದ ಅರ್ಘ್ಯಪಾದ್ಯಗಳನ್ನು ಅರ್ಪಿಸಬೇಕು.

೯೨. "ಇದಂ ವಿಷ್ಣುರ್ವಿಚಕ್ರಮೇ" ಇತ್ಯಾದಿ ಮಂತ್ರದಿಂದ ಅರ್ಘ್ಯವನ್ನೂ, "ವೇದೋಸಿ" ಇತ್ಯಾದಿ ಮಂತ್ರದಿಂದ ಯಜ್ಞೋಪವೀತವನ್ನು ಸಮರ್ಪಿಸಬೇಕು.

೯೩. "ಬೃಹಸ್ಪತೇ" ಇತ್ಯಾದಿ ಮಂತ್ರದಿಂದ ವಸ್ತ್ರವನ್ನಿತ್ತು "ಯೇನ ಶ್ರಿಯಂ" ಇತ್ಯಾದಿ ಮಂತ್ರವನ್ನುಚ್ಚರಿಸಿ ಪುಷ್ಪಮಾಲೆಯನ್ನರ್ಪಿಸಿ ಪೂಜಿಸಬೇಕು.

೯೪. "ಧೂರಸಿ" ಇತ್ಯಾದಿ ಮಂತ್ರದಿಂದ ಗುಗ್ಗುಳ ಸಹಿತವಾದ ಧೂಪವನ್ನೂ, "ಸಮಿದ್ಧೋಂಜನ" ಮಂತ್ರದಿಂದ ಅಂಜನವನ್ನೂ ಸಮರ್ಪಿಸಬೇಕು.

೯೫. "ಯುಂಜಾನ" ಇತ್ಯಾದಿ ಮಂತ್ರದಿಂದ ಗೋರೋಚನವನ್ನು ಲೇಪನ ಮಾಡಬೇಕು. "ದೀರ್ಘಾಯುತ್ವಾಯ" ಇತ್ಯಾದಿ ಮಂತ್ರದಿಂದ ನೀರಾಜನ ಮಾಡಬೇಕು.

೯೬. "ಸಹಸ್ರಶೀರ್ಷಾ ಪುರುಷಃ" ಇತ್ಯಾದಿ ಮಂತ್ರದಿಂದ ಸೂರ್ಯನ ಶಿರಸ್ಸನ್ನು ಪೂಜಿಸಿ "ಶಂಭವಾಯ" ಇತ್ಯಾದಿ ಮಂತ್ರದಿಂದ ಕಣ್ಣುಗಳನ್ನು ಸ್ಪರ್ಶ ಮಾಡಬೇಕು.

ವಿಶ್ವತಶ್ಚಕ್ಷುರಿತ್ಯೇವಂ ಭಾನೋರ್ದೇಹಂ ಸಮಾಲಭೇತ್ ।
ಶ್ರೀಶ್ಚ ತೇ ಲಕ್ಷ್ಮೀಶ್ಚೇತಿ ಸರ್ವಾಂಗೇ ಪೂಜಯೇದ್ರವಿಂ ॥ ೯೭ ॥

ಈಶ್ವರ ಉವಾಚ:—

ಅಥ ಮೇರೋರ್ಮಹಾದೇವಿ ಅಷ್ಟಶೃಂಗಸ್ಯ ಸುವ್ರತೇ ।
ಪೂಜಾವಿಧಾನಮಂತ್ರಾಸ್ತೇ ಕಥಯಾಮಿ ಸಮಾಸತಃ ॥ ೯೮ ॥
ಅಷ್ಟಶೃಂಗಂ ಮಹಾದೇವಿ ಅನೇನ ವಿಧಿನಾರ್ಚಯೇತ್ ।
ಪ್ರಥಮಂ ಪೂಜಯೇನ್ಮಧ್ಯೇ ಮಂತ್ರೇಣಾನೇನ ಸುವ್ರತೇ ॥ ೯೯ ॥
ಮಹಾಹಿವ್ರೋ ಮಹಾಯೇತಿ ನಾನಾಪುಷ್ಪಕದಂಬಕೈಃ ।
ತ್ರಾತಾರಮಿಂದ್ರಮಂತ್ರೇಣ ಪೂರ್ವಶೃಂಗಂ ಸದಾರ್ಚಯೇತ್ ॥ ೧೦೦ ॥
ತಮುಷ್ಟುವಾಮೇತಿ ಮಂತ್ರೇಣ ಪೂಜಯೇತ್ಸುರಸುಂದರಿ ।
ಅಗ್ನಿಮೀಳೇ ಪುರೋಹಿತಮಾಗ್ನೇಯಂ ಶೃಂಗಮರ್ಚಯೇತ್ ॥ ೧೦೧ ॥
ಆಗ್ನೇಯ್ಯಾ ಚೈವ ಗಾಯತ್ರ್ಯಾ ಅಥವಾಽನೇನ ಪೂಜಯೇತ್ ।
ಯಮಾಯ ತ್ವಾ ಮಖಾಯತ್ವಾ ದಕ್ಷಿಣಂ ಶೃಂಗಮರ್ಚಯೇತ್ ॥ ೧೦೨ ॥
ಉದೀರತಾಮವರ್ಯೇತ್ಯಥವಾನೇನ ಪೂಜಯೇತ್ ।
ಆಯಂ ಗೌರಿತಿ ಮಂತ್ರೇಣ ನೈಋತ್ಯಂ ಶೃಂಗಮರ್ಚಯೇತ್ ॥ ೧೦೩ ॥

---

೯೭. "ವಿಶ್ವತಶ್ಚಕ್ಷು"ರಿತ್ಯಾದಿ ಮಂತ್ರದಿಂದ ದೇಹವನ್ನೂ, "ಶ್ರೀಶ್ಚ ಲಕ್ಷ್ಮೀಶ್ಚ" ಇತ್ಯಾದಿಮಂತ್ರದಿಂದ ಸರ್ವಾಂಗಗಳನ್ನೂ ಪೂಜಿಸಬೇಕು.

೯೮. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಎಂಟು ಶೃಂಗಗಳುಳ್ಳ ಮೇರುಪರ್ವತದ ಪೂಜೆಯ ಕ್ರಮವನ್ನೂ ಮಂತ್ರಗಳನ್ನೂ ನಿನಗೆ ಸಂಕ್ಷೇಪವಾಗಿ ಹೇಳುವೆನು.

೯೯—೧೦೫. ದೇವಿ! ಎಂಟು ಶಿಖರಗಳುಳ್ಳ ಮೇರುವನ್ನು ಈ ವಿಧಿಯಿಂದ ಅರ್ಚಿಸಬೇಕು. "ಮಹಾಹಿವ್ರೋ ಮಹಾಯ" ಇತ್ಯಾದಿ ಮಂತ್ರದಿಂದ ಮೊದಲು ಮಧ್ಯಪ್ರದೇಶವನ್ನು ಬಗೆಬಗೆಯ ಹೂವುಗಳ ಸಮೂಹಗಳಿಂದ ಪೂಜಿಸಬೇಕು. "ತ್ರಾತಾರಮಿಂದ್ರ, ತಮುಷ್ಟುವಾಮ" ಇತ್ಯಾದಿ ಮಂತ್ರಗಳಿಂದ ಪೂರ್ವಶೃಂಗವನ್ನೂ, "ಅಗ್ನಿಮೀಳೆ ಪುರೋಹಿತಂ" ಇತ್ಯಾದಿ ಮಂತ್ರದಿಂದ ಅಥವಾ ಗಾಯಿತ್ರಿಯಿಂದ ಆಗ್ನೇಯ ಶಿಖರವನ್ನೂ, "ಯಮಾಯತ್ವಾಮಖಾಯ" ಇತ್ಯಾದಿ ಮಂತ್ರದಿಂದ ದಕ್ಷಿಣ ಶಿಖರವನ್ನೂ, "ಉದೀರ ತಾಮವರ, ಆಯಂಗೌಃ ಅಥವಾ ರಕ್ಷೋಹಣಂ ವಾಜಿನಂ" ಇತ್ಯಾದಿಮಂತ್ರದಿಂದ ನೈಋತ್ಯಶೃಂಗವನ್ನೂ, "ಇಂದ್ರಾಸೋಮಾ ಚ, ಅಭಿತ್ವಾಸೂರನೋನು, ಅಥವಾ ಯೇನೇದಂ ಭೂತಂ" ಇತ್ಯಾದಿ ಮಂತ್ರಗಳಿಂದ ಈಶಾನ್ಯ ಶೃಂಗವನ್ನೂ ಪೂಜಿಸಬೇಕು.

ರಕ್ಷೋಹಣಂ ವಾಜಿನಂ ವಾ ಪೂಜಯೇದಸುರಾಂತಿಕಂ ।
ಇಂದ್ರಾಶೋಮಾ ಚ ಯೋ ಮಂತ್ರೋ ಹ್ಯಥವಾ ತೇನ ಪೂಜಯೇತ್ ।
ಅಭಿತ್ವಾ ಸೂರ ನೋನ್ವಿತಿ ಚೈಶಾನಂ ಶೃಂಗಮರ್ಚಯೇತ್ ।
ಯೇನೇದಂ ಭೂತಮಿತಿ ವಾ ಅಥವಾಽನೇನ ಪೂಜಯೇತ್ ॥ ೧೦೫ ॥
ನಮೋಽಸ್ತು ಸರ್ಪೇಭ್ಯ ಇತಿ ಮೇರುಪೀಠಂ ಸದಾರ್ಚಯೇತ್ ॥
ಹಿರಣ್ಯಗರ್ಭಃ ಸಮವರ್ತತೇತಿ ಪುನರ್ಮಧ್ಯೇ ಸದಾರ್ಚಯೇತ್ ॥ ೧೦೬ ॥
ಸವಿತಾ ಪಶ್ಚಾತಾದಿತಿ ವೈ ಪೂಜಯೇತ್ಪುಷ್ಪಮಾಲಯಾ ।
ತ್ರಿಕಾಲಮರ್ಚಯೇದ್ದೇವಿ ಪ್ರದದ್ಯಾದರ್ಘ್ಯಮಾದರಾತ್ ॥ ೧೦೭ ॥
ಮಾತಾ ರುದ್ರಾಣಾಂ ದುಹಿತಾ ವಸೂನಾಂ ಪೂರ್ವಾಹ್ಣೇ ಚೈವ ಪೂಜಯೇತ್ ॥
ಮಧ್ಯಾಹ್ನೇ ಪೂಜಯೇದ್ದೇವಿ ತದ್ವಿಷ್ಣೋಃ ಪರಮಂ ಪದಂ ॥ ೧೦೮ ॥
ಹಂಸಃ ಶುಚಿಷದಿತಿ ವಾ ಅಪರಾಹ್ಣೇ ಸದಾಽರ್ಚಯೇತ್ ।
ಏವಂ ಭಾನುಂ ಗ್ರಹೈಃ ಸಾರ್ಧಂ ಪೂಜಯೇದ್ವರವರ್ಣಿನಿ ॥ ೧೦೯ ॥

ದೇವ್ಯುವಾಚ:—

ಯಾನಿ ಪುಷ್ಪಾಣಿ ಚೇಷ್ಟಾನಿ ಸದಾ ಭಾಸ್ಕರಪೂಜನೇ ।
ಕಾನಿ ಚೋಕ್ತಾನಿ ದೇವೇಶ ಕಥಯಸ್ವ ಪ್ರಸಾದತಃ ॥ ೧೧೦ ॥

---

೧೦೬. "ನಮೋಽಸ್ತು ಸರ್ಪೇಭ್ಯ" ಇತ್ಯಾದಿ ಮಂತ್ರದಿಂದ ಮೇರುಪೀಠವನ್ನೂ, "ಹಿರಣ್ಯಗರ್ಭಃ ಸಮವರ್ತತು" ಇತ್ಯಾದಿ ಮಂತ್ರದಿಂದ ಮಧ್ಯಪ್ರದೇಶವನ್ನೂ, ಯಾವಾಗಲೂ ಪೂಜಿಸಬೇಕು.

೧೦೭. "ಸವಿತಾ ಪಶ್ಚಾತಾತ್" ಇತ್ಯಾದಿ ಮಂತ್ರದಿಂದ ಪುಷ್ಪಮಾಲಿಕೆಯನ್ನರ್ಪಿಸಬೇಕು. ಹೀಗೆ ತ್ರಿಕಾಲದಲ್ಲಿ ಪೂಜಿಸಿ ಭಕ್ತಿಯಿಂದ ಅರ್ಘ್ಯವನ್ನು ಕೊಡಬೇಕು.

೧೦೮-೧೦೯. ಪ್ರಿಯಳೆ ! ಪೂರ್ವಾಹ್ಣದಲ್ಲಿ "ಮಾತಾ ರುದ್ರಾಣಾಂ ದುಹಿತಾ ವಸೂನಾಂ" ಇತ್ಯಾದಿ ಮಂತ್ರದಿಂದಲೂ ಮಧ್ಯಾಹ್ನದಲ್ಲಿ "ತದ್ವಿಷ್ಣೋಃ ಪರಮಂ ಪದಂ" ಇತ್ಯಾದಿ ಮಂತ್ರದಿಂದಲೂ, ಅಪರಾಹ್ಣದಲ್ಲಿ "ಹಂಸಃ ಶುಚಿಷತ್" ಇತ್ಯಾದಿ ಮಂತ್ರದಿಂದಲೂ, ಇತರ ಗ್ರಹಗಳೊಡನೆ ಸೂರ್ಯನನ್ನರ್ಚಿಸಬೇಕು.

೧೧೦. ದೇವಿಯು ಹೇಳುತ್ತಾಳೆ :–ದೇವೇಶ! ಸೂರ್ಯನ ಪೂಜೆಗೆ ಪ್ರಿಯವಾದ ಹೂವುಗಳಾವುವು. ಅದನ್ನು ಅನುಗ್ರಹಿಸಿ ಹೇಳು.

ಈಶ್ವರ ಉವಾಚ:—

ಶೃಣು ದೇವಿ ಪ್ರವಕ್ಷ್ಯಾಮಿ ಪುಷ್ಪಾಧ್ಯಾಯಮನುತ್ತಮಂ ।
ಯೇನ ಚಾರ್ಕಸ್ಥಲೇ ದೇವಿ ಶೀಘ್ರಂ ತುಷ್ಯತಿ ಪೂಜಿತಃ ॥ ೧೧೧ ॥
ಮಾಲತೀಕುಸುಮೈಃ ಪೂಜಾ ಭವೇತ್ಸಾಂನಿಧ್ಯಕಾರಿಕಾ ।
ಮಲ್ಲಿಕಾಯಾಶ್ಚ ಕುಸುಮೈರ್ಭೋಗವಾಂಜಾಯತೇ ನರಃ ॥ ೧೧೨ ॥
ಸೌಭಾಗ್ಯಂ ಪುಂಡರೀಕೈಸ್ತು ಭವತ್ಯರ್ಥಶ್ಚ ಶಾಶ್ವತಃ ।
ಕದಂಬಪುಷ್ಪೈರ್ದೇವೇಶಿ ಪರಮೈಶ್ವರ್ಯಮಶ್ನುತೇ ॥ ೧೧೩ ॥
ಭವತ್ಯಕ್ಷಯಮನ್ನಂ ಚ ಬಕುಲೈರರ್ಚನೇ ರವೇಃ ।
ಮಂದಾರಪುಷ್ಪಕೈಃ ಪೂಜಾ ಸರ್ವಕುಷ್ಠವಿನಾಶಿನೀ ॥ ೧೧೪ ॥
ಬಿಲ್ವಸ್ಯ ಪತ್ರಕುಸುಮೈರ್ಮಹತೀಂ ಶ್ರಿಯಮಶ್ನುತೇ ।
ಅರ್ಕಸ್ರಜಾ ಭವತ್ಯರ್ಥಃ ಸರ್ವಕಾಮಫಲಪ್ರದಃ ॥ ೧೧೫ ॥
ಪ್ರದದ್ಯಾದ್ರೂಪಿಣೀಂ ಕನ್ಯಾಂ ಪೂಜಿತೋ ಬಕುಲಸ್ರಜಾ ।
ಕಿಂಶುಕೈರರ್ಚಿತೋ ದೇವಿ ನ ಪೀಡಯತಿ ಭಾಸ್ಕರಃ ॥ ೧೧೬ ॥
ಅಗಸ್ತಿಕುಸುಮೈಸ್ತದ್ವದಾನುಕೂಲ್ಯಂ ಪ್ರಯಚ್ಛತಿ ।
ಕರವೀರೈಸ್ತು ದೇವೇಶಿ ಸೂರ್ಯಸ್ಯಾನುಚರೋ ಭವೇತ್ ॥ ೧೧೭ ॥
ಶತಪತ್ರಸ್ರಜಾ ದೇವಿ ಸೂರ್ಯಸಾಲೋಕ್ಯತಾಂ ವ್ರಜೇತ್ ॥
ಬಕಪುಷ್ಪೈರ್ಮಹಾದೇವಿ ದಾರಿದ್ರ್ಯಂ ನೈವ ಜಾಯತೇ ॥ ೧೧೮ ॥

---

೧೧೧. ಈಶ್ವರನು ಹೇಳುತ್ತಾನೆ :—ದೇವಿ ! ಉತ್ತಮವಾದ ಪುಷ್ಪಾಧ್ಯಾಯವನ್ನೀಗ ನಿನಗೆ ಹೇಳುತ್ತೇನೆ. ಇದರಲ್ಲಿ ಉತ್ತಮವಾಗಿರುವ ಹೂಗಳಿಂದ ಅರ್ಕಸ್ಥಳದಲ್ಲಿ ಸೂರ್ಯನನ್ನು ಆರಾಧಿಸಿದರೆ ಆ ಭಗವಂತನು ಸಂತುಷ್ಟನಾಗುತ್ತಾನೆ.

೧೧೨–೧೧೮. ಮಾಲತಿಹೂವುಗಳಿಂದ ಪೂಜಿಸಿದರೆ ಸೂರ್ಯನ ಸಾನ್ನಿಧ್ಯವು ಲಭಿಸುವುದು. ಮಲ್ಲಿಗೆ ಹೂವುಗಳಿಂದ ಸುಖಭೋಗಿಯಾಗುವನು. ತಾವರೆ ಹೂವುಗಳಿಂದ ಸೌಭಾಗ್ಯವೂ, ಶಾಶ್ವತವಾದಸಿರಿಯೂ, ಕದಂಬಪುಷ್ಪಗಳಿಂದ ಪರಮೈಶ್ವರ್ಯವೂ, ಬಕುಲಪುಷ್ಪಗಳಿಂದ ಅಕ್ಷಯವಾದ ಅನ್ನವೂ, ಮಂದಾರಪುಷ್ಪಗಳಿಂದ ಸಮಸ್ತ ಕುಷ್ಠರೋಗ ಪರಿಹಾರವೂ, ಬಿಲ್ವಪತ್ರ, ಕುಸುಮಗಳಿಂದ ಮಹಾಸಂಪತ್ತೂ, ಎಕ್ಕದ ಹೂವಿನಮಾಲೆಯಿಂದ ಸಕಲೇಷ್ಟಾರ್ಥವನ್ನೀಯುವ ದ್ರವ್ಯವೂ, ಬಕುಲಮಾಲೆಯಿಂದ ಕನ್ಯಾದಾನದ ಫಲವೂ, ಮುತ್ತುಗದ ಹೂವಿನಿಂದ ಪೀಡಾಪರಿಹಾರವೂ, ಅಗಸೆಹೂವಿನಿಂದ ಅನುಕೂಲ್ಯವೂ, ಕಣಗಿಲೆ ಹೂವಿನಿಂದ ಸೂರ್ಯನ ಸೇವಕತನವೂ, ತಾವರೆ ಹೂವಿನಮಾಲೆಯಿಂದ ಸೂರ್ಯಲೋಕವೂ, ಬಕಪುಷ್ಪಗಳಿಂದ ದಾರಿದ್ರ್ಯಪರಿಹಾರವೂ, ಆಗುವುದು.

ಋತುಕುಸುಮೇನ ಗಂಧೇನ ಸಮಭ್ಯರ್ಚ್ಯ ದಿವಾಕರಂ ।
ಚತುಃಸಮುದ್ರಮರ್ಯಾದಾಂ ಸ ಭುಂಕ್ತೇ ಪೃಥಿವೀಮಿಮಾಂ ॥ ೧೧೯ ॥
ಯಃ ಸೂರ್ಯಾಯತನಂ ಭಕ್ತ್ಯಾ ಗೈರಿಕೇಣೋಪಲೇಪಯೇತ್ ।
ಪ್ರಾಪ್ನುಯಾನ್ಮಹತೀಂ ಲಕ್ಷ್ಮೀಂ ರೋಗೈಶ್ಚಾಽಪಿ ಪ್ರಮುಚ್ಯತೇ ॥ ೧೨೦ ॥
ಅಷ್ಟಾದಶೇಹ ಕುಷ್ಠಾನಿ ಯೇ ಚಾಽನ್ಯೇ ವ್ಯಾಧಯೋ ನೃಣಾಂ ।
ಪ್ರಲಯಂ ಯಾಂತಿ ತೇ ಸರ್ವೇ ಮೃದಾ ಯದ್ಯುಪಲೇಪಯೇತ್ ॥ ೧೨೧ ॥
ವಿಲೇಪನಾನಾಂ ಸರ್ವೇಷಾಂ ಕುಂಕುಮಂ ರಕ್ತಚಂದನಂ ।
ಪುಷ್ಪಾಣಾಂ ಕರವೀರಾಣಿ ಪ್ರಶಸ್ತಾನಿ ವರಾನನೇ ॥ ೧೨೨ ॥
ನಾಽತಃ ಪರತರಂ ಕಿಂಚಿದ್ಭಾಸ್ವತಸ್ತುಷ್ಟಿಕಾರಕಂ ।
ಯಾದೃಶಂ ಕುಂಕುಮಂ ಜಾತೀ ಶತಪತ್ರಂ ತಥಾಽಗುರುಃ ॥ ೧೨೩ ॥
ಕಿಂ ತಸ್ಯ ನ ಭವೇಲ್ಲೋಕೇ ಯಶ್ಚೈಭಿಶ್ಚಾರ್ಚಯೇದ್ರವಿಂ ।
ಉಪಲಿಪ್ಯಾಲಯಂ ಯಸ್ತು ಕುರ್ಯಾನ್ಮಂಡಲಕಂ ಶುಭಂ ॥ ೧೨೪ ॥
ಏಕೇನಾಽಸ್ಯ ಭವೇದರ್ಥೋ ದ್ವಾಭ್ಯಾಮಾರೋಗ್ಯಮಶ್ನುತೇ ।
ತ್ರಿಭಿಸ್ತು ಸರ್ವವಿದ್ಯಾವಾಂಶ್ಚತುರ್ಭಿರ್ಭೋಗವಾನ್ ಭವೇತ್ ॥ ೧೨೫ ॥

---

೧೧೯. ಸೂರ್ಯನನ್ನು ಋತುಕುಸುಮದಿಂದಲೂ, ಗಂಧದಿಂದಲೂ ಪೂಜಿಸಿದ ಮಾನವನು ಚತುಸ್ಸಮುದ್ರಪರಿವೇಷ್ಟಿತವಾಗಿರುವ ಭೂಮಿಗೆ ಒಡೆಯನಾಗುವನು.

೧೨೦. ಸೂರ್ಯನ ಆಲಯವನ್ನು ಭಕ್ತಿಪೂರ್ವಕವಾಗಿ ಗೈರಿಕಧಾತುವಿನಿಂದ ಲೇಪನಮಾಡಿದ ಮಾನವನು ಮಹಾಸಂಪತ್ತನ್ನು ಪಡೆಯುವನೂ ಅಲ್ಲದೆ ರೋಗಮುಕ್ತನೂ ಆಗುವನು.

೧೨೧. ಮಣ್ಣನ್ನು ಲೇಪನಮಾಡುವವನ ಹದಿನೆಂಟು ವಿಧವಾದ ಕುಷ್ಠರೋಗಗಳೂ, ಇತರ ವ್ಯಾಧಿಗಳೂ ಪರಿಹಾರವಾಗುವುವು.

೧೨೨–೧೨೫. ಸಮಸ್ತ ಲೇಪನ ದ್ರವ್ಯಗಳಲ್ಲಿ ಕುಂಕುಮ, ಕೆಂಪುಗಂಧಗಳೂ, ಹೂವುಗಳಲ್ಲಿ ಕಣಗಲೆಹೂವೂ ಪ್ರಶಸ್ತವಾದುವು. ಇವುಗಳಿಗಿಂತ ಬೇರೆ ಸೂರ್ಯನಿಗೆ ಸಂತೋಷವನ್ನುಂಟುಮಾಡುವ ವಸ್ತುವಿಲ್ಲ. ಕುಂಕುಮ, ಜಾಜೀಹೂವು, ತಾವರೆಹೂವು, ಅಗುರುಗಂಧ ಇವುಗಳಿಂದ ಸೂರ್ಯನನ್ನು ಪೂಜಿಸುವ ನರನಿಗೆ ಲಭಿಸದಿರುವಪದಾರ್ಥವೇ ಪ್ರಪಂಚದಲ್ಲಿ ಇರುವುದಿಲ್ಲ. ಸೂರ್ಯನ ಆಲಯವನ್ನು ಸಾರಿಸಿ ಒಂದು ಮಂಡಲವನ್ನು ರಚಿಸುವುದರಿಂದ ದ್ರವ್ಯಲಾಭವೂ, ಎರಡರಿಂದ ಆರೋಗ್ಯವೂ, ಮೂರರಿಂದ ಸಕಲ ವಿದ್ಯೆಗಳೂ, ನಾಲ್ಕರಿಂದ ಸುಖಭೋಗಗಳೂ, ಐದರಿಂದ ಅತಿಶಯಧಾನ್ಯವೂ, ಆರರಿಂದ

ಪಂಚಭಿರ್ವಿಪುಲಂ ಧಾನ್ಯಂ ಷಡ್ಭಿರಾಯುರ್ಬಲಂ ಯಶಃ ।
ಸಪ್ತಮಂಡಲಕಾರೀ ಸ್ಯಾನ್ಮಂಡಲಾಧಿಪತಿರ್ನರಃ ॥ ೧೨೬ ॥
ಘೃತದೀಪಪ್ರದಾನೇನ ಚಕ್ಷುಷ್ಮಾನ್ ಜಾಯತೇ ನರಃ ।
ಕಟುತೈಲಸ್ಯ ದೀಪೇನ ಸ್ವಂ ಶತ್ರುಂ ಜಯತೇ ನರಃ ॥ ೧೨೭ ॥
ತೈಲದೀಪಪ್ರದಾನೇನ ಸೂರ್ಯಲೋಕೇ ಮಹೀಯತೇ ।
ಮಧೂಕತೈಲದೀಪೇನ ಸೌಭಾಗ್ಯಂ ಪರಮಂ ಲಭೇತ್ ॥ ೧೨೮ ॥
ಪುಷ್ಪಾಣಾಂ ಪ್ರವರಾ ಜಾತೀ ಧೂಪಾನಾಂ ವಿಜಯಃ ಪರಃ ।
ಗಂಧಾನಾಂ ಕುಂಕುಮಂ ಶ್ರೇಷ್ಠಂ ಲೇಪಾನಾಂ ರಕ್ತಚಂದನಂ ॥ ೧೨೯ ॥
ದೀಪದಾನೇ ಘೃತಂ ಶ್ರೇಷ್ಠಂ ನೈವೇದ್ಯೇ ಮೋದಕಃ ಪರಂ ।
ಏತೈಸ್ತುಷ್ಯತಿ ದೇವೇಶಃ ಸಾನ್ನಿಧ್ಯಂ ಚಾಽಧಿಗಚ್ಛತಿ ॥ ೧೩೦ ॥
ಏವಂ ಸಂಪೂಜ್ಯ ವಿಧಿವತ್ಕೃತ್ವಾ ಪಿತೃಪ್ರದಕ್ಷಿಣಾಂ ।
ಪ್ರಣಮ್ಯ ಶಿರಸಾ ದೇವಂ ತತ್ರ ಚಾರ್ಕಸ್ಥಲಂ ಪ್ರಿಯೇ ॥ ೧೩೧ ॥
ಸುಖಾಸೀನಸ್ತತಃ ಪಶ್ಯೇದ್ರವೇರಭಿಮುಖೇ ಸ್ಥಿತಃ ।
ಏಕಂ ಸಿದ್ಧಾರ್ಥಕಂ ಕೃತ್ವಾ ಹಸ್ತೇ ಪಾನೀಯಸಂಯುತಂ ॥ ೧೩೨ ॥

ಆಯುಸ್ಸು, ಬಲ, ಕೀರ್ತಿಗಳೂ, ಲಭಿಸುವುವು. ಏಳು ಮಂಡಲಗಳನ್ನು ರಚಿಸುವ ಮಾನವನು ದೇಶಕ್ಕೆ ಮಂಡಲಾಧಿಪತಿಯಾಗುವನು.

೧೨೭. ತುಪ್ಪದ ದೀಪವನ್ನು ಸೂರ್ಯನಿಗೆ ಹೊತ್ತಿಸುವುದರಿಂದ ಒಳ್ಳೆಯ ಕಣ್ಣುಗಳೂ, ಕಟುತೈಲದ (ಬೇವಿನೆಣ್ಣೆಯ) ದೀಪದಿಂದ ಶತ್ರುಜಯವೂ ಲಭಿಸುವುವು.

೧೨೮. ಎಣ್ಣೆಯದೀಪದಿಂದ ಸೂರ್ಯಲೋಕದಲ್ಲಿ ಪೂಜ್ಯತೆಯೂ, ಮಧೂಕತೈಲ ದೀಪದಿಂದ ಉತ್ತಮ ಸೌಭಾಗ್ಯವೂ ಉಂಟಾಗುವುದು.

೧೨೯–೧೩೦. ಹೂವುಗಳಲ್ಲಿ ಜಾಜೀಹೂವೂ, ಧೂಪಗಳಲ್ಲಿ ವಿಜಯ ಧೂಪವೂ, ಗಂಧಗಳಲ್ಲಿ ಕುಂಕುಮಕೇಸರಿಯೂ, ಲೇಪನದ್ರವ್ಯಗಳಲ್ಲಿ ಕೆಂಪು ಚಂದನವೂ, ದೀಪಗಳಲ್ಲಿತುಪ್ಪದದೀಪವೂ, ನೈವೇದ್ಯದಲ್ಲಿ ಮೋದಕವೂ ಉತ್ತಮವಾದುದು. ಸೂರ್ಯನು ಇದರಿಂದ ಸಂತುಷ್ಟನಾಗಿ ಸಾನ್ನಿಧ್ಯವನ್ನು ಹೊಂದುವನು.

೧೩೧–೧೩೨. ಎಲೌ ದೇವಿಯೆ! ಹೀಗೆ ವಿಧಿವತ್ತಾಗಿ ಪೂಜಿಸಿ, ಪ್ರದಕ್ಷಿಣೆಯನ್ನು ಮಾಡಿ, ಅರ್ಕಸ್ಥಲದಲ್ಲಿ ಸೂರ್ಯನನ್ನು ತಲೆಬಾಗಿ ನಮಸ್ಕರಿಸಿ, ಸೂರ್ಯನಿಗೆ ಅಭಿಮುಖವಾಗಿ ಕುಳಿತುಕೊಂಡು, ಕೈಯಲ್ಲಿ ನೀರಿನೊಂದಿಗೆ ಒಂದು ಸಾಸಿವೆಯನ್ನು

ಕಾಮಂ ಯಥೇಷ್ಟಂ ಹೃದಯೇ ಕೃತ್ವಾರ್ಕಸ್ಥಲಸನ್ನಿಧೌ ।
ಪಿಬೇಸ್ಸತೋಯಂ ತದ್ದೇವಿ ಹ್ಯಸ್ಪೃಷ್ಟಂ ದಶನೈಃ ಸಕೃತ್ ॥ ೧೩೩ ॥
ಏವಂ ಕೃತ್ವಾ ನರೋ ದೇವಿ ಕೋಟಿಯಾತ್ರಾಫಲಂ ಲಭೇತ್ ।
ಬ್ರಹ್ಮಾ ವಿಷ್ಣುರ್ಮಹಾದೇವೋ ಜ್ವಲನೋ ಧನದಸ್ತಥಾ ॥ ೧೩೪ ॥
ಭಾನುಮಾಶ್ರಿತ್ಯ ಸರ್ವೇ ತೇ ಮೋದಂತೇ ದಿವಿ ಸುವ್ರತೇ ।
ತಸ್ಮಾದ್ಭಾನುಸಮಂ ದೇವಂ ನಾಹಂ ಪಶ್ಯಾಮಿ ಕಂಚನ ॥ ೧೩೫ ॥
ಇತಿ ಕೃತ್ವಾ ಮಹಾದೇವಿ ಪುನರ್ಭಾನೋಃ ಪ್ರದಕ್ಷಿಣಂ ।
ಕುರ್ಯಾನ್ಮಂತ್ರೇಣ ದೇವೇಶಿ ಸಪ್ತಕೃತ್ವೋ ವರಾನನೇ ॥ ೧೩೬ ॥
ತಮುಷ್ಟವಾಮ ಇತಿ ಋಕ್ಪ್ರಥಮಾ ಪರಿಕೀರ್ತಿತಾ ।
ಏತೋನ್ವಿಂದ್ರಂ ಸ್ತವಾಮೇತಿ ದ್ವಿತೀಯಾ ಪರಿಕೀರ್ತಿತಾ ॥ ೧೩೭ ॥
ಇಂದ್ರ ಶುದ್ಧೋ ನ ಆಗಹಿ ತೃತೀಯಾ ಪರಿಕೀರ್ತಿತಾ ।
ಇಂದ್ರಂ ಶುದ್ಧೋ ಹಿ ನೋ ರಯಿಂ ಚತುರ್ಥೀ ಪರಿಕೀರ್ತಿತಾ ॥ ೧೩೮ ॥
ಅಸ್ಯ ವಾಮಸ್ಯೇತಿ ಶುಭೇ ಪಂಚಮೀ ಪರಿಕೀರ್ತಿತಾ ।
ತ್ರಿಭಿಷ್ಟ್ವಂ ದೇವ ಇತಿ ವೈ ಷಷ್ಠೀ ಚ ಪರಿಕೀರ್ತಿತಾ ॥ ೧೩೯ ॥

ಹೃದಯಕಮಲದಲ್ಲಿಟ್ಟು, ಸೂರ್ಯ ಭಗವಂತನನ್ನು ಭಾವಿಸಿ, ಹಲ್ಲುಗಳಿಗೆ ತಾಗದಂತೆ ಸಾಸಿವೆಯನ್ನು ನೀರಿನೊಡನೆ ಕುಡಿಯಬೇಕು.

೧೩೪–೧೩೫ ದೇವಿ ! ಮಾನವನು ಹೀಗೆ ಮಾಡಿದರೆ ಅವನು ಕೋಟಿಸಾರಿ ಯಾತ್ರೆ ಮಾಡಿದ ಫಲವನ್ನು ಪಡೆಯುವನು. ಬ್ರಹ್ಮ, ವಿಷ್ಣು, ಮಹೇಶ್ವರ, ಅಗ್ನಿ, ಕುಬೇರ ಇವರೆಲ್ಲರೂ ಸೂರ್ಯನನ್ನು ಆಶ್ರಯಿಸಿ ಆಕಾಶದಲ್ಲಿ ಸಂತೋಷಪಡುತ್ತಾರೆ. ಆದುದರಿಂದ ನಾನು ಸೂರ್ಯನಿಗೆ ಸಮಾನವಾದ ದೇವತೆಯನ್ನು ನೋಡಲಿಲ್ಲ

೧೩೬. ಮಹಾದೇವಿ ! ಹೀಗೆ ಪೂಜಿಸಿ ಮರಳಿ ಸೂರ್ಯನಿಗೆ ಏಳು ಸಾರಿ ಈ ಮಂತ್ರದಿಂದ ಪ್ರದಕ್ಷಿಣೆಮಾಡಬೇಕು.

೧೩೭–೧೩೯. "ತಮುಷ್ಟವಾಮ, ಏತೋನ್ವಿಂದ್ರಂಸ್ತವಾಮ, ಇಂದ್ರ ಶುದ್ಧೋ ಕ್ಷೇನ ಆಗಹಿ, ಇಂದ್ರಂ ಶುದ್ಧೋ ಹಿ ನೋ ರಯಿಂ, ಅಸ್ಯ ವಾಮಸ್ಯ, ತ್ರಿಭಿಷ್ಟ್ವಂ ದೇವ" ಇತ್ಯಾದಿಗಳು ಕ್ರಮವಾಗಿ ಆರು ಪ್ರದಕ್ಷಿಣೆಗಳ ಮಂತ್ರಗಳಾಗಿರುವುವು.

ದಶ ಸಾಮಾನಿ ವೈ ಯಾನಿ ಪ್ರವರಾಣಿ ಮನೀಷಿಭಿಃ ।
ಗೀತಾನಿ ಸಾಮಗೈರ್ನಿತ್ಯಂ ಸಪ್ತಮೀಂ ತೈಸ್ತು ಕಾರಯೇತ್ ॥ ೧೪೦ ॥
ತಾನಿ ತೇ ಕಥಯಾಮ್ಯದ್ಯ ದಶ ಸಾಮಾನಿ ಸುಂದರಿ ।
ಹುಂಕಾರಃ ಪ್ರಣವೋದ್ಗೀಥಃ ಪ್ರಸ್ತಾವಶ್ಚ ಚತುಷ್ಟಯಂ ॥ ೧೪೧ ॥
ಪಂಚಮಂ ಪ್ರಹರೋ ಯತ್ರ ಷಷ್ಠಮಾರಣ್ಯಕಂ ತಥಾ ।
ನಿಧನಂ ಸಪ್ತಮಂ ಸಾಮ್ನಾಂ ಸಪ್ತಸಿದ್ಧಮಿತಿ ಸ್ಮೃತಂ ॥ ೧೪೨ ॥
ಪಂಚವಿಧ್ಯಮಿತಿ ಪ್ರೋಕ್ತಂ ಹ್ರೀಂಕಾರಃಪ್ರಣವೇನ ತು ।
ಅಷ್ಟಮಂ ಚ ತಥಾ ಸಾಧ್ಯಂ ನವಮಂ ವಾಮದೇವಕಂ ॥ ೧೪೩ ॥
ಜ್ಯೇಷ್ಠಂ ತು ದಶಮಂ ಸಾಮ ವೇಧಸೇ ಪ್ರಿಯಮುತ್ತಮಂ ।
ಏತೇಷಾಂ ದೇವಿ ಸಾಮ್ನಾಂ ವೈ ಜಾಪ್ಯಂ ಕಾರ್ಯಂ ವಿಧಾನತಃ ॥ ೧೪೪ ॥
ಜ್ಯೇಷ್ಠಸಾಮಪರಂ ಚೈವ ದ್ವಿತೀಯಂ ಗದತಃ ಶೃಣು ।
ನ ಚ ಶ್ರಾವ್ಯಂ ದ್ವಿತೀಯಂ ತು ಜಪ್ತವ್ಯಂ ಮುಕ್ತಿಮಿಚ್ಛತಾ ॥ ೧೪೫ ॥
ತಜ್ಜಾಪ್ಯಂ ಪರಮಂ ಪ್ರೋಕ್ತಂ ಸ್ವಯಂ ದೇವೇನ ಭಾನುನಾ ।
ಜಾಪ್ಯಸ್ಯ ವಿನಿಯೋಗೋಽಸ್ಯ ಲಕ್ಷಣಂ ಚ ನಿಬೋಧ ಮೇ ।
ಸ್ತೋಭಸಾರಂ ಶ್ವಾಸಲೀನಮೌಕಾರಾದಿ ಸ್ಮೃತಂ ಬುಧೈಃ॥ ೧೪೬ ॥

---

೧೪೦. ಸಾಮವೇದಿಗಳು ಗಾನಮಾಡುವ ಹತ್ತು ಉತ್ತಮ ಸಾಮ ಮಂತ್ರಗಳಿಂದ ಏಳನೆಯ ಪ್ರದಕ್ಷಿಣೆಮಾಡಬೇಕು.

೧೪೧-೧೪೪. ಸುಂದರಿ! ಆ ಹತ್ತು ಸಾಮಗಳನ್ನು ಈಗ ನಿನಗೆ ಹೇಳುವೆನು, ಅವು ಹುಂಕಾರ, ಪ್ರಣವ, ಉದ್ಗೀಥ, ಪ್ರಸ್ತಾವ, ಪ್ರಹರ, ಆರಣ್ಯಕ, ಎಂದು ಕ್ರಮವಾಗಿ ಆರು ಸಾಮಗಳಾಗಿರುವುವು. ಏಳನೆಯದು ಹ್ರೀಂಕಾರಪ್ರಣವದೊಡನೆ ಪಂಚವಿಧ್ಯೆಯೆಂದೂ ಸಪ್ತಸಿದ್ಧಿಯೆಂದೂ ಪ್ರಸಿದ್ಧವಾದ ನಿಧನಸಾಮವು. ಎಂಟನೆಯದು ಸಾಧ್ಯ ಎಂದೂ, ಒಂಬತ್ತನೆಯದು ವಾಮದೇವಕವೆಂದೂ, ಹತ್ತನೆಯದು ಬ್ರಹ್ಮನಿಗೆ ಪ್ರಿಯವಾದ ಜ್ಯೇಷ್ಠ ಎಂದೂ ಪ್ರಸಿದ್ಧವಾಗಿದೆ. ಇವುಗಳನ್ನು ವಿಧಿಯಿಂದ ಜಪಿಸಬೇಕು.

೧೪೫. ಮುಕ್ತಿಯನ್ನಿಚ್ಛಿಸುವವನು ಜ್ಯೇಷ್ಠ ಮತ್ತು ಎರಡನೆಯ ಪ್ರಣವ ಸಾಮಗಳನ್ನು ಜಪಿಸಬೇಕು.

೧೪೬. ಸೂರ್ಯನು ಜಾಪ್ಯಸಾಮವನ್ನು ಉತ್ತಮವಾದುದೆಂದು ಹೇಳಿರುವನು. ಜಾಪ್ಯದ ವಿನಿಯೋಗದ ಕ್ರಮವನ್ನೂ, ಲಕ್ಷಣವನ್ನೂ ಹೇಳುವೆನು. ಕೇಳು. ಇದು

ಊರ್ಧ್ವಾನುಷ್ಠ ತಥಾ ಧರ್ಮಂ ಧರ್ಮಃ ಸತ್ಯಂ ಹ್ಯೃತಂ ತಥಾ ।
ಧರ್ಮಂ ಯೋ ಧರ್ಮವದ್ಧರ್ಮೋ ಧರ್ಮೋ ವೈ ನಿಧನಂ ಗತಾಃ ॥ ೧೪೭ ॥
ಯದೇಭಿಶ್ಚ ಯಜೇಚ್ಛಬ್ದೈರುಚಿತಂ ಸಾಮಗೈರ್ದ್ವಿಜೈಃ ।
ಜಾಪ್ಯಂ ಚೈತತ್ಪರಂ ಪ್ರೋಕ್ತಂ ಸ್ವಯಂ ದೇವೇನ ಭಾನುನಾ ॥ ೧೪೮ ॥
ಏತದ್ವೈ ಜಪ್ಯಮಾನಸ್ತು ಪುನರಾವರ್ತತೇ ನ ತು ।
ಸರ್ವರೋಗವಿನಿರ್ಮುಕ್ತೋ ಮುಚ್ಯತೇ ಬ್ರಹ್ಮಹತ್ಯಯಾ ॥ ೧೪೯ ॥
ಆಜ್ಯದೋಹಾದ್ಯದೋಹೇತಿ ಜ್ಯೇಷ್ಠಸಾಮ್ನೋಽಪಿ ಲಕ್ಷಣಂ ॥ ೧೫೦ ॥
ಇತಿ ಸಂಪೂಜ್ಯ ದೇವೇಶಂ ತತಃ ಕುರ್ಯಾತ್ಪರಾಂ ಸ್ತುತಿಂ ।
ಋಗ್ಭಿರ್ವೈ ಪಂಚಭಿಶ್ಚೈವ ಶೃಣುಷ್ವೈಕಮನಾಸ್ತು ತಾಃ ॥ ೧೫೧ ॥
ಉಕ್ಷಾಣಂ ಪೃಶ್ನಿಮಿತಿ ವೈ ಪ್ರಥಮಾ ಪರಿಕೀರ್ತಿತಾ ।
ಚತ್ವಾರಿ ವಾಕ್ಪರೀತಿ ವೈ ದ್ವಿತೀಯಾ ಪರಿಕೀರ್ತಿತಾ ॥ ೧೫೨ ॥
ಇಂದ್ರಂ ಮಿತ್ರಂ ತೃತೀಯಾ ತು ಋಕ್ಚೈವ ಪರಿಕೀರ್ತಿತಾ ।
ಕೃಷ್ಣಂ ನಿಯಾನಂ ಹಿ ತಥಾ ಚತುರ್ಥೀ ಪರಿಕೀರ್ತಿತಾ ॥ ೧೫೩ ॥

ಸ್ತೋಭವೇಮುಖ್ಯವಾಗುಳ್ಳುದೂ, ಶ್ವಾಸದಲ್ಲಿ ಅಡಗಿರುವುದೂ, ಓಕಾರಾದಿಯೂ, ಆಗಿರುವುದು.

೧೪೭. ಊರ್ಧ್ವಾನು :—ಧರ್ಮ ಧರ್ಮಃ, ಸತ್ಯಂ ಹ್ಯೃತಃ, ಧರ್ಮಂ ಯೋಧರ್ಮವತ್, ಧರ್ಮೋವೈನಿಧನಂಗತಾಃ, ಇತ್ಯಾದಿಶಬ್ದಗಳುಳ್ಳ ಮಂತ್ರಗಳೇ ಜಾಪ್ಯಸಾಮವು.

೧೪೮. ಸಾಮವೇದಾಧ್ಯಯನ ಸಂಪನ್ನರಾದ ದ್ವಿಜರು ಈ ಶಬ್ದಗಳಿಂದ ಸೂರ್ಯನನ್ನು ಪೂಜಿಸಬೇಕು. ಈ ಜಾಪ್ಯಸಾಮವನ್ನು ಸೂರ್ಯನು ಉತ್ತಮವಾದುದೆಂದು ಹೇಳಿರುವನು.

೧೪೯. ಇದನ್ನು ಜಪಿಸುವ ಮಾನವನು ಮರಳಿ ಜನ್ಮವೆತ್ತದೆ ಮೋಕ್ಷವನ್ನು ಪಡೆಯುವನಲ್ಲದೆ ಸಕಲ ರೋಗಗಳಿಂದಲೂ, ಕಡೆಗೆ ಬ್ರಹ್ಮಹತ್ಯೆಯಿಂದಲೂ ಮುಕ್ತನಾಗುವನು.

೧೫೦–೧೫೧. ಆಜ್ಯದೋಹಾದ್ಯದೋಹೇತ್ಯಾದಿಗಳು ಜ್ಯೇಷ್ಠಸಾಮದ ಲಕ್ಷಣಗಳು. ಹೀಗೆ ಸೂರ್ಯನನ್ನು ಪೂಜಿಸಿ ಬಳಿಕ ಪಂಚಋಕ್ಕುಗಳಿಂದ ಸ್ತುತಿಸಬೇಕು. ಆ ಋಕ್ಕುಗಳನ್ನು ಒಮ್ಮನಸ್ಸಿನಿಂದ ಕೇಳು.

೧೫೨–೧೫೩. ಉಕ್ಷಾಣಂ ಪೃಶ್ನಿಂ, ಚತ್ವಾರಿ ವಾಕ್ಪರಿ, ಇಂದ್ರಂ ಮಿತ್ರಂ, ಕೃಷ್ಣಂ ನಿಯಾನಂ, ದ್ವಾದಶ ಪ್ರಥಮಃ ಇತ್ಯಾದಿಗಳು ಕ್ರಮವಾಗಿ ಆ ಐದು ಋಕ್ಕುಗಳಾಗಿರುವುದು. ಯೋ ರತ್ನವಾಹೀತ್ಯಾದಿ ಮಂತ್ರದಿಂದ ಸೂರ್ಯನಿಗೆ ಕಿರೀಟವನ್ನು

ದ್ವಾದಶ ಪ್ರಥಮ ಇತಿ ಪಂಚಮೀ ಪರಿಕೀರ್ತಿತಾ ।
ಯೋ ರತ್ನವಾಹೀತ್ಯನಯಾ ಕಿರೀಟಂ ಯೋಜಯೇದ್ರವೇಃ ॥ ೧೫೪ ॥
ಗತೇಹನಾಮಿತ್ಯನಯಾ ಅವ್ಯಂಗಂ ಭಾಸ್ಕರಂ ನ್ಯಸೇತ್ ।
ಅನೇನ ವಿಧಿನಾ ದೇವಿ ಪೂಜಯೇದ್ವಿಧಿವದ್ರವಿಂ ॥ ೧೫೫ ॥
ಇತ್ಯೇಷ ತೇ ಮಯಾ ಖ್ಯಾತಃ ಪ್ರತಿಮಾಪೂಜನೇ ವಿಧಿಃ ॥ ೧೫೬ ॥
ಅನೇನ ವಿಧಿನಾ ಯಸ್ತು ಸತತಂ ಪೂಜಯೇದ್ರವಿಂ ।
ಸ ಪ್ರಾಪ್ನೋತ್ಯಧಿಕಾನ್ ಕಾಮಾನಿಹ ಲೋಕೇ ಪರತ್ರ ಚ ॥ ೧೫೭ ॥
ಪುತ್ರಾರ್ಥೀ ಲಭತೇ ಪುತ್ರಂ ಧನಾರ್ಥೀ ಲಭತೇ ಧನಂ ।
ಕನ್ಯಾರ್ಥೀ ಲಭತೇ ಕನ್ಯಾಂ ವಿದ್ಯಾರ್ಥೀ ವೇದವಿದ್ಭವೇತ್ ॥ ೧೫೮ ॥
ನಿಷ್ಕಾಮಃ ಪೂಜಯೇದ್ಯಸ್ತು ಸ ಮೋಕ್ಷಂ ಯಾತಿ ವೈ ಧ್ರುವಂ ।
ಅಸ್ಯ ಕ್ಷೇತ್ರಸ್ಯ ಮಾಹಾತ್ಮ್ಯಾದರ್ಕಸೂರ್ಯಪ್ರಭಾವತಃ ॥ ೧೫೯ ॥
ಅನ್ಯತ್ರ ಬ್ರಾಹ್ಮಣಾನಾಂ ಚ ಕೋಟಿನಾ ಯತ್ಫಲಂ ಲಭೇತ್ ।
ಅರ್ಕಸ್ಥಲೇ ತದೈಕೇನ ಭೋಜಿತೇನ ತು ಯತ್ಫಲಂ ॥ ೧೬೦ ॥
ಸ್ನಾನಂ ದಾನಂ ಜಪೋ ಹೋಮಃ ಸೂರ್ಯಪರ್ವಣಿ ಯತ್ಕೃತಂ ।
ತತ್ಸರ್ವಂ ಕೋಟಿಗುಣಿತಂ ಸೂರ್ಯಕೋಟಿಪ್ರಭಾವತಃ ॥ ೧೬೧ ॥

ಡಬೇಕು. "ಗತೇಹನಾಂ" ಇತ್ಯಾದಿ ಮಂತ್ರದಿಂದ ಅವಿಕಲನಾದ ಸೂರ್ಯನನ್ನು ವಿನ್ಯಾಸ ಮಾಡಬೇಕು. ದೇವಿ ! ಈ ಕ್ರಮದಿಂದ ಸೂರ್ಯನನ್ನು ಪೂಜಿಸಬೇಕು.

೧೫೬. ಹೀಗೆ ನಿನಗೆ ಪ್ರತಿಮಾಪೂಜೆಯ ಕ್ರಮವನ್ನು ಹೇಳಿರುವೆನು.

೧೫೭. ಈ ವಿಧಿಯಿಂದ ಸೂರ್ಯನನ್ನು ಪೂಜಿಸಿದವನು ಇಹಪರಗಳಲ್ಲಿ ಅಧಿಕವಾದ ಇಷ್ಟಾರ್ಥಗಳನ್ನು ಪಡೆಯುವನು.

೧೫೮. ಪುತ್ರಾರ್ಥಿಯು ಪುತ್ರನನ್ನೂ ದ್ರವ್ಯಾರ್ಥಿಯು ದ್ರವ್ಯವನ್ನೂ. ಕನ್ಯಾರ್ಥಿಯು ಕನ್ಯೆಯನ್ನೂ ಹೊಂದುವನು. ವಿದ್ಯಾರ್ಥಿಯು ವೇದಜ್ಞನಾಗುವನು.

೧೫೯. ನಿಷ್ಕಾಮನಾಗಿ ಪೂಜಿಸಿದವನು ಈ ಕ್ಷೇತ್ರದ ಮತ್ತು ಅರ್ಕಸ್ಥಳ ಸೂರ್ಯನ ಮಾಹಾತ್ಮ್ಯದಿಂದ ಮೋಕ್ಷವನ್ನೈದುವನು.

೧೬೦. ಬೇರೆ ಕಡೆಯಲ್ಲಿ ಕೋಟಿ ಬ್ರಾಹ್ಮಣರನ್ನು ಭೋಜನ ಮಾಡಿಸಿದ ಪುಣ್ಯವು ಇಲ್ಲಿ ಒಬ್ಬ ಬ್ರಾಹ್ಮಣನನ್ನು ಭೋಜನಮಾಡಿಸುವುದರಿಂದ ಲಭಿಸುವುದು.

೧೬೧. ಈ ಅರ್ಕಸ್ಥಳದ ಮಾಹಾತ್ಮ್ಯದಿಂದ ಇಲ್ಲಿ ಅಮಾವಾಸ್ಯೆಯ ದಿನ ಮಾಡಿದ ಸ್ನಾನ, ದಾನ, ಜಪ, ಹೋಮಗಳು, ಕೋಟಿಮಡಿಯಾಗುವುವು.

ಮಾಘಮಾಸೇ ನರೋ ಯಸ್ತು ಸಪ್ತಮ್ಯಾಂ ರವಿವಾಸರೇ ।
ಕೃಷ್ಣಪಕ್ಷೇ ಮಹಾದೇವಿ ಜಾಗರಂ ಶ್ರದ್ಧಯಾಽಽಚರೇತ್ ।
ಅರ್ಕಸ್ಥಲಸಮೀಪೇ ತು ಸ ಯಾತಿ ಪರಮಾಂ ಗತಿಂ ॥ ೧೬೨ ॥
ಗೋಶತಸ್ಯ ಪ್ರದತ್ತಸ್ಯ ಕುರುಕ್ಷೇತ್ರೇ ಚ ಯತ್ಫಲಂ ।
ತತ್ಫಲಂ ಸಮವಾಪ್ನೋತಿ ತತ್ರಾರ್ಕಸ್ಥಲದರ್ಶನಾತ್ ॥ ೧೬೩ ॥
ಅರ್ಕಸ್ಥಲಃ ಪೂಜನೀಯಸ್ತತ್ರ ಸ್ಥಾನೇ ನಿವಾಸಿಭಿಃ ।
ಜಪಾಪುಷ್ಪೈರರ್ಕಪುಷ್ಪೈ ರೋಗಿಭಿಸ್ತು ವಿಶೇಷತಃ ॥ ೧೬೪ ॥
ನ ಚ ಪತ್ರೋರ್ಣಕುಸುಮೈರ್ನ ಚೈವೋನ್ಮತ್ತಸಂಭವೈಃ ।
ನ ಚಾಮ್ರಾತಕಜೈಃ ಪುಷ್ಪೈರರ್ಚನೀಯೋ ದಿವಾಕರಃ ॥ ೧೬೫ ॥
ಆಮ್ರಾತಕಸ್ಯ ಕುಸುಮಂ ನಿರ್ಮಾಲ್ಯಮಿವ ದೃಶ್ಯತೇ ।
ಅಪ್ರತ್ಯಗ್ರಂ ಬಹಿರ್ಯಸ್ಮಾತ್ತಸ್ಮಾತ್ತತ್ಪರಿವರ್ಜಯೇತ್ ॥ ೧೬೬ ॥
ನವಿಜ್ಞಾತಂ ಪ್ರದಾತವ್ಯಂ ನ ಮ್ಲಾನಂ ನ ಚ ದೂಷಿತಂ ।
ನ ಚ ಪರ್ಯುಷಿತಂ ಮಾಲ್ಯಂ ದಾತವ್ಯಂ ಭೂತಿಮಿಚ್ಛತಾ ॥ ೧೬೭ ॥

---

೧೬೨. ಮಾನವನು ಮಾಘಮಾಸದ ಕೃಷ್ಣಪಕ್ಷದ ಸಪ್ತಮೀ ಭಾನುವಾರದ ದಿನ ಶ್ರದ್ಧೆಯಿಂದ ಅರ್ಕಸ್ಥಳದ ಸಮೀಪದಲ್ಲಿ ಜಾಗರಣೆ ಮಾಡಿದರೆ ಉತ್ತಮಗತಿಯನ್ನೈದುವನು.

೧೬೩. ನರನು ಆ ಅರ್ಕಸ್ಥಳದ ದರ್ಶನಮಾತ್ರದಿಂದಲೆ ಕುರುಕ್ಷೇತ್ರದಲ್ಲಿ ನೂರು ಗೋವುಗಳನ್ನು ದಾನಮಾಡಿದ ಫಲವನ್ನು ಪಡೆಯುವನು.

೧೬೪. ಅರ್ಕಸ್ಥಳದಲ್ಲಿ ವಾಸಿಸುವರೂ, ವಿಶೇಷವಾಗಿ ರೋಗಿಗಳಾಗಿರುವರೂ ಅರ್ಕನನ್ನು ದಾಸವಾಳ ಮತ್ತು ಎಕ್ಕದ ಹೂವುಗಳಿಂದ ಪೂಜಿಸಬೇಕು.

೧೬೫. ಸೂರ್ಯನನ್ನು ಹೆಮ್ಮರ, ಉಮ್ಮತ್ತಿ, ಅಮಟೆ ಈ ಹೂವುಗಳಿಂದ ಪೂಜಿಸಬಾರದು.

೧೬೬. ಅಮಟೆಯ ಹೂವು ಹೊರಗಡೆ ಹೊಸದಾಗಿರದೆ ನಿರ್ಮಾಲ್ಯದಂತೆ ಕಾಣುವುದರಿಂದ ಅದನ್ನು ತ್ಯಜಿಸಬೇಕು.

೧೬೭. ಶ್ರೇಯಸ್ಸನ್ನು ಬಯಸುವಮಾನವನು, ತನಗೆ ತಿಳಿಯದಿರುವುದೂ, ಬಾಡಿದುದೂ, ಕೆಟ್ಟು ಹೋದುದೂ, ಹಿಂದಿನದಿನದ್ದೂ ಆಗಿರುವ ಪುಷ್ಪಮಾಲೆಯನ್ನು ಸಮರ್ಪಿಸಬಾರದು.

ದೇವಮುಲ್ಲೋಚಯೇದ್ಯಸ್ತು ತತ್ಕ್ಷಣಾತ್ಪುಷ್ಪಲೋಭತಃ ।
ಪುಷ್ಪಾಣಿ ಚ ಸುಗಂಧಾನಿ ಭೋಜಕೇನೇತರಾಣಿ ಚ ॥ ೧೬೮ ॥
ಬ್ರಹ್ಮಹತ್ಯಾಮವಾಪ್ನೋತಿ ಭೋಜಕೋ ಲೋಭಮೋಹಿತಃ ।
ಮಹಾರೌರವಮಾಸಾದ್ಯ ಪಚ್ಯತೇ ಶಾಶ್ವತೀಃ ಸಮಾಃ ॥ ೧೬೯ ॥
ಹಂತ ತೇ ಕೀರ್ತಯಿಷ್ಯಾಮಿ ಧೂಪದಾನವಿಧಿಂ ಪರಂ ।
ಪ್ರದಾನಾದ್ದೇವದೇವಸ್ಯ ಯೇನ ಧೂಪೇನ ಯತ್ಫಲಂ ॥ ೧೭೦ ॥
ಸದಾರ್ಚನೇ ಚ ಧೂಪೇನ ಸಾಮೀಪ್ಯಂ ಕುರುತೇ ರವಿಃ ।
ಪ್ರದದ್ಯಾತ್ಸಕಲಂ ಕಾಮಂ ಯದ್ಯದಿಚ್ಛತಿ ಮಾನವಃ ॥ ೧೭೧ ॥
ತಥೈವಾಗುರುಧೂಪೇನ ನಿಧಿಂ ದದ್ಯಾದಭೀಪ್ಸಿತಂ ।
ಆರೋಗ್ಯಾರ್ಥೀ ಧನಾರ್ಥೀ ಚ ನಿತ್ಯದಾ ಗುಗ್ಗುಲಂ ದಹೇತ್ ॥ ೧೭೨ ॥
ಪಿಂಡಾತಧೂಪದಾನೇನ ಸದಾ ತುಷ್ಯತಿ ಭಾನುಮಾನ್ ।
ಆರೋಗ್ಯಂ ಚ ಸ್ವಯಂ ದದ್ಯಾತ್ಸೌಖ್ಯಂ ಚ ಪರಮಂ ಭವೇತ್ ॥ ೧೭೩ ॥
ಶ್ರೀವಾಸಕಸ್ಯ ಧೂಪೇನ ವಾಣಿಜ್ಯಂ ಸಕಲಂ ಲಭೇತ್ ।
ರಸಂ ಸರ್ಜರಸಂ ಚೈವ ದಹತೋಽರ್ಥಾಗಮೋ ಭವೇತ್ ॥ ೧೭೪ ॥

೧೬೮–೧೬೯. ಸೂರ್ಯನನ್ನು ಅರ್ಚಿಸುವವನು ಪುಷ್ಪದಲ್ಲಿ ಆಶೆಯುಳ್ಳವನಾಗಿ ಪೂಜೆಯ ಹೂವುಗಳನ್ನೂ ಇತರ ಸುಗಂಧದ್ರವ್ಯಗಳನ್ನೂ ಅಪಹರಿಸಿ ಮೋಸಮಾಡಿದರೆ ಅವನು ಬ್ರಹ್ಮಹತ್ಯೆಗೀಡಾಗಿ ಮಹಾರೌರವನರಕವನ್ನು ಸೇರಿ ಅನೇಕ ಸಂವತ್ಸರಗಳ ಕಾಲವ್ಯಥೆಗೊಳ್ಳುವನು.

೧೭೦. ನಿನಗೀಗ ಧೂಪವನ್ನರ್ಪಿಸುವ ವಿಧಾನವನ್ನೂ ಯಾವ ಧೂಪವನ್ನರ್ಪಿಸಿದರೆ ಯಾವ ಫಲವು ಸಂಭವಿಸುವುದೆಂಬುದನ್ನೂ ತಿಳಿಸುವೆನು.

೧೭೧. ಧೂಪದಿಂದ ಯಾವಾಗಲೂ ಪೂಜಿಸಿದರೆ ಸೂರ್ಯನು ಬಳಿಗ್ಗೈದು ಬಂದು ಮನುಷ್ಯನು ಬಯಸಿದ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸಿಕೊಡುವನು.

೧೭೨. ಅಗುರುಧೂಪದಿಂದ ಇಷ್ಟವಾದ ನಿಧಿಯನ್ನು ಕೊಡುವನು. ಆರೋಗ್ಯವನ್ನೂ, ದ್ರವ್ಯವನ್ನೂ ಬಯಸುವವನು ಯಾವಾಗಲೂ ಗುಗ್ಗುಲಧೂಪದಿಂದ ಸೂರ್ಯದೇವನನ್ನು ಪೂಜಿಸಬೇಕು.

೧೭೩. ಪಿಂಡಾತಧೂಪದಿಂದ ಪೂಜಿಸಿದರೆ ಸೂರ್ಯನು ಸಂತುಷ್ಟನಾಗಿ ಆರೋಗ್ಯವನ್ನೂ ಸುಖವನ್ನೂ ಕೊಡುವನು.

೧೭೪. ಶ್ರೀವಾಸಕಧೂಪದಿಂದ ವಾಣಿಜ್ಯಲಾಭವೂ, ಸರ್ಜರಸ ಧೂಪದಿಂದ ದ್ರವ್ಯಪ್ರಾಪ್ತಿಯೂ ಆಗುವುದು.

ದೇವದಾರುಂ ಚ ದಹತೋ ಭವತ್ಯನ್ನಮಥಾಕ್ಷಯಂ ।
ವಿಲೇಪನಂ ಕುಂಕುಮೇನ ಸರ್ವಕಾಮಫಲಪ್ರದಂ ॥ ೧೭೫ ॥
ಇಹ ಲೋಕೇ ಸುಖೀ ಭೂತ್ವಾ ಅಕ್ಷಯಂ ಸ್ವರ್ಗಮಾಪ್ನುಯಾತ್ ।
ಚಂದನಸ್ಯ ಪ್ರಲೇಪೇನ ಶ್ರಿಯಮಾಯುಶ್ಚ ವಿಂದತಿ ॥ ೧೭೬ ॥
ರಕ್ತಚಂದನಲೇಪೇನ ಸರ್ವಂ ದದ್ಯಾದ್ದಿವಾಕರಃ ।
ಅಪಿರೋಗಶತೈರ್ಗ್ರಸ್ತಃ ಕ್ಷೇಮಮಾರೋಗ್ಯಮಾಪ್ನುಯಾತ್ ॥ ೧೭೭ ॥
ಗತಿಗಂಧಂ ಚ ಸೌಭಾಗ್ಯಂ ಪರಮಂ ವಿಂದತೇ ನರಃ ।
ಕಸ್ತೂರಿಕಾಮರ್ದನತೈರೈಶ್ವರ್ಯಮತುಲಂ ಲಭೇತ್ ॥ ೧೭೮ ॥
ಕರ್ಪೂರರಸಂಯುಕ್ತೈರ್ಗಂಧೈಃ ಕ್ಷ್ಮಾಧಿಪಾಧಿಪತಿರ್ಭವೇತ್ ।
ಚತುಃಸಮೇನ ಗಂಧೇನ ಸರ್ವಾನ್ಕಾಮಾನವಾಪ್ನುಯಾತ್ ॥ ೧೭೯ ॥
ಏತತ್ತೇ ಕಥಿತಂ ದೇವಿ ಸೂರ್ಯಮಾಹಾತ್ಮ್ಯಮುತ್ತಮಂ ।
ಸವಿಸ್ತರಂ ಮಯಾಽಽಖ್ಯಾತಂ ಕಿಮನ್ಯತ್ಪರಿಪೃಚ್ಛಸಿ ॥ ೧೮೦ ॥

ದೇವ್ಯುವಾಚ :—

ಯದ್ಯೇವಂ ಭಗವಾನ್ ಸೂರ್ಯಃ ಸರ್ವತೇಜಸ್ವಿನಾಂ ವರಃ ।
ಸ ಕಥಂ ಗ್ರಸ್ಯತೇ ದೇವ ಸೈಂಹಿಕೇಯೇನ ರಾಹುಣಾ ॥ ೧೮೧ ॥

೧೭೫–೧೭೬. ದೇವದಾರುಧೂಪದಿಂದ ಅಕ್ಷಯವಾದ ಅನ್ನವು ಲಭಿಸುವುದು. ಕುಂಕುಮದಿಂದ ಮಾನವನು ಸೂರ್ಯನ ಅನುಗ್ರಹದಿಂದ ಸಕಲೇಷ್ಟವನ್ನೂ ಪಡೆದು ಈ ಲೋಕದಲ್ಲಿ ಸುಖಿಯಾಗಿ ಪರದಲ್ಲಿ ಶಾಶ್ವತ ಸ್ವರ್ಗವನ್ನು ಹೊಂದುವನು. ಚಂದನ ಲೇಪನದಿಂದ ಸಂಪತ್ತನ್ನೂ, ಆಯುಸ್ಸನ್ನೂ ಪಡೆಯುವನು.

೧೭೭. ರಕ್ತಚಂದನ ಲೇಪನದಿಂದ ಸೂರ್ಯನು ಎಲ್ಲವನ್ನೂ ಅನುಗ್ರಹಿಸುವನು. ಈರೀತಿಯಾಗಿ ಪೂಜಿಸಿದ ಮಾನವನು ಅನೇಕ ರೋಗಗಳಿಂದ ಪೀಡಿತನಾಗಿದ್ದರೂ ಕ್ಷೇಮವನ್ನೂ, ಆರೋಗ್ಯವನ್ನೂ ಹೊಂದುತ್ತಾನೆ.

೧೭೮. ಗತಿಗಂಧದಿಂದ ಉತ್ತಮ ಸೌಭಾಗ್ಯವನ್ನೂ, ಕಸ್ತೂರಿಯಿಂದ ಅತ್ಯೈಶ್ವರ್ಯವನ್ನೂ ಪಡೆಯುವನು.

೧೭೯. ಕರ್ಪೂರಮಿಶ್ರಿತವಾದ ಗಂಧದಿಂದ ಚಕ್ರವರ್ತಿಯಾಗುವನು. ಚತುಸ್ಸಮಗಂಧದಿಂದ ಸಕಲೇಷ್ಟಗಳನ್ನೂ ಹೊಂದುವನು.

೧೮೦. ದೇವಿ! ಹೀಗೆ ನಿನಗೆ ಉತ್ತಮವಾದ ಈ ಸೂರ್ಯಮಾಹಾತ್ಮ್ಯವನ್ನು ವಿಸ್ತಾರವಾಗಿ ಹೇಳಿರುವೆನು. ಬೇರೆ ಏನನ್ನು ಕೇಳಬಯಸುವೆ ?

೧೮೧. ದೇವಿಯು ಹೇಳುತ್ತಾಳೆ:—ಓ ಪರಮೇಶ್ವರ! ಪೂಜ್ಯನಾದ ಸೂರ್ಯನು ಹೀಗೆ ಸಕಲತೇಜಸ್ವಿಗಳಲ್ಲಿ ಉತ್ತಮನಾಗಿದ್ದರೆ ಅವನನ್ನು ರಾಹುವು ಹೇಗೆನುಂಗುವನು?

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಸರ್ವಪಾಪಪ್ರಣಾಶನಂ ।
ಕಾರಣಂ ಗ್ರಹಣಸ್ಯಾಽಪಿ ಭ್ರಾಂತೇರ್ವಿಚ್ಛೇದಕಾರಕಂ ॥ ೧೮೨ ॥
ರಾಹುರಾದಿತ್ಯಬಿಂಬಸ್ಯಾಽಧಸ್ತಾತ್ತಿಷ್ಠತಿ ಭಾಮಿನಿ ।
ಅಮೃತಾರ್ಥೀ ವಿಮಾನಸ್ಥೋ ಯಾವತ್ಸಂಸ್ರವತೇಽಮೃತಂ ॥ ೧೮೩ ॥
ಬಿಂಬೇನಾಂತರಿತೋ ದೇವಿ ಆದಿತ್ಯಗ್ರಹಣಂ ಹಿ ತತ್ ।
ನ ಕಶ್ಚಿದ್ಗ್ರಸಿತುಂ ಶಕ್ತ ಆದಿತ್ಯೋ ದಹತಿ ಧ್ರುವಂ ॥ ೧೮೪ ॥
ಬ್ರಹ್ಮಾದಯಸ್ತಮರ್ಚಂತಿ ಸ ಆದಿಃ ಸರ್ವನಾಕಿನಾಂ ।
ಆದಿತ್ಯದೇಹಜಾಃ ಸರ್ವೇ ತಥಾಽನ್ಯೇ ದೇವದಾನವಾಃ ॥ ೧೮೫ ॥
ಆದಿಕರ್ತಾ ಸ್ವಯಂ ಯಸ್ಮಾದಾದಿತ್ಯಸ್ತೇನ ಚೋಚ್ಯತೇ ।
ಪ್ರಭಾಸೇ ಸಂಸ್ಥಿತೋ ದೇವಃ ಸರ್ವಪಾತಕನಾಶನಃ ॥ ೧೮೬ ॥
ಭುಕ್ತಿಮುಕ್ತಿಪ್ರದೋ ದೇವೋ ವ್ಯಾಧಿದುಷ್ಕೃತನಾಶಕೃತ್ ।
ತತ್ರ ಸಿದ್ಧಾಃ ಪುರಾ ದೇವಿ ಲೋಕಪಾಲಾ ಮಹರ್ಷಯಃ ॥ ೧೮೭ ॥

---

೧೮೨. ಈಶ್ವರನು ಹೇಳುತ್ತಾನೆ:—ದೇವಿ! ಸಕಲಪಾಪಗಳನ್ನೂ ಪರಿಹರಿಸುವುದೂ, ಭ್ರಾಂತಿಯನ್ನು ನಿವಾರಿಸುವುದೂ, ಆದ ಸೂರ್ಯಗ್ರಹಣಕ್ಕೆ ಕಾರಣವನ್ನೂ ಹೇಳುವೆನು. ಕೇಳು.

೧೮೩. ಪ್ರಿಯಳೆ! ರಾಹುವು ಆದಿತ್ಯಬಿಂಬದ ಕೆಳಗಡೆ ವಿಮಾನದಲ್ಲಿ ಆ ಬಿಂಬದಿಂದ ಅಮೃತವು ಸುರಿಯುವವರೆಗೆ ಅದನ್ನು ಅಪೇಕ್ಷಿಸುತ್ತ ನೆಲಸಿರುವನು.

೧೮೪. ರಾಹುವಿನಿಂದ ಸೂರ್ಯಬಿಂಬವು ಮರೆಯಾಗಿರುವುದರಿಂದ ಸೂರ್ಯಗ್ರಹಣವಾಗುವುದು. ಸೂರ್ಯನು ಸುಡುತ್ತಿರುವುದರಿಂದ ಅವನನ್ನು ನುಂಗಲು ಯಾರೂ ಸಮರ್ಥರಲ್ಲ.

೧೮೫. ಬ್ರಹ್ಮಾದಿದೇವತೆಗಳು ಆ ಸೂರ್ಯನನ್ನು ಪೂಜಿಸುತ್ತಾರೆ. ಅವನು ಸಕಲ ದೇವತೆಗಳಿಗೆ ಮೂಲಭೂತನು. ಇತರ ದೇವದಾನವರೆಲ್ಲ ಸೂರ್ಯನ ದೇಹದಿಂದಲೇ ಹುಟ್ಟಿರುವರು.

೧೮೬. ಸೂರ್ಯನೇ ಆದಿಕರ್ತನಾದುದರಿಂದ ಆದಿತ್ಯನೆಂಬ ಹೆಸರನ್ನು ಪಡೆದಿರುವನು. ಅವನು ಪ್ರಭಾಸಕ್ಷೇತ್ರದಲ್ಲಿ ನೆಲಸಿ ಸಕಲ ಪಾಪಗಳನ್ನು ಪರಿಹರಿಸುವನು.

೧೮೭–೧೯೩. ದೇವಿ! ಸೂರ್ಯನು ಭುಕ್ತಿಮುಕ್ತಿಗಳನ್ನೀಯುವವನೂ, ರೋಗಗಳನ್ನೂ ಪಾಪಗಳನ್ನೂ ನೀಗಿಸುವವನೂ ಆಗಿರುವನು. ಪ್ರಭಾಸಕ್ಷೇತ್ರದಲ್ಲಿ ಹಿಂದೆ

ಸಿದ್ಧಾ ವಿದ್ಯಾಧರಾ ಯಕ್ಷಾ ಗಂಧರ್ವಾ ಮುನಯಸ್ತಥಾ ।
ಧನದೋऽಪಿ ತಥಾ ಭೀಷ್ಮೋ ಯಯಾತಿರ್ಗಾಲವಸ್ತಥಾ ॥ ೧೮೮ ॥
ಸಾಂಬಶ್ಚೈವ ತಥಾ ದೇವಿ ಪರಾಂ ಸಿದ್ಧಿಮಿತೋ ಗತಾಃ ।
ಇದಂ ರಹಸ್ಯಂ ದೇವೇಶಿ ಸೂರ್ಯಮಾಹಾತ್ಮ್ಯಮುತ್ತಮಂ ॥ ೧೮೯ ॥
ನ ದೇಯಂ ದುಷ್ಟಬುದ್ಧೀನಾಂ ಪಾಪಿನಾಂ ಚ ವಿಶೇಷತಃ ।
ನ ನಾಸ್ತಿಕೇऽಶ್ರದ್ದಧಾನೇ ನ ಕ್ರೂರೇ ವಾ ಕಥಂಚನ ॥ ೧೯೦ ॥
ಇಮಾಂ ಕಥಾಮನುಬ್ರೂಯಾತ್ತಥಾ ನಾऽಸೂಯಕೇ ಶಿವೇ ।
ಇದಂ ಪುತ್ರಾಯ ಶಿಷ್ಯಾಯ ಧರ್ಮಿಣೇ ನ್ಯಾಯವರ್ತಿನೇ ॥ ೧೯೧ ॥
ಕಥನೀಯಂ ಮಹಾಬ್ರಹ್ಮ ಸೂರ್ಯಭಕ್ತಾಯ ಸುವ್ರತೇ ।
ಅರ್ಕಸ್ಥಲಸ್ಯ ದೇವಸ್ಯ ಮಾಹಾತ್ಮ್ಯಮಿದಮುತ್ತಮಂ ॥ ೧೯೨ ॥
ಯಃ ಶ್ರಾದ್ಧೇ ಶ್ರಾವಯೇದ್ದೇವಿ ಬ್ರಾಹ್ಮಣಾನ್ ಸಂಶಿತವ್ರತಾನ್ ।
ತಸ್ಯಾऽನಂತಂ ಭವೇದ್ದೇವಿ ಯದ್ದಾನಂ ಪುರುಷಸ್ಯ ವೈ ॥ ೧೯೩ ॥
ಯತ್ರೇದಂ ಕೀರ್ತ್ಯತೇ ಪುಣ್ಯಂ ಸಂಪದಸ್ತತ್ರ ವೈ ಸದಾ ।
ಯಾತುಧಾನಾ ನ ಹಿಂಸಂತಿ ತಚ್ಛ್ರಾದ್ಧಂ ಭಯವಿಹ್ವಲಾಃ ॥ ೧೯೪ ॥
ಪಂಕ್ತಿಪಾವನತಾಂ ಯಾಂತಿ ಯೇऽಪಿ ವೈ ಪಂಕ್ತಿದೂಷಕಾಃ ।
ಸುತವಾನ್ ಜನ್ಮವಾಂಶ್ಚ ಸ್ಯಾತ್ಸರ್ವಕಾಮಮನೋರಮಃ ॥ ೧೯೫ ॥

ಲೋಕಪಾಲಕರು, ಮಹರ್ಷಿಗಳು, ಸಿದ್ಧರು, ವಿದ್ಯಾಧರರು, ಯಕ್ಷರು, ಗಂಧರ್ವರು, ಮುನಿಗಳು, ಕುಬೇರ, ಭೀಷ್ಮ, ಯಯಾತಿ. ಗಾಲವ, ಸಾಂಬ ಮೊದಲಾದವರು ಇಷ್ಟಾರ್ಥಸಿದ್ಧಿಯನ್ನು ಪಡೆದಿರುವರು. ರಹಸ್ಯವಾದ ಈ ಸೂರ್ಯಮಾಹಾತ್ಮ್ಯ ವನ್ನು ದುಷ್ಟರು, ಪಾಪಿಗಳು, ನಾಸ್ತಿಕರು, ಶ್ರದ್ಧೆಯಿಲ್ಲದವರು, ಕಠಿನರು, ಅಸೂಯೆ ಯುಳ್ಳವರು ಇವರಿಗೆ ಹೇಳಕೂಡದು. ಇದು ಮಗನಿಗೂ, ಧರ್ಮಿಷ್ಠನೂ, ನ್ಯಾಯ ವನ್ನನುಸರಿಸುವವನೂ ಆಗಿರುವ ಶಿಷ್ಯನಿಗೂ, ಸೂರ್ಯಭಕ್ತನಿಗೂ ಹೇಳತಕ್ಕದು. ಈ ಉತ್ತಮ ಸೂರ್ಯಮಾಹಾತ್ಮ್ಯವನ್ನು ಶ್ರಾದ್ಧಸಮಯದಲ್ಲಿ ವ್ರತಿಗಳಾದ ಬ್ರಾಹ್ಮಣ ರಿಗೆ ಕೇಳುವಂತೆ ಹೇಳಿದರೆ ಆ ಮನುಷ್ಯನು ಮಾಡಿದ ದಾನವು ಅನಂತವಾಗುವುದು.

೧೯೪. ಪುಣ್ಯಕರವಾದ ಈ ಮಾಹಾತ್ಮ್ಯವನ್ನು ಹೇಳಿದ ಸ್ಥಳದಲ್ಲಿ ಸಂಪತ್ತು ಗಳು ಒದಗುವುವು. ರಾಕ್ಷಸರು ಭಯಭ್ರಾಂತರಾಗಿ ಹಿಂಸಿಸುವುದಿಲ್ಲ.

೧೯೫. ಪಂಕ್ತಿ ದುಷ್ಟರಾದವರು ಪಂಕ್ತಿ ಪಾವನತೆಯನ್ನು ಪಡೆಯುವರು. ಹೇಳಿದವನು ಒಳ್ಳೆಯ ಮಕ್ಕಳನ್ನೂ, ಜನ್ಮವನ್ನೂ ಪಡೆದು ಸಕಲೇಷ್ಟಾರ್ಥಗಳನ್ನೂ ಹೊಂದುವನು.

ಪ್ರವಾಸಿಭಿರ್ಬಂಧುವರ್ಗೈಃ ಸಂಯುಜ್ಯೇತ ಸದಾ ನರಃ ।
ನಷ್ಟೈಃ ಸಂಯುಜ್ಯತೇ ಚಾಽರ್ಥೈರಪರೈಶ್ಚಾಽಪಿ ಚಿಂತಿತೈಃ ॥ ೧೯೬ ॥
ರಕ್ಷ್ಯತೇ ಯೋಗಿನೀಭಿಶ್ಚ ಪ್ರಿಯೈಶ್ಚ ನ ವಿಯುಜ್ಯತೇ ।
ಉಪಸ್ಪೃಶ್ಯ ಶುಚಿರ್ಭೂತ್ವಾ ಶೃಣುಯಾದ್ಬ್ರಾಹ್ಮಣಃ ಸದಾ ।
ಸರ್ವಾನ್ ಕಾಮಾಂಶ್ಚ ಲಭತೇ ನಾಽತ್ರ ಕಾರ್ಯಾ ವಿಚಾರಣಾ ॥ ೧೯೭ ॥
ವೈಶ್ಯಃ ಸಮೃದ್ಧಿಮತುಲಾಂ ಕ್ಷತ್ರಿಯಃ ಪೃಥಿವೀಪತಿಃ ।
ವಣಿಜಶ್ಚಾಽಪಿ ವಾಣಿಜ್ಯಮಖಂಡಂ ಶತಸಂಖ್ಯಯಾ ।
ಲಭೇಯುಃ ಕೀರ್ತನಾದಸ್ಯಾಃ ಸೂರ್ಯೋತ್ಪತ್ತೇರ್ವರಾನನೇ ॥ ೧೯೮ ॥
ಶೂದ್ರಾಶ್ಚೈವಾಽಭಿಲಷಿತಾನ್ ಕಾಮಾನ್ ಪ್ರಾಪ್ಸ್ಯಂತಿ ಭಾಮಿನಿ ।
ಅಪಮೃತ್ಯುಭಯಂ ಘೋರಂ ಮೃತ್ಯುತೋಽಪಿ ಮಹಾಭಯಂ ॥ ೧೯೯ ॥
ನಶ್ಯತೇ ನಾಽತ್ರ ಸಂದೇಹೋ ರಾಜದ್ವಾರಕೃತಂ ಚ ಯತ್ ।
ಸರ್ವಕಾಮಸಮೃದ್ಧಾತ್ಮಾ ಸೂರ್ಯಲೋಕೇ ಮಹೀಯತೇ ॥ ೨೦೦ ॥
ಇತ್ಯೇತತ್ಕಥಿತಂ ದೇವಿ ಮಾಹಾತ್ಮ್ಯಂ ಸೂರ್ಯದೈವತಂ ।
ಅರ್ಕಸ್ಥಲಪ್ರಸಂಗೇನ ಕಿಮನ್ಯಚ್ಛ್ರೋತುಮಿಚ್ಛಸಿ ॥ ೨೦೧ ॥
ಸ್ಥಾನಂ ಶಾಶ್ವತಮೋಜಸಾಂ ಗತಿರಪಾಂ ದೀಪೋ ದಿಶಾಮಕ್ಷಯಃ ।
ಸಿದ್ಧೇರ್ದ್ವಾರಮುಪಾಯಭೇದಿ ಜಗತಾಂ ಸಾಧಾರಣಂ ಲೋಚನಂ ।

---

೧೯೬. ದೇಶಾಂತರಕ್ಕೆ ಹೋಗಿದ್ದ ಬಂಧುಗಳನ್ನು ಮರಳಿ ಸೇರುವನು. ನಷ್ಟ ದ್ರವ್ಯಗಳನ್ನೂ, ಇತರ ಅಭೀಷ್ಟಗಳನ್ನೂ ಪಡೆಯುವನು.

೧೯೭. ಯೋಗಿನಿಯರಿಂದ ರಕ್ಷಿಸಲ್ಪಡುವನು. ಪ್ರಿಯವಸ್ತುಗಳಿಂದ ಅಗಲುವುದಿಲ್ಲ. ಬ್ರಾಹ್ಮಣನು ಆಚಮನಮಾಡಿ ಶುದ್ಧನಾಗಿ ಕೇಳಿದರೆ ಸಕಲೇಷ್ಟಾರ್ಥಗಳನ್ನು ಹೊಂದುವನು. ಸಂದೇಹವಿಲ್ಲ.

೧೯೮–೨೦೦. ಇದನ್ನು ಕೇಳುವುದರಿಂದ ಶೂದ್ರನೂ ಸಮಸ್ತಾಭೀಷ್ಟಗಳನ್ನು ಪಡೆಯುವನು. ಮತ್ತು ಭಯಂಕರವಾದ ಅಪಮೃತ್ಯುಭಯವೂ, ಮೃತ್ಯುಭಯವೂ, ರಾಜನಿಂದುಂಟಾದ ಭಯವೂ ಪರಿಹಾರವಾಗಿ ಸಕಲೇಷ್ಟಾರ್ಥಗಳನ್ನೂ ಪಡೆದು ಸೂರ್ಯ ಲೋಕದಲ್ಲಿ ಪೂಜ್ಯನಾಗುವನು.

೨೦೧. ದೇವಿ ! ಅರ್ಕಸ್ಥಳದ ಪ್ರಸ್ತಾವದಿಂದ ಸೂರ್ಯನ ಈ ಮಾಹಾತ್ಮ್ಯವನ್ನು ಹೇಳಿರುವೆನು. ಬೇರೆ ಇನ್ನೇನನ್ನು ಕೇಳಬಯಸುವೆ ?

೨೦೨. ತೇಜಸ್ಸುಗಳಿಗೆ ಶಾಶ್ವತಸ್ಥಾನವೂ, ನೀರನ್ನು ಪಡೆಯಲು ಮಾರ್ಗವೂ, ದಿಕ್ಕುಗಳಿಗೆ ಅಕ್ಷಯದೀಪವೂ, ಇಷ್ಟಸಿದ್ಧಿಗೆ ಉಪಾಯವನ್ನು ನಿವಾರಿಸುವ ಬಾಗಿಲೂ,

ಹೈಮಂ ಪುಷ್ಕರಮಂತರಿಕ್ಷಸರಸೋ ದೀಪ್ತಂ ದಿವಃ ಕುಂಡಲಂ ।
ಕಾಲೋನ್ಮಾನವಿಭಾವನಾಕ್ಷತಲಯಂ ಬಿಂಬಂ ರವೇಃ ಪಾತು ವಃ ॥೨೦೩॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇಽರ್ಕಸ್ಥಲ
ಮಾಹಾತ್ಮ್ಯೇಽರ್ಕಸ್ಥಲಪೂಜಾವಿಧಾನಾದಿವರ್ಣನಂ ನಾಮ
॥ ಸಪ್ತದಶೋಽಧ್ಯಾಯಃ ॥

ಜಗತ್ತುಗಳಿಗೆ ಸಾಮಾನ್ಯಲೋಚನವೂ, ಆಕಾಶವೆಂಬ ಸರೋವರದ ಸುವರ್ಣ ಕಮಲವೂ, ಸ್ವರ್ಗದ ದೇದೀಪ್ಯಮಾನವಾದ ಕುಂಡಲವೂ, ಕಾಲಪರಿಮಾಣ ವನ್ನರಿಯಲು ಅಕ್ಷಯಕಾರಣವೂ ಆದ ಸೂರ್ಯಬಿಂಬವು ನಿಮ್ಮನ್ನೂ, ನಮ್ಮನ್ನೂ ಕಾಪಾಡಲಿ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಅರ್ಕಸ್ಥಳಮಾಹಾತ್ಮ್ಯೆ ಅರ್ಕಸ್ಥಳ
ಪೂಜಾವಿಧಾನಾದಿವರ್ಣನವೆಂಬ
ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾದಶೋಽಧ್ಯಾಯಃ

ಶಿವಶಿರೋಭೂಷಣಚಂದ್ರೋತ್ಪತ್ತಿವರ್ಣನಂ

ಸೂತ ಉವಾಚ :—

ಇತಿ ಪ್ರೋಕ್ತಾ ತದಾ ದೇವೀ ಶಂಕರೇಣ ಯಶಸ್ವಿನೀ ।
ಪುನಃ ಪಪ್ರಚ್ಛ ವಿಪ್ರೇಂದ್ರಾಃ ಕ್ಷೇತ್ರಮಾಹಾತ್ಮ್ಯವಿಸ್ತರಂ ॥ ೧ ॥

ದೇವ್ಯುವಾಚ :—

ಅದ್ಯ ಮೇ ಸಫಲಂ ಜನ್ಮ ಸಫಲಂ ಚ ತಪಃ ಪ್ರಭೋ ।
ದೇವತ್ವಮದ್ಯ ಮೇ ಜಾತಂ ತ್ವತ್ಪ್ರಸಾದೇನ ಶಂಕರ ॥ ೨ ॥
ಅದ್ಯಾಽಹಂ ಕೃತಕಲ್ಯಾಣೀ ಜ್ಞಾನದೃಷ್ಟಿಃ ಕೃತಾ ತ್ವಯಾ ।
ಅದ್ಯ ಮೇ ಭೂಷಿತೌ ಕರ್ಣೌ ಕ್ಷೇತ್ರಮಾಹಾತ್ಮ್ಯಭೂಷಣೌ ॥ ೩ ॥
ಅದ್ಯ ಮೇ ತೇಜಸಃ ಪಿಂಡೋ ಜಾತೋ ಜ್ಞಾನಂ ಹೃದಿ ಸ್ಥಿತಂ ।
ಅದ್ಯ ಮೇ ಕುಲಶೀಲಂ ಚ ಅದ್ಯ ಮೇ ರೂಪಲಕ್ಷಣಂ ॥ ೪ ॥

ಕನ್ನಡದ ಅನುವಾದ

ಶಿವಶ್ಶಿರೋಭೂಷಣಚಂದ್ರೋತ್ಪತ್ತಿವರ್ಣನ

೧. ಸೂತನು ಹೇಳುತ್ತಾನೆ :—ದ್ವಿಜರೆ ಶಂಕರನು ಹೀಗೆ ಹೇಳಲು ಪಾರ್ವತಿಯು ತಿರುಗಿಯೂ ಆ ಪ್ರಭಾಸಕ್ಷೇತ್ರ ಕ್ಷೇತ್ರಮಾಹಾತ್ಮ್ಯವನ್ನು ಕುರಿತು ವಿಸ್ತಾರವಾಗಿ ಹೇಳಬೇಕೆಂದು ಪ್ರಶ್ನಿಸಿದಳು.

೨. ದೇವಿಯು ಹೇಳುತ್ತಾಳೆ :—ಶಂಕರ ! ಈಗ ನಿನ್ನ ಅನುಗ್ರಹದಿಂದ ನನ್ನ ಜನ್ಮವೂ, ತಪಸ್ಸೂ, ದೇವತ್ವವೂ ಸಫಲವಾದುವು.

೩. ಈಗ ನೀನು ನನಗೆ ಜ್ಞಾನದೃಷ್ಟಿಯನ್ನುಂಟುಮಾಡಿರುವೆ. ಈ ಕ್ಷೇತ್ರ ಮಾಹಾತ್ಮ್ಯವನ್ನು ಕೇಳಿರುವುದರಿಂದ ನನ್ನ ಕರ್ಣಗಳು ಅಲಂಕಾರಗೊಂಡುವು.

೪. ಈಗ ನನ್ನ ಹೃದಯದಲ್ಲಿರುವ ಜ್ಞಾನವು ತೇಜಸ್ಸಿನ ಪಿಂಡವಾಯಿತು. ಈಗ ನನ್ನ ವಂಶ, ಶೀಲ, ರೂಪಗಳು ಉತ್ತಮಗೊಂಡುವು.

ಅದ್ಯ ಮೇ ಭ್ರಾಂತಿರುಚ್ಛಿನ್ನಾ ತೀರ್ಥಭ್ರಮಣಸಂಭವಾ ।
ಪ್ರಭಾಸೇ ನಿಶ್ಚಲಂ ಜಾತಂ ಮನೋ ಮೇ ಮಾನಿನಾಂ ವರ ॥ ೫ ॥
ಆರಾಧಿತೋ ಮಯಾ ಪೂರ್ವಂ ತುಷ್ಟೋ ಮೇಽದ್ಯ ಸುರೇಶ್ವರಃ ।
ವಹ್ನಿನಾ ವೇಷ್ಟಿತಾ ಸಾಽಹಮೇಕಪಾದೇನ ಸಂಸ್ಥಿತಾ ॥ ೬ ॥
ತತ್ತಪಃ ಸಫಲಂ ತ್ವದ್ಯ ಜಾತಂ ಮೇ ಭಕ್ತವತ್ಸಲ ।
ಪ್ರಭಾಸಕ್ಷೇತ್ರಮಾಹಾತ್ಮ್ಯಮದ್ಯ ಮೇ ಪ್ರಕಟೀಕೃತಂ ॥ ೭ ॥
ಪುನಃ ಪೃಚ್ಛಾಮಿ ದೇವೇಶ ಯಾಥಾತಥ್ಯಂ ವದ ಪ್ರಭೋ ॥ ೮ ॥
ಅದ್ಯಾಽಪಿ ಸಂಶಯೋ ನಾಽಥ ತೀರ್ಥಮಾಹಾತ್ಮ್ಯಸಂಭವಃ ।
ಅನ್ಯತ್ಕೌತೂಹಲಂ ದೇವ ಕಥಯಸ್ವ ಮಹೇಶ್ವರ ॥ ೯ ॥
ಅಯಂ ಯೋ ವರ್ತತೇ ದೇವ ಚಂದ್ರಸ್ತೇ ಶಿರಸಿ ಸ್ಥಿತಃ ।
ಕಸ್ಮಾಽಯಂ ಕಥಮುತ್ಪನ್ನಃ ಕಸ್ಮಿನ್ಕಾಲೇ ವದ ಪ್ರಭೋ ॥ ೧೦ ॥

ಈಶ್ವರ ಉವಾಚ :—

ಅಸ್ಮಿನ್ಕಾಲೇ ಮಹಾದೇವಿ ವಾರಾಹ ಇತಿ ವಿಶ್ರುತೇ ।
ಪರಾರ್ಧೇ ತು ದ್ವಿತೀಯೇಽಸ್ಮಿನ್ ವರ್ತಮಾನೇ ತು ವೇಧಸಃ ॥ ೧೧ ॥

---

೫. ಮಾನಿಗಳಲ್ಲಿ ಉತ್ತಮನಾದ ಶಂಕರನೆ ! ಈಗ ನನ್ನ ತೀರ್ಥಯಾತ್ರೆ ಮಾಡಬೇಕೆಂಬ ಭ್ರಾಂತಿಯು ನಷ್ಟವಾಯಿತು. ನನ್ನ ಮನಸ್ಸು ಪ್ರಭಾಸದಲ್ಲಿ ಸ್ಥಿರಗೊಂಡಿತು.

೬. ಹಿಂದೆ ನಾನು ಅಗ್ನಿಮಧ್ಯದಲ್ಲಿ ಒಂದಡಿಯಿಂದ ನಿಂತು ಆರಾಧಿಸಿದ ಸುರೋತ್ತಮನಾದ ನೀನು ನನ್ನಲ್ಲಿ ಇದೀಗ ಪ್ರಸನ್ನನಾಗಿರುವೆ.

೭. ಭಕ್ತವತ್ಸಲನಾದ ಶಂಕರ ! ಈಗ ನೀನು ಪ್ರಭಾಸಕ್ಷೇತ್ರಮಾಹಾತ್ಮ್ಯವನ್ನು ಪ್ರಕಟಿಸಿರುವುದರಿಂದ ನನ್ನ ಆ ತಪಸ್ಸು ಸಫಲವಾಯಿತು.

೮. ದೇವೇಶ ! ಮರಳಿ ಕೇಳುವೆನು. ನಿಜಸ್ಥಿತಿಯನ್ನು ಹೇಳು.

೯. ನಾಥ ! ಈಗಲೂ ನನಗೆ ತೀರ್ಥಮಾಹಾತ್ಮ್ಯದ ವಿಷಯದಲ್ಲಿ ಸಂದೇಹವಿರುವುದು. ಅದನ್ನು ಕೇಳಲು ಕುತೂಹಲವುಂಟಾಗಿರುವುದು. ನೀನದನ್ನು ಹೇಳಿ ಸಂದೇಹವನ್ನು ಪರಿಹರಿಸು.

೧೦. ಸ್ವಾಮಿ! ನಿನ್ನ ತಲೆಯಲ್ಲಿರುವ ಚಂದ್ರನು ಎಲ್ಲಿಯವನು? ಯಾವಾಗ ಎಲ್ಲಿ ಹುಟ್ಟಿದನು ? ಹೇಳು.

೧೧–೧೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಈ ವಾರಾಹಕಲ್ಪದಲ್ಲಿ ಬ್ರಹ್ಮನ ಎರಡನೆ ಪರಾರ್ಧದ ಎರಡನೆ ತಿಂಗಳ ಪಾಡ್ಯದ ದಿನ ವರಾಹರೂಪಿಯಾದ

ದ್ವಿತೀಯಮಾಸಸ್ಯಾದೌ ತು ಪ್ರತಿಪದ್ಯಾ ಪ್ರಕೀರ್ತಿತಾ ।
ವಾರಾಹೇಣೋದ್ಧೃತಾ ತಸ್ಯಾಂ ತಥಾ ಚಾಽಽದೌ ಧರಾ ಪ್ರಿಯೇ ।
ತೇನ ವಾರಾಹಕಲ್ಪೇತಿ ನಾಮ ಜಾತಂ ಧರಾತಲೇ ॥ ೧೨ ॥

ತಸ್ಮಿನ್ಕಲ್ಪೇ ಮಹಾದೇವಿ ಗತೇ ಸಂಧ್ಯಾಂಶಕೇ ಪ್ರಿಯೇ ।
ಪ್ರಥಮಸ್ಯ ಮನೋಶ್ಚಾದೌ ದೇವಿ ಸ್ವಾಯಂಭುವಸ್ಯ ಹಿ ॥ ೧೩ ॥

ಕ್ಷೀರೋದೇ ಮಥ್ಯಮಾನೇ ತು ದೇವತೈರ್ದಾನವೈರಪಿ ।
ರತ್ನಾನಿ ಜಜ್ಞಿರೇ ತತ್ರ ಚತುರ್ದಶಮಿತಾನಿ ವೈ ॥ ೧೪ ॥

ತೇಷಾಂ ಮಧ್ಯೇ ಮಹಾತೇಜಾಶ್ಚಂದ್ರಮಾಸ್ತತ್ರಸಂಭವಃ ।
ಸೋಽಯಂ ಮಯಾ ಧೃತೋ ದೇವಿ ಅದ್ಯಾಽಪಿ ಶಿರಸಿ ಪ್ರಿಯೇ ॥ ೧೫ ॥

ವಿಷೇ ಪೀತೇ ಮಹಾದೇವಿ ಪ್ರಭಾಸಸ್ಥಸ್ಯ ಮೇ ಸದಾ ।
ಭೂಷಣಂ ಮುಕ್ತಯೇ ದೇವೈರ್ಮಮ ಚಂದ್ರಃ ಕೃತಃ ಪುರಾ ॥ ೧೬ ॥

ಶಶಿನಾ ಭೂಷಿತೋ ಯಸ್ಮಾತ್ತೇನಾಽಹಂ ಶಶಿಭೂಷಣಃ ।
ತತ್ರ ಸ್ಥಾನೇ ಸ್ಥಿತೋಽದ್ಯಾಪಿ ಸ್ವಯಂಭೂರ್ಲಿಂಗಮೂರ್ತಿಮಾನ್ ॥ ೧೭ ॥

ವಿಷ್ಣುವು ಭೂಮಿಯನ್ನು ಉದ್ಧಾರಮಾಡಿದುದರಿಂದ ಇದು ವರಾಹಕಲ್ಪವೆಂದು ಭೂಮಿಯಲ್ಲಿ ಪ್ರಸಿದ್ಧವಾಯಿತು.

೧೩–೧೪. ಈ ವರಾಹಕಲ್ಪದಲ್ಲಿ ಸಂಧ್ಯಾಂಶವು ಕಳೆಯಲು ಮೊದಲನೆಯ ಸ್ವಾಯಂಭುವಮನುವಿನ ಆದಿಕಾಲದಲ್ಲಿ ದೇವದಾನವರು ಕ್ಷೀರಸಮುದ್ರವನ್ನು ಕಡೆಯುತ್ತಿರುವಾಗ ಹದಿನಾಲ್ಕು ರತ್ನಗಳು ಹುಟ್ಟಿದುವು.

೧೫. ಅವುಗಳಲ್ಲಿ ಈ ಚಂದ್ರರತ್ನವನ್ನು ನಾನು ತೆಗೆದುಕೊಂಡು ತಲೆಯಲ್ಲಿ ಧರಿಸಿದೆನು.

೧೬. ಹಿಂದೆ ಪ್ರಭಾಸವಾಸಿಯಾದ ನಾನು ಹಾಲಾಹಲವಿಷವನ್ನು ಕುಡಿಯಲು ದೇವತೆಗಳು ನನಗೆ ಚಂದ್ರನನ್ನು ಅಲಂಕಾರವಾಗಿ ಮಾಡಿದರು.

೧೭–೧೮. ನಾನು ಶಶಿಯಿಂದಲಂಕಾರಗೊಂಡುದರಿಂದ ಶಶಿಭೂಷಣನಾದೆನು. ಈಗಲೂ ಪ್ರಭಾಸದಲ್ಲಿ ನಾನು ಸಕಲ ಸಿದ್ಧಿಯನ್ನೀಯುವವನೂ, ಕಲ್ಪದ

ಸರ್ವಸಿದ್ಧಿಪ್ರದಾತಾ ಚ ಕಲ್ಪಸ್ಥಾಯೀ ಸದಾ ಪ್ರಿಯೇ ।
ಇತ್ಯೇತತ್ಕಥಿತಂ ದೇವಿ ಕಿಮನ್ಯತ್ಪರಿಪೃಚ್ಛಸಿ ॥ ೧೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಿವಶಿರೋಭೂಷಣಚಂದ್ರೋತ್ಪತ್ತಿವರ್ಣನಂ ನಾಮ
॥ ಅಷ್ಟಾದಶೋಽಧ್ಯಾಯಃ ॥

ವರೆಗೆ ಇರುವವನೂ ಆದ ಸ್ವಯಂಭುಲಿಂಗವಾಗಿ ನೆಲೆಸಿರುವೆನು. ದೇವಿ ! ಈ ವೃತ್ತಾಂತವನ್ನು ನಿನಗೆ ಹೇಳಿರುವೆನು. ಬೇರೆ ಏನನ್ನು ಕೇಳುವೆ ?

ಇಲ್ಲಿಗೆ ಎಂಬತ್ತೊಂದುಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯಪ್ರಭಾಸಕ್ಷೇತ್ರದಲ್ಲಿ
ಶಿವಶಿರೋಭೂಷಣಚಂದ್ರೋತ್ಪತ್ತಿವರ್ಣನವೆಂಬ
ಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನವಿಂಶೋಽಧ್ಯಾಯಃ

ಶ್ರೀವಿಷ್ಣ್ವವತಾರವರ್ಣನಂ

ದೇವ್ಯುವಾಚ:—

ಯದ್ಯೇವಂ ಸಕಲಶ್ಚಂದ್ರಃ ಕಥಂ ನ ವಿಧೃತಸ್ತ್ವಯಾ ।
ಅಂತಭಾವೇ ಕಲಾನಾಂ ತತ್ಕಾರಣಂ ಕಥಯ ಪ್ರಭೋ ॥ ೧ ॥

ಈಶ್ವರ ಉವಾಚ :—

ಅಮಾ ಷೋಡಶಭೇದೇನ ದೇವಿ ಪ್ರೋಕ್ತಾ ಮಹಾಕಲಾ ।
ಸಂಸ್ಥಿತಾ ಪರಮಾ ಮಾಯಾ ದೇಹಿನಾಂ ದೇಹಧಾರಿಣೀ ॥ ೨ ॥
ಅಮಾದಿಪೌರ್ಣಮಾಸ್ಯಂತಾ ಯಾ ಏವ ಶಶಿನಃ ಕಲಾಃ ।
ತಿಥಯಸ್ತಾಃ ಸಮಾಖ್ಯಾತಾಃ ಷೋಡಶೈವ ಪ್ರಕೀರ್ತಿತಾಃ ॥ ೩ ॥
ಅಮಾ ಸೂಕ್ಷ್ಮಾ ಪರಾ ಶಕ್ತಿಃ ಸಾ ತ್ವಂ ದೇವಿ ಪ್ರಕೀರ್ತಿತಾ ।
ಪ್ರಲಯೋತ್ಪತ್ತಿಯೋಗೇನ ಸ್ಥಿತಾಃ ಕಾಲಕ್ರಮೋದಿತಾಃ ॥ ೪ ॥
ಷೋಡಶೈವ ಸ್ವರಾ ಯೇ ತು ಆದ್ಯಾಃ ಸೃಷ್ಟ್ಯಂತಕಾಃ ಪ್ರಿಯೇ ।
ಕಾಲಸ್ಯಾಽವಯವಾಸ್ತೇ ಚ ವಿಜ್ಞೇಯಾಃ ಕಾಲವೇದಿಭಿಃ ॥ ೫ ॥

ಕನ್ನಡದ ಅನುವಾದ

ಶ್ರೀವಿಷ್ಣ್ವವತಾರವರ್ಣನ

೧. ದೇವಿಯು ಕೇಳುತ್ತಾಳೆ:—ನಾಥ! ಹಾಗಾದರೆ ನೀನು ಪೂರ್ಣ ಚಂದ್ರನನ್ನೇಕೆ ಧರಿಸಲಿಲ್ಲ? ಕಲೆಗಳನ್ನು ಅಡಗಿಸಿರುವುದಕ್ಕೆ ಕಾರಣವೇನು? ಹೇಳು.

೨. ಈಶ್ವರನು ಹೇಳುತ್ತಾನೆ:—ದೇವಿ! ಅಮಾ ಎಂಬ ಮಹಾಕಲೆಯು ಹದಿನಾರು ವಿಧವಾಗಿ ದೇಹವನ್ನು ಧರಿಸಿದ ಮಾಯಾಶಕ್ತಿಯಾಗಿರುವುದು.

೩. ಅಮಾವಾಸ್ಯೆಯಿಂದ ಪೂರ್ಣಿಮೆಯ ವರೆಗಿರುವ ಚಂದ್ರನ ಕಲೆಗಳೇ ಹದಿನಾರು ತಿಥಿಗಳಾಗಿರುವುವು.

೪–೫. ದೇವಿ! ಅಮಾ ಎಂಬ ಸೂಕ್ಷ್ಮವಾದ ಪರಾಶಕ್ತಿಯೇ ನೀನಾಗಿರುವೆ. ಕಾಲಕ್ರಮದಿಂದ ಹೇಳಲ್ಪಟ್ಟ ಸೃಷ್ಟಿಪ್ರಲಯ ಸಂಬಂಧದಿಂದ ಹದಿನಾರು ವಿಧವಾದ ಸ್ವರಗಳು, ಕಾಲದ ಅವಯವಗಳೆಂದು ಕಾಲಜ್ಞರು ತಿಳಿಯುತ್ತಾರೆ.

ತ್ರುಟಿರ್ಲವೋ ನಿಮೇಷಶ್ಚ ಕಲಾ ಕಾಷ್ಠಾ ಮುಹೂರ್ತಕಂ ।
ರಾತ್ರ್ಯಹಃ ಪಕ್ಷಮಾಸಾಶ್ಚ ಅಯನಂ ವತ್ಸರಂ ಯುಗಂ ॥ ೬ ॥
ಮನ್ವಂತರಂ ತಥಾ ಕಲ್ಪಂ ಮಹಾಕಲ್ಪಂ ಚ ಷೋಡಶ ।
ಕಲಾ ವಿಸರ್ಜನೀ ಯಾ ತು ಜೀವಮಾಶ್ರಿತ್ಯ ವರ್ತತೇ ॥ ೭ ॥
ಸಾ ಸೃಜತ್ಯಖಿಲಂ ವಿಶ್ವಂ ವಿಷುವದ್ದ್ವಯಸಂಯುತಂ ।
ತಥಾ ಸಂವರಣೀ ಯಾ ತು ವಿಶ್ವಂ ಸಂಹರತೇ ಪ್ರಿಯೇ ॥ ೮ ॥
ನೇತ್ರಪಾತಾಚ್ಚತುರ್ಭಾಗಸ್ತ್ರುಟಿಕಾಲೋ ನಿಗದ್ಯತೇ ।
ತಸ್ಮಾಚ್ಚ ದ್ವಿಗುಣಂ ವಿದ್ಧಿ ನಿಮಿಷಂ ತನ್ಮಹೇಶ್ವರಿ ॥ ೯ ॥
ನಿಮಿಷೈಸ್ತ್ರಿಂಶದ್ಭಿಃ ಕಾಷ್ಠಾ ತಾಭಿರ್ವಿಂಶತಿಭಿಃ ಕಲಾ ।
ವಿಂಶತಿಕಲೋ ಮುಹೂರ್ತಃ ಸ್ಯಾದ್ದಿನಂ ಪಂಚದಶೈಸ್ತು ತೈಃ ॥ ೧೦ ॥
ದಿನಮಾನಾ ನಿಶಾ ಜ್ಞೇಯಾ ಅಹೋರಾತ್ರಂ ದ್ವಯಾದ್ಭವೇತ್ ।
ತೈಃ ಪಂಚದಶಭಿಃ ಪಕ್ಷೋ ದ್ವಿಪಕ್ಷೋ ಮಾಸ ಉಚ್ಯತೇ ॥ ೧೧ ॥
ಮಾಸೈಶ್ಚೈವಾಯನಂ ಷಡ್ಭಿರ್ವರ್ಷಂ ಸ್ಯಾದಯನದ್ವಯೇ ।
ಚತ್ವಾರಿಂಶಚ್ಚ ಲಕ್ಷಾಣಿ ಲಕ್ಷಾಣಾಂ ತ್ರಿತಯಂ ಪುನಃ ॥ ೧೨ ॥

೬-೮. ತ್ರುಟಿ, ಲವ, ನಿಮೇಷ, ಕಲಾ, ಕಾಷ್ಠಾ, ಮುಹೂರ್ತ, ರಾತ್ರಿ, ದಿನ, ಪಕ್ಷ, ಮಾಸ, ಅಯನ, ಸಂವತ್ಸರ, ಯುಗ, ಮನ್ವಂತರ, ಕಲ್ಪ, ಮಹಾಕಲ್ಪವೆಂದು ಕಾಲವು ಹದಿನಾರು ಬಗೆಯಾಗಿರುವುದು. ವಿಸರ್ಜನೀ ಎಂಬ ಕಳೆಯು ಜೀವನನ್ನಾಶ್ರಯಿಸಿರುವುದು. ಅದು ಎರಡು ದಿನಗಳಲ್ಲಿ ಸಕಲ ಪ್ರಪಂಚವನ್ನು ಸೃಜಿಸುವುದು ಸಂವರಣೀ ಎಂಬ ಕಳೆಯು ವಿಶ್ವವನ್ನು ಸಂಹರಿಸುವುದು.

೯. ರೆಪ್ಪೆಹಾಕುವುದರ ನಾಲ್ಕನೆ ಒಂದು ಭಾಗವು ತ್ರುಟಿಕಾಲವೆನ್ನಿಸುವುದು. ಅದರ ಎರಡು ಭಾಗವು ನಿಮೇಷಕಾಲವು.

೧೦-೧೩. ಮೂವತ್ತು ನಿಮಿಷಗಳಿಂದ ಕಳೆಯೂ, ಇಪ್ಪತ್ತು ಕಲೆಗಳಿಂದ ಕಾಷ್ಠೆಯೂ, ವಿಂಶತಿ ಕಲೆಗಳಿಂದ ಮುಹೂರ್ತವೂ, ಹದಿನೈದು ಮುಹೂರ್ತಗಳಿಂದ ದಿನವೂ, ರಾತ್ರಿಯೂ ಇವುಗಳೆರಡೂ ಸೇರುವುದರಿಂದ ಅಹೋರಾತ್ರವೂ, ಹದಿನೈದು ಅಹೋರಾತ್ರಗಳಿಂದ ಪಕ್ಷವೂ, ಎರಡು ಪಕ್ಷಗಳಿಂದ ತಿಂಗಳೂ, ಆರು ತಿಂಗಳುಗಳಿಂದ ಅಯನವೂ, ಎರಡು ಅಯನಗಳಿಂದ ವರ್ಷವೂ, ನಲವತ್ತಮೂರು

ವಿಂಶತಿಶ್ಚ ಸಹಸ್ರಾಣಿ ಜ್ಞೇಯಂ ಸೌರಂ ಚತುರ್ಯುಗಂ ।
ಚತುರ್ಯುಗೈಕಸಪ್ತತ್ಯಾ ಮನ್ವಂತರಮುದಾಹೃತಂ ॥ ೧೩ ॥
ಐಂದ್ರಮೇತದ್ಭವೇದಾಯುಃ ಸಮಾಸಾಂತಂ ಚ ಕೀರ್ತಿತಂ ।
ಚತುರ್ದಶೇಂದ್ರೈಃ ಸ್ರಾಲೀನೈಃ ಕಲ್ಪಂ ಬ್ರಹ್ಮದಿನಂ ಭವೇತ್ ॥ ೧೪ ॥
ರಾತ್ರಿಶ್ಚ ತಾವತೀ ಚೈವ ಚತುರ್ಯುಗಸಹಸ್ರಿಕಾ ।
ಅನೇನ ದಿನಮಾನೇನ ಶತಾಬ್ದಂ ಜೀವತಿ ಪ್ರಿಯೇ ॥ ೧೫ ॥
ಮಮೈವ ನಿಮಿಷಾರ್ಧೇನ ಸಹಸ್ರಾಣಿ ಚತುರ್ದಶ ।
ವಿನಶ್ಯಂತಿ ತತೋ ವಿಷ್ಣೋರಸಂಖ್ಯಾತಾಃ ಪಿತಾಮಹಾಃ ॥ ೧೬ ॥
ಏವಂ ಕ್ರಮೇಣ ದೇವೇಶಿ ಸಮುತ್ಪನ್ನಮಿದಂ ಜಗತ್ ।
ಶಶಿಸೂರ್ಯವಿಭಾಗೇನ ಚಿತ್ರರೂಪಮನಂತಕಂ ॥ ೧೭ ॥
ಕಲಾ ದೇವಿ ಯದಾದ್ಯಂತಮನಾದಿಮಜಮವ್ಯಯಂ ।
ತದಾನ್ವಿತಃ ಶಶೀ ತಸ್ಯಾಮಧೋಮುಖಸಮನ್ವಿತಃ ॥ ೧೮ ॥

ಲಕ್ಷದ ಇಪ್ಪತ್ತುಸಾವಿರ ವರ್ಷಗಳಿಂದ ಸೌರಚತುರ್ಯುಗವೂ, ಎಪ್ಪತ್ತೊಂದು ಚತುರ್ಯುಗಗಳಿಂದ ಮನ್ವಂತರವೂ, ಆಗುವುದು.

೧೪. ಈ ಮನ್ವಂತರವು ಇಂದ್ರನ ಆಯುಸ್ಸಿನ ಪ್ರಮಾಣವಾಗಿದೆ. ಹದಿನಾಲ್ಕು ಮಂದಿ ಇಂದ್ರರು ಅಳಿಯಲು ಕಲ್ಪವೆಂಬ ಬ್ರಹ್ಮನ ಹಗಲು ಆಗುವುದು.

೧೫. ಅಷ್ಟೇ ರಾತ್ರಿಯುಳ್ಳ ಚತುರ್ಯುಗ ಸಹಸ್ರವು ಕಳೆದರೆ ಬ್ರಹ್ಮನ ಒಂದು ದಿವಸವಾಗುವುದು. ಬ್ರಹ್ಮನು ಈ ದಿನಸಗಳಿಂದ ಕೂಡಿದ ನೂರು ವರ್ಷಕಾಲ ಬದುಕುವನು.

೧೬. ನನ್ನ ಅರ್ಧನಿಮಿಷಕಾಲದಲ್ಲಿ ಹದಿನಾಲ್ಕುಸಾವಿರ ವಿಷ್ಣುಗಳೂ. ಅಸಂಖ್ಯಾಕ ಬ್ರಹ್ಮರೂ ನಾಶವಾಗುವರು.

೧೭. ದೇವೇಶಿ! ಹೀಗೆ ಚಂದ್ರಸೂರ್ಯರ ವಿಭಾಗದಿಂದ ಆಶ್ಚರ್ಯಕರವೂ, ಅಪರಿಮಿತವೂ ಆದ ಈ ಜಗತ್ತು ಉಂಟಾಗಿರುವುದು.

೧೮. ದೇವಿ! ಅನಾದಿಯೂ, ಉತ್ಪತ್ತಿಯಿಲ್ಲದಿರುವುದೂ, ನಾಶರಹಿತವೂ, ಆದ ಕಲೆಯಿಂದ ಕೂಡಿದ ಚಂದ್ರನು ಆ ಕಲೆಯಲ್ಲಿ ಕೆಳಮುಖವಾಗಿರುವನು.

ಏವಂ ಕ್ಷಯೋದಯಂ ಜ್ಞೇಯಂ ಚಂದ್ರಾರ್ಕಾಭ್ಯಾಮವಸ್ಥಿತಂ ।
ಸೃಷ್ಟಿಕ್ರಮಂ ಮಯಾ ಪ್ರೋಕ್ತಂ ಸಂಹಾರಮಧುನಾ ಶೃಣು ॥ ೧೯ ॥
ಮಹಾಕಲ್ಪಂ ಹತಂ ಕಲ್ಪೈಃ ಕಲ್ಪಂ ಮನ್ವಂತರೈರ್ಹತಂ ।
ಮಾಸಂ ಪಕ್ಷಾಹತಂ ಕೃತ್ವಾ ತಂ ಚಾಹೋರಾತ್ರಿಭಾಜಿತಂ ॥ ೨೦ ॥
ಅಹೋರಾತ್ರಂ ಮುಹೂರ್ತೇನ ಮುಹೂರ್ತಂ ತು ಕಲಾಹತಂ ।
ಕಲಾಂ ಕಾಷ್ಠಾಹತಾಂ ಕೃತ್ವಾ ಕಾಷ್ಠಾಂ ನಿಮಿಷಭಾಜಿತಾಂ ॥ ೨೧ ॥
ನಿಮಿಷಂ ಚ ಲವೈರ್ಹತ್ವಾ ಲವಂ ತ್ರುಟಿವಿಭಾಜಿತಂ ।
ತದತೀತಂ ಪ್ರಶಾಂತಂ ಚ ನಿರ್ವಿಕಾರಮಲಕ್ಷಣಂ ॥ ೨೨ ॥
ತಸ್ಯ ಚೇಯಂ ಪರಾ ಮಾಯಾ ಕಲಾ ಶಿರಸಿ ಧಾರಿತಾ ।
ಸಾ ಶಕ್ತಿರ್ದೇವದೇವಸ್ಯ ವಿಶ್ವಾಕಾರಾ ಪರಾ ಪ್ರಿಯೇ ।
ಮೋಹಯಿತ್ವಾ ತು ಸಂತಾನಂ ಸಂಸಾರಯತಿ ಪಾರ್ವತಿ ॥ ೨೩ ॥
ಏವಮೇತಜ್ಜಗದ್ದೇವಿ ಉತ್ಪತ್ತಿಸ್ಥಿತಿಲಕ್ಷಣಂ ।
ಯತ್ರೈವೋತ್ಪದ್ಯತೇ ಕೃತ್ಸ್ನಂ ಪುನಸ್ತತ್ರೈವ ಲೀಯತೇ ॥ ೨೪ ॥
ಸೇಯಂ ಮಾಯಾಮಯೀ ಶಕ್ತಿಃ ಶುದ್ಧಾಽಶುದ್ಧಸ್ವರೂಪಿಣೀ ।
ಚಂದ್ರರೂಪಾ ಸ್ಥಿತಾ ಸಾ ತು ತವ ದೇವಿ ಪ್ರಕಾಶಯೇತ್ ॥ ೨೫ ॥

---

೧೯. ಹೀಗೆ ಉತ್ಪತ್ತಿಕ್ಷಯಗಳು ಚಂದ್ರಸೂರ್ಯರಿಂದಾಗುವುವು ಎಂದು ತಿಳಿಯಬೇಕು. ಪ್ರಿಯಳೆ! ಸೃಷ್ಟಿಕ್ರಮವನ್ನು ಹೇಳಿರುವೆನು. ಈಗ ಸಂಹಾರಕ್ರಮವನ್ನು ಕೇಳು.

೨೦–೨೩. ಮಹಾಕಲ್ಪವನ್ನು ಕಲ್ಪಗಳಿಂದಲೂ, ಕಲ್ಪವನ್ನು ಮನ್ವಂತರಗಳಿಂದಲೂ, ತಿಂಗಳನ್ನು ಪಕ್ಷಗಳಿಂದಲೂ, ದಿವಸಗಳಿಂದಲೂ. ಪಕ್ಷವನ್ನು ದಿವಸವನ್ನು ಮುಹೂರ್ತಗಳಿಂದಲೂ, ಮುಹೂರ್ತವನ್ನು ಕಲೆಗಳಿಂದಲೂ, ಕಲೆಯನ್ನು ಕಾಷ್ಠಗಳಿಂದಲೂ ನಿಮಿಷವನ್ನು ಲವಗಳಿಂದಲೂ, ಲವವನ್ನು ತ್ರುಟಿಯಿಂದಲೂ ವಿಭಾಗಿಸಿ ಉಳಿಯುವ ಶಾಂತವೂ, ನಿರ್ವಿಕಾರವೂ, ಲಕ್ಷಣವಿಲ್ಲದಿರುವುದೂ ಆದ ಕಾಲ ಭಾಗವು ಮಾಯಾಕಲೆಯನ್ನು ಶಿರಸ್ಸಿನಲ್ಲಿ ಧರಿಸಿರುವುದು. ಪ್ರಿಯಳೆ! ಮಹೇಶ್ವರನ ಪ್ರಪಂಚರೂಪವಾದ ಆ ಕಲೆಯು ಸಂತತಿಯನ್ನು ಮೋಹಗೊಳಿಸಿ ಸಂಸಾರವನ್ನು ಸಾಗಿಸುತ್ತಿರುವುದು.

೨೪. ದೇವಿ ! ಹೀಗೆ ಉತ್ಪತ್ತಿ ಸ್ಥಿತಿರೂಪವಾದ ಜಗತ್ತು ಎಲ್ಲಿ ಹುಟ್ಟುವುದೋ ಅಲ್ಲಿಯೇ ಲಯವಾಗುವುದು.

೨೫. ಶುದ್ಧಾಶುದ್ಧ ಸ್ವರೂಪಿಣಿಯಾದ ಈ ಮಾಯಾಮಯ ಶಕ್ತಿಯು ಚಂದ್ರರೂಪವಾಗಿರುವುದು. ಇದನ್ನು ನಿನಗೆ ಪ್ರಕಾಶಗೊಳಿಸಿರುವೆನು.

ದೇವ್ಯುವಾಚ:—
ಪಂಚಾಗ್ನಿನೋಪಸಂತಪ್ತಾ ವರ್ಷಕೋಟೀರನೇಕಧಾ ।
ತತ್ತಪಃ ಸಫಲಂ ಜಾತಂ ಮೇಽದ್ಯ ದೇವ ಜಗತ್ಪತೇ ॥ ೨೬ ॥
ಸೃಷ್ಟಿಯೋಗೋ ಮಯಾ ಜ್ಞಾತಃ ಸಂಹಾರಶ್ಚ ಮಹೇಶ್ವರ ।
ಚಂದ್ರೋತ್ಪತ್ತಿಸ್ವರೂಪಂ ಚ ಕಲಾಮಾನಂ ತಥೈವ ಚ ॥ ೨೭ ॥
ಅಧುನಾ ಮಮ ದೇವೇಶ ಸಂದೇಹೋ ಹೃದಿ ಸಂಸ್ಥಿತಃ ।
ಕೌತೂಹಲಂ ಪರಂ ದೇವ ಕಥಯಸ್ವ ಮಹೇಶ್ವರ ॥ ೨೮ ॥
ಅಮೃತಾದೇವ ಸಂಭೂತಃ ಸರ್ವಾಹ್ಲಾದಕರಃ ಶಶೀ ।
ಪ್ರಿಯಶ್ಚ ತವ ದೇವೇಶ ವಲ್ಲಭಶ್ಚಂದ್ರಮಾಸ್ತಥಾ ॥ ೨೯ ॥
ಚಂದ್ರೇ ಚ ಚದಿ ಇತ್ಯೇಷ ಹ್ಲಾದನೇ ಧಾತುರಿಷ್ಯತೇ ।
ಶುಕ್ಲತ್ವೇ ಚಾಪತತ್ವೇ ಚ ಮಯಾ ತ್ವೇಷ ವಿಭಾವ್ಯತೇ ॥ ೩೦ ॥
ಸರ್ವೌಷಧೀನಾಮಧಿಪಃ ಪಿತೄಣಾಂ ಪ್ರೀಣನಂ ಪರಂ ।
ತವದಾಶ್ರಯಶ್ಚ ತ್ವದ್ಭಕ್ತಸ್ತ್ವತ್ಸೇವಾತತ್ಪರಃ ಶಶೀ ॥ ೩೧ ॥

---

೨೬. ದೇವಿಯು ಕೇಳುತ್ತಾಳೆ:—ಜಗದೊಡೆಯನಾದ ಓ ಶಂಕರ! ನಾನು ಕೋಟಿ ವರ್ಷಕಾಲ ಪಂಚಾಗ್ನಿ ಮಧ್ಯದಲ್ಲಾಚರಿಸಿದ ಅನೇಕವಿಧವಾದ ತಪಸ್ಸಿನ ಫಲವು ಈಗ ನನಗುಂಟಾಯಿತು.

೨೭. ನಾನು ಸೃಷ್ಟಿಸಂಹಾರಕ್ರಮಗಳನ್ನೂ, ಚಂದ್ರೋತ್ಪತ್ತಿ ವಿಧಾನವನ್ನೂ, ಕಲಾಪರಿಮಾಣವನ್ನೂ ಅರಿತೆನು.

೨೮. ದೇವೇಶ ! ಈಗ ನನಗೆ ಈ ವಿಷಯದಲ್ಲಿ ಸಂದೇಹವೂ, ಕೌತೂಹಲವೂ ಉಂಟಾಗಿದೆ. ಅದನ್ನು ಪರಿಹರಿಸು

೨೯. ಸಮಸ್ತರಿಗೂ ಆಹ್ಲಾದವನ್ನುಂಟುಮಾಡುವ ಚಂದ್ರನು ಅಮೃತದಿಂದಲೇ ಹುಟ್ಟಿ ನಿನಗೆ ಪ್ರಿಯನಾಗಿರುವನಷ್ಟೆ.

೩೦. "ಚದಿ ಹ್ಲಾದನೇ" ಎಂಬ ಧಾತುವಿನಿಂದಾದ ಚಂದ್ರಶಬ್ದವಾಚ್ಯನಾದ ಚಂದ್ರನನ್ನು ಶುಕ್ಲವರ್ಣನೂ, ಜಲತತ್ವಸಂಭೂತನೂ ಆಗಿರುವನೆಂದು ನಾನು ತಿಳಿಯುವೆನು.

೩೧. ಈ ಚಂದ್ರನು ಸಮಸ್ತ ಓಷಧಿಗಳಿಗೆ ಒಡೆಯನೂ, ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವವನೂ, ಆಶ್ರಯನೂ, ನಿನ್ನ ಭಕ್ತನೂ, ನಿನ್ನ ಸೇವೆಯಲ್ಲಿ ನಿರತನೂ ಆಗಿರುವನು.

ತಥಾಽಪಿ ಸಕಲಂಕೋಽಯಂ ಕೌತುಕಂ ಕುರುತೇ ಮಮ ।
ದೇವ ಬ್ರಹ್ಮಾಂಡಸಂಘಟ್ಟಮಾಲಾಮಂಡಿತಶೇಖರಃ ॥ ೩೨ ॥
ಶೀರ್ಷೇ ತವ ನಿವಿಷ್ಟಸ್ಯ ಕಷ್ಟಂ ಚಂದ್ರಸ್ಯ ಚೇದ್ಯದಿ ।
ತರ್ಹಿ ನಾಥ ನ ಶೋಚ್ಯಾ ಸ್ಯೈ ಸಂಸಾರೇ ದುಃಖಭಾಗಿನಃ ॥ ೩೩ ॥
ನ ಚಾಽಸ್ತಿ ತ್ರಿಷು ಲೋಕೇಷು ನ ಚೈತತ್ಸಂಭವಿಷ್ಯತಿ ।
ಯತ್ರ ಶಕ್ತೋ ಭವಾನ್ ಕರ್ತುಂ ದುಃಖಸ್ಯಾಽಸ್ಯ ಚ ಸಂಕ್ಷಯಂ ॥ ೩೪ ॥
ಸರ್ವೇಷಾಂ ವರ್ತತೇ ಶಂಕಾ ಯಥಾ ಮಮ ಮಹೇಶ್ವರ ।
ಉತ್ಪನ್ನಂ ಕಾರಣಂ ತಂ ತದ್ಯೇನ ಸೋಮಸ್ಯ ಲಾಂಛನಂ ॥ ೩೫ ॥
ಕಿಮೇತತ್ಕಾರಣಂ ದೇವ ಕಥಯಸ್ವ ಮಹೇಶ್ವರ ।
ಅಮೃತೇ ಸಂಭವೋ ಯಸ್ಯ ಕಥಂ ತಸ್ಯಾಽಪಿ ಲಾಂಛನಂ ॥ ೩೬ ॥
ಪ್ರಿಯಶ್ಚ ತವ ದೇವೇಶ ಲಾಂಛನಂ ಚಾಽಪಿ ತಿಷ್ಠತಿ ।
ಕೌತೂಹಲಂ ಪರಂ ದೇವ ತತ್ತ್ವಂ ಮೇ ವಕ್ತುಮರ್ಹಸಿ ॥ ೩೭ ॥
ಏವಮುಕ್ತಃ ಸ ಪಾರ್ವತ್ಯಾ ದೇವದೇವೋ ಮಹೇಶ್ವರಃ ।
ಉವಾಚ ಪರಮಪ್ರೀತಃ ಪ್ರೇಮ್ಣಾ ಶೈಲಸುತಾಂ ಪ್ರಭುಃ ॥ ೩೮ ॥

---

೩೨. ಹಾಗಾದರೂ ಬ್ರಹ್ಮಾಂಡಮಾಲೆಯಿಂದಲಂಕೃತನಾದ ಆ ಚಂದ್ರನು ಕಲಂಕದಿಂದ ಸಹಿತನಾಗಿರುವುದು ನನಗೆ ಕೌತೂಹಲವನ್ನುಂಟುಮಾಡುತ್ತಿದೆ.

೩೩. ನಾಥ! ನಿನ್ನ ಶಿರಸ್ಸಿನಲ್ಲಿ ನೆಲಸಿರುವ ಚಂದ್ರನಿಗೆ ಕಷ್ಟವಾಗುವುದಾದರೆ ಸಂಸಾರದಲ್ಲಿ ದುಃಖವನ್ನನುಭವಿಸುವ ಜನರನ್ನು ಕಂಡು ದುಃಖಿಸಬಾರದು.

೩೪. ನೀನು ಪರಿಹರಿಸಲಾಗದ ದುಃಖವು ಮೂರುಲೋಕದಲ್ಲಿ ಈಗ ಎಲ್ಲಿಯೂ ಇರುವುದಿಲ್ಲ. ಮುಂದೆಯೂ ಸಂಭವಿಸಲಾರದು. ಈ ದುಃಖವನ್ನು ನೀಗಿಸಲು ನೀನು ಸಮರ್ಥನಾಗಿರುವೆ.

೩೫. ಮಹೇಶ್ವರ! ನನ್ನಂತೆಯೇ ಎಲ್ಲರಿಗೂ ಈ ವಿಷಯದಲ್ಲಿ ಸಂದೇಹವಿರುವುದು. ಅಮೃತಸಂಭವನಾದ ಚಂದ್ರನಿಗೆ ಕಳಂಕವುಂಟಾಗಲು ಕಾರಣವೇನು ?

೩೬-೩೭. ದೇವೇಶ! ಆ ಚಂದ್ರನು ನಿನಗೆ ಪ್ರಿಯನಾದವನು. ಅವನಲ್ಲಿ ಕಳಂಕವೂ ಇರುವುದು. ಇದರಿಂದ ನನಗೆ ಬಹು ಕುತೂಹಲವುಂಟಾಗಿದೆ. ನೀನು ನನಗೆ ಇದರ ತತ್ತ್ವವನ್ನು ಹೇಳಬೇಕು.

೩೮. ಪಾರ್ವತಿಯು ಹೀಗೆನ್ನಲು ಮಹೇಶ್ವರನು ಅತಿಸಂತುಷ್ಟನಾಗಿ ಪ್ರೀತಿಯಿಂದ ಅವಳನ್ನು ಕುರಿತು ಇಂತೆಂದನು.

ಈಶ್ವರ ಉವಾಚ:—

ಕಿಂ ತೇ ದೇವಿ ಮಹಾಶಂಕಾಽದ್ಯೋತ್ಪನ್ನಾ ವರವರ್ಣಿನಿ ।
ಮಮೋಪರಿ ನ ಕರ್ತವ್ಯಾ ನಿರುದ್ವಿಗ್ನಾ ಭವ ಪ್ರಿಯೇ ।
ಪಿತುಸ್ತವ ಪ್ರಭಾವೇನ ಲಾಂಛನಂ ಶಶಿನೋಽಭವತ್ ॥ ೩೯ ॥
ಭಾವಿತ್ವಾತ್ಕರ್ಮಣೋ ದೇವಿ ದಕ್ಷಸ್ಯಾಜ್ಞಾವ್ಯತಿಕ್ರಮಾತ್ ।
ಸಮಂ ವರ್ತಸ್ವ ಭಾರ್ಯಾಭಿರಿತ್ಯುಕ್ತಃ ಶಶಿಲಾಂಛನಃ ॥ ೪೦ ॥
ತದ್ವಾಕ್ಯಮನ್ಯಥಾ ಚಕ್ರೇ ತತಃ ಶಪ್ತಃ ಶಶೀ ಪ್ರಿಯೇ ।
ಇದಂ ಪೃಷ್ಟಂ ತು ಯದ್ದೇವಿ ತ್ವಯಾ ಲಾಂಛನಕಾರಣಂ ॥ ೪೧ ॥
ಕಲ್ಪೇ ಕಲ್ಪೇ ಪೃಥಗ್ಭಾವಂ ಕಾರಣೈರಸ್ತಿ ಭಾಮಿನಿ ।
ಅಸಂಖ್ಯಾತಂ ಚ ತದ್ವಕ್ತುಂ ಶಕ್ಯಂ ನೈವ ಮಯಾ ಪ್ರಿಯೇ ॥ ೪೨ ॥
ಅಸಂಖ್ಯೇಯಾಶ್ಚಂದ್ರಮಸಃ ಸಂಭವಂತಿ ಪುನಃ ಪುನಃ ।
ವಿನಶ್ಯಂತಿ ಚ ದೇವೇಶಿ ಸರ್ವಮನ್ವಂತರಾಂತರಂ ॥ ೪೩ ॥
ಅಸಂಖ್ಯಾತಾಶ್ಚ ಕಲ್ಪಾಖ್ಯಾ ಅಸಂಖ್ಯಾತಾಃ ಪಿತಾಮಹಾಃ ।
ಹರಯಶ್ಚಾಽಪ್ಯಸಂಖ್ಯಾತಾ ಏಕ ಏವ ಮಹೇಶ್ವರಃ ॥ ೪೪ ॥
ಕೋಟಿಕೋಟ್ಯಯುತಾನ್ಯತ್ರ ಬ್ರಹ್ಮಾಂಡಾನಿ ಮಮ ಪ್ರಿಯೇ ।
ಜಲಬುದ್ಬುದವದ್ದೇವಿ ಸಂಜಾತಾನಿ ತು ಲೀಲಯಾ ॥ ೪೫ ॥

---

೩೯. ದೇವಿ! ಈಗ ನಿನಗೇಕೆ ಈ ಸಂದೇಹವುಂಟಾಯಿತು ? ನನ್ನ ವಿಷಯದಲ್ಲಿ ಶಂಕೆಗೊಳ್ಳಬೇಡ. ವ್ಯಥೆಯನ್ನು ತೊರೆ. ನಿನ್ನ ತಂದೆಯಾದ ದಕ್ಷನ ಪ್ರಭಾವದಿಂದ ಕಳಂಕವುಂಟಾಯಿತು.

೪೦–೪೨. ನೀನು ಚಂದ್ರನಿಗೆ ಲಾಂಛನವುಂಟಾಗಲು ಕಾರಣವನ್ನು ಕೇಳಿದೆ ಪ್ರಿಯಳೆ! ಪ್ರತಿ ಕಲ್ಪದಲ್ಲಿಯೂ ಇದಕ್ಕೆ ಬೇರೆ ಬೇರೆ ಲೆಕ್ಕವಿಲ್ಲದಷ್ಟು ಕಾರಣಗಳಿರುವುವು. ಅದನ್ನು ಹೇಳಲು ಶಕ್ಯವಲ್ಲ.

೪೩. ದೇವೇಶಿ ! ಸಮಸ್ತ ಮನ್ವಂತರಗಳಲ್ಲಿಯೂ ಅಸಂಖ್ಯಾತ ಚಂದ್ರರು ಪುನಃ ಪುನಃ ಹುಟ್ಟುವರು. ಮತ್ತು ನಾಶವಾಗುವರು.

೪೪. ಕಲ್ಪಗಳೂ, ಅಸಂಖ್ಯಾತವಾಗಿವೆ; ಬ್ರಹ್ಮವಿಷ್ಣುಗಳೂ ಅಸಂಖ್ಯಾತರಾಗುವರು ಮಹೇಶ್ವರನು ಮಾತ್ರ ಒಬ್ಬನೇ.

೪೫. ಪ್ರಿಯಳೆ ! ನನ್ನ ಲೀಲೆಯಿಂದ ನೀರುಗುಳ್ಳೆಗಳಂತೆ ಅನೇಕ ಕೋಟಿ ಬ್ರಹ್ಮಾಂಡಗಳು ಉಂಟಾದುವು.

ತತ್ರ ತತ್ರ ಚತುರ್ವಕ್ತ್ರಾ ಬ್ರಹ್ಮಾಣೋ ಹರಯೋ ಭವಾಃ ।
ಸೃಷ್ಟಾಃ ಪ್ರಧಾನೇನ ತದಾ ಲಬ್ಧಾ ಶಂಭೋಸ್ತು ಸನ್ನಿಧಿಃ ॥ ೪೬ ॥
ಲಯಂ ಚೈವ ತಥಾऽನ್ಯೋನ್ಯಮಾದ್ಯಂತಂ ಪ್ರಕರೋತಿ ಚ ।
ಸರ್ಗಸಂಹಾರ ಸಂಸ್ಥಾನಾಂ ಕರ್ತಾ ದೇವೋ ಮಹೇಶ್ವರಃ ॥ ೪೭ ॥
ಸರ್ಗೇ ಚ ರಜಸಾ ಯುಕ್ತಃ ಸತ್ವಸ್ಥಃ ಪರಿಪಾಲನೇ ।
ಪ್ರತಿಸರ್ಗೇ ತಮೋ ಯುಕ್ತಃ ಸೋऽಹಂ ದೇವಿ ತ್ರಿಧಾ ಸ್ಥಿತಃ ॥ ೪೮ ॥
ತಸ್ಮಾನ್ಮಾಹೇಶ್ವರೋ ಬ್ರಹ್ಮಾ ಬ್ರಹ್ಮಣೋऽಧಿಪತಿಃ ಶಿವಃ ।
ಸದಾಶಿವೋ ಭವೇದ್ವಿಷ್ಣುರ್ಬ್ರಹ್ಮಾ ಸರ್ವಾತ್ಮಕೋ ಹ್ಯತಃ ॥ ೪೯ ॥
ಸ ಏವ ಭಗವಾನ್ರುದ್ರೋ ವಿಷ್ಣುರ್ವಿಶ್ವಜಗತ್ಪ್ರಭುಃ ।
ಅಸ್ಮಿನ್ನಂಡೇ ತ್ವಿಮೇ ಲೋಕಾ ಅಂತರ್ವಿಶ್ವಮಿದಂ ಜಗತ್ ॥ ೫೦ ॥
ಚಂದ್ರಸೂರ್ಯಗ್ರಹಾ ದೇವಿ ಬ್ರಹ್ಮಾಂಡೇऽಸ್ಮಿನ್ ಮನಸ್ವಿನಿ ।
ಸಂಖ್ಯಾತುಂ ನೈವ ಶಕ್ಯಂತೇ ಯೇ ಭವಿಷ್ಯಂತಿ ಯೇ ಗತಾಃ ॥ ೫೧ ॥
ಅಸ್ಮಿನ್ವಾರಾಹಕಲ್ಪೇ ತು ವರ್ತಮಾನೇ ಮನಸ್ವಿನಿ ।
ಷಡತೀತಾ ಮಹಾದೇವಿ ರೋಹಿಣೀಪತಯಃ ಪುರಾ ॥ ೫೨ ॥
ಸಪ್ತಮೋऽಯಂ ಮಹಾದೇವಿ ವರ್ತತೇऽಮೃತಸಂಭವಃ ।
ದಕ್ಷಶಾಪೇನ ಯೋ ದೇವಿ ಸಂಕ್ಷೀಣೋ ದೃಶ್ಯತೇऽಧುನಾ ॥ ೫೩ ॥

---

೪೬. ಆಯಾ ಬ್ರಹ್ಮಾಂಡಗಳಲ್ಲಿ ಪ್ರಕೃತಿಯು ಅನೇಕ ಮಂದಿ ಬ್ರಹ್ಮ, ವಿಷ್ಣು ಮಹೇಶ್ವರರನ್ನು ಸೃಜಿಸಿರುವುದು. ಅವರಲ್ಲಿ ಶಂಕರನ ಸಾನ್ನಿಧ್ಯವುಂಟಾಗಿರುವುದು.

೪೭. ಸೃಷ್ಟಿ, ಸ್ಥಿತಿ ಸಂಹಾರಗಳನ್ನು ಮಾಡುವ ಶಂಭುವು ಆ ಬ್ರಹ್ಮಾದಿಗಳನ್ನು ನಾಶಗೊಳಿಸುವನು.

೪೮. ದೇವಿ! ನಾನು ಸೃಷ್ಟಿಕಾಲದಲ್ಲಿ ರಜೋಗುಣವುಳ್ಳವನೂ, ಪಾಲನ ಕಾಲದಲ್ಲಿ ಸತ್ವಗುಣವುಳ್ಳವನೂ, ಸಂಹಾರಕಾಲದಲ್ಲಿ ತಮೋಗುಣವುಳ್ಳವನೂ ಆಗಿ ಮೂರು ಬಗೆಯಾಗಿರುವೆನು.

೪೯–೫೦. ಆದುದರಿಂದ ಬ್ರಹ್ಮನು ಮಹೇಶ್ವರನಿಂದುಂಟಾದವನು. ಆ ಬ್ರಹ್ಮನಿಗೆ ಶಿವನು ಒಡೆಯನು. ಸದಾಶಿವನು ವಿಷ್ಣುವೂ ಬ್ರಹ್ಮನೂ ಆಗುವುದರಿಂದ ಅವನು ಸರ್ವಸ್ವರೂಪನು. ಮತ್ತು ಜಗದೊಡೆಯನು. ಈ ಬ್ರಹ್ಮಾಂಡದಲ್ಲಿ ಸಮಸ್ತ ಲೋಕಗಳೂ ಇರುವುವು.

೫೧. ದೇವಿ! ಈ ಬ್ರಹ್ಮಾಂಡದಲ್ಲಿ ಹಿಂದೆ ಹುಟ್ಟಿದ ಮತ್ತು ಮುಂದೆ ಹುಟ್ಟುವ ಚಂದ್ರ ಸೂರ್ಯ ಮೊದಲಾದ ಗ್ರಹಗಳನ್ನು ಎಣಿಸಲು ಸಾಧ್ಯವಿಲ್ಲ.

೫೨–೫೩. ಈ ವಾರಾಹಕಲ್ಪದಲ್ಲಿ ಆರುಜನ ಚಂದ್ರರು ಕಳೆದು ಹೋಗಿರುವರು ಮಹಾದೇವಿ! ಈಗ ಕಾಣುತ್ತಿರುವವನು ದಕ್ಷಶಾಪದಿಂದ ಕ್ಷೀಣನಾದ ಏಳನೆಯಚಂದ್ರನು.

ಅಥ ದ್ವಿತೀಯೇ ಸಂಪ್ರಾಪ್ತೇ ಪರಾರ್ಧೇ ಚೈ ವವೇಧಸಃ ।
ತಸ್ಯ ತ್ರಿಂಶತ್ತಿಮೇ ಕಲ್ಪೇ ಪಿತೃಕಲ್ಪೇಽತಿವಿಶ್ರುತೇ ॥ ೫೪ ॥
ಸ್ವಾಯಂಭುವೇಽಂತರೇ ಪ್ರಾಪ್ತೇ ತಸ್ಯಾಽಽದೌ ತ್ವಂ ಸತೀ ಕಿಲ ।
ತಸ್ಮಿನ್ಕಾಲೇ ಮಹಾದೇವಿ ಯೋಽಭೂದ್ದಕ್ಷಃ ಪಿತಾ ತವ ॥ ೫೫ ॥
ಪ್ರಾಣಾತ್ಪ್ರಜಾಪತೇರ್ಜನ್ಮ ತಸ್ಯ ದಕ್ಷಸ್ಯ ಕೀರ್ತಿತಂ ।
ಅಸ್ಮಿನ್ಮನ್ವಂತರೇ ದೇವಿ ದಕ್ಷಃ ಪ್ರಾಚೇತಸೋಽಭವತ್ ॥ ೫೬ ॥
ಅಂಗುಷ್ಠಾದ್ದಕ್ಷಿಣಾದ್ದಕ್ಷೋ ಭವಿಷ್ಯತ್ಯಧುನಾ ಪ್ರಿಯೇ ।
ಯುಗೇ ಯುಗೇ ಭವಂತ್ಯೇತೇ ಸರ್ವೇ ದಕ್ಷಾದಯೋ ದ್ವಿಜಾಃ ॥ ೫೭ ॥
ಪುನಶ್ಚೈವ ವಿನಶ್ಯಂತಿ ವಿದ್ವಾಂಸ್ತತ್ರ ನ ಮುಹ್ಯತಿ ।
ಕನ್ಯಾಽಪಮಾನಾತ್ತ್ವಂ ದೇವಿ ದೇಹಂ ತತ್ಯಕ್ಥ ವೈ ಪುರಾ ॥ ೫೮ ॥
ತಾವದ್ವಿಯುಕ್ತೋಽಹಂ ದೇವಿ ತ್ವಯಾ ಮುಕ್ತೋಽಭವಂ ।
ಯಾವದ್ವಾರಾಹಕಲ್ಪಸ್ಯ ಚಾಕ್ಷುಷುಸ್ಯಾಂತರಂ ಪ್ರಿಯೇ ॥ ೫೯ ॥
ಏಕವಿಂಶೋ ಮನುಶ್ಚಾಽಯಂ ಕಲ್ಪೇ ವಾರಾಹಸಂಜ್ಞಕೇ ।
ಕಲ್ಪೇಕಲ್ಪೇ ಮಹಾದೇವಿ ಭವೇನ್ನಾಮಾಂತರಂ ತವ ॥ ೦೬ ॥

೫೪–೫೫. ಬ್ರಹ್ಮನ ಎರಡನೆಯ ಪರಾರ್ಧದಲ್ಲಿ ಪಿತೃಕಲ್ಪವೆಂದು ವಿಖ್ಯಾತವಾದ ಮೂವತ್ತನೆಯ ಕಲ್ಪದಲ್ಲಿ ಸ್ವಾಯಂಭುವ ಮನ್ವಂತರದಲ್ಲಿ ಹುಟ್ಟಿದ ದಕ್ಷನಿಗೆ ನೀನು ಸತೀ ಎಂಬ ಮಗಳಾಗಿರುವೆ.

೫೬. ಆ ದಕ್ಷನು ವಾಯುವಿನಿಂದ ಜನಿಸಿರುವನು. ಅವನು ಈ ಮನ್ವಂತರದಲ್ಲಿ ಪ್ರಾಚೇತಸನಾದನು.

೫೭. ಪ್ರಿಯಳೆ! ಈಗ ನನ್ನ ಬಲಗೈಯ ಹೆಬ್ಬೆರಳಿನಿಂದ ದಕ್ಷನು ಜನಿಸುವನು. ಈ ದಾಕ್ಷಾದಿ ಬ್ರಾಹ್ಮಣರು ಪ್ರತಿಯುಗದಲ್ಲಿಯೂ ಹುಟ್ಟುವರು.

೫೮. ಮರಳಿ ಸಾಯುವರು. ವಿದ್ವಾಂಸನು ಆ ವಿಷಯದಲ್ಲಿ ಮೋಹಗೊಳ್ಳುವುದಿಲ್ಲ. ದೇವಿ! ನೀನು ಹಿಂದೆ ಆ ದಕ್ಷನ ಅವಮಾನದಿಂದ ದೇಹವನ್ನು ತ್ಯಜಿಸಿರುವೆ.

೫೯. ವಾರಾಹಕಲ್ಪದ ಚಾಕ್ಷುಷ ಮನ್ವಂತರದವರೆಗೆ ನಾನು ನಿನ್ನಿಂದ ಅಗಲಿದ್ದೆನು.

೬೦. ಇವನು ವಾರಾಹವೆಂಬ ಕಲ್ಪದಲ್ಲಿ ಇಪ್ಪತ್ತೊಂದನೆ ಮನುವಾಗಿರುವನು. ದೇವಿ! ಪ್ರತಿಕಲ್ಪದಲ್ಲಿಯೂ ನಿನ್ನ ಹೆಸರು ಬೇರೆಯಾಗುವುದು.

ಅಸ್ಮಿನ್ಕಲ್ಪೇ ತು ವಾರಾಹೇ ಹಿಮವತ್ತಪಸಾರ್ಜಿತೇ ।
ಸಂಭೂತಾ ಪಾರ್ವತೀ ದೇವಿ ಚಾಕ್ಷುಷಸ್ಯಾಂತರೇ ಗತೇ ॥ ೬೧ ॥
ಬ್ರಹ್ಮಣೋ ದಿನಮೇಕಂ ತು ಷಣ್ಮಾಸೇನ ತವಾಽವಧಿಃ ।
ತ್ವಂ ವಿಯುಕ್ತಾ ಮಯಾ ಸಾರ್ಧಂ ದಕ್ಷಕೋಪೇನ ಭಾಮಿನಿ ॥ ೬೨ ॥
ತವ ಕ್ರೋಧೇನ ಯೇ ಶಪ್ತಾ ಋಷಯೋ ವೈ ಮಯಾ ಪುರಾ ।
ತೇಽಪಿ ದೇವಿ ತ್ವಯಾ ಸಾರ್ಧಂ ಜಾತಾ ವೈವಸ್ವತೇಽಂತರೇ ॥ ೬೩ ॥
ಭೃಗುರಂಗಿರಾ ಮರೀಚಿಸ್ತು ಪುಲಸ್ತ್ಯಃ ಪುಲಹಃ ಕ್ರತುಃ ।
ಅತ್ರಿಶ್ಚೈವ ವಸಿಷ್ಠಶ್ಚ ಅಷ್ಟೌ ತೇ ಬ್ರಹ್ಮಣಃ ಸುತಾಃ ॥ ೬೪ ॥
ದಕ್ಷಸ್ಯ ಯಜ್ಞೇ ತೇ ಶಪ್ತಾಃ ಪೂರ್ವಂ ಸ್ವಾಯಂಭುವೇಽಂತರೇ ।
ಜಾತಾ ದೇವಿ ಪುನಸ್ತೇ ವೈ ಕಲ್ಪೇಽಸ್ಮಿಂಶ್ಚಾಕ್ಷುಷೇ ಗತೇ ॥ ೬೫ ॥
ದೇವಸ್ಯ ಮಹತೋ ಯಜ್ಞೇ ವಾರುಣೀಂ ಬಿಭ್ರತಸ್ತನುಂ ।
ಬ್ರಹ್ಮಣೋ ಜುಹ್ವತಃ ಶುಕ್ರಮಗ್ನೌ ಪೂರ್ವಂ ಪ್ರಜೇಪ್ಸಯಾ ॥ ೬೬ ॥
ಋಷಯೋ ಜಜ್ಞಿರೇ ಪೂರ್ವಂ ಸೂರ್ಯಬಿಂಬಸಮಪ್ರಭಾಃ ।
ಪಿತುಸ್ತವ ಸಮೀಪೇ ತೇ ವರಣಾಯ ತವ ಪ್ರಿಯೇ ।
ಪ್ರಸ್ಥಾಪಿತಾ ಮಯಾ ಪೂರ್ವಂ ತತ್ತ್ವಂ ಜಾನಾಸಿ ಸುವ್ರತೇ ॥ ೬೭ ॥

---

೬೧. ದೇವಿ! ಈ ವಾರಾಹಕಲ್ಪದಲ್ಲಿ ಚಾಕ್ಷುಷಮನ್ವಂತರವು ಕಳೆಯಲು ನೀನ ಹಿಮವಂತನ ತಪಸ್ಸಿನಿಂದ ಪಾರ್ವತಿಯಾಗಿ ಜನಿಸಿರುವೆ.

೬೨. ಪ್ರಿಯಳೆ! ನೀನು ದಕ್ಷಕೋಪದಿಂದ ಬ್ರಹ್ಮನಿಗೆ ದಿನವಾದ ಆರು ತಿಂಗಳ ಕಾಲ ನನ್ನಿಂದ ಅಗಲಿದ್ದೆ.

೬೩–೬೫. ನೀನು ಹಿಂದೆ ಸ್ವಾಯಂಭುವ ಮನ್ವಂತರದಲ್ಲಿ ಕೋಪದಿಂದ ಶಪಿಸಿದ ಭೃಗು, ಅಂಗಿರಾ, ಮರೀಚಿ, ಪುಲಸ್ತ್ಯ, ಪುಲಹ, ಕ್ರತು, ಅತ್ರಿ, ವಸಿಷ್ಠ ಎಂಬ ಎಂಟು ಮಂದಿ ಋಷಿಗಳು ಈ ಕಲ್ಪದಲ್ಲಿ ಚಾಕ್ಷುಷಮನ್ವಂತರವು ಕಳೆಯಲು ವೈವಸ್ವತ ಮನ್ವಂತರದಲ್ಲಿ ನಿನ್ನೊಡನೆ ಜನಿಸಿರುವರು.

೬೬–೬೭. ಬ್ರಹ್ಮನು ಮಕ್ಕಳ ಅಪೇಕ್ಷೆಯಿಂದ ಯಜ್ಞದಲ್ಲಿ ವಾರುಣೀದೇಹವನ್ನು ಧರಿಸಿದ ಮಹಾದೇವನ ಶುಕ್ರವನ್ನು ಅಗ್ನಿಯಲ್ಲಿ ಹೋಮಿಸಿದನು. ಆಗ ಋಷಿಗಳು ಜನಿಸಿದರು. ಉದಿಸಿದ ಸೂರ್ಯಬಿಂಬದಂತೆ ತೇಜಸ್ವಿಗಳಾದ ಆ ಮುನಿಗಳನ್ನು ನಿನ್ನನ್ನು ವರಿಸುವುದಕ್ಕಾಗಿ ನಿನ್ನ ತಂದೆಯ ಹತ್ತಿರ ಕಳುಹಿಸಿದೆನು, ಅದನ್ನು ನೀನು ಅರಿತಿರುವೆ.

ಅಥ ಕಿಂ ಬಹುನೋಕ್ತೇನ ವಚ್ಮಿ ತೇ ಪ್ರಶ್ನಮುತ್ತಮಂ ।
ದ್ವಿತೀಯೇ ತು ಪರಾರ್ಧೇಽಸ್ಮಿನ್ ವರ್ತಮಾನೇ ಚ ವೇಧಸಃ ॥ ೬೮ ॥
ಶ್ವೇತಕಲ್ಪಾತ್ಸಮಾರಭ್ಯ ಯಾವದ್ವಾರಾಹಗೋಚರಂ ।
ಸಮತೀತಾಶ್ಚ ಯೇ ಚಂದ್ರಾಸ್ತಾಂಶ್ಛೃಣುಷ್ವ ವರಾನನೇ ॥ ೬೯ ॥
ಚತುಃಶತಾನಿ ದೇವೇಶಿ ಷಡ್ವಿಂಶತ್ಯಧಿಕಾನಿ ತು ।
ಗತಾನಿ ಶೀತರಶ್ಮೀನಾಂ ಸಪ್ತವಿಂಶೋಽಧುನಾ ಪ್ರಿಯೇ ॥ ೭೦ ॥
ವೈವಸ್ವತೇಽಂತರೇ ಯಶ್ಚಾಽಯಂ ಪರ್ವತೇಽಧುನಾ ।
ತ್ರೇತಾಯುಗೇ ತು ದಶಮೇ ದತ್ತಾತ್ರೇಯಪುರಸ್ಸರಃ ॥ ೭೧ ॥
ಸಂಜಾತೋ ರೋಹಿಣೀನಾಥೋ ಯೋಽಧುನಾ ವರ್ತತೇ ಪ್ರಿಯೇ ।
ತಸ್ಯೋತ್ಪತ್ತಿಪ್ರಸಂಗೇನ ವಿಷ್ಣೋರ್ಮಾನುಷಸಂಭವಾನ್ ॥ ೭೨ ॥
ದೇಹಾವತಾರಾನ್ ವಕ್ಷ್ಯಾಮಿ ಪ್ರಾರಂಭಾತ್ಪ್ರಥಮಾನ್ ಪ್ರಿಯೇ ।
ಪಂಚಮಃ ಪಂಚದಶ್ಯಾಂ ಸ ತ್ರೇತಾಯಾಂ ತು ಬಭೂವ ಹ ॥ ೭೩ ॥
ಮಾಂಧಾತಾ ಚಕ್ರವರ್ತಿತ್ವೇ ತಸ್ಯೋತಥ್ಯಪುರಸ್ಸರಃ ।
ಏಕೋನವಿಂಶತ್ರೇತಾಯಾಂ ಸರ್ವಕ್ಷತ್ರಾಂತಕೋಽಭವತ್ ॥ ೭೪ ॥

೬೮–೬೯. ಹೆಚ್ಚಾಗಿಹೇಳಿ ಪ್ರಯೋಜನವೇನು ? ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುವೆನು. ಬ್ರಹ್ಮನ ಎರಡನೆಯ ಪರಾರ್ಧದಲ್ಲಿ ಶ್ವೇತಕಲ್ಪವನ್ನಾರಂಭಿಸಿ ವಾರಾಹ ಕಲ್ಪದವರೆಗೆ ಕಳೆದುಹೋದ ಚಂದ್ರರನ್ನು ಹೇಳುವೆನು. ಕೇಳು.

೭೦. ಪ್ರಿಯಳೆ! ನಾನೂರಇಪ್ಪತ್ತಾರು ಚಂದ್ರರು ಕಳೆದು ಹೋದ ಬಳಿಕ ಈಗ ವೈವಸ್ವತಮನ್ವಂತರವು ಬರಲು ಇಪ್ಪತ್ತೇಳನೆಯ ಚಂದ್ರನು ಜನಿಸಿರುವನು. ಇವನು ಹತ್ತನೆಯ ತ್ರೇತಾಯುಗದಲ್ಲಿ ದತ್ತಾತ್ರೇಯನೊಡನೆ ಹುಟ್ಟಿರುವನು. ಇವನ ಉತ್ಪತ್ತಿಯ ಪ್ರಸ್ತಾವದಿಂದ ವಿಷ್ಣುವಿನ ಮನುಷ್ಯಾವತಾರಗಳನ್ನು ಮೊದಲಿನಿಂದ ಹೇಳುವೆನು. ಹದಿನೈದನೆಯ ತ್ರೇತಾಯುಗದಲ್ಲಿ ಆ ವಿಷ್ಣುವು ಐದನೆಯ ಅವತಾರನಾಗಿ ಮಾಂಧಾತನಾಗಿ ಉತಥ್ಯನೊಡನೆ ಹುಟ್ಟಿದನು. ಹತ್ತೊಂಬತ್ತನೆಯ ತ್ರೇತಾಯುಗದಲ್ಲಿ ಆರನೆಯಅವತಾರನಾದ ಪರಶುರಾಮನಾಗಿ ವಿಶ್ವಾಮಿತ್ರನೊಡನೆಯೂ. ಇಪ್ಪತ್ತನಾಲ್ಕನೆ ತ್ರೇತಾಯುಗದಲ್ಲಿ ರಾವಣನನ್ನು ವಧಿಸುವುದಕ್ಕಾಗಿ ಏಳನೆಯ ದಾಶರಥತನಯನಾದ ರಾಮನಾಗಿ ವಸಿಷ್ಠನೊಡನೆಯೂ, ಇಪ್ಪತ್ತೆಂಟನೆಯ ದ್ವಾಪರಯುಗದಲ್ಲಿ ಪರಾಶರನಿಂದ ಎಂಟನೆಯ ವೇದವ್ಯಾಸನಾಗಿ ಜಾತೂಕರ್ಣ್ಯನೊಡನೆಯೂ, ಅದೇ ದ್ವಾಪರದಲ್ಲಿ ಇಪ್ಪತ್ತೊಂದನೆಯ ಭಾಗವು ಕಳೆಯಲು ವಸುದೇವನಿಂದ ದೇವಕಿಯಲ್ಲಿ ಸಪ್ತಮಾವ

ಜಾಮದಗ್ನ್ಯಸ್ತಥಾ ಷಷ್ಠೋ ವಿಶ್ವಾಮಿತ್ರಪುರಸ್ಸರಃ ।
ಚತುರ್ವಿಂಶೇ ಯುಗೇ ರಾಮೋ ವಸಿಷ್ಠೇನ ಪುರೋಧಸಾ ॥ ೭೫ ॥
ಸಪ್ತಮೋ ರಾವಣಸ್ಯಾರ್ಥೇ ಜಜ್ಞೇ ದಶರಥಾತ್ಮಜಃ ।
ಅಷ್ಟಮೋ ದ್ವಾಪರೇ ವಿಷ್ಣುರಷ್ಟಾವಿಂಶೇ ಪರಾಶರಾತ್ ॥ ೭೬ ॥
ವೇದವ್ಯಾಸಸ್ತತೋ ಜಜ್ಞೇ ಜಾತೂಕರ್ಣ್ಯಪುರಸ್ಸರಃ ।
ತತ್ರೈವ ನವಮೋ ವಿಷ್ಣುರದಿತೇಃ ಕಶ್ಯಪಾತ್ಮಜಃ ॥ ೭೭ ॥
ದೇವಕ್ಯಾಂ ವಸುದೇವಾತ್ತು ಬ್ರಹ್ಮಗರ್ಗಪುರಸ್ಸರಃ ।
ಏಕವಿಂಶತಮಸ್ಯಾಽಸ್ಯ ದ್ವಾಪರಸ್ಯಾಂಶಸಂಕ್ಷಯೇ ॥
ನಷ್ಟೇ ಧರ್ಮೇ ತಥಾ ಜಜ್ಞೇ ವಿಷ್ಣುರ್ವೃಷ್ಣಿಕುಲೇ ಸ್ವಯಂ ॥ ೭೮ ॥
ಕರ್ತುಂ ಧರ್ಮವ್ಯವಸ್ಥಾನಮಸುರಾಣಾಂ ಪ್ರಣಾಶನಃ ।
ಪೂರ್ವಜನ್ಮನಿ ವಿಷ್ಣುಃ ಸ ಪ್ರಮತಿರ್ನಾಮ ವೀರ್ಯವಾನ್ ॥ ೭೯ ॥
ಗೋತ್ರೇಣ ವೈ ಚಂದ್ರಮಸಃ ಸಂಧ್ಯಾಮಿಶ್ರೇ ಭವಿಷ್ಯತಿ ।
ಕಲ್ಕಿರ್ವಿಷ್ಣುಯಶಾನಾಮ ಪಾರಾಶರ್ಯಃ ಪ್ರತಾಪವಾನ್ ॥ ೮೦ ॥
ದಶಮೋ ಭಾವ್ಯಸಂಭೂತೋ ಯಾಜ್ಞವಲ್ಕ್ಯಪುರಸ್ಸರಃ ।
ಅನುಕರ್ಷಂಶ್ಚ ವೈ ಸೇನಾಂ ಹಸ್ತ್ಯಶ್ವರಥಸಂಕುಲಾಂ ॥ ೮೧ ॥
ಪ್ರಗೃಹೀತಾಯುಧೈರ್ವಿಪ್ರೈರ್ಭೃಶಂ ಶತಸಹಸ್ರಶಃ ।
ನಿಃಶೇಷಾಂಛೂದ್ರರಾಜ್ಞಸ್ತಾಂಸ್ತದಾ ಸ ತು ಕರಿಷ್ಯತಿ ॥ ೮೨ ॥
ಪಾಖಂಡಾನ್ ಮ್ಲೇಚ್ಛಜಾತೀಂಶ್ಚ ದಸ್ಯೂಂಶ್ಚೈವ ಸಹಸ್ರಶಃ ।
ನಾಽತ್ಯರ್ಥಂ ಧಾರ್ಮಿಕಾ ಯೇ ಚ ಬ್ರಹ್ಮಬ್ರಹ್ಮದ್ವಿಷಃ ಕ್ವಚಿತ್ ॥ ೮೩ ॥

ಧರ್ಮವನ್ನು ವ್ಯವಸ್ಥೆಗೊಳಿಸುವುದಕ್ಕಾಗಿಯೂ ಅಸುರರ ನಾಶಕ್ಕಾಗಿಯೂ ಯಾದವ ವಂಶದಲ್ಲಿ ಗರ್ಗಾಚಾರ್ಯನೊಡನೆಯೂ ಜನಿಸಿರುವನು. ಹಿಂದಿನ ಜನ್ಮದಲ್ಲಿ ಪ್ರಮತಿ ಯೆಂದು ಪ್ರಸಿದ್ಧನಾದ ಆ ವಿಷ್ಣುವು ಚಂದ್ರನ ಗೋತ್ರದಲ್ಲಿ ವೇದವ್ಯಾಸನಂತೆ ಪ್ರತಾಪವುಳ್ಳ ವಿಷ್ಣುಯಶ ಎಂಬ ಹೆಸರಿನಿಂದ ಹತ್ತನೆ ಕಲ್ಕಿಯಾಗಿ ಯಾಜ್ಞವಲ್ಕ್ಯ ನೊಡನೆ ಜನಿಸುವನು. ಅವನು ಆನೆ, ಕುದುರೆ, ರಥಗಳಿಂದ ತುಂಬಿದ ಸೇನೆಯಿಂದ ಆಯುಧಗಳನ್ನು ಧರಿಸಿದ ಅನೇಕ ಲಕ್ಷ ಬ್ರಾಹ್ಮಣರೊಡನೆ ಶೂದ್ರರಾಜರನ್ನು ಸಂಪೂರ್ಣವಾಗಿ ಕೊಲ್ಲುವನು.

೮೩–೮೪. ಬಲಿಷ್ಠನೂ, ಶೂರರನ್ನು ನಾಶಗೊಳಿಸುವವನೂ ಆದ ಅವನು ಚಕ್ರದಿಂದ ಪಾಷಂಡರು, ಮ್ಲೇಚ್ಛರು, ಕಳ್ಳರು, ಅತ್ಯಂತ ಅಧಾರ್ಮಿಕರು, ವೇದ

ಪ್ರವೃತ್ತಚಕ್ರೋ ಬಲವಾಂಛೂರಾಣಾಮಂತಕೋ ಬಲೀ ।
ಅದೃಶ್ಯಃ ಸರ್ವಭೂತಾನಾಂ ಪೃಥಿವೀಂ ವಿಚರಿಷ್ಯತಿ ॥ ೮೪ ॥
ಮಾನವಸ್ಯ ತು ಸೋಽಂಶೇನ ದೇವಸ್ಯ ಭುವಿ ವೈ ಪ್ರಭುಃ ।
ಕ್ಷಪಯಿತ್ವಾ ತು ತಾನ್ ಸರ್ವಾನ್ ಭಾವಿನಾರ್ಥೇನ ನೋದಿತಾನ್ ॥
ಗಂಗಾಯಮುನಯೋರ್ಮಧ್ಯೇ ನಿಷ್ಠಾಂ ಪ್ರಾಪ್ಸ್ಯತಿ ಸಾನುಗಃ ॥ ೮೫ ॥
ತತೋ ವ್ಯತೀತೇ ಕಲ್ಕೌ ತು ಸಾಮಾತ್ಯೇ ಸಹ ಸೈನಿಕೇ ।
ನೃಪೇಷ್ವಪಿ ಚ ನಷ್ಟೇಷು ತದಾತ್ವಪ್ರಹರಾಃ ಪ್ರಜಾಃ ॥ ೮೬ ॥
ರಕ್ಷಣೇ ವಿನಿವೃತ್ತೇ ಚ ಹತ್ವಾ ಚಾಽನ್ಯೋನ್ಯಮಾಹವೇ ।
ಪರಸ್ಪರಹತಾಸ್ತಾಶ್ಚ ನಿರಾಕ್ರಂದಾಃ ಸುದುಃಖಿತಾಃ ॥ ೮೭ ॥
ಕ್ಷೀಣೇ ಕಲಿಯುಗೇ ಚಾಽಸ್ಮಿನ್ ದಶವರ್ಷಸಹಸ್ರಕೇ ।
ಸ ಸಂಧ್ಯಾಂಶೇ ತು ನಿಃಶೇಷೇ ಕೃತಂ ವೈ ಪ್ರತಿಪತ್ಸ್ಯತಿ ॥ ೮೮ ॥
ಯದಾ ಚಂದ್ರಶ್ಚ ಸೂರ್ಯಶ್ಚ ತಥಾ ತಿಷ್ಯಬೃಹಸ್ಪತೀ ।
ಏಕರಾಶೌ ಸಮೇಷ್ಯಂತಿ ಪ್ರಪತ್ಸ್ಯತಿ ತದಾ ಕೃತಂ ॥ ೮೯ ॥
ಅಭಿಜಿನ್ನಾಮ ನಕ್ಷತ್ರಂ ಜಯಂತೀ ನಾಮ ಶರ್ವರೀ ।
ಮುಹೂರ್ತೋ ವಿಜಯೋನಾಮ ಯತ್ರ ಜಾತೋ ಜನಾರ್ದನಃ ॥ ೯೦ ॥

ಬ್ರಾಹ್ಮಣ ದ್ವೇಷಿಗಳು– ಇವರನ್ನು ಕೊಲ್ಲುತ್ತ ಸಕಲ ಪ್ರಾಣಿಗಳಿಗೂ ಕಾಣದಂತೆ ಭೂಮಿಯಲ್ಲಿ ಸಂಚರಿಸುವನು.

೮೫. ದೇವಾಂಶದಿಂದ ಭೂಮಿಯಲ್ಲಿ ಮಾನವನಾಗಿ ಅವತರಿಸಿದ ಆ ವಿಷ್ಣುವು ಸಕಲ ದುಷ್ಟರನ್ನೂ ಸಂಹರಿಸಿ ಗಂಗಾಯಮುನಾ ನದಿಗಳ ಮಧ್ಯದಲ್ಲಿ ನೆಲಸುವನು.

೮೬–೮೭. ಬಳಿಕ ಮಂತ್ರಿಗಳಿಂದಲೂ, ಸೈನಿಕರಿಂದಲೂ ಸಹಿತನಾದ ಕಲಿಯು ಹೊರಟು ಹೋಗಲು, ರಾಜರೂ ನಾಶಗೊಳ್ಳಲು ರಕ್ಷಿಸುವವರಿಲ್ಲದಿರಲು, ಪ್ರಜೆಗಳು ಆ ಕಾಲದ ಆಯುಧಗಳನ್ನು ಧರಿಸಿ ಪರಸ್ಪರ ಹೊಡೆದುಕೊಂಡು ಕೂಗಿಕೊಳ್ಳದೆ ಅತ್ಯಂತ ದುಃಖದಿಂದ ಮಡಿಯುವರು.

೮೮ ಹತ್ತು ಸಾವಿರ ವರ್ಷ ಪ್ರಮಾಣವುಳ್ಳ ಕಲಿಯುಗವು ಸಂಧ್ಯಾಂಶದೊಡನೆ ಮುಗಿಯಲು ಕೃತಯುಗವು ಆರಂಭವಾಗುವುದು.

೮೯–೯೦ ಚಂದ್ರಸೂರ್ಯರೂ, ಪುಷ್ಯ ನಕ್ಷತ್ರ ಬೃಹಸ್ಪತಿಗಳೂ ಒಂದೇ ರಾಶಿಯಲ್ಲಿ ಸೇರಿರಲು, ಕೃಷ್ಣನು ಅವತರಿಸಿದ ಅಭಿಜಿನ್ನಕ್ಷತ್ರ, ಜಯಂತೀ ಎಂಬ ರಾತ್ರಿ, ವಿಜಯ ಎಂಬ ಮುಹೂರ್ತ ಇವುಗಳ ಯೋಗದಲ್ಲಿ ಕೃತಯುಗವು ಆರಂಭಿಸುವುದು.

ದೇವ್ಯುವಾಚ:—

ನೋಕ್ತಂ ಯಥಾವದಖಿಲಂ ಭೃಗುಶಾಪವಿಚೇಷ್ಟಿತಂ ।
ಪೂರ್ವಾವತಾರಾನ್ ಮೇ ಬ್ರೂಹಿ ನೋಕ್ತಪೂರ್ವಾನ್ ಮಹೇಶ್ವರ ॥೯೧॥

ಈಶ್ವರ ಉವಾಚ:—

ಯದಾ ತು ಪೃಥಿವೀ ವ್ಯಾಪ್ತಾ ದಾನವೈರ್ಬಲವತ್ತರೈಃ ।
ತತಃ ಪ್ರಭೃತಿ ಶಾಪೇನ ಭೃಗುನೈಮಿತ್ತಿಕೇನ ಹ ॥ ೯೨ ॥
ಜಜ್ಞೇ ಪುನಃಪುನರ್ವಿಷ್ಣುಃ ಕರ್ತುಂ ಧರ್ಮವ್ಯವಸ್ಥಿತಿಂ ।
ಧರ್ಮಾನ್ನಾರಾಯಣಃ ಸಾಧ್ಯಃ ಸಂಭೂತಶ್ಚಾಕ್ಷುಷೇಂತರೇ ॥ ೯೩ ॥
ಯಜ್ಞಂ ಪ್ರವರ್ತಯಾಮಾಸ ಸ ಚ ವೈವಸ್ವತೇಽಂತರೇ ।
ಪ್ರಾದುರ್ಭಾವೇ ತದಾ ತಸ್ಯ ಬ್ರಹ್ಮಾ ಚಾಽಽಸೀತ್ಪುರೋಹಿತಃ ॥ ೯೪ ॥
ಚತುರ್ಥ್ಯಾಂ ತು ಯುಗಾಖ್ಯಾಯಾಮಾಪನ್ನೇಷು ಸುರೇಷ್ವಿಹ ।
ಸಂಭೂತಃ ಸ ಸಮುದ್ರಾತ್ತು ಹಿರಣ್ಯಕಶಿಪೋರ್ವಧೇ ॥ ೯೫ ॥
ದ್ವಿತೀಯೋ ನರಸಿಂಹೋಽಭೂದ್ರುದ್ರಸ್ತಸ್ಯ ಪುರಸ್ಸರಃ ।
ಲೋಕೇಷು ಬಲಿಸಂಸ್ಥೇಷು ತ್ರೇತಾಯಾಂ ಸಪ್ತಮೇ ಯುಗೇ ॥ ೯೬ ॥

---

೯೧. ದೇವಿಯು ಕೇಳುತ್ತಾಳೆ :— ಮಹೇಶ್ವರ ! ನೀನು ವಿಷ್ಣುವಿಗೆ ಭೃಗುವು ಕೊಟ್ಟ ಶಾಪವನ್ನು ಸಂಪೂರ್ಣವಾಗಿ ಹೇಳಲಿಲ್ಲ. ಹಿಂದೆ ಹೇಳದ ವಿಷ್ಣುವಿನ ಅವತಾರಗಳನ್ನು ಈಗ ಹೇಳು.

೯೨-೯೪. ಈಶ್ವರನು ಹೇಳುತ್ತಾನೆ :— ಭೂಮಿಯು ಬಲಿಷ್ಠರಾದ ದಾನವರಿಂದ ವ್ಯಾಪ್ತವಾಗಿರಲು ವಿಷ್ಣುವು ಭೃಗುಶಾಪದ ನಿಮಿತ್ತದಿಂದ ಧರ್ಮದ ವ್ಯವಸ್ಥೆಗಾಗಿ ತಿರುಗಿ ತಿರುಗಿ ಅವತರಿಸಿದನು. ಚಾಕ್ಷುಷಮನ್ವಂತರದಲ್ಲಿ ಧರ್ಮದಿಂದ ಸಾಧ್ಯನಾಗಿ ಅವತರಿಸಿದ ಆ ನಾರಾಯಣನು ವೈವಸ್ವತಮನ್ವಂತರದಲ್ಲಿ ಯಜ್ಞಮಾಡ ತೊಡಗಿದನು. ಆಗ ಅವನಿಗೆ ಬ್ರಹ್ಮನು ಪುರೋಹಿತನಾದನು.

೯೫-೯೬. ಯುಗಾಖ್ಯಚತುರ್ಥಿಯಲ್ಲಿ ದೇವತೆಗಳು ಆಪತ್ತನ್ನು ಹೊಂದಲು ಆ ವಿಷ್ಣುವು ಸಮುದ್ರದಿಂದ ಹಿರಣ್ಯಕಶಿಪುವಿನ ವಧೆಗಾಗಿ ರುದ್ರನೊಡನೆ ಎರಡನೆ ನರಸಿಂಹನಾಗಿ ಅವತರಿಸಿದನು. ಏಳನೆ ತ್ರೇತಾಯುಗದಲ್ಲಿ ಲೋಕಗಳು ಬಲಿ ಚಕ್ರವರ್ತಿಯವಶವಾಗಿರಲು, ದೈತ್ಯರು ಮೂರು ಲೋಕಗಳನ್ನು ಆಕ್ರಮಿಸಿರಲು ಆ

ದೈತ್ಯೈಸ್ತ್ರೈಲೋಕ್ಯ ಆಕ್ರಾಂತೇ ತೃತೀಯೋ ವಾಮನೋಽಭವತ್ ।
ಸಂಕ್ಷಿಪ್ಯಾತ್ಮಾನಮಂಗೇಷು ಬೃಹಸ್ಪತಿಪುರಸ್ಸರಃ ॥ ೯೭ ॥
ತ್ರೇತಾಯುಗೇ ತು ದಶಮೋ ದತ್ತಾತ್ರೇಯೋ ಬಭೂವ ಹ ।
ನಷ್ಟೇ ಧರ್ಮೇ ಚತುರ್ಥಾಂಶೇ ಮಾರ್ಕಂಡೇಯಪುರಸ್ಸರಃ ।
ಏತೇ ದಿವ್ಯಾವತಾರಾ ವೈ ಮಾನುಷ್ಯೇ ಕಥಿತಾಃ ಪುರಾ ॥ ೯೮ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀವಿಷ್ಣ್ವವತಾರವರ್ಣನಂ ನಾಮ
ಏಕೋನವಿಂಶೋಽಧ್ಯಾಯಃ

ನಾರಾಯಣನು ಬೃಹಸ್ಪತಿಯೊಡನೆ ತನ್ನ ಅಂಗಗಳನ್ನು ಸಂಕೋಚಮಾಡಿಕೊಂಡು ಮೂರನೆಯ ವಾಮನನಾಗಿ ಅವತಾರ ಮಾಡಿದನು.

೯೮. ಹತ್ತನೆಯ ತ್ರೇತಾಯುಗದಲ್ಲಿ ನಾಲ್ಕನೆಯ ಒಂದಂಶವು ನಷ್ಟವಾಗಲು ಆ ನಾರಾಯಣನು ಮಾರ್ಕಂಡೇಯನೊಡನೆ ದತ್ತಾತ್ರೇಯನಾದನು. ಹೀಗೆ ವಿಷ್ಣುವಿನ ಹಿಂದಿನ ದಿವ್ಯಾವತಾರಗಳನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಶ್ರೀವಿಷ್ಣ್ವವತಾರವರ್ಣನವೆಂಬ
ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ವಿಂಶೋಽಧ್ಯಾಯಃ

ಚಂದ್ರೋತ್ಪತ್ತಿವರ್ಣನಂ

ಈಶ್ವರ ಉವಾಚ :—

ಅಥ ದೈತ್ಯಾವತಾರಾಣಾಂ ಕ್ರಮೋ ಹಿ ಕಥ್ಯತೇ ಪುನಃ ।
ಹಿರಣ್ಯಕಶಿಪೂ ರಾಜಾ ವರ್ಷಾಣಾಮರ್ಬುದಂ ಬಭೌ ॥ ೧ ॥
ತಥಾ ಶತಸಹಸ್ರಾಣಿ ಯಾನಿ ಕಾನಿ ದ್ವಿಸಪ್ತತಿಂ ।
ಅಶೀತಿಂ ಚ ಸಹಸ್ರಾಣಿ ತ್ರೈಲೋಕ್ಯಸ್ಯೇಶ್ವರೋಽಭವತ್ ॥ ೨ ॥
ಸೌತ್ಯೇಽಹನ್ಯತಿರಾತ್ರಸ್ಯ ಕಶ್ಯಪಸ್ಯಾಶ್ವಮೇಧಿಕೇ ॥ ೩ ॥
ಉಪಕ್ಷಿಪ್ತಾಸನಂ ಯತ್ತು ಹೋತುರರ್ಥೇ ಹಿರಣ್ಮಯಂ ।
ನಿಷಸಾದ ಸಗರ್ಭೋಽತ್ರ ಹಿರಣ್ಯಕಶಿಪುಸ್ತತಃ ॥ ೪ ॥
ಶತವರ್ಷಸಹಸ್ರಾಣಾಂ ತಪಶ್ಚಕ್ರೇ ಸುದುಶ್ಚರಂ ।
ದಶವರ್ಷಸಹಸ್ರಾಣಿ ದಿತ್ಯಾ ಗರ್ಭೇ ಸ್ಥಿತಃ ಪುರಾ ॥ ೫ ॥

ಕನ್ನಡದ ಅನುವಾದ

ಚಂದ್ರೋತ್ಪತ್ತಿವರ್ಣನ

೧–೨. ಈಶ್ವರನು ಹೇಳುತ್ತಾನೆ:—ಬಳಿಕ ದೈತ್ಯಾವತಾರಗಳ ಕ್ರಮವನ್ನು ಹೇಳುವೆನು. ಹಿರಣ್ಯಕಶಿಪುವು ಒಂದು ಲಕ್ಷ ಎಂಬತ್ತು ಸಾವಿರದ ಎಪ್ಪತ್ತೆರಡು ವರ್ಷ ಕಾಲ ಮೂರು ಲೋಕಗಳಿಗರಸನಾದನು.

೩–೫. ಕಶ್ಯಪನ ಅಶ್ವಮೇಧಯಾಗದ ಅತಿರಾತ್ರದ ಸೌತ್ಯಾಹಸ್ಸಿನಲ್ಲಿ ಹೋತೃವಿಗಾಗಿ ಹಾಕಿರುವ ಸುವರ್ಣಾಸನದಲ್ಲಿ ಹಿರಣ್ಯಕಶಿಪುವು ಕುಳಿತುಕೊಂಡು ಒಂದು ಲಕ್ಷ ವರ್ಷಕಾಲ ಘೋರ ತಪಸ್ಸನ್ನಾಚರಿಸಿದನು. ಅವನು ಹಿಂದೆ ಹತ್ತು ಸಾವಿರ ವರ್ಷ ದಿತಿಯ ಗರ್ಭದಲ್ಲಿದ್ದನು.

ಹಿರಣ್ಯಕಶಿಪೋರ್ದೈತ್ಯೈಃ ಶ್ಲೋಕೋ ಗೀತಃ ಪುರಾತನಃ ।
ರಾಜಾ ಹಿರಣ್ಯಕಶಿಪುರ್ಯಾಂಯಾಮಾಶಾಂ ನಿರೀಕ್ಷತೇ ॥ ೬ ॥
ತಸ್ಯಾಂ ತಸ್ಯಾಂ ದಿಶಿ ಸುರಾ ನಮಶ್ಚಕ್ರುಃ ಸಹರ್ಷಿಭಿಃ ।
ಪರ್ಯಾಯೇ ತಸ್ಯ ರಾಜಾಽಭೂದ್ಬಲಿರ್ವರ್ಷಾರ್ಬುದಂ ಪುನಃ ॥ ೭ ॥
ಷಷ್ಟಿಂ ಚೈವ ಸಹಸ್ರಾಣಿ ತ್ರಿಂಶಚ್ಚ ನಿಯುತಾನಿ ಚ ।
ಬಲೇ ರಾಜ್ಯಾಧಿಕಾರಸ್ತು ಯಾವತ್ಕಾಲಂ ಬಭೂವ ಹ ॥ ೮ ॥
ಪ್ರಹ್ಲಾದೋ ನಿಗೃಹೀತೋಽಭೂತ್ತಾವತ್ಕಾಲಂ ತಥಾ ಸರ್ವೈಃ ।
ಇಂದ್ರಾದಯಸ್ತೇ ವಿಖ್ಯಾತಾ ಅಸುರಾಂಜಘ್ನುರೋಜಸಾ ॥ ೯ ॥
ದೈತ್ಯಸಂಸ್ಥಮಿದಂ ಸರ್ವಮಾಸೀದ್ದಶಯುಗಂ ಕಿಲ ।
ಅಸಪತ್ನಂ ತತಃ ಸರ್ವಮಷ್ಟಾದಶಯುಗಂ ಪುನಃ ॥ ೧೦ ॥
ತ್ರೈಲೋಕ್ಯಮಿದಮವ್ಯಗ್ರಂ ಮಹೇಂದ್ರೇಣ ತು ಪಾಲಿತಂ ।
ತ್ರೇತಾಯುಗೇ ತು ದಶಮೇ ಕಾರ್ತವೀರ್ಯೋ ಮಹಾಬಲಃ ॥ ೧೧ ॥
ಪಂಚಾಽಶೀತಿ ಸಹಸ್ರಾಣಿ ವರ್ಷಾಣಾಂ ವೈ ನರಾಧಿಪಃ ।
ಸ ಸಪ್ತರತ್ನವಾನ್ ಸಮ್ರಾಟ್ ಚಕ್ರವರ್ತೀ ಬಭೂವ ಹ ॥ ೧೨ ॥
ದ್ವೀಪೇಷು ಸಪ್ತಸು ಸ ವೈ ಖಡ್ಗೀ ಚರ್ಮೀ ಶರಾಸನೀ ।
ರಥೀ ರಾಜಾ ಸಾಽನುಚರೋ ಯೋಗಾಚ್ಚೋರಾನಪಶ್ಯತ ॥ ೧೩ ॥

೬–೯. ಈ ಹಿರಣ್ಯಕಶಿಪುವಿನ ವಿಷಯದಲ್ಲಿ ದೈತ್ಯರು ಈ ಅರ್ಥವುಳ್ಳ ಶ್ಲೋಕವನ್ನು ಪಠಿಸುತ್ತಿದ್ದರು. " ದೊರೆಯಾದ ಹಿರಣ್ಯಕಶಿಪುವು ಯಾವ ಯಾವ ದಿಕ್ಕನ್ನು ನೋಡುತ್ತಿದ್ದನೊ ಆ ಆ ದಿಕ್ಕಿನಲ್ಲಿರುವ ದೇವತೆಗಳು ಋಷಿಗಳೊಡನೆ ಅವನಿಗೆ ನಮಸ್ಕಾರಮಾಡುತ್ತಿದ್ದರು " ಕಾಲಕ್ರಮದಿಂದ ಬಲಿಯು ಒಂದು ಅರ್ಬುದ ಮೂವತ್ತು ನಿಯುತದ ಅರುವತ್ತು ವರ್ಷಗಳ ಕಾಲ ರಾಜ್ಯವಾಳುತ್ತಿರಲು ಇಂದ್ರಾದಿ ದೇವತೆಗಳು ಪ್ರಹ್ಲಾದನನ್ನು ನಿಗ್ರಹಿಸಿ ದೈತ್ಯರನ್ನು ಕೊಂದರು.

೧೦–೧೨. ಈ ಮೂರು ಲೋಕಗಳೂ ಹತ್ತು ಯುಗಗಳ ಕಾಲ ದೈತ್ಯರವಶದಲ್ಲಿದ್ದಿತು. ಬಳಿಕ ಶತ್ರುಗಳಿಲ್ಲದ ಈ ಲೋಕಗಳನ್ನು ಹದಿನೆಂಟು ಯುಗಗಳಕಾಲ ದೇವೇಂದ್ರನು ಪಾಲಿಸುತ್ತಿದ್ದನು. ಹತ್ತನೆಯ ತ್ರೇತಾಯುಗದಲ್ಲಿ ಅತ್ಯಂತ ಬಲಶಾಲಿಯಾದ ಕಾರ್ತವೀರ್ಯನು ಎಂಬತ್ತೈದು ಸಾವಿರ ವರ್ಷಕಾಲ ಚಕ್ರವರ್ತಿಯಾಗಿ ರಾಜ್ಯವಾಳಿದನು.

೧೩. ಕಾರ್ತವಿರ್ಯನು ಏಳು ದ್ವೀಪಗಳಲ್ಲಿಯೂ ಸೇವಕರೊಡನೆ ಕತ್ತಿ, ಗುರಾಣಿ. ಬಿಲ್ಲುಗಳನ್ನು ಧರಿಸಿ ರಥವನ್ನೇರಿ ಸಂಚರಿಸುತ್ತ ಕಳ್ಳರನ್ನು ಕಂಡುಹಿಡಿಯುತ್ತಿದ್ದನು.

ಪ್ರಣಷ್ಟದ್ರವ್ಯತಾ ಯಸ್ಯಸ್ಮರಣಾನ್ನ ಭವೇನ್ನೃಣಾಂ ।
ಚತುರ್ಯುಗೇ ತ್ವತಿಕ್ರಾಂತೇ ಮನೌ ಹ್ಯೇಕಾದಶೇ ಪ್ರಭೌ ॥ ೧೪ ॥
ಅರ್ಧಾವಶಿಷ್ಟೇ ತಸ್ಮಿಂಸ್ತು ದ್ವಾಪರೇ ಸಂಪ್ರವರ್ತಿತೇ ।
ಮಾನವಸ್ಯ ನರಿಷ್ಯಂತೋ ಹ್ಯಾಸೀತ್ಪುತ್ರೋ ಮದಃ ಕಿಲ ॥ ೧೫ ॥
ನವಮಸ್ತಸ್ಯ ದಾಯಾದಸ್ತೃಣಬಿಂದುರಿತಿ ಸ್ಮೃತಃ ।
ತ್ರೇತಾಯುಗಮುಖೇ ರಾಜಾ ತೃತೀಯೇ ಸಂಬಭೂವ ಹ ॥ ೧೬ ॥
ತಸ್ಯ ಕನ್ಯಾ ತ್ವಿಲವಿಲಾ ರೂಪೇಣಾಽಪ್ರತಿಮಾಽಭವತ್ ।
ಪುಲಸ್ತ್ಯಾಯ ಸ ರಾಜರ್ಷಿಸ್ತಾಂ ಕನ್ಯಾಂ ಪ್ರತ್ಯಪಾದಯತ್ ॥ ೧೭ ॥
ಋಷಿರೈಲವಿಲೋ ಯಸ್ಯಾಂ ವಿಶ್ರವಾಃ ಸಮಪದ್ಯತ ।
ತಸ್ಯ ಪತ್ನ್ಯಶ್ಚತಸ್ರಸ್ತು ಪೌಲಸ್ತ್ಯ ಕುಲಮಂಡನಾಃ ॥ ೧೮ ॥
ಬೃಹಸ್ಪತೇಃ ಶುಭಾ ಕನ್ಯಾ ನಾಮ್ನಾ ವೈ ವೇದವರ್ಣಿನೀ ।
ಪುಷ್ಪೋತ್ಕಟಾ ಚ ಬೀಕಾ ಚ ಉಭೇ ಮಾಲ್ಯವತಃ ಸುತೇ ॥ ೧೯ ॥
ಕೇಕಸೀ ಮಾಲಿನಃ ಕನ್ಯಾ ತಸ್ಯಾಂ ದೇವಿ ಶೃಣು ಪ್ರಜಾಃ ।
ಜ್ಯೇಷ್ಠಂ ವೈಶ್ರವಣಂ ತಸ್ಯ ಸುಷುವೇ ವರವರ್ಣಿನೀ ॥ ೨೦ ॥

೧೪–೧೫. ಈ ಕಾರ್ತವೀರ್ಯನನ್ನು ಸ್ಮರಿಸಿದ ನರರ ದ್ರವ್ಯಗಳು ನಾಶವಾಗುವುದಿಲ್ಲ. ನಾಲ್ಕುಯುಗಗಳು ಕಳೆಯಲು ದೊರೆಯಾದ ಹನ್ನೊಂದನೆಯ ಮನುವಿನ ಅರ್ಧಕಾಲವು ಉಳಿಯಲು, ಸಂಭವಿಸಿದ ದ್ವಾಪರ ಯುಗದಲ್ಲಿ ನರಿಷ್ಯಂತ ಮನುವಿಗೆ ಮದನೆಂಬ ಪುತ್ರನು ಜನಿಸಿದನು.

೧೬. ಅವನ ಒಂಬತ್ತನೆಯ ಮಗನಾದ ತೃಣಬಿಂದುವು ಮೂರನೆಯ ತ್ರೇತಾ ಯುಗದ ಆರಂಭದಲ್ಲಿ ದೊರೆಯಾದನು

೧೭. ಅವನಿಗೆ ಇಲವಿಲಾ ಎಂಬ ಸುಂದರಿಯಾದ ಕನ್ಯೆಯು ಜನಿಸಿದಳು. ತೃಣಬಿಂದುರಾಜನು ಮಗಳಾದ ಆ ಇಲವಿಲೆಯನ್ನು ಪುಲಸ್ತ್ಯನಿಗೆ ಮದುವೆಮಾಡಿ ಕೊಟ್ಟನು.

೧೮. ಅವಳಲ್ಲಿ ವಿಶ್ರವಸ್ಸೆಂಬ ಮಗನು ಹುಟ್ಟಿದನು. ಅವನಿಗೆ ಪುಲಸ್ತ್ಯ ವಂಶಕ್ಕೆ ಅಲಂಕಾರ ಪ್ರಾಯರಾದ ನಾಲ್ಕುಮಂದಿ ಪತ್ನಿಯರಾದರು.

೧೯–೨೦. ಅವರಲ್ಲಿ ಒಬ್ಬಳು ಬೃಹಸ್ಪತಿಯ ಮಗಳಾದ ವೇದವರ್ಣಿನಿಯು. ಇನ್ನಿಬ್ಬರು ಮಾಲ್ಯವಂತನ ಮಕ್ಕಳು. ಪುಷ್ಪೋತ್ಕಟಾ, ಬೀಕಾ ಎಂದು ಅವರ ಹೆಸರುಗಳು ನಾಲ್ಕನೆಯವಳು ಮಾಲಿಯಮಗಳಾದ ಕೇಕಸಿ ಇವಳ ಹಿರಿಯಮಗನೇಕುಬೇರ.

ಅಷ್ಟದಂತಂ ಹರಿಚ್ಛ್ಮಶ್ರುಂ ಶಂಕುಕರ್ಣಂ ವಿಲೋಹಿತಂ ।
ಶ್ವಪಾದಂ ಹ್ರಸ್ವಬಾಹುಂ ಚ ಪಿಂಗಲಂ ಶುಚಿಭೂಷಣಂ ॥ ೨೧ ॥
ತ್ರಿಪಾದಂ ತು ಮಹಾಕಾಯಂ ಸ್ಥೂಲಶೀರ್ಷಂ ಮಹಾಹನುಂ ।
ಏವಂವಿಧಂ ಸುತಂ ದೃಷ್ಟ್ವಾ ವಿರೂಪಂ ರೂಪತಸ್ತದಾ ॥ ೨೨ ॥
ತದಾ ದೃಷ್ಟ್ವಾಽಬ್ರವೀತ್ತಂ ತು ಕುಬೇರೋಽಯಮಿತಿ ಸ್ವಯಂ ।
ಕುತ್ಸಾಯಾಂ ಕ್ಷಿತಿಶಬ್ದೋಽಯಂ ಶರೀರಂ ಬೇರಮುಚ್ಯತೇ ॥ ೨೩ ॥
ಕುಬೇರಃ ಕುಶರೀರತ್ವಾನ್ನಾಮ್ನಾ ತೇನ ಚ ಸೋಽಂಕಿತಃ ।
ತಸ್ಯ ಭಾರ್ಯಾಽಭವದ್ವೃದ್ಧಿಃ ಪುತ್ರಸ್ತು ನಲಕೂಬರಃ ॥ ೨೪ ॥
ಕೈಕಸ್ಯಜನಯತ್ಪುತ್ರಂ ರಾವಣಂ ರಾಕ್ಷಸಾಧಿಪಂ ।
ಶಂಕುಕರ್ಣಂ ದಶಗ್ರೀವಂ ಪಿಂಗಲಂ ರಕ್ತಮೂರ್ಧಜಂ ॥ ೨೫ ॥
ವಸುಪಾದಂ ವಿಂಶದ್ಭುಜಂ ಮಹಾಕಾಯಂ ಮಹಾಬಲಂ ।
ಕಾಲಾಂಜನನಿಭಂ ಚೈವ ದಂಷ್ಟ್ರಿಣಂ ರಕ್ತಲೋಚನಂ ॥ ೨೬ ॥
ರಾಕ್ಷಸೇನೌಜಸಾ ಯುಕ್ತಂ ರೂಪೇಣ ಚ ಬಲೇನ ಚ ।
ನಿಸರ್ಗಾದ್ದಾರುಣಃ ಕ್ರೂರೋ ರಾವಣಾದ್ರಾವಣಃ ಸ್ಮೃತಃ ॥ ೨೭ ॥

೨೧–೨೪. ಇವನು ಎಂಟು ಹಲ್ಲುಗಳುಳ್ಳವನೂ, ಹಸುರು ಮೀಸೆಯುಳ್ಳವನೂ ಶಂಕುವಿನಂತೆ ಕಿವಿಗಳುಳ್ಳವನೂ, ನಾಯಿಯಂತೆ ಕಾಲುಗಳುಳ್ಳವನೂ, ಮೋಟಾದ ತೋಳುಗಳುಳ್ಳವನೂ, ಹಳದಿಬಣ್ಣದವನೂ, ಬಿಳಿ ಒಡವೆಗಳುಳ್ಳವನೂ, ಮೂರುಕಾಲುಗಳುಳ್ಳವನೂ, ದೊಡ್ಡದೇಹವುಳ್ಳವನೂ, ದಪ್ಪವಾದ ತಲೆಯುಳ್ಳವನೂ, ದೊಡ್ಡ ಕೆನ್ನೆಯುಳ್ಳವನೂ ಆಗಿದ್ದನು. ಇಂತಹ ಕುರೂಪಿಯಾದ ಇವನನ್ನು ನೋಡಿ ತಾಯಿಯು ಕುಬೇರನೆಂದು ಕರೆದಳು. ಕುಶಬ್ದವು ನಿಂದಾರ್ಥಕವೂ, ಬೇರ ಶಬ್ದವು ಶರೀರಾರ್ಥಕವೂ ಆಗಿರುವುದು. ಇವನು ಕುತ್ಸಿತದೇಹವುಳ್ಳವನಾದ್ದರಿಂದ ಕುಬೇರ ನಾಮಕನಾದನು. ಇವನಿಗೆ ವೃದ್ಧಿಯೆಂಬ ಪತ್ನಿಯೂ, ನಲಕೂಬರನೆಂಬ ಮಗನೂ ಇದ್ದರು.

೨೫–೨೬. ಬಳಿಕ ಕೇಕಸಿಯು ಶಂಕುವಿನಂತೆ ಕಿವಿಯುಳ್ಳವನೂ, ಹತ್ತು ಕುತ್ತಿಗೆಯುಳ್ಳವನೂ, ಹಳದಿಬಣ್ಣವುಳ್ಳವನೂ, ಕೆಂಪು ತಲೆಕೂದಲುಗಳುಳ್ಳವನೂ, (ಎಂಟು) ನಾಲ್ಕುಕಾಲುಗಳುಳ್ಳವನೂ, ಇಪ್ಪತ್ತು ತೋಳುಗಳುಳ್ಳವನೂ, ದೊಡ್ಡದೇಹವುಳ್ಳವನೂ, ಅತಿಬಲಿಷ್ಠನೂ, ಕಪ್ಪುಕಾಡಿಗೆಯಂತಿರುವವನೂ, ಕೋರೆಹಲ್ಲುಗಳುಳ್ಳವನೂ, ಕೆಂಪು ಕಣ್ಣುಗಳುಳ್ಳವನೂ, ಆದ ರಾವಣನನ್ನು ಪಡೆದಳು.

೨೭. ರಾಕ್ಷಸರ ರೂಪ, ಬಲಗಳಿಂದ ಕೂಡಿದ ಇವನು ಸ್ವಾಭಾವಿಕವಾಗಿ ಕಠಿಣನಾದುದರಿಂದ ರಾವಣನೆಂಬ ಹೆಸರನ್ನು ಪಡೆದನು.

ಹಿರಣ್ಯಕಶಿಪುಸ್ತ್ವಾಸೀತ್ಸ ರಾಜಾ ಪೂರ್ವಜನ್ಮನಿ ।
ಚತುರ್ಯುಗಾನಿ ರಾಜಾ ತು ತಥಾ ದಶ ಸ ರಾಕ್ಷಸಃ ॥ ೨೮ ॥
ಪಂಚ ಕೋಟೀಸ್ತು ವರ್ಷಾಣಾಂ ಸಂಖ್ಯಾತಾಃ ಸಂಖ್ಯಯಾ ಪ್ರಿಯೇ ।
ನಿಯುತಾನ್ಯೇಕಷಷ್ಟಿಂ ಚ ಸಂಖ್ಯಾವದ್ಭಿರುದಾಹೃತಂ ॥ ೨೯ ॥
ಷಷ್ಟಿಂ ಚೈವ ಸಹಸ್ರಾಣಿ ವರ್ಷಾಣಾಂ ಸ ಹಿ ರಾವಣಃ ।
ದೇವತಾನಾಮೃಷೀಣಾಂ ಚ ಘೋರಂ ಕೃತ್ವಾ ಪ್ರಜಾಗರಂ ॥ ೩೦ ॥
ತ್ರೇತಾಯುಗೇ ಚತುರ್ವಿಂಶೇ ರಾವಣಸ್ತಪಸಃ ಕ್ಷಯಾತ್ ।
ರಾಮಂ ದಾಶರಥಿಂ ಪ್ರಾಪ್ಯ ಸಗಣಃ ಕ್ಷಯಮೇಯಿವಾನ್ ॥ ೩೧ ॥
ಯೋಽಸೌ ದೇವಿ ದಶಗ್ರೀವಃ ಸಂಬಭೂವಾಽರಿಮರ್ದನಃ ।
ದಮಘೋಷಸ್ಯ ರಾಜರ್ಷೇಃ ಪುತ್ರೋ ವಿಖ್ಯಾತಪೌರುಷಃ ॥ ೩೨ ॥
ಶ್ರುತಶ್ರವಾಯಾಂ ಚೈದ್ಯಸ್ತು ಶಿಶುಪಾಲೋ ಬಭೂವ ಹ ।
ರಾವಣಂ ಕುಂಭಕರ್ಣಂ ಚ ಕನ್ಯಾಂ ಶೂರ್ಪಣಖಾಂ ತಥಾ ॥ ೩೩ ॥
ವಿಭೀಷಣಂ ಚತುರ್ಥಂ ಚ ಕೈಕಸ್ಯಜನಯತ್ಸುತಾನ್ ।
ಮನೋಹರಃ ಪ್ರಹಸ್ತಶ್ಚ ಮಹಾಪಾರ್ಶ್ವಃ ಖರಸ್ತಥಾ ॥ ೩೪ ॥
ಪುಷ್ಪೋತ್ಕಟಾಯಾಸ್ತೇ ಪುತ್ರಾಃ ಕನ್ಯಾ ಕುಂಭೀನಸೀ ತಥಾ ।
ತ್ರಿಶಿರಾ ದೂಷಣಶ್ಚೈವ ವಿದ್ಯುಜ್ಜಿಹ್ವಶ್ಚ ರಾಕ್ಷಸಃ ।
ಕನ್ಯೈಕಾ ಶ್ಯಾಮಿಕಾ ನಾಮ ಬೀಕಾಯಾಃ ಪ್ರಸವಃ ಸ್ಮೃತಃ ॥ ೩೫ ॥

---

೨೮. ಇವನು ಹಿಂದಿನ ಜನ್ಮದಲ್ಲಿ ಹಿರಣ್ಯಕಶಿಪುವಾಗಿ ಹುಟ್ಟಿ ಹತ್ತು ಚತುರ್ಯುಗಗಳಕಾಲ ರಾಜನಾಗಿದ್ದನು.

೨೯-೩೧. ಈ ರಾವಣನು ಐದು ಕೋಟಿ ಅರುವತ್ತೊಂದು ನಿಯುತದ ಅರುವತ್ತು ಸಾವಿರ ವರ್ಷಕಾಲ ರಾಜ್ಯವಾಳುತ್ತ ದೇವತೆಗಳಿಗೂ, ಋಷಿಗಳಿಗೂ ಅತ್ಯಂತವಾಗಿ ತೊಂದರೆಯನ್ನುಂಟುಮಾಡಿ ಇಪ್ಪತ್ತನಾಲ್ಕನೆಯ ತ್ರೇತಾಯುಗದಲ್ಲಿ ತಪಸ್ಸು ಕ್ಷೀಣವಾದುದರಿಂದ ದಶರಥ ಸುತನಾದ ರಾಮನಿಂದ ತನ್ನ ಪರಿವಾರದೊಡನೆ ಹತನಾದನು.

೩೨-೩೫. ದೇವಿ! ಈ ದಶಕಂಠನೇ ದಮಘೋಷನೆಂಬ ರಾಜರ್ಷಿಯಿಂದ ಶ್ರುತಶ್ರವೆಯಲ್ಲಿ ಚೇದಿ ರಾಜನಾದ ಶಿಶುಪಾಲನಾಗಿ ಜನಿಸಿರುವನು. ಕೇಕಸಿಯಲ್ಲಿ ರಾವಣ, ಕುಂಭಕರ್ಣ, ಶೂರ್ಪಣಖಾ, ವಿಭೀಷಣ ಎಂಬ ನಾಲ್ಕು ಜನ ಮಕ್ಕಳು ಜನಿಸಿದರು. ಪುಷ್ಪೋತ್ಕಟೆಯಲ್ಲಿ ಮನೋಹರ, ಪ್ರಹಸ್ತ, ಮಹಾಪಾರ್ಶ್ವ, ಖರ, ಕುಂಭೀನಸೀ ಎಂಬ ಮಕ್ಕಳೂ, ಬೀಕೆಯಲ್ಲಿ ತ್ರಿಶಿರಾ, ದೂಷಣ, ವಿದ್ಯುಜ್ಜಿಹ್ವ, ಶ್ಯಾಮಿಕಾ ಎಂಬ ಮಕ್ಕಳೂ ಹುಟ್ಟಿದರು.

ಇತ್ಯೇತೇ ಕ್ರೂರಕರ್ಮಾಣಃ ಪೌಲಸ್ತ್ಯಾ ರಾಕ್ಷಸಾ ನವ ।
ವಿಭೀಷಣೋ ವಿಶುದ್ಧಾತ್ಮಾ ದಶಮಃ ಪರಿಕೀರ್ತಿತಃ ॥ ೩೬ ॥
ಪುಲಹಸ್ಯ ಮೃಗಾಃ ಪುತ್ರಾಃ ಸರ್ವೇ ವ್ಯಾಲಾಶ್ಚ ದಂಷ್ಟ್ರಿಣಃ ।
ಭೂತಾಃ ಪಿಶಾಚಾಃ ಸರ್ಪಾಶ್ಚ ಶೂಕರಾ ಹಸ್ತಿನಸ್ತಥಾ ॥ ೩೭ ॥
ಅನಪತ್ಯಃ ಕ್ರತುಸ್ತಸ್ಮಿನ್ ಸ್ಮೃತೋ ವೈವಸ್ವತೇಽಂತರೇ ।
ಅತ್ರೇಃ ಪತ್ನ್ಯೋ ದಶೈವಾಸನ್ ಸುಂದರ್ಯಶ್ಚ ಪತಿವ್ರತಾ ॥ ೩೮ ॥
ಭದ್ರಾಶ್ವಸ್ಯ ಘೃತಾಚ್ಯಂತಾ ಜಜ್ಞಿರೇ ದಶ ಚಾಪ್ಸರಾಃ ॥ ೩೯ ॥
ಭದ್ರಾ ಶೂದ್ರಾ ಚ ಮದ್ರಾ ಚ ನಲದಾ ಜಲದಾ ತಥಾ ।
ಊರ್ಣಾ ಪೂರ್ಣಾ ಚ ದೇವೇಶಿ ಯಾ ಚ ಗೋಪುಚ್ಛಲಾ ಸ್ಮೃತಾ ॥೪೦॥
ತಥಾ ತಾಮರಸಾ ನಾಮ ದಶಮೀ ರಕ್ತಕೋಟಿಕಾ ।
ಏತಾಸಾಂ ಚ ಮಹಾದೇವಿ ಖ್ಯಾತೋ ಭರ್ತಾ ಪ್ರಭಾಕರಃ ॥೪೧॥
ಸ್ವರ್ಭಾನುನಾ ಹತೇ ಸೂರ್ಯೇ ಪತಿತೇಽಸ್ಮಿನ್ದಿವೋ ಮಹೀಂ ।
ತಮೋಽಭಿಭೂತೇ ಲೋಕೇಽಸ್ಮಿನ್ ಪ್ರಭಾ ಯೇನ ಪ್ರವರ್ತಿತಾ ॥೪೨॥

---

೩೬. ಹೀಗೆ ಪುಲಸ್ತ್ಯನ ವಂಶದಲ್ಲಿ ಕ್ರೂರವಾದ ಒಂಬತ್ತು ಜನ ರಾಕ್ಷಸರೂ, ವಿಶುದ್ಧವಾದ ಮನಸ್ಸುಳ್ಳ ವಿಭೀಷಣನೂ ಹುಟ್ಟಿದರು.

೩೭. ಪುಲಹನಿಂದ ಮೃಗಗಳೂ, ಹಾವುಗಳೂ, ಭೂತಗಳೂ, ಪಿಶಾಚಗಳೂ, ಸರ್ಪಗಳೂ, ಹಂದಿಗಳೂ, ಆನೆಗಳೂ, ಹುಟ್ಟಿದುವು.

೩೮. ಈ ವೈವಸ್ವತ ಮನ್ವಂತರದಲ್ಲಿ ಕ್ರತುವಿಗೆ ಮಕ್ಕಳಾಗಲಿಲ್ಲ. ಅತ್ರಿ ಮುನಿಗೆ ಸುಂದರಿಯರೂ, ಪತಿವ್ರತೆಯರೂ, ಭದ್ರಾಶ್ವನ ಮಕ್ಕಳೂ, ಆದ ಘೃತಾಚಿಯೇ ಕೊನೆಯಾಗುಳ್ಳ ಹತ್ತು ಮಂದಿ ಅಪ್ಸರೆಯರು ಪತ್ನಿಯರಾದರು.

೩೯–೪೧. ಭದ್ರಾ, ಶೂದ್ರಾ, ಮದ್ರಾ, ನಲದಾ, ಜಲದಾ, ಊರ್ಣಾ, ಪೂರ್ಣಾ, ಗೋಪುಚ್ಛಲಾ, ತಾಮರಸಾ, ರಕ್ತಕೋಟಿಕಾ ಎಂಬ ಹತ್ತು ಜನರು ಪ್ರಭಾಕರನ ಪತ್ನಿಯರಾದರು.

೪೨–೪೩. ಕತ್ತಲೆಯಿಂದ ಆವರಿಸಲ್ಪಟ್ಟ ಪ್ರಪಂಚವನ್ನು ಕಿರಣಗಳಿಂದ ಬೆಳಗುತ್ತಿದ್ದ ಸೂರ್ಯನು ರಾಹುವಿನಿಂದ ತಾಡಿತನಾಗಿ ಆಕಾಶದಿಂದ ಭೂಮಿಗೆ ಬೀಳುತ್ತಿರಲು ಬ್ರಹ್ಮರ್ಷಿಗಳು ನಿನಗೆ ಮಂಗಳವಾಗಲಿ ಎಂದು ಆಶೀರ್ವಾದ ಮಾಡಿದರು. ಅದರಿಂದ ಸೂರ್ಯನು ಕೆಳಗೆ ಬೀಳದಿರಲು ಮಹರ್ಷಿಗಳು ಅವನನ್ನು ಪ್ರಭಾಕರನೆಂದು

ಸ್ವಸ್ತಿ ತೇಽಸ್ತ್ವಿತಿ ಚೈವೋಕ್ತಃ ಪತನ್ನಿಹ ದಿವಾಕರಃ ।
ಬ್ರಹ್ಮರ್ಷೇರ್ವಚನಾತ್ತಸ್ಯ ನ ಪಪಾತ ಯತಃ ಪ್ರಭುಃ ॥ ೪೩ ॥
ತತಃ ಪ್ರಭಾಕರೇತ್ಯುಕ್ತಃ ಪ್ರಭುರೇವಂ ಮಹರ್ಷಿಭಿಃ ।
ಭದ್ರಾಯಾಂ ಜನಯಾಮಾಸ ಸೋಮಂ ಪುತ್ರಂ ಯಶಸ್ವಿನಂ ॥ ೪೪ ॥
ತ್ವಿಷಿಮಾನ್ ಧರ್ಮಪುತ್ರಸ್ತು ಸೋಮೋ ದೇವೋ ವರಸ್ತು ಸಃ ।
ಶೀತರಶ್ಮಿಃ ಸಮುತ್ಪನ್ನಃ ಕೃತ್ತಿಕಾಸು ನಿಶಾಚರಃ ॥ ೪೫ ॥
ಪಿತಾ ಸೋಮಸ್ಯ ವೈ ದೇವಿ ಜಜ್ಞೇಽತ್ರಿರ್ಭಗವಾನ್ನೃಷಿಃ ।
ತತ್ರಾಽತ್ರಿಃ ಸರ್ವಲೋಕೇಶಂ ಭೃತ್ವಾ ಸ್ವೇ ನಯನೇ ಸ್ಥಿತಃ ॥ ೪೬ ॥
ಕರ್ಮಣಾ ಮನಸಾ ವಾಚಾ ಶುಭಾನ್ಯೇವ ಸಮಾಚರತ್ ।
ಕಾಷ್ಠಕುಡ್ಯಶಿಲಾಭೂತ ಊರ್ಧ್ವಬಾಹುರ್ಮಹಾದ್ಯುತಿಃ ॥ ೪೭ ॥
ಸುದುಸ್ತರಂ ನಾಮ ತಪಸ್ತೇನ ತಪ್ತಂ ಮಹತ್ಪುರಾ ।
ತ್ರೀಣಿ ವರ್ಷಸಹಸ್ರಾಣಿ ದಿವ್ಯಾಸಿ ಸುರಸುಂದರಿ ॥ ೪೮ ॥
ತಸ್ಯೋರ್ಧ್ವರೇತಸಸ್ತತ್ರ ಸ್ಥಿತಸ್ಯಾಽನಿಮಿಷಸ್ಯ ಹ ।
ಸೋಮತ್ವಂ ವಪುರಾಪೇದೇ ಮಹಾಬುದ್ಧೇಸ್ತು ವೈ ಶುಭೇ ॥ ೪೯ ॥
ಊರ್ಧ್ವಮಾಚಕ್ರಮೇ ತಸ್ಯ ಸೋಮಸಂಭಾವಿತಾತ್ಮನಃ ।
ನೇತ್ರಾಭ್ಯಾಂ ಸೋಮಃ ಸುಸ್ರಾವ ದಶಧಾ ದ್ಯೋತಯನ್ ದಿಶಃ ॥ ೫೦ ॥

ಕರೆದರು. ಆ ಪ್ರಭಾಕರನಿಂದ ಭದ್ರೆಯಲ್ಲಿ ಕಾಂತಿಯುಳ್ಳ ಚಂದ್ರನು ಜನಿಸಿದನು. ಕೃತ್ತಿಕಾ ನಕ್ಷತ್ರಗಳಲ್ಲಿ ರಾಕ್ಷಸನೊಬ್ಬನು ಹುಟ್ಟಿದನು.

೪೬. ಪೂಜ್ಯನಾದ ಅತ್ರಿಮಹರ್ಷಿಯು ಈ ಸೋಮನಿಗೆ ಪೋಷಕನಾಗಿ ತನ್ನ ಕಣ್ಣುಗಳಲ್ಲಿ ಇವನನ್ನು ಧರಿಸಿದನು.

೪೭–೪೮. ಪ್ರಿಯಳೆ! ಈ ಅತ್ರಿಯು ಹಿಂದೆ ಮೂರುಸಾವಿರ ದಿವ್ಯವರ್ಷಗಳ ಕಾಲ ಕರ್ಮ, ಮನಸ್ಸು, ಮಾತುಗಳಿಂದ ಒಳ್ಳೆಯದನ್ನೇ ಆಚರಿಸುತ್ತ ಕಟ್ಟಿಗೆ, ಗೋಡೆ, ಕಲ್ಲುಗಳಾಗಿ ತೋಳುಗಳನ್ನೆತ್ತಿಕೊಂಡು ಘೋರತಪಸ್ಸನ್ನು ಮಾಡಿದನು.

೪೯. ಬ್ರಹ್ಮಚಾರಿಯಾಗಿ ರೆಪ್ಪೆಹಾಕದೆ ನಿಂತಿರುವ ಜ್ಞಾನಿಯಾದ ಆ ಅತ್ರಿಯ ದೇಹವು ಸೋಮನಾಯಿತು.

೫೦. ಹೀಗೆ ಸೋಮನಾದ ಅವನ ದೇಹವು ಮೇಲ್ಮುಖವಾಗಿ ವ್ಯಾಪಿಸಿತು. ಕಣ್ಣುಗಳಿಂದ ಸೋಮನು ಹತ್ತು ದಿಕ್ಕುಗಳನ್ನು ಪ್ರಕಾಶಗೊಳಿಸುತ್ತ ಉದುರಿದನು.

ತದ್ಗರ್ಭಂ ವಿಧಿನಾ ದೃಷ್ಟ್ವಾ ದಿಶೋ ದಶ ದಧುಸ್ತದಾ ।
ಸಮೇತ್ಯ ಧಾರಯಾಮಾಸುರ್ನ ಚ ಧರ್ತುಮಶಕ್ನುವನ್ ॥ ೫೧ ॥
ಸ ತಾಭ್ಯಃ ಸಹಸೈವೇಹ ದಿಗ್ಭ್ಯೋ ಗರ್ಭಶ್ಚ ಶಾಶ್ವತಃ ।
ಪಪಾತ ಭಾವಯಂಲ್ಲೋಕಾಂಛೀತಾಂಶುಃ ಸರ್ವಭಾವನಃ ॥ ೫೨ ॥
ಯದಾ ನ ಧಾರಣೇ ಶಕ್ತಾಸ್ತಸ್ಯ ಗರ್ಭಸ್ಯ ತಾಃ ಸ್ತ್ರಿಯಃ ।
ತತಸ್ತಾಭ್ಯಃ ಸ ಶೀತಾಂಶುರ್ನಿಪಪಾತ ವಸುಂಧರಾಂ ॥ ೫೩ ॥
ಪತಿತಂ ಸೋಮಮಾಲೋಕ್ಯ ಬ್ರಹ್ಮಾ ಲೋಕಪಿತಾಮಹಃ ।
ರಥಮಾರೋಪಯಾಮಾಸ ಲೋಕಾನಾಂ ಹಿತಕಾಮ್ಯಯಾ ॥ ೫೪ ॥
ಸ ತದೈವ ಮಯಾ ದೇವಿ ಧರ್ಮಾರ್ಥಂ ಸತ್ಯಸಂಗರಃ ।
ಯುಕ್ತೋ ವಾಜಿ ಸಹಸ್ರೇಣ ಸಿತೇನ ಸುರಸುಂದರಿ ॥ ೫೫ ॥
ತಸ್ಮಿನ್ನಿಪತಿತೇ ದೇವಿ ಪುತ್ರೇಽತ್ರೇಃ ಪರಮಾತ್ಮನಿ ।
ತುಷ್ಟುವುರ್ಬ್ರಹ್ಮಣಃ ಪುತ್ರಾ ಮಾನಸಾಃ ಸಪ್ತ ಯೇ ಶ್ರುತಾಃ ॥ ೫೬ ॥
ತಥೈವಾಂಗಿರಸಃ ಸರ್ವೇ ಭೃಗೋಶ್ಚೈವಾತ್ಮಜಾಸ್ತಥಾ ।
ಋಗ್ಭಿಸ್ತು ಸಾಮಭಿಶ್ಚೈವ ತಥೈವಾಂಗಿರಸೈರಪಿ ॥ ೫೭ ॥

---

೫೧. ಬ್ರಹ್ಮನ ಪ್ರೇರಣೆಯಿಂದ ಹತ್ತು ದಿಕ್ಕುಗಳೂ ಒಟ್ಟಿಗೆ ಸೇರಿ ಆ ಅತ್ರಿಯ ಗರ್ಭವಾದ ಸೋಮನನ್ನು ಧರಿಸಲು ಪ್ರಯತ್ನಿಸಿ ಸಮರ್ಥವಾಗಲಿಲ್ಲ.

೫೨–೫೪. ಆಗ ಗರ್ಭರೂಪವಾದ ಆ ಸೋಮನು ಸಕಲಲೋಕಗಳನ್ನೂ ಪ್ರಕಾಶಗೊಳಿಸುತ್ತ ಚಂದ್ರನಾಗಿ ಆ ದಿಕ್ಕುಗಳಿಂದ ಭೂಮಿಯಲ್ಲಿ ಬಿದ್ದನು. ಆಗ ಬ್ರಹ್ಮನು ಬಿದ್ದಿರುವ ಚಂದ್ರನನ್ನು ನೋಡಿ ಪ್ರಪಂಚಕ್ಕೆ ಹಿತವನ್ನುಂಟುಮಾಡ ಲೋಸುಗ ಅವನನ್ನು ರಥದಲ್ಲಿ ಕುಳ್ಳಿರಿಸಿದನು.

೫೫. ಸುಂದರಿ ! ಆಗಲೇ ನಾನು ಧರ್ಮಕ್ಕಾಗಿ ಬೆಳ್ಳಗಿರುವ ಸಾವಿರ ಕುದುರೆ ಗಳನ್ನು ಆ ಚಂದ್ರನು ಕುಳಿತಿರುವ ರಥಕ್ಕೆ ಕಟ್ಟಿದನು.

೫೬–೫೭. ಅತ್ರಿಯ ಪುತ್ರನಾದ ಆ ಚಂದ್ರನು ಕೆಳಗೆ ಬೀಳಲು ಬ್ರಹ್ಮನ ಮಾನಸ ಪುತ್ರರಾದ ಅಂಗಿರಸನೆಮೊದಲಾದ ಸಪ್ತರ್ಷಿಗಳು ಋಕ್, ಸಾಮ, ಅಥರ್ವ ವೇದಗಳಿಂದ ಅವನನ್ನು ಸ್ತುತಿಸಿದರು.

ತಸ್ಯ ಸಂಸ್ತೂಯಮಾನಸ್ಯ ತೇಜಃ ಸೋಮಸ್ಯ ಭಾಸ್ವತಃ ।
ಆಪ್ಯಾಯಮಾನಂ ಲೋಕಾಂಸ್ತ್ರೀನ್ಭಾಸಯಾಮಾಸ ಸರ್ವಶಃ ॥ ೫೮ ॥
ಸ ತೇನ ರಥಮುಖ್ಯೇನ ಸಾಗರಾಂತಾಂ ವಸುಂಧರಾಂ ।
ತ್ರಿಃಸಪ್ತಕೃತ್ವೋತಿಯಶಾಶ್ಚಕಾರಾಽಭಿಪ್ರದಕ್ಷಿಣಂ ॥ ೫೯ ॥
ತಸ್ಯ ಯಚ್ಚಾಽಪಿ ತತ್ತೇಜಃ ಪೃಥಿವೀಮನ್ವಪದ್ಯತ ।
ಓಷಧ್ಯಸ್ತಾಃ ಸಮುತ್ಪನ್ನಾಸ್ತೇಜಸಾ ಜ್ವಲಯನ್ ಪುನಃ ॥ ೬೧ ॥
ತಾಭಿರ್ಧಿನೋತ್ಯಯಂ ಲೋಕಂ ಪ್ರಜಾಶ್ಚೈವ ಚತುರ್ವಿಧಾಃ ।
ಓಷಧ್ಯಃ ಫಲಪಾಕಾಂತಾಃ ಕಣಾಃ ಸಪ್ತದಶ ಸ್ಮೃತಾಃ ॥ ೬೧ ॥
ವ್ರೀಹಯಶ್ಚ ಯವಾಶ್ಚೈವ ಗೋಧೂಮಾ ಅಣವಸ್ತಿಲಾಃ ॥ ೬೨ ॥
ಪ್ರಿಯಂಗುಃ ಕೋವಿದಾರಶ್ಚ ಕೋರದೂಷಾಃ ಸತೀನಕಾಃ ।
ಮಾಷಾ ಮುದ್ಗಾ ಮಸೂರಾಶ್ಚ ನಿಷ್ಪಾವಾಃ ಸಕುಲತ್ಥಕಾಃ ॥ ೬೩ ॥
ಆಢಕ್ಯಶ್ಚಣಕಾಶ್ಚೈವ ಕಣಾಃ ಸಪ್ತದಶ ಸ್ಮೃತಾಃ ।
ಇತ್ಯೇತಾ ಓಷಧೀನಾಂ ಚ ಗ್ರಾಮ್ಯಾಣಾಂ ಜಾತಯಃ ಸ್ಮೃತಾಃ ॥ ೬೪ ॥

---

೫೮. ಹೀಗೆ ಋಷಿಗಳಿಂದ ಸ್ತೋತ್ರಮಾಡಲ್ಪಡುತ್ತಿರುವ ಪ್ರಕಾಶಮಾನನಾದ ಚಂದ್ರನ ತೇಜಸ್ಸು ಮೂರುಲೋಕಗಳನ್ನು ಸಂಪೂರ್ಣವಾಗಿ ಆಹ್ಲಾದಗೊಳಿಸಿತು.

೫೯. ಆ ಚಂದ್ರನು ಉತ್ತಮರಥದಲ್ಲಿ ಕುಳಿತು ಸಮುದ್ರಗಳವಧಿಯಾಗಿರುವ ಭೂಮಿಯನ್ನು ಇಪ್ಪತ್ತೊಂದುಸಾರಿ ಪ್ರದಕ್ಷಿಣೆ ಗೈದನು.

೬೦. ಆ ಚಂದ್ರನ ತೇಜಸ್ಸು ಭೂಮಿಯನ್ನು ಸೇರಿ ಓಷಧಿಗಳಾಗಿ ತೇಜಸ್ಸಿನಿಂದ ಪ್ರಪಂಚವನ್ನು ಬೆಳಗಿದುವು.

೬೧-೬೪. ಚಂದ್ರನು ಆ ಓಷಧಿಗಳಿಂದ ಪ್ರಪಂಚವನ್ನೂ, ನಾಲ್ಕು ಬಗೆಯ ಪ್ರಜೆ (ಭೂತ) ಗಳನ್ನೂ ಸಂತೋಷಗೊಳಿಸುತ್ತಾನೆ. ಕಾಯಿಮಾಗಿ ಕೂಡಲೆ ಒಣಗುವ ಕಣವೆಂಬ ಗ್ರಾಮದಲ್ಲಿ ಬೆಳೆಯುವ ಓಷಧಿಗಳು ವ್ರೀಹಿ, ಯವ, ಗೋಧಿ, ಅಣು, ತಿಲ, ಪ್ರಿಯಂಗು, ಕೋವಿದಾರ, ಕೋರದೂಷ, ಸತೀನಕ, ಉದ್ದು, ಹೆಸರು, ಮಸೂರ, ಅವರೆ, ಹುರುಳಿ, ತೊಗರಿ, ಕಡಲೆ ಮೊದಲಾದ ಹದಿನೇಳು ಬಗೆಯಾಗಿರುವುವು.

ಓಷಧ್ಯೋ ಯಜ್ಞಿಯಾಶ್ಚೈವ ಗ್ರಾಮ್ಯಾರಣ್ಯಾಶ್ಚತುರ್ದಶ ।
ವ್ರೀಹಯಶ್ಚ ಯವಾಶ್ಚೈವ ಗೋಧೂಮಾಸ್ತ್ವಣವಸ್ತಿಲಾಃ ॥೧೫॥
ಪ್ರಿಯಂಗುಷಷ್ಠಾ ಇತ್ಯೇತೇ ಸಪ್ತಮಾಸ್ತು ಕುಲತ್ಥಕಾಃ ।
ಶ್ಯಾಮಾಕಾಸ್ತ್ವಥ ನೀವಾರಾ ಜರ್ತಿಲಾಃ ಸಗವೇಧುಕಾಃ ॥೧೬॥
ಊರುವಿಂದಾ ಮರ್ಕಟಕಾಸ್ತಥಾ ವೇಣುಯವಾಶ್ಚ ಯೇ ।
ಗ್ರಾಮ್ಯಾರಣ್ಯಾಸ್ತಥಾ ಹ್ಯೇತಾ ಓಷಧ್ಯಸ್ತು ಚತುರ್ದಶ ॥೧೭॥
ತೃಣಗುಲ್ಮಲತಾವೀರುದ್ವಲ್ಲೀಗುಚ್ಛಾದಿ ಕೋಟಿಶಃ ।
ಏತೇಷಾಮಧಿಪಶ್ಚಂದ್ರೋ ಧಾರಯತ್ಯಖಿಲಂ ಜಗತ್ ॥೧೮॥
ಜ್ಯೋತ್ಸ್ನಾಭಿರ್ಭಗವಾನ್ ಸೋಮೋ ಜಗತೋ ಹಿತಕಾಮ್ಯಯಾ ।
ತತಸ್ತಸ್ಮೈ ದದೌ ರಾಜ್ಯಂ ಬ್ರಹ್ಮಾ ಬ್ರಹ್ಮವಿದಾಂ ವರಃ ॥೧೯॥
ಬೀಜೌಷಧೀನಾಂ ವಿಪ್ರಾಣಾಂ ಮಂತ್ರಾಣಾಂ ಚ ವರಾನನೇ ।
ಸೋಽಭಿಷಿಕ್ತೋ ಮಹಾತೇಜಾ ರಾಜಾ ರಾಜ್ಯೇ ನಿಶಾಕರಃ ॥೨೦॥
ತ್ರೀಂಲ್ಲೋಕಾನ್ ಭಾವಯಾಮಾಸ ಸ್ವಭಾಸಾ ಭಾಸ್ವತಾಂ ವರಃ ।
ತಂ ಸಿನೀ ಚ ಕುಹೂಶ್ಚೈವ ದ್ಯುತಿಃ ಪುಷ್ಟಿಃ ಪ್ರಭಾ ವಸುಃ ॥೨೧॥

೧೫–೧೭. ಯಜ್ಞಕ್ಕೆ ಬೇಕಾಗುವ ಗ್ರಾಮ್ಯಾರಣ್ಯೌಷಧಿಗಳು ವ್ರೀಹಿ, ಯವ, ಅಣು, ಎಳ್ಳು, ಪ್ರಿಯಂಗು, ಹುರುಳಿ, ಶ್ಯಾಮಾಕ, ನೀವಾರ, ಜರ್ತಿಲ, ಗವೇಧುಕ, ಊರುವಿಂದ, ಮರ್ಕಟಕ, ವೇಣುಯವ ಎಂದು ಹದಿನಾಲ್ಕು ಬಗೆಯಾಗಿರುವುವು.

೧೮–೨೦. ಇನ್ನೂ ತೃಣ, ಗುಲ್ಮ, ಲತೆ, ವೀರುತ್, ವಲ್ಲೀ, ಗುಚ್ಛಮೊದಲಾದ ಅನೇಕ ಓಷಧಿಗಳಿರುವುವು. ಇವುಗಳಿಗೆ ಒಡೆಯನಾದ ಚಂದ್ರನು ಸಕಲ ಜಗತ್ತುಗಳನ್ನು ಜನರ ಹಿತಕ್ಕಾಗಿ ಬೆಳದಿಂಗಳಿಂದ ರಕ್ಷಿಸುವನು. ಬಳಿಕ ವೇದಜ್ಞರಲ್ಲಿ ಶ್ರೇಷ್ಠನಾದ ಬ್ರಹ್ಮನು ಆ ಚಂದ್ರನಿಗೆ ರಾಜ್ಯವನ್ನಿತ್ತು ಅವನನ್ನು ಬೀಜಗಳಿಗೂ, ಬ್ರಾಹ್ಮಣರಿಗೂ ಮಂತ್ರಗಳಿಗೂ ರಾಜನನ್ನಾಗಿಸಿ ಪಟ್ಟಾಭಿಷೇಕ ಮಾಡಿದನು.

೨೧–೨೪. ಹೀಗೆ ರಾಜ್ಯಾಭಿಷಿಕ್ತನಾದ ಚಂದ್ರನು ತನ್ನ ಕಾಂತಿಯಿಂದ ಮೂರು ಲೋಕಗಳನ್ನೂ ಬೆಳಗಿದನು. ಅವನನ್ನು ಸಿನೀ ಕುಹೂ, ದ್ಯುತಿ, ಪುಷ್ಟಿ, ಪ್ರಭಾ, ವಸು, ಕೀರ್ತಿ, ಧೃತಿ, ಲಕ್ಷ್ಮೀ ಎಂಬ ಒಂಬತ್ತು ಜನ ದೇವಿಯರು ಸೇವಿಸಿದರು. ದಕ್ಷಬ್ರಹ್ಮನು ನಕ್ಷತ್ರಗಳೆಂದು ಪ್ರಸಿದ್ಧಿಗೊಂಡ ತನ್ನ ಇಪ್ಪತ್ತೇಳು ಜನ ಕನ್ಯೆಯರನ್ನು ಆ ಚಂದ್ರನಿಗೆ ಮದುವೆ ಮಾಡಿಕೊಟ್ಟನು. ಅವನು ಆ ಮಹಾರಾಜ್ಯವನ್ನು ಹೊಂದಿ ಅನೇಕ ಸಾವಿರ ದಕ್ಷಿಣೆಗಳನ್ನು ಕೊಟ್ಟು ನೆರವೇರಿಸಬೇಕಾದ ರಾಜಸೂಯಯಾಗವನ್ನು

ಕೀರ್ತಿರ್ಧೃತಿಶ್ಚ ಲಕ್ಷ್ಮೀಶ್ಚ ನವ ದೇವ್ಯಃ ಸಿಷೇವಿರೇ ।
ಸಪ್ತವಿಂಶತಿರಿಂದೋಸ್ತು ದಾಕ್ಷಾಯಣ್ಯೋ ಮಹಾವ್ರತಾಃ ॥ ೭೨ ॥
ದದೌ ಪ್ರಾಚೇತಸೋ ದಕ್ಷೋ ನಕ್ಷತ್ರಾಣೀತಿ ಯಾ ವಿದುಃ ।
ಸ ತತ್ಪ್ರಾಪ್ಯ ಮಹದ್ರಾಜ್ಯಂ ಸೋಮಃ ಸೋಮವತಾಂ ವರಃ ॥ ೭೩ ॥
ಸಮಾಜಹ್ರೇ ರಾಜಸೂಯಂ ಸಹಸ್ರಶತದಕ್ಷಿಣಂ ।
ಹಿರಣ್ಯಗರ್ಭಶ್ಚೋದ್ಗಾತಾ ಬ್ರಹ್ಮಾ ಬ್ರಹ್ಮತ್ವಮೇಯಿವಾನ್ ॥ ೭೪ ॥
ಸದಸ್ಯಸ್ತ್ರ ಭಗವಾನ್ ಹರಿರ್ನಾರಾಯಣಃ ಪ್ರಭುಃ ।
ಸನತ್ಕುಮಾರಪ್ರಮುಖೈರಾದ್ಯೈರ್ಬ್ರಹ್ಮರ್ಷಿಭಿರ್ವೃತಃ ॥ ೭೫ ॥
ದಕ್ಷಿಣಾಮದದಾತ್ಸೋಮಸ್ತ್ರೀಂಲ್ಲೋಕಾಂಸ್ತು ವರಾನನೇ ।
ತೇಭ್ಯೋ ಬ್ರಹ್ಮರ್ಷಿಮುಖ್ಯೇಭ್ಯಃ ಸದಸ್ಯೇಭ್ಯಶ್ಚ ವೈ ಶುಭೇ ॥ ೭೬ ॥
ಸ್ನಾತ್ವಾಽವಭೃಥಮವ್ಯಗ್ರಃ ಸರ್ವದೇವರ್ಷಿಪೂಜಿತಃ ।
ಅತಿರಾಜತಿ ರಾಜೇಂದ್ರೋ ದಶಧಾ ಭಾವಯನ್ ದಿಶಃ ॥ ೭೭ ॥
ತೇನ ತತ್ಪ್ರಾಪ ದುಷ್ಪ್ರಾಪ್ಯಮೈಶ್ವರ್ಯಮಕೃತಾತ್ಮಭಿಃ ।
ಸ ಏವಂ ವರ್ತತೇ ಚಂದ್ರಶ್ಚಾತ್ರೇಯ ಇತಿ ವಿಶ್ರುತಃ ॥ ೭೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಂದ್ರೋತ್ಪತ್ತಿವರ್ಣನಂ ನಾಮ
ವಿಂಶೋಽಧ್ಯಾಯಃ

ಮಾಡಿದನು. ಆ ಯಾಗದಲ್ಲಿ ಉದ್ಗಾತನಾದ ಹಿರಣ್ಯಗರ್ಭನು ಬ್ರಹ್ಮತ್ವವನ್ನು ವಹಿಸಿದನು.

೭೫–೭೬. ಪೂಜ್ಯನಾದ ನಾರಾಯಣನು ಸನತ್ಕುಮಾರನೇ ಮೊದಲಾದ ಬ್ರಹ್ಮರ್ಷಿಗಳೊಡನೆ ಸದಸ್ಯನಾದನು. ಚಂದ್ರನು ಸದಸ್ಯರಾದ ಸನತ್ಕುಮಾರನೇ ಮೊದಲಾದ ಬ್ರಹ್ಮರ್ಷಿಗಳಿಗೆ ಮೂರು ಲೋಕಗಳನ್ನೂ ದಕ್ಷಿಣೆಯಾಗಿ ಕೊಟ್ಟನು.

೭೭. ಅವಭೃಥಸ್ನಾನಮಾಡಿ ಸಕಲ ದೇವರ್ಷಿಗಳಿಂದ ಪೂಜಿತನಾಗಿ ದಶದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತ ಕಂಗೊಳಿಸಿದನು.

೭೮. ಆದರಿಂದ ಪುಣ್ಯಮಾಡದವರಿಗೆ ಪಡೆಯಲಶಕ್ಯವಾದ ಐಶ್ವರ್ಯವನ್ನು ಪಡೆದು ಆ ಚಂದ್ರನು ಆತ್ರೇಯನೆಂದು ಪ್ರಸಿದ್ಧನಾಗಿರುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಂದ್ರೋತ್ಪತ್ತಿವರ್ಣನವೆಂಬ
ಇಪ್ಪತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಏಕವಿಂಶೋಽಧ್ಯಾಯಃ

ಶಿವಾರಾಧನೋಪದೇಶವರ್ಣನಂ

ದೇವ್ಯುವಾಚ:—

ಶ್ರುತಂ ಸರ್ವಮಶೇಷೇಣ ಚಂದ್ರಸ್ಯೋತ್ಪತ್ತಿಕಾರಣಂ ।
ಚಿಹ್ನಂ ಯಥಾಽಭವತ್ತಸ್ಯ ಸಾಂಪ್ರತಂ ತತ್ಪ್ರಕೀರ್ತಯ ॥ ೧ ॥

ಈಶ್ವರ ಉವಾಚ:—

ಬ್ರಹ್ಮಣಸ್ತು ಪುರಾ ದೇವಿ ದಕ್ಷೋನಾಮ ಸುತೋಽಭವತ್ ।
ಪ್ರಜಾಃ ಸೃಜೇತಿ ಉದ್ದಿಷ್ಟಃ ಪೂರ್ವಂ ದಕ್ಷಃ ಸ್ವಯಂಭುವಾ ॥ ೨ ॥
ಷಷ್ಟಿಂ ದಕ್ಷೋಽಸೃಜತ್ಕನ್ಯಾ ವೈರಿಣ್ಯಾಂ ವೈ ಪ್ರಜಾಪತಿಃ ।
ದದೌ ಸ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ॥ ೩ ॥
ಸಪ್ತವಿಂಶತಿಂ ಸೋಮಾಯ ಚತಸ್ರೋಽರಿಷ್ಟನೇಮಿನೇ ।
ದ್ವೇ ಚೈವ ಭೃಗುಪುತ್ರಾಯ ದ್ವೇ ಕೃಶಾಶ್ವಾಯ ಧೀಮತೇ ॥ ೪ ॥
ದ್ವೇ ಚೈವಾಂಗಿರಸೇ ತದ್ವತ್ತಾಸಾಂ ನಾಮಾನಿ ವಿಸ್ತರಾತ್ ।
ಶೃಣು ತ್ವಂ ದೇವಿ ಮಾತ್ಯಾಣಾಂ ಪ್ರಜಾವಿಸ್ತರಮಾದಿತಃ ॥ ೫ ॥

ಕನ್ನಡದ ಅನುವಾದ

ಶಿವಾರಾಧನೋಪದೇಶವರ್ಣನ

೧. ದೇವಿಯು ಕೇಳುತ್ತಾಳೆ:—ಚಂದ್ರನ ಉತ್ಪತ್ತಿಯ ಕಾರಣವನ್ನು ಕೇಳಿದೆನು. ಈಗ ಆ ಚಂದ್ರನಿಗೆ ಕಳಂಕವು ಹೇಗೆ ಉಂಟಾಯಿತೆಂಬುದನ್ನು ಹೇಳು.

೨–೫. ಈಶ್ವರನು ಹೇಳುತ್ತಾನೆ:—ಹಿಂದೆ ಬ್ರಹ್ಮನಿಗೆ ದಕ್ಷನೆಂಬ ಮಗನಿದ್ದನು. ಅವನು ಬ್ರಹ್ಮನ ಆಜ್ಞೆಯಂತೆ ವೈರಿಣಿಯೆಂಬ ಸತಿಯಲ್ಲಿ ಅರುವತ್ತು ಮಂದಿ ಕನ್ಯೆಯರನ್ನು ಸೃಷ್ಟಿಸಿ ಅವರಲ್ಲಿ ಹತ್ತುಮಂದಿ ಕನ್ಯೆಯರನ್ನು ಯಮನಿಗೂ. ಹದಿ ಮೂರು ಮಂದಿಯನ್ನು ಕಶ್ಯಪನಿಗೂ, ಇಪ್ಪತ್ತೇಳು ಮಂದಿಯನ್ನು ಚಂದ್ರನಿಗೂ, ನಾಲ್ಕು ಮಂದಿಯನ್ನು ಅರಿಷ್ಟನೇಮಿಗೂ, ಇಬ್ಬರನ್ನು ಶುಕ್ರಾಚಾರ್ಯನಿಗೂ, ಇಬ್ಬರನ್ನು ಕೃಶಾಶ್ವನಿಗೂ, ಮತ್ತಿಬ್ಬರನ್ನು ಅಂಗೀರಸ್ಸಿಗೂ ಕೊಟ್ಟನು. ದೇವಿ! ಅವರ ಹೆಸರನ್ನು ವಿಸ್ತಾರವಾಗಿ ಹೇಳುವೆನು. ಕೇಳು.

ಮರುತ್ವತೀ ವಸುರ್ಜಾಮೀ ಲಂಬಾ ಭಾನುರರುಂಧತೀ ।
ಸಂಕಲ್ಪಾ ಚ ಮುಹೂರ್ತಾ ಚ ಸಾಧ್ಯಾ ವಿಶ್ವಾ ಚ ಭಾಮಿನಿ ॥ ೬ ॥
ಧರ್ಮಪತ್ನ್ಯಃ ಸಮಾಖ್ಯಾತಾ ದಕ್ಷಃ ಪ್ರಾಚೇತಸೋ ದದೌ ।
ಅದಿತಿರ್ದಿತಿರ್ದನುಸ್ತದ್ವದರಿಷ್ಟಾ ಸುರಸೈವ ಚ ॥ ೭ ॥
ಸುರಭಿರ್ವಿನತಾ ಚೈವ ನಾಮ್ನಾ ಕ್ರೋಧವಶಾತ್ವಿಲಾ ।
ಕದ್ರೂಸ್ತ್ವಿಷಾ ವಸುಸ್ತದ್ವತ್ತಾಸಾಂ ಪುತ್ರಾನ್ ವದಾಮಿ ವೈ ॥ ೮ ॥
ವಿಶ್ವೇದೇವಾಸ್ತು ವಿಶ್ವಾಯಾಃ ಸಾಧ್ಯಾ ಸಾಧ್ಯಾನಜೀಜನತ್ ।
ಮರುತ್ವತ್ಯಾಂ ಮರುತ್ವಂತೋ ವಸೋಸ್ತು ವಸವಸ್ತಥಾ ॥ ೯ ॥
ಭಾನೋಸ್ತು ಭಾನವಸ್ತೇನ ಮುಹೂರ್ತಾಯಾಂ ಮುಹೂರ್ತಕಾಃ ।
ಲಂಬಾಯಾಂ ಘೋಷನಾಮಾನೋ ನಾಗವೀಥಿಸ್ತು ಜಾಮಿಜಾ ॥ ೧೦ ॥
ಸಂಕಲ್ಪಾಯಾಸ್ತು ಸಂಕಲ್ಪೋ ಧರ್ಮಪುತ್ರಾ ದಶ ಸ್ಮೃತಾಃ ।
ಆಪೋ ಧ್ರುವಶ್ಚ ಸೋಮಶ್ಚ ಧರಶ್ಚೈವಾನಲೋಽನಿಲಃ ॥ ೧೧ ॥
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟೌ ಪ್ರಕೀರ್ತಿತಾಃ ।
ಆಪಸ್ಯ ಪುತ್ರಾ ವೈದಂಡ್ಯಃ ಶ್ರಮಃ ಶಾಂತೋ ಧ್ವನಿಸ್ತಥಾ ॥ ೧೨ ॥

೬-೮. ಮರುತ್ವತೀ, ವಸು, ಜಾಮಿ, ಲಂಬಾ, ಭಾನು, ಅರುಂಧತೀ, ಸಂಕಲ್ಪಾ, ಮುಹೂರ್ತಾ, ಸಾಧ್ಯಾ, ವಿಶ್ವಾ ಎಂಬ ಹತ್ತು ಮಂದಿ ಕನ್ಯೆಯರು ಯಮನ ಪತ್ನಿಯರು. ಅದಿತಿ, ದಿತಿ, ದನು, ಅರಿಷ್ಟಾ, ಸುರಸಾ, ಸುರಭಿ, ವಿನತಾ, ಕ್ರೋಧವಶಾ, ಇಲಾ, ಕದ್ರೂ, ತ್ವಿಷಾ, ವಸು, ಮೊದಲಾದ ಹದಿಮೂರು ಮಂದಿ ಕನ್ಯೆಯರು ಕಶ್ಯಪನ ಪತ್ನಿಯರು. ಈಗ ಅವರ ಮಕ್ಕಳನ್ನು ಹೇಳುವೆನು.

೯-೧೬. ವಿಶ್ವೆಯಲ್ಲಿ ವಿಶ್ವೇದೇವತೆಗಳೂ, ಸಾಧ್ಯೆಯಲ್ಲಿ ಸಾಧ್ಯರೂ, ಮರುತ್ವತಿಯಲ್ಲಿ ಮರುತ್ವಂತರೂ, ವಸುವಿನಲ್ಲಿ ವಸುಗಳೂ, ಭಾನುವಿನಲ್ಲಿ ಭಾನುಗಳೂ, ಮುಹೂರ್ತೆಯಲ್ಲಿ ಮುಹೂರ್ತಕರೂ, ಲಂಬೆಯಲ್ಲಿ ಘೋಷರೂ, ಜಾಮಿಯಲ್ಲಿ ನಾಗವೀಥಿಯೂ, ಸಂಕಲ್ಪೆಯಲ್ಲಿ ಸಂಕಲ್ಪನೂ ಹುಟ್ಟಿದರು. ಆಪ, ಧ್ರುವ, ಸೋಮ, ಧರ, ಅನಲ, ಪ್ರತ್ಯೂಷ, ಪ್ರಭಾಸ ಎಂಬುವವರು ಅಷ್ಟವಸುಗಳು. ಆಪನೆಂಬ ವಸುವಿನಿಂದ ವೈದಂಡ್ಯ, ಶ್ರಮ, ಶಾಂತ, ಧ್ವನಿ ಎಂಬುವವರು ಹುಟ್ಟಿದರು ಧ್ರುವನಿಂದ ಕಾಲನೂ, ಸೋಮನಿಂದ ಶರ್ವ, ಧ್ರುವ, ಗೃಹಬೋಧನ, ಹುತ ಹವ್ಯವಹ ಎಂಬುವವರೂ, ಧರನಿಂದ ದ್ರವಿಣನೂ, ಅನಿಲನಿಂದ ಮನೋಜವನೂ, ಪ್ರತ್ಯೂಷನಿಂದ ಅವಿಜ್ಞಾತಗತಿ, ದೇವಲ, ಯೋಗಿ ಎಂಬುವರೂ, ಜನಿಸಿದರು. ಬೃಹಸ್ಪತಿಯ ಸಹೋದರಿ

ಧ್ರುವಸ್ಯ ಪುತ್ರೋ ಭಗವಾನ್ ಕಾಲೋ ಲೋಕಪ್ರಕಾಲನಃ ।
ಸೋಮಸ್ಯ ಭಗವಾಂಛರ್ವೋ ಧ್ರುವಶ್ಚ ಗೃಹಬೋಧನಃ ॥ ೧೩ ॥
ಹುತಹವ್ಯವಹಶ್ಚೈವ ಧರಸ್ಯ ದ್ರವಿಣಃ ಸ್ಮೃತಃ ।
ಮನೋಜವೋಽನಿಲಸ್ಯಾಸೀದವಿಜ್ಞಾತಗತಿಸ್ತಥಾ ॥ ೧೪ ॥
ದೇವಲೋ ಭಗವಾನ್ ಯೋಗೀ ಪ್ರತ್ಯೂಷಸ್ಯಾಽಭವನ್ ಸುತಾಃ ।
ಬೃಹಸ್ಪತೇಸ್ತು ಭಗಿನೀ ಭುವನಾ ಬ್ರಹ್ಮವಾದಿನೀ ॥ ೧೫ ॥
ಪ್ರಭಾಸಸ್ಯ ತು ಸಾ ಭಾರ್ಯಾ ವಸೂನಾಮಷ್ಟಮಸ್ಯ ಚ ।
ವಿಶ್ವಕರ್ಮಾ ಸುತಸ್ತಸ್ಯ ಶಿಲ್ಪಕರ್ತಾ ಪ್ರಜಾಪತಿಃ ॥ ೧೬ ॥
ತುಷಿತಾನಾಂ ತು ಸಾಧ್ಯಾನಾಂ ನಾಮಾನ್ಯೇತಾನಿ ವಚ್ಮಿ ತೇ ।
ಮನೋಽನುಮಂತಾ ಪ್ರಾಣಶ್ಚ ನರೋಽಪಾನಶ್ಚ ವೀರ್ಯವಾನ್ ॥ ೧೭ ॥
ಭಕ್ತಿರ್ಭಯೋಽನಘಶ್ಚೈವ ಹಂಸೋ ನಾರಾಯಣಸ್ತಥಾ ।
ವಿಭುಶ್ಚೈವಪ್ರಭುಶ್ಚೈವ ಸಾಧ್ಯಾ ದ್ವಾದಶ ಕೀರ್ತಿತಾಃ ॥ ೧೮ ॥
ಕಶ್ಯಪಸ್ಯ ಪ್ರವಕ್ಷ್ಯಾಮಿ ಸಂತತಿಂ ವರವರ್ಣಿನಿ ।
ಅಂಶೋ ಧಾತಾ ಭಗಸ್ತ್ವಷ್ಟಾ ಮಿತ್ರೋಽಥ ವರುಣೋಽರ್ಯಮಾ ॥ ೧೯ ॥
ವಿವಸ್ವಾನ್ ಸವಿತಾ ಪೂಷಾ ಹ್ಯಂಶುಮಾನ್ ವಿಷ್ಣುರೇವ ಚ ॥
ಏತೇ ಸಹಸ್ರಕಿರಣಾ ಆದಿತ್ಯಾ ದ್ವಾದಶ ಸ್ಮೃತಾಃ ॥ ೨೦ ॥
ಅಜೈಕಪಾದಹಿರ್ಬುಧ್ನ್ಯೋ ವಿರೂಪಾಕ್ಷೋಽಥ ರೈವತಃ ।
ಹರಶ್ಚ ಬಹುರೂಪಶ್ಚ ತ್ರ್ಯಂಬಕಶ್ಚ ಸುರೇಶ್ವರಃ ॥ ೨೧ ॥

ಯಾದ ವೇದವನ್ನರಿತ ಭಾವನೆಯು ಎಂಟನೆಯ ವಸುವಾದ ಪ್ರಭಾಸನ ಭಾರ್ಯೆಯಾದಳು. ಅವಳಿಂದ ವಿಶ್ವಕರ್ಮನೆಂಬ ಶಿಲ್ಪಿಯು ಹುಟ್ಟಿದನು.

೧೭–೧೮. ಮನ, ಅನುಮಂತಾ, ಪ್ರಾಣ, ನರ, ಅಪಾನ, ಭಕ್ತಿ, ಭಯ, ಅನಘ, ಹಂಸ, ನಾರಾಯಣ, ವಿಭು, ಪ್ರಭು, ಎಂಬುವರು ಹನ್ನೆರಡು ಜನ ಸಾಧ್ಯರು.

೧೯–೨೩. ಪ್ರಿಯಳೆ! ಈಗ ಕಶ್ಯಪನ ಸಂತತಿಯನ್ನು ಹೇಳುವೆನು. ಅಂಶ, ಧಾತಾ, ಭಗ, ತ್ವಷ್ಟಾ, ಮಿತ್ರ, ವರುಣ, ಆರ್ಯಮಾ, ವಿವಸ್ವಾನ್, ಸವಿತಾ, ಪೂಷಾ, ಅಂಶುಮಾನ್, ವಿಷ್ಣು ಎಂಬುವವರು ಹನ್ನೆರಡು ಮಂದಿ ಆದಿತ್ಯರು. ಅಜೈಕಪಾತ್, ಅಹಿರ್ಬುಧ್ನ್ಯ, ವಿರೂಪಾಕ್ಷ, ರೈವತ, ಹರ, ಬಹುರೂಪ, ತ್ರ್ಯಂಬಕ, ಸಾವಿತ್ರ, ಜಯಂತ, ಪಿನಾಕೀ, ಅಪರಾಜಿತ ಎಂಬುವರು ಏಕಾದಶರುದ್ರರು. ಕಶ್ಯಪನಿಂ-

ಸಾವಿತ್ರಶ್ಚ ಜಯಂತಶ್ಚ ಪಿನಾಕೀ ಚಾಽಪರಾಜಿತಃ ।
ಏತೇ ರುದ್ರಾಃ ಸಮಾಖ್ಯಾತಾ ಏಕಾದಶ ಗಣೇಶ್ವರಾಃ ॥ ೨೨ ॥
ದಿತಿಃ ಪುತ್ರದ್ವಯಂ ಲೇಭೇ ಕಶ್ಯಪಾದ್ಬಲಗರ್ವಿತಂ ।
ಹಿರಣ್ಯಕಶಿಪುಂ ಶ್ರೇಷ್ಠಂ ಹಿರಣ್ಯಾಕ್ಷಂ ತಥಾಽನುಜಂ ॥ ೨೩ ॥
ಹಿರಣ್ಯಕಶಿಪೋರ್ದೈತ್ಯೈಃ ಶ್ಲೋಕೋ ಗೀತಃ ಪುರಾತನೈಃ ॥ ೨೪ ॥
ರಾಜಾ ಹಿರಣ್ಯಕಶಿಪುರ್ಯಾಂ ಯಾಮಾಶಾಂ ನಿರೀಕ್ಷತೇ ।
ತಸ್ಯಾಂ ತಸ್ಯಾಂ ದಿಶಿ ಸುರಾ ನಮಶ್ಚಕ್ರುರ್ಮಹರ್ಷಿಭಿಃ ।
ಹಿರಣ್ಯಕಶಿಪೋಃ ಪುತ್ರಾಶ್ಚತ್ವಾರಃ ಸುಮಹಾಬಲಾಃ ॥ ೨೫ ॥
ಪ್ರಹ್ಲಾದಃ ಪೂರ್ವಜಸ್ತೇಷಾಮನುಹ್ರಾದಸ್ತತಃ ಪರಃ ।
ಹ್ರಾದಶ್ಚೈವ ಹ್ರದಶ್ಚೈವ ಪುತ್ರಾಶ್ಚೈತೇ ಪ್ರಕೀರ್ತಿತಾಃ ॥ ೨೬ ॥
ಉಭೌ ಸುಂದೋಪಸುಂದೌ ತು ಹ್ರದಪುತ್ರೌ ಬಭೂವತುಃ ।
ಹ್ರಾದಸ್ಯ ಪುತ್ರಸ್ತ್ವೇಕೋಽಭೂನ್ಮೂಕ ಇತ್ಯಭಿವಿಶ್ರುತಃ ॥ ೨೭ ॥
ಮಾರೀಚಃ ಸುಂದಪುತ್ರಸ್ತು ತಾಡಕಾಯಾಮಜಾಯತ ।
ದಂಡಕೇ ನಿಹತಃ ಸೋಽಯಂ ರಾಘವೇಣ ಬಲೀಯಸಾ ॥ ೨೮ ॥

ದಿತಿಯಲ್ಲಿ ಹಿರಣ್ಯಕಶಿಪು, ಹಿರಣ್ಯಾಕ್ಷರೆಂಬ ಬಲಿಷ್ಠರಾದ ಇಬ್ಬರು ದೈತ್ಯರು ಜನಿಸಿದರು.

೨೪. ಹಿರಣ್ಯಕಶಿಪುವಿನ ವಿಷಯದಲ್ಲಿ ದೈತ್ಯರು ಈ ಅರ್ಥವುಳ್ಳ ಶ್ಲೋಕವನ್ನು ಹಾಡುತ್ತಿದ್ದರು:

೨೫–೨೬. "ದೊರೆಯಾದ ಹಿರಣ್ಯಕಶಿಪುವು ಯಾವ ಯಾವ ದಿಕ್ಕನ್ನು ನೋಡುವನೋ ಆಯಾ ದಿಕ್ಕಿನಲ್ಲಿರುವ ದೇವತೆಗಳು ಮುನಿಗಳೊಡನೆ ಅವನಿಗೆ ನಮಸ್ಕಾರಮಾಡುತ್ತಿದ್ದರು" ಇಂಥ ಹಿರಣ್ಯಕಶಿಪುವಿಗೆ ಪ್ರಹ್ಲಾದ, ಅನುಹ್ರಾದ, ಹ್ರಾದ, ಹ್ರದ ಎಂಬ ನಾಲ್ಕು ಜನ ಪುತ್ರರು ಹುಟ್ಟಿದರು.

೨೭. ಹ್ರದನಿಂದ ಸುಂದೋಪಸುಂದರೂ, ಹ್ರಾದನಿಂದ ಮೂಕನೂ ಹುಟ್ಟಿದರು.

೨೮. ಬಲಿಷ್ಠನಾದ ರಾಮನು ಸುಂದನಿಂದ ತಾಡಕೆಯಲ್ಲಿ ಜನಿಸಿದ ಮಾರೀಚನನ್ನು ದಂಡಕಾರಣ್ಯದಲ್ಲಿ ಕೊಂದನು.

ಮೂಕೋ ವಿನಿಹಿತಶ್ಚಾಽಪಿ ಕೈರಾತೇ ಸವ್ಯಸಾಚಿನಾ।
ಸಂಹ್ರಾದಸ್ಯ ತು ದೈತ್ಯಸ್ಯ ನಿವಾತಕವಚಾಃ ಕುಲೇ ॥ ೨೯ ॥
ತಿಸ್ರಃ ಕೋಟ್ಯಸ್ತು ವಿಖ್ಯಾತಾ ನಿಹತಾಃ ಸವ್ಯಸಾಚಿನಾ ।
ಗವೇಷ್ಠೀ ಕಾಲನೇಮಿಶ್ಚ ಜಂಭೋ ವಲ್ಕಲ ಏವ ಚ ॥ ೩೦ ॥
ಜೃಂಭಃ ಷಷ್ಠೋಽನುಜಸ್ತೇಷಾಂ ಸ್ಮೃತಾಃ ಪ್ರಹ್ಲಾದಸೂನವಃ ।
ಶುಂಭಶ್ಚೈವ ನಿಶುಂಭಶ್ಚ ಗವೇಷ್ಠಿನಃ ಸುತೌ ಸ್ಮೃತೌ ॥ ೩೧ ॥
ಧನುಕಶ್ಚಾಽಸಿಲೋಮಾ ಚ ಶುಂಭಪುತ್ರೌ ಪ್ರಕೀರ್ತಿತೌ ।
ವಿರೋಚನಸ್ಯ ಪುತ್ರಸ್ತು ಬಲಿರೇಕಃ ಪ್ರತಾಪವಾನ್ ॥ ೩೨ ॥
ಹಿರಣ್ಯಾಕ್ಷಸುತಾಃ ಪಂಚ ವಿಕ್ರಾಂತಾಃ ಸುಮಹಾಬಲಾಃ ।
ಅಂಧಕಃ ಶಕುನಿಶ್ಚೈವ ಕಾಲನಾಭಸ್ತಥೈವ ಚ ॥ ೩೩ ॥
ಮಹಾನಾಭಶ್ಚ ವಿಕ್ರಾಂತೋ ಭೂತಸಂತಾಪನಸ್ತಥಾ ।
ಶತಂ ಶತ ಸಹಸ್ರಾಣಿ ನಿಹತಾಸ್ತಾರಕಾಮಯೇ ॥ ೩೪ ॥
ಇತಿ ಸಂಕ್ಷೇಪತಃ ಪ್ರೋಕ್ತಾ ಕಶ್ಯಪಾನ್ವಯಸಂತತಿಃ ।
ಯಯಾ ವ್ಯಾಪ್ತಂ ಜಗತ್ಸರ್ವಂ ಸದೇವಾಸುರಮಾನುಷಂ ॥ ೩೫ ॥
ಅಥ ಯಾಃ ಕನ್ಯಕಾ ದತ್ತಾಃ ಸಪ್ತವಿಂಶತಿರಿಂದವೇ ।
ತಾಸಾಂ ಮಧ್ಯೇ ಮಹಾದೇವಿ ಪ್ರಿಯಾ ತಸ್ಯ ಚ ರೋಹಿಣೀ ॥ ೩೬ ॥

೨೯–೩೧. ಅರ್ಜುನನು ಮೂಕನನ್ನು ಕಿರಾತ ಯುದ್ಧದಲ್ಲಿ ಕೊಂದನು. ಹ್ರಾದನ ವಂಶದಲ್ಲಿ ಮೂರು ಕೋಟಿ ನಿವಾತಕವಚರು ಹುಟ್ಟಿದರು. ಇವರನ್ನು ಅರ್ಜುನನು ಸಂಹರಿಸಿದನು. ಪ್ರಹ್ಲಾದನಿಂದ ಗವೇಷ್ಠಿ, ಕಾಲನೇಮಿ, ಜಂಭ, ವಲ್ಕಲ, ಜೃಂಭ, ಮತ್ತು ಇವನ ತಮ್ಮ. ಹೀಗೆ ಆರು ಜನ ಮಕ್ಕಳು ಜನಿಸಿದರು. ಗವೇಷ್ಠಿಯಿಂದ ಶುಂಭ ನಿಶುಂಭರು ಹುಟ್ಟಿದರು. ಶುಂಭನಿಂದ ಧನು ಅಸಿಲೋಮರೂ ವಿರೋಚನನಿಂದ ಬಲಿಯೂ ಹುಟ್ಟಿದರು.

೩೨–೩೪. ಹಿರಣ್ಯಾಕ್ಷನಿಂದ ಅತಿ ಬಲಿಷ್ಠರಾದ ಅಂಧಕ, ಶಕುನಿ, ಕಾಲನಾಭ, ಮಹಾನಾಭ, ಭೂತಸಂತಾಪನ ಎಂಬ ಐದು ಜನ ಮಕ್ಕಳು ಜನಿಸಿದರು. ಹಾಗೆಯೇ ಹುಟ್ಟಿದ್ದ ಅನೇಕ ಸಾವಿರ ರಾಕ್ಷಸರು ತಾರಕಾಸುರ ಸಮರದಲ್ಲಿ ಹತರಾದರು.

೩೫. ಹೀಗೆ ದೇವಾಸುರ ಮನುಷ್ಯರುಳ್ಳ ಪ್ರಪಂಚವನ್ನು ವ್ಯಾಪಿಸಿದ ಕಶ್ಯಪರ ಸಂತತಿಯನ್ನು ಹೇಳಿರುವೆನು.

೩೬. ದಕ್ಷನು ಚಂದ್ರನಿಗಿತ್ತ ಇಪ್ಪತ್ತೇಳು ಕನ್ಯೆಯರಲ್ಲಿ ರೋಹಿಣಿಯು ಚಂದ್ರನಿಗೆ ಅತಿ ಪ್ರಿಯಳಾದಳು.

ಅಥ ನಕ್ಷತ್ರನಾಥಸ್ಯ ತಾಸಾಂ ಮಧ್ಯೇಽತಿವಲ್ಲಭಾ ।
ಬಭೂವ ರೋಹಿಣೀ ದೇವೀ ಪ್ರಾಣೇಭ್ಯೋಽಪಿ ಗರೀಯಸೀ ॥ ೩೭ ॥
ಸರ್ವಾಸ್ತಾಃ ಸಂಪರಿತ್ಯಜ್ಯ ರೋಹಿಣ್ಯಾಸಹಿತೋ ರಹಃ ।
ರೇಮೇ ಕಾಮಪರೀತಾತ್ಮಾ ವನೇಷೂಪವನೇಷು ಚ ।
ರಮಣೀಯೇಷು ದೇಶೇಷು ಕಂದರೇಷು ಗುಹಾಸು ಚ ॥ ೩೮ ॥
ಅಥ ತಾ ದುಃಖಸಂಪನ್ನಾಃ ಪತ್ನ್ಯಃ ಶೇಷಾ ಯಶಸ್ವಿನಿ ।
ಜಗ್ಮುಶ್ಚ ಶರಣಂ ದಕ್ಷಂ ವಚನಂ ಚೇದಮಬ್ರುವನ್ ॥ ೩೯ ॥
ಸೋಮಃ ಸರ್ವಾ ಅತಿಕ್ರಮ್ಯ ರೋಹಿಣ್ಯಾ ಸಹ ಮೋದತೇ ।
ಸಂವತ್ಸರಸಹಸ್ರಂ ತು ಕ್ರೀಡಮಾನೋ ಯಥಾಸುಖಂ ॥ ೪೦ ॥
ಅವಶಿಷ್ಟಾಸ್ತು ಷಡ್ವಿಂಶನ್ಮಲಿನಾ ವಿಗತಶ್ರಿಯಃ ।
ಪಾಣಿಗ್ರಹಣಮಾರಭ್ಯ ರೋಹಿಣ್ಯಾ ಸಹ ಚಂದ್ರಮಾಃ ॥ ೪೧ ॥
ಸಂವತ್ಸರಸಹಸ್ರಂ ತು ಜಾನಾತ್ಯೇಕಾಂ ಹಿ ಶರ್ವರೀಂ ।
ಪರಿತ್ಯಕ್ತಾ ವಯಂ ತಾತ ಶಶಿನಾ ದೋಷವರ್ಜಿತಾಃ ॥ ೪೨ ॥
ಸ ರೇಮೇ ಸಹ ರೋಹಿಣ್ಯಾ ಅಸ್ಮಾಕಮಸುಖಪ್ರದಃ ।
ಅಸ್ಮಾಕಂ ದುಃಖದಗ್ಧಾನಾಂ ಶ್ರೇಯೋಽತೋ ಮರಣಂ ಭವೇತ್ ॥ ೪೩ ॥

೩೭–೩೮. ಚಂದ್ರನು ಉಳಿದ ಪತ್ನಿಯರನ್ನು ತ್ಯಜಿಸಿ ತನ್ನ ಪ್ರಾಣಕ್ಕಿಂತ ಪ್ರಿಯಳಾದ ರೋಹಿಣಿಯೊಡನೆ ಕಾಮಪೀಡಿತನಾಗಿ ವನ, ಉದ್ಯಾನ, ಮನೋಹರವಾದ ಪ್ರದೇಶ, ಗುಹೆ ಇವುಗಳಲ್ಲಿ ವಿನೋದಪಟ್ಟನು.

೩೯. ಕೀರ್ತಿಮತಿಯೆ ! ಬಳಿಕ ಉಳಿದ ಪತ್ನಿಯರು ದುಃಖಗೊಂಡು ತಂದೆಯಾದ ದಕ್ಷನನ್ನು ಮರೆಹೊಕ್ಕು ಇಂತೆಂದರು.

೪೦. "ಚಂದ್ರನು ಎಲ್ಲರನ್ನೂ ಬಿಟ್ಟು ರೋಹಿಣಿಯೊಡನೆ ಸಾವಿರ ವರ್ಷಗಳಿಂದ ಸುಖವಾಗಿ ಕ್ರೀಡಿಸುತ್ತಿರುವನು.

೪೧–೪೨. ಉಳಿದ ಇಪ್ಪತ್ತಾರು ಮಂದಿ ಪತ್ನಿಯರು ಮಲಿನರಾಗಿ ಕಳೆಗುಂದಿರುವರು. ಚಂದ್ರನು ಮದುವೆಮಾಡಿಕೊಂಡ ದಿನದಿಂದ ದೋಷವಿಲ್ಲದ ನಮ್ಮನ್ನು ತ್ಯಜಿಸಿ ರೋಹಿಣಿಯೊಡನೆ ವಿಹರಿಸುತ್ತ ಸಾವಿರ ವರ್ಷಗಳನ್ನು ಒಂದು ರಾತ್ರಿಯಂತೆ ಕಳೆದಿರುವನು.

೪೩. ಅವನು ರೋಹಿಣಿಯೊಡನೆ ವಿಹರಿಸುತ್ತ ನಮಗೆ ದುಃಖವನ್ನುಂಟು ಮಾಡುತ್ತಿರುವನು. ಆದುದರಿಂದ ದುಃಖಗೊಂಡ ನಮಗೆ ಮರಣವೇ ಶ್ರೇಯಸ್ಸನ್ನುಂಟುಮಾಡುವುದು."

ತಾಸಾಂ ತದ್ವಚನಂ ಶ್ರುತ್ವಾ ದುಃಖಾರ್ತಾನಾಂ ಪ್ರಜಾಪತಿಃ ।
ಬ್ರಹ್ಮತೇಜಃ ಸಮಾಯುಕ್ತಃ ಪುತ್ರೀಸ್ನೇಹೇನ ಕರ್ಷಿತಃ ।
ಜಗಾಮ ಯತ್ರ ಋಕ್ಷೇಶೋ ವಚನಂ ಚೇದಮಬ್ರವೀತ್ ॥ ೪೪ ॥

ಸಮಂ ವರ್ತಸ್ವ ಕನ್ಯಾಸು ಮಾಮಕಾಸು ನಿಶಾಕರ ।
ಅನ್ಯಥಾ ದೋಷಭಾಗೀ ತ್ವಂ ಭವಿಷ್ಯಸಿ ನ ಸಂಶಯಃ ॥ ೪೫ ॥

ತಸ್ಯ ತದ್ವಚನಂ ಶ್ರುತ್ವಾ ಲಜ್ಜಯಾಽವನತಃ ಸ್ಥಿತಃ ।
ಬಾಢಮಿತ್ಯೇವ ಋಕ್ಷೇಂದ್ರೋ ದಕ್ಷಸ್ಯ ಪುರತೋಽಬ್ರವೀತ್ ॥ ೪೬ ॥

ಅದ್ಯ ಪ್ರಭೃತಿ ವಿಪ್ರರ್ಷೇ ಸಮಂ ವರ್ತಯಿತಾಸ್ಮ್ಯಹಂ ।
ಪುತ್ರೀಭಿಸ್ತವ ಸತ್ಯಂ ವೈ ಶಪೇಽಹಂ ಶಪಥೇನ ತೇ ॥ ೪೭ ॥

ಏವಂ ಪ್ರತಿಜ್ಞಾಸಂಯುಕ್ತೇ ನಿಶಾನಾಥೇ ತದಾಂಬಿಕೇ ।
ಸರ್ವಾ ರೂಪೇಣ ಸಂಯುಕ್ತಾಸ್ತಸ್ಯ ಕನ್ಯಾ ನಿವೇದಿತಾಃ ॥ ೪೮ ॥

ದಕ್ಷಃ ಸ್ವಭವನಂ ಗತ್ವಾ ನಿರ್ವೃತಿಂ ಪರಮಾಂ ಗತಃ ।
ಚಂದ್ರೋಽಪಿ ಪೂರ್ವವದ್ದೇವಿ ರೋಹಿಣ್ಯಾಂ ನಿರತೋಽಭವತ್ ॥ ೪೯ ॥

---

೪೪. ದಕ್ಷನು ದುಃಖಗೊಂಡ ಅವರ ಮಾತನ್ನು ಕೇಳಿ ಪುತ್ರಿಯರಲ್ಲಿರುವ ಪ್ರೀತಿಯಿಂದ ಪ್ರಜ್ವಲಿಸುತ್ತಿರುವ ಬ್ರಹ್ಮತೇಜಸ್ಸುಳ್ಳವನಾಗಿ ಚಂದ್ರನೆಡೆಗೆ ಹೋಗಿ ಇಂತೆಂದನು.

೪೫. "ನಿಶಾಕರ ! ನೀನು ನನ್ನ ಕನ್ಯೆಯರಲ್ಲಿ ಸಮವಾಗಿ ವರ್ತಿಸು. ಹಾಗಿಲ್ಲದಿದ್ದರೆ ನಿಜವಾಗಿಯೂ ನೀನು ದೋಷವುಳ್ಳವನಾಗುವೆ."

೪೬. ಚಂದ್ರನು ದಕ್ಷನ ಮಾತನ್ನು ಕೇಳಿ ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಅವನ ಮುಂದೆ ಹಾಗೆಯೇ ಆಗಲೆಂದು ಹೇಳಿದನು.

೪೭. "ಬ್ರಹ್ಮರ್ಷಿಯೆ ! ಇಂದಿನಿಂದ ನಾನು ನಿಶ್ಚಯವಾಗಿಯೂ ನಿನ್ನ ಪುತ್ರಿಯರಲ್ಲಿ ಸಮವಾಗಿ ವರ್ತಿಸುವೆನು. ಈ ವಿಷಯದಲ್ಲಿ ಆಣೆಯಿಡುತ್ತೇನೆ."

೪೮–೪೯. ಎಲೌ ಪಾರ್ವತಿ ! ಚಂದ್ರನು ಹೀಗೆ ಶಪಥಮಾಡಲು ಅದನ್ನು ಸುಂದರಿಯರಾದ ಪುತ್ರಿಯರಿಗೆ ತಿಳಿಸಿ ದಕ್ಷನು ತನ್ನ ಮನೆಯನ್ನು ಸೇರಿ ಅತ್ಯಂತ ಸುಖಗೊಂಡನು. ಚಂದ್ರನಾದರೊ ಹಿಂದಿನಂತೆಯೇ ರೋಹಿಣಿಯಲ್ಲಿಯೇ ಆಸಕ್ತನಾದನು.

ಸಂಪರಿತ್ಯಜ್ಯ ತಾಃ ಸರ್ವಾಃ ಕಾಮೋಪಹತಮಾನಸಃ ।
ಅಥ ಭೂಯಸ್ತು ತಾಃ ಸರ್ವಾ ದಕ್ಷಂ ವಚನಮಬ್ರುವನ್ ॥ ೫೦ ॥
ಮಲಿನಾಸ್ತಾಃ ಕೃಶಾಂಗ್ಯಶ್ಚ ದೀನಾಃ ಸರ್ವಾ ವಿಚೇತಸಃ ।
ತತೋ ದೃಷ್ಟ್ವಾ ತಥಾರೂಪಂ ದಕ್ಷೋ ಮೋಹಮುಪಾಗತಃ ॥ ೫೧ ॥
ಲಬ್ಧಸಂಜ್ಞಃ ಪುನಃ ಸೋಽಪಿ ಕ್ರೋಧೋದ್ಧೂತತನೂರುಹಃ ।
ಉವಾಚ ಸರ್ವಾಃ ಸ್ವಾಃ ಪುತ್ರೀಃ ತಮಿತ್ಥಂ ಮಲಿನಾಂಬರಾಃ ।
ಕಿಮಿದಂ ನಿಷ್ಪ್ರಭಾಃ ಸರ್ವಾಃ ಕಥಯಧ್ವಂ ಮಮಾನಘಾಃ ॥ ೫೨ ॥
ಅಸುರಾನ್ ಸಾನುಗಾಂಶ್ಚೈವ ಯೇ ಚಾನ್ಯೇ ಸುರಸತ್ತಮಾಃ ।
ಅದ್ಯ ಶಾಪಹತಾನ್ ಪುತ್ರ್ಯಃ ಕರಿಷ್ಯಾಮಿ ನ ಸಂಶಯಃ ॥ ೫೩ ॥
ಏವಮುಕ್ತಾಸ್ತು ದಕ್ಷೇಣ ಸರ್ವಾಸ್ತಾಃ ಸಮುದೈರಯನ್ ॥ ೫೪ ॥
ನ ಚಾಸ್ಮಾಕಂ ನಿಶಾನಾಥ ಋತುಮಾತ್ರಮಪಿ ಪ್ರಭೋ ।
ಪ್ರಯಚ್ಛತಿ ಪುನಸ್ತೇನ ಯುಷ್ಮತ್ಪಾರ್ಶ್ವಂ ಸಮಾಗತಾಃ ॥ ೫೫ ॥
ಅನಾದೃತ್ಯ ತು ತೇ ವಾಕ್ಯಂ ರೋಹಿಣ್ಯಾಂ ನಿರತೋ ರಹಃ ।
ರೇಮೇ ಕಾಮಪರೀತಾತ್ಮಾ ಅಸ್ಮಾಕಂ ಶೋಕವರ್ಧನಃ ॥ ೫೬ ॥

---

೫೦. ಹೀಗೆ ಆ ಚಂದ್ರನು ಎಲ್ಲರನ್ನೂ ಬಿಟ್ಟು ಕಾಮಪೀಡಿತನಾಗಿ ರೋಹಿಣಿಯಲ್ಲಿ ನಿರತನಾಗಲು ಉಳಿದ ಇಪ್ಪತ್ತಾರು ಮಂದಿ ಕನ್ಯೆಯರು ಮರಳಿ ದಕ್ಷನೆಡೆಗೆ ಹೋದರು.

೫೧. ಆ ದಕ್ಷನು ಮಲಿನರೂ, ಕೃಶರೂ, ದೀನರೂ, ಕರ್ತವ್ಯ ಮೂಢರೂ ಆದ ಆ ಪುತ್ರಿಯರನ್ನೆಲ್ಲ ಕಂಡು ಮೂರ್ಛೆಗೊಂಡನು.

೫೨–೫೩. ಅನಂತರ ಎಚ್ಚರಗೊಂಡು ಕೋಪದಿಂದ ರೋಮಾಂಚವುಳ್ಳವನಾಗಿ ಆ ಪುತ್ರಿಯರನ್ನು ಕುರಿತು, " ನೀವು ಏಕೆ ಮಲಿನ ವಸ್ತ್ರವುಳ್ಳವರೂ, ಕಾಂತಿಯಿಲ್ಲದವರೂ, ಆಗಿರುವಿರಿ ? ಕಾರಣವನ್ನು ಹೇಳಿರಿ. ಈಗ ಸುರಾಸುರನನ್ನು ಅವರ ಅನುಚರರೊಡನೆ ನಿಶ್ಚಯವಾಗಿಯೂ ಶಾಪದಿಂದ ಕೊಲ್ಲುವೆನು ". ಎಂದನು.

೫೪. ದಕ್ಷನು ಹೀಗೆನ್ನಲು ಆ ಪುತ್ರಿಯರೆಲ್ಲ ಹೀಗೆ ಅರಿಕೆ ಮಾಡಿದರು.

೫೫–೫೬. " ತಂದೆಯೆ ! ಆ ಚಂದ್ರನು ನಿನ್ನ ಮಾತನ್ನು ತಿರಸ್ಕರಿಸಿ ರೋಹಿಣಿಯೊಡನೆ ವಿಹರಿಸುತ್ತ ನಮಗೆ ದುಃಖವನ್ನು ಹೆಚ್ಚಿಸುತ್ತಿರುವನು. ಋತುಕಾಲದಲ್ಲಿಯೂ ಅವನು ನಮ್ಮೊಡನೆ ಸೇರುವುದಿಲ್ಲ. ಆದುದರಿಂದ ನಾವು ಮರಳಿ ನಿನ್ನೆಡೆಗೆ ಬಂದೆವು ".

ತಾಸಾಂ ತದ್ವಚನಂ ಶ್ರುತ್ವಾ ದಕ್ಷಃ ಕೋಪಮುಪಾಗತಃ ।
ಗತ್ವಾ ಚಂದ್ರಂ ಮಹಾದೇವಿ ಶಶಾಪ ಪ್ರಮುಖೇ ಸ್ಥಿತಃ ॥ ೫೭ ॥
ಅನಾದೃತ್ಯ ಹಿ ಮೇ ವಾಕ್ಯಂ ಯಸ್ಮಾತ್ತ್ವಂ ರೋಹಿಣೀರತಃ ।
ಸಂತ್ಯಜ್ಯ ಪುತ್ರೀಶ್ಚಾಽಸ್ಮಾಕಂ ಶೇಷಾ ದೋಷೇಣ ವರ್ಜಿತಾಃ ।
ತಸ್ಮಾದ್ಯಕ್ಷ್ಮಾ ಶರೀರಂ ತೇ ಗ್ರಸಿಷ್ಯತಿ ನ ಸಂಶಯಃ ॥ ೫೮ ॥
ಏತಸ್ಮಿನ್ನೇವ ಕಾಲೇ ತು ಯಕ್ಷ್ಮಾ ಸರ್ವತಪುತ್ರಿಕೇ ।
ದಕ್ಷೇಣ ತು ಸಮಾದಿಷ್ಟಸ್ತಸ್ಯ ಕಾಯಂ ಸಮಾವಿಶತ್ ॥ ೫೯ ॥
ಯಕ್ಷ್ಮಣಾ ಗ್ರಸ್ತಕಾಯೋಽಸೌ ಕ್ಷಯಂ ಯಾತಿ ದಿನೇದಿನೇ ॥ ೬೦ ॥
ಏವಂ ಸೋಮಸ್ತು ದಕ್ಷೇಣ ಕೃತಶಾಪೋ ಗತಪ್ರಭಃ ।
ಪಪಾತ ವಸುಧಾಂ ದೇವಿ ನಿಶ್ಚೇಷ್ಟೋ ರೋಹಿಣೀಯುತಃ ॥ ೬೧ ॥
ಲಬ್ಧಸಂಜ್ಞೋ ಮುಹೂರ್ತೇನ ರೋಹಿಣೀಂ ವಾಕ್ಯಮಬ್ರವೀತ್ ॥ ೬೨ ॥

---

೫೭. ದಕ್ಷನು ಅವರ ಮಾತನ್ನು ಕೇಳಿ ಕ್ರುದ್ಧನಾಗಿ ಚಂದ್ರನೆಡೆಗೆ ಹೋಗಿ ಮುಂದೆ ನಿಂತು ಅವನನ್ನು ಅವನ ಹೀಗೆ ಶಪಿಸಿದನು.

೫೮. “ ನೀನು ನನ್ನ ಮಾತನ್ನು ಮೀರಿ ದೋಷವಿಲ್ಲದ ನಿನ್ನ ಇತರ ಪತ್ನಿಯರನ್ನು ತ್ಯಜಿಸಿ ರೋಹಿಣಿಯೊಬ್ಬಳಲ್ಲೇ ಆಸಕ್ತನಾಗಿರುವುದರಿಂದ ನಿನ್ನ ಶರೀರವನ್ನು ಕ್ಷಯ ರೋಗವು ಆವರಿಸಲಿ. ”

೫೯. ಈ ಸಮಯದಲ್ಲಿ ಕ್ಷಯರೋಗವು ದಕ್ಷನ ಅಪ್ಪಣೆಯಂತೆ ಚಂದ್ರನ ಶರೀರವನ್ನು ಪ್ರವೇಶಿಸಿತು.

೬೦. ಕ್ಷಯರೋಗಗ್ರಸ್ತನಾದ ಚಂದ್ರನು ಪ್ರತಿದಿನವೂ ಕೃಶನಾಗುತ್ತಿದ್ದನು.

೬೧ ದಕ್ಷನ ಶಾಪದಿಂದ ಕಾಂತಿಹೀನನಾದ ಚಂದ್ರನು ರೋಹಿಣಿಯೊಡನೆ ಚಲಿಸದೆ ಭೂಮಿಯಲ್ಲಿ ಬಿದ್ದನು.

೬೨–೬೩. ಆ ಚಂದ್ರನು ಸ್ವಲ್ಪ ಹೊತ್ತಿನಲ್ಲಿ ಚೇತರಿಸಿಕೊಂಡು ರೋಹಿಣಿಯನ್ನು ಕುರಿತು ಇಂತೆಂದನು. “ ದೇವಿ ! ಈಗ ನಾನು ಏನುಮಾಡಬೇಕು.

ದೇವಿ ಕಾರ್ಯಂ ಕಿಮಧುನಾ ತ್ವತ್ಪಿತ್ರಾ ಶಾಪಿತೋ ಹ್ಯಹಂ ।
ಕ್ಷಯಕುಷ್ಠೇನ ಸಂಯುಕ್ತಃ ಕಿಂ ಕರೋಮ್ಯಧುನಾ ಪ್ರಿಯೇ ॥ ೬೩ ॥
ಏವಮುಕ್ತ್ವಾ ರೋಹಿಣೀ ತು ಬಾಷ್ಪವ್ಯಾಕುಲಲೋಚನಾ ।
ದಕ್ಷಶಾಪಹತಂ ದೃಷ್ಟ್ವಾ ಸೋಮಂ ವಚನಮಬ್ರವೀತ್ ॥ ೬೪ ॥
ಯೇನ ಶಾಪಸ್ತು ತೇ ದತ್ತಸ್ತಮೇವ ಶರಣಂ ವ್ರಜ ।
ಸ ತೇ ಶಾಪಾಭಿಭೂತಸ್ಯ ನೂನಂ ಶ್ರೇಯೋ ವಿಧಾಸ್ಯತಿ ॥ ೬೫ ॥
ಲಪ್ಸ್ಯಸೇ ತ್ವತ್ಪ್ರಸಾದಾತ್ತ್ವಂ ಪ್ರಭಾಂ ಪೂರ್ವೋಚಿತಾಂ ಶುಭಾಂ ॥ ೬೬ ॥
ರೋಹಿಣ್ಯಾ ವಚನಂ ಶ್ರುತ್ವಾ ಗತೋ ದಕ್ಷಸಮೀಪತಃ ।
ಚಂದ್ರಃ ಪ್ರೋವಾಚ ವಿನಯಾದ್ಬಾಷ್ಪವ್ಯಾಕುಲಲೋಚನಃ ॥ ೬೭ ॥
ಕುರುಷ್ವಾನುಗ್ರಹಂ ದಕ್ಷ ಪ್ರಸನ್ನೇನಾಂತರಾತ್ಮನಾ ।
ಕೋಪಂ ತ್ಯಜ ಮಹರ್ಷೇ ತ್ವಂ ಮಮೋಪರಿ ದಯಾಂ ಕುರು ॥ ೬೮ ॥
ತ್ವಯಾ ಕ್ರೋಧಪರೀತೇನ ಕಾರಣೇನಾಪ್ಯಕಾರಣಂ ।
ಅನುಕಂಪಾಂ ಚ ಮೇ ಕೃತ್ವಾ ಕಾರ್ಯಂ ಶಾಪಸ್ಯ ಮೋಕ್ಷಣಂ ॥ ೬೯ ॥

ನಿನ್ನ ತಂದೆಯು ನನ್ನನ್ನು ಶಪಿಸಿರುವನು. ನಾನು ಆ ಶಾಪದಿಂದ ಕ್ಷಯರೋಗ ಪೀಡಿತನಾಗಿರುವೆನು. ಈಗ ಏನನ್ನು ಮಾಡಲಿ ?

೬೪. ಚಂದ್ರನು ಹೀಗೆನ್ನಲು ರೋಹಿಣಿಯು ಕಣ್ಣೀರನ್ನು ಸುರಿಸುತ್ತ ತನ್ನ ತಂದೆಯಾದ ದಕ್ಷನ ಶಾಪದಿಂದ ವ್ಯಥೆಗೊಂಡ ಅವನನ್ನು ಕುರಿತು ಹೀಗೆಂದಳು.

೬೫. " ಎಲೈ ಪ್ರಭುವೇ ! ನೀನು ನಿನಗೆ ಶಾಪವನ್ನು ಕೊಟ್ಟ ಆ ದಕ್ಷ ಬ್ರಹ್ಮನನ್ನೇ ಮರೆಹೋಗು. ಅವನು ನಿಶ್ಚಯವಾಗಿಯೂ ನಿನಗೆ ಶ್ರೇಯಸ್ಸನ್ನುಂಟು ಮಾಡುವನು.

೬೬. ನೀನು ಅವನ ಅನುಗ್ರಹದಿಂದ ಹಿಂದಿನಂತೆಯೆ ಮಂಗಳಕರವಾದ ಕಾಂತಿಯನ್ನು ಪಡೆಯುವೆ ".

೬೭. ಚಂದ್ರನು ರೋಹಿಣಿಯ ಈ ಮಾತನ್ನು ಕೇಳಿ ದಕ್ಷನ ಸಮೀಪಕ್ಕೆ ತೆರಳಿ ಕಣ್ಣೀರನ್ನು ಸುರಿಸುತ್ತ ವಿನಯದಿಂದ ಹೀಗೆಂದನು.

೬೮. " ಎಲೈ ದಕ್ಷನೆ ! ನೀನು ಪ್ರಸನ್ನನಾಗಿ ಮನಃಪೂರ್ವಕವಾಗಿ ನನಗೆ ಅನುಗ್ರಹವನ್ನುಮಾಡು. ಕೋಪವನ್ನು ತ್ಯಜಿಸು. ನನ್ನ ಮೇಲೆ ದಯೆಮಾಡು.

೬೯. ಸಕಾರಣವಾಗಿಯೊ, ಅಕಾರಣವಾಗಿಯೊ ಕೋಪಗೊಂಡ ನೀನು ನನ್ನ ಮೇಲೆ ದಯೆಮಾಡಿ ಶಾಪವನ್ನು ಪರಿಹರಿಸು.

ವಿದಿತಂ ತು ಮಹಾಭಾಗ ಶಪ್ತೋಽಹಂ ಯೇನ ಕರ್ಮಣಾ ।
ಕುರುಷ್ವಾನುಗ್ರಹಂ ದಕ್ಷ ಮಮ ದೀನಸ್ಯ ಯಾಚತಃ ॥ ೨೦ ॥
ಏವಂ ವಿಲಪಮಾನಸ್ಯ ಸೋಮಸ್ಯ ತು ಮಹಾತ್ಮನಃ ।
ಅನುಗ್ರಹೇ ಮತಿಂ ಕೃತ್ವಾ ಇದಂ ವಚನಮಬ್ರವೀತ್ ॥ ೨೧ ॥

ದಕ್ಷ ಉವಾಚ:—

ಮಯಾ ಶಾಪಹತಃ ಸೋಮ ತ್ರಾತುಂ ಶಕ್ಯೋ ನ ದೇವತೈಃ ।
ಯದ್ಬ್ರವೀಮ್ಯಹಂ ಸೋಮ ತತ್ತಥೇತಿ ನ ಸಂಶಯಃ ॥ ೨೨ ॥
ಆಯುಃ ಕರ್ಮ ಚ ವಿತ್ತಂ ಚ ವಿದ್ಯಾನಿಧನಮೇವ ಚ ।
ಪೂರ್ವಸೃಷ್ಟಾನಿ ಯಾನ್ಯೇವ ಸಂಭವಂತಿ ಹಿ ತಾನಿ ವೈ ॥ ೨೩ ॥
ಅಸುರಾಶ್ಚ ಸುರಾಶ್ಚೈವ ಯೇ ಚಾಽನ್ಯೇ ಯಕ್ಷರಾಕ್ಷಸಾ: ।
ಸರ್ವೇಽಪಿ ಶಕ್ತಾ ನ ತ್ರಾತುಂ ವರ್ಜಯಿತ್ವಾ ಮಹೇಶ್ವರಂ ॥ ೨೪ ॥
ಏವಂ ಶಾಪೋ ಮಯಾ ದತ್ತೋಽನುಗ್ರಹೀಷ್ಯತಿ ಶಂಕರಃ ।
ನಾಽನ್ಯಸ್ತ್ರಾತುಂ ಭವೇಚ್ಛಕ್ತೋ ವಿನಾ ಪಶುಪತಿಂ ಭವಂ ।
ತತ್ತ್ವಂ ಶೀಘ್ರತರಂ ಗಚ್ಛ ಸಮಾರಾಧಯ ಶಂಕರಂ ॥ ೨೫ ॥

---

೨೦. ಮಹಾಭಾಗ್ಯಶಾಲಿಯೇ! ಏತಕ್ಕಾಗಿ ನೀನು ನನ್ನ ಮೇಲೆ ಕೋಪಿಸಿಕೊಂಡಿರುವೆ? ಎಂಬುದನ್ನು ನಾನರಿತೆನು. ಬೇಡಿಕೊಳ್ಳುತ್ತಿರುವ ದೀನನಾದ ನನ್ನ ಮೇಲೆ ಅನುಗ್ರಹಮಾಡು. ”

೨೧. ದಕ್ಷನು ಹೀಗೆ ಗೋಳಾಡುತ್ತಿರುವ ಮಹಾತ್ಮನಾದ ಚಂದ್ರನಿಗೆ ಅನುಗ್ರಹ ಮಾಡಲೋಚಿಸಿ ಇಂತೆಂದನು.

೨೨. ದಕ್ಷನು ಹೇಳುತ್ತಾನೆ:—ಚಂದ್ರ! ನನ್ನಿಂದ ಶಪ್ತನಾದವನನ್ನು ರಕ್ಷಿಸಲು ದೇವತೆಗಳಿಗೂ ಸಾಧ್ಯವಿಲ್ಲ. ನಾನು ಹೇಳಿದುದೆಲ್ಲ ನಡೆದೇ ನಡೆಯುವುದು.

೨೩. ಆಯುಸ್ಸು, ಕರ್ಮ, ದ್ರವ್ಯ ವಿದ್ಯಾ, ಸಾವು, ಇವುಗಳು ಹಿಂವೆ ಸೃಷ್ಟಿಸಿದಂತೆಯೇ ಈಗಲೂ ಉಂಟಾಗುವುವು.

೨೪. ಮಹೇಶ್ವರನನ್ನು ಬಿಟ್ಟು ಅಸುರರೂ, ಇತರ ಯಕ್ಷರಾಕ್ಷಸರೂ, ಯಾರೂ ರಕ್ಷಿಸಲು ಸಮರ್ಥರಲ್ಲ.

೨೫. ನಾನು ಶಾಪವನ್ನು ಕೊಟ್ಟವರನ್ನು ಶಂಕರನು ಅನುಗ್ರಹಿಸುವನು. ಅವನನ್ನು ಬಿಟ್ಟರೆ ಬೇರೆ ಯಾರೂ ಕಾಪಾಡಲು ಶಕ್ತರಲ್ಲ. ಆದುದರಿಂದ ನೀನು ಜಾಗ್ರತೆಯಾಗಿ ಹೋಗಿ ಶಂಕರನನ್ನು ಪೂಜಿಸು.

ನ ಶಕ್ತೋಽನ್ಯಃ ಪುನಶ್ಚಂದ್ರ ಕರ್ತುಂ ತ್ವಾಂ ನಿರ್ಮಲಂ ಪುನಃ ।
ವರ್ಜಯಿತ್ವಾ ಮಹಾದೇವಂ ಶಿತಿಕಂಠಮುಮಾಪತಿಂ ॥ ೭೬ ॥
ದಕ್ಷಸ್ಯ ಚ ವಚಃ ಶ್ರುತ್ವಾ ಕೃತಾಂಜಲಿಪುಟಃ ಸ್ಥಿತಃ ।
ಪ್ರತ್ಯುವಾಚ ತದಾ ಸೋಮಃ ಪ್ರಹೃಷ್ಟೇನಾಂತರಾತ್ಮನಾ ॥ ೭೭ ॥
ಭಗವನ್ ಯದಿ ತುಷ್ಟೋಽಸಿ ಮಮ ಭಕ್ತಸ್ಯ ಸುವ್ರತ ।
ಅನುಗ್ರಹೇ ಕೃತಾ ಬುದ್ಧಿಸ್ತದಾಚಕ್ಷ್ವ ಕುತಃ ಶಿವಃ ॥ ೭೮ ॥
ಕಸ್ಮಿನ್ ಸ್ಥಾನೇ ಮಯಾ ದಕ್ಷ ದ್ರಷ್ಟವ್ಯೋಽಸೌ ಮಹೇಶ್ವರಃ ।
ತತ್ ಸ್ಥಾನಾನಿ ಚರಿಷ್ಯಾಮಿ ಯಾನಿ ತಾನಿ ವದಸ್ವ ಮೇ ॥ ೭೯ ॥

ದಕ್ಷ ಉವಾಚ :—

ಶೃಣು ಸೋಮ ಪ್ರಯತ್ನೇನ ಶ್ರುತ್ವಾ ಚೈವಾವಧಾರಯ ।
ವಾರುಣೀಂ ದಿಶಮಾಶ್ರಿತ್ಯ ಸಾಗರಾನೂಪಸನ್ನಿಧೌ ॥ ೮೦ ॥
ಕೃತಸ್ಮರಸ್ಯಾಪರತೋ ಧನ್ವಂತರಶತತ್ರಯೇ ।
ಲಿಂಗಂ ಮಹಾಪ್ರಭಾವಂ ಚ ಸ್ವಯಂಭೂತಂ ವ್ಯವಸ್ಥಿತಂ ॥ ೮೧ ॥

---

೭೬. ಚಂದ್ರ ! ಉಮಾಪತಿಯಾದ ಆ ಮಹಾದೇವನನ್ನು ಬಿಟ್ಟು ನಿನ್ನನ್ನು ನಿರ್ಮಲಗೊಳಿಸಲು ಬೇರೆ ಯಾರೂ ಸಮರ್ಥರಲ್ಲ.

೭೭. ಚಂದ್ರನು ದಕ್ಷನ ಮಾತನ್ನು ಕೇಳಿ ಸಂತೋಷಗೊಂಡ ಮನಸ್ಸುಳ್ಳವನಾಗಿ ಕೈಮುಗಿದುಕೊಂಡು ಹೀಗೆಂದನು.

೭೮. “ ಪೂಜ್ಯನೆ ! ನೀನು ಭಕ್ತನಾದ ನನ್ನಲ್ಲಿ ತುಷ್ಟನಾಗಿ ಅನುಗ್ರಹಮಾಡಲಿಚ್ಛಿಸುವುದಾದರೆ ಆ ಶಿವನೆಲ್ಲಿದ್ದಾನೆಂಬುದನ್ನು ನನಗೆ ಹೇಳು.

೭೯. ಎಲೈ ದಕ್ಷನೆ ! ಆ ಮಹೇಶ್ವರನನ್ನು ನಾನು ಎಲ್ಲಿ ನೋಡಬೇಕು. ಆತನಿರುವ ಸ್ಥಳವನ್ನು ನನಗೆ ತಿಳಿಸು. ಅಲ್ಲಿ ನಾನು ಸಂಚರಿಸುವೆನು. ”

೮೦–೮೧. ದಕ್ಷನು ಹೇಳುತ್ತಾನೆ :—ಚಂದ್ರ ! ನಾನು ಹೇಳುವುದನ್ನು ಪ್ರಯತ್ನದಿಂದ ಕೇಳಿ ನಿಶ್ಚಯಿಸಿಕೊ. ಪಶ್ಚಿಮ ದಿಕ್ಕಿನಲ್ಲಿ ಸಮುದ್ರದ ಹತ್ತಿರ ಕೃತಸ್ಮರ ಪರ್ವತ ಪಶ್ಚಿಮದಲ್ಲಿ ಮುನ್ನೂರು ಬಿಲ್ಲಿನ ದೂರದಲ್ಲಿ ಸೂರ್ಯಬಿಂಬಕ್ಕೆ ಸಮಾನವಾದುದೂ, ಸರ್ಪದ ಒಡ್ಯಾಣದಿಂದ ವಿರಾಜಿಸುತ್ತಿರುವುದೂ, ಕೋಳಿಯ ಮೊಟ್ಟೆಯಷ್ಟು

ಸೂರ್ಯಬಿಂಬಸಮಪ್ರಖ್ಯಂ ಸರ್ಪಮೇಖಲಮಂಡಿತಂ ।
ಕುಕ್ಕುಟಾಂಡಕಮಾನಂ ತದ್ಭೂಮಿಮಧ್ಯೇ ವ್ಯವಸ್ಥಿತಂ ॥ ೮೨ ॥
ಸ್ಪರ್ಶಲಿಂಗಂ ಹಿ ತದ್ವಿದ್ಧಿ ತದ್ಭಕ್ತ್ಯಾ ಜ್ಞಾಸ್ಯತೇ ಭವಾನ್ ।
ತತ್ರ ಸನ್ನಿಹಿತೋ ದೇವಃ ಶಂಕರಃ ಪರಮೇಶ್ವರಃ ॥ ೮೩ ॥
ಗಚ್ಛ ತ್ವಂ ತಪಸೋಗ್ರೇಣ ಆರಾಧಯ ಸುರೇಶ್ವರಂ ॥ ೮೪ ॥
ಪ್ರಶಸ್ಯ ದೇವದೇವೇಶಮಾತ್ಮಾನಂ ನಿರ್ಮಲಂ ಕುರು ।
ಯಸ್ಯಾಶು ವರದಾನೇನ ಪ್ರಾಪ್ಸ್ಯಸೇ ರೂಪಮುತ್ತಮಂ ॥ ೮೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದಕ್ಷೇಣ ಸ್ವಶಾಪಜನ್ಯಯಕ್ಷ್ಮ
ರೋಗಾರ್ತಸ್ಯ ಚಂದ್ರಸ್ಯ ಕುಷ್ಠರೋಗ ನಿವೃತ್ತಯೇ
ಶಿವಾರಾಧನೋಪದೇಶವರ್ಣನಂ ನಾಮ
॥ ಏಕವಿಂಶೋಽಧ್ಯಾಯಃ ॥

ಪರಿಮಾಣವುಳ್ಳದೂ, ಸ್ವಯಂವ್ಯಕ್ತವೂ ಆದ ಅತಿಶಯ ಮಾಹಾತ್ಮ್ಯವುಳ್ಳ ಲಿಂಗವು ಭೂಮಿಯ ಮಧ್ಯದಲ್ಲಿರುವುದು.

೮೩. ಆ ಸ್ಪರ್ಶಲಿಂಗವನ್ನು ನೀನು ಭಕ್ತಿಯಿಂದ ತಿಳಿಯುವೆ. ಅದರಲ್ಲಿ ಶಂಕರನು ಸನ್ನಿಹಿತನಾಗಿರುವನು.

೮೪. ನೀನು ಅಲ್ಲಿಗೆ ಹೋಗಿ ಕಠಿನ ತಪಸ್ಸಿನಿಂದ ಆ ಮಹೇಶ್ವರನನ್ನು ಪೂಜಿಸು.

೮೫. ಅವನನ್ನು ಸ್ತುತಿಸಿ ನಿನ್ನ ದೇಹವನ್ನು ನಿರ್ಮಲಗೊಳಿಸಿಕೊ. ಅವನ ವರದಿಂದ ನೀನು ಶೀಘ್ರವಾಗಿ ಉತ್ತಮ ರೂಪವನ್ನು ಪಡೆಯುವೆ.

ಇಲ್ಲಿಗೆ ಎಂಬತ್ತೊಂದುಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರದಲ್ಲಿ
ದಕ್ಷಶಾಪ ಶಿವಾರಾಧನೋಪದೇಶವರ್ಣನವೆಂಬ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ದ್ವಾವಿಂಶೋಽಧ್ಯಾಯಃ

ಸೋಮವರಪ್ರದಾನವರ್ಣನಂ

ಈಶ್ವರ ಉವಾಚ :—

ದಕ್ಷೇಣೈವಮನುಜ್ಞಾತಃ ಶೋಚನ್ ಕರ್ಮ ಸ್ವಕಂ ತದಾ ।
ದುಃಖಶೋಕಪರೀತಾತ್ಮಾ ಪ್ರಭಾಸಂ ಕ್ಷೇತ್ರಮಾಗತಃ ॥ ೧ ॥
ಸ ಗತ್ವಾ ದಕ್ಷಿಣಂ ತೀರಂ ಸಾಗರಸ್ಯ ಸಮೀಪತಃ ।
ದದರ್ಶ ಪರ್ವತಂ ತತ್ರ ಕೃತಸ್ಮರಮಿತಿ ಶ್ರುತಂ ॥ ೨ ॥
ಯಕ್ಷ ವಿದ್ಯಾಧರಾಕೀರ್ಣಂ ಕಿನ್ನರೈರುಪಶೋಭಿತಂ ।
ಚಂದನಾಗುರುಕರ್ಪೂರೈರಶೋಕೈಸ್ತಿಲಕೈಃ ಶುಭೈಃ ॥ ೩ ॥
ಕಲ್ಹಾರೈಃ ಶತಪತ್ರೈಶ್ಚ ಪುಷ್ಪಿತೈಃ ಫಲಿತೈಃ ಶುಭೈಃ ।
ಆಮ್ರಜಂಬೂಕಪಿತ್ಥೈಶ್ಚ ದಾಡಿಮ್ಯೈಃ ಪನಸೈಸ್ತಥಾ ॥ ೪ ॥

ಕನ್ನಡದ ಅನುವಾದ

ಸೋಮವರಪ್ರದಾನವರ್ಣನ

೧. ಈಶ್ವರನು ಹೇಳುತ್ತಾನೆ :—ಚಂದ್ರನು ತಾನು ಮಾಡಿದ ದುಷ್ಕರ್ಮಕ್ಕಾಗಿ ದುಃಖಿಸುತ್ತ ದಕ್ಷನ ಅಪ್ಪಣೆಯಂತೆ ಪ್ರಭಾಸಕ್ಷೇತ್ರಕ್ಕೆ ಬಂದನು.

೨. ಅವನು ಸಮುದ್ರದ ದಕ್ಷಿಣ ತೀರಕ್ಕೆ ಹೋಗಿ ಅದರ ಸಮೀಪದಲ್ಲಿರುವ ಕೃತಸ್ಮರವೆಂಬ ಪರ್ವತವನ್ನು ಕಂಡನು.

೧—೨೪. ಆ ಪರ್ವತವು ಯಕ್ಷ, ವಿದ್ಯಾಧರ, ಕಿನ್ನರರಿಂದ ವಿರಾಜಿಸುವುದೂ, ಚಂದನ, ಅಗುರು, ಕರ್ಪೂರ, ಅಶೋಕ, ತಿಲಕ, ಕಲ್ಹಾರ, ತಾವರೆ, ಮೊದಲಾದ ಪುಷ್ಪಗಳಿಂದಲೂ ಫಲಗಳಿಂದ ಕಂಗೊಳಿಸುವ ಮಾವು, ನೇರಳೆ, ಬೇಲ, ದಾಳಿಂಬೆ, ಹಲಸು, ಬೇವು, ಲಿಂಬೆ, ಪುನ್ನಾಗ, ಬಾಳೆ, ಅಡಿಕೆ, ತಾಂಬೂಲದ ಬಳ್ಳಿ, ಶಾಲ, ತಾಳೆ,

ನಿಂಬುಜಂಬೀರನಾಗೈಶ್ಚ ಕದಲೀಖಂಡಮಂಡಿತೈಃ ।
ಕ್ರಮುಕೈರ್ನಾಗವಲ್ಲ್ಯಾದ್ಯೈಃ ಶಾಲೈಸ್ತಾಲೈಸ್ತಮಾಲಕೈಃ ॥ ೫ ॥
ಬೀಜಪೂರಕಖರ್ಜೂರೈರ್ದ್ರಾಕ್ಷಾಮಧುರಪಾಟಲೈಃ ।
ಬಿಲ್ವಚಂಪಕತಿಂದ್ವಾದ್ಯೈಃ ಕದಂಬಕಕುಭೈಸ್ತಥಾ ॥ ೬ ॥
ಧವಾಶೋಕಶಿರೀಷಾದ್ಯೈರ್ನಾನಾವೃಕ್ಷೈಶ್ಚ ಶೋಭಿತಂ ।
ಕಾಮಂ ಕಾಮಫಲೈರ್ವೃಕ್ಷೈಃ ಪುಷ್ಪಿತೈಃ ಫಲಿತೈಃ ಶುಭೈಃ ॥ ೭ ॥
ಹಂಸಕಾರಂಡವಾಕೀರ್ಣಂ ಚಕ್ರವಾಕೋಪಶೋಭಿತಂ ।
ಕೋಕಿಲಾಭಿಃ ಶುಕೈಶ್ಚೈವ ನಾನಾಪಕ್ಷಿನಿನಾದಿತಂ ॥ ೮ ॥
ಜಾತಿಸ್ಮರಾಃ ಪಕ್ಷಿಣಶ್ಚ ವ್ಯಾಜಹ್ರುರ್ಮಾನುಷೀಂ ಗಿರಂ ।
ಗಂಧರ್ವಕಿನ್ನರಯುಗೈಃ ಸಿದ್ಧವಿದ್ಯಾಧರೋರಗೈಃ ॥ ೯ ॥
ಕ್ರೀಡದ್ಭಿರ್ವಿವಿಧೈರ್ದಿವ್ಯೈಃ ಶೋಭಿತಂ ಪರ್ವತೋತ್ತಮಂ ।
ದೇವಗಂಧರ್ವನೃತ್ಯೈಶ್ಚ ವೇಣುವೀಣಾನಿನಾದಿತಂ ॥ ೧೦ ॥

ತಮಾಲ, ಬೀಜಪೂರ, ಖರ್ಜೂರ, ದ್ರಾಕ್ಷಿ, ಮಧುರ, ಪಾಟಲ, ಬಿಲ್ವ, ಸಂಪಿಗೆ, ತಿಂದುಕ, ಈಚಲ, ಕಕುಭಧವ, ಅಶೋಕ, ಬಾಗೆ ಮೊದಲಾದ ಅಪೇಕ್ಷಿಸಿದ ಫಲಗಳನ್ನೀಯುವ ವೃಕ್ಷಗಳಿಂದ ವ್ಯಾಪಿಸಿರುವುದೂ, ಹಂಸ, ಕಾರಂಡವ, ಚಕ್ರವಾಕ, ಕೋಗಿಲೆ, ಗಿಣಿ ಮೊದಲಾದ ಹಿಂದಿನ ಜಾತಿಯವರನ್ನರಿತಿರುವುವೂ ಮನುಷ್ಯರಂತೆ ಮಾತಾಡುವವೂ ಆದ ಪಕ್ಷಿಗಳಿಂದ ಶಬ್ದವುಳ್ಳುದೂ, ಕ್ರೀಡಿಸುತ್ತಿರುವ ಗಂಧರ್ವ, ಕಿನ್ನರ ದಂಪತಿಗಳು, ಸಿದ್ಧರು, ವಿದ್ಯಾಧರರು, ನಾಗರಿಂದ ಪ್ರಕಾಶಿಸುವುದೂ, ದೇವಗಂಧರ್ವರ ನೃತ್ಯಗಳಿಂದಲೂ ಕೊಳಲು, ವೀಣೆಗಳಿಂದಲೂ ಶಬ್ದಗೊಂಡುದೂ, ವೇದಘೋಷದಿಂದಲೂ, ಆಜ್ಯದಸುವಾಸನೆಯುಳ್ಳ ಯಜ್ಞ ಹೋಮ, ಅಗ್ನಿಹೋತ್ರಗಳ ಧೂಮಳಿಂದವ್ಯಾಪ್ತವಾದುದೂ" ದಿವ್ಯರ್ಷಿಗಳು, ಚಾತುರ್ವಿದ್ಯ ದ್ವಿಜವರ್ಯರು ಇವರಿಂದ ಪ್ರಕಾಶಿಸುವುದೂ, ಆಗಿರುವುದು. ಇದರಲ್ಲಿ ಅತ್ರಿ, ವಸಿಷ್ಠ, ಪುಲಸ್ತ್ಯ, ಪುಲಹ, ಕ್ರತು, ಭೃಗು, ಮರೀಚಿ, ಭರದ್ವಾಜ, ಕಶ್ಯಪ, ಮನು, ಯಮ, ಅಂಗೀರಸ್ಸು, ವಿಷ್ಣು, ಶಾತಾತಪ, ಪರಾಶರ, ಆಪಸ್ತಂಬ, ಸಂವರ್ತ, ಕಾತ್ಯ, ಕಾತ್ಯಾಯನ, ಗೌತಮ, ಶಂಖ, ಲಿಖಿತ, ವಾಚಸ್ಪತಿ, ಪರಶುರಾಮ, ಯಾಜ್ಞವಲ್ಕ್ಯ, ಋಷ್ಯಶೃಂಗ, ವಿಭಾಂಡಕ, ಗಾರ್ಗ್ಯ, ಶೌನಕದಾಲ್ಭ್ಯ, ಉದ್ದಾಲಕ, ಶುಕ, ನಾರದ, ಪರ್ವತ, ದುರ್ವಾಸ, ಶಾಕಲ್ಯ, ಗಾಲವ, ಜಾಬಾಲಿ, ಮುದ್ಗಲ, ವಿಶ್ವಾಮಿತ್ರ, ಜಹ್ನು, ವಿಶ್ವಾವಸು, ಧೌಮ್ಯ, ಶತಾನಂದ, ವೈಶಂಪಾಯನ, ಜಿಷ್ಣು, ಶಾಕಟಾಯನ, ವಾರ್ಧಿಕ್ಯ, ಆವಗ್ನಿಕ, ಬಾದರಾಯಣ, ವಾಲಖಿಲ್ಯಮೊದಲಾದ ಮಹರ್ಷಿಗಳೆಲ್ಲರೂ ನೆಲಸಿರುವರು. ಬ್ರಹ್ಮತನಯರಾದ ಆ ಮಹರ್ಷಿಗಳು

ವೇದಧ್ವನಿತಘೋಷೇಣ ಯಜ್ಞಹೋಮಾಗ್ನಿಹೋತ್ರಜೈಃ ।
ಧೂಮೈಃ ಸಮಾವೃತಂ ಸರ್ವಮಾಜ್ಯಗಂಧಿಭಿರುಚ್ಛ್ರಿತಂ ॥ ೧೧ ॥
ಶೋಭಿತಂ ಚರ್ಷಿಭಿರ್ದಿವ್ಯೈಶ್ಚಾತುರ್ವಿದ್ಯೈರ್ದ್ವಿಜೋತ್ತಮೈಃ ।
ಅತ್ರಿಶ್ಚೈವ ವಸಿಷ್ಠಶ್ಚ ಪುಲಸ್ತ್ಯಃ ಪುಲಹಃ ಕ್ರತುಃ ॥ ೧೨ ॥
ಭೃಗುಶ್ಚೈವ ಮರೀಚಿಶ್ಚ ಭರದ್ವಾಜೋಽಥ ಕಶ್ಯಪಃ ।
ಮನುರ್ಯಮೋಂಗಿರಾ ವಿಷ್ಣುಃ ಶಾತಾತಪಪರಾಶರೌ ॥ ೧೩ ॥
ಆಪಸ್ತಂಬೋಽಥ ಸಂವರ್ತಃ ಕಾತ್ಯಃ ಕಾತ್ಯಾಯನೋ ಮುನಿಃ ।
ಗೌತಮಃ ಶಂಖಲಿಖಿತೌ ತಥಾ ವಾಚಸ್ಪತಿರ್ಮುನಿಃ ॥ ೧೪ ॥
ಜಾಮದಗ್ನ್ಯೋ ಯಾಜ್ಞವಲ್ಕ್ಯ ಋಷ್ಯಶೃಂಗೋ ವಿಭಾಂಡಕಃ ।
ಗಾರ್ಗ್ಯಶೌನಕದಾಲ್ಭ್ಯಾಶ್ಚ ವ್ಯಾಸ ಉದ್ದಾಲಕಃ ಶುಕಃ ॥ ೧೫ ॥
ನಾರದಃ ಪರ್ವತಶ್ಚೈವ ದುರ್ವಾಸಾ ಉಗ್ರತಾಪಸಃ ।
ಶಾಕಲ್ಯೋ ಗಾಲವಶ್ಚೈವ ಜಾಬಾಲಿರ್ಮುದ್ಗಲಸ್ತಥಾ ॥ ೧೬ ॥
ವಿಶ್ವಾಮಿತ್ರಃ ಕೌಶಿಕಶ್ಚ ಜಹ್ನುರ್ವಿಶ್ವಾವಸುಸ್ತಥಾ ।
ಧೌಮ್ಯಶ್ಚೈವ ಶತಾನಂದೋ ವೈಶಂಪಾಯನಜಿಷ್ಣವಃ ॥ ೧೭ ॥
ಶಾಕಟಾಯನವಾರ್ಧಿಕ್ಯಾಮುಗ್ನಿಕೋ ಬಾದರಾಯಣಃ ।
ವಾಲಖಿಲ್ಯಾ ಮಹಾತ್ಮಾನೋ ಯೇ ಚ ಭೂಮಂಡಲೇ ಸ್ಥಿತಾಃ ॥ ೧೮ ॥
ತೇ ಸರ್ವೇ ತತ್ರ ತಿಷ್ಠಂತಿ ಪರ್ವತೇ ತು ಕೃತಸ್ಮರೇ ।
ತೇಜಸ್ವಿನೋ ಬ್ರಹ್ಮಪುತ್ರಾ ಋಷಯೋ ಧಾರ್ಮಿಕಾಃ ಪ್ರಿಯೇ ॥ ೧೯ ॥
ಜ್ವಲಂತಸ್ತಪಸಾ ಸರ್ವೇ ನಿರ್ಧೂಮಾ ಇವ ಪಾವಕಾಃ ।
ಮಾಸೋಪವಾಸಿನಃ ಕೇಚಿತ್ಕೇಚಿತ್ಪಕ್ಷೋಪವಾಸಿನಃ ॥ ೨೦ ॥

ಧಾರ್ಮಿಕರೂ, ತಪಸ್ಸಿನಿಂದ ಜ್ವಲಿಸುತ್ತಿರುವವರೂ, ಹೊಗೆಯಿಲ್ಲದ ಬೆಂಕಿಯಂತಿರುವವರೂ ಆಗಿದ್ದರು. ಅವರಲ್ಲಿ ಕೆಲವರು ಒಂದು ತಿಂಗಳು ಉಪವಾಸಮಾಡುವವರೂ, ಕೆಲವರು ಒಂದು ಪಕ್ಷಕಾಲ ಉಪವಾಸ ಮಾಡುವವರೂ, ಮತ್ತೆ ಕೆಲವರು ಮೂರು ರಾತ್ರಿ ಉಪವಾಸ ಮಾಡುವವರೂ, ಇನ್ನು ಕೆಲವರು ಸಾಂತಪನವ್ರತಮಾಡುವವರೂ, ಕೆಲವರು ಆಹಾರವಿಲ್ಲದವರೂ, ಮತ್ತೆ ಕೆಲವರು ಪುಷ್ಪಫಲಗಳನ್ನೂ, ಒಣಗಿದ ಎಲೆಗಳನ್ನು ತಿನ್ನುವವರೂ, ಕೆಲವರು ಗೋಮಯವನ್ನು ಭಕ್ಷಿಸುವವರೂ, ಕೆಲವರು ನೀರನ್ನು ಕುಡಿಯುವವರೂ, ಅಗ್ನಿಹೋತ್ರಿಗಳೂ, ವಿದ್ವಾಂಸರೂ, ಮೋಕ್ಷಮಾರ್ಗವನ್ನಾಲೋಚಿಸುವವರೂ, ಇತಿಹಾಸ, ಪುರಾಣ, ವೇದ, ಸ್ಮೃತಿಗಳಲ್ಲಿ ಕುಶಲರೂ ಆಗಿದ್ದರು. ಇವರೂ, ಮಾರ್ಕಂಡೇಯ ಮೊದಲಾದ ಇನ್ನೂ ಇತರ ಮಹರ್ಷಿಗಳೂ

ತ್ರೈರಾತ್ರಿಕಾಃ ಸಾಂತಪನಾನಿರಾಹಾರಾಸ್ತಥಾ ಪರೇ ।
ಕೇಚಿತ್ಪುಷ್ಪಫಲಾಹಾರಾಃ ಶೀರ್ಣಪರ್ಣಾಶಿನಸ್ತಥಾ ॥ ೨೧ ॥
ಕೇಚಿದ್ಗೋಮಯಭಕ್ಷಾಶ್ಚ ಜಲಾಹಾರಾಸ್ತಥಾ ಪರೇ ।
ಸಾಗ್ನಿಹೋತ್ರಾಃ ಸುವಿದ್ವಾಂಸೋ ಮೋಕ್ಷಮಾರ್ಗಾರ್ಥಚಿಂತಕಾಃ ॥ ೨೨ ॥
ಇತಿಹಾಸಪುರಾಣಾದಿಶ್ರುತಿಸ್ಮೃತಿವಿಶಾರದಾಃ ।
ಏತೇ ಚಾನ್ಯೇ ಚ ಬಹವೋ ಮಾರ್ಕಂಡೇಯಪುರೋಗಮಾಃ ॥ ೨೩ ॥
ಪ್ರಭಾಸಂ ಕ್ಷೇತ್ರಮಾಸಾದ್ಯ ಸಂಸ್ಥಿತಾಃ ಕೃತಪರ್ವತೇ ।
ಏವಂ ಕೃತಸ್ಮರಸ್ತತ್ರ ಸರ್ವದೇವನಿಷೇವಿತಃ ।
ಮನ್ವಂತರೇಽಸ್ಮಿನ್ ಯೋ ದೇವಿ ನಿರ್ದಗ್ಧೋ ವಡವಾಗ್ನಿನಾ ॥ ೨೪ ॥
ತಂ ದೃಷ್ಟ್ವಾ ಪರ್ವತಂ ರಮ್ಯಂ ದೃಷ್ಟ್ವಾ ಚೈವ ಮಹೋದಧಿಂ ।
ಪ್ರದಕ್ಷಿಣಂ ತತಶ್ಚಕ್ರೇ ಸಪ್ತಕೃತ್ವೋ ನಿಶಾಕರಃ ।
ಗಿರೇಃ ಪ್ರದಕ್ಷಿಣಾಂ ಕೃತ್ವಾ ಗತೋ ಯತ್ರ ಮಹೇಶ್ವರಃ ॥ ೨೫ ॥
ಸಮೀಪೇತು ಸಮುದ್ರಸ್ಯ ಸ್ಪರ್ಶಲಿಂಗ ಸ್ವರೂಪವಾನ್ ।
ಪ್ರಸಾದಯಾಮಾಸ ವಿಭುಂ ಪ್ರಸನ್ನೇನಾಂತರಾತ್ಮನಾ ॥ ೨೬ ॥
ಮರಣಂ ವೇತಿ ಸಂಧಾಯ ಶರಣಂ ವಾ ಮಹೇಶ್ವರಂ ।
ವರಂ ಶಾಪಾಭಿಘಾತಾರ್ಥಂ ಮೃತ್ಯುಂ ವಾ ಶಂಕರಾನ್ಮಮ ॥ ೨೭ ॥
ಇತಿ ಸೋಮೋ ಮತಿಂ ಕೃತ್ವಾ ತಪಸಾಽರಾಧಯಂಬಿವಂ ।
ಯಾವದ್ವರ್ಷಸಹಸ್ರಂ ತು ಫಲಮೂಲಾಽಶನೋಽಭವತ್ ॥ ೨೮ ॥

ಪ್ರಭಾಸಕ್ಷೇತ್ರವನ್ನಾಶ್ರಯಿಸಿ ಕೃತಸ್ಮರ ಪರ್ವತದಲ್ಲಿ ನೆಲೆಸಿದ್ದರು. ಹೀಗೆ ಸಕಲ ದೇವತೆಗಳಿಂದ ಸೇವಿಸಲ್ಪಟ್ಟ ಕೃತಸ್ಮರ ಪರ್ವತವು ಈ ಮನ್ವಂತರದಲ್ಲಿ ವಡವಾಗ್ನಿಯಿಂದ ಭಸ್ಮವಾಯಿತು.

೨೫-೨೬. ಚಂದ್ರನು ರಮ್ಯವಾದ ಆ ಪರ್ವತವನ್ನೂ, ಸಮುದ್ರವನ್ನೂ ನೋಡಿ ಏಳು ಸಾರಿ ಪ್ರದಕ್ಷಿಣೆಮಾಡಿ ಸಮೀಪದಲ್ಲಿ ಸ್ಪರ್ಶಲಿಂಗ ಸ್ವರೂಪನಾದ ಮಹೇಶ್ವರನೆಡೆಗೆ ಸಾಗಿ ಅವನನ್ನು ಪ್ರಸನ್ನವಾದ ಮನಸ್ಸಿನಿಂದ ಸಂತೋಷಗೊಳಿಸಿದನು.

೨೭-೨೮. ಅವನು ಶಾಪನಿವಾರಣೆಗಾಗಿ ಪ್ರಯತ್ನಿಸುವ ನನಗೆ ಶಂಕರನಿಂದ ಮರಣವಾಗಲಿ ಅಥವಾ ರಕ್ಷಣೆಯಾಗಲಿ ಎಂದಾಲೋಚಿಸಿ ಸಾವಿರ ವರ್ಷಗಳವರೆಗೆ ಹಣ್ಣು ಗೆಣಸುಗಳನ್ನು ಭಕ್ಷಿಸುತ್ತ ಮಹೇಶ್ವರನನ್ನಾರಾಧಿಸಿದನು.

ಪೂರ್ಣೇ ವರ್ಷಸಹಸ್ರೇ ತು ಚತುರ್ಥೇ ವರವರ್ಣಿನಿ ।
ತುತೋಷ ಭಗವಾನ್ರುದ್ರೋ ವಾಕ್ಯಂ ಚೇದಮುವಾಚ ಹ ॥ ೨೯ ॥
ಪರಿತುಷ್ಟೋಽಸ್ಮಿ ತೇ ಚಂದ್ರ ವರಂ ವರಯ ಸುವ್ರತ ।
ಕಿಂ ತೇ ಕಾಮಂ ಕರೋಮ್ಯದ್ಯ ಬ್ರೂಹಿ ಯತ್ಸ್ಯಾತ್ಸುದುರ್ಲಭಂ ॥ ೩೦ ॥
ಏವಂ ಪ್ರತ್ಯಕ್ಷಮಾಪನ್ನಂ ದೃಷ್ಟ್ವಾ ದೇವಂ ವೃಷಧ್ವಜಂ ।
ಪ್ರಣಮ್ಯ ತಂ ಯಥಾ ಭಕ್ತ್ಯಾ ಸ್ತುತಿಂ ಚಕ್ರೇ ನಿಶಾಕರಃ ॥ ೩೧ ॥

ಚಂದ್ರ ಉವಾಚ :—

ಓಂ ನಮೋ ದೇವದೇವಾಯ ಶಿವಾಯ ಪರಮಾತ್ಮನೇ ।
ಅಪ್ರಮೇಯ ಸ್ವರೂಪಾಯ ವ್ಯಕ್ತಾಽವ್ಯಕ್ತಸ್ವರೂಪಿಣೇ ॥ ೩೨ ॥
ತ್ವಂ ಪತಿರ್ಯೋಗಿನಾಮೀಶ ತ್ವಯಿ ಸರ್ವಂ ಪ್ರತಿಷ್ಠಿತಂ ।
ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಃ ಪ್ರಜಾಪತಿಃ ॥ ೩೩ ॥
ಚತುರ್ವಿಂಶತ್ಯಧಿಕಂ ಚ ಭುವನಾನಾಂ ಶತದ್ವಯಂ ।
ತಸ್ಯೋಪರಿ ಪರಂ ಜ್ಯೋತಿರ್ಜಾಗರ್ತಿ ತವ ಕೇವಲಂ ॥ ೩೪ ॥
ಕಲ್ಪಾಂತ ಆದಿವಾರಾಹ ಮುಕ್ತಬ್ರಹ್ಮಾಂಡ ಸಂಸ್ಥಿತೌ ।
ಆಧಾರಸ್ತಂಭಭೂತಾಯ ತೇಜೋಲಿಂಗಾಯ ತೇ ನಮಃ ॥ ೩೫ ॥

---

೨೯. ಪ್ರಿಯಳೆ! ಸಾವಿರ ವರ್ಷಗಳು ಕಳೆದ ತರುವಾಯ ನಾಲ್ಕನೆಯ ವರ್ಷದಲ್ಲಿ ಪೂಜ್ಯಮಹೇಶ್ವರನು ಸಂತುಷ್ಟನಾಗಿ ಇಂತೆಂದನು.

೩೦. "ಚಂದ್ರ! ನಿನ್ನ ವಿಷಯದಲ್ಲಿ ಮೆಚ್ಚಿರುವೆನು. ವರವನ್ನು ಕೇಳಿಕೊ. ನಿನಗೆ ದುರ್ಲಭ ವಾದ ಅಭೀಷ್ಟವಾವುದು ? ಹೇಳು ಅದನ್ನೀಯುವೆನು."

೩೧. ನಿಶಾಕರನು ಪ್ರತ್ಯಕ್ಷನಾದ ಮಹೇಶ್ವರನನ್ನು ಕಂಡು ನಮಸ್ಕರಿಸಿ ಭಕ್ತಿಯಿಂದ ಹೀಗೆ ಸ್ತುತಿಸಿದನು.

೩೨. ಚಂದ್ರನು ಹೇಳುತ್ತಾನೆ:—ದೇವತೆಗಳಿಗೆ ದೇವತೆಯೂ, ಪರಮಾತ್ಮನೂ, ತಿಳಿಯಲಾಗದ ರೂಪವುಳ್ಳವನೂ, ವ್ಯಕ್ತಾವ್ಯಕ್ತಸ್ವರೂಪನೂ ಆದ ಶಂಕರ! ನಿನಗೆ ನಮಸ್ಕಾರವು.

೩೩. ಶಂಕರ! ನೀನು ಯೋಗಿಗಳಿಗೆ ಒಡೆಯನು. ಎಲ್ಲವೂ ನಿನ್ನಲ್ಲಿರುವುದು. ಯಜ್ಞ, ವಷಟ್ಕಾರ, ಓಂಕಾರ, ಪ್ರಜಾಪತಿ ಎಲ್ಲವೂ ನೀನೇ ಆಗಿರುವೆ.

೩೪. ಇನ್ನೂರ ಇಪ್ಪತ್ತನಾಲ್ಕು ಲೋಕಗಳ ಮೇಲೆ ನಿನ್ನ ಉತ್ತಮವಾದ ತೇಜಸ್ಸು ಬೆಳಗುತ್ತಿರುವುದು.

೩೫. ಕಲ್ಪಾಂತ್ಯದಲ್ಲಿ ಆದಿವಾರಾಹನು ತ್ಯಜಿಸಿದ ಬ್ರಹ್ಮಾಂಡಕ್ಕೆ ಸ್ತಂಬರೂಪನೂ, ತೇಜೋಲಿಂಗ ಸ್ವರೂಪನೂ ಆದ ನಿನಗೆ ನಮಸ್ಕಾರವು.

ನಮೋಽನಾಮಯನಾಮ್ನೇ ತೇ ನಮಸ್ತೇ ಕೃತ್ತಿವಾಸಸೇ ।
ನಮೋ ಭೈರವ ನಾಥಾಯ ನಮಃ ಸೋಮೇಶ್ವರಾಯ ತೇ ॥ ೩೬ ॥
ಇತಿ ಸಂಜ್ಞಾಭಿರೇತಾಭಿಃ ಸ್ತುತ್ಯಾಭಿರಮೃತೇಶ್ವರಃ ।
ಭೂತೈರ್ಭವ್ಯೈರ್ಭವಿಷ್ಯೈಶ್ಚ ಸ್ತೂಯಸೇ ಸುರಸತ್ತಮೈಃ ॥ ೩೭ ॥
ಆದ್ಯೋ ವಿರಂಚಿನಾಮಾಽಭೂದ್ಬ್ರಹ್ಮಾ ಲೋಕಪಿತಾಮಹಃ ।
ಮೃತ್ಯುಂಜಯೇತಿ ತೇ ನಾಮ ತದಾಽಭೂತ್ಪಾರ್ವತೀಪತೇ ॥ ೩೮ ॥
ದ್ವಿತೀಯೋಽಭೂದ್ಯದಾ ಬ್ರಹ್ಮಾ ಪದ್ಮಭೂರಿತಿ ವಿಶ್ರುತಃ ।
ತದಾ ಕಾಲಾಗ್ನಿರುದ್ರೇತಿ ತವ ನಾಮ ಪ್ರಕೀರ್ತಿತಂ ॥ ೩೯ ॥
ತೃತೀಯೋಽಭೂದ್ಯದಾ ಬ್ರಹ್ಮಾ ಸ್ವಯಂಭೂರಿತಿ ವಿಶ್ರುತಃ ।
ಅಮೃತೇಶೇತಿ ತೇ ನಾಮ ಕೀರ್ತಿತಂ ಕೀರ್ತಿವರ್ಧನಂ ॥ ೪೦ ॥
ಚತುರ್ಥೋಽಭೂದ್ಯದಾ ಬ್ರಹ್ಮಾ ಪರಮೇಷ್ಠೀತಿ ವಿಶ್ರುತಃ ।
ಅನಾಮಯೇತಿ ದೇವೇಶ ತವ ನಾಮ ಸ್ಮೃತಂ ತದಾ ॥ ೪೧ ॥
ಪಂಚಮೋಽಭೂದ್ಯದಾ ಬ್ರಹ್ಮಾ ಸುರಜ್ಯೇಷ್ಠ ಇತಿ ಶ್ರುತಃ ।
ಕೃತ್ತಿವಾಸೇತಿ ತೇ ನಾಮ ಬಭೂವ ತ್ರಿಪುರಾಂತಕ ॥ ೪೨ ॥

---

೩೬. ಅನಾಮಯವೆಂಬ ನಾಮಧೇಯವುಳ್ಳವನೂ, ಗಜ ಚರ್ಮವನ್ನು ಹೊದ್ದವನೂ, ಭೈರವನಿಗೆ ಒಡೆಯನೂ ಆದ ಸೋಮೇಶ್ವರ! ನಿನಗೆ ನಮಸ್ಕಾರವು.

೩೭. ಅಮೃತೇಶ್ವರ! ನೀನು ಭೂತ, ಭವಿಷ್ಯದ್ವರ್ತಮಾನಗಳ ದೇವೋತ್ತಮರಿಂದ ಪೂರ್ವೋಕ್ತವಾದ ಈ ನಾಮಧೇಯಗಳಿಂದಲೂ, ಸ್ತೋತ್ರಗಳಿಂದಲೂ ಹೊಗಳಲ್ಪಡುತ್ತಿರುವೆ.

೩೮. ಪಾರ್ವತೀರಮಣ! ಮೊದಲು ಬ್ರಹ್ಮನು ವಿರಂಚಿ ನಾಮಕನಾಗಿರಲು ನೀನು ಮೃತ್ಯುಂಜಯನೆಂದು ವಿಖ್ಯಾತನಾದೆ.

೩೯. ಎರಡನೆಯ ಪದ್ಮಭೂ ಎಂಬ ಬ್ರಹ್ಮನ ಕಾಲದಲ್ಲಿ ನೀನು ಕಾಲಾಗ್ನಿರುದ್ರನಾದೆ.

೪೦. ಮೂರನೆಯ ಸ್ವಯಂಭೂ ಎಂಬ ಬ್ರಹ್ಮನ ಕಾಲದಲ್ಲಿ ನೀನು ಕೀರ್ತಿಯನ್ನು ಹೆಚ್ಚಿಸುವ ಅಮೃತೇಶನೆಂಬ ನಾಮಧೇಯವನ್ನು ಧರಿಸಿದೆ.

೪೧. ನಾಲ್ಕನೆಯ ಪರಮೇಷ್ಠಿ ಬ್ರಹ್ಮನ ಕಾಲದಲ್ಲಿ ನೀನು ಅನಾಮಯ ನಾಮಕನಾದೆ.

೪೨. ಬ್ರಹ್ಮನು ನಾಲ್ಕನೆಯ ಸುರಜ್ಯೇಷ್ಠನೆಂದು ಪ್ರಸಿದ್ಧನಾಗಲು ನಿನಗೆ ಕೃತ್ತಿವಾಸನೆಂದು ಹೆಸರಾಯಿತು.

ಷಷ್ಠಶ್ಚಾಽಭೂದ್ಯದಾ ಬ್ರಹ್ಮಾ ಹೇಮಗರ್ಭ ಇತಿ ಸ್ಮೃತಂ ।
ತದಾ ಭೈರವನಾಥೇತಿ ತವ ನಾಮ ಪ್ರಕೀರ್ತಿತಂ ॥ ೪೩ ॥
ಅಧುನಾ ವರ್ತತೇ ಯೋಽಸೌ ಶತಾನಂದ ಇತಿ ಶ್ರುತಃ ।
ಆದಿಸೋಮೇನ ಯಶ್ಚಾಽಸೌ ವಾಮನೇತ್ರೋದ್ಭವೇನ ತೇ ॥ ೪೪ ॥
ಪ್ರತಿಷ್ಠಾರ್ಥಂ ಚ ಲಿಂಗಸ್ಯ ಆನೀತಶ್ಚಾಷ್ಟವಾರ್ಷಿಕಃ ।
ಬಾಲರೂಪೀ ತದಾ ತೇನ ಸೋಮನಾಥೇತಿ ಕೀರ್ತಿತಂ ॥ ೪೫ ॥
ತದಾ ಪ್ರಭೃತಿ ಸೋಮಾನಾಂ ಲಕ್ಷಾಣಾಂ ದ್ವಿತಯಂ ಗತಂ ।
ಸಹಸ್ರದ್ವಿತಯಂ ಚೈವ ಶತಂ ಚೈವ ಷಡುತ್ತರಂ ॥ ೪೬ ॥
ಸಪ್ತಮೋಽಹಂ ಮಹಾದೇವ ಆತ್ರೇಯ ಇತಿ ವಿಶ್ರುತಃ ।
ಪ್ರಾಚೇತಸೇನ ದಕ್ಷೇಣ ಶಪ್ತಸ್ತ್ವಾಂ ಶರಣಂ ಗತಃ ।
ರಕ್ಷ ಮಾಂ ದೇವದೇವೇಶ ಕ್ಷಯಿಣಂ ಪಾಪರೋಗಿಣಂ ॥ ೪೭ ॥
ಇತಿ ಸಂಸ್ತುವತಸ್ತಸ್ಯ ಚಂದ್ರಸ್ಯ ಕರುಣಾಕರಃ ।
ತುತೋಷ ಭಗವಾನ್ ರುದ್ರೋ ವಾಕ್ಯಂ ಚೇದಮುವಾಚ ಹ ॥ ೪೮ ॥
ಪರಿತುಷ್ಟೋಽಸ್ಮಿ ತೇ ಚಂದ್ರ ವರಂ ವರಯ ಸುವ್ರತ ।
ಕಿಂ ತೇ ಕಾಮಂ ಕರೋಮ್ಯದ್ಯ ಬ್ರೂಹಿ ಯತ್ಸ್ಯಾತ್ಸುದುರ್ಲಭಂ ॥ ೪೯ ॥

---

೪೩. ಬ್ರಹ್ಮನು ಆರನೆಯ ಹೇಮಗರ್ಭನೆಂದು ವಿಖ್ಯಾತನಾಗಲು ನೀನು ಭೈರವನಾಥನೆಂದು ಪ್ರಸಿದ್ಧಿಗೊಂಡೆ.

೪೪–೪೫. ಈಗ ಬ್ರಹ್ಮನು ಶತಾನಂದನೆಂದು ಪ್ರಖ್ಯಾತನಾಗಿರುವನು. ಇವನ ಕಾಲದಲ್ಲಿ ನಿನ್ನ ಎಡಗಣ್ಣಿನಿಂದ ಹುಟ್ಟಿದ ಮೊದಲಿನ ಚಂದ್ರನು ಪ್ರತಿಷ್ಠೆಮಾಡುವುದಕ್ಕಾಗಿ ಎಂಟು ವರ್ಷದ ಬಾಲಕನ ರೂಪವಾದ ನಿನ್ನ ಲಿಂಗವನ್ನು ಇಲ್ಲಿಗೆ ತಂದನು. ಆಗ ನೀನು ಸೋಮನಾಥನೆಂದು ಪ್ರಸಿದ್ಧನಾದೆ.

೪೬. ಅದು ಮೊದಲ್ಗೊಂಡು ಎರಡು ಸಾವಿರದ ನೂರಾರು ಸಾವಿರದ ನೂರಾರು ಚಂದ್ರರು ಕಳೆದು ಹೋದರು.

೪೭. ಮಹಾದೇವ! ಆತ್ರೇಯನೆಂಬ ಏಳನೆಯ ಚಂದ್ರನಾದ ನನ್ನನ್ನು ದಕ್ಷನು ಶಪಿಸಿರುವನು. ಅದರಿಂದ ನಾನು ನಿನ್ನನ್ನು ಮರೆಹೊಕ್ಕಿರುವೆನು. ದಿವಿಜರೊಡೆಯನೆ! ಕ್ಷಯರೋಗಿಯಾದ ನನ್ನನ್ನು ಕಾಪಾಡು.

೪೮. ಹೀಗೆ ಸ್ತುತಿಸಿದ ಚಂದ್ರನಲ್ಲಿ ರುದ್ರನು ದಯೆಗೊಂಡು ಹೀಗೆಂದನು.

೪೯. "ಚಂದ್ರ! ನಾನು ನಿನ್ನಲ್ಲಿ ಸಂತುಷ್ಟನಾಗಿರುವೆನು. ವರವನ್ನು ಕೇಳಿಕೊ. ನಿನಗೆ ದುರ್ಲಭವಾದ ಅಭೀಷ್ಟವಾವುದು. ಅದನ್ನು ಹೇಳು. ಕೊಡುವೆನು.

ಮಮ ನಾಮಾನಿ ಗುಹ್ಯಾನಿ ಮಮ ಪ್ರಿಯತರಾಣಿ ಚ ।
ಪಠಿಷ್ಯಂತಿ ನರಾ ಯೇ ತು ದಾಸ್ಯೇ ತೇಷಾಂ ಮನೋಗತಂ ॥ ೫೦ ॥
ಅತೀತಾ ಯೇ ಚಂದ್ರಮಸೋ ಭವಿಷ್ಯಂತಿ ಚ ಯೇಽಧುನಾ ।
ತೇಷಾಂ ಪೂಜ್ಯಮಿದಂ ಲಿಂಗಂ ಯಾವದನ್ಯೋಽಷ್ಟವಾರ್ಷಿಕಃ ॥ ೫೧ ॥
ಅತಃ ಪರಂ ಚತುರ್ವಕ್ತ್ರೋ ಬ್ರಹ್ಮಾಂಶೋ ಭವಿತಾ ಯದಾ ।
ಪ್ರಾಣನಾಥೇತಿ ದೇವಸ್ಯ ತದಾ ನಾಮ ಭವಿಷ್ಯತಿ ॥ ೫೨ ॥
ಪ್ರಾಣಾಸ್ತು ವಾಯವಃ ಪ್ರೋಕ್ತಾಸ್ತದಾರಾಧನನಾಮ ತತ್ ।
ಪ್ರಾಣನಾಥೇತಿ ಸಂಪ್ರೋಕ್ತಂ ಮೇಽಧುನಾ ತದ್ಭವಿಷ್ಯತಿ ॥ ೫೩ ॥
ತಸ್ಮಾದಗ್ನೀಶನಾಮೇತಿ ಕಾಲರುದ್ರೇತ್ಯನಂತರಂ ।
ತಾರಕೇತಿ ತತೋ ನಾಮ ಭವಿಷ್ಯತ್ಯೇವ ಕೀರ್ತಿತಂ ॥ ೫೪ ॥
ಮೃತ್ಯುಂಜಯೇತಿ ದೇವಸ್ಯ ಭವಿತಾ ತದನಂತರಂ ।
ತ್ರ್ಯಂಬಕೇಶಸ್ತ್ವಿತೀಶೇತಿ ಭುವನೇಶೇತ್ಯನಂತರಂ ॥ ೫೫ ॥
ಭೂತನಾಥೇತಿ ಘೋರೇತಿ ಬ್ರಹ್ಮೇಶೇತ್ಯಥ ನಾಮಕಂ ।
ಭವಿಷ್ಯಂ ಪೃಥಿವೀಶೇತಿ ಆದಿನಾಥೇತ್ಯನಂತರಂ ॥ ೫೬ ॥
ಕಲ್ಪೇಶ್ವರೇತಿ ದೇವಸ್ಯ ಚಂದ್ರನಾಥೇತ್ಯನಂತರಂ ।
ನಾಮ ದೇವಸ್ಯ ಯದ್ಭಾವಿ ಸಾಂಪ್ರತಂ ತೇ ಪ್ರಕಾಶಿತಂ ॥ ೫೭ ॥

---

೫೦. ನನಗೆ ಪ್ರಿಯವಾದ ಈ ರಹಸ್ಯನಾಮಗಳನ್ನು ಪಠಿಸುವ ಮಾನವರಿಗೆ ನಾನು ಅಭೀಷ್ಟವನ್ನು ಕೊಡುವೆನು.

೫೧–೫೨. ಹಿಂದೆ ಇದ್ದ, ಈಗ ಇರುವ, ಮುಂದೆ ಹುಟ್ಟುವ ಚಂದ್ರರಿಗೆ ಈ ಲಿಂಗವು ಪೂಜ್ಯವಾಗುವುದು. ಮುಂದೆ ಎಂಟು ವರ್ಷದ ಚತುರ್ಮುಖ ಬ್ರಹ್ಮನ ಕಾಲದಲ್ಲಿ ಈ ಲಿಂಗಕ್ಕೆ ಪ್ರಾಣನಾಥ ಎಂದು ಹೆಸರಾಗುವುದು.

೫೩. ವಾಯುಗಳು ಪ್ರಾಣರೆನ್ನಿಸಿಕೊಳ್ಳುವರು. ಅವರು ಆರಾಧಿಸುವ ಲಿಂಗದ ನಾಮವು ಪ್ರಾಣನಾಥನೆಂದಾಗುವುದು

೫೪–೫೭. ಬಳಿಕ ಈ ಲಿಂಗಕ್ಕೆ ಕ್ರಮವಾಗಿ ಅಗ್ನೀಶ, ಕಾಲರುದ್ರ, ತಾರಕ, ಮೃತ್ಯುಂಜಯ, ತ್ರ್ಯಂಬಕೇಶ, ಇತೀಶ, ಭುವನೇಶ, ಭೂತನಾಥ, ಘೋರ, ಬ್ರಹ್ಮೇಶ, ಪೃಥ್ವೀಶ, ಆದಿನಾಥ, ಕಲ್ಪೇಶ್ವರ, ಚಂದ್ರನಾಥ, ಎಂಬ ನಾಮಗಳಾಗುವುವು. ಹೀಗೆ ಈ ಶಿವ ಲಿಂಗಕ್ಕೆ ಮುಂದೆ ಉಂಟಾಗುವ ಹೆಸರುಗಳನ್ನು ಈಗ ನಿನಗೆ ಹೇಳಿರುವೆನು

ಇತ್ಯೇವಮಾದಿ ನಾಮಾನಿ ಹ್ಯಸಂಖ್ಯಾತಾನಿ ಷೋಡಶ ।
ಗತಾನಿ ಸಂಭವಿಷ್ಯಂತಿ ಕಾಲಸ್ಯಾನಂತಭಾವತಃ ॥ ೫೮ ॥
ಏಕೈಕಂ ವರ್ತತೇ ನಾಮ ಬ್ರಹ್ಮಣಃ ಪ್ರಲಯಾವಧಿ ।
ತತೋಽನ್ಯಜ್ಜಾಯತೇ ನಾಮ ಯಥಾ ನಾಮಾಽನುರೂಪತಃ ॥ ೫೯ ॥
ಅಥಂ ಕಿಂ ಬಹುನೋಕ್ತೇನ ರಹಸ್ಯಂ ತೇ ಪ್ರಕಾಶಿತಂ ।
ವತ್ಸ ಯತ್ಕಾರಣೇನೇಹ ತಪಸ್ತಪ್ತಂ ತ್ವಯಾಽಖಿಲಂ ।
ತನ್ಮೇ ನಿಃಶೇಷತೋ ಬ್ರೂಹಿ ದಾಸ್ಯೇ ತುಷ್ಟೋಽಸ್ಮಿ ತೇ ವರಂ ॥ ೬೦ ॥

ಚಂದ್ರ ಉವಾಚ :—

ಅಹಂ ಶಪ್ತಸ್ತು ದಕ್ಷೇಣ ಕಸ್ಮಿಂಶ್ಚಿತ್ಕಾರಣಾಂತರೇ ।
ಯಕ್ಷ್ಮಣಾ ಚ ಕ್ಷಯಂ ನೀತಸ್ತಸ್ಮಾತ್ತ್ವಂ ತ್ರಾತುಮರ್ಹಸಿ ॥ ೬೧ ॥

ಶಂಭುರುವಾಚ :—

ಅಧುನಾ ಭೋಃ ಸಮಂ ಪಶ್ಯ ಸರ್ವಾಸ್ತಾ ದಕ್ಷಕನ್ಯಕಾಃ ।
ಕ್ಷಯಸ್ತೇ ಭವಿತಾ ಪಕ್ಷಂ ಪಕ್ಷಂ ವೃದ್ಧಿರ್ಭವಿಷ್ಯತಿ ॥ ೬೨ ॥

---

೫೮. ಕಾಲವು ಅನಂತವಾಗಿರುವುದರಿಂದ ಈ ಲಿಂಗಕ್ಕೆ ಇದೇ ಮೊದಲಾದ ಅಸಂಖ್ಯಾತನಾಮಗಳು ಹಿಂದೆ ಆಗಿರುವುವು. ಮುಂದೆಯೂ ಉಂಟಾಗುವುವು.

೫೯. ಒಂದೊಂದು ಹೆಸರು ಬ್ರಹ್ಮನ ಪ್ರಲಯಕಾಲದವರೆಗೆ ಇರುವುದು. ಬಳಿಕ ಬ್ರಹ್ಮನ ನಾಮಕ್ಕನುಗುಣವಾದ ಮತ್ತೊಂದು ಹೆಸರು ಉಂಟಾಗುವುದು.

೬೦ ಮಗು! ಹೆಚ್ಚೇನು. ನಿನಗೆ ರಹಸ್ಯವನ್ನು ಹೇಳಿರುವೆನು. ನೀನು ಏತಕ್ಕಾಗಿ ತಪಸ್ಸನ್ನಾಚರಿಸಿರುವೆ. ಅದನ್ನು ಸಂಪೂರ್ಣವಾಗಿ ನನಗೆ ಹೇಳು. ಮೆಚ್ಚಿರುವೆನು. ನಿನಗೆ ವರವನ್ನು ಕೊಡುವೆನು.

೬೧. ಚಂದ್ರನು ಹೇಳುತ್ತಾನೆ:—ನನ್ನನ್ನು ಯಾವುದೊ ಒಂದು ಕಾರಣಾಂತರದಿಂದ ದಕ್ಷನು ಶಪಿಸಿರುವನು. ಅದರಿಂದ ನಾನು ಕ್ಷಯ ರೋಗದಿಂದ ಪೀಡಿತನಾಗಿರುವೆನು. ಆದುದರಿಂದ ನೀನು ನನ್ನನ್ನು ಕಾಪಾಡು.

೬೨. ಶಿವನು ಹೇಳುತ್ತಾನೆ:—ಚಂದ್ರ! ಈಗ ನೀನು ದಕ್ಷನ ಆ ಎಲ್ಲ ಪುತ್ರಿಯರನ್ನು ಸಮವಾಗಿ ನೋಡು. ನಿನಗೆ ತಿಂಗಳಲ್ಲಿ ಒಂದು ಪಕ್ಷಕಾಲ ಕ್ಷಯರೋಗವಿರುವುದು. ಮತ್ತೊಂದು ಪಕ್ಷದಲ್ಲಿ ವೃದ್ಧಿಯನ್ನು ಹೊಂದುವೆ.

ಪೂರ್ವೋರ್ಜಿತಾಂ ಪ್ರಭಾಂ ಸೋಮ ಪ್ರಾಪ್ಸ್ಯಸೇ ಮತ್ಪ್ರಸಾದತಃ ।
ಪ್ರಾಚೇತಸಸ್ಯ ದಕ್ಷಸ್ಯ ತಪಸಾ ಹತಪಾಪ್ಮನಃ ॥ ೬೩ ॥
ತಸ್ಯಾನ್ಯಥಾ ವಚಃ ಕರ್ತುಂ ಶಕ್ಯಂ ನಾನ್ಯೈಃ ಸುರೈರಪಿ ।
ಬ್ರಾಹ್ಮಣಾಃ ಕುಪಿತಾ ಹನ್ಯುರ್ಭಸ್ಮೀಕುರ್ಯುಃ ಸ್ವತೇಜಸಾ ॥ ೬೪ ॥
ದೇವಾನ್ಕುರ್ಯುರದೇವಾಂಶ್ಚ ನಾಶಯೇಯುರಿದಂ ಜಗತ್ ।
ಬ್ರಾಹ್ಮಣಾಶ್ಚೈವ ದೇವಾಶ್ಚ ತೇಜ ಏಕಂ ದ್ವಿಧಾಕೃತಂ ॥ ೬೫ ॥
ಪ್ರತ್ಯಕ್ಷಂ ಬ್ರಾಹ್ಮಣಾದೇವಾಃ ಪರೋಕ್ಷಂ ದಿವಿ ದೇವತಾಃ ।
ನ ವಿನಾ ಬ್ರಾಹ್ಮಣಾ ದೇವೈರ್ನ ದೇವಾ ಬ್ರಾಹ್ಮಣೈರ್ವಿನಾ ॥ ೬೬ ॥

ಏಕತ್ರ ಮಂತ್ರಾಸ್ತಿಷ್ಠಂತಿ ತೇಜ ಏಕತ್ರ ತಿಷ್ಠತಿ ।
ಬ್ರಾಹ್ಮಣಾ ದೇವತಾ ಲೋಕೇ ಬ್ರಾಹ್ಮಣಾ ದಿವಿ ದೇವತಾಃ ।
ತ್ರೈಲೋಕ್ಯೇ ಬ್ರಾಹ್ಮಣಾ ಶ್ರೇಷ್ಠಾ ಬ್ರಾಹ್ಮಣಾ ಏವ ಕಾರಣಂ ॥ ೬೭ ॥
ಪಿತುರ್ನಿಯುಕ್ತಾಃ ಪಿತರೋ ಭವಂತಿ
ಕ್ರಿಯಾಸು ದೈವೀಷು ಭವಂತಿ ದೇವಾಃ ।
ದ್ವಿಜೋತ್ತಮಾ ಹಸ್ತನಿಷಕ್ತತೋಯಾ
ಸ್ತೇನೈವ ದೇಹೇನ ಭವಂತಿ ದೇವಾಃ ॥ ೬೮ ॥

೬೩–೬೫. ನನ್ನ ಅನುಗ್ರಹದಿಂದ ನೀನು ಹಿಂದಿನ ಪ್ರಭೆಯನ್ನು ಪಡೆಯುವೆ. ತಪಸ್ವಿಯಾದ ಆ ದಕ್ಷನ ಮಾತನ್ನು ಅನ್ಯಥಾ ಮಾಡಲು ಬೇರೆ ದೇವತೆಗಳಿಗೆ ಶಕ್ತಿಯಿಲ್ಲ. ಕೋಪಗೊಂಡ ಬ್ರಾಹ್ಮಣರು ತಮ್ಮ ತೇಜಸ್ಸಿನಿಂದ ಸುಟ್ಟು ಬೂದಿಮಾಡುವರು. ದೇವತೆಗಳನ್ನು ದೇವತೆಗಳಲ್ಲದವರನ್ನಾಗಿಮಾಡಿ ಯಾರುತಾನೆ ಈ ಪ್ರಪಂಚವನ್ನು ನಾಶ ಗೊಳಿಸಿಯಾರು ? ಒಂದೇ ತೇಜಸ್ಸನ್ನು ಎರಡು ಭಾಗಮಾಡಿ ಬ್ರಾಹ್ಮಣರೂ, ದೇವತೆಗಳೂ ಸೃಷ್ಟಿಸಲ್ಪಟ್ಟಿರುವರು.

೬೬–೬೭. ಬ್ರಾಹ್ಮಣರು ಪ್ರತ್ಯಕ್ಷವಾಗಿ ಕಾಣುವರು. ದೇವತೆಗಳು ಸ್ವರ್ಗದಲ್ಲಿದ್ದು ಪರೋಕ್ಷರಾಗಿರುವರು. ಮೂರು ಲೋಕಗಳಲ್ಲಿ ಬ್ರಾಹ್ಮಣರೇ ಶ್ರೇಷ್ಠರು. ಬ್ರಾಹ್ಮಣರೇ ಕಾರಣರು.

೬೮. ಈ ಬ್ರಾಹ್ಮಣರು ಪಿತೃಕ್ರಿಯೆಗಳಲ್ಲಿ ಪಿತೃಗಳೂ, ದೇವಕ್ರಿಯೆಗಳಲ್ಲಿ ದೇವತೆಗಳೂ ಆಗುವರು. ಕೈಯಲ್ಲಿ ನೀರನ್ನು ಹಿಡಿದುಕೊಂಡಿರುವ ಬ್ರಾಹ್ಮಣರು ಅದೇ ದೇಹದಿಂದ ದೇವತೆಗಳಾಗುವರು.

ಷಟ್ಕರ್ಮತತ್ವಾಭಿರತೇಷು ನಿತ್ಯಂ
ವಿಪ್ರೇಷು ವೇದಾರ್ಥಕುತೂಹಲೇಷು ।
ನ ತೇಷು ಭಕ್ತ್ಯಾ ಪ್ರವಿಶಂತಿ ಘೋರಂ
ಮಹಾಭಯಂ ಪ್ರೇತಭವಂ ಕದಾಚಿತ್ ॥ ೧೯ ॥

ಯದ್ಬ್ರಾಹ್ಮಣಾಃ ಸ್ತುತ್ಯತಮಾ ವದಂತಿ
ತದ್ದೇವತಾಃ ಕರ್ಮಭಿರಾಚರಂತಿ ।
ತುಷ್ಟೇಷು ತುಷ್ಟಾಃ ಸತತಂ ಭವಂತಿ
ಪ್ರತ್ಯಕ್ಷದೇವೇಷು ಪರೋಕ್ಷದೇವಾಃ ॥ ೨೦ ॥

ಯಥಾ ರುದ್ರಾ ಯಥಾ ದೇವಾ ಮರುತೋ ವಸವೋಽಶ್ವಿನೌ ।
ಬ್ರಹ್ಮಾ ಚ ಸೋಮಸೂರ್ಯೌ ಚ ತಥಾ ಲೋಕೇ ದ್ವಿಜೋತ್ತಮಾಃ ॥
ದೇವಾಧೀನಾಃ ಪ್ರಜಾಃ ಸರ್ವಾ ಯಜ್ಞಾಧೀನಾಶ್ಚ ದೇವತಾಃ ।
ತೇ ಯಜ್ಞಾ ಬ್ರಾಹ್ಮಣಾಧೀನಾಸ್ತದ್ವದ್ದೇವಾ ದ್ವಿಜೋತ್ತಮಾಃ ॥ ೨೨ ॥
ಬ್ರಾಹ್ಮಣಾನರ್ಚಯೇನ್ನಿತ್ಯಂ ಬ್ರಾಹ್ಮಣಾಂಸ್ತರ್ಪಯೇತ್ಸದಾ ।
ಬ್ರಾಹ್ಮಣಾಸ್ತಾರಕಾ ಲೋಕೇ ಬ್ರಾಹ್ಮಣಾತ್ಸ್ವರ್ಗಮಶ್ನುತೇ ॥ ೨೩ ॥

---

೧೯. ಷಟ್ಕರ್ಮಗಳಲ್ಲಿ ಪ್ರತಿದಿನವೂ ವ್ಯತ್ಯಾಸಗೊಳ್ಳದೆ ಆಸಕ್ತರೂ, ವೇದಾಧ್ಯಯನಸಂಪನ್ನರೂ ಆದ ಬ್ರಾಹ್ಮಣರಿಗೆ ಯಾವಾಗಲೂ ಪ್ರೇತಭಯವು ಉಂಟಾಗುವುದಿಲ್ಲ.

೨೦. ಶ್ಲಾಘ್ಯರಾದ ಬ್ರಾಹ್ಮಣರು ಹೇಳಿದುದನ್ನೇ ದೇವತೆಗಳುಮಾಡುವರು. ಪ್ರತ್ಯಕ್ಷ ದೇವತೆಗಳಾದ ಬ್ರಾಹ್ಮಣರನ್ನು ಸ್ತುತಿಸಲು ಪರೋಕ್ಷದೇವತೆಗಳು ಸಂತುಷ್ಟರಾಗುವರು.

೨೧. ರುದ್ರರು, ದೇವತೆಗಳು, ಮರುತ್ತುಗಳು, ವಸುಗಳು, ಅಶ್ವಿನೀದೇವತೆಗಳು ಬ್ರಹ್ಮ, ಚಂದ್ರಸೂರ್ಯರಂತೆಯೇ ಲೋಕದಲ್ಲಿ ದ್ವಿಜೋತ್ತಮರು ಪೂಜ್ಯರು.

೨೨. ಸಕಲ ಪ್ರಜೆಗಳು ದೇವತೆಗಳ ಅಧೀನದಲ್ಲಿರುವರು. ದೇವತೆಗಳು, ಯಜ್ಞಾಧೀನರು. ಆ ಯಜ್ಞಗಳು ಬ್ರಾಹ್ಮಣರ ಅಧೀನದಲ್ಲಿರುವುವು. ಆದುದರಿಂದ ಬ್ರಾಹ್ಮಣವರ್ಯರು ದೇವತೆಗಳಾಗಿರುವರು.

೨೩. ಯಾವಾಗಲೂ ಬ್ರಾಹ್ಮಣರನ್ನು ಪೂಜಿಸಬೇಕು. ಮತ್ತು ಸಂತೋಷಗೊಳಿಸಬೇಕು. ಲೋಕದಲ್ಲಿ ಬ್ರಾಹ್ಮಣರು ಜನರನ್ನು ಉದ್ಧರಿಸುವವರು. ಬ್ರಾಹ್ಮಣರಿಂದ ಜನರು ಸ್ವರ್ಗಸುಖವನ್ನನುಭವಿಸುವರು.

ಅಭೇದ್ಯಮುಚ್ಛೇದ್ಯಮನಾದಿಮಕ್ಷಯಂ
ವಿಧಿಂ ಪುರಾಣಂ ಪರಿಪಾಲಯಂತಿ ।
ಮಹಾಮತಿಸ್ತಾನಭಿಪೂಜ್ಯ ವೈ ದ್ವಿಜಾನ್
ಭವೇದಜೇಯೋ ದಿವಿ ದೇವರಾಡಿವ ॥ ೨೪ ॥

ಶಕ್ಯಂ ಹಿ ಕವಚಂ ಭೇತ್ತುಂ ನಾರಾಚೇನ ಶರೇಣ ವಾ ।
ಅಪಿ ವಜ್ರಸಹಸ್ರೇಣ ಬ್ರಾಹ್ಮಣಾಶೀಃ ಸುದುರ್ಭಿದಾ ॥ ೨೫ ॥
ಹುತೇನ ಶಾಮ್ಯತೇ ಪಾಪಂ ಹುತಮನ್ನೇನ ಶಾಮ್ಯತಿ ।
ಅನ್ನಂ ಹಿರಣ್ಯದಾನೇನ ಹಿರಣ್ಯಂ ಬ್ರಾಹ್ಮಣಾಶಿಷಾ ॥ ೨೬ ॥
ಯ ಇಚ್ಛೇನ್ನರಕಂ ಗಂತುಂ ಸಪುತ್ರಪಶುಬಾಂಧವಃ ।
ದೇವೇಷ್ವಧಿಕೃತಂ ಕುರ್ಯಾದ್ಬ್ರಾಹ್ಮಣೇಷು ಚ ಗೋಷು ಚ ॥ ೨೭ ॥
ಬ್ರಾಹ್ಮಣಾನ್ ದ್ವೇಷ್ಟಿ ಯೋ ಮೋಹಾದ್ದೇವಾನ್ ಗಾಶ್ಚ ಮಖಾನ್ ಯದಿ।
ನೈವ ತಸ್ಯ ಪರೋ ಲೋಕೋ ನಾಽಯಂ ಲೋಕೋ ದುರಾತ್ಮನಃ ॥ ೨೮ ॥

---

೨೪. ಈ ಬ್ರಾಹ್ಮಣರು ಭೇದಿಸಲೂ ನಾಶಗೊಳಿಸಲೂ ಅಶಕ್ಯವೂ, ಅನಾದಿಯೂ, ನಾಶರಹಿತವೂ ಆದ ವಿಧಿಗಳನ್ನೂ, ಪುರಾಣಗಳನ್ನು ಕಾಪಾಡುವುದರಿಂದ ಪ್ರಾಜ್ಞನು ಆ ಬ್ರಾಹ್ಮಣರನ್ನು ಪೂಜಿಸಿ ದೇವೇಂದ್ರನಂತೆ ಅಜೇಯನಾಗಬೇಕು.

೨೫. ನಿಡಿಗೋಲಿನಿಂದಾಗಲಿ, ಬಾಣದಿಂದಾಗಲಿ, ಕವಚವನ್ನು ಸೀಳಲು ಸಾಧ್ಯವು. ಬ್ರಾಹ್ಮಣರ ಆಶೀರ್ವಾದವನ್ನು ಮಾತ್ರ ಸಹಸ್ರ ವಜ್ರಾಯುಧಗಳಿಂದಲೂ ಭೇದಿಸಲು ಸಾಧ್ಯವಲ್ಲ.

೨೬. ಪಾಪವು ಹೋಮದಿಂದಲೂ, ಹೋಮವು ಅನ್ನದಿಂದಲೂ. ಅನ್ನವು ಸುವರ್ಣದಾನದಿಂದಲೂ, ಸುವರ್ಣವು ಬ್ರಾಹ್ಮಣರ ಆಶೀರ್ವಾದದಿಂದಲೂ ಶಾಂತವಾಗುವುದು.

೨೭. ಪುತ್ರ, ಪಶು, ಬಾಂಧವರೊಡನೆ ನರಕಕ್ಕೆ ಹೋಗಬಯಸುವವರು ಬ್ರಾಹ್ಮಣರಲ್ಲಿಯೂ, ಗೋವುಗಳಲ್ಲಿಯೂ ಅಧಿಕಾರವನ್ನು ಮಾಡುವರು.

೨೮. ಅಜ್ಞಾನದಿಂದ ಬ್ರಾಹ್ಮಣರನ್ನೂ, ದೇವತೆಗಳನ್ನೂ, ಗೋವುಗಳನ್ನೂ, ಯಜ್ಞಗಳನ್ನೂ ದ್ವೇಷಿಸುವ ಮಾನವರಿಗೆ ಇಹಪರಲೋಕಗಳಲ್ಲಿ ಸುಖವಾಗುವುದಿಲ್ಲ.

ಅನಿಂದ್ಯಾ ಬ್ರಾಹ್ಮಣಾ ಗಾವಃ ಕಾಂಚನಂ ಸಲಿಲಂ ಸ್ತ್ರಿಯಃ ।
ಪೃಥಿವೀ ತು ಷಡೇತಾನಿ ಯೋ ನಿಂದತಿ ಸ ಪಾತಕೀ ॥ ೭೯ ॥
ಅಗ್ರಂ ಧರ್ಮಸ್ಯ ರಾಜಾನೋ ಮೂಲಂ ಧರ್ಮಸ್ಯ ಬ್ರಾಹ್ಮಣಾಃ ।
ತಸ್ಮಾನ್ಮೂಲಂ ನ ಹಿಂಸೀತ ಮೂಲೇ ಹ್ಯಗ್ರಂ ಪ್ರತಿಷ್ಠಿತಂ ॥ ೮೦ ॥
ಫಲಂ ಧರ್ಮಸ್ಯ ರಾಜಾನಃ ಪುಷ್ಪಂ ಧರ್ಮಸ್ಯ ಬ್ರಾಹ್ಮಣಾಃ ।
ತಸ್ಮಾತ್ಪುಷ್ಪಂ ನ ಹಿಂಸೀತ ಪುಷ್ಪಾತ್ಸಂಜಾಯತೇ ಫಲಂ ॥ ೮೧ ॥

ರಾಜಾ ವೃಕ್ಷೋ ಬ್ರಾಹ್ಮಣಾಸ್ತಸ್ಯ ಮೂಲಂ
ಪೌರಾಃ ಪರ್ಣಂ ಮಂತ್ರಿಣಸ್ತಸ್ಯ ಶಾಖಾಃ ।
ತಸ್ಮಾದ್ರಾಜ್ಞಾ ಬ್ರಾಹ್ಮಣಾ ರಕ್ಷಣೀಯಾ
ಮೂಲೇ ಗುಪ್ತೇ ನಾಽಸ್ತಿ ವೃಕ್ಷಸ್ಯ ನಾಶಃ ॥ ೮೨ ॥

ಆಸನ್ನೋ ಹಿ ದಹತ್ಯಗ್ನಿರ್ದೂರಾದ್ದಹತಿ ಬ್ರಾಹ್ಮಣಃ ।
ಪ್ರರೋಹತ್ಯಗ್ನಿನಾ ದಗ್ಧಂ ಬ್ರಹ್ಮದಗ್ಧಂ ನ ರೋಹತಿ ॥ ೮೩ ॥

---

೭೯. ಬ್ರಾಹ್ಮಣರು, ಗೋವುಗಳು, ಸುವರ್ಣ, ನೀರು, ಹೆಂಗಸರು, ಭೂಮಿ ಈ ಆರನ್ನು ನಿಂದಿಸುವವರು ಪಾತಕಿಗಳಾಗುವರು.

೮೦. ರಾಜರು ಧರ್ಮದಲ್ಲಿ ಅಗ್ರಗಣ್ಯರು. ಬ್ರಾಹ್ಮಣರು ಧರ್ಮದ ಮೂಲ ಸ್ವರೂಪರು. ಮೂಲದಲ್ಲಿ ಅಗ್ರಗಣ್ಯರು ನಿಂತಿರುವುದರಿಂದ ಮೂಲಭೂತರಾದ ಬ್ರಾಹ್ಮಣರನ್ನು ಹಿಂಸಿಸಬಾರದು.

೮೧. ರಾಜರು ಧರ್ಮದ ಫಲಭೂತರು. ಬ್ರಾಹ್ಮಣರು ಧರ್ಮದ ಪುಷ್ಪದಂತಿರುವರು. ಪುಷ್ಪದಿಂದ ಫಲವುಂಟಾಗುವುದರಿಂದ ಪುಷ್ಪದಂತಿರುವ ಬ್ರಾಹ್ಮಣರನ್ನು ಹಿಂಸೆ ಮಾಡಬಾರದು.

೮೨. ರಾಜನು ವೃಕ್ಷಭೂತನು. ಬ್ರಾಹ್ಮಣರು ಬುಡವಾಗಿರುವರು. ಪಟ್ಟಣಿಗರು ಎಲೆಗಳು. ಮಂತ್ರಿಗಳು ಕೊಂಬೆಗಳು. ಬುಡವನ್ನು ಕಾಪಾಡಿದರೆ ವೃಕ್ಷವು ನಾಶವಾಗದಿರುವುದರಿಂದ ರಾಜನು ಬ್ರಾಹ್ಮಣರನ್ನು ರಕ್ಷಿಸಬೇಕು.

೮೩. ಅಗ್ನಿಯು ಸಮೀಪದಲ್ಲಿರುವ ವಸ್ತುವನ್ನು ಸುಡುವುದು. ಬ್ರಾಹ್ಮಣರು ದೂರದಿಂದಲೇ ಸುಡುವರು. ಅಗ್ನಿಯಿಂದ ಸುಟ್ಟಿದ್ದು ಮತ್ತೆ ಮೊಳೆಯುವುದು. ಬ್ರಾಹ್ಮಣದಗ್ಧವಾದುದು ಮೊಳೆಯುವುದಿಲ್ಲ.

ಬ್ರಾಹ್ಮಣಾನಾಂ ಚ ಶಾಪೇನ ಸರ್ವಭಕ್ಷೋ ಹುತಾಶನಃ ।
ಸಮುದ್ರಶ್ಚಾಽಪ್ಯಪೇಯಸ್ತು ವಿಫಲಶ್ಚ ಪುರಂದರಃ ॥ ೮೪ ॥
ತ್ವಂ ಚಂದ್ರ ರಾಜಯಕ್ಷ್ಮೀ ಚ ಪೃಥಿವ್ಯಾಮೂಷರಾಣಿ ಚ ।
ಸೂರ್ಯಾಚಂದ್ರಮಸೋಃ ಪಾತಃ ಪುನರುದ್ಧರಣಂ ತಯೋಃ ॥ ೮೫ ॥
ವನಸ್ಪತೀನಾಂ ನಿರ್ಯಾಸೋ ದಾನವಾನಾಂ ಪರಾಜಯಃ ।
ನಾಗಾನಾಂ ಚ ವಶೀಕಾರಃ ಕ್ಷತ್ರಸ್ಯೋತ್ಸಾದನಂ ತಥಾ ।
ದೇವೋತ್ಪತ್ತಿವಿಪರ್ಯಾಸೋ ಲೋಕಾನಾಂ ಚ ವಿಪರ್ಯಯಃ ॥ ೮೬ ॥
ಏವಮಾದೀನಿ ತೇಜಾಂಸಿ ಬ್ರಾಹ್ಮಣಾನಾಂ ಮಹಾತ್ಮನಾಂ ।
ತಸ್ಮಾದ್ವಿಪ್ರೇಷು ನೃಪತಿಃ ಪ್ರಣಮೇನ್ನಿತ್ಯಮೇವ ಚ ॥ ೮೭ ॥
ಪರಾಮಪ್ಯಾಪದಂ ಪ್ರಾಪ್ತೋ ಬ್ರಾಹ್ಮಣಾನ್ನ ಪ್ರಕೋಪಯೇತ್ ।
ತೇ ಹ್ಯೇನಂ ಕುಪಿತಾ ಹನ್ಯುಃ ಸದ್ಯಃ ಸಬಲವಾಹನಂ ॥ ೮೮ ॥
ಪ್ರಣೀತಶ್ಚಾಽಪ್ರಣೀತಶ್ಚ ಯಥಾಗ್ನಿರ್ದೈವತಂ ಮಹತ್ ।
ಏವಂ ವಿದ್ವಾನವಿದ್ವಾನ್ ವಾ ಬ್ರಾಹ್ಮಣೋ ದೈವತಂ ಮಹತ್ ॥ ೮೯ ॥

---

೮೪. ಅಗ್ನಿಯು ಬ್ರಾಹ್ಮಣರ ಶಾಪದಿಂದ ಸರ್ವಭಕ್ಷನಾದನು. ಸಮುದ್ರವು ಕುಡಿಯಲನರ್ಹವಾಯಿತು, ಇಂದ್ರನು ವಿಫಲನಾದನು.

೮೫-೮೭. ಚಂದ್ರ! ನಿನಗೆ ಕ್ಷಯರೋಗವೂ ಪೃಥಿವಿಯಲ್ಲಿ ಬಂಜರು ಭೂಮಿಯೂ, ಸೂರ್ಯ ಚಂದ್ರರ ಪತನವೂ, ತಿರುಗಿ ಅವರ ಉದ್ಧಾರವೂ, ವನಸ್ಪತಿಗಳಿಗೆ ನಿರ್ಯಾಸವೂ, (ಹಾಲೂ) ದಾನವರಿಗೆ ಸೋಲೂ, ಆನೆಗಳ ವಶಮಾಡಿ ಕೊಳ್ಳುವಿಕೆಯೂ, ಕ್ಷತ್ರಿಯರ ನಾಶವೂ, ದೇವತೆಗಳ ಉತ್ಪತ್ತಿ ವ್ಯತ್ಯಾಸವೂ, ಲೋಕಗಳ ಬದಲಾವಣೆಯೂ, ಇವೇ ಮೊದಲಾದ ತೇಜಸ್ಸಿನ ಕಾರ್ಯಗಳು ಮಹಾತ್ಮರಾದ ಬ್ರಾಹ್ಮಣರಿಂದಾದವು. ಆದುದರಿಂದ ರಾಜನು ಯಾವಾಗಲೂ ಬ್ರಾಹ್ಮಣರನ್ನು ನಮಸ್ಕರಿಸಬೇಕು.

೮೮. ರಾಜನು ಅತ್ಯಂತ ಆಪತ್ತನ್ನು ಹೊಂದಿದರೂ ಬ್ರಾಹ್ಮಣರನ್ನು ಕೋಪಗೊಳಿಸಬಾರದು. ಕೋಪಗೊಂಡ ದ್ವಿಜರು ಕೂಡಲೆ ರಾಜನನ್ನು ಸೈನ್ಯವಾಹನಗಳೊಡನೆ ಕೊಂದಾರು.

೮೯. ಅಗ್ನಿಯು ಸಂಸ್ಕಾರಗೊಂಡರೂ, ಸಂಸ್ಕಾರಗೊಳ್ಳದಿದ್ದರೂ ಹೇಗೆ ಪೂಜ್ಯ ದೇವತೆಯೋ, ಹಾಗೆಯೇ ಬ್ರಾಹ್ಮಣನು ವಿದ್ವಾಂಸನಾಗಲಿ, ವಿದ್ವಾಂಸನಾಗದಿರಲಿ ಅವನು ಪೂಜ್ಯದೇವತೆಯು.

ಶ್ಮಶಾನೇಷ್ವಪಿ ತೇಜಸ್ವೀ ಪಾವಕೋ ನೈವ ದುಷ್ಯತಿ ।
ಹೂಯಮಾನಶ್ಚ ಯಜ್ಞೇಷು ಭೂಯ ಏವಾಭಿವರ್ಧತೇ ॥ ೯೦ ॥
ಏವಂ ಯದ್ಯಪ್ಯನಿಷ್ಟೇಷು ವರ್ತತೇ ಸರ್ವಕರ್ಮಸು ।
ಸರ್ವೇಷಾಂ ಬ್ರಾಹ್ಮಣಃ ಪೂಜ್ಯೋ ದೈವತಂ ಪರಮಂ ಮಹತ್ ॥ ೯೧ ॥
ಕ್ಷತ್ರಸ್ಯಾತಿಪ್ರವೃದ್ಧಸ್ಯ ಬ್ರಾಹ್ಮಣಾನಾಂ ಪ್ರಭಾವತಃ ।
ಬ್ರಾಹ್ಮಂ ಹಿ ಪರಮಂ ಪೂಜ್ಯಂ ಕ್ಷತ್ರಂ ಹಿ ಬ್ರಹ್ಮಸಂಭವಂ ॥ ೯೨ ॥
ಅದ್ಭ್ಯೋಽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಂ ।
ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥ ೯೩ ॥
ಯಾನ್ ಸಮಾಶ್ರಿತ್ಯ ತಿಷ್ಠಂತಿ ದೇವಲೋಕಾಶ್ಚ ಸರ್ವದಾ ।
ಬ್ರಹ್ಮೈವ ವಚನಂ ಯೇಷಾಂ ಕೋ ಹಿಂಸ್ಯಾತ್ತಾನ್‌ಜಿಜೀವಿಷುಃ ॥ ೯೪ ॥
ಮ್ರಿಯಮಾಣೋಽಪ್ಯಾದದೀತ ನ ರಾಜಾ ಬ್ರಾಹ್ಮಣಾತ್ಕರಂ ।
ನ ಚ ಕ್ಷುಧಾಽಸ್ಯ ಸಂಸೀದೇದ್ಬ್ರಾಹ್ಮಣೋ ವಿಷಯೇ ವಸನ್ ॥ ೯೫ ॥

---

೯೦. ತೇಜಸ್ವಿಯಾದ ಅಗ್ನಿಯು ಶ್ಮಶಾನದಲ್ಲಿಯೂ, ದುಷ್ಟನಾಗುವುದಿಲ್ಲ. ಅವನು ಯಜ್ಞಗಳಲ್ಲಿ ಹೋಮಿಸಿದರೆ ಮರಳಿ ವೃದ್ಧಿಗೊಳ್ಳುವನು.

೯೧. ಬ್ರಾಹ್ಮಣನು ಅನಿಷ್ಟ ಕರ್ಮಗಳಲ್ಲಾ ಸಕ್ತನಾಗಿದ್ದರೂ ಅವನು ಎಲ್ಲರಿಗೂ ಪೂಜ್ಯನಾದ ಉತ್ತಮದೇವತೆಯು.

೯೨. ಬ್ರಾಹ್ಮಣರ ಪ್ರಭಾವದಿಂದ ಅತ್ಯಂತ ವೃದ್ಧಿಗೊಂಡ ಕ್ಷತ್ರಿಯನಿಗೆ ಬ್ರಹ ತೇಜಸ್ಸು ಪೂಜ್ಯವಾದುದು. ಕ್ಷತ್ರಿಯ ತೇಜಸ್ಸು ಬ್ರಹ್ಮತೇಜಸ್ಸಿನಿಂದಾದುದಷ್ಟೆ.

೯೩. ನೀರಿನಿಂದ ಅಗ್ನಿಯೂ, ಬ್ರಾಹ್ಮಣನಿಂದ ಕ್ಷತ್ರಿಯನೂ, ಕಲ್ಲಿನಿಂದ ಲೋಹವೂ ಉಂಟಾಗಿರುವುದು. ಸರ್ವವ್ಯಾಪಿಯಾದ ಅವುಗಳ ತೇಜಸ್ಸು ತಮ್ಮ ತಮ್ಮ ಕಾರಣಗಳಲ್ಲಿ ಅಡಗುವುದು.

೯೪. ದೇವಲೋಕಗಳು ಯಾವಾಗಲೂ ಆಶ್ರಯಿಸಿಕೊಂಡಿರುವ ಬ್ರಾಹ್ಮಣರ ಮಾತು ವೇದಗಳಾಗಿರುವುವು. ಅಂತಹ ಬ್ರಾಹ್ಮಣರನ್ನು ಬದುಕಲಪೇಕ್ಷಿಸುವ ಯಾವ ಮನುಷ್ಯನು ಹಿಂಸೆಮಾಡಿಯಾನು?

೯೫. ರಾಜನು ತಾನು ಸಾಯುತ್ತಿದ್ದರೂ ಬ್ರಾಹ್ಮಣನಿಂದ ಕಂದಾಯವನ್ನು ತೆಗೆದುಕೊಳ್ಳಕೂಡದು. ಆ ರಾಜನ ದೇಶದಲ್ಲಿ ವಾಸಿಸುವ ಬ್ರಾಹ್ಮಣನು ಹಸಿವಿನಿಂದ ಬಳಲಬಾರದು.

ಯಸ್ಯ ರಾಜ್ಞಸ್ತು ವಿಷಯೇ ಬ್ರಾಹ್ಮಣಃ ಸೀದತಿ ಕ್ಷುಧಾ ।
ತಸ್ಯ ತಚ್ಛೃತಧಾ ರಾಷ್ಟ್ರಮಚಿರಾದೇವ ಸೀದತಿ ॥ ೯೬ ॥
ಯದ್ರಾಜಾ ಕುರುತೇ ಪಾಪಂ ಪ್ರಮಾದಾದಪಿ ವಿಭ್ರಮಾತ್ ।
ವಸಂತೋ ಬ್ರಾಹ್ಮಣಾ ರಾಷ್ಟ್ರೇ ಶ್ರೋತ್ರಿಯಾಃ ಶಮಯಂತಿ ತತ್ ॥ ೯೭ ॥
ಪೂರ್ವರಾತ್ರಾಂತರಾತ್ರೇಷು ದ್ವಿಜೈರ್ಯಸ್ಯ ವಿಧೀಯತೇ ।
ಸ ರಾಜಾ ಸಹ ರಾಷ್ಟ್ರೇಣ ವರ್ಧತೇ ಬ್ರಹ್ಮತೇಜಸಾ ॥ ೯೮ ॥
ಬ್ರಾಹ್ಮಣಾನ್ ಪೂಜಯೇನ್ನಿತ್ಯಂ ಪ್ರಾತರುತ್ಥಾಯ ಭೂಮಿಪಃ ।
ಬ್ರಾಹ್ಮಣಾನಾಂ ಪ್ರಸಾದೇನ ದೀವ್ಯಂತಿ ದಿವಿ ದೇವತಾಃ ॥ ೯೯ ॥
ಅಥ ಕಿಂ ಬಹುನೋಕ್ತೇನ ಬ್ರಾಹ್ಮಣಾ ಮಾಮಕೀ ತನುಃ ।
ಯೇ ಕೇಚಿತ್ಸಾಗರಾಂತಾಯಾಂ ಪೃಥಿವ್ಯಾಂ ಕೀರ್ತಿತಾ ದ್ವಿಜಾಃ ।
ತದ್ರೂಪಂ ದೇವದೇವಸ್ಯ ಶಿವಸ್ಯ ಪರಮಾತ್ಮನಃ ॥ ೧೦೦ ॥
ಏತಾನ್ ದ್ವಿಷಂತಿ ಯೇ ಮೂಢಾ ಬ್ರಾಹ್ಮಣಾನ್ ಸಂಶಿತವ್ರತಾನ್ ।
ತೇ ಮಾಂ ದ್ವಿಷಂತಿ ವೈ ನೂನಂ ಪೂಜನಾತ್ಪೂಜಯಂತಿ ಮಾಂ ॥ ೧೦೧ ॥

---

೯೬. ಯಾವ ದೊರೆಯ ದೇಶದಲ್ಲಿ ಬ್ರಾಹ್ಮಣನು ಹಸಿವಿನಿಂದ ವ್ಯಥೆಗೊಳ್ಳುವನೊ, ಆ ರಾಜನ ದೇಶವು ಕೂಡಲೆ ಅನೇಕ ಬಗೆಯಿಂದ ಹಾಳಾಗುವುದು.

೯೭. ರಾಜನು ಪ್ರಮಾದದಿಂದಾಗಲಿ, ಭ್ರಾಂತಿಯಿಂದಾಗಲಿ ಮಾಡಿದ ಪಾಪವನ್ನು ಅವನ ದೇಶದಲ್ಲಿ ವಾಸಿಸುವ ಶ್ರೋತ್ರಿಯ ಬ್ರಾಹ್ಮಣರು ಪರಿಹರಿಸುವರು.

೯೮. ಯಾವ ದೊರೆಯ ದೇಶದಲ್ಲಿ ಬ್ರಾಹ್ಮಣರು ಪ್ರಾತಸ್ಸಾಯಂಕಾಲಗಳಲ್ಲಿ ಅಗ್ನಿಹೋತ್ರಾದಿ ಶ್ರೌತಸ್ಮಾರ್ತ ಕರ್ಮಗಳನ್ನಾಚರಿಸುವರೊ, ಆ ದೇಶದ ದೊರೆಯು ಬ್ರಹ್ಮತೇಜಸ್ಸಿನಿಂದ ರಾಷ್ಟ್ರದೊಡನೆ ವೃದ್ಧಿಗೊಳ್ಳುವನು.

೯೯. ದೊರೆಯು ನಿತ್ಯವೂ ಬೆಳಗ್ಗೆ ಎದ್ದು ಬ್ರಾಹ್ಮಣರನ್ನು ಅರ್ಚಿಸಬೇಕು. ಬ್ರಾಹ್ಮಣರ ಅನುಗ್ರಹದಿಂದ ದೇವಲೋಕದಲ್ಲಿ ದೇವತೆಗಳು ವಿನೋದಪಡುವರು.

೧೦೦. ಹೆಚ್ಚು ಹೇಳಿ ಏನು ಪ್ರಯೋಜನ? ಬ್ರಾಹ್ಮಣರು ನನ್ನ ಶರೀರ. ಚತುಸ್ಸಾಗರಮಧ್ಯದಲ್ಲಿರುವ ಬ್ರಾಹ್ಮಣರು ಶಂಕರನ ರೂಪರು.

೧೦೧. ಉತ್ತಮ ವ್ರತವನ್ನಾಚರಿಸುವ ಬ್ರಾಹ್ಮಣರನ್ನು ದ್ವೇಷಿಸುವ ಮೂಢರು ನನ್ನನ್ನು ದ್ವೇಷಿಸಿದಂತಾಗುವರು. ಅವರನ್ನು ಪೂಜಿಸುವವರು ನನ್ನನ್ನು ಪೂಜಿಸಿದವರಂತಾಗುವರು.

ನ ಪ್ರದ್ವೇಷಸ್ತತಃ ಕಾರ್ಯೋ ಬ್ರಾಹ್ಮಣೇಷು ವಿಜಾನತಾ ।
ಪ್ರದ್ವೇಷೇಣಾಶು ನಶ್ಯಂತಿ ಬ್ರಹ್ಮಶಾಪಹತಾ ನರಾಃ ॥ ೧೦೨ ॥
ಇತ್ಯೇವಂ ಕಥಿತಶ್ಚಂದ್ರ ಬ್ರಾಹ್ಮಣಾನಾಂ ಗುಣಾರ್ಣವಃ ।
ಕುರುಷ್ವಾನಂತರಂ ಕಾರ್ಯಂ ಯದ್ಬ್ರವೀಮ್ಯಹಮೇವ ತೇ ॥ ೧೦೩ ॥
ಶಾಪಸ್ಯಾನುಗ್ರಹೋ ದತ್ತೋ ಮಯಾ ತವ ನಿಶಾಕರ ।
ನ ಚಾಽನ್ಯಥಾ ವಚಃ ಕರ್ತುಂ ಶಕ್ಯಂ ತೇಷಾಂ ದ್ವಿಜನ್ಮನಾಂ ॥ ೧೦೪ ॥
ಶಾಪಾಽನುಗ್ರಹದೈಃ ಸರ್ವೈರ್ದೇವೈರಪಿ ಸವಾಸವೈಃ ।
ತಸ್ಮಾಚ್ಚಂದ್ರ ತ್ವಯಾ ಶೋಕೋ ನೈವ ಕಾರ್ಯೋ ವಿಜಾನತಾ ॥ ೧೦೫ ॥
ಕ್ಷಯಸ್ತೇ ಭವಿತಾ ಪಕ್ಷಂ ಪಕ್ಷಂ ವೃದ್ಧಿರ್ಭವಿಷ್ಯತಿ ।
ಅಥಾಽನ್ಯದ್ವಚನಂ ಚಂದ್ರ ಶೃಣು ಕಾರ್ಯಂ ಯಥಾ ತ್ವಯಾ ॥ ೧೦೬ ॥
ಇದಂ ಯತ್ಸಾಗರೋಪಾಂತೇ ತಿಷ್ಠತೇ ಲಿಂಗಮುತ್ತಮಂ ।
ಧರಾಮಧ್ಯಗತಂ ತಚ್ಚ ದೇವಾನಾಂ ದೃಷ್ಟಿಗೋಚರಂ ॥ ೧೦೭ ॥
ಕುಕ್ಕುಟಾಂಡಸಮಪ್ರಖ್ಯಂ ಸರ್ಪಮೇಖಲಮಂಡಿತಂ ।
ಮಮಾದ್ಯಂ ಪರಮಂ ತೇಜೋ ನ ಚಾಽನ್ಯೋ ವೇದ ಕಶ್ಚನ ॥ ೧೦೮ ॥

---

೧೦೨. ಆದುದರಿಂದ ಬುದ್ಧಿಶಾಲಿಯಾದ ಮಾನವನು ಬ್ರಾಹ್ಮಣರನ್ನು ದ್ವೇಷಿಸಬಾರದು. ಹಾಗೆ ದ್ವೇಷಿಸಿದರೆ ಅವರ ಶಾಪದಿಂದ ಹಾಳಾಗುವರು.

೧೦೩. ಚಂದ್ರ ! ಹೀಗೆ ನಿನಗೆ ಬ್ರಾಹ್ಮಣರ ಗುಣಸಾಗರವನ್ನು ಹೇಳಿದ್ದೇನೆ. ಬಳಿಕ ನಾನು ಹೇಳಿದುದನ್ನು ಮಾಡು.

೧೦೪–೧೦೫. ಚಂದ್ರ ! ನಾನು ಶಾಪಗ್ರಸ್ತನಾದ ನಿನಗೆ ಅನುಗ್ರಹಿಸಿರುವೆನು. ಆ ಬ್ರಾಹ್ಮಣರ ನುಡಿಯನ್ನು ವ್ಯತ್ಯಾಸಗೊಳಿಸಲು ಇಂದ್ರಾದಿ ದೇವತೆಗಳಿಗೂ ಸಾಧ್ಯವಿಲ್ಲ. ಆದುದರಿಂದ ಪ್ರಾಜ್ಞನಾದ ನೀನು ದುಃಖಿಸಬೇಡ.

೧೦೬. ನಿನಗೆ ಒಂದು ಪಕ್ಷಕಾಲ ವೃದ್ಧಿಯೂ, ಇನ್ನೊಂದು ಪಕ್ಷಕಾಲ ಕ್ಷಯವೂ ಉಂಟಾಗುವುದು. ಇನ್ನೊಂದು ಮಾತನ್ನು ನಿನಗೆ ಹೇಳುವೆನು. ನೀನು ಅದರಂತೆ ಮಾಡು.

೧೦೭–೧೦೮. ಈ ಸಮುದ್ರದ ಸಮೀಪದಲ್ಲಿ ಭೂಮಿಯ ನಡುವೆ ನೆಲೆಸಿ ಕೋಳಿಮೊಟ್ಟೆಯಂತಿರುವುದೂ, ಸರ್ಪದ ಡಾಬಿನಿಂದ ಅಲಂಕಾರಗೊಂಡುದೂ ಆದ ನನ್ನ ಮೊದಲಿನ ತೇಜೋರೂಪವಾದ ಲಿಂಗವನ್ನು ದೇವತೆಗಳ ಹೊರತು ಬೇರೆ ಯಾರೂ ತಿಳಿಯುವುದಿಲ್ಲ.

ಇತಃ ಸಾಗರಮಧ್ಯೇ ತು ಧನುಷಾಂ ಚ ಶತತ್ರಯೇ ।
ತಿಷ್ಠತೇ ತತ್ರ ಲಿಂಗಂ ತು ಸುಗುಪ್ತಂ ಲಕ್ಷಣಾನ್ವಿತಂ ॥ ೧೦೯ ॥

ಆದಿಕಲ್ಪೇ ಮಹರ್ಷೀಣಾಂ ಶಾಪೇನ ಪತಿತಂ ಮಮ ।
ಲಿಂಗಂ ಸಾಗರಮಧ್ಯೇ ತು ತತ್ತ್ವಂ ಶೀಘ್ರಂ ಸಮಾನಯ ॥ ೧೧೦ ॥

ಸ್ಪರ್ಶಾಖ್ಯಂ ಯತ್ರ ಮೇ ಲಿಂಗಂ ತತ್ರ ಸ್ಥಾನೇ ನಿವೇಶಯ ।
ನಿವೇಶ್ಯ ತು ಪ್ರಯತ್ನೇನ ಸಹಿತೋ ವಿಶ್ವಕರ್ಮಣಾ ॥ ೧೧೧ ॥

ತತೋ ಬ್ರಹ್ಮಾಣಮಾಹೂಯ ಸಮೇತಂ ತು ಮುನೀಶ್ವರೈಃ ।
ಪ್ರತಿಷ್ಠಾಂ ಕಾರಯ ವಿಭೋ ಇಷ್ಟ್ವಾ ತತ್ರ ಮಹಾಮಖೈಃ ॥ ೧೧೨ ॥

ಏವಮುಕ್ತ್ವಾ ಸ ಭಗವಾಂಸ್ತತ್ರೈವಾಂತರಧೀಯತ ।
ತತಃ ಪ್ರಭಾಂ ಪುನರ್ಲೇಭೇ ರಾತ್ರಿನಾಥೋ ವರಾನನೇ ॥ ೧೧೩ ॥

ತತಃ ಪ್ರಭೃತಿ ತತ್ಕ್ಷೇತ್ರಂ ಪ್ರಭಾಸಮಿತಿ ವಿಶ್ರುತಂ ।
ನಿಷ್ಪ್ರಭಸ್ಯ ಪ್ರಭಾ ದತ್ತಾ ಪ್ರಭಾಸಂ ತೇನ ಚೋಚ್ಯತೇ ॥ ೧೧೪ ॥

---

೧೦೯. ಇಲ್ಲಿಂದ ಮುನ್ನೂರು ಬಿಲ್ಲುಗಳ ದೂರದಲ್ಲಿ ಸಮುದ್ರದ ಮಧ್ಯದಲ್ಲಿ ಅತಿ ಗುಪ್ತವಾದ ನನ್ನ ಲಿಂಗವೊಂದಿರುವುದು.

೧೧೦. ಮೊದಲಿನ ಕಲ್ಪದಲ್ಲಿ ಮಹರ್ಷಿಗಳ ಶಾಪದಿಂದ ಸಮುದ್ರದ ಮಧ್ಯದಲ್ಲಿ ಬಿದ್ದಿರುವ ನನ್ನ ಲಿಂಗವನ್ನು ನೀನು ಶೀಘ್ರವಾಗಿ ತೆಗೆದುಕೊಂಡು ಬಾ.

೧೧೧–೧೧೨. ಅದನ್ನು ನನ್ನ ಸ್ಪರ್ಶವೆಂಬ ಲಿಂಗವಿರುವ ಸ್ಥಳದಲ್ಲಿ ವಿಶ್ವಕರ್ಮನೊಡನೆ ಪ್ರಯತ್ನದಿಂದಿಟ್ಟು ಮುನಿವರ್ಯರಿಂದ ಕೂಡಿರುವ ಬ್ರಹ್ಮನನ್ನು ಕರೆಯಿಸಿ ಮಹಾಯಜ್ಞಗಳನ್ನು ಮಾಡಿ ಅದನ್ನು ಪ್ರತಿಷ್ಠೆಮಾಡು.

೧೧೩. ಸುಂದರಿ ! ಆ ಮಹೇಶ್ವರನು ಹೀಗೆಂದು ಹೇಳಿ ಅಲ್ಲಿಯೇ ಅಡಗಿ ಹೋದನು. ಬಳಿಕ ನಿಶಾನಾಥನು ಮರಳಿ ತನ್ನ ಕಿರಣಗಳನ್ನು ಪಡೆದನು.

೧೧೪. ನಿಷ್ಪ್ರಭನಾದ ನಿಶಾಕರನಿಗೆ ಪ್ರಭೆಯನ್ನಿತ್ತುದರಿಂದ ಆ ಕ್ಷೇತ್ರವು ಅದು ಮೊದಲ್ಗೊಂಡು ಪ್ರಭಾಸವೆಂದು ಪ್ರಸಿದ್ಧವಾಯಿತು.

ದಕ್ಷಸ್ಯ ತು ವೃಥಾ ಶಾಪೋ ನ ಕೃತಸ್ತೇನ ಲಾಂಛನಂ ।
ಸೋಮಃ ಪ್ರಭಾಸತೇ ಲೋಕಾನ್ವರಂ ಪ್ರಾಪ್ಯ ಮಹೇಶ್ವರಾತ್ ।
ವ್ಯಕ್ತೀಭೂತಃ ಸ ದೇವೇಶಃ ಸೋಮಸ್ಯೈವ ಮಹಾತ್ಮನಃ ॥ ೧೧೫ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸೋಮವರಪ್ರದಾನವರ್ಣನಂ ನಾಮ
ದ್ವಾವಿಂಶೋಽಧ್ಯಾಯಃ

---

೧೧೫. ಚಂದ್ರನ ಕಳಂಕವು ಹೋಗದಿರುವುದರಿಂದ ದಕ್ಷನ ಶಾಪವು ವ್ಯರ್ಥವಾಗಲಿಲ್ಲ. ಚಂದ್ರನು ಮಹಾದೇವನ ವರದಿಂದ ಪ್ರಪಂಚವನ್ನು ಪ್ರಕಾಶಗೊಳಿಸುತ್ತಿರುವನು. ಆ ಮಹೇಶ್ವರನು ಚಂದ್ರನಿಗಾಗಿಯೇ ಪ್ರತ್ಯಕ್ಷನಾದನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಸೋಮವರಪ್ರದಾನವರ್ಣನವೆಂಬ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀ ೯೬ ॥

ತ್ರಯೋವಿಂಶೋಽಧ್ಯಾಯಃ

ಸೋಮೇಶ್ವರಪ್ರತಿಷ್ಠಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತಃ ಶಾಂತಮನಾ ಭೂತ್ವಾ ಚಂದ್ರಮಾ ವಿಸ್ಮಯಾನ್ವಿತಃ ।
ಶಂಭುಭಕ್ತ್ಯಾ ಪರೀತಾತ್ಮಾ ಪ್ರಭಾಸಕ್ಷೇತ್ರಮಾಸ್ಥಿತಃ ॥ ೧ ॥
ಪೂರ್ವೋಕ್ತಂ ಯತ್ತು ದೇವೇನ ಸ ತಥಾ ಕೃತವಾನ್ ವಿಭುಃ ।
ಗತ್ವಾ ಸಾಗರಮಧ್ಯೇ ತು ಗೃಹೀತ್ವಾ ಲಿಂಗಮುತ್ತಮಂ ॥ ೨ ॥
ವಿಶ್ವಕರ್ಮಾಣಮಾಹೂಯ ಸಹಿತಂ ಪರಿಚಾರಕೈಃ ।
ಆದಿದೇಶ ಸ್ವಯಂ ಸೋಮಸ್ತ್ವಷ್ಟಾರಂ ದೇವಶಿಲ್ಪಿನಂ ॥ ೩ ॥

ಚಂದ್ರ ಉವಾಚ :—

ವಿಶ್ವಕರ್ಮನ್ನಿದಂ ಲಿಂಗಂ ಮಮ ದತ್ತಂ ತು ಶಂಭುನಾ ।
ಗೃಹಾಣ ತ್ವಂ ಮಹಾಬಾಹೋ ಯುಕ್ತಸ್ಥಾನೇ ನಿವೇಶಯ ॥ ೪ ॥
ರಕ್ಷಸ್ವ ತಾವದ್ಗಂತಾಽಸ್ಮಿ ಸ್ವಕೀಯಂ ಭವನಂ ವಿಭೋ ।
ಯಜ್ಞಾರ್ಥಮಾನಯಿಷ್ಯಾಮಿ ಯಜ್ಞೋಪಕರಣಾನಿ ಚ ॥ ೫ ॥

ಕನ್ನಡದ ಅನುವಾದ

ಸೋಮೇಶ್ವರಪ್ರತಿಷ್ಠಾಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಬಳಿಕ ಚಂದ್ರನು ಶಾಂತನೂ, ಆಶ್ಚರ್ಯಗೊಂಡವನೂ, ಶಿವಭಕ್ತಿಯುಳ್ಳವನೂ, ಆಗಿ ಪ್ರಭಾಸಕ್ಷೇತ್ರದಲ್ಲಿದ್ದನು.

೨-೩. ಅವನು ಮಹೇಶ್ವರನು ತನಗೆ ಹೇಳಿದಂತೆ ಮಾಡಿದನು. ಸಮುದ್ರದ ಮಧ್ಯಕ್ಕೆ ಹೋಗಿ ಅವನು ಆ ಉತ್ತಮ ಲಿಂಗವನ್ನು ತಂದು ಸೇವಕರೊಡನೆ ವಿಶ್ವಕರ್ಮನನ್ನು ಕರೆಯಿಸಿ ಅವನಿಗೆ ಹೀಗೆ ಅಪ್ಪಣೆಮಾಡಿದನು.

೪-೫. ಚಂದ್ರನು ಹೇಳುತ್ತಾನೆ:—ವಿಶ್ವಕರ್ಮ! ಮಹೇಶ್ವರನು ನನಗಿತ್ತ ಈ ಲಿಂಗವನ್ನು ತೆಗೆದುಕೊಂಡು ಯೋಗ್ಯಸ್ಥಳದಲ್ಲಿಟ್ಟು ರಕ್ಷಿಸು. ನಾನು ಅಷ್ಟರಲ್ಲಿ ನನ್ನ ಮನೆಗೆ ಹೋಗಿ ಯಜ್ಞಕ್ಕಾಗಿ ಸಾಮಗ್ರಿಗಳನ್ನು ತರುವೆನು.

ಈಶ್ವರ ಉವಾಚ :—

ಇತ್ಯುಕ್ತ್ವಾ ಚ ತದಾ ಚಂದ್ರಶ್ಚಂದ್ರಲೋಕಂ ಜಗಾಮ ಹ ।
ಗತ್ವಾ ತತ್ರ ಮಹಾದೇವಿ ಚಂದ್ರಲೋಕಂ ಮಹಾಪ್ರಭಂ ॥ ೬ ॥
ಕೋಟಿಯೋಜನವಿಸ್ತೀರ್ಣಂ ಸದಾಽಽಮೃತಮಯಂ ಶುಭಂ ।
ತತ್ರಾಽಽಹೂಯ ಮಹಾದೇವಿ ಪ್ರತೀಹಾರಂ ಸುಮೇಧಸಂ ॥ ೭ ॥
ಮಂತ್ರಿಣಂ ಹೇಮಗರ್ಭಾಂಗಂ ಬೃಹಸ್ಪತಿಸಮಂ ಧಿಯಾ ।
ಯಜ್ಞೋಪಸ್ಕರಸಂಭಾರಂ ಸರ್ವಮಾದಾಯ ಸತ್ವರಾಃ ॥ ೮ ॥
ಪ್ರಭಾಸಕ್ಷೇತ್ರಂ ಗಚ್ಛಂತು ಮಮಾದೇಶಪರಾಯಣಾಃ ।
ಸಾಗ್ನಿಭಿರ್ಬ್ರಾಹ್ಮಣೈಸ್ಸಾರ್ಧಂ ಗಚ್ಛಂತು ಕ್ಷೇತ್ರಮುತ್ತಮಂ ॥ ೯ ॥
ಶೀಘ್ರಂ ಸಂಪಾದ್ಯತಾಂ ಸರ್ವಂ ಯಥಾ ಯಜ್ಞಃ ಪ್ರವರ್ತತೇ ।
ಸರ್ವೇಷಾಮೇವ ವಿಪ್ರಾಣಾಂ ಚಂದ್ರಲೋಕನಿವಾಸಿನಾಂ ॥ ೧೦ ॥
ಪೃಥಕ್ ಪೃಥಗ್ವಿಮಾನಂ ತು ದೇಯಂ ತೇಷಾಂ ಮಹಾಧನಂ ।
ಗವಾಂ ಚ ದಶಲಕ್ಷಾಣಾಂ ಸವತ್ಸನಾಂ ಪಯೋಮುಚಾಂ ॥ ೧೧ ॥
ಹೇಮಭಾರೈರ್ಭೂಷಿತಾನಾಂ ಕಾಮಧೇನೂಪಮತ್ವಿಷಾಂ ।
ಅಶ್ವಾನಾಂ ಶ್ಯಾಮಕರ್ಣಾನಾಂ ಸಪಾದಂ ಲಕ್ಷಮೇವ ಚ ॥ ೧೨ ॥

೬–೯. ಈಶ್ವರನು ಹೇಳುತ್ತಾನೆ :—ಚಂದ್ರನು ಹೀಗೆಂದು ಹೇಳಿ ಕೋಟಿಗಾವುದ ವಿಶಾಲವೂ, ಯಾವಾಗಲೂ ಅಮೃತಮಯವೂ ಆದ ತನ್ನ ಲೋಕಕ್ಕೆ ಹೋಗಿ ಅಲ್ಲಿ ಸುಮೇಧಸನೆಂಬ ಬಾಗಿಲುಕಾಯುವವನನ್ನೂ, ಬೃಹಸ್ಪತಿಯಂತೆ ಬುದ್ಧಿಯುಳ್ಳ, ಹೇಮ ಗರ್ಭಾಂಗನೆಂಬ ಮಂತ್ರಿಯನ್ನೂ ಕರೆದು ನೀವು ನನ್ನ ಅಪ್ಪಣೆಯಂತೆ ಶೀಘ್ರವಾಗಿ ಯಜ್ಞಸಾಮಗ್ರಿಗಳನ್ನೆಲ್ಲ ತೆಗೆದುಕೊಂಡು ಅಗ್ನಿಹೋತ್ರಿಗಳಾದ ಬ್ರಾಹ್ಮಣರೊಡನೆ ಪ್ರಭಾಸಕ್ಷೇತ್ರಕ್ಕೆ ತೆರಳಿರಿ.

೧೦–೧೭. ಅಲ್ಲಿ ಶೀಘ್ರವಾಗಿ ಯಜ್ಞಸಾಮಗ್ರಿಗಳನ್ನೆಲ್ಲ ಸಜ್ಜುಗೊಳಿಸಿರಿ. ಚಂದ್ರಲೋಕ ನಿವಾಸಿಗಳಾದ ಬ್ರಾಹ್ಮಣರಿಗೆ ಬೇರೆ ಬೇರೆಯಾಗಿ ಕೊಡಬೇಕಾಗಿರುವ ವಿಮಾನವನ್ನೂ, ಬಹುದ್ರವ್ಯಗಳನ್ನೂ, ಹಾಲು ಕರೆಯುವುವೂ ಕರುಗಳಿರುವುವೂ, ಸುವರ್ಣಭಾರಗಳಿಂದ ಅಲಂಕಾರಗೊಂಡುವೂ, ಕಾಮಧೇನುವಿನಂತೆ ಕಂಗೊಳಿಸು ವುವೂ, ಆಗಿರುವ ಹತ್ತು ಲಕ್ಷ ಗೋವುಗಳನ್ನೂ, ಕರಿಕಿವಿಗಳುಳ್ಳ ಒಂದು ಲಕ್ಷದ ಇಪ್ಪತ್ತೈದುಸಾವಿರ ಕುದುರೆಗಳನ್ನೂ, ಘಂಟೆಗಳಿಂದ ಭೂಷಣಗೊಂಡ ಹತ್ತು ಸಾವಿರ ಆನೆಗಳನ್ನೂ, ಗಾಳಿಯಂತೆ ವೇಗವುಳ್ಳ ನಾಲ್ಕು ಸಾವಿರ ರಥಗಳನ್ನೂ, ಮಾಣಿಕ್ಯ ಗಳಿಂದ ಅಲಂಕಾರಗೊಂಡ ಒಂದು ಲಕ್ಷ ಒಂಟೆಗಳನ್ನೂ, ಚತುರಂಗ ಬಲಗಳುಳ್ಳ

ದಂತಿನಾಮಯುತಂ ಚೈವ ಘಂಟಾಭರಣಶೋಭಿತಂ ।
ಸಹಸ್ರಾಣಿ ಚ ಚತ್ವಾರಿ ರಥಾನಾಂ ವಾತರಂಹಸಾಂ ॥ ೧೩ ॥
ಲಕ್ಷಂ ತು ಕರಭಾಣಾಂ ಚ ಮಣಿಮಾಣಿಕ್ಯಸಂಯುತಂ ।
ಸೈನ್ಯಾನಾಂ ಕೋಟಿರೇಕಾ ತು ಚತುರಂಗಬಲಾನ್ವಿತಾ ॥ ೧೪ ॥
ಅಗ್ನಿಶೌಚಾನಿ ವಸ್ತ್ರಾಣಿ ಬ್ರಾಹ್ಮಣಾರ್ಥಂ ತಥೈವ ಚ ।
ವಿಭೂಷಣಾನಿ ದಿವ್ಯಾನಿ ಋತ್ವಿಗರ್ಥಂ ಶುಭಾನಿ ಚ ॥ ೧೫ ॥
ನಾನಾಭಕ್ಷ್ಯಾಣಿ ಭೋಜ್ಯಾನಿ ಪಾನಾನಿ ವಿವಿಧಾನಿ ಚ ।
ಲಕ್ಷಂ ಕರ್ಮಕರಾಣಾಂ ತು ದಾಸೀನಾಂ ಲಕ್ಷಮೇವ ಚ ॥ ೧೬ ॥
ದಾರುವಂಶಾವಧಿ ಪ್ರೋಕ್ತಂ ಯತ್ಕಿಂಚಿತ್ಸ್ವಂ ಮದಾಜ್ಞಯಾ ।
ಅನ್ಯದ್ಯದ್ಬ್ರಾಹ್ಮಣಾ ಬ್ರೂಯುಸ್ತತ್ಸರ್ವಂ ತತ್ರ ನೀಯತಾಂ ॥ ೧೭ ॥
ದೇವಾನಾಂ ದಾನವಾನಾಂ ಚ ಯಕ್ಷಗಂಧರ್ವರಕ್ಷಸಾಂ ।
ಸಪ್ತದ್ವೀಪಕ್ಷಿತೀಶಾನಾಂ ಸಪ್ತಪಾತಾಲವಾಸಿನಾಂ ॥ ೧೮ ॥
ನಾನಾನೃಪಸಹಸ್ರಾಣಾಂ ಘೋಷಣಾ ಕ್ರಿಯತಾಂ ಮುಹುಃ ।
ಸರ್ವೇಷಾಂ ಘೋಷಣಾ ಕಾರ್ಯಾ ಪ್ರಭಾಸಾಗಮನಂ ಪ್ರತಿ ॥ ೧೯ ॥
ಇತ್ಯುಕ್ತ್ವಾ ಮಂತ್ರಿಣಂ ತತ್ರ ಚಂದ್ರಮಾಸ್ತ್ವರಯಾನ್ವಿತಃ ।
ಬ್ರಹ್ಮಲೋಕಂ ಸ ಗತವಾನ್ ಯಜ್ಞಾರ್ಥಂ ಬ್ರಹ್ಮಣೋಽಂತಿಕಂ ॥ ೨೦ ॥

ಒಂದು ಕೋಟಿ ಸೈನ್ಯಗಳನ್ನೂ, ಬ್ರಾಹ್ಮಣರಿಗಾಗಿ ಅಗ್ನಿ ಶುದ್ಧವಾದ ಬಟ್ಟೆಗಳನ್ನೂ, ಪುರೋಹಿತರಿಗಾಗಿ ಮಂಗಳಕರವಾದ ದಿವ್ಯಭೂಷಣಗಳನ್ನೂ, ಬಗೆ ಬಗೆಯ ಭಕ್ಷ್ಯ, ಭೋಜ್ಯ, ಪಾನೀಯಗಳನ್ನೂ, ಒಂದು ಲಕ್ಷ ಕೆಲಸಗಾರರನ್ನೂ, ಒಂದು ಲಕ್ಷ ದಾಸಿಯರನ್ನೂ, ಕಟ್ಟಿಗೆ, ಬಿದಿರುಗಳನ್ನೂ, ಬ್ರಾಹ್ಮಣರು ಹೇಳುವ ಇತರ ವಸ್ತುಗಳನ್ನೂ ನನ್ನ ಅಪ್ಪಣೆಯಂತೆ ಅಲ್ಲಿಗೆ ತೆಗೆದುಕೊಂಡು ಹೋಗಿರಿ.

೧೮–೧೯. ದೇವತೆಗಳು, ದಾನವರು, ಯಕ್ಷ, ಗಂಧರ್ವ, ರಾಕ್ಷಸರು, ಸಪ್ತದ್ವೀಪದಲ್ಲಿಯೂ, ಸಪ್ತಪಾತಾಳದಲ್ಲಿಯೂ ನಿವಾಸಿಸುವ ಅನೇಕ ಮಂದಿ ರಾಜರು ಇವರೆಲ್ಲರಿಗೆ ಪ್ರಭಾಸಕ್ಷೇತ್ರಕ್ಕಾಗಮಿಸಬೇಕೆಂದು ಡಂಗುರಹಾಕಿಸಿರಿ.

೨೦. ಚಂದ್ರನು ಮಂತ್ರಿಗೆ ಹೀಗೆ ಆಜ್ಞಾಪಿಸಿ ತ್ವರೆಯಿಂದ ಯಜ್ಞಕ್ಕೆ ಕರೆಯುವುದಕ್ಕಾಗಿ ಬ್ರಹ್ಮಲೋಕದಲ್ಲಿರುವ ಬ್ರಹ್ಮನೆಡೆಗೆ ಹೋದನು.

ಸೋಽಪಿ ಚಂದ್ರಮಸೋ ಮಂತ್ರೀ ಹೇಮಗರ್ಭೋ ಮಹಾಪ್ರಭಃ ।
ಸೋಮಾಜ್ಞಾಂ ಶಿರಸಾ ಕೃತ್ವಾ ಯಜ್ಞಸಂಭಾರಸಂಭೃತಃ ॥ ೨೧ ॥
ಪ್ರಭಾಸಂ ಕ್ಷೇತ್ರಮಾಗತ್ಯ ಯಜ್ಞಾರ್ಥಂ ಯತ್ನವಾನಭೂತ್ ।
ತತ್ರೈವ ಚಾಽಽಹ್ವಯಾಂಚಕ್ರೇ ಭೂರ್ಭುವಸ್ಸ್ವರ್ನಿವಾಸಿನಃ ॥ ೨೨ ॥
ಶ್ರುತ್ವಾ ತು ಘೋಷಣಾಂ ಸರ್ವೇ ಶೀಘ್ರಂ ತತ್ರ ಸಮಾಯಯುಃ ।
ರವಿಯೋಜನಪರ್ಯಂತಂ ಕ್ಷೇತ್ರಮಾಲೋಕ್ಯ ತತ್ರ ತತ್ ॥ ೨೩ ॥
ಬ್ರಾಹ್ಮಣಾಂಶ್ಚ ಸಮಾಹೂಯ ಸೋಮಾಧ್ಯಕ್ಷ ಉವಾಚ ತಾನ್ ।
ಯಜ್ಞಾಂಗಂ ಸರ್ವಮಾನೀತಂ ಮಯಾ ಸೋಮಾಜ್ಞಯಾ ದ್ವಿಜಾಃ ॥
ಅನಂತರಂ ತು ಯತ್ಕೃತ್ಯಂ ಭವದ್ಭಿಸ್ತದ್ವಿಧೀಯತಾಂ ॥ ೨೪ ॥
ಇತ್ಯುಕ್ತಾ ಬ್ರಾಹ್ಮಣಾಃ ಸರ್ವೇ ತಪೋನಿರ್ಧೂತಕಲ್ಮಷಾಃ ।
ತತ್ರೈವ ದದೃಶುಃ ಸರ್ವೇ ತ್ವಷ್ಟಾರಂ ದೇವಶಿಲ್ಪಿನಂ ॥ ೨೫ ॥
ತಂ ದೃಷ್ಟ್ವಾ ತು ದ್ವಿಜಾಃ ಸರ್ವೇ ಲಿಂಗಂ ದೃಷ್ಟ್ವಾ ಸಮೀಪತಃ ।
ಕಥಮೇತದಿತಿ ಪ್ರೋಚುರ್ವಿಶ್ವಕರ್ಮನ್ ಬ್ರವೀಹಿ ನಃ ॥
ಕಸ್ಮಾದತ್ರ ಸ್ಥಿತಸ್ತ್ವಂ ವೈ ಶಿಲ್ಪಿಕೋಟಿಸಮನ್ವಿತಃ ॥ ೨೬ ॥

೨೧–೨೨. ಚಂದ್ರನ ಮಂತ್ರಿಯಾದ ಆ ಹೇಮಗರ್ಭನು ಪ್ರಭುವಿನ ಅಪ್ಪಣೆಯಂತೆ ಯಜ್ಞದ ಸಾಮಗ್ರಿಗಳೊಡನೆ ಪ್ರಭಾಸಕ್ಷೇತ್ರಕ್ಕೆ ಬಂದು ಯಜ್ಞಕ್ಕೆ ಪ್ರಯತ್ನಿಸಿದನು. ಹಾಗೆಯೇ ಭೂರ್ಭುವಸ್ಸ್ವರ್ಲೋಕದಲ್ಲಿ ವಾಸಿಸುವವರನ್ನು ಆಹ್ವಾನ ಮಾಡಿದನು

೨೩–೨೪. ಎಲ್ಲರೂ ಡಂಗುರದ ಧ್ವನಿಯನ್ನು ಕೇಳಿ ಶೀಘ್ರವಾಗಿ ಅಲ್ಲಿಗೆ ಬಂದರು. ಆಗ ಚಂದ್ರನ ಮಂತ್ರಿಯು ಹನ್ನೆರಡು ಯೋಜನ ವಿಸ್ತಾರವಾದ ಆ ಕ್ಷೇತ್ರವನ್ನು ಕಂಡು ಬ್ರಾಹ್ಮಣರನ್ನು ಕರೆದು ಅವರನ್ನು ಕುರಿತು ಹೀಗೆಂದನು. ದ್ವಿಜರೆ! ನಾನು ಚಂದ್ರನ ಆಜ್ಞೆಯಿಂದ ಯಜ್ಞದ ಸಾಮಗ್ರಿಗಳನ್ನೆಲ್ಲ ತಂದಿರುವೆನು. ಮುಂದಿನ ಕೆಲಸವನ್ನು ನೀವು ನೆರವೇರಿಸಿರಿ.

೨೫. ಅವನು ಹೀಗೆನ್ನಲು ತಪಸ್ಸಿನಿಂದ ಪಾಪವನ್ನು ಪರಿಹಾರ ಮಾಡಿಕೊಂಡ ಆ ಬ್ರಾಹ್ಮಣರು ಅಲ್ಲಿಯೇ ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನನ್ನು ಕಂಡರು.

೨೬. ಆ ಬ್ರಾಹ್ಮಣರು ಆ ವಿಶ್ವಕರ್ಮನ ಹತ್ತಿರವಿರುವ ಲಿಂಗವನ್ನು ಕಂಡು " ವಿಶ್ವಕರ್ಮ! ಇದೇನು? ನಮಗೆ ಹೇಳು. ನೀನು ಕೋಟಿ ಜನ ಶಿಲ್ಪಿಗಳೊಡನೆ ಏಕೆ ಇಲ್ಲಿರುವೆ " ?

ವಿಶ್ವಕರ್ಮೋವಾಚ:—

ಅಹಂ ಸೋಮನಿಯುಕ್ತಸ್ತು ಯುಕ್ತೋಽಸ್ಮಿ ಲಿಂಗರಕ್ಷಣೇ ।
ತದಾಜ್ಞಾಪಾಲನೇ ಯತ್ನಃ ಕ್ರಿಯತೇಽತೋ ಮಯಾ ದ್ವಿಜಾಃ ॥ ೨೭ ॥

ಈಶ್ವರ ಉವಾಚ:—

ಏವಂ ಶ್ರುತ್ವಾ ಯದಾ ವಿಪ್ರಾ ಜ್ಞಾತ್ವಾ ಸರ್ವಂ ತು ಕಾರಣಂ ।
ಚರಿತಾ ಯಜ್ಞಕಾರ್ಯಾರ್ಥಂ ತತಶ್ಚಕ್ರುರುಪಕ್ರಮಂ ॥ ೨೮ ॥
ತತ್ರ ಯೋಜನಪರ್ಯಂತಂ ದೇವಾನಾಂ ಯಜನಂ ಶುಭಂ ।
ತದ್ದೇವಯಜನಂ ಕೃತ್ವಾ ಪತ್ನೀಶಾಲಾಂ ಚ ಚಕ್ರಿರೇ ॥ ೨೯ ॥
ಹವಿರ್ಧಾನಂ ಸದಶ್ಚೈವ ಉತ್ತರಾವೇದಿರೇವ ಚ ।
ಬ್ರಹ್ಮಣಃ ಸದನಾಗ್ನೀಧ್ರೀತ್ಯೇವಂ ಸ್ಥಾನಾನಿ ಚಕ್ರಿರೇ ॥ ೩೦ ॥
ತತ್ರ ಯೋಜನಪರ್ಯಂತಂ ಯಜ್ಞಯೂಪಾಂಶ್ಚ ಮಂಡಪಾನ್ ।
ವಿಶ್ವಕರ್ಮಾ ಚಕಾರಾಽಽಶು ಕುಂಡಾನಿ ವಿವಿಧಾನಿ ಚ ॥ ೩೧ ॥
ಸಹಸ್ರಸಂಖ್ಯಯಾ ತತ್ರ ಕುಂಡಾನಾಂ ಮಂಡಪಾವಧಿ ।
ತತ್ರ ತೇ ಬ್ರಾಹ್ಮಣಾಃ ಸರ್ವೇ ಪ್ರತಿಷ್ಠಾಯಜ್ಞಕೋವಿದಾಃ ॥ ೩೨ ॥

---

೨೭. ವಿಶ್ವಕರ್ಮನು ಹೇಳುತ್ತಾನೆ:—ಬ್ರಾಹ್ಮಣರೆ! ಚಂದ್ರನು ಈ ಲಿಂಗವನ್ನು ರಕ್ಷಿಸುವುದಕ್ಕಾಗಿ ನನ್ನನ್ನು ನೇಮಿಸಿದ್ದಾನೆ. ನಾನು ಅವನ ಅಪ್ಪಣೆಯನ್ನು ನೆರವೇರಿಸಲು ಪ್ರಯತ್ನಿಸುತ್ತಿದ್ದೇನೆ.

೨೮. ಈಶ್ವರನು ಹೇಳುತ್ತಾನೆ:— ಬ್ರಾಹ್ಮಣರು ಅವನ ಮಾತನ್ನು ಕೇಳಿ ಸಕಲ ಕಾರಣಗಳನ್ನರಿತು ಯಜ್ಞ ಕಾರ್ಯವನ್ನು ಮಾಡ ತೊಡಗಿದರು.

೨೯. ಅಲ್ಲಿ ಒಂದು ಯೋಜನ ವಿಸ್ತೀರ್ಣದ ದೇವಯಜನವನ್ನೂ, ಪತ್ನೀಶಾಲೆಯನ್ನೂ ನಿರ್ಮಿಸಿದರು.

೩೦. ಹವಿರ್ಧಾನ, ಸದಸ್ಸು, ಉತ್ತರಾವೇದಿ, ಬ್ರಹ್ಮಸದನ, ಅಗ್ನೀಧ್ರೀ ಎಂಬ ಸ್ಥಾನಗಳನ್ನು ರಚಿಸಿದರು.

೩೧–೪೨. ವಿಶ್ವಕರ್ಮನು ಅಲ್ಲಿ ಒಂದು ಯೋಜನ ವಿಸ್ತೀರ್ಣದವರೆಗೆ ಯಜ್ಞಯೂಪಸ್ತಂಭಗಳನ್ನೂ, ಮಂಡಪಗಳನ್ನೂ, ಆ ಮಂಡಪದವರೆಗೆ ನಾನಾಬಗೆಯ ಅನೇಕ ಸಹಸ್ರ ಕುಂಡಗಳನ್ನೂ ನಿರ್ಮಿಸಲು ಪ್ರತಿಷ್ಠಾಯಜ್ಞಗಳಲ್ಲಿ ನಿಪುಣರಾದ ಬ್ರಾಹ್ಮಣರು ವಿವಿಧಾಭರಣ, ರತ್ನಗಳಿಂದ ಅಲಂಕಾರಗೊಂಡು ಪುನಃ ಪುನಃ ಶಾಸ್ತ್ರವನ್ನವಲೋಕಿಸಿ ವಿಧಿಯುಂತೆ ವೃಕ್ಷಗಳು, ದಿವ್ಯೌಷಧಿಗಳು, ಸಮಿತ್ತುಗಳು, ಪುಷ್ಪಗಳು.

ನಾನಾಭರಣರತ್ನೈಶ್ಚ ಬ್ರಾಹ್ಮಣಾಃ ಸಮಲಂಕೃತಾಃ ।
ಚಕ್ರುಃ ಸರ್ವೇ ಯಥಾನ್ಯಾಯಂ ಶಾಸ್ತ್ರಂ ದೃಷ್ಟ್ವಾ ಪುನಃ ಪುನಃ ॥ ೩೩ ॥
ವೃಕ್ಷಾಂಸ್ತಥೌಷಧೀರ್ದಿವ್ಯಾಃ ಸಮಿತ್ಪುಷ್ಪಕುಶಾದಿಕಾನ್ ।
ಹೋಮದ್ರವ್ಯಾದಿಕಂ ಸರ್ವಮಾಜ್ಯಂ ಪ್ರಾಜ್ಯಂ ನವಂ ಪಯಃ ॥ ೩೪ ॥
ತಥಾಽನ್ಯದಪಿ ಯತ್ಕಿಂಚಿದ್ಯಜ್ಞೋಪಕರಣಂ ಸ್ಮೃತಂ ।
ವರ್ಧನೀಕಲಶಾದ್ಯಂ ಚ ಸರ್ವಂ ಹೇಮಮಯಂ ಶುಭಂ ॥ ೩೫ ॥
ಚಕ್ರುಃ ಸರ್ವಂ ಯಥಾನ್ಯಾಯಂ ಪ್ರತಿಷ್ಠಾಮುಖಮಾದೃತಾಃ ।
ತತ್ರ ವಿಪ್ರಗಣೋ ಹೃಷ್ಟೋ ಭಕ್ಷ್ಯಭೋಜ್ಯಾದಿತರ್ಪಿತಃ ॥ ೩೬ ॥
ವೇದಧ್ವನಿತನಿರ್ಘೋಷೈರ್ದಿವಂ ಭೂಮಿಂ ಚ ಸಂಸ್ಪೃಶನ್ ।
ಶುಶುಭೇ ಮಂಡಪಸ್ತತ್ರ ಪತಾಕಾಭಿರಲಂಕೃತಃ ॥ ೩೭ ॥
ದಿವ್ಯಸಿಂಹಾಸನೋಪೇತೋ ಮುಕ್ತಾದಾಮಪರಿಷ್ಕೃತಃ ।
ದಿವ್ಯಚಂದನಮಾಲಾಭಿಃ ಕಲ್ಪಪಲ್ಲವತೋರಣೈಃ ॥ ೩೮ ॥
ದಿವ್ಯಗಂಧಸುಗಂಧಾದ್ಯೈಃ ಸ್ವರ್ಗಸ್ಥಾನಮಿವಾಭವತ್ ।
ಚತುರ್ದಶವಿಧಸ್ತತ್ರ ಭೂತಗ್ರಾಮಃ ಸಮಾಗತಃ ॥ ೩೯ ॥
ಸ್ಥಾವರಃ ಸರ್ಪಜಾತಿಶ್ಚ ಪಕ್ಷಿಜಾತಿಸ್ತಥೈವ ಚ ।
ಮೃಗಸಂಜ್ಞಶ್ಚತುರ್ಥಶ್ಚ ಪಶ್ವಾಖ್ಯಃ ಪಂಚಮಃ ಸ್ಮೃತಃ ॥ ೪೦ ॥
ಷಷ್ಠಶ್ಚ ಮಾನುಷಃ ಪ್ರೋಕ್ತಃ ಪೈಶಾಚಃ ಸಪ್ತಮಃ ಸ್ಮೃತಃ ।
ಅಷ್ಟಮೋ ರಾಕ್ಷಸಃ ಪ್ರೋಕ್ತೋ ನವಮೋ ಯಜ್ಞ ಏವ ಚ ॥ ೪೧ ॥
ಗಾಂಧರ್ವಃ ಶಾಕ್ರಸೌಮ್ಯಾಶ್ಚ ಪ್ರಾಜಾಪತ್ಯಸ್ತಥೈವ ಚ ।
ಬ್ರಾಹ್ಮಶ್ಚೇತಿ ಸಮಾಖ್ಯಾತಶ್ಚತುರ್ದಶವಿಧೋ ಗಣಃ ॥ ೪೨ ॥

ದರ್ಭೆಗಳು ಇವೇ ಮೊದಲಾದುವುಗಳನ್ನೂ, ಆಜ್ಯ, ಪ್ರಾಜ್ಯ, ಹಾಲು ಮೊದಲಾದ ಹೋಮದ್ರವ್ಯಗಳನ್ನೂ, ಸುವರ್ಣಮಯವಾದ ವರ್ಧನೀಕಲಶ ಮೊದಲಾದ ಯಜ್ಞ ಸಾಧನಗಳನ್ನೂ ಸಿದ್ಧಪಡಿಸಿದರು. ಆ ಬ್ರಾಹ್ಮಣರು ಭಕ್ಷ್ಯಭೋಜ್ಯಗಳಿಂದ ತೃಪ್ತಿಗೊಂಡು ಸಂತುಷ್ಟರಾಗಿ ವೇದಘೋಷದಿಂದ ಆಕಾಶ ಭೂಮಿಗಳನ್ನು ತುಂಬಿಸಿದರು. ಅಲ್ಲಿ ಮಂಡಪವು ಪತಾಕೆ, ದಿವ್ಯ ಸಿಂಹಾಸನ, ಮುತ್ತಿನಸರಗಳು, ದಿವ್ಯಚಂದನ, ಪುಷ್ಪಮಾಲೆ, ಕಲ್ಪವೃಕ್ಷದ ತಳಿರುತೋರಣ, ದಿವ್ಯಗಂಧದ ಸುವಾಸನೆ ಇವುಗಳಿಂದ ವಿರಾಜಿಸುತ್ತ ಸ್ವರ್ಗದಂತಾಯಿತು. ಅಲ್ಲಿ ಸ್ಥಾವರ, ವಸ್ತುಗಳು ಸರ್ಪಗಳು, ಪಕ್ಷಿಗಳು,ಮೃಗಗಳು, ಪಶುಗಳು, ಮನುಷ್ಯರು, ಪಿಶಾಚಗಳು, ರಾಕ್ಷಸರು, ಯಜ್ಞಗಳು, ಗಾಂಧರ್ವರು, ಶಾಕ್ರರು, ಸೌಮ್ಯರು, ಪ್ರಾಜಾಪತ್ಯರು, ಬ್ರಾಹ್ಮರು ಎಂಬ ಹದಿನಾಲ್ಕು ವಿಧ ಭೂತಸ್ತೋಮವು ಸೇರಿತು.

ವಿಶ್ವೇದೇವಾಸ್ತಥಾ ಸಾಧ್ಯಾ ಮರುತೋ ವಸವಸ್ತಥಾ ।
ಲೋಕಪಾಲಾಸ್ತಥಾಽಷ್ಟೌ ಚ ನಕ್ಷತ್ರಾಣಿ ಗ್ರಹೈಃ ಸಹ ॥ ೪೩ ॥
ಬ್ರಹ್ಮಾಂಡೇ ದೇವತಾ ಯಾಶ್ಚ ತಾಃ ಸರ್ವಾಸ್ತತ್ರ ಚಾಽಽಗತಾಃ ।
ಹೃಷ್ಟಾಃ ಪ್ರಭಾಸಕೇ ಕ್ಷೇತ್ರೇ ಪ್ರಾರಬ್ಧೇ ಯಜ್ಞಕರ್ಮಣಿ ॥ ೪೪ ॥
ಘೃತಕ್ಷೀರವಹಾ ನದ್ಯೋ ದಧಿಪಾಯಸಕರ್ದಮಾಃ ।
ಪಕ್ವಾನ್ನಾನಾಂ ಫಲಾನಾಂ ಚ ರಾಶಯಃ ಪರ್ವತೋಪಮಾಃ ॥ ೪೫ ॥
ದೃಶ್ಯಂತೇ ವಿವಿಧಾಕಾರಾಸ್ತಸ್ಮಿನ್ ಯಜ್ಞಮಹೋತ್ಸವೇ ।
ಜಗುಸ್ತತ್ರೈವ ಗಂಧರ್ವಾ ನನೃತುಶ್ಚಾಽಪ್ಸರೋಗಣಾಃ ॥ ೪೬ ॥
ಭಕ್ಷ್ಯಭೋಜ್ಯೈಶ್ಚ ವಿವಿಧೈಃ ಕಾಮಪಾನಾದಿಭಿಸ್ತಥಾ ।
ತೃಪ್ತಾ ದೇವಾಶ್ಚ ಮುನಯೋ ಭೂತಗ್ರಾಮಾಶ್ಚತುರ್ದಶ ॥ ೭ ॥
ಏವಂ ಸಂಭಾರಸಹಿತಂ ಯಜ್ಞಾಂಗಂ ಸರ್ವಮೇವ ಹಿ ।
ಪ್ರಗುಣೀಕೃತ್ಯ ಸಚಿವೋ ಮುಕ್ತ್ವಾ ತತ್ರೈವ ರಕ್ಷಕಾನ್ ।
ಸೋಮಸ್ಯಾಹ್ವಾನನಾರ್ಥಂ ಚ ಬ್ರಹ್ಮಲೋಕಂ ಜಗಾಮ ಹ ॥ ೪೮ ।

ಈಶ್ವರ ಉವಾಚ :—

ಸ ದೃಷ್ಟ್ವಾ ಬ್ರಹ್ಮಣಃ ಪಾರ್ಶ್ವೇ ಸ್ಥಿತಂ ಸೋಮಂ ಮಹಾಪ್ರಭಂ ।
ಪ್ರಣಮ್ಯ ದಂಡವದ್ಭೂಮೌ ಸೋಮಂ ಬ್ರಹ್ಮಾಣಮೇವ ಚ ॥ ೪೯ ॥

೪೩–೪೪. ಆ ಪ್ರಭಾಸಕ್ಷೇತ್ರದಲ್ಲಿ ಯಜ್ಞವು ಆರಂಭವಾಗಲು ವಿಶ್ವೇದೇವರು, ಸಾಧ್ಯರು, ಮರುತ್ತುಗಳು. ವಸುಗಳು, ಅಷ್ಟದಿಕ್ಪಾಲಕರು, ನಕ್ಷತ್ರಗಳು, ಗ್ರಹಗಳು, ಬ್ರಹ್ಮಾಂಡದಲ್ಲಿರುವ ಸಕಲ ದೇವತೆಗಳೂ ಎಲ್ಲರೂ ಅಲ್ಲಿಗೆ ಬಂದರು.

೪೫–೪೬. ಆ ಯಜ್ಞಮಹೋತ್ಸವದಲ್ಲಿ ನಾನಾಕಾರವಾದ ತುಪ್ಪ, ಹಾಲು ಗಳನ್ನು ಧರಿಸಿರುವ, ಮೊಸರು, ಪಾಯಸಗಳೆಂಬ ಕೆಸರುಳ್ಳ ನದಿಗಳೂ, ಪರ್ವತದಂತಿರುವ ಪಕ್ವಾನ್ನಗಳ ಮತ್ತು ಫಲಗಳ ರಾಶಿಗಳೂ ವಿರಾಜಿಸಿದುವು. ಗಂಧರ್ವರು ಹಾಡಿದರು. ಅಪ್ಸರೆಯರು ಕುಣಿದರು.

೪೭. ದೇವತೆಗಳು, ಮುನಿಗಳೇ ಅಲ್ಲದೆ ಹದಿನಾಲ್ಕು ಬಗೆಯ ಭೂತಗಳು ಸಹ ಭಕ್ಷ್ಯಭೋಜ್ಯ, ಇಷ್ಟವಾದ ಪಾನೀಯಗಳಿಂದ ತೃಪ್ತಿಗೊಂಡರು.

೪೮. ಚಂದ್ರನ ಮಂತ್ರಿಯು ಹೀಗೆ ಸಾಮಗ್ರಿಗಳಿಂದ ಕೂಡಿದ ಸಕಲ ಯಜ್ಞಾಂಗಗಳನ್ನು ಸಜ್ಜುಗೊಳಿಸಿ ಅದನ್ನು ರಕ್ಷಿಸಲು ರಕ್ಷಕರನ್ನು ನೇಮಿಸಿ ಚಂದ್ರನನ್ನು ಕರೆಯುವುದಕ್ಕಾಗಿ ಬ್ರಹ್ಮಲೋಕಕ್ಕೆ ತೆರಳಿದನು.

೪೯. ಈಶ್ವರನು ಹೇಳುತ್ತಾನೆ :—ಆ ಚಂದ್ರನ ಸಚಿವನು ಬ್ರಹ್ಮನ ಪಾರ್ಶ್ವದಲ್ಲಿರುವ ಅತ್ಯಂತ ಕಾಂತಿಯುಳ್ಳ ಚಂದ್ರನನ್ನೂ, ಬ್ರಹ್ಮನನ್ನೂ ಕಂಡು ಸಾಷ್ಟಾಂಗ ಪ್ರಣಾಮ ಮಾಡಿ ತಲೆತಗ್ಗಿಸಿ ಕೈಮುಗಿದು ಇಂತೆಂದನು.

ಕೃತಾಂಜಲಿಪುಟೋ ಭೂತ್ವಾ ಉವಾಚ ನತಕಂಧರಃ ।

ಹೇಮಗರ್ಭ ಉವಾಚ :—

ಭಗವನ್ಭವದಾದೇಶಾದ್ಯಜ್ಞಾಂಗಂ ಸರ್ವಮೇವ ಹಿ ॥ ೫೦ ॥
ತತ್ರ ಪ್ರಾಭಾಸಿಕೇ ಕ್ಷೇತ್ರೇ ಮಯಾ ತೇ ಪ್ರಗುಣೀಕೃತಂ ।
ತತ್ರ ಬ್ರಹ್ಮರ್ಷಯಃ ಸರ್ವೇ ತಥಾ ರಾಜರ್ಷಯೋಽಪರೇ ॥ ೫೧ ॥
ತ್ವನ್ಮಾರ್ಗಪ್ರೇಕ್ಷಕಾಃ ಸರ್ವೇ ಸಂತಿಷ್ಠಂತೇ ಸಮಾಕುಲಾಃ ।
ಅನಂತರಂ ತು ಯತ್ಕೃತ್ಯಂ ತದ್ಭವಾನ್ಕರ್ತುಮರ್ಹಸಿ ॥ ೫೨ ॥

ಈಶ್ವರ ಉವಾಚ :—

ಇತ್ಯುಕ್ತಸ್ತು ತದಾ ಚಂದ್ರಃ ಸಮುದ್ರಸ್ಯ ಸುತೇನ ವೈ ।
ಪ್ರಹಸ್ಯೋವಾಚ ಬ್ರಹ್ಮಾಣಂ ಚಂದ್ರಮಾ ಲೋಕಸಾಕ್ಷಿಣಂ ॥ ೫೩ ॥
ಭಗವನ್ ಸರ್ವದೇವೇಶ ಮಮಾನುಗ್ರಹಕಾಮ್ಯಯಾ ।
ಪ್ರತಿಷ್ಠಾಯಜ್ಞಕಾಮಸ್ಯ ಮಮಾತಿಥ್ಯಂ ಕುರು ಪ್ರಭೋ ॥ ೫೪ ॥
ಅದ್ಯ ಮೇ ಸಫಲಂ ಜನ್ಮ ಸಫಲಂ ಚ ತಪಃ ಪ್ರಭೋ ।
ದೇವತ್ವಮದ್ಯ ಮೇ ಬ್ರಹ್ಮನ್ ತ್ವತ್ಪ್ರಸಾದಧ್ಭವಿಷ್ಯತಿ ॥ ೫೫ ॥
ಮಯಾ ಚ ತಪಸೋಗ್ರೇಣ ಪ್ರಾಪ್ತಂ ಲಿಂಗಮುಮಾಪತೇಃ ।
ತತ್ಪ್ರತಿಷ್ಠಾವಿಧಿಂ ಸರ್ವಂ ತದ್ಭವಾನ್ ಕರ್ತುಮರ್ಹಸಿ ॥ ೫೬ ॥

೫೦–೫೨. ಹೇಮಗರ್ಭನು ಹೇಳುತ್ತಾನೆ :—ಪೂಜ್ಯನೆ ! ನಿನ್ನ ಅಪ್ಪಣೆಯಿಂದ ಆ ಪ್ರಭಾಸಕ್ಷೇತ್ರದಲ್ಲಿ ನಾನು ಸಕಲ ಯಜ್ಞಾಂಗಗಳನ್ನೂ ಸಿದ್ಧಗೊಳಿಸಿರುವೆನು. ಬ್ರಹ್ಮರ್ಷಿಗಳೂ, ರಾಜರ್ಷಿಗಳೂ ನೆರೆದು ನಿನ್ನ ದಾರಿಯನ್ನು ನೋಡುತ್ತ ಉತ್ಸುಕರಾಗಿದ್ದಾರೆ. ಮುಂದೆ ಮಾಡಬೇಕಾದುದನ್ನು ನೀನು ನೆರವೇರಿಸು.

೫೩. ಈಶ್ವರನು ಹೇಳುತ್ತಾನೆ :—ಸಮುದ್ರನ ಮಗನಾದ ಹೇಮಗರ್ಭನು ಹೀಗೆನ್ನಲು ಚಂದ್ರನು ನಕ್ಕು ಲೋಕ ಸಾಕ್ಷಿಯಾದ ಬ್ರಹ್ಮನನ್ನು ಕುರಿತು ಇಂತೆಂದನು.

೫೪. "ಪೂಜ್ಯನಾದ ಬ್ರಹ್ಮನೆ ! ಪ್ರತಿಷ್ಠಾಯಜ್ಞವನ್ನು ಮಾಡಬಯಸುವ ನನಗೆ ಅನುಗ್ರಹಮಾಡಬೇಕೋಸುಗ ನನ್ನ ಆತಿಥ್ಯವನ್ನು ಸ್ವೀಕರಿಸು.

೫೫. ಸ್ವಾಮಿ! ಈ ದಿನ ನನ್ನ ಜನ್ಮವೂ, ತಪಸ್ಸೂ, ದೇವತ್ವವೂ ನಿನ್ನ ಅನುಗ್ರಹದಿಂದ ಸಫಲವಾದುವು.

೫೬. ನಾನು ಉಗ್ರತಪಸ್ಸಿನಿಂದ ಮಹೇಶ್ವರನ ಲಿಂಗವನ್ನು ಪಡೆದೆನು. ಅದನ್ನು ನೀನು ಪ್ರತಿಷ್ಠೆ ಮಾಡು.

ಬ್ರಹ್ಮೋವಾಚ :—

ಅವಶ್ಯಂ ತವ ಕರ್ತಾಽಸ್ಮಿ ಪ್ರತಿಷ್ಠಾಂ ಶಂಕರಾತ್ಮಿಕಾಂ ।
ತ್ವದಾರಾಧನಲಿಂಗೇ ತು ಸೋಮೇಶೇಽತಿವಿಶೇಷತಃ ॥ ೫೭ ॥
ಯೇ ಕೇಚಿದ್ಭವಿತಾರೋ ವಾ ಅತೀತಾ ಯೇ ನಿಶಾಕರಾಃ ।
ತೇಷಾಂ ಸೋಮಾನ್ವಯಾನಾಂ ಚ ಸರ್ವೇಷಾಮಾದ್ಯದೈವತಂ ॥ ೫೮ ॥
ಯೋಽಸೌ ಸೋಮೇಶ್ವರೋ ದೇವ ಆದೌ ಭೈರವನಾಮಭೃತ್ ।
ಮನ್ವಂತರಾಂತರೇಽತೀತೇ ಪ್ರತಿಷ್ಠೇಽಹಂ ಪುನಃಪುನಃ ॥ ೫೯ ॥
ಯದಾ ಪ್ರಾಭಾಸಿಕೇ ಕ್ಷೇತ್ರೇ ಗತೋಽಹಂ ಚಾಷ್ಟವಾರ್ಷಿಕಃ ।
ಆಹೂತಃ ಪೂರ್ವಮಿಂದ್ರೇಣ ಭೈರವಸ್ಯ ಪ್ರತಿಷ್ಠಿತೇ ॥ ೬೦ ॥
ತತ್ಪ್ರಭೃತ್ಯೇವ ಮೇ ನಾಮ ಬಾಲರೂಪೀ ನಿಗದ್ಯತೇ ।
ಅನ್ಯೇಷು ಸರ್ವತೀರ್ಥೇಷು ವೃದ್ಧರೂಪೀ ವಸಾಮ್ಯಹಂ ॥ ೬೧ ॥
ಪ್ರಭಾಸೇ ತು ಪುನಶ್ಚಂದ್ರ ಬಾಲ್ಯಾತ್ಪ್ರಭೃತಿ ಸಂವಸೇ ।
ಬ್ರಹ್ಮಾಂಡೇ ಯಾನಿ ತೀರ್ಥಾನಿ ಬ್ರಾಹ್ಮಣಾಸ್ತೇಷು ಯೇ ಸ್ಮೃತಾಃ ॥ ೬೨ ॥
ತೇಷಾಮಾದ್ಯೋ ನಿಶಾನಾಥ ಪ್ರಭಾಸೇಽಹಂ ವ್ಯವಸ್ಥಿತಃ ।
ಕಲ್ಪೇ ಕಲ್ಪೇನಿಶಾನಾಥ ಮಮ ನಾಮಾಂತರಂ ಭವೇತ್ ॥ ೬೩ ॥

---

೫೭. ಬ್ರಹ್ಮನು ಹೇಳುತ್ತಾನೆ:—ನಿನಗೆ ಅತ್ಯಂತ ಮುಖ್ಯವಾಗಿ ಆರಾಧ್ಯವಾದ ಈ ಸೋಮೇಶಲಿಂಗದಲ್ಲಿ ಶಂಕರನನ್ನು ಅವಶ್ಯವಾಗಿ ನಾನು ಪ್ರತಿಷ್ಠೆ ಮಾಡುವೆನು.

೫೮. ಈ ಸೋಮೇಶ್ವರನು ಹಿಂದಿನ ಮತ್ತು ಮುಂದಿನ ಚಂದ್ರರಿಗೆ ಆದಿ ದೇವತೆಯು.

೫೯. ಈ ಸೋಮೇಶ್ವರನು ಮೊದಲು ಭೈರವನೆಂದು ಹೆಸರನ್ನು ಧರಿಸಿರುವನು. ಮನ್ವಂತರವು ಕಳೆಯಲು ನಾನು ಮರಳಿ ಇವನನ್ನು ಪ್ರತಿಷ್ಠೆ ಮಾಡುವೆನು.

೬೦. ಪ್ರಭಾಸಕ್ಷೇತ್ರದಲ್ಲಿ ಭೈರವನನ್ನು ಪ್ರತಿಷ್ಠೆ ಮಾಡಲೋಸುಗ ಇಂದ್ರನು ನನ್ನನು ಕರೆಯಲು ಎಂಟುವರ್ಷ ವಯಸ್ಸಿನ ನಾನು ಅಲ್ಲಿಗೆ ಹೋದೆನು.

೬೧. ಅದು ಮೊದಲ್ಗೊಂಡು ನನಗೆ ಬಾಲರೂಪಿಯೆಂದು ಹೆಸರಾಯಿತು. ಇತರ ಸಕಲ ತೀರ್ಥಗಳಲ್ಲಿ ನಾನು ವೃದ್ಧನ ರೂಪವುಳ್ಳವನಾಗಿರುವೆನು.

೬೨–೬೩. ಚಂದ್ರ! ನಾನು ಪ್ರಭಾಸಕ್ಷೇತ್ರದಲ್ಲಿ ಬಾಲ್ಯದಿಂದ ವಾಸಿಸುತ್ತಿರುವೆನು. ಬ್ರಹ್ಮಾಂಡದಲ್ಲಿರುವ ಸಕಲ ತೀರ್ಥಗಳಲ್ಲಿ ವಾಸಿಸುತ್ತಿರುವ ಬ್ರಾಹ್ಮಣರಿಗೆ ಪ್ರಭಾಸ ದಲ್ಲಿರುವ ನಾನು ಮೊದಲನೆಯವನು. ಪ್ರತಿಕಲ್ಪಗಳಲ್ಲಿಯೂ ನನಗೆ ಬೇರೆ ಬೇರೆ ಹೆಸರುಗಳಾಗುವುವು.

ಸ್ವಯಂಭೂಃ ಪ್ರಥಮೋ ನಾಮ ದ್ವಿತೀಯೋ ಪದ್ಮಭೂಃ ಸ್ಮೃತಃ ।
ತೃತೀಯೋ ವಿಶ್ವಕರ್ತೇತಿ ಬಾಲರೂಪೀ ತುರೀಯಕೇ ॥ ೬೪ ॥
ಏಷಾಮೇವ ಪರಿವರ್ತೋ ನಾಮ್ನಾಂ ಭಾವಿ ಪುನಃಪುನಃ ।
ಪರಾರ್ಧದ್ವಯಪರ್ಯಂತಂ ಪ್ರಭಾಸೇ ಸಂಸ್ಥಿತಸ್ಯ ಮೇ ॥ ೬೫ ॥
ಆದಿಸೋಮೇನ ತತ್ರೈವ ಶಂಭೋರ್ನೇತ್ರೋದ್ಭವೇನ ವೈ ॥
ಪ್ರಭಾಸೇ ತು ತಪಸ್ತಪ್ತ್ವಾ ಪ್ರತ್ಯಕ್ಷೀಕೃತ ಈಶ್ವರಃ ॥ ೬೬ ॥
ತತೋ ದದೌ ವರಂ ತುಷ್ಟಃ ಪೂರ್ವಚಂದ್ರಸ್ಯ ಶೂಲಧೃಕ್ ।
ಯಸ್ಮಾದಾರಾಧಿತೋಽಹಂ ತೇ ಸೋಮ ಭಕ್ತ್ಯಾ ಚಿರಂತನಂ ॥ ೬೭ ॥
ತಸ್ಮಾತ್ಸೋಮೇಶನಾಮ್ನೈವಮಸ್ಮಿಂಲ್ಲಿಂಗೇ ಭವಿಷ್ಯತಿ ॥
ಯಾವದ್ಬ್ರಹ್ಮಾ ಶತಾನಂದಃ ಪ್ರಕೃತೌ ನ ಪ್ರಲೀಯತೇ ॥ ೬೮ ॥
ಯೇ ಕೇಚಿದ್ಭವಿತಾರೋ ವೈ ರಾತ್ರಿನಾಥಾ ನಿಶಾಕರಾಃ ।
ತೇ ಮದಾರಾಧನಂ ಚಾಽತ್ರ ಕರಿಷ್ಯಂತಿ ಪುನಃಪುನಃ ॥ ೬೯ ॥
ಇತ್ಯುಕ್ತ್ವಾ ಭಗವಾಂಛಂಭುಸ್ತತ್ರೈವಾಽಂತರಧೀಯತ ।
ತಸ್ಮಿನ್ಕಾಲೇ ಮಯಾ ಸೋಮ ಆದ್ಯಂ ಲಿಂಗಂ ಪ್ರತಿಷ್ಠಿತಂ ॥ ೭೦ ॥

---

೬೪. ಪ್ರಥಮಕಲ್ಪದಲ್ಲಿ ನನಗೆ ಸ್ವಯಂಭೂ ಎಂದೂ, ದ್ವಿತೀಯಕಲ್ಪದಲ್ಲಿ ಪದ್ಮಭೂ ಎಂದೂ, ಮೂರನೆಯ ಕಲ್ಪದಲ್ಲಿ ವಿಶ್ವಕರ್ತಾ ಎಂದೂ, ನಾಲ್ಕನೆಯ ಕಲ್ಪದಲ್ಲಿ ಬಾಲರೂಪಿಯೆಂದೂ, ಹೆಸರಾಗುವುದು.

೬೫. ಪ್ರಭಾಸಕ್ಷೇತ್ರದಲ್ಲಿ ಎರಡು ಪರಾರ್ಧಗಳವರೆಗೆ ಇರುವ ನನ್ನ ಈ ಹೆಸರುಗಳೇ ಮರಳಿ ಮರಳಿ ಬದಲಾಯಿಸುತ್ತಿರುವುವು.

೬೬. ಶಿವನ ನಯನದಿಂದ ಹುಟ್ಟಿರುವ ಮೊದಲಿನ ಚಂದ್ರನು ಪ್ರಭಾಸದಲ್ಲಿ ತಪಸ್ಸನ್ನು ಮಾಡಿ ಈಶ್ವರನನ್ನು ಪ್ರತ್ಯಕ್ಷಗೊಳಿಸಿದನು.

೬೭–೬೮. ತರುವಾಯ ಮೊದಲಿನ ಚಂದ್ರನಲ್ಲಿ ಸಂತುಷ್ಟನಾದ ಶಂಕರನು "ನೀನು ನನ್ನನ್ನು ಭಕ್ತಿಯಿಂದ ಬಹಳಕಾಲ ಪೂಜಿಸಿದ್ದರಿಂದ ಶತಾನಂದಬ್ರಹ್ಮನು ಪ್ರಕೃತಿಯಲ್ಲಿ ಲೀನನಾಗುವವರೆಗೆ ಈ ಲಿಂಗವು ಸೋಮೇಶನೆಂಬ ಹೆಸರುಳ್ಳುದಾಗುವುದು.

೬೯–೭೦. ಮುಂದಿನ ಚಂದ್ರರೂ ಇಲ್ಲಿ ನನ್ನ ಪೂಜೆಯನ್ನು ಮರಳಿಮಾಡುವರು" ಹೀಗೆಂದು ನುಡಿದು ಪೂಜ್ಯನಾದ ಶಂಕರನು ಅಲ್ಲಿಯೇ ಅಡಗಿ ಹೋದನು. ಆಗ ನಾನು ಮೊದಲಿನ ಲಿಂಗವನ್ನು ಪ್ರತಿಷ್ಠೆಮಾಡಿದೆನು.

ತದಾಪ್ರಭೃತಿ ಸೋಮಾನಾಂ ಲಕ್ಷಾಣಾಂ ದ್ವಿತಯಂ ಗತಂ ।
ಸಹಸ್ರದ್ವಿತಯಂ ಚೈವ ಶತಂ ಚೈಕಂ ಷಡುತ್ತರಂ ॥ ೭೧ ॥
ಸಪ್ತಮಸ್ತ್ವಂ ಮಹಾಬಾಹೋ ವರ್ತಸೇ ಸೋಮ ಸಾಂಪ್ರತಂ ।
ಏತಾವಂತ್ಯೇವ ಲಿಂಗಾನಿ ಪ್ರತಿಷ್ಠಾಂ ಸ್ಥಾಪಿತಾನಿ ಮೇ ॥ ೭೨ ॥
ಏಷ ಏವಾಽಧುನಾ ಸೋಽಹಂ ತದಾರಾಧನಜಂ ಫಲಂ ।
ಪ್ರತಿಷ್ಠಾತಾಽಸ್ಮಿ ಭದ್ರಂ ತೇ ಸೋಮ ಕೃತ್ಯಂ ಮಮೈವ ತತ್ ॥ ೭೩ ॥

ಈಶ್ವರ ಉವಾಚ :—

ಇತ್ಯುಕ್ತ್ವಾ ಭಗವಾನ್ ಬ್ರಹ್ಮಾ ವೇದವಿದ್ಯಾಸಮನ್ವಿತ ।
ಸರ್ವದೇವಮಯೋ ದೇವೈಃ ಸಹಿತಸ್ತೀರ್ಥಸಂಯುತಃ ॥ ೭೪ ॥
ಸನತ್ಕುಮಾರಪ್ರಮುಖೈರ್ಯೋಗೀಂದ್ರೈರೃಷಿಭಿಃ ಸಹ ।
ಬೃಹಸ್ಪತಿಂ ಸಮಾಹೂಯ ಪುರಸ್ಕೃತ್ಯ ಪುರೋಧಸಂ ॥ ೭೫ ॥
ಹಂಸಯಾನಂ ಸಮಾರುಹ್ಯ ಕೋಟಿಬ್ರಹ್ಮರ್ಷಿಭಿಃ ಸಹ ।
ಆಗತಃ ಸೋಮರಾಜೇನ ತದಾ ಬ್ರಹ್ಮಾ ಜಗತ್ಪತಿಃ ॥ ೭೬ ॥
ಪ್ರಾಭಾಸಿಕೇ ಮಹಾತೀರ್ಥೇ ಯತ್ರ ದಾರುವನಂ ಸ್ಮೃತಂ ।
ಋಷಿತೋಯಾ ನದೀ ಯತ್ರ ಮಹಾಪಾತಕನಾಶಿನೀ ॥ ೭೭ ॥

---

೭೧. ಅದು ಮೊದಲ್ಗೊಂಡು ಎರಡು ಲಕ್ಷದ ಎರಡು ಸಾವಿರದ ನೂರಾರು ಚಂದ್ರರು ಕಳೆದುಹೋದರು.

೭೨ ಚಂದ್ರ ! ಈಗ ನೀನು ಏಳನೆಯವನಾಗಿರುವೆ. ಇಷ್ಟು ಶಿವಲಿಂಗಗಳನ್ನೂ ನಾನು ಪ್ರತಿಷ್ಠೆ ಮಾಡಿದ್ದೇನೆ.

೭೩. ಈಗ ಅದೇ ನಾನು ಅವನ ಆರಾಧನೆಯ ಫಲವಾದ ಈ ಲಿಂಗವನ್ನು ಪ್ರತಿಷ್ಠೆ ಮಾಡುವೆನು. ಅದು ನನ್ನ ಕೆಲಸವೇ ಆಗಿರುವುದು.

೭೪–೭೭. ಈಶ್ವರನು ಹೇಳುತ್ತಾನೆ:—ಸಕಲ ದೇವಸ್ವರೂಪನಾದ ಬ್ರಹ್ಮನು ಹೀಗೆಂದು ನುಡಿದು ವೇದವಿದ್ಯೆ, ತೀರ್ಥಗಳು, ಸನತ್ಕುಮಾರ ಮೊದಲಾದ ಯೋಗಿಗಳು, ಋಷಿಗಳು, ಕೋಟಿ ಬ್ರಹ್ಮರ್ಷಿಗಳು ಚಂದ್ರ ಇವರೊಡನೆ ಬೃಹಸ್ಪತಿಯನ್ನು ಕರೆಯಿಸಿ ಪುರೋಹಿತನಾದ ಅವನನ್ನು ಮುಂದಿರಿಸಿಕೊಂಡು ಹಂಸವಾಹನವನ್ನೇರಿ ದಾರುವನವೂ, ಮಹಾಪಾತಕಗಳನ್ನು ನಾಶಗೊಳಿಸುವ ಋಷಿತೋಯಾ ನದಿಯೂ ಇರುವ ಪ್ರಭಾಸ ತೀರ್ಥಕ್ಕೆ ಬಂದನು.

ಅಸ್ಮಿಂಸ್ತೀರ್ಥೇ ಪ್ರಭಾಸೇ ತು ಬ್ರಹ್ಮಭಾಗಃ ಸ ಉಚ್ಯತೇ ।
ತ್ರಿದೈವತಮಿದಂ ಕ್ಷೇತ್ರಂ ಮಯಾ ತೇ ಕಥಿತಂ ಪ್ರಿಯೇ ॥ ೭೮ ॥
ತತ್ರಾಗತ್ಯ ಚತುರ್ವಕ್ತ್ರೋ ಬ್ರಹ್ಮಭಾಗೇऽತಿನಿರ್ಮಲೇ ।
ಮುನೀನಾಕಾರಯಾಮಾಸ ಉನ್ನತಸ್ಥಾನವಾಸಿನಃ ॥ ೭೯ ॥
ಆಯಾಂತಂ ವೇಧಸಂ ದೃಷ್ಟ್ವಾ ದೇವರ್ಷಿಗುರುಸಂಯುತಂ ।
ತೇ ಸರ್ವೇ ಪೂಜಯಾಮಾಸುಃ ಸಂಸ್ತವೈರ್ವೇದಸಮ್ಮಿತೈಃ ॥ ೮೦ ॥
ಅಥೋವಾಚ ದ್ವಿಜಾನ್ ಸರ್ವಾನ್ ಬ್ರಹ್ಮಾ ಲೋಕಪಿತಾಮಹಃ ।
ಚಿರಮಾರಾಧ್ಯ ಸೋಮೇನ ಸೋಮೇಶಂ ಪಾಪನಾಶನಂ ॥ ೮೧ ॥
ತಸ್ಮಿನ್ ಪ್ರಸನ್ನೇ ಸೋಮೇನ ಲಬ್ಧಂ ಲಿಂಗಮನುತ್ತಮಂ ।
ಪ್ರತಿಷ್ಠಾರ್ಥಂ ತು ದೇವಸ್ಯ ಆಯಾತಾ ದ್ವಿಜಸತ್ತಮಾಃ ॥ ೮೨ ॥
ಯಥಾ ಮಯಾ ಸದಾ ಕಾರ್ಯಾ ಪ್ರತಿಷ್ಠಾ ಶಂಕರಾತ್ಮಿಕಾ ।
ಭವದ್ಭಿಃ ಪರಿಕಾರ್ಯಾ ಸಾ ಮಮ ಭಾಗಸಮಾಶ್ರಯೈಃ ॥ ೮೩ ॥

---

೭೮. ಈ ಪ್ರಭಾಸಕ್ಷೇತ್ರದಲ್ಲಿ ಬ್ರಹ್ಮಭಾಗವೊಂದಿರುವುದು. ಪ್ರಿಯಳೆ! ಈ ಕ್ಷೇತ್ರವು ಮೂರು ದೇವತೆಗಳುಳ್ಳದೆಂದು ನಾನು ನಿನಗೆ ಹೇಳಿರುವೆನು.

೭೯. ಅತಿ ಶುದ್ಧವಾದ ಆ ಬ್ರಹ್ಮಭಾಗಕ್ಕೆ ಚತುರಾನನನು ಬಂದು ಉನ್ನತ ಸ್ಥಾನದಲ್ಲಿ ವಾಸಿಸುವ ಮುನಿಗಳನ್ನು ಕರೆಯಿಸಿದನು.

೮೦. ಆ ಮುನಿಗಳೆಲ್ಲ ದೇವರ್ಷಿ, ಬೃಹಸ್ಪತಿಗಳೊಡನೆ ಬರುತ್ತಿರುವ ಚತುರ್ಮುಖನನ್ನು ಕಂಡು ವೇದಕ್ಕೆ ಸಮಾನವಾದ ಸ್ತೋತ್ರಗಳಿಂದ ಅವನನ್ನು ಸ್ತುತಿಸಿದರು.

೮೧-೮೨. ಬಳಿಕ ಜಗತ್ತಿಗೆ ಪಿತಾಮಹನಾದ ಬ್ರಹ್ಮನು ಸಕಲ ಬ್ರಾಹ್ಮಣರನ್ನು ಕುರಿತು ಇಂತೆಂದನು. "ಚಂದ್ರನು ಅನೇಕ ವರ್ಷಕಾಲ ಪಾಪವನ್ನು ಪರಿಹರಿಸುವ ಸೋಮೇಶನನ್ನಾರಾಧಿಸಿ ಪ್ರಸನ್ನನಾದ ಅವನಿಂದ ಪಡೆದ ಲಿಂಗವನ್ನು ಪ್ರತಿಷ್ಠೆಮಾಡಲು ನೀವು ಬಂದಿದ್ದೀರಿ.

೮೩. ನಾನು ಯಾವಾಗಲೂ ಹೇಗೆ ಶಂಕರನ ಸನ್ನಿಧಾನವುಳ್ಳ ಲಿಂಗವನ್ನು ಪ್ರತಿಷ್ಠೆಮಾಡುವೆನೊ, ಹಾಗೆಯೇ ನನ್ನ ಭಾಗವನ್ನಾಶ್ರಯಿಸಿದ ನೀವೂ ನನ್ನನ್ನು ಅನುಸರಿಸಿ ಪ್ರತಿಷ್ಠೆ ಮಾಡಬೇಕು.

ಯತಃ ಕೋಪೇನ ಭವತಾಂ ಲಿಂಗಂ ಪ್ರಪತಿತಂ ಭುವಿ ।
ಪ್ರತಿಷ್ಠಾ ತಸ್ಯ ಕರ್ತವ್ಯಾ ಯುಷ್ಮಾಭಿರ್ನ್ಯ ನ ಸಂಶಯಃ ॥ ೮೪ ॥

ಈಶ್ವರ ಉವಾಚ :—

ಗೃಹೀತ್ವಾಽಥ ಮುನೀನ್ ಸರ್ವಾನ್ ಬ್ರಹ್ಮಾ ಲೋಕಪಿತಾಮಹಃ ।
ಆನೀತಃ ಸೋಮರಾಜೇನ ತದಾ ಬ್ರಹ್ಮಾ ಜಗತ್ಪತಿಃ ॥ ೮೫ ॥
ಪ್ರಾಭಾಸಿಕೇ ಮಹಾತೀರ್ಥೇ ಸಾವಿತ್ರ್ಯಾ ಸಹಿತಃ ಪ್ರಭುಃ ।
ಕಾರಯಾಮಾಸ ಕುಂಡಾನಾಂ ಮಂಡಪಾನಾಂ ಶತಂಶತಂ ॥ ೮೬ ॥
ಏಕೈಕೇ ಮಂಡಪೇ ತತ್ರ ಚಕ್ರೇ ಸಪ್ತದಶರ್ತ್ವಿಜಃ ।
ಗುರುಣಾ ಪ್ರೇರಿತೋ ಬ್ರಹ್ಮಾ ತತ್ರ ದೇವಪುರೋಧಸಾ ॥ ೮೭ ॥
ಪಾರ್ಶ್ವೇ ಸ್ಥಿತಸ್ತದಾ ಬ್ರಹ್ಮಾ ವಿಧಾನೈರ್ವೇದಭಾಷಿತೈಃ ।
ದೀಕ್ಷಯಾಮಾಸ ಸೋಮಂ ತು ರೋಹಿಣ್ಯಾ ಸಹಿತಂ ವಿಭುಂ ॥ ೮೮ ॥
ಪತ್ನೀಂ ಚ ರೋಹಿಣೀಂ ಕೃತ್ವಾ ಸರ್ವಲಕ್ಷಣಸಂಯುತಾಂ ।
ಮೃಗಚರ್ಮಧರಾಂ ದೇವೀಂ ಕ್ಷೌಮವಸ್ತ್ರಾವಗುಂಠಿತಾಂ ॥ ೮೯ ॥
ಪತ್ನೀಶಾಲಾಂ ಸಮಾನೀತಾ ಋತ್ವಿಗ್ಭಿರ್ವೇದಪಾರಗೈಃ ।
ಚಂದ್ರಮಾ ದೀಕ್ಷಯಾ ಯುಕ್ತ ಋಷಿಗಂಧರ್ವಸಂಸ್ತುತಃ ॥ ೯೦ ॥

---

೮೪. ನಿಮ್ಮ ಕೋಪದಿಂದ ಭೂಮಿಯಲ್ಲಿ ಬಿದ್ದ ಲಿಂಗವನ್ನು ನೀವು ನಿಶ್ಚಯ ವಾಗಿಯೂ ಪ್ರತಿಷ್ಠೆಮಾಡಬೇಕು."

೮೫—೮೬. ಈಶ್ವರನು ಹೇಳುತ್ತಾನೆ:—ಬಳಿಕ ಜಗದೊಡೆಯನಾದ ಬ್ರಹ್ಮನು ಸಕಲ ಮುನಿಗಳೊಡನೆಯೂ, ಚಂದ್ರನೊಡನೆಯೂ ಅಲ್ಲಿಗೆ ಬಂದು ಆ ಪ್ರಾಭಾಸಿಕ ತೀರ್ಥದಲ್ಲಿ ಸಾವಿತ್ರಿಯೊಡನೆ ನೂರು ಕುಂಡಗಳನ್ನೂ, ಮಂಡಪಗಳನ್ನೂ ಮಾಡಿಸಿದನು.

೮೭. ಅವನು ದೇವತೆಗಳ ಪುರೋಹಿತನಾದ ಬೃಹಸ್ಪತಿಯು ಹೇಳಿದಂತೆ ಒಂದೊಂದು ಮಂಡಪದಲ್ಲಿ ಏಳೇಳು ಮಂದಿ ಋತ್ವಿಜರನ್ನು ನೇಮಿಸಿದನು.

೮೮. ಚಂದ್ರನ ಪಾರ್ಶ್ವದಲ್ಲಿದ್ದು ವೇದೋಕ್ತ ವಿಧಿಗಳಿಂದ ರೋಹಿಣಿಯೊಡನೆ ಚಂದ್ರನನ್ನು ದೀಕ್ಷೆಗೊಳಿಸಿದನು.

೮೯—೯೧. ವೇದಪಾರಂಗತರಾದ ಋತ್ವಿಜರು ಸಮಸ್ತ ಲಕ್ಷಣಗಳಿಂದ ಕೂಡಿದ ರೋಹಿಣೀದೇವಿಗೆ ಜಿಂಕೆಚರ್ಮವನ್ನುಡಿಸಿ ಕ್ಷೌಮವಸ್ತ್ರವನ್ನು ಹೊದ್ದಿಸಿ ಅವಳನ್ನು

ಔದುಂಬರೇಣ ದಂಡೇನ ಸಂವೃತೋ ಮೃಗಚರ್ಮಣಾ ।
ಅತೀವ ತೇಜಸಾ ಯುಕ್ತಃ ಶುಶುಭೇ ಸದಸಿ ಸ್ಥಿತಃ ॥ ೯೧ ॥
ತತೋ ಬ್ರಹ್ಮಾ ಮಹಾದೇವಿ ಸರ್ವಲೋಕಪಿತಾಮಹಃ ।
ಋತ್ವಿಜಾಂ ವರಣಂ ಚಕ್ರೇ ವೇದೋಕ್ತವಿಧಿನಾ ತದಾ ॥ ೯೨ ॥
ಗುರುರ್ಹೋತಾ ವೃತಸ್ತತ್ರ ವಸಿಷ್ಠೋಽಧ್ವರ್ಯುರೇವ ಚ ।
ತತ್ರೋದ್ಗಾತಾ ಮರೀಚಿಸ್ತು ಬ್ರಹ್ಮತ್ವೇ ನಾರದಃ ಕೃತಃ ॥ ೯೩ ॥
ಸನತ್ಕುಮಾರಸಂಯುಕ್ತಾಃ ಸದಸ್ಯಾಸ್ತತ್ರ ವೈ ಕೃತಾಃ ।
ವಸ್ತ್ರೈರಾಭರಣೈರ್ಯುಕ್ತಾ ಮುಕುಟೈರಂಗುಲೀಯಕೈಃ ॥ ೯೪ ॥
ಭೂಷಿತಾ ಭೂಷಣೌಘೇನ ತಸ್ಮಿನ್ ಯಜ್ಞೇ ತದರ್ತ್ವಿಜಃ ।
ಚತುರ್ಷು ತಜ್‌ಜ್ಞಾಶ್ಚತ್ವಾರ ಏವಂ ತೇ ಷೋಡಶರ್ತ್ವಿಜಃ ॥ ೯೫ ॥
ಪ್ರಸ್ತೋತಾ ಕಶ್ಯಪಸ್ತತ್ರ ಪ್ರತಿಹರ್ತಾ ತು ಗಾಲವಃ ।
ಸುಬ್ರಹ್ಮಣ್ಯಸ್ತಥಾ ಗರ್ಗಃ ಸದಸ್ಯಃ ಪುಲಹಃ ಕೃತಃ ॥ ೯೬ ॥
ಹೋತಾ ಶುಕ್ರಃ ಸಮಾಖ್ಯಾತೋ ನೇಷ್ಟಾ ಕ್ರಥ ಉದಾಹೃತಃ ।
ಮೈತ್ರಾವರುಣೋ ದುರ್ವಾಸಾ ಬ್ರಾಹ್ಮಣಾಚ್ಛಂಸೀ ಕೌಶಿಕಃ ॥ ೯೭ ॥
ಅಚ್ಛಾವಾಕಶ್ಚ ಶಾಕಲ್ಯೋ ಗ್ರಾವಸ್ಥಃ ಕ್ರತುರೇವ ಚ ।
ಪ್ರಸ್ಥಾತಾ ಪ್ರತಿಪೂರ್ವೋ ಯಃ ಶಾಲಂಕಾಯನ ಏವ ಚ ॥ ೯೮ ॥

ಪತ್ನೀಶಾಲೆಗೆ ಕರೆತಂದರು. ದೀಕ್ಷಾಬದ್ಧನಾದ ಚಂದ್ರನು ಋಷಿ, ಗಂಧರ್ವರಿಂದ ಸುತ್ತಿಸಲ್ಪಡುತ್ತ ಅತ್ತಿಯ ದಂಡವನ್ನು ಹಿಡಿದು ಜಿಂಕೆ ಚರ್ಮವನ್ನು ಧರಿಸಿ ಅತ್ಯಂತ ತೇಜಸ್ಸಿನಿಂದ ಸದಸ್ಸಿನಲ್ಲಿ ವಿರಾಜಿಸಿದನು.

೯೨. ತರುವಾಯ ಚತುರ್ಮುಖನು ವೇದೋಕ್ತಕ್ರಮದಿಂದ ಋತ್ವಿಜರ ವರಣವನ್ನು ಮಾಡಿದನು.

೯೩–೯೫. ಆ ವರಣ ಕ್ರಮದಲ್ಲಿ ಬೃಹಸ್ಪತಿಯು ಹೋತೃವೂ, ವಸಿಷ್ಠನು ಅಧ್ವರ್ಯುವೂ, ಮರೀಚಿಯು ಉದ್ಗಾತೃವೂ, ನಾರದನುಬ್ರಹ್ಮನೂ, ಸನತ್ಕುಮಾರರೇ ಮೊದಲಾದವರು ಸದಸ್ಯರೂ, ಆದರು. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಜನ ಋತ್ವಿಜರೂ ಸೇರಿ ಹದಿನಾರು ಜನ ಋತ್ವಿಜರು ವಸ್ತ್ರ, ಆಭರಣ, ಕಿರೀಟ, ಉಂಗುರ ಇವುಗಳಿಂದ ಅಲಂಕಾರಗೊಂಡು ಆ ಯಜ್ಞದಲ್ಲಿ ವಿರಾಜಿಸಿದರು.

೯೬–೯೯. ಮತ್ತೊಂದು ಮಂಡಪದಲ್ಲಿ ಕಶ್ಯಪನು ಪ್ರಸ್ತೋತೃವೂ, ಗಾಲವನು ಪ್ರತಿಹರ್ತೃವೂ, ಗರ್ಗನು ಸುಬ್ರಹ್ಮಣ್ಯನೂ, ಪುಲಹನು ಸದಸ್ಯನೂ, ಶುಕ್ರನು,

ಅಗ್ನೀಧ್ರಶ್ಚ ಮನುಸ್ತತ್ರ ಉನ್ನೇತಾ ತ್ವಂಗಿರಾಃ ಕೃತಃ ।
ಏವಮಾದ್ಯಾನ್ ಮಂಡಪೇಷು ಕೃತ್ವಾ ತಾನೃತ್ವಿಜಃ ಪ್ರಭುಃ ॥ ೯೯ ॥
ಅನ್ಯೇಷು ಮಂಟಪೇಷ್ವೇವ ಪ್ರತ್ಯೇಕಮೃತ್ವಿಜಃ ಕೃತಾಃ ।
ಮಂಡಪಾನಾಂ ಶತೇಷ್ವೇವ ಕೃತ್ವಾ ಕುಂಡಾನ್ಯಕಲ್ಪಯತ್ ॥ ೧೦೦ ॥
ಏಕೈಕೋ ಮಂಡಪಸ್ತತ್ರ ವಿಂಶಹಸ್ತಪ್ರಮಾಣತಃ ।
ಅಸ್ತ್ರೇಣಾಶೋಧ್ಯ ಭೂಮಿಂ ತು ಪಂಚಗವ್ಯೇನ ಪ್ರೋಕ್ಷ್ಯ ಚ ॥ ೧೦೧ ॥
ಚರ್ಮಣಾ ಚಾಽವಗುಂಠ್ಯೈವ ಆಲಿಖ್ಯಾಽಸ್ತ್ರೇಣ ಪಾರ್ವತಿ ।
ಉಲ್ಲಿಖ್ಯ ಪ್ರೋಕ್ಷಣಂ ಕೃತ್ವಾ ಖಾತಂ ಕೃತ್ವಾ ವಿಧಾನತಃ ॥ ೧೦೨ ॥
ಅಷ್ಟೌ ಕುಂಡಾನಿ ಸಂಕಲ್ಪ್ಯ ತಥೈಕಮಂಡಪೇ ಪ್ರಿಯೇ ।
ಲೇಪನಂ ಮಂಡಪೇ ಕೃತ್ವಾ ವಜ್ರಾಕರಣಮೇವ ಚ ॥ ೧೦೩ ॥
ಚತುರಸ್ರಕಾರ್ಮುಕಂ ಚ ವರ್ತುಲಂ ಕಮಲಾಕೃತಿ ।
ಪೂರ್ವಾಂ ದಿಶಂ ಸಮಾರಭ್ಯ ಕೃತ್ವಾ ತಾನಿ ಪ್ರಯತ್ನತಃ ॥ ೧೦೪ ॥
ಚತುಃಕೋಣಸಮಾಯುಕ್ತಂ ಪೂರ್ವೇ ಕುಂಡಂ ನಿವೇಶ್ಯ ತು ।
ಭಗಾಕೃತಿ ತಥಾಽಽಗ್ನೇಯ್ಯಾಂ ದಕ್ಷಿಣೇ ಧನುರಾಕೃತಿ ॥ ೧೦೫ ॥

ಹೋತೃವೂ, ಕ್ರಥನು ನೇಷ್ಟನೂ, ದುರ್ವಾಸನು ಮೈತ್ರಾವರುಣನೂ, ಕೌಶಿಕನು ಬ್ರಾಹ್ಮಣಾಚ್ಛಂಸಿಯೂ, ಶಾಕಲ್ಯನು ಅಚ್ಛಾವಾಕನೂ, ಕ್ರತುವು ಗ್ರಾವಸ್ಥನೂ, ಶಾಲಂಕಾಯನನು ಪ್ರತಿಪ್ರಸ್ಥಾತನೂ, ಮನುವು ಅಗ್ನೀಧ್ರನೂ, ಅಂಗಿರಸ್ಸು ಉನ್ನೇತನೂ ಮಾಡಲ್ಪಟ್ಟರು.

೧೦೦. ಇತರ ನೂರು ಮಂಡಪಗಳಲ್ಲಿಯೂ ಪ್ರತ್ಯೇಕವಾಗಿ ಋತ್ವಿಜರನ್ನು ನಿಯಮಿಸಿ ಕುಂಡಗಳನ್ನು ಕಲ್ಪಿಸಿದನು.

೧೦೧–೧೦೩. ಇಪ್ಪತ್ತು ಹಸ್ತಪ್ರಮಾಣದ ಒಂದೊಂದು ಮಂಡಪವನ್ನೂ ಸಾರಿಸಿ ವಜ್ರಾಕರಣಮಾಡಿ ಭೂಮಿಯನ್ನು ಅಸ್ತ್ರದಿಂದ ಶೋಧಿಸಿ, ಪಂಚಗವ್ಯದಿಂದ ಪ್ರೋಕ್ಷಿಸಿ, ಚರ್ಮವನ್ನು ಹೊದ್ದಿಸಿ, ಅಸ್ತ್ರದಿಂದ ಉಲ್ಲೇಖಿಸಿ, ಪ್ರೋಕ್ಷಿಸಿ ವಿಧಿಯಿಂದ ಅಗೆದು ಎಂಟು ಕುಂಡಗಳನ್ನು ನಿರ್ಮಿಸಿದನು.

೧೦೪–೧೧೧. ಹೇಗೆಂದರೆ ಆ ಮಂಡಪಗಳಲ್ಲಿ ಪೂರ್ವದಿಕ್ಕಿನಲ್ಲಿ ನಾಲ್ಕು ಮೂಲೆಯ ಕುಂಡವನ್ನೂ, ಆಗ್ನೇಯದಲ್ಲಿ ಭಗಾಕೃತಿಕುಂಡವನ್ನೂ, ದಕ್ಷಿಣದಲ್ಲಿ ಬಿಲ್ಲಿನ

ನೈಋರ್ತ್ಯೇ ತು ತ್ರಿಕೋಣಂ ವೈ ವರ್ತುಲಂ ಪಶ್ಚಿಮೇನ ತು ।
ಷಟ್ಕೋಣಂ ಚೈವ ವಾಯವ್ಯೇ ಪದ್ಮಾಕಾರಂ ತಥೋತ್ತರೇ ॥ ೧೦೬ ॥
ಐಶಾನ್ಯಾಮಷ್ಟಕೋಣಂ ತು ಮಧ್ಯೇ ಚೈಕಂ ವಿಧಾನತಃ ।
ಪ್ರತ್ಯೇಕಂ ಮಂಡಪಂ ಶುಭ್ರಂ ಸ್ತಂಭೈಃಷೋಡಶಭಿರ್ಯುತಂ ॥ ೧೦೭ ॥
ಧ್ವಜೈಃ ಸ ತೋರಣೈರ್ಯುಕ್ತಂ ಚಕ್ರೇ ಬ್ರಹ್ಮಾ ವಿಧಾನತಃ ।
ನ್ಯಗ್ರೋಧಂ ಪೂರ್ವತೋ ನ್ಯಸ್ಯ ದಕ್ಷೇ ಚೋದುಂಬರಂ ತಥಾ ॥ ೧೦೮ ॥
ಅಶ್ವತ್ಥಂ ಪಶ್ಚಿಮೇ ಚೈವ ಪಲಾಶಂ ಚೋತ್ತರೇ ಕ್ರಮಾತ್ ।
ಬಾಹುದಂಡಪ್ರಮಾಣೇನ ಧ್ವಜಾಂಸ್ತತ್ರ ನಿವೇಶ್ಯ ವೈ ॥ ೧೦೯ ॥
ಐಂದ್ರ್ಯಾದೌ ಪೀತವರ್ಣಾದಿ ಪತಾಕಾಃ ಪರಿಕಲ್ಪಿತಾಃ ।
ತತೋ ಬ್ರಹ್ಮಾ ಹ್ಯಗ್ನಿಕುಂಡೇ ಚಾಽಗ್ನಿಸ್ಥಾಪನಮಾರಭತ್ ॥ ೧೧೦ ॥
ಸ್ವಸ್ಥಾನೇ ಬ್ರಾಹ್ಮಣಾಂಶ್ಚೈವ ಜಾಪ್ಯೇ ಚೈವ ನ್ಯಯೋಜಯತ್ ।
ಶ್ರೀಸೂಕ್ತಂ ಪಾವಮಾನಂ ಚ ಸದಾ ಚೈವ ಚ ವಾಜಿನಂ ॥ ೧೧೧ ॥
ವೃಷಾಕಪಿಂ ತಥೈಂದ್ರಂ ಚ ಬಹ್ವೃಚಃ ಪೂರ್ವತೋಽಜಪನ್ ।
ರುದ್ರಾನ್ ಪುರುಷಸೂಕ್ತಂ ಚ ಕ್ರೋಕಾಧ್ಯಾಯಂ ಚ ವೈಕ್ರಿಯಂ ॥ ೧೧೨ ॥

ಆಕೃತಿಯ ಕುಂಡವನ್ನೂ, ನೈಋರ್ತ್ಯದಲ್ಲಿ ತ್ರಿಕೋಣ ಕುಂಡವನ್ನೂ, ಪಶ್ಚಿಮದಲ್ಲಿ ವರ್ತುಲಕುಂಡವನ್ನೂ, ವಾಯವ್ಯದಲ್ಲಿ ಷಟ್ಕೋಣ ಕುಂಡವನ್ನೂ, ಉತ್ತರ ದಿಕ್ಕಿನಲ್ಲಿ ಪದ್ಮಾಕೃತಿಯ ಕುಂಡವನ್ನೂ, ಈಶಾನ್ಯ ದಿಕ್ಕಿನಲ್ಲಿ ಎಂಟು ಮೂಲೆಯ ಕುಂಡವನ್ನೂ ಮಧ್ಯದಲ್ಲಿ ಒಂದು ಕುಂಡವನ್ನೂ ಹೀಗೆ ಪೂರ್ವಾದಿ ದಿಕ್ಕುಗಳಲ್ಲಿ ಚತುಷ್ಕೋಣ ಮೊದಲಾದ ಆಕಾರವುಳ್ಳ ಕುಂಡಗಳನ್ನು ನಿರ್ಮಿಸಿ ಒಂದೊಂದು ಮಂಡಪವನ್ನೂ ಧ್ವಜ, ತೋರಣಗಳುಳ್ಳ ಹದಿನಾರು ಸ್ತಂಭಗಳಿಂದ ಅಲಂಕರಿಸಿದನು. ತೋಳಿನ ಪ್ರಮಾಣದ ಆಲದ ದಂಡವನ್ನು ಪೂರ್ವದಿಕ್ಕಿನಲ್ಲಿಯೂ, ಅತ್ತಿಯದಂಡವನ್ನು ದಕ್ಷಿಣ ದಿಕ್ಕಿನಲ್ಲಿಯೂ, ಅಶ್ವತ್ಥದ ದಂಡವನ್ನು ಪಶ್ಚಿಮ ದಿಕ್ಕಿನಲ್ಲಿಯೂ, ಪಲಾಶದಂಡವನ್ನು ಉತ್ತರ ದಿಕ್ಕಿನಲ್ಲಿಯೂ ನೆಟ್ಟು ಅವುಗಳಲ್ಲಿ ಹಳದಿ ಮೊದಲಾದ ಬಣ್ಣದ ಪತಾಕೆಗಳನ್ನು ಪರಿಕಲ್ಪಿಸಿ ಬ್ರಹ್ಮನು ಅಗ್ನಿಕುಂಡದಲ್ಲಿ ಅಗ್ನಿಪ್ರತಿಷ್ಠೆಯನ್ನಾರಂಭಿಸಿದನು.

೧೧೧–೧೧೫. ತನ್ನ ಸ್ಥಾನದಲ್ಲಿಯೂ, ಜಪದ ಕಾರ್ಯದಲ್ಲಿಯೂ ಬ್ರಾಹ್ಮಣರನ್ನು ನಿಯಮಿಸಿದನು. ಋಕ್ಶಾಖಿಗಳಾದ ಅವರು ಶ್ರೀ ಸೂಕ್ತ, ಪವಮಾನ, ವಾಜಿನ, ವೃಷಾಕಪಿ, ಇಂದ್ರ ಸೂಕ್ತಗಳನ್ನು ಪೂರ್ವದಿಕ್ಕಿನಲ್ಲಿಯೂ, ಯಜುರ್ವೇದದವರು ರುದ್ರ, ಪುರುಷಸೂಕ್ತ, ಕ್ರೋಕಾಧ್ಯಾಯ, ವೈಕ್ರಿಯ, ಬ್ರಾಹ್ಮಣ, ಪಿತೃ, ಇಂದ್ರಸೂಕ್ತಗಳನ್ನು

ಬ್ರಾಹ್ಮಣಂ ಪೈತ್ರ್ಯಮೈಂದ್ರಂ ಚ ಜಪೇರನ್ ಯಜುಷೋ ಯಮೇ ।
ದೇವವ್ರತಂ ವಾಮದೇವ್ಯಂ ಜ್ಯೇಷ್ಠಂ ಸಾಮ ರಥಂತರಂ ॥ ೧೧೩ ॥
ಭೇರುಂಡಾನಿ ಚ ಸಾಮಾನಿ ಛಂದೋಗಃ ಪಶ್ಚಿಮೇಽಜಪತ್ ।
ಅಥರ್ವಾಽಥರ್ವಶಿರಸಂ ಸ್ತಂಭಸ್ತಂಭಮಥರ್ವಣಂ ॥ ೧೧೪ ॥
ನೀಲರುದ್ರಮಥರ್ವಾಣಮಥರ್ವಾ ಚೋತ್ತರೇಽಜಪತ್ ।
ಗರ್ಭಾಧಾನಾದಿಕಂ ಸರ್ವಂ ತತೋಽಗ್ನೇರಕರೋದ್ವಿಭುಃ ॥ ೧೧೫ ॥
ಪೂರ್ಣಾಹುತಿಂ ತತೋ ಸ್ನಾನಕರ್ಮ ತಥಾಽಽರಭತ್ ।
ಪಂಚಪಲ್ಲವಸಂಯುಕ್ತಂ ಮೃತ್ತಿಕಾಭಿಃ ಸಮನ್ವಿತಂ ॥ ೧೧೬ ॥
ಕಷಾಯೈಃ ಪಂಚಗವ್ಯೈಶ್ಚ ಪಂಚಾಽಮೃತಫಲೈಸ್ತಥಾ ।
ತೀರ್ಥೋದಕೈಃ ಸಮೇತಂ ತು ಮಂತ್ರೈಃ ಸ್ನಾನಮಥಾಽಽರಭತ್ ॥ ೧೧೭ ॥
ನೇತ್ರಾಣ್ಯುತ್ಪಾದ್ಯ ದೇವಸ್ಯ ಕೃತ್ವಾ ಚ ತಿಲಕಕ್ರಿಯಾಂ ।
ಪೃಥಿವ್ಯಾಂ ಯಾನಿ ತೀರ್ಥಾನಿ ಪಾತಾಲೇ ಚ ವಿಶೇಷತಃ ॥ ೧೧೮ ॥
ಸ್ವರ್ಗಲೋಕೇ ಚ ಯಾನ್ಯೇವ ತತ್ರ ತಾನ್ಯಾಯಯುಸ್ತದಾ ।
ಏತಸ್ಮಿನ್ನಂತರೇ ಬ್ರಹ್ಮಾ ದೇವಾನಾಂ ಪಶ್ಯತಾಂ ತದಾ ॥ ೧೧೯ ॥
ಭೂಮಿಂ ಭಿತ್ವಾ ವಿವೇಶಾಽಥ ತತ್ರ ಲಿಂಗಮಪಶ್ಯತ ।
ಸ್ಪರ್ಶಾಖ್ಯಂ ತಂ ತು ಸಂಛಾದ್ಯ ಮಧುನಾ ದರ್ಭಮೂಲಕೈಃ ॥ ೧೨೦ ॥

ದಕ್ಷಿಣ ದಿಕ್ಕಿನಲ್ಲಿಯೂ, ಸಾಮವೇದಿಗಳು ದೇವವ್ರತ, ವಾಮದೇವ್ಯ, ಜ್ಯೇಷ್ಠ, ರಥಂತರ, ಭೇರುಂಡ ಸಾಮಗಳನ್ನು ಪಶ್ಚಿಮ ದಿಕ್ಕಿನಲ್ಲಿಯೂ, ಅಥರ್ವವೇದಿಗಳು ಸ್ತಂಭ ಸ್ತಂಭ, ನೀಲರುದ್ರ ಮೊದಲಾದ ಅಥರ್ವವೇದ ಮಂತ್ರಗಳನ್ನು ಉತ್ತರ ದಿಕ್ಕಿನಲ್ಲಿಯೂ ಜಪಿಸಿದರು. ಬ್ರಹ್ಮನು ಬಳಿಕ ಅಗ್ನಿಗೆ ಗರ್ಭಾಧಾನಾದಿ ಸಂಸ್ಕಾರಗಳನ್ನು ನೆರವೇರಿಸಿದನು.

೧೧೬–೧೧೭. ಬಳಿಕ ಪೂರ್ಣಾಹುತಿಯನ್ನುಕೊಟ್ಟು ಪಂಚಪಲ್ಲವ, ಮೃತ್ತಿಕಾ, ಕಷಾಯ, ಪಂಚಗವ್ಯ, ಪಂಚಾಮೃತಫಲ, ತೀರ್ಥೋದಕ ಇವುಗಳೊಡನೆ ಮಂತ್ರಗಳಿಂದ ಸ್ನಾನವನ್ನಾರಂಭಿಸಿದನು.

೧೧೮–೧೨೧. ಲಿಂಗಕ್ಕೆ ಕಣ್ಣುಗಳನ್ನುಂಟುಮಾಡಿ ತಿಲಕವನ್ನಿಟ್ಟನು. ಆಗ ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳಲ್ಲಿರುವ ಸಕಲತೀರ್ಥಗಳೂ ಅಲ್ಲಿ ನೆರೆದುವು. ಈ ಸಮಯದಲ್ಲಿ ಚತುರಾನನು ದೇವತೆಗಳು ನೋಡುತ್ತಿರುವಾಗ ಭೂಮಿಯನ್ನು ಭೇದಿಸಿ ಒಳಗೆ ಪ್ರವೇಶಿಸಿ ಸ್ಪರ್ಶಲಿಂಗವನ್ನು ಕಂಡನು. ಅದನ್ನು ಮಧು, ದರ್ಭೆಗಳಿಂದ

ತತ್ರ ಬ್ರಹ್ಮಶಿಲಾಂ ನ್ಯಸ್ಯ ತಸ್ಯಾ ಊರ್ಧ್ವಂ ಮಹಾಪ್ರಭಂ ।
ಲಿಂಗಂ ಪ್ರತಿಷ್ಠಯಾಮಾಸ ಕೃತ್ವಾ ನಿಶ್ಚಲಮಾತ್ಮವಾನ್ ॥ ೧೨೧ ॥
ಸ್ಥಿತ್ವಾ ಚ ಪರಮೇ ತತ್ತ್ವೇ ಮಂತ್ರನ್ಯಾಸಮಥಾಽಕರೋತ್ ।
ಏವಂ ಲಿಂಗಂ ಪ್ರತಿಷ್ಠಾಪ್ಯ ತತ್ರ ಬ್ರಹ್ಮಾ ಜಗದ್ಗುರುಃ ।
ಪೂಜಯಾಮಾಸ ವಿಧಿನಾ ವೇದೋಕ್ತೈರ್ಮಂತ್ರವಿಸ್ತರೈಃ ॥ ೧೨೨ ॥
ಮಂತ್ರನ್ಯಾಸೇ ಕೃತೇ ತತ್ರ ಬ್ರಹ್ಮಣಾ ಲೋಕಕರ್ತೃಣಾ ।
ತತ್ರ ವಿಪ್ರಗಣೋ ಹೃಷ್ಟೋ ಜಯಶಬ್ದಾದಿಮಂಗಲೈಃ ।
ನಿರ್ಧೂಮಶ್ಚಾಽಭವದ್ವಹ್ನಿಃ ಸೂರ್ಯಕೋಟಿಸಮಪ್ರಭಃ ॥ ೧೨೩ ॥
ದೇವದುಂದುಭಯೋ ನೇದುಃ ಪ್ರಸನ್ನಾಶ್ಚ ದಿಗೀಶ್ವರಾಃ ।
ಪುಷ್ಪವೃಷ್ಟಿಃ ಪಪಾತೋಚ್ಚೈಸ್ತಸ್ಮಿನ್ ಯಜ್ಞಮಹೋತ್ಸವೇ ॥ ೧೨೪ ॥
ಪ್ರತಿಷ್ಠಾಪ್ಯ ತತೋ ಲಿಂಗಂ ಶ್ರೀಸೋಮೇಶಂ ಪಿತಾಮಹಃ ।
ದಾಪಯಾಮಾಸ ವಿಪ್ರೇಭ್ಯೋ ಭೂರಿಶೋ ಯಜ್ಞದಕ್ಷಿಣಾಂ ॥ ೧೨೫ ॥
ಸನತ್ಕುಮಾರಪ್ರಮುಖೈರಾದ್ಯೈರ್ಬ್ರಹ್ಮರ್ಷಿಭಿರ್ವೃತಃ ।
ದಕ್ಷಿಣಾಮದದಾತ್ಸೋಮಸ್ತ್ರೀಂಲ್ಲೋಕಾನ್ ಬ್ರಹ್ಮಣೇ ಪುರಾ ॥ ೧೨೬ ॥

ಮುಚ್ಚಿ ಅಲ್ಲಿ ಬ್ರಹ್ಮಶಿಲೆಯನ್ನಿಟ್ಟು ಅದರ ಮೇಲೆ ಸ್ಥಿರಮನಸ್ಸಿನಿಂದ ಅತ್ಯಂತ ತೇಜಸ್ವಿಯಾದ ಲಿಂಗವನ್ನು ಪ್ರತಿಷ್ಠೆ ಮಾಡಿದನು.

೧೨೨. ಪರತತ್ತ್ವದಲ್ಲಿ ನೆಲೆಸಿ ಮಂತ್ರನ್ಯಾಸವನ್ನಾಚರಿಸಿದನು. ಹೀಗೆ ಪಿತಾಮಹನು ಲಿಂಗವನ್ನು ಪ್ರತಿಷ್ಠೆಮಾಡಿ ವೇದೋಕ್ತಮಂತ್ರಗಳಿಂದ ವಿಧಿಯಂತೆ ಪೂಜಿಸಿದನು.

೧೨೩-೧೨೪. ಆ ಯಜ್ಞಮಹೋತ್ಸವದಲ್ಲಿ ಬ್ರಹ್ಮನು ಮಂತ್ರನ್ಯಾಸವನ್ನು ಮಾಡಲು ಬ್ರಾಹ್ಮಣರೆಲ್ಲ ಸಂತೋಷಗೊಂಡು ಜಯಕಾರಗೈದರು. ಅಗ್ನಿಯು ಹೊಗೆಯಿಲ್ಲದೆ ಕೋಟಿಸೂರ್ಯರಂತೆ ಪ್ರಕಾಶಿಸಿತು. ದೇವದುಂದುಭಿಗಳು ಮೊಳಗಿದುವು. ದಿಕ್ಪಾಲಕರು ಪ್ರಸನ್ನರಾದರು. ಬಹಳವಾಗಿ ಪುಷ್ಪವೃಷ್ಟಿಯಾಯಿತು.

೧೨೫. ಹೀಗೆ ಚತುರ್ಮುಖನು ಸೋಮೇಶ ಲಿಂಗವನ್ನು ಪ್ರತಿಷ್ಠೆಮಾಡಿ ಬ್ರಾಹ್ಮಣರಿಗೆ ಬಹಳವಾಗಿ ಯಜ್ಞದಕ್ಷಿಣೆಗಳನ್ನಿತ್ತನು.

೧೨೬. ಚಂದ್ರನು ಸನತ್ಕುಮಾರನೇ ಮೊದಲಾದ ಆದ್ಯ ಬ್ರಹ್ಮರ್ಷಿಗಳೊಡನೆ ಬ್ರಹ್ಮನಿಗೆ ಮೂರುಲೋಕಗಳನ್ನು ದಕ್ಷಿಣೆಯಾಗಿ ಕೊಟ್ಟನು.

ತೇಭ್ಯೋ ಬ್ರಹ್ಮರ್ಷಿಮುಖ್ಯೇಭ್ಯಃ ಸದಸ್ಯೇಭ್ಯಸ್ತಥೈವ ಚ ।
ದದೌ ಹಿರಣ್ಯಂ ರತ್ನಾನಿ ಕೋಟಿಶೋ ಭೂರಿದಕ್ಷಿಣಾಃ ॥ ೧೨೭ ॥
ಸೋಽಭಿಷಿಕ್ತೋ ಮಹಾತೇಜಾಃ ಸರ್ವೇ ಬ್ರಹ್ಮರ್ಷಿಭಿಸ್ತತಃ ।
ತ್ರೀನ್ ಲೋಕಾನ್ ಭಾವಯಾಮಾಸ ಸ್ವಭಾಸಾ ಭಾಸತಾಂ ವರಃ ॥ ೧೨೮ ॥
ತಂ ಸಿನೀ ಚ ಕುಹೂಶ್ಚೈವ ದ್ಯುತಿಃ ಪುಷ್ಟಿಃ ಪ್ರಭಾ ವಸುಃ ।
ಕೀರ್ತಿರ್ಧೃತಿಶ್ಚ ಲಕ್ಷ್ಮೀಶ್ಚ ನವ ದೇವ್ಯಃ ಸಿಷೇವಿರೇ ॥ ೧೨೯ ॥
ಸ್ನಾತ್ವಾಽವಭೃಥಮವ್ಯಗ್ರಃ ಕೃತ್ವಾ ಮಾಹೇಶ್ವರಂ ಮಖಂ ।
ಕೃತಾರ್ಥಃ ಪರಿಪೂರ್ಣಶ್ಚ ಸಂಬಭೂವ ನಿಶಾಪತಿಃ ॥ ೧೩೦ ॥
ತತಸ್ತಸ್ಮೈ ದದೌ ರಾಜ್ಯಂ ಪ್ರಾಜ್ಯಂ ಬ್ರಹ್ಮಾ ಪಿತಾಮಹಃ ।
ಬೀಜೌಷಧೀನಾಂ ವಿಪ್ರಾಣಾಮನ್ನಾನಾಂ ಚ ವರಾನನೇ ॥ ೧೩೧ ॥
ತಸ್ಮಿನ್ ಯಜ್ಞೇ ಸಮಾಜಗ್ಮುರ್ಯೇ ಕೇಚಿತ್ಪೃಥಿವೀಶ್ವರಾಃ ।
ತೇಷಾಂ ರಾಜ್ಯಂ ಧನಂ ಭೋಗಾನ್ ದದೌ ಸ್ವರ್ಗಂ ತಥಾಽಕ್ಷಯಂ ॥
ಬ್ರಾಹ್ಮಣಾನ್ ಭೋಜಯಾಮಾಸ ಸ್ವಯಮೇವೌಷಧೀಪತಿಃ ।
ದದೌ ಸರ್ವಂ ತದಾ ತೇಷಾಂ ಪ್ರಭಾಸಕ್ಷೇತ್ರವಾಸಿನಾಂ ॥ ೧೩೩ ॥

---

೧೨೭. ಹಾಗೆಯೇ ಸದಸ್ಯರಾದ ಆ ಬ್ರಹ್ಮರ್ಷಿಗಳಿಗೆ ಸುವರ್ಣ, ರತ್ನಗಳನ್ನು ಬಹುವಾಗಿ ದಕ್ಷಿಣೆ ಕೊಟ್ಟನು.

೧೨೮. ಆ ಚಂದ್ರನನ್ನು ಸಕಲ ಬ್ರಹ್ಮರ್ಷಿಗಳು ಅಭಿಷೇಕಮಾಡಲು ಅವನು ಮೂರು ಲೋಕಗಳನ್ನು ತನ್ನ ಕಾಂತಿಗಳಿಂದ ಬೆಳಗಿದನು.

೧೨೯. ಅವನನ್ನು ಸಿನೀ, ಕುಹೂ, ದ್ಯುತಿ, ಪುಷ್ಟಿ, ಪ್ರಭಾ, ವಸು, ಕೀರ್ತಿ, ಧೃತಿ, ಲಕ್ಷ್ಮೀ ಎಂಬ ಒಂಬತ್ತು ಜನ ದೇವಿಯರು ಸೇವಿಸಿದರು.

೧೩೦. ಹೀಗೆ ನಿಶಾಕರನು ಅವಭೃತಸ್ನಾನಮಾಡಿ ಮಾಹೇಶ್ವರ ಯಜ್ಞವನ್ನು ನೆರವೇರಿಸಿ ಕೃತಕೃತ್ಯನೂ, ಸಂಪೂರ್ಣನೂ ಆದನು

೧೩೧. ಬಳಿಕ ಬ್ರಹ್ಮನು ಅವನಿಗೆ ಬೀಜ, ಓಷಧಿ, ಬ್ರಾಹ್ಮಣರು, ಅನ್ನ ಇವುಗಳಿಗೆ ಆಧಿಪತ್ಯರೂಪವಾದ ರಾಜ್ಯವನ್ನಿತ್ತನು.

೧೩೨. ಆ ಯಜ್ಞಕ್ಕೆ ಬಂದ ರಾಜರಿಗೆಲ್ಲ ರಾಜ್ಯ, ದ್ರವ್ಯ, ಸುಖಭೋಗ, ಅಕ್ಷಯ ಸ್ವರ್ಗ ಇವುಗಳನ್ನು ಕೊಟ್ಟನು.

೧೩೩–೧೩೪. ಚಂದ್ರನು ಆಗ ಆ ಪ್ರಭಾಸಕ್ಷೇತ್ರದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರನ್ನು ಭೋಜನಮಾಡಿಸಿ ಅವರಿಗೆ ಸಕಲವನ್ನೂ ಕೊಟ್ಟು ಹಿರಣ್ಯಾದಿ ಷೋಡಶ

ಹಿರಣ್ಯಾದೀನ್ ದದಾಚ್ಚೈವ ಮಹಾದಾನಾನಿ ಷೋಡಶ ।
ಯೋ ಯದರ್ಥಯತೇ ತತ್ರ ಸಾಮಾನ್ಯಃ ಪ್ರಾಕೃತೋ ಜನಃ ।
ನಿಜಕರ್ಮಾನುಸಾರೇಣ ಸ ಲೇಭೇ ಚ ತದೇವ ಹಿ ॥ ೧೩೪ ॥
ಏವಂ ಸಮರ್ಥಿತೇ ಯಜ್ಞೇ ಸರ್ವೇ ದೇವಾಃ ಸವಾಸವಾಃ ।
ಸ್ಥಾಪಯಿತ್ವಾ ತು ಲಿಂಗಾನಿ ಜಗ್ಮುಃ ಸರ್ವೇ ಯಥಾಗತಂ ॥ ೧೩೫ ॥
ಚಂದ್ರಮಾಸ್ತು ಪುನರ್ದೇವಿ ಬ್ರಹ್ಮಣಾ ಸಹಿತೋ ವಿಭುಃ ।
ಲಿಂಗಮಾರಾಧಯಾಮಾಸ ಪ್ರಭಾಸೇ ಪಾಪನಾಶನೇ ॥ ೧೩೬ ॥
ತ್ರಿಕಾಲಂ ಪೂಜಯಾಮಾಸ ಧೂಪಮಾಲ್ಯಾನುಲೇಪನೈಃ ।
ತಂ ಪ್ರಣಮ್ಯ ಚ ದೇವೇಶಿ ಸ್ತೌತಿ ನಿತ್ಯಂ ನಿಶಾಪತಿಃ ॥ ೧೩೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸೋಮೇಶ್ವರಪ್ರತಿಷ್ಠಾಮಾಹಾತ್ಮ್ಯವರ್ಣನಂ ನಾಮ
ತ್ರಯೋವಿಂಶೋಽಧ್ಯಾಯಃ

ಮಹಾದಾನಗಳನ್ನಿತ್ತನು. ಅಲ್ಲಿ ಸಾಮಾನ್ಯ ಪ್ರಾಕೃತನರನೂ ತಾನು ಬಯಸಿದುದನ್ನೆಲ್ಲ ತನ್ನ ಕರ್ಮಾನುಸಾರವಾಗಿ ಪಡೆದನು.

೧೩೫. ಹೀಗೆ ಯಜ್ಞವು ನೆರವೇರಲು ಇಂದ್ರಾದಿ ಸಮಸ್ತ ದಿವಿಜರು ಲಿಂಗಗಳನ್ನು ಪ್ರತಿಷ್ಠೆಮಾಡಿ ಹೊರಟು ಹೋದರು.

೧೩೬–೧೩೭. ಚಂದ್ರನು ಬ್ರಹ್ಮನೊಡನೆ ಆ ಲಿಂಗವನ್ನು ಪೂಜಿಸಿದನು. ಅವನು ತ್ರಿಕಾಲದಲ್ಲಿಯೂ ಧೂಪ, ಮಾಲೆ, ಲೇಪನದ್ರವ್ಯಗಳಿಂದ ಆ ಸೋಮೇಶನನ್ನು ಪೂಜಿಸಿ ವಂದಿಸಿ ಸ್ತುತಿಸುತ್ತಿರುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸೋಮೇಶ್ವರಪ್ರತಿಷ್ಠಾಮಾಹಾತ್ಮ್ಯವರ್ಣನವೆಂಬ
ಇಪ್ಪತ್ತಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ವಿಂಶೋಽಧ್ಯಾಯಃ

ಸೋಮವಾರವ್ರತಮಾಹಾತ್ಮ್ಯವರ್ಣನಂ

ದೇವ್ಯುವಾಚ:—
ಕಸ್ಮಿನ್ಕಾಲೇ ಜಗನ್ನಾಥ ತತ್ರ ಲಿಂಗಂ ಪ್ರತಿಷ್ಠಿತಂ ।
ಕಥಮಾರಾಧನಂ ಚಕ್ರೇ ಕೃತಾರ್ಥೋ ರೋಹಿಣೀಪತಿಃ ॥ ೧ ॥
ಈಶ್ವರ ಉವಾಚ:—
ತ್ರೇತಾಯುಗೇ ಚ ದಶಮೇ ಮನೋರ್ವೈವಸ್ವತಸ್ಯ ಹಿ ।
ಸಂಜಾತೋ ರೋಹಿಣೀನಾಥೋ ಯುಕ್ತೋ ದುರ್ವಾಸಸಾ ಪ್ರಿಯೇ ॥ ೨ ॥
ತಸ್ಮಿನ್ಕಾಲೇ ತದಾ ತತ್ರ ಗತೇ ವರ್ಷಸಹಸ್ರಕೇ ।
ತತಃ ಕೃತ್ವಾ ತಪಶ್ಚಾಽಯಂ ಪ್ರತ್ಯಕ್ಷೀಕೃತಶಂಕರಃ ॥ ೩ ॥
ಲಿಂಗಂ ಪ್ರತಿಷ್ಠಯಾಮಾಸ ಬ್ರಹ್ಮಣಾ ಲೋಕಕರ್ತೃಣಾ ॥
ಪುನರ್ವರ್ಷಸಹಸ್ರಂ ತು ಪೂಜಯಾಮಾಸ ಶಂಕರಂ ॥ ೪ ॥
ತತಃ ಸಂಪೂಜ್ಯ ವಿಧಿನಾ ನಿಜಕಾರ್ಯಾರ್ಥಸಿದ್ಧಯೇ ।
ಸ್ತುತಿಂ ಚಕ್ರೇ ನಿಶಾನಾಥಃ ಪ್ರತ್ಯಕ್ಷೀಕೃತಶಂಕರಃ ॥ ೫ ॥

ಕನ್ನಡದ ಅನುವಾದ

ಸೋಮವಾರವ್ರತಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ:—ಜಗನ್ನಾಥ! ಬ್ರಹ್ಮನು ಯಾವಾಗ ಅಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಿದನು? ಚಂದ್ರನು ಧನ್ಯನಾಗಿ ಹೇಗೆ ಆ ಲಿಂಗವನ್ನು ಪೂಜಿಸಿದನು?

೨. ಈಶ್ವರನು ಹೇಳುತ್ತಾನೆ:—ಪ್ರಿಯಳೆ! ವೈವಸ್ವತಮನ್ವಂತರದಲ್ಲಿ ಹತ್ತನೆಯ ತ್ರೇತಾಯುಗದಲ್ಲಿ ಚಂದ್ರನು ದುರ್ವಾಸನೊಡನೆ ಹುಟ್ಟಿದನು.

೩–೪. ಅನಂತರ ಅವನು ಸಾವಿರ ವರ್ಷಗಳು ಕಳೆಯಲು ತಪಸ್ಸನ್ನು ಮಾಡಿ ಶಂಕರನನ್ನು ಪ್ರತ್ಯಕ್ಷಗೊಳಿಸಿ ಬ್ರಹ್ಮನಿಂದ ಸೋಮೇಶಲಿಂಗವನ್ನು ಪ್ರತಿಷ್ಠೆಮಾಡಿಸಿ ಒಂದು ಸಾವಿರ ವರ್ಷ ಆ ಲಿಂಗವನ್ನು ಪೂಜಿಸಿದನು.

೫. ಬಳಿಕ ಆ ಚಂದ್ರನು ತನ್ನ ಕಾರ್ಯಸಿದ್ಧಿಗಾಗಿ ವಿಧಿಯಿಂದ ಪೂಜಿಸಿ ಆ ಶಂಕರನನ್ನು ಸ್ತುತಿಸಿದನು.

ಚಂದ್ರ ಉವಾಚ:—

ನಾಽಸ್ತಿ ಶರ್ವಸಮೋ ದೇವೋ ನಾಸ್ತಿ ಶರ್ವಸಮಾ ಗತಿಃ ।
ನಾಽಸ್ತಿ ಶರ್ವಸಮೋ ದೇವೋ ನಾಸ್ತಿ ಶರ್ವಸಮಾ ಗತಿಃ ॥ ೬ ॥
ಯಂ ಪಠಂತಿ ಸದಾ ಸಾಂಖ್ಯಾಂಶ್ಚಿಂತಯಂತಿ ಚ ಯೋಗಿನಃ ।
ಪರಂ ಪ್ರಧಾನಂ ಪುರುಷಂ ತಸ್ಮೈ ಜ್ಞೇಯಾತ್ಮನೇ ನಮಃ ॥ ೭ ॥
ಉತ್ಪತ್ತೌ ಚ ವಿನಾಶೇ ಚ ಕಾರಣಂ ಯಂ ವಿದುರ್ಬುಧಾಃ ।
ದೇವಾಽಸುರಮನುಷ್ಯಾಣಾಂ ತಸ್ಮೈ ಜ್ಞಾನಾತ್ಮನೇ ನಮಃ ॥ ೮ ॥
ಯಮವ್ಯಯಮನಾದ್ಯಂತಂ ಯಂ ನಿತ್ಯಂ ಶಾಶ್ವತಂ ಧ್ರುವಂ ।
ನಿಷ್ಕಲಂ ಪರಮಂ ಬ್ರಹ್ಮ ತಸ್ಮೈ ಯೋಗಾತ್ಮನೇ ನಮಃ ॥ ೯ ॥
ಯಃ ಪವಿತ್ರಂ ಪವಿತ್ರಾಣಾಮಾದಿದೇವೋ ಮಹೇಶ್ವರಃ ।
ಪುನಾತಿ ದರ್ಶನಾದೇವ ತಸ್ಮೈ ತೀರ್ಥಾತ್ಮನೇ ನಮಃ ॥ ೧೦ ॥
ಯತಃ ಪ್ರವರ್ತತೇ ಸರ್ವಂ ಯಸ್ಮಿನ್ ಸರ್ವಂ ವಿಲೀಯತೇ।
ಪಾಲಯೇದ್ಯೋ ಜಗತ್ಸರ್ವಂ ತಸ್ಮೈ ಸರ್ವಾತ್ಮನೇ ನಮಃ ॥ ೧೧ ॥

---

೬. ಚಂದ್ರನು ಹೇಳುತ್ತಾನೆ:—ಶಂಕರನಿಗೆ ಸಮನಾದ ದೇವತೆಯೂ, ಉತ್ತಮ ಗತಿಯನ್ನೀಯುವವನೂ ಯಾರೂ ಇರುವುದಿಲ್ಲ.

೭. ಯಾವನನ್ನು ಸಾಂಖ್ಯರು ಯಾವಾಗಲೂ ಸ್ತುತಿಸವರೊ, ಯೋಗಿಗಳು ಧ್ಯಾನಿಸುವರೊ, ಪ್ರಧಾನಪುರಷನೂ, ಜ್ಞೇಯನೂ ಆದ ಆ ಪರಶಿವನಿಗೆ ನಮಸ್ಕಾರವು.

೮. ಯಾವನನ್ನು ಜ್ಞಾನಿಗಳು ದೇವಾಸುರ ಮನುಷ್ಯರ ಉತ್ಪತ್ತಿಗೂ, ನಾಶಕ್ಕೂ ಕಾರಣನೆಂದು ತಿಳಿಯುತ್ತಾರೊ, ಆ ಜ್ಞಾನಸ್ವರೂಪನಾದ ಶಂಕರನಿಗೆ ನಮಸ್ಕಾರವು.

೯. ನಾಶರಹಿತನೂ, ಆದ್ಯಂತರಹಿತನೂ, ದೋಷಶೂನ್ಯನೂ, ಪರಬ್ರಹ್ಮ ಸ್ವರೂಪನೂ ಆದ ಶಂಕರನಿಗೆ ನಮಸ್ಕಾರವು.

೧೦. ಪವಿತ್ರ ವಸ್ತುಗಳಲ್ಲಿ ಪವಿತ್ರನೂ, ಆದಿದೇವತೆಯೂ, ದರ್ಶನ ಮಾತ್ರದಿಂದ ಸಮಸ್ತವನ್ನೂ ಪವಿತ್ರಗೊಳಿಸುವವನೂ, ತೀರ್ಥಸ್ವರೂಪನೂ ಆದ ಮಹೇಶ್ವರನಿಗೆ ನಮಸ್ಕಾರವು.

೧೧. ಯಾವನಿಂದ ಸಕಲ ಜಗತ್ತುಗಳು ಉಂಟಾಗುವುವೊ, ಯಾವನಲ್ಲಿ ಸಮಸ್ತ ಜಗತ್ತುಗಳು ನಾಶವಾಗುವುವೊ, ಯಾವನು ಸಮಸ್ತ ಜಗತ್ತುಗಳನ್ನು ರಕ್ಷಿಸುವನೊ, ಆ ಸರ್ವರೂಪನಾದ ಮಹೇಶ್ವರನಿಗೆ ನಮಸ್ಕಾರವು.

ಅಗ್ನಿಷ್ಟೋಮಾದಿಭಿರ್ಯಂ ಯಜ್ಞೈರ್ಯಜಂತಿ ದ್ವಿಜಾತಯಃ ।
ಸಂಪೂರ್ಣದಕ್ಷಿಣೈರೇವ ತಸ್ಮೈ ಯಜ್ಞಾತ್ಮನೇ ನಮಃ ॥ ೧೨ ॥

ಈಶ್ವರ ಉವಾಚ :—

ಏವಂ ಸ ಸಂಸ್ತುತೇ ಯಾವದ್ದಿವಾರಾತ್ರೌ ನಿಶಾಕರಃ ।
ಅಬ್ರವೀದ್ವೃಗವಾನ್ಪ್ರೀತಃ ಪ್ರಹಸನ್ನಿವಶಂಕರಃ ॥ ೧೩ ॥

ಶಂಕರ ಉವಾಚ :—

ಪರಿತುಷ್ಟೋಽಸ್ಮಿ ತೇ ವತ್ಸ ಸ್ತೋತ್ರೇಣಾಽನೇನ ಶೀತಗೋ ।
ವರಂ ವರಯ ಭದ್ರಂ ತೇ ಭೂಯೋ ಯತ್ತೇ ಮನೋಗತಂ ॥ ೧೪ ॥

ಚಂದ್ರ ಉವಾಚ :—

ಯದಿ ದೇಯೋ ವರೋಽಸ್ಮಾಕಂ ಯದಿ ತುಷ್ಟೋಽಸಿ ಮೇ ಪ್ರಭೋ ।
ಸಾನ್ನಿಧ್ಯಂ ಕುರು ದೇವೇಶ ಲಿಂಗೇಽಸ್ಮಿನ್ ಸರ್ವದಾ ವಿಭೋ ॥ ೧೫ ॥
ಯೇ ತ್ವಾಂ ಪಶ್ಯಂತಿ ಚಾಽತ್ರಸ್ಥಂ ಭಕ್ತ್ಯಾ ಪರಮಯಾ ಯುತಾಃ ।
ತೇಷಾಂ ತು ಪರಮಾ ಸಿದ್ಧಿಸ್ತ್ವತ್ಪ್ರಸಾದಾತ್ಸುರೇಶ್ವರ ॥ ೧೬ ॥

ಶಂಭುರುವಾಚ :—

ಅಗ್ರೇ ತು ಮಮ ಸಾನ್ನಿಧ್ಯಮಸ್ಮಿಂಲ್ಲಿಂಗೇ ಮಹಾಪ್ರಭೋ ।
ವಿಶೇಷತೋಽಧುನಾ ಚಂದ್ರ ತವ ಭಕ್ತ್ಯಾ ನಿರಂತರಂ ॥ ೧೭ ॥

---

೧೨. ಯಾವನನ್ನುದ್ದೇಶಿಸಿ ಬ್ರಾಹ್ಮಣರು ಸಂಪೂರ್ಣ ದಕ್ಷಿಣೆಗಳುಳ್ಳ ಅಗ್ನಿಷ್ಟೋಮವೇ ಮೊದಲಾದ ಯಾಗಗಳನ್ನು ಮಾಡುವರೊ, ಅಂತಹ ಯಜ್ಞಸ್ವರೂಪನಾದ ಮಹೇಶ್ವರನಿಗೆ ನಮಸ್ಕಾರವು.

೧೩. ಈಶ್ವರನು ಹೇಳುತ್ತಾನೆ:—ಚಂದ್ರನು ಹೀಗೆ ಹಗಲು ರಾತ್ರಿ ಸ್ತುತಿಸಲು ಶಂಕರನು ಸುಪ್ರಸನ್ನನಾಗಿ ನಗುತ್ತ ಆ ಚಂದ್ರನನ್ನು ಕುರಿತು ಇಂತೆಂದನು.

೧೪. ಶಂಕರನು ಹೇಳುತ್ತಾನೆ:—ಮಗು ! ಚಂದ್ರ ! ನಿನ್ನೀ ಸ್ತೋತ್ರದಿಂದ ಸಂತುಷ್ಟನಾಗಿರುವೆನು. ನಿನ್ನ ಮನಸ್ಸಿನಲ್ಲಿರುವ ವರವನ್ನು ಕೇಳಿಕೊ.

೧೫. ಚಂದ್ರನು ಹೇಳುತ್ತಾನೆ :—ಶಂಕರ ! ನೀನು ಸಂತುಷ್ಟನಾಗಿ ನನಗೆ ವರವನ್ನು ಕೊಡುವುದಾದರೆ ಈ ಲಿಂಗದಲ್ಲಿ ಯಾವಾಗಲೂ ಸನ್ನಿಹಿತನಾಗಿರು.

೧೬. ಇಲ್ಲಿರುವ ನಿನ್ನನ್ನು ಯಾರು ಅತ್ಯಂತ ಭಕ್ತಿಯಿಂದ ನೋಡುವವರೋ ನಿನ್ನ ಅನುಗ್ರಹದಿಂದ ಪರಮಸಿದ್ಧಿಯನ್ನು ಪಡೆಯಲಿ.

೧೭. ಶಂಕರನು ಹೇಳುತ್ತಾನೆ:—ಚಂದ್ರ ! ಅತಿಶಯವಾದ ನಿನ್ನ ಭಕ್ತಿಯಿಂದ ನಾನು ಈ ಕ್ಷೇತ್ರದಲ್ಲಿರುವ ಈ ಲಿಂಗದಲ್ಲಿ ಈಗಲೂ, ಮುಂದೆಯೂ ಪಾರ್ವತಿಯೊಡನೆ ಸನ್ನಿಹಿತನಾಗಿರುವೆನು.

ಸ್ಥಾತವ್ಯಮದ್ಯಪ್ರಭೃತಿ ಕ್ಷೇತ್ರೇಽಸ್ಮಿನ್ಮಯಾ ಸಹ ।
ಯಸ್ಮಾತ್ತ್ವಯಾ ಪ್ರಭಾ ಲಬ್ಧಾ ಕ್ಷೇತ್ರೇಽಸ್ಮಿನ್ ಮತ್ಪ್ರಸಾದತಃ ।
ತಸ್ಮಾತ್ಪ್ರಭಾಸಮಿತ್ಯೇವಂ ನಾಮಾಽಸ್ಯ ಪ್ರಭವಿಷ್ಯತಿ ॥ ೧೮ ॥
ಯಸ್ಮಾತ್ಪ್ರತಿಷ್ಠಿತಂ ಲಿಂಗಂ ತ್ವಯಾ ಸೋಮ ಶುಭಂ ಮಮ ।
ಸೋಮನಾಥೇತಿ ಮೇ ನಾಮ ತಸ್ಮಾತ್ ಖ್ಯಾತಿಂ ಗಮಿಷ್ಯತಿ ॥ ೧೯ ॥
ಯನ್ಮಮಾಗ್ರೇತನಂ ನಾಮ ಖ್ಯಾತಂ ಬ್ರಹ್ಮಾವಸಾನಿಕಂ ।
ಸೋಮನಾಥೇತಿ ಚ ಪುನಸ್ತದೇವ ಪ್ರಚರಿಷ್ಯತಿ ।
ದ್ರಕ್ಷ್ಯಂತಿ ಹಿ ನರಾ ಯೇ ಮಾಮತ್ರಸ್ಥಂ ಭಕ್ತಿತತ್ಪರಾಃ ॥ ೨೦ ॥
ಶೃಣು ತೇಷಾಂ ಫಲಂ ವತ್ಸ ಭವಿಷ್ಯತಿ ನಿಶಾಕರ ।
ನ ತೇಷಾಂ ಜಾಯತೇ ವ್ಯಾಧಿರ್ನ ದಾರಿದ್ರ್ಯಂ ನ ದುರ್ಗತಿಃ ।
ನ ಚೇಷ್ಟೇನ ವಿಯೋಗಶ್ಚ ಮಮ ಚಂದ್ರ ಪ್ರಭಾವತಃ ॥ ೨೧ ॥
ಯಾತ್ರಾಂ ಕುರ್ವಂತಿ ಯೇ ಭಕ್ತ್ಯಾ ಮಮ ದರ್ಶನಕಾಂಕ್ಷಿಣಃ ।
ಪದೇ ಪದೇಽಶ್ವಮೇಧಸ್ಯ ತೇಷಾಂ ಫಲಮುದಾಹೃತಂ ॥ ೨೨ ॥
ಕಿಂ ಕೃತೈರ್ಬಹುಭಿರ್ಯಜ್ಞೈರುಪವಾಸೈರ್ನಿಶಾಕರ ।
ಸಕೃತ್ಪಶ್ಯಂತಿ ಮಾಂ ಯೇಽತ್ರ ತೇ ಸರ್ವೇ ಲೇಭಿರೇ ಫಲಂ ॥ ೨೩ ॥

---

೧೮. ನೀನು ಈ ಕ್ಷೇತ್ರದಲ್ಲಿ ನನ್ನ ಅನುಗ್ರಹದಿಂದ ಪ್ರಭೆಯನ್ನು ಪಡೆದ ಕಾರಣ ಈ ಕ್ಷೇತ್ರವು ಪ್ರಭಾಸವೆಂದು ಪ್ರಸಿದ್ಧವಾಗುವುದು.

೧೯. ಚಂದ್ರ ! ನೀನು ಈ ಲಿಂಗವನ್ನು ಪ್ರತಿಷ್ಠೆ ಮಾಡಿಸಿರುವುದರಿಂದ ಸೋಮನಾಥನೆಂದು ನನ್ನ ಹೆಸರು ವಿಖ್ಯಾತವಾಗುವುದು.

೨೦–೨೧. ನನ್ನ ಮುಂದಿನ ನಾಮಗಳು ಬ್ರಹ್ಮನ ಆಯುಷ್ಯದವರೆಗೆ ಇದ್ದು ಮರಳಿ ಸೋಮನಾಥನೆಂದೇ ನಾಮವು ಪ್ರಸಿದ್ಧವಾಗುವುದು. ಚಂದ್ರ ! ಇಲ್ಲಿರುವ ನನ್ನನ್ನು ಭಕ್ತಿಯಿಂದ ದರ್ಶನಮಾಡುವ ಭಕ್ತರಿಗುಂಟಾಗುವ ಫಲವನ್ನು ಕೇಳು. ಅವರಿಗೆ ನನ್ನ ಅನುಗ್ರಹದಿಂದ ರೋಗ, ಬಡತನ, ದುರ್ಗತಿ, ಇಷ್ಟ ವಿರಹಗಳು ಆಗುವುದಿಲ್ಲ.

೨೨. ನನ್ನನ್ನು ದರ್ಶನಮಾಡುವ ಅಪೇಕ್ಷೆಯಿಂದ ಈ ಪ್ರಭಾಸಕ್ಷೇತ್ರದಯಾತ್ರೆಯನ್ನು ಮಾಡುವ ಭಕ್ತರಿಗೆ ಪ್ರತಿಹೆಜ್ಜೆಯಲ್ಲಿಯೂ ಅಶ್ವಮೇಧ ಯಾಗದ ಫಲವು ಲಭಿಸುವುದು.

೨೩. ಚಂದ್ರ ! ಬಹುಯಜ್ಞಗಳಿಂದಲೂ, ಉಪವಾಸಗಳಿಂದಲೂ ಏನು ಪ್ರಯೋಜನ ? ನನ್ನನ್ನು ಒಂದಾವೃತ್ತಿ ನೋಡಿದವನು ಯಜ್ಞವೇ ಮೊದಲಾದುವುಗಳ ಆ ಸತ್ಕರ್ಮ ಫಲಗಳನ್ನು ಪಡೆಯುವನು.

ಏಕಮಾಸೋಪವಾಸಂ ತು ಕುರುತೇ ಭಕ್ತಿತತ್ಪರಃ ।
ಯಾವದ್ವರ್ಷಸಹಸ್ರಂ ತು ಏಕಃ ಪಶ್ಯತಿ ಮಾಮಿಹ ॥ ೨೪ ॥
ದ್ವಾಭ್ಯಾಮಪಿ ಫಲಂ ತುಲ್ಯಂ ನಾಸ್ತಿ ಕಾಚಿದ್ವಿಚಾರಣಾ ॥ ೨೫ ॥
ಏಕೋ ಭವೇದ್ಬ್ರಹ್ಮಚಾರೀ ಯಾವಜ್ಜೀವಂ ನಿಶಾಕರ ।
ಸಕೃತ್ಪಶ್ಯತಿ ಮಾಮತ್ರ ಸಮಂ ತಾಭ್ಯಾಂ ಫಲಂ ಸ್ಮೃತಂ ॥ ೨೬ ॥
ಏಕೋ ದಾನಾನಿ ಸರ್ವಾಣಿ ಪ್ರಯಚ್ಛತಿ ದ್ವಿಜಾತಯೇ ।
ಏಕಃ ಪಶ್ಯತಿ ಮಾಮತ್ರ ಸಮಂ ತಾಭ್ಯಾಂ ಫಲಂ ಸ್ಮೃತಂ ॥ ೨೭ ॥
ಏಕೋ ವ್ರತಾನಿ ಸರ್ವಾನಿ ಕರತೇಮ್ಮೃಗಲಾಂಛನ ।
ಅನ್ಯಃ ಪಶ್ಯತಿ ಮಾಮತ್ರ ಸಮಂ ತಾಭ್ಯಾಂ ಫಲಂ ಸ್ಮೃತಂ ॥ ೨೮ ॥
ಏಕೋ ಜ್ಞಾನಾದಿಯೋಗೇನ ಮುಮುಕ್ಷುರ್ಜಾಯತೇ ಧ್ರುವಂ ।
ಅನ್ಯಃ ಪಶ್ಯತಿ ಮಾಮತ್ರ ಫಲಂ ತಾಭ್ಯಾಂ ಸಮಂ ಸ್ಮೃತಂ ॥ ೨೯ ॥
ಏಕೋ ಜ್ಞಾನಾದಿಯೊಂಗೇನ ಮುಮುಕ್ಷುರ್ಜಾಯತೇ ಧ್ರುವಂ ।
ಅನ್ಯಃ ಪಶ್ಯತಿ ಮಾಮತ್ರ ಫಲಂ ತಾಭ್ಯಾಂ ಸಮಂ ಸ್ಮೃತಂ ॥ ೩೦ ॥
ಏಕಸ್ತು ಭೃಗುಪಾತೇನ ಯಾತಿ ಮೃತ್ಯಂ ನಿಶಾಕರ ।
ಅನ್ಯಃ ಪಶ್ಯತಿ ಮಾಮತ್ರ ಸಮಂ ತಾಭ್ಯಾಂ ಫಲಂ ಸ್ಮೃತಂ ॥ ೩೧ ॥

೨೪–೨೫. ಈ ಪ್ರಭಾಸಕ್ಷೇತ್ರದಲ್ಲಿ ನನ್ನನ್ನುದ್ದೇಶಿಸಿ ಭಕ್ತಿಯಿಂದ ಒಂದು ತಿಂಗಳು ಉಪವಾಸ ಮಾಡಿದುದರ ಫಲವೂ, ಸಾವಿರ ವರ್ಷ ನನ್ನನ್ನು ದರ್ಶನಮಾಡಿದುದರ ಫಲವೂ ಸಮಾನವಾದುದು. ಈ ವಿಷಯದಲ್ಲಿ ವಿಚಾರ ಮಾಡತಕ್ಕದ್ದಿಲ್ಲ.

೨೬. ಬದುಕಿರುವವರೆಗೆ ಬ್ರಹ್ಮಚಾರಿಯಾದವನಿಗೂ, ನನ್ನನ್ನು ಒಂದಾವೃತ್ತಿ ದರ್ಶನಮಾಡಿದವನಿಗೂ ಸಮಾನಫಲವು ಲಭಿಸುವುದು.

೨೭. ಬ್ರಾಹ್ಮಣನಿಗೆ ಸಮಸ್ತ ದಾನಮಾಡಿದವನಿಗೂ, ನನ್ನನ್ನು ದರ್ಶನಮಾಡಿದವನಿಗೂ ಒಂದೇ ಫಲವು ಉಂಟಾಗುವುದು.

೨೮. ಸಕಲವ್ರತವನ್ನಾಚರಿಸಿದವನಿಗೂ, ನನ್ನನ್ನು ದರ್ಶನಮಾಡಿದವನಿಗೂ ಸಮಾನ ಫಲವು ಲಭಿಸುವುದು.

೨೯. ತೀರ್ಥನಿರ್ಮಾಣ, ಮತ್ತು ಜಪಗಳನ್ನು ಮಾಡಿದವನೂ, ನನ್ನನ್ನು ದರ್ಶನಮಾಡಿದವನೂ ಸಮಾನ ಫಲವನ್ನು ಹೊಂದುವರು.

೩೦. ಜ್ಞಾನಾದಿಯೋಗಗಳಿಂದ ಮೋಕ್ಷವನ್ನು ಬಯಸುವವನೂ, ನನ್ನನ್ನು ದರ್ಶನಮಾಡುವವನೂ ಸಮಾನ ಫಲವನ್ನು ಹೊಂದುವರು.

೩೧–೩೬. ಭೃಗುಪಾತದಿಂದ ಮೃತನಾದವನೂ, ಯಾವಾಗಲೂ ಪ್ರಯಾಗದಲ್ಲಿ ಮಾಘಸ್ನಾನ ಮಾಡಿದವನೂ, ಪಿತೃತೀರ್ಥದಲ್ಲಿ ಪಿಂಡಪ್ರದಾನ ಮಾಡಿದವನೂ, ವೇದಾ

ಏಕಃ ಸ್ನಾತಿ ಸದಾ ಮಾಘಂ ಪ್ರಯಾಗೇ ನರಸತ್ತಮಃ ।
ಅನ್ಯಃ ಪಶ್ಯತಿ ಮಾಮತ್ರ ಫಲಂ ತಾಭ್ಯಾಂ ಸಮಂ ಸ್ಮೃತಂ ॥ ೩೨ ॥
ಏಕಃ ಪಿಂಡಪ್ರದಾನಂ ಚ ಪಿತೃತೀರ್ಥೇಸಮಾಚರೇತ್ ।
ಅನ್ಯಃ ಪಶ್ಯತಿ ಮಾಮತ್ರ ಫಲಂ ತಾಭ್ಯಾಂ ಸಮಂ ಸ್ಮೃತಂ ॥ ೩೩ ॥
ಗೋಸಹಸ್ರಪ್ರದೋ ಹ್ಯೇಕೋ ಬ್ರಾಹ್ಮಣೇ ವೇದಪಾರಗೇ ।
ಏಕಃ ಪಶ್ಯತಿ ಮಾಮತ್ರ ಫಲಂ ತಾಭ್ಯಾಂ ಸಮಂ ಸ್ಮೃತಂ ॥ ೩೪ ॥
ಪಂಚಾಗ್ನಿಂ ಸಾಧಯೇದೇಕೋ ಗ್ರೀಷ್ಮಕಾಲೇ ಸುದಾರುಣೇ ।
ಏಕಃ ಪಶ್ಯತಿ ಮಾಮತ್ರ ಫಲಂ ತಾಭ್ಯಾಂ ಸಮಂ ಸ್ಮೃತಂ ॥ ೩೫ ॥
ಸ್ನಾತಃ ಸೋಮಗ್ರಹೇ ಚಂದ್ರ ಸೋಮವಾರೇ ಚ ಭಕ್ತಿತಃ ।
ಯೋ ಮಾಂ ಪಶ್ಯತಿ ಸರ್ವೇಷಾಮೇತೇಷಾಂ ಲಭತೇ ಫಲಂ ॥ ೩೬ ॥
ಸರಸ್ವತೀ ಸಮುದ್ರಶ್ಚ ಸೋಮಃ ಸೋಮಗ್ರಹಸ್ತಥಾ ।
ದರ್ಶನಂ ಸೋಮನಾಥಸ್ಯ ಸಕಾರಾಃ ಪಂಚ ದುರ್ಲಭಾಃ ॥ ೩೭ ॥
ನೈರಂತರ್ಯೇಣ ಷಣ್ಮಾಸಾನ್ವಿಧಿನಾ ಯಃ ಪ್ರಪೂಜಯೇತ್ ।
ಪುಣ್ಯಂ ತದೇವ ಸಫಲಂ ಲಭತೇ ವಿಷುವಾರ್ಚನಾತ್ ॥ ೩೮ ॥
ಏತದೇವ ತು ವಿಜ್ಞೇಯಂ ಗ್ರಹಣೇ ಚೋತ್ತರಾಯಣೇ ।
ಸಂಕ್ರಾಂತಿದಿನಛಿದ್ರೇಷು ಷಡಶೀತಿಮುಖೇಷು ಚ ॥ ೩೯ ॥

ಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ಸಹಸ್ರ ಗೋದಾನಮಾಡಿದವನೂ, ಕಠಿನವಾದ ಗ್ರೀಷ್ಮಕಾಲದಲ್ಲಿ ಪಂಚಾಗ್ನಿ ಮಧ್ಯದಲ್ಲಿ ತಪಸ್ಸನ್ನಾಚರಿಸಿದವನೂ, ಚಂದ್ರಗ್ರಹಣ ಕಾಲದಲ್ಲಿಯೂ, ಸೋಮವಾರದಲ್ಲಿಯೂ ಭಕ್ತಿಯಿಂದ ಮಿಂದವನೂ, ನನ್ನನ್ನು ದರ್ಶನ ಮಾಡಿದವನೂ ಸಮಾನ ಫಲವನ್ನು ಪಡೆಯುವರು.

೩೭. ಸರಸ್ವತೀನದೀ, ಸಮುದ್ರ, ಸೋಮ (ಚಂದ್ರ) ಸೋಮಗ್ರಹಣ, ಸೋಮನಾಥದರ್ಶನ ಎಂಬ ಸಕಾರವೇ ಆದಿಯಲ್ಲಿರುವ ಈ ಐದು ದುರ್ಲಭವಾದುವು.

೩೮. ಎಡೆಬಿಡದೆ ಆರು ತಿಂಗಳು ಕಾಲ ಪೂಜಿಸಿದ ಪುಣ್ಯವನ್ನು ಒಂದು ಅಹೋರಾತ್ರ ಕಾಲ ಪೂಜಿಸಿದವನು ಪಡೆಯುವನು.

೩೯–೪೦. ಗ್ರಹಣ, ಉತ್ತರಾಯಣ ಪುಣ್ಯಕಾಲ, ಸಂಕ್ರಾಂತಿದಿನ, ಛಿದ್ರ ತಿಥಿಗಳು, ಧನುರ್ಮಿಥುನ, ಕನ್ಯಾ, ಮೀನಸಂಕ್ರಾಂತಿ ದಿನಗಳು, ಚಾತುರ್ಮಾಸ್ಯ ಇವುಗಳಲ್ಲಿ ವಿಧಿಯಿಂದ ಶಂಕರನನ್ನು ಪೂಜಿಸಿದ ಪುಣ್ಯವು ಕಾರ್ತಿಕ ಪೂರ್ಣಿಮಾ ದಿನ

ಮಾಸೈಶ್ಚತುರ್ಭಿರ್ಯತ್ಪುಣ್ಯಂ ವಿಧಿನಾಽಽಪೂಜ್ಯ ಶಂಕರಂ ।
ಕಾರ್ತಿಕ್ಯಾಂ ಸ ಲಭೇತ್ಪುಣ್ಯಂ ಚೈತ್ರ್ಯಾಂ ತದ್ದ್ವಿಗುಣಂ ಸ್ಮೃತಂ ।
ಪುಣ್ಯಮೇತತ್ತು ಫಾಲ್ಗುನ್ಯಾಮಾಷಾಢ್ಯಾಮೇವಮೇವ ತು ॥ ೪೦ ॥
ಏಕೋ ದದ್ಯಾದ್ಗವಾಂ ಲಕ್ಷಂ ದೋಗ್ಧ್ರೀಣಾಂ ವೇದಪಾರಗೇ ॥
ಏಕೋ ಮಮಾರ್ಚಯೇಲ್ಲಿಂಗಂ ತಸ್ಯ ಪುಣ್ಯಂ ತತೋಽಧಿಕಂ ॥ ೪೧ ॥
ಮಾಸೇ ಮಾಸೇ ಚ ಯೋಽಶ್ನೀಯಾದ್ಯಾವಜ್ಜೀವಂ ಸುರೇಶ್ವರಿ ।
ಯಶ್ಚಾಽರ್ಚಯೇತ್ಸಕೃಲ್ಲಿಂಗಂ ಸಮಮೇತನ್ನ ಸಂಶಯಃ ॥ ೪೨ ॥
ತಪಃ ಶೀಲಗುಣೋಪೇತೇ ಪಾತ್ರೇ ವೇದಸ್ಯ ಪಾರಗೇ ।
ಸುವರ್ಣಕೋಟಿಂ ಯದ್ದತ್ವಾ ತತ್ಫಲಂ ಕುಸುಮೇನ ತು ॥ ೪೩ ॥
ಅರ್ಕಪುಷ್ಪೇಽಪಿ ಚೈಕಸ್ಮಿಂಛಿವಾಯ ವಿನಿವೇದಿತೇ ।
ದಶ ದತ್ವಾ ಸುವರ್ಣಾನಿ ಯತ್ಫಲಂ ತದವಾಪ್ನುಯಾತ್ ॥ ೪೪ ॥
ಅರ್ಕಪುಷ್ಪಸಹಸ್ರೇಭ್ಯಃ ಕರವೀರಂ ವಿಶಿಷ್ಯತೇ ।
ಕರವೀರಸಹಸ್ರೇಭ್ಯೋ ದ್ರೋಣಪುಷ್ಪಂ ವಿಶಿಷ್ಯತೇ ॥ ೪೫ ॥

ಪೂಜಿಸಿದರೆ ಲಭಿಸುವುದು. ಚೈತ್ರ, ಆಷಾಢ, ಫಾಲ್ಗುನ ಶುದ್ಧ ಪೂರ್ಣಿಮೆ ದಿನ ನನ್ನನ್ನು ಪೂಜಿಸಿದರೆ ಇದಕ್ಕೆ ಇಮ್ಮಡಿಯಾದ ಪುಣ್ಯವು ಲಭಿಸುವುದು.

೪೧. ವೇದಪಾರಂಗತನಾದ ದ್ವಿಜನಿಗೆ ಒಂದು ಲಕ್ಷಹಾಲು ಕರೆಯುವ ಗೋವುಗಳನ್ನು ದಾನಮಾಡಿದುದಕ್ಕಿಂತ ನನ್ನ ಲಿಂಗವನ್ನು ಪೂಜಿಸಿದವನಿಗೆ ಅಧಿಕ ಪುಣ್ಯವು ಲಭಿಸುವುದು.

೪೨. ಬದುಕಿರುವವರೆಗೆ ತಿಂಗಳಿಗೊಮ್ಮೆ ಊಟಮಾಡುವವನೂ, ಒಂದುಸಾರಿ ನನ್ನ ಲಿಂಗವನ್ನು ಪೂಜಿಸುವವನೂ ಸಮವಾದ ಫಲವನ್ನು ಪಡೆಯುವರು.

೪೩. ತಪಸ್ಸು, ಸತ್ಸ್ವಭಾವ, ಸದ್ಗುಣ ಇವುಗಳುಳ್ಳ ವೇದಪಾರಂಗತನಾದ ದ್ವಿಜನಿಗೆ ಕೋಟಿ ಸುವರ್ಣಗಳನ್ನು ದಾನಮಾಡಿದ ಪುಣ್ಯವು ಸೋಮೇಶನನ್ನು ಒಂದು ಹೂವಿನಿಂದ ಪೂಜಿಸುವುದರಿಂದುಂಟಾಗುವುದು.

೪೪. ಸೋಮೇಶನನ್ನು ಒಂದು ಎಕ್ಕದ ಹೂವಿನಿಂದ ಪೂಜಿಸುವುದರಿಂದ ಹತ್ತು ಸುವರ್ಣ ದಾನಮಾಡಿದ ಪುಣ್ಯವು ಲಭಿಸುವುದು.

೪೫–೪೬. ಸಾವಿರ ಎಕ್ಕದ ಹೂವುಗಳಿಗಿಂತ ಒಂದು ಕಣಿಗಲೆ ಹೂವು ಶ್ರೇಷ್ಠವಾದುದು. ಸಾವಿರ ಕಣಿಗಲೆ ಹೂವಿಗಿಂತ ಒಂದು ಹೆತ್ತುಂಬೆ ಹೂವು ಉತ್ತಮವಾದುದು. ಸಾವಿರ ಹೆತ್ತುಂಬೆ ಹೂವುಗಳಿಗಿಂತ ಒಂದು ಅಪಾಮಾರ್ಗ ಪುಷ್ಪವು

ದ್ರೋಣಪುಷ್ಪಸಹಸ್ರೇಭ್ಯೋ ಹ್ಯಪಾಮಾರ್ಗಂ ವಿಶಿಷ್ಯತೇ ।
ಅಪಾಮಾರ್ಗಸಹಸ್ರೇಭ್ಯಃ ಕುಶಪುಷ್ಪಂ ವಿಶಿಷ್ಯತೇ ॥ ೪೬ ॥
ಶಮೀಪುಷ್ಪಂ ಬೃಹತ್ಯಾಶ್ಚ ಕುಸುಮಂ ತುಲ್ಯಮುಚ್ಯತೇ ।
ಕರವೀರಸಮಾ ಜ್ಞೇಯಾ ಜಾತೀವಿಜಯಪಾಟಲಾಃ ॥ ೪೭ ॥
ಶ್ವೇತಮಂದಾರಕುಸುಮಂ ಸಿತಪದ್ಮಸಮಂ ಭವೇತ್ ।
ನಾಗಚಂಪಕಪುನ್ನಾಗಧತ್ತೂರಕುಸುಮಂ ಸ್ಮೃತಂ ॥ ೪೮ ॥
ಕೇತಕೀಜಾತಿಮುಕ್ತಂ ಚ ಕಂದಯೂಥೀಮದಂತಿಕಾಃ ।
ಶಿರೀಷಸರ್ಜಜಂಬೂಕಕುಸುಮಾನಿ ವಿವರ್ಜಯೇತ್ ॥ ೪೯ ॥
ಆಕುಲೀಕುಸುಮಂ ಪತ್ರಂ ಕರಂಜೇಂದ್ರಸಮುದ್ಭವಂ ।
ವಿಭೀತಕಾನಿ ಪುಷ್ಪಾಣಿ ಕುಸುಮಾನಿ ವಿವರ್ಜಯೇತ್ ॥ ೫೦ ॥
ಕನಕಾನಿ ಕದಂಬಾನಿ ರಾತ್ರೌ ದೇಯಾನಿ ಶಂಕರೇ ।
ದೇವಶೇಷಾಣಿ ಪುಷ್ಪಾಣಿ ದಿವಾರಾತ್ರೌ ಚ ಮಲ್ಲಿಕಾ ॥ ೫೧ ॥
ಪ್ರಹರಂ ತಿಷ್ಠತೇ ಮಲ್ಲೀ ಕರವೀರಮಹರ್ನಿಶಂ ।
ಕೀಟಕೇಶಾಪವಿದ್ಧಾನಿ ರಾತ್ರೌ ಪರ್ಯುಷಿತಾನಿ ಚ ॥ ೫೨ ॥

ಶ್ರೇಷ್ಠವಾದುದು. ಸಾವಿರ ಅಪಾಮಾರ್ಗ ಹೂವುಗಳಿಗಿಂತ ಒಂದು ಕುಶಪುಷ್ಪವೂ, ಸಾವಿರ ಕುಶಪುಷ್ಪಗಳಿಗಿಂತ ಒಂದು ಶಮೀಪುಷ್ಪವೂ, ಶ್ರೇಷ್ಠವಾದುದು.

೪೭. ಶಮೀ ಮತ್ತು ಬೃಹತೀ ಕುಸುಮಗಳು ಸಮಾನವಾದುವು. ಜಾಜಿ, ವಿಜಯ, ಪಾದರಿ ಹೂವುಗಳು ಕಣಗಲೆ ಹೂವಿಗೆ ಸಮಾನವಾದುವು.

೪೮. ಬಿಳಿಮಂದಾರದ ಹೂವು ಬಿಳಿ ಕಮಲಕ್ಕೆ ಸಮಾನವು. ನಾಗಸಂಪಿಗೆ, ಪುನ್ನಾಗ, ಧತ್ತೂರಕುಸುಮಗಳು ಪೂಜೆಗೆ ಅರ್ಹವಾದುವು.

೪೯—೫೦. ಕೇತಕೀ, ಅತಿಮುಕ್ತ, ಕಂದ, ಯೂಥಿ, ಮದಂತಿಕಾ, ಶಿರೀಷ, ಸರ್ಜ, ಜಂಬೂಕ, ಆಕುಲೀ, ವಿಭೀತಕ, ಈ ಹೂವುಗಳಿಂದಲೂ, ಕರಜೇಂದ್ರ ಪತ್ರದಿಂದಲೂ, ಪೂಜಿಸಬಾರದು.

೫೧. ಕನಕ, ಕದಂಬ, ದೇವಶೇಷಪುಷ್ಪಗಳಿಂದ ಶಿವನನ್ನು ರಾತ್ರಿಯಲ್ಲಿ ಪೂಜಿಸಬೇಕು. ಮಲ್ಲಿಗೆ ಹೂವಿನಿಂದ ಹಗಲು ರಾತ್ರಿ ಪೂಜಿಸಬಹುದು.

೫೨—೫೪. ಮಲ್ಲಿಗೆ ಹೂವು ಒಂದು ಯಾಮಕಾಲವೂ, ಕಣಗಲೆ ಹೂವು ಒಂದು ದಿನವೂ, ಸರಿಯಾಗಿರುವುದು. ಹುಳುಗಳಿಂದ ಕೆಡಿಸಲ್ಪಟ್ಟುವೂ, ಕೂದಲುಗಳಿಂದ ದುಷ್ಟವಾದುವೂ, ತಾವಾಗಿಯೇ ಉದುರಿ ಕೆಟ್ಟು ಹೋದುವೂ ರಾತ್ರಿ ಕಳೆದು

ಸ್ವಯಂ ಪತಿತಪುಷ್ಪಾಣಿ ತ್ಯಜೇದುಪಹತಾನಿ ಚ ।
ತುಲಸೀ ಶತಪತ್ರಂ ಚ ಗಂಧಾರೀ ದಮನಸ್ತಥಾ ॥ ೫೩ ॥
ಸರ್ವಾಸಾಂ ಪತ್ರಜಾತೀನಾಂ ಶ್ರೇಷ್ಠೋ ಮರುಬಕಃ ಸ್ಮೃತಃ ।
ಏತೈಃ ಪುಷ್ಪವಿಶೇಷೈಸ್ತು ಪೂಜ್ಯಃ ಸೋಮೇಶ್ವರಃ ಸದಾ ॥ ೫೪ ॥
ಯಾತ್ರಾಯಾಃ ಫಲಮಾಪ್ನೋತಿ ಸ್ವರ್ಗಲೋಕೇ ಮಹೀಯತೇ ।
ಏತಾವದುಕ್ತ್ವಾ ವಚನಂ ತತ್ರೈವಾಂತರಧೀಯತ ॥ ೫೫ ॥
ಚಂದ್ರಮಾ ಯಕ್ಷ್ಮಣಾ ಮುಕ್ತಃ ಸ್ವಸ್ಥಾನನಿರತೋಽಭವತ್ ।
ಆಹೂಯ ವಿಶ್ವಕರ್ಮಾಣಂ ಪ್ರಾಸಾದಂ ಪರ್ಯಕಲ್ಪಯತ್ ।
ಶುದ್ಧಸ್ಫಟಿಕಸಂಕಾಶಂ ಗೋಕ್ಷೀರಧವಲೋಜ್ಜ್ವಲಂ ॥ ೫೬ ॥
ಪ್ರಾಸಾದಂ ಮೇರುನಾಮಾನಂ ಹೇಮಪ್ರಾಕಾರತೋರಣಂ ।
ಚತುರ್ದಶಾನ್ಯೇ ಪರಿತಃ ಪ್ರಾಸಾದಾಃ ಪರಿಕಲ್ಪಿತಾಃ ।
ತೇಷಾಂ ನಾಮಾನಿ ವಕ್ಷ್ಯಾಮಿ ಪ್ರತ್ಯೇಕಂ ತಾನಿ ಮೇ ಶೃಣು ॥ ೫೭ ॥
ಕೇಸರೀ ಸರ್ವತೋಭದ್ರೋ ನಂದನೋ ನಂದಿಶಾಲಕಃ ।
ನಂದೀಶೋ ಮಂದರಶ್ಚೈವ ಶ್ರೀವೃಕ್ಷೋ ಹ್ಯಮೃತೋದ್ಭವಃ ॥ ೫೮ ॥

ಹಳೆಯವೂ ಆದ ಹೂವುಗಳನ್ನು ತ್ಯಜಿಸಬೇಕು. ತುಲಸೀ, ತಾವರೆ, ಗಂಧಾರೀ, ದವನ, ಸಕಲ ಪತ್ರಗಳಲ್ಲಿ ಉತ್ತಮವಾದ ಮರುಗ ಇವುಗಳಿಂದ ಯಾವಾಗಲೂ ಸೋಮೇಶ್ವರನನ್ನು ಪೂಜಿಸಬೇಕು.

೫೫. ಇದರಿಂದ ಮಾನವನು ಸೋಮೇಶ್ವರ ಯಾತ್ರೆಯ ಫಲವನ್ನು ಪಡೆದು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು. ಶಂಕರನು ಇಷ್ಟುಮಾತನ್ನಾಡಿ ಅಲ್ಲಿಯೇ ಮಾಯವಾದನು.

೫೬–೫೭. ಚಂದ್ರನು ಕ್ಷಯರೋಗ ಮುಕ್ತನಾಗಿ ತನ್ನ ಸ್ಥಾನದಲ್ಲಿ ಆಸಕ್ತನಾಗಿ ವಿಶ್ವಕರ್ಮನನ್ನು ಕರೆಯಿಸಿ ಶುಭ್ರವಾದ ಸ್ಫಟಿಕಕ್ಕೆ ಸಮಾನವೂ, ಗೋವಿನ ಹಾಲಿನಂತೆ ಬೆಳ್ಳಗೆ ಪ್ರಕಾಶಿಸುವುದೂ, ಚಿನ್ನದ ಆವರಣ ತೋರಣಗಳುಳ್ಳದೂ ಆದ ಮೇರುವೆಂಬ ಪ್ರಧಾನವಾದ ಅರಮನೆಯನ್ನೂ, ಇದರ ಸುತ್ತಲೂ, ಇನ್ನೂ ಇತರ ಹದಿನಾಲ್ಕು ಪ್ರಾಸಾದಗಳನ್ನೂ ನಿರ್ಮಾಣ ಮಾಡಿಸಿದನು. ಅವುಗಳ ಹೆಸರುಗಳನ್ನು ಪ್ರತ್ಯೇಕವಾಗಿ ಹೇಳುವೆನು ಕೇಳು.

೫೮–೬೦. ಕೇಸರಿ, ಸರ್ವತೋಭದ್ರ, ನಂದನ, ನಂದಿಶಾಲಕ, ನಂದೀಶ, ಮಂದರ, ಶ್ರೀ ವೃಕ್ಷ, ಅಮೃತೋದ್ಭವ, ಹಿಮವಾನ್, ಹೇಮಕೂಟ, ಕೈಲಾಸ, ಪೃಥಿವೀಜಯ, ಇಂದ್ರನೀಲ, ಮಹಾನೀಲ, ಭೂಧರ, ರತ್ನಕೂಟಕ, ವೈಡೂರ್ಯ-

ಹಿಮವಾನ್ ಹೇಮಕೂಟಶ್ಚ ಕೈಲಾಸಃ ಪೃಥಿವೀಜಯಃ ।
ಇಂದ್ರನೀಲೋ ಮಹಾನೀಲೋ ಭೂಧರೋ ರತ್ನಕೂಟಕಃ ॥ ೫೯ ॥
ವೈಡೂರ್ಯಃ ಪದ್ಮರಾಗಶ್ಚ ವಜ್ರಕೋ ಮುಕುಟೋಜ್ಜ್ವಲಃ ।
ಐರಾವತೋ ರಾಜಹಂಸೋ ಗರುಡೋ ವೃಷಭಸ್ತಥಾ ॥ ೬೦ ॥
ಮೇರುಃ ಪ್ರಾಸಾದರಾಜಾ ಚ ದೇವಾನಾಮಾಲಯೋ ಹಿ ಸಃ ।
ಆದೌ ಪಂಚಾಂಡಕೋ ಜ್ಞೇಯಃ ಕೇಸರೀನಾಮತಃ ಸ್ಥಿತಃ ॥ ೬೧ ॥
ಚತುರ್ಥಾಂಶಾ ಚ ತದ್ವೃದ್ಧಿರ್ಯಾವನ್ಮೇರುಃ ಪ್ರಕೀರ್ತಿತಃ ॥ ೬೨ ॥
ಏವಂ ಪೃಥಕ್ಕಾರಯಿತ್ವಾ ಪ್ರಾಸಾದಾಂಶ್ಚ ಚತುರ್ದಶ ।
ಬ್ರಹ್ಮಾದೀನಾಂ ದೇವತಾನಾಂ ಸಮೀಪಸ್ಥಾನವಾಸಿನಾಂ ॥ ೬೩ ॥
ದಶ ಚಾऽನ್ಯಾನ್ಭೂಧರಾದೀನ್ ವೃಷಭಾಂತಾನ್ ವರಾನನೇ ।
ಆದೌ ಕಪರ್ದಿನಂ ಕೃತ್ವಾ ಪ್ರಾಸಾದಾನ್ ಪರ್ಯಕಲ್ಪಯತ್ ॥ ೬೪ ॥
ಮೇರುಃ ಪ್ರಾಸಾದರಾಜೋ ವೈ ಸ ತು ಸೋಮೇಶ್ವರೇ ಕೃತಃ ।
ತ್ರೇತಾಯುಗೇ ತು ದಶಮೇ ಮನೋರ್ವೈವಸ್ವತಸ್ಯ ಚ ॥ ೬೫ ॥
ಕಾರಯಿತ್ವಾ ಮಂಡಪಾಂಶ್ಚ ಪ್ರತಿಷ್ಠಾಪ್ಯ ಯಥಾವಿಧಿ ।
ನದಾನಾಂ ತು ಶತಂ ಕೃತ್ವಾ ವಾಪೀಕೂಪಸಹಸ್ರಕಂ ॥ ೬೬ ॥

ಪದ್ಮರಾಗ, ವಜ್ರಕ, ಮುಕುಟೋಜ್ವಲ, ಐರಾವತ, ರಾಜಹಂಸ, ಗರುಡ, ವೃಷಭ ಎಂದು ಆ ಪ್ರಾಸಾದಗಳ ನಾಮಗಳಾಗಿರುವುವು.

೬೧–೬೨. ದೇವತೆಗಳ ನಿವಾಸಸ್ಥಾನವಾಗಿ ಪ್ರಾಸಾದ ಶ್ರೇಷ್ಠವಾದ ಮೇರು ಪ್ರಾಸಾದವು ಐದು ಭಾಗವುಳ್ಳದು. ಕೇಸರೀ ಪ್ರಾಸಾದವು ಈ ಮೇರುವಿಗಿಂತ ನಾಲ್ಕು ಭಾಗದಷ್ಟು ದೊಡ್ಡದು.

೬೩–೬೪. ಹೀಗೆ ಸಮೀಪದಲ್ಲಿ ವಾಸಿಸುವ ಬ್ರಹ್ಮಾದಿ ದೇವತೆಗಳ ಹದಿನಾಲ್ಕು ಪ್ರಾಸಾದಗಳನ್ನೂ, ಭೂಧರಾದಿ ವೃಷಭಾಂತವಾದ ಇತರ ಹತ್ತು ಪ್ರಾಸಾದಗಳನ್ನೂ ನಿರ್ಮಾಣಮಾಡಿಸಿ ಇವುಗಳಿಗೆ ಮಹೇಶ್ವರನನ್ನು ಪ್ರಧಾನನನ್ನಾಗಿ ಮಾಡಿದನು.

೬೫. ಹತ್ತನೆಯ ತ್ರೇತಾಯುಗದ ವೈವಸ್ವತ ಮನ್ವಂತರದಲ್ಲಿ ಉತ್ತಮವಾದ ಮೇರು ಪ್ರಾಸಾದವು ಸೋಮೇಶ್ವರ ಕ್ಷೇತ್ರದಲ್ಲಿ ನಿರ್ಮಿತವಾಯಿತು.

೬೬–೬೭. ಮಂಡಪಗಳನ್ನು ನಿರ್ಮಾಣಮಾಡಿಸಿ ಅವುಗಳನ್ನು ಶಾಸ್ತ್ರರೀತಿಯಿಂದ ಪ್ರತಿಷ್ಠೆಮಾಡಿಸಿದನು. ನೂರುನದಗಳನ್ನೂ, ಸಾವಿರ ವಾಪೀ ಕೂಪಗಳನ್ನೂ,

ಗೃಹಾಣಾಂ ತು ಸಹಸ್ರಾಣಿ ದೀನಾಽನಾಥಾಶ್ರಯಾಣಿ ಚ ।
ಕಾರಯಿತ್ವಾ ವಿಧಾನೇನ ವಿಪ್ರೇಭ್ಯಃ ಪ್ರದದೌ ಪೃಥಕ್ ॥ ೧೭ ॥
ನಿವೇಶ್ಯ ನಗರಂ ಸೋಮಃ ಶ್ರೀಸೋಮೇಶ್ವರಸನ್ನಿಧೌ ।
ಸ್ವಕರ್ಮಣಾಂ ಪ್ರಚಾರಾರ್ಥಮಥಾಽಭ್ಯರ್ಥಯತ ದ್ವಿಜಾನ್ ॥ ೧೮ ॥
ಸೋಮೋಽಸ್ಮಿ ಭವತಾಂ ರಾಜಾ ಪ್ರಸಾದಾತ್ಪರಮೇಷ್ಠಿನಃ ।
ತಥಾಽಪಿ ವಿನಯೇನೈವ ಭಕ್ತ್ಯಾ ವಿಜ್ಞಾಪಯಾಮಿ ವಃ ॥ ೧೯ ॥
ಧನಂ ಹಿರಣ್ಯರತ್ನಾದಿ ಧಾನ್ಯಂ ವ್ರೀಹಿಯವಾದಿಕಂ ।
ಗೋಮಹಿಷ್ಯಾದಿ ಪಶವೋ ವಸ್ತ್ರಾಣಿ ವಿವಿಧಾನಿ ಚ ॥ ೨೦ ॥
ಕದಲೀ ನಾಲಿಕೇರಾಣಿ ತಾಂಬೂಲೀಪೂಗಮಾಲಿನಃ ।
ಮನೋಽಭಿರಾಮಚರಮಾ ಆರಾಮಾಃ ಪರಿತಃ ಸ್ಥಿತಾಃ ॥ ೨೧ ॥
ಜಂಬೂದ್ವೀಪಾಧಿಪಾಃ ಸರ್ವೇ ಭವತಾಮತ್ರವಾಸಿನಾಂ ।
ಆದೇಶಂ ಚ ಕರಿಷ್ಯಂತಿ ಶಿರಸ್ಯಾಧಾಯ ಶೋಭನಂ ॥ ೨೨ ॥
ದ್ವೀಪಾಂತರಾದಾಗತೈಶ್ಚ ಕರ್ಪೂರಾಗರುಚಂದನೈಃ ।
ಅನ್ಯೈಶ್ಚ ವಿವಿಧೈರ್ದ್ರವ್ಯೈಃ ಸಂಪೂರ್ಣಾ ಭವತಾಂ ಗೃಹಾಃ ॥ ೨೩ ॥

ಸಾವಿರ ಮನೆಗಳನ್ನೂ, ದೀನಾನಾಥರ ಗುಡಿಸಲುಗಳನ್ನೂ ನಿರ್ಮಿಸಿ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ದಾನಮಾಡಿದನು.

೧೮. ಚಂದ್ರನು ಶ್ರೀಸೋಮೇಶ್ವರನ ಹತ್ತಿರದಲ್ಲಿಯೆ ನಗರವನ್ನು ಸ್ಥಾಪಿಸಿ ಬ್ರಾಹ್ಮಣರನ್ನು ಅವರವರ ಕರ್ಮಗಳನ್ನು ನೆರವೇರಿಸುವಂತೆ ಪ್ರಾರ್ಥಿಸಿಕೊಂಡನು.

೧೯. "ಚತುರ್ಮುಖನ ಅನುಗ್ರಹದಿಂದ ಚಂದ್ರನಾದ ನಾನು ನಿಮಗೆ ದೊರೆಯಾಗಿರುವೆನು. ಹಾಗಾದರೂ ವಿನಯದಿಂದಲೂ, ಭಕ್ತಿಯಿಂದಲೂ ನಿಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

೨೦–೨೧. ದ್ರವ್ಯ, ಹಿರಣ್ಯ, ರತ್ನ, ಧಾನ್ಯ, ವ್ರೀಹಿ, ಯವ, ಗೋವು, ಎಮ್ಮೆ. ಮೊದಲಾದುವುಗಳೂ, ನಾನಾ ಬಗೆಯ ವಸ್ತ್ರಗಳೂ, ಬಾಳೆ, ತೆಂಗು, ವೀಳೆಯದೆಲೆ, ಅಡಿಕೆಗಳುಳ್ಳದಾಗಿ ಸುಂದರವಾದ ಬೇಲಿಗಳಿಂದ ಕಂಗೊಳಿಸುವ ತೋಟಗಳೂ, ಸುತ್ತಲೂ ಇವೆ.

೨೨. ಜಂಬೂ ದ್ವೀಪದ ದೊರೆಗಳೆಲ್ಲ ಇಲ್ಲಿ ವಾಸಿಸುವ ನಿಮ್ಮ ಅಪ್ಪಣೆಯನ್ನು ಶಿರಸಾವಹಿಸಿ ನೆರವೇರಿಸುವರು.

೨೩. ನಿಮ್ಮ ಮನೆಗಳು ದ್ವೀಪಾಂತರಗಳಿಂದ ಬಂದ ಕರ್ಪೂರ, ಅಗುರು, ಚಂದನಗಳಿಂದಲೂ ಇತರ ವಿವಿಧ ದ್ರವ್ಯಗಳಿಂದಲೂ ತುಂಬಿರುವುವು.

ಪಣ್ಯಾನಾಂ ಶತಸಂಖ್ಯಾನಾಂ ವ್ಯವಹಾರನಿದರ್ಶಿನಃ ।
ಚ್ರಹ್ಮೋತ್ತರಾಣಿ ತನ್ವಂತಿ ವಣಿಜೋ ಲಾಭಕಾಂಕ್ಷಿಣಃ ॥ ೭೪ ॥
ಭವತ್ಸು ಭೃತ್ಯಭಾವೇನ ವರ್ತಮಾನಾ ಹಿತೈಷಿಣಃ ।
ತೇ ಚಾಽನ್ಯೇ ಚ ತಥಾ ಪೌರಾ ನಾಽವಸೀದಂತಿ ಕರ್ಹಿಚಿತ್ ॥ ೭೫ ॥
ಏವಂ ಸಂಪೂರ್ಣವಿಭವೈರ್ಭವದ್ಭಿಃ ಶ್ರೇಯಸೇ ಮಮ ।
ಋತುಕ್ರಿಯಾ ವಿತನ್ಯಂತಾಂ ವಿಧಿವದ್ಭೂರಿದಕ್ಷಿಣಾಃ ॥ ೭೬ ॥
ಬ್ರಹ್ಮಾದೀನಿ ಚ ಸರ್ವಾಣಿ ಪ್ರವರ್ತಂತಾಮಹರ್ನಿಶಂ ।
ದೀನಾಂಧಕೃಪಣಾದೀನಾಂ ಕ್ರಿಯತಾಮಾರ್ತಿನಾಶನಂ ॥ ೭೭ ॥
ಅಭ್ಯಾಗತಾನಾಮೌಚಿತ್ಯಾದಾತಿಥ್ಯಂ ಚ ವಿಧೀಯತಾಂ ।
ತೀರ್ಥಯಾತ್ರಾಪ್ರಸಂಗೇನ ಸಮೇತಾನಾಂ ಮಹಾತ್ಮನಾಂ ॥ ೭೮ ॥
ಬ್ರಹ್ಮರ್ಷೀಣಾಮಾಶ್ರಮೇಷು ದೀಯಂತಾಮಾಶ್ರಯಾಃ ಸದಾ ।
ಮಯಾಽತ್ರ ಸ್ಥಾಪಿತಂ ಲಿಂಗಂ ಸರ್ವಕಾಲಂ ಪೃಥವ್ರತಾಃ ॥ ೭೯ ॥
ಪವಿತ್ರೈರುಪಚಾರೈಶ್ಚ ಪೂಜಯಂತು ದ್ವಿಜೋತ್ತಮಾಃ ।
ಅಷ್ಟೌ ಪ್ರಮಾಣಪುರುಷಾಃ ಪೌರಾಣಾಂ ಕಾರ್ಯದರ್ಶಿನಃ ॥ ೮೦ ॥
ವ್ಯವಹಾರಾನವೇಕ್ಷಧ್ವಂ ಸ್ಮೃತ್ಯಾಚಾರವಿಶಾರದಾಃ ।
ವ್ಯವಸ್ಥಾಂ ಮತ್ಕೃತಾಮೇತಾಂ ಭವಂತೋಽತ್ರ ದ್ವಿಜೋತ್ತಮಾಃ ॥ ೮೧ ॥

---

೭೪. ಲಾಭಾಪೇಕ್ಷೆಯಿಂದ ಅನೇಕ ವಸ್ತುಗಳನ್ನು ವಿಕ್ರಯಿಸುವ ವರ್ತಕರು ನಿಮಗೆ ಬ್ರಹ್ಮಾದಾಯವನ್ನು ತೆಗೆದಿಡುವರು.

೭೫. ನಿಮಗೆ ಹಿತವನ್ನು ಬಯಸುತ್ತ ದಾಸಭಾವದಿಂದಿರುವ ಆ ವರ್ತಕರೂ ಇತರ ಪಟ್ಟಣಿಗರೂ ಯಾವಾಗಲೂ ದುಃಖಪಡುವುದಿಲ್ಲ.

೭೬. ಹೀಗೆ ತುಂಬಿದ ಐಶ್ವರ್ಯವುಳ್ಳ ನೀವು ನನ್ನ ಶ್ರೇಯಸ್ಸಿಗಾಗಿ ವಿಧಿಯಂತೆ ಬಹುದಕ್ಷಿಣೆಗಳುಳ್ಳ ಯಜ್ಞಗಳನ್ನಾಚರಿಸಿರಿ.

೭೭. ಯಾವಾಗಲೂ ವೇದಾಧ್ಯಯನ ಮೊದಲಾದುವುಗಳೆಲ್ಲ ನಡೆಯಲಿ. ದೀನ, ಕುರುಡ, ಕೃಪಣಾದಿಗಳ ದುಃಖವನ್ನು ಪರಿಹರಿಸಿರಿ.

೭೮–೮೩. ಅಭ್ಯಾಗತರಿಗೆ ಔಚಿತ್ಯವನ್ನನುಸರಿಸಿ ಆತಿಥ್ಯವನ್ನು ಮಾಡಿರಿ. ತೀರ್ಥಯಾತ್ರೆಗಾಗಿ ಬಂದ ಮಹಾತ್ಮರಾದ ಬ್ರಹ್ಮರ್ಷಿಗಳಿಗೆ ನಿಮ್ಮ ಆಶ್ರಮಗಳಲ್ಲಿ ಯಾವಾಗಲೂ ಆಶ್ರಯವನ್ನು ನೀಡಿರಿ. ನಾನಿಲ್ಲಿ ಸ್ಥಾಪಿಸಿದ ಲಿಂಗವನ್ನು ಯಾವಾಗಲೂ ಶುದ್ಧೋಪಚಾರಗಳಿಂದ ಪೂಜಿಸಿರಿ. ಸ್ಮೃತಿ, ಆಚಾರಗಳಲ್ಲಿ ಕುಶಲರಾದ ಎಂಟು ಜನ ಮುಖ್ಯಸ್ಥರು ಪಟ್ಟಣಿಗರ ವ್ಯವಹಾರಗಳನ್ನು ನೋಡಿಕೊಳ್ಳಲಿ. ಬ್ರಾಹ್ಮಣವರ್ಯರೆ!

ಧಾರಯಂತು ಮಹಾತ್ಮಾನೋ ದಿಗ್ಗಜಾ ಇವ ಮೇದಿನೀಂ ।
ಏವಂ ಪ್ರಭುತ್ವಮಾಸ್ಥಾಯ ಸ್ಥಾನೇಽಸ್ಮಿಂಛಿವಶಾಲಿನಿ ॥ ೮೨ ॥
ಶ್ರುತಿಸ್ಮೃತಿಪುರಾಣೋಕ್ತಾನ್ ಧರ್ಮಾನಾಚರತ ದ್ವಿಜಾಃ ।
ನಿಶಮ್ಯ ಸೋಮಸ್ಯ ವಚೋ ವಿನೀತಮಿತಿ ತೇ ದ್ವಿಜಾಃ ॥ ೮೩ ॥
ಉವಾಚ ಕೌಶಿಕಸ್ತೇಷು ಗೋತ್ರಾಣಾಂ ಪ್ರಥಮೋ ದ್ವಿಜಃ ।
ಸಾಧೂಪದಿಷ್ಟಮಸ್ಮಾಕಂ ದ್ವಿಜರಾಜೇನ ಸರ್ವಥಾ ॥ ೮೪ ॥
ಸರ್ವಮೇತತ್ಕರಿಷ್ಯಾಮಃ ಕಿಂ ತು ಕಿಂಚಿನ್ನಿಶಾಮಯ ।
ನಿಯೋಗತಃ ಪೂಜಯತಾಂ ಶಿವನಿರ್ಮಾಲ್ಯಸೇವಿನಾಂ ॥ ೮೫ ॥
ಪಾತಿತ್ಯಂ ಜಾಯತೇಽಸ್ಮಾಕಂ ಶ್ರುತಿಸ್ಮೃತಿವಿಗರ್ಹಿತಂ ।
ಶ್ರುತಿಸ್ಮೃತೀ ಹಿ ರುದ್ರಸ್ಯ ಯಸ್ಮಾದಾಜ್ಞಾ ದ್ವಯಂ ಮಹತ್ ॥ ೮೬ ॥
ಕಸ್ತದುಲ್ಲಂಘಯೇನ್ಮೂಢಃ ಪ್ರಾಣೈಃ ಕಂಠಗತೈರಪಿ ॥ ೮೭ ॥
ಅಷ್ಟಮೂರ್ತೇಃ ಪುನರ್ಮೂರ್ತಾವಗ್ನೌ ದೇವಮುಖೇ ಮಖಾನ್ ।
ಕುರ್ವಾಣಾಃ ಶ್ರುತಿಮಾರ್ಗೇಣ ಪ್ರೀಣಯಾಮೋಽಖಿಲಂ ಜಗತ್ ॥ ೮೮ ॥

ನೀವು ನಾನು ಮಾಡಿದ ವ್ಯವಸ್ಥೆಯನ್ನು ನಡೆಸುತ್ತ ಭೂಮಿಯನ್ನು ದಿಗ್ಗಜಗಳಂತೆ ಧರಿಸಿರಿ. ಶ್ರುತಿ, ಸ್ಮೃತಿ, ಪುರಾಣಗಳಲ್ಲುಕ್ತವಾದ ಧರ್ಮವನ್ನಾಚರಿಸಿರಿ." ಹೀಗೆ ಚಂದ್ರನು ಹೀಗೆ ಸೋಮೇಶ್ವರನಿಂದ ಪ್ರಕಾಶಿಸುವ ಪ್ರಭಾಸಕ್ಷೇತ್ರದ ವ್ಯವಸ್ಥೆಯನ್ನು ಮಾಡಿದನು. ಬ್ರಾಹ್ಮಣರು ವಿನಯದಿಂದ ಚಂದ್ರನ ನುಡಿಯನ್ನು ಕೇಳಿದರು.

೮೪–೮೭. ಆಗ ಅವರಲ್ಲಿ ಗೋತ್ರಗಳಿಗೆ ಆದಿ ಪುರುಷನಾದ ಕೌಶಿಕನು ಇಂತೆಂದನು. "ಚಂದ್ರ! ನೀನು ಚೆನ್ನಾಗಿ ಉಪದೇಶಮಾಡಿರುವೆ. ಇದನ್ನೆಲ್ಲ ನಾವು ನೆರವೇರಿಸುವೆವು. ಆದರೆ ಒಂದು ಮಾತನ್ನು ಲಾಲಿಸು. ನಿನ್ನ ಅಪ್ಪಣೆಯಂತೆ ಶಿವನನ್ನು ಪೂಜಿಸುತ್ತ ಅವನ ನಿರ್ಮಾಲ್ಯವನ್ನು ಸೇವಿಸುವ ನಮಗೆ ಶ್ರುತಿ, ಸ್ಮೃತಿಗಳಿಂದ ನಿಂದ್ಯವಾದ ಪಾತಿತ್ಯವುಂಟಾಗುವುದು. ಶ್ರುತಿ ಸ್ಮೃತಿಗಳು ಆ ಶಿವನ ಮಹತ್ತಾದ ಆಜ್ಞೆಗಳಷ್ಟೆ. ಮೂಢನಾದ ಯಾವನುತಾನೆ ಪ್ರಾಣವು ಕಂಠಗತವಾಗಿದ್ದರೂ ಆ ಶ್ರುತಿ ಸ್ಮೃತಿಗಳನ್ನು ಮೀರಿಯಾನು.

೮೮. ಮಹೇಶ್ವರನ ಮೂರ್ತಿಯೂ, ದೇವತೆಗಳ ಮುಖವೂ ಆದ ಅಗ್ನಿಯಲ್ಲಿ ಶ್ರುತ್ಯುಕ್ತಮಾರ್ಗದಿಂದ ಯಜ್ಞಗಳನ್ನು ಮಾಡುತ್ತ ಸಮಸ್ತ ಜಗತ್ತನ್ನೂ ಸಂತೋಷಗೊಳಿಸುವೆವು.

ಜಗದ್ಭಗವತೋ ರೂಪಂ ವ್ಯಕ್ತಮೇತತ್ಪರದ್ವಿಷಃ ।
ವಿಭೋ ವಿಭಿನ್ನಮಿತ್ಯೇತದಭಿನ್ನಂ ಪುನರೀಶ್ವರಾತ್ ॥ ೮೯ ॥
ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ ।
ಆದಿತ್ಯಾಜ್ಜಾಯತೇವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥ ೯೦ ॥
ಶ್ರುತಿಸ್ಮೃತಿಪುರಾಣಾದಿಸದಭ್ಯಾಸ ಪ್ರಸಂಗಿನಾಂ ।
ತತ್ತದರ್ಥೇಷು ಪುಣ್ಯಾರ್ಥಂ ಪ್ರವೃತ್ತಾಽಖಿಲಕರ್ಮಣಾಂ ॥ ೯೧ ॥
ಅಸ್ಮಾಕಮವಕಾಶೋಽಪಿ ವಿರಲೋ ಲಿಂಗಪೂಜನೇ ॥
ರುದ್ರಜಾಪ್ಯೈರ್ಮಹಾಯಜ್ಞೈರ್ಯಜಾಮಶ್ಚೈವಮೀಶ್ವರಂ ॥ ೯೨ ॥
ಯಥಾಕ್ಷಣಂ ಯಥಾಕಾಲಂ ಲಿಂಗಂ ವೇದಮುಪಾಸ್ಮಹೇ ।
ಯತ್ತು ತೇಽಭಿಮತಃ ಸೋಮ ಶ್ರೀಸೋಮೇಶ್ವರಪೂಜನಂ ।
ತಚ್ಚ ಸಂಪಾದಯಿಷ್ಯಾಮಃ ಸವಿಶೇಷಂ ಮಹಾಮತೇ ॥ ೯೪ ॥
ಯೇನ ತ್ವದೀಪ್ಸಿತಂ ಸಿದ್ಧ್ಯೇತ್ತಮುಪಾಯಂ ನಿಶಾಮಯ ।
ಗೌರೀಶಂಕರಸಂವಾದಂ ಶ್ರುತ್ವಾ ಭಗವತೋ ಮುಖಾತ್ ॥ ೯೪ ॥

---

೮೯. ಮಹೇಶ್ವರನ ರೂಪವೂ ವ್ಯಕ್ತವೂ, ಪರಸ್ಪರ ಭಿನ್ನವಾಗಿ ತೋರುವುದೂ ಆದ ಈ ಜಗತ್ತು ಮಹೇಶ್ವರನಿಗಿಂತ ಅಭಿನ್ನವಾದುದು.

೯೦. ಅಗ್ನಿಯಲ್ಲಿ ಚೆನ್ನಾಗಿ ಹೋಮಿಸಿದ ಆಹುತಿಯು ಸೂರ್ಯನನ್ನು ಸೇರುವುದು. ಆ ಸೂರ್ಯನಿಂದ ಮಳೆಯೂ, ಮಳೆಯಿಂದ ಅನ್ನವೂ, ಆ ಅನ್ನದಿಂದ ಪ್ರಜೆಗಳೂ ಉಂಟಾಗುವರು.

೯೧–೯೩. ಶ್ರುತಿ, ಸ್ಮೃತಿ, ಪುರಾಣ ಮೊದಲಾದ ಸದಭ್ಯಾಸದಲ್ಲಿ ತೊಡಗಿರುವವರೂ, ಪುಣ್ಯಕ್ಕಾಗಿ ಸಕಲ ಕರ್ಮಗಳನ್ನು ಮಾಡುವವರೂ ಆಗಿರುವ ನಮಗೆ ಲಿಂಗಪೂಜೆಯನ್ನು ಮಾಡಲು ಅವಕಾಶವು ಕಡಮೆಯಾಗಿರುವುದು. ರುದ್ರಾಧ್ಯಾಯಗಳಿಂದಲೂ, ಮಹಾಯಜ್ಞಗಳಿಂದಲೂ ಸಕಾಲದಲ್ಲಿ ಈಶ್ವರನನ್ನು ಪೂಜಿಸುತ್ತ ಸೇವಿಸುವೆವು. ಪ್ರಾಜ್ಞನೆ ! ಹೀಗೆ ನಿನ್ನ ಇಷ್ಟದಂತೆ ಶ್ರೀ ಸೋಮೇಶ್ವರನ ಪೂಜೆಯನ್ನು ಅತಿಶಯವಾಗಿಯೆ ನೆರವೇರಿಸುವೆವು.

೯೪–೯೫. ನಿನ್ನ ಇಷ್ಟವು ಕೈಗೂಡಲು ಉಪಾಯವನ್ನು ಹೇಳುವೆವು ಕೇಳು . ಈಗ ನಾರದನು ಬ್ರಹ್ಮನಿಂದ ಗೌರೀಶಂಕರರ ಸಂವಾದವನ್ನು ಕೇಳಿ ನಮಗೆ ತಿಳಿಸಿದ ಕಥೆಯನ್ನು ಹೇಳುವೆವು. ಹಿಂದೆ ವೇದ, ದೇವತೆಗಳನ್ನು ದ್ವೇಷಿಸುತ್ತಿರುವ ನೂರಾರು

ನಾರದಃ ಪ್ರಾಹಃ ನಃ ಪೂರ್ವಂ ಕಥಯಾಮಾಸ್ತಮೇವ ತೇ ।
ಬ್ರಹ್ಮದೇವದ್ವಿಷಃ ಪೂರ್ವಂ ಶತಶೋ ದೈತ್ಯದಾನವಾಃ ।
ತಪೋಭಿರುಗ್ರೈರ್ವಿವಿಧೈಃ ಶಂಕರಂ ಪ್ರತಿಪೇದಿರೇ ॥ ೯೫ ॥
ತೇಷಾಮತ್ಯುಗ್ರತಪಸಾಮನನ್ಯಾಸಕ್ತಚೇತಸಾಂ ।
ಪ್ರಸಾದಮೀಶ್ವರಶ್ಚಕ್ರೇ ಕಾರುಣ್ಯಾಮೃತಸಾಗರಃ ॥ ೯೬ ॥
ಸ ಹಿ ತ್ರಿಭುವನಸ್ವಾಮೀ ದೇವದೇವೋ ಮಹೇಶ್ವರಃ ।
ಅಪೇಕ್ಷತೇ ವರಂ ದಾತುಂ ಭಕ್ತಿಮೇವಾನಪಾಯಿನೀಂ ॥ ೯೭ ॥
ದದೌ ಸ ಭುವನೈಶ್ವರ್ಯಪ್ರಾಯಾನಭಿಮತಾನ್ ವರಾನ್ ।
ತೇಷಾಂ ಭಕ್ತ್ಯೈವ ಸಂತುಷ್ಟೋ ದೇವಬ್ರಹ್ಮದ್ವಿಷಾಮಪಿ ॥ ೯೮ ॥
ಬ್ರಹ್ಮಣಾ ವಿಷ್ಣುನಾ ಚಾಽಪಿ ಯಸ್ಯಾಂತೋ ನಾಽಧಿಗಮ್ಯತೇ ।
ತಸ್ಯಾತರ್ಕ್ಯಪ್ರಭಾವಸ್ಯ ಕೋ ನು ವೇದಾಶಯಂ ಪ್ರಭೋಃ ॥ ೯೯ ॥
ದುರ್ವೃತ್ತೇಭ್ಯೋಽಪಿ ದೈತ್ಯೇಭ್ಯಸ್ತಪೋಭಿರ್ವರದಾಯಿನಂ ।
ಪಪ್ರಚ್ಛ ಸ್ವಚ್ಛಹೃದಯಾ ಪಾರ್ವತೀ ಪರಮೇಶ್ವರಂ ॥ ೧೦೦ ॥

ಪಾರ್ವತ್ಯುವಾಚ:—

ಭಗವನ್ ಪ್ರಸಾದಂ ತೇ ಪ್ರಾಪ್ಯ ಧೃಷ್ಯಂತೋ ಭುವನತ್ರಯಂ ।
ಉಪದ್ರವಂತೀಂದ್ರಮುಖಾನ್ ದೇವಾನ್ ಸಂಕ್ಷೋಭಯಂತಿ ಚ ॥ ೧೦೧ ॥

ಮಂದಿ ದೈತ್ಯದಾನವರು ನಾನಾವಿಧವಾದ ಕಠಿನ ತಪಸ್ಸುಗಳನ್ನಾಚರಿಸುತ್ತ ಶಂಕರನನ್ನು ಮರೆಹೊಕ್ಕರು.

೯೬. ದಯಾಳುವಾದ ಶಂಕರನು ಇತರ ದೇವತೆಗಳಲ್ಲಾಸಕ್ತವಾಗದ ಮನಸ್ಸುಳ್ಳ ಆ ದೈತ್ಯ ದಾನವರ ತಪಸ್ಸಿಗೆ ಮೆಚ್ಚಿ ಅನುಗ್ರಹಮಾಡಿದನು.

೯೭. ಆ ತ್ರೈಲೋಕ್ಯನಾಥನಾದ ಮಹೇಶ್ವರನು ಅವರ ನಿಶ್ಚಲಭಕ್ತಿಯಿಂದ ಸಂತುಷ್ಟನಾಗಿ ವರವನ್ನೀಯಲಪೇಕ್ಷಿಸಿದನು.

೯೮. ಆ ಶಂಕರನು ದೇವಬ್ರಹ್ಮದ್ವೇಷಿಗಳಾದವರೂ ಅವರಿಗೆ ಇಷ್ಟವಾದ ಲೋಕಾಧಿಪತ್ಯವೇ ಮೊದಲಾದ ವರಗಳನ್ನಿತ್ತನು.

೯೯. ಬ್ರಹ್ಮವಿಷ್ಣುಗಳೂ ಆ ಶಿವನ ಅಂತವನ್ನರಿತಿಲ್ಲ. ಇಂತಹ ಊಹಿಸಲಶಕ್ಯವಾದ ಮಾಹಾತ್ಮ್ಯವುಳ್ಳ ಆ ಶಿವನ ಅಭಿಪ್ರಾಯವನ್ನರಿತವರಾರು?

೧೦೦. ದುರ್ನಡತೆಯುಳ್ಳ ದೈತ್ಯರಿಗೆ ತಪಸ್ಸಿನಿಂದ ಮೆಚ್ಚಿ ವರವನ್ನಿತ್ತ ಶಂಕರನನ್ನು ಕುರಿತು ಶುದ್ಧಮನಸ್ಸುಳ್ಳ ಪಾರ್ವತಿಯು ಹೀಗೆ ಪ್ರಶ್ನಿಸಿದಳು.

೧೦೧. ಪಾರ್ವತಿಯು ಹೇಳುತ್ತಾಳೆ:— ಪೂಜ್ಯನೆ! ಆ ದೈತ್ಯದಾನವರು ನಿನ್ನ ಅನುಗ್ರಹವನ್ನು ಪಡೆದು ಮೂರು ಲೋಕಗಳನ್ನು ತಿರಸ್ಕರಿಸುತ್ತ ಇಂದ್ರಾದಿ ದೇವತೆಗಳನ್ನು ವ್ಯಥೆಗೊಳಿಸುತ್ತಿದ್ದಾರೆ.

ವರಂ ದದಾಸಿ ಕಿಂ ತೇಷಾಂ ತಾದೃಶಾನಾಂ ದುರಾತ್ಮನಾಂ ||
ಜಗತಃ ಸ್ವಸ್ತಯೇ ಯೇಷಾಂ ನ ಪುನಾಗಪಿ ಚೇಷ್ಟಿತಂ || ೧೦೨ ||
ತ್ವಯಾ ದತ್ತವರಾನೇತಾನ್ ದಿವ್ಯಾನ್ ಭೋಗೋಪಭೋಗಿನಃ |
ಅವಧೀರ್ಯ ತವೈಶ್ವರ್ಯಂ ಕಥಂ ವಿಷ್ಣುರ್ನಿಹಂತಿ ಚ || ೧೦೩ ||
ಹತಾನಾಂ ಚ ಪುನಸ್ತೇಷಾಂ ಕಾ ಗತಿಃ ಸ್ಯಾದ್ವದ ಪ್ರಭೋ || ೧೦೪ ||

ಈಶ್ವರ ಉವಾಚ:—

ಸಾತ್ವಿಕಾ ರಾಜಸಾಶ್ಚೈವ ತಾಮಸಾಶ್ಚೇತಿ ವೈ ತ್ರಿಧಾ |
ಭವಂತಿ ಲೋಕಾಸ್ತೇಷ್ವೇತೇ ತಮಃಪ್ರಾಯಾ ದುರಸದಾಃ || ೧೦೫ ||
ಸುರೈಃ ಸಹ ಸ್ಪರ್ಧಮಾನಾಸ್ತಪೋಭಿರಪಿ ತಾಮಸೈಃ |
ಮಾಂ ಭಜಂತೇ ಮುಹುರ್ಮೋಹಾಜ್ಜಗದುತ್ಪಾದನೋದ್ಯತಾಃ || ೧೦೬ ||
ವರಂ ದದಾಮಿ ಯತ್ತೇಷಾಂ ಭಕ್ತಿಸ್ತತ್ರ ತು ಕಾರಣಂ |
ಅಹಂ ಹಿ ಭಕ್ತ್ಯಾ ಸುಗ್ರಾಹ್ಯೋ ನಾಽತ್ರ ಕಾರ್ಯಾ ವಿಚಾರಣಾ || ೧೦೭ ||

---

೧೦೨. ಪ್ರಪಂಚದ ಕಲ್ಯಾಣಕ್ಕಾಗಿ ಕೆಲಸವನ್ನು ಮಾಡದಿರುವ ಅಂತಹ ದುಷ್ಟ ದಾನವರಿಗೆ ಏಕೆ ವರವನ್ನೀಯುವೆ ?

೧೦೩. ನಿನ್ನಿಂದ ವರವನ್ನು ಪಡೆದು ದಿವ್ಯಭೋಗಗಳನ್ನನುಭವಿಸುವ ಆ ದೈತ್ಯ ದಾನವರನ್ನು ವಿಷ್ಣುವು ನಿನ್ನ ಸಾಮರ್ಥ್ಯವನ್ನೂ ಲೆಕ್ಕಿಸದೆ ಹೇಗೆ ತಾನೆ ಕೊಲ್ಲುವನು ?

೧೦೪. ಹಾಗೆ ವಿಷ್ಣುವಿನಿಂದ ಹತರಾದ ಅವರಿಗೆ ಯಾವ ಗತಿಯು ಲಭಿಸುವುದು ? ಹೇಳು.

೧೦೫. ಈಶ್ವರನು ಹೇಳುತ್ತಾನೆ:—ಜನರು ಸಾತ್ವಿಕ, ರಾಜಸ, ತಾಮಸರೆಂದು ಮೂರು ವಿಧರಾಗಿರುವರು. ಅವರಲ್ಲಿ ಈ ದುಷ್ಟರು ತಾಮಸರು.

೧೦೬. ಈ ದೈತ್ಯದಾನವರು ತಾಮಸ ತಪಸ್ಸುಗಳಿಂದ ದೇವತೆಗಳೊಡನೆ ಸ್ಪರ್ಧಿಸುತ್ತ ಬಾರಿ ಬಾರಿಗೂ ಜಗತ್ತುಗಳನ್ನು ಪೀಡಿಸುತ್ತ ಅಜ್ಞಾನದಿಂದ ನನ್ನನ್ನು ಸೇವಿಸುತ್ತಾರೆ.

೧೦೭. ನಾನು ಅವರಿಗೆ ವರವನ್ನೀಯಲು ಭಕ್ತಿಯು ಕಾರಣವಾಗಿರುವುದು. ನಾನು ಭಕ್ತಿಗೆ ವಶನು ; ಈ ವಿಷಯದಲ್ಲಿ ವಿಚಾರವಿಲ್ಲ.

ತಪ್ಪೋಽನುರೂಪಾನಾಸಾದ್ಯ ವರಾಂಸ್ತೇ ಪಾಪಕಾರಿಣಃ ।
ವಿಷ್ಣುನಾ ಯನ್ನಿಹನ್ಯಂತೇ ತಚ್ಚ ದೇವಿ ನಿಬೋಧ ಮೇ ॥ ೧೦೮ ॥
ಅಹಂ ಹರಿಶ್ಚ ಯದ್ಭಿನ್ನೌ ಗುಣಭಾಗೋಽತ್ರ ಕಾರಣಂ ।
ಪರಮಾರ್ಥಾದಭಿನ್ನೌ ಚ ರಹಸ್ಯಂ ಪರಮಂ ಹ್ಯದಃ ॥ ೧೦೯ ॥
ಆರಾಧ್ಯಾರಾಧಕಾದಿಶ್ಚ ಭೇದಃ ಸಾಮಾನ್ಯ ಏವ ನೌ ।
ತಥಾಹ್ಯಹಮಿಮಾಂ ಗಂಗಾಂ ವಿಷ್ಣೋಃ ಪಾದಾಗ್ರನಿಃಸೃತಾಂ ॥ ೧೧೦ ॥
ವಹಾಮಿ ಶಿರಸಾ ಭಕ್ತ್ಯಾ ತ್ವದೀಕ್ಷಾಶಂಕಿತೋಽಪಿ ಸನ್ ।
ಅಪಿ ವಿಷ್ಣುಸ್ತ್ರಿಭುವನಂ ಪರಿತ್ರಾತುಂ ವ್ಯವಸ್ಥಯಾ ॥ ೧೧೧ ॥
ಮಾಮುಪಾಸ್ಯ ಚಿರಂ ಲೇಭೇ ಚಕ್ರಂ ದುಷ್ಟನಿಬರ್ಹಣಂ ।
ತ್ವಾಂ ಚ ತಸ್ಯ ಮಹಾಮಾಯಾಮಪ್ರಮೇಯಾತ್ಮನೋ ಹರೇಃ ॥ ೧೧೨ ॥
ಆರಾಧಯಾಮಿ ತದ್ಭಕ್ತ್ಯಾ ತ್ರಿಜಗಜ್ಜನ್ಮಕಾರಣಂ ।
ಶಿರಸ್ಯಾಧಾಯ ಚಾಽನ್ಯಾಂ ಮೇ ಶಕ್ತಿರೂಪಾಂ ತಥಾ ಹರಿಃ ॥ ೧೧೩ ॥
ಅಜೋಽಪಿ ಜನ್ಮನಾಸಾದ್ಯ ಲೋಕರಕ್ಷಾಂ ಕರೋತಿ ವೈ ।
ಹಂತುಂ ಹಿರಣ್ಯಕಶಿಪುಂ ನರಸಿಂಹವಪುಶ್ಚ ಸಃ ॥ ೧೧೪ ॥

---

೧೦೮. ಅವರು ತಮ್ಮ ತಪಸ್ಸಿಗನುಗುಣವಾದ ವರವನ್ನು ಪಡೆದು ಪಾಪಕಾರ್ಯವನ್ನೆಸಗಿ ವಿಷ್ಣುವಿನಿಂದ ಏಕೆ ಹತರಾಗುವರೆಂಬುದಕ್ಕೆ ಕಾರಣವನ್ನು ನನ್ನಿಂದ ತಿಳಿದುಕೊ.

೧೦೯. ನಾನೂ ವಿಷ್ಣುವೂ ಬೇರೆಯಾಗಿ ಕಾಣುವುದಕ್ಕೆ ಗುಣಾಂಶಗಳು ಕಾರಣವು. ನಾವಿಬ್ಬರೂ ಪಾರಮಾರ್ಥಿಕವಾಗಿ ಭಿನ್ನರಲ್ಲ. ಇದು ಪರಮ ರಹಸ್ಯವು.

೧೧೦–೧೧೬. ನಮ್ಮಿಬ್ಬರಲ್ಲಿ ಪೂಜ್ಯಪೂಜಕ ಭಾವಾದಿಗಳಿಂದ ಭೇದವು ಸಾಮಾನ್ಯವಾದುದು. ನಾನು ಆ ವಿಷ್ಣುವಿನ ಪಾದಾಗ್ರದಿಂದ ಹೊರಟ ಗಂಗೆಯನ್ನು ನಿನ್ನ ದರ್ಶನದಿಂದ ಶಂಕಿತನಾದರೂ ಭಕ್ತಿಯಿಂದ ತಲೆಯಲ್ಲಿ ಧರಿಸುತ್ತೇನೆ. ವಿಷ್ಣುವೂ ಮೂರುಲೋಕಗಳನ್ನು ಕಾಪಾಡುವುದಕ್ಕಾಗಿ ಬಹುಕಾಲ ನನ್ನನ್ನು ಸೇವಿಸಿ ದುಷ್ಟರನ್ನು ಕೊಲ್ಲುವ ಚಕ್ರವನ್ನು ಪಡೆದನು. ನಾನೂ ಅಪ್ರಮೇಯ ಸ್ವರೂಪನಾದ ಆ ಹರಿಯ ಮಹಾಮಾಯಾ ರೂಪಳಾಗಿ ಮೂರು ಲೋಕಗಳಿಗೆ ಕಾರಣಳಾದ ನಿನ್ನನ್ನು ಭಕ್ತಿಯಿಂದ ಪೂಜಿಸುತ್ತಿದ್ದೇನೆ. ಆ ವಿಷ್ಣುವು ನನ್ನ ಇನ್ನೊಂದು ಶಕ್ತಿರೂಪವನ್ನು ಶಿರಸ್ಸಿನಲ್ಲಿ ಧರಿಸಿ ತಾನು ಉತ್ಪತ್ತಿ ಶೂನ್ಯನಾದರೂ ಜನ್ಮವನ್ನು ಹೊಂದಿ ಲೋಕರಕ್ಷಣೆಯನ್ನು ಮಾಡುತ್ತಾನೆ. ಆ ವಿಷ್ಣುವು ಹಿರಣ್ಯಕಶಿಪುವನ್ನು ಕೊಲ್ಲಲು ನರಸಿಂಹರೂಪನಾಗಿ ಜಗತ್ತುಗಳನ್ನು ಕೊಲ್ಲಲುದ್ಯುಕ್ತನಾಗಲು ನಾನು ಶರಭ ರೂಪವನ್ನು ಧರಿಸಿ

ಜಗಜ್ಜಿಘಾಂಸುಃ ಶಮಿತೋ ಮಯಾ ಶರಭರೂಪಿಣಾ ।
ಮಾಂ ಚ ಬಾಣಪರಿತ್ರಾಣೇ ತ್ರಿಶೂಲೋದ್ಯಮಕಾರಿಣಾ ॥ ೧೧೫ ॥
ಮಾನುಷ್ಯೇಽಪ್ಯವತಾರೇಽಸೌ ಸ್ತಂಭಯಿತ್ವಾ ಸ ಲೀಲಯಾ ।
ಪ್ರಭಾವಂ ಮಹಿಮಾನಂ ಚ ವರ್ಧಯನ್ನಾತ್ಮಕಂ ಹರಿಃ ।
ವರಿವಸ್ಯತಿ ಮಾಂ ನಿತ್ಯಮಂತರಾತ್ಮಾಽಪಿ ಮೇ ವಿಭುಃ ॥ ೧೧೬ ॥
ಅಥಾಽಹಂ ಪರಮಾತ್ಮಾನಮೇನಮಾದ್ಯಂತವರ್ಜಿತಂ ।
ಧ್ಯಾನಯೋಗೈಃ ಸಮಾಧೌ ಚ ಭಾವಯಾಮಿ ನಿರಂತರಂ ॥ ೧೧೭ ॥
ತದೇವಂ ನಾಽಽವಯೋರ್ಭೇದೋ ವಿದ್ಯತೇ ಪಾರಮಾರ್ಥಿಕಃ ।
ಭೇದಂ ಚ ತಾರತಮ್ಯಂ ಚ ಮೂಢಾ ಏವ ವಿತನ್ವತೇ ॥ ೧೧೮ ॥
ವೈಷ್ಣವಂ ರೂಪಮಾಸ್ಥಾಯ ದುರ್ವೃತ್ತಾನ್ ಹನ್ಮಿ ತಾನಹಂ ।
ಗತಿಂ ಚ ತೇಷಾಮಧುನಾ ಮಹೇಶ್ವರಿ ನಿಶಾಮಯ ॥ ೧೧೯ ॥
ಮಯಿ ಭಕ್ತ್ಯಾ ವ್ಯವಸಾನೇ ತು ಹರೇಃ ಸಂದರ್ಶನೇನ ಚ ।
ಕ್ರೋಧದರ್ಪಾಽಭಿಭೂತತ್ವಾನ್ನ ಮುಕ್ತಿಂ ಪ್ರಾಪ್ನುವಂತಿ ತೇ ॥ ೧೨೦ ॥
ಆವಯೋಸ್ತು ಪ್ರಭಾವೇನ ತೇ ಪುನರ್ಧೌತಕಲ್ಮಷಾಃ ।
ಬ್ರಹ್ಮರ್ಷೀಣಾಂ ಕುಲೇ ಜನ್ಮ ಸಂಪ್ರಾಪ್ತಾ ಮುಕ್ತಿಹೇತುಕಂ ॥ ೧೨೧ ॥

ಅವನನ್ನು ಅಡಗಿಸಿದೆನು. ಆ ವಿಷ್ಣುವು ನನ್ನ ಅಂತರಾತ್ಮಸ್ವರೂಪನಾದರೂ ಮನುಷ್ಯಾವತಾರದಲ್ಲಿ ತನ್ನ ಪ್ರಭಾವವನ್ನು ಲೀಲೆಯಿಂದ ಅಡಗಿಸಿಕೊಂಡು ಬಾಣಾಸುರನನ್ನು ರಕ್ಷಿಸಲು ತ್ರಿಶೂಲವನ್ನು ಎತ್ತಿದ ನನ್ನ ಮಾಹಾತ್ಮ್ಯವನ್ನು ಹೆಚ್ಚಿಸುತ್ತ ನನ್ನನ್ನು ಯಾವಾಗಲೂ ಸೇವಿಸುತ್ತಾನೆ.

೧೧೭. ನಾನೂ ಆದ್ಯಂತ ರಹಿತನೂ, ಪರಮಾತ್ಮನೂ ಆದ ಆ ವಿಷ್ಣುವನ್ನು ಧ್ಯಾನಯೋಗಗಳಿಂದ ಯಾವಾಗಲೂ ಚಿಂತಿಸುತ್ತೇನೆ.

೧೧೮. ಹೀಗೆ ನಮ್ಮಿಬ್ಬರಿಗೆ ಪಾರಮಾರ್ಥಿಕಭೇದವಿಲ್ಲ. ಮೂಢರು ಭೇದ ತಾರತಮ್ಯಗಳನ್ನು ಕಲ್ಪಿಸುತ್ತಾರೆ.

೧೧೯. ಮಹೇಶ್ವರಿ! ನಾನು ವಿಷ್ಣುರೂಪವನ್ನು ಹೊಂದಿ ದುರ್ನಡತೆಯುಳ್ಳ ಆ ದೈತ್ಯದಾನವರನ್ನು ಕೊಲ್ಲುವೆನು. ಅವರಿಗೆ ಮುಂದಾಗುವ ಗತಿಯನ್ನು ಈಗ ಕೇಳು.

೧೨೦. ಅವರಿಗೆ ನನ್ನಲ್ಲಿರುವ ಭಕ್ತಿಯು ಮುಗಿಯಲು ವಿಷ್ಣುವಿನ ದರ್ಶನದಿಂದ ಕೋಪ, ಅಹಂಕಾರಗಳಿಗೀಡಾದ ಅವರು ಮುಕ್ತಿಯನ್ನೈದುವುದಿಲ್ಲ.

೧೨೧. ನಮ್ಮಿಬ್ಬರ ಮಾಹಾತ್ಮ್ಯದಿಂದ ಪಾಪರಹಿತರಾದ ಆ ದೈತ್ಯದಾನವರು ಮುಕ್ತಿಗೆ ಕಾರಣವಾದ ಬ್ರಹ್ಮರ್ಷಿಗಳ ವಂಶವನ್ನು ಹೊಂದುವರು.

ಬ್ರಹ್ಮಚಾರಿವ್ರತಾದೂರ್ಧ್ವಂ ಯೋಗಂ ಪಾಶುಪತಂ ಶ್ರಿತಾಃ ।
ಪ್ರಾಚೀನಕರ್ಮಸಂಸ್ಕಾರಾತ್ತೇ ಪುನರ್ಮಾಮುಪಾಸತೇ ॥ ೧೨೨ ॥
ಭಕ್ತಿಯೋಗೇನ ಚಾಽಽಸ್ಥಾಯ ವ್ರತಂ ಪಾಶುಪತಾದಿಕಂ ।
ಶ್ಮಶಾನವಾಸಿನೋ ನಗ್ನಾ ಅಪರೇ ಚೈಕವಾಸಸಃ ॥೧೨೩ ॥
ಭಿಕ್ಷಾಭುಜೋ ಭೂತಿಭೃತೋ ಮಲ್ಲಿಂಗಾನ್ಯರ್ಚಯಂತಿ ತೇ ।
ತಥಾ ಮದೇಕಾಗ್ರಧಿಯೋ ಮದ್ಧ್ಯಾನೈಕದೃಢವ್ರತಾಃ ॥ ೧೨೪ ॥
ಯೇ ತ್ವಾಮಪಿ ನಮಸ್ಯಂತಿ ಜಗತಾಂ ಮಮ ಚೇಶ್ವರೀಂ ।
ದೇಹಾವಸಾನಯೋಗೇನ ಮುಕ್ತಿಂ ತೇಷಾಂ ದದಾಮ್ಯಹಂ ॥ ೧೨೫ ॥
ಸಾರೂಪ್ಯಸಾಲೋಕ್ಯಮಯೀಂ ಮಯ್ಯಾವೇಶಿತಚೇತಸಾಂ ।
ಸಾಯುಜ್ಯಮುಕ್ತಯೇ ನಾಽಯಂ ಯೋಗಃ ಪಾಶುಪತೋ ಯತಃ ।
ಸ್ಮೃತ್ಯಾಚಾರೇಣ ಮುನಿಭಿಃ ಸ ಸದ್ಭಿಸ್ತೇನ ಗರ್ಹಿತಃ ॥ ೧೨೬ ॥

ದ್ವಿಜಾ ಊಚುಃ :—

ತೀರ್ಥಯಾತ್ರಾಪ್ರಸಂಗೇನ ತಾನಿಹೋಪಗತಾನ್ ದ್ವಿಜಾನ್ ।
ಸ್ವಮಾನಮುಪನೇಷ್ಯಾಮೋ ಭಕ್ತ್ಯಾವರ್ಜಿತಮಾನಸಾನ್ ॥ ೧೨೭ ॥

---

೧೨೨. ಅವರು ಬ್ರಹ್ಮಚರ್ಯವ್ರತವು ಮುಗಿದ ತರುವಾಯ ಪಾಶುಪತಯೋಗವನ್ನಾಶ್ರಯಿಸಿ ಹಿಂದಿನ ಕರ್ಮದ ಸಂಸ್ಕಾರದಿಂದ ಮರಳಿ ನನ್ನನ್ನು ಸೇವಿಸುತ್ತಾರೆ.

೧೨೩–೧೨೬. ಅವರಲ್ಲಿ ಕೆಲವರು ಭಕ್ತಿಯೋಗದಿಂದ ಪಾಶುಪತಾದಿ ವ್ರತವನ್ನು ಆಶ್ರಯಿಸಿ ಶ್ಮಶಾನದಲ್ಲಿ ವಾಸಿಸುತ್ತ ನಗ್ನರಾಗಿಯೂ, ಇನ್ನು ಕೆಲವರು ಏಕ ವಸ್ತ್ರವನ್ನುಟ್ಟು ಭಿಕ್ಷಾನ್ನವನ್ನು ತಿನ್ನುತ್ತ ವಿಭೂತಿಯನ್ನು ಧರಿಸಿದವರಾಗಿಯೂ ನನ್ನ ಲಿಂಗವನ್ನು ಪೂಜಿಸುತ್ತಾರೆ. ಹಾಗೆ ನನ್ನಲ್ಲಿನಟ್ಟ ಮನಸ್ಸುಳ್ಳವರೂ, ನನ್ನ ಧ್ಯಾನವೇ ಸ್ಥಿರವ್ರತವಾಗುಳ್ಳವರೂ ಆಗಿ ಜಗತ್ತುಗಳಿಗೂ, ನನಗೂ ಈಶ್ವರಿಯಾದ ನಿನ್ನನ್ನು ವಂದಿಸುವ ಅವರಿಗೆ ನಾನು ದೇಹಾವಸಾನದಲ್ಲಿ ಸಾರೂಪ್ಯ, ಸಾಲೋಕ್ಯರೂಪವಾದ ಮೋಕ್ಷವನ್ನೀಯುವೆನು. ಸಜ್ಜನರಾದ ಮುನಿಗಳು ಪಾಶುಪತಯೋಗವನ್ನು ಸ್ಮೃತ್ಯಾಚಾರಗಳಿಂದ ನಿಂದಿಸಿರುವುದರಿಂದ ಅವರಿಗೆ ಸಾಯುಜ್ಯಮುಕ್ತಿಯು ದೊರೆಯುವುದಿಲ್ಲ.

೧೨೭. ಬ್ರಾಹ್ಮಣರು ಹೇಳುತ್ತಾರೆ :—ತೀರ್ಥಯಾತ್ರಾಪ್ರಸಂಗದಿಂದ ಇಲ್ಲಿಗೆ ಆಗಮಿಸಿದ ಬ್ರಾಹ್ಮಣರನ್ನು ಭಕ್ತಿಯಿಂದ ಒಲಿಸಿಕೊಂಡು ಸನ್ಮಾನಿಸುವೆವು.

ಶುಚಿಭಿಕ್ಷಾನ್ನಕೌಪೀನಕಮಂಡಲ್ವಾದಿಸತ್ಕೃತಾಃ ।
ಅನನ್ಯಕಾರ್ಯಾಃ ಸತತಮಿಹಾಽಽಗತ್ಯ ತಪಸ್ವಿನಃ ॥ ೧೨೮ ॥
ಭವದ್ಪ್ರದತ್ತೈರ್ವಿವಿಧೈರುಪಹಾರೈರತಂದ್ರಿತಾಃ ।
ತತ್ವತಸ್ತತ್ವಸಂಖ್ಯಾಸ್ತೇ ಶಿವಧರ್ಮೈಕತತ್ಪರಾಃ ॥ ೧೨೯ ॥
ಶ್ರೀಸೋಮೇಶ್ವರಮಭ್ಯರ್ಚ್ಯ ತವ ಶ್ರೇಯೋಽಭಿವರ್ಧಕಾಃ ।
ಮುಕ್ತಿಮಂತೇ ಗಮಿಷ್ಯಂತಿ ದೇವಸ್ಯಾಪಿ ಸುದುರ್ಲಭಾಂ ॥ ೧೩೦ ॥
ತತೋಽನ್ಯೇಽಥ ತತೋಽಪ್ಯನ್ಯೇ ತತಶ್ಚಾಽನ್ಯೇ ತಪೋಧನಾಃ ।
ಪರೀಕ್ಷಿತಾಸ್ತು ತೇಽಸ್ಮಾಭಿರ್ಭವಿತಾರೋ ನಿಶಾಪತೇ ॥ ೧೩೧ ॥

ದ್ವಿಜಾ ಊಚುಃ :—

ಇತ್ಯಾಹ ಭಗವಾನ್ ದೇವ್ಯಾ ಪೃಷ್ಟಃ ಸ ಚ ತ್ರಿಲೋಚನಃ ।
ತತ್ರೈವ ನಾರದಃ ಸರ್ವಂ ಸಂವಾದಂ ಶಿವಯೋರಿತಂ ॥ ೧೩೨ ॥
ಶ್ರುತ್ವಾ ನಃ ಕಥಯಾಮಾಸ ಕಥಾಂ ಗೋಷ್ಠೀಷು ಪೃಚ್ಛತಾಂ ।
ತವ ಚಾಽಸ್ಮಾಭಿರಧುನಾ ಸರ್ವಮೇತದುದೀರಿತಂ ॥ ೧೩೩ ॥
ಏವಮುಕ್ತಸ್ತು ತೈಃ ಪ್ರೀತಃ ಸೋಮಃ ಸ್ವಭವನಂ ಯಯೌ ।
ತದಾಜ್ಞಯಾ ಚ ತತ್ಸರ್ವಂ ಯಥೋಕ್ತಂ ತೇಽಪಿ ಕುರ್ವತೇ ॥ ೧೩೪ ॥

೧೨೮–೧೩೦. ಇಲ್ಲಿಗೆ ಬಂದ ಮುನಿಗಳನ್ನು ಶುದ್ಧವಾದ ಭಿಕ್ಷಾನ್ನ, ಕೌಪೀನ, ಕಮಂಡಲು ಮೊದಲಾದುವುಗಳಿಂದಲೂ ನಿನಗೆ ಸಮರ್ಪಿಸಿದ ನಾನಾಬಗೆಯ ಉಪಹಾರಗಳಿಂದಲೂ ಸನ್ಮಾನಿಸುವೆವು. ಆ ಇಪ್ಪತ್ತುನಾಲ್ಕು ಮಂದಿ ಬ್ರಾಹ್ಮಣರು ಶಿವಧರ್ಮಾಸಕ್ತರಾಗಿ ಶ್ರೀ ಸೋಮೇಶ್ವರನ್ನು ಅರ್ಚಿಸಿ ನಿನಗೆ ಶ್ರೇಯಸ್ಸನ್ನು ಹೆಚ್ಚಿಸುತ್ತ ದೇಹಾವಸಾನದಲ್ಲಿ ದೇವದುರ್ಲಭವಾದ ಮೋಕ್ಷವನ್ನು ಹೊಂದುವರು.

೧೩೧. ಅನಂತರ ಇತರರು, ತರುವಾಯ ಬೇರೆಯವರು, ಬಳಿಕ ಅನ್ಯರು ಹೀಗೆ ಅನೇಕ ಮಂದಿ ಮುನಿಗಳು ಮುಕ್ತರಾಗುವುದನ್ನು ನಾವು ಪರೀಕ್ಷಿಸಿದ್ದೇವೆ.

೧೩೨–೧೩೩. ಬ್ರಾಹ್ಮಣರು ಹೇಳುತ್ತಾರೆ :—ಹೀಗೆ ದೇವಿಯ ಪ್ರಶ್ನೆಗೆ ಶಂಕರನು ಉತ್ತರವನ್ನು ಕೊಟ್ಟನು. ಅಲ್ಲಿದ್ದ ನಾರದನು ಗೌರೀಶಂಕರರ ಈ ಸಂವಾದವನ್ನು ಕೇಳಿ ಸಭೆಯಲ್ಲಿ ಪ್ರಶ್ನಿಸಿದ ನಮಗೆ ಅದೆಲ್ಲವನ್ನೂ ತಿಳಿಸಿದನು. ಈಗ ನಾವು ನಿನಗೆ ಇದನ್ನೆಲ್ಲ ಹೇಳಿದೆವು.

೧೩೪. ಆ ಬಾಹ್ಮಣರು ಹೀಗೆನಲು ಚಂದ್ರನು ಸಂತುಷ್ಟನಾಗಿ ತನ್ನ ಮನೆಗೆ ಹೊರಟು ಹೋದನು. ಆ ಬ್ರಾಹ್ಮಣರೂ ಚಂದ್ರನ ಆಜ್ಞೆಯಂತೆ ಎಲ್ಲವನ್ನೂ ಮಾಡುತ್ತಿದ್ದರು.

ದೇವ್ಯುವಾಚ :—

ಏವಂ ಪ್ರಭಾವೋ ದೇವೇಶಃ ಸೋಮೇಶಃ ಪಾಪನಾಶನಃ ।
ಕೇನೋಪಾಯೇನ ತುಷ್ಯೇತ ವ್ರತೇನ ನಿಯಮೇನ ವಾ ॥ ೧೩೪ ॥

ಈಶ್ವರ ಉವಾಚ :—

ಕಥಯಾಮಿ ಸ್ಫುಟಂ ಧರ್ಮಂ ಮಾನುಷಾಣಾಂ ಹಿತಾಯ ವೈ ।
ಸ ಯೇನ ತುಷ್ಯತೇ ದೇವಃ ಶೃಣು ತ್ವಂ ಸುರಸುಂದರಿ ॥ ೧೩೫ ॥
ನಿತ್ಯೋಪವಾಸನಕ್ತಾನಿ ವ್ರತಾನಿ ವಿವಿಧಾನಿ ಚ ।
ತೀರ್ಥೇ ದಾನಾನಿ ಸರ್ವಾಣಿ ಪಾತ್ರೇ ದತ್ತಾನ್ಯಶೇಷತಃ ॥ ೧೩೬ ॥
ತಪಶ್ಚ ತಪ್ತಂ ತೇನೈವ ಸ್ನಾತಂ ತೇನೈವ ಪುಷ್ಕರೇ ।
ಕೇದಾರೇ ತು ಜಲಂ ತೇನ ಗತ್ವಾ ಪೀತಂ ತು ನಿಶ್ಚಿತಂ ॥ ೧೩೭ ॥
ತೇನ ದೃಷ್ಟಂ ವರಾರೋಹೇ ಜ್ಯೋತಿರ್ಲಿಂಗಂ ಮಹಾಪ್ರಭಂ ।
ಸೋಮವಾರವ್ರತಂ ದಿವ್ಯಂ ಯೇನ ಚೀರ್ಣಂ ತು ಸಂಶ್ರಯೇ ॥ ೧೩೮ ॥
ಕಿಮನ್ಯೈರ್ಬಹುಭಿರ್ದಾನೈರ್ದತ್ತೈಃ ಪಾತ್ರೇಷು ಸುಂದರಿ ॥ ೧೩೯ ॥
ಪೂಜಿತಂ ಯೇನ ಭಾವೇನ ಸೋಮವಾರದಿನಾಷ್ಟಕಂ ।
ತೇನ ಸರ್ವಂ ಕೃತಂ ದೇವಿ ಚೀರ್ಣಂ ತತ್ರ ಮಹಾವ್ರತಂ ॥ ೧೪೦ ॥
ಇತಿಹಾಸಮಿಮಂ ಪೂರ್ವಂ ಕಥಯಾಮಿ ತವ ಪ್ರಿಯೇ ।
ಯಥಾವೃತ್ತಂ ಮಹಾದೇವಿ ಸೋಮವಾರವ್ರತಂ ಪ್ರತಿ ॥ ೧೪೧ ॥

---

೧೩೪. ದೇವಿಯು ಹೇಳುತ್ತಾಳೆ:—ಇಂತಹ ಮಾಹಾತ್ಮ್ಯಪೂರ್ಣನೂ, ಪಾಪಪರಿಹಾರಕನೂ ಆದ ಸೋಮೇಶ್ವರನು ಯಾವ ಉಪಾಯದಿಂದ, ವ್ರತದಿಂದ ಅಥವಾ ನಿಯಮದಿಂದ ಸಂತುಷ್ಟನಾಗುವನು ?

೧೩೫. ಈಶ್ವರನು ಹೇಳುತ್ತಾನೆ :—ಸುಂದರಿ ! ಆ ಸೋಮೇಶ್ವರನನ್ನು ಸಂತುಷ್ಟನಾಗಿಸುವ ಧರ್ಮವನ್ನು ಮನುಷ್ಯರ ಹಿತಕ್ಕಾಗಿ ಸ್ಪಷ್ಟವಾಗಿ ಹೇಳುವೆನು. ಕೇಳು.

೧೩೬—೧೪೧. ದಿವ್ಯವಾದ ಸೋಮವಾರವ್ರತವನ್ನಾಚರಿಸಿದವನು ಪ್ರತಿ ದಿನ ರಾತ್ರಿ ಉಪವಾಸವನ್ನೂ, ನಾನಾಬಗೆಯ ವ್ರತಗಳನ್ನೂ, ತೀರ್ಥದಲ್ಲಿ ಸತ್ಪಾತ್ರನಲ್ಲಿ ದಾನಗಳನ್ನೂ, ತಪಸ್ಸನ್ನೂ, ಪುಷ್ಕರತೀರ್ಥದಲ್ಲಿ ಸ್ನಾನವನ್ನೂ, ಕೇದಾರದಲ್ಲಿ ಜಲಪಾನವನ್ನೂ, ಅತ್ಯಂತ ಕಾಂತಿಯುಳ್ಳ ಜ್ಯೋತಿರ್ಲಿಂಗದರ್ಶನವನ್ನೂ ಮಾಡಿದಂತಾಗುವನು.

೧೪೨. ಪ್ರಿಯಳೆ ! ಹಿಂದೆ ನಡೆದ ಸೋಮವಾರವ್ರತದ ವಿಷಯಕವಾದ ಇತಿಹಾಸವನ್ನು ನಿನಗೆ ಹೇಳುವೆನು.

ಈಶ್ವರ ಉವಾಚ :—

ಕೈಲಾಸಸ್ಯ ಮಹೇಶಾನಿ ಉತ್ತರೇ ಚ ವ್ಯವಸ್ಥಿತಾ ।
ನಿಷಧೋಪರಿ ವಿಸ್ತೀರ್ಣಾ ಪುರೀ ನಾಮ ಸ್ವಯಂಪ್ರಭಾ ॥ ೧೪೩ ॥
ನಾನಾರತ್ನಸುಶೋಭಾಢ್ಯಾ ನಾನಾಗಂಧರ್ವಸಂಕುಲಾ ।
ಸರ್ವಾಽವಯವಸಂಪೂರ್ಣಾ ಶಕ್ರಸ್ಯೇವಾಽಮರಾವತೀ ॥ ೧೪೪ ॥
ಘನವಾಹನನಾಮಾ ಚ ಗಂಧರ್ವಸ್ತತ್ರ ತಿಷ್ಠತಿ ।
ಭುಂಕ್ತೇ ತತ್ರ ಮಹಾಭೋಗಾನ್ ದೇವೈರಪಿ ಸುದುರ್ಲಭಾನ್ ॥ ೧೪೫ ॥
ನವಯೌವನಸಂಯುಕ್ತಾ ಭಾರ್ಯಾ ತಸ್ಯ ಮನೋಹರಾ ।
ಪ್ರೌಢವಾಕ್ಯಾ ಸುಶೀಲಾ ಚ ಪೀನೋನ್ನತಪಯೋಧರಾ ॥ ೧೪೬ ॥
ತಯಾ ಸಾರ್ಧಂ ತು ಸಂಭೋಗಾನ್ ಭುಂಕ್ತೇ ಗಂಧರ್ವನಾಯಕಃ ।
ಉತ್ಪನ್ನಾ ತಸ್ಯ ಕಾಲೇನ ಪುತ್ರೀ ಪುತ್ರಾಷ್ಟಕೋಪರಿ ॥ ೧೪೭ ॥
ಸರ್ವಾಽವಯವಸಂಪನ್ನಾ ಸರ್ವವಿಜ್ಞಾನವೇದಿನೀ ।
ಗಂಧರ್ವಸೇನಾ ವಿಖ್ಯಾತಾ ನಾಮ್ನಾ ಸಾ ಪರಮೇಶ್ವರಿ ॥ ೧೪೮ ॥

೧೪೩–೧೪೪. ಕೈಲಾಸದ ಉತ್ತರ ದಿಕ್ಕಿನಲ್ಲಿ ನಿಷಧ ಪರ್ವತದ ಮೇಲೆ ನಾನಾರತ್ನಗಳ ಕಾಂತಿಗಳಿಂದ ಕೂಡಿರುವುದೂ ಅನೇಕ ಮಂದಿ ಗಂಧರ್ವರಿಂದ ವ್ಯಾಪ್ತವಾದುದೂ, ಸಕಲಾವಯವಗಳಿಂದ ಪೂರ್ಣವಾದ ಅಮರಾವತಿಯಂತಿರುವುದೂ, ಆದ ವಿಶಾಲವಾದ ಸ್ವಯಂಪ್ರಭಾ ಎಂಬ ಪಟ್ಟಣವಿರುವುದು.

೧೪೫. ಅಲ್ಲಿ ಘನವಾಹನನೆಂಬ ಗಂಧರ್ವನು ದೇವದುರ್ಲಭವಾದ ಸುಖಗಳನ್ನನುಭವಿಸುತ್ತಿದ್ದನು.

೧೪೬. ಅವನ ಪತ್ನಿಯು ನವತಾರುಣ್ಯದಿಂದ ಕೂಡಿರುವವಳೂ, ಸುಂದರಿಯೂ, ಪ್ರೌಢವಚನವುಳ್ಳವಳೂ, ಒಳ್ಳೆಯ ಸ್ವಭಾವವುಳ್ಳವಳೂ, ಉನ್ನತಕುಚವುಳ್ಳವಳೂ, ಆಗಿದ್ದಳು.

೧೪೭. ಆ ಗಂಧರ್ವನು ಅವಳೊಡನೆ ವಿನೋದಪಡುತ್ತಿರುವಾಗ ಎಂಟು ಮಂದಿ ಪುತ್ರರೂ, ಓರ್ವ ಕನ್ಯೆಯೂ ಜನಿಸಿದರು.

೧೪೮. ಪರಮೇಶ್ವರಿ ! ಸಕಲಾಂಗಸುಂದರಿಯೂ, ಸಮಸ್ತ ಕುಶಲವಿದ್ಯೆಯನ್ನರಿತವಳೂ ಆದ ಆ ಕನ್ಯೆಯು ಗಂಧರ್ವಸೇನೆಯೆಂದು ವಿಖ್ಯಾತಳಾದಳು.

ಕನ್ಯಾನಾಂ ತು ಸಹಸ್ರೇಷು ಪ್ರವರಾ ರೂಪಶಾಲಿನೀ ।
ಕೌತೂಹಲೇನ ಸಾ ಪಿತ್ರಾ ಪ್ರೋಕ್ತಾ ಕ್ರೀಡಸ್ವ ಭಾಮಿನಿ ॥ ೧೪೯ ॥
ಉದ್ಯಾನೇ ರಮಣೀಯೇಽತ್ರ ನಾನಾದ್ರುಮಲತಾಕುಲೇ ।
ವೃಕ್ಷೈರನೇಕೈಃ ಸಂಕೀರ್ಣೇ ಫಲಪುಷ್ಪಸಮನ್ವಿತೇ ॥ ೧೫೦ ॥
ಏವಂ ಸಾ ರಮತೇ ನಿತ್ಯಂ ಕನ್ಯಾಪರಿವೃತಾ ಸದಾ ।
ಏವಂ ದೃಷ್ಟ್ವಾ ಕ್ರೀಡಮಾನಾಂ ಮಾತಾ ಭರ್ತಾರಮಬ್ರವೀತ್ ॥ ೧೫೧ ॥
ಜೀವಿತಂ ನಿಷ್ಫಲಂ ಸ್ವಾಮಿನ್ ಮಮ ತೇ ಸಹ ಬಾಂಧವೈಃ ।
ಯಸ್ಯೇದೃಶೀ ಗೃಹೇ ಕನ್ಯಾ ತಿಷ್ಠತೇ ಭರ್ತೃವರ್ಜಿತಾ ॥ ೧೫೨ ॥
ಇತ್ಯುಕ್ತಃ ಸ ತು ಗಂಧರ್ವೋ ಭಾರ್ಯಾಂ ವಚನಮಬ್ರವೀತ್ ।
ಅನ್ವೇಷಯಾಮಿ ಭರ್ತಾರಂ ಪುತ್ರ್ಯರ್ಥೇ ತು ಮನೋಹರಂ ॥ ೧೫೩ ॥
ಇತ್ಯುಕ್ತ್ವಾಽಽಹ್ವಾಪಯಾಮಾಸ ಪುತ್ರೀಂ ತಾಂ ಘನವಾಹನಃ ।
ಆಹೂತಾ ಪಿತೃಮಾತೃಭ್ಯಾಂ ತ್ವರಿತಾಽಽಗತ್ಯ ಸುಂದರಿ ॥ ೧೫೪ ॥
ಅನುಕ್ರಮೇಣ ಸರ್ವೇಷಾಂ ಪತಿತಾ ಪಾದಯೋಃ ಶುಭಾ ।
ಆದೇಶಂ ದೇಹಿ ಮೇ ತಾತ ಕಿಂ ನು ಕಾರ್ಯಂ ಮಯಾಽಧುನಾ ॥ ೧೫೫ ॥

೧೪೯–೧೫೦. ಅನೇಕ ಸಾವಿರ ಕನ್ಯೆಯರಲ್ಲಿ ಅತಿಶಯಲಾವಣ್ಯವತಿಯಾದ ಆ ಗಂಧರ್ವಸೇನೆಯನ್ನು ಕುರಿತು ಘನವಾಹನನು ಕುತೂಹಲದಿಂದ, "ಮಗು ! ಅನೇಕ ವೃಕ್ಷಗಳು, ಲತೆಗಳು, ಫಲಗಳು, ಪುಷ್ಪಗಳು ಇವುಗಳಿಂದ ತುಂಬಿ ಸುಂದರ ವಾಗಿರುವ ಈ ತೋಟದಲ್ಲಿ ನೀನು ಆಟವಾಡು" ಎಂದನು.

೧೫೧. ಆದರಿಂದ ಆ ಗಂಧರ್ವಸೇನೆಯು ಪ್ರತಿದಿನವೂ ಕನ್ಯೆಯರೊಡನೆ ಅಲ್ಲಿ ಆಡುತ್ತಿದ್ದಳು. ಹೀಗೆ ಆಡುತ್ತಿರುವ ಅವಳನ್ನು ಕಂಡು ತಾಯಿಯು ಪತಿ ಯನ್ನು ಕುರಿತು ಹೀಗೆಂದಳು.

೧೫೨. "ನಾಥ ! ಇಂತಹ ನಮ್ಮ ಕನ್ಯೆಯು ಪತಿಯಿಲ್ಲದೆ ಮನೆಯಲ್ಲಿರುವುದ ರಿಂದ ನನ್ನ ನಿನ್ನ ಬದುಕು ಬಾಂಧವರೊಡನೆ ವ್ಯರ್ಥವಾಗಿರುವುದು."

೧೫೩. ಸತಿಯು ಹೀಗೆನ್ನಲು ಗಂಧರ್ವನು ಅವಳನ್ನು ಕುರಿತು ಇಂತೆಂದನು. ನಮ್ಮ ಮಗಳಿಗಾಗಿ ಸುಂದರನಾದ "ವರನನ್ನು ಹುಡುಕುತ್ತೇನೆ."

೧೫೪–೧೫೫. ಹೀಗೆಂದು ಹೇಳಿ ಆ ಘನವಾಹನನು ಗಂಧರ್ವಸೇನೆಯನ್ನು ಕರೆಯಿಸಿದನು. ಅವಳು ತ್ವರೆಯಿಂದ ಬಂದು ಕ್ರಮವಾಗಿ ಎಲ್ಲರ ಪಾದಗಳಿಗೆರಗಿ "ತಂದೆಯೆ ! ಈಗ ನಾನು ಏನನ್ನು ಮಾಡಬೇಕು ? ಅಪ್ಪಣೆಮಾಡು" ಎಂದಳು.

ಉಕ್ತಂ ಚ ಘನವಾಹೇನ ಹರ್ಷಿತೇನ ವಚಸ್ತತಃ ।
ಹೇ ಪುತ್ರಿ ತವ ಯಃ ಕಶ್ಚಿದ್ವರಃ ಸಂಪ್ರತಿ ರೋಚತೇ ।
ದಿವ್ಯಂ ದ್ರಕ್ಷ್ಯೇ ತ್ವತ್ಸದೃಶಂ ಗಂಧರ್ವಾಣಾಂ ಶಿರೋಮಣಿಂ ॥ ೧೫೬ ॥
ಇತ್ಯುಕ್ತಾ ಕ್ರೋಧತಾಮ್ರಾಕ್ಷೀ ಪಿತರಂ ವಾಕ್ಯಮಬ್ರವೀತ್ ।
ಮಮ ರೂಪಸ್ಯ ಕೋಟ್ಯಂಶೇ ಕಿಂ ಕೋಽಪ್ಯಸ್ತಿ ಜಗತ್ತ್ರಯೇ ।
ತಚ್ಛ್ರುತ್ವಾ ಚಾಽದ್ಭುತಂ ವಾಕ್ಯಂ ಪಿತಾ ಮಾತಾ ಚ ಮೋಹಿತೌ ॥೧೫೭॥
ಸರ್ವೇ ವಿಷಾದಮಾಪನ್ನಾ ಬಾಂಧವಾಶ್ಚ ಪರೇ ಜನಾಃ ।
ಅಶೋಭನಮಿದಂ ವಾಕ್ಯಂ ಕನ್ಯಯಾ ಯತ್ಪ್ರಭಾಷಿತಂ ।
ಇತ್ಯುಕ್ತ್ವಾ ತು ಗತಾಃ ಸರ್ವೇ ಜನನೀಜನಬಾಂಧವಾಃ ॥ ೧೫೮ ॥
ಸಾ ತತ್ರೈವ ಮಹೋದ್ಯಾನೇ ರಮತೇ ಸಖಿಸಂಯುತಾ ।
ಹಿಂಡೋಲಕೇ ಸಮಾರೂಢಾ ವಸಂತೇ ಮಾಸಿ ಭಾಮಿನಿ ॥ ೧೫೯ ॥
ತಾವದ್ದಿವ್ಯವಿಮಾನಸ್ಥಃ ಶಿಖಂಡೀ ಗಣನಾಯಕಃ ।
ಗಚ್ಛನ್ ಖೇ ದದೃಶೇ ಕನ್ಯಾಂ ರೂಪೌದಾರ್ಯಸಮಾಕುಲಾಂ ॥ ೧೬೦ ॥
ಗೀತವಾದ್ಯೇನ ನೃತ್ಯೇನ ರಮತೀಂ ದುಂದುಭಿಸ್ವನೈಃ ।
ಸ ಮಾಧ್ಯಾಹ್ನಿಕಸಂಧ್ಯಾಯಾಮವತೀರ್ಯ ವಿಮಾನತಃ ॥ ೧೬೧ ॥

---

೧೫೬. ಆಗ ಸಂತೋಷಗೊಂಡ ಘನವಾಹನನು "ನಿನಗೆ ಇಷ್ಟನೂ, ನಿನ್ನಂತೆಯೇ ಸುಂದರನೂ ಆದ ಗಂಧರ್ವಶ್ರೇಷ್ಠನಾದ ವರನನ್ನು ನೋಡುವೆನು" ಎಂದನು.

೧೫೭. ಹೀಗೆ ತಂದೆಯು ಹೇಳಲು ಸಿಟ್ಟಿನಿಂದ ಕೆಂಪೇರಿದ ಕಣ್ಣುಗಳುಳ್ಳ ಆ ಕನ್ಯೆಯು ತಂದೆಯನ್ನು ಕುರಿತು "ಮೂರುಲೋಕಗಳಲ್ಲಿ ನನ್ನ ಸೌಂದರ್ಯಕ್ಕೆ ಕೋಟಿಭಾಗದಿಂದ ಸಾಟಿಯಾದವನು ಯಾವನಿದ್ದಾನೆ?" ಎಂದಳು. ಆ ಕನ್ಯೆಯ ಆ ಅದ್ಭುತ ವಾಕ್ಯವನ್ನು ಕೇಳಿ ತಂದೆತಾಯಿಗಳು ಮೋಹಗೊಂಡರು.

೧೫೮. ಬಾಂಧವರೂ ಇತರ ಜನರೂ ವಿಷಾದಗೊಂಡು ಕನ್ಯೆಯು ನುಡಿದ ಈ ಮಾತು ಸರಿಯಲ್ಲವೆಂದು ಹೇಳಿ ಹೊರಟು ಹೋದರು.

೧೫೯. ಆ ಕನ್ಯೆಯು ಅದೇ ಉದ್ಯಾನದಲ್ಲಿ ವಸಂತಮಾಸದಲ್ಲಿ ಸಖಿಯರೊಡನೆ ಉಯ್ಯಾಲೆಯಲ್ಲಿ ಕುಳಿತು ಆಡುತ್ತಿದ್ದಳು.

೧೬೦—೧೬೩. ಅಷ್ಟರಲ್ಲಿ ಆಕಾಶದಲ್ಲಿ ದಿವ್ಯ ವಿಮಾನಾರೂಢನಾಗಿ ಹೋಗುತ್ತಿದ್ದ ಶಿಖಂಡಿಎಂಬ ಗಣನಾಯಕನು ಗೀತ, ವಾದ್ಯ, ನೃತ್ಯ, ದುಂದುಭಿಧ್ವನಿ ಇವುಗಳಿಂದ ವಿನೋದಪಡುತ್ತಿರುವ ಸುಂದರಿಯಾದ ಆ ಕನ್ಯೆಯನ್ನು ಕಂಡನು. ಅವನು ಮಾಧ್ಯಾಹ್ನಿಕ

ಕ್ರೀಡಮಾನೋಽಪ್ಸರೋಭಿಸ್ತು ತತ್ರೋದ್ಯಾನೇ ಸ್ಥಿತಸ್ತತಃ ।
ಶುಶ್ರಾವ ವಾಕ್ಯಂ ಕನ್ಯಾಯಾ ಗಂಧರ್ವದುಹಿತುಸ್ತದಾ ॥ ೧೬೨ ॥
ನ ಕೋಽಪಿ ಸದೃಶೋ ಲೋಕೇ ಮಮ ರೂಪೇಣ ದೃಶ್ಯತೇ ।
ದೇವೋ ವಾ ದಾನವೋ ವಾಽಪಿ ಕೋಟ್ಯಂಶೇ ಮಮ ರೂಪತಃ ॥ ೧೬೩ ॥
ಇತಿ ವಾಕ್ಯಂ ತತಃ ಶ್ರುತ್ವಾ ಗಣಃ ಕ್ರೋಧಸಮನ್ವಿತಃ ।
ಶಶಾಪ ತಾಂ ಸುಚಾರ್ವಂಗೀಂ ಸಾಹಂಕಾರಾಂ ಗಣೇಶ್ವರಃ ॥ ೧೬೪ ॥

ಗಣ ಉವಾಚ :—

ಮಾಂ ದೃಷ್ಟ್ವಾ ಯದ್ವಿಶಾಲಾಕ್ಷಿ ರೂಪಸೌಭಾಗ್ಯಗರ್ವಿತಾ ।
ಸಮಾಕ್ಷಿಪಸಿ ಗಂಧರ್ವಾನ್ ದೇವಾದ್ಯಾಂಶ್ಚೈವ ಗರ್ವಿತಾ ॥ ೧೬೫ ॥
ತಸ್ಮಾತ್ತೇ ಗರ್ವಸಂಯುಕ್ತೇ ಕುಷ್ಠಮಂಗೇ ಭವಿಷ್ಯತಿ ।
ಶ್ರುತ್ವಾ ಶಾಪಂ ತತಃ ಕನ್ಯಾ ಭಯಭೀತಾ ತಪಸ್ವಿನೀ ॥ ೧೬೬ ॥
ಸಾಷ್ಟಾಂಗಂ ಪ್ರಣಿಪತ್ಯಾಥಾಽನುಗ್ರಹಾರ್ಥಮಯಾಚತ ।
ಭಗವನ್ ಮಮ ದೀನಾಯಾಃ ಶಾಪಸ್ಯಾನುಗ್ರಹಂ ಪ್ರಭೋ ।
ಪ್ರಯಚ್ಛ ತ್ವಂ ಮಹಾಭಾಗ ನೈವಂ ಕರ್ತ್ರೀ ಪುನಃ ಕ್ವಚಿತ್ ॥ ೧೬೭ ॥

ಸಂಧ್ಯಾಕಾಲದಲ್ಲಿ ವಿಮಾನದಿಂದಿಳಿದು ಅಪ್ಸರೆಯರೊಡನೆ ಆ ಉದ್ಯಾನದಲ್ಲಿ ವಿನೋದ ಪಡುತ್ತ " ಲೋಕದಲ್ಲಿ ನನ್ನ ಸೌಂದರ್ಯದ ಕೋಟಿಭಾಗಕ್ಕೂ ಸಾಟಿಯಾದ ದೇವತೆಯಾಗಲಿ, ದಾನವನಾಗಲಿ ಯಾರೂ ಇಲ್ಲ " ಎಂಬ ಆ ಗಂಧರ್ವ ಕನ್ಯೆಯ ಮಾತನ್ನು ಕೇಳಿದನು.

೧೬೪. ಗಣನಾಯಕನು ಅವಳ ಈ ಮಾತನ್ನು ಕೇಳಿ ಕೋಪಗೊಂಡು ಸುಂದರಿಯೂ, ಗರ್ವಿಷ್ಠಳೂ ಆದ ಅವಳನ್ನು ಹೀಗೆ ಶಪಿಸಿದನು.

೧೬೫–೧೬೭. ಗಣನಾಯಕನು ಹೇಳುತ್ತಾನೆ:—ವಿಶಾಲಾಕ್ಷಿ! ಸೌಂದರ್ಯದಿಂದ ಅಹಂಕಾರಗೊಂಡ ನೀನು ನನ್ನನ್ನು ಈಕ್ಷಿಸಿ ದೇವಗಂಧರ್ವರೇ ಮೊದಲಾದವರನ್ನು ಧಿಕ್ಕರಿಸಿದುದರಿಂದ ನಿನ್ನ ಅಂಗಗಳಲ್ಲಿ ಕುಷ್ಠರೋಗವುಂಟಾಗುವುದು ಎಂದನು. ತರುವಾಯ ಆ ಕನ್ಯೆಯು ಈ ಶಾಪವನ್ನು ಕೇಳಿ ಭಯದಿಂದ ನಡುಗುತ್ತ ಸಾಷ್ಟಾಂಗ ಪ್ರಣಾಮಮಾಡಿ ಅನುಗ್ರಹಿಸುವುದಕ್ಕಾಗಿ ಆ ಗಣೇಶ್ವರನನ್ನು ಹೀಗೆ ಬೇಡಿಕೊಂಡಳು. "ಪೂಜ್ಯನೆ! ನೀನು ದೀನಳಾದ ನನಗೆ ಅನುಗ್ರಹಮಾಡು, ಮಹಾಭಾಗ್ಯಶಾಲಿಯೆ! ಮರಳಿ ಹೀಗೆ ನಾನು ಯಾವಾಗಲೂ ಮಾಡುವುದಿಲ್ಲ"

ಇತ್ಯುಕ್ತಸ್ತವ ಕಾರುಣ್ಯಾಚ್ಛಿಖಂಡೀ ಗಣನಾಯಕಃ ।
ಅನುಗ್ರಹಂ ದದೌ ತಸ್ಯಾ ಗಂಧರ್ವದುಹಿತುಸ್ತದಾ ॥ ೧೬೮ ॥

ಶಿಖಂಡ್ಯುವಾಚ :—

ಜಾತಿರೂಪೇಣ ಸಂಯುಕ್ತೋ ವಿದ್ಯಾಽಹಂಕಾರಸಂಪದಾ ।
ಯೋ ಯೇನ ಗರ್ವಿತಃ ಪ್ರಾಣೀ ಸ ತಂ ಪ್ರಾಪ್ಯ ವಿನಶ್ಯತಿ ॥ ೧೬೯ ॥
ತಸ್ಮಾದ್ಗರ್ವೋ ನೈವ ಕಾರ್ಯೋ ಗರ್ವಸ್ಯೈತತ್ಫಲಂ ಸ್ಮೃತಂ ।
ಶೃಣುಷ್ವಾನುಗ್ರಹಂ ಬಾಲೇ ಶ್ರುತ್ವಾ ಚೈವಾಽವಧಾರಯ ॥ ೧೭೦ ॥
ಹಿಮವದ್ವನಮಧ್ಯಸ್ಥೋ ಗೋಶೃಂಗ ಋಷಿಪುಂಗವಃ ।
ಕರಿಷ್ಯತ್ಯುಪಕಾರಂ ಸ ಏವಮುಕ್ತ್ವಾ ಗತಃ ಪ್ರಿಯೇ ॥ ೧೭೧ ॥
ತಾವತ್ಸಂಧ್ಯಾ ಸಮಾಯಾತಾ ತತ್ಕ್ಷಣಾದ್ಭುವನಾಂತರೇ ॥ ೧೭೨ ॥
ತತೋ ಗಂಧರ್ವತನಯಾ ಭಗ್ನೋತ್ಸಾಹಾ ನತಾನನಾ ।
ಪರಿತ್ಯಜ್ಯ ವನಂ ರಮ್ಯಮಾಗತಾ ಪಿತುರಂತಿಕೇ ॥ ೧೭೩ ॥

---

೧೬೮. ಅವಳು ಹೀಗೆನ್ನಲು ಶಿಖಂಡಿಯಾದ ಗಣನಾಯಕನು ಮರುಕಗೊಂಡು ಆ ಗಂಧರ್ವಕನ್ಯೆಗೆ ಅನುಗ್ರಹಮಾಡಿದನು.

೧೬೯. ಶಿಖಂಡಿಯು ಹೇಳುತ್ತಾನೆ:—ಜಾತಿ, ರೂಪ, ವಿದ್ಯಾ, ಸಂಪತ್ತುಗಳಲ್ಲಿ ಯಾವ ಪ್ರಾಣಿಯು ಯಾವುದರಿಂದ ಅಹಂಕಾರಗೊಂಡಿರುವುದೊ, ಅದು ಅದರಿಂದಲೇ ಹಾಳಾಗುವುದು.

೧೭೦. ಆದುದರಿಂದ ಅಹಂಕಾರಪಡಬಾರದು. ಹಾಗೆ ಅಹಂಕಾರ ಪಟ್ಟವರಿಗೆ ಈ ಫಲವು ದೊರೆಯುವುದು ಕನ್ಯೆ! ಅನುಗ್ರಹದ ಕ್ರಮವನ್ನು ಕೇಳಿ ನಿರ್ಣಯಿಸಿಕೊ.

೧೭೧. ಪ್ರಿಯಳೆ! ಆ ಗಣನಾಯಕನು “ ಹಿಮಾಲಯದ ಅರಣ್ಯದ ನಡುವೆ ವಾಸಿಸುವ ಗೋಶೃಂಗನೆಂಬ ಮುನಿವರ್ಯನು ನಿನಗೆ ಉಪಕಾರಮಾಡುವನು ” ಎಂದು ನುಡಿದು ಹೊರಟು ಹೋದನು

೧೭೨–೧೭೩. ಅಷ್ಟರಲ್ಲಿ ಸಂಜೆಯಾಗಲು ಗಂಧರ್ವಸೇನೆಯು ಉತ್ಸಾಹವಿಲ್ಲದೆ ತಲೆತಗ್ಗಿಸಿಕೊಂಡು ರಮ್ಯವಾದ ಆ ಉದ್ಯಾನವನ್ನು ತ್ಯಜಿಸಿ ತಂದೆಯ ಬಳಿಗೆ ಬಂದಳು.

ಕಥಯಾಮಾಸ ತತ್ಸರ್ವಂ ಕಾರಣಂ ಕುಷ್ಠಸಂಭವಂ ।
ತಚ್ಛ್ರುತ್ವಾ ಶೋಕಸಂತಪ್ತೌ ಪಿತರೌ ವಿಗತಪ್ರಭೌ ॥ ೧೭೪ ॥
ಹಿಮವಂತಂ ಗಿರಿಂ ಪ್ರಾಪ್ತೌ ತ್ವರಿತೌ ಸುತಯಾ ಸಹ ।
ಗೋಶೃಂಗಸ್ಯ ಋಷೇಸ್ತತ್ರ ದದೃಶಾತೇ ತಥಾಽಽಶ್ರಮಂ ॥ ೧೭೫ ॥
ತತ್ರ ಮಧ್ಯಸ್ಥಿತಂ ದೃಷ್ಟ್ವಾ ಗೋಶೃಂಗಮೃಷಿಪುಂಗವಂ ।
ಪ್ರಣಮ್ಯ ದಂಡವದ್ಭೂಮೌ ಸ್ತುತ್ವಾ ಸ್ತೋತ್ರೈರನೇಕಧಾ ॥ ೧೭೬ ॥
ಉಪವಿಷ್ಟೋಽಗ್ರತಸ್ತಸ್ಯ ಪ್ರಣಿಪತ್ಯ ಪುನಃಪುನಃ ।
ಪ್ರೋವಾಚ ವಚನಂ ತತ್ರ ಪೂರ್ವವೃತ್ತಂ ಯಥಾಽಭವತ್ ॥ ೧೭೭ ॥
ಕಥಿತೇ ಚೈವ ವೃತ್ತಾಂತೇ ಪುನಃ ಪಪ್ರಚ್ಛ ಕಾರಣಂ ।
ಪೃಷ್ಟೇತು ಕಾರಣೇ ತತ್ರ ಗಂಧರ್ವಃ ಪ್ರೋಕ್ತವಾಂಸ್ತದಾ ॥ ೧೭೮ ॥

ಗಂಧರ್ವ ಉವಾಚ :—

ದುಹಿತುರ್ಮೇ ಶರೀರಂ ತು ವ್ಯಾಧಿಕುಷ್ಠೇನ ಪೀಡಿತಂ ।
ಯೇನೋಪಶಮನಂ ಯಾತಿ ತತ್ತ್ವಂ ಕರ್ತುಮಿಹಾರ್ಹಸಿ ॥ ೧೭೯ ॥
ಪ್ರಸಾದಂ ಕುರು ವಿಪ್ರರ್ಷೇ ಮಮ ದೀನಸ್ಯ ಸಾಂಪ್ರತಂ ।
ಯಥಾ ಕುಷ್ಠಂ ಶಮಂ ಯಾತಿ ಮಮ ಪುತ್ರ್ಯಾಸ್ತು ಕಾರಣಂ ॥ ೧೮೦ ॥

೧೭೪—೧೭೫. ಅವಳು ಹಾಗೆಯೇ ತನಗೆ ಕುಷ್ಠರೋಗವುಂಟಾಗಲು ಕಾರಣವನ್ನೆಲ್ಲ ಹೇಳಿದಳು. ಅದನ್ನು ಕೇಳಿ ದುಃಖಗೊಂಡ ತಂದೆತಾಯಿಗಳು ಕಳೆಗುಂದಿದವರಾಗಿ ತ್ವರೆಯಿಂದ ಮಗಳೊಡನೆ ಹಿಮಾಲಯವನ್ನು ಸೇರಿ ಅಲ್ಲಿ ಗೋಶೃಂಗಮಹರ್ಷಿಯ ಆಶ್ರಮನ್ನೀಕ್ಷಿಸಿದರು.

೧೭೬—೧೭೭. ಆಗ ಗಂಧರ್ವನು ಆಶ್ರಮದ ಮಧ್ಯದಲ್ಲಿರುವ ಗೋಶೃಂಗಮುನಿವರೇಣ್ಯನನ್ನು ಕಂಡು ಭೂಮಿಯಲ್ಲಿ ಸಾಷ್ಟಾಂಗ ಪ್ರಣಾಮಮಾಡಿ ಸ್ತೋತ್ರಗಳಿಂದ ಅನೇಕ ಬಗೆಯಾಗಿ ಸ್ತುತಿಸಿ ಅವನ ಮುಂದೆ ಕುಳಿತು ತಿರುಗಿ ನಮಸ್ಕರಿಸಿ ಹಿಂದೆ ನಡೆದ ವೃತ್ತಾಂತವನ್ನು ಹೇಳಿದನು.

೧೭೮. ಆ ವೃತ್ತಾಂತವನ್ನೆಲ್ಲ ಹೇಳಿದ ಮೇಲೆ ಆ ಮುನಿಯು ಮರಳಿ ಶಾಪಕ್ಕೆ ಕಾರಣವನ್ನು ಕೇಳಲು ಅದನ್ನೂ ಹೇಳಿದನು.

೧೭೯. ಗಂಧರ್ವನು ಹೇಳುತ್ತಾನೆ:—ಮುನಿವರ್ಯನೆ! ನನ್ನ ಮಗಳ ಶರೀರವು ಕುಷ್ಠರೋಗ ಪೀಡಿತವಾಗಿರುವುದು. ಇದು ಯಾವುದರಿಂದ ಶಾಂತವಾಗುವುದೊ ನೀನು ಅದನ್ನು ಮಾಡಲರ್ಹನಾಗಿದ್ದೀಯೆ.

೧೮೦. ದೀನನಾದ ನನ್ನಲ್ಲಿ ದಯೆಯಿಟ್ಟು ನನ್ನ ಪುತ್ರಿಯ ಕುಷ್ಠರೋಗವು ಪರಿಹಾರವಾಗುವಂತೆಮಾಡು. ಇದೇ ನಾನು ನಿನ್ನೆಡೆಗೆ ಬರಲು ಕಾರಣವಾಗಿರುವುದು.

ಗೋಶೃಂಗ ಉವಾಚ :—

ಭಾರತೇ ತು ಮಹಾತೇಜಾಸ್ತಿಷ್ಠತ್ಯುದಧಿಸನ್ನಿಧೌ ।
ದೇವಃ ಸೋಮೇಶ್ವರೋ ನಾಮ ಸರ್ವದೇವನಮಸ್ಕೃತಃ ॥ ೧೮೧ ॥
ಕ್ಷಣಂ ಕೃತ್ವಾ ಹಿ ಸಂಪೂಜ್ಯ ಏಕಾಹಾರೇಣ ಮಾನವೈಃ ।
ಸರ್ವವ್ಯಾಧಿವಿನಾಶಾಯ ಸರ್ವಕಾರ್ಯಾರ್ಥಸಿದ್ಧಯೇ ॥ ೧೮೨ ॥
ಸೋಮವಾರವ್ರತೇನೇಶಂ ಸಮಾರಾಧಯ ಶಂಕರಂ ।
ಏವಂ ಕೃತೇ ವ್ಯಾಧಿನಾಶಸ್ತವ ಪುತ್ರ್ಯಾ ಭವಿಷ್ಯತಿ ॥ ೧೮೩ ॥

ಈಶ್ವರ ಉವಾಚ :—

ಇತಿ ತದ್ವಚನಂ ಶ್ರುತ್ವಾ ಮಹರ್ಷೇರ್ಭಾವಿತಾತ್ಮನಃ ।
ತತ್ರ ಗಂತುಂ ಮನಶ್ಚಕ್ರೇ ಸೋಮೇಶಾರಾಧನಂ ಪ್ರತಿ ॥ ೧೮೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀಸೋಮೇಶ್ವರವರ್ಣನೇ ಸೋಮವಾರವ್ರತಮಾಹಾತ್ಮ್ಯವರ್ಣನಂ ನಾಮ
ಚತುರ್ವಿಂಶೋಽಧ್ಯಾಯಃ

---

೧೮೧. ಗೋಶೃಂಗನು ಹೇಳುತ್ತಾನೆ:—ಭಾರತವರ್ಷದಲ್ಲಿ ಕಡಲ ದಡದಲ್ಲಿ ಅತ್ಯಂತ ತೇಜಸ್ವಿಯೂ, ಸಕಲ ದೇವತೆಗಳಿಂದ ವಂದಿತನೂ ಆದ ಸೋಮೇಶ್ವರ ನಿರುವನು.

೧೮೨–೧೮೩. ಸಮಸ್ತರೋಗನಿವಾರಣೆಗಾಗಿಯೂ, ಸಮಸ್ತಕಾರ್ಯಸಿದ್ಧಿಗಾಗಿಯೂ ಮಾನವರು ಪೂಜಿಸುವ ಆ ಶಂಕರನನ್ನು ನೀನು ಏಕಭುಕ್ತನಿಯಮದಿಂದ ಸೋಮವಾರ ವ್ರತವನ್ನಾಚರಿಸುತ್ತ ಪೂಜಿಸು. ನೀನು ಹೀಗೆ ಮಾಡಿದರೆ ನಿನ್ನ ಮಗಳ ವ್ಯಾಧಿಯು ಪರಿಹಾರವಾಗುವುದು.

೧೮೪. ಈಶ್ವರನು ಹೇಳುತ್ತಾನೆ:—ಆ ಗಂಧರ್ವನು ಜ್ಞಾನದೃಷ್ಟಿಯುಳ್ಳ ಆ ಮಹರ್ಷಿಯ ಈ ಮಾತನ್ನು ಕೇಳಿ ಆ ಸೋಮೇಶ್ವರನ ಪೂಜೆಗಾಗಿ ಅಲ್ಲಿಗೆ ತೆರಳಲು ನಿಶ್ಚಯಿಸಿದನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಶ್ರೀಸೋಮೇಶ್ವರವರ್ಣನೆಯಲ್ಲಿ
ಸೋಮವಾರವ್ರತಮಾಹಾತ್ಮ್ಯವರ್ಣನವೆಂಬ
ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚವಿಂಶೋಽಧ್ಯಾಯಃ

ಗಂಧರ್ವಕನ್ಯಾವೃತ್ತಾಂತವರ್ಣನಂ

ಈಶ್ವರ ಉವಾಚ:—

ಸ ಗಂಧರ್ವಸ್ತದಾ ದೇವಿ ಆರಿರಾಧಯಿಷುರ್ಭವಂ ।
ಸೋಮವಾರವ್ರತಂ ನಾಮ ಪಪ್ರಚ್ಛ ಮುನಿಸತ್ತಮಂ ॥ ೧ ॥

ಗಂಧರ್ವ ಉವಾಚ :—

ಕಥಂ ಸೋಮವ್ರತಂ ಕಾರ್ಯಂ ವಿಧಾನಂ ತಸ್ಯ ಕೀದೃಶಂ ।
ಕಸ್ಮಿನ್ಕಾಲೇ ಚ ತತ್ಕಾರ್ಯಂ ಸರ್ವಂ ವಿಸ್ತರತೋ ವದ ॥ ೨ ॥

ಗೋಶೃಂಗ ಉವಾಚ :—

ಸಾಧು ಸಾಧು ಮಹಾಪ್ರಾಜ್ಞ ಸರ್ವಸತ್ತ್ವೋಪಕಾರಕಂ ।
ಯನ್ನ ಕಸ್ಯಚಿದಾಖ್ಯಾತಂ ತದದ್ಯ ಕಥಯಾಮಿ ತೇ ॥ ೩ ॥
ಸರ್ವರೋಗಹರಂ ದಿವ್ಯಂ ಸರ್ವಸಿದ್ಧಿಪ್ರದಾಯಕಂ ।
ಸೋಮವಾರವ್ರತಂ ನಾಮ ಸರ್ವಕಾಮಫಲಪ್ರದಂ ॥ ೪ ॥

ಕನ್ನಡದ ಅನುವಾದ

ಗಂಧರ್ವಕನ್ಯಾವೃತ್ತಾಂತವರ್ಣನ

೧. ಈಶ್ವರನು ಹೇಳುತ್ತಾನೆ:—ಆ ಘನವಾಹನನು ಶಿವನನ್ನಾರಾಧಿಸಲಪೇಕ್ಷೆಯುಳ್ಳವನಾಗಿ ಗೋಶೃಂಗ ಮುನಿವರನನ್ನು ಸೋಮವಾರ ವ್ರತದ ವಿಷಯವನ್ನು ಕುರಿತು ಪ್ರಶ್ನಿಸಿದನು.

೨. ಗಂಧರ್ವನು ಹೇಳುತ್ತಾನೆ:—ಮುನಿವರನೆ! ಸೋಮವಾರವತ್ರವನ್ನು ಹೇಗೆ ಆಚರಿಸಬೇಕು? ಅದರ ವಿಧಿಯಾವುದು? ಯಾವಾಗ ಮಾಡತಕ್ಕುದು? ಎಲ್ಲವನ್ನೂ ವಿಸ್ತಾರವಾಗಿ ಹೇಳು.

೩. ಗೋಶೃಂಗನು ಹೇಳುತ್ತಾನೆ:—ಪ್ರಾಜ್ಞನೆ! ಒಳ್ಳೆಯದು. ನಾನು ಯಾರಿಗೂ ಇದುವರೆಗೆ ಹೇಳದಿರುವ ಸಕಲಪ್ರಾಣಿಗಳಿಗೆ ಉಪಕಾರವನ್ನುಂಟುಮಾಡುವ ಆ ಸೋಮವಾರ ವ್ರತವನ್ನು ಈಗ ನಿನಗೆ ಹೇಳುವೆನು.

೪–೫. ಈ ವ್ರತವು ಸಮಸ್ತರೋಗವನ್ನು ಪರಿಹರಿಸುವುದೂ, ಸಕಲಸಿದ್ಧಿಯನ್ನೀಯುವುದೂ, ಸಮಸ್ತೇಷ್ಟಾರ್ಥಗಳನ್ನು ಕೊಡುವುದೂ, ಯಾವಾಗಲೂ ಮಾಡಲರ್ಹ

ಸರ್ವಕಾಲಿಕಮಾದೇಯಂ ವರ್ಣಾನಾಂ ಶುಭಕಾರಕಂ ।
ನಾರೀ ನರೈಃ ಸದಾಕಾರ್ಯಂ ದೃಷ್ಟ್ವಾದೃಷ್ಟ್ವಾ ಫಲೋದಯಂ ॥ ೫ ॥
ಬ್ರಹ್ಮವಿಷ್ಣ್ವಾದಿಭಿರ್ದೇವೈಃ ಕೃತಮೇತನ್ಮಹಾವ್ರತಂ ।
ಪುನಸ್ತು ಸೋಮರಾಜೇನ ದಕ್ಷಶಾಪಹತೇನ ಚ ॥ ೬ ॥
ಆರಾಧಿತೋಽನೇನ ಶಂಭುಃ ಶಂಭುಧ್ಯಾನಪರೇಣ ತು ।
ತತಸ್ತುಷ್ಟೋ ಮಹಾದೇವಃ ಸೋಮರಾಜಸ್ಯ ಭಕ್ತಿತಃ ॥ ೭ ॥
ತೇನೋಕ್ತಂ ಯದಿ ತುಷ್ಟೋಽಸಿ ಪ್ರತಿಷ್ಠಾಸ್ಥೋ ನಿರಂತರಂ ॥ ೮ ॥
ಯಾವಚ್ಚಂದ್ರಶ್ಚ ಸೂರ್ಯಶ್ಚ ಯಾವತ್ತಿಷ್ಠಂತಿ ಭೂಧರಾಃ ।
ತಾವನ್ಮೇ ಸ್ಥಾಪಿತಂ ಲಿಂಗಮುಮಯಾ ಸಹ ತಿಷ್ಠತು ॥ ೯ ॥
ಸ್ಥಾಪಿತಂ ತು ತದಾ ತೇನ ಪ್ರಾರ್ಥಯಿತ್ವಾ ಮಹೇಶ್ವರಂ ।
ಆತ್ಮನಾಮಾಂಕಿತಂ ಕೃತ್ವಾ ತತೋ ರೋಗೈರ್ವ್ಯಮುಚ್ಯತ ॥ ೧೦ ॥
ತತಃ ಶುದ್ಧಶರೀರೋಽಸೌ ಗಗನಸ್ಥೋ ವಿರಾಜತೇ ॥ ೧೧ ॥
ತದಾಪ್ರಭೃತಿ ಯೇ ಕೇಚಿತ್ಕುರ್ವಂತಿ ಭುವಿ ಮಾನವಾಃ ।
ತೇಽಪಿ ತತ್ಪದಮಾಯಾಂತಿ ವಿಮಲಾಂಗಾಶ್ಚ ಸೋಮವತ್ ॥ ೧೨ ॥

ವಾದುದೂ, ಬ್ರಾಹ್ಮಣಾದಿ ಜಾತಿಗಳಿಗೆ ಶುಭವನ್ನುಂಟುಮಾಡುವುದೂ, ಹೆಂಗಸರು ಮತ್ತು ಗಂಡಸರು ಯಾವಾಗಲೂ ಫಲವಾಗಿರುವುದನ್ನು ನೋಡಿ ನೋಡಿ ಆಚರಿಸ ತಕ್ಕುದೂ ಆಗಿರುವುದು.

೬–೭. ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೂ ಈ ಮಹಾವ್ರತವನ್ನು ಆಚರಿಸುವರು. ಶಿವಧ್ಯಾನನಿರತನೂ, ದಕ್ಷಶಾಪದಿಂದ ಕ್ಷಯರೋಗವನ್ನು ಹೊಂದಿ ರುವವನೂ, ಆದ ಚಂದ್ರನು ಈ ವ್ರತವನ್ನಾಚರಿಸಲು ಮಹಾದೇವನು ಸಂತುಷ್ಟ ನಾದನು.

೮–೯. ಆಗ ಚಂದ್ರನು ಹೀಗೆಂದನು. ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ ಚಂದ್ರಸೂರ್ಯರೂ, ಪರ್ವತಗಳೂ ಇರುವವರೆಗೆ ನಾನು ಪ್ರತಿಷ್ಠೆಮಾಡಿರುವ ಈ ಲಿಂಗ ದಲ್ಲಿ ಪಾರ್ವತಿಯೊಡನೆ ನೆಲೆಸು.

೧೦. ಚಂದ್ರನು ಮಹೇಶ್ವರನನ್ನು ಹೀಗೆ ಪ್ರಾರ್ಥಿಸಿ ತನ್ನ ನಾಮಾಂಕಿತವಾದ ಲಿಂಗವನ್ನು ಅಲ್ಲಿ ಪ್ರತಿಷ್ಠೆಮಾಡಿ ರೋಗಮುಕ್ತನಾದನು.

೧೧–೧೨. ಬಳಿಕ ಪರಿಶುದ್ಧ ದೇಹವುಳ್ಳ ಈ ಚಂದ್ರನು ಆಕಾಶದಲ್ಲಿ ಪ್ರಕಾಶಿ ಸುತ್ತಿದ್ದಾನೆ. ಅದು ಮೊದಲ್ಗೊಂಡು ಈ ವ್ರತವನ್ನು ಮಾಡುವ ಮಾನವರು ಚಂದ್ರ ನಂತೆ ಶುದ್ಧದೇಹವುಳ್ಳವರಾಗಿ ಆ ಮಹೇಶ್ವರನ ಸ್ಥಾನವನ್ನೈದುವರು.

ಅಥ ಕಿಂ ಬಹುನೋಕ್ತೇನ ವಿಧಾನಂ ತಸ್ಯ ಕೀರ್ತಯೇ ।
ಯಸ್ಮಿನ್ ಕಸ್ಮಿಂಶ್ಚ ಮಾಸೇ ವಾ ಶುಕ್ಲೇ ಸೋಮಸ್ಯವಾಸರೇ ॥ ೧೩ ॥
ದಂತಕಾಷ್ಠಂ ಪುರಾ ಬ್ರಾಹ್ಮೇ ಕೃತ್ವಾಸ್ನಾನಂ ಸಮಾಚರೇತ್ ।
ಸ್ವಧರ್ಮವಿಹಿತಂ ಕರ್ಮ ಕೃತ್ವಾ ಸ್ಥಾನೇ ಮನೋರಮೇ ॥ ೧೪ ॥
ಸುಸಮೇ ಭೂತಲೇ ಶುದ್ಧೇ ನ್ಯಸ್ಯ ಕುಂಭಂ ಸುಶೋಭಿತಂ ।
ಚೂತಪಲ್ಲವವಿನ್ಯಸ್ತೇ ಚಂದನೇನ ಸುಚಿತ್ರಿತೇ ॥ ೧೫ ॥
ಶ್ವೇತವಸ್ತ್ರಪರೀಧಾನೇ ಸರ್ವಾಭರಣಭೂಷಿತೇ ।
ಆದೌ ಪಾತ್ರೇ ತು ಸನ್ನ್ಯಸ್ಯ ಆಧಾರಸಹಿತಂ ಶಿವಂ ॥ ೧೬ ॥
ಅಷ್ಟಮೂರ್ತ್ಯಷ್ಟಕಂ ದಿಕ್ಷು ಸೋಮನಾಥಂ ಸಶಕ್ತಿಕಂ ।
ಉಮಯಾ ಸಹಿತಂ ತತ್ರ ಶ್ವೇತಪುಷ್ಪೈಶ್ಚ ಪೂಜಯೇತ್ ॥ ೧೭ ॥
ವಿವಿಧಂ ಭಕ್ಷ್ಯಭೋಜ್ಯಂ ಚ ಫಲಂ ವೈ ಬೀಜಪೂರಕಂ ।
ಅನೇನೈವ ತು ಮಂತ್ರೇಣ ಸರ್ವಂ ತತ್ರೈವ ಕಾರಯೇತ್ ॥ ೧೮ ॥
ಓಂ ನಮಃ ಪಂಚವಕ್ತ್ರಾಯ ದಶಬಾಹುತ್ರಿನೇತ್ರಿಣೇ ।
ಶ್ವೇತಂ ವೃಷಭಮಾರೂಢ ಶ್ವೇತಾಭರಣಭೂಷಿತ ॥ ೧೯ ॥
ಉಮಾದೇಹಾರ್ಧಸಂಯುಕ್ತ ನಮಸ್ತೇ ಸರ್ವಮೂರ್ತಯೇ ।
ಅನೇನೈವ ತು ಮಂತ್ರೇಣ ಪೂಜಾಂ ಹೋಮಂ ಚ ಕಾರಯೇತ್ ॥ ೨೦ ॥

೧೩–೧೭. ಬಳಿಕ ಹೆಚ್ಚು ಮಾತಿನಿಂದೇನು ಪ್ರಯೋಜನ! ಆ ಸೋಮವಾರ ವ್ರತದ ವಿಧಾನವನ್ನು ಹೇಳುವೆನು. ಯಾವುದಾದರೂ ಒಂದು ತಿಂಗಳ ಶುಕ್ಲಪಕ್ಷದ ಸೋಮವಾರದ ದಿನ ಬ್ರಾಹ್ಮ ಮುಹೂರ್ತದಲ್ಲೆದ್ದು ದಂತಕಾಷ್ಠದಿಂದ ದಂತಧಾವನ ಮಾಡಿಕೊಂಡು ಮಿಂದು ಮನೋಹರವಾದ ಸ್ಥಳದಲ್ಲಿ ಸ್ವವರ್ಣೋಚಿತವಾದ ಆಹ್ನಿಕವನ್ನಾಚರಿಸಿ ಸಮತಟ್ಟಾದ ಶುದ್ಧ ನೆಲದಲ್ಲಿ ಸುಂದರವಾದ ಕಲಶವನ್ನಿಟ್ಟು ಮಾವಿನ ತಳಿರುಳ್ಳ ಚಂದನದಿಂದ ಚಿತ್ರಿತವಾದ ಶ್ವೇತವಸ್ತ್ರವನ್ನು ಹೊದ್ದಿಸಿರುವ ಸಕಲಾಭರಣಗಳಿಂದಲಂಕಾರಗೊಂಡ ಆ ಕಲಶದಲ್ಲಿ ಆಧಾರಶಕ್ತಿಯಿಂದ ಸಹಿತನಾದ ಶಿವನನ್ನು ನ್ಯಾಸಮಾಡಿ ಅಷ್ಟದಿಕ್ಕುಗಳಲ್ಲಿ ಅಷ್ಟಮೂರ್ತಿಯುಳ್ಳ, ಪಾರ್ವತಿಯಿಂದಲೂ, ಶಕ್ತಿ ಸಹಿತನಾದ ಸೋಮನಾಥನನ್ನು ಶ್ವೇತ ಕುಸುಮಗಳಿಂದ ಪೂಜಿಸಬೇಕು.

೧೮–೨೦. ನಾನಾ ಬಗೆಯ ಭಕ್ಷ್ಯ ಭೋಜ್ಯಗಳನ್ನೂ, ಬಹುಬೀಜಫಲವನ್ನೂ ಸಮರ್ಪಿಸಿ, "ಪಂಚಮುಖನೂ, ಹತ್ತು ತೋಳುಗಳುಳ್ಳವನೂ ಮೂರು ಕಣ್ಣುಗಳುಳ್ಳವನೂ, ಶ್ವೇತ ವೃಷಭವನ್ನೇರಿ ಶ್ವೇತಭೂಷಣಗಳಿಂದ ಅಲಂಕೃತನೂ, ಪಾರ್ವತಿಯ ಅರ್ಧದೇಹದಿಂದ ಕೂಡಿದವನೂ ಸರ್ವಸ್ವರೂಪನೂ ಆದ ಸೋಮನಾಥನಿಗೆ ನಮಸ್ಕಾರವು" ಎಂಬ ಈ ಮಂತ್ರದಿಂದ ಪೂಜೆ ಹೋಮಗಳನ್ನು ಮಾಡಬೇಕು.

ಕೃತ್ವೈವಂ ಚ ದಿನೇ ರಾತ್ರೌ ಪಶ್ಯಂಶ್ಚೈವಂ ಸ್ವಪೇನ್ನರಃ ।
ದರ್ಭಶಯ್ಯಾಸಮಾರೂಢೋ ಧ್ಯಾಯನ್ ಸೋಮೇಶ್ವರಂ ಹರಂ ॥ ೨೧ ॥
ಏವಂ ಕೃತೇಽಷ್ಟಾದಶಾನಾಂ ಕುಷ್ಠಾನಾಂ ನಾಶನಂ ಭವೇತ್ ।
ದ್ವಿತಿಯೇ ಸೋಮವಾರೇ ತು ಕರಂಜಂ ದಂತಧಾವನಂ ॥ ೨೨ ॥
ದೇವಂ ಸಂಪೂಜಯೇತ್ಸೂಕ್ಷ್ಮಂ ಜ್ಯೇಷ್ಠಾಶಕ್ತಿಸಮನ್ವಿತಂ ।
ಶತಪತ್ರೈಃ ಪೂಜಯಿತ್ವಾ ಮಧು ಪ್ರಾಶ್ಯ ಯಥಾವಿಧಿ ॥ ೨೩ ॥
ನಾರಂಗಂ ತತ್ರ ದತ್ವಾ ತು ಶೇಷಂ ಪೂರ್ವವದಾಚರೇತ್ ।
ಏವಂ ಕೃತೇ ದ್ವಿತೀಯೇ ತು ಗೋಲಕ್ಷಫಲಮಾಪ್ನುಯಾತ್ ॥ ೨೪ ॥
ಸೋಮವಾರೇ ತೃತೀಯೇ ತು ಅಪಾಮಾರ್ಗಸಮುದ್ಭವಂ ।
ದಂತಕಾಷ್ಠಾದಿಕಂ ಕೃತ್ವಾ ತ್ರಿನೇತ್ರಂ ಚ ಪ್ರಪೂಜಯೇತ್ ॥ ೨೫ ॥
ಫಲಂ ಚ ದಾಡಿಮಂ ದದ್ಯಾಜ್ಜಾತೀಪುಷ್ಪೈಶ್ಚ ಪೂಜಯೇತ್ ।
ರಜನ್ಯಾಮಂಗುರಂ ಪ್ರಾಶ್ಯ ಸಿದ್ಧಿಯುಕ್ತಂತು ಪೂಜಯೇತ್ ॥ ೨೬ ॥
ಚತುರ್ಥೇ ಸೋಮವಾರೇ ತು ಕಾಷ್ಠಮೌದುಂಬರಂ ಸ್ಮೃತಂ ।
ಪೂಜಯೇತ್ತತ್ರ ಗೌರೀಶಂ ಸೂಕ್ಷ್ಮಯಾ ಸಹಿತಂ ತಥಾ ॥ ೨೭ ॥

---

೨೧. ಹೀಗೆ ಮನುಷ್ಯನು ಹಗಲು ಪೂಜೆಗೈದು ರಾತ್ರಿ ಆ ಸೋಮೇಶ್ವರನನ್ನು ಚಿಂತಿಸುತ್ತಲೆ ದರ್ಭೆಯ ಹಾಸಿಗೆಯಲ್ಲಿ ನಿದ್ರಿಸಬೇಕು.

೨೨-೨೪. ಹೀಗೆ ಮಾಡಿದರೆ ಹದಿನೆಂಟು ವಿಧ ಕುಷ್ಟರೋಗಗಳು ಪರಿಹಾರವಾಗುವುದು. ಎರಡನೆಯಸೋಮವಾರದ ದಿನ ರಂಜಕಕಡ್ಡಿಯಿಂದ ದಂತಧಾವನ ಮಾಡಿಕೊಂಡು ಜ್ಯೇಷ್ಠಾಶಕ್ತಿಯಿಂದ ಕೂಡಿರುವ ಸೋಮೇಶ್ವರನನ್ನು ತಾವರೆ ಹೂವುಗಳಿಂದ ಪೂಜಿಸಿ ಕಿತ್ತಳೆಹಣ್ಣುಗಳನ್ನು ಸಮರ್ಪಿಸಿ ವಿಧಿಯಂತೆ ಜೇನುತುಪ್ಪವನ್ನು ಕುಡಿದು ಉಳಿದುದನ್ನು ಮೊದಲಿನಂತೆಯೇ ಮಾಡಬೇಕು. ಎರಡನೆಯ ಸೋಮವಾರದ ದಿನ ಹೀಗೆ ಮಾಡಿದರೆ ಲಕ್ಷಗೋವುಗಳನ್ನುದಾನಗೈದ ಪುಣ್ಯವನ್ನು ಪಡೆಯುವನು.

೨೫-೨೬. ಮೂರನೆಯ ಸೋಮವಾರದ ದಿನ ಅಪಾಮಾರ್ಗದ ಕಡ್ಡಿಯಿಂದ ದಂತಧಾವನ ಮಾಡಿಕೊಂಡು ಮಹೇಶ್ವರನನ್ನು ಜಾಜಿ ಹೂವುಗಳಿಂದ ಪೂಜಿಸಿ ದಾಳಿಂಬದ ಹಣ್ಣನ್ನು ನಿವೇದಿಸಿ ರಾತ್ರಿಯಲ್ಲಿ ದ್ರಾಕ್ಷೆ ಹಣ್ಣುಗಳನ್ನು ತಿನ್ನಬೇಕು.

೨೭-೨೮. ನಾಲ್ಕನೆಯ ಸೋಮವಾರದ ದಿನ ಅತ್ತಿಯ ಕಡ್ಡಿಯಿಂದ ದಂತಧಾವನ ಮಾಡಿಕೊಂಡು ಸೂಕ್ಷ್ಮಶಕ್ತಿಯಿಂದ ಕೂಡಿದ ಮಹೇಶ್ವರನನ್ನು ದವನದಿಂದ

ನಾರಿಕೇಲಫಲಂ ದದ್ಯಾದ್ದಮನೇನ ಪ್ರಪೂಜಯೇತ್ ।
ಶರ್ಕರಾಂ ಪ್ರಾಶಯೇದ್ರಾತ್ರೌ ಜಾಗರಂ ಚೈವ ಕಾರಯೇತ್ ॥ ೨೮ ॥
ಪಂಚಮೇ ಸೋಮವಾರೇ ತು ಪೂಜಯೇಚ್ಚ ಗಣಾಧಿಪಂ ।
ವಿಭೂತ್ಯಾ ಸಹಿತಂ ದೇವಂ ಕುಂದಪುಷ್ಪೈಃ ಪ್ರಪೂಜಯೇತ್ ॥ ೨೯ ॥
ಅಶ್ವತ್ಥಂ ದಂತಕಾಷ್ಠಂ ಚ ಅರ್ಘ್ಯಂ ಪೈ ದ್ರಾಕ್ಷಯಾ ತಥಾ ।
ಮೋಚಂ ಚ ಪ್ರಾಶಯೇದ್ರಾತ್ರಾವಶ್ವಮೇಧಫಲಂ ಲಭೇತ್ ॥ ೩೦ ॥
ಷಷ್ಠೇ ಸೋಮಸ್ಯ ವಾರೇ ತು ಸುರೂಪಂ ನಾಮ ಪೂಜಯೇತ್ ।
ಕರ್ಪೂರಂ ಪ್ರಾಶಯೇತ್ತತ್ರ ಭಕ್ತ್ಯಾ ಪರಮಯಾ ಯುತಃ ॥ ೩೧ ॥
ಸಪ್ತಮೇ ಸೋಮವಾರೇ ತು ದಂತಕಾಷ್ಠಂ ಚ ಮಲ್ಲಿಕಾ ।
ಸರ್ವಜ್ಞಂ ಪೂಜಯೇತ್ತತ್ರ ದೀಪ್ತ್ಯಾ ಸಹಿತಂ ತಥಾ ॥ ೩೨ ॥
ಜಂಬೀರಂ ಚ ಫಲಂ ದದ್ಯಾಜ್ಜಾತೀಪುಷ್ಪೈಶ್ಚ ಪೂಜಯೇತ್ ।
ಲವಂಗಂ ಪ್ರಾಶಯೇತ್ತತ್ರ ತಸ್ಯಾಽನಂತಫಲಂ ಭವೇತ್ ॥ ೩೩ ॥
ಅಷ್ಟಮೇ ಸೋಮವಾರೇ ತು ಅಮೋಘಾಯುತಮೀಶ್ವರಂ ।
ಕದಲೀಫಲಕೇನಾಽರ್ಘ್ಯಂ ಮರುವಕೇನ ಪೂಜಯೇತ್ ।
ರಾತ್ರೌ ತು ಪ್ರಾಶಯೇದ್ದುಗ್ಧಮಗ್ನಿಷ್ಟೋಮಫಲಂ ಲಭೇತ್ ॥ ೩೪ ॥

ಪೂಜಿಸಿ ತೆಂಗಿನ ಕಾಯಿಯನ್ನು ನಿವೇದಿಸಿ ರಾತ್ರಿ ಸಕ್ಕರೆಯನ್ನು ತಿಂದು ಜಾಗರಣೆ ಮಾಡಬೇಕು.

೨೯–೩೦. ಐದನೆಯ ಸೋಮವಾರದ ದಿನ ಅಶ್ವತ್ಥದ ಕಡ್ಡಿಯಿಂದ ದಂತಧಾವನ ಮಾಡಿಕೊಂಡು ವಿಭೂತಿ ಸಹಿತನಾದ ಗಣೇಶ್ವರನನ್ನು ಮಲ್ಲಿಗೆ ಹೂವುಗಳಿಂದ ಪೂಜಿಸಿ ದ್ರಾಕ್ಷೆಯಿಂದ ಅರ್ಘ್ಯವನ್ನಿತ್ತು ರಾತ್ರಿ ಬಾಳೆಯಹಣ್ಣನ್ನು ತಿನ್ನಬೇಕು. ಇದರಿಂದ ಅಶ್ವಮೇಧಯಾಗದ ಫಲವನ್ನು ಪಡೆಯುವನು.

೩೧. ಆರನೆಯ ಸೋಮವಾರದ ದಿನ ಸುರೂಪನೆಂಬ ಶಂಕರನನ್ನು ಪೂಜಿಸಿ ಅತಿ ಭಕ್ತಿಯಿಂದ ಕರ್ಪೂರವನ್ನು ಪ್ರಾಶನೆ ಮಾಡಬೇಕು.

೩೨–೩೩. ಏಳನೆಯ ಸೋಮವಾರದ ದಿನ ಮಲ್ಲಿಗೆಯ ಕಡ್ಡಿಯಿಂದ ದಂತಧಾವನಮಾಡಿಕೊಂಡು ದೀಪ್ತಶಕ್ತಿಯಿಂದ ಸಹಿತನಾದ ಸರ್ವಜ್ಞನನ್ನು ಜಾಜಿಹೂವಿನಿಂದ ಪೂಜಿಸಿ ನಿಂಬೆಯಹಣ್ಣನ್ನು ನಿವೇದಿಸಿ ಲವಂಗವನ್ನು ಪ್ರಾಶನೆ ಮಾಡಬೇಕು. ಇದರಿಂದ ಅನಂತ ಫಲವು ಲಭಿಸುವುದು.

೩೪. ಎಂಟನೆಯ ಸೋಮವಾರದ ದಿನ ಅಮೋಘಾಯುತೇಶ್ವರನನ್ನು ಮರುಗದಿಂದ ಆರಾಧಿಸಿ ಬಾಳೆಹಣ್ಣಿನಿಂದ ಅರ್ಘ್ಯವನ್ನಿತ್ತು ರಾತ್ರಿ ಹಾಲನ್ನು ಪ್ರಾಶನೆ ಮಾಡಬೇಕು. ಇದರಿಂದ ಅಗ್ನಿಷ್ಟೋಮ ಫಲವುದೊರೆಯುವುದು.

ಗಂಗಾಸ್ನಾನೇ ಕೃತೇ ಸಮ್ಯಕ್ಕೋಟಿಧಾ ಯತ್ಫಲಂ ಸ್ಮೃತಂ ।
ದಶಹೇಮಸಹಸ್ರಾಣಾಂ ಕುರುಕ್ಷೇತ್ರೇ ರವೇರ್ಗ್ರಹೇ ॥ ೩೫ ॥
ಬ್ರಾಹ್ಮಣೇ ವೇದವಿದುಷೇ ಯದ್ದತ್ವಾ ಫಲಮಾಪ್ನುಯಾತ್ ।
ತತ್ಪುಣ್ಯಂ ಕೋಟಿಗುಣಿತಮಸ್ಮಿನ್ನಾಚರಿತೇ ವ್ರತೇ ॥ ೩೬ ॥
ಗಜಾನಾಂ ತು ಶತೇ ದತ್ತೇ ಲಕ್ಷೇ ಚ ರಥವಾಜಿನಾಂ ।
ತತ್ಫಲಂ ಕೋಟಿಗುಣಿತಂ ಸೋಮವಾರವ್ರತೇ ಕೃತೇ ॥ ೩೭ ॥
ಗುಗ್ಗುಲೋರ್ಧೂಪನಂ ಕೃತ್ವಾ ಕೋಟಿಶೋ ಯತ್ಫಲಂ ಲಭೇತ್ ।
ತತ್ಪುಣ್ಯಂ ತು ಭವೇತ್ತಸ್ಯ ಸೋಮವಾರವ್ರತೇ ಕೃತೇ ॥ ೩೮ ॥
ಸರ್ವೈಶ್ವರ್ಯಸಮಾಯುಕ್ತಃ ಶಿವತುಲ್ಯಪರಾಕ್ರಮಃ ।
ರುದ್ರಲೋಕೇ ವಸೇತ್ತಾವದ್ಬ್ರಹ್ಮಣಃ ಪ್ರಲಯಾಽವಧಿ ॥ ೩೯ ॥
ಸಂಪ್ರಾಪ್ತೇ ನವಮೇ ವಾರೇ ಕುರ್ಯಾದುದ್ಯಾಪನಂ ಶುಭಂ ।
ಯಥಾ ಭವತಿ ಗಂಧರ್ವ ತಥಾ ವಕ್ಷ್ಯಾಮಿ ತೇಽಧುನಾ ॥ ೪೦ ॥
ಮಂಡಲಂ ಮಂಡಪಂ ಕುಂಡಂ ಪತಾಕಾಧ್ವಜಶೋಭಿತಂ ।
ತೋರಣಾನಿ ಚ ಚತ್ವಾರಿ ಕುಂಡಂ ಕೃತ್ವಾ ವಿಧಾನತಃ ॥ ೪೧ ॥

೩೫-೩೮. ಈ ಸೋಮವಾರ ವ್ರತವನ್ನಾಚರಿಸುವುದರಿಂದ ಕೋಟಿ ಗಂಗಾ ಸ್ನಾನದ ಪುಣ್ಯವೂ, ಸೂರ್ಯಗ್ರಹಣಕಾಲದಲ್ಲಿ ಕುರುಕ್ಷೇತ್ರದಲ್ಲಿ ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ಹತ್ತು ಸಾವಿರ ಸುವರ್ಣ ದಾನಮಾಡಿದ ಪುಣ್ಯದ ಕೋಟಿ ಯಷ್ಟು ಪುಣ್ಯವೂ, ನೂರು ಆನೆ, ಲಕ್ಷರಥ, ಕುದುರೆಗಳನ್ನು ದಾನಮಾಡಿದ ಪುಣ್ಯದ ಕೋಟಿಯಷ್ಟು ಪುಣ್ಯವೂ, ಕೋಟಿಸಾರಿ ಗುಗ್ಗುಲು ಧೂಪವನ್ನು ಹಚ್ಚಿದ ಪುಣ್ಯವೂ ದೊರೆಯುವುದು.

೩೯. ಮತ್ತು ಈ ವ್ರತವನ್ನಾಚರಿಸಿದ ಮಾನವನು ಬ್ರಹ್ಮಪ್ರಲಯದವರೆಗೆ ಸಮಸ್ತೈಶ್ವರ್ಯದಿಂದ ಕೂಡಿದವನೂ, ಶಿವನಿಗೆ ಸಮಾನವಾದ ಪರಾಕ್ರಮವುಳ್ಳವನೂ ಆಗಿ ರುದ್ರಲೋಕದಲ್ಲಿ ಪೂಜ್ಯನಾಗುವನು.

೪೦. ಒಂಬತ್ತನೆಯ ಸೋಮವಾರವು ಒದಗಲು ಉದ್ಯಾಪನೆಯನ್ನು ಮಾಡ ಬೇಕು. ಅದನ್ನು ಮಾಡುವ ಕ್ರಮವನ್ನು ಈಗ ಹೇಳುವೆನು.

೪೧-೪೨. ಮಂಡಲ, ಮಂಡಪ, ಪತಾಕೆಯಿಂದ ಶೋಭಿತವಾದ ಕುಂಡ, ತೋರಣ, ಈ ನಾಲ್ಕನ್ನು ಮೊದಲು ರಚಿಸಬೇಕು. ವಿಧಿಯಂತೆ

ಮಧ್ಯೇ ವೇದಿಃ ಪ್ರಕರ್ತವ್ಯಾ ಚತುರಸ್ರಾ ಸುಶೋಭನಾ ।
ನಿಷ್ಪಾದ್ಯ ಮಂಡಲಂ ತತ್ರ ಮಧ್ಯೇ ಪದ್ಮಂ ಪ್ರಕಲ್ಪಯೇತ್ ॥ ೪೨ ॥
ಕಲಶಾನಷ್ಟದಿಗ್ಭಾಗೇ ಸಹಿರಣ್ಯಾನ್ ಪೃಥಕ್ ಪೃಥಕ್ ।
ಸ್ಥಾಪಯಿತ್ವಾ ತು ಶಕ್ತಿಸ್ತಾ ವಾಮಾದ್ಯಾಃ ಪೂರ್ವತಃ ಕ್ರಮಾತ್ ॥ ೪೩ ॥
ಕರ್ಣಿಕಾಯಾಂ ತು ಪದ್ಮಸ್ಯ ಶ್ರೀ ಸೋಮೇಶಂ ಮಹಾಪ್ರಭಂ ।
ಪ್ರತಿಮಾರೂಪಸಂಪನ್ನಂ ಹೇಮಜಂ ಶಕ್ತಿಸಂಯುತಂ ॥ ೪೪ ॥
ರುಕ್ಮಶಯ್ಯಾಸಮಾರೂಢಂ ಮನೋನ್ಮನ್ಯಾ ಸಮನ್ವಿತಂ ।
ಹೇಮಪಾತ್ರಾದಿಕೇ ಪಾತ್ರೇ ಮಧುನಾ ಪರಿಪೂರಿತೇ ॥ ೪೫ ॥
ರುಕ್ಮಶಯ್ಯಾ ಸಮಾಚ್ಛನ್ನೇ ತತ್ರಸ್ಥಂ ಪೂಜಯೇತ್ಕ್ರಮಾತ್ ।
ಅನಂತಾದಿಶಿಖಂಡ್ಯಂತೈರ್ನಾಮಭಿಃ ಕ್ರಮಶೋಽರ್ಚಯೇತ್ ॥ ೪೬ ॥
ಗಂಧಸ್ರಗ್ಧೂಪದೀಪೈಶ್ಚ ನೈವೇದ್ಯೈಶ್ಚ ಪೃಥಗ್ವಿಧೈಃ ।
ವಸ್ತ್ರಾಲಂಕಾರತಾಂಬೂಲಚ್ಛತ್ರಚಾಮರದರ್ಪಣಂ । ॥ ೪೭ ॥
ದೀಪಘಂಟಾವಿತಾನಂ ಚ ಪರ್ಯಂಕಂ ಚ ಸತೂಲಿಕಂ ।
ಸೋಮೇಶ್ವರಂ ಸಮುದ್ದಿಶ್ಯ ದೇಯಂ ಪೌರಾಣಿಕೇ ಗುರೌ ॥ ೪೮ ॥
ಭೂಷಯಿತ್ವಾ ತಥಾಚಾರ್ಯಂ ಹೋಮಂ ತತ್ರೈವ ಕಾರಯೇತ್ ।
ಬಲಿಕರ್ಮಾವಸಾನೇ ಚ ರಾತ್ರೌ ತತ್ರೈವ ಜಾಗೃಯಾತ್ ॥ ೪೯ ॥

ಕುಂಡವನ್ನು ನಿರ್ಮಿಸಿ ಅದರ ಮಧ್ಯದಲ್ಲಿ ಚೌಕವಾದ ವೇದಿಯನ್ನು ಕಲ್ಪಿಸಿ ಅದರಲ್ಲಿ ಮಂಡಲವನ್ನೂ, ಅದರ ನಡುವೆ ಪದ್ಮವನ್ನೂ ರಚಿಸಬೇಕು.

೪೩–೪೯. ಎಂಟು ದಿಕ್ಕುಗಳಲ್ಲಿ ಸುವರ್ಣಸಹಿತವಾದ ಕಲಶಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಿ. ಪೂರ್ವಾದಿ ದಿಕ್ಕುಗಳಲ್ಲಿ ಕ್ರಮವಾಗಿ ವಾಮಾದಿ ಶಕ್ತಿಗಳನ್ನು ಪ್ರತಿಷ್ಠೆ ಮಾಡಿ ಪದ್ಮದ ಕರ್ಣಿಕೆಯಲ್ಲಿ ಅತ್ಯಂತ ಕಾಂತಿಯುಳ್ಳವನೂ, ಪ್ರತಿಮಾರೂಪನೂ, ಶಕ್ತಿಯುಕ್ತನೂ, ಸುವರ್ಣದ ಹಾಸಿಗೆಯಲ್ಲಿ ಕುಳಿತಿರುವವನೂ, ಮನೋನ್ಮನೀ ದೇವಿಯಿಂದ ಕೂಡಿದವನೂ ಆಗಿರುವ ಶ್ರೀಸೋಮೇಶ್ವರನನ್ನು, ಜೇನಿನಿಂದ ತುಂಬಿ ಚಿನ್ನದ ಹಾಸಿಗೆಯಿಂದ ಮುಚ್ಚಿದ ಚಿನ್ನವೇ ಮೊದಲಾದ ಪಾತ್ರೆಯಲ್ಲಿಟ್ಟು ಅನಂತ ಮೊದಲಾಗಿ ಶಿಖಂಡಿಯ ಕೊನೆಯಾಗುಳ್ಳ ನಾಮಗಳಿಂದ ಗಂಧ, ಮಾಲ್ಯ, ಧೂಪ, ದೀಪ, ನೈವೇದ್ಯಗಳನ್ನಿತ್ತು ಕ್ರಮವಾಗಿ ಪೂಜಿಸಬೇಕು. ಸೋಮೇಶ್ವರನನ್ನುದ್ದೇಶಿಸಿ ಪುರಾಣವನ್ನು ಹೇಳುವ ಗುರುವಿಗೆ ವಸ್ತ್ರ, ಅಲಂಕಾರ, ತಾಂಬೂಲ, ಛತ್ರ, ಚಾಮರ, ಕನ್ನಡಿ, ದೀಪ, ಘಂಟೆ, ಮೇಲ್ಕಟ್ಟು, ಹಾಸಿಗೆಗಳಿಂದ ಸಹಿತವಾದ ಮಂಚ ಇವುಗಳನ್ನು ಕೊಟ್ಟು ಅಲಂಕರಿಸಿ ಅಲ್ಲಿಯೇ ಹೋಮವನ್ನು ಮಾಡಬೇಕು. ಪೂಜೆಯ ಕೊನೆಯಲ್ಲಿ ರಾತ್ರಿ ಅಲ್ಲಿಯೇ ಜಾಗರಣೆ ಮಾಡಬೇಕು.

ಪಂಚಗವ್ಯಂ ತತಃ ಪೀತ್ವಾ ಧ್ಯಾಯೇತ್ಸೋಮೇಶ್ವರಂ ಹೃದಿ ।
ಪ್ರಭಾತೇ ತು ತತಃ ಸ್ನಾತ್ವಾ ಧ್ಯಾಯೇತ್ತಂ ಚ ವಿಧಾನತಃ ॥ ೫೦ ॥
ತತೋ ಭಕ್ತ್ಯಾ ಚ ಗಂಧರ್ವ ಕ್ಷೀರಖಂಡಾದಿನಿರ್ಮಿತಂ ।
ಭಕ್ಷ್ಯಭೋಜ್ಯೈರನೇಕೈಶ್ಚ ಭೋಜಯೇದ್ಬ್ರಾಹ್ಮಣಾನಥ ॥ ೫೧ ॥
ವಸ್ತ್ರಯುಗ್ಮಂ ತತೋ ದತ್ವಾ ಗಾಂ ಚ ದತ್ವಾ ವಿಸರ್ಜಯೇತ್ ॥ ೫೨ ॥
ಏವಂ ಚೀರ್ಣವ್ರತಃ ಸಮ್ಯಗ್ಲಭತೇ ಪುಣ್ಯಮಕ್ಷಯಂ ।
ಧನಧಾನ್ಯಸಮೃದ್ಧಾತ್ಮಾ ಪುತ್ರದಾರಸಮನ್ವಿತಃ ॥ ೫೩ ॥
ನ ಕುಲೇ ಜಾಯತೇ ತಸ್ಯ ದರಿದ್ರೋ ದುಃಖಿತೋಽಪಿ ವಾ ।
ಅಪುತ್ರೋ ಲಭತೇ ಪುತ್ರಾನ್ ವಂಧ್ಯಾ ಪುತ್ರವತೀ ಭವೇತ್ ॥ ೫೪ ॥
ಕಾಕವಂಧ್ಯಾ ತು ಯಾ ನಾರೀ ಮೃತವತ್ಸಾ ಚ ದುರ್ಭಗಾ ।
ಕನ್ಯಾಪ್ರಸೂಶ್ಚ ಯಾ ಕಾರ್ಯಮಾಭಿರೇತದ್ವಿಶೇಷತಃ ॥ ೫೫ ॥
ಏವಂ ಕೃತೇ ವಿಧಾನೇ ತು ದೇಹಪಾತೇ ಶಿವಂ ವ್ರಜೇತ್ ।
ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ।
ಭುಂಕ್ತೇಽಸೌ ವಿಪುಲಾನ್ ಭೋಗಾನ್ ಯಾವದಾಭೂತಸಂಪ್ಲವಂ ॥ ೫೬ ॥

---

೫೦. ಬಳಿಕ ಪಂಚಗವ್ಯವನ್ನು ಪ್ರಾಶನೆಮಾಡಿ ಸೋಮೇಶ್ವರನನ್ನು ಹೃದಯದಲ್ಲಿ ಧ್ಯಾನಿಸಿ ಬೆಳಗ್ಗೆ ಮಿಂದು ಆ ಸೋಮೇಶ್ವರನನ್ನು ಮರಳಿ ಧ್ಯಾನಿಸಬೇಕು.

೫೧. ಎಲೈ ಗಂಧರ್ವನೆ ! ತರುವಾಯ ಭಕ್ತಿಪೂರ್ವಕವಾಗಿ ಕ್ಷೀರಾದಿಗಳಿಂದ ಮಾಡಿದ ಅನೇಕವಿಧ ಭಕ್ಷ್ಯಭೋಜ್ಯಗಳಿಂದ ಬ್ರಾಹ್ಮಣರನ್ನು ಭೋಜನಮಾಡಿಸಬೇಕು.

೫೨. ಅನಂತರ ಎರಡು ಬಟ್ಟೆಗಳನ್ನೂ, ಗೋವನ್ನೂ ದಾನಮಾಡಿ ವಿಸರ್ಜನೆ ಮಾಡಬೇಕು.

೫೩. ಈ ರೀತಿ ಚೆನ್ನಾಗಿ ವ್ರತವನ್ನಾಚರಿಸಿದವನು ಧನಧಾನ್ಯಗಳಿಂದ ಸಮೃದ್ಧಿಗೊಂಡು ಹೆಂಡತಿ ಮಕ್ಕಳಿಂದ ಸಹಿತನಾಗಿ ಅಕ್ಷಯವಾದ ಪುಣ್ಯವನ್ನು ಪಡೆಯುವನು.

೫೪. ಅವನ ವಂಶದಲ್ಲಿ ಬಡವನಾಗಲಿ, ದುಃಖಗೊಂಡವನಾಗಲಿ ಹುಟ್ಟುವುದಿಲ್ಲ. ಪುತ್ರರಿಲ್ಲದವನು ಪುತ್ರರನ್ನು ಪಡೆಯುವನು. ಬಂಜೆಯೂ ಪುತ್ರನನ್ನು ಪಡೆಯುವಳು.

೫೫. ಹುಟ್ಟುಬಂಜೆಯೂ, ಮಕ್ಕಳು ಸಾಯುವವಳೂ, ಹೆಣ್ಣು ಮಕ್ಕಳನ್ನು ಹಡಯುಉವಳೂ, ಈ ವ್ರತವನ್ನು ಅವಶ್ಯಕವಾಗಿ ಮಾಡಬೇಕು.

೫೬. ಹೀಗೆ ವ್ರತವನ್ನಾಚರಿಸಿದವನು ದೇಹಾವಸಾನದಲ್ಲಿ ಶಿವನನ್ನು ಸೇರಿ ಒಂದು ಸಾವಿರದ ನೂರು ಕೋಟಿ ಕಲ್ಪಗಳ ಕಾಲ ಪ್ರಳಯದವರೆಗೆ ಅತಿಶಯ ಭೋಗಗಳನ್ನನುಭವಿಸುವನು.

ಇತಿ ತೇ ಕಥಿತಂ ಸರ್ವಂ ಸೋಮವಾರವ್ರತಂ ಕ್ರಮಾತ್ ।
ಗಚ್ಛ ಶೀಘ್ರಂ ಮಹಾಭಾಗ ಯತ್ರ ಸೋಮೇಶ್ವರಃ ಸ್ಥಿತಃ । ॥ ೫೭ ॥
ಈಶ್ವರ ಉವಾಚ:—
ಇತ್ಯುಕ್ತಃ ಸ ಚ ಗಂಧರ್ವಃ ಪುತ್ರ್ಯಾ ಸಹ ವರಾನನೇ ।
ಸರ್ವೋಪಹಾರಸಂಯುಕ್ತಃ ಪ್ರಭಾಸಕ್ಷೇತ್ರಮಾಶ್ರಿತಃ ॥ ೫೮ ॥
ತತ್ರ ಸೋಮೇಶ್ವರಂ ದೃಷ್ಟ್ವಾ ಆನಂದಾಶ್ರುಪರಿಪ್ಲುತಃ ।
ಯಾತ್ರಾಕ್ರಮೇಣ ಸಂಪೂಜ್ಯ ಚಕ್ರೇ ಸೋಮವ್ರತಂ ಕ್ರಮಾತ್ ॥ ೫೯ ॥
ಪುತ್ರ್ಯಾ ಸಹ ಮಹಾಭಾಗಸ್ತಸ್ಯ ತುಷ್ಟೋ ಮಹೇಶ್ವರಃ ।
ಸರ್ವರೋಗವಿನಾಶಂ ಚ ಸರ್ವಕಾಮಸಮೃದ್ಧಿದಂ ।
ದದೌ ಗಂಧರ್ವರಾಜ್ಯಂ ಚ ಭಕ್ತಿಂ ಚೈವಾಽಽತ್ಮನಸ್ತಥಾ ॥ ೬೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸೋಮೇಶ್ವರ ಮಾಹಾತ್ಮ್ಯವರ್ಣನೇ ಗಂಧರ್ವಕನ್ಯಾ
ವೃತ್ತಾಂತವರ್ಣನಂ ನಾಮ
॥ ಪಂಚವಿಂಶೋಽಧ್ಯಾಯಃ ॥

---

೫೭. ಗಂಧರ್ವ ! ಹೀಗೆ ನಿನಗೆ ಕ್ರಮದಿಂದ ಸೋಮವಾರ ವ್ರತದ ವಿಧಾನವನ್ನು ಸಂಪೂರ್ಣವಾಗಿ ಹೇಳಿರುವೆನು. ನೀನು ಶೀಘ್ರವಾಗಿ ಸೋಮೇಶ್ವರನೆಡೆಗೆ ಹೋಗು.

೫೮. ಈಶ್ವರನು ಹೇಳುತ್ತಾನೆ:— ಗೋಶೃಂಗನು ಹೀಗೆನ್ನಲು ಆ ಗಂಧರ್ವನು ಮಗಳೊಡನೆ ಸಕಲ ಪೂಜಾಸಾಮಗ್ರಿಯನ್ನು ಸಿದ್ಧಪಡಿಸಿಕೊಂಡು ಪ್ರಭಾಸ ಕ್ಷೇತ್ರಕ್ಕೆ ತೆರಳಿದನು.

೫೯-೬೦. ಅಲ್ಲಿ ಸೋಮೇಶ್ವರನನ್ನು ನೋಡಿ ಆನಂದಬಾಷ್ಪಪೂರಿತನಾಗಿ ಯಾತ್ರಾ ಕ್ರಮದಿಂದ ಪೂಜಿಸಿ ಮಗಳೊಡನೆ ಕ್ರಮದಿಂದ ಸೋಮವಾರ ವ್ರತವನ್ನಾಚರಿಸಿದನು. ಅದರಿಂದ ಸಂತುಷ್ಟನಾದ ಮಹೇಶ್ವರನು ಸಕಲ ರೋಗವನ್ನು ಪರಿಹರಿಸಿ ಆ ಗಂಧರ್ವನಿಗೆ ಸಕಲೇಷ್ಟಾರ್ಥವನ್ನೀಯುವ ಗಂಧರ್ವರಾಜ್ಯವನ್ನೂ, ತನ್ನಲ್ಲಿ ಭಕ್ತಿಯನ್ನೂ ಕೊಟ್ಟನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಸೋಮೇಶ್ವರ
ಮಾಹಾತ್ಮ್ಯವರ್ಣನೆಯಲ್ಲಿ ಗಂಧರ್ವ ಕನ್ಯಾವೃತ್ತಾಂತವರ್ಣನವೆಂಬ
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಷಡ್ವಿಂಶತಿತಮೋಽಧ್ಯಾಯಃ

ಗಂಧರ್ವೇಶ್ವರ ಮಾಹಾತ್ಮ್ಯವರ್ಣನಂ

ಈಶ್ವರ ಉವಾಚ:—

ಅಥ ಲಬ್ಧವರಸ್ತತ್ರ ಕೃತಾರ್ಥೋಽ ಭಕ್ತಿಸಂಯುತಃ ।
ಸ್ಥಾಪಯಾಮಾಸ ಲಿಂಗಂ ಸ ಗಂಧರ್ವೋ ಘನವಾಹನಃ ॥ ೧ ॥
ಸೋಮೇಶಾದುತ್ತರೇ ಭಾಗೇ ದಂಡಪಾಣಿಸಮೀಪತಃ ।
ಗಂಧರ್ವೇಶ್ವರನಾಮಾನಂ ಗಂಧರ್ವಫಲದಾಯಕಂ ॥ ೨ ॥
ವರದಾವಾರುಣೇ ಭಾಗೇ ಧನುಷಾಂ ಪಂಚಕೇ ಸ್ಥಿತಂ ।
ಪಂಚಮ್ಯಾಂ ಪೂಜಯಿತ್ವಾ ಚ ನ ದುಃಖೀ ಜಾಯತೇ ನರಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಂಧರ್ವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಡ್ವಿಂಶತಿತಮೋಽಧ್ಯಾಯಃ ॥

ಕನ್ನಡದ ಅನುವಾದ

ಗಂಧರ್ವೇಶ್ವರ ಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ತರುವಾಯ ಹೀಗೆ ವರವನ್ನು ಪಡೆದು ಧನ್ಯನಾದ ಆ ಘನವಾಹನ ಗಂಧರ್ವನು ಭಕ್ತಿಯಿಂದ ಸೋಮೇಶ್ವರನ ಉತ್ತರ ಭಾಗದಲ್ಲಿ ದಂಡಪಾಣಿಯ ಹತ್ತಿರ ಗಂಧರ್ವ ಪದವಿಯನ್ನೀಯುವ ಗಂಧರ್ವೇಶ್ವರನೆಂಬ ಲಿಂಗವನ್ನು ಪ್ರತಿಷ್ಠೆಮಾಡಿದನು.

೩. ವರದಾನದಿಯ ಪಶ್ಚಿಮದಲ್ಲಿ ಐದು ಬಿಲ್ಲಿನ ದೂರದಲ್ಲಿರುವ ಗಂಧರ್ವೇಶ್ವರನನ್ನು ಪಂಚಮೀ ದಿನ ಪೂಜಿಸಿದ ಮಾನವನು ದುಃಖಗೊಳ್ಳುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ
ಮಾಹಾತ್ಮ್ಯದಲ್ಲಿ ಗಂಧರ್ವೇಶ್ವರ ಮಹಾತ್ಮ್ಯವರ್ಣನವೆಂಬ
ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತವಿಂಶೋಽಧ್ಯಾಯಃ

ಗಂಧರ್ವಸೇನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ:—

ಅಥ ತತ್ರೈವ ದೇವೇಶಿ ಲಿಂಗಂ ಗಂಧರ್ವಸೇನಯಾ ।
ಸ್ಥಾಪಿತಂ ಘನವಾಹಸ್ಯ ಪುತ್ರ್ಯಾ ಗೌರೀಸಮೀಪತಃ ॥ ೧ ॥
ಧನುಷಾಂ ತ್ರಿತಯೇ ತತ್ರ ಸ್ಥಿತಂ ಪೂರ್ವವಿಭಾಗತಃ ।
ವಿಮಲೇಶ್ವರನಾಮಾನಂ ಸರ್ವರೋಗವಿನಾಶನಂ ॥ ೨ ॥
ಪೂಜಯಿತ್ವಾ ತೃತೀಯಾಯಾಂ ದೌರ್ಭಾಗ್ಯೈರ್ಮುಚ್ಯತೇಽಂಗನಾ ।
ಸರ್ವಾನ್ಕಾಮಾನವಾಪ್ನೋತಿ ಪುತ್ರಪೌತ್ರಪ್ರತಿಷ್ಠಿತಾ ॥ ೩ ॥
ಇತಿ ವ್ರತಂ ಮಹಾದೇವಿ ತ್ರೇತಾಸಂಧ್ಯಾಂಶಕೇ ಗತೇ ।
ಗಂಧರ್ವಸ್ಯೈವಮಾಖ್ಯಾತಂ ಶ್ರುತಂ ಪಾತಕನಾಶನಂ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಗಂಧರ್ವಸೇನೇಶ್ವರಪ್ರತಿಷ್ಠಾ ಮಾಹಾತ್ಮ್ಯವರ್ಣನಂ ನಾಮ
॥ ಸಪ್ತವಿಂಶೋಽಧ್ಯಾಯಃ ॥

ಕನ್ನಡದ ಅನುವಾದ

ಗಂಧರ್ವಸೇನೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಅಲ್ಲಿಯೇ ಘನವಾಹನ ಗಂಧರ್ವನ ಮಗಳಾದ ಗಂಧರ್ವಸೇನೆಯು ಗೌರಿಯ ಸಮೀಪದಲ್ಲಿ ಪೂರ್ವಭಾಗದಲ್ಲಿ ಮೂರು ಬಿಲ್ಲಿನ ದೂರದಲ್ಲಿ ಸಮಸ್ತ ರೋಗವನ್ನು ನಿವಾರಿಸುವ ವಿಮಲೇಶ್ವರವೆಂಬ ಲಿಂಗವನ್ನು ಪ್ರತಿಷ್ಠೆ ಮಾಡಿದಳು.

೩. ತದಿಗೆ ದಿನ ಹೆಂಗಸು ಈ ಲಿಂಗವನ್ನು ಪೂಜಿಸಿದರೆ ಪುತ್ರಪೌತ್ರರೇ ಮೊದಲಾದ ಸಕಲೇಷ್ಟಾರ್ಥಗಳನ್ನು ಪಡೆದು ದೌರ್ಭಾಗ್ಯದಿಂದ ಮುಕ್ತಳಾಗುವಳು.

೪. ಮಹಾದೇವಿ! ತ್ರೇತಾಯುಗದ ಸಂಧ್ಯಾಂಶವು ಕಳೆಯಲು ಗಂಧರ್ವನಿಗೆ ಹೇಳಿದ ಈ ವ್ರತವು ಕೇಳಿದವನ ಸಕಲ ಪಾಪವನ್ನು ಪರಿಹರಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸ ಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಗಂಧರ್ವಸೇನೇಶ್ವರಮಾಹಾತ್ಮ್ಯವರ್ಣನವೆಂಬ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾವಿಂಶೋಽಧ್ಯಾಯಃ

ತೀರ್ಥಯಾತ್ರಾವಿಧಾನವರ್ಣನಂ

ದೇವ್ಯುವಾಚ:—

ಇತ್ಯಾಶ್ಚರ್ಯಮಿದಂ ದೇವ ತ್ವತ್ತಃ ಸರ್ವಂ ಮಯಾ ಶ್ರುತಂ ।
ಮಹಿಮಾನಂ ಮಹೇಶಸ್ಯ ವಿಸ್ತರೇಣ ಸಮುದ್ಭವಂ ।
ಸಾಂಪ್ರತಂ ಸೋಮನಾಥಸ್ಯ ಯಥಾವದ್ವಕ್ತುಮರ್ಹಸಿ ॥ ೧ ॥
ವಿಧಿನಾ ಕೇನ ದೃಶ್ಯೋಽಸೌ ಯಾತ್ರಾ ಕಾರ್ಯಾ ಕಥಂ ನೃಭಿಃ ।
ಕಸ್ಮಿನ್ಕಾಲೇ ಮಹಾದೇವ ನಿಯಮಾಶ್ಚೈವ ಕೀದೃಶಾಃ ॥ ೨ ॥

ಈಶ್ವರ ಉವಾಚ:—

ಹೇಮಂತೇ ಶಿಶಿರೇವಾಽಪಿ ವಸಂತೇವಾಽಥ ಭಾಮಿನಿ ।
ಯದಾ ಚ ಜಾಯತೇ ಚಿತ್ತಂ ವಿತ್ತಂ ವಾ ಪರ್ವ ವಾ ಭವೇತ್ ॥ ೩ ॥
ತದೈವ ಯಾತ್ರಾ ಕರ್ತವ್ಯಾ ಭಾವಸ್ತತ್ರೈವ ಕಾರಣಂ ।
ಕೃತ್ವಾ ತು ನಿಯಮಂ ಕಂಚಿತ್ಸ್ವಗೃಹೇ ವರವರ್ಣಿನಿ ॥ ೪ ॥
ಪ್ರಣಮ್ಯ ಮನಸಾ ರುದ್ರಂ ಕೃತ್ವಾ ಶ್ರಾದ್ಧಂ ಯಥಾವಿಧಿ ।
ಸ್ಥಾನಂ ಪ್ರದಕ್ಷಿಣಂ ಕೃತ್ವಾ ವಾಗ್ಯತಃ ಸುಸಮಾಹಿತಃ ॥ ೫ ॥

ಕನ್ನಡದ ಅನುವಾದ

ತೀರ್ಥಯಾತ್ರಾವಿಧಾನವರ್ಣನ

೧. ದೇವಿಯು ಹೇಳುತ್ತಾಳೆ:—ಸ್ವಾಮಿ ! ಹೀಗೆ ಆಶ್ಚರ್ಯಕರವಾದ ವಿಷಯವನ್ನು ನಾನು ನಿನ್ನಿಂದ ಕೇಳಿದೆನು. ಈಗ ಸೋಮನಾಥನ ಉತ್ಪತ್ತಿಯನ್ನೂ, ಮಾಹಾತ್ಮ್ಯವನ್ನೂ ವಿಸ್ತಾರವಾಗಿ ಹೇಳು.

೨. ಈ ಸೋಮನಾಥನನ್ನು ಯಾವ ವಿಧಿಯಿಂದ ದರ್ಶನ ಮಾಡಬೇಕು? ಮಾನವರು ಈ ಸೋಮನಾಥ ಯಾತ್ರೆಯನ್ನು ಯಾವಾಗ ಹೇಗೆ ಮಾಡಬೇಕು. ಅದರ ನಿಯಮಗಳೇನು ?

೩–೭. ಈಶ್ವರನು ಹೇಳುತ್ತಾನೆ:—ಪ್ರಿಯಳೆ! ಹೇಮಂತ, ಶಿಶಿರ, ವಸಂತ ಋತುಗಳಲ್ಲಿ ಅಥವಾ ಹೋಗಬೇಕೆಂದು ಮನಸ್ಸು ಯಾವಾಗ ಉಂಟಾಗುವುದೊ, ದ್ರವ್ಯಾನುಕೂಲ್ಯ ಪರ್ವಕಾಲುಗಳು ಯಾವಾಗ ಉಂಟಾಗುವುವೊ, ಆಗಲೇ ಯಾತ್ರೆಯನ್ನು ಮಾಡಬೇಕು. ಮನಸ್ಸೇ ಆ ಯಾತ್ರೆಗೆ ಕಾರಣವು. ತನ್ನ ಮನೆಯಲ್ಲಿ ಒಂದು ನಿಯಮವನ್ನು ಮಾಡಿ ಮನಸ್ಸಿನಿಂದ ರುದ್ರನನ್ನು ವಂದಿಸಿ ವಿಧಿಯಂತೆ

ನಿಯತೋ ನಿಯತಾಹಾರೋ ಗಚ್ಛೇಚ್ಚೈವ ತತಃ ಪಥಿ ।
ಕಾಮಕ್ರೋಧೌ ಪರಿತ್ಯಜ್ಯ ಲೋಭಮೋಹೌ ತಥೈವ ಚ ॥ ೬ ॥
ಈರ್ಷ್ಯಾಮತ್ಸರಲೌಲ್ಯಂ ಚ ಯಾತ್ರಾ ಕಾರ್ಯಾ ತತೋ ನೃಭಿಃ ।
ತೀರ್ಥಾನುಗಮನಂ ಪುಣ್ಯಂ ಯಜ್ಞೇಭ್ಯೋಽಪಿ ವಿಶಿಷ್ಯತೇ ॥ ೭ ॥
ಅಗ್ನಿಷ್ಟೋಮಾದಿಯಜ್ಞೈಶ್ಚ ಇಷ್ಟ್ವಾ ವಿಪುಲದಕ್ಷಿಣೈಃ ।
ತತ್ತತ್ಫಲಮವಾಪ್ನೋತಿ ತೀರ್ಥಾನುಗಮನೇನ ಯತ್ ॥ ೮ ॥
ಕಲೇರ್ಯುಗಂ ಮಹಾಘೋರಂ ಪ್ರಾಪ್ಯ ಪಾಪಸಮನ್ವಿತಂ ।
ನಾಽನ್ಯೇನಾಽಸ್ಮಿನ್ನುಪಾಯೇನ ಧರ್ಮಃ ಸ್ವರ್ಗಶ್ಚ ಲಭ್ಯತೇ ।
ವಿನಾ ಯಾತ್ರಾಂ ಮಹಾದೇವಿ ಸೋಮೇಶಸ್ಯ ನ ಸಂಶಯಃ ॥ ೯ ॥
ಯೇ ಕುರ್ವಂತಿ ನರಾ ಯಾತ್ರಾಂ ಶುಚಿಶ್ರದ್ಧಾಸಮನ್ವಿತಾಃ ।
ಕಲೌ ಯುಗೇ ಕೃತಾರ್ಥಾಸ್ತೇ ಯೇ ತ್ವನ್ಯೇ ತೇ ನಿರರ್ಥಕಾಃ ॥ ೧೦ ॥
ಯಥಾ ಮಹೋದಧೇಸ್ತುಲ್ಯೋ ನ ಚಾಽನ್ಯೋಽಸ್ತಿ ಜಲಾಶಯಃ ।
ತಥಾ ಪ್ರಾಭಾಸಿಕಾತ್ಕ್ಷೇತ್ರಾತ್ಸಮಂ ತೀರ್ಥಂ ನ ವಿದ್ಯತೇ ॥ ೧೧ ॥

ಶ್ರಾದ್ಧವನ್ನು ನೆರವೇರಿಸಿ ತಾನಿರುವ ಸ್ಥಳವನ್ನು ಪ್ರದಕ್ಷಿಣೆ ಮಾಡಿ ಮೌನಿಯೂ, ಸ್ಥಿರ ಚಿತ್ತನೂ, ಮಿತಾಹಾರಿಯೂ ಆಗಿ ಹೊರಡಬೇಕು. ಮಾನವರು ಕಾಮ, ಕ್ರೋಧ, ಲೋಭ, ಮೋಹ, ಈರ್ಷ್ಯೆ, ಚಾಪಲ್ಯಗಳನ್ನು ತ್ಯಜಿಸಿ ಯಾತ್ರೆ ಮಾಡಬೇಕು. ಈ ತೀರ್ಥಯಾತ್ರೆಯ ಪುಣ್ಯವು ಯಜ್ಞಮಾಡಿದ ಪುಣ್ಯಕ್ಕಿಂತ ಅಧಿಕವಾದುದು.

೮. ಈ ಸೋಮೇಶ್ವರ ಯಾತ್ರೆಯಿಂದ ಅತಿಶಯ ದಕ್ಷಿಣೆಯುಳ್ಳ ಅಗ್ನಿಷ್ಟೋಮ ಯಾಗ ಮಾಡಿದ ಪುಣ್ಯವು ಲಭಿಸುವುದು.

೯. ಮಹಾದೇವಿ ! ಪಾಪದಿಂದ ಕೂಡಿರುವ ಅತ್ಯಂತ ಘೋರವಾದ ಈ ಕಲಿ ಯುಗದಲ್ಲಿ ಸೋಮೇಶ್ವರ ಯಾತ್ರೆಯನ್ನು ಬಿಟ್ಟು ಇತರ ಯಾವ ಉಪಾಯದಿಂದಲೂ, ಧರ್ಮವೂ, ಸ್ವರ್ಗವೂ ದೊರೆಯುವುದಿಲ್ಲ.

೧೦. ಕಲಿಯುಗದಲ್ಲಿ ಶುದ್ಧರಾಗಿ ಶ್ರದ್ಧೆಯಿಂದ ಸೋಮೇಶ್ವರ ಯಾತ್ರೆಯನ್ನು ಮಾಡಿದ ಮಾನವರು ಧನ್ಯರು. ಇತರರು ನಿಷ್ಫಲವಾದ ಜೀವನವುಳ್ಳವರು.

೧೧. ಹೇಗೆ ಸಮುದ್ರಕ್ಕೆ ಸಮಾನವಾದ ತಟಾಕವಿರುವುದಿಲ್ಲವೋ ಹಾಗೆ ಪ್ರಾಭಾಸಿಕ ಕ್ಷೇತ್ರಸಮಾನವಾದ ತೀರ್ಥವಿರುವುದಿಲ್ಲ.

ಅನುಪ್ರೋಷ್ಯ ತ್ರಿರಾತ್ರಾಣಿ ತೀರ್ಥಾನ್ಯನಭಿಗಮ್ಯ ಚ ।
ಅದತ್ವಾ ಕಾಂಚನಂ ಗಾಶ್ಚ ದರಿದ್ರೋ ನಾಮ ಜಾಯತೇ ॥ ೧೨ ॥
ಯಾನ್ಯಗಮ್ಯಾನಿ ತೀರ್ಥಾನಿ ದುರ್ಗಾಣಿ ವಿಷಮಾಣಿ ಚ ।
ಮನಸಾ ತಾನಿ ಗಮ್ಯಾನಿ ಸರ್ವತೀರ್ಥಗತೀಪ್ಸುನಾ ॥ ೧೩ ॥
ಯಸ್ಯ ಹಸ್ತೌ ಚ ಪಾದೌ ಚ ಮನಶ್ಚೈವ ಸುಸಂಯತಂ ।
ವಿದ್ಯಾ ತಪಶ್ಚ ಕೀರ್ತಿಶ್ಚ ಸ ತೀರ್ಥಫಲಮಶ್ನುತೇ ॥ ೧೪ ॥
ನಿಯತೋ ನಿಯತಾಹಾರಃ ಸ್ನಾನಜಾಪ್ಯಪರಾಯಣಃ ।
ವ್ರತೋಪವಾಸನಿರತಃ ಸ ತೀರ್ಥಫಲಮಶ್ನುತೇ ॥ ೧೫ ॥
ಅಕ್ರೋಧನಶ್ಚ ದೇವೇಶಿ ಸತ್ಯಶೀಲೋ ದೃಢವ್ರತಃ
ಆತ್ಮೋಪಮಶ್ಚ ಭೂತೇಷು ಸ ತೀರ್ಥಫಲಮಶ್ನುತೇ ॥ ೧೬ ॥
ಕುರುಕ್ಷೇತ್ರಾದಿತೀರ್ಥಾನಿ ರಥಗಮ್ಯಾನಿ ಯಾನಿ ತು ।
ತಾನ್ಯೇವ ಬ್ರಾಹ್ಮಣೋ ಯಾಯಾದ್ಯಾನದೋಷೋ ನ ತೇಷು ವೈ ॥ ೧೭ ॥

---

೧೨. ಮೂರುರಾತ್ರಿ ಉಪವಾಸಮಾಡದೆಯೂ, ತೀರ್ಥಯಾತ್ರೆಮಾಡದೆಯೂ ಸುವರ್ಣ, ಗೋವುಗಳನ್ನು ದಾನಮಾಡದೆಯೂ, ಇರುವ ಮಾನವನು ಬಡವನಾಗುವನು.

೧೩. ಸಕಲ ತೀರ್ಥಗಳಿಗೆ ಹೋಗಲಿಚ್ಛಿಸುವವನು ಹೋಗಲಾರದ ವಿಷಮ ತೀರ್ಥಗಳನ್ನು ಮನಸ್ಸಿನಿಂದ ಧ್ಯಾನಿಸಬೇಕು.

೧೪. ಯಾವ ಮನುಷ್ಯನ ಕೈಕಾಲುಗಳೂ, ಮನಸ್ಸೂ ಸ್ವಾಧೀನವಾಗಿರುವುವೊ, ಯಾವನು ವಿದ್ಯಾ, ತಪಸ್ಸು, ಕೀರ್ತಿಗಳನ್ನು ಗಳಿಸಿರುವನೊ, ಅವನು ತೀರ್ಥಯಾತ್ರೆಯ ಪುಣ್ಯವನ್ನು ಪಡೆಯುವನು.

೧೫-೧೬. ಜಿತೇಂದ್ರಿಯನೂ, ಮಿತಾಹಾರಿಯೂ, ಸ್ನಾನ, ಜಪ, ವ್ರತ, ಉಪವಾಸಗಳಲ್ಲಿ ನಿರತನೂ, ಕೋಪವಿಲ್ಲದವನೂ, ಸತ್ಯವಂತನೂ, ಸ್ಥಿರವಾದ ನಿಯಮವುಳ್ಳವನೂ, ಪ್ರಾಣಿಗಳನ್ನು ತನ್ನಂತೆ ನೋಡುವವನೂ, ಆದ ಮಾನವನು ಫಲವನ್ನು ಹೊಂದುವನು.

೧೭. ಬ್ರಾಹ್ಮಣನು ರಥದಿಂದ ಹೋಗಲರ್ಹವಾದ ಕುರುಕ್ಷೇತ್ರ ಮೊದಲಾದ ತೀರ್ಥಗಳಿಗೆ ವಾಹನದಿಂದ ಹೋದರೂ ವಾಹನದಲ್ಲಿ ಪ್ರಯಾಣ ಮಾಡಿದ ದೋಷವುಂಟಾಗುವುದಿಲ್ಲ.

ಯೇ ಸಾಧವೋ ಧನೋಪೇತಾಸ್ತೀರ್ಥಾನಾಂ ಸ್ಮರಣೇ ರತಾಃ ।
ತೀರ್ಥೇ ದಾನಾಚ್ಚ ಯೋಗಾಚ್ಚ ತೇಷಾಮಭ್ಯಧಿಕಂ ಫಲಂ ॥ ೧೮ ॥
ಯೇ ದರಿದ್ರಾ ಧನೈರ್ಹೀನಾಸ್ತೀರ್ಥಾಭಿಗಮನೇ ರತಾಃ ।
ತೇಷಾಂ ಯಜ್ಞಫಲಾವಾಪ್ತಿರ್ವಿನಾಽಪಿ ಧನಸಂಚಯೈಃ ॥ ೧೯ ॥
ಸರ್ವೇಷಾಮೇವ ವರ್ಣಾನಾಂ ಸರ್ವಾಶ್ರಮನಿವಾಸಿನಾಂ ।
ತೀರ್ಥಂ ತು ಫಲದಂ ಜ್ಞೇಯಂ ನಾಽತ್ರ ಕಾರ್ಯಾ ವಿಚಾರಣಾ ॥ ೨೦ ॥
ಕಾರ್ಯಾಂತರೇಣ ಯೋ ಗತ್ವಾ ಸ್ನಾನಂ ತೀರ್ಥೇ ಸಮಾಚರೇತ್ ।
ನ ಚ ಯಾತ್ರಾಫಲಂ ತಸ್ಯ ಸ್ನಾನಮಾತ್ರಂ ಫಲಂ ಭವೇತ್ ॥ ೨೧ ॥
ತೀರ್ಥಾನುಗಮನಂ ಪದ್ಭ್ಯಾಂ ತಪಃ ಪರಮಿಹೋಚ್ಯತೇ ।
ತದೇವ ಕೃತ್ವಾ ಯಾನೇನ ಸ್ನಾನಮಾತ್ರಫಲಂ ಲಭೇತ್ ॥ ೨೨ ॥
ಯಸ್ತ್ವನ್ಯೈಃ ಕುರುತೇ ಶಕ್ತ್ಯಾ ತೀರ್ಥಯಾತ್ರಾಂ ತಥೇಶ್ವರಿ ।
ಸ್ವಕೀಯದ್ರವ್ಯಯಾನಾಭ್ಯಾಂ ಫಲಂ ತಸ್ಯ ಚತುರ್ಗುಣಂ ॥ ೨೩ ॥
ತೀರ್ಥಾನುಗಮನಂ ಕೃತ್ವಾ ಭಿಕ್ಷಾಹಾರಾ ಜಿತೇಂದ್ರಿಯಾಃ ।
ಪ್ರಾಪ್ನುವಂತಿ ಮಹಾದೇವಿ ತೀರ್ಥೇ ದಶಗುಣಂ ಫಲಂ ॥ ೨೪ ॥

---

೧೮. ಹಣಗಾರರೂ, ತೀರ್ಥಗಳ ಸ್ಮರಣೆಯಲ್ಲಿ ಆಸಕ್ತರೂ ಆದ ಮಾನವರು ತೀರ್ಥಗಳಲ್ಲಿ ದಾನ, ಯೋಗಗಳನ್ನು ಮಾಡಿದರೆ ಅಧಿಕ ಪುಣ್ಯವು ದೊರೆಯುವುದು.

೧೯. ಬಡವರು ತೀರ್ಥಯಾತ್ರೆಯಲ್ಲಿ ಆಸಕ್ತರಾದರೆ ಅವರಲ್ಲಿ ದ್ರವ್ಯಗಳಿಲ್ಲದಿದ್ದರೂ ಯಜ್ಞ ಮಾಡಿದ ಪುಣ್ಯವನ್ನು ಪಡೆಯುವರು.

೨೦. ತೀರ್ಥವು ಸಮಸ್ತ ಜಾತಿಯವರಿಗೂ, ಸಕಲ ಆಶ್ರಮದವರಿಗೂ ಪುಣ್ಯವನ್ನೀಯುವುದು. ಈ ವಿಷಯದಲ್ಲಿ ವಿಚಾರವಿಲ್ಲ.

೨೧. ಕಾರ್ಯಾಂತರದ ನಿಮಿತ್ತದಿಂದ ತೀರ್ಥಕ್ಕೆ ಹೋಗಿ ಮಿಂದವನಿಗೆ ಯಾತ್ರೆಯ ಫಲವು ದೊರೆಯುವುದಿಲ್ಲ. ಸ್ನಾನದ ಫಲವು ಮಾತ್ರ ಲಭಿಸುವುದು.

೨೨. ಕಾಲ್ನಡಿಗೆಯಿಂದ ಮಾಡುವ ತೀರ್ಥಯಾತ್ರೆಯು ಉತ್ತಮ ತಪಸ್ಸೆನ್ನಿಸಿಕೊಳ್ಳುವುದು. ಅದೇ ತೀರ್ಥಯಾತ್ರೆಯನ್ನು ವಾಹನದಿಂದ ಮಾಡಿದರೆ ಸ್ನಾನ ಮಾಡಿದ ಫಲವು ಮಾತ್ರ ದೊರೆಯುವುದು.

೨೩. ತನ್ನ ಸ್ವಂತ ದ್ರವ್ಯ, ವಾಹನಗಳಿಂದ ಇತರರಿಗೆ ತೀರ್ಥಯಾತ್ರೆಯನ್ನು ಮಾಡಿಸಿದವನಿಗೆ ನಾಲ್ಕರಷ್ಟು ಪುಣ್ಯವು ಲಭಿಸುವುದು.

೨೪. ತೀರ್ಥಕ್ಕೆ ಹೋಗಿ ಅಲ್ಲಿ ಭಿಕ್ಷಾನ್ನವನ್ನು ತಿಂದು ಜಿತೇಂದ್ರಿಯರಾಗಿರುವವರು ಹತ್ತರಷ್ಟು ಪುಣ್ಯವನ್ನು ಪಡೆಯುವರು.

ಛತ್ರೋಪಾನದ್ವಿಹೀನಸ್ತು ಭಿಕ್ಷಾಶೀ ವಿಜಿತೇಂದ್ರಿಯಃ ।
ಮಹಾಪಾತಕಜೈರ್ಘೋರೈರ್ವಿಪ್ರಃ ಪಾಪೈಃ ಪ್ರಮುಚ್ಯತೇ ॥ ೨೫ ॥
ನ ಭೈಕ್ಷಂ ಪರಪಾಕಂ ತು ನ ಚ ಭೈಕ್ಷಂ ಪ್ರತಿಗ್ರಹಂ ।
ಸೋಮಪಾನಸಮಂ ಭೈಕ್ಷಂ ತಸ್ಮಾದ್ಭೈಕ್ಷಂ ಸಮಾಚರೇತ್ ॥ ೨೬ ॥
ಲೋಕೇಽಸ್ಮಿನ್ ದ್ವಿವಿಧಂ ತೀರ್ಥಂ ಸ್ವಚ್ಛಂದೈರ್ನಿರ್ಮಿತಂ ತಥಾ ।
ಸ್ವಯಂಭೂತಂ ಪ್ರಭಾಸಾದ್ಯಂ ನಿರ್ಮಿತಂ ದೈವತೈಃ ಕೃತಂ ॥ ೨೭ ॥
ಸ್ವಯಂಭೂತೇ ಮಹಾತೀರ್ಥೇ ಸ್ವಭಾವೇ ಚ ಮಹತ್ತರೇ ।
ತಸ್ಮಿಂಸ್ತೀರ್ಥೇ ಪ್ರತಿಗೃಹ್ಯ ಕೃತಾಃ ಸರ್ವೇ ಪ್ರತಿಗ್ರಹಾಃ ॥ ೨೮ ॥
ಪ್ರತಿಗ್ರಹನಿವೃತ್ತಸ್ಯ ಯಾತ್ರಾದಶಗುಣಂ ಫಲಂ ।
ತೇನ ದತ್ತಾನಿ ದಾನಾನಿ ಯಜ್ಞೈರ್ದೇವಾಃ ಸುತರ್ಪಿತಾಃ ॥ ೨೯ ॥
ಯೇನ ಕ್ಷೇತ್ರಂ ಸಮಾಸಾದ್ಯ ನಿವೃತ್ತಿಃ ಪರಮಾ ಕೃತಾ ।
ವಸ್ತು ಲೌಲ್ಯಾದ್ಧಿ ಯಃ ಕ್ಷೇತ್ರೇ ಪ್ರತಿಗ್ರಹರುಚಿಸ್ತಥಾ ॥ ೩೦ ॥

---

೨೫. ತೀರ್ಥದಲ್ಲಿ ಛತ್ರ, ಪಾದರಕ್ಷೆಗಳಿಲ್ಲದೆ ಭಿಕ್ಷಾನ್ನವನ್ನು ತಿನ್ನುತ್ತ ಜಿತೇಂದ್ರಿಯನಾದ ಮಾನವನು ಮಹಾಘೋರಪಾತಕಗಳಿಂದ ಮುಕ್ತನಾಗುವನು.

೨೬. ಭಿಕ್ಷಾನ್ನದಲ್ಲಿ ಪರಪಾಕ, ಪ್ರತಿಗ್ರಹದೋಷಗಳಿರುವುದಿಲ್ಲ. ಅದು ಸೋಮಪಾನಕ್ಕೆ ಸಮಾನವಾದುದು. ಆದ್ದರಿಂದ ಭಿಕ್ಷಾಟನೆ ಮಾಡಬೇಕು.

೨೭. ಈ ಲೋಕದಲ್ಲಿ ಸ್ವೇಚ್ಛೆಯಿಂದ ನಿರ್ಮಿಸಲ್ಪಟ್ಟವೆಂದೂ ಪ್ರಭಾಸ ಮೊದಲಾದುವುಗಳಂತೆ ದೇವ ನಿರ್ಮಿತವಾದುವೆಂದೂ ತೀರ್ಥಗಳು ಎರಡು ವಿಧಗಳಾಗಿರುವುವು.

೨೮. ತಾವಾಗಿಯೇ ಹುಟ್ಟಿ ಸ್ವಭಾವದಿಂದ ಉತ್ಕೃಷ್ಟವಾದ ಮಹಾತೀರ್ಥದಲ್ಲಿ ಯಾವುದಾದರೊಂದು ದಾನವನ್ನು ತೆಗೆದುಕೊಂಡರೆ ಎಲ್ಲವನ್ನೂ ಪ್ರತಿಗ್ರಹಮಾಡಿದಂತಾಗುವುದು.

೨೯. ಪ್ರತಿಗ್ರಹಮಾಡದೆ ಯಾತ್ರೆ ಗೈದ ಮಾನವನಿಗೆ ಹತ್ತರಷ್ಟು ಫಲವು ಲಭಿಸುವುದರಿಂದ ಅವನು ದಾನಮಾಡಿದಂತಹವನೂ, ಯಜ್ಞಗಳಿಂದ ದೇವತೆಗಳನು ತೃಪ್ತಿಗೊಳಿಸಿದವನೂ, ಆಗುವನು.

೩೦–೩೧. ಕ್ಷೇತ್ರವನ್ನು ಸೇರಿ ಜೀವಿಸುವವನೂ, ವಸ್ತುಗಳನ್ನು ಪಡೆಯುವ ಆಶೆಯಿಂದ ಪ್ರತಿಗ್ರಹದಲ್ಲಿ ಅಭಿಲಾಷೆಯುಳ್ಳವನೂ ಆಗಿರುವ ದುಷ್ಟ ಮನುಷ್ಯನಿಗೆ ಇಹಪರಲೋಕಗಳಲ್ಲಿ ಶ್ರೇಯಸ್ಸಾಗುವುದಿಲ್ಲ. ಬ್ರಾಹ್ಮಣನು ಜೀವನಮಾಡಲೋಸುಗ

ನೈವ ತಸ್ಯ ಪರೋ ಲೋಕೋ ನಾಽಯಂ ಲೋಕೋ ದುರಾತ್ಮನಃ ।
ಅಥ ಚೇತ್ಪ್ರತಿಗೃಹ್ಣಾತಿ ಬ್ರಾಹ್ಮಣೋ ವೃತ್ತಿದುರ್ಬಲಃ ।
ದಶಾಂಶಮರ್ಜಿತಾದ್ದದ್ಯಾದೇವಂ ತತ್ರ ನ ಹೀಯತೇ ॥ ೩೧ ॥
ವಿಪ್ರವೇಷಂ ಸಮಾಸ್ಥಾಯ ಶೂದ್ರೋ ಭೂತ್ವಾ ಪ್ರತಿಗ್ರಹಂ ।
ತೃಣಕಾಷ್ಠಸಮಂ ವಾಽಪಿ ಪ್ರತಿಗೃಹ್ಯ ಪತತ್ಯಧಃ ॥ ೩೨ ॥
ಕುಂಭೀಪಾಕಾದಿಕೇಷ್ವೇವಂ ಮಹಾನರಕಕೋಟಿಷು ।
ಯಾವದಿಂದ್ರಸಹಸ್ರಾಣಿ ಚತುರ್ದಶ ವರಾನನೇ ॥ ೩೩ ॥
ತಸ್ಮಾನ್ನೈವ ಪ್ರತಿಗ್ರಾಹ್ಯಂ ಕಿಮನ್ಯೈರ್ಬ್ರಾಹ್ಮಣೈರಪಿ ।
ದ್ವಿಪ್ರಕಾರಸ್ಯ ತೀರ್ಥಸ್ಯ ಕೃತಸ್ಯಾಽಪ್ರಕೃತಸ್ಯ ಚ ॥ ೩೪ ॥
ಸ್ವಕೀಯಭಾವಸಂಯುಕ್ತಃ ಸಂಪೂರ್ಣಂ ಫಲಮಶ್ನುತೇ ।
ಲಭತೇ ಷೋಡಶಾಂಶಂ ಸ ಯಃ ಪರಾನ್ನೇನ ಗಚ್ಛತಿ ॥ ೩೫ ॥
ಅಶಕ್ತಸ್ಯ ತಥಾಂಧಸ್ಯ ಪಂಗೋರ್ಯಾಯಾವರಸ್ಯ ಚ ।
ವಿಹಿತಂ ಕಾರಣಾದ್ಯಾನಮುಚ್ಛಿದ್ರೇ ಬ್ರಾಹ್ಮಣೇ ಕುತಃ ॥ ೩೬ ॥
ಸ್ನಾನಛಾದನಪಾನೈಶ್ಚ ವೋಢೃಭ್ಯಸ್ತೀರ್ಥಸೇವಕಃ ।
ದದತ್ಸಕಲಮಾಪ್ನೋತಿ ಫಲಂ ತೀರ್ಥಸಮುದ್ಭವಂ ॥ ೩೭ ॥

ಪ್ರತಿಗ್ರಹ ಮಾಡಿದರೆ ತಾನು ಸಂಪಾದಿಸಿದುದರಲ್ಲಿ ಹತ್ತನೆಯ ಒಂದಂಶವನ್ನು ದಾನ ಮಾಡಬೇಕು. ಹೀಗೆ ಮಾಡಿದರೆ ಅವನು ನೀಚನಾಗುವುದಿಲ್ಲ.

೩೨–೩೩. ಶೂದ್ರನು ಬ್ರಾಹ್ಮಣ ವೇಷವನ್ನು ಧರಿಸಿ ಹುಲ್ಲು ಕಟ್ಟಿಗೆಯಂತಹ ವಸ್ತುವನ್ನು ದಾನವಾಗಿ ತೆಗೆದುಕೊಂಡರೂ ಕುಂಭೀಪಾಕ ಮೊದಲಾದ ಅನೇಕ ಮಹಾ ನರಕಗಳಲ್ಲಿ ಹದಿನಾಲ್ಕು ಸಾವಿರ ಇಂದ್ರರ ಕಾಲದವರೆಗೆ ವಾಸಿಸುವನು.

೩೪. ಆದುದರಿಂದ ಬ್ರಾಹ್ಮಣರು ಹಿಂದೆ ಹೇಳಿದ ಎರಡು ಬಗೆಯ ತೀರ್ಥಗಳಲ್ಲಿಯೂ ಪ್ರತಿಗ್ರಹ ಮಾಡಕೂಡದು.

೩೫. ತನ್ನ ಪದಾರ್ಥಗಳಿಂದ ತೀರ್ಥಯಾತ್ರೆಯನ್ನು ಮಾಡಿದವನು ಸಂಪೂರ್ಣ ಫಲವನ್ನು ಪಡೆಯುವನು. ಪರಾನ್ನದಿಂದ ಯಾತ್ರೆ ಮಾಡಿದವನು ಹದಿನಾರನೆಯ ಒಂದು ಭಾಗದ ಫಲವನ್ನು ಹೊಂದುವನು.

೩೬. ಅಶಕ್ತ, ಕುರುಡ, ಕುಂಟ, ಯಾವಾಗಲೂ ಸಂಚರಿಸುವವ ಇವರು ವಾಹನದಿಂದ ತೀರ್ಥಯಾತ್ರೆ ಮಾಡಬಹುದು. ಸರಿಯಾಗಿರುವ ಬ್ರಾಹ್ಮಣನಿಗೆ ವಾಹನವೇಕೆ?

೩೭. ತೀರ್ಥವನ್ನು ಸೇವಿಸುವವನು ವಾಹನವನ್ನು ಹೊತ್ತಿರುವವರಿಗೆ ಸ್ನಾನ, ಆಹಾರ, ಪಾನಗಳನ್ನಿತ್ತರೆ ಅವನ್ನು ತೀರ್ಥದ ಸಂಪೂರ್ಣ ಫಲವನ್ನು ಹೊಂದುವನು.

ನ ಷೋಡಶಾಂಶಂ ಯತ್ನೇನ ಲಬ್ಧಾರ್ಥಂ ಯದಿ ಯಚ್ಛತಿ ।
ಪಂಚಮಾಂಶಮಥೋ ವಾಽಪಿ ದದ್ಯಾತ್ತತ್ರ ದ್ವಿಜಾತಿಷು ॥ ೩೮ ॥
ದೇವತಾನಾಂ ಗುರೂಣಾಂ ಚ ಮಾತಾಪಿತ್ರೋಶ್ಚ ಕಾಮತಃ ।
ಪುಣ್ಯದಃ ಸಮವಾಪ್ನೋತಿ ತದೇವಾಷ್ಟಗುಣಂ ಫಲಂ ॥ ೩೯ ॥
ಸ್ನಾನಂ ದಾನಂ ಜಪೋ ಹೋಮಃ ಸ್ವಾಧ್ಯಾಯೋ ದೇವತಾರ್ಚನಂ ।
ಪುಣ್ಯಂ ದೇಯಂ ತು ಸರ್ವತ್ರ ನಾಪುಣ್ಯಂ ದೀಯತೇ ಕ್ವಚಿತ್ ॥ ೪೦ ॥
ಪಿತರಂ ಮಾತರಂ ತೀರ್ಥೇ ಭ್ರಾತರಂ ಸುಹೃದಂ ಗುರುಂ ।
ಯಮುದ್ದಿಶ್ಯ ನಿಮಜ್ಜೇತ ದ್ವಾದಶಾಂಶಂ ಲಭೇತ ಸಃ ॥ ೪೧ ॥
ಕುಶೈಸ್ತು ಪ್ರತಿಮಾಂ ಕೃತ್ವಾ ತೀರ್ಥವಾರಿಷು ಮಜ್ಜಯೇತ್ ।
ಯಮುದ್ದಿಶ್ಯ ಮಹಾದೇವಿ ಅಷ್ಟಭಾಗಂ ಲಭೇತ ಸಃ ॥ ೪೨ ॥
ಮಹಾದಾನಾನಿ ಯೇ ವಿಪ್ರಾ ಗೃಹ್ಣಂತಿ ಜ್ಞಾನದುರ್ಬಲಾಃ ।
ವೃಕ್ಷಾಸ್ತೇ ದ್ವಿಜರೂಪೇಣ ಜಾಯಂತೇ ಬ್ರಹ್ಮರಾಕ್ಷಸಾಃ ॥ ೪೩ ॥

---

೩೮. ತಾನು ಪ್ರಯತ್ನದಿಂದ ಪಡೆದ ವಸ್ತುಗಳಲ್ಲಿ ಹದಿನಾರನೆಯ ಒಂದಂಶವನ್ನು ದಾನಮಾಡದಿದ್ದರೂ ಐದನೆಯ ಒಂದಂಶವನ್ನಾದರೂ ಬ್ರಾಹ್ಮಣರಿಗೆ ದಾನ ಮಾಡಬೇಕು.

೩೯. ತನ್ನ ಇಚ್ಛೆಯಂತೆ ದೇವತೆಗಳಿಗೂ, ಗುರುಗಳಿಗೂ, ತಂದೆ ತಾಯಿಗಳಿಗೂ ಪುಣ್ಯವನ್ನಿತ್ತವನು ಅದರ ಎಂಟರಷ್ಟು ಫಲವನ್ನು ಪಡೆಯುವನು.

೪೦. ಸ್ನಾನ, ದಾನ, ಜಪ, ಹೋಮ, ವೇದಾಧ್ಯಯನ, ದೇವಪೂಜೆ ಇವುಗಳ ಪುಣ್ಯವನ್ನು ಇತರರಿಗೆ ಕೊಡಲು ಸಾಧ್ಯವು. ಯಾವುದರ ಪಾಪವನ್ನೂ ಯಾರಿಗೂ ಕೊಡಲು ಸಾಧ್ಯವಿಲ್ಲ.

೪೧. ತಂದೆ, ತಾಯಿ, ಸಹೋದರ, ಸ್ನೇಹಿತ, ಗುರು ಇವರಲ್ಲಿ ಯಾರನ್ನಾದರೂ ಉದ್ದೇಶಿಸಿ ತೀರ್ಥದಲ್ಲಿ ಮಿಂದರೆ ಆ ತಂದೆ ತಾಯಿ ಮೊದಲಾದವರು ಹನ್ನೆರಡನೆಯ ಒಂದಂಶದ ಪುಣ್ಯವನ್ನು ಹೊಂದುವರು.

೪೨. ಯಾವನನ್ನು ಉದ್ದೇಶಿಸಿ ದರ್ಭೆಯಿಂದ ಪ್ರತಿಮೆಯನ್ನು ಮಾಡಿ ತೀರ್ಥ ಜಲದಲ್ಲಿ ಸ್ನಾನಮಾಡಿಸುವನೊ ಅವನು ಎಂಟನೆಯ ಒಂದಂಶದ ಫಲವನ್ನು ಪಡೆಯುವನು.

೪೩. ಜ್ಞಾನವಿಲ್ಲದ ಬ್ರಾಹ್ಮಣರು ಮಹಾದಾನಗಳನ್ನು ತೆಗೆದುಕೊಂಡರೆ ಬ್ರಾಹ್ಮಣರೂಪದ ವೃಕ್ಷದಂತಿರುವ ಅವರು ಬ್ರಹ್ಮರಾಕ್ಷಸರಾಗಿ ಹುಟ್ಟುವರು.

ನ ವೇದಬಲಮಾಶ್ರಿತ್ಯ ಪ್ರತಿಗ್ರಹರುಚಿರ್ಭವೇತ್ ।
ಅಜ್ಞಾನಾದ್ವಾ ಪ್ರಮಾದಾದ್ವಾ ದಹತೇ ಕರ್ಮ ನೇತರತ್ ॥ ೪೪ ॥
ಚಿತಾಕಾಷ್ಠಂ ತು ವೈ ಸ್ಪೃಷ್ಟ್ವಾ ಯಜ್ಞಯೂಪಂ ತಥೈವ ಚ ।
ವೇದವಿಕ್ರಯಿಣಂ ಸ್ಪೃಷ್ಟ್ವಾ ಸ್ನಾನಮೇವ ವಿಧೀಯತೇ ॥ ೪೫ ॥
ಆದೇಶಂ ಪಠತೇ ಯಸ್ತು ಆದೇಶಂ ತು ದದಾತಿ ಯಃ ।
ದ್ವಾವೇತೌ ಪಾಪಕರ್ಮಾಣೌ ಪಾತಾಲತಲವಾಸಿನೌ ॥ ೪೬ ॥
ಆದೇಶಂ ಪಠತೇ ಯಸ್ತು ಸಂಜಿಘೃಕ್ಷುಃ ಪ್ರತಿಗ್ರಹಂ ।
ತೀರ್ಥೇ ಚೈವ ವಿಶೇಷೇಣ ಬ್ರಹ್ಮಘ್ನಃ ಸೈವ ನೇತರಃ ।
ಸ್ಥಿತೋ ವೈ ನೃಪತೇರ್ದ್ವಾರಿ ನ ಕುರ್ಯಾದ್ವೇದವಿಕ್ರಯಂ ॥ ೪೭ ॥
ಹತ್ವಾ ಗಾವೋ ವರಂ ಮಾಂಸಂ ಭಕ್ಷಯೀತ ದ್ವಿಜಾಧಮಃ ।
ವರಂ ಜೀವನ್ ಸಮಂ ಮತ್ಸ್ಯೈರ್ನಕುರ್ಯಾದ್ವೇದವಿಕ್ರಯಂ ।
ಬ್ರಹ್ಮಹತ್ಯಾಸಮಂ ಪಾಪಂ ನ ಭೂತಂ ನ ಭವಿಷ್ಯತಿ ॥ ೪೮ ॥
ವರಂ ಕುರ್ಯಾಚ್ಚ ತದ್ದೇವಿ ನ ಕುರ್ಯಾದ್ವೇದವಿಕ್ರಯಂ ।
ತೀರ್ಥೇ ಚೈವ ವಿಶೇಷೇಣ ಮಹಾಕ್ಷೇತ್ರೇ ತಥೈವ ಚ ॥ ೪೯ ॥

---

೪೪. ವೇದಾಧ್ಯಯನದ ಬಲವನ್ನು ಆಶ್ರಯಿಸಿ ಪ್ರತಿಗ್ರಹಮಾಡಬಾರದು. ಅಜ್ಞಾನದಿಂದಾಗಲಿ, ಪ್ರಮಾದದಿಂದಾಗಲಿ ಹಾಗೆ ದಾನವನ್ನು ತೆಗೆದುಕೊಂಡರೆ ಅವನ ಕರ್ಮವು ಹಾಳಾಗುವುದು. ಬೇರೆ ಯಾವುದೂ ಹಾಳಾಗುವುದಿಲ್ಲ.

೪೫. ಚಿತೆಯಕಟ್ಟಿಗೆ, ಯೂಪಸ್ತಂಭ, ವೇದವನ್ನು ಮಾರುವ ಬ್ರಾಹ್ಮಣ ಇವರನ್ನು ಮುಟ್ಟಿದರೆ ಸ್ನಾನಮಾಡಬೇಕು.

೪೬. ಮೂಲ್ಯದಿಂದ ವೇದವನ್ನು ಹೇಳುವವನೂ, ಓದುವವನೂ ಇವರಿಬ್ಬರೂ ಪಾಪಿಗಳಾಗಿ ನರಕವನ್ನೈದುವರು.

೪೭–೫೦. ತೀರ್ಥದಲ್ಲಿ ಪ್ರತಿಗ್ರಹವನ್ನು ಮಾಡಲಿಚ್ಛೆಯಿಂದ ವೇದವನ್ನು ಹೇಳುವವನು ಬ್ರಹ್ಮಹತ್ಯೆಮಾಡಿದವನಂತಾಗುವನು. ರಾಜದ್ವಾರದಲ್ಲಿ ಇದ್ದರೂ ವೇದವನ್ನು ಮಾರಬಾರದು. ನೀಚ ಬ್ರಾಹ್ಮಣನು ಗೋಹತ್ಯೆ ಮಾಡಿಯಾದರೂ ಮಾಂಸವನ್ನು ತಿನ್ನಲಿ. ಮೀನುಗಳಿಂದಾದರೂ ಜೀವಿಸಲಿ. ವೇದ ವಿಕ್ರಯಮಾಡ ಬಾರದು. ಬ್ರಹ್ಮಹತ್ಯೆಗೆ ಸಮವಾದ ಪಾಪವಿಲ್ಲ. ಆದರೂ ಅದನ್ನು ಮಾಡ ಬಹುದು. ವೇದ ವಿಕ್ರಯಮಾಡಬಾರದು. ತೀರ್ಥವನ್ನು ಸೇವಿಸುವವನು ತೀರ್ಥ, ಮಹಾಕ್ಷೇತ್ರ ಇವುಗಳಲ್ಲಿ ಕೊಡುವ ದಾನವನ್ನು ತೆಗೆದುಕೊಳ್ಳದಿದ್ದರೆ ಅವನೇ ಆ

ದೀಯಮಾನಂ ತು ವೈ ದಾನಂ ಯಸ್ತ್ಯಜೇತ್ತೀರ್ಥಸೇವಕಃ ।
ತೀರ್ಥಂ ಕರೋತಿ ತೀರ್ಥಂ ಚ ಸ ಪುನಾತಿ ಚ ಪೂರ್ವಜಾನ್ ॥ ೫೦ ॥
ಯದನ್ಯತ್ರ ಕೃತಂ ಪಾಪಂ ತೀರ್ಥೇ ತದ್ಯಾತಿ ಲಾಘವಂ ।
ನ ತೀರ್ಥಕೃತಮನ್ಯತ್ರ ಕ್ವಚಿದೇವ ವ್ಯಪೋಹತಿ ॥ ೫೧ ॥
ತೈಲಪಾತ್ರಮಿವಾತ್ಮಾನಂ ಯೋ ರಕ್ಷೇತ್ತೀರ್ಥಸೇವಕಃ ।
ಸ ತೀರ್ಥಫಲಮಸ್ಕನ್ನಂ ವಿಪ್ರಃ ಪ್ರಾಪ್ನೋತಿ ಸಂಯುತಃ ॥ ೫೨ ॥
ಯಸ್ಯ ಯಸ್ಯಾತ್ತಿ ಪಕ್ವಾನ್ನಮಲ್ಪಂ ವಾ ಯದಿ ವಾ ಬಹು ।
ತೀರ್ಥಗಸ್ತಸ್ಯ ತಸ್ಯಾರ್ಧಂ ಸ್ನಾತಸ್ಯ ವಿನಿಯಚ್ಛತಿ ॥ ೫೩ ॥
ಯೋ ನ ಕ್ಲಿಷ್ಟೋಽಪಿ ಭಿಕ್ಷೇತ ಬ್ರಾಹ್ಮಣಸ್ತೀರ್ಥಸೇವಕಃ ।
ಸತ್ಯವಾದೀ ಸಮಾಧಿಸ್ಥಃ ಸ ತೀರ್ಥಸ್ಯೋಪಕಾರಕಃ ॥ ೫೪ ॥
ಕೃತೇ ಯುಗೇ ಪುಷ್ಕರಾಣಿ ತ್ರೇತಾಯಾಂ ನೈಮಿಷಂ ತಥಾ ।
ದ್ವಾಪರೇ ತು ಕುರುಕ್ಷೇತ್ರಂ ಪ್ರಾಭಾಸಿಕಂ ಕಲೌ ಯುಗೇ ॥ ೫೫ ॥

ತೀರ್ಥವನ್ನು ಪವಿತ್ರ ತೀರ್ಥವನ್ನಾಗಿಸುವನು. ಅಲ್ಲದೆ ತನ್ನ ಹಿಂದಿನವರನ್ನು ಪವಿತ್ರಗೊಳಿಸುವನು.

೫೧. ಬೇರೆಡೆಯಲ್ಲಿ ಸಗಿದ ಪಾಪವು ತೀರ್ಥದಲ್ಲಿ ಪರಿಹಾರವಾಗುವುದು. ತೀರ್ಥದಲ್ಲಿ ಮಾಡಿದ ಪಾಪವು ಬೇರೆ ಕಡೆಯಲ್ಲಿ ಪರಿಹಾರವಾಗುವುದಿಲ್ಲ.

೫೨. ತೀರ್ಥವನ್ನು ಸೇವಿಸುವ ಬ್ರಾಹ್ಮಣನು ತನ್ನನ್ನು ಎಣ್ಣೆಯ ಪಾತ್ರೆಯಂತೆ ಕಾಪಾಡಿಕೊಂಡರೆ ಅವನು ತೀರ್ಥಯಾತ್ರೆಯ ಸಂಪೂರ್ಣ ಫಲವನ್ನು ಹೊಂದುವನು.

೫೩. ತೀರ್ಥಯಾತ್ರೆ ಮಾಡುವವನು ಸ್ವಲ್ಪವಾಗಲಿ, ಬಹಳವಾಗಲಿ ಯಾವನ ಪಕ್ವಾನ್ನವನ್ನು ತಿನ್ನುವನೊ, ಅವನಿಗೆ ತನ್ನ ಪುಣ್ಯದ ಅರ್ಧವನ್ನು ಕೊಡುವನು.

೫೪. ತೀರ್ಥವನ್ನು ಸೇವಿಸುವ ಬ್ರಾಹ್ಮಣನು ತಾನು ಕಷ್ಟಪಡುತ್ತಿದ್ದರೂ ಭಿಕ್ಷಾಟನೆ ಮಾಡದಿದ್ದರೆ ಅವನು ಸತ್ಯವಂತನೂ, ಧ್ಯಾನಸ್ಥನೂ ಆಗಿ ತೀರ್ಥಕ್ಕೆ ಉಪಕಾರಮಾಡುವನು.

೫೫. ಕೃತಯುಗದಲ್ಲಿ ಪುಷ್ಕರಕ್ಷೇತ್ರವೂ, ತ್ರೇತಾಯುಗದಲ್ಲಿ ನೈಮಿಷಾರಣ್ಯವೂ, ದ್ವಾಪರಯುಗದಲ್ಲಿ ಕುರುಕ್ಷೇತ್ರವೂ, ಕಲಿಯುಗದಲ್ಲಿ ಪ್ರಾಭಾಸಿಕಕ್ಷೇತ್ರವೂ ಉತ್ತಮವಾದುದು.

ತಿಷ್ಠೇದ್ಯುಗಸಹಸ್ರಂ ತು ಪಾದೇನೈಕೇನ ಯಃ ಪುಮಾನ್ ।
ಪ್ರಭಾಸಯಾತ್ರಾಮೇಕೋ ವಾ ಸಮಂ ಭವತಿ ವಾ ನವಾ ॥ ೫೬ ॥
ಏತತ್ಕ್ಷೇತ್ರಂ ಸಮಾಗತ್ಯ ಮಧ್ಯಭಾಗೇ ವರಾನನೇ ।
ಯಾನಾನಿ ತು ಪರಿತ್ಯಜ್ಯ ಭಾವಂ ಪಾದಚರ್ಯೈರ್ನರೈಃ ॥ ೫೭ ॥
ಲುಠಿತ್ವಾ ಲೋಠನೀಂ ತತ್ರ ಲುಠಿತಾ ಯತ್ರ ದೇವತಾಃ ।
ತತೋ ನೃತ್ಯನ್ ಹಸನ್ ಗಾಯನ್ ಭೂತ್ವಾ ಕಾರ್ಪಟಿಕಾಕೃತಿಃ ।
ಗಚ್ಛೇತ್ಸೋಮೇಶ್ವರಂ ದೇವಂ ದೃಷ್ಟ್ವಾ ಚಾಽಽದೌ ಕಪರ್ದಿನಂ ॥ ೫೮ ॥
ಈದೃಶಂ ಪುರುಷಂ ದೃಷ್ಟ್ವಾ ಸ್ಥಿತಂ ಸೋಮೇಶ್ವರೋನ್ಮುಖಂ ।
ನಿತ್ಯಂ ತುಷ್ಯಂತಿ ಪಿತರೋ ಗರ್ಜಂತಿ ಚ ಪಿತಾಮಹಾಃ ॥ ೫೯ ॥
ಅಸ್ಮಾಕಂ ವಂಶಜೋ ದೇವಂ ಪ್ರಸ್ಥಿತಸ್ತಾರಣಾಯ ನಃ ।
ಗತ್ವಾ ಸೋಮೇಶ್ವರಂ ದೇವಿ ಕುರ್ಯಾದ್ವಪನಮಾದಿತಃ ॥ ೬೦ ॥
ತೀರ್ಥೋಪವಾಸಃ ಕರ್ತವ್ಯೋ ಯಥಾವದ್ವೈ ನಿಬೋಧ ಮೇ ।
ನಾಸ್ತಿ ಗಂಗಾಸಮಂ ತೀರ್ಥಂ ನಾಸ್ತಿ ಕೃತುಸಮಾ ಗತಿಃ ॥ ೬೧ ॥

---

೫೬. ಒಂದಡಿಯಿಂದ ಸಾವಿರ ಯುಗಗಳವರೆಗೆ ನಿಂತ ಮನುಷ್ಯನ ಪುಣ್ಯವು ಒಂದುಸಾರಿ ಪ್ರಭಾಸಕ್ಷೇತ್ರಯಾತ್ರೆ ಮಾಡಿದವನ ಪುಣ್ಯಕ್ಕೆ ಸಾಟಿಯಾಗುವುದೊ, ಇಲ್ಲವೊ.

೫೭. ಸುಮುಖಿ ! ಮಾನವರು ಈ ಪ್ರಭಾಸಕ್ಷೇತ್ರದ ಮಧ್ಯಭಾಗಕ್ಕೆ ಬಂದು ವಾಹನವನ್ನು ತ್ಯಜಿಸಿ ಕಾಲಿನಿಂದ ಸಂಚರಿಸಬೇಕು.

೫೮. ಅಲ್ಲಿ ದೇವತೆಗಳು ಹೊರಳಾಡಿದ ಸ್ಥಳದಲ್ಲಿ ಹೊರಳಾಡಿ ಬಳಿಕ ಚಿಂದಿ ಬಟ್ಟೆಯನ್ನುಟ್ಟ ತಿರುಕನಂತೆ ಕುಣಿಯುತ್ತಲೂ, ನಗುತ್ತಲೂ, ಹಾಡುತ್ತಲೂ ಮಹೇಶ್ವರನ ದರ್ಶನಮಾಡಿ ಸೋಮನಾಥನೆಡೆಗೆ ಹೋಗಬೇಕು.

೫೯–೬೧. ಸೋಮೇಶ್ವರನ ಅಭಿಮುಖವಾಗಿ ನಿಂತಿರುವ ಇಂತಹ ಮನುಷ್ಯನನ್ನು ಕಂಡು ಪಿತೃಗಳು, ನಮ್ಮ ವಂಶದವನು ನಮ್ಮನ್ನು ಉದ್ಧರಿಸಲು ಸೋಮೇಶ್ವರನೆಡೆಗೆ ಹೋಗಿರುವನೆಂದು ಸಂತೋಷಗೊಳ್ಳುವರು. ಪಿತಾಮಹರು ಗರ್ಜಿಸುವರು. ದೇವಿ ! ಯಾತ್ರಿಕನು ಸೋಮೇಶ್ವರನೆಡೆಗೆ ಹೋಗಿ ಮೊದಲು ವಪನ ಮಾಡಿಸಿಕೊಂಡು ಬಳಿಕ ತೀರ್ಥೋಪವಾಸವನ್ನು ಮಾಡಬೇಕು. ಗಂಗೆಗೆ ಸಮಾನವಾದ ಗತಿಯೂ, ಗಾಯತ್ರಿಗೆ ಸಮಾನವಾದ ಮಂತ್ರವೂ, ವ್ಯಾಹೃತಿಗೆ ಸಮಾನವಾದ ಹೋಮವೂ,

ಗಾಯತ್ರೀಸದೃಶಂ ಜಾಪ್ಯಂ ಹೋಮೋ ವ್ಯಾಹೃತಿಭಿಃ ಸಮಃ ।
ಅಂತರ್ಜಲೇ ತಥಾ ನಾಽಸ್ತಿ ಪಾಪಘ್ನಮಘಮರ್ಷಣಾತ್ ॥ ೬೨ ॥
ಅಹಿಂಸಾಸದೃಶಂ ಪುಣ್ಯಂ ದಾನಾತ್ಸಂಚಯನಂ ಪರಂ ।
ತಪಶ್ಚಾಽನಶನಾನ್ನಾಸ್ತಿ ತಥಾ ತೀರ್ಥನಿಷೇವಣಾತ್ ॥ ೬೩ ॥
ತೀರ್ಥೋಪವಾಸಾದ್ದೇವೇಶಿ ಅಧಿಕಂ ನಾಸ್ತಿ ಕಿಂಚನ ।
ಪಾಪಾನಾಂ ಚೋಪಶಮನಂ ಸತಾಮೀಪ್ಸಿತಕಾರಕಂ ॥ ೬೪ ॥
ಉಪವಾಸೋ ವಿನಿರ್ದಿಷ್ಟೋ ವಿಶೇಷಾದ್ದೇವತಾಶ್ರಯೇ ।
ಬ್ರಾಹ್ಮಣಸ್ಯ ತ್ವನಶನಂ ತಪಃ ಪರಮಿಹೋಚ್ಯತೇ ॥ ೬೫ ॥
ಷಷ್ಠಕಾಲಾಽಶನಂ ಶೂದ್ರೇ ತಪಃ ಪ್ರೋಕ್ತಂ ಪರಂ ಬುಧೈಃ ।
ವರ್ಣಸಂಕರಜಾತಾನಾಂ ದಿನಮೇಕಂ ಪ್ರಕೀರ್ತಿತಂ ॥ ೬೬ ॥
ಷಷ್ಠಕಾಲಾತ್ಪರಂ ಶೂದ್ರಸ್ತಪಃ ಕುರ್ಯಾದ್ವೃಥಾ ಕ್ವಚಿತ್ ।
ರಾಷ್ಟ್ರಹಾನಿಸ್ತದಾ ಜ್ಞೇಯಾ ರಾಜ್ಞಶ್ಚೋಪದ್ರವೋ ಮಹಾನ್ ॥ ೬೭ ॥
ಶೂದ್ರಸ್ತು ಷಷ್ಠಕಾಲಾಶೀ ಯಥಾಶಕ್ತ್ಯಾ ತಪಶ್ಚರೇತ್ ।
ನ ದರ್ಭಾನುದ್ಧರೇಚ್ಛೂದ್ರೋ ನ ಪಿಬೇತ್ಕಾಪಿಲಂ ಪಯಃ ॥ ೬೮ ॥

ನೀರಿನಲ್ಲಿ ನಿಂತು ಜಪಿಸುವ ಅಘಮರ್ಷಣ ಮಂತ್ರಕ್ಕಿಂತ ಪಾಪವನ್ನು ನೀಗಿಸುವ ಮತ್ತೊಂದು ಮಂತ್ರವೂ, ಅಹಿಂಸೆಗೆ ಸಮಾನವಾದ ಪುಣ್ಯಕಾರ್ಯವೂ ಇಲ್ಲ. ದಾನಕ್ಕಿಂತ ಉತ್ತಮವಾದ ಪುಣ್ಯಸಂಗ್ರಹಕಾರ್ಯವೂ, ಉಪವಾಸ, ತೀರ್ಥ ಸೇವೆಗಳಿಗಿಂತ ಉತ್ತಮತಪಸ್ಸೂ ಇರುವುದಿಲ್ಲ.

೬೪. ದೇವಿ! ತೀರ್ಥೋಪವಾಸಕ್ಕಿಂತ ಅಧಿಕವಾದ ಪಾಪವನ್ನು ಪರಿಹರಿಸುವುದೂ, ಸಜ್ಜನರಿಗೆ ಇಷ್ಟಾರ್ಥವನ್ನುಂಟುಮಾಡುವುದೂ ಆದ ಮತ್ತೊಂದು ಪವಿತ್ರ ಕಾರ್ಯವಿಲ್ಲ.

೬೫. ವಿಶೇಷವಾಗಿ ದೇವಾಲಯದಲ್ಲಿ ಉಪವಾಸವು ವಿಹಿತವಾಗಿರುವುದು. ಬ್ರಾಹ್ಮಣನಿಗೆ ಉಪವಾಸವು ಉತ್ತಮವಾದ ತಪಸ್ಸೆನ್ನಿಸಿಕೊಳ್ಳುವುದು.

೬೬. ಶೂದ್ರನು ಆರನೆಯ ಕಾಲದಲ್ಲಿ ಮಾತ್ರ ಭೋಜನಮಾಡಿದರೆ ಅವನಿಗೆ ಅದು ಉತ್ತಮ ತಪಸ್ಸೆಂದೂ, ಸಂಕರ ಜಾತಿಯವರಿಗೆ ಒಂದು ದಿವಸ ಉಪವಾಸ ಮಾಡುವುದು ತಪಸ್ಸೆಂದೂ ಜ್ಞಾನಿಗಳು ಹೇಳಿರುವರು.

೬೭. ಶೂದ್ರನು ಇದಕ್ಕಿಂತ ಅಧಿಕ ತಪಸ್ಸನ್ನಾಚರಿಸಿದರೆ ದೇಶಕ್ಕೆ ಕೇಡೂ, ರಾಜನಿಗೆ ಅತ್ಯಂತ ಪೀಡೆಯೂ ಆಗುವುದು.

೬೮. ಶೂದ್ರನು ಆರನೆಯ ಕಾಲದಲ್ಲಿ ಊಟಮಾಡುತ್ತ ಶಕ್ತ್ಯನುಸಾರ ತಪಸ್ಸನ್ನಾಚರಿಸಬೇಕು. ಅವನು ದರ್ಭೆಯನ್ನು ಕೊಯ್ಯಬಾರದು. ಕಪಿಲ ಗೋವಿನ ಹಾಲನ್ನು ಕುಡಿಯಬಾರದು.

ಮಧ್ಯಪತ್ರೇ ನ ಭುಂಜೀತ ಬ್ರಹ್ಮವೃಕ್ಷಸ್ಯ ಭಾಮಿನಿ ।
ನೋಚ್ಚರೇತ್ಪ್ರಣವಂ ಮಂತ್ರಂ ಪುರೋಡಾಶಂ ನ ಭಕ್ಷಯೇತ್ ॥ ೧೯ ॥
ನ ಶಿಖಾಂ ನೋಪವೀತಂ ಚ ನೋಚ್ಚರೇತ್ಸಂಸ್ಕೃತಾಂತರಂ ।
ನ ಪಠೇದ್ವೇದವಚನಂ ತ್ರೈರಾತ್ರಂ ನ ಹಿ ಸೇವಯೇತ್ ॥ ೨೦ ॥
ನಮಸ್ಕಾರೇಣ ಶೂದ್ರಸ್ಯ ಕ್ರಿಯಾಸಿದ್ಧಿರ್ಭವೇದ್ಧ್ರುವಂ ।
ನಿಷಿದ್ಧಾಚರಣಂ ಕುರ್ವನ್ ಪಿತೃಭಿಃ ಸಹ ಮಜ್ಜತಿ ॥ ೨೧ ॥
ಯೇನೈಕಾದಶಸಂಖ್ಯಾನಿ ಯಂತ್ರಿತಾನೀಂದ್ರಿಯಾಣಿ ವೈ ।
ಸ ತೀರ್ಥಫಲಮಾಪ್ನೋತಿ ನರೋಽನ್ಯಃ ಕ್ಲೇಶಭಾಗ್ಭವೇತ್ ॥ ೨೨ ॥
ಯಚ್ಚ ತೀರ್ಥೇ ಪಿತೃಶ್ರಾದ್ಧಂ ಸ್ನಾನಂ ತತ್ರ ಸಮಾಚರೇತ್ ।
ಹಿತಕಾರೀ ಚ ಭೂತೇಭ್ಯಃ ಸೋಽಶ್ನೀಯಾತ್ತೀರ್ಥಜಂ ಫಲಂ ॥ ೨೩ ॥
ಧರ್ಮಧ್ವಜೀ ಸದಾ ಲುಬ್ಧಃ ಪರದಾರರತೋ ಹಿ ಯಃ ।
ಕರೋತಿ ತೀರ್ಥಗಮನಂ ಸ ನರಃ ಪಾತಕೀ ಭವೇತ್ ॥ ೨೪ ॥

೧೯–೨೦. ಪ್ರಿಯಳೆ! ಶೂದ್ರನು ಅಶ್ವತ್ಥವೃಕ್ಷದ ಎಲೆಯಲ್ಲಿ ಊಟಮಾಡಬಾರದು. ಪ್ರಣವವನ್ನು (ಓಂಕಾರವನ್ನು) ಉಚ್ಚರಿಸಬಾರದು. ಪುರೋಡಾಶವನ್ನು (ಹೋಮಶೇಷವನ್ನು) ಭಕ್ಷಿಸಬಾರದು. ಶಿಖಾಯಜ್ಞೋಪವೀತಗಳನ್ನು ಧರಿಸಬಾರದು. ಸಂಸ್ಕೃತವನ್ನು ಮಾತನಾಡಬಾರದು. ವೇದವನ್ನು ಓದಬಾರದು. ಮೂರುರಾತ್ರಿ ಉಪವಾಸಮಾಡಬಾರದು.

೨೧. ಶೂದ್ರನಿಗೆ ನಮಸ್ಕಾರಮಾತ್ರದಿಂದಲೇ ನಿಶ್ಚಯವಾಗಿಯೂ ಕ್ರಿಯಾಸಿದ್ಧಿಯಾಗುವುದು. ಅವನು ತನಗೆ ನಿಷಿದ್ಧವಾದ ಕಾರ್ಯವನ್ನೆಸಗಿದರೆ ಪಿತೃಗಳೊಡನೆ ನರಕವನ್ನೈದುವನು.

೨೨. ಹನ್ನೊಂದು ಇಂದ್ರಿಯಗಳನ್ನು ವಶಮಾಡಿಕೊಂಡ ಮಾನವನು ತೀರ್ಥಫಲವನ್ನು ಪಡೆಯುವನು. ಇತರನು ದುಃಖಪಡುವನು.

೨೩. ತೀರ್ಥದಲ್ಲಿ ಪಿತೃಗಳಿಗೆ ಶ್ರಾದ್ಧಮಾಡಿದವನೂ, ಮೀಯುವನೂ, ಪ್ರಾಣಿಗಳಿಗೆ ಹಿತವನ್ನಾಚರಿಸಿದವನೂ ತೀರ್ಥಯಾತ್ರೆಯ ಫಲವನ್ನು ಪಡೆಯುವನು.

೨೪. ಯಾವಾಗಲೂ ವೇಷದಿಂದ ಜೀವಿಸುವವನೂ, ಲೋಭಿಯೂ, ಪರರ ಪತ್ನಿಯರಲ್ಲಿ ಆಸಕ್ತನೂ ಆದ ನರನು ತೀರ್ಥಯಾತ್ರೆಯನ್ನು ಮಾಡಿದರೆ ಪಾತಕಿಯಾಗುವನು.

ಏವಂ ಜ್ಞಾತ್ವಾ ಮಹಾದೇವಿ ಯಾತ್ರಾಂ ಕುರ್ಯಾದ್ಯಥಾವಿಧಿ ।
ತೀರ್ಥೋಪವಾಸಂ ಕೃತ್ವಾಽಽದೌ ಶ್ರದ್ಧಾಯುಕ್ತೋ ದೃಢವ್ರತಃ ॥ ೭೫ ॥
ಭೋಜನಂ ನೈವ ಕುರ್ವೀತ ಯದೀಚ್ಛೇದ್ಧಿತಮಾತ್ಮನಃ ।
ಪರಾನ್ನಂ ನೈವ ಭುಂಜೀತ ತದ್ದಿನೇ ಬ್ರಾಹ್ಮಣಃ ಕ್ವಚಿತ್ ॥ ೭೬ ॥
ಹಸ್ತ್ಯಶ್ವರಥಯಾನಾನಿ ಭೂಮಿಗೋಕಾಂಚನಾದಿಕಂ ।
ಸರ್ವಂ ತತ್ಪರಿಗೃಹ್ಣೀಯಾತ್ ಭೋಜನಂ ನ ಸಮಾಚರೇತ್ ॥ ೭೭ ॥
ಆಮಾಚ್ಛತಗುಣಂ ಪುಣ್ಯಂ ಭುಂಜತೋ ದದತೋಽಪಿ ವಾ ।
ತೀರ್ಥೋಪವಾಸಂ ಕುರ್ವೀತ ತಸ್ಮಾತ್ತತ್ರ ವರಾನನೇ ॥ ೭೮ ॥
ವ್ರತೀ ಚ ತೀರ್ಥಯಾತ್ರೀ ಚ ವಿಧವಾ ಚ ವಿಶೇಷತಃ ।
ಪರಾನ್ನಭೋಜನೇ ದೇವಿ ಯಸ್ಯಾನ್ನಂ ತಸ್ಯ ತತ್ಫಲಂ ॥ ೭೯ ॥
ವಿಧವಾ ಚೈವ ಯಾ ನಾರೀ ತಸ್ಯಾ ಯಾತ್ರಾವಿಧಿಂ ಬ್ರುವೇ ।
ಕುಂಕುಮಂ ಚಂದನಂ ಚೈವ ತಾಂಬೂಲಂ ಚ ಸ್ರಜಸ್ತಥಾ ॥ ೮೦ ॥

---

೭೫. ಮಹಾದೇವಿ ! ಇದನ್ನರಿತು ಶಾಸ್ತ್ರೋಕ್ತಕ್ರಮದಂತೆ ಯಾತ್ರೆಯನ್ನು ಮಾಡಬೇಕು. ಮೊದಲು ಶ್ರದ್ಧೆಯಿಂದ ತೀರ್ಥೋಪವಾಸವನ್ನು ಮಾಡಿ ಧೃಢವಾದ ನಿಯಮವುಳ್ಳವನಾಗಬೇಕು.

೭೬. ತನಗೆ ಹಿತವನ್ನು ಬಯಸುವ ಮನುಷ್ಯನು ಊಟಮಾಡಬಾರದು. ಬ್ರಾಹ್ಮಣನು ಆದಿನ ಎಲ್ಲಿಯೂ ಪರಾನ್ನವನ್ನು ಭುಂಜಿಸಬಾರದು.

೭೭. ಆನೆ, ಕುದುರೆ, ರಥ, ವಾಹನ, ಭೂಮಿ, ಗೋವು, ಸುವರ್ಣ ಮೊದಲಾದ್ದನ್ನೆಲ್ಲ ಸ್ವೀಕರಿಸಬಹುದು. ಭೋಜನವನ್ನು ಮಾತ್ರ ಮಾಡಬಾರದು.

೭೮. ಸುಮುಖಿ ! ಪಕ್ವವಾಗದ ಪದಾರ್ಥವನ್ನು ಭುಂಜಿಸುವವನಿಗೂ, ದಾನ ಮಾಡುವವನಿಗೂ ನೂರರಷ್ಟು ಪುಣ್ಯವುಂಟಾಗುವುದು. ಆದುದರಿಂದ ತೀರ್ಥೋಪವಾಸವನ್ನು ಮಾಡಬೇಕು.

೭೯. ನಿಯಮವುಳ್ಳವನೂ, ತೀರ್ಥಯಾತ್ರೆ ಮಾಡುವವನೂ, ವಿಧವೆಯೂ ಮತ್ತೊಬ್ಬರ ಅನ್ನವನ್ನು ಭುಂಜಿಸಿದರೆ ಅನ್ನವನ್ನು ನೀಡಿದವನಿಗೆ ಆ ಪುಣ್ಯವುಂಟಾಗುವುದು.

೮೦–೮೩. ಈಗ ವಿಧವೆಯ ಯಾತ್ರಾಕ್ರಮವನ್ನು ಹೇಳುವೆನು, ವಿಧವೆಯು ಕುಂಕುಮ, ಗಂಧ, ತಾಂಬೂಲ, ಮಾಲೆ, ಕೆಂಪುವಸ್ತ್ರಗಳು, ಹಾಸಿಗೆ, ದುಷ್ಟ ಜನರೊಡನೆ ಸಂಭಾಷಣ, ದಿವಸದಲ್ಲಿ ಎರಡುಸಾರಿ ಭೋಜನ, ಪುರುಷರದರ್ಶನ, ಕತ್ತಲೆಯಲ್ಲಿ ನಗುವುದು, ಶಬ್ದಮಾಡುವ ಪಾದರಕ್ಷೆಗಳು, ಕುಣಿತ, ಗಾನ, ಕೇಶ,

ರಕ್ತವಸ್ತ್ರಾಣಿ ಸರ್ವಾಣಿ ಶಯ್ಯಾ ಪ್ರಾಸ್ತರಣಾನಿ ಚ ।
ಅಶಿಷ್ಟೈಃ ಸಹ ಸಂಭಾಷೋ ದ್ವಿವಾರಂ ಭೋಜನಂ ತಥಾ ॥ ೮೧ ॥
ಪುಂಸಾಂ ಪ್ರದರ್ಶನಂ ಚೈವ ಹಾಸ್ಯಂ ತಮಸಿ ವರ್ಜಯೇತ್ ।
ಸಶಬ್ದೋಽಪಾನಹೌ ಚೈವ ನೃತ್ಯಂ ಗೀತಂ ಚ ವರ್ಜಯೇತ್ ॥ ೮೨ ॥
ಧಾರಣಂ ಚೈವ ಕೇಶನಾಮಂಜನಂ ಚ ವಿಲೇಪನಂ ।
ಅಸತೀಜನಸಂಸರ್ಗಂ ಪಾಂಡಿತ್ಯಂ ಚ ಪರಿತ್ಯಜೇತ್ ॥ ೮೩ ॥
ನಿತ್ಯಂ ಸ್ನಾನಂ ಚ ಕುರ್ವೀತ ಶ್ವೇತವಸ್ತ್ರಾಣಿ ಧಾರಯೇತ್ ।
ಯತಿಶ್ಚ ಬ್ರಹ್ಮಚಾರೀ ಚ ವಿಧವಾ ಚ ವಿಶೇಷತಃ ॥ ೮೪ ॥
ತಾಂಬೂಲಂ ಮಧು ಮಾಂಸಂ ಚ ಸುರಾಪಾನಸಮಂ ವಿದುಃ ।
ಏತೇಷಾಂ ವರ್ಜನಾದ್ದೇವಿ ಸಮ್ಯಗ್ಯಾತ್ರಾಫಲಂ ಲಭೇತ್ ॥ ೮೫ ॥

ದೇವ್ಯುವಾಚ:—

ತಪಾಂಸಿ ಕಾನಿ ಕಥ್ಯಂತೇ ಕ್ಷೇತ್ರೇ ಪ್ರಾಭಾಸಿಕೇ ನರೈಃ ।
ಕಾನಿ ದಾನಾನಿ ದೀಯಂತೇ ಕೇಷು ತೀರ್ಥೇಷು ವಾ ಕಥಂ ॥ ೮೬ ॥

ಈಶ್ವರ ಉವಾಚ:—

ತಪಃ ಪರಂ ಕೃತಯುಗೇ ತ್ರೇತಾಯಾಂ ಜ್ಞಾನಮಿಷ್ಯತೇ ।
ದ್ವಾಪರೇ ಯಜನಂ ಧನ್ಯಂ ದಾನಮೇಕಂ ಕಲೌ ಯುಗೇ ॥ ೮೭ ॥

ಧಾರಣ, ಕಾಡಿಗೆಯನ್ನು ಹಚ್ಚಿಕೊಳುವುದು, ವ್ಯಭಿಚಾರಿಣಿಯರ ಸಹವಾಸ, ಪಾಂಡಿತ್ಯ ಇವುಗಳನ್ನು ತ್ಯಜಿಸಬೇಕು.

೮೪–೮೫. ನಿತ್ಯವೂ ಸ್ನಾನಮಾಡಬೇಕು. ಶ್ವೇತವಸ್ತ್ರಗಳನ್ನು ಧರಿಸಬೇಕು. ಯತಿ, ಬ್ರಹ್ಮಚಾರಿ, ವಿಧವೆ ಇವರು ತಾಂಬೂಲ, ಜೇನು, ಮಾಂಸ ಇವುಗಳನ್ನು ಸೇವಿಸಿದರೆ ಅದು ಸುರಾಪಾನಕ್ಕೆ ಸಮಾನವಾಗುವುದು. ಇವುಗಳನ್ನು ಬಿಡುವುದ ರಿಂದ ಸಂಪೂರ್ಣ ಯಾತ್ರಾಫಲವು ದೊರೆಯುವುದು.

೮೬. ದೇವಿಯು ಹೇಳುತ್ತಾಳೆ :— ಪ್ರಾಭಾಸಿಕಕ್ಷೇತ್ರದಲ್ಲಿ ಮಾಡಬೇಕಾದ ತಪಸ್ಸುಗಳು ಯಾವುವು? ಮಾನವರು ಯಾವ ತೀರ್ಥಗಳಲ್ಲಿ ಯಾವ ದಾನವನ್ನು ಹೇಗೆ ಕೊಡುವರು?

೮೭. ಈಶ್ವರನು ಹೇಳುತ್ತಾನೆ ;—ಕೃತಯುಗದಲ್ಲಿ ತಪಸ್ಸೂ, ತ್ರೇತಾಯುಗದಲ್ಲಿ ಜ್ಞಾನವೂ, ದ್ವಾಪರಯುಗದಲ್ಲಿ ಯಾಗವೂ, ಕಲಿಯುಗದಲ್ಲಿ ದಾನವೂ ಉತ್ತಮ ವಾದುದು.

ತಪಸ್ತಪ್ಯಂತಿ ಮುನಯಃ ಕೃಚ್ಛ್ರಚಾಂದ್ರಾಯಣಾದಿಕಂ ।
ಗತ್ವಾ ಪ್ರಾಭಾಸಿಕಂ ಕ್ಷೇತ್ರಂ ಲೋಕಾಶ್ಚಾಽನ್ಯೇ ಕೃತೇ ಯುಗೇ ॥ ೮೮ ॥
ಕಲೌ ದಾನಾನಿ ದೀಯಂತೇ ಬ್ರಾಹ್ಮಣೇಭ್ಯೋ ಯಥಾವಿಧಿ ।
ಪ್ರಭಾಸಂ ಕ್ಷೇತ್ರಮಾಸಾದ್ಯ ತಪಸಾಂ ಪ್ರಾಪ್ಯತೇ ಫಲಂ ॥ ೮೯ ॥
ತುಲಾಪುರುಷಬ್ರಹ್ಮಾಂಡಪೃಥಿವೀಕಲ್ಪಪಾದಪಾಃ ।
ಹಿರಣ್ಯಕಾಮಧೇನುಶ್ಚ ಗಜವಾಜಿರಥಾಸ್ತಥಾ ॥ ೯೦ ॥
ರತ್ನಧೇನುಹಿರಣ್ಯಾಶ್ವಸಪ್ತಸಾಗರ ಏವ ಚ ।
ಮಹಾಭೂತಘಟೋ ವಿಶ್ವಚಕ್ರಕಲ್ಪಲತಾಭಿಧಃ ॥ ೯೧ ॥
ಪ್ರಭಾಸೇ ನೃಪತಿರ್ದದ್ಯಾನ್ಮಹಾದಾನಾನಿ ಷೋಡಶ ।
ಧಾನ್ಯರತ್ನಗುಡಸ್ವರ್ಣತಿಲಕಾರ್ಪಾಸಶರ್ಕರಾಃ ॥ ೯೨ ॥
ಸರ್ಪಿರ್ಲವಣರೂಪ್ಯಾಖ್ಯಾ ದಶೈತೇ ಪರ್ವತಾಃ ಸ್ಮೃತಾಃ ।
ಗುಡಾಜ್ಯದಧಿಮಧ್ವಂಬುಸಲಿಲಕ್ಷೀರಶರ್ಕರಾಃ ।
ರತ್ನಾಖ್ಯಾಶ್ಚ ಸ್ವರೂಪೇಣ ದಶೈತಾ ಧೇನವೋ ಮತಾಃ ॥ ೯೩ ॥
ತೇಷಾಮೇಕತಮಂ ದಾನಂ ತೀರ್ಥೇ ತೀರ್ಥೇ ಪೃಥಕ್ ಪೃಥಕ್ ।
ಪ್ರದೇಯಾನ್ಯೇಕವಾರಂ ವಾ ಸರಸ್ವತ್ಯಬ್ಧಿಸಂಗಮೇ ॥ ೯೪ ॥

---

೮೮. ಕೃತಯುಗದಲ್ಲಿ ಮುನಿಗಳೂ, ಇತರ ಜನರೂ ಪ್ರಾಭಾಸಿಕಕ್ಷೇತ್ರವನ್ನು ಸೇರಿ ಕೃಚ್ಛ್ರಚಾಂದ್ರಾಯಣಾದಿವ್ರತ ತಪಸ್ಸುಗಳನ್ನು ಮಾಡುತ್ತಾರೆ.

೮೯. ಕಲಿಯುಗದಲ್ಲಿ ಪ್ರಭಾಸಕ್ಷೇತ್ರವನ್ನು ಸೇರಿ ವಿಧಿಯಂತೆ ಬ್ರಾಹ್ಮಣರಿಗೆ ದಾನಗಳನ್ನಿತ್ತು ತಪಸ್ಸಿನ ಫಲವನ್ನು ಪಡೆಯುವರು.

೯೦–೯೩. ರಾಜನು ಪ್ರಭಾಸದಲ್ಲಿ ತುಲಾಪುರುಷ, ಬ್ರಹ್ಮಾಂಡ, ಪೃಥಿವೀ, ಕಲ್ಪವೃಕ್ಷ, ಸುವರ್ಣ, ಕಾಮಧೇನು, ಆನೆ, ಕುದುರೆ, ರಥ, ರತ್ನ, ಆಕಳು, ಸುವರ್ಣದ ಕುದುರೆ, ಏಳು ಸಮುದ್ರಗಳು, ಮಹಾಭೂತಗಳಸಮೂಹ, ವಿಶ್ವಚಕ್ರ, ಕಲ್ಪವೃಕ್ಷ ಎಂಬ ಹದಿನಾರು (ಷೋಡಶ) ಮಹಾದಾನಗಳನ್ನೀಯಬೇಕು. ಧಾನ್ಯ, ರತ್ನ, ಬೆಲ್ಲ, ಚಿನ್ನ. ಎಳ್ಳು, ಹತ್ತಿ, ಸಕ್ಕರೆ, ತುಪ್ಪ, ಉಪ್ಪು. ಬೆಳ್ಳಿ ಇವು ಹತ್ತು ಪರ್ವತಗಳೆನ್ನಿಸಿಕೊಳ್ಳುವುವು. ಬೆಲ್ಲ, ತುಪ್ಪ, ಮೊಸರು, ಜೇನು, ನೀರು, ಹಾಲು, ಸಕ್ಕರೆ ಮೊದಲಾದ ಈ ಹತ್ತೂ ಧೇನುಗಳು.

೯೪. ಇವುಗಳಲ್ಲಿ ಒಂದನ್ನು ಪ್ರತಿತೀರ್ಥದಲ್ಲಿಯೂ ಪ್ರತ್ಯೇಕವಾಗಿ ದಾನಮಾಡಬೇಕು. ಸರಸ್ವತೀ ನದಿ ಮತ್ತು ಸಮುದ್ರ ಸೇರಿರುವ ಪ್ರಭಾಸಕ್ಷೇತ್ರದಲ್ಲಿ ಒಂದಾವೃತ್ತಿಯಾದರೂ ದಾನ ಮಾಡಬೇಕು.

ಸರ್ವಸ್ವಂ ಚಾಽತಿವಿದುಷೇ ಗೃಹಂ ವಾ ಸಪರಿಚ್ಛದಂ ।
ಬಹ್ವಲ್ಪಮಪಿ ವಿಪ್ರೇಭ್ಯೋ ದಾತವ್ಯಂ ಪ್ರಿಯಮೇಲಕೇ ॥ ೯೫ ॥
ಯತ್ರ ತೀರ್ಥೇ ಲಭೇಲ್ಲಿಂಗಂ ತೀರ್ಥಂ ಚ ವಿಮಲೋದಕಂ ।
ತತ್ರಾಽಗ್ನಿಕಾರ್ಯಂ ಕೃತ್ವಾದೌ ವಿಶಿಷ್ಟಂ ದಾನಮಿಷ್ಯತೇ ॥ ೯೬ ॥
ತರ್ಪಣಂ ಪಿತೃದೇವಾನಾಂ ಶ್ರಾದ್ಧಂ ದಾನಂ ಸದಕ್ಷಿಣಂ ।
ತೀರ್ಥೇ ತೀರ್ಥೇ ಚ ಗೋದಾನಂ ನಿಯತಃ ಪ್ರಕೃತೋ ವಿಧಿಃ ॥ ೯೭ ॥
ವಿಶಿಷ್ಟಖ್ಯಾತಲಿಂಗೇಷು ವೃಷದಾನಂ ವಿಧೀಯತೇ ।
ಸ್ನಾನಂ ವಿಲೇಪನಂ ಪೂಜಾಂ ದೇವತಾನಾಂ ಸಮಾಚರೇತ್ ॥ ೯೮ ॥
ಜಗತೀಂ ಚಾರ್ಚಯೇದ್ಭಕ್ತ್ಯಾ ತಥಾ ಚೈವೋಪಲೇಪಯೇತ್ ।
ಪ್ರಾಸಾದಂ ಧವಲಂ ಸೌಧಂ ಕಾರಯೇಜ್ಜೀರ್ಣಮುದ್ಧರೇತ್ ॥ ೯೯ ॥
ಪುಷ್ಪವಾಟೀಂ ಸ್ನಾನಕೂಪಂ ನಿರ್ಮಲಂ ಕಾರಯೇದ್ವ್ರತೀ ।
ಬ್ರಾಹ್ಮಣಾನಾಂ ಭೂರಿದಾನಂ ದೇವಪೂಜಾಕರಾಯ ಚ ॥ ೧೦೦ ॥

---

೯೫. ಪ್ರಿಯಮೇಲಕದಲ್ಲಿ ಮಹಾ ವಿದ್ವಾಂಸನಾದ ಬ್ರಾಹ್ಮಣನಿಗೆ ಸರ್ವಸ್ವವನ್ನಾಗಲಿ, ಸಾಮಗ್ರಿಗಳಿಂದ ಸಹಿತವಾದ ಮನೆಯನ್ನಾಗಲಿ, ಬಹಳವನ್ನಾಗಲಿ, ಸ್ವಲ್ಪವನ್ನಾಗಲಿ ದಾನಮಾಡಲೇ ಬೇಕು.

೯೬. ಎಲ್ಲಿ ಶಿವಲಿಂಗವೂ, ಶುದ್ಧವಾದ ನೀರುಳ್ಳ ತೀರ್ಥವೂ ದೊರೆಯುವುದೊ, ಅಲ್ಲಿ ಮೊದಲು ಅಗ್ನಿಕಾರ್ಯವನ್ನು ಮಾಡಿ ಸಕಲ ದಾನಗಳನ್ನೂ ನೀಡಬೇಕು.

೯೭. ಪ್ರತಿತೀರ್ಥದಲ್ಲಿಯೂ ಪಿತೃದೇವತೆಗಳಿಗೆ ತರ್ಪಣ, ಶ್ರಾದ್ಧಗಳು, ದಕ್ಷಿಣೆಯಿಂದ ಸಹಿತವಾದ ಇತರ ದಾನಗಳು, ಗೋದಾನಗಳೂ ಅವಶ್ಯಕವಾಗಿ ಮಾಡತಕ್ಕವು.

೯೮. ಪ್ರಸಿದ್ಧವಾದ ಲಿಂಗಗಳಿರುವ ಕ್ಷೇತ್ರಗಳಲ್ಲಿ ವೃಷಭ ದಾನವಿತ್ತು ದೇವತೆಗಳನ್ನು ಅಭಿಷೇಕ, ಲೇಪನ ಮೊದಲಾದುವುಗಳಿಂದ ಪೂಜಿಸಬೇಕು.

೯೯. ಭಕ್ತಿಯಿಂದ ದೇವಾಲಯದ ಭೂಮಿಯನ್ನರ್ಚಿಸಿ ಸುಣ್ಣವನ್ನು ಬಳಿದು ದೇವಾಲಯವನ್ನು ಬೆಳ್ಳಗೆ ಮಾಡಿ ಜೀರ್ಣೋದ್ಧಾರ ಮಾಡಬೇಕು.

೧೦೦. ವ್ರತವನ್ನಾಚರಿಸುತ್ತ ಹೂವಿನ ತೋಟವನ್ನೂ, ಸ್ನಾನದ ಕೊಳವನ್ನೂ ನಿರ್ಮಲಗೊಳಿಸಿ ದೇವಪೂಜೆಯನ್ನು ಮಾಡುವ ಬ್ರಾಹ್ಮಣನಿಗೆ ಭೂರಿದಾನವನ್ನೀಯಬೇಕು.

ಸರ್ವತ್ರ ದೇವಯಾತ್ರಾಯಾಂ ವಿಧಿರೇವ ಪ್ರವರ್ತತೇ ।
ತೀರ್ಥಮಭ್ಯುದ್ಧರೇಜ್ಜೀರ್ಣಂ ಮಾರ್ಜಯೇತ್ಕಥಯೇತ್ಫಲಂ ॥ ೧೦೧ ॥
ಪ್ರಸಿದ್ಧೇ ಚ ಮಹಾದಾನಂ ಮಧ್ಯಮೇ ಚೈವ ಮಧ್ಯಮಂ ।
ಗೋದಾನಂ ಸರ್ವತೀರ್ಥೇಷು ಸುವರ್ಣಮಥ ನಿಷ್ಕ್ರಿಯಃ ।
ಹಿರಣ್ಯದಾನಂ ಸರ್ವೇಷಾಂ ದಾನಾನಾಮೇವ ನಿಷ್ಕೃತಿಃ ॥ ೧೦೨ ॥
ಏವಂ ಕೃತ್ವಾ ನರೋ ಭಕ್ತ್ಯಾ ಲಭತೇ ಜನ್ಮನಃ ಫಲಂ ।
ತೀರ್ಥೇಷು ದಾನಂ ವಕ್ಷ್ಯಾಮಿ ಯೇಷು ಯದ್ದೀಯತೇ ತಿಥೌ ॥ ೧೦೩ ॥
ಪ್ರಭಾಸೇ ಪ್ರತಿಪದ್ದಾನಂ ದಾತವ್ಯಂ ಕಾಂಚನಂ ಶುಭಂ ।
ದ್ವಿತೀಯಾಯಾಂ ತಥಾ ವಸ್ತ್ರಂ ತೃತೀಯಾಯಾಂ ಚ ಮೇದಿನೀಂ॥ ೧೦೪ ॥
ಚತುರ್ಥ್ಯಾಂ ದಾಪಯೇದ್ಧಾನ್ಯಂ ಪಂಚಮ್ಯಾಂ ಕಪಿಲಾಂ ತಥಾ ।
ಷಷ್ಠ್ಯಾಮಶ್ವಂ ಚ ಸಪ್ತಮ್ಯಾಂ ಮಹಿಷೀಂ ತತ್ರ ದಾಪಯೇತ್ ॥ ೧೦೫ ॥
ಅಷ್ಟಮ್ಯಾಂ ವೃಷಭಂ ದತ್ವಾ ನೀಲಂ ಲಕ್ಷಣಸಂಯುತಂ ।
ನವಮ್ಯಾಂ ತು ಗೃಹಂ ದದ್ಯಾಚ್ಚಕ್ರಂ ಶಂಖಂ ಗದಾಂ ತಥಾ ॥ ೧೦೬ ॥
ದಶಮ್ಯಾಂ ಸರ್ವಗಂಧಾಂಶ್ಚ ಏಕಾದಶ್ಯಾಂ ಚ ಮೌಕ್ತಿಕಂ ।
ದ್ವಾದಶ್ಯಾಂ ಸುವ್ರತೇನ್ನಾದ್ಯಂ ಪ್ರವಾಲಂ ವಿಧಿವತ್ತಥಾ ॥ ೧೦೭ ॥

---

೧೦೧. ಸಮಸ್ತ ದೇವಯಾತ್ರೆಗಳಲ್ಲಿಯೂ ಈ ವಿಧಿಯನ್ನೇ ಅನುಸರಿಸುತ್ತ ಜೀರ್ಣವಾದ ತೀರ್ಥವನ್ನು ಉದ್ಧಾರಮಾಡಿ, ಗುಡಿಸಿ ಇದರ ಫಲವನ್ನು ಹೇಳಬೇಕು.

೧೦೨. ಪ್ರಸಿದ್ಧ ತೀರ್ಥದಲ್ಲಿ ಮಹಾದಾನವನ್ನೂ, ಮಧ್ಯಮ ತೀರ್ಥದಲ್ಲಿ ಸಾಮಾನ್ಯ ದಾನವನ್ನೂ, ಸಮಸ್ತ ತೀರ್ಥಗಳಲ್ಲಿಯೂ ಗೋದಾನವನ್ನೂ, ಅಥವಾ ಸುವರ್ಣದಾನವನ್ನೂ ಮಾಡಬೇಕು. ಸುವರ್ಣದಾನವು ಎಲ್ಲ ದಾನಗಳಿಗೂ ಪ್ರತಿನಿಧಿಯಾಗಿರುವುದು.

೧೦೩. ಮನುಷ್ಯನು ಭಕ್ತಿಯಿಂದ ಈ ರೀತಿ ತೀರ್ಥಯಾತ್ರೆಯನ್ನು ಮಾಡಿದರೆ ಅವನ ಜನ್ಮವು ಸಾರ್ಥಕವಾಗುವುದು. ಯಾವ ತೀರ್ಥದಲ್ಲಿ ಯಾವ ತಿಥಿಯಲ್ಲಿ ಯಾವ ದಾನವನ್ನು ಮಾಡಬೇಕೆಂಬುದನ್ನು ಹೇಳುತ್ತೇನೆ.

೧೦೪-೧೦೮. ಪ್ರಭಾಸ ತೀರ್ಥದಲ್ಲಿ ಪಾಡ್ಯದ ದಿನ ಸುವರ್ಣವನ್ನೂ, ಬಿದಿಗೆಯ ದಿನ ವಸ್ತ್ರವನ್ನೂ, ತದಿಗೆಯ ದಿನ ಭೂಮಿಯನ್ನೂ, ಚೌತಿಯ ದಿನ ಧಾನ್ಯವನ್ನೂ, ಪಂಚಮೀ ದಿನ ಕಪಿಲ ಗೋವನ್ನೂ, ಷಷ್ಠೀದಿನ ಕುದುರೆಯನ್ನೂ, ಸಪ್ತಮೀ ದಿನ ಲಕ್ಷಣವುಳ್ಳ ಶುಭ ನೀಲವೃಷಭವನ್ನೂ, ನವಮೀ ದಿನ ಮನೆ, ಚಕ್ರ, ಶಂಖ, ಗದೆಗಳನ್ನೂ ದಶಮೀ ದಿನ ಸಕಲ ಗಂಧಗಳನ್ನೂ, ಏಕಾದಶೀ ದಿನ ಮುತ್ತುಗಳನ್ನೂ, ದ್ವಾದಶೀ ದಿನ

ತ್ರಿಯೋ ದೇಯಾಸ್ತ್ರಯೋದಶ್ಯಾಂ ಭೂತಾಯಾಂ ಜ್ಞಾನದೋ ಭವೇತ್ ।
ಅಮಾವಾಸ್ಯಾಮನುಪ್ರಾಪ್ಯ ಸರ್ವದಾನಾನಿ ದಾಪಯೇತ್ ॥ ೧೦೮ ॥
ಏವಂ ದಾನಂ ಪ್ರದತ್ವಾ ತು ದಶಕೃತ್ವಃ ಫಲಂ ಲಭೇತ್ ॥ ೧೦೯ ॥

ದೇವ್ಯುವಾಚ :—

ಭಕ್ತಿದಾನವಿಹೀನಾ ಯೇ ಪ್ರಭಾಸಂ ಕ್ಷೇತ್ರಮಾಗತಾಃ ।
ಸ್ನಾನಮಂತ್ರವಿಹೀನಾಶ್ಚ ವದ ತೇಷಾಂ ತು ಕಿಂ ಫಲಂ ॥ ೧೧೦ ॥

ಈಶ್ವರ ಉವಾಚ :—

ಸಧನಾ ನಿರ್ಧನಾ ವಾಽಪಿ ಸಮಂತ್ರಾ ಮಂತ್ರವರ್ಜಿತಾಃ ।
ಪ್ರಭಾಸೇ ನಿಧನಂ ಪ್ರಾಪ್ತಾಃ ಸರ್ವೇ ಯಾಂತಿ ಶಿವಾಲಯಂ ॥ ೧೧೧ ॥
ಯೇ ಮಂತ್ರಹೀನಾಃ ಪುರುಷಾ ಧರ್ಮಹೀನಾಶ್ಚ ಯೇ ಮೃತಾಃ ।
ತೇಷಾಮೇಕಂ ವಿಮಾನಂ ತು ದದಾಮಿ ಸುಮಹತ್ಪ್ರಿಯೇ ॥ ೧೧೨ ॥
ಸ್ನಾನದಾನಾನುರೂಪೇಣ ಪ್ರಾಪ್ನುವಂತಿ ಪರಂ ಪದಂ ।
ಕೇಚಿತ್ಸ್ನಾನಪ್ರಭಾವೇನ ಕೇಚಿದ್ದಾನೇನ ಮಾನವಾಃ ॥ ೧೧೩ ॥

ಅನ್ನ ಮೊದಲಾದುವನ್ನೂ, ಹವಳವನ್ನೂ, ತ್ರಯೋದಶೀ ದಿನ ಕನ್ಯೆಯನ್ನೂ, ಚತುರ್ದಶೀ ದಿನ ಜ್ಞಾನವನ್ನೂ, ಅಮಾವಾಸ್ಯೆ ದಿನ ಸಕಲ ದಾನಗಳನ್ನೂ ದಾನಕೊಡಬೇಕು.

೧೦೯. ಹೀಗೆ ಹತ್ತು ಸಾರಿ ದಾನ ಮಾಡಿದರೆ ಮಾನವನು ತೀರ್ಥಯಾತ್ರೆಯ ಫಲವನ್ನು ಪಡೆಯುವನು.

೧೧೦. ದೇವಿಯು ಹೇಳುತ್ತಾಳೆ:— ಭಕ್ತಿ ಮತ್ತು ದಾನಗಳಿಲ್ಲದವರೂ, ಸ್ನಾನ, ಮಂತ್ರಗಳನ್ನರಿಯದವರೂ ಆದ ಮನುಷ್ಯರು ಪ್ರಭಾಸಕ್ಷೇತ್ರಯಾತ್ರೆಯನ್ನು ಮಾಡಿದರೆ ಯಾವ ಫಲವನ್ನು ಪಡೆಯುವರು?

೧೧೧. ಈಶ್ವರನು ಹೇಳುತ್ತಾನೆ:— ಪ್ರಭಾಸಕ್ಷೇತ್ರದಲ್ಲಿ ಮೃತರಾದವರು ಹಣಗಾರರಾಗಲಿ, ಬಡವರೇ ಆಗಲಿ, ಮಂತ್ರಜ್ಞರೇ ಆಗಲಿ, ಮಂತ್ರವನ್ನರಿಯದವರೇ ಆಗಲಿ ಅವರೆಲ್ಲರೂ ಶಿವಾಲಯವನ್ನು ಸೇರುವರು.

೧೧೨. ಪ್ರಿಯಳೆ! ಮಂತ್ರವನ್ನರಿಯದವರೂ, ಧರ್ಮಹೀನರೂ ಆದ ಮನುಷ್ಯರು ಈ ಪ್ರಭಾಸಕ್ಷೇತ್ರದಲ್ಲಿ ಮೃತರಾದರೆ ನಾನು ಅವರಿಗೊಂದು ದೊಡ್ಡ ವಿಮಾನವನ್ನು ಕೊಡುವೆನು.

೧೧೩—೧೧೬. ಮನುಷ್ಯರು ತಾವು ಮಾಡಿದ ಸ್ನಾನ ದಾನಗಳನ್ನನುಸರಿಸಿ ಉತ್ತಮ ಪದವಿಯನ್ನು ಹೊಂದುವರು. ಕೆಲವರು ಸ್ನಾನ ಮಾಹಾತ್ಮ್ಯದಿಂದಲೂ,

ಕೇಚಿಲ್ಲಿಂಗಪ್ರಣಾಮೇನ ಕೇಚಿಲ್ಲಿಂಗಾರ್ಚನೇನ ಚ ।
ಕೇಚಿದ್ಧ್ಯಾನಪ್ರಭಾವೇನ ಕೇಚಿದ್ಯೋಗಪ್ರಭಾವತಃ ॥ ೧೧೪ ॥
ಕೇಚಿನ್ಮಂತ್ರಸ್ಯ ಜಾಪ್ಯೇನ ಕೇಚಿಚ್ಚ ತಪಸಾ ಶುಭೇ ।
ತೀರ್ಥೇ ಸನ್ಯಸನೈಃ ಕೇಚಿತ್ಕೇಚಿದ್ಭಕ್ತ್ಯನುಸಾರತಃ ॥ ೧೧೫ ॥
ಏತೇ ಚಾಽನ್ಯೇ ಚ ಬಹವ ಉತ್ತಮಾಽಧಮಮಧ್ಯಮಾಃ ।
ಸರ್ವೇ ಶಿವಪುರಂ ಯಾಂತಿ ವಿಮಾನೈಃ ಸೂರ್ಯಸನ್ನಿಭೈಃ ॥ ೧೧೬ ॥
ತ್ರಿಶೂಲಾಂಕಿತಹಸ್ತಾಶ್ಚ ಸರ್ವೇ ಚ ವೃಷವಾಹನಾಃ ।
ದಿವ್ಯಾಪ್ಸರೋಗಣಾಕೀರ್ಣಾಃ ಕ್ರೀಡಂತೇ ಮತ್ಪ್ರಭಾವತಃ ॥ ೧೧೭ ॥
ಏವಂ ಭಕ್ತ್ಯನುಸಾರೇಣ ದದಾಮಿ ಫಲಮವ್ಯಯಂ ।
ಆಲೇಪಕಂ ಪ್ರಭಾಸಂ ತು ಧರ್ಮಾಽಧರ್ಮೈರ್ನ ಲಿಪ್ಯತೇ ॥ ೧೧೮ ॥
ಧರ್ಮಂ ಚರಂತ್ಯಧರ್ಮಂ ವಾ ಶಿವಂ ಯಾಂತಿ ನ ಸಂಶಯಃ ॥ ೧೧೯ ॥
ಜನ್ಮಪ್ರಭೃತಿ ಯೋ ದೇವಿ ನರೋ ನೇತ್ರವಿವರ್ಜಿತಃ ।
ಮಮ ಕ್ಷೇತ್ರೇ ಮೃತಃ ಸೋಽಪಿ ರುದ್ರಲೋಕೇ ಮಹೀಯತೇ ॥ ೧೨೦ ॥

ಕೆಲವರು ದಾನ ಮಾಹಾತ್ಮ್ಯದಿಂದಲೂ, ಇನ್ನು ಕೆಲವರು ಶಿವಲಿಂಗ ವಂದನದಿಂದಲೂ, ಮತ್ತೆ ಕೆಲವರು ಲಿಂಗ ಪೂಜೆಯಿಂದಲೂ, ಕೆಲವರು ಧ್ಯಾನ ಮಾಹಾತ್ಮ್ಯದಿಂದಲೂ, ಕೆಲವರು ಯೋಗ ಮಾಹಾತ್ಮ್ಯದಿಂದಲೂ, ಕೆಲವರು ಮಂತ್ರಜಪದಿಂದಲೂ, ಕೆಲವರು ತಪಸ್ಸಿನಿಂದಲೂ, ಕೆಲವರು ಸನ್ಯಾಸದಿಂದಲೂ, ಕೆಲವರು ಭಕ್ತಿಯಿಂದಲೂ, ಇನ್ನೂ ಇತರ ಹಲವು ಮಂದಿ ಉತ್ತಮ, ಮಧ್ಯಮ, ಅಧಮರಾದ ಮಾನವರು ಸೂರ್ಯನಂತಿರುವ ವಿಮಾನಗಳಿಂದಲೂ ಶಿವಾಲಯವನ್ನು ಸೇರುವರು.

೧೧೭. ಎಲ್ಲರೂ ನನ್ನ ಲೋಕದಲ್ಲಿ ನನ್ನ ಮಾಹಾತ್ಮ್ಯದಿಂದ ತ್ರಿಶೂಲವನ್ನು ಹಿಡಿದವರೂ, ವೃಷಭವಾಹನರೂ, ದಿವ್ಯಾಪ್ಸರೆಯರಿಂದ ಕೂಡಿದವರೂ ಆಗಿ ವಿನೋದಪಡುವರು.

೧೧೮. ಹೀಗೆ ನಾನು ಭಕ್ತ್ಯನುಸಾರವಾಗಿ ಶಾಶ್ವತಫಲವನ್ನೀಯುವೆನು. ಈ ಪ್ರಭಾಸಕ್ಷೇತ್ರದಲ್ಲಿ ನಿರ್ಲಿಪ್ತನಾದ (ಜ್ಞಾನಿಯಾದ) ಮಾನವನಿಗೆ ಧರ್ಮಾಧರ್ಮಗಳು ಸಂಬಂಧಿಸುವುದಿಲ್ಲ

೧೧೯. ಇಲ್ಲಿ ಮನುಷ್ಯನು ಧರ್ಮವನ್ನಾಚರಿಸಲಿ, ಅಥವಾ ಅಧರ್ಮವನ್ನಾಚರಿಸಲಿ, ಅವನು ಶಿವನನ್ನು ನಿಶ್ಚಯವಾಗಿಯೂ ಸೇರುವನು.

೧೨೦. ಈ ನನ್ನ ಕ್ಷೇತ್ರದಲ್ಲಿ ಹುಟ್ಟು ಕುರುಡನೂ ಮೃತನಾದರೆ ಅವನು ರುದ್ರಲೋಕದಲ್ಲಿ ಪೂಜ್ಯನಾಗುವನು.

ಜನ್ಮಪ್ರಭೃತಿ ಯೋ ದೇವಿ ಶ್ರವಣಾಭ್ಯಾಂ ವಿವರ್ಜಿತಃ ।
ಪ್ರಭಾಸೇ ನಿಧನಂ ಪ್ರಾಪ್ತಃ ಸ ಭವೇನ್ಮತ್ಪರಿಗ್ರಹಃ ॥ ೧೨೧ ॥
ಅಥಾತಃ ಸಂಪ್ರವಕ್ಷ್ಯಾಮಿ ತೀರ್ಥಾನಾಂ ಸ್ಪರ್ಶನೇ ವಿಧಿಂ ।
ಮಂತ್ರೇಣ ಮಂತ್ರಿತಂ ತೀರ್ಥಂ ಭವೇತ್ಸನ್ನಿಹಿತಂ ತಥಾ ॥ ೧೨೨ ॥
ಪ್ರಥಮಂ ಚಾಲಭೇತ್ತೀರ್ಥಂ ಪ್ರಣವೇನ ಜಲಂ ಶುಚಿ ।
ಅವಗಾಹ್ಯ ತತಃ ಸ್ನಾಯಾದಧ್ಯಾತ್ಮಮಂತ್ರಯೋಗತಃ ॥ ೧೨೩ ॥
ಓಂ ನಮೋ ದೇವದೇವಾಯ ಶಿತಿಕಂಠಾಯ ದಂಡಿನೇ ।
ರುದ್ರಾಯ ವಾಮಹಸ್ತಾಯ ಚಕ್ರಿಣೇ ವೇಧಸೇ ನಮಃ ॥ ೧೨೪ ॥
ಸರಸ್ವತೀ ಚ ಸಾವಿತ್ರೀ ವೇದಮಾತಾ ವಿಭಾವರೀ ।
ಸನ್ನಿಧಾನಂ ಕುರುಷ್ವಾತ್ರ ತೀರ್ಥೇ ಪಾಪಪ್ರಣಾಶಿನಿ ।
ಸರ್ವೇಷಾಮೇವ ದೇವಾನಾಂ ಮಂತ್ರ ಏಷ ಉದಾಹೃತಃ ॥ ೧೨೫ ॥
ಇತ್ಯುಚ್ಚಾರ್ಯ ನಮಸ್ಕೃತ್ವಾ ಸ್ನಾನಂ ಕುರ್ಯಾದ್ಯಥಾವಿಧಿ ।
ಉಪವಾಸಂ ತತಃ ಕುರ್ಯಾತ್ತಸ್ಮಿನ್ನಹನಿ ಸುವ್ರತೇ ॥ ೧೨೬ ॥
ಸಾ ತಿಥಿರ್ವರ್ಷಮೇಕಂ ತು ಉಪೋಷ್ಯಾ ಭಕ್ತಿತತ್ಪರೈಃ ॥ ೧೨೭ ॥

---

೧೨೧. ದೇವಿ! ಹುಟ್ಟು ಕಿವುಡನಾದರೂ ಸರಿಯೆ ಪ್ರಭಾಸಕ್ಷೇತ್ರದಲ್ಲಿ ಮೃತನಾದರೆ ಅವನನ್ನು ನಾನು ಸ್ವೀಕರಿಸುವೆನು.

೧೨೨. ತರುವಾಯ ತೀರ್ಥಗಳನ್ನು ಸ್ಪರ್ಶಮಾಡುವ ಕ್ರಮವನ್ನು ಹೇಳುವೆನು. ಮಂತ್ರದಿಂದ ಅಭಿಮಂತ್ರಿಸಿದರೆ ತೀರ್ಥವು ಸನ್ನಿಹಿತವಾಗುವುದು.

೧೨೩. ಮೊದಲು ತೀರ್ಥವನ್ನು ಓಂಕಾರದಿಂದ ಹೊಡೆದು ಬಳಿಕ ಶುದ್ಧವಾದ ನೀರಿನಲ್ಲಿ ಮುಂದೆ ಹೇಳುವ ಪರಮಾತ್ಮ ಮಂತ್ರದಿಂದ ಸ್ನಾನಮಾಡಬೇಕು.

೧೨೪. "ದೇವತೆಗಳಿಗೆ ದೇವತೆಯೂ, ನೀಲಕಂಠನೂ, ದಂಡಚಕ್ರಧಾರಿಯೂ, ಸುಂದರ ಹಸ್ತನೂ, ಬ್ರಹ್ಮರೂಪಿಯೂ, ಆದ ಮಹೇಶ್ವರನಿಗೆ ನಮಸ್ಕಾರವು.

೧೨೫. ಸರಸ್ವತಿ, ಸಾವಿತ್ರಿ, ವೇದಮಾತೆ, ವಿಭಾವರಿ, ನೀವು ಈ ಪಾಪವನ್ನು ಪರಿಹರಿಸುವ ತೀರ್ಥದಲ್ಲಿ ಸನ್ನಿಹಿತರಾಗಿರಿ" ಎಲ್ಲ ತೀರ್ಥಗಳಲ್ಲಿ ಸ್ನಾನ ಮಾಡುವಾಗಲೂ, ಈ ಮಂತ್ರವನ್ನೇ ಹೇಳಬೇಕು.

೧೨೬. ಹೀಗೆ ಈ ಮಂತ್ರವನ್ನು ಹೇಳಿ ನಮಸ್ಕರಿಸಿ ವಿಧಿಯಂತೆ ಸ್ನಾನಮಾಡಿ ಆ ದಿನ ಉಪವಾಸ ಮಾಡಬೇಕು.

೧೨೭. ಭಕ್ತಿಯುಳ್ಳವರು ಒಂದು ವರ್ಷಕಾಲ ಆ ತಿಥಿಯಲ್ಲಿ ಉಪವಾಸಮಾಡಬೇಕು.

ದೇವ್ಯುವಾಚ :—
ಕಸ್ಮಿಂಸ್ತೀರ್ಥೇ ನರೈಃ ಪೂರ್ವಂ ಪ್ರಭಾಸಕ್ಷೇತ್ರಮಾಗತೈಃ ।
ಸ್ನಾನಂ ಕಾರ್ಯಂ ಮಹಾದೇವ ತನ್ಮೇ ವಿಸ್ತರತೋ ವದ ॥ ೧೨೮ ॥
ಈಶ್ವರ ಉವಾಚ :—
ಹಂತ ತೇ ಸಂಪ್ರವಕ್ಷ್ಯಾಮಿ ಆದ್ಯಂ ತೀರ್ಥಂ ಮಹಾಪ್ರಭಂ ।
ಪೂರ್ವಂ ಯತ್ರ ನರೈಃ ಸ್ನಾನಂ ಕ್ರಿಯತೇ ತಚ್ಛೃಣುಷ್ವ ಮೇ ॥ ೧೨೯ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತೀರ್ಥಯಾತ್ರಾವಿಧಾನ ವರ್ಣನಂ ನಾಮ
ಅಷ್ಟಾವಿಂಶೋಽಧ್ಯಾಯಃ

---

೧೨೮. ದೇವಿಯು ಹೇಳುತ್ತಾಳೆ:—ಮಹಾದೇವ! ಪ್ರಭಾಸಕ್ಷೇತ್ರಕ್ಕೆ ಬಂದ ಮನುಷ್ಯರು ಮೊದಲು ಯಾವ ತೀರ್ಥದಲ್ಲಿ ಸ್ನಾನಮಾಡಬೇಕು. ಅದನ್ನು ನನಗೆ ವಿಸ್ತಾರವಾಗಿ ಹೇಳು.

೧೨೯. ಈಶ್ವರನು ಹೇಳುತ್ತಾನೆ:—ಮನುಷ್ಯರು ಪ್ರಭಾಸಕ್ಷೇತ್ರದಲ್ಲಿ ಮೊದಲು ಸ್ನಾನಮಾಡಬೇಕಾದ ಅತ್ಯಂತ ಕಾಂತಿಯುಳ್ಳ ಆದಿಯತೀರ್ಥವನ್ನು ಹೇಳುವೆನು, ಕೇಳು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತೀರ್ಥಯಾತ್ರಾ ವಿಧಾನವರ್ಣನವೆಂಬ
ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನತ್ರಿಂಶೋಽಧ್ಯಾಯಃ

ಸಮುದ್ರಸ್ಯ ಅಪೇಯತಾಕಾರಣವರ್ಣನಂ

ಈಶ್ವರ ಉವಾಚ :—

ಅಗ್ನಿತೀರ್ಥೇ ತತೋ ಗಚ್ಛೇತ್ಸಾಗರಸ್ಯ ತಟೇ ಶುಭೇ ।
ಯತ್ರಾಽಸೌ ವಾಡವೋ ಮುಕ್ತಃ ಸರಸ್ವತ್ಯಾ ವರಾನನೇ ॥ ೧ ॥
ದಕ್ಷಿಣೇ ಸೋಮನಾಥಸ್ಯ ಸರ್ವಪಾಪಪ್ರಣಾಶನಂ ।
ತೀರ್ಥಂ ತ್ರೈಲೋಕ್ಯವಿಖ್ಯಾತಂ ಪದ್ಮಕಂ ನಾಮ ನಾಮತಃ ॥ ೨ ॥
ಧನ್ವಂತರಶತೇ ಪ್ರೋಕ್ತಂ ಸೋಮೇಶಾಜ್ಜಲಮಧ್ಯಗಂ ।
ಕುಂಡಂ ಪಾಪಹರಂ ಪ್ರೋಕ್ತಂ ಶತಹಸ್ತಪ್ರಮಾಣತಃ ।
ತತ್ರ ಸ್ನಾನಂ ಪ್ರಕುರ್ವೀತ ವಿಗಾಹ್ಯ ನಿಧಿಮಂಭಸಾಂ ॥ ೩ ॥
ಆದೌ ಕೃತ್ವಾ ತು ವಪನಂ ಸೋಮೇಶ್ವರಸಮೀಪತಃ ।
ಶಂಕರಂ ಮನಸಾ ಧ್ಯಾಯನ್ ಕೇಶಾಂಸ್ತತ್ರ ಪರಿತ್ಯಜೇತ್ ।
ಸಮುತ್ತಾರ್ಯ ತತಃ ಕೇಶಾನ್ ಭೂಯಃ ಸ್ನಾನಂ ಸಮಾಚರೇತ್ ॥ ೪ ॥

ಕನ್ನಡದ ಅನುವಾದ

ಸಮುದ್ರೋದಕಾ ಅಪೇಯತಾಕಾರಣ ವರ್ಣನ

೧. ಈಶ್ವರನು ಹೇಳುತ್ತಾನೆ:—ಬಳಿಕ ಸಮುದ್ರದ ದಡದಲ್ಲಿ ಸರಸ್ವತಿ ನದಿಯು ವಾಡವಾಗ್ನಿಯನ್ನು ವಿಸರ್ಜಿಸಿರುವ ಅಗ್ನಿತೀರ್ಥಕ್ಕೆ ಹೋಗಬೇಕು.

೨. ಸೋಮನಾಥನ ದಕ್ಷಿಣದಲ್ಲಿ ಸಕಲ ಪಾಪಗಳನ್ನೂ ಪರಿಹರಿಸುವುದೂ ಮೂರು ಲೋಕದಲ್ಲಿ ಪ್ರಸಿದ್ಧವಾದ ಪದ್ಮಕವೆಂಬ ತೀರ್ಥವಿರುವುದು.

೩. ಸೋಮೇಶ್ವರನಿಗಿಂತ ನೂರು ಬಿಲ್ಲಿನ ದೂರದಲ್ಲಿ ನೀರಿನ ಮಧ್ಯದಲ್ಲಿ ಪಾಪಗಳನ್ನು ನೀಗಿಸುವ ನೂರು ಗೇಣುಗಳಷ್ಟು ವಿಸ್ತೀರ್ಣವಾದ ಕುಂಡವೊಂದಿರುವುದು. ಸಮುದ್ರದಲ್ಲಿಳಿದು ಆ ಕುಂಡದಲ್ಲಿ ಸ್ನಾನಮಾಡಬೇಕು.

೪. ಸೋಮೇಶ್ವರನ ಸನ್ನಿಧಿಯಲ್ಲಿ ಮೊದಲು ವಪನವನ್ನು ಮಾಡಿಸಿಕೊಂಡು ಶಿವನನ್ನು ಧ್ಯಾನಿಸುತ್ತ ಕೇಶಗಳನ್ನು ಅಲ್ಲಿ ಎಸೆದು ತಿರುಗಿ ಸ್ನಾನಮಾಡಬೇಕು.

ಯಂತ್ಕಿಚಿತ್ಕುರುತೇ ಪಾಪಂ ಮನುಷ್ಯೋ ವೃತ್ತಿಕರ್ಶಿತಃ ।
ತದೇವ ಪರ್ವತಸುತೇ ಸರ್ವಂ ಕೇಶೇಷು ತಿಷ್ಠತಿ ॥ ೫ ॥
ತಸ್ಮಾತ್ಸರ್ವಪ್ರಯತ್ನೇನ ಕೇಶಾಂಸ್ತತ್ರ ವಿನಿಕ್ಷಿಪೇತ್ ।
ತದೇವ ಸೋಮನಾಥಾಗ್ರೇ ಕೃತ್ವಾ ತು ದ್ವಿಗುಣಂ ಫಲಂ ॥ ೬ ॥
ಅಗ್ನಿತೀರ್ಥಸಮೀಪಸ್ಥಂ ಕಪರ್ದಿದ್ವಾರಮಧ್ಯಗಂ ।
ತತ್ರೈವ ದ್ವಿಗುಣಂ ಜ್ಞೇಯಮನ್ಯತ್ರೈಕಗುಣಂ ಸ್ಮೃತಂ ॥ ೭ ॥
ಕ್ಷುರಕರ್ಮ ನ ಶಸ್ತಂ ಸ್ಯಾದ್ಯೋಷಿತಾಂ ತು ವರಾನನೇ ।
ಸಭರ್ತೃಕಾಣಾಂ ತತ್ರೈವ ವಿಧಿಂ ತಾಸಾಂ ಶೃಣುಷ್ವ ಮೇ ॥ ೮ ॥
ಸರ್ವಾನ್ ಕೇಶಾನ್ ಸಮುದ್ಧೃತ್ಯ ಛೇದಯೇದಂಗುಲದ್ವಯಂ ।
ತತೋ ದೇವಾನ್ ವಿಧಾನೇನ ತರ್ಪಯೇತ್ಪಿತೃದೇವತಾಃ ॥ ೯ ॥
ಮುಂಡನಂ ಚೋಪವಾಸಶ್ಚ ಸರ್ವತೀರ್ಥೇಷ್ವಯಂ ವಿಧಿಃ ॥ ೧೦ ॥
ಗಂಗಾಯಾಂ ಭಾಸ್ಕರಕ್ಷೇತ್ರೇ ಮಾತಾಪಿತ್ರೋರ್ಗುರೌ ಮೃತೇ ।
ಆಧಾನೇ ಸೋಮಪಾನೇ ಚ ವಪನಂ ಸಪ್ತಸು ಸ್ಮೃತಂ ॥ ೧೧ ॥

---

೫. ಪಾರ್ವತಿ! ಮನುಷ್ಯನು ಜೀವನಕ್ಕಿಲ್ಲದೆ ಮಾಡಿದ ಪಾಪವೆಲ್ಲ ಕೂದಲುಗಳಲ್ಲಿ ನೆಲಸಿರುವುವು.

೬. ಆದುದರಿಂದ ಸಕಲಪ್ರಯತ್ನಗಳಿಂದಲೂ ಆ ಸೋಮನಾಥನ ಮುಂದೆ ಕೇಶಗಳನ್ನು ಎಸೆದರೆ ಇಮ್ಮಡಿ ಫಲವುಂಟಾಗುವುದು

೭. ಅಗ್ನಿತೀರ್ಥದ ಸಮೀಪದಲ್ಲಿ ಸೋಮೇಶ್ವರನ ಬಾಗಿಲ ಮಧ್ಯದಲ್ಲಿರುವ ಪ್ರದೇಶದಲ್ಲಿ ಕೂದಲನ್ನು ಎಸೆದರೆ ಇಮ್ಮಡಿಯಾದ ಪುಣ್ಯವುಂಟಾಗುವುದು ಇತರ ಕಡೆಗಳಲ್ಲಿ ಉಂಟಾಗುವುದಿಲ್ಲ.

೮. ಸುಮುಖಿ ! ಸುಮಂಗಲಿಯರಾದ ಹೆಂಗಸರಿಗೆ ಅಲ್ಲಿ ವಪನ ಮಾಡಿಸುವುದು ಶ್ರೇಷ್ಠವಲ್ಲ. ಅವರು ಮಾಡತಕ್ಕ ಕ್ರಮವನ್ನು ಹೇಳುವೆನು. ಕೇಳು.

೯. ಎಲ್ಲ ಕೂದಲುಗಳನ್ನು ಒಟ್ಟಿಗೆ ಸೇರಿಸಿ ಎರಡು ಅಂಗುಲಗಳ ಉದ್ದದಷ್ಟು ಕತ್ತರಿಸಬೇಕು. ತರುವಾಯ ದೇವತೆಗಳನ್ನೂ, ಪಿತೃಗಳನ್ನೂ ತೃಪ್ತಿಗೊಳಿಸಬೇಕು.

೧೦. ಸಮಸ್ತ ತೀರ್ಥಗಳಲ್ಲಿಯೂ ಇದೇ ವಿಧಿಯನ್ನನುಸರಿಸಿ ಮುಂಡನ ಮತ್ತು ಉಪವಾಸಗಳನ್ನು ಮಾಡಬೇಕು.

೧೧. ಗಂಗೆ, ಭಾಸ್ಕರ ಕ್ಷೇತ್ರ, ಮಾತಾಪಿತೃಗಳ ಮರಣ, ಅಗ್ನ್ಯಾಧಾನ, ಸೋಮಪಾನ ಈ ಏಳು ಸಂದರ್ಭಗಳಲ್ಲಿ ವಪನ ಮಾಡಿಸಬೇಕು.

ಅಶ್ವಮೇಧಸಹಸ್ರಾಣಾಂ ಸಹಸ್ರಂ ಯಃ ಸಮಾಚರೇತ್ ।
ನಾಽಸೌ ತತ್ಫಲಮಾಪ್ನೋತಿ ವಪನಾದ್ಯಚ್ಚ ಲಭ್ಯತೇ ॥ ೧೨ ॥
ವಿನಾ ಮಂತ್ರೇಣ ಯಸ್ತತ್ರ ದೇವಿ ಸ್ನಾನಂ ಸಮಾಚರೇತ್ ।
ಸಮಾಪ್ನೋತಿ ಕ್ವಚಿಚ್ಛ್ರೇಯೋ ಮುಕ್ತ್ವೈಕಂ ಪರ್ವನಾಸರಂ ॥ ೧೩ ॥
ವಿನಾ ಮಂತ್ರಂ ವಿನಾ ಪರ್ವ ಕ್ಷೌರಕರ್ಮ ವಿನಾ ನರೈಃ ।
ಕುಶಾಗ್ರೇಣಾಽಪಿ ದೇವೇಶಿ ನ ಸ್ಪ್ರಷ್ಟವ್ಯೋ ಮಹೋದಧಿಃ ॥ ೧೪ ॥
ಏವಂ ಸ್ನಾತ್ವಾ ವಿಧಾನೇನ ದತ್ವಾಽರ್ಘ್ಯಂ ಚ ಮಹೋದಧೌ ।
ಸಂಪೂಜ್ಯ ಪುಷ್ಪಗಂಧೈಶ್ಚ ವಸ್ತ್ರೈಃ ಪುಣ್ಯಾಽನುಲೇಪನೈಃ ॥ ೧೫ ॥
ಹಿರಣ್ಮಯಂ ಯಥಾಶಕ್ತ್ಯಾ ನಿಕ್ಷಿಪೇತ್ತತ್ರ ಕಂಕಣಂ ॥ ೧೬ ॥
ಏವಂ ಕೃತ್ವಾ ವಿಧಾನಂ ತು ಸ್ಪರ್ಶಯೇಲ್ಲವಣೋದಧಿಂ ।
ಮಂತ್ರೇಣಾನೇನ ದೇವೇಶಿ ತತಃ ಸಾನ್ನಿಧ್ಯಕಾಂ ವ್ರಜೇತ್ ॥ ೧೭ ॥
ಓಂ ನಮೋ ವಿಷ್ಣುಗುಪ್ತಾಯ ವಿಷ್ಣುರೂಪಾಯ ತೇ ನಮಃ ।
ಸಾನ್ನಿಧ್ಯೇ ಭವ ದೇವೇಶ ಸಾಗರೇ ಲವಣಾಂಭಸಿ ॥ ೧೮ ॥

ಅಗ್ನಿಶ್ಚ ರೇತೋ ಮೃಡಯಾ ಚ ದೇಹೋ
ರೇತೋಧಾ ವಿಷ್ಣುರಮೃತಸ್ಯ ನಾಭಿಃ ।
ಏತದ್ಬ್ರುವನ್ಪಾರ್ವತಿ ಸತ್ಯವಾಕ್ಯಂ
ತತೋಽವಗಾಹೇತ್ತು ಪತಿಂ ನದೀನಾಂ ॥ ೧೯ ॥

---

೧೨. ಮನುಷ್ಯನು ವಪನಮಾಡಿಸುವುದರಿಂದ ಪಡೆಯುವ ಫಲವನ್ನು ಸಾವಿರ ಅಶ್ವಮೇಧ ಯಾಗಗಳಿಂದಲೂ ಪಡೆಯುವುದಿಲ್ಲ.

೧೩. ದೇವಿ! ಪರ್ವದಿನವನ್ನು ಬಿಟ್ಟು ಮನುಷ್ಯನು ಈ ತೀರ್ಥದಲ್ಲಿ ಎಲ್ಲಿಯಾದರೂ ಒಂದು ಕಡೆ ಮಿಂದರೆ ಶ್ರೇಯಸ್ಸನ್ನು ಪಡೆಯುವನು.

೧೪. ಮನುಷ್ಯನು ಮಂತ್ರ, ಪರ್ವ, ಕ್ಷೌರ ಇವುಗಳಿಲ್ಲದೆ ದರ್ಭೆಯ ಕೊನೆಯಿಂದಲೂ, ಸಮುದ್ರವನ್ನು ಮುಟ್ಟಬಾರದು.

೧೫–೧೭. ಈ ವಿಧಾನದಿಂದ ಮಹೋದಧಿಯಲ್ಲಿ ಮಿಂದು ಅರ್ಘ್ಯವನ್ನಿತ್ತು ಪುಷ್ಪ, ಗಂಧ, ವಸ್ತ್ರ, ಇತರ ಲೇಪನ ದ್ರವ್ಯಗಳಿಂದ ಪೂಜಿಸಿ ಶಕ್ತ್ಯನುಸಾರ ಸುವರ್ಣ ಕಂಕಣವನ್ನೆಸೆದು ಸಮುದ್ರವನ್ನು ಸ್ಪರ್ಶಮಾಡಬೇಕು. ಬಳಿಕ ಮುಂದಿನ ಮಂತ್ರದಿಂದ ಆವಾಹನೆ ಮಾಡಬೇಕು.

೧೮–೧೯. "ವಿಷ್ಣುವಿನಿಂದ ರಕ್ಷಿತವೂ, ವಿಷ್ಣುವಿನ ಸ್ವರೂಪವೂ ಆದ ಓ ಸಮುದ್ರ! ನಿನಗೆ ನಮಸ್ಕಾರವು. ದೇವೇಶ! ಈ ಲವಣ ಸಾಗರದಲ್ಲಿ ಸನ್ನಿಹಿತನಾಗು.

ಓಂ ನಮೋ ರತ್ನಗರ್ಭಾಯ ಮಂತ್ರೇಣಾನೇನ ಭಾಮಿನಿ ।
ಕಂಕಣಂ ಪ್ರಕ್ಷಿಪ್ಯೇತ್ತತ್ರ ತತಃ ಸ್ನಾಯಾದ್ಯದೃಚ್ಛಯಾ ॥ ೨೦ ॥
ತತಶ್ಚ ತರ್ಪಯೇದ್ದೇವಾನ್ ಮನುಷ್ಯಾಂಶ್ಚ ಪಿತಾಮಹಾನ್ ।
ತಿಲಮಿಶ್ರೇಣ ತೋಯೇನ ಸಮ್ಯಕ್ ಶ್ರದ್ಧಾಸಮನ್ವಿತಃ ॥ ೨೧ ॥
ಆಜನ್ಮಶತಸಾಹಸ್ರಂ ಯತ್ಪಾಪಂ ಕುರುತೇ ನರಃ ॥
ಸಕೃತ್ ಸ್ನಾತ್ವಾ ವ್ಯಪೋಹೇತ ಸಾಗರೇ ಲವಣಾಂಭಸಿ ॥ ೨೨ ॥
ವೃಷಭಸ್ತತ್ರ ದಾತವ್ಯಃ ಪ್ರವೃತ್ತೇ ಕ್ಷುರಕರ್ಮಣಿ ।
ಆತ್ಮಪ್ರಕೃತಿದಾನಂ ಚ ಪೀತವಸ್ತ್ರಂ ತಥೈವ ಚ ॥ ೨೩ ॥
ಅನೇನ ವಿಧಿನಾ ತತ್ರ ಸಮ್ಯಕ್ ಸ್ನಾನಂ ಸಮಾಚರೇತ್ ।
ಸ್ಪರ್ಶಯೇದ್ವಾಡವಂ ತೇಜಶ್ಚಾಽನ್ಯಥಾ ದೋಷಭಾಗ್ಭವೇತ್ ॥ ೨೪ ॥
ವರಃ ಶಾಪಶ್ಚ ತಸ್ಯಾಽಯಂ ಪುರಾ ದತ್ತೋ ಯಥಾ ದ್ವಿಜೈಃ ॥ ೨೫ ॥

ಅಗ್ನಿಯು ರೇತಸ್ಸೂ, ಶಿವನು ದೇಹವೂ, ವಿಷ್ಣುವು ತಂದೆಯೂ, ಅಮೃತವು ನಾಭಿಯೂ ಆಗಿರುವುದು " ಓ ಪಾರ್ವತಿ ! ಈ ಮಂತ್ರವನ್ನು ಹೇಳುತ್ತ ಸಮುದ್ರದಲ್ಲಿ ಸ್ನಾನಮಾಡಬೇಕು.

೨೦. ಪ್ರಿಯಳೆ! "ಓಂ ನಮೋ ರತ್ನಗರ್ಭಾಯ" (ರತ್ನಗಳು ನಡುವೆ ಇರುವ ಸಮುದ್ರನಿಗೆ ನಮಸ್ಕಾರವು) ಈ ಮಂತ್ರದಿಂದ ಆ ಸಮುದ್ರದಲ್ಲಿ ಕಂಕಣವನ್ನೆಸೆದು ಸ್ವೇಚ್ಛೆಯಿಂದ ಸ್ನಾನಮಾಡಬೇಕು.

೨೧. ಅನಂತರ ದೇವ, ಮನುಷ್ಯ, ಪಿತೃಗಳನ್ನು ಎಳ್ಳಿನಿಂದ ಸೇರಿದ ನೀರಿನಿಂದ ಶ್ರದ್ಧಾಪೂರ್ವಕವಾಗಿ ಚೆನ್ನಾಗಿ ತರ್ಪಣ ಮಾಡಬೇಕು.

೨೨. ಮನುಷ್ಯನು ಒಂದು ಲಕ್ಷ ಜನ್ಮಗಳಿಂದೆಸಗಿದ ಪಾಪವು ಲವಣ ಸಮುದ್ರದಲ್ಲಿ ಒಂದು ಸಾರಿ ಮಿಂದರೆ ಪರಿಹಾರವಾಗುವುದು.

೨೩. ವಪನವು ಮುಗಿಯಲು ವೃಷಭ, ತನ್ನ ಪ್ರತಿಮೆ, ಹಳದಿ ಬಟ್ಟೆಗಳನ್ನು ದಾನಮಾಡಬೇಕು.

೨೪. ನರನು ಈ ವಿಧಿಯಿಂದ ಅಲ್ಲಿ ಮಿಂದು ವಾಡವಾಗ್ನಿಯನ್ನು ಮುಟ್ಟಬೇಕು. ಹಾಗೆ ಮಾಡದಿದ್ದರೆ ದೋಷಕ್ಕೀಡಾಗುವನು.

೨೫. ಹಿಂದೆ ಬ್ರಾಹ್ಮಣರು ಈ ಸಮುದ್ರಕ್ಕೆ ವರವನ್ನೂ, ಶಾಪವನ್ನೂ ಕೊಟ್ಟಿರುವರು.

ದೇವ್ಯುವಾಚ:—

ಕುತ್ರ ಕುತ್ರ ಮಹಾದೇವ ಜಲಸ್ನಾನಾದ್ವಿಶುದ್ಧ್ಯತಿ ।
ಕಿಮರ್ಥಂ ಸಾಗರೇ ದೋಷಃ ಪ್ರಾಪ್ಯತೇ ಕೌತುಕಂ ಮಹತ್ ॥ ೨೬ ॥
ಯತ್ರ ಗಂಗಾದಯಃ ಸರ್ವಾ ನದ್ಯೋ ವಿಶ್ರಾಂತಿಮಾಗತಾಃ ।
ಯತ್ರ ವಿಷ್ಣುಃ ಸ್ವಯಂ ಶೇತೇ ಯತ್ರ ಲಕ್ಷ್ಮೀಃ ಸ್ವಯಂ ಸ್ಥಿತಾ ॥ ೨೭ ॥
ಕಿಮರ್ಥಂ ವರಶಾಪಂ ತು ತಸ್ಯ ದತ್ತಂ ದ್ವಿಜೈಃ ಪುರಾ ।
ಸರ್ವಂ ವಿಸ್ತರತೋ ಬ್ರೂಹಿ ಮಹಾನ್ಮೇ ಸಂಶಯೋಽತ್ರ ವೈ ॥ ೨೮ ॥

ಈಶ್ವರ ಉವಾಚ :—

ದೀರ್ಘಸತ್ರಂ ಪುರಾ ದೇವಿ ಪ್ರಾರಬ್ಧಂ ಸುರಸತ್ತಮೈಃ ।
ಪ್ರಭಾಸಂ ತೀರ್ಥಮಾಸಾದ್ಯ ಸಮ್ಯಕ್ಛ್ರದ್ಧಾಸಮನ್ವಿತೈಃ ॥ ೨೯ ॥
ತತಃ ಸತ್ರಾವಸಾನೇ ತು ದತ್ವಾ ದಾನಮನೇಕಧಾ ।
ಸರ್ವಸ್ವಂ ಬ್ರಾಹ್ಮಣೇಂದ್ರಾಣಾಂ ಪ್ರಭಾಸಕ್ಷೇತ್ರವಾಸಿನಾಂ ॥ ೩೦ ॥
ತಾವದನ್ಯೇ ದ್ವಿಜಾಸ್ತತ್ರ ದಕ್ಷಿಣಾರ್ಥಂ ಸಮಾಗತಾಃ ।
ದೇಶೀಯಾಸ್ತತ್ರ ವಾಸ್ತವ್ಯಾಃ ಶತಶೋಽಥ ಸಹಸ್ರಶಃ ॥ ೩೧ ॥

---

೨೬. ದೇವಿಯು ಹೇಳುತ್ತಾಳೆ:—ಮಹೇಶ್ವರ ! ಮನುಷ್ಯನು ಎಲ್ಲೆಲ್ಲಿ ಜಲದಲ್ಲಿ ಸ್ನಾನ ಮಾಡುವುದರಿಂದ ಶುದ್ಧನಾಗುವನು ? ಏತಕ್ಕಾಗಿ ಸಮುದ್ರದಲ್ಲಿ ದೋಷ ವುಂಟಾಯಿತು.

೨೭. ಆ ಸಮುದ್ರದಲ್ಲಿ ಗಂಗಾದಿ ಪವಿತ್ರ ನದಿಗಳು ವಿಶ್ರಾಂತಿಯನ್ನು ಪಡೆಯುತ್ತಿರುವುವು. ಅಲ್ಲಿ ವಿಷ್ಣುವು ತಾನಾಗಿಯೇ ಮಲಗಿರುವನು. ಲಕ್ಷ್ಮಿಯೂ ಇರುವಳು.

೨೮. ಹಿಂದೆ ಬ್ರಾಹ್ಮಣರು ಆ ಸಮುದ್ರಕ್ಕೆ ವರ ಮತ್ತು ಶಾಪಗಳನ್ನು ಏಕೆ ಕೊಟ್ಟರು ? ಎಲ್ಲವನ್ನೂ ವಿಸ್ತಾರವಾಗಿ ಹೇಳು. ಈ ವಿಷಯದಲ್ಲಿ ನನಗೆ ಬಹಳ ಸಂದೇಹವಿದೆ.

೨೯. ಈಶ್ವರನು ಹೇಳುತ್ತಾನೆ:—ದೇವಿ ! ಹಿಂದೆ ಸುರೋತ್ತಮರು ಪ್ರಭಾಸ ಕ್ಷೇತ್ರಕ್ಕೆ ಬಂದು ಶ್ರದ್ಧೆಯಿಂದ ಬಹಳ ಕಾಲ ಮಾಡುವ ಯಾಗವನ್ನು ಆರಂಭಿಸಿದರು.

೩೦. ಅವರು ಯಾಗದ ಕೊನೆಯಲ್ಲಿ ಪ್ರಭಾಸಕ್ಷೇತ್ರವಾಸಿಗಳಾದ ಬ್ರಾಹ್ಮಣರಿಗೆ ಅನೇಕ ಪ್ರಕಾರವಾಗಿ ಸರ್ವಸ್ವವನ್ನೂ ದಾನಮಾಡಿದರು.

೩೧. ಅಷ್ಟರಲ್ಲಿ ಆ ದೇಶದಲ್ಲಿ ವಾಸಿಸುವ ಸಾವಿರಾರು ಮಂದಿ ಬ್ರಾಹ್ಮಣರು ದಕ್ಷಿಣೆಗಾಗಿ ಅಲ್ಲಿಗೆ ಬಂದರು.

ಸ್ವಾರ್ಥನಾಭಂಗಭೀತಾಶ್ಚ ತತೋ ದೇವಾಃ ಸವಾಸವಾಃ ||
ಪ್ರಣಷ್ಟಾಸ್ತಾನ್ ಸುರಾನ್ ದೃಷ್ಟ್ವಾ ಬ್ರಾಹ್ಮಣಾಶ್ಚಾಽನುವವ್ರಜುಃ || ೩೨ ||
ಖೇಚರತ್ವಂ ಪುರಾ ದೇವಿ ಹ್ಯಾಸೀದಗ್ರಭುವಾಂ ಮಹತ್ |
ತೇನ ಯಾಂತಿ ದ್ರುತಂ ಸರ್ವೇ ಯತ್ರ ಯತ್ರ ಸುರಾಲಯಾಃ || ೩೩ ||
ಏವಂ ಸರ್ವತ್ರಗಾಮಿತ್ವಂ ತೇಷಾಂ ವೀಕ್ಷ್ಯ ದಿವೌಕಸಃ |
ಪ್ರವಿಷ್ಟಾಃ ಸಾಗರಂ ಭೀತಾ ಊಚುರ್ವಾಕ್ಯಂ ಚ ತಂ ಪುನಃ || ೩೪ ||
ಶರಣಂ ತೇ ವಯಂ ಪ್ರಾಪ್ತಾ ಬ್ರಾಹ್ಮಣೇಭ್ಯೋ ಭಯಂ ಗತಾಃ
ನಾಸ್ತಿ ವಿತ್ತಂ ಚ ದಾನಾರ್ಥಂ ತಸ್ಮಾದ್ರಕ್ಷ ಮಹೋದಧೇ || ೩೫ ||
ಏಕತಃ ಕ್ರತವಃ ಸರ್ವೇ ಸಮಾಪ್ತವರದಕ್ಷಿಣಾಃ |
ಏಕತೋ ಭಯಭೀತಸ್ಯ ಪ್ರಾಣಿನಃ ಪ್ರಾಣರಕ್ಷಣಂ |
ವಿಶೇಷತಶ್ಚ ದೇವಾನಾಂ ರಕ್ಷಣಂ ಬಹುಪುಣ್ಯದಂ || ೩೬ ||

ಸಮುದ್ರ ಉವಾಚ :—

ಬ್ರಾಹ್ಮಣೇಭ್ಯೋ ನ ಭೀಃ ಕಾರ್ಯಾ ಕಥಂಚಿತ್ಸುರಸತ್ತಮಾಃ |
ಅಹಂ ವೋ ರಕ್ಷಯಿಷ್ಯಾಮಿ ಪ್ರವಿಶಧ್ವಂ ಮಮೋದರೇ || ೩೭ ||

---

೩೨. ಆಗ ಇಂದ್ರಾದಿ ದೇವತೆಗಳು ಆ ಬ್ರಾಹ್ಮಣರ ಪ್ರಾರ್ಥನೆಯ ಭಂಗದ ಭಯದಿಂದ ಅಡಗಿ ಹೋಗಲು ಬ್ರಾಹ್ಮಣರು ಅವರನ್ನು ಹಿಂಬಾಲಿಸಿದರು.

೩೩. ದೇವಿ! ಹಿಂದೆ ಬ್ರಾಹ್ಮಣರಿಗೆ ಆಕಾಶದಲ್ಲಿ ಸಂಚರಿಸುವ ಶಕ್ತಿಯಿದ್ದಿತು. ಅದರಿಂದ ಅವರೆಲ್ಲ ದೇವತೆಗಳ ಮನೆಗೆ ತ್ವರೆಯಿಂದ ಹೋದರು.

೩೪. ದೇವತೆಗಳು ಎಲ್ಲೆಡೆಯಲ್ಲಿಯೂ ಆ ಬ್ರಾಹ್ಮಣರ ಸಂಚರಿಸುವ ಶಕ್ತಿಯನ್ನೀಕ್ಷಿಸಿ ಭಯದಿಂದ ಸಮುದ್ರವನ್ನು ಹೊಕ್ಕು ಅವನನ್ನು ಕುರಿತು ಇಂತೆಂದರು.

೩೫. ಸಮುದ್ರರಾಜ! ಬ್ರಾಹ್ಮಣರಿಂದ ಭಯಗೊಂಡ ನಾವು ನಿನ್ನನ್ನು ಮರೆ ಹೊಕ್ಕಿರುವೆವು. ದಾನಮಾಡಲು ನಮ್ಮಲ್ಲಿ ದ್ರವ್ಯವಿಲ್ಲ. ಆದುದರಿಂದ ನಮ್ಮನ್ನು ಕಾಪಾಡು.

೩೬. ಒಂದೆಡೆಯಲ್ಲಿ ಯಾಗಗಳು ಮುಗಿದುದರಿಂದ ದಕ್ಷಿಣೆಗಳನ್ನು ಕೊಟ್ಟಿರುವೆವು. ಇನ್ನೊಂದೆಡೆ ಭಯಗೊಂಡ ಪ್ರಾಣಿಗಳ ಪ್ರಾಣವನ್ನು ರಕ್ಷಿಸಬೇಕಾಗಿರುವುದು. ದೇವತೆಗಳನ್ನು ರಕ್ಷಿಸಿದರೆ ಅತಿಶಯ ಪುಣ್ಯವು ಲಭಿಸುವುದು.

೩೭. ಸಮುದ್ರನು ಹೇಳುತ್ತಾನೆ :—ಸುರವರ್ಯರೆ! ಬ್ರಾಹ್ಮಣರಿಗೆ ಹೆದರಬೇಡಿರಿ. ನಾನು ನಿಮ್ಮನ್ನು ಕಾಪಾಡುವೆನು. ನನ್ನ ಹೊಟ್ಟೆಯನ್ನು ಪ್ರವೇಶಿಸಿರಿ.

ತತಸ್ತೇ ವಿಬುಧಾಃ ಸರ್ವೇ ತಸ್ಯ ವಾಕ್ಯೇನ ಹರ್ಷಿತಾಃ ।
ಪ್ರವಿಷ್ಟಾ ಗಹ್ವರಾಂ ಕುಕ್ಷಿಂ ತಸ್ಯೈವ ಭಯವರ್ಜಿತಾಃ ॥ ೩೮ ॥
ಸಮುದ್ರೋಽಪಿ ಮಹತ್ಕೃತ್ವಾ ನಿಜಂ ರೂಪಂ ಚ ಭೂರಿಶಃ ।
ಜಲಜಾನ್ ಜೀವಸಂಘಾತಾನ್ ಧೃತ್ವಾ ತೀರಸಮೀಪತಃ ॥ ೩೯ ॥
ತತಶ್ಚಕ್ರ ಉಪಾಯಂ ಸ ಬ್ರಾಹ್ಮಣಾನಾಂ ನಿಪಾತನೇ ।
ಮತ್ಸ್ಯಾನಾಮಾಮಿಷಂ ಪಕ್ತ್ವಾ ಮಹಾನ್ನೇನ ಚ ಗೋಪಿತಂ ॥ ೪೦ ॥
ಅಥೋವಾಚ ದ್ವಿಜಾನ್ ಸರ್ವಾನ್ ಪ್ರಣಿಪತ್ಯ ಕೃತಾಂಜಲಿಃ ।
ಪ್ರಸಾದಃ ಕ್ರಿಯತಾಂ ವಿಪ್ರಾ ಮುಹೂರ್ತಂ ಮಮ ಸಾಂಪ್ರತಂ ॥ ೪೧ ॥
ಆತಿಥ್ಯಗ್ರಹಣಾದೇವ ದೀನಸ್ಯ ಪ್ರಣತಸ್ಯ ಚ ।
ಯುಷ್ಮದರ್ಥಂ ಮಯಾ ಸಮ್ಯಗೇತತ್ಪಾಕಂ ಸಮಾವೃತಂ ।
ಕ್ರಿಯಂತಾಂ ಭೋಜನಂ ಭೂಯೋ ಗಂತವ್ಯಮನುನಾಕಿನಾಂ ॥ ೪೨ ॥
ಅಥ ತೇ ಬ್ರಾಹ್ಮಣಾ ಮತ್ವಾ ಸಮುದ್ರಂ ಶ್ರದ್ಧಯಾನ್ವಿತಂ ।
ಬಾಢಮಿತ್ಯೇವ ತಂ ಪ್ರೋಚ್ಯ ಬುಭುಜುಃ ಸ್ವರ್ಣಭಾಜನೇ ॥ ೪೩ ॥
ನ ವ್ಯಜಾನಂತ ತನ್ಮಾಂಸಂ ಗುಪ್ತಂ ಸ್ವಾದು ಕ್ಷುಧಾರ್ದಿತಾಃ ॥ ೪೪ ॥

---

೩೮. ತರುವಾಯ ಬ್ರಾಹ್ಮಣರೆಲ್ಲರೂ ಆ ಸಮುದ್ರರಾಜನ ಮಾತಿನಿಂದ ಸಂತೋಷಗೊಂಡು ಹೆದರದೆ ಅವನ ಆಳವಾದ ಉದರವನ್ನು ಹೊಕ್ಕರು.

೩೯. ಸಮುದ್ರರಾಜನೂ ದಡದ ಹತ್ತಿರ ಜಲಚರ ಪ್ರಾಣಿಗಳಿಂದ ತುಂಬಿದ ಮಹಾ ದೇಹವನ್ನು ಧರಿಸಿದ್ದನು.

೪೦–೪೨. ಬಳಿಕ ಅವನು ಬ್ರಾಹ್ಮಣರ ಪತನಕ್ಕೆ ಉಪಾಯವನ್ನಾಲೋಚಿಸಿ ಮೀನುಗಳ ಮಾಂಸವನ್ನು ಬೇಯಿಸಿ ಅನ್ನದಿಂದ ಅದನ್ನು ಮರೆಮಾಡಿ ಸಕಲ ಬ್ರಾಹ್ಮಣರನ್ನು ವಂದಿಸಿ ಕೈಮುಗಿದುಕೊಂಡು ಎಲೈ! ಬ್ರಾಹ್ಮಣರೆ! ದೈನ್ಯದಿಂದ ನಮಸ್ಕಾರಮಾಡಿದ ನನ್ನ ಆತಿಥ್ಯವನ್ನು ಸ್ವೀಕರಿಸಿ ಮುಹೂರ್ತಕಾಲ ನನಗೆ ಅನುಗ್ರಹ ಮಾಡಿರಿ. ನಿಮಗಾಗಿ ನಾನು ಈ ಅಡಿಗೆಯನ್ನು ಮಾಡಿಸಿರುವೆನು. ಚೆನ್ನಾಗಿ ಭೋಜನ ಮಾಡಿರಿ. ತರುವಾಯ ದೇವತೆಗಳನ್ನು ಹಿಂಬಾಲಿಸಬಹುದು. ”

೪೩. ಆ ಬ್ರಾಹ್ಮಣರು ಸಮುದ್ರರಾಜನು ತಮ್ಮಲ್ಲಿ ಶ್ರದ್ಧೆಯುಳ್ಳವನಾಗಿರುವನೆಂದರಿತು ಹಾಗೆಯೇ ಆಗಲೆಂದು ಸುವರ್ಣದ ಪಾತ್ರೆಯಲ್ಲಿ ಆ ಅನ್ನವನ್ನು ಊಟ ಮಾಡಿದರು.

೪೪. ಹಸಿವಿನಿಂದ ಪೀಡಿತರಾದ ಅವರು ರುಚಿಯಾದ ಮಾಂಸವು ಅನ್ನದಲ್ಲಿ ಅಡಗಿರುವುದನ್ನು ತಿಳಿಯಲಿಲ್ಲ.

ತತಸ್ತೃಪ್ತಾಶ್ಚ ತೇ ವಿಪ್ರಾ ಬ್ರಾಹ್ಮಣಾ ವಿಗತಕ್ಷುಧಃ ।
ಆಶೀರ್ವಾದಂ ದದುಃ ಸರ್ವೇ ಬ್ರಾಹ್ಮಣಾಃ ಶಂಸಿತವ್ರತಾಃ ॥ ೪೫ ॥
ಭೋಜನಾಂತೇ ಬ್ರಾಹ್ಮಣಾನಾಂ ಪ್ರಾಣಾಂತಃ ಕ್ಷತ್ರಜನ್ಮನಾಂ ।
ಆಶೀವಿಷಾಣಾಂ ಸರ್ಪಾಣಾಂ ಕೋಪೋ ಜ್ಞೇಯೋ ಮೃತಾವಧಿ ।
ಪ್ರೇರಯಾಮಾಸ ದೇವಾನ್ ವೈ ಗಮ್ಯತಾಮಿತ್ಯುವಾಚ ತಾನ್ ॥ ೪೬ ॥
ತತೋ ದೇವಾಃ ಸಗಂಧರ್ವಾ ಗಚ್ಛಂತಃ ಶೀಘ್ರಗಾ ವಿಯತ್ ।
ಗಚ್ಛತಸ್ತಾಂಸ್ತತೋ ದೃಷ್ಟ್ವಾ ಬ್ರಾಹ್ಮಣಾಸ್ತತ್ರ ವಂದಿತಾಃ ॥ ೪೭ ॥
ದಕ್ಷಿಣಾರ್ಥಂ ಸಮುತ್ಪೇತುಃ ಸುರಾನುದ್ದಿಶ್ಯ ಪೃಷ್ಠತಃ ॥ ೪೮ ॥॥
ತತಃ ಪ್ರಪತಿತಾ ಭೂಮೌ ದ್ವಿಜಾಸ್ತೇ ಸಹಸಾ ಪುನಃ ।
ಅಭ್ಯಕ್ಷ್ಯ ಭಕ್ಷಣಾತ್ತೇ ವೈ ಬ್ರಾಹ್ಮಣಾ ಮಾಂಸಭಕ್ಷಣಾತ್ ॥ ೪೯
ನಿಷ್ಕೃತಿಂ ತಾಂ ಪರಿಜ್ಞಾಯ ಸಮುದ್ರಸ್ಯ ರುಷಾನ್ವಿತಾಃ ।
ದದುಃ ಶಾಪಂ ಮಹಾದೇವಿ ರೌದ್ರಂ ರೌದ್ರವಪುರ್ಧರಾಃ ॥ ೫೦ ॥
ಯಸ್ಮಾದಭಕ್ಷ್ಯಂ ಮಾಂಸಂ ವೈ ಬ್ರಾಹ್ಮಣಾನಾಂ ಪರಂ ಸ್ಮೃತಂ ।
ತ್ವಯೋಪಹೃತಮಸ್ಮಾಕಂ ಸುಗುಪ್ತಂ ಭಕ್ಷ್ಯಸಂಯುತಂ ॥ ೫೧ ॥

---

೪೫. ಅನಂತರ ತೃಪ್ತಿಗೊಂಡ ಆ ಬ್ರಾಹ್ಮಣರು ಹಸಿವಿಲ್ಲದವರಾಗಿ ಸಮುದ್ರರಾಜನಿಗೆ ಆಶೀರ್ವಾದವನ್ನಿತ್ತರು.

೪೬. ಬ್ರಾಹ್ಮಣರಿಗೆ ಊಟ ಮುಗಿಯುವವರೆಗೂ, ಕ್ಷತ್ರಿಯರಿಗೂ ಸರ್ಪಗಳಿಗೂ ಮರಣದವರೆಗೂ ಕೋಪವಿರುವುದು. ಅನಂತರ ಸಮುದ್ರನು ದೇವತೆಗಳಿಗೆ 'ಹೊರಡಿರಿ' ಎಂದನು.

೪೭–೪೮. ತರುವಾಯ ದೇವತೆಗಳು ಆಕಾಶದಲ್ಲಿ ಗಂಧರ್ವರೊಡನೆ ಶೀಘ್ರವಾಗಿ ಹೋಗುತ್ತಿದ್ದರು. ಬ್ರಾಹ್ಮಣರು ಅವರನ್ನು ನೋಡಿ ನಮಸ್ಕರಿಸಿ ದಕ್ಷಿಣೆಗಾಗಿ ಅವರ ಹಿಂದೆ ಮೇಲಕ್ಕೆ ಹಾರಿದರು.

೪೯. ಬಳಿಕ ಆ ಬ್ರಾಹ್ಮಣರು ಅಭಕ್ಷ್ಯವಾದ ಮಾಂಸವನ್ನು ಭಕ್ಷಿಸಿದುದರಿಂದ ಕೊಡಲೇ ಭೂಮಿಯಲ್ಲಿ ಬಿದ್ದರು.

೫೦. ಅವರು ತಮ್ಮ ದುರ್ದಶೆಯನ್ನು ತಿಳಿದು ಕೋಪಗೊಂಡು ಭಯಂಕರ ದೇಹವುಳ್ಳವರಾಗಿ ಸಮುದ್ರರಾಜನಿಗೆ ಘೋರ ಶಾಪವನ್ನಿತ್ತರು.

೫೧. ಎಲವೊ ಸಮುದ್ರನೇ ! ಬ್ರಾಹ್ಮಣರಿಗೆ ಮಾಂಸವು ಅಭಕ್ಷ್ಯವಾದುದು. ನೀನು ಆ ಮಾಂಸವನ್ನು ಭಕ್ಷ್ಯವಸ್ತುವಿನೊಡನೆ ಗುಟ್ಟಾಗಿಟ್ಟು ನಮಗೆ ಕೊಟ್ಟಿರುವೆ.

ಏಕತಃ ಸರ್ವಮಾಂಸಾನಿ ಮತ್ಸ್ಯಮಾಂಸಂ ತಥೈಕತಃ ।
ಏಕತಃ ಸರ್ವಪಾಪಾನಿ ಪರದಾರಾಸ್ತಥೈಕತಃ ॥ ೫೨ ॥
ಏವಂ ವಯಂ ವಿಜಾನಂತೋ ಯದಿ ಮಾಂಸಸ್ಯ ದೂಷಣಂ ।
ತಥಾಽಪಿ ವಂಚಿತಾಃ ಸರ್ವೇ ಅಪರೀಕ್ಷಿತಕಾರಿಣಃ ॥ ೫೩ ॥
ಯಸ್ಮಾತ್ತ್ವಾಪಮತೇ ಕ್ರೂರ ತ್ವಯಾ ವೈ ವಂಚಿತಾ ವಯಂ ।
ಮಾಂಸಸ್ಯ ಭಕ್ಷಣಾತ್ತಸ್ಮಾದಪೇಯಸ್ತ್ವಂ ಭವಿಷ್ಯಸಿ ॥ ೫೪ ॥
ಅಸ್ಪೃಶ್ಯಸ್ತ್ವಂ ದ್ವಿಜೇಂದ್ರಾಣಾಮನ್ಯೇಷಾಂ ಚ ನೃಣಾಂ ಭುವಿ ।
ತವೋದಕೇನ ಯೇ ಮರ್ತ್ಯಾಃ ಕರಿಷ್ಯಂತಿ ಕುಬುದ್ಧಯಃ ॥ ೫೫ ॥
ಸ್ನಾನಂ ತೇ ನರಕಂ ಘೋರಂ ಪ್ರಯಾಸ್ಯಂತಿ ನ ಸಂಶಯಃ ।
ಕೃತಘ್ನಾನಾಂ ಚ ಯೇ ಲೋಕಾ ಯೇ ಲೋಕಾಃ ಪಾಪಕರ್ಮಿಣಾಂ ॥ ೫೬ ॥
ತಾಂಸ್ತವೋದಕಸಂಸ್ಪರ್ಶಾಲ್ಲಪ್ಸ್ಯಂತೇ ಮಾನವಾ ಭುವಿ ॥ ೫೭ ॥
ಈಶ್ವರ ಉವಾಚ :—
ಏವಂ ಶಪ್ತಸ್ಸಮುದ್ರಸ್ತೈರ್ಬ್ರಾಹ್ಮಣೈರ್ವರವರ್ಣಿನಿ ।
ತತೋ ವರ್ಷಸಹಸ್ರಂ ತು ಹ್ಯಸ್ಪೃಶ್ಯಃ ಸಂಬಭೂವ ಹ ॥ ೫೮ ॥

---

೫೨. ಒಂದೆಡೆಯಲ್ಲಿ ಸಕಲ ಮಾಂಸಗಳನ್ನೂ ಮತ್ತೊಂದೆಡೆಯಲ್ಲಿ ಮೀನಿನ ಮಾಂಸವನ್ನೂ ಇಟ್ಟರೆ ಇವೆರಡೂ ಸಮಾನವಾಗುವುವು. ಹೀಗೆಯೇ ಸಮಸ್ತ ಪಾಪಗಳೂ ಪರಪತ್ನೀಗಮನ ಪಾಪವೂ ಸಮಾನವು.

೫೩. ಹೀಗೆ ಮಾಂಸವು ದುಷ್ಟವಾದುದೆಂದರಿತಿದ್ದರೂ ಪರೀಕ್ಷಿಸದೆ ಭೋಜನದಲ್ಲಿ ಪ್ರವರ್ತಿಸಿದ ನಮ್ಮನ್ನು ನೀನು ಮೋಸಗೊಳಿಸಿರುವೆ.

೫೪. ಪಾಪಬುದ್ಧಿಯುಳ್ಳವನೂ, ಕ್ರೂರನೂ ಆದ ನೀನು ನಮಗೆ ಮಾಂಸವನ್ನು ತಿನ್ನಿಸಿ ಮೋಸಮಾಡಿದ್ದರಿಂದ ಕುಡಿಯಲನರ್ಹವಾದ ನೀರುಳ್ಳವನಾಗುವೆ.

೫೫–೫೭. ಭೂಮಿಯಲ್ಲಿ ನೀನು ಬ್ರಾಹ್ಮಣಶ್ರೇಷ್ಠರಿಗೂ, ಇತರ ಮನುಷ್ಯರಿಗೂ ಅಸ್ಪೃಶ್ಯನಾಗುವೆ. ನಿನ್ನ ನೀರಿನಲ್ಲಿ ಮಿಂದ ದುರ್ಬುದ್ಧಿಯುಳ್ಳ ಮಾನವರು ಘೋರ ನರಕವನ್ನೈದುವರು. ಕೃತಘ್ನರಿಗೂ, ಪಾಪಿಗಳಿಗೂ, ಲಭಿಸುವ ನರಕಲೋಕವು ನಿನ್ನ ನೀರನ್ನು ಸ್ಪರ್ಶಮಾಡಿದವರಿಗೆ ದೊರೆಯುವುದು.

೫೮. ಈಶ್ವರನು ಹೇಳುತ್ತಾನೆ :—ಪ್ರಿಯಳೆ ! ಆ ಬ್ರಾಹ್ಮಣರು ಹೀಗೆ ಶಪಿಸಲು ಸಮುದ್ರನು ಒಂದು ಸಾವಿರ ವರ್ಷಕಾಲ ಅಸ್ಪೃಶ್ಯನಾದನು.

ತತಸ್ತ್ರಸಾಕುಲೋ ಭೂತ್ವಾ ಸರ್ವಾಂಸ್ತಾನಿದಮಬ್ರವೀತ್ ।
ದೇವಕಾರ್ಯಮಿದಂ ವಿಪ್ರಾ ಮಯಾಕೃತಮಬುದ್ಧಿನಾ ॥ ೫೯ ॥
ಬುಭೂಷತಾ ಪರಂ ಧರ್ಮಂ ಶರಣಾಗತಸಂಭವಂ ।
ಕಾಮಾತ್ಕ್ರೋಧಾದ್ಭಯಾಲ್ಲೋಭಾದ್ಯಸ್ತ್ಯಜೇಚ್ಛರಣಾಗತಂ ॥ ೬೦ ॥
ಸತ್ಯಾದ್ವಾಽಪಿ ಸ ವಿಜ್ಞೇಯೋ ಮಹಾಪಾತಕಕಾರಕಃ ।
ಯುಷ್ಮದ್ಭೀತ್ಯಾ ಸಮಾಯಾತಾಃ ಸ್ವರ್ಗಿಣಃ ಶರಣಂ ಮಮ ॥ ೬೧ ॥
ತೇ ಮಯಾ ರಕ್ಷಿತಾಃ ಸಮ್ಯಗ್ಯಥಾಶಕ್ತ್ಯ ಹ್ಯುಪಾಯತಃ ।
ಶೋಷಯಿಷ್ಯೇಽಹಮಾತ್ಮಾನಂ ಯಸ್ಮಾಚ್ಛಪ್ತಃ ಪ್ರಕೋಪತಃ ॥ ೬೨ ॥
ಭವದ್ಭಿರ್ನೋತ್ಸಹೇ ಸ್ಥಾತುಂ ಜನಸ್ಪರ್ಶಂವಿನಾಕೃತಃ ।
ಏವಮುಕ್ತ್ವಾ ತತೋ ದೇವಿ ಸಮುದ್ರಃ ಸರಿತಾಂ ಪತಿಃ ।
ಆತ್ಮಾನಂ ಶೋಷಯಾಮಾಸ ದುಃಖೇನ ಮಹತಾ ಸ್ಥಿತಃ ॥ ೬೩ ॥
ತತೋ ದೇವಗಣಾಃ ಸರ್ವೇ ಸ್ಥಲಾಕಾರಂ ಮಹಾರ್ಣವಂ ।
ಶನೈಃ ಶನೈಃ ಪ್ರಪಶ್ಯಂತೋ ಭಯೇನ ಮಹತಾನ್ವಿತಾಃ ॥ ೬೪ ॥
ಊಚುರ್ಗತ್ವಾ ತು ಲೋಕೇಶಂ ದೇವದೇವಂ ಪಿತಾಮಹಂ ।
ಅಸ್ಮತ್ಕೃತೇ ದ್ವಿಜೈಃ ಶಪ್ತಃ ಸಾಗರೋ ಬ್ರಾಹ್ಮಣೋತ್ತಮೈಃ ॥ ೬೫ ॥

೫೯–೬೩. ಅನಂತರ ಆ ಸಮುದ್ರರಾಜನು ಭಯದಿಂದ ತತ್ತಳಿಸಿ ಆ ಬ್ರಾಹ್ಮಣರನ್ನು ಕುರಿತು ಇಂತೆಂದನು. "ಎಲೈ ಬ್ರಾಹ್ಮಣರೇ ! ಬುದ್ಧಿಯಿಲ್ಲದ ನಾನು ಶರಣಾಗತರನ್ನು ರಕ್ಷಿಸುವುದು ಉತ್ತಮಧರ್ಮವೆಂದರಿತು ಶರಣಾಗತರಾದ ಈ ದೇವತೆಗಳ ಕೆಲಸವನ್ನು ಆಗ ಮಾಡಿದೆನು. ಕಾಮದಿಂದಾಗಲಿ, ಕೋಪದಿಂದಾಗಲಿ, ಭಯದಿಂದಾಗಲಿ, ಅತ್ಯಾಶೆಯಿಂದಾಗಲಿ, ಸತ್ಯದಿಂದಾಗಲಿ ಶರಣಾಗತನನ್ನು ತ್ಯಜಿಸಿದವನು ಮಹಾಪಾತಕಿಯಾಗುವನು. ದೇವತೆಗಳು ನಿಮಗೆ ಹೆದರಿಕೊಂಡು ನನ್ನನ್ನು ಮರೆಹೊಕ್ಕರು. ನಾನು ಅವರನ್ನು ನನ್ನ ಶಕ್ತ್ಯನುಸಾರ ಉಪಾಯದಿಂದ ರಕ್ಷಿಸಿದೆನು. ನೀವು ಕೋಪದಿಂದ ನನ್ನನ್ನು ಶಪಿಸಿದ್ದರಿಂದ ಜನರಿಗೆ ಅಸ್ಪೃಶ್ಯನಾಗಿ ಬಾಳಲು ಬಯಸೆನು." ದೇವಿ ! ನದಿಗಳಿಗಧಿಪತಿಯಾದ ಸಮುದ್ರರಾಜನು ಹೀಗೆ ನುಡಿದು ಅತಿ ದುಃಖದಿಂದ ತನ್ನನ್ನು ತಾನೆ ಒಣಗಿಸಿಬಿಟ್ಟನು.

೬೪–೬೬. ಬಳಿಕ ಸಮಸ್ತ ದೇವತೆಗಳೂ ಮೆಲ್ಲಮೆಲ್ಲನೆ, ನೆಲವಾಗುತ್ತಿರುವ ಸಮುದ್ರವನ್ನು ನೋಡುತ್ತ ಅತ್ಯಂತ ಭಯದಿಂದ ಸಹಿತರಾಗಿ ಬ್ರಹ್ಮದೇವನನ್ನು ಸಮೀಪಿಸಿ, "ನಮ್ಮನಿಮಿತ್ತವಾಗಿ ಬ್ರಾಹ್ಮಣೋತ್ತಮರು ಸಮುದ್ರರಾಜನನ್ನು ಶಪಿಸಿದರು. ಆ

ಸ ಶೋಷಯತಿ ಚಾಽಽತ್ಮಾನಂ ದುಃಖೇನ ಮಹತಾನ್ವಿತಃ ।
ಸಮುದ್ರಾಜ್ಜಲಮಾದಾಯ ಪ್ರವರ್ಷಂತಿ ಬಲಾಹಕಾಃ ॥ ೬೬ ॥
ತತಃ ಸಂಜಾಯತೇ ಸಸ್ಯಂ ಸಸ್ಯಾದ್ಯಜ್ಞಾ ಭವಂತಿ ಚ ।
ಯಜ್ಞೈಃ ಸಂಜಾಯತೇ ತೃಪ್ತಿಃ ಸರ್ವೇಷಾಂ ತ್ರಿದಿವೌಕಸಾಂ ॥ ೬೭ ॥
ಏವಂ ತಸ್ಯ ವಿನಾಶೇನ ನಾಶೋಽಸ್ಮಾಕಂ ಭವಿಷ್ಯತಿ ।
ತಸ್ಮಾತ್ತ್ವಂ ರಕ್ಷ ತಂ ಗತ್ವಾ ಯಥಾ ಶೋಷಂ ನ ಗಚ್ಛತಿ ॥ ೬೮ ॥
ಯಥಾ ತುಷ್ಯಂತಿ ವಿಪ್ರಾಸ್ತೇ ತಥಾ ನೀತಿರ್ವಿಧೀಯತಾಂ ॥ ೬೯ ॥
ದೇವಾನಾಂ ವಚನಾದ್ಬ್ರಹ್ಮಾ ಗತ್ವಾ ಸಾಗರಸನ್ನಿಧೌ ।
ಸಮುದ್ರಾರ್ಥೇ ಯಯಾಚೇ ತಾನ್ ಬ್ರಾಹ್ಮಣಾನ್ ಕ್ಷೇತ್ರವಾಸಿನಃ ॥ ೭೦ ॥

ಬ್ರಹ್ಮೋವಾಚ :—

ಪ್ರಸಾದಃ ಕ್ರಿಯತಾಮಸ್ಯ ಸಾಗರಸ್ಯ ದ್ವಿಜೋತ್ತಮಾಃ ।
ಯಥಾ ಪವಿತ್ರತಾಂ ಯಾತಿ ಮದ್ವಾಕ್ಯಾತ್ಕ್ರಿಯತಾಂ ತಥಾ ॥ ೭೧ ॥
ಪ್ರದಾಸ್ಯತಿ ಸ ಯುಷ್ಮಭ್ಯಂ ರತ್ನಾನಿ ವಿವಿಧಾನಿ ಚ ॥ ೭೨ ॥
ಯೂಯಂ ಭವಿಷ್ಯಥಾಽತ್ಯಂತಂ ಭೂಮಿದೇವಾ ಇತಿ ಕ್ಷಿತೌ ।
ನಾಮ್ನಾ ಮದ್ವಚನಾನ್ನೂನಂ ಸತ್ಯಮೇತನ್ಮಯೋದಿತಂ ॥ ೭೩ ॥

ಆತನು ಅತ್ಯಂತ ದುಃಖದಿಂದ ತನ್ನನ್ನು ತಾನೇ ಒಣಗಿಸುತ್ತಿರುವನು. ಮೋಡಗಳು ಸಮುದ್ರದಿಂದ ನೀರನ್ನು ತೆಗೆದುಕೊಂಡು ಮಳೆಸುರಿಸುವುವು.

೬೭. ಅದರಿಂದ ಸಸ್ಯವೂ, ಸಸ್ಯದಿಂದ ಯಜ್ಞಗಳೂ, ಯಜ್ಞಗಳಿಂದ ಸಕಲ ದೇವತೆಗಳಿಗೆ ತೃಪ್ತಿಯೂ ಉಂಟಾಗುವುದು.

೬೮. ಆ ಸಮುದ್ರವು ನಾಶವಾಗಲು ನಾವೂ ನಾಶವಾಗುವೆವು. ಆದುದರಿಂದ ನೀನು ಆ ಸಮುದ್ರವು ಒಣಗದಂತೆ ಅದನ್ನು ಕಾಪಾಡು.

೬೯. ಎಲೈ ಬ್ರಹ್ಮದೇವನೆ! ಬ್ರಾಹ್ಮಣರು ಸಂತುಷ್ಟರಾಗುವಂತೆ ನೀನು ಯಾವುದಾದರೊಂದು ನೀತಿಯನ್ನವಲಂಬಿಸು.

೭೦. ಬ್ರಹ್ಮನು ದೇವತೆಗಳ ಮಾತಿನಿಂದ ಸಮುದ್ರದ ಹತ್ತಿರಹೋಗಿ ಸಮುದ್ರಕ್ಕಾಗಿ ಆ ಕ್ಷೇತ್ರವಾಸಿಗಳಾದ ಬ್ರಾಹ್ಮಣರನ್ನು ಹೀಗೆ ಬೇಡಿಕೊಂಡನು.

೭೧. ಬ್ರಹ್ಮನು ಹೇಳುತ್ತಾನೆ :— ಎಲೈ ಬ್ರಾಹ್ಮಣವರ್ಯರೇ! ನೀವು ನನ್ನ ಮಾತಿನಿಂದ ಈ ಸಮುದ್ರವು ಶುದ್ಧವಾಗುವಂತೆ ಅನುಗ್ರಹಮಾಡಿರಿ.

೭೨. ಅವನು ನಿಮಗೆ ನಾನಾಬಗೆಯ ರತ್ನಗಳನ್ನೀಯುವನು.

೭೩. ಅನಂತರ ನೀವು ನನ್ನ ಮಾತಿನಿಂದ ಭೂಮಿಯಲ್ಲಿ ಭೂಮಿದೇವತೆಗಳೆಂದು ಪ್ರಸಿದ್ಧರಾಗುವಿರಿ. ನಾನು ಹೇಳುವ ಈ ವಚನವು ಸತ್ಯವಾದುದು.

ಬ್ರಾಹ್ಮಣಾ ಊಚುಃ :—
ನಾಽನ್ಯಥಾ ಕರ್ತುಮಿಚ್ಛಾಮಸ್ತ್ವವ ವಾಕ್ಯಂ ಜಗತ್ಪತೇ ।
ನ ಚ ಮಿಥ್ಯಾಽಽತ್ಮನೋ ವಾಕ್ಯಂ ಪ್ರಮಾಣಂ ಚಾಽತ್ರ ವೈ ಭವಾನ್ ॥ ೭೪ ॥
ತನ್ನೋ ವಾಕ್ಯಾತ್ಸುರಶ್ರೇಷ್ಠ ಹಿತಂ ವಾ ಯದಿ ವಾಽಹಿತಂ ।
ಪರಂ ಸ್ಯಾಜ್ಜಗತಾಂ ಶ್ರೇಯಃ ಸರ್ವೇಷಾಂ ಚ ದಿವೌಕಸಾಂ ।
ತಥಾ ಕುರು ಜಗನ್ನಾಥ ಅಸ್ಮಾಕಂ ಹಿತಕಾರಣಂ ॥ ೭೫ ॥
ಅಥೋವಾಚ ನದೀನಾಥಂ ಬ್ರಹ್ಮಾ ಲೋಕಪಿತಾಮಹಃ ।
ಮಾ ಶೋಷಯ ತ್ವಮಾತ್ಮಾನಂ ಹಿತಂ ವಾಕ್ಯಂ ಶೃಣುಷ್ವ ಮೇ ॥ ೭೬ ॥
ನಾಽನ್ಯಥಾ ಶಕ್ಯತೇ ಕರ್ತುಂ ದ್ವಿಜಾನಾಂ ವಚನಂ ಹಿ ತತ್ ।
ಬ್ರಾಹ್ಮಣಾಃ ಕುಪಿತಾ ನೂನಂ ಭಸ್ಮೀಕುರ್ಯುಃ ಸ್ವತೇಜಸಾ ॥ ೭೭ ॥
ದೇವಾನ್ ಕುರ್ಯುರದೇವಾಂಶ್ಚ ತಸ್ಮಾತ್ತಾನ್ನೈವ ಕೋಪಯೇತ್ ।
ಯಸ್ಮಾದೇವ ತವ ಸ್ಪರ್ಶಸ್ತ್ರಿಧಾ ಮೇಧ್ಯೋ ಭವಿಷ್ಯತಿ ॥ ೭೮ ॥
ಪರ್ವಕಾಲೇ ಚ ಸಂಪ್ರಾಪ್ತೇ ನದೀನಾಂ ಚ ಸಮಾಗಮೇ ।
ಸೇತುಬಂಧೇ ತಥಾ ಸಿಂಧೌ ತೀರ್ಥೇಷ್ವನ್ಯೇಷು ಸಂಯುತಃ ॥ ೭೯ ॥

---

೭೪. ಬ್ರಾಹ್ಮಣರು ಹೇಳುತ್ತಾರೆ:—ಜಗದೊಡೆಯನಾದ ಎಲೈ ಬ್ರಹ್ಮನೆ! ನಿನ್ನ ಮಾತನ್ನು ವ್ಯತ್ಯಾಸಗೊಳಿಸಲು ನಾವು ಇಚ್ಛಿಸುವುದಿಲ್ಲ. ನಮ್ಮ ಮಾತು ಸುಳ್ಳಾಗುವುದಿಲ್ಲ. ಈ ವಿಷಯದಲ್ಲಿ ನೀನೇ ನಿರ್ಣಾಯಕನು.

೭೫. ಸುರೋತ್ತಮ! ನಮ್ಮ ಮಾತಿನಿಂದ ಪ್ರಪಂಚಕ್ಕೆ ಹಿತವೂ, ಅಹಿತವೂ ಆಗಿರುವುದು. ನೀನು ಜಗತ್ತಿಗೂ, ಸಕಲ ದೇವತೆಗಳಿಗೂ ಶ್ರೇಯಸ್ಸನ್ನುಂಟು ಮಾಡುವ ನಮಗೆ ಹಿತವಾಗುವ ಕಾರ್ಯವನ್ನಾಚರಿಸು.

೭೬. ಬಳಿಕ ಪಿತಾಮಹನು ಸಮುದ್ರನನ್ನು ಕುರಿತು "ಸಮುದ್ರ ರಾಜ! ನೀನು ನಿನ್ನನ್ನು ಒಣಗಿಸಿಕೊಳ್ಳಬೇಡ. ನನ್ನ ಹಿತವಚನವನ್ನು ಕೇಳು".

೭೭. ಬ್ರಾಹ್ಮಣರ ಮಾತನ್ನು ವ್ಯತ್ಯಾಸಗೊಳಿಸಲು ಶಕ್ಯವಿಲ್ಲ. ಕುಪಿತರಾದ ವಿಪ್ರರು ತಮ್ಮ ತೇಜಸ್ಸಿನಿಂದ ನಿಶ್ಚಯವಾಗಿಯೂ ನಿನ್ನನ್ನು ಸುಟ್ಟುಬೂದಿ ಮಾಡುವರು.

೭೮. ದೇವತೆಗಳನ್ನು ಅದೇ ವಿಪ್ರರೇ ದೇವತೆಗಳಲ್ಲದವರನ್ನಾಗಿಸುವರು. ಆದುರಿಂದ ಅವರನ್ನು ಕೋಪಗೊಳಿಸಬಾರದು. ಇದೀಗ ನಿನ್ನ ಸ್ಪರ್ಶವು ಮೂರು ವಿಧವಾಗಿ ಪವಿತ್ರವಾಗುವುದು.

೭೯–೮೦. ಪರ್ವಕಾಲದಲ್ಲಿಯೂ, ನದೀಸಂಗಮದಲ್ಲಿಯೂ, ಸೇತು ಇತರ ತೀರ್ಥಗಳ ಮೇಳನದಲ್ಲಿಯೂ ನಿನ್ನ ಸ್ಪರ್ಶವು ಪವಿತ್ರವಾಗುವುದು. ಬೇರೆ ಕಡೆಯಲ್ಲಿ

ಇತ್ಯೇವಮಾದಿಸರ್ವೇಷು ಮಧ್ಯೇಽನ್ಯತ್ರ ನ ಕರ್ಮಣಿ ।
ಯತ್ಫಲಂ ಸರ್ವತೀರ್ಥೇಷು ಸರ್ವಯಜ್ಞೇಷು ಯತ್ಫಲಂ ।
ತತ್ಫಲಂ ತವ ತೋಯಸ್ಯ ಸ್ಪರ್ಶಾದೇವ ಭವಿಷ್ಯತಿ ॥ ೮೦ ॥
ಗಯಾಶ್ರಾದ್ಧೇ ತು ಯತ್ಪುಣ್ಯಂ ಗೋಗ್ರಹೇ ಮರಣೇನ ಚ ।
ತತ್ಫಲಂ ತವ ತೋಯಸ್ಯ ಸ್ಪರ್ಶಾದೇವ ಭವಿಷ್ಯತಿ ॥ ೮೧ ॥
ಅಪೇಯಸ್ತ್ವಂ ತಥಾ ಭಾವಿ ಸ್ವಾದಮಾತ್ರೇಣ ಕೇವಲಂ ।
ಗಂಡೂಷಮಪಿ ಪೀತಂ ಚ ತೋಯಸ್ಯಾಽಶುಭನಾಶನಂ ॥ ೮೨ ॥
ಭವಿಷ್ಯತಿ ನೃಣಾಂ ಲೋಕೇ ತವ ಸೌಖ್ಯವಿವರ್ಧನಂ ।
ಪಿತೄಣಾಂ ತವ ತೋಯೇನ ಯಃ ಕರಿಷ್ಯತಿ ತರ್ಪಣಂ ।
ಪೂರ್ವೋಕ್ತೇನ ವಿಧಾನೇನ ತಸ್ಯ ಪುಣ್ಯಫಲಂ ಶೃಣು ॥ ೮೩ ॥
ಯಾವತ್ತ್ವಂ ತಿಷ್ಠಸೇ ಲೋಕೇ ಯಾವಚ್ಚಂದ್ರಾರ್ಕತಾರಕಾಃ ।
ತವೋದಕಾಽನ್ನತೃಪ್ತಾಸ್ತಾವತ್ಸ್ಥಾಸ್ಯಂತಿ ಪೂರ್ವಜಾಃ ॥ ೮೪ ॥
ಮಾಘೇ ಮಾಸಿ ಚ ಯಃ ಸ್ನಾಯಾನ್ನಿರಂತರಯೋಗೇಣ ಭಾವಿತಃ ।
ಪೌಂಡರೀಕಫಲಂ ತಸ್ಯ ದಿವಸೇ ದಿವಸೇ ಭವೇತ್ ॥ ೮೫ ॥

ಯಾವ ಕರ್ಮಕ್ಕೂ ಅರ್ಹವಲ್ಲ. ನಿನ್ನ ಸ್ಪರ್ಶದಿಂದ ಸಕಲ ತೀರ್ಥ ಯಜ್ಞಗಳಿಂದ ದೊರಕುವ ಫಲವು ದೊರೆಯುವುದು.

೮೧. ನಿನ್ನ ನೀರಿನ ಸ್ಪರ್ಶದಿಂದ ಗಯಾಶ್ರಾದ್ಧ ಗೋಗ್ರಹದಲ್ಲಿ ಮರಣ ಇವುಗಳಿಂದುಂಟಾದ ಪುಣ್ಯವು ಲಭಿಸುವುದು.

೮೨. ರುಚಿಯಿಂದ ಮಾತ್ರ ನಿನ್ನ ನೀರು ಉಪ್ಪಾಗಿ ಅಪೇಯವಾಗಿರುವುದು. ನಿನ್ನ ನೀರಿನ ಗಂಡೂಷದಿಂದಲೂ, ಪಾನದಿಂದಲೂ ಅಮಂಗಳವು ತೊಲಗುವುದು.

೮೩. ನಿನ್ನ ನೀರಿನ ಸ್ಪರ್ಶದಿಂದ ಮನುಷ್ಯರಿಗೆ ಸುಖವು ಹೆಚ್ಚುವುದು. ನಿನ್ನ ಜಲದಿಂದ ಪೂರ್ವೋಕ್ತ ವಿಧಿಯಂತೆ ಪಿತೃತರ್ಪಣ ಮಾಡುವುದರಿಂದುಂಟಾಗುವ ಪುಣ್ಯ ಫಲವನ್ನು ಕೇಳು.

೮೪. ಲೋಕದಲ್ಲಿ ನೀನು, ಚಂದ್ರ, ಸೂರ್ಯ, ನಕ್ಷತ್ರಗಳು ಇರುವವರೆಗೆ ಪಿತೃಗಳು ನಿನ್ನ ನೀರಿನಿಂದ ತೃಪ್ತಿಗೊಂಡಿರುವರು.

೮೫. ಮಾಘ ಮಾಸದಲ್ಲಿ ನಿನ್ನಲ್ಲಿ ಎಡೆಬಿಡದೆ ಸ್ನಾನಮಾಡುವವನಿಗೆ ಪ್ರತಿ ಪ್ರತಿದಿನವೂ ಪೌಂಡರೀಕಯಾಗ ಮಾಡಿದ ಫಲವು ದೊರೆಯುವುದು.

ಯಾತ್ರಾಯಾಮಥವಾಽನ್ಯತ್ರ ಪರ್ವಕಾಲೇ ಶಶಿಗ್ರಹೇ ।
ಅತ್ರ ಸ್ನಾಸ್ಯತಿ ಯಃ ಸಮ್ಯಕ್ಸಾಗರೇ ಲವಣಾಂಭಸಿ ।
ಅಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ಸ್ಯತಿ ಮಾನವಃ ॥ ೮೬ ॥
ಶ್ರೀಸೋಮೇಶಸಮುದ್ರಸ್ಯ ಅಂತರೇ ಯೇ ಮೃತಾ ನರಾಃ ।
ಪಾಪಿನೋಽಪಿ ಗಮಿಷ್ಯಂತಿ ಸ್ವರ್ಗಂ ನಿರ್ಧೂತಕಲ್ಮಷಾಃ ॥ ೮೭ ॥
ಏವಂ ಭವಿಷ್ಯತಿ ಸದಾ ತವ ಮದ್ವಚನಾದ್ವಿಭೋ ।
ಪ್ರಯಚ್ಛಸ್ವ ದ್ವಿಜೇಂದ್ರಾಣಾಂ ರತ್ನಾನಿ ವಿವಿಧಾನಿ ಚ ॥ ೮೮ ॥
ತೇನ ತುಷ್ಟಾ ವರಂ ಭೂಯಃ ಪ್ರದಾಸ್ಯಂತಿ ತವೇಪ್ಸಿತಂ ॥ ೮೯ ॥

ಈಶ್ವರ ಉವಾಚ :—

ಪಿತಾಮಹವಚಃ ಶ್ರುತ್ವಾ ಬಾಢಮಿತ್ಯೇವ ಸಾಗರಃ ।
ಬ್ರಾಹ್ಮಣೇಭ್ಯಃ ಸುರತ್ನಾನಿ ದದೌ ಶ್ರದ್ಧಾಸಮನ್ವಿತಃ ॥ ೯೦ ॥
ಬ್ರಾಹ್ಮಣೈರ್ಬ್ರಹ್ಮಣೋ ವಾಕ್ಯಮಶೇಷಂ ಸಮನುಷ್ಠಿತಂ ।
ಕ್ಷೌರಕರ್ಮ ತಥಾ ಕೃತ್ವಾ ಸ್ನಾನಂ ಸರ್ವೇಽಪಿ ಚಕ್ರಿರೇ ॥ ೯೧ ॥

---

೮೬. ಯಾತ್ರಾಕಾಲದಲ್ಲಾಗಲಿ, ಅಥವಾ ಇತರ ಪರ್ವಕಾಲ, ಚಂದ್ರಗ್ರಹಣಗಳಲ್ಲಾಗಲಿ ಲವಣ ಜಲವುಳ್ಳ ಈ ಸಾಗರದಲ್ಲಿ ಮಿಂದವನು ಸಾವಿರ ಅಶ್ವಮೇಧ ಯಾಗಗಳ ಫಲವನ್ನು ಪಡೆಯುವನು.

೮೭. ಶ್ರೀ ಸೋಮೇಶ, ಸಮುದ್ರ ಇವುಗಳ ಮಧ್ಯದಲ್ಲಿ ಮಿಂದ ಮಾನವನು ಪಾಪಿಯಾದಾಗ್ಗೂ ಪಾಪರಹಿತನಾಗಿ ಸ್ವರ್ಗವನ್ನು ಸೇರುವನು.

೮೮. ಎಲೈ ಸಮುದ್ರ ರಾಜನೆ! ನನ್ನ ಮಾತಿನಿಂದ ನಿನಗೆ ಯಾವಾಗಲೂ ಇಂಥಸೌಭಾಗ್ಯವೊದಗುವುದು. ಇನ್ನು ನೀನು ಈ ಬ್ರಾಹ್ಮಣರಿಗೆ ನಾನಾ ರತ್ನಗಳನ್ನು ಕೊಡು.

೮೯. ಅದರಿಂದ ಸಂತುಷ್ಟರಾದ ಈ ಬ್ರಾಹ್ಮಣರು ನಿನಗೆ ಇಷ್ಟಾರ್ಥವನ್ನು ನೀಡುವರು.

೯೦. ಈಶ್ವರನು ಹೇಳುತ್ತಾನೆ:—ಸಮುದ್ರನು ಬ್ರಹ್ಮನ ವಚನವನ್ನು ಕೇಳಿ ಹಾಗೆಯೇ ಆಗಲೆಂದು ಒಪ್ಪಿ ಅವರಿಗೆ ಶ್ರದ್ಧೆಯಿಂದ ಒಳ್ಳೆಯ ರತ್ನಗಳನ್ನಿತ್ತನು.

೯೧. ಬ್ರಾಹ್ಮಣರು ಬ್ರಹ್ಮನ ಮಾತನ್ನು ಸಂಪೂರ್ಣವಾಗಿ ನೆರವೇರಿಸಿದರು. ಅವರು ವಪನ ಮಾಡಿಸಿಕೊಂಡು ಸಾಗರದಲ್ಲಿ ಮಿಂದರು.

ಏವಂ ಪವಿತ್ರತಾಂ ಪ್ರಾಪ್ತಸ್ತೀರ್ಥತ್ವಂ ಲವಣೋದಧಿಃ ।
ತಸ್ಯ ಮಧ್ಯೇ ಮಹಾದೇವಿ ಲಿಂಗಾನಾಂ ಪಂಚಕೋಟಯಃ ॥ ೯೨ ॥
ಅಸ್ಮಿನ್ ಮನ್ವಂತರೇ ದೇವಿ ಅದೃಶ್ಯಾಃ ಸಾಗರೇ ಕೃತಾಃ ।
ಅಗ್ನಿಕುಂಡಂ ಚ ತತ್ರೈವ ತಥಾಽನ್ಯತ್ಪದ್ಮಕಂ ಸರಃ ॥ ೯೩ ॥
ಮಧ್ಯೇ ತು ಪ್ರಾವೃತಂ ಸರ್ವಮಸ್ಮಿನ್ ಮನ್ವಂತರೇ ಪ್ರಿಯೇ ।
ಚಕ್ರಮೈನಾಕಯೋರ್ಮಧ್ಯೇ ದಿಶಿ ದಕ್ಷಿಣಮುಚ್ಯತೇ ॥ ೯೪ ॥
ಶಾತಕುಂಭಮಯೇ ಕುಂಭೇ ಧನುಷಾಯುತವಿಸ್ತೃತೇ ।
ತತ್ರ ಕುಂಭಸ್ಯ ಮಧ್ಯಸ್ಥೋ ವಡವಾಽನಲಸಂಜ್ಞಿತಃ ॥ ೯೫ ॥
ಸೂಚೀವಕ್ತ್ರೋ ಮಹಾಕಾಯಃ ಸ ಜಲಂ ಪಿಬತೇ ಸದಾ ।
ಏತದಂತರಮಾಸಾದ್ಯ ಅಗ್ನಿತೀರ್ಥಂ ಪ್ರಚಕ್ಷತೇ ॥ ೯೬ ॥
ತಸ್ಯ ಮಧ್ಯೇ ಮಹಾಸಾರಂ ವಾಡವಂ ಯತ್ರ ವೈ ಮುಖಂ ।
ಶ್ರೀಸೋಮೇಶಾದ್ದಕ್ಷಿಣತೋ ಧನ್ವಂತರಶತಾಽವಧಿ ।
ಉತ್ತರಾನ್ಮಾನಸಾತ್ಪೂರ್ವಂ ಯಾವದೇವಕೃತಸ್ಮರಂ ॥ ೯೭ ॥
ಏತದ್ಗೋಪ್ಯಂ ವರಾರೋಹೇ ನ ದೇಯಂ ಯಸ್ಯ ಕಸ್ಯಚಿತ್ ।
ಬ್ರಹ್ಮಘ್ನೋಽಪಿ ವಿಶುದ್ಧ್ಯೇತ ಶ್ರುತ್ವೈತನ್ನಾಽತ್ರ ಸಂಶಯಃ ॥ ೯೮ ॥

೯೨–೯೩. ಹೀಗೆ ಪವಿತ್ರವಾದ ಆ ಸಮುದ್ರದ ಮಧ್ಯದಲ್ಲಿ ಈ ಮನ್ವಂತರದಲ್ಲಿ ಐದು ಕೋಟಿ ಲಿಂಗಗಳು ಅದೃಶ್ಯವಾಗಿ ಅಡಗಿವೆ. ಅಲ್ಲಿಯೇ ಅಗ್ನಿಕುಂಡವೂ, ಪದ್ಮ ಸರೋವರವೂ ಇರುವುದು.

೯೪–೯೬. ಪ್ರಿಯಳೆ! ಈ ಮನ್ವಂತರದಲ್ಲಿ ಅವೆಲ್ಲ ಮುಚ್ಚಲ್ಪಟ್ಟಿವೆ. ದಕ್ಷಿಣ ದಿಕ್ಕಿನಲ್ಲಿ ಚಕ್ರ ಮೈನಾಕಪರ್ವತಗಳ ಮಧ್ಯದಲ್ಲಿ ಹತ್ತುಸಾವಿರ ಬಿಲ್ಲಿನಷ್ಟು ವಿಸ್ತಾರವಾದ ಚಿನ್ನದ ಕಲಶದ ಮಧ್ಯದಲ್ಲಿರುವ ಸೂಜಿಯಂತೆ ಬಾಯಿಯುಳ್ಳ ವಡವಾಗ್ನಿಯು ಯಾವಾಗಲೂ ನೀರನ್ನು ಕುಡಿಯುತ್ತಿರುವುದು. ಇದರ ಮಧ್ಯ ಪ್ರದೇಶವನ್ನು ಅಗ್ನಿ ತೀರ್ಥವೆನ್ನುವರು.

೯೭. ಅದರ ನಡುವೆ ಶ್ರೀ ಸೋಮೇಶ್ವರನ ದಕ್ಷಿಣದಲ್ಲಿಯೂ, ಮಾನಸರೋವರಕ್ಕಿಂತ ಪೂರ್ವದಲ್ಲಿಯೂ ಕೃತಸ್ಮರದವರೆಗೆ ನೂರುಬಿಲ್ಲಿನಷ್ಟು ವಿಸ್ತೀರ್ಣವಾದ ವಾಡವ ಮುಖವಿರುವುದು.

೯೮. ಓ ಉತ್ತಮಾಂಗನೆ! ಇದನ್ನು ಯಾರಿಗೂ ಹೇಳದೆ ಗುಟ್ಟಾಗಿಟ್ಟಿರಬೇಕು. ಬ್ರಹ್ಮಹತ್ಯೆಮಾಡಿದವನೂ ಇದನ್ನು ಕೇಳಿ ಶುದ್ಧನಾಗುವನು.

ಏವಂ ಶಾಪೋ ವರೋ ದತ್ತಃ ಸಾಗರಸ್ಯ ಯಥಾ ದ್ವಿಜೈಃ ।
ಪೂರ್ವಂ ರುಷ್ಟೈಸ್ತತಸ್ತುಷ್ಟೈಸ್ತತ್ಸರ್ವಂ ಕಥಿತಂ ಮಯಾ ॥ ೯೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಮುದ್ರಸ್ಯಾಽಪೇಯತಾಕಾರಣವರ್ಣನಂ ನಾಮ
॥ ಏಕೋನತ್ರಿಂಶೋಽಧ್ಯಾಯ ॥

---

೯೯. ದೇವಿ! ಹೀಗೆ ಮೊದಲು ಕೋಪಗೊಂಡು ಅನಂತರ ಸಂತುಷ್ಟರಾದ ಬ್ರಾಹ್ಮಣರು ಸಮುದ್ರನಿಗೆ ಕೊಟ್ಟ ಶಾಪ, ಮತ್ತು ವರಗಳನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಸಮುದ್ರ ಜಲಾಪೇಯತಾಕಾರಣ ವರ್ಣನವೆಂಬ
ಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ತ್ರಿಂಶೋಽಧ್ಯಾಯಃ

ಸೋಮೇಶ್ವರಪೂಜಾಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಸ್ನಾತ್ವಾ ತತ್ರಾಽಗ್ನಿತೀರ್ಥೇಷು ಕಂ ದೇವಂ ಪೂರ್ವಮರ್ಚಯೇತ್ ।
ನಿರ್ವಿಘ್ನಾ ಜಾಯತೇ ಯೇನ ಯಾತ್ರಾ ನೃಣಾಂ ಸುರೇಶ್ವರ ।
ತನ್ಮೇ ಯಾತ್ರಾವಿಧಾನಂ ತು ಯಥಾವದ್ವಕ್ತುಮರ್ಹಸಿ || ೧ ||

ಈಶ್ವರ ಉವಾಚ :—

ಏವಂ ಸ್ನಾತ್ವಾ ವಿಧಾನೇನ ದತ್ವಾಽರ್ಘ್ಯಂ ಚ ಮಹೋದಧೌ ।
ಸಂಪೂಜ್ಯ ಗಂಧಪುಷ್ಪೈಶ್ಚ ವಸ್ತ್ರೈಃ ಪುಷ್ಪಾಽವಲೇಪನೈಃ || ೨ ||
ಹಿರಣ್ಮಯಂ ಯಥಾಶಕ್ತ್ಯಾ ಪ್ರಕ್ಷಿಪೇತ್ತ ಕಂಕಣಂ ।
ತತಃ ಪಿತ್ರ್ಯಾಂಸ್ತರ್ಪಯಿತ್ವಾ ಗಚ್ಛೇದ್ದೇವಂ ಕಪರ್ದಿನಂ || ೩ ||
ಪುಷ್ಪೈರ್ಧೂಪೈಸ್ತಥಾ ಗಂಧೈರ್ವಸ್ತ್ರೈಃ ಸಂಪೂಜ್ಯ ಭಕ್ತಿತಃ ।
ಗಣಾನಾಂ ತ್ವೇತಿ ಮಂತ್ರೇಣ ಅರ್ಘ್ಯಂ ಚಾಽಸ್ಮೈ ನಿವೇದಯೇತ್ || ೪ ||

ಕನ್ನಡದ ಅನುವಾದ

ಸೋಮೇಶ್ವರಪೂಜಾವರ್ಣನ

೧. ಆ ದೇವಿಯು ಹೇಳುತ್ತಾಳೆ :—ಅಗ್ನಿತೀರ್ಥದಲ್ಲಿ ಮಿಂದು ಯಾವ ದೇವತೆಯನ್ನು ಮೊದಲು ಪೂಜಿಸಬೇಕು. ಯಾವುದರಿಂದ ಮನುಷ್ಯರ ಯಾತ್ರೆಯು ನಿರ್ವಿಘ್ನವಾಗಿ ನಡೆಯುವುದು. ಆ ಯಾತ್ರೆಯ ವಿಧಿಯನ್ನು ನನಗೆ ಹೇಳು.

೨. ಈಶ್ವರನು ಹೇಳುತ್ತಾನೆ:—ಹೀಗೆ ಮಹೋದಧಿಯಲ್ಲಿ ವಿಧಿಯಿಂದ ಮಿಂದು ಅರ್ಘ್ಯವನ್ನಿತ್ತು ಗಂಧ, ಪುಷ್ಪ ವಸ್ತ್ರಗಳಿಂದ ಪೂಜಿಸಬೇಕು,

೩. ಆ ಸಮುದ್ರದಲ್ಲಿ ಶಕ್ತ್ಯನುಸಾರ ಸುವರ್ಣಮಯವಾದ ಕಂಕಣವನ್ನೆಸೆದು ಅನಂತರ ಪಿತೃಗಳಿಗೆ ತರ್ಪಣಮಾಡಿ ಕಪರ್ದಿಯ ಸನ್ನಿಧಿಗೆ ಹೋಗಬೇಕು.

೪. ಅಲ್ಲಿ ಅವನನ್ನು ಭಕ್ತಿಯಿಂದ ಪುಷ್ಪ ಧೂಪ, ಗಂಧ, ವಸ್ತ್ರ ಇವುಗಳಿಂದ ಪೂಜಿಸಿ "ಗಣಾನಾಂ ತ್ವಾತಿ" ಎಂಬ ಮಂತ್ರದಿಂದ ಅರ್ಘ್ಯವನ್ನೀಯಬೇಕು.

ಶೂದ್ರಾಣಾಮಥ ದೇವೇಶಿ ಮಂತ್ರಶ್ಚಾಽಷ್ಟಾಕ್ಷರಃ ಸ್ಮೃತಃ ।
ತತ್ರ ಸೋಮೇಶ್ವರಂ ಗಚ್ಛೇದ್ದೇವಂ ಪಾಪಹರಂ ಪರಂ ॥ ೫ ॥
ಸ್ನಾಪಯಿತ್ವಾ ವಿಧಾನೇನ ಜಪೇಚ್ಚ ಶತರುದ್ರಿಯಂ ।
ತಥಾ ರುದ್ರಾನ್ ಸ ಪಂಚಾಂಗಾಂಸ್ತಥಾಽನ್ಯಾ ರುದ್ರಸಂಹಿತಾಃ ॥ ೬ ॥
ಸ್ನಾಪಯೇತ್ಪಯಸಾ ಚೈವ ದಧ್ನಾ ಘೃತಯುತೇನ ಚ ।
ಮಧುನೇಕ್ಷುರಸೇನೈವ ಕುಂಕುಮೇನ ವಿಲೇಪಯೇತ್ ॥ ೭ ॥
ಕರ್ಪೂರೋಶೀರಮಿಶ್ರೇಣ ಮೃಗನಾಭಿಯುತೇನ ಚ ।
ಚಂದನೇನ ಸುಗಂಧೇನ ಪೂಜ್ಯಂ ಸಂಪೂಜಯೇತ್ತತಃ ॥ ೮ ॥
ಧೂಪೈರ್ಬಹುವಿಧೈರ್ದೇವಂ ಧೂಪಯಿತ್ವಾ ಯಥಾವಿಧಿ ।
ವಸ್ತ್ರೈಃ ಸಂವೇಷ್ಟಯೇತ್ಪಶ್ಚಾದ್ದದ್ಯಾನ್ನೈವೇದ್ಯಮುತ್ತಮಂ ॥ ೯ ॥
ಆರಾರ್ತಿಕಂ ತತಃ ಕೃತ್ವಾ ನೃತ್ಯಂ ಕುರ್ಯಾದ್ಯಥೇಚ್ಛಯಾ ।
ಅಷ್ಟಾಂಗಂ ಪ್ರಣಿಪತ್ಯೈವಂ ಗೀತವಾದ್ಯಾದಿಕಂ ತತಃ ॥ ೧೦ ॥
ಧರ್ಮಶ್ರವಣಸಂಯುಕ್ತಂ ಕಾರ್ಯಂ ಪ್ರೇಕ್ಷಣಕಂ ವಿಭೋಃ ।
ತತೋ ದದ್ಯಾದ್ದ್ವಿಜಾತಿಭ್ಯಸ್ತಪಸ್ವಿಭ್ಯಶ್ಚ ಶಕ್ತಿತಃ ॥ ೧೧ ॥

೫-೬. ದೇವೇಶಿ! ಶೂದ್ರರು ಅಷ್ಟಾಕ್ಷರ ಮಂತ್ರದಿಂದ ಪೂಜಿಸಬೇಕು. ಬಳಿಕ ಸೋಮೇಶ್ವರನೆಡೆಗೆ ಹೋಗಿ ಅವನಿಗೆ ವಿಧಿಯಿಂದ ಅಭಿಷೇಕಮಾಡಿ ಶತರುದ್ರಿಯ, ರುದ್ರಮಂತ್ರ, ಪಂಚಾಗ ಸಹಿತವಾದ ರುದ್ರ ಸಂಹಿತೆ ಇವುಗಳನ್ನು ಜಪಿಸಬೇಕು.

೭. ಹಾಲು, ಮೊಸರು, ತುಪ್ಪ, ಜೇನುತುಪ್ಪ, ಕಬ್ಬಿನ ರಸ (ಸಕ್ಕರೆ ಅಥವಾ ಬೆಲ್ಲ) ಇವುಗಳಿಂದ ಪಂಚಾಮೃತಸ್ನಾನ ಮಾಡಿಸಿ ಕುಂಕುಮವನ್ನು ಹಚ್ಚಬೇಕು.

೮. ಅನಂತರ ಕರ್ಪೂರ, ಲಾವಂಚ, ಕಸ್ತೂರಿಗಳಿಂದ ಮಿಶ್ರವಾಗಿ ಸುಗಂಧವಾದ ಗಂಧದಿಂದ ಪೂಜಿಸಬೇಕು.

೯. ಬಳಿಕ ನಾನಾ ವಿಧ ಧೂಪಗಳನ್ನರ್ಪಿಸಿ ವಸ್ತ್ರವನ್ನುಡಿಸಿ ನೈವೇದ್ಯವನ್ನು ನಿವೇದಿಸಬೇಕು.

೧೦–೧೨. ಅನಂತರ ನೀರಾಜನಗೈದು ಸ್ವೇಚ್ಛೆಯಿಂದ ಕುಣಿದು ಸಾಷ್ಟಾಂಗ ಪ್ರಣಾಮ ಮಾಡಿ ಗೀತ ವಾದ್ಯಾದಿಗಳನ್ನೊಪ್ಪಿಸಿ ಧರ್ಮಶ್ರವಣದಿಂದ ಕೂಡಿದ ನಾಟಕವನ್ನಾಡಿ ಬ್ರಾಹ್ಮಣರಿಗೂ ಮುನಿಗಳಿಗೂ, ಬಡವ, ಕುರುಡ, ತಿರುಕರಿಗೆ ಶಕ್ತ್ಯನುಸಾರ

ದೀನಾಂಧಕೃಪಣೇಭ್ಯಶ್ಚ ದಾನಂ ಕಾರ್ಪಟಿಕೇಷು ಚ ।
ವೃಷಭಸ್ತತ್ರದಾತವ್ಯಃ ಪ್ರವೃತ್ತೇ ಕ್ರೂರಕರ್ಮಣಿ ।
ಉಪವಾಸಂ ತತಃ ಕುರ್ಯಾತ್ತಸ್ಮಿನ್ನಹನಿ ಭಾಮಿನಿ ॥ ೧೨ ॥
ಯಸ್ಮಿನ್ನಹನಿ ಪಶ್ಯೇತ ದೇವಂ ಸೋಮೇಶ್ವರಂ ನರಃ ।
ಸಾ ತಿಥಿರ್ವರ್ಷಮೇಕಂ ತು ಉಪೋಷ್ಯಾ ಭಕ್ತಿತತ್ಪರೈಃ ॥ ೧೩ ॥
ಏವಂ ಕೃತ್ವಾ ನರೋ ಭಕ್ತ್ಯಾ ಲಭತೇ ಜನ್ಮನಃ ಫಲಂ ।
ತಥಾ ಚ ಸರ್ವತೀರ್ಥಾನಾಂ ಸಕಲಂ ಲಭತೇ ಫಲಂ ॥ ೧೪ ॥
ಉದ್ಧರೇತ್ಪಿತೃವರ್ಗಂ ಚ ಮಾತೃವರ್ಗಂ ಚ ಭಾಮಿನಿ ।
ಬಾಲ್ಯೇ ವಯಸಿ ಯತ್ಪಾಪಂ ವಾರ್ಧಕ್ಯೇ ಯೌವನೇಽಪಿ ವಾ ॥ ೧೫ ॥
ಕ್ಷಾಲಯೇಚ್ಚೈವ ತತ್ಸರ್ವಂ ದೃಷ್ಟ್ವಾ ಸೋಮೇಶ್ವರಂ ನರಃ ।
ನ ದುಃಖಿತೋ ನ ದರಿದ್ರೋ ದುರ್ಭಗೋ ವಾ ನ ಜಾಯತೇ ॥ ೧೬ ॥
ಸಪ್ತಜನ್ಮಾಂತರೇಷ್ವೈವ ದೃಷ್ಟೇ ಸೋಮೇಶ್ವರೇ ವಿಭೌ ।
ಧನಧಾನ್ಯಸಮಾಯುಕ್ತೇ ಸ್ಫೀತೇ ಸಂಜಾಯತೇ ಕುಲೇ ॥ ೧೭ ॥
ಭಕ್ತಿರ್ಭವತಿ ಭೂಯೋಽಪಿ ಸೋಮನಾಥಂ ಪ್ರತಿ ಪ್ರಭುಂ ।
ಕ್ಷೀರೇಣ ಸ್ನಪನಂ ಪೂರ್ವಂ ತತೋ ಧಾರಾಸಮುದ್ಭವಂ ॥ ೧೮ ॥

ದಾನ ಮಾಡಿ ಕಠಿನ ಕೆಲಸಗಾರರಿಗೆ ವೃಷಭವನ್ನಿತ್ತು ಬಳಿಕ ಆ ದಿನ ಉಪವಾಸ ಮಾಡಬೇಕು.

೧೩. ಒಂದು ವರ್ಷದೊಳಗೆ ಆ ಸೋಮೇಶ್ವರನನ್ನು ದರ್ಶನಮಾಡಿದ ತಿಥಿಯಲ್ಲಿ ಭಕ್ತಿಯಿಂದ ಉಪವಾಸ ಮಾಡಬೇಕು.

೧೪. ಭಕ್ತಿಯಿಂದ ಹೀಗೆ ದಾನಮಾಡಿದ ಮನುಷ್ಯನು ತನ್ನ ಜನ್ಮದ ಫಲವನ್ನೂ, ಸಕಲ ತೀರ್ಥಯಾತ್ರೆಯ ಫಲವನ್ನೂ ಪಡೆಯುವನು.

೧೫–೧೭. ಪ್ರಿಯಳೆ! ಮತ್ತು ಪಿತೃವರ್ಗವನ್ನೂ, ಮಾತೃವರ್ಗವನ್ನೂ ಉದ್ಧರಿಸುವನು. ಸೋಮೇಶ್ವರನ ದರ್ಶನದಿಂದ ಮನುಷ್ಯನು ಬಾಲ್ಯ, ಯೌವನ, ಮುಪ್ಪಿನಲ್ಲಿ ಮಾಡಿದ ಪಾಪವನ್ನೆಲ್ಲ ಪರಿಹರಿಸಿಕೊಳ್ಳುವನು. ದುಃಖಗೊಂಡವನೂ, ಬಡವನೂ, ನೀಚನೂ ಆಗಿ ಜನಿಸುವುದಿಲ್ಲ. ಏಳು ಜನ್ಮಗಳಲ್ಲಿ ಧನ ಧಾನ್ಯಗಳಿಂದ ತುಂಬಿ ಪ್ರಸಿದ್ಧ ವಂಶದಲ್ಲಿ ಜನಿಸುವನು.

೧೮–೧೯. ಮರಳಿ ಸೋಮನಾಥನ ಭಕ್ತನಾಗುವನು. ಸೋಮನಾಥನಿಗೆ ಮೊದಲನೆ ಜಾಮದಲ್ಲಿ ಮಾಡುವ ಕ್ಷೀರಾಭಿಷೇಕವನ್ನೂ, ಸಂಧ್ಯಾಕಾಲದಲ್ಲಿ ಮಾಡುವ

ಪ್ರಥಮೇ ಪ್ರಥಮೇ ಯಾಮೇ ಮಹಾಸ್ನಾನಮತಃ ಪರಂ ||
ಮಧ್ಯಾಹ್ನೇ ದೇವದೇವಸ್ಯ ಯೇ ಪ್ರಪಶ್ಯಂತಿ ಮಾನವಾಃ ।
ಸಂಧ್ಯಾಮಾರಾರ್ತಿಕಂ ಭೂಯೋ ನ ಜಾಯಂತೇ ಚ ಮಾನುಷಾಃ || ೧೯ ||
ಮತ್ವಾ ಕಲಿಯುಗಂ ರೌದ್ರಂ ಬಹುಪಾಪಂ ವರಾನನೇ ।
ನಾನ್ಯೇನ ತರತೇ ದುರ್ಗಾಂ ಕರ್ಮಣಾ ದುರ್ಗತಿಂ ನರಃ || ೨೦ ||

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಸೋಮೇಶ್ವರ ಮಾಹಾತ್ಮ್ಯೇ ಸೋಮೇಶ್ವರಪೂಜಾಮಾಹಾತ್ಮ್ಯವರ್ಣನಂ ನಾಮ

|| ತ್ರಿಂಶೋಽಧ್ಯಾಯಃ ||

ಧಾರಾಕಾರವಾದ ಮಹಾಭಿಷೇಕವನ್ನೂ, ಸಂಧ್ಯಾಕಾಲದ ನೀರಾಜನವನ್ನೂ ನೋಡಿದ ಮಾನವರು ತಿರುಗಿ ಹುಟ್ಟುವುದಿಲ್ಲ.

೨೦. ಪ್ರಿಯಳೆ ! ಪಾಪ ಭೂಯಿಷ್ಠವಾದ ಭಯಂಕರ ಕಲಿಯುಗದಲ್ಲಿ ಇತರ ಕಾರ್ಯದಿಂದ ದುರ್ಗತಿಯನ್ನು ದಾಟಲು ಸಾಧ್ಯವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಸೋಮೇಶ್ವರ ಪೂಜಾಮಾಹಾತ್ಮ್ಯವರ್ಣನವೆಂಬ ಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕತ್ರಿಂಶೋಽಧ್ಯಾಯಃ

ವಡವಾನಲೋತ್ಪತ್ತಿವೃತ್ತಾಂತೇ ದಧೀಚಿಮಹರ್ಷಯೇ ಸರ್ವದೇವಕೃತಸ್ವಸ್ವಶಸ್ತ್ರ
ಸಮರ್ಪಣ ವರ್ಣನಂ

ದೇವ್ಯುವಾಚ :—

ಸಕಾರಪಂಚಕಂ ಪ್ರೋಕ್ತಂ ಯತ್ತ್ವಯಾ ಮಮ ಶಂಕರ ।
ಕಥಂ ತದತ್ರ ಸಂವೃತ್ತಮೇತನ್ಮೇ ಸಂಶಯಂ ಮಹತ್ ॥ ೧ ॥
ಕಥಂ ವಾಽತ್ರ ಸಮಾಯಾತಾ ಕುತಶ್ಚಾಽಪಿ ಸರಸ್ವತೀ ।
ಕಥಂ ಸ ವಾಡವೋ ಜಾತಃ ಕಸ್ಮಿನ್ಕಾಲೇ ಕಥಂ ಹ್ಯಭೂತ್ ।
ತತ್ಸರ್ವಂ ವಿಸ್ತರೇಣೇದಂ ಯಥಾವದ್ವಕ್ತುಮರ್ಹಸಿ ॥ ೨ ॥

ಈಶ್ವರ ಉವಾಚ :—

ಶೃಣು ದೇವಿ ಯಥಾ ಜಾತಾ ತಸ್ಮಿನ್ ಕ್ಷೇತ್ರೇ ಸರಸ್ವತೀ ।
ಯತಶ್ಚೈವ ಸಮುದ್ಭೂತಾ ಸರ್ವಪಾಪಪ್ರಣಾಶಿನೀ ॥ ೩ ॥
ಹಿರಣ್ಯಾ ವಜ್ರಿಣೀ ನ್ಯಂಕುಃ ಕಪಿಲಾ ಚ ಸರಸ್ವತೀ ॥ ೪ ॥
ಋಷಿಭಿಃ ಪಂಚಭಿಶ್ಚಾಽತ್ರ ಸಮಾಹೂತಾ ಯಥಾ ಪುರಾ ।
ವಾಡವೇನಾಗ್ನಿನಾ ಯುಕ್ತಾ ಯಥಾ ಜಾತಾ ಶೃಣುಷ್ವ ತತ್ ॥ ೫ ॥

ಕನ್ನಡದ ಅನುವಾದ

ವಡವಾನಲಉತ್ಪತ್ತಿವೃತ್ತಾಂತದಲ್ಲಿ ದಧೀಚಿ ಮಹರ್ಷಿಗೆ ಸರ್ವದೇವಕೃತಸ್ವಸ್ವಶಸ್ತ್ರ
ಸಮರ್ಪಣವರ್ಣನ

೧. ದೇವಿಯು ಹೇಳುತ್ತಾಳೆ:—ಶಂಕರ! ನೀನು ಸಕಾರದಿಂದ ಕೂಡಿದ ಐದು ಪೂಜ್ಯವಸ್ತುಗಳನ್ನು ಹೇಳಿರುವೆ. ಅವು ಇಲ್ಲಿ ಹೇಗೆ ಉಂಟಾಗುವುದು? ನನಗೆ ಈ ವಿಷಯದಲ್ಲಿ ಮಹಾಸಂಶಯವುಂಟಾಗಿದೆ.

೨. ಆ ಸರಸ್ವತೀ ನದಿಯು ಎಲ್ಲಿಂದ ಇಲ್ಲಿಗೆ ಹೇಗೆ ಬಂದಿತು? ವಾಡವಾಗ್ನಿಯು ಯಾವಾಗ ಹೇಗೆ ಉಂಟಾಯಿತು? ಅದನ್ನೆಲ್ಲ ನನಗೆ ವಿಸ್ತಾರವಾಗಿ ಹೇಳು.

೩. ಈಶ್ವರನು ಹೇಳುತ್ತಾನೆ:—ದೇವಿ! ಆ ಕ್ಷೇತ್ರದಲ್ಲಿ ಸಕಲ ಪಾಪವನ್ನು ಪರಿಹರಿಸುವ ಸರಸ್ವತೀ ನದಿಯು ಹೇಗುಂಟಾಯಿತು? ಎಲ್ಲಿಂದ ಬಂತು? ಎಂಬುದನ್ನು ಕೇಳು.

೪–೫. ಹಿರಣ್ಯಾ, ವಜ್ರಿಣೀ, ನ್ಯಂಕು, ಕಪಿಲಾ, ಸರಸ್ವತೀ ನದಿಗಳನ್ನು ವಾಡವಾಗ್ನಿಯೊಡನೆ ಐದು ಮಂದಿ ಋಷಿಗಳು ಹಿಂದೆ ಹೇಗೆ ಕರೆದರು? ಎಂಬುದನ್ನು ಕೇಳು.

ಪುರಾ ದೇವಾಸುರೇ ಯುದ್ಧೇ ನಿವೃತ್ತೇ ಸೋಮಕಾರಣಾತ್ ।
ಪಿತಾಮಹಸ್ಯ ವಚನಾತ್ತಾರಾಂ ಚಂದ್ರಃ ಸಮರ್ಪಯತ್ ॥ ೬ ॥
ತತೋ ಯಾತಾಃ ಸುರಾಃ ಸ್ವರ್ಗಂ ಪಶ್ಯಂತೋಽಧೋಮುಖಾ ಮಹೀಂ ।
ದದೃಶುಸ್ತೇ ತತೋ ದೇವಾ ಭೂಮ್ಯಾಂ ಸ್ವರ್ಗಮಿವಾಪರಂ ॥ ೭ ॥
ಆಶ್ರಮಂ ಮುನಿಮುಖ್ಯಸ್ಯ ದಧೀಚೇರ್ಲೋಕವಿಶ್ರುತಂ ।
ಸರ್ವರ್ತುಕುಸುಮೋಪೇತಂ ಪಾದಪೈರುಪಶೋಭಿತಂ ।
ಕೇತಕೀಕುಟಜೋದ್ಭೂತವಕುಲಾಮೋದಮೋದಿತಂ ॥ ೮ ॥
ಏವಂವಿಧಂ ಸಮಾಸಾದ್ಯ ತದಾಽಽಶ್ರಮಪದಂ ಗುರುಃ ।
ಕೌತುಕಾದ್ದ್ರಷ್ಟುಮಾರಬ್ಧಾಃ ಸರ್ವೇ ದೇವಾ ಮನೋರಮಂ ॥ ೯ ॥
ತೇ ಚ ತೀರ್ಥಾಽಶ್ರಮೇ ತಸ್ಮಿನ್ ಯಾನಾನ್ಯುತ್ಸೃಜ್ಯ ಸಂಯುತಾಃ ।
ಪ್ರವೃತ್ತಾಸ್ತಮೃಷಿಂ ದ್ರಷ್ಟುಂ ಪ್ರಾಕೃತಾಃ ಪುರುಷಾ ಯಥಾ ॥ ೧೦ ॥

---

೬. ಹಿಂದೆ ಸೋಮರಸಕ್ಕಾಗಿ ದೇವದಾನವರಿಗೆ ನಡೆದ ಕಾಳಗವು ಮುಗಿಯಲು ಚಂದ್ರನು ಬ್ರಹ್ಮನ ಮಾತಿನಂತೆ ತಾರೆಯನ್ನು ಬೃಹಸ್ಪತಿಗೆ ಒಪ್ಪಿಸಿದನು.

೭-೮. ಬಳಿಕ ದೇವತೆಗಳು ಸ್ವರ್ಗಕ್ಕೆ ಹಿಂತಿರುಗಿ ಹೋಗುತ್ತಿರುವಾಗ ಕೆಳಮುಖರಾಗಿ ಭೂಮಿಯನ್ನು ನೋಡುತ್ತ ಭೂಲೋಕದಲ್ಲಿ ಮತ್ತೊಂದು ಸ್ವರ್ಗದಂತಿರುವುದೂ, ಜಗತ್ಪ್ರಸಿದ್ಧವೂ, ವಸಂತಾದಿ ಸಕಲರ್ತುಗಳ ಹೂವುಗಳಿಂದ ಕೂಡಿ, ವಿವಿಧವೃಕ್ಷಗಳಿಂದ ಪ್ರಕಾಶಗೊಂಡಿರುವುದೂ, ಕೇತಕೀ, ಗಿರಿಮಲ್ಲಿಗೆ, ಬಕುಲವೇ, ಮೊದಲಾದ ನಾನಾಪುಷ್ಪಗಳ ಪರಿಮಳದಿಂದ ಸುವಾಸನೆಗೊಂಡಿರುವುದೂ ಆಗಿರುವ ಸರ್ವಲೋಕಪ್ರಸಿದ್ಧವಾದ ದಧೀಚಿ ಮುನಿವರೇಣ್ಯನ ಆಶ್ರಮವನ್ನು ಕಂಡರು.

೯. ಹೀಗೆ ಆ ಸಕಲ ದೇವತೆಗಳೂ ಮಾಹಾತ್ಮ್ಯದಿಂದಲೂ, ಸೌಂದರ್ಯದಿಂದಲೂ ಕೂಡಿ ರಂಜಿಸುತ್ತಿರುವುದೂ ಮನೋಹರವೂ ವಿಶಾಲವೂ, ಆದ ಆ ಆಶ್ರಮವನ್ನು ಸೇರಿ ಕೌತೂಹಲದಿಂದ ನೋಡಲಾರಂಭಿಸಿದರು.

೧೦. ಅವರು ಪವಿತ್ರವಾದ ಆ ಆಶ್ರಮದಲ್ಲಿ ತಮ್ಮ ವಾಹನಗಳನ್ನು ತ್ಯಜಿಸಿ ಬಂದು ನಿಂತು ಜಿತೇಂದ್ರಿಯರಾಗಿ ಸಾಮಾನ್ಯ ಮನುಷ್ಯರಂತೆಯೆ ಆ ದಧೀಚಿ ಮಹರ್ಷಿಯಸಂದರ್ಶನವನ್ನು ಮಾಡಿದರು.

ದೃಷ್ಟವಂತಃ ಸುರಾಃ ಸರ್ವೇ ಪಿತಾಮಹಮಿವಾಽಪರಂ ।
ತತಸ್ತ ಋಷಿಣಾ ಸರ್ವೇ ಪಾದ್ಯಾರ್ಘ್ಯಾದಿಭಿರರ್ಚಿತಾಃ ॥ ೧೧ ॥
ಯಥೋಕ್ತಮಾಸನಂ ಭೇಜುಃ ಸರ್ವೇ ದೇವಾಃ ಸವಾಸವಾಃ ।
ತೇಷಾಂ ಮಧ್ಯೇ ಸಮುತ್ಥಾಯ ಶಕ್ರಃ ಪ್ರೋವಾಚ ತಂ ಮುನಿಂ ॥ ೧೨ ॥
ಆಯುಧಾನಿ ವಿಮುಚ್ಯಾಗ್ರೇ ಭವಾನ್ ಗೃಹ್ಣಾತ್ವಿಮಾನಿ ಹಿ ।
ತನ್ನಿಶಮ್ಯ ವಚಃ ಪ್ರಾಹ ದಧೀಚಿಃ ಪಾಕಶಾಸನಂ ॥ ೧೩ ॥
ಮುಕ್ತ್ವಾಽಸ್ತ್ರಾಣಿ ಮಮಾಭ್ಯಾಶೇ ಯೂಯಂ ಯಾತ ತ್ರಿವಿಷ್ಟಪಂ ।
ತಂ ಶಕ್ರಃ ಪ್ರಾಹ ಚೈತಾನಿ ಕಾರ್ಯಕಾಲೇ ಹ್ಯುಪಸ್ಥಿತೇ ॥ ೧೪ ॥
ದೇಯಾನಿ ತೇ ಪುನಃ ಶತ್ರೂನಭಿಜೇಷ್ಯಾಮಹೇ ರಣೇ ।
ಪುನಃ ಪುನಸ್ತತಃ ಶಕ್ರಃ ಸಂದಿಶ್ಯ ಮುನಿಸತ್ತಮಂ ॥ ೧೫ ॥
ಅಸ್ಮಾಕಮೇವ ದೇಯಾನಿ ನ ಚಾಽನ್ಯಸ್ಯ ತ್ವಯಾ ಮುನೇ ।
ಬಾಢಮಿತ್ಯುದಿತೇ ಶಕ್ರಮುಕ್ತವಾನ್ ಮುನಿಸತ್ತಮಃ ॥ ೧೬ ॥
ದಾಸ್ಯಾಮಿ ತೇ ಸಮಸ್ತಾನಿ ಯುದ್ಧಕಾಲೇ ವಿಶೇಷತಃ ।
ನಾಽಸ್ಯ ಮಿಥ್ಯಾ ಭವೇದ್ವಾಕ್ಯಮಿತಿ ಮತ್ವಾ ಶಚೀಪತಿಃ ।
ಮುಕ್ತ್ವಾಽಸ್ತ್ರಾಣಿ ತದಭ್ಯಾಶೇ ಪುನಃ ಸ್ವರ್ಗಂ ಗತಸ್ತದಾ ॥ ೧೭ ॥

೧೧–೧೭. ಆಗ ಸಕಲ ದೇವತೆಗಳು ಸಹ ಮತ್ತೊಬ್ಬ ಚತುರ್ಮುಖನೋ ಎಂಬಂತಿರುವ ಆ ದಧೀಚಿಯನ್ನು ಕಂಡು ಅವನಿತ್ತ ಅರ್ಘ್ಯಪಾದ್ಯಾದಿಗಳಿಂದ ಪೂಜಿತರಾಗಿ ಯಥೋಚಿತವಾದ ಆಸನಗಳಲ್ಲಿ ಕುಳಿತರು. ಆಗ ಅವರ ಮಧ್ಯದಲ್ಲಿದ್ದ ದೇವೇಂದ್ರನೆದ್ದು ಆಯುಧಗಳೆಲ್ಲವನ್ನು ಕಳಚಿ ಮುಂದಿಟ್ಟು ಆ ಮುನಿಯನ್ನು ಕುರಿತು "ನೀನು ಈ ನಮ್ಮ ಆಯುಧಗಳೆಲ್ಲವನ್ನು ತೆಗೆದುಕೊ" ಎಂದನು. ಆಗ ದಧೀಚಿಯು ಆ ದೇವೇಂದ್ರನನ್ನು ಕುರಿತು, " ನೀವು ನನ್ನಬಳಿ ಈ ಆಯುಧಗಳೆಲ್ಲವನ್ನೂ ಬಿಟ್ಟು ಸ್ವರ್ಗಲೋಕಕ್ಕೆ ನಿಶ್ಚಿಂತರಾಗಿ ತೆರಳಿರಿ " ಎನ್ನಲು ದೇವೇಂದ್ರನು, ಎಲೈ ಮುನಿಯೆ ! ಕಾರ್ಯಕಾಲವು ಸನ್ನಿಹಿತವಾದಾಗ ನೀನು ಇವುಗಳನ್ನು ನಮಗೇ ಮರಳಿ ಕೊಡಬೇಕು. ನಾನು ಶತ್ರುಗಳನ್ನು ಯುದ್ಧದಲ್ಲಿ ಜಯಿಸುವೆನು. ಬೇರೆ ಯಾರಿಗೂ ಕೊಡಬಾರದು ". ಎಂದು ಪುನಃಪುನಃ ಒತ್ತಿ ಹೇಳಿದನು. ಆ ಮುನಿಯು, " ಆಗಲಿ ಯುದ್ಧಕಾಲದಲ್ಲಿ ನಿನಗೇ ಎಲ್ಲವನ್ನೂ ಕೊಡುವೆನು " ಎಂದನು. ಶಚೀರಮಣನು ಈ ಮಹರ್ಷಿಯ ಮಾತು ಸುಳ್ಳಾಗಲಾರದೆಂದರಿತು ಅವನ ಹತ್ತಿರ ಅಸ್ತ್ರಗಳನ್ನಿರಿಸಿ ಸ್ವರ್ಗಕ್ಕೆ ತೆರಳಿದನು.

ಅಸ್ತ್ರಾರ್ಪಣಂ ಯಃ ಪ್ರಯತಃ ಪ್ರಯತ್ನಾ
ಚ್ಛೃಣೋತಿ ರಾಜಾ ಭುವಿ ಭಾವಿತಾತ್ಮಾ ।
ಸೋಽಭ್ಯೇತಿ ಯುದ್ಧೇ ವಿಜಯಂ ಪರಂ ಹಿ
ಸುತಾಂಶ್ಚ ಧರ್ಮಾರ್ಥಯಶೋಭಿರಾಮಾಃ ॥ ೧೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ವಡವಾನಲೋತ್ಪತ್ತಿ ವೃತ್ತಾಂತೇ ಸರ್ವದೇವಕೃತ ಶಸ್ತ್ರಸಮರ್ಪಣ ವರ್ಣನಂ ನಾಮ

॥ ಏಕತ್ರಿಂಶೋಽಧ್ಯಾಯಃ ॥

---

೧೮. ಪ್ರಪಂಚದಲ್ಲಿ ಅರಸನು ಶುದ್ಧನಾಗಿ ಪ್ರಯತ್ನದಿಂದ ಈ ಅಸ್ತ್ರಾರ್ಪಣದ ಕಥೆಯನ್ನು ಕೇಳಿದರೆ ಸಮರದಲ್ಲಿ ವಿಜಯವನ್ನೂ, ಧರ್ಮ, ಅರ್ಥ, ಕೀರ್ತಿಗಳಿಂದ ಮನೋಹರರಾದ ಮಕ್ಕಳನ್ನೂ ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ ಸೋಮೇಶ್ವರ ಮಾಹಾತ್ಮ್ಯವರ್ಣನದಲ್ಲಿ ವಡವಾನಲೋತ್ಪತ್ತಿವೃತ್ತಾಂತ–ಸರ್ವದೇವಕೃತಶಸ್ತ್ರಮರ್ಪಣವರ್ಣನವೆಂಬ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾತ್ರಿಂಶೋಽಧ್ಯಾಯಃ

ವಡವಾನಲವಂಚನ ವೃತ್ತಾಂತ ವರ್ಣನಂ

ಈಶ್ವರ ಉವಾಚ:—

ತತಸ್ತೇಷು ಪ್ರಯಾತೇಷು ದೇವದೇವೇಷ್ವಸೌ ಮುನಿಃ ।
ಶತವರ್ಷಾಣಿ ತತ್ರಸ್ಥಸ್ತಪಸೇ ಪ್ರಸ್ಥಿತೋ ದ್ವಿಜಃ ॥ ೧ ॥
ಆಶ್ರಮಾದುತ್ತರಾತ್ತಸ್ಮಾದ್ದಿವ್ಯಾಂ ದಿಶಮಥೋತ್ತರಾಂ ।
ಸುಭದ್ರಾಽಪಿ ಮಹಾಭಾಗ ತಸ್ಯ ಯಾ ಪರಿಚಾರಿಕಾ ॥ ೨ ॥
ಅಸ್ತ್ರಾದಾನೇಽಸಮರ್ಥಾ ಸಾ ಋಷಿಂ ಪ್ರೋವಾಚ ಭಾಮಿನೀ ।
ನಾಽಹಂ ನೇತುಂ ಸಮರ್ಥಾಽಸ್ಮಿ ಶಸ್ತ್ರಾಣ್ಯಾಲಭ್ಯ ಪಾಣಿನಾ ॥ ೩ ॥
ಜಲೇನ ಸಹ ತದ್ವೀರ್ಯಂ ಪೀತವಾನ್ ಸ ಋಷಿಸ್ತತಃ ।
ಆತ್ಮಸಂಸ್ಥಾನಿ ಸರ್ವಾಣಿ ದಿವ್ಯಾನ್ಯಸ್ತ್ರಾಣ್ಯಸೌ ಮುನಿಃ ।
ಕಾರಯಿತ್ವೋತ್ತರಾಮಾಶಾಂ ಜಗಾಮ ತಪಸಾಂ ನಿಧಿಃ ॥ ೪ ॥
ಗಂಗಾಧರಂ ಶುಕ್ಲತನುಂ ಸರ್ಪೈರಾಕೀರ್ಣವಿಗ್ರಹಂ ।
ಶಿವವತ್ಸುಖದಂ ಪುಂಸಾಮಪಶ್ಯತ್ಸ ಹಿಮಾಚಲಂ ॥ ೫ ॥

ಕನ್ನಡದ ಅನುವಾದ

ವಡವಾನಲವಂಚನವೃತ್ತಾಂತವರ್ಣನ

೧. ಈಶ್ವರನು ಹೇಳುತ್ತಾನೆ :—ತರುವಾಯ ಆ ದೇವತೆಗಳು ಹೊರಟು ಹೋಗಲು ಈ ದಧೀಚಿಯು ನೂರುವರ್ಷಕಾಲ ಅಲ್ಲಿದ್ದು ಬಳಿಕ ತಪಸ್ಸಿಗಾಗಿ ಹೊರಟನು.

೨-೩. ಆಗ ಅವನ ಸೇವಕಳಾದ ಸುಭದ್ರೆಯೆಂಬವಳು ಆ ಆಶ್ರಮದಿಂದ ಉತ್ತರ ದಿಕ್ಕಿಗೆ ಆ ದೇವತೆಗಳ ಅಸ್ತ್ರಗಳನ್ನು ತೆಗೆದುಕೊಂಡುಹೋಗಲು ಶಕ್ತಳಾಗದೆ ದಧೀಚಿಯನ್ನು ಕುರಿತು, "ನಾನು ಕೈಯಿಂದ ಈ ಶಸ್ತ್ರಗಳನ್ನು ತೆಗೆದುಕೊಂಡು ಹೋಗಲು ಸಮರ್ಥಳಲ್ಲ" ಎಂದಳು.

೪. ಬಳಿಕ ಆ ಮುನಿಯು ನೀರಿನೊಡನೆ ಆ ಅಸ್ತ್ರಗಳ ಬಲವನ್ನು ಪೀರಿ ಅವುಗಳನ್ನೆಲ್ಲ ತನ್ನಲ್ಲಿಯೇ ಇರುವಂತೆ ಮಾಡಿ ಉತ್ತರದಿಕ್ಕಿಗೆ ಪ್ರಮಾಣಮಾಡಿದನು.

೫. ಅವನು ಅಲ್ಲಿ ಗಂಗೆಯನ್ನು ಹೊತ್ತಿರುವುದೂ, ಶುಕ್ಲದೇಹವುಳ್ಳುದೂ. ಸರ್ಪಗಳಿಂದ ವ್ಯಾಪ್ತವಾದ ಶರೀರವುಳ್ಳುದೂ ಆಗಿ ಮಹೇಶ್ವರನಂತೆ ಸೌಖ್ಯವನ್ನೀಯುವ ಹಿಮಾಚಲವನ್ನು ಕಂಡನು.

ತಥಾಽಽಶ್ರಮಂ ದದರ್ಶೋಚ್ಚೈರಶ್ವತ್ಥೈಃ ಪರಿಪಾಲಿತಂ ।
ಚಂದ್ರಭಾಗೋಪಕಂಠಸ್ಥಂ ಸಮಿತ್ಪುಷ್ಪಕುಶಾನ್ವಿತಂ ॥ ೬ ॥
ಸ ತಸ್ಮಿನ್ ಮುನಿಶಾರ್ದೂಲೋ ಹ್ಯವಸನ್ಮುನಿಭಿಃ ಸಹ ।
ಸುಭದ್ರಯಾ ಚ ಸಂಯುಕ್ತಶ್ಚಂದ್ರಶ್ಚಂದ್ರಿಕಯಾ ಯಥಾ ॥ ೭ ॥
ಏಕದಾ ವಸತಸ್ತಸ್ಯ ಸುಭದ್ರಾ ಪರಿಚಾರಿಕಾ ।
ಸ್ನಾನಾರ್ಥಂ ಯಾತುಮಾರಬ್ಧಾ ಚತುರ್ಥೇಽಹ್ನಿ ರಜಸ್ವಲಾ ॥ ೮ ॥
ವ್ರಜಂತ್ಯಾ ಚ ತಯಾ ದೃಷ್ಟಂ ಕೌಪೀನಾಚ್ಛಾದನಂ ಪುನಃ ॥
ಪರಿತ್ಯಕ್ತಂ ವಿದಿತ್ವೈವಂ ದೈವಯೋಗಾದ್ಗೃಹಾಣ ಸಾ ॥ ೯ ॥
ಪರಿಧಾಯ ಪುನಃ ಸಾ ತು ಕೌಪೀನಂ ರೇತಸಾ ಯುತಂ ।
ಏಕಾಂತೇ ಸ್ನಾತುಮಾರಬ್ಧಾ ಜಲಾಭ್ಯಾಶೇ ಯಥಾಸುಖಂ ॥ ೧೦ ॥
ತತೋ ದೇವೀ ಯಥಾಕಾಮಮಕಸ್ಮಾದ್ವೀಕ್ಷತೇ ಹಿ ಸಾ ।
ಸ್ವೋದರಸ್ಥಂ ಸಮುತ್ಪನ್ನಂ ಗರ್ಭಂ ಗುರುಭರಾಲಸಾ ॥ ೧೧ ॥
ಶೋಚಯಿತ್ವಾಽಽತ್ಮನಾತ್ಮಾನಮಗರ್ಭಾಽಹಮಿಹಾಽಽಗತಾ ।
ತತ್ಕೇನ ಮಂದಭಾಗಿನ್ಯಾ ಮಮೈವಂ ದೂಷಣಂ ಕೃತಂ ॥ ೧೨ ॥

---

೬. ಅಂತೆಯೇ ಎತ್ತರವಾದ ಅಶ್ವತ್ಥವೃಕ್ಷಗಳಿಂದ ಆವೃತವಾದುದೂ, ಚಂದ್ರಭಾಗಾನದಿಯ ಹತ್ತಿರವಿರುವುದೂ, ಕಟ್ಟಿಗೆ, ಹೂವು, ದರ್ಭೆಗಳಿಂದ ಕೂಡಿರುವುದೂ ಆಗಿರುವ ಆಶ್ರಮವನ್ನೀಕ್ಷಿಸಿದನು.

೭. ಅವನು ಆ ಆಶ್ರಮದಲ್ಲಿ ಮುನಿಗಳೊಡನೆಯೂ, ಬೆಳದಿಂಗಳಿಂದ ಸಹಿತನಾದ ಚಂದ್ರನಂತೆ ಸುಭದ್ರೆಯೊಡನೆಯೂ ವಾಸಿಸಿದನು.

೮. ಅವನು ಅಲ್ಲಿ ಹೀಗೆ ವಾಸಮಾಡುತ್ತಿರಲು ಆ ಮುನಿಯ ಸೇವಕಿಯಾದ ಸುಭದ್ರೆ ರಜಸ್ವಲೆಯಾಗಿದ್ದು ನಾಲ್ಕನೆಯದಿನ ಸ್ನಾನಕ್ಕಾಗಿ ಹೊರಟಳು.

೯–೧೦. ಅವಳು ದಾರಿಯಲ್ಲಿ ಹೋಗುತ್ತಿರುವಾಗ ಅಲ್ಲಿ ಬಿದ್ದಿರುವ ರೇತಸ್ಸಹಿತವಾದಕೌಪೀನವನ್ನು ದೈವವಶದಿಂದ ಕಂಡು ಅದನ್ನು ತೆಗೆದುಕೊಂಡು ತಾನು ಧರಿಸಿ ನ..ನ ಹತ್ತಿರ ರಹಸ್ಯ ಸ್ಥಳದಲ್ಲಿ ಸುಖವಾಗಿ ಸ್ನಾನಮಾಡಲಾರಂಭಿಸಿದಳು.

೧೧. ಬಳಿಕ ಆ ಸುಭದ್ರೆಯು ಅತ್ಯಂತ ಭಾರದಿಂದ ಅಲಸಳಾಗಿ ತನ್ನ ಹೊಟ್ಟೆಯಲ್ಲಿರುವ ಗರ್ಭವನ್ನು ಅಕಸ್ಮಾತ್ತಾಗಿ ತಿಳಿದಳು.

೧೨. ಅವಳು ತನ್ನಲ್ಲಿಯೇ ದುಃಖಿಸುತ್ತ "ನಾನಿಲ್ಲಿಗೆ ಗರ್ಭಿಣಿಯಾಗದೆ ಬಂದಿರುವೆನು. ಆದುದರಿಂದ ಈಗ ದುರ್ಭಾಗ್ಯಳಾದ ನನ್ನನ್ನು ಯಾವನು ಕೆಡಿಸಿರುವನು" ? ಎಂದುಕೊಂಡಳು.

ಲಜ್ಜಾಽಭಿಭೂತಾ ಸಾ ತತ್ರ ಪ್ರವಿಶ್ಯಾಽಶ್ವತ್ಥವಾಟಿಕಾಂ ।
ತತ್ರ ತಂ ಸುಷುವೇ ಗರ್ಭಮವಿಜ್ಞಾಯ ಕುತೋ ಹ್ಯಯಂ ॥ ೧೩ ॥
ಪುನರೇವ ಹಿ ಸಾ ಸ್ನಾತ್ವಾ ಅವಿಜ್ಞಾಯಾತ್ಮದುಷ್ಕೃತಂ ।
ಶಾಪಂ ದಾತುಂ ಸಮಾರಬ್ಧಾ ಗರ್ಭಕರ್ತರಿ ದುಃಸಹಂ ॥ ೧೪ ॥
ಜ್ಞಾನಾದ್ವಾ ಯದಿ ವಾಽಜ್ಞಾನಾದ್ಯೇನೇಯಂ ದೂಷಣಾ ಕೃತಾ ।
ಸೋಽದ್ಯೈವ ಪಂಚತಾಂ ಯಾತು ಯದ್ಯಹಂ ಸ್ಯಾಂ ಪತಿವ್ರತಾ ॥ ೧೫ ॥
ಯದ್ಯಹಂ ಮನಸಾ ವಾಽಪಿ ಕಾಮಯೇ ನಾಽಪರಂ ಪತಿಂ ।
ಏತೇನ ಸತ್ಯವಾಕ್ಯೇನ ಯಾತು ಜಾರಃ ಸ್ವಯಂ ಕ್ಷಯಂ ॥ ೧೬ ॥
ಏವಂ ಶಪ್ತ್ವಾ ತು ತಂ ದೇವೀ ಹ್ಯಜ್ಞಾತ್ವಾ ಗರ್ಭಕಾರಿಣಂ ।
ಪುನರ್ಯಾತುಂ ಸಮಾರಬ್ಧಾ ತದ್ದಧೀಚಿನಿಕೇತನಂ ॥ ೧೭ ॥
ತತ್ರ ಚಾಽರ್ಕಪ್ರತೀಕಾಶಂ ಗರ್ಭಮುತ್ಸೃಜ್ಯ ಸಾ ತದಾ ।
ಪ್ರಾಪ್ತಾ ತಪೋವನಂ ರಮ್ಯಂ ಯಾತ್ರಾಽಸೌ ಮುನಿಪುಂಗವಃ ॥ ೧೮ ॥
ಅತ್ರಾಂತರೇ ಸರ್ವದೇವಾ ಲೋಕಪಾಲಾ ಮಹಾಬಲಾಃ ।
ಅಸ್ತ್ರಾಣಾಂ ಕಾರಣಾರ್ಥಾಯ ಮುನೇರಾಶ್ರಮಮಾಗತಾಃ ॥ ೧೯ ॥

---

೧೩. ಹೀಗೆ ಲಜ್ಜಿತಳಾದ ಅವಳು ಅಲ್ಲಿರುವ ಅರಳಿಮರಗಳ ವನವನ್ನು ಹೊಕ್ಕು ಅಲ್ಲಿ ಹೇಗಾಯಿತೆಂದರಿಯದ ಆ ಗರ್ಭವನ್ನು ಹಡೆದಳು.

೧೪. ಮರಳಿ ಮಿಂದು ಅವಳು ತನ್ನ ಪಾಪವನ್ನರಿಯದೆ ಗರ್ಭವನ್ನು ಮಾಡಿದವನಿಗೆ ಸಹಿಸಲಾಗದ ಶಾಪವನ್ನು ನೀಡಲು ತೊಡಗಿದಳು.

೧೫. "ನಾನು ಪತಿವ್ರತೆಯಾಗಿದ್ದರೆ ತಿಳಿದೊ, ತಿಳಿಯದೆಯೊ ನನ್ನನ್ನು ಕೆಡಿಸಿದ ನೀಚನು ಈಗಲೆ ಮಡಿಯಲಿ.

೧೬. ನಾನು ಮನಸ್ಸಿನಿಂದಲೂ ಇತರನನ್ನು ಕಾಮಿಸದವಳಾಗಿದ್ದರೆ ಈ ನನ್ನ ಸತ್ಯವಚನದಿಂದ ಆ ಜಾರನು ತಾನಾಗಿಯೇ ಸಾಯಲಿ".

೧೭. ಆ ಸುಭದ್ರೆಯು ಗರ್ಭಕ್ಕೆ ಕಾರಣನಾದವನನ್ನರಿಯದೆ ಅವನನ್ನು ಹೀಗೆ ಶಪಿಸಿ ಮರಳಿ ಆ ದಧೀಚಿಯ ಆಶ್ರಮಕ್ಕೆ ಹೊರಟಳು.

೧೮. ಅವಳು ಆ ಅಶ್ವತ್ಥವೃಕ್ಷದಡಿಯಲ್ಲಿ ಸೂರ್ಯನಂತಿರುವ ಗರ್ಭವನ್ನು ತ್ಯಜಿಸಿ ದಧೀಚಿಮುನಿಯಿರುವ ತಪೋವನಕ್ಕೆ ಬಂದಳು.

೧೯. ಈ ಮಧ್ಯದಲ್ಲಿ ಲೋಕಪಾಲಕರಾದ ಸಮಸ್ತದೇವತೆಗಳೂ ಅಸ್ತ್ರಗಳನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಆ ದಧೀಚಿಯ ಆಶ್ರಮಕ್ಕೆ ಬಂದರು.

ಉವಾಚ ತಂ ಮುನಿಂ ಶಕ್ರೋ ನ್ಯಾಸೋ ಯಸ್ತತ್ರ ಸುವ್ರತ ।
ದತ್ತೋಽಸ್ಮಾಭಿಸ್ತು ಶಸ್ತ್ರಾಣಾಂ ತಾನಿ ಕ್ಷಿಪ್ರಂ ಪ್ರಯಚ್ಛ ನಃ ॥ ೨೦ ॥
ಋಷಿರಾಹ ಪುರಾ ಯತ್ರ ಸ್ಥಾಪಿತಾನಿ ಮಮಾಶ್ರಮೇ ।
ತತ್ರೈವ ತಾನಿ ತಿಷ್ಠಂತಿ ನ ಚಾಽಽನೀತಾನಿ ವಾಸವ ॥ ೨೧ ॥
ಯತ್ತು ತೇಷಾಂ ಬಲಂ ವೀರ್ಯಂ ಸಂಗ್ರಾಮೇ ಶತ್ರುಸೂದನ ।
ತನ್ಮಯಾ ಪೀತಮಖಿಲಂ ಸಹ ತೋಯೇನ ವಾಸವ ॥ ೨೨ ॥
ಏವಂ ಸ್ಥಿತೇ ಮಯಾಽಸ್ತ್ರಾಣಿ ಯದಿ ದೇಯಾನಿ ತೇಽನಘ ।
ತತೋಽಸ್ಥೀನಿ ಪ್ರಯಚ್ಛಾಮಿ ತದಾಕಾರಾಣಿ ಸುವ್ರತ ॥ ೨೩ ॥
ಏವಮುಕ್ತಃ ಸಹಸ್ರಾಕ್ಷಸ್ತಮಾಹ ಮುನಿಸತ್ತಮಂ ।
ನಾನ್ಯೇಷು ತದ್ಬಲಂ ರೌದ್ರಂ ಯತ್ತು ತೇಷು ವ್ಯವಸ್ಥಿತಂ ॥ ೨೪ ॥
ಯಸ್ಮಾತ್ತೇಷು ವಿನಿಕ್ಷಿಪ್ಯ ಸಹಸ್ರಾಂಶಂ ಸ್ವತೇಜಸಾಂ ।
ಅಸ್ಮಾಕಂ ದತ್ತವಾನ್ರುದ್ರೋ ರಕ್ಷಾರ್ಥಂ ಜಗತಾಂ ಶಿವಃ ॥ ೨೫ ॥
ತದ್ವಯಂ ತಾನಿ ಸರ್ವಾಣಿ ಗೃಹೀತ್ವಾ ಚ ವ್ಯವಸ್ಥಿತಾಃ ।
ಲೋಕಸ್ಯ ರಕ್ಷಣಾರ್ಥಾಯ ಸಂಜ್ಞೇಯಂ ತೇನ ಲೋಕಪಾಃ ॥ ೨೬ ॥

---

೨೦. ದೇವೇಂದ್ರನು ಆ ಮುನಿಯನ್ನು "ಕುರಿತು, ನಾವು ನಿನ್ನಲ್ಲಿ ನ್ಯಾಸವಾಗಿ ಟ್ಟಿರುವ ಆ ಆಯುಧಗಳನ್ನು ಶೀಘ್ರವಾಗಿ ನಮಗೆ ಕೊಡು" ಎಂದನು.

೨೧. ಆಗ ದಧೀಚಿಯು ಇಂತೆಂದನು. "ವಾಸವ! ನೀವು ಹಿಂದೆ ಎಲ್ಲಿ ಆ ಆಯುಧಗಳನ್ನಿಟ್ಟಿರುವಿರೊ ಅಲ್ಲಿಯೇ ಅವುಗಳಿರುವುವು. ನಾನು ಅವುಗಳನ್ನು ತರಲಿಲ್ಲ.

೨೨. ಆದರೆ ಅವುಗಳ ವೀರ್ಯವನ್ನೆಲ್ಲ ನಾನು ನೀರಿನೊಡನೆ ಕುಡಿದಿರುವೆನು.

೨೩. ನಿರ್ದುಷ್ಟನಾದ ಶಕ್ರನೆ! ಹೀಗಿರಲು ಆ ಅಸ್ತ್ರಗಳನ್ನು ನಾನು ನಿನಗೆ ಕೊಡಬೇಕಾದರೆ ಅವುಗಳ ಆಕಾರದ ನನ್ನ ಮೂಳೆಗಳನ್ನು ಕೊಡುವೆನು".

೨೪. ಮುನಿಯು ಹೀಗೆನ್ನಲು ಇಂದ್ರನು ಇಂತೆಂದನು. "ಅವುಗಳಲ್ಲಿರುವ ಭಯಂಕರ ಬಲವು, ಇತರ ಯಾವುದರಲ್ಲಿಯೂ ಇರುವುದಿಲ್ಲ.

೨೫. ಮಹೇಶ್ವರನು ತನ್ನ ತೇಜಸ್ಸುಗಳ ಸಾವಿರ ಭಾಗವನ್ನು ಆ ಆಯುಧಗಳಲ್ಲಿರಿಸಿ ಪ್ರಪಂಚದ ರಕ್ಷಣೆಗಾಗಿ ಅವುಗಳನ್ನು ನಮಗೆ ಕೊಟ್ಟಿರುವನು.

೨೬. ನಾವು ಅವುಗಳನ್ನೆಲ್ಲ ತೆಗೆದುಕೊಂಡು ಲೋಕರಕ್ಷಣೆಗಾಗಿರುವೆವು. ಆದರಿಂದ ನಮಗೆ ಲೋಕಪಾಲಕರೆಂಬ ಹೆಸರಾಯಿತು.

ಅಮೀಷಾಮಪಿ ತಸ್ತ್ರಾಣಾಮುತ್ತಮಂ ವಜ್ರಮಿಷ್ಯತೇ ।
ತದ್ಧಾರಣಾದ್ಯತೋಽಸ್ಮಾಕಂ ದೇವರಾಜತ್ವಮಿಷ್ಯತೇ ॥ ೨೭ ॥
ವಜ್ರಾದಪ್ಯುತ್ತಮಂ ಚಕ್ರಂ ಯತ್ತದ್ವಿಷ್ಣುಪರಿಗ್ರಹೇ ।
ದೈತ್ಯದಾನವಸಂಘಾನಾಂ ತದಾಯತ್ತೋ ಜಯೋಽಭವತ್ ॥ ೨೮ ॥
ತಸ್ಮಾತ್ತಾನಿ ಯಥಾಽಸ್ಮಾಭಿಃ ಪ್ರಾಪ್ಯಂತೇ ಮುನಿಸತ್ತಮ ।
ತಥಾ ಕುರುಷ್ವ ಸಂಚಿಂತ್ಯ ಕಾರ್ಯಂ ಕಾರ್ಯವಿದಾಂ ವರ ॥ ೨೯ ॥
ಏವಮುಕ್ತೇ ಮುನಿಃ ಪ್ರಾಹ ತಂ ಶಕ್ರಂ ಪುರತಃ ಸ್ಥಿತಂ ।
ತತ್ಪ್ರಾಪ್ತ್ಯರ್ಥಮುಪಾಯಂ ತು ಕಥಯಾಮಿ ತವಾಽಪರಂ ॥ ೩೦ ॥
ಯಾನೇತಾನಿ ಮಮಾಽಸ್ಥೀನಿ ಯೂಯಂ ತೈಸ್ತಾನಿ ಸರ್ವಶಃ ।
ನಿರ್ಮಾಪಯಧ್ವಂ ಶಸ್ತ್ರಾಣಿ ತದಾಕಾರಾಣಿ ಸರ್ವಶಃ ॥ ೩೧ ॥
ಏತಾನಿ ತತ್ಸಮುತ್ಥಾನಿ ತೇಷಾಮಪ್ಯಧಿಕಂ ಬಲಂ ।
ಸಾಧಯಿಷ್ಯಾಮಿ ಭವತಾಂ ಸಂಗ್ರಾಮೇ ಯನ್ಮಮೇಹಿತಂ ॥ ೩೨ ॥
ತಮುವಾಚ ತತಃ ಶಕ್ರೋ ದಧೀಚಿಂ ತಪಸೋ ನಿಧಿಂ ।
ಪ್ರಾಣಹಾರಂ ಪ್ರಕರ್ತುಂ ತೇ ನಾಽಹಂ ಶಕ್ತೋ ಯಮಿಚ್ಛತಿ ॥ ೩೩ ॥

---

೨೭. ಈ ಅಸ್ತ್ರಗಳಲ್ಲಿ ವಜ್ರಾಯುಧವು ಉತ್ತಮವಾದುದು. ನಾನು ಇದನ್ನು ಹಿಡಿದಿರುವುದರಿಂದ ದೇವತೆಗಳಿಗೊಡೆಯನಾಗಿರುವೆನು.

೨೮. ವಜ್ರಕ್ಕಿಂತಲೂ ಉತ್ತಮವಾದ ಈ ಚಕ್ರಾಯುಧವನ್ನು ವಿಷ್ಣುವು ಹಿಡಿದಿರುವುದರಿಂದ ದೈತ್ಯದಾನವರ ಜಯವು ಅವನ ಅಧೀನವಾಯಿತು.

೨೯. ಕಾರ್ಯವನ್ನರಿತವರಲ್ಲಿ ಶ್ರೇಷ್ಠನಾದ ಮುನಿವರ್ಯನೆ ! ಆದುದರಿಂದ ಆ ಆಯುಧಗಳು ನಮಗೆ ದೊರೆಯುವಂತೆ ಮಾಡು".

೩೯. ಇಂದ್ರನು ಹೀಗೆನ್ನಲು ಮುನಿಯು ಮುಂದಿರುವ ಅವನನ್ನು ಕುರಿತು ಇಂತೆಂದನು. "ಅವುಗಳನ್ನು ಪಡೆಯುವುದಕ್ಕೆ ನಿನಗೆ ಮತ್ತೊಂದು ಯುಕ್ತಿಯನ್ನು ಹೇಳುವೆನು.

೩೧. ನೀವು ಈ ನನ್ನ ಮೂಳೆಗಳನ್ನೆಲ್ಲ ಆ ಅಸ್ತ್ರಗಳ ಆಕಾರದ ಆಯುಧಗಳನ್ನಾಗಿ ನಿರ್ಮಿಸಿರಿ.

೩೨. ಅವುಗಳಿಂದುಂಟಾದ ಈ ಮೂಳೆಗಳು ಆ ಅಸ್ತ್ರಗಳಿಗಿಂತ ಹೆಚ್ಚು ಬಲವುಳ್ಳವಾಗಿರುವುವು. ಇವು ಯುದ್ಧದಲ್ಲಿ ನನ್ನ ಇಷ್ಟದಂತ ನಿಮ್ಮ ಕಾರ್ಯಗಳನ್ನು ಸಾಧಿಸುವುವು".

೩೩. ಬಳಿಕ ಇಂದ್ರನು ತಪೋಧನನಾದ ಆ ದಧೀಚಿಯನ್ನು ಕುರಿತು ಹೀಗೆಂದನು. "ನಿನ್ನಿಷ್ಟದಂತೆ ನಿನ್ನ ಪ್ರಾಣವನ್ನು ಹರಿಸಲು ನಾನು ಸಮರ್ಥನಲ್ಲ.

ನ ಚಾಮೃತಸ್ಯ ತೇಽಸ್ಥೀನಿ ಗ್ರಹೀತುಂ ಶಕ್ತಿರಸ್ತಿ ನಃ ।
ತಸ್ಮಾತ್ಸರ್ವಂ ಸಮಾಲೋಚ್ಯ ಯತ್ಕರ್ತವ್ಯಂ ತದುಚ್ಯತಾಂ ॥ ೩೪ ॥
ಏವಮುಕ್ತೋ ಮುನಿಃ ಪ್ರಾಹ ಏತದೇವ ಕಲೇವರಂ ।
ತ್ಯಜಾಮಿ ಸ್ವಯಮೇವಾಽಹಂ ದೇವಕಾರ್ಯಾರ್ಥಸಿದ್ಧಯೇ ॥ ೩೫ ॥
ಅಧ್ರುವಂ ಸರ್ವದುಃಖಾನಾಮಾಶ್ರಯಂ ಸುಜುಗುಪ್ಸಿತಂ ।
ಯದಾ ಹ್ಯೇತತ್ತದಾಯುಕ್ತಃ ಪರಿತ್ಯಾಗೋಽಸ್ಯ ಸಾಂಪ್ರತಂ ॥ ೩೬ ॥
ಅಸ್ಯ ತ್ಯಾಗೇನ ಮೇ ದುಃಖಂ ಸಂಸಾರೋತ್ಥಂ ನ ಜಾಯತೇ ।
ಯಸ್ಮಾಜ್ಜನ್ಮಾಂತರೇ ಜಾತೋ ಮೃತೋಽಪಿ ಹಿ ಭವೇತ್ಪುನಃ ॥ ೩೭ ॥
ಭಾರ್ಯಾ ಭಗಿನೀ ದುಹಿತಾ ಸ್ವಕರ್ಮಫಲಯೋಜನಾತ್ ।
ಜಾತಾ ತೇನೈವ ಸಂಸಾರೇ ರತಿಕಾರ್ಯೇ ಜುಗುಪ್ಸಿತಾ ॥ ೩೮ ॥
ಯಸ್ಮಾಚ್ಚ ಸ್ವಯಮೇವೈತದ್ವಪುಸ್ತ್ಯಜತಿ ವೈ ಧ್ರುವಂ ।
ತಸ್ಮಾದಸ್ಯ ಪರಿತ್ಯಾಗೋ ವರಃ ಕಾರ್ಯೋಽಚಿರಾತ್ಸ್ವಯಂ ॥ ೩೯ ॥
ಏವಂ ಪುರಂದರಸ್ಯಾಗ್ರೇ ಸಂಕೀರ್ತ್ಯ ಸ ಮಹಾಮುನಿಃ ।
ದಧೀಚಿಃ ಪ್ರಾಣಸಂಹಾರಂ ಕೃತವಾನ್ ಸತ್ವರಂ ತದಾ ॥ ೪೦ ॥

---

೩೪. ನೀನು ಮಡಿಯದೆ ನಿನ್ನ ಮೂಳೆಗಳನ್ನು ತೆಗೆದುಕೊಳ್ಳಲು ನಮಗೆ ಶಕ್ತಿಯಿಲ್ಲ. ಆದುದರಿಂದ ಎಲ್ಲವನ್ನೂ ಆಲೋಚಿಸಿ ಮಾಡತಕ್ಕ ಕಾರ್ಯವನ್ನು ನನಗೆ ಹೇಳು".

೩೫. ದೇವರಾಜನು ಹೀಗೆನ್ನಲು ಮುನಿಯು ಇಂತೆಂದನು. "ನಾನೇ ಈ ದೇವತೆಗಳ ಕಾರ್ಯಕ್ಕಾಗಿ ಈ ಶರೀರವನ್ನು ಬಿಡುವೆನು.

೩೬. ಅಸ್ಥಿರವೂ, ಸಕಲದುಃಖಗಳಿಗಾಶ್ರಯವೂ, ಅಸಹ್ಯಕರವೂ ಆಗಿರುವ ಈ ಶರೀರವನ್ನು ಈಗ ತ್ಯಜಿಸುವುದೇ ಉಚಿತವು.

೩೭. ಜನ್ಮಾಂತರ ಪುನರ್ಮರಣಗಳನ್ನೀಯುವ ಸಂಸಾರದುಃಖವು ಈ ಶರೀರವನ್ನು ತ್ಯಜಿಸುವುದರಿಂದಾಗುವುದಿಲ್ಲ.

೩೮. ನಾವು ಮಾಡಿದ ಕರ್ಮಫಲದಿಂದ ಹೆಂಡತಿ, ಸಹೋದರಿ, ಮಗಳು ಉಂಟಾಗುವರು. ಅದರಿಂದಲೇ ನಾನು ಸಂಸಾರ ಸುಖದಿಂದ ಜುಗುಪ್ಸೆಯನ್ನು ಹೊಂದಿರುವೆನು.

೩೯. ಈ ದೇಹವು ತಾನೇ ನಿಶ್ಚಯವಾಗಿ ನನ್ನನ್ನು ಬಿಡುವುದು ಅದಕ್ಕೆಮೊದಲು ನಾನೇ ಶೀಘ್ರವಾಗಿ ಅದನ್ನು ಬಿಡುವುದು ಲೇಸು".

೪೦. ಹೀಗೆ ಆ ದಧೀಚಿಮಹಾಮುನಿಯು ಇಂದ್ರನಿಗೆ ಹೇಳಿ ಕೂಡಲೇ ತನ್ನ ಪ್ರಾಣವನ್ನು ನೀಗಿಸಿಕೊಂಡನು.

ಗತಾಸುಂ ತಂ ವಿದಿತ್ವೈವಂ ವಿಬುಧಾಸ್ತತ್ಕಲೇವರಂ ।
ಮಾಂಸಶೋಣಿತನಿರ್ಮುಕ್ತಂ ಕಥಂ ಕಾರ್ಯಂ ವ್ಯಚಿಂತಯನ್ ॥ ೪೧ ॥
ತತಸ್ತದಸ್ಥಿಶುದ್ಧ್ಯರ್ಥಮುವಾಚೇದಂ ಸುರೇಶ್ವರಃ ।
ಗೌರೀಣಾಂ ಕರ್ಕಶಾ ಜಿಹ್ವಾ ತಾ ಏತದುತ್ಪಿದಂ ತ್ವತಿ ॥ ೪೨ ॥
ತತಸ್ತೈರ್ವಿಬುಧೈರ್ನಂದಾ ಯದಾ ಲೋಕೇಷು ಸಂಸ್ಥಿತಾ ।
ಧ್ಯಾತಾ ತದೋಪಯಾತಾ ಸಾ ಸಖೀಭಿಃ ಪರಿವಾರಿತಾ ॥ ೪೩ ॥
ನಂದಾ ಸುಭದ್ರಾ ಸುರಭಿಃ ಸುಶೀಲಾ ಸುಮನಾಸ್ತಥಾ ॥
ಇತಿ ಗೋಮಾತರಃ ಪಂಚ ಗೋಲೋಕಾಚ್ಚ ಸಮಾಗತಾಃ ॥ ೪೪ ॥
ಊಚುಸ್ತಾನ್ವಿಬುಧಾನ್ ಸರ್ವಾನಸ್ಮಾಭಿರ್ಯತ್ಪ್ರಯೋಜನಂ ।
ಕರ್ತವ್ಯಂ ತತ್ಕರಿಷ್ಯಾಮಃ ಕಥ್ಯತಾಂ ಸುವಿಚಾರಿತಂ ॥ ೪೫ ॥

ದೇವಾ ಊಚುಃ:—

ಯದೇತದೃಷಿಣಾ ತ್ಯಕ್ತಂ ಸ್ವಯಮೇವ ಕಲೇವರಂ ।
ಏತನ್ಮಾಂಸಾದಿನಿರ್ಮುಕ್ತಂ ಕ್ರಿಯತಾಮಸ್ಥಿಪಂಜರಂ ॥ ೪೬ ॥
ತತ್ಕೃತ್ವಾ ಗರ್ಹಿತಂ ಕರ್ಮ ದೇವಾದೇಶಾತ್ಸುದಾರುಣಂ ।
ಪುನಃ ಪಿತಾಮಹಂ ದ್ರಷ್ಟುಂ ಗತಾಸ್ತಾಃ ಸುರಸತ್ತಮಾಃ ॥ ೪೭ ॥

---

೪೧. ಹೀಗೆ ಆ ಮುನಿಯ ಕಳೇಬರದಲ್ಲಿ ಪ್ರಾಣವಿಲ್ಲದಿರುವುದನ್ನು ದೇವತೆಗಳು ತಿಳಿದು ಮೂಳೆಗಳನ್ನು ಮಾಂಸ ರಕ್ತಗಳಿಲ್ಲದವನ್ನಾಗಿ ಮಾಡಲು ಆಲೋಚಿಸಿದರು.

೪೨. ಬಳಿಕ ಸುರೇಂದ್ರನು ಆ ಮುನಿಯ ಅಸ್ಥಿಗಳ ಶುದ್ಧಿಗಾಗಿ ಗೋಮಾತೆಯರು ತಮ್ಮ ಒರಟಾದ ನಾಲಿಗೆಯಿಂದ ನೆಕ್ಕಲೆಂದನು.

೪೩–೪೪. ಅನಂತರ ದೇವತೆಗಳು ನಂದೆಯೆಂಬ ಗೋಮಾತೆಯನ್ನು ಧ್ಯಾನಿಸಲು ಅವಳು ಸುಭದ್ರಾ, ಸುರಭಿ, ಸುಶೀಲಾ, ಸುಮನಾ ಎಂಬ ಸಖಿಯರೊಡನೆ ಗೋಲೋಕದಿಂದ ಬಂದಳು.

೪೫. ಆ ಗೋಮಾತೆಯರು ಸಮಸ್ತ ದೇವತೆಗಳನ್ನೂ ಕುರಿತು, "ನಮ್ಮಿಂದ ಈಗ ಏನಾಗಬೇಕು. ಅದನ್ನು ಮಾಡುವೆವು. ಚೆನ್ನಾಗಿ ಆಲೋಚಿಸಿ ಹೇಳಿರಿ". ಎಂದರು.

೪೬. ದೇವತೆಗಳು ಹೇಳುತ್ತಾರೆ:—ದಧೀಚಿ ಮುನಿಯು ತಾನಾಗಿ ತ್ಯಜಿಸಿದ ಈ ಶರೀರವನ್ನು ಮಾಂಸವಿಲ್ಲದೆ ಅಸ್ಥಿಪಂಜರವು ಮಾತ್ರ ಉಳಿಯುವಂತೆ ಮಾಡಿರಿ.

೪೭. ಗೋಮಾತೆಯರು ದೇವತೆಗಳ ಅಪ್ಪಣೆಯಂತೆ ಆ ದಾರುಣ ಕರ್ಮವನ್ನೆಸಗಿ ಮರಳಿ ಬ್ರಹ್ಮನನ್ನು ನೋಡಲು ಹೋದರು.

ತತಸ್ತು ದಾರುಣಂ ಕರ್ಮ ಯಚ್ಚ ತಾಭಿರನುಷ್ಠಿತಂ ।
ಪಿತಾಮಹಸ್ಯ ತತ್ಸರ್ವಂ ಸಮಾಚಖ್ಯುರ್ಯಥಾತಥಂ ॥ ೪೮ ॥
ತಚ್ಛ್ರುತ್ವಾ ವಿಬುಧಾನ್ ಸರ್ವಾನ್ ಸಮಾಹೂಯ ಪಿತಾಮಹಃ ।
ಸರ್ವಗಾತ್ರೇಷ್ವಸ್ಪೃಶತ ಸುರಭೀಃ ಶುದ್ಧಿಕಾಮ್ಯಯಾ ॥ ೪೯ ॥
ತಾಸ್ತು ತೈರ್ವಿಬುಧೈಃ ಸ್ಪೃಷ್ಟಾಃ ಸುಪೂತಾಃ ಸಮವಸ್ಥಿತಾಃ ।
ಮುಖಮೇಕಂ ಪರಂ ತಾಸಾಂ ನ ಸ್ಪೃಷ್ಟಮಶುಚಿ ಸ್ಮೃತಂ ॥ ೫೦ ॥
ಅಪವಿತ್ರಂ ಭವೇತ್ತಾಸಾಂ ಮುಖಮೇಕಂ ಜುಗುಪ್ಸಿತಂ ।
ಶೇಷಂ ಶರೀರಂ ಸರ್ವಾಸಾಂ ವಿಶಿಷ್ಟಂ ತು ಸುರೈಃ ಕೃತಂ ॥ ೫೧ ॥
ಸರಸ್ವತ್ಯಾ ತು ತಾಃ ಪ್ರೋಕ್ತಾ ಭವಂತ್ಯೋ ಬ್ರಹ್ಮಘಾತಿಕಾಃ ।
ಅನ್ಯಥಾ ಕಾರಣಾತ್ಕಸ್ಮಾನ್ನ ಸ್ಪೃಷ್ಟಮಮರೈರ್ಮುಖಂ ॥ ೫೨ ॥
ತತಸ್ತಾಭಿಸ್ತು ಸಾ ಪ್ರೋಕ್ತಾ ದೇವೀ ತತ್ರ ಸರಸ್ವತೀ ।
ನೈತತ್ತೇ ವಚನಂ ಯುಕ್ತಂ ವಕ್ತುಮೇವಂವಿಧಂ ಮುಖಂ ॥ ೫೩ ॥
ಅಸ್ಮಾಕಮೇವ ಹೃದಯಮನೇನ ವಚಸಾ ತ್ವಯಾ ।
ನಿರ್ದಗ್ಧಂ ಯೇನ ತಸ್ಮಾತ್ತ್ವಮಚಿರಾದ್ದಾಹಮಾಪ್ಸ್ಯಸಿ ॥ ೫೪ ॥

---

೪೮. ಅಲ್ಲಿ ಅವರು ತಾವು ಮಾಡಿದ ಆ ಭಯಂಕರ ಕಾರ್ಯವನ್ನು ನಡೆದಂತೆ ಬ್ರಹ್ಮನಿಗೆ ಹೇಳಿದರು.

೪೯. ಅದನ್ನು ಕೇಳಿ ಚತುರ್ಮುಖನು ಸಕಲ ದೇವತೆಗಳನ್ನೂ ಕರೆದು ಗೋವುಗಳನ್ನು ಶುದ್ಧಮಾಡಲು ಸಂಪೂರ್ಣ ದೇಹವನ್ನು ಮುಟ್ಟಿರಿ.

೫೦. ದೇವತೆಗಳು ಹಾಗೆಯೇ ಮುಟ್ಟಲು ಗೋವುಗಳು ಶುದ್ಧವಾದುವು. ಅವುಗಳ ಬಾಯಿಯನ್ನು ಮಾತ್ರ ದೇವತೆಗಳು ಮುಟ್ಟದಿರುವುದರಿಂದ ಅದು ಅಪವಿತ್ರವಾಯಿತು.

೫೧. ಹೀಗೆ ದೇವತೆಗಳು ಆ ಗೋವುಗಳ ಬಾಯಿಯನ್ನುಳಿದು ಶರೀರವನ್ನೆಲ್ಲ ಸ್ಪರ್ಶದಿಂದ ಶುದ್ಧಮಾಡಿದರು.

೫೨. ಆಗ ಸರಸ್ವತಿಯು ಆ ಗೋವುಗಳನ್ನು ಕುರಿತು ನಿಮ್ಮ ಬಾಯಿಯನ್ನು ದೇವತೆಗಳು ಮುಟ್ಟದಿರುವುದರಿಂದ ನೀವು ಬ್ರಹ್ಮಘ್ನರೆಂದಳು..

೫೩. ಬಳಿಕ ಆ ಗೋವುಗಳು ಸರಸ್ವತಿಯನ್ನು ಕುರಿತು ನಮ್ಮ ಮುಖವು ಅಪವಿತ್ರವಾದುದೆಂದು ನೀನು ಹೇಳುವುದು ಸರಿಯಲ್ಲ.

೫೪. ನೀನು ಮಾತಿನಿಂದ ನಮ್ಮ ಹೃದಯವನ್ನು ಸುಟ್ಟುದರಿಂದ ಕೂಡಲೇ ಭಸ್ಮವಾಗುವೆ.

ಶಾಪಂ ದತ್ವಾ ತತಸ್ತಸ್ಯಾಃ ಸರಸ್ವತ್ಯಾಸ್ತು ತಾಸ್ತದಾ ।
ಗೋಲೋಕಂ ಗತವತ್ಯಸ್ತು ಸುರಭ್ಯಃ ಸುರಪೂಜಿತಾಃ ॥ ೫೫ ॥
ಆಹೂಯ ವಿಶ್ವಕರ್ಮಾಣಂ ತತ್ಕ್ಷಣಂ ಸುರಸತ್ತಮಾಃ ।
ಅಸ್ಮಾಕಂ ಕುರು ಶಸ್ತ್ರಾಣಿ ತಮಾಹುರ್ಯುದ್ಧಕಾರಣಾತ್ ॥ ೫೬ ॥
ಏತದ್ವಚನಮಾಕರ್ಣ್ಯ ತಾನಿ ಪೂತೈರ್ನವೈರ್ದೃಢೈಃ ।
ಅಸ್ತ್ರಾಣಿ ಕಾರಯಾಮಾಸ ದಧೀಚೇರಸ್ಥಿಸಂಚಯೈಃ ॥ ೫೭ ॥
ಪ್ರಮಾಣಾಕಾರಯುಕ್ತಾನಿ ದೇವಾನಾಂ ತಾನಿ ಸಂಯುಗೇ ।
ಅಜೇಯಾನಿ ಯಥಾ ಚಾಸಂಸ್ತಥಾ ಚಾಸೌ ವಿನಿರ್ಮಮೇ ॥ ೫೮ ॥
ವಜ್ರಮಿಂದ್ರಸ್ಯ ಶಕ್ತಿಂ ಚ ವಹ್ನೇರ್ದಂಡಂ ಯಮಸ್ಯ ಚ ।
ಖಡ್ಗಂ ತು ನಿರ್ಋತೇಃ ಪಾಶಂ ಸಮ್ಯಕ್ಚಕ್ರೇ ಪ್ರಚೇತಸಃ ॥ ೫೯ ॥
ವಾಯೋರ್ಧ್ವಜಂ ಕುಬೇರಸ್ಯ ಗದಾಂ ಗುರ್ವೀಂ ಚ ನಿರ್ಮಮೇ ।
ವಿಶ್ವಕರ್ಮಾ ತಥಾ ಶೂಲಮೀಶಾನಸ್ಯ ಚ ನಿರ್ಮಮೇ ॥ ೬೦ ॥
ಗೃಹೀತ್ವೈತಾನಿ ವೈ ದೇವಾಃ ಶಸ್ತ್ರಾಣ್ಯಸ್ತ್ರಬಲಂ ತದಾ ।
ವಿಜೇತುಂ ಚ ತತೋ ದೈತ್ಯಾನ್ ದಾನವಾಂಶ್ಚ ಗತಾಸ್ತದಾ ॥ ೬೧ ॥

---

೫೫. ಗೋವುಗಳು ಹೀಗೆ ಸರಸ್ವತಿಗೆ ಶಾಪವಿತ್ತು ದೇವತೆಗಳ ಪೂಜೆಯನ್ನು ಸ್ವೀಕರಿಸಿ ಗೋಲೋಕಕ್ಕೆ ತೆರಳಿದುವು.

೫೬. ದೇವತೆಗಳು ಬಡಗಿಯಾದ ವಿಶ್ವಕರ್ಮನನ್ನು ಕರೆಯಿಸಿ ಅವನನ್ನು ಕುರಿತು “ ನಮಗೆ ಯುದ್ಧಕ್ಕಾಗಿ ಆಯುಧಗಳನ್ನು ನಿರ್ಮಿಸು” ಎಂದರು.

೫೭. ವಿಶ್ವಕರ್ಮನು ಈ ಮಾತನ್ನು ಕೇಳಿ ಪವಿತ್ರವೂ, ಹೊಸದೂ, ಗಟ್ಟಿಯೂ ಆಗಿರುವ ದಧೀಚಿಯ ಮೂಳೆಗಳ ಸಮೂಹಗಳಿಂದ ಆಯುಧಗಳನ್ನು ಮಾಡಿಸಿದನು.

೫೮. ಅವನು ಯುದ್ಧದಲ್ಲಿ ಶತ್ರುಗಳು ಜಯಿಸಲಾಗದಂತೆ ದೇವತೆಗಳ ಆಯುಧಗಳನ್ನು ಪ್ರಮಾಣ, ಆಕಾರಗಳಿಂದ ಕೂಡಿದವುಗಳನ್ನಾಗಿ ನಿರ್ಮಿಸಿದನು.

೫೯–೬೦. ಆ ವಿಶ್ವಕರ್ಮನು ಇಂದ್ರನ ವಜ್ರಾಯುಧವನ್ನೂ, ಅಗ್ನಿಯ ಶಕ್ತ್ಯಾಯುಧವನ್ನೂ, ಯಮನ ದಂಡವನ್ನೂ, ನಿರ್ಋತಿಯ ಕತ್ತಿಯನ್ನೂ, ವರುಣನ ಪಾಶವನ್ನೂ, ವಾಯುವಿನ ಧ್ವಜವನ್ನೂ, ಕುಬೇರನ ಮಹಾಗದೆಯನ್ನೂ, ಮಹೇಶ್ವರನ ತ್ರಿಶೂಲವನ್ನೂ ನಿರ್ಮಿಸಿದನು.

೬೧. ದೇವತೆಗಳು ಈ ಆಯುಧಗಳನ್ನು ತೆಗೆದುಕೊಂಡು ದೈತ್ಯದಾನವರನ್ನು ಜಯಿಸಲು ಹೊರಟರು.

ಅತ್ರಾಂತರೇ ಸುಭದ್ರಾಽಪಿ ದಧೀಚೇರೌರ್ಧ್ವದೈಹಿಕಂ ।
ಕೃತ್ವಾ ತೈರ್ಮುನಿಭಿಃ ಸಾರ್ಧಮನ್ವೇಷ್ಟುಂ ಸಾ ಗತಾ ಸುತಂ ॥ ೬೨ ॥
ಅಶ್ವತ್ಥವಾಟಿಕಾಯಾಂ ಚ ತಮಪಶ್ಯನ್ಮನೋರಮಂ ।
ದೃಷ್ಟ್ವಾ ರೋದಿತಿ ಜೀವಂತಂ ಮುಕ್ತ್ವಾ ಬಾಷ್ಪಮಥಾಽಚಿರಂ ॥ ೬೩ ॥
ಅಂಬೇತ್ಯಾಭಾಷ್ಯ ತೇನೋಕ್ತಾ ಮಾ ರೋದೀಸ್ತ್ವಂ ಯಶಸ್ವಿನಿ ।
ಸರ್ವಂ ಪುರಾ ಕೃತಸ್ಯೈತತ್ಫಲಂ ತವ ಮಮಾಽಪಿ ಹಿ ॥ ೬೪ ॥
ಯದ್ಯಥಾ ಯತ್ರ ಯೇನೇಹ ಕರ್ಮ ಜನ್ಮಾಂತರಾರ್ಜಿತಂ ।
ತದವಶ್ಯಂ ಹಿ ಭೋಕ್ತವ್ಯಂ ತ್ಯಜ ಶೋಕಮತೋಽಖಿಲಂ ॥ ೬೫ ॥
ಮತ್ಪರಿತ್ಯಾಗಲಜ್ಜಾ ಚ ನ ತೇ ಕಾರ್ಯೇಹ ಸುಂದರಿ ।
ಫಲಂ ಪುರಾಕೃತಸ್ಯೈತದ್ಭೋಕ್ತವ್ಯಂ ತನ್ಮಯಾಽಪಿ ಹಿ ॥ ೬೬ ॥
ಮಾತರ್ಮಮೋಪರಿ ಕುರು ಪುತ್ರಸ್ನೇಹಂ ಯಶಸ್ವಿನಿ ।
ಬಾಲಸ್ಯ ಹಿ ಪರಿತ್ಯಾಗಾನ್ಮಾತಾ ದೋಷೇಣ ಲಿಪ್ಯತೇ ॥ ೬೭ ॥
ಬಾಲೇನಾಽಭಿಹಿತಾ ಸಾ ತು ಧ್ಯಾತ್ವಾ ದೇವಂ ಜನಾರ್ದನಂ ।
ಕೃತಾಂಜಲಿರುವಾಚೇದಂ ಕಥ್ಯತಾಂ ಮೇ ಸುನಿಶ್ಚಿತಂ ॥ ೬೮ ॥

---

೬೨. ಈ ಮಧ್ಯದಲ್ಲಿ ಸುಭದ್ರೆಯು ದಧೀಚಿಮಹರ್ಷಿಗೆ ಉತ್ತರಕ್ರಿಯೆಯನ್ನು ನೆರವೇರಿಸಿ ಮುನಿಗಳೊಡನೆ ಮಗನನ್ನು ಹುಡಕಲು ಹೊರಟಳು.

೬೩. ಅವಳು ಅಶ್ವತ್ಥವನದಲ್ಲಿ ಸುಂದರನಾದ ಆ ಪುತ್ರನನ್ನು ಕಂಡು ಬಹಳ ಹೊತ್ತು ಕಣ್ಣೀರನ್ನು ಸುರಿಸುತ್ತ ಅತ್ತಳು.

೬೪. ಆಗ ಬಾಲಕನು, "ಅಮ್ಮ! ಕೀರ್ತಿಶಾಲಿನಿಯಾದ ನೀನು ಅಳಬೇಡ. ನನಗೂ ನಿನಗೂ ಹಿಂದೆಮಾಡಿದ ಕರ್ಮದ ಫಲವು ಸಂಭವಿಸಿರುವುದು.

೬೫. ಯಾವನು ಯಾವ ಜನ್ಮದಲ್ಲಿ ಹೇಗೆ ಯಾವ ಕರ್ಮವನ್ನಾಚರಿಸಿರುವನೊ, ಅವನು ಅದರ ಫಲವನ್ನುಅವಶ್ಯವಾಗಿ ಅನುಭವಿಸಬೇಕು. ಆದುದರಿಂದ ಸಕಲ ದುಃಖವನ್ನೂ ತ್ಯಜಿಸು.

೬೬. ಸುಂದರಿ ! ನನ್ನನ್ನು ತ್ಯಜಿಸಿದ್ದರಿಂದ ನೀನು ಲಜ್ಜೆಗೊಳ್ಳಬೇಡ. ನಾನೂ ಹಿಂದೆ ಮಾಡಿದ ಕರ್ಮದ ಫಲವನ್ನು ಅನುಭವಿಸಬೇಕು.

೬೭. ಅಮ್ಮ ! ನನ್ನಲ್ಲಿ ಪುತ್ರಸ್ನೇಹವನ್ನು ಮಾಡು. ಬಾಲಕನನ್ನು ತ್ಯಜಿಸುವುದರಿಂದ ತಾಯಿಯು ದೋಷವುಳ್ಳವಳಾಗುವಳು".

೬೮. ಬಾಲಕನು ಹೀಗೆನ್ನಲು ಆ ಸಭದ್ರೆಯು ಕೃಷ್ಣನನ್ನು ಧ್ಯಾನಿಸಿ ಕೈಮುಗಿದು ಕೊಂಡು ಇಂತೆಂದಳು. "ನನಗೆ ನಿಜಸ್ಥಿತಿಯನ್ನು ಹೇಳು.

ನ ವಿಜಾನಾಮ್ಯಹಂ ತಥ್ಯಂ ಕಸ್ಯಾಯಂ ವೀರ್ಯಸಂಭವಃ ।
ತಸ್ಮಾತ್ಕಥಯ ದೇವೇಶ ಮಮ ತೇ ನಿಶ್ಚಿತಂ ವಚಃ ॥ ೧೯ ॥
ಅಥೋಕ್ತೋ ಮಾತರಂ ಕೃಷ್ಣಃ ಸುಭದ್ರಾಂ ವೈ ಜನಾರ್ದನಃ ।
ದಧೀಚೇಸ್ತನಯಶ್ಚಾಽಯಂ ಭರ್ತುಸ್ತೇ ಕ್ಷೇತ್ರಸಂಭವಃ ॥ ೨೦ ॥
ತಸ್ಯೋತ್ಪತ್ತಿಂ ವಿದಿತ್ವೈವಂ ಸುಭದ್ರಾ ಹೃಷ್ಟಮಾನಸಾ ।
ಬಾಲಮಂಕೇ ಸಮಾರೋಪ್ಯ ಅರೋದೀದಾರ್ತಯಾ ಗಿರಾ ॥ ೨೧ ॥
ಆಹ ಬಾಲಕ ಉತ್ಪನ್ನಃ ಶೋಕಸ್ಯ ವದ ಕಾರಣಂ ।
ಅಥೋಕ್ತಃ ಸ್ತನ್ಯರಹಿತಂ ಕಥಂ ತೇ ಜೀವಿತಂ ಧೃತಂ ॥ ೨೨ ॥
ಯಸ್ಮಾಚ್ಚತುರ್ವಿಧಾ ಸೃಷ್ಟಿರ್ಜೀವಾನಾಂ ಬ್ರಹ್ಮಣಾ ಕೃತಾ ।
ಜರಾಯುಜಾಂಡಜೋದ್ಭಿಜ್ಜಸ್ವೇದಜಾಶ್ಚ ತಥಾ ಸ್ಮೃತಾಃ ॥ ೨೩ ॥
ನರಸ್ತ್ರೀನಪುಂಸಕಾಖ್ಯಾಶ್ಚ ಜಾತಿಭೇದಾ ಜರಾಯುಜಾಃ ।
ಚತುಷ್ಪದಾಶ್ಚ ಪಶವೋ ಗ್ರಾಮ್ಯಾಶ್ಚಾಽರಣ್ಯಜಾಸ್ತಥಾ ॥ ೨೪ ॥

---

೧೯. ನಾನು ಈ ಬಾಲಕನು ಯಾರ ವೀರ್ಯದಿಂದ ಜನಿಸಿರುವನೆಂದು ಅರಿಯೆನು. ಆದುದರಿಂದ ಸ್ವಾಮಿ ! ನನಗೆ ಸತ್ಯವನ್ನು ಹೇಳು.

೨೦. ಸುಭದ್ರೆಯು ಹೀಗೆನ್ನಲು ಜನಾರ್ದನನು, "ಇವನು ನಿನ್ನ ಪತಿಯಾದ ದಧೀಚಿಯ ವೀರ್ಯದಿಂದ ಜನಿಸಿರುವನು" ಎಂದನು.

೨೧. ಸುಭದ್ರೆಯು ಆ ಬಾಲಕನ ಉತ್ಪತ್ತಿಕ್ರಮವನ್ನರಿತು ಸಂತೋಷಗೊಂಡು ಅವನನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡು ಆರ್ತಧ್ವನಿಯಿಂದ ಅತ್ತಳು.

೨೨. ಆ ಬಾಲಕನು ಏಕೆ ಅಳುತ್ತೀಯೆ ? ಎಂದು ಕೇಳಲು ಅವಳು ಹೀಗೆ ಕೇಳಿದಳು. ನೀನು ಸ್ತನ್ಯವಿಲ್ಲದೆ ಹೇಗೆ ಬದುಕಿದೆ ?

೨೩. ಬ್ರಹ್ಮನು ಜೀವಿಗಳನ್ನು ಜರಾಯುಜ, ಅಂಡಜ, ಉದ್ಭಿಜ್ಜ, ಸ್ವೇದಜ ಎಂದು ನಾಲ್ಕು ಬಗೆಯಾಗಿ ಸೃಷ್ಟಿಸಿರುವನು.

೨೪. ಗಂಡಸು, ಹೆಂಗಸು, ನಪುಂಸಕ ಎಂಬ ಮೂರುಬಗೆಯ ಮನುಷ್ಯರೂ, ನಾಡಿನ ಮತ್ತು ಕಾಡಿನ ನಾಲ್ಕು ಕಾಲುಗಳುಳ್ಳ ಪಶುಗಳೂ ಜರಾಯುಜಗಳು.

ಅಂಡಜಾಃ ಪಕ್ಷಿಣಃ ಸರ್ವೇ ಮೀನಾಃ ಕೂರ್ಮಸರೀಸೃಪಾಃ ।
ಸ್ವೇದಜಾ ಮತ್ಕುಣಾ ಯೂಕಾ ದಂಶಾಶ್ಚ ಮಶಕಾಸ್ತಥಾ ॥ ೭೫ ॥
ಉದ್ಭಿಜ್ಜಾಃ ಸ್ಥಾವರಾಃ ಪ್ರೋಕ್ತಾಸ್ತೃಣಗುಲ್ಮಲತಾದಯಃ ।
ಅನ್ಯೇಪ್ಯೇವಂ ಯಥಾಯೋಗಮಂತರ್ಭೂತಾಃ ಸಹಸ್ರಶಃ ॥ ೭೬ ॥
ಅಂಡಜಾಃ ಪಕ್ಷಪಾತೇನ ಜೀವಂತಿ ಶಿಶವೋ ಭುವಿ ।
ಊಷ್ಮಣಾ ಸ್ವೇದಜಾಃ ಸರ್ವೇ ಉದ್ಭಿಜ್ಜಾಃ ಸಲಿಲೇನ ಹಿ ॥ ೭೭ ॥
ಸಮುದಾಯೇನ ಭೂತಾನಾಂ ಪಂಚಾನಾಮುದ್ಭಿಜಂ ಭುವಿ ।
ಜರಾಯುಜಾಶ್ಚ ಸ್ತನ್ಯೇನ ವಿನಾ ಜೀವಿತುಮಕ್ಷಮಾಃ ॥ ೭೮ ॥
ವಿನಾ ತೇನ ಕಥಂ ಪುತ್ರ ತ್ವಯಾ ಪ್ರಾಣಾ ವಿಧಾರಿತಾಃ ।
ತಾಂ ತಥಾ ಜನನೀಂ ಪ್ರಾಹ ಸ ಚ ಬಾಷ್ಪಾವಿಲೇಕ್ಷಣಾಂ ॥ ೭೯ ॥
ಅಶ್ವತ್ಥಫಲನಿರ್ಯಾಸಪಾನಾತ್ಪ್ರಾಣಾ ಮಯಾ ಧೃತಾಃ ।
ಗೌಣಂ ತದಾ ತಯಾ ತಸ್ಯ ಪಿಪ್ಪಲಾದೇತಿ ಕಲ್ಪಿತಂ ॥ ೮೦ ॥

---

೭೫. ಸಮಸ್ತ ಪಕ್ಷಿಗಳೂ, ಮೀನುಗಳೂ, ಆಮೆಗಳೂ, ಹಾವುಗಳೂ ಅಂಡಜಗಳು. ತಿಗಣೆ, ಹೇನು, ಸೊಳ್ಳೆ, ನೊಣಗಳು ಸ್ವೇದಜಗಳು. (ಬೆವರಿನಿಂದ ಹುಟ್ಟುವುವು.)

೭೬. ಹುಲ್ಲು, ಪೊದೆ, ಲತೆ ಮೊದಲಾದ ಸ್ಥಾವರಗಳು ಉದ್ಭಿಜ್ಜಗಳು. ಹೀಗೆಯೇ ಇತರ ಸಾವಿರಾರು ಜೀವಿಗಳು ಜರಾಯುಜಾದಿಗಳಲ್ಲಿಯೇ ಸೇರುವುವು.

೭೭–೭೮. ಅಂಡಜ ಶಿಶುಗಳು ಹಾರುವುದರಿಂದಲೂ, ಸ್ವೇದಜಗಳೆಲ್ಲ ಉಷ್ಣದಿಂದಲೂ, ಉದ್ಭಿಜ್ಜಗಳು ಭೂಮಿಯಲ್ಲಿ ನೀರು ಮೊದಲಾದ ಪಂಚ ಭೂತಗಳ ಸಮೂಹದಿಂದಲೂ ಜೀವಿಸುವುವು ಜರಾಯುಜಗಳು ತಾಯಿಯ ಎದೆಹಾಲಿಲ್ಲವೆ ಬದುಕಲಾರವು.

೭೯–೮೨. ಮಗು! ನೀನು ಆ ಸ್ತನ್ಯವಿಲ್ಲವೆ ಹೇಗೆ ಬದುಕಿದೆ? ಎಂದು ಕೇಳಲು ಆ ಬಾಲಕನು ಹಾಗೆ ಅಳುತ್ತಿರುವ ತಾಯಿಯನ್ನು ಕುರಿತು, "ನಾನು ಅಶ್ವತ್ಥದ ಹಣ್ಣುಗಳ ರಸದಿಂದ ಬದುಕಿದೆ" ಎಂದನು. ಆಗ ಅವಳು ಅವನಿಗೆ ಪಿಪ್ಪಲಾದ ಎಂದು ಹೆಸರಿಟ್ಟಳು. ಆದರಿಂದ ಅವನ ಹೆಸರು ಈ ಜಗತ್ತಿನಲ್ಲಿ ಯಾವಾಗಲೂ ಪ್ರಸಿದ್ಧವಾಗಿದೆ. ಅಲ್ಲಿರುವ ವೇದಪಾರಂಗತರಾದ ಮುನಿಗಳು ಅವನಿಗೆ ಕ್ರಮವಾಗಿ ವೇದೋಕ್ತ ಸಂಸ್ಕಾರಗಳನ್ನು ಮಾಡಿದರು. ಬಳಿಕ ಅವನು ಆ ಆಶ್ರಮದಲ್ಲಿ

ನಾಮ ತೇನ ಜಗತ್ಯಸ್ಮಿನ್ ನಿತ್ಯಂ ಖ್ಯಾತಂ ಮಹಾತ್ಮನಃ ।
ತತ್ರಸ್ಥೈರ್ಮುನಿಭಿಸ್ತಸ್ಯ ಕೃತಾಸ್ಸರ್ವೈರ್ಯಥಾಕ್ರಮಂ ॥ ೮೧ ॥
ಸಂಸ್ಕಾರಾಃ ಪಿಪ್ಪಲಾದಸ್ಯ ವೇದೋಕ್ತಾ ವೇದಪಾರಗೈಃ ।
ಷಡಂಗೋಪಾಂಗಸಂಯುಕ್ತಾ ವೇದಾಸ್ತೇನ ಸಮುದ್ಧೃತಾಃ ।
ತದಾಶ್ರಮನಿವಾಸಿಭ್ಯೋ ಮುನಿಭ್ಯಶ್ಚ ಸುಪುಷ್ಕಲಾಃ ॥ ೮೨ ॥
ಪುನಸ್ತತ್ರ ಸ್ಥಿತಶ್ಚಾಽಸೌ ದೃಷ್ಟ್ವಾ ಮುನಿಕುಮಾರಕಾನ್ ।
ಸ್ವಪಿತ್ರಂಕಗತಾನ್ ಪ್ರಾಹ ಜನನೀಂ ತಾಂ ಶುಚಿಸ್ಮಿತಾಂ ॥ ೮೩ ॥
ಪಿತಾ ಮೇ ಕುತ್ರ ಭದ್ರಂ ತೇ ಸುಭದ್ರೇ ಕಥಯ ಸ್ಫುಟಂ ।
ತದಂಕಾಂತಸ್ಥಿತೋ ಯೇನ ಬಾಲಕ್ರೀಡಾಂ ಕರೋಮ್ಯಹಂ ॥ ೮೪ ॥
ಏವಂ ಸಾ ಜನನೀ ತೇನ ಯದಾ ಪೃಷ್ಟಾ ತಪಸ್ವಿನೀ ।
ತದಾ ರೋದಿತುಮಾರಬ್ಧಾ ನೋತ್ತರಂ ಕಿಂಚಿದಬ್ರವೀತ್ ॥ ೮೫ ॥
ರುದಂತೀಂ ತಾಂ ಸಮಾಲೋಕ್ಯ ಕ್ರುದ್ಧೋಽಸೌ ಮುನಿದಾರಕಃ ।
ಕಿಮಸೌ ಕುತ್ಸಿತಃ ಕಶ್ಚಿದ್ಯೇನ ನಾಖ್ಯಾಸಿ ತಂ ಮಮ ॥ ೮೬ ॥

ವಾಸಿಸುವ ಮುನಿಗಳಿಂದ ಷಡಂಗಗಳಿಂದ ಸಹಿತವಾದ ವೇದಗಳನ್ನೆಲ್ಲ ಸಂಪೂರ್ಣವಾಗಿ ಅಧ್ಯಯನ ಮಾಡಿದನು.

೮೩. ಆ ಬಾಲಕನು ಅಲ್ಲಿಯೇ ವಾಸಿಸುತ್ತ ತಮ್ಮ ತಮ್ಮ ತಂದೆಯವರ ತೊಡೆಯಲ್ಲಿ ಕುಳಿತಿರುವ ಮುನಿಬಾಲಕರನ್ನು ಕಂಡು ತಾಯಿಯನ್ನು ಕುರಿತು ಹೀಗೆ ಕೇಳಿದನು.

೮೪. "ಸುಭದ್ರೇ! ನಿನಗೆ ಮಂಗಳವಾಗಲಿ. ನನ್ನ ತಂದೆಯೆಲ್ಲಿ? ಸ್ಪಷ್ಟವಾಗಿ ಹೇಳು. ನಾನು ಅವನ ತೊಡೆಯಲ್ಲಿ ಕುಳಿತುಕೊಂಡು ಬಾಲಕ್ರೀಡೆಗಳನ್ನು ಅನುಭವಿಸುವೆನು".

೮೫. ಅವನು ಹೀಗೆ ಪ್ರಶ್ನಿಸಲು ತಾಯಿಯಾದ ಸುಭದ್ರೆಯು ಅಳಲಾರಂಭಿಸಿ ಯಾವ ಉತ್ತರವನ್ನೂ ಹೇಳಲಿಲ್ಲ.

೮೬. ಅಳುತ್ತಿರುವ ಆ ತಾಯಿಯನ್ನು ಕಂಡು ಕುಪಿತನಾದ ಈ ಮುನಿಬಾಲಕನು, "ಆ ನನ್ನ ತಂದೆಯು ನೀಚನಾಗಿರುವನೋ? ಅದರಿಂದಲೇ ನೀನು ಅವನನ್ನು ನನಗೆ ತಿಳಿಸುವುದಿಲ್ಲವೊ?

ಇತ್ಯುಕ್ತೇ ಸುತಮಾಹೈವಂ ವಿಬುಧೈಸ್ತೇ ಪಿತಾ ಹತಃ ।
ಕೋಪಂ ತ್ಯಜಸ್ವ ಭದ್ರಂ ತೇ ದಧೀಚಿಃ ಕಥಿತೋ ಮಯಾ ॥ ೮೭ ॥
ಕೋಪವಹ್ನಿಪ್ರದೀಪ್ತಾತ್ಮಾ ಪ್ರಾಹ ತಾಂ ಜನನೀಂ ಪುನಃ ।
ಕಿಮಪಕೃತಂ ಸುರಾಣಾಂ ಮತ್ಪಿತ್ರಾ ಕಥಯಸ್ವ ತತ್ ॥ ೮೮ ॥

ಸುಭದ್ರೋವಾಚ :—

ಶಸ್ತ್ರಾಣಾಂ ಕಾರಣಾನ್ಮೂಢೈರ್ಹತೋಽಸೌ ಮುನಿಪುಂಗವಃ ।
ಪ್ರಯಚ್ಛನ್ನಪಿ ಚಾನ್ಯಾನಿ ತದಾಕಾರಾಣಿ ಸುವ್ರತ । ॥ ೮೯ ॥
ಶ್ರುತ್ವೈತದ್ವಚನಂ ಸೋಽಪಿ ಮುನಿರುಗ್ರತಪಾಸ್ತದಾ ।
ಪಿತಾ ಮೇ ಯೋ ಹತೋ ದೇವೈಸ್ತೇಷಾಂ ಕೃತ್ಯಾಂ ಮಹಾಬಲಾಂ ॥ ೯೦ ॥
ಉತ್ಥಾಪ್ಯ ಪಾತಯಿಷ್ಯಾಮಿ ಮೂರ್ಧ್ನಿ ಪ್ರಾಣಾಪಹಾರಿಕಾಂ ।
ಪಿತಾಮಹಮಹಂ ಮುಕ್ತ್ವಾ ನೈವ ಹನ್ಯೋ ಭವೇದ್ಯದಿ ॥ ೯೧ ॥
ಅನ್ಯಾನ್ ಪ್ರಮಥಯಿಷ್ಯಾಮಿ ಕೃತ್ಯಾ ಶಸ್ತ್ರೇಣ ಸಂಗತಾನ್ ।
ಶರಣಂ ಯದಿ ಯಾಸ್ಯಂತಿ ಗೀರ್ವಾಣಾ ಮದ್ಭಯಾತುರಾಃ ।
ತಥಾಽಪಿ ಪಾತಯಿಷ್ಯಾಮಿ ತೇನೈವ ಸಹ ಸಂಗತಾತ್ ॥ ೯೨ ॥

---

೮೭. ಆ ಬಾಲಕನು ಹೀಗೆ ಹೇಳಲು ಅವಳು, " ನಿನ್ನ ತಂದೆಯು ದಧೀಚಿ ಮಹರ್ಷಿಯು. ಅವನನ್ನು ದೇವತೆಗಳು ಕೊಂದಿರುವರು. ನೀನು ಕೋಪವನ್ನು ತ್ಯಜಿಸು ". ಎಂದಳು.

೮೮. ಆಗ ಕೋಪಾಗ್ನಿಯಿಂದ ಜ್ವಲಿಸುತ್ತಿರುವ ಆ ಮುನಿಕುಮಾರನು ತಾಯಿಯನ್ನು ಕುರಿತು, "ನನ್ನ ತಂದೆಯು ಸುರರಿಗೆ ಏನು ಅಪಕಾರ ಮಾಡಿದನು? ಅದನ್ನು ನನಗೆ ಹೇಳು". ಎಂದು ಕೇಳಿದನು.

೮೯. ಸುಭದ್ರೆಯು ಹೇಳುತ್ತಾಳೆ:—ಆ ಮೂಢ ದೇವತೆಗಳು ತಾವಿಟ್ಟಿರುವ ಶಸ್ತ್ರಗಳ ಆಕಾರದ ಆಯುಧಗಳನ್ನಿತ್ತರೂ ಒಪ್ಪದೆ ಆಯುಧಗಳಿಗಾಗಿಯೇ ಆ ನಿನ್ನ ತಂದೆಯನ್ನು ಕೊಂದಿರುವರು.

೯೦-೯೨. ಆಗ ಈ ಮಾತನ್ನು ಕೇಳಿ ಕಠಿನ ತಪಸ್ಸುಳ್ಳ ಆ ಮುನಿ ಬಾಲಕನು ನನ್ನತಂದೆಯನ್ನು ವಧಿಸಿದ ದೇವತೆಗಳನ್ನು ಅತಿ ಬಲಿಷ್ಠನಾದ ಮಾಯಾ ದೇವತೆಯನ್ನು ಉಂಟುಮಾಡಿ ಅವಳಿಂದ ಆ ದೇವತೆಗಳನ್ನು ಕೊಲ್ಲಿಸುವೆನು. ಬ್ರಹ್ಮನ ಹೊರತು ಇತರರಿಂದ ನಾನು ಕೊಲ್ಲಲನರ್ಹನಾಗಿದ್ದರೆ ಇತರ ದೇವತೆಗಳನ್ನೆಲ್ಲ ಧರಿಸುವೆನು. ನನ್ನಿಂದ ಭಯಗೊಂಡ ಆ ದೇವತೆಗಳು ನನ್ನನ್ನು ಮರೆಹೊಕ್ಕರೂ ನಾನು ಅವರನ್ನು ಕೊಲ್ಲದೆ ಬಿಡಲಾರೆನು.

ಈಶ್ವರ ಉವಾಚ:—

ಮತ್ವೈವಂ ತಮೃಷಿಂ ಕ್ರುದ್ಧಂ ಸರ್ವೇ ತೇ ಸುರಸತ್ತಮಾಃ
ಬ್ರಹ್ಮಾಣಂ ಶರಣಂ ಪ್ರಾಪ್ತಾ ಭಯೇನ ಮಹತಾರ್ದಿತಾಃ ॥ ೯೩ ॥
ತಾಂಸ್ತಸ್ಯ ಶರಣಂ ಪ್ರಾಪ್ತಾನ್ ಜ್ಞಾತ್ವಾ ದೇವಃ ಕೃಪಾನ್ವಿತಃ ।
ತತ್ರೈವ ಗತ್ವಾ ತ್ವರಿತಂ ಪ್ರಾಹ ದೇವಾನ್ ಜನಾರ್ದನಃ ॥ ೯೪ ॥
ಭವತಾಂ ರಕ್ಷಣೋಪಾಯಶ್ಚಿಂತಿತೋಽತ್ರ ಮಯಾಽಧುನಾ ।
ತೇನ ತಾಂ ಮೋಹಯಿಷ್ಯಾಮಿ ಕೃತ್ಯಾಂ ಹಂತುಮುಪಸ್ಥಿತಾಂ ॥ ೯೫ ॥
ಅತ್ರಾಂತರೇ ಪಿಪ್ಪಲಾದಃ ಪಿತುರ್ವೈರಮನುಸ್ಮರನ್ ।
ಹಂತುಂ ಸುರಾನ್ ವ್ಯವಸಿತಃ ಪ್ರವಿವೇಶ ಹಿಮಾಚಲಂ ॥ ೯೬ ॥
ಶ್ರುತ್ವಾ ತದಪ್ರಿಯಂ ವಾಕ್ಯಂ ಮಾತುರ್ವಕ್ತ್ರಾದ್ವಿನಿರ್ಗತಂ ।
ಪಿಪ್ಪಲಾದಃ ಪುನರ್ಯಾತಸ್ತಸ್ಮಾತ್ ಸ್ಥಾನಾದ್ಧಿಮಾಚಲಂ ॥ ೯೭ ॥
ಸ್ವರ್ಗಸೋಪಾನವತ್ಪುಂಸಾಂ ಸ್ಥಲೀಭೂತಮಿವಾಂಬರಂ ।
ಶೇಷಸ್ಯಾಭೋಗಸಂಕಾಶಂ ಪ್ರಾಪ್ತೋಽಸೌ ತುಹಿನಾಚಲಂ ॥ ೯೮ ॥

---

೯೩. ಆಗ ಸಮಸ್ತ ದೇವತೆಗಳೂ ಆ ಮುನಿಕುಮಾರನು ಕ್ರುದ್ಧನಾಗಿರುವುದ ನ್ನರಿತು ಭಯಚಕಿತರಾಗಿ ಬ್ರಹ್ಮದೇವನಲ್ಲಿಗೆ ಶರಣು ಬಂದರು. ಮರೆಹೊಕ್ಕರು.

೯೪. ದೇವತೆಗಳು ಶರಣಾಗತರಾದುದನ್ನು ವಿಷ್ಣುವು ತಿಳಿದು ದಯೆಗೊಂಡು ತಾನೇ ಬ್ರಹ್ಮನೆಡೆಗೆ ಶೀಘ್ರವಾಗಿ ಹೋಗಿ ಹೀಗೆಂದನು.

೯೫. "ದಿವಿಜರೆ! ನಾನೀಗ ನಿಮ್ಮನ್ನು ರಕ್ಷಿಸುವ ಉಪಾಯವನ್ನು ಆಲೋಚಿಸಿ ರುವೆನು. ಆದ್ದರಿಂದ ಕೊಲ್ಲಲು ಬಂದ ಆ ಮಾಯಾ ದೇವತೆಯನ್ನು ಮೋಹ ಗೊಳಿಸುವೆನು".

೯೬. ಈ ಮಧ್ಯದಲ್ಲಿ ಪಿಪ್ಪಲಾದನು ತಂದೆಯ ವಧೆಯಿಂದುಂಟಾದ ದ್ವೇಷವನ್ನು ಸ್ಮರಿಸುತ್ತ ದೇವತೆಗಳನ್ನು ಕೊಲ್ಲಲುದ್ಯುಕ್ತನಾಗಿ ಹಿಮಾಲಯವನ್ನು ಹೊಕ್ಕನು.

೯೭. ಆ ಪಿಪ್ಪಲಾದನು ತಾಯಿಯು ಮರಳಿ ಹೇಳಿದ ಅಪ್ರಿಯವಾದ ಆ ಮಾತನ್ನು ಕೇಳಿ ತಾನಿದ್ದ ಆಸ್ಥಳದಿಂದ ಹಿಮಾಚಲಕ್ಕೆ ತೆರಳಿದನು.

೯೮–೧೦೧. ಅವನು ಮನುಷ್ಯರಿಗೆ ಸ್ವರ್ಗದ ಮೆಟ್ಟಲಿನಂತಿರುವುದೂ ನೆಲವಾದ ಆಕಾಶದಂತಿರುವುದೂ, ಮಹಾಶೇಷನ ಶರೀರದಂತಿರುವುದೂ ಆಗಿರುವ ಹಿಮಾಲಯ ವನ್ನು ಸೇರಿ, ಅಲ್ಲಿ ಅಲ್ಲಾಡದಿರುವ ಮೋಟುಮರದಂತೆ ನಿಂತು ಹೀಗೆ ಪ್ರತಿಜ್ಞೆ ಮಾಡಿದನು. "ನನ್ನ ತಂದೆಯನ್ನು ಕೊಂದ ತಾವು ಅಮರರೆಂದು ಗರ್ವಿತರಾದ ಆ

ಪ್ರತಿಜ್ಞಾಂ ಕುರುತೇ ಯತ್ರ ಸ್ಥಿತಃ ಸ್ಥಾಣುರಿವಾಚಲಃ ।
ಹಂತಾರೋ ಯೇ ಮಮ ಪಿತುಸ್ತಾನ್ ಹನಿಷ್ಯಾಮಿ ಚಾರಣಾತ್ ॥ ೯೯ ॥
ಕೃತ್ಯಾಶಸ್ತ್ರೇಣ ಸಕಲಾನಮರತ್ವೇನ ಗರ್ವಿತಾನ್ ।
ತಸ್ಮಿನ್ ಸ್ಥಿತಃ ಪ್ರಕುಪಿತಃ ಶಿವಾಯತನಸಂಸದಿ ॥ ೧೦೦ ॥
ಅತ್ರಸ್ಥಃ ಸಾಧಯಿಷ್ಯಾಮಿ ತಾಂ ಕೃತ್ಯಾಂ ಚಿಂತಯನ್ ಹೃದಿ ।
ಕೃತ್ಯಾಂ ವಾ ಸಾಧಯಿಷ್ಯಾಮಿ ಯಾಸ್ಯೇ ವಾ ಯಮಸಾದನಂ ॥ ೧೦೧ ॥
ನಿರ್ದ್ವಂದ್ವೋ ನಿರ್ಭಯೋ ಭೂತ್ವಾ ನಿರಾಹಾರೋ ಹ್ಯಹರ್ನಿಶಂ ।
ಸವ್ಯೇನ ಪಾಣಿನಾ ಸವ್ಯಂ ನಿರ್ಮಥ್ಯೋರುಮಹಂ ಪುನಃ ॥ ೧೦೨ ॥
ತಸ್ಮಾದುತ್ಪಾದಯಿಷ್ಯಾಮಿ ಮಹಾಕೃತ್ಯಾಮಿತಿ ಸ್ಥಿತಃ ।
ಸಂವತ್ಸರೇ ತಸ್ಯ ಗತೇ ಊರುಗಾತ್ರಾದ್ವಿನಿಃಸೃತಾ ॥ ೧೦೩ ॥
ವಡವಾ ಗುರುಭಾರಾರ್ತಾ ವಾಡವೇನಾನ್ವಿತಾ ತದಾ ।
ಊರೋರ್ನಿರ್ಗತ್ಯ ಸಾ ತಸ್ಮಾತ್ಸುಷುವೇ ಸುಮಹಾಬಲಂ ॥ ೧೦೪ ॥
ವಡವಾ ಸ್ವೋದರಾದ್ಗರ್ಭಂ ಜ್ವಾಲಾಮಾಲಾಸಮಾಕುಲಂ ।
ವಿಮುಚ್ಯ ತಮೃಷೇಸ್ತಸ್ಯ ಪುರೋ ಗರ್ಭಂ ಸಮುಜ್ವಲಂ ॥ ೧೦೫ ॥
ಪುನರ್ಗತಾ ಕ್ವಾಽಪಿ ತದಾ ನ ಜ್ಞಾತಾ ಮುನಿನಾ ಹಿ ಸಾ ।
ವಡವಾನಲೋ ನರಸ್ತಸ್ಯಾಃ ಸ ಗರ್ಭೋ ನಿಃಸೃತಸ್ತದಾ ॥ ೧೦೬ ॥
ಕಲ್ಪಾಂತ ಇವ ಭೂತಾನಾಂ ಕಾಲಾಗ್ನಿರಿವ ವರ್ಚಸಾ ।
ವಿದ್ಯುತ್ಪುಂಜಪ್ರತೀಕಾಶಂ ತಂ ದೃಷ್ಟ್ವಾ ಪುರತಃ ಸ್ಥಿತಂ ॥ ೧೦೭ ॥

ದೇವತೆಗಳನ್ನು ಈ ಕೈಲಾಸದ ಬಳಿಯಲ್ಲಿ ನಿಂತು ಕೃತ್ಯಾಸ್ತ್ರದಿಂದ ಕೊಲ್ಲುವೆನು ಅಥವಾ ನಾನೆ ಯಮಪುರಿಗೆ ತೆರಳುವೆನು

೧೦೨–೧೦೬. ನಾನು ಶೀತೋಷ್ಣಗಳನ್ನು ಸಹಿಸುವವನೂ, ಭಯ, ಆಹಾರಗಳಿಲ್ಲದವನೂ ಆಗಿ ಎಡಗೈಯಿಯಿಂದ ಎಡತೊಡೆಯನ್ನು ಕಡೆದು ಅದರಿಂದ ಮಹಾ ಕೃತ್ಯಾದೇವತೆಯನ್ನು ಸೃಷ್ಟಿಸುವೆನು" ಎಂದು ಹಾಗೆ ಮಾಡುತ್ತ ನಿಂತನು. ಹೀಗೆ ಒಂದು ವರ್ಷವು ಕಳೆಯಲು ಅವನ ತೊಡೆಯಿಂದ ವಾಡವಾಗ್ನಿಯಿಂದ ಅತಿಭಾರಗೊಂಡ ಹೆಣ್ಣು ಕುದುರೆಯು ಹೊರಟಿತು. ಅದು ತನ್ನ ಹೊಟ್ಟೆಯಿಂದ ಅತಿಬಲವುಳ್ಳದೂ ಜ್ವಾಲೆಗಳಿಂದ ಕೂಡಿರುವುದೂ ಆದ ಗರ್ಭವನ್ನು ಆ ಋಷಿಕುಮಾರನ ಮುಂದೆ ಹಡೆದ ಮರಳಿ ಎಲ್ಲಿಯೋಹೊರಟುಹೋಯಿತು. ಮುನಿಯೂ ಅದು ಹೋದ ದಾರಿಯನ್ನರಿಯಲಿಲ್ಲ. ಆ ಗರ್ಭವು ವಡವಾಗ್ನಿರೂಪವಾದ ಮನುಷ್ಯನಾಗಿದ್ದಿತು.

೧೦೭–೧೧೯. ಪ್ರಾಣಿಗಳಿಗೆ ಪ್ರಳಯಕಾಲದಂತೆಯೂ, ವರ್ಚಸ್ಸಿನಿಂದ ಪ್ರಳಯಾಗ್ನಿಯಂತೆಯೂ, ಮಿಂಚಿನ ಗೊಂಚಲಿನಂತೆಯೂ ಇರುವ ಆ ವಡವಾಗ್ನಿಯನ್ನು

ಸ ಚಾಽಪಿ ವಿಸ್ಮಿತೋಽತ್ಯಂತಂ ಕಿಮೇತದಿತಿ ಚಿಂತಯನ್ ।
ತತಸ್ತೇನ ಪುರಃಸ್ಥೇನ ವಾಡವೇನ ಚ ವಹ್ನಿನಾ ॥ ೧೦೮ ॥
ಋಷಿಃ ಪ್ರೋಕ್ತಃ ಪಿಪ್ಪಲಾದಃ ಸಾಧಿತೋಽಹಂ ತ್ವಯಾ ಬಲಾತ್ ।
ಇದಾನೀಂ ತೇ ಮಯಾ ಕಾರ್ಯಂ ಕರ್ತವ್ಯಂ ಯತ್ಸಮಾಹಿತಂ ॥೧೦೯॥
ಕರಿಷ್ಯಾಮೀಹ ತತ್ಸರ್ವಮಸಾಧ್ಯಮಪಿ ಸಾಧ್ಯತಾಂ ।
ಸ್ವೋರುಂ ನಿರ್ಮಥ್ಯ ಜನಿತೋ ಯೇನ ಸಂವತ್ಸರಾದಹಂ ।
ತಾತೋರುಣಾ ವಿಹೀನೋಽಪಿ ಕರಿಷ್ಯೇ ತ್ವತ್ಸಮಿಹಿತಂ ॥ ೧೧೦ ॥
ತಚ್ಛ್ರುತ್ವಾ ವಚನಂ ತಸ್ಯ ಮುನಿಃ ಕೋಪಸಮನ್ವಿತಃ ।
ಪ್ರೋವಾಚ ವಿಬುಧಾನ್ ಸರ್ವಾನ್ ಮದ್ದತ್ತಾನ್ ಭಕ್ಷಯ ಸ್ವಯಂ॥ ೧೧೧ ॥

ಪಿತುರ್ವಧಾತ್ಕ್ರೋಧಕೃತಾವಧಾನಂ
ಮತ್ವಾ ಸುರಾ ರೌದ್ರಮತೀವ ಘೋರಂ ।
ಸಮೇತ್ಯ ಸರ್ವೇ ಪುರುಷಂ ಪುರಾಣಂ
ಸಮಾಶ್ರಿತಾಸ್ತೇ ಸಹಸಾ ಸಭಾರ್ಯಾಃ ॥ ೧೧೨ ॥

ನೋಡಿ ಆ ಮುನಿಕುಮಾರನು ಇದೇನೆಂದು ಚಿಂತಿಸುತ್ತ ಆಶ್ಚರ್ಯಗೊಂಡನು. ಬಳಿಕ ಮುಂದೆ ನಿಂತಿರುವ ವಾಡವಾಗ್ನಿಯು ಇಂತೆಂದಿತು. "ಪಿಪ್ಪಲಾದ! ನೀನು ನಿನ್ನ ಬಲದಿಂದ ನನ್ನನ್ನು ಉಂಟುಮಾಡಿರುವೆ. ಈಗ ನನ್ನಿಂದ ನಿನಗೇನಾಗಬೇಕು. ಯಾವ ಅಭೀಷ್ಟವನ್ನು ನೆರವೇರಿಸಬೇಕು.

೧೧೦. ತಂದೆಯೇ! ನೀನು ಒಂದು ವರ್ಷಕಾಲ ತೊಡೆಯನ್ನು ಕಡೆದುದರಿಂದ ಹುಟ್ಟಿದ ನಾನು ತೊಡೆಯಿಲ್ಲದವನಾದರೂ ಅಸಾಧ್ಯವಾದುದನ್ನೂ ಸಾಧಿಸಿ ನಿನ್ನ ಅಭೀಪ್ಸಿತವನ್ನು ನೆರವೇರಿಸುವೆನು.

೧೧೧. ಕ್ರುದ್ಧನಾದ ಆ ಮುನಿಕುಮಾರನು ಆ ಮಾತನ್ನು ಕೇಳಿ ನಾನು ಒಪ್ಪಿಸಿರುವ ಈ ದೇವತೆಗಳನ್ನೆಲ್ಲ ನೀನೇ ಭಕ್ಷಿಸು." ಎಂದನು.

೧೧೨. ದೇವತೆಗಳೆಲ್ಲ ಆ ಮುನಿಕುಮಾರನು ತಂದೆಯ ವಧೆಯಿಂದ ಕುಪಿತನಾಗಿ ಘೋರನಾದುದನ್ನು ತಿಳಿದು ಒಟ್ಟಿಗೆ ಎಲ್ಲರೂ ಸೇರಿ ತಮ್ಮ ಪತ್ನಿಯರೊಡನೆ ಅನಾದಿ ಪುರುಷನಾದ ವಿಷ್ಣುವನ್ನಾಶ್ರಯಿಸಿದರು.

ಸ ತಾನ್ ಸಮಾಶ್ವಾಸ್ಯ ಸುರಾನ್ ವರಿಷ್ಠಂ
ಕೋಪಾನಲಂ ತತ್ರ ಯಯೌ ಪ್ರಹೃಷ್ಟಃ ।
ದೃಷ್ಟ್ವಾ ಚ ತಂ ವೈ ರವಿಪುಂಜಕಾಶ
ಮುವಾಚ ವಿಷ್ಣುರ್ವಚನಂ ವರಿಷ್ಠಂ ॥ ೧೧೩ ॥

ಅಹಂ ಸುರೇಶಾನ ತವೈವ ಪಾರ್ಶ್ವಂ
ವಿಸರ್ಜಿತೋ ಜಾತಭಯೈಶ್ಚ ದೇವೈಃ ।
ಮತ್ತಃ ಶೃಣು ತ್ವಂ ವಚನಂ ಹಿ ಪಥ್ಯಂ
ಯಚ್ಚಾಮರಾಣಾಂ ಭವತೋಽಪಿ ಪಥ್ಯಂ ॥ ೧೧೪ ॥

ಜ್ಞಾತಂ ಬಲಂ ತೇ ವಿಬುಧೈರಚಿಂತ್ಯಂ
ವಿನಾಶನಂ ಚಾತ್ಮವತಾಂ ಹ್ಯವಶ್ಯಂ ।
ಏವಂ ಸ್ಥಿತೇ ಕುರು ವಾಕ್ಯಂ ಸುರಾಣಾ।
ಮೇಕೈಕಮದ್ಧಿ ಪ್ರತಿವಾಸರಂ ತ್ವಂ ॥ ೧೧೫ ॥

ಮುಖ್ಯಾನಾಂ ಕೋಟಿಯಸ್ತ್ರಿಂಶತ್ಸುರಾಣಾಂ ಬಲಶಾಲಿನಾಂ ।
ಕಥಂ ತು ಭಕ್ಷಣಂ ತೇಷಾಂ ಯುಗಪತ್ತ್ವಂ ಕರಿಷ್ಯಸಿ ॥ ೧೧೬ ॥

---

೧೧೩. ಆ ವಿಷ್ಣುವು ದೇವತೆಗಳನ್ನೆಲ್ಲ ಸಮಾಧಾನಗೊಳಿಸಿ ಸಂತೋಷದಿಂದ ಆ ವಡವಾಗ್ನಿಯ ಬಳಿಗೆ ಹೋಗಿ ಸೂರ್ಯಸಮೂಹದಂತೆ ಪ್ರಕಾಶಮಾನವಾದ ಅದನ್ನು ನೋಡಿ ಇಂತೆಂದನು.

೧೧೪. "ಸುರೇಶ್ವರ! ನಿನ್ನಿಂದ ಭಯಗೊಂಡ ದೇವತೆಗಳು ನನ್ನನ್ನು ನಿನ್ನೆಡೆಗೆ ಕಳುಹಿಸಿದ್ದಾರೆ. ದೇವತೆಗಳಿಗೂ, ನಿನಗೂ ಹಿತವನ್ನುಂಟುಮಾಡುವ ನನ್ನ ಮಾತನ್ನು ಲಾಲಿಸು.

೧೧೫. ದೇವತೆಗಳು ಅಚಿಂತ್ಯವೂ, ಸಕಲ ಪ್ರಾಣಿಗಳನ್ನು ಅವಶ್ಯವಾಗಿ ನಾಶಗೊಳಿಸುವುದೂ ಆದ ನಿನ್ನ ಬಲವನ್ನರಿತಿರುವರು. ಹೀಗಿರಲು ನೀನು ಆ ದೇವತೆಗಳ ಮಾತನ್ನು ನಡೆಯಿಸು. ಪ್ರತಿದಿನವೂ ಒಬ್ಬೊಬ್ಬ ದೇವತೆಯನ್ನು ಭಕ್ಷಿಸು.

೧೧೬. ಮೂವತ್ತು ಕೋಟಿ ಬಲಶಾಲಿಗಳಾದ ಪ್ರಧಾನ ಸುರರಿರುವರು. ನೀನು ಒಂದೇ ಸಲ ಅವರನ್ನೆಲ್ಲ ಹೇಗೆ ಭಕ್ಷಿಸುವೆ.

ತಸ್ಮಾದೇಕೈಕಶಸ್ತೇಷಾಂ ಕರ್ತವ್ಯಂ ಭಕ್ಷಣಂ ತ್ವಯಾ ।
ನೈಕೇನ ಭವತಾ ಶಕ್ಯಾ ವಿಧಾತುಂ ಭಕ್ಷಣಕ್ರಿಯಾ ॥ ೧೧೭ ॥
ತಥಾ ಚ ಪಾಂಡುರೋಗಿತ್ವಂ ಹುತಭುಕ್ಪ್ರಾಪ್ತವಾನ್ ಪುರಾ ।
ಅತಿಭಕ್ಷಣಂ ನ ಯುಕ್ತಂ ತಸ್ಮಾತ್ಕುರು ಮತಿಂ ಮಮ ॥ ೧೧೮ ॥
ತಥಾ ಚ ಯುಗಪತ್ತೇಷು ಭಕ್ಷಿತೇಷು ಪುನಸ್ತ್ವಯಾ ।
ಪ್ರತ್ಯಹಂ ಭಕ್ಷಣೋಪಾಯಶ್ಚಿಂತಿತವ್ಯೋ ಬುಭುಕ್ಷಯಾ ॥ ೧೧೯ ॥
ಸಫಲೈವ ಪ್ರತಿಜ್ಞಾ ತೇ ನಾಽನೃತಂ ಮುನಿಭಾಷಿತಂ ।
ಏವಂ ಕೃತೇಽಪಿ ತೇ ಸರ್ವಂ ಭವಿಷ್ಯತಿ ಸಮೀಹಿತಂ ॥ ೧೨೦ ॥
ತತ್ಕರಿಷ್ಯಾಮ್ಯಹಂ ಸರ್ವಮಾಹೈವಂ ಸ ಜನಾರ್ದನಃ ।
ಏಕೈಕಶಃ ಸ ವಿಬುಧಾನ್ ಭಕ್ಷಯಿಷ್ಯತಿ ವಾಡವಃ ॥ ೧೨೧ ॥
ತತಃ ಸುರಾಃ ಸುರೇಶಾನಂ ತಂ ವಿಷ್ಣುಮಮಿತೌಜಸಂ ।
ಪ್ರಣಮ್ಯಾಹುರ್ಯಥಾಯುಕ್ತಂ ಶೋಭನಂ ಭವತಾ ಕೃತಂ ॥ ೧೨೨ ॥
ಭೂಯೋಽದ್ಯ ಪುನರೇವಾಽಸ್ಯ ದೋಷಸ್ಯೋಪಶಮಕ್ರಿಯಾಂ ।
ಕರ್ತುಂ ತ್ವಮೇವ ಶಕ್ತೋಽಸಿ ನಾನ್ಯಸ್ತ್ರಾತಾ ದಿವೌಕಸಾಂ ॥ ೧೨೩ ॥

---

೧೧೭. ಆದುದರಿಂದ ನೀನು ಒಬ್ಬೊಬ್ಬರನ್ನಾಗಿ ಅವರನ್ನು ಭಕ್ಷಿಸಬೇಕು. ನಿನ್ನೊಬ್ಬನಿಂದ ಅವರನ್ನೆಲ್ಲ ಭಕ್ಷಿಸಲು ಸಾಧ್ಯವಿಲ್ಲ.

೧೧೮. ಹಿಂದೆ ಅಗ್ನಿಯು ಹಾಗೆ ಅತಿಯಾಗಿ ಭಕ್ಷಿಸಿ ಪಾಂಡುರೋಗಿಯಾದನು. ಆದುದರಿಂದ ಅತಿಯಾಗಿ ಭಕ್ಷಿಸುವುದು ಉಚಿತವಲ್ಲ.

೧೧೯. ಅಂತೆಯೇ ನೀನು ಒಂದೇಸಾರಿ ಆ ದೇವತೆಗಳನ್ನೆಲ್ಲ ತಿಂದರೆ ತರುವಾಯ ಹಸಿವುಗೊಂಡ ನೀನು ತಿನ್ನುವ ವಸ್ತುಗಳು ಎಲ್ಲಿವೆಯೆಂದು ಆಲೋಚಿಸಬೇಕಾಗುವುದು.

೧೨೦. ಹೀಗೆ ಮಾಡಿದರೆ ನಿನ್ನ ಪ್ರತಿಜ್ಞೆಯು ಸಫಲವೂ, ಮುನಿಯ ಮಾತು ಸತ್ಯವೂ ಆಗಿ ನಿನ್ನ ಇಷ್ಟಾರ್ಥವೆಲ್ಲ ಸಫಲವಾಗುವುದು.

೧೨೧. ವಿಷ್ಣುವು ಹೀಗೆ ಕೇಳಲು ಆ ವಾಡವಾಗ್ನಿಯು ಹಾಗೆಯೇ ಮಾಡುವೆನೆಂದಿತು. ಅದರಂತೆ ಆ ವಡವಾಗ್ನಿಯು ಒಬ್ಬೊಬ್ಬರನ್ನಾಗಿ ದೇವತೆಗಳನ್ನು ತಿನ್ನುವುದು.

೧೨೨. ಅನಂತರ ದೇವತೆಗಳು ಅತ್ಯಂತ ತೇಜಸ್ವಿಯಾದ ಆ ವಿಷ್ಣುವನ್ನು ನಮಸ್ಕರಿಸಿ, "ಎಲೈ ಪ್ರಭುವೇ ನೀನು ಒಳ್ಳೆಯ ಕೆಲಸವನ್ನು ಮಾಡಿದೆ.

೧೨೩. ಮರಳಿ ಈ ಕಷ್ಟವನ್ನು ಪರಿಹರಿಸಲು ನೀನೇ ಶಕ್ತನು. ದೇವತೆಗಳನ್ನು ರಕ್ಷಿಸುವವರು ಬೇರೆ ಯಾರೂ ಇಲ್ಲ" ಎಂದರು.

ತತಃ ಪೀತಾಂಬರಧರಃ ಶಂಖಚಕ್ರಗದಾಧರಃ ।
ಯುಷ್ಮದ್ಭಯಂ ಹರಿಷ್ಯಾಮಿ ತಾನ್ ಸುರಾನಾಹ ಮಾಧವಃ ॥ ೧೨೪ ॥
ಶ್ರುತ್ವೈತದ್ವಿಬುಧಾಃ ಸರ್ವೇ ಹರ್ಷೇಣೋತ್ಫುಲ್ಲಲೋಚನಾಃ ॥ ೧೨೫ ॥
ತತಸ್ತಾನ್ವಿಬುಧಾನ್ ದೃಷ್ಟ್ವಾ ಪ್ರೋವಾಚ ಸ ತು ವಾಡವಃ ।
ಕಿಮಿದಾನೀಂ ಮಯಾ ಕಾರ್ಯಂ ಭವತಾಂ ಕಥ್ಯತಾಂ ಹಿ ತತ್ ॥ ೧೨೬ ॥
ಅತ್ರಾಂತರೇ ವಿಶ್ವತನುರ್ಮಹೌಜಾ
ವಿಮೋಹಯಂಸ್ತಂ ಜ್ವಲನಂ ಸ್ವಬುದ್ಧ್ಯಾ ।
ಪ್ರೋವಾಚ ಪೂರ್ವಂ ವಿಹಿತಾ ಯದಾಪ
ಸ್ತಾ ಭಕ್ಷಯಸ್ವೇತಿ ಮಹಾನುಭಾವಃ ॥ ೧೨೭ ॥
ಏತದ್ವ್ಯವಸಿತಂ ವಿಷ್ಣೋರ್ಯಃ ಶೃಣೋತಿ ಸಮಾಹಿತಃ ।
ಸೋಽತಿಚಾರಭಯಾನ್ಮುಕ್ತೋ ಜ್ಞಾನಂ ಮುಕ್ತಿಮವಾಪ್ನುಯಾತ್॥೧೨೮॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಡವಾನಲವಂಚನ ವೃತ್ತಾಂತ ವರ್ಣನಂ ನಾಮ
ದ್ವಾತ್ರಿಂಶೋಽಧ್ಯಾಯಃ

---

೧೨೪. ತರುವಾಯ ಪೀತಾಂಬರವನ್ನುಟ್ಟವನೂ, ಶಂಖ ಚಕ್ರ ಗದೆಗಳನ್ನು ಹಿಡಿದವನೂ ಆದ ಮಾಧವನು ದೇವತೆಗಳನ್ನು ಕುರಿತು ನಿಮ್ಮ ಭಯವನ್ನು ನಾನು ಪರಿಹರಿಸುವೆನೆಂದನು.

೧೨೫. ಇದನ್ನು ಕೇಳಿ ದೇವತೆಗಳೆಲ್ಲ ಸಂತೋಷದಿಂದ ಅರಳಿದಕಣ್ಣುಗಳುಳ್ಳವರಾದರು.

೧೨೬. ಬಳಿಕ ಆ ವಾಡವಾಗ್ನಿಯು ಆ ದೇವತೆಗಳನ್ನು ನೋಡಿ, "ನಾನೀಗ ಏನನ್ನು ಮಾಡಬೇಕು. ಅದನ್ನು ಹೇಳಿರಿ" ಎಂದಿತು.

೧೨೭. ಈ ಮಧ್ಯದಲ್ಲಿ ಅತ್ಯಂತ ತೇಜಸ್ವಿಯೂ, ಮಹಾತ್ಮನೂ ಆದ ವಿಷ್ಣುವು ಆ ಅಗ್ನಿಯನ್ನು ತನ್ನ ಬುದ್ಧಿಯಿಂದ ಮೋಹಗೊಳಿಸುತ್ತ ನಾನು ಮೊದಲು ಸೃಷ್ಟಿಸಿದ ನೀರನ್ನು ಕುಡಿ ಎಂದನು.

೧೨೮. ವಿಷ್ಣುವಿನ ಈ ಕಾರ್ಯವನ್ನು ಒಮ್ಮನಸ್ಸಿನಿಂದ ಕೇಳಿದವನು ಅತಿಚಾರ ಭಯದಿಂದ ಮುಕ್ತನಾಗಿ ಜ್ಞಾನವನ್ನೂ, ಮೋಕ್ಷವನ್ನೂ ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಡವಾನಲವಂಚನವೃತ್ತಾಂತ ವರ್ಣನವೆಂಬ
ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯಸ್ತ್ರಿಂಶೋಽಧ್ಯಾಯಃ

ಸರಸ್ವತೀವೃತ್ತಾಂತವರ್ಣನಂ

ದೇವ್ಯುವಾಚ :—

ಪಿತುರ್ವಧಾಮರ್ಷಸುಜಾತಮನ್ಯುನಾ
ಯದ್ಯತ್ಕೃತಂ ಕರ್ಮ ಪುರಾ ಮಹರ್ಷಿಣಾ ।
ದಧೀಚಿಪುತ್ರೇಣ ಸುರಪ್ರಸಾಧಿನಾ
ಸರ್ವಂ ಶ್ರುತಂ ತದ್ಧಿ ಮಯಾ ಸಮಾಧಿನಾ ॥ ೧ ॥
ಪುನಃ ಪುನರ್ವೈ ವಿಬುಧೈಃ ಸಮಾನಂ
ಯದ್ವೃತ್ತಮಾಸೀತ್ಕಿಮಪಿ ಪ್ರಧಾನಂ ।
ಕಾರ್ಯಂ ಹಿ ತತ್ಸರ್ವಮನುಕ್ರಮೇಣ
ವಿಜ್ಞಾತುಮಿಚ್ಛಾಮಿ ಕುತೂಹಲೇನ ॥ ೨ ॥

ಈಶ್ವರ ಉವಾಚ :—

ಉಕ್ತೋ ಯದಾಽಸೌ ವಿಬುಧೈಃ ಸಮಸ್ತೈ
ರಾಪಃ ಪುರಾ ತ್ವಂ ಭುವಿ ಭಕ್ಷಯಸ್ವ ।
ಯಥೋಽಮರಾಣಾಂ ಪ್ರಥಮಂ ಹಿ ಜಾತಾ
ಆಪೋಽಗ್ರಜಾಃ ಸರ್ವಸುರಾಽಸುರೇಭ್ಯಃ ॥ ೩ ॥

ಕನ್ನಡದ ಅನುವಾದ

ಸರಸ್ವತೀವೃತ್ತಾಂತವರ್ಣನ

೧. ದೇವಿಯು ಹೇಳುತ್ತಾಳೆ:—ಶಂಕರ! ಚಿತ್ತೈಕಾಗ್ರ್ಯವುಳ್ಳ ನಾನು ದಧೀಚಿಯ ತನಯನಾದ ಪಿಪ್ಪಲಾದನು ತಂದೆಯ ವಧೆಯಿಂದ ಕೋಪಗೊಂಡು ದೇವತೆಗಳಿಗೆ ಮಾಡಿದ ಪ್ರತೀಕಾರವನ್ನೆಲ್ಲ ಕೇಳಿದೆನು.

೨. ದೇವತೆಗಳಿಂದ ನಡೆದ ಮುಖ್ಯ ಕಾರ್ಯವನ್ನು ಮತ್ತೆ ಕ್ರಮವಾಗಿ ತಿಳಿಯಲು ಬಯಸುವೆನು.

೩. ಈಶ್ವರನು ಹೇಳುತ್ತಾನೆ:—ನೀರು ಸಮಸ್ತ ಸುರಾಸುರರಿಗಿಂತಲೂ ಮೊದಲು ಹುಟ್ಟಿರುವುದರಿಂದ ಅದನ್ನು ಮೊದಲು ನೀನು ಭಕ್ಷಿಸು ಎಂದು ದೇವತೆಗಳೊಡನೆ ವಿಷ್ಣುವು ನುಡಿದನು.

ತೇನೈವಮುಕ್ತಸ್ತು ಮಹಾತ್ಮನಾ ತದಾ
ಪ್ರದರ್ಶಯಧ್ವಂ ಮಮತಾ ಯತಃ ಸ್ಥಿತಾಃ ।
ಪೀತ್ವಾ ಸುರಾಃ ಸರ್ವಮಹಂ ಪುರಸ್ತಾ
ತ್ಕೃತ್ಯಂ ಕರಿಷ್ಯೇ ಸುರಭಕ್ಷಣಂ ಹಿ ॥ ೪ ॥

ತತ್ರಾಽಪಿ ನೇತುಂ ಯದಿ ಮಾಂ ಸಮರ್ಥಾ
ಯತ್ರಾಸತೇ ವಾರಿಚಯಾಃ ಸಮೇತಾಃ ।
ಅತೋಽನ್ಯಥಾ ನಾಽಹಮಲೀಕವಾದೀ
ಪ್ರಾಣೇ ಪ್ರಯಾತೇ ಮುನಿವಾಕ್ಯಕಾರೀ ॥ ೫ ॥

ಅಹೋಕ್ತೇ ಪುಂಡರೀಕಾಕ್ಷ ಔರ್ವಂ ಹಿ ವಾಡವಂ ತದಾ ।
ತ್ವಾಂ ಪ್ರಾಪಯಿಷ್ಯೇ ಯತ್ರಾಽಪಃ ಕೇನ ಯಾನೇನ ವಾಡವ ॥ ೬ ॥

ವಾಡವ ಉವಾಚ :—

ನಾಽಹಂ ಹಯಾದಿಭಿರ್ಯಾನೈರ್ಗಂತುಂ ತತ್ರ ಸಮುತ್ಸಹೇ ।
ಕುಮಾರೀಕರಸಂಪರ್ಕಮೇಕಂ ಮುಕ್ತ್ವಾ ಮತಂ ಹಿ ಮೇ ॥ ೭ ॥

---

೪. ಮಹಾತ್ಮನಾದ ಮಾಧವನು ಹೀಗೆನ್ನಲು ಆ ವಾಡವಾಗ್ನಿಯು, "ಎಲೈ ಸುರರೆ! ಈಗ ನೀರು ಎಲ್ಲಿದೆ? ತೋರಿಸಿರಿ. ಮೊದಲು ನಾನು ಅದನ್ನು ಕುಡಿದು ಬಳಿಕ ದೇವತೆ ಗಳನ್ನು ತಿನ್ನುವೆನು.

೫. ಆ ನೀರಿರುವ ಸ್ಥಳಕ್ಕೆ ನನ್ನನ್ನು ಒಯ್ಯಲು ನೀವು ಶಕ್ತರಾಗುವಿರಷ್ಟೆ? ಮುನಿವಾಕ್ಯವನ್ನು ನಡೆಸುವ ನಾನು ಪ್ರಾಣವು ಹೋದರೂ ಹಾಗೆ ಮಾಡದೆ ಸುಳ್ಳಾಡುವವನಾಗಲಾರೆನು" ಎಂದಿತು.

೬. ಆ ವಾಡವಾಗ್ನಿಯು ಹೀಗೆ ಹೇಳಲು ಮಾಧವನು ಅದನ್ನು ಕುರಿತು ನಾನು ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುವೆನು. ಯಾವ ವಾಹನದಿಂದ ಕರೆದುಕೊಂಡು ಹೋಗಲಿ; ಹೇಳು" ಎಂದು ಕೇಳಿದನು.

೭. ನಾನು ಕನ್ಯೆಯ ಕೈಯನ್ನು ಹಿಡಿದಲ್ಲದೆ ಅಶ್ವವೇ ಮೊದಲಾದ ವಾಹನಗಳಿಂದ ಅಲ್ಲಿಗೆ ತೆರಳಲು ಅಪೇಕ್ಷಿಸುವುದಿಲ್ಲ. ಇದು ನನಗೆ ಅಭಿಮತವು.

ವಿಷ್ಣುರುವಾಚ :—
ಏತತ್ತೇ ಸುಲಭಂ ಯಾನಂ ತಾಂ ಕನ್ಯಾಮಾನಯಾಮ್ಯಹಂ ।
ಯಾ ತ್ವಾಂ ನೇತುಂ ಸಮರ್ಥಾ ಸ್ಯಾದಪಾಂ ಸ್ಥಾನಂ ಸುನಿಶ್ಚಿತಂ ॥ ೮ ॥
ಈಶ್ವರ ಉವಾಚ :—
ಸುರಭೀಶಾಪಸಂತಪ್ತಾ ಪ್ರಾಗುಪಾತ್ತದಶಾಫಲಾ ।
ಸರಸ್ವತೀ ಯಾನಭೂತಾ ತಸ್ಯ ಸಾ ವಿಷ್ಣುನಾ ಕೃತಾ ॥ ೯ ॥
ತತೋಽಬ್ರವೀದ್ವಿಭುರ್ಗಂಗಾಂ ಪಾರ್ಶ್ವತಃ ಸಮುಪಸ್ಥಿತಾಂ ।
ಏನಂ ವಹ್ನಿಂ ಮಹಾಭಾಗೇ ವೇಗಾನ್ನಯ ಮಹೋದಧಿಂ ।
ನಾಽನ್ಯಾ ಶಕ್ತಾ ಸಮಾನೇತುಂ ತ್ವಾಂ ವಿನಾ ಲೋಕಪಾವನಿ ॥ ೧೦ ॥
ಗಂಗೋವಾಚ :—
ನಾಸ್ತಿ ಮೇ ಭಗವಂಛಕ್ತಿರೌರ್ವಂ ವೋಢುಂ ಜಗತ್ಪತೇ ।
ರೌದ್ರರೂಪೀ ಮಹಾನೇಷ ದಹತ್ಯೇವಾಽನಲೋ ಭೃಶಂ ॥ ೧೧ ॥
ತತಸ್ತು ಯಮುನಾಂ ಪ್ರಾಹ ಸಿಂಧುಂ ತಸ್ಯಾಹ್ಯನಂತರಂ ।
ಅನ್ಯಾ ನದೀಶ್ಚ ವಿವಿಧಾಃ ಪೃಥಕ್ ಪೃಥಗುದಾರಧೀಃ ॥ ೧೨ ॥

---

೮. ವಿಷ್ಣುವು ಹೇಳುತ್ತಾನೆ :— ಈ ವಾಹನವು ಸುಲಭವಾದುದು. ನಿನ್ನನ್ನು ಆ ನೀರಿನೆಡೆಗೆ ನಿಜವಾಗಿಯೂ ಕರೆದುಕೊಂಡು ಹೋಗಲು ಶಕ್ತಳಾದ ಕನ್ಯೆಯನ್ನು ನಾನು ಕರೆತರುವೆನು.

೯. ಈಶ್ವರನು ಹೇಳುತ್ತಾನೆ :—ವಿಷ್ಣುವು ಹಿಂದೆ ಗೋವುಗಳ ಶಾಪದಿಂದ ಸಂತಪ್ತಳೂ, ದುರ್ದಶೆಯನ್ನು ಹೊಂದಿದವಳೂ ಆದ ಸರಸ್ವತಿಯನ್ನು ಆ ವಾಡವಾಗ್ನಿಗೆ ವಾಹನವಾಗಿ ಮಾಡಿದನು.

೧೦. ಬಳಿಕ ವಿಷ್ಣುವು ತನ್ನ ಪಾರ್ಶ್ವದಲ್ಲಿರುವ ಗಂಗೆಯನ್ನು ಕುರಿತು, "ಲೋಕವನ್ನು ಪವಿತ್ರಗೊಳಿಸುವ ಭಾಗ್ಯಶಾಲಿನಿಯಾದ ಗಂಗೆಯೆ ! ಈ ಅಗ್ನಿಯನ್ನು ತ್ವರೆಯಿಂದ ಸಮುದ್ರವನ್ನು ಹೊಂದಿಸು. ನಿನ್ನನ್ನು ಬಿಟ್ಟು ಬೇರೆ ಯಾರೂ ಈ ವಾಡವಾಗ್ನಿಯನ್ನು ತೆಗೆದುಕೊಂಡು ಹೋಗಲು ಸಮರ್ಥರಲ್ಲ.

೧೧. ಗಂಗೆಯು ಹೇಳುತ್ತಾಳೆ :—ಪೂಜ್ಯನೆ ! ಈ ವಾಡವಾಗ್ನಿಯನ್ನು ಹೊರಲು ನನಗೆ ಶಕ್ತಿಯಿಲ್ಲ. ಭಯಂಕರ ರೂಪವುಳ್ಳ ಈ ಅಗ್ನಿಯು ಅತ್ಯಂತವಾಗಿ ಸುಡುವುದು.

೧೨–೧೩. ವಿಷ್ಣುವು ಅನಂತರ ಯಮುನಾ ನದಿಯನ್ನೂ, ತರುವಾಯ ಸಿಂಧು ನದಿಯನ್ನೂ, ಬಳಿಕ ಇತರ ಅನೇಕ ನದಿಗಳನ್ನೂ ಪ್ರತ್ಯೇಕವಾಗಿ ಕೇಳಲು ಅವುಗಳು

ಅಶಕ್ತಾಸ್ತಾಸ್ಸಮಾನೇತುಂ ಪೃಷ್ಟಾಶ್ಚ ಸುರಸತ್ತಮೈಃ ।
ತತಃ ಸರಸ್ವತೀಂ ಪ್ರಾಹ ದೇವದೇವೋ ಜನಾರ್ದನಃ ।
ತ್ವಮೇವ ವ್ರಜ ಕಲ್ಯಾಣಿ ಪ್ರತೀಚ್ಯಾಂ ಲವಣೋದಧೌ ॥ ೧೩ ॥
ಏವಂ ಕೃತೇ ಸುರಾಃ ಸರ್ವೇ ಭವಿಷ್ಯಂತಿ ಭಯೋಜ್ಝಿತಾಃ ।
ಅನ್ಯಥಾ ವಾಡವೇನೈತೇ ದಹ್ಯಂತೇ ಸ್ವೇನ ತೇಜಸಾ ॥ ೧೪ ॥
ತಸ್ಮಾತ್ತ್ವಂ ರಕ್ಷ ವಿಬುಧಾನೇತಸ್ಮಾತ್ತುಮುಲಾದ್ಭಯಾತ್ ।
ಮಾತೇವ ಭವ ಸುಶ್ರೋಣಿ ಸುರಾಣಾಮಭಯಪ್ರದಾ ॥ ೧೫ ॥
ಏವಮುಕ್ತಾ ಹಿ ಸಾ ತೇನ ವಿಷ್ಣುನಾ ಪ್ರಭವಿಷ್ಣುನಾ ।
ಆಹ ನಾಽಹಂ ಸ್ವತಂತ್ರಾಽಸ್ಮಿ ಪಿತಾ ಮೇ ಧ್ರಿಯತೇ ಚಿರಾತ್ ॥ ೧೬ ॥
ತಸ್ಯಾಽಹಂ ಕಾರಿಣೀ ನಿತ್ಯಂ ಕುಮಾರೀ ಚ ಧೃತವ್ರತಾ ।
ಕಾಲತ್ರಯೇಽಪ್ಯಸ್ವತಂತ್ರಾ ಶ್ರೂಯತೇ ವಿಬುಧೈಃ ಸುತಾ ॥ ೧೭ ॥
ಪಿತ್ರಾದೇಶಂ ವಿನಾ ನಾಽಹಂ ಪದಮೇಕಮಪಿ ಕ್ವಚಿತ್ ।
ಗಚ್ಛಾಮಿ ತಸ್ಮಾತ್ಕೋಽಪ್ಯನ್ಯ ಉಪಾಯಶ್ಚಿಂತ್ಯತಾಂ ಹರೇ ॥ ೧೮ ॥

ವಾಡವಾಗ್ನಿಯನ್ನು ಒಯ್ಯಲು ತಮಗೆ ಶಕ್ತಿಯಿಲ್ಲವೆಂದುವು. ಬಳಿಕ ಮಹಾವಿಷ್ಣುವು ಸರಸ್ವತೀನದಿಯನ್ನು ಕುರಿತು ಇಂತೆಂದನು. "ಸರಸ್ವತಿ ! ನೀನೇ ಈ ವಾಡವಾಗ್ನಿಯನ್ನು ಪಶ್ಚಿಮದಿಕ್ಕಿನಲ್ಲಿರುವ ಲವಣಸಮುದ್ರವನ್ನು ಹೊಂದಿಸು.

೧೪. ಹೀಗೆ ಮಾಡಲು ಸಕಲ ದೇವತೆಗಳೂ ಭಯರಹಿತರಾಗುವರು. ಹೀಗೆ ಮಾಡದಿದ್ದರೆ ವಾಡವಾಗ್ನಿಯು ತನ್ನ ತೇಜಸ್ಸಿನಿಂದ ಈ ದೇವತೆಗಳನ್ನು ಸುಡುವುದು.

೧೫. ಆದುದರಿಂದ ನೀನು ಈ ದೇವತೆಗಳನ್ನು ಈ ಭಯದಿಂದ ರಕ್ಷಿಸು. ತಾಯಿಯಂತೆ ದೇವತೆಗಳಿಗೆ ಅಭಯವನ್ನು ನೀಡು."

೧೬. ಹೀಗೆ ಪ್ರಭುವಾದ ವಿಷ್ಣುವು ಹೇಳಲು ಸರಸ್ವತಿಯು ಇಂತೆಂದಳು. "ಪ್ರಭುವೇ ! ನಾನು ಸ್ವತಂತ್ರಳಲ್ಲ. ನನ್ನ ತಂದೆಯಿರುವನು.

೧೭. ನಾನು ಯಾವಾಗಲೂ ವ್ರತವನ್ನಾಶ್ರಯಿಸಿ ಆ ತಂದೆಯು ಹೇಳಿದಂತೆ ಮಾಡುವವಳು. ಕನ್ಯೆಯು ತ್ರಿಕಾಲದಲ್ಲಿಯೂ ಸ್ವತಂತ್ರಳಲ್ಲವೆಂದು ವಿದ್ವಾಂಸರು ಹೇಳುವುದನ್ನು ಕೇಳಿದ್ದೇನೆ.

೧೮. ಎಲೈ ನಾರಾಯಣನೆ ! ನಾನು ತಂದೆಯ ಅಪ್ಪಣೆಯನ್ನು ಮೀರಿ ಒಂದು ಹೆಜ್ಜೆಯನ್ನೂ ಇಡುವುದಿಲ್ಲ. ಆದುದರಿಂದ ಯಾವುದಾದರೂ ಬೇರೊಂದುಪಾಯವನ್ನಾಲೋಚಿಸು.

ತತ್ಸ್ವರೂಪಂ ವಿದಿತ್ವೈವಂ ಸಮುಭ್ಯೇತ್ಯ ಪಿತಾಮಹಂ ।
ತಮಬ್ರವೀದ್ವಾಸುದೇವೋ ದೇವಕಾರ್ಯಮಿದಂ ಕುರು ॥ ೧೯ ॥
ನಾಽನ್ಯಥಾ ಶಕ್ಯತೇ ನೇತುಂ ವಾಡವೋಽಗ್ನಿರ್ಮಹಾಬಲಃ ।
ಅದೃಷ್ಟದೋಷಾಂ ಮುಕ್ತ್ವೇಮಾಂ ಕುಮಾರೀಂ ತನಯಾಂ ತವ ॥ ೨೦ ॥
ತಚ್ಛ್ರುತ್ವಾ ವಿಷ್ಣುನಾ ಪ್ರೋಕ್ತಂ ಕುಮಾರೀಂ ತನಯಾಂ ತದಾ ।
ಶಿರಸ್ಯಾಘ್ರಾಯ ಸಸ್ನೇಹಮುವಾಚ ಪ್ರಪಿತಾಮಹಃ ॥ ೨೧ ॥
ಯಾಹಿ ದೇವಿ ಸುರಾನ್ ಸರ್ವಾನ್ರಕ್ಷ ತ್ವಂ ಭಯಮಾಗತಾನ್ ।
ವಿನಿಕ್ಷಿಪ ತ್ವಂ ನೀತ್ವೈನಂ ವಾಡವಂ ಲವಣಾಂಭಸಿ ।
ಪಿತುರ್ವಾಕ್ಯಂ ಹಿ ಸಾ ಶ್ರುತ್ವಾ ಪ್ರೋವಾಚ ಶ್ರುತಿಲಕ್ಷಣಾ ॥ ೨೨ ॥

ಸರಸ್ವತ್ಯುವಾಚ :—

ಏಷಾಽಸ್ಮಿ ಪ್ರಸ್ಥಿತಾ ತಾತ ತವ ವಾಕ್ಯಾದಸಂಶಯಂ ।
ರೌದ್ರೋಽಯಂ ವಾಡವೋ ವಹ್ನಿಸ್ತನುಂ ಮೇ ಭಕ್ಷಯಿಷ್ಯತಿ ॥ ೨೩ ॥
ಪ್ರಾಪ್ತಂ ಕಲಿಯುಗಂ ರೌದ್ರಂ ಸಾಂಪ್ರತಂ ಪೃಥಿವೀತಲೇ ।
ಲೋಕಃ ಪಾಪಸಮಾಚಾರಃ ಸ್ಪರ್ಶಯಿಷ್ಯತಿ ಮಾಂ ಪ್ರಭೋ ॥ ೨೪ ॥

೧೯–೨೦. ವಿಷ್ಣುವು ಹೀಗೆ ಅವಳ ಮಾತಿನ ಅಭಿಪ್ರಾಯವನ್ನರಿತು ಬ್ರಹ್ಮನನ್ನು ಹೊಂದಿ ಅವನನ್ನು ಕುರಿತು ಇಂತೆಂದನು. "ಚತುರ್ಮುಖ ! ನೀನು ಈ ದೇವತೆಗಳ ಕಾರ್ಯವನ್ನು ನೆರವೇರಿಸು. ನಿನ್ನ ಮಗಳೂ ನಿರ್ದುಷ್ಟಳೂ ಆಗಿರುವ ಈ ಸರಸ್ವತಿಯನ್ನು ಬಿಟ್ಟು ಬೇರೆ ಯಾರಿಂದಲೂ ಅತಿ ಬಲವುಳ್ಳ ಈ ವಾಡವಾಗ್ನಿಯನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ".

೨೧. ಬ್ರಹ್ಮನು ವಿಷ್ಣುವು ಹೇಳಿದ ಆ ಮಾತನ್ನು ಕೇಳಿ ಮಗಳ ತಲೆಯನ್ನು ಆಘ್ರಾಣಿಸಿ ಪ್ರೀತಿಯಿಂದ ಹೀಗೆಂದನು.

೨೨. "ದೇವಿ ! ಹೊರಡು. ಭಯಗೊಂಡ ದೇವತೆಗಳನ್ನು ರಕ್ಷಿಸು. ಈ ವಾಡವಾಗ್ನಿಯನ್ನು ತೆಗೆದುಕೊಂಡು ಹೋಗಿ ಲವಣ ಸಮುದ್ರದಲ್ಲಿ ಎಸೆ". ಬ್ರಹ್ಮನು ಹೀಗೆ ಹೇಳಲು ಶ್ರುತಿಸ್ವರೂಪಳಾದ ಆ ಸರಸ್ವತಿಯು ತಂದೆಯ ಮಾತನ್ನು ಕೇಳಿ ಇಂತೆಂದಳು.

೨೩. ಸರಸ್ವತಿಯು ಹೇಳುತ್ತಾಳೆ :—ತಂದೆಯೇ ! ಇಗೊ ನಾನು ನಿನ್ನ ಮಾತಿನಂತೆ ಹೊರಟೆ. ಆದರೆ ಭಯಂಕರವಾದ ಈ ವಾಡವಾಗ್ನಿಯು ನನ್ನದೇಹವನ್ನು ತಿನ್ನುವುದು.

೨೪. ಸ್ವಾಮಿ ! ಈಗ ಭಯಂಕರವಾದ ಕಲಿಯುಗವು ಒದಗಿರುವುದು. ಭೂಲೋಕದಲ್ಲಿ ಪಾಪಿಗಳಾದ ಜನರು ನನ್ನನ್ನು ಮುಟ್ಟುವರು.

ತತೋ ದುಃಖತರಂ ಕಿಂ ಸ್ಯಾದ್ಯತ್ಪಾಪೈಃ ಸಹ ಸಂಗಮಃ ॥ ೨೫ ॥
ಬ್ರಹ್ಮೋವಾಚ :—
ಯದಿ ಪಾಪಜನಾಕೀರ್ಣಂ ನ ವಾಂಛಸಿ ಧರಾತಲಂ ।
ಪಾತಾಲತಲಸಂಸ್ಥಾ ತ್ವಂ ನಯ ವಹ್ನಿಂ ಮಹೋದಧೌ ॥ ೨೬ ॥
ಯದಾಽತಿಶ್ರಮಸಂಯುಕ್ತಾ ವಹ್ನಿನಾ ದಹ್ಯಸೇ ಭೃಶಂ ।
ತದಾ ವಿಭಿದ್ಯ ವಸುಧಾಂ ಪ್ರತ್ಯಕ್ಷಾ ಭವ ಪುತ್ರಿಕೇ ॥ ೨೭ ॥
ಕೃತ್ವಾ ವಕ್ತ್ರಂ ವಿಶಾಲಾಕ್ಷಿ ಪ್ರಾಚೀ ಭವ ಸುಮಧ್ಯಮೇ ।
ತತೋ ಯಾಸ್ಯಂತಿ ತೀರ್ಥಾನಿ ತ್ವಾಂ ಶ್ರಾಂತಾಂ ಚಾರುಹಾಸಿನೀಂ ॥ ೨೮ ॥
ತಾನಿ ಸರ್ವಾಣಿ ಚಾಽಽಗತ್ಯ ಸಾಹಾಯ್ಯಂ ತೇ ವರಾನನೇ ।
ಕರಿಷ್ಯಂತಿ ತ್ರಯಸ್ತ್ರಿಂಶತ್ಕೋಟ್ಯೋ ವೈ ಮಮ ಶಾಸನಾತ್ ॥ ೨೯ ॥
ಗಚ್ಛ ಪುತ್ರಿ ನ ಸಂತಾಪಸ್ತ್ವಯಾ ಕಾರ್ಯಃ ಕಥಂಚನ ।
ಅರಿಷ್ಟಂ ವ್ರಜ ಪಂಥಾನಂ ಮಾ ಸಂತು ಪರಿಪಂಥಿನಃ ॥ ೩೦ ॥
ಈಶ್ವರ ಉವಾಚ :—
ಏವಮುಕ್ತಾ ತದಾ ತೇನ ಬ್ರಹ್ಮಣಾಽಥ ಸರಸ್ವತೀ ।
ತ್ಯಕ್ತ್ವಾ ಭಯಂ ಹೃಷ್ಟಮನಾಃ ಪ್ರಯಾತುಂ ಸಮುಪಸ್ಥಿತಾ ॥ ೩೧ ॥

---

೨೫. ಪಾಪಿಷ್ಠರ ಸ್ಪರ್ಶಕ್ಕಿಂತ ಹೆಚ್ಚಾದ ದುಃಖವೇನಿರುವುದು ?"

೨೬. ಬ್ರಹ್ಮನು ಹೇಳುತ್ತಾನೆ:—ನೀನು ಪಾಪಿಗಳಾದ ಜನರಿಂದ ತುಂಬಿದ ಈ ಭೂಮಿಯನ್ನಿಚ್ಛಿಸದಿದ್ದರೆ ಪಾತಾಳದಲ್ಲಿದ್ದವಳಾಗಿ ವಾಡವಾಗ್ನಿಯನ್ನು ಸಮುದ್ರವನ್ನು ಹೊಂದಿಸು.

೨೭. ಮಗು! ನಿನ್ನನ್ನು ವಾಡವಾಗ್ನಿಯು ಅತಿಶಯವಾಗಿ ಸುಟ್ಟು ಆಯಾಸಗೊಳಿಸಿದಾಗ ಭೂಮಿಯನ್ನು ಭೇದಿಸಿ ಪ್ರತ್ಯಕ್ಷಳಾಗು.

೨೮. ವಿಶಾಲಾಕ್ಷಿ! ಮುಖವನ್ನು ಪೂರ್ವಾಭಿಮುಖವಾಗಿ ಮಾಡು. ಆಗ ಬಳಲಿದ ನಿನ್ನಲ್ಲಿ ಇತರ ತೀರ್ಥಗಳು ಬಂದು ಸೇರುವುವು.

೨೯. ಆ ಮೂವತ್ತು ಮೂರು ಕೋಟಿ ತೀರ್ಥಗಳು ನನ್ನ ಅಜ್ಞೆಯಂತೆ ಬಂದು ನಿನಗೆ ಸಹಾಯ ಮಾಡುವುವು.

೩೦. ಹೊರಡು. ಮಗು! ನೀನು ಯಾವ ವಿಧದಿಂದಲೂ ವ್ಯಥೆಗೊಳ್ಳಬೇಡ. ನಿನಗೆ ದಾರಿಯಲ್ಲಿ ಮಂಗಳವಾಗಲಿ. ಶತ್ರುಗಳಿಲ್ಲದಿರಲಿ.

೩೧. ಈಶ್ವರನು ಹೇಳುತ್ತಾನೆ:—ಬ್ರಹ್ಮನು ಹೀಗೆನ್ನಲು ಸರಸ್ವತಿಯು ಭಯವನ್ನು ತ್ಯಜಿಸಿ ಸಂತೋಷಗೊಂಡು ಹೊರಡಲುದ್ಯುಕ್ತಳಾದಳು.

ತಸ್ಯಾಃ ಪ್ರಯಾಣಸಮಯೇ ಶಂಖದುಂದುಭಿನಿಃಸ್ವನೈಃ ।
ಮಂಗಲಾನಾಂ ಚ ನಿರ್ಘೋಷೈರ್ಜಗದಾಪೂರಿತಂ ಶುಭೈಃ ॥ ೩೨ ॥
ಸಿತಾಂಬರಧರಾ ದೇವೀ ಸಿತಚಂದನಗುಂಠಿತಾ ।
ಶಾರದಾಂಬುದಸಂಕಾಶಾ ತಾರಹಾರವಿಭೂಷಿತಾ ॥ ೩೩ ॥
ಸಂಪೂರ್ಣಚಂದ್ರವದನಾ ಪದ್ಮಪತ್ರಾಯತೇಕ್ಷಣಾ ।
ಕೀರ್ತಿರ್ಯಥಾ ಮಹೇಂದ್ರಸ್ಯ ಪೂರಯಂತೀ ದಿಶೋ ದಶ ॥ ೩೪ ॥
ಸ್ವತೇಜಸಾ ದ್ಯೋತಯಂತೀ ಸರ್ವಮಾಭಾಸಯಜ್ಜಗತ್ ।
ಅನುವ್ರಜಂತೀ ಗಂಗಾ ವೈ ತಯೋಕ್ತಾ ವರವರ್ಣಿನಿ ॥ ೩೫ ॥
ದ್ರಕ್ಷ್ಯಾಮಿ ತ್ವಾಂ ಪುನರಹಂ ಕುತ್ರ ವೈ ವಸತೀಂ ಸಖಿ ।
ಏವಮುಕ್ತಾ ತಯಾ ಗಂಗಾ ಪ್ರೋವಾಚ ಸ್ನಿಗ್ಧಯಾ ಗಿರಾ ॥ ೩೬ ॥
ಯದೈವ ವೀಕ್ಷಸೇ ಪ್ರಾಚೀದಿಶಿ ಪ್ರಾಪ್ಸ್ಯಸಿ ಮಾಂ ತದಾ ।
ಸುರೈಃ ಪರಿವೃತಾ ಸರ್ವೈಸ್ತತ್ರಾಽಹಂ ತವ ಸುವ್ರತೇ ॥ ೩೭ ॥
ದರ್ಶನಂ ಸಂಪ್ರದಾಸ್ಯಾಮಿ ತ್ಯಜ ಶೋಕಂ ಶುಚಿಸ್ಮಿತೇ ।
ತಾಮಾಪೃಚ್ಛ್ಯ ತತೋ ಗಂಗಾಂ ಪುನರ್ದರ್ಶನಮಸ್ತು ತೇ ॥ ೩೮ ॥

---

೩೨. ಅವಳ ಪ್ರಯಾಣ ಸಮಯದಲ್ಲಿ ಶಂಖ, ನಗಾರಿಗಳ ಧ್ವನಿಗಳೂ, ಮಂಗಳ ಘೋಷಗಳೂ ಪ್ರಪಂಚವನ್ನು ತುಂಬಿದುವು.

೩೩–೩೫. ಶ್ವೇತಾಂಬರವನ್ನುಟ್ಟವಳೂ, ಶ್ವೇತಗಂಧಾನುಲಿಪ್ತಳೂ, ಶರತ್ಕಾಲದ ಮೋಡದಂತಿರುವವಳೂ, ಮುತ್ತಿನ ಸರದಿಂದ ಅಲಂಕಾರಗೊಂಡವಳೂ, ಪೂರ್ಣ ಚಂದ್ರನಂತೆ ಮುಖವುಳ್ಳವಳೂ, ಕಮಲದಂತೆ ಕಣ್ಣುಗಳುಳ್ಳವಳೂ ಆದ ಆ ಸರಸ್ವತಿಯು ಮಹೇಂದ್ರನ ಕೀರ್ತಿಯಂತೆ ಹತ್ತು ದಿಕ್ಕುಗಳನ್ನೂ ತನ್ನ ತೇಜಸ್ಸಿನಿಂದ ಬೆಳಗುತ್ತ ಸಕಲ ಪ್ರಪಂಚವನ್ನೂ ಪ್ರಕಾಶಗೊಳಿಸಿದಳು. ಅವಳು ತನ್ನನ್ನು ಹಿಂಬಾಲಿಸುತ್ತಿರುವ ಗಂಗೆಯನ್ನು ಕುರಿತು ಇಂತೆಂದಳು.

೩೬. "ಸಖಿ! ಮರಳಿ ನಾನು ನಿನ್ನನ್ನು ಎಲ್ಲಿನೋಡಲಿ? ಎಂದು ಕೇಳಲು ಗಂಗೆಯು ಸವಿನುಡಿಯಿಂದ ಹೀಗೆಂದಳು.

೩೭–೪೩. "ನೀನು ಯಾವಾಗ ಪೂರ್ವದಿಕ್ಕನ್ನು ನೋಡುವೆಯೊ, ಆಗ ನನ್ನನ್ನು ಹೊಂದುವೆ. ನಾನು ಅಲ್ಲಿ ನಿನಗೆ ದೇವತೆಗಳೊಡನೆ ದರ್ಶನವನ್ನು ಕೊಡುವೆನು. ನೀನು ದುಃಖಿಸಬೇಡ, ಎಂದು ಗಂಗೆಯು ಹೇಳಲು ಸರಸ್ವತಿಯು, " ಮರಳಿ ನಿನ್ನ

ಗಚ್ಛ ಸ್ವಮಾಲಯಂ ಭದ್ರೇ ಸ್ಮರ್ತವ್ಯಾಽಹಂ ತ್ವಯಾಽನಘೇ ।
ಯಮುನಾಽಪಿ ತಥಾ ಚೈವಂ ಗಾಯತ್ರೀ ಸುಮನೋರಮಾ ॥ ೩೯ ॥
ಸಾವಿತ್ರೀ ಸಹಿತಾಃ ಸರ್ವಾಃ ಸಖ್ಯಃ ಸಂಪ್ರೇಷಿತಾಸ್ತದಾ ।
ತತೋ ವಿಸೃಜ್ಯ ತಾಂ ದೇವೀ ನದೀ ಭೂತ್ವಾ ಸರಸ್ವತೀ ॥ ೪೦ ॥
ಹಿಮವಂತಂ ಗಿರಿಂ ಪ್ರಾಪ್ಯ ಪ್ಲಕ್ಷಾತ್ತತ್ರ ವಿನಿರ್ಗತಾ ।
ಅವತೀರ್ಣಾ ಧರಾಪೃಷ್ಠೇ ಮತ್ಸ್ಯಕಚ್ಛಪಸಂಕುಲಾ ॥ ೪೧ ॥
ಗ್ರಾಹಡಿಂಡಿಮಸಂಪೂರ್ಣಾ ತಿಮಿನಕ್ರಗಣೈರ್ಯುತಾ ।
ಹಸಂತೀ ಚ ಮಹಾದೇವೀ ಫೇನೌಘೈಃ ಸರ್ವತೋ ದಿಶಂ ॥ ೪೨ ॥
ಪುಣ್ಯತೋಯವಹಾ ದೇವೀ ಸ್ತೂಯಮಾನಾ ದ್ವಿಜಾತಿಭಿಃ ।
ವಾಡವಂ ವಹ್ನಿಮಾದಾಯ ಹಯವೇಗೇನ ನಿಃಸೃತಾ ॥ ೪೩ ॥
ಭಿತ್ವಾ ವೇಗಾದ್ಧರಾಪೃಷ್ಠಂ ಪ್ರವಿಷ್ಟಾಽಥ ಮಹೀತಲಂ ।
ಯದಾ ಯದಾಽಭವಚ್ಛ್ರಾಂತಾ ದಹ್ಯತೇ ವಾಡವಾಽಗ್ನಿನಾ ।
ತದಾ ತದಾ ಮರ್ತ್ಯಲೋಕೇ ಯಾತಿ ಪ್ರತ್ಯಕ್ಷತಾಂ ನದೀ ॥ ೪೪ ॥
ತತಸ್ತು ಜಾಯತೇ ಪ್ರಾಚೀ ಸಂತಪ್ತಾ ವಾಡವೇನ ತು ।
ತತೋ ವೈ ಯಾನಿ ತೀರ್ಥಾನಿ ಕೀರ್ತಿತಾನಿ ಪುರಾತನೈಃ ॥ ೪೫ ॥

ದರ್ಶನವಾಗಲಿ. ನೀನು ನಿನ್ನ ಸ್ಥಾನಕ್ಕೆ ತೆರಳು. ನನ್ನನ್ನು ಸ್ಮರಿಸುತ್ತಿರು" ಎಂದಳು. ಬಳಿಕ ಸರಸ್ವತಿಯು ಯಮುನಾ, ಗಾಯತ್ರೀ, ಸಾವಿತ್ರಿಯರಿಂದ ಸಹಿತರಾದ ಎಲ್ಲ ಸಖಿಯರನ್ನು ಕಳುಹಿಸಿ ತಾನು ನದಿಯಾಗಿ ಹಿಮಾಲಯವನ್ನು ಸೇರಿ ಅಲ್ಲಿ ಅರಳಿಮರ ದಿಂದ ಹೊರಟು ಭೂಮಿಯಲ್ಲಿಳಿದು ಮೀನು, ಆಮೆ, ಮೊಸಳೆ, ತಿಮಿಗಳಿಂದ ಕೂಡಿ ದವಳೂ, ಎಲ್ಲ ದಿಕ್ಕಿನಲ್ಲಿಯೂ ನೊರೆಗಳಿಂದ ನಗುವವಳೂ, ಪವಿತ್ರವಾದ ನೀರುಳ್ಳ ವಳೂ, ದ್ವಿಜರಿಂದ ಸ್ತೋತ್ರಮಾಡಲ್ಪಡುವವಳೂ ಆಗಿ ವಾಡವಾಗ್ನಿಯನ್ನು ಹೊತ್ತು ಕುದುರೆಯಂತೆ ವೇಗದಿಂದ ಹೊರಟಳು.

೪೪. ಅವಳು ವೇಗದಿಂದ ಭೂಮಿಯನ್ನು ಪ್ರವೇಶಿಸಿ ಆಯಾಸಗೊಂಡಾಗ ವಾಡವಾಗ್ನಿಯು ಸುಡಲಾರಂಭಿಸಿತು. ಆಗ ಅವಳು ಪ್ರತ್ಯಕ್ಷಳಾದಳು.

೪೫-೪೭. ಅವಳು ವಾಡವಾಗ್ನಿಯಿಂದ ಸಂತಾಪಗೊಂಡು ಪೂರ್ವಾಭಿಮುಖ ವಾಗಿ ಹೊರಡಲು ಪೂರ್ವಿಕರು ಹೇಳಿರುವ ಭೂಮಿ, ಆಕಾಶ ಸ್ವರ್ಗಗಳಲ್ಲಿರುವ

ದಿವ್ಯಾಂತರಿಕ್ಷಭೌಮಾನಿ ಸಾನ್ನಿಧ್ಯಂ ಯಾಂತಿ ಭಾಮಿನಿ ।
ತತಶ್ಚಾಶ್ವಾಸಿತಾ ತೈಃ ಸಾ ಸರಸ್ವತೀ ಪುನರ್ನದೀ ।
ಪಾತಾಲತಲಮಾಸಾದ್ಯ ಜಗಾಮ ಮಕರಾಲಯಂ ॥ ೪೬ ॥
ಖದಿರಾಮೋದಮಾಸಾದ್ಯ ತತ್ರ ಸಾ ವೀಕ್ಷ್ಯ ಸಾಗರಂ ।
ಗಂತುಂ ಪ್ರವೃತ್ತಾ ತಂ ವಹ್ನಿಮಾದಾಯ ಸುರಸುಂದರಿ ॥ ೪೭ ॥
ನಿರೂಢಭಾರಮಾತ್ಮಾನಂ ದೇವಾದೇಶಾದ್ವಿಚಿಂತ್ಯ ಸಾ ।
ಪ್ರಹೃಷ್ಟಾ ಸುಮನಾಸ್ತಸ್ಮಾತ್ಪ್ರವೃತ್ತಾ ದಕ್ಷಿಣಾಮುಖೀ ॥ ೪೮ ॥
ಏತಸ್ಮಿನ್ನೇವ ಕಾಲೇ ತು ಋಷಯೋ ವೇದಪಾರಗಾಃ ।
ಚತ್ವಾರಶ್ಚ ಮಹಾದೇವಿ ಪ್ರಭಾಸಂ ಕ್ಷೇತ್ರಮಾಶ್ರಿತಾಃ ॥ ೪೯ ॥
ಹರಿಣಶ್ಚಾಽಥ ವಜ್ರಶ್ಚ ನ್ಯಂಕುಃ ಕಪಿಲ ಏವ ಚ ।
ತಪಸ್ತಪ್ಯಂತಿ ತತ್ರಸ್ಥಾಃ ಸ್ವಾಧ್ಯಾಯಾಸಕ್ತಮಾನಸಾಃ ॥ ೫೦ ॥
ಪೃಥಕ್ಪೃಥಕ್ಸಮಾಹೂತಾಃ ಸ್ನಾನಾರ್ಥಂ ತೈಃ ಸರಸ್ವತೀ ।
ಸಾಗರಃ ಸಮ್ಮುಖಸ್ತಸ್ಯಾಃ ಸಹಸಾ ಸಮುಪಸ್ಥಿತಃ ॥ ೫೧ ॥
ತತಃ ಸಾ ಚಿಂತಯಾಮಾಸ ಕಥಂ ಮೇ ಸುಕೃತಂ ಭವೇತ್ ।
ಶಾಪಭೀತಾ ಚ ಸಾ ಸಾಧ್ವೀ ಪಂಚಸ್ರೋತಾಸ್ತದಾಽಭವತ್ ॥ ೫೨ ॥

ಸಮಸ್ತ ತೀರ್ಥಗಳೂ ಬಂದು ಸೇರುವುವು. ಬಳಿಕ ಆ ತೀರ್ಥಗಳಿಂದ ಸಮಾಧಾನ ಗೊಳಿಸಲ್ಪಟ್ಟ ಆ ಸರಸ್ವತೀನದಿಯು ಪಾತಾಳಕ್ಕೆ ಹೋಗಿ ಸಮುದ್ರವನ್ನು ಸೇರಿತು.

೪೭. ಪ್ರಿಯಳೆ! ಆ ಸರಸ್ವತಿಯು ಖದಿರೆಯ ಗಂಧವುಳ್ಳ ಸಾಗರವನ್ನು ನೋಡಿ ಆ ವಾಡವಾಗ್ನಿಯನ್ನು ತೆಗೆದುಕೊಂಡು ಹೊರಡಲುದ್ಯುಕ್ತಳಾದಳು.

೪೮. ಅವಳು ದೇವತೆಗಳ ಅಪ್ಪಣೆಯಂತೆ ತಾನು ಭಾರವನ್ನು ಹೊತ್ತಿರುವೆ ನೆಂದಾಲೋಚಿಸಿ ಸಂತೋಷಗೊಂಡು ಅಲ್ಲಿಂದ ದಕ್ಷಿಣಾಭಿಮುಖವಾಗಿ ಹೊರಟಳು.

೪೯-೫೦. ಈ ಸಮಯದಲ್ಲಿ ವೇದಪಾರಂಗತರೂ, ಪ್ರಭಾಸಕ್ಷೇತ್ರವಾಸಿಗಳೂ ಆದ ಹರಿಣ, ವಜ್ರ, ನ್ಯಂಕು, ಕಪಿಲ ಎಂಬ ನಾಲ್ಕು ಮಂದಿ ಮುನಿಗಳು ವೇದಾಧ್ಯಯನ ದಲ್ಲಾಸಕ್ತರಾಗಿ ಅಲ್ಲಿ ತಪಸ್ಸನ್ನಾಚರಿಸುತ್ತಿದ್ದರು.

೫೧. ಅವರು ಸ್ನಾನಕ್ಕೋಸ್ಕರ ಪ್ರತ್ಯೇಕವಾಗಿ ಸರಸ್ವತೀನದಿಯನ್ನು ಕರೆದರು. ಆಗ ಆ ನದಿಗೆ ಕೂಡಲೆ ಸಾಗರವು ಅಭಿಮುಖವಾಯಿತು.

೫೨. ಬಳಿಕ ಆ ಸರಸ್ವತಿಯು ತನಗೆ ಪುಣ್ಯವು ಹೇಗುಂಟಾದೀತೆಂದು ಆಲೋಚಿಸಿ ಐದು ಪ್ರವಾಹವುಳ್ಳವಳಾದಳು.

ಏಕೈಕಂ ತೋಷಯಾಮಾಸ ತಮೃಷಿಂ ವರವರ್ಣಿನಿ ।
ತತೋऽಸ್ಯಾಃ ಪಂಚನಾಮಾನಿ ಜಾತಾನಿ ಪೃಥಿವೀತಲೇ ॥ ೫೩ ॥
ಹರಿಣೀ ವಜ್ರಿಣೀ ನ್ಯಂಕುಃ ಕಪಿಲಾ ಚ ಸರಸ್ವತೀ ।
ಪಾನಾವಗಾಹನಾನ್ನೃಣಾಂ ಪಂಚಸ್ರೋತಾಃ ಸರಸ್ವತೀ ॥ ೫೪ ॥
ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ।
ಏಷಾಂ ಸಂಯೋಗಜಂ ಚಾऽನ್ಯನ್ನರಾಣಾಂ ಪಂಚಮಂ ಹಿ ಯತ್ ॥ ೫೫ ॥
ಏತತ್ಪಂಚವಿಧಂ ಪುಂಸಾಂ ಪಂಚಧಾऽವಸ್ಥಿತಾ ಸತೀ ।
ನಾಶಯೇತ್ಪಾತಕಂ ಘೋರಂ ಸಖೀಭಿಃ ಸಹಿತಾ ನದೀ ॥ ೫೬ ॥
ಬ್ರಹ್ಮಹತ್ಯಾಂ ಮಹಾಘೋರಾಂ ಪ್ರತಿಲೋಮಾ ಸರಸ್ವತೀ ।
ಪಾನಾವಗಾಹನಾನ್ನೃಣಾಂ ನಾಶಯತ್ಯಖಿಲಂ ಹಿ ಸಾ ॥ ೫೭ ॥
ಪ್ರಮಾದಾನ್ಮದಿರಾಪಾನದೋಷೇಣೋಪಹತಾತ್ಮನಾಂ ।
ತದ್ವ್ಯಪೋಹಾಯ ಕಪಿಲಾ ದ್ವಿಜಾನಾಂ ವಹತೇ ನದೀ ॥ ೫೮ ॥
ಉಪವಾಸಾಜ್ಜಪಾದ್ಧೋಮಾತ್ ಸ್ನಾನಾತ್ಪಾನಾದ್ದ್ವಿಜನ್ಮನಾಂ ।
ಸಪ್ತಾಹಾನ್ನಾಶಯೇತ್ಪಾಪಂ ತತ್ತದ್ಭಾವೇನ ಚೇತಸಾ ॥ ೫೯ ॥
ಸ್ವಯಂ ತೇऽಪಿ ವಿಶುಧ್ಯಂತಿ ಯಥೋಕ್ತವಿಧಿಕಾರಿಣಃ ।
ನ್ಯಂಕುಂ ನದೀಂ ಸಮಾಸಾದ್ಯ ಮಹತಃ ಪಾತಕಾತ್ಕೃತಾತ್ ॥ ೬೦ ॥

---

೫೩. ಆ ಪ್ರವಾಹಗಳಿಂದ ಅವಳು ಪ್ರತ್ಯೇಕವಾಗಿ ಒಬ್ಬೊಬ್ಬ ಮುನಿಯನ್ನೂ ಸಂತೋಷಗೊಳಿಸಿದಳು. ಅದರಿಂದ ಅವಳಿಗೆ ಐದು ಹೆಸರುಗಳುಂಟಾದುವು.

೫೪–೫೬. ಹರಣೀ, ವಜ್ರಿಣೀ, ನ್ಯಂಕು, ಕಪಿಲಾ, ಸರಸ್ವತೀ ಎಂಬ ಐದು ಹೆಸರುಗಳುಳ್ಳ ಆ ನದಿಯು ಐದು ಪ್ರವಾಹಗಳುಳ್ಳವಳಾಗಿ ತನ್ನ ಸಖಿಯರೊಡನೆ ಪಾನ, ಸ್ನಾನಗಳಿಂದ ಮನುಷ್ಯರ ಬ್ರಹ್ಮಹತ್ಯಾ, ಸುರಾಪಾನ, ಸ್ವರ್ಣಸ್ತೇಯ, ಗುರುತಲ್ಪಗಮನ ಎಂಬ ಮಹಾಪಾತಕಗಳನ್ನೂ, ಇವುಗಳ ಸಂಬಂಧದಿಂದುಂಟಾದ ಇತರ ಪಾತಕಗಳನ್ನೂ ಪರಿಹರಿಸುವಳು.

೫೭. ಸರಸ್ವತಿಯು ಪಾನಸ್ನಾನಗಳಿಂದ ಮನುಷ್ಯರ ಅತಿಘೋರವಾದ ಸಮಸ್ತ ಬ್ರಹ್ಮಹತ್ಯೆಯನ್ನೂ ಪರಿಹರಿಸುವಳು.

೫೮. ಕಪಿಲೆಯು ಪ್ರಮಾದದಿಂದ ಹೆಂಡವನ್ನು ಕುಡಿದು ದುಷ್ಟರಾದ ಬ್ರಾಹ್ಮಣರ ಪಾತಕವನ್ನು ಪರಿಹರಿಸಲು ಹರಿಯುತ್ತಿರುವಳು.

೫೯–೬೦. ನ್ಯಂಕುನದಿಯನ್ನು ಹೊಂದಿದ ಬ್ರಾಹ್ಮಣರು ಉಪವಾಸ, ಜಪ, ಹೋಮ, ಸ್ನಾನ, ಪಾನ ಇವುಗಳನ್ನು ಏಳುದಿನ ಭಕ್ತಿಯಿಂದ ಮಾಡುವುದರಿಂದ ಪಾಪವನ್ನು ನೀಗಿಸಿಕೊಂಡು ಶುದ್ಧರಾಗುವರು.

ಸ್ನಾನೋಪಾಸನಪಾನೇನ ವಜ್ರಿಣೀ ಗುರುತಲ್ಪಗಂ ।
ನಾಶಯತ್ಯಖಿಲಂ ಪುಂಸಾಂ ಪಾಪಂ ಭೂರಿ ಭಯಂಕರಂ ॥ ೬೧ ॥
ಸಂಯೋಗಜನ್ಯ ಪಾಪಸ್ಯ ಹರಣಾದ್ಧರಿಣೀ ಸ್ಮೃತಾ ।
ನದೀ ಪುಣ್ಯಜಲೋಪೇತಾ ಸಪ್ತಾಹಮವಗಾಹನಾತ್ ॥ ೬೨ ॥
ಏವಮೇತಾನಿ ಪಾಪಾನಿ ಸರ್ವಾಣಿ ಸುರಸುಂದರಿ ।
ನದೀ ನಾಶಯತೇ ತಥ್ಯಂ ಪಂಚಸ್ರೋತಾ ಸರಸ್ವತೀ ॥ ೬೩ ॥
ತತೋಽಪಶ್ಯತ್ಪುನಶ್ಚಾರುಂ ಸಾ ದೇವೀ ಪಥಿ ಸಂಸ್ಥಿತಂ ।
ಪರ್ವತಂ ಸಾಗರಸ್ಯಾಂತೇ ರೋದ್ಧುಂ ಮಾರ್ಗಮಿವ ಸ್ಥಿತಂ ॥ ೬೪ ॥
ಬ್ರಹ್ಮಾಂಡಮಾನದಂಡೋಽಯಂ ಪುರತೋ ಗಿರಿಸತ್ತಮಃ ।
ವ್ರಜಂತ್ಯಾಃ ಸುರಕಾರ್ಯೇಣ ಮಮ ವಿಘ್ನಕರಃ ಸ್ಥಿತಃ ॥ ೬೫ ॥
ಉಚ್ಚೈಸ್ತರಂ ಮಹಾಶೈಲಮವಲೋಕ್ಯ ಸರಸ್ವತೀ ।
ಅಥ ವೇಗೇನ ರುದ್ಧೇನ ಗಿರಿಣಾ ವಿಸ್ಮಿತಾ ಸತೀ ॥ ೬೬ ॥
ಏವಂ ಸಂಚಿತಯೇದ್ಯಾವನ್ಮನಸಾ ತನ್ಮಹಾದ್ಭುತಂ ।
ತಾವನ್ಮಂಗಲಶಬ್ದೇನ ಪ್ರತಿಬುದ್ಧಃ ಕೃತಸ್ಮರಃ ॥ ೬೭ ॥

---

೬೧. ಸ್ನಾನ, ಪಾನ, ಸೇವೆಗಳಿಂದ ವಜ್ರಿಣೀನದಿಯು ಅತಿಭಯಂಕರವಾದ ಗುರುತಲ್ಪಗಮನದಿಂದುಂಟಾದ ಮನುಷ್ಯರ ಪಾಪವನ್ನು ಸಂಪೂರ್ಣವಾಗಿ ಪರಿಹರಿಸುವುದು.

೬೨. ಪುಣ್ಯಕರವಾದ ನೀರುಳ್ಳ ಹರಣೀನದಿಯು ಏಳುದಿನ ಸ್ನಾನಮಾಡುವುದರಿಂದ ಪರಸ್ತ್ರೀ ಸಂಯೋಗದಿಂದುಂಟಾದ ಪಾಪವನ್ನು ನೀಗಿಸುವುದರಿಂದ ಹರಿಣೀ ಎಂದು ಪ್ರಸಿದ್ಧವಾಯಿತು.

೬೩. ಸುಂದರಿ! ಪಂಚವಿಧ ಪ್ರವಾಹವುಳ್ಳ ಸರಸ್ವತೀನದಿಯು ನಿಜವಾಗಿಯೂ ಪಂಚ ಮಹಾಪಾತಕಗಳನ್ನೇ ಅಲ್ಲದೆ ಇತರವಿಧವಾದ ಸಮಸ್ತ ಪಾಪಗಳನ್ನೂ ನಿವಾರಿಸುವುದು.

೬೪. ಬಳಿಕ ಆ ಸರಸ್ವತಿಯು ಸಮುದ್ರದ ಕೊನೆಯಲ್ಲಿ ದಾರಿಯನ್ನು ತಡೆಯುವುದಕ್ಕೆಂಬಂತೆ ಇರುವ ರಮ್ಯವಾದ ಒಂದು ಪರ್ವತವನ್ನು ಕಂಡಳು.

೬೫. "ಬ್ರಹ್ಮಾಂಡದ ಅಳತೆಕೋಲಾದ ಈ ಶ್ರೇಷ್ಠಶೈಲವು ದೇವತೆಗಳ ಕೆಲಸಕ್ಕಾಗಿ ಹೋಗುತ್ತಿರುವ ನನಗೆ ಮುಂದೆ ಅಡ್ಡಿಯಾಗಿ ನಿಂತಿದೆ".

೬೬–೬೭. ಹೀಗೆ ಸರಸ್ವತಿಯು, ವೇಗದಿಂದ ತನ್ನನ್ನು ತಡೆದು ನಿಂತಿರುವ ಉನ್ನತವಾದ ಆ ಪರ್ವತವನ್ನು ಕಂಡು ಆಶ್ಚರ್ಯಗೊಂಡು ಮನಸ್ಸಿನಲ್ಲಿಯೇ ಆಲೋಚಿಸುತ್ತಿರಲು ಕೃತಸ್ಮರವೆಂಬ ಆ ಪರ್ವತವು ಮಂಗಳಶಬ್ದದಿಂದ ಎಚ್ಚರಗೊಂಡಿತು.

ಗಿರಿಶೃಂಗದ್ವಂದ್ವಚರಂ ದದರ್ಶ ಪುರುಷಂ ಚ ಸಾ ।
ತಾಮಾಹ ದೇವೀಂ ಸ ನಗೋ ಮಾರ್ಗೋ ನಾಸ್ತೀಹ ಸುವ್ರತೇ ॥ ೭೮ ॥
ಅನ್ಯತ್ರ ಕ್ವಾಪಿ ಗಚ್ಛ ತ್ವಂ ಯತ್ರ ತೇಽಭಿಮತಂ ಶುಭೇ ।
ಆಹೈವಮುಕ್ತೇ ಸಾ ದೇವೀ ನರಂ ನಗಶಿರಸ್ಥಿತಂ ॥ ೭೯ ॥
ದೇವಾದೇಶಾತ್ಸಮಾಯಾತಾ ನ ನಿರೋಧ್ಯಾ ಗಿರೇ ತ್ವಯಾ ।
ಏವಮುಕ್ತೇ ಗಿರಿಃ ಪ್ರಾಹ ತಾಂ ದೇವೀಂ ಸುಮನೋರಮಾಂ ॥ ೮೦ ॥
ಪರ್ವತೋಽಹಂ ತ್ವಯಾ ಭದ್ರೇ ಕಿಂ ನ ಜ್ಞಾತಃ ಕೃತಸ್ಮರಃ ।
ತ್ವತ್ಸ್ಪರ್ಶನಾನ್ನ ದೋಷೋಽಸ್ತಿ ಕುಮಾರೀ ತ್ವಂ ಯತೋಽನಘೇ ॥ ೮೧ ॥
ಅತಸ್ತ್ವಾಂ ವರಯೇ ದೇವಿ ಭಾರ್ಯಾ ಮೇ ಭವ ಸುವ್ರತೇ ॥ ೮೨ ॥

ಸರಸ್ವತ್ಯುವಾಚ :—

ಪಿತಾ ಮೇ ಧ್ರಿಯತೇ ಯಸ್ಮಾತ್ತೇನ ನಾಽಹಂ ಸ್ವಯಂವರಾ ।
ತವ ಭಾರ್ಯಾ ಭವಿಷ್ಯಾಮಿ ಮಾರ್ಗಂ ಯಚ್ಛ ಮಮಾಽಧುನಾ ॥ ೮೩ ॥
ಏವಮುಕ್ತೋ ಗಿರಿಃ ಪ್ರಾಹಃ ಅನಿಚ್ಛಂತೀಂ ಮಹಾಬಲಾತ್ ।
ಉದ್ವಾಹಯಿಷ್ಯೇ ತ್ವಾಂ ಭದ್ರೇ ಕಸ್ತ್ರಾತಾಽಸ್ತಿ ತವಾಽಧುನಾ ॥ ೮೪ ॥

೭೮–೮೨. ಅವಳು ಆ ಪರ್ವತದ ಶಿಖರದಲ್ಲಿ ಸಂಚರಿಸುತ್ತಿರುವ ಒಬ್ಬ ಮನುಷ್ಯನನ್ನು ಕಂಡಳು. ಅವನು ಆ ಸರಸ್ವತಿಯನ್ನು ಕುರಿತು, "ಎಲೈ ಮಂಗಳಕರಳೆ! ಇಲ್ಲಿ ದಾರಿಯಿಲ್ಲ. ಬೇರೆ ಎಲ್ಲಿಯಾದರೂ ನಿನ್ನಿಷ್ಟಬಂದಂತೆ ಹೋಗು" ಎನ್ನಲು ಆ ಸರಸ್ವತಿಯು ಪರ್ವತದ ಮೇಲಿರುವ ಪುರಷನನ್ನು ಕುರಿತು ದೇವತೆಗಳ ಅಪ್ಪಣೆಯಿಂದ ಬಂದಿರುವ ನನ್ನನ್ನು ನೀನು ತಡೆಯಬಾರದು ಎಂದಳು. ಆಗ ಆ ಪರ್ವತವು ಆ ಸರಸ್ವತಿಯನ್ನು ಕುರಿತು, "ಮಂಗಳಕರಳೆ ! ಕೃತಸ್ಮರ ಎಂಬ ಪರ್ವತರಾಜನೇ ನಾನು. ನನ್ನನ್ನು ನೀನು ತಿಳಿಯಲಿಲ್ಲವೆ ? ನೀನು ಕುಮಾರಿಯಾದ್ದರಿಂದ ನಿನ್ನ ಸ್ಪರ್ಶದಿಂದ ದೋಷವಿಲ್ಲ. ದೇವಿ ! ಆದ್ದರಿಂದಲೆ ನಾನು ನಿನ್ನನ್ನು ವರಿಸುವೆನು. ನೀನು ನನಗೆ ಪತ್ನಿಯಾಗು". ಎಂದು ಹೇಳಿದುನು.

೮೩. ನನ್ನ ತಂದೆ ಜೀವಂತನಾಗಿರುವುದರಿಂದ ನಾನು ಸ್ವತಂತ್ರವಾಗಿ ವರಿಸಿ ನಿನಗೆ ಪತ್ನಿಯಾಗಲು ಸಾಧ್ಯವಿಲ್ಲ. ದಾರಿಯನ್ನು ಬಿಡು.

೮೪. ಸರಸ್ವತಿಯು ಹೀಗೆ ಹೇಳಲು ಕೃತಸ್ಮರನು " ಭದ್ರೆ ! ನೀನು ಒಪ್ಪದಿದ್ದರೂ ನಾನು ನಿನ್ನನ್ನು ಬಲಾತ್ಕಾರದಿಂದ ವರಿಸುವೆನು. ಈಗ ನಿನ್ನನ್ನು ರಕ್ಷಿಸುವವರು ಯಾರಿದ್ದಾರೆ ?" ಎಂದನು.

ಸಾ ತಂ ಮನೋಭವಾಕ್ರಾಂತಂ ಮತ್ವಾ ದಿವ್ಯೇನ ಚಕ್ಷುಷಾ ।
ಆಹ ನಾಸ್ತಿ ಮಮ ತ್ರಾತಾ ತ್ವಾಮೇವ ಶರಣಂ ಗತಾ ॥ ೭೫ ॥
ತ್ವಯೋದ್ವಾಹ್ಯಾ ಯದ್ಯವಶ್ಯಮಹಮೇವಂ ಮಹಾಬಲ ।
ಅಸ್ನಾತಾಂ ನೋದ್ವಹ ವಿಭೋ ಸ್ನಾನಂ ಕರ್ತುಂ ಚ ದೇಹಿ ಮೇ ॥ ೭೬ ॥
ತಾಮುವಾಚ ತತಃ ಶೈಲಃ ಸ್ವಸಂಪದಭಿಮಾನವಾನ್ ।
ಸೌಖ್ಯದಂ ಪಶ್ಯ ಸುಭಗೇ ಮಯಿ ಸಂಪೂರ್ಣವೈಭವಂ ॥ ೭೭ ॥
ದ್ವಂದ್ವಾನಿ ಯತ್ರ ಗಾಯಂತಿ ಕಿನ್ನರಾಣಾಂ ಮನೋರಮಂ ।
ಶ್ರೂಯತೇ ಚ ಸುನಿಧ್ವಾನಂ ತಂತ್ರೀವಾದ್ಯಮಥಾಪರಂ ॥ ೭೮ ॥
ತತ್ರ ತಾಲಾಸ್ತಮಾಲಾಶ್ಚ ಪಿಪ್ಪಲಾಃ ಪನಸಾಸ್ತಥಾ ।
ಸದೈವ ಫಲಪುಷ್ಪಾಢ್ಯಾ ದೃಶ್ಯಂತೇ ಸುಮನೋರಮಾಃ ॥ ೭೯ ॥
ಕುಟಜೈಃ ಕೋವಿದಾರೈಶ್ಚ ಕದಂಬೈಃ ಕುರಬೈಸ್ತಥಾ ।
ಮತ್ತಾಲಿಕುಲಘುಷ್ಟೈಶ್ಚ ಭೂಧರೋ ಭಾತಿ ಸರ್ವತಃ ॥ ೮೦ ॥

---

೭೫. ಆಗ ಅವಳು ದಿವ್ಯದೃಷ್ಟಿಯಿಂದ ಈ ಪರ್ವತರಾಜನು ಕಾಮಾತುರನಾಗಿರುವುದನ್ನು ತಿಳಿದು "ನನ್ನನ್ನು ರಕ್ಷಿಸುವವರು ಯಾರೂ ಇಲ್ಲ. ನಿನ್ನನ್ನೆ ಮರೆ ಹೊಕ್ಕಿರುವೆನು.

೭೬. ಎಲೈ ಬಲಶಾಲಿಯೆ! ನನ್ನನ್ನು ನೀನು ಅವಶ್ಯವಾಗಿ ವಿವಾಹಮಾಡಿಕೊಳ್ಳುವುದಾದರೆ ಸ್ನಾನಮಾಡದಿರುವ ನನ್ನನ್ನು ಮದುವೆಮಾಡಿಕೊಳ್ಳಬೇಡ. ಸ್ನಾನಮಾಡಲು ನನಗೆ ಅವಕಾಶವನ್ನು ನೀಡು." ಎಂದಳು.

೭೭–೭೮. ಬಳಿಕ ಆ ಕೃತಸ್ಮರನು ತನ್ನ ಸಂಪತ್ತಿನಿಂದ ಅಹಂಕಾರಗೊಂಡು ಇಂತೆಂದನು. "ಸುಂದರಿ! ಸೌಖ್ಯವನ್ನುಂಟುಮಾಡುವ ನನ್ನ ಸಂಪೂರ್ಣವಾದ ವೈಭವವನ್ನು ನೋಡು. ನನ್ನಲ್ಲಿ ಸುಂದರರಾದ ಕಿನ್ನರದಂಪತಿಗಳು ಹಾಡುತ್ತಾರೆ. ಸುಸ್ವರವಾಗಿ ವೀಣೆಯ ಧ್ವನಿಯು ಕೇಳುತ್ತಿರುವುದು.

೭೯. ನನ್ನಲ್ಲಿ ತಾಲ, ತಮಾಲ, ಪಿಪ್ಪಲ, ಹಲಸು ಮೊದಲಾದ ವೃಕ್ಷಗಳು ಯಾವಾಗಲೂ ಫಲಪುಷ್ಪಗಳಿಂದ ರಮ್ಯವಾಗಿ ಕಾಣುತ್ತಿರುವುವು.

೮೦. ಎಲ್ಲೆಡೆಯಲ್ಲಿಯೂ ಮದಿಸಿದ ದುಂಬಿಗಳು ಝೇಂಕರಿಸುತ್ತಿರುವ ಗಿರಿಮಲ್ಲಿಗೆ, ಕೋವಿದಾರ, ಕದಂಬ, ಕುರುಬಕ ವೃಕ್ಷಗಳು ಕಂಗೊಳಿಸುತ್ತಿರುವುದು.

ಹರಾಂಗರಾಗವದ್ಭಾತಿ ಕ್ವಚಿತ್ಕುಟಜಕುಟ್ಮಲೈಃ ।
ಕ್ವಚಿತ್ತು ಕರ್ಣಿಕಾರೈಶ್ಚ ವಿಷ್ಣೋರ್ವಾಸಸಮಪ್ರಭಃ ॥ ೮೧ ॥
ತಮಾಲದಲಸಂಛನ್ನಃ ಕ್ವಚಿದ್ವೈವಸ್ವತದ್ಯುತಿಃ ।
ಕ್ವಚಿದ್ಧಾತುವಿಲಿಪ್ತಾಂಗೋ ಗಣಾಧ್ಯಕ್ಷವಪುರ್ನಗಃ ॥ ೮೨ ॥
ಚತುರ್ಮುಖ ಇವಾಭಾತಿ ಹರಿತಾಲವಪುಃ ಕ್ವಚಿತ್ ।
ಕ್ವಚಿತ್ಸಪ್ತಚ್ಛದೈರ್ವಿಷ್ಣೋರ್ವಪುಷ್ಯಾಭಾತ್ಯಯಂ ಗಿರಿಃ ॥ ೮೩ ॥
ಕ್ವಚಿತ್ಕಾತ್ಯಾಯನೀಪ್ರಖ್ಯಃ ಪ್ರಿಯಂಗುಕುಸುಮಾಕುಲಃ ।
ಕ್ವಚಿತ್ಕೇಸರಸಂಯುಕ್ತೈರನಲಾಭೋ ವಿಭಾತ್ಯಸೌ ॥ ೮೪ ॥
ವೃತ್ತೈಃ ಸಪುಲಕೈಃ ಸ್ನಿಗ್ಧೈಃ ಸ್ತ್ರೀಣಾಮಿವ ಪಯೋಧರೈಃ ।
ದುಷ್ಪ್ರಾಪ್ಯೈರಲ್ಪಪುಣ್ಯಾನಾಂ ಕ್ವಚಿದಾಭಾತಿ ಬಿಲ್ವಕೈಃ ॥ ೮೫ ॥
ಸಿಂಹೈರ್ನಾಗೈರ್ಮೃಗೈರ್ವರಾಹೈರ್ವಾನರೈಸ್ತಥಾ ।
ಕ್ವಚಿತ್ಕ್ವಚಿದಸೌ ಭಾತಿ ಪರಸ್ಪರಮನುವ್ರತೈಃ ॥ ೮೬ ॥

---

೮೧. ಒಂದೆಡೆಯಲ್ಲಿ ಗಿರಿಮಲ್ಲಿಗೆಯ ಮೊಗ್ಗುಗಳಿಂದ ಶಿವನು ಧರಿಸಿರುವ ಭಸ್ಮದಂತೆಯೂ, ಮತ್ತೊಂಡೆಯಲ್ಲಿ ಕರ್ಣಿಕಾರಕುಸುಮಗಳಿಂದ ವಿಷ್ಣುವಿನ ಪೀತಾಂಬರದ ಕಾಂತಿಯುಳ್ಳದಾಗಿಯೂ ವಿರಾಜಿಸುತ್ತಿರುವುದು.

೮೨. ಇನ್ನೊಂದೆಡೆಯಲ್ಲಿ ತಮಾಲದಳಗಳಿಂದ ಮುಚ್ಚಿರುವುದರಿಂದ ಯಮನಂತೆ ಕಾಂತಿಯುಳ್ಳದೂ, ಒಂದೆಡೆಯಲ್ಲಿ ಗೈರಿಕಧಾತುಲಿಪ್ತವಾಗಿ ಗಣೇಶನ ಶರೀರದಂತೆ ಕಾಂತಿಯುಳ್ಳದೂ ಆಗಿರುವುದು.

೮೩. ಮತ್ತೊಂದು ಕಡೆ ಹರಿತಾಳಗಳಿಂದ ಬ್ರಹ್ಮನ ಶರೀರದಂತೆಯೂ, ಇನ್ನೊಂದುಕಡೆ ಸಪ್ತಚ್ಛದಗಳಿಂದ ವಿಷ್ಣುವಿನದೇಹದಂತೆಯೂ ಪ್ರಕಾಶಿಸುತ್ತಿರುವುದು.

೮೪. ಒಂದು ಕಡೆ ಪ್ರಿಯಂಗು ತರುಗಳಿಂದ ಕಾತ್ಯಾಯನಿಯಂತೆಯೂ, ಇನ್ನೊಂದು ಕಡೆ ಕೇಸರವೃಕ್ಷಗಳಿಂದ ಅಗ್ನಿಯಂತೆಯೂ ಹೊಳೆಯುತ್ತಿರುವುದು.

೮೫. ಒಂದು ಕಡೆಯಲ್ಲಿ ಅಲ್ಪ ಪುಣ್ಯಮಾಡಿದವರಿಗೆ ಹೊಂದಲಶಕ್ಯವೂ ರೋಮಾಂಚದಿಂದ ಕೂಡಿರುವುದೂ ಮನೋಹರವೂ ವರ್ತುಲವೂ ಆದ ಸ್ತ್ರೀಯರ ಕುಚಗಳಂತಿರುವ ಬಿಲ್ವಫಲಗಳಿಂದ ವಿರಾಜಿಸುತ್ತಿರುವುದು.

೮೬,೮೭ ಮತ್ತೊಂದುಕಡೆಯಲ್ಲಿ ಮೇಲಕ್ಕೆ ಚಿಮ್ಮುತ್ತಿರುವುದರಿಂದ ಆಕಾಶವನ್ನು ತ್ರಿಶೂಲದಿಂದ ಸೀಳುತ್ತಿರುವುದೋ ಎಂಬಂತಿರುವ ಪರಸ್ಪರ ಸ್ನೇಹವುಳ್ಳ

ಶೂಲಿಕೋದ್ಭಿನ್ನಮಾಕಾಶಮಿವ ಕುರ್ವದ್ಭಿರುಚ್ಚಕೈಃ ।
ಏವಮುಕ್ತೇ ಪ್ರತ್ಯುವಾಚ ಶಾರದಾ ತಂ ನಗೋತ್ತಮಂ ॥ ೮೭ ॥
ಯದಿ ಮಾಂ ತ್ವಂ ಪರಿಣಯೇ ರುದಂತೀಮೇಕಕಾಂ ತಥಾ ।
ಗೃಹಾಣ ವಾಡವಂ ಹಸ್ತೇ ಯಾವತ್ಸ್ನಾನಂ ಕರೋಮ್ಯಹಂ ॥ ೮೮ ॥
ಏವಮುಕ್ತೇ ಸ ಜಗ್ರಾಹ ತಂ ನಗೇಂದ್ರೋಽಪವರ್ಜಿತಂ ।
ಕೃತಸ್ಮರಸ್ತತ್ಸಂಸ್ಪರ್ಶಾತ್ಕ್ಷಣಾದ್ಭಸ್ಮತ್ವಮಾಗತಃ ॥ ೮೯ ॥
ತತಃ ಪ್ರಭೃತಿ ತೇ ತಸ್ಯ ಪಾಷಾಣಾ ಮೃದುತಾಂ ಗತಾಃ ।
ಗೃಹದೇವಕುಲಾರ್ಥಾಯ ಗೃಹ್ಯಂತೇ ಶಿಲ್ಪಿಭಿಃ ಸಹ ॥ ೯೦ ॥
ದಗ್ಧ್ವಾ ಕೃತಸ್ಮರಂ ದೇವೀ ಪುನರಾದಾಯ ವಾಡವಂ ।
ಸಮುದ್ರಸ್ಯ ಸಮೀಪೇ ಸಾ ಸ್ಥಿತಾ ಹೃಷ್ಟತನೂರುಹಾ ॥ ೯೧ ॥
ತತ್ರಸ್ಥಾ ಸಾ ಮಹಾದೇವೀ ತಮಾಹ ವಡವಾನಲಂ ।
ಪಶ್ಯ ವಾಡವ ಗರ್ಜಂತಂ ಸಾಗರಂ ಪುರತಃ ಸ್ಥಿತಂ ॥ ೯೨ ॥
ಗರ್ಜಂತಂ ಸೋಽಪಿ ತಂ ದೃಷ್ಟ್ವಾ ಪ್ರಸರ್ಪಂತಂ ಚ ವೀಚಿಭಿಃ ।
ತಾಮಾಹ ಕಿಮಿದಂ ಭದ್ರೇ ಭೀತೋ ಮೇ ಲವಣೋದಧಿಃ ॥ ೯೩ ॥

ಸಿಂಹ, ವ್ಯಾಘ್ರ, ಜಿಂಕೆ, ಆನೆ, ಹಂದಿ ಕೋತಿಗಳಿಂದ ಪ್ರಕಾಶಿಸುತ್ತಿರುವುದು. ಎನ್ನಲು ಅವನನ್ನು ಕುರಿತು ಸರಸ್ವತಿಯು ಹೀಗೆಂದಳು.

೮೮. "ಎಲೈ ಕೃತಸ್ಮರನೇ! ಅಳುತ್ತಿರುವ ಒಬ್ಬಂಟಿಗಳಾದ ನನ್ನನ್ನು ವರಿಸುವುದಾದರೆ ನಾನು ಸ್ನಾನ ಮಾಡಿಬರುವವರೆಗೆ ಈ ವಾಡವಾಗ್ನಿಯನ್ನು ಕೈಯಲ್ಲಿ ಹಿಡಿದಿರು."

೮೯. ಸರಸ್ವತಿಯು ಹೀಗೆನ್ನಲು ಆ ಕೃತಸ್ಮರನು ಅವಳು ಕೊಟ್ಟ ವಾಡವಾಗ್ನಿಯನ್ನು ಹಿಡಿದು ಅದರ ಸ್ಪರ್ಶದಿಂದ ಕೂಡಲೆ ಬೂದಿಯಾದನು.

೯೦. ಅದು ಮೊದಲ್ಗೊಂಡು ಆ ಪರ್ವತದ ಕಲ್ಲುಗಳು ಮೃದುವಾದುದರಿಂದ ಶಿಲ್ಪಿಗಳು ಅದನ್ನು ಮನೆ, ದೇವಾಲಯಗಳನ್ನು ಕಟ್ಟಲು ತೆಗೆದುಕೊಳ್ಳುವರು.

೯೧. ಸರಸ್ವತೀ ದೇವಿಯು ಕೃತಸ್ಮರನನ್ನು ಬೂದಿಮಾಡಿ ಮರಳಿ ವಾಡವಾಗ್ನಿಯನ್ನು ತಗೆದುಕೊಂಡು ಸಮುದ್ರದ ಬಳಿಗೈದಿ ಸಂತೋಷದಿಂದ ರೋಮಾಂಚಗೊಂಡಿದ್ದಳು.

೯೨. ಆಕೆಯು ವಾಡವಾಗ್ನಿಯನ್ನು ಕುರಿತು, "ವಾಡವ! ಮುಂದೆ ಗರ್ಜಿಸುತ್ತಿರುವ ಈ ಸಮುದ್ರವನ್ನು ನೋಡು." ಎಂದಳು.

೯೩. ವಾಡವನೂ ಗರ್ಜಿಸುತ್ತ ಅಲೆಗಳಿಂದ ಸಮೀಪಿಸುತ್ತಿರುವ ಆ ಸಮುದ್ರವನ್ನು ಕಂಡು ಅವಳನ್ನು ಕುರಿತು, "ಮಂಗಳಕರಳೆ! ಇದೇನು? ಸಮುದ್ರವು ನನ್ನಿಂದಾಗಿ ಭಯಗೊಂಡಿದೆಯೊ?" ಎಂದು ಪ್ರಶ್ನಿಸಿದನು.

ಪ್ರಹಸ್ಯೋವಾಚ ಸಾ ಬಾಲಾ ಕೋ ನ ಭೀತಸ್ತವಾನಲ ।
ಭಕ್ಷ್ಯಸ್ತೇ ವಿಹಿತೋ ಯಸ್ಮಾತ್ತ್ವ ದೇವೈರ್ಮಹಾಬಲ ॥ ೯೪ ॥
ಸ ತಸ್ಯಾಸ್ತದ್ವಚಃ ಶ್ರುತ್ವಾ ಸಂಪ್ರಹೃಷ್ಟಸ್ತು ಪಾವಕಃ ।
ಪಾಸ್ಯಾಮಿ ತೇ ವರಂ ಭದ್ರೇ ಯಥೇಷ್ಟಂ ಪ್ರಾರ್ಥಯಸ್ವ ನಃ ॥ ೯೫ ॥
ತೇನೈವಮುಕ್ತಾ ಸಾ ದೇವೀ ವಾಡವೇನಾಗ್ನಿನಾ ತದಾ ।
ಸಸ್ಮಾರ ಕಾರಣಾತ್ಮಾನಂ ವಿಷ್ಣುಂ ಕಮಲಲೋಚನಂ ॥ ೯೬ ॥
ದೃಷ್ಟೋಽಸಾವಾತ್ಮಹೃತ್ಸಂಸ್ಥಸ್ತಯಾ ದೇವೋ ಜನಾರ್ದನಃ ।
ಸ್ಮೃತಮಾತ್ರಃ ಸರಸ್ವತ್ಯಾ ಪರಸ್ತ್ರಿಭುವನೇಶ್ವರಃ ॥ ೯೭ ॥
ಮನೋದೃಷ್ಟ್ಯಾ ವಿಲೋಕ್ಯಾಹ ಸಾ ತಮಂತಸ್ಥಮಚ್ಯುತಂ ।
ವಾಡವೋ ಯಚ್ಛತಿ ವರಮಹಂ ತಂ ಪ್ರಾರ್ಥಯಾಮಿ ಕಿಂ ॥ ೯೮ ॥
ತತಸ್ತೇನ ಹೃದಿಸ್ಥೇನ ಪ್ರೋಕ್ತಾ ದೇವೀ ಸರಸ್ವತೀ ।
ಪ್ರಾರ್ಥನೀಯೋ ವರೋ ಭದ್ರೇ ಸೂಚಿವಕ್ತ್ರತ್ವಮಾದರಾತ್ ॥ ೯೯ ॥
ತತಸ್ತ್ವಭಿಹಿತೋ ದೇವ್ಯಾ ಯದಿ ಮೇ ತ್ವಂ ವರಪ್ರದಃ ।
ತತಃ ಸೂಚೀಮುಖೋ ಭೂತ್ವಾ ತ್ವಂ ಪಿಬಾಪೋ ಮಹಾಬಲ ॥ ೧೦೦ ॥

---

೯೪. ಆ ಸರಸ್ವತಿಯು ನಕ್ಕು, "ವಾಡವ ! ನಿನಗೆ ಹೆದರುವವರಾರು ? ದೇವತೆಗಳು ನಿನಗೆ ಈ ಸಮುದ್ರವನ್ನು ಭಕ್ಷ್ಯವಾಗಿ ಕಲ್ಪಿಸಿರುವರಷ್ಟೆ"

೯೫. ವಾಡವನು ಅವಳ ಮಾತನ್ನು ಕೇಳಿ ಸಂತೋಷಗೊಂಡು ಮಂಗಳಕರಳೆ ! ನಿನಗೆ ವರವನ್ನು ಕೊಡುವೆನು. ಇಷ್ಟಬಂದವರವನ್ನು ಬೇಡಿಕೊ" ಎಂದನು.

೯೬. ವಾಡವಾಗ್ನಿಯು ಹೀಗೆ ಹೇಳಲು ಆ ಸರಸ್ವತಿಯು ಜಗತ್ಕಾರಣನಾದ ಆ ಪುಂಡರೀಕಾಕ್ಷನನ್ನು ಸ್ಮರಿಸಿದಳು.

೯೭. ಕೂಡಲೆ ಅವಳು ತನ್ನ ಹೃದಯದಲ್ಲಿರುವ ತ್ರೈಲೋಕ್ಯನಾಥನಾದ ಶ್ರೀಹರಿಯನ್ನು ಕಂಡಳು. ಅವಳು ಮನೋದೃಷ್ಟಿಯಿಂದ ಅಂತಃಕರಣದಲ್ಲಿರುವ ಅಚ್ಯುತನನ್ನೀಕ್ಷಿಸಿ ಇಂತೆಂದಳು. "ವಾಡವನು ವರವನ್ನು ಕೊಡಲಿಳಸುವನು. ನಾನು ಅವನನ್ನು ಏನು ಕೇಳಿಕೊಳ್ಳಲಿ. "

೯೮. ಆಗ ಹೃದಯದಲ್ಲಿರುವ ಆ ಹರಿಯು ಅವಳನ್ನು ಕುರಿತು, "ಎಲೌ ಸರಸ್ವತಿಯೇ! ವಾಡವನು ಸೂಜಿಯ ಮುಖವುಳ್ಳವನಾಗುವಂತೆ ವರವನ್ನು ಬೇಡಿಕೊ" ಎಂದನು.

೧೦೦. ಬಳಿಕ ಸರಸ್ವತಿಯು, "ಎಲೈ ಅತಿ ಬಲಶಾಲಿಯೆ ! ನೀನು ನನಗೆ ವರವನ್ನೀಯುವುದಾದರೆ, ನೀನು ಸೂಜಿಯಂತೆ ಸೂಕ್ಷ್ಮವಾದ ಬಾಯಿಯುಳ್ಳವನಾಗಿ ನೀರನ್ನು ಕುಡಿ." ಎಂದಳು.

ಏವಮುಕ್ತೇನ ತತ್ತೇನ ಸೂಚೀವೇಧಸಮಂ ಕೃತಂ ।
ಘಟಿಕಾಪೂರಣಂ ಯದ್ವತ್ತಪೌ ತದ್ವದನಂ ಜಲಂ ॥ ೧೦೧ ॥
ಏವಂ ಸ ವಾಡವೋ ವಹ್ನಿಃ ಸುರಾಣಾಂ ಭಕ್ಷಣೋದ್ಯತಃ ।
ವಂಚಿತೋ ವಿಷ್ಣುನಾ ಯಾತಿ ಮೇಧಾಮಾಧಾಯ ಯತ್ನತಃ ॥ ೧೦೨ ॥
ಸರ್ಗಮೇತಂ ನರಃ ಪುಣ್ಯಂ ವಾಚ್ಯಮಾನಂ ಶೃಣೋತಿ ಯಃ ।
ಸ ವಿಷ್ಣುಲೋಕಮಾಸಾದ್ಯ ತೇನೈವ ಸಹ ಮೋದತೇ ॥ ೧೦೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸರಸ್ವತೀವೃತ್ತಾಂತವಡವಾನಲವಂಚನವರ್ಣನಂ ನಾಮ
॥ ತ್ರಯಸ್ತ್ರಿಂಶೋಽಧ್ಯಾಯಃ ॥

---

೧೦೧. ಸರಸ್ವತಿಯು ಹೀಗೆ ಬೇಡಿಕೊಳ್ಳಲು ವಾಡವನು ತನ್ನ ಬಾಯಿಯನ್ನು ಘಟಿಕಾ ಯಂತ್ರದಂತೆಯೂ ಸೂಜಿಯ ಮೊನೆಯಂತೆಯೂ ಸೂಕ್ಷ್ಮವಾಗಿ ಮಾಡಿಕೊಂಡನು.

೧೦೨. ಹೀಗೆ ವಿಷ್ಣುವು ಪ್ರಯತ್ನಪಟ್ಟು ದೇವತೆಗಳನ್ನು ಭಕ್ಷಿಸಲು ಉದ್ಯುಕ್ತನಾದ ವಾಡವಾಗ್ನಿಯನ್ನು ಚಾತುರ್ಯದಿಂದ ವಂಚಿಸಲು ಆ ಅಗ್ನಿಯು ಪ್ರಭಾಸ ಕ್ಷೇತ್ರವನ್ನು ಸೇರಿತು.

೧೦೩. ಈ ರೀತಿ ಹೇಳುತ್ತಿರುವ ಈ ಅಧ್ಯಾಯವನ್ನು ಕೇಳುವ ಮಾನವನು ವೈಕುಂಠವನ್ನು ಸೇರಿ ವಿಷ್ಣುವಿನೊಡನೆ ಆನಂದಪಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸರಸ್ವತೀವೃತ್ತಾಂತ–ವಡವಾನಲವಂಚನವರ್ಣನವೆಂಬ
ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಚತುಸ್ತ್ರಿಂಶೋಽಧ್ಯಾಯಃ

ಸರಸ್ವತ್ಯವತಾರಮಹಿಮವರ್ಣನಂ

ಈಶ್ವರ ಉವಾಚ :—

ಸರಸ್ವತೀ ವರಂ ಪ್ರಾಪ್ಯ ವರಿಷ್ಠಂ ವಡವಾನಲಾತ್ ।
ಪುನಸ್ತಂ ಸಾಗರೇ ಕ್ಷೇಪ್ತುಮುದ್ಯತಾ ಸಾ ಮನಸ್ವಿನೀ || ೧ ||
ದೇವಾದೇಶಾತ್ಪ್ರಭಾಸಸ್ಯ ಪುರತಃ ಸಂಸ್ಥಿತಾ ತದಾ ।
ಸಮುದ್ರಮಾಹೂಯ ತದಾ ವಾಡವಾರ್ಪಣಕಾಂಕ್ಷಿಣೀ || ೨ ||
ತ್ವಮಾದಿಃ ಸರ್ವದೇವಾನಾಂ ತ್ವಂ ಪ್ರಾಣಃ ಪ್ರಾಣಿನಾಂ ಸದಾ ।
ದೇವಾದೇಶಾದ್ಗೃಹಾಣ ತ್ವಮಾಗತ್ಯಾರ್ಣವ ವಾಡವಂ || ೩ ||
ಏವಂ ಸಂಚಿಂತಿತಿತೋ ದೇವ್ಯಾ ಯದಾಸಾವಂಭಸಾಂಪತಿಃ ।
ತಥಾ ಜಲಾತ್ಸಮುತ್ತೀರ್ಯ ಸಮಾಯಾತೋ ಮಹಾದ್ಯುತಿಃ || ೪ ||
ತಂ ದೃಷ್ಟ್ವಾ ವಿಸ್ಮಿತಾ ದೇವೀ ದಿವ್ಯಂ ವಿಷ್ಣುಮಿವಾಪರಂ ।
ಶ್ಯಾಮಂ ಕಮಲಪತ್ರಾಕ್ಷಂ ಸಾಗರಂ ಸುಮನೋರಮಂ || ೫ ||

ಕನ್ನಡದ ಅನುವಾದ

ಸರಸ್ವತ್ಯವತಾರಮಹಿಮವರ್ಣನ

೧. ಈಶ್ವರನು ಹೇಳುತ್ತಾನೆ:—ಸರಸ್ವತಿಯು ವಾಡವಾಗ್ನಿಯಿಂದ ಉತ್ತಮ ವರವನ್ನು ಪಡೆದು ಮತ್ತೆ ಅದನ್ನು ಸಮುದ್ರದಲ್ಲಿ ಎಸೆಯಲು ಉದ್ಯುಕ್ತಳಾದಳು.

೨–೪. ಅವಳು ದೇವತೆಗಳ ಅಪ್ಪಣೆಯಿಂದ ಪ್ರಭಾಸಕ್ಷೇತ್ರದ ಮುಂದೆ ನಿಂತು ವಾಡವಾಗ್ನಿಯನ್ನು ಸಮರ್ಪಿಸಲೋಸುಗ ಸಮುದ್ರನನ್ನು ಕರೆದು, "ಎಲೈ ಸಮುದ್ರ ರಾಜನೇ ! ನೀನು ಸಕಲ ದೇವತೆಗಳಲ್ಲಿ ಮೊದಲನೆಯವನು. ನೀನು ಪ್ರಾಣಿಗಳ ಪ್ರಾಣರೂಪನು. ದೇವತೆಗಳ ಆದೇಶದಂತೆ ನೀನು ಈವಾಡವಾಗ್ನಿಯನ್ನು ಪರಿಗ್ರಹಿಸು" ಎಂದು ಧ್ಯಾನಿಸಿದಳು. ಆಗ ಸಮುದ್ರನು ಜಲದಿಂದ ಮೇಲಕ್ಕೆದ್ದು ಬಂದನು.

೫–೭. ಸರಸ್ವತಿಯು ಮತ್ತೊಬ್ಬ ವಿಷ್ಣುವಿನಂತಿರುವವನೂ, ಶ್ಯಾಮವರ್ಣನೂ, ತಾವರೆದಳದಂತೆ ಕಣ್ಣುಗಳುಳ್ಳವನೂ, ಸುಂದರನೂ, ನಾನಾವಿಧ ಮಾಲೆ ಆಭರಣ

ವಿಚಿತ್ರಮಾಲ್ಯಾಭರಣಂ ಚಿತ್ರವಸ್ತ್ರಾನುಲೇಪನಂ ।
ಆಪಗಾಭಿಃ ಸರೂಪಾಭಿಃ ಸ್ತ್ರೀರೂಪಾಭಿಃ ಸಮಾವೃತಂ ॥ ೬ ॥
ಏವಂವಿಧಂ ಸಮಾಲೋಕ್ಯ ಸಾ ದೇವೀ ಬ್ರಹ್ಮಣಃ ಸುತಾ ।
ಸರಸ್ವತೀ ಜಲನಿಧಿಮುವಾಚೇದಂ ಶುಚಿಸ್ಮಿತಾ ॥ ೭ ॥

ತ್ವಮಗ್ರಜಃ ಸರ್ವಭವೋದ್ಭವಾನಾಂ
ತ್ವಂ ಜೀವಿತಂ ಜನ್ಮವತಾಂ ನರಾಣಾಂ ।
ತಸ್ಮಾತ್ಸುರಾಣಾಂ ಕುರು ಕಾರ್ಯಮಿಷ್ಟಂ
ವಹ್ನಿಂ ಗೃಹಾಣ ತ್ವಮಿಹೋಪನೀತಂ ॥ ೮ ॥

ಅತ್ರಾಂತರೇ ಸೋಽಪಿ ವಿಮೃಶ್ಯ ಸರ್ವಂ
ಕಾರ್ಯಂ ಸ್ವಬುದ್ಧ್ಯಾ ಸಮಿಹೋಪಪನ್ನಂ ।
ಕೃತ್ವಾಽನಲಸ್ಯ ಗ್ರಹಣಂ ಮಯೇದಂ
ಕಾರ್ಯಂ ಸುರಾಣಾಂ ವಿಹಿತಂ ಭವೇಚ್ಚ ॥ ೯ ॥

ಏವಂ ಚಿಂತಯತಸ್ತಸ್ಯ ಗ್ರಹಣಂ ರುಚಿತಂ ತತಃ ।
ವಾಡವಾಗ್ನೇಃ ಸಮುದ್ರಸ್ಯ ಸುರಪೀಡಾಕೃತೇ ಯದಾ ॥ ೧೦ ॥
ತದಾ ತೇನ ಪುರಃಸ್ಥೇನ ದೇವೀ ಸಾಽಭಿಹಿತಾ ಭೃಶಂ ।
ವಾಡವಂ ಸಂಪ್ರಯಚ್ಛೈವಂ ಸುರಶತ್ರುಂ ಸರಸ್ವತಿ ॥ ೧೧ ॥

ಗಳಿಂದ ಅಲಂಕಾರಗೊಂಡವನೂ, ನಾನಾಬಗೆಯ ಚಿತ್ರ ವಸ್ತ್ರವನ್ನುಟ್ಟು ಗಂಧಾಲಿಪ್ತನೂ, ಸ್ತ್ರೀರೂಪವನ್ನು ಧರಿಸಿದ ನದಿಗಳಿಂದ ಸಹಿತನೂ ಆದ ಆ ಸಮುದ್ರನನ್ನು ಕಂಡು ನಗುತ್ತ ಇಂತೆಂದಳು.

೮. " ಸಮಸ್ತ ಪ್ರಾಣಿಗಳಿಗೆ ಮೊದಲಿಗನೂ, ಜನ್ಮವೆತ್ತಿದ ಮನುಷ್ಯರಿಗೆಲ್ಲ ಜೀವದಂತಿರುವವನೂ ಆದ ನೀನು ಸುರರಿಗಿಷ್ಟವಾದ ಕಾರ್ಯವನ್ನು ಮಾಡು. ನಾನೀಗ ತಂದಿರುವ ವಾಡವಾಗ್ನಿಯನ್ನು ಸ್ವೀಕರಿಸು."

೯–೧೧. ಆ ಸಮುದ್ರನು ಇದೇನು ಸಂಭವಿಸಿತೆಂದು ಕಾರ್ಯವನ್ನೆಲ್ಲ ವಿಮರ್ಶಿಸಿ ನಾನು ಈ ವಾಡವಾಗ್ನಿಯನ್ನು ಸ್ವೀಕರಿಸಿದರೆ ದೇವತೆಗಳ ಕೆಲಸವನ್ನು ಮಾಡಿದಂತಾಗುವುದು. ಎಂದಾಲೋಚಿಸಿ ವಾಡವಾಗ್ನಿಯನ್ನು ಸ್ವೀಕರಿಸಲು ಒಪ್ಪಿ ಸರಸ್ವತಿಯನ್ನು ಕುರಿತು, "ಓ ಸರಸ್ವತಿ! ದೇವತೆಗಳ ಶತ್ರುವಾದ ವಾಡವಾಗ್ನಿಯನ್ನು ಕೊಡು " ಎಂದನು.

ತತಸ್ತಯಾ ಪ್ರಣಮ್ಯಾಶು ಪಿತಾಮಹಪುರಸ್ಸರಾನ್ ।
ಚಾರಣಾಂಶ್ಚಾರುಚಿತ್ರಾಂಗ್ಯಾ ಸರಸ್ವತ್ಯಾ ದಿವಿ ಸ್ಥಿತಾನ್ ॥ ೧೨ ॥
ಪುನಶ್ಚ ಕರಸಂಸ್ಥೋಽಸೌ ವಾಡವೋಽಭಿಹಿತಸ್ತಯಾ ।
ತ್ವಮಪೋ ಭಕ್ಷಯಸ್ವೇತಿ ಸುರೈರುಕ್ತ ಇಮಾ ಇತಿ ॥ ೧೩ ॥
ಏವಮುಕ್ತ್ವಾ ಸಮುದ್ರಸ್ಯ ತದಾ ದೇವ್ಯಾ ಸಮರ್ಪಿತಃ ।
ವಾಡವೋಽಗ್ನಿಃ ಸರಸ್ವತ್ಯಾ ಸುರಾದೇಶಾನ್ಮಹಾಬಲಃ ॥ ೧೪ ॥
ತಂ ಸಮರ್ಪ್ಯ ತತಸ್ತಸ್ಮಿನ್ನದೀಭೂತ್ವಾ ಸರಸ್ವತೀ ।
ಪ್ರವಿಷ್ಟಾ ಸಾಗರಂ ದೇವೀ ನಾರದೇಶ್ವರಮಾರ್ಗತಃ ॥ ೧೫ ॥
ದೈತ್ಯಸೂದನಸಾನ್ನಿಧ್ಯೇ ದತ್ವಾಽರ್ಘ್ಯಂ ಲವಣಾಂಭಸಿ ।
ಅರ್ಘ್ಯೇಶ್ವರಂ ಪ್ರತಿಷ್ಠಾಪ್ಯ ದೈತ್ಯಸೂದನಪಶ್ಚಿಮೇ ॥ ೧೬ ॥
ತತೋಽಬ್ಧಿಂ ಸಂಪ್ರವಿಷ್ಟಾ ಸಾ ಪಂಚಸ್ರೋತಾ ಮಹಾನದೀ ।
ಸ್ವರೂಪೇಣೈವ ಸಾ ಪುಣ್ಯಾ ಪುನಃ ಪುಣ್ಯತಮಾಽಭವತ್ ॥ ೧೭ ॥
ಪ್ರಭಾಸಕ್ಷೇತ್ರಸಂಪರ್ಕಾತ್ಸಮುದ್ರಸ್ಯ ಚ ಸಂಗಮಾತ್ ।
ಸಾಗರೋಽಪಿ ಸಮಾಸಾದ್ಯ ಸರಸ್ವತ್ಯಾಸ್ತು ವಾಡವಂ ।
ನಿರ್ಧನೋಧನಮಿವ ಪ್ರಾಪ್ಯಾಽಚಿಂತಯತ್ಕ್ವ ಕ್ಷಿಪಾಮ್ಯಹಂ ॥ ೧೮ ॥

೧೨–೧೪. ತರುವಾಯ ಸುಂದರಾಂಗಿಯಾದ ಸರಸ್ವತಿಯು ಕೂಡಲೇ ದೇವಲೋಕದಲ್ಲಿರುವ ಬ್ರಹ್ಮ ಮೊದಲಾದ ದೇವತೆಗಳನ್ನೂ ಚಾರಣರನ್ನೂ ವಂದಿಸಿ ಕೈಯಲ್ಲಿರುವ ವಾಡವಾಗ್ನಿಯನ್ನು ಕುರಿತು "ದೇವತೆಗಳು ಈ ನೀರನ್ನು ನೀನು ಕುಡಿಯತಕ್ಕದೆಂದು ಹೇಳಿರುವರು" ಎಂದು ಅತಿಬಲಿಷ್ಠವಾದ ಆ ವಾಡವಾಗ್ನಿಯನ್ನು ಸಮುದ್ರರಾಜನಿಗೆ ಒಪ್ಪಿಸಿದಳು.

೧೫. ಆ ಸರಸ್ವತಿಯು ಹೀಗೆ ವಾಡವಾಗ್ನಿಯನ್ನು ಸಮರ್ಪಿಸಿ ತಾನು ನದಿಯಾಗಿ ಹರಿದು ನಾರದೇಶ್ವರನ ದಾರಿಯಿಂದ ಸಮುದ್ರವನ್ನು ಸೇರಿದಳು.

೧೬. ಆ ಸರಸ್ವತಿಯು ವಿಷ್ಣುವಿನ ಬಳಿ ಸಮುದ್ರದಲ್ಲಿ ಅರ್ಘ್ಯವನ್ನಿತ್ತು ಆ ವಿಷ್ಣುವಿನ ಪಶ್ಚಿಮದಲ್ಲಿ ಅರ್ಘ್ಯೇಶ್ವರನನ್ನು ಪ್ರತಿಷ್ಠೆ ಮಾಡಿದಳು.

೧೭–೧೮. ಬಳಿಕ ಐದು ಪ್ರವಾಹಗಳಿಂದ ಸಮುದ್ರವನ್ನು ಸೇರಿದ ಆ ಸರಸ್ವತಿಯು ಪ್ರಭಾಸಕ್ಷೇತ್ರದ ಸಂಬಂಧದಿಂದಲೂ, ಸಮುದ್ರದ ಸಂಗಮದಿಂದಲೂ ಅತ್ಯಂತ ಪುಣ್ಯಕರಳಾದಳು. ಸಮುದ್ರರಾಜನೂ ಸರಸ್ವತಿ ನದಿಯಿಂದ ವಾಡವಾಗ್ನಿಯನ್ನು ಪಡೆದು ಹಣವನ್ನು ಪಡೆದ ಬಡವನಂತೆ ಇದನ್ನು ಎಲ್ಲಿಡಲೆಂದು ಆಲೋಚಿಸಿದನು.

ಸ ತೇನೈವ ಕರಸ್ಥೇನ ದೀಪ್ಯಮಾನೇನ ಸಾಗರಃ ।
ವಹ್ನಿನಾ ಶಿಖರಸ್ಥೇನ ಭಾತಿ ಮೇರುರಿವಾಽಪರಃ ॥ ೧೯ ॥
ತಂ ತಥಾವಿಧಮಾಲೋಕ್ಯ ತತ್ರ ಯೇ ಜಲಚಾರಿಣಃ ।
ಯಾದೋಗಣಾಸ್ತೇ ಮುಮುಚುರ್ದಾಹಭೀತಾ ಮಹಾಸ್ವನಂ ॥ ೨೦ ॥
ತಂ ಶ್ರುತ್ವಾ ಭೈರವಂ ಶಬ್ದಮಾಯಾತೋ ದೈತ್ಯಸೂದನಃ ।
ಆಹ ಯಾದೋಗಣಾನ್ ಸರ್ವಾನ್ ಮಾ ಭೈಷ್ಟ ಸುಮಹಾಬಲಾಃ ॥ ೨೧ ॥
ಯಸ್ಮಾದನೇನ ಪ್ರಥಮಾ ಅಪೋ ಭಕ್ಷ್ಯಾ ನ ತತ್ರಗಾಃ ।
ಪ್ರಾಣಿನಸ್ತ ನ ಭೇತವ್ಯಂ ಭವದ್ಭಿಸ್ತು ಮಮಾಜ್ಞಯಾ ॥ ೨೨ ॥
ಏವಮುಕ್ತಸ್ತು ಕೃಷ್ಣೇನ ತೂಷ್ಣೀಂ ಭೂತಾ ಜಲೇಚರಾಃ ॥ ೨೩ ॥
ತೂಷ್ಣೀಂಭೂತೇಷು ಸರ್ವೇಷು ಜಲಜೇಷು ಜಲೇಶ್ವರಂ ।
ಪ್ರಾಹಾಽಚ್ಯುತಃ ಪ್ರಕ್ಷಿಪ ತ್ವಮಪಾಂ ಮಧ್ಯೇ ತು ವಾಡವಂ ॥ ೨೪ ॥

---

೧೯. ಸಮುದ್ರರಾಜನು ಕೈಯಲ್ಲಿರುವ ಆ ವಾಡವಾಗ್ನಿಯಿಂದ ಶಿಖರದಲ್ಲಿ ಬೆಂಕಿಯನ್ನು ಹೊತ್ತಿರುವ ಮತ್ತೊಂದು ಮೇರುಪರ್ವತದಂತೆ ಪ್ರಕಾಶಿಸಿದನು.

೨೦. ಹಾಗೆ ವಿರಾಜಿಸುತ್ತಿರುವ ಆ ಸಮುದ್ರನನ್ನು ನೋಡಿ ಅಲ್ಲಿ ವಾಸಿಸುವ ಜಲಚರ ಪ್ರಣಿಗಳು ದಾಹದಿಂದ ಭಯಗೊಂಡು ಗಟ್ಟಿಯಾಗಿ ಕೂಗಿಕೊಂಡುವು.

೨೧. ಆಭಯಂಕರ ಶಬ್ದವನ್ನು ಕೇಳಿ ಶ್ರೀ ಮಹಾವಿಷ್ಣುವು ಅಲ್ಲಿಗೆ ಬಂದು ಜಲಚರ ಪ್ರಾಣಿಗಳನ್ನು ಕುರಿತು ಇಂತೆಂದನು. "ಬಲಿಷ್ಠರಾದ ಓ ಪ್ರಾಣಿಗಳೇ! ನೀವು ಹೆದರಬೇಡಿರಿ.

೨೨. ಈ ವಾಡವಾಗ್ನಿಯು ಮೊದಲು ನನ್ನ ಆಜ್ಞೆಯಿಂದ ನೀರನ್ನು ಕುಡಿಯುವುದು. ಸಮುದ್ರದಲ್ಲಿರುವ ಪ್ರಾಣಿಗಳನ್ನು ತಿನ್ನುವುದಿಲ್ಲ. ಆದುದರಿಂದ ನೀವು ಹೆದರಬೇಕಾಗಿಲ್ಲ."

೨೩. ವಿಷ್ಣುವು ಹೀಗೆನ್ನಲು ಜಲಚರ ಪ್ರಾಣಿಗಳು ಸುಮ್ಮನಾದುವು.

೨೪. ಆ ಪ್ರಾಣಿಗಳು ಸುಮ್ಮನಾಗಲು ವಿಷ್ಣುವು ಸಮುದ್ರನನ್ನು ಕುರಿತು, "ನೀನು ಈ ವಾಡವಾಗ್ನಿಯನ್ನು ನೀರಿನ ನಡುವೆ ಎಸೆ ಎಂದನು."

ಅಗಾಧೇಽಂಭಸಿ ತೇನಾಽಸೌ ನಿಕ್ಷಿಪ್ತೋ ವಾಡವೋಽನಲಃ ।
ವರುಣೇನ ಪಿಬನ್ನಾಸ್ತೇ ತಜ್ಜಲಂ ಸುಮಹಾಬಲಃ ॥ ೨೫ ॥
ತಸ್ಯೋಚ್ಛ್ವಾಸಾಽನಿಲೋದ್ಭೂತಂ ತತ್ತೋಯಂ ಸಾಗರಾದ್ಬಹಿಃ ।
ನಿರ್ಮರ್ಯಾದೇವ ಯುವತಿರಿತಶ್ಚೇತಶ್ಚ ಧಾವತಿ ॥ ೨೬ ॥
ಅಥ ಕಾಲೇ ಗತೇ ದೇವಿ ಶುಷ್ಯತ್ಯಂಬು ಶನೈಃ ಶನೈಃ ।
ವಿದಿತ್ವಾ ಕ್ಷೀಯಮಾಣಾಸ್ತಾ ಆಪೋ ಜಲನಿಧಿಸ್ತತಃ ॥ ೨೭ ॥
ಆಹೈವಂ ಪುಂಡರೀಕಾಕ್ಷಮಪಃ ಕುರುತ್ವಮಕ್ಷಯಾಃ ।
ಅನ್ಯಥಾ ಸರ್ವನಾಶೇನ ಜಲಾನಾಂ ಮಾಮಿಹಾಗ್ರತಃ ।
ಭಕ್ಷಯಿಷ್ಯತ್ಯಸೌ ವಹ್ನಿರ್ವಾಡವೋ ಹಿ ಜನಾರ್ದನ ॥ ೨೮ ॥
ಏತಚ್ಛ್ರುತ್ವಾ ವಚಸ್ತಸ್ಯ ಸಮುದ್ರಸ್ಯ ತು ಭೀಷಣಂ ।
ಕೃತಂ ತದಕ್ಷಯಂ ತೋಯಮಾತ್ಮನೋ ಭಯನಾಶನಂ ॥ ೨೯ ॥
ಜ್ಞಾತ್ವಾ ಸುರಾಃ ಸರ್ವಮಿದಂ ವಿಚೇಷ್ಟಿತಂ
ಕೃತ್ಯಾನಲಸ್ಯಾಸ್ಯ ನಿಬಂಧನಂ ತಥಾ ।
ಪ್ರಲೋಭನಂ ತೋಯಪುರಃಸರಾ ದ್ವಿಷಃ
ಪ್ರಪೂಜಿರೇ ಕೇಶವಮತ್ರ ಚಾರಿಣಂ ॥ ೩೦ ॥

---

೨೫. ಸಮುದ್ರನು ಆಳವಾದ ನೀರಿನಲ್ಲಿ ಆ ಅಗ್ನಿಯನ್ನು ಎಸೆಯಲು ಅದು ಆ ಸಮುದ್ರದ ನೀರನ್ನು ಕುಡಿಯುತ್ತಿದೆ.

೨೬. ಅದರ ಶ್ವಾಸದ ಗಾಳಿಯಿಂದ ಸಮುದ್ರ ಹೊರಗೆ ಹೊರಟ ನೀರು ಮರ್ಯಾದೆ ಇಲ್ಲದ ಯುವತಿಯಂತೆ ಇಲ್ಲಿ ಅಲ್ಲಿ ಚಲಿಸಿತು.

೨೭–೨೮. ದೇವಿ! ಹೀಗೆ ಕಾಲವು ಕಳೆಯಲು ಸಮುದ್ರರಾಜನು ಮೆಲ್ಲಮೆಲ್ಲನೆ ನೀರೆಲ್ಲವೂ ಒಣಗುತ್ತಿರುವುದನ್ನು ತಿಳಿದು ವಿಷ್ಣುವನ್ನು ಕುರಿತು, " ಎಲೈ ವಿಷ್ಣುವೆ ನೀನು ಈ ನೀರುನ್ನು ಅಕ್ಷಯಗೊಳಿಸು. ಹಾಗೆಮಾಡದಿದ್ದರೆ ನೀರೆಲ್ಲ ನಾಶವಾದ ಕೂಡಲೇ ಈ ವಾಡವಾಗ್ನಿಯು ನನ್ನನ್ನು ತಿನ್ನುವುದು" ಎಂದನು.

೨೯–೩೦. ಇದನ್ನು ಕೇಳಿ ಮಾಧವನು ಆ ನೀರು ಅಕ್ಷಯವಾಗುವಂತೆ ಮಾಡಿದನು. ಸುರರು ತಮ್ಮ ಭಯವು ಪರಿಹಾರವಾದುದನ್ನೂ, ವಡವಾಗ್ನಿಯ ಕೃತ್ಯವನ್ನೂ, ವಿಷ್ಣುವು ಅದನ್ನುಮೋಸಗೊಳಿಸಿದುದನ್ನೂ ತಿಳಿದು ಅಲ್ಲಿಸಂಚರಿಸುತ್ತಿದ್ದ ಕೇಶವನನ್ನು ಆರಾಧಿಸಿದನು

ಏವಂ ಸರಸ್ವತೀ ಪ್ರಾಪ್ತಾ ಪ್ರಭಾಸಂ ಕ್ಷೇತ್ರಮುತ್ತಮಂ ।
ಬ್ರಹ್ಮಲೋಕಾನ್ಮಹಾದೇವಿ ಸರ್ವಪಾಪಪ್ರಣಾಶಿನೀ ॥ ೩೧ ॥
ಸೋಮೇಶಾದ್ದಕ್ಷಿಣಾಗ್ನೇಯೇ ಸಾಗರಸ್ಯ ಸಮೀಪತಃ ।
ಸಂಸ್ಥಿತಾ ತು ಮಹಾದೇವೀ ವಡವಾಽನಲಧಾರಿಣೀ ॥ ೩೨ ॥
ಸ್ನಾತ್ವಾಽಗ್ನಿತೀರ್ಥೇ ಪೂರ್ವಂ ತಾಂ ಪೂರಯೇದ್ವಿಧಿನಾ ನರಃ ।
ದಂಪತ್ಯೋರ್ಭೋಜನಂ ತತ್ರ ಪರಿಧಾನಂ ಸಕಂಚುಕಂ ॥ ೩೩ ॥
ದತ್ವಾ ತತೋ ಮಹಾದೇವಂ ಪೂಜಯೇಚ್ಚ ಕಪರ್ದಿನಂ ।
ಇತಿ ವೃತ್ತಂ ಪುರಾ ದೇವಿ ಚಾಕ್ಷುಷಸ್ಯಾಂತರೇಽಭವತ್ ॥ ೩೪ ॥
ದಧೀಚ್ಯನ್ವಯಜಾತಸ್ಯ ವಾಡವಸ್ಯ ಮಹಾತ್ಮನಃ ।
ಅಸ್ಮಿನ್ಪುನರ್ಮಹಾದೇವಿ ಪ್ರಾಪ್ತೇ ವೈವಸ್ವತೇಽಂತರೇ ।
ಔರ್ವಸ್ತು ಭಾರ್ಗವೇ ವಂಶೇ ಸಮುತ್ಪನ್ನೋ ಮಹಾದ್ವಿಜಃ ॥ ೩೫ ॥
ಸಂಕ್ಷಿಪ್ತೋಽಸೌ ಸರಸ್ವತ್ಯಾ ದೇವಮಾತ್ರಾ ಮಹಾಪ್ರಭುಃ ।
ತಾವತ್ ಸ್ಥಾಸ್ಯತ್ಯಪಾಂ ಗರ್ಭೇ ಯಾವನ್ಮನ್ವಂತರಾಽವಧಿಃ ॥ ೩೬ ॥

೩೧—೩೨. ಹೀಗೆ ಸಕಲ ಪಾಪವನ್ನು ನೀಗಿಸುವ ಸರಸ್ವತಿಯು ಬ್ರಹ್ಮಲೋಕದಿಂದ ಪ್ರಭಾಸಕ್ಷೇತ್ರವನ್ನು ಸೇರಿ ಸಮುದ್ರದ ಹತ್ತಿರ ಸೋಮೇಶ್ವರನ ಆಗ್ನೇಯ ದಿಕ್ಕಿನಲ್ಲಿ ವಡವಾಗ್ನಿಯನ್ನು ಧರಿಸಿ ನಿಂತಳು.

೩೩. ದೇವಿ ಮನುಷ್ಯನು ಮೊದಲು ಅಗ್ನಿತೀರ್ಥದಲ್ಲಿ ಮಿಂದು ಕ್ರಮನಂತೆ ಆ ಸರಸ್ವತಿಯನ್ನು ಪೂಜಿಸಬೇಕು. ಅಲ್ಲಿ ದಂಪತಿಗಳಿಗೆ ಭೋಜನ ಮಾಡಿಸಿ ಕಂಚುಕ ಸಹಿತವಾದ ಉಡುವ ಬಟ್ಟೆಯನ್ನು ದಾನಮಾಡಿ ಬಳಿಕ ಮಹೇಶ್ವರನನ್ನು ಪೂಜಿಸಬೇಕು. ಇದು ಹಿಂದೆ ಚಾಕ್ಷುಷ ಮನ್ವಂತರದಲ್ಲಿ ನಡೆದಿರುವುದು.

೩೫. ಮಹಾದೇವಿ! ದಧೀಚಿಯ ವಂಶದಲ್ಲಿ ಈ ವಾಡವಾಗ್ನಿಯು ವೈವಸ್ವತ ಮನ್ವಂತರವು ಬರಲು ಮರಳಿ ಭಾರ್ಗವವಂಶದಲ್ಲಿ ಮಹಾ ಬ್ರಾಹ್ಮಣನಾಗಿ ಹುಟ್ಟಿದನು.

೩೬. ದೇವಮಾತೆಯಾದ ಸರಸ್ವತಿಯು ಸಮುದ್ರದಲ್ಲಿ ಅಡಗಿಸಿದ ಈ ವಾಡವಾಗ್ನಿಯು ಮನ್ವಂತರದವರೆಗೆ ಸಮುದ್ರದ ನೀರಿನಲ್ಲಿ ಇರುವುದು.

ಇತಿ ತೇ ಕಥಿತಂ ದೇವಿ ಸರಸ್ವತ್ಯಾಃ ಸಮುದ್ಭವಂ ।
ಶ್ರುತಂ ಪಾಪಹರಂ ನೄಣಾಂ ಕೀರ್ತಿದಂ ಪುಣ್ಯವರ್ಧನಂ ॥ ೩೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸರಸ್ವತ್ಯವತಾರಮಹಿಮವರ್ಣನಂ ನಾಮ
॥ ಚತುಸ್ತ್ರಿಂಶೋಽಧ್ಯಾಯಃ ॥

---

೩೭. ದೇವಿ! ಹೀಗೆ ನಿನಗೆ ಸರಸ್ವತಿಯ ಉತ್ಪತ್ತಿಯನ್ನು ಹೇಳಿರುವೆನು. ಇದನ್ನು ಕೇಳಿದ ಮಾನವರಿಗೆ ಕೀರ್ತಿಯುಂಟಾಗುವುದು ಮತ್ತು ಪುಣ್ಯವು ಹೆಚ್ಚುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಸರಸ್ವತ್ಯವತಾರಮಹಿಮವರ್ಣನವೆಂಬ
ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚತ್ರಿಂಶೋಽಧ್ಯಾಯಃ

ಅಗ್ನಿತೀರ್ಥಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಭಗವನ್ ಭಾರ್ಗವೇ ವಂಶೇ ಯಸ್ತ್ವೌರ್ವಃ ಕಥಿತಸ್ತ್ವಯಾ ।
ವೈವಸ್ವತೇಽಂತರೇ ಚಾಽಸ್ಮಿಂಸ್ತಸ್ಯೋತ್ಪತ್ತಿಂ ವದ ಪ್ರಭೋ ॥ ೧ ॥

ಈಶ್ವರ ಉವಾಚ :—

ಬ್ರಾಹ್ಮಣಾ ನಿಹತಾ ಯೇ ತು ಕ್ಷತ್ರಿಯೈರ್ವಿತ್ತಕಾರಣಾತ್ ।
ಕ್ಷಯಂ ನೀತಾಸ್ತು ತೇ ಸರ್ವೇ ಸಪುತ್ರಾಶ್ಚ ಸಗರ್ಭತಃ ॥ ೨ ॥
ಮ್ರಿಯಮಾಣೇಷು ಸರ್ವೇಷು ಏಕಾ ಸ್ತ್ರೀಸಮತಿಷ್ಠತ ।
ತಯಾ ತು ರಕ್ಷಿತೋ ಗರ್ಭ ಊರ್ವೋರ್ದೇಶೇ ನಿಧಾಯ ಚ ॥ ೩ ॥
ಅನ್ಯಾಸಾಂ ಚೈವ ನಾರೀಣಾಂ ಸರ್ವಾಸಾಮಪಿ ಭಾಮಿನಿ ।
ಗರ್ಭಾ ನಿಪಾತಿತಾಸ್ತೈಸ್ತು ದ್ರವ್ಯಾರ್ಥಂ ಕ್ಷತ್ರಿಯಾಧಮೈಃ ॥ ೪ ॥
ಕಾಲಾಂತರೇ ತತೋ ಭಿತ್ವಾ ಕುರುದೇಶಂ ಮಹಾಪ್ರಭಃ ।
ನಿರ್ಗತೋತ್ತಂಭಿತಶಿರಾ ಜ್ವಲದಾಸ್ಯೋಽತಿಭೀಷಣಃ ॥ ೫ ॥

ಕನ್ನಡದ ಅನುವಾದ

ಅಗ್ನಿತೀರ್ಥಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ:—ಪೂಜ್ಯನೆ! ಔರ್ವನು ವೈವಸ್ವತಮನ್ವಂತರದಲ್ಲಿ ಭಾರ್ಗವ ವಂಶದಲ್ಲಿ ಹುಟ್ಟಿದನೆಂದು ಹೇಳಿರುವೆ. ಈಗ ಅವನ ಉತ್ಪತ್ತಿಯ ಕ್ರಮವನ್ನು ಹೇಳು.

೨. ಈಶ್ವರನು ಹೇಳುತ್ತಾನೆ:—ಕ್ಷತ್ರಿಯರು ದ್ರವ್ಯಕ್ಕಾಗಿ ಬ್ರಾಹ್ಮಣರನ್ನು ಕೊಲ್ಲಲು ಅವರೆಲ್ಲರೂ ಮಕ್ಕಳೊಂದಿಗೆ ನಾಶವಾದರು.

೩. ಎಲ್ಲರೂ ಸಾಯುತ್ತಿರಲು ಒಬ್ಬ ಹೆಂಗಸು ತನ್ನ ಗರ್ಭವನ್ನು ತೊಡೆಯಲ್ಲಿಟ್ಟುಕೊಂಡು ಕಾಪಾಡುತ್ತಿದ್ದಳು.

೪. ಕ್ಷತ್ರಿಯಾಧಮರು ದ್ರವ್ಯಕ್ಕಾಗಿ ಇತರ ಎಲ್ಲ ಹೆಂಗಸರ ಗರ್ಭವನ್ನು ಸ್ರಾವಮಾಡಿಸಿದರು.

೫. ಬಳಿಕ ಕಾಲಕ್ರಮದಿಂದ ಆ ಸ್ತ್ರೀಯ ಊರು ಪ್ರದೇಶವನ್ನು ಭೇದಿಸಿ ಅತ್ಯಂತ ಕಾಂತಿಯುಳ್ಳವನೂ, ದೃಢವಾದ ತಲೆಯುಳ್ಳವನೂ, ಉರಿಯುತ್ತಿರುವ ಮುಖವುಳ್ಳವನೂ, ಅತಿಭಯಂಕರನೂ ಆದ ಮನುಷ್ಯನು ಹುಟ್ಟಿದನು.

ತದ್ವೈರಂ ಹೃದಿ ಚಾದಾಯ ದದಾಹ ವಸುಧಾತಲಂ ।
ಉತ್ಪಾದ್ಯ ವಹ್ನಿಂ ತಪಸಾ ರೌದ್ರಮೌರ್ವಂ ಜಲಾಶನಂ ॥ ೬ ॥
ತಾಮಿಂದ್ರಃ ಪ್ಲಾವಯಾಮಾಸ ವೃಷ್ಟ್ಯೈಶ್ವೈರವರ್ಣಿನಿ ।
ನ ಶಶಾಕ ಯದಾ ನೇತುಂ ಸದಾ ಸ ಯತವಾಕ್ ಸ್ಥಿತಃ ॥ ೭ ॥
ತತೋ ದೇವಾಃ ಸಗಂಧರ್ವಾ ಬ್ರಹ್ಮಾಣಂ ಶರಣಂ ಗತಾಃ ।
ಅಭವನ್ ಭಯಸಂತ್ರಸ್ತಾಃ ಸರ್ವೇ ಪ್ರಾಂಜಲಯಃ ಸ್ಥಿತಾಃ । ॥ ೮ ॥

ದೇವಾ ಊಚುಃ :—

ಭಗವನ್ ಭಾರ್ಗವೇ ವಂಶೇ ಜಾತಃ ಕೋಽಪಿ ಮಹಾದ್ಯುತಿಃ ।
ಅಗ್ನಿರೂಪೇಣ ಸರ್ವಂ ಸ ದದಾಹ ವಸುಧಾತಲಂ ॥ ೯ ॥
ಕೃತೋ ಯತ್ನಃ ಪುರಾಽಸ್ಮಾಭಿಸ್ತದ್ವಿನಾಶಾಯ ಸತ್ತಮ ।
ಜಲೇನ ವೃದ್ಧಿಮಾಯಾತಿ ತತೋ ನೋ ಭಯಮಾಗತಂ ॥ ೧೦ ॥
ವಿನಷ್ಟೇ ಭೂತಲೇ ದೇವ ಅಗ್ನಿಷ್ಟೋಮಾದಿಕಾಃ ಕ್ರಿಯಾಃ ।
ಉಚ್ಛಿದ್ಯಂತೇ ತತೋಽಸ್ಮಾಕಂ ನಾಶೋ ನೂನಂ ಭವಿಷ್ಯತಿ ॥ ೧೧ ॥
ತಸ್ಮಾದ್ಯತ್ನಂ ಕುರು ವಿಭೋ ತ್ರೈಲೋಕ್ಯಹಿತಕಾಮ್ಯಯಾ ॥ ೧೨ ॥

---

೬. ಅವನು ಆ ಕ್ಷತ್ರಿಯರ ವೈರವನ್ನು ಮನಸ್ಸಿನಲ್ಲಿಟ್ಟುಕೊಂಡು ತಪಸ್ಸಿನಿಂದ ನೀರನ್ನು ಕುಡಿಯುವ ಭಯಂಕರವಾದ ಬೆಂಕಿಯನ್ನು ಹುಟ್ಟಿಸಿ ಭೂಮಿಯನ್ನು ಸುಟ್ಟನು.

೭. ಪ್ರಿಯಳೆ! ಆ ಬೆಂಕಿಯನ್ನು ಮಳೆಯಿಂದ ಇಂದ್ರನು ನೆನೆಯಿಸಿದನು. ತನ್ನಿಂದ ಆ ಬೆಂಕಿಯನ್ನು ಆರಿಸಲು ಸಾಧ್ಯವಾಗದಿದ್ದಾಗ ಅವನು ಸುಮ್ಮನಾಗಿಬಿಟ್ಟನು.

೮. ಬಳಿಕ ದೇವತೆಗಳು ಗಂಧರ್ವರೊಡನೆ ಬ್ರಹ್ಮನನ್ನು ಮರೆಹೊಕ್ಕು ಭಯದಿಂದ ಎಲ್ಲರೂ ಕೈಮುಗಿದುಕೊಂಡು ನಿಂತು ಹೀಗೆಂದರು.

೯. "ಪೂಜ್ಯನೇ! ಭಾರ್ಗವವಂಶದಲ್ಲಿ ಒಬ್ಬ ಅತ್ಯಂತ ತೇಜಸ್ವಿಯು ಜನಿಸಿರುವನು. ಅವನು ಬೆಂಕಿಯರೂಪದಿಂದ ಸಕಲ ಭೂಮಂಡಲವನ್ನೂ ಸುಟ್ಟಿರುವನು.

೧೦. ಅವನನ್ನು ಕೊಲ್ಲಲು ಹಿಂದೆ ನಾವು ಪ್ರಯತ್ನಿಸಿದೆವು. ಆದರೆ ಅವನು ನೀರಿನಿಂದ ವೃದ್ಧಿಗೊಳ್ಳುವುದರಿಂದ ನಮಗೆ ಭಯವುಂಟಾಯಿತು.

೧೧. ಸ್ವಾಮಿ! ಭೂಮಿಯು ನಷ್ಟವಾಗಲು ಅಗ್ನಿಷ್ಟೋಮಾದಿ ಸತ್ಕರ್ಮಗಳು ಹಾಳಾಗುವುದರಿಂದ ನಾವು ನಿಜವಾಗಿಯೂ ಸಾಯುವೆವು.

೧೨. ಪ್ರಭುವೆ! ಆದುದರಿಂದ ಮೂರುಲೋಕಕ್ಕೆ ಹಿತವನ್ನುಂಟುಮಾಡಲೋಸುಗ ಪ್ರಯತ್ನಿಸು."

ತತೋ ಬ್ರಹ್ಮಾ ಸುರೈಃ ಸಾರ್ಧಂ ಭಾರ್ಗವೈಶ್ಚ ಮಹರ್ಷಿಭಿಃ ।
ಆಗತ್ಯ ಚಾಽಬ್ರವೀದೌರ್ವಂ ಕಿಮರ್ಥಂ ದಹಸಿ ಕ್ಷಿತಿಂ ॥ ೧೩ ॥
ವಿರಾಮಃ ಕ್ರಿಯತಾಂ ಸದ್ಯೋ ಮಮಾರ್ಥಂ ಚ ದ್ವಿಜೋತ್ತಮ ॥ ೧೪ ॥

ಔರ್ವ ಉವಾಚ :—

ಏಷ ಏವ ನಿವೃತ್ತೋಽಹಂ ತವ ವಾಕ್ಯೇನ ಸತ್ತಮ ।
ಏಷ ವಹ್ನಿರ್ಮಯೋತ್ಸೃಷ್ಟಃ ಸ ವಿಭೋ ತವ ಶಾಸನಾತ್ ॥ ೧೫ ॥
ಯಥಾ ಗಚ್ಛೇತ್ಸಮುದ್ರಾಂತಂ ತಥಾ ನೀತಿರ್ವಿಧೀಯತಾಂ ॥ ೧೬ ॥
ಸಮಾಹೂಯ ತತೋ ದೇವೀಂ ಸ್ವಾಂ ಸುತಾಂ ಪದ್ಮಸಂಭವಃ ।
ಉವಾಚ ಪುತ್ರಿ ಗಚ್ಛ ತ್ವಂ ಗೃಹೀತ್ವಾಗ್ನಿಂ ಮಹೋದಧಿಂ ।
ಮದ್ವಾಕ್ಯಂ ನಾನ್ಯಥಾ ಕಾರ್ಯಂ ಗಚ್ಛ ಶೀಘ್ರಂ ಮಹಾಪ್ರಭೇ ॥ ೧೭ ॥

ಸರಸ್ವತ್ಯುವಾಚ :—

ಏಷಾಸ್ಮಿ ಪ್ರಸ್ಥಿತಾ ದೇವ ತವ ವಾಕ್ಯಾದಸಂಶಯಂ ।
ಇತ್ಯುಕ್ತೇ ಸಾಧು ಸಾಧ್ವೀತಿ ಬ್ರಹ್ಮಣಾ ಸಮುದಾಹೃತಾ ॥ ೧೮ ॥
ತತೋಽಭಿಮಂತ್ರಿತಂ ವಹ್ನಿಂ ಕ್ಷಿಪ್ತ್ವಾ ಕುಂಭೇ ಹಿರಣ್ಮಯೇ ।
ಪ್ರಾಯಚ್ಛತ ಸರಸ್ವತ್ಯೈ ಸ್ವಯಂ ಬ್ರಹ್ಮಾ ಪಿತಾಮಹಃ ।
ಆಶಿಷೋ ವಿವಿಧಾ ದತ್ವಾ ಪ್ರೋವಾಚೇದಂ ಪುನಃಪುನಃ ॥ ೧೯ ॥

---

೧೩. ಬಳಿಕ ಬ್ರಹ್ಮನು ದೇವತೆಗಳಿಂದಲೂ ಭಾರ್ಗವವಂಶದ ಮಹರ್ಷಿಗಳಿಂದಲೂ ಕೂಡಿದವನಾಗಿ ಔರ್ವನೆಡೆಗೆ ಬಂದು, "ನೀನು ಭೂಮಿಯನ್ನು ಏತಕ್ಕೆ ಸುಡುತ್ತೀಯೆ ?

೧೪. ದ್ವಿಜವರ್ಯನೆ ! ನನಗಾಗಿ ಸುಮ್ಮನಿರು" ಎಂದನು.

೧೫–೧೬. ಔರ್ವನು ಹೇಳುತ್ತಾನೆ :—ಸಾಧುವರ್ಯನಾದ ಬ್ರಹ್ಮನೆ ! ಇಗೋ ನಾನು ನಿನ್ನ ಮಾತಿನಿಂದ ಸುಮ್ಮನಾದೆನು. ನಿನ್ನ ಅಪ್ಪಣೆಯಿಂದ ನಾನು ತ್ಯಜಿಸಿದ ಈ ಬೆಂಕಿಯು ಸಮುದ್ರದ ಮಧ್ಯವನ್ನು ಸೇರುವಂತೆ ಮಾಡು.

೧೭. ಆಗ ಬ್ರಹ್ಮನು ತನ್ನ ತನಯಳಾದ ಸರಸ್ವತಿಯನ್ನು ಕರೆದು. "ಮಗು ! ನೀನು ಈ ಬೆಂಕಿಯನ್ನು ತೆಗೆದುಕೊಂಡು ಸಮುದ್ರಕ್ಕೆ ಹೋಗು. ನನ್ನ ಮಾತನ್ನು ಮೀರಬೇಡ. ಬೇಗನೆ ಹೋಗು" ಎಂದನು.

೧೮. ಸರಸ್ವತಿಯು ಹೇಳುತ್ತಾಳೆ :—ಸ್ವಾಮಿ ! ನಿನ್ನ ಮಾತಿನಿಂದ ನಾನು ನಿಶ್ಚಯವಾಗಿಯೂ ಹೊರಟಿರುವೆನು. ಎನ್ನಲು ಬ್ರಹ್ಮನು ಒಳ್ಳೆಯದು ಎಂದನು.

೧೯. ತರುವಾಯ ಪಿತಾಮಹನು ತಾನೇ ಅಭಿಮಂತ್ರಿಸಿದ ಬೆಂಕಿಯನ್ನು ಸುವರ್ಣದ ಕಲಶದಲ್ಲಿ ಹಾಕಿ ಸರಸ್ವತಿಗಿತ್ತು ನಾನಾ ವಿಧವಾದ ಆಶೀರ್ವಾದಗಳನ್ನು ಕೊಟ್ಟು ಮರಳಿ ಇಂತೆಂದನು.

ಗಚ್ಛ ಪುತ್ರಿ ನ ಸಂತಾಪಸ್ತ್ವಯಾ ಕಾರ್ಯಃ ಕಥಂಚನ ।
ಅರಿಷ್ಟಂ ವ್ರಜ ಪಂಥಾನಂ ಮಾ ಸಂತು ಪರಿಪಂಥಿನಃ ॥ ೨೦ ॥

ಈಶ್ವರ ಉವಾಚ :—

ಏವಮುಕ್ತಾ ತದಾ ತೇನ ಬ್ರಹ್ಮಣಾ ಚ ಸರಸ್ವತೀ ।
ಹಿಮವಂತಂ ಗಿರಿಂ ಪ್ರಾಪ್ಯ ಪಿಪ್ಪಲಾದಾಶ್ರಮಾತ್ತದಾ ॥ ೨೧ ॥
ಉದ್ಭೂತಾ ಸಾ ತದಾ ದೇವೀ ಅಧಸ್ತಾದ್ವೃಕ್ಷಮೂಲತಃ ।
ತತ್ಕೋಟರಕುಟೀಕೋಟಿಪ್ರವಿಷ್ಟಾನಾಂ ದ್ವಿಜನ್ಮನಾಂ ॥ ೨೨ ॥
ಶ್ರೂಯಂತೇ ವೇದನಿರ್ಘೋಷಾ ಸರಸಾ ರಕ್ತಚೇತಸಾಂ ।
ವಿಷ್ಣುರಾಸ್ತೇ ತತ್ರ ದೇವೋ ದೇವಾನಾಂ ಪ್ರವರೋ ಗುರುಃ ॥ ೨೩ ॥
ತಸ್ಮಾತ್ಸ್ಥಾನಾತ್ತತೋ ದೇವೀ ಪ್ರತೀಚ್ಯಭಿಮುಖಂ ಯಯೌ ।
ಅಂತರ್ಧಾನೇನ ಸಾ ಪ್ರಾಪ್ತಾ ಕೇದಾರಂ ಹಿಮಮಧ್ಯಗಂ ॥ ೨೪ ॥
ತತ್ಸಂಪ್ಲಾವ್ಯ ಗಿರೇಃ ಶೃಂಗಂ ಕೇದಾರಸ್ಯ ಪುರಃ ಸ್ಥಿತಾ ।
ತೇನಾಗ್ನಿನಾ ಕರಸ್ಥೇನ ದಹ್ಯಮಾನಾ ಸರಸ್ವತೀ ॥ ೨೫ ॥
ಭೂಮಿಂ ವಿದಾರ್ಯ ತಸ್ಯಾಽಧಃ ಪ್ರವಿಷ್ಟಾ ಗಜಗಾಮಿನೀ ।
ತದಂತರ್ಧಾನಮಾರ್ಗೇಣ ಪ್ರವೃತ್ತಾ ಪಶ್ಚಿಮಾಮುಖೀ ॥ ೨೬ ॥

---

೨೦. ಮಗು ! ನೀನು ತೆರಳು. ಯಾವ ವಿಧದಿಂದಲೂ ವ್ಯಥೆಪಡಬೇಡ. ನಿನಗೆ ದಾರಿಯಲ್ಲಿ ಶುಭವಾಗಲಿ. ಶತ್ರುಗಳಿಲ್ಲದಿರಲಿ."

೨೧–೨೩. ಈಶ್ವರನು ಹೇಳುತ್ತಾನೆ :—ಬ್ರಹ್ಮನು ಹೀಗೆನ್ನಲು ಸರಸ್ವತಿಯು ಹಿಮಾಲಯವನ್ನು ಸೇರಿ ಪಿಪ್ಪಲಾದಾಶ್ರಮದ ವೃಕ್ಷದ ಬುಡದಿಂದ ಉದ್ಭವಿಸಿದಳು. ಅಲ್ಲಿ ಆ ಮರದ ಅನೇಕ ಪೊಟರೆಗಳಲ್ಲಿ ವಾಸಿಸುತ್ತಿರುವ ಬ್ರಾಹ್ಮಣರ ವೇದಘೋಷವು ಕೇಳುತ್ತಿದ್ದಿತು. ಅಲ್ಲಿ ದೇವೋತ್ತಮನಾದ ವಿಷ್ಣುವೂ ನೆಲೆಸಿದ್ದನು.

೨೪–೨೬. ಆ ಸರಸ್ವತಿಯು ಅಲ್ಲಿಂದ ಪಶ್ಚಿಮಾಭಿಮುಖವಾಗಿ ಹೊರಟು ಅಂತರ್ಹಿತಳಾಗಿಯೇ ಹಿಮಾಲಯದ ನಡುವೆ ಇರುವ ಕೇದಾರ ಪರ್ವತಕ್ಕೆ ಹೋಗಿ ಅದರ ಶಿಖರವನ್ನು ನೆನೆಯಿಸಿ ಮುಂಭಾಗದಲ್ಲಿ ನೆಲೆಸಿದಳು. ಬಳಿಕ ಕೈಯಲ್ಲಿರುವ ಆ ಔರ್ವನ ಅಗ್ನಿಯಿಂದ ಸುಡಲ್ಪಡುವವಳಾಗಿ ಭೂಮಿಯನ್ನು ಸೀಳಿಕೊಂಡು ಕೆಳಗಡೆಯಿಂದಲೇ ಪಶ್ಚಿಮಾಭಿಮುಖವಾಗಿ ಹೊರಟಳು.

ಪಾಪಭೂಮಿಮತಿಕ್ರಮ್ಯ ಭೂಮಿಂ ಭಿತ್ವಾ ವಿನಿರ್ಗತಾ ।
ತತ್ರ ಕೂಪಃ ಸಮಭವನ್ನಾಮ್ನಾ ಗಂಧರ್ವಸಂಜ್ಞಿತಃ ॥ ೨೭ ॥
ತಸ್ಮಾತ್ಕೂಪಾತ್ಪುನರ್ದೃಶ್ಯಾ ಸಾ ಬಭೂವ ಮಹಾನದೀ ।
ಮತಿಃ ಸ್ಮೃತಿಸ್ತಥಾಪ್ರಜ್ಞಾ ಮೇಧಾ ಬುದ್ಧಿರ್ಗಿರಾಧರಾ ॥ ೨೮ ॥
ಉಪಾಸಿಕಾಃ ಸರಸ್ವತ್ಯಾಃ ಷಡೇತಾಃ ಪ್ರಸ್ಥಿತಾಸ್ತದಾ ।
ಪುನಃ ಪ್ರವೃತ್ತಾ ಸಾ ತಸ್ಮಾದುದ್ಭೇದಾತ್ಪಶ್ಚಿಮಾಮುಖೀ ॥ ೨೯ ॥
ಭೂತೀಶ್ವರಂ ಸಮಾಯಾತಾ ಸಿದ್ಧೋ ಯತ್ರ ಮಹಾಮುನಿಃ ।
ಭೂತೀಶ್ವರೇ ಸಮೀಪಸ್ಥಂ ತತ್ರ ಪ್ರಾಪ್ತಾ ಮನೋರಮಂ ॥ ೩೦ ॥
ತಸ್ಯ ದಕ್ಷಿಣದಿಕ್ಸಂಸ್ಥಂ ರುದ್ರಕೋಟ್ಯುಪಲಕ್ಷಿತಂ ।
ಶ್ರೀಕಂಠದೇಶಂ ವಿಖ್ಯಾತಂ ಗತಾ ಸರ್ವೌಷಧೀಯುತಂ ॥ ೩೧ ॥
ತಸ್ಮಾತ್ಪುಣ್ಯತಮಾದ್ದೇಶಾಚ್ಛ್ರೀಕಂಠಾತ್ಮಾ ಮನಸ್ವಿನೀ ।
ಸಂಪ್ರಾಪ್ತಾ ವಹ್ನಿನಾ ಸಾರ್ಧಂ ಕುರುಕ್ಷೇತ್ರಂ ಸರಸ್ವತೀ ॥ ೩೨ ॥
ಪುನಸ್ತಸ್ಮಾತ್ಕುರುಕ್ಷೇತ್ರಾದ್ವಿರಾಟನಗರಸ್ಯ ಸಾ ।
ಸಮುದ್ಭೂತಾ ಸಮೀಪಸ್ಥಾ ಅಂತರ್ಧಾನಾನ್ಮನೋರಮಾ ।
ಗೋಪಾಯನೋ ಗಿರಿರ್ಯತ್ರ ತತ್ರ ಸಾ ಪುನರುದ್ಗತಾ ॥ ೩೩ ॥

---

೨೭. ತರುವಾಯ ಪಾಪಭೂಮಿಯನ್ನು ದಾಟಿ ಭೂಮಿಯನ್ನು ಭೇದಿಸಿಕೊಂಡು ಹೊರಟಳು. ಅಲ್ಲಿ ಗಂಧರ್ವವೆಂಬ ಒಂದು ಬಾವಿಯಾಯಿತು.

೨೮–೨೯. ಮರಳಿ ಆ ಸರಸ್ವತಿಯು ಆ ಕೂಪದಿಂದ ಹೊರಟು ಮಹಾನದಿಯಾಗಿ ಕಾಣಿಸಿಕೊಂಡಳು. ಅವಳನ್ನು ಅವಳ ಸೇವಕರಾದ ಮತಿ, ಸ್ಮೃತಿ, ಪ್ರಜ್ಞಾ, ಮೇಧಾ, ಬುದ್ಧಿ, ಗಿರಾಧರಾ ಎಂಬ ಆರು ಜನರು ಹಿಂಬಾಲಿಸಿದರು. ಅವಳು ಉಗಮಸ್ಥಾನದಿಂದ ಪಶ್ಚಿಮಾಭಿಮುಖವಾಗಿ ಹರಿಯ ತೊಡಗಿದಳು.

೩೦–೩೧. ತರುವಾಯ ಸಿದ್ಧಮಹರ್ಷಿಯು ನಿವಾಸಿಸುವ ಭೂತೀಶ್ವರಕ್ಕೆ ಹೋಗಿ ಅಲ್ಲಿಂದ ಅದರ ಹತ್ತಿರ ದಕ್ಷಿಣ ದಿಕ್ಕಿನಲ್ಲಿರುವ ಕೋಟಿ ರುದ್ರರಿಂದಲೂ, ಸಕಲೌಷಧಿಗಳಿಂದಲೂ ಕೂಡಿರುವ ಶ್ರೀಕಂಠದೇಶಕ್ಕೆ ತೆರಳಿದರು.

೩೨. ಅನಂತರ ಆ ಪುಣ್ಯಕ್ಷೇತ್ರವಾದ ಶ್ರೀಕಂಠದೇಶದಿಂದ ಹೊರಟು ಔರ್ವಾಗ್ನಿಯೊಡನೆ ಕುರುಕ್ಷೇತ್ರವನ್ನು ಸೇರಿದಳು.

೩೩. ತಿರುಗಿ ಆ ಕುರುಕ್ಷೇತ್ರದಿಂದ ಹೊರಟು ವಿರಾಟ ನಗರದ ಹತ್ತಿರ ಅಂತರ್ಗಾಮಿನಿಯಾಗಿ ಗೋಪಾಯನ ಗಿರಿಯಲ್ಲಿ ಮೇಲಕ್ಕೆದ್ದಳು.

ಗೋಪಾಯಿತಾ ಕೇಶವೇನ ಯತ್ರ ತೇ ಪಾಂಡುನಂದನಾಃ ।
ಕುರ್ವಂತಃ ಸ್ವಾನಿ ಕರ್ಮಾಣಿ ನ ಕೈಶ್ಚಿದುಪಲಕ್ಷಿತಾ ॥ ೩೪ ॥
ತತ್ರ ಕುಂಡೇ ಸ್ಥಿತಾ ದೇವಿ ಮಹಾಪಾತಕನಾಶಿನೀ ।
ಪುನರ್ಗೋಪಾಯನಾದ್ದೇವೀ ಕ್ಷೇತ್ರಂ ಪ್ರಾಪ್ತಾಽತಿಶೋಭನಂ ॥ ೩೫ ॥
ಖರ್ಜೂರೀವನಮಾಪನ್ನಾ ನಂದಾನಾಮ್ನೀತಿ ತತ್ರ ಸಾ ।
ಸರಸ್ವತೀ ಪುನಸ್ತಸ್ಮಾದ್ವನಾತ್ಖರ್ಜೂರಸಂಜ್ಞಿತಾತ್ ॥ ೩೬ ॥
ಮೇರುಪಾದಂ ಸಮಾಸಾದ್ಯ ಮಾರ್ಕಂಡಾಶ್ರಮಮಾಗತಾ ।
ಯತ್ರ ಮಾರ್ಕಂಡಕಂ ತೀರ್ಥಂ ಮೇರುಪಾದೇ ಸಮಾಶ್ರಿತಂ ॥ ೩೭ ॥
ಸರಸ್ವತೀ ಪುನಸ್ತಸ್ಮಾದರ್ಬುದಾಽರಣ್ಯಮಾಶ್ರಿತಾ ।
ಗತಾ ವಟವನಂ ರಮ್ಯಂ ಮಾರ್ಕಂಡೇಯಾಶ್ರಮಾಚ್ಛುಭಾತ್ ॥ ೩೮ ॥
ತಪಸ್ತಪ್ತಂ ಪುರಾ ಯತ್ರ ವಸಿಷ್ಠೇನ ಸಮಾಶ್ರಿತಾತ್ ।
ತಸ್ಮಾದ್ವಟವನಾತ್ಪುಣ್ಯಾದುದುಂಬರವನಂ ಗತಾ ।
ಮೇರುಪಾದೇ ಚ ತತ್ರೈವ ತಂಡಿರ್ಯತ್ರಾಽತಪತ್ತಪಃ ॥ ೩೯ ॥
ಉದುಂಬರವನಾತ್ತಸ್ಮಾತ್ಪುನರ್ದೇವೀ ಸರಸ್ವತೀ ।
ಅಂತರ್ಧಾನೇನ ಶಿಖರಮನ್ಯತ್ಪ್ರಾಪ್ತಾ ಮಹಾನದೀ ॥ ೪೦ ॥

---

೩೪. ಈ ಗೋಪಾಯನ ಗಿರಿಯಲ್ಲಿ ತಮ್ಮ ಕಾರ್ಯಗಳನ್ನು ನೆರವೇರಿಸುತ್ತಿರುವ ಪಾಂಡವರನ್ನು ಶ್ರೀ ಕೃಷ್ಣನು ಯಾರೂ ತಿಳಿಯದಂತೆ ರಕ್ಷಿಸಿರುವನು.

೩೫–೩೭. ಮಹಾಪಾತಕವನ್ನು ಪರಿಹರಿಸುವ ಸರಸ್ವತಿಯು ಆ ಗೋಪಾಯನ ಕುಂಡದಲ್ಲಿದ್ದು ಮರಳಿ ಅಲ್ಲಿಂದ ಹೊರಟು ಅತಿ ಮನೋಹರವಾದ ಖರ್ಜೂರೀವನ ವನ್ನು ಸೇರಿ ಅಲ್ಲಿ ನಂದಾ ಎಂಬ ಹೆಸರಿನಿಂದ ವಿಖ್ಯಾತಳಾಗಿ ಅಲ್ಲಿಂದ ಹೊರಟು ಮೇರುಪರ್ವತದ ತಪ್ಪಲನ್ನು ಸೇರಿ ಅಲ್ಲಿ ಮಾರ್ಕಂಡತೀರ್ಥವುಳ್ಳ ಮಾರ್ಕಂಡಾಶ್ರಮ ವನ್ನು ಹೊಂದಿದಳು.

೩೮–೩೯. ಬಳಿಕ ಆ ಮಾರ್ಕಂಡಾಶ್ರಮದಿಂದ ವಸಿಷ್ಠಮುನಿಯು ಹಿಂದೆ ತಪಸ್ಸನ್ನಾಚರಿಸಿರುವ ಅರ್ಬುದಾರಣ್ಯದಲ್ಲಿರುವ ವಟವನಕ್ಕೆ ಬಂದು ಆ ಪವಿತ್ರ ವಟವನ ದಿಂದ ಅದೇ ಮೇರು ತಪ್ಪಲಲ್ಲಿರುವ ತಂಡಿ ಮುನಿಯು ತಪಸ್ಸನ್ನು ಮಾಡಿರುವ ಉದುಂಬರವನವನ್ನು ಸೇರಿದಳು.

೪೦–೪೧. ಅನಂತರ ಆ ಸರಸ್ವತಿಯು ಉದುಂಬರ ವನದಿಂದ ಅಂತರ್ಗಾಮಿನಿ ಯಾಗಿ ಮೇರು ಪಾದದಲ್ಲಿರುವುದೂ, ಸುರರಿಂದಲೂ, ಸಿದ್ಧರಿಂದಲೂ ಸೇವಿಸಲ್ಪಡು

ಮೇರುಪಾದಂ ತು ಸುಮಹತ್ಸುರಸಿದ್ಧನಿಷೇವಿತಂ ।
ಭಿನ್ನಾಂಜನಚಯಾಕಾರಂ ಗೋಲಾಂಗೂಲಮಿತಿ ಸ್ಮೃತಂ ॥ ೪೧ ॥
ಸ್ಥಾನಂ ಮನೋರಮಂ ತಸ್ಮಾದುದ್ಗತಾ ಸಾ ಸುಮಧ್ಯಮಾ ।
ವಂಶಸ್ತಂಬಾತ್ಸುವಿಪುಲಾ ಪ್ರವೃತ್ತಾ ದಕ್ಷಿಣಾಮುಖೀ ॥ ೪೨ ॥
ತತ್ರೋದ್ಗಮವಟಸ್ತಸ್ಯಾಸ್ತತ್ಸಮಾಖ್ಯೋ ವ್ಯವಸ್ಥಿತಃ ।
ತತಃ ಪ್ರಭೃತಿ ಸಾ ದೇವೀ ಸುಪ್ರಭಂ ಪ್ರಕಟಾ ಸ್ಥಿತಾ ॥ ೪೩ ॥
ಅಂತರ್ಧಾನಂ ಪರಿತ್ಯಜ್ಯ ಪ್ರಾಣಿನಾಮನುಕಂಪಯಾ ।
ತಸ್ಯಾಸ್ತಟೇಷು ರಮ್ಯೇಷು ಸಂತಿ ತೀರ್ಥಾನಿ ಕೋಟಿಶಃ ॥ ೪೪ ॥
ತೇಷು ತೀರ್ಥೇಷು ಸರ್ವೇಷು ಧರ್ಮಹೇತುಃ ಸರಸ್ವತೀ ।
ರುದ್ರಾವತಾರಮಾರ್ಗೇಽಸ್ಮಿನ್ ಪ್ರವರಂ ಪ್ರಥಮಂ ಸ್ಮೃತಂ ॥ ೪೫ ॥
ತರತ್ತರಂಗನಾಮಾಖ್ಯಂ ಕಾಕತೀರ್ಥಂ ಮಹಾಪ್ರಭಂ ।
ತತ್ರ ತೀರ್ಥಂ ಪುನಸ್ತ್ವನ್ಯತ್ತೀರ್ಥಂ ಧಾರೇಶ್ವರಂ ಸ್ಮೃತಂ ॥ ೪೬ ॥
ಧಾರೇಶ್ವರಾತ್ಪುನಶ್ಚಾಽನ್ಯದ್ಗಂಗೋದ್ಭೇದಮಿತಿ ಸ್ಮೃತಂ ।
ಸಾರಸ್ವತಂ ತಥಾ ಗಾಂಗಂ ಯತ್ರೈಕಂ ಸಂಸ್ಥಿತಂ ಜಲಂ ।
ತಸ್ಮಾದನ್ಯತ್ಪರಂ ತೀರ್ಥಂ ಪುಂಡರೀಕಂ ತತಃ ಪರಂ ॥ ೪೭ ॥

ತ್ತಿರುವುದೂ, ಕಾಡಿಗೆಯಂತೆ ಕಪ್ಪಗಿರುವುದೂ ಆಗಿರುವ ಗೋಲಾಂಗೂಲವೆಂಬ ಶಿಖರಕ್ಕೆ ಹೋದಳು.

೪೨–೪೪. ತರುವಾಯ ಅಲ್ಲಿಂದ ಬಿದಿರಿಗಿಂತ ದಪ್ಪವಾಗಿ ದಕ್ಷಿಣಾಭಿಮುಖವಾಗಿ ಹರಿಯ ತೊಡಗಿದಳು. ಅವಳು ಉದ್ಭವಿಸಿದ ಆ ಸ್ಥಳವು ಉದ್ಗಮವಟವೆಂದು ಪ್ರಸಿದ್ಧವಾಯಿತು. ಸರಸ್ವತಿಯು ಅದು ಮೊದಲ್ಗೊಂಡು ಪ್ರಾಣಿಗಳಲ್ಲಿ ದಯೆಯಿಂದ ಅಂತರ್ಧಾನವನ್ನು ತ್ಯಜಿಸಿ ಸ್ಪಷ್ಟವಾಗಿ ಹರಿದಳು. ಅವಳ ಮನೋಹರವಾದ ದಂಡೆಗಳಲ್ಲಿ ಅನೇಕ ತೀರ್ಥಗಳಿರುವುವು.

೪೫–೪೬. ಆ ಸಮಸ್ತ ತೀರ್ಥಗಳಲ್ಲಿಯೂ ರುದ್ರಾವತಾರದಲ್ಲಿರುವ ಧರ್ಮಕ್ಕೆ ಸಾಧನವಾದ ತರತ್ತರಂಗವೆಂದು ಪ್ರಸಿದ್ಧವಾದ ಕಾಕತೀರ್ಥವು ಉತ್ತಮವಾದುದು. ಅಲ್ಲಿ ಧಾರೇಶ್ವರವೆಂಬ ಮತ್ತೊಂದು ತೀರ್ಥವಿರುವುದು.

೪೭. ಧಾರೇಶ್ವರಕ್ಕಿಂತ ಮುಂದೆ ಗಂಗೋದ್ಭೇದವೆಂಬ ತೀರ್ಥವಿರುವುದು. ಅಲ್ಲಿ ಸರಸ್ವತೀ, ಗಂಗಾನದಿಗಳ ನೀರು ಒಟ್ಟಿಗೆ ಸೇರಿರುವುದು. ಅದರಿಂದ ಮುಂದಕ್ಕೆ ಪುಂಡರೀಕ ತೀರ್ಥವಿರುವುದು.

ಮಾತೃತೀರ್ಥಂ ಮಹಾಪುಣ್ಯಂ ಸರ್ವಾತಂಕಹರಂ ಪರಂ ।
ಮಾತೃತೀರ್ಥಾತ್ಪುನಸ್ತಸ್ಮಾನ್ನಾಽತಿದೂರೇ ವ್ಯವಸ್ಥಿತಂ ॥ ೪೮ ॥

ತೀರ್ಥಂ ತ್ವನರಕಂ ನಾಮ ನರಕಾರ್ತಿಭಯಾಽಪಹಂ ।
ತತಸ್ತಸ್ಮಾದನರಕಾತ್ತೀರ್ಥಮನ್ಯತ್ಪುನಃ ಸ್ಥಿತಂ ॥ ೪೯ ॥

ಸಂಗಮೇಶ್ವರನಾಮಾಢ್ಯಂ ಪ್ರಸಿದ್ಧಂ ತನ್ಮಹೀತಲೇ ।
ತತಸ್ತಸ್ಮಾತ್ಪುನಶ್ಚಾಽನ್ಯತ್ತೀರ್ಥಂ ಕೋಟೀಶ್ವರಾಹ್ವಯಂ ॥ ೫೦ ॥

ತತಸ್ತಸ್ಮಾನ್ಮಹಾದೇವಿ ಶಂಭುಕುಂಡೇಶ್ವರಂ ಸ್ಮೃತಂ ।
ತೀರ್ಥೇ ಸರಸ್ವತೀ ತೀರೇ ತಸ್ಮಿನ್ ಸಿದ್ಧೇಶ್ವರಂ ಸ್ಮೃತಂ ॥ ೫೧ ॥

ಸಿದ್ಧೇಶ್ವರಾತ್ಪುನಸ್ತಸ್ಮಾತ್ಪ್ರವೃತ್ತಾ ಪಶ್ಚಿಮಾಮುಖೀ ।
ಪಶ್ಚಿಮಂ ಸಾಗರಂ ಗಂತುಂ ಸಖೀಂ ಸ್ಮೃತ್ವಾ ರುರೋದ ಸಾ ॥ ೫೨ ॥

ಸ್ಥಿತ್ವಾ ಪೂರ್ವಮುಖಾ ದೇವೀ ಹಾ ಗಂಗೇತಿ ವಿನಾ ತ್ವಯಾ ।
ಏಕಾಕಿನೀ ಮಂದಭಾಗ್ಯಾ ಕ್ವ ಗಮಿಷ್ಯಾಮ್ಯಬಾಂಧವಾ ॥ ೫೩ ॥

ತಾಂ ವಿಜ್ಞಾಯ ತತೋ ಗಂಗಾ ರುದತೀಂ ಶೋಕಕರ್ಶಿತಾಂ ।
ಶೀಘ್ರಂ ಸ್ವರ್ಗಾತ್ಸಮಾಯಾತಾ ತೀರ್ಥಾನಾಂ ಕೋಟಿಭಿಃ ಸಹ ॥ ೫೪ ॥

೪೮–೫೨. ಅದಕ್ಕಿಂತ ಮುಂದೆ ಸಕಲ ದುಃಖಗಳನ್ನು ಪರಿಹರಿಸುವ ಪುಣ್ಯಕರವಾದ ಮಾತೃತೀರ್ಥವೂ, ಅದರ ಸಮೀಪದಲ್ಲಿ ನರಕದುಃಖದ ಭಯವನ್ನು ನಿವಾರಿಸುವ ಅನರಕವೆಂಬ ತೀರ್ಥವೂ, ಅದರ ಮುಂದೆ ಭೂಮಿಯಲ್ಲೆಲ್ಲ ಪ್ರಸಿದ್ಧವಾದ ಸಂಗಮೇಶ್ವರವೆಂಬ ತೀರ್ಥವೂ ಅದರ ಮುಂದೆ ಕೋಟೀಶ್ವರ ತೀರ್ಥವೂ, ಅನಂತರ ಶಂಭುಕುಂಡೇಶ್ವರವೂ, ಅದರ ಮುಂದೆ ಸಿದ್ಧೇಶ್ವರವೂ ಇರುವುದು. ಸರಸ್ವತಿಯು ಆ ಸಿದ್ಧೇಶ್ವರದಿಂದ ಪಶ್ಚಿಮ ಸಮುದ್ರಕ್ಕೆ ಹೋಗಲು ಪಶ್ಚಿಮಾಭಿಮುಖವಾಗಿ ಹರಿಯುತ್ತ ಅಲ್ಲಿ ಗಂಗೆಯನ್ನು ಸ್ಮರಿಸಿ ಅತ್ತಳು.

೫೩. ಆ ಸರಸ್ವತಿಯು ಪೂರ್ವಮುಖವಾಗಿ ನಿಂತು, "ಗಂಗೆ ! ನೀನಿಲ್ಲದೆ ಬಂಧುರಹಿತಳಾದ ನಾನೊಬ್ಬಳೆ ಎಲ್ಲಿಗೆ ಹೋದೇನು?" ಎಂದಳು.

೫೪. ಗಂಗೆಯು ದುಃಖದಿಂದ ಕೃಶಳಾದ ಆ ಸರಸ್ವತಿಯು ಅಳುತ್ತಿರುವುದನ್ನು ತಿಳಿದು ಶೀಘ್ರವಾಗಿ ಕೋಟಿ ತೀರ್ಥಗಳೊಡನೆ ಸ್ವರ್ಗದಿಂದ ಬಂದಳು.

ತತೋ ದುಃಖಂ ಪರಿತ್ಯಜ್ಯ ತತ್ರ ಪ್ರಾಚೀ ಸರಸ್ವತೀ ।
ಸರ್ವದೇವಗಣೈರ್ಯುಕ್ತಾ ಏವಂ ತತ್ರ ಸ್ಥಿತಾಽಭವತ್ ॥ ೫೫ ॥
ತತ್ರ ಸಿದ್ಧವಟಂ ನಾಮ ತೀರ್ಥಂ ಪೈತಾಮಹಂ ಸ್ಮೃತಂ ।
ವಟೇಶ್ವರಸ್ಯ ಪುರತಃ ಸರ್ವಪಾಪಕ್ಷಯಂಕರಂ ॥ ೫೬ ॥
ತ್ರಿಕಾಲಂ ಯತ್ರ ರುದ್ರಸ್ತು ಸಮಾಗತ್ಯ ವ್ಯವಸ್ಥಿತಃ ।
ತನ್ಮಹಾಲಯಮಿತ್ಯುಕ್ತಂ ಸ್ಥಾನಂ ತಸ್ಯ ಮಹಾತ್ಮನಃ ॥ ೫೭ ॥
ಪಿಂಡತಾರಕಮಿತ್ಯೇತತ್ಪ್ರಾಚೀನಂ ತೀರ್ಥಮುತ್ತಮಂ ।
ಕುಂಭಕುಕ್ಷಿಗಿರಿಸ್ಥಂ ತತ್ಪಿತ್ರ್ಯೇ ಕರ್ಮಣಿ ಸಿದ್ಧಿದಂ ॥ ೫೮ ॥
ಪ್ರಾಚೀನೇಶ್ವರದೇವಸ್ಯ ಪುರೋಭೂತಂ ಪ್ರತಿಷ್ಠಿತಂ ।
ಪ್ರಾಚೀ ಸರಸ್ವತೀ ಯತ್ರ ತತ್ರ ಕಿಂ ಮೃಗ್ಯತೇ ಪರಂ ॥ ೫೯ ॥
ನಿವೃತ್ತೇ ಭಾರತೇ ಯುದ್ಧೇ ತತ್ರ ತೀರ್ಥೇ ಕಿರೀಟಿನಾ ।
ಪ್ರಾಯಶ್ಚಿತ್ತಂ ಪುರಾ ಚೀರ್ಣಂ ವಿಷ್ಣುನಾ ಪ್ರೇರಿತಾತ್ಮನಾ ॥ ೬೦ ॥
ತೇನ ತಸ್ಮಾದ್ವಿನಿರ್ಮುಕ್ತಃ ಪಾತಕಾತ್ಪೂರ್ವಸಂಚಿತಾತ್ ।
ನರತೀರ್ಥಂ ತತಃ ಖ್ಯಾತಂ ತತ್ರ ಪಾಪಭಯಾಪಹಂ ॥ ೬೧ ॥

---

೫೫. ಬಳಿಕ ಪೂರ್ವಾಭಿಮುಖಳಾದ ಆ ಸರಸ್ವತಿಯು ಅಲ್ಲಿ ಸಮಸ್ತ ದೇವತೆಗಳೊಡನೆ ನಿಂತಳು.

೫೬–೫೭. ಅಲ್ಲಿ ಸಿದ್ಧವಟವೆಂಬ ಬ್ರಹ್ಮತೀರ್ಥವಿರುವುದು. ಆ ವಟೇಶ್ವರದ ಮುಂದೆ ಸಮಸ್ತ ಪಾಪಗಳನ್ನೂ ಪರಿಹರಿಸುವ ಮಹೇಶ್ವರನ ಮಹಾಲಯವೆಂಬ ಸ್ಥಾನವಿರುವುದು. ಇದರಲ್ಲಿ ತ್ರಿಕಾಲಗಳಲ್ಲಿ ರುದ್ರನು ಬಂದು ನೆಲೆಸಿರುವನು.

೫೮–೫೯. ಹೀಗೆಯೇ ಕುಂಭಕುಕ್ಷಿಗಿರಿಯಲ್ಲಿ ಪಿಂಡತಾರಕವೆಂಬ ಉತ್ತಮವಾದ ಪ್ರಾಚೀನ ತೀರ್ಥವಿರುವುದು. ಅಲ್ಲಿ ಪಿತೃತರ್ಪಣಮಾಡುವುದರಿಂದ ಇಷ್ಟವು ಸಿದ್ಧಿಸುವುದು. ಪ್ರಾಚೀನೇಶ್ವರನ ಮುಂದಿರುವ ಆ ತೀರ್ಥದಲ್ಲಿ ಸರಸ್ವತಿಯು ಪೂರ್ವಾಭಿಮುಖವಾಗಿ ನಿಂತಿರುವಳು.

೬೦. ಭಾರತ ಯುದ್ಧ ಮುಗಿಯಲು ಕೃಷ್ಣನ ಪ್ರೇರಣೆಯಿಂದ ಅರ್ಜುನನು ಆ ತೀರ್ಥದಲ್ಲಿಯೇ ಪ್ರಾಯಶ್ಚಿತ್ತವನ್ನು ಮಾಡಿಕೊಂಡನು.

೬೧. ಅದರಿಂದ ಅರ್ಜುನನು ಹಿಂದೆ ಮಾಡಿದ ಪಾಪದಿಂದ ಮುಕ್ತನಾದನು. ಅದರ ಮುಂದೆ ಪಾಪಭಯವನ್ನು ನೀಗಿಸುವ ಪ್ರಸಿದ್ಧವಾದ ನರತೀರ್ಥವಿರುವುದು.

ನರತೀರ್ಥಾದನ್ಯತೀರ್ಥಂ ಪುಂಡರೀಕಮಿತಿ ಸ್ಮೃತಂ ।
ಅರ್ಜುನೇನ ಸಹಾಽಽಗತ್ಯ ಯತ್ರ ಸ್ನಾತೋ ಹರಿಃ ಪ್ರಿಯೇ ॥ ೬೨ ॥
ಪ್ರಾಚೀನೇಶಾತ್ಪರಂ ತೀರ್ಥಂ ವಾಲಖಿಲ್ಯೇಶ್ವರಂ ಮಹತ್ ।
ತತ್ರ ತಸ್ಮಾನ್ಮಹಾತೀರ್ಥಾತ್ತೀರ್ಥಮನ್ಯನ್ಮಹೋದಯಂ ॥ ೬೩ ॥
ಗಂಗಾಸಮಾಗಮಂ ನಾಮ ತೀರ್ಥಮನ್ಯನ್ಮಹೋದಯಂ ।
ತತ್ರಾಲೋಕ್ಯ ಪುನರ್ದೇವೀಂ ದೀನಾಸ್ಯಾಂ ದೀನಮಾನಸಾಂ ॥ ೬೪ ॥
ಬ್ರಹ್ಮಾಽಸೃಜತ್ಸಖೀಂ ತಸ್ಯಾಃ ಕಪಿಲಾಂ ವಿಪುಲೇಕ್ಷಣಾಂ ।
ಹರಿಣೀಂ ಹರಿರಪ್ಯಾಶು ವಜ್ರಿಣೀಮಪಿ ದೇವರಾಟ್ ।
ನ್ಯಂಕುಂ ವಿನೋದನಾರ್ಥಂ ಚ ಸರಸ್ವತ್ಯಾ ದದೌ ಹರಃ ॥ ೬೫ ॥
ತತಃ ಪ್ರಹೃಷ್ಟಾ ಸಾ ದೇವೀ ದೇವಾದೇಶಾತ್ಸರಸ್ವತೀ ।
ತಸ್ಮಾದ್ಗಂತುಂ ಸಮಾರಬ್ಧಾ ಪ್ರಾಚೀನಾ ಪಾಪನಾಶಿನೀ ॥ ೬೬ ॥

ಈಶ್ವರ ಉವಾಚ :—

ದಕ್ಷಿಣಾಂ ದಿಶಮಾಸ್ಥಾಯ ಪುನಃ ಪಶ್ಚಾನ್ಮುಖೀ ತದಾ ।
ಸರಸ್ವತೀ ಮಹಾದೇವೀ ವಡವಾನಲಧಾರಿಣೀ ।
ತದುತ್ತರೇ ತಟೇ ತೀರ್ಥಮೇಕದ್ವಾರಮಿತಿ ಸ್ಮೃತಂ ॥ ೬೭ ॥

---

೬೨. ಪ್ರಿಯಳೆ! ಆ ನರತೀರ್ಥದ ಮುಂದೆ ಪುಂಡರೀಕ ತೀರ್ಥವಿರುವುದು. ಅದರಲ್ಲಿ ಕೃಷ್ಣನು ಅರ್ಜುನನೊಡನೆ ಬಂದು ಮಿಂದಿರುವನು.

೬೩-೬೫. ಪ್ರಾಚೀನೇಶ್ವರನ ಮುಂದೆ ವಾಲಖಿಲ್ಯೇಶ್ವರವೆಂಬ ಮಹಾ ತೀರ್ಥವೂ, ಅದಕ್ಕಿಂತ ಮುಂದೆ ಗಂಗಾಸಂಗಮವೆಂಬ ತೀರ್ಥವೂ ಇರುವುದು. ಅಲ್ಲಿ ಬ್ರಹ್ಮನು ದೀನಮುಖಳೂ, ದೈನ್ಯಗೊಂಡ ಮನಸ್ಸುಳ್ಳವಳೂ ಆದ ಸರಸ್ವತಿಯನ್ನು ಕಂಡು ಅವಳಿಗೆ ಕಪಿಲೆಯೆಂಬ ವಿಶಾಲನಯನಗಳುಳ್ಳ ಸಖಿಯನ್ನು ಸೃಷ್ಟಿಸಿದನು. ಹಾಗೆಯೇ ವಿಷ್ಣುವು ಹರಿಣಿಯನ್ನೂ, ದೇವೇಂದ್ರನು ವಜ್ರಿಣಿಯನ್ನೂ, ಹರನು ನ್ಯಂಕುವನ್ನೂ ಆ ಸರಸ್ವತಿಯ ವಿನೋದಕ್ಕಾಗಿ ಕೊಟ್ಟರು.

೬೬. ಬಳಿಕ ಸಂತೋಷಗೊಂಡು ಪೂರ್ವಾಭಿಮುಖಳಾದ ಸರಸ್ವತಿಯು ದೇವತೆಗಳ ಅಪ್ಪಣೆಯಿಂದ ಅಲ್ಲಿಂದ ಹೊರಡಲಾರಂಭಿಸಿದಳು.

೬೭-೬೮. ಈಶ್ವರನು ಹೇಳುತ್ತಾನೆ :— ವಡವಾನಲವನ್ನು ಹೊತ್ತಿರುವ ಆ ಸರಸ್ವತಿಯು ದಕ್ಷಿಣಾಭಿಮುಖಳಾಗಿ ಮರಳಿ ಪಶ್ಚಿಮಾಭಿಮುಖವಾಗಿ ಹೊರಟಳು.

ಏಕದ್ವಾರೇಣ ಯತ್ಸೇನಾ ಸ್ವರ್ಗಂ ಪ್ರಾಪ್ತಾ ತತೋ ವರಾತ್ ।
ತಸ್ಮಾತ್ತೀರ್ಥಾತ್ಪುನಶ್ಚಾನ್ಯತ್ತೀರ್ಥಂ ಯತ್ರ ಗುಹೇಶ್ವರಃ ॥ ೬೮ ॥
ಗುಹೇನ ಸ್ಥಾಪಿತಃ ಪೂರ್ವಂ ಯತ್ರ ದೇವೋ ಮಹೇಶ್ವರಃ ।
ಗುಹೇಶ್ವರಾನ್ನಾತಿದೂರೇ ವಟೇಶ್ವರಮಿತಿ ಸ್ಮೃತಂ ॥ ೬೯ ॥
ದಿವ್ಯಂ ಸರಸ್ವತೀತೀರೇ ವ್ಯಾಸೇನಾರಾಧಿತಂ ಪುರಾ ।
ಆಮರ್ದಕೀ ನದೀ ಯತ್ರ ಸರಸ್ವತ್ಯಾ ಸಹೈಕತಾಂ ॥ ೭೦ ॥
ಸಂಪ್ರಾಪ್ತಾ ತನ್ಮಹಾತೀರ್ಥಂ ಫಲದಂ ಸರ್ವದೇಹಿನಾಂ ।
ಆಮರ್ದಕೀಸಂಗಮಂ ತಂ ನಾಪುಣ್ಯೋ ವೇದ ಕಶ್ಚನ ।
ಸಂಗಮೇಶ್ವರನಾಮೇತಿ ತತ್ರ ಲಿಂಗಂ ಪ್ರತಿಷ್ಠಿತಂ ॥ ೭೧ ॥
ಮುಂಡೀಶ್ವರೇತಿ ಚ ತಥಾ ಪ್ರಸಿದ್ಧಿಮಗಮತ್ಕ್ಷಿತೌ ।
ಮುಂಡೀಶ್ವರಸಮೀಪಸ್ಥಂ ಸರಸ್ವತ್ಯಾಂ ಮಹೋದಯಂ ॥ ೭೨ ॥
ನಾಮ್ನಾ ಯತ್ಪ್ರಾಙ್ಮುಖಂ ತೀರ್ಥಂ ಸರಸ್ವತ್ಯಾಸ್ತಟೇ ಸ್ಥಿತಂ ।
ಮಾಂಡವ್ಯೇಶ್ವರನಾಮ್ನಾ ವೈ ಯತ್ರೇಶಃ ಸಂಪ್ರತಿಷ್ಠಿತಃ ॥ ೭೩ ॥
ಪೀಲುಕರ್ಣಿಕಸಂಜ್ಞಂ ತು ತೀರ್ಥಮನ್ಯತ್ಪುನಸ್ತತಃ ।
ಸರಸ್ವತೀತೀರಗತಮೃಷಿಣಾ ಸೇವಿತಂ ಮಹತ್ ॥ ೭೪ ॥

ಅವಳ ಉತ್ತರವಡದಲ್ಲಿ ಏಕದ್ವಾರವೆಂಬ ತೀರ್ಥವಿರುವುದು. ಈ ಏಕದ್ವಾರದಿಂದ ಸೇನೆಯು ಸ್ವರ್ಗಕ್ಕೆ ಹೋಗಿರುವುದು. ಅದರಮುಂದೆ ಗುಹೇಶ್ವರತೀರ್ಥವಿರುವುದು.

೬೯–೭೧ ಈ ಗುಹೇಶ್ವರ ತೀರ್ಥದಲ್ಲಿ ಗುಹನು ಮಹೇಶ್ವರನನ್ನು ಸ್ಥಾಪಿಸಿರುವನು. ಗುಹೇಶ್ವರತೀರ್ಥದ ಹತ್ತಿರವೇ ವ್ಯಾಸನು ಹಿಂದೆ ಪೂಜಿಸಿದ ವಟೇಶ್ವರವೆಂಬ ದಿವ್ಯತೀರ್ಥವಿರುವುದು. ಇಲ್ಲಿ ಆಮರ್ದಕೀ ನದಿಯು ಸರಸ್ವತಿಯೊಡನೆ ಐಕ್ಯವನ್ನು ಹೊಂದಿರುವುದು. ಆ ಮಹಾತೀರ್ಥವು ಸಮಸ್ತ ಪ್ರಾಣಿಗಳಿಗೂ ಪುಣ್ಯವನ್ನೀಯುವುದು. ಆ ಆಮರ್ದಕೀ ಸಂಗಮವನ್ನು ಪಾಪಿಯು ತಿಳಿಯುವುದಿಲ್ಲ. ಅಲ್ಲಿ ಸಂಗಮೇಶ್ವರವೆಂಬ ಲಿಂಗವು ಸ್ಥಾಪಿಸಲ್ಪಟ್ಟಿರುವುದು.

೭೨–೭೩. ಇದು ಮುಂಡೀಶ್ವರವೆಂದು ಭೂಮಿಯಲ್ಲಿ ಪ್ರಸಿದ್ಧಿಗೊಂಡಿತು. ಇದರ ಹತ್ತಿರ ಸರಸ್ವತೀತೀರದಲ್ಲಿ ಪೂರ್ವಾಭಿಮುಖವಾದ ಮಹೋದಯತೀರ್ಥವಿರುವುದು. ಇದರಲ್ಲಿ ಮಾಂಡವ್ಯೇಶ್ವರನು ಪ್ರತಿಷ್ಠೆಮಾಡಲ್ಪಟ್ಟಿರುವನು.

೭೪. ಹೀಗೆಯೇ ಆ ಸರಸ್ವತಿಯ ದಡದಲ್ಲಿ ಮುನಿಗಳಿಂದ ಸೇವಿಸಲ್ಪಟ್ಟ ಪೀಲುಕರ್ಣಿಕವೆಂಬ ಮತ್ತೊಂದು ತೀರ್ಥವಿರುವುದು.

ತಸ್ಮಾದನ್ಯತ್ಸರಸ್ವತ್ಯಾಂ ತೀರ್ಥಂ ದ್ವಾರವತೀ ಸ್ಮೃತಂ ।
ತೀರ್ಥಾನಾಂ ಪ್ರವರಂ ದೇವಿ ಯತ್ರ ಸನ್ನಿಹಿತೋ ಹರಿಃ ॥ ೭೫ ॥
ತತಸ್ತಸ್ಯ ಸಮೀಪಸ್ಥಂ ತೀರ್ಥಂ ಗೋವತ್ಸಸಂಜ್ಞಿತಂ ।
ಯತ್ರಾऽವತೀರ್ಯ ಗೋವತ್ಸಸ್ವರೂಪೇಣಾಂಬಿಕಾಪತಿಃ ॥ ೭೬ ॥
ಸ್ವಯಂಭೂಲಿಂಗರೂಪೇಣ ಸಂಸ್ಥಿತಸ್ತೇಜಸಾಂನಿಧಿಃ ।
ಗೋವತ್ಸಾನ್ನೈರ್ಋತೇ ಭಾಗೇ ದೃಶ್ಯತೇ ಲೋಹಯಷ್ಟಿಕಾ ॥ ೭೭ ॥
ಸ್ವಯಂಭೂಲಿಂಗರೂಪೇಣ ರುದ್ರಸ್ತತ್ರ ಸ್ವಯಂ ಸ್ಥಿತಃ ।
ಏಕವಿಂಶತಿವಾರಸ್ಯ ಭಕ್ತ್ಯಾ ಪಿಂಡಸ್ಯ ಯತ್ಫಲಂ ॥ ೭೮ ॥
ಗಂಗಾಯಾಂ ಪ್ರಾಪ್ಯತೇ ಪುಣ್ಯಂ ಶ್ರಾದ್ಧೇನೈಕೇನ ತತ್ರ ತತ್ ।
ತತಸ್ತಸ್ಮಾನ್ಮಹಾತೀರ್ಥಾದ್ಬಾಲಕ್ರೀಡನಕೇ ಯಥಾ ॥ ೭೯ ॥
ಸಖೀಭಿಃ ಸಹಿತಾ ತತ್ರ ಕ್ರೀಡತಾऽಸೌ ಯಥೇಚ್ಛಯಾ ।
ಅನುಲೋಮ್ಯವಿಲೋಮ್ಯೇನ ದಕ್ಷಿಣೇನೋತ್ತರೇಣ ಚ ॥ ೮೦ ॥
ರುಲ್ಲಂ ಪ್ರಾಪ್ಯ ಪುನರ್ದೇವೀ ಸಮುದ್ಭೂತಾ ಮನೋರಮಾ ।
ರುಲ್ಲಂ ನಾಮ ಪುರಂ ಯತ್ರ ಸೃಷ್ಟಂ ದೇವೇನ ಶಂಭುನಾ ॥ ೮೧ ॥

---

೭೫. ಅದರ ಮುಂದೆ ದ್ವಾರವತಿಯೆಂಬ ಉತ್ತಮ ತೀರ್ಥವಿರುವುದು. ಇದರಲ್ಲಿ ಕೃಷ್ಣನು ಸನ್ನಿಹಿತನಾಗಿರುವನು.

೭೬–೮೦. ಆ ದ್ವಾರವತಿಯ ಹತ್ತಿರವೇ ಗೋವತ್ಸವೆಂಬ ತೀರ್ಥವಿರುವುದು. ಆ ತೀರ್ಥದಲ್ಲಿ ಮಹೇಶ್ವರನು ಗೋವಿನ ಕರುವಿನ ರೂಪದಿಂದ ಅವತರಿಸಿ ಸ್ವಯಂಭೂಲಿಂಗರೂಪದಿಂದ ನೆಲೆಸಿದನು. ಇದರ ನೈಋತ್ಯದಿಕ್ಕಿನಲ್ಲಿ ಲೋಹಯಷ್ಟಿಕೆಯು ಕಾಣಿಸುವುದು. ಮಹಾದೇವನು ಅಲ್ಲಿ ಸ್ವಯಂಭೂಲಿಂಗರೂಪದಿಂದಲೆ ನೆಲಸಿರುವನು. ಮನುಷ್ಯರು ಗಂಗೆಯಲ್ಲಿ ಇಪ್ಪತ್ತೊಂದುಸಾರಿ ಭಕ್ತಿಯಿಂದ ಪಿಂಡದಾನಮಾಡಿದ ಫಲವು ಆ ಲೋಹಯಷ್ಟಿಕೆಯಲ್ಲಿ ಒಂದು ಸಾರಿ ಶ್ರಾದ್ಧ ಮಾಡುವುದರಿಂದ ಲಭಿಸುವುದು. ಆ ತೀರ್ಥದ ಮುಂದೆ ಸರಸ್ವತಿಯು ಸಖಿಯರೊಡನೆ ಸ್ವೇಚ್ಛೆಯಾಗಿ ದಕ್ಷಿಣೋತ್ತರಕ್ಕೆ ಅಲ್ಲಿಂದಿಲ್ಲಿಗೆ ಸಂಚರಿಸುತ್ತ ಆಡಿದ ಬಾಲಕ್ರೀಡನಕೇ ಎಂಬ ತೀರ್ಥವಿರುವುದು.

೮೧. ಮರಳಿ ಸರಸ್ವತಿಯು ಮಹೇಶ್ವರನು ಸೃಷ್ಟಿಸಿದ ರುಲ್ಲವೆಂಬ ಪಟ್ಟಣವನ್ನು ಸೇರಿ ಮನೋಹರಳಾಗಿ ಮೇಲಕ್ಕೆದ್ದಳು.

ಸಹ ದೇವೈಸ್ತು ಪಾರ್ವತ್ಯಾ ಧಾರಾಯಂತ್ರಪ್ರಯೋಗಕೈಃ ।
ಏಕಂ ವರ್ಷಸಹಸ್ರಂ ತು ಶಂಭುನಾ ತತ್ರ ರುಲ್ಲಿತಂ ॥ ೮೨ ॥
ರುಲ್ಲಂ ತತ್ರ ಹ್ರದಂ ನಾಮ ಸರಸ್ವತ್ಯಾಂ ಮಹೋದಯಂ ।
ಸಾಕ್ಷಾತ್ತತ್ರ ಮಹಾದೇವ ಆನಂದೇಶ್ವರಸಂಜ್ಞಿತಃ ॥ ೮೩ ॥
ಪಶ್ಚಿಮೇನ ಸ್ಥಿತಂ ತತ್ರ ಶಂಭೋರಾಯತನಸ್ಯ ತು ।
ಸ ಮೇರೋರ್ದಕ್ಷಿಣೇ ಪಾದೇ ನಖಸ್ತು ಪರಿಕೀರ್ತಿತಃ ॥ ೮೪ ॥
ಪಶ್ಯಂತಿ ಯೇ ನರಾಃ ಸಮ್ಯಕ್ತೇಽಪಿ ಪಾಪವಿವರ್ಜಿತಾಃ ।
ಅಶ್ವಮೇಧಸಹಸ್ರಸ್ಯ ಪ್ರಾಪ್ನುವಂತಿ ಫಲಂ ಧ್ರುವಂ ॥ ೮೫ ॥
ಪರತಸ್ತಸ್ಯ ಕೂಷ್ಮಾಂಡಮುನೇಸ್ತತ್ರಾಶ್ರಮಂ ಮಹತ್ ।
ಕೂಷ್ಮಾಂಡೇಶ್ವರಸಂಜ್ಞಸ್ತು ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೮೬ ॥
ಕೋಲ್ಲಾದೇವೀ ಸ್ಥಿತಾ ತತ್ರ ಸರ್ವಪಾಪಭಯಾಪಹಾ ।
ಅಂತರ್ಧಾನೇನ ತಾಂ ಕೋಲ್ಲಾಂ ಸಂಪ್ರಾಪ್ತಾ ಸಾ ಮಹಾನದೀ ॥ ೮೭ ॥
ತತೋಽಪ್ಯಂತರ್ಹಿತಾ ಭೂತ್ವಾ ಸಂಪ್ರಾಪ್ತಾ ತು ಮನೋರಮಂ ।
ಸಾನುಂ ಮದನಸಂಜ್ಞಂ ತು ಕ್ಷೇತ್ರಂ ಸಿದ್ಧನಿಷೇವಿತಂ ॥ ೮೮ ॥

---

೮೨. ಅಲ್ಲಿ ಮಹೇಶ್ವರನು ದೇವತೆಗಳೊಡನೆಯೂ, ಪಾರ್ವತಿಯೊಡನೆಯೂ ಒಂದು ವರ್ಷಕಾಲ ಧಾರಾಯಂತ್ರದ ಪ್ರಯೋಗದಿಂದ ವಿನೋದಪಟ್ಟಿರುವನು.

೮೩. ಆ ಸರಸ್ವತಿ ನದಿಯಲ್ಲಿ ರುಲ್ಲವೆಂಬ ಮಡುವಿರುವುದು. ಅಲ್ಲಿ ಮಹಾದೇವನು ಆನಂದೇಶ್ವರನೆಂಬ ನಾಮದಿಂದ ನೆಲೆಸಿರುವನು.

೮೪ ಆ ಆನಂದೇಶ್ವರನ ಆಲಯದ ಪಶ್ಚಿಮದಲ್ಲಿ ಮೇರುಪರ್ವತದ ದಕ್ಷಿಣದ ತಪ್ಪಲಿನಲ್ಲಿ ನಖ ತೀರ್ಥವಿರುವುದು.

೮೫. ಆ ತೀರ್ಥವನ್ನು ದರ್ಶನಗೈದ ಮಾನವರು ಪಾಪ ಮುಕ್ತರಾಗಿ ಸಾವಿರ ಅಶ್ವಮೇಧಯಾಗಗಳನ್ನು ಮಾಡಿದ ಫಲವನ್ನು ಪಡೆಯುವರು.

೮೬. ಆ ನಖತೀರ್ಥದ ಮುಂದೆ ಕೂಷ್ಮಾಂಡ ಮುನಿಯ ಆಶ್ರಮವಿರುವುದು. ಅಲ್ಲಿ ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದ ಕೂಷ್ಮಾಂಡೇಶ್ವರ ತೀರ್ಥವಿರುವುದು.

೮೭. ಅಲ್ಲಿ ಸಮಸ್ತ ಪಾಪಭಯವನ್ನು ನೀಗಿಸುವ ಕೋಲ್ಲಾದೇವಿಯು ನೆಲಸಿರುವಳು. ಅವಳನ್ನು ಸರಸ್ವತಿಯು ಅದೃಶ್ಯಳಾಗಿ ಸೇರಿರುವಳು.

೮೮. ಬಳಿಕ ಆ ಸರಸ್ವತಿಯು ಅದೃಶ್ಯಳಾಗಿಯೇ ಸಿದ್ಧರು ಸೇವಿಸುತ್ತಿರುವ ಮದನವೆಂಬ ಮನೋಹರ ತೀರ್ಥವನ್ನು ಹೊಂದಿರುವಳು.

ತತೋಽಪ್ಯಂತರ್ಹಿತಾ ಭೂತ್ವಾ ಪುನಃ ಪ್ರಾಪ್ತಾ ಹಿಮಾಚಲಂ ।
ಖಾದಿರಾಮೋದನಾಮಾನಂ ಸರ್ವರ್ತುಕುಸುಮೋಜ್ಜ್ವಲಂ ॥ ೮೯ ॥
ತತ್ರಾರುಹ್ಯ ವಿಲೋಕ್ಯಾಽಥ ದದರ್ಶ ಸುಮನೋರಮಂ ।
ಕ್ಷಾರೋದಂ ಪಶ್ಚಿಮಾಶಾಸ್ಥಂ ಘನವೃಂದಮಿವೋನ್ನತಂ ॥ ೯೦ ॥
ಏವಂವಿಧಂ ಚ ತಂ ತತ್ರ ಸಾ ವಿಲೋಕ್ಯ ಮಹಾಪ್ರಭಾ ।
ಹರ್ಷಾತ್ಪಂಚಾನನಾ ಭೂತ್ವಾ ದೇವಕಾರ್ಯಾರ್ಥಮುದ್ಯತಾ ॥ ೯೧ ॥
ಹರಿಣೀ ವಜ್ರಿಣೀ ನ್ಯಂಕುಃ ಕಪಿಲಾ ಚ ಸರಸ್ವತೀ ।
ಪಂಚ ಸ್ರೋತಾಃ ಸ್ಥಿತಾಸ್ತತ್ರ ಮುನಿನೋಕ್ತಾ ಸರಸ್ವತೀ ॥ ೯೨ ॥
ಶ್ರಮಾಽಪನೋದಂ ಕುರ್ವಾಣಾ ಮುನೀನಾಂ ಯತ್ರ ಸಂಸ್ಥಿತಾಃ ।
ತತ್ಪಾದಕಮಿತ್ಯುಕ್ತಂ ತೀರ್ಥಂ ತೀರ್ಥಾರ್ಥಿನಾಂ ನೃಣಾಂ ।
ಸರ್ವೇಷಾಂ ಪಾತುಕಾನಾಂ ಚ ಶೋಧನಂ ತದ್ವರಾನನೇ ॥ ೯೩ ॥
ಖಾದಿರಾಮೋದಮಾಸಾದ್ಯ ತತ್ರಸ್ಥಾ ವೀಕ್ಷ್ಯ ಸಾಗರಂ ।
ಗಂತುಂ ಪ್ರವೃತ್ತಾ ತಂ ವಹ್ನಿಮಾದಾಯ ಸುರಸುಂದರಿ ॥ ೯೪ ॥

---

೮೯. ಅನಂತರ ಅಂತರ್ಹಿತಳಾಗಿಯೇ ಹಿಮಾಚಲವನ್ನು ಸೇರಿ ಅಲ್ಲಿ ಸಕಲರ್ತುಗಳಲ್ಲಿಯೂ ಹೂವುಗಳಿಂದ ಮನೋಹರವಾದ ಖಾದಿರಾಮೋದವೆಂಬ ತೀರ್ಥವನ್ನು ಹೊಂದಿದಳು.

೯೦. ಅಲ್ಲಿ ಮೇಲಕ್ಕೆ ಹತ್ತಿ ಪಶ್ಚಿಮ ದಿಕ್ಕಿನಲ್ಲಿ ಮೋಡದ ಸಮೂಹದಂತಿರುವ ಅತಿ ಮನೋಹರವಾದ ಲವಣ ಸಮುದ್ರವನ್ನು ಕಂಡಳು.

೯೧-೯೨. ಅಲ್ಲಿ ಆ ಸರಸ್ವತಿಯು ಇಂತಹ ಲವಣ ಸಮುದ್ರವನ್ನು ಕಂಡು ಸಂತೋಷದಿಂದ ಐದು ಮುಖಗಳುಳ್ಳವಳಾಗಿ ದೇವತೆಗಳ ಕಾರ್ಯಕ್ಕಾಗಿ ಹರಿಣೀ, ವಜ್ರಿಣೀ, ನ್ಯಂಕು, ಕಪಿಲಾ, ಸರಸ್ವತೀ ಎಂಬ ಐದು ಪ್ರವಾಹಗಳಿಂದ ಕೂಡಿ ನಿಂತಳು.

೯೩. ಅಲ್ಲಿ ಮುನಿಗಳ ಆಯಾಸವನ್ನು ಹೋಗಲಾಡಿಸುತ್ತ ಅವಳು ನಿಂತ ಸ್ಥಳವು ತೀರ್ಥಗಳನ್ನು ಅಪೇಕ್ಷಿಸುವ ಜನರ ಸಮಸ್ತ ಪಾಪಗಳನ್ನು ಪರಿಹರಿಸುವ ತತ್ಪಾದಕವೆಂಬ ತೀರ್ಥವಾಯಿತು.

೯೪. ಖಾದಿರಾಮೋದವನ್ನು ಸೇರಿ ನೆಲೆಸಿದ್ದ ಸರಸ್ವತಿಯು ಸಮುದ್ರವನ್ನೀಕ್ಷಿಸಿ ಔರ್ವಾಗ್ನಿಯನ್ನು ತೆಗೆದುಕೊಂಡು ಹೊರಡಲುದ್ಯುಕ್ತಳಾದಳು.

ದಗ್ಧ್ವಾ ಕೃತಸ್ಮರಂ ದೇವೀ ಪುನರಾದಾಯ ವಾಡವಂ ।
ಸಮುದ್ರಸ್ಯ ಸಮೀಪಸ್ಥಾ ಸ್ಥಿತಾ ಹೃಷ್ಟತನೂರುಹಾ ॥ ೯೫ ॥
ತತಃ ಪ್ರವಿಷ್ಟಾ ಸಾ ದೇವೀ ಅಗಾಧೇ ಲವಣಾಂಭಸಿ ।
ವಾಡವಂ ವಹ್ನಿಮಾದಾಯ ಜಲಮಧ್ಯೇ ವ್ಯಸರ್ಜಯತ್ ॥ ೯೬ ॥
ತತಸ್ತಸ್ಯಾಃ ಪುನಃ ಪ್ರೀತಃ ಸ್ವಯಮೇವ ಹುತಾಶನಃ ।
ತದ್ದೃಷ್ಟ್ವಾ ದುಷ್ಕರಂ ಕರ್ಮ ವಚನಂ ಚೇದಮಬ್ರವೀತ್ ॥ ೯೭ ॥
ಪರಿತುಷ್ಟೋಽಸ್ಮಿ ತೇ ಭದ್ರೇ ವರಂ ವರಯ ಸುವ್ರತೇ ।
ತತ್ತೇ ದಾಸ್ಯಾಮ್ಯಹಂ ಪ್ರೀತೋ ಯದ್ಯಪಿ ಸ್ಯಾತ್ಸುದುರ್ಲಭಂ ॥ ೯೮ ॥

ಈಶ್ವರ ಉವಾಚ :—

ಪ್ರಗೃಹ್ಯ ವಲಯಂ ಹಸ್ತಾದಿದಂ ವಚನಮಬ್ರವೀತ್ ।
ಇದಂ ಮೇ ವಲಯಂ ವಹ್ನೇ ವಕ್ತ್ರೇ ಧಾರ್ಯಂ ಸದಾ ತ್ವಯಾ ॥ ೯೯ ॥
ಅನೇನ ಶಕ್ಯತೇ ಯಾವತ್ತಾವತ್ತೋಯಂ ಸಮಾಹರ ।
ನ ತ್ವಯಾ ಶೋಷಣೀಯೋಽಯಂ ಸಮುದ್ರಃ ಸರಿತಾಂಪತಿಃ ॥ ೧೦೦ ॥

---

೯೫. ಅವಳು ಕೃತಸ್ಮರ ಪರ್ವತವನ್ನು ಸುಟ್ಟು ಮರಳಿ ವಾಡವಾಗ್ನಿಯನ್ನು ತೆಗೆದುಕೊಂಡು ಸಮುದ್ರದ ಹತ್ತಿರ ಬಂದು ಸಂತೋಷದಿಂದ ರೋಮಾಂಚನಗೊಂಡು ನಿಂತಳು.

೯೬. ಅನಂತರ ಸರಸ್ವತಿಯು ಆಳವಾದ ಲವಣಸಮುದ್ರವನ್ನು ಪ್ರವೇಶಿಸಿ ವಾಡವಾಗ್ನಿಯನ್ನು ಅಲ್ಲಿ ಬಿಟ್ಟಳು.

೯೭. ವಾಡವಾಗ್ನಿಯು ದುಷ್ಕರವಾದ ಕಾರ್ಯವನ್ನು ಆ ಸರಸ್ವತಿಯ ಕಂಡು ಸಂತುಷ್ಟನಾಗಿ ಅವಳನ್ನು ಕುರಿತು ಇಂತೆಂದೆನು.

೯೮. "ಮಂಗಳಕರಳೆ ! ನಿನ್ನವಿಷಯದಲ್ಲಿ ಸಂತುಷ್ಟನಾಗಿರುವೆನು. ವರವನ್ನು ಕೇಳಿಕೊ. ಅದು ದುರ್ಲಭವಾಗಿದ್ದರೂ ನಿನಗೆ ಕೊಡುವೆನು".

೯೯. ಈಶ್ವರನು ಹೇಳುತ್ತಾನೆ :—ಆಗ ಸರಸ್ವತಿಯು ಕೈಯಿಂದ ಬಳೆಯನ್ನು ತೆಗೆದುಕೊಂಡು ಹೀಗೆಂದಳು. "ಔರ್ವ ! ನೀನು ಈ ಬಳೆಯನ್ನು ಯಾವಾಗಲೂ ಬಾಯಿಯಲ್ಲಿ ಧರಿಸು.

೧೦೦. ಇದರಿಂದ ಎಷ್ಟು ನೀರನ್ನು ಕುಡಿಯಲು ಸಾಧ್ಯವೊ ಅಷ್ಟನ್ನು ಮಾತ್ರ ಕುಡಿ. ನೀನು ಈ ನದೀಪತಿಯಾದ ಸಮುದ್ರನನ್ನು ಒಣಗಿಸಬಾರದು".

ಬಾಢಮಿತ್ಯೇವ ಚೋಕ್ತ್ವಾ ಸ ಪ್ರವಿಷ್ಟೋ ನಿಧಿಮಂಭಸಾಂ ।
ಏವಮೇಷಾ ಮಹಾದೇವೀ ಪ್ರಭಾಸೇ ತು ಸರಸ್ವತೀ ।
ಗೃಹೀತ್ವಾ ವಾಡವಂ ಪ್ರಾಪ್ತಾ ತುಷ್ಟ್ಯರ್ಥಂ ಚ ಮನೀಷಿಣಾಂ ॥ ೧೦೧ ॥
ಸಾ ವಿಶ್ರಾಂತಾ ಕುರುಕ್ಷೇತ್ರೇ ಭದ್ರಾವರ್ತೇ ಚ ಭಾಮಿನಿ ।
ಪುಷ್ಕರೇ ಶ್ರೀಕಲಾ ದೇವೀ ಪ್ರಭಾಸೇ ಚ ಮಹಾನದೀ ॥ ೧೦೨ ॥
ದೇವಮಾತೇತಿ ಸಾ ತತ್ರ ಸಂಸ್ಥಿತಾ ಲವಣೋದಧೌ ।
ಅಸ್ಮಿನ್ಮನ್ವಂತರೇ ದೇವಿ ಆದೌ ತ್ರೇತಾಯುಗೇ ಪುರಾ ॥ ೧೦೩ ॥
ಇತಿವೃತ್ತಂ ಸರಸ್ವತ್ಯಾ ವಾಡವಾಗ್ನೇಸ್ತಥಾಽಭವತ್ ।
ಮನ್ವಂತರೇ ವ್ಯತೀತೇಽಸ್ಮಿನ್ ಭವಿತಾಽನ್ಯಸ್ತು ವಾಡವಃ ॥ ೧೦೪ ॥
ಜ್ವಾಲಾಮುಖೇತಿ ನಾಮ್ನಾ ವೈ ರುದ್ರಕ್ರೋಧಾದ್ಭವಿಷ್ಯತಿ ।
ಸರಸ್ವತ್ಯಾಸ್ತಥಾ ನಾಮ ಖ್ಯಾತಿಂ ಬ್ರಾಹ್ಮೀತಿ ಯಾಸ್ಯತಿ ॥ ೧೦೫ ॥
ಸರಸ್ವತೀತಿ ವೈ ಲೋಕೇ ವರ್ತತೇ ನಾಮ ಸಾಂಪ್ರತಂ ।
ಅತೀತಂ ನಾಮ ಯತ್ತಸ್ಯಾಃ ಕಮಂಡಲುಭವೇತಿ ಚ ।
ರತ್ನಾಕರೇತಿ ಸಾಮುದ್ರಂ ಸತ್ಯಂ ನಾಮಾಂತರಂ ಪುರಾ ॥ ೧೦೭ ॥

---

೧೦೧. ವಾಡವನು ಹಾಗೆಯೇ ಆಗಲೆಂದು ಒಪ್ಪಿ ಸಮುದ್ರವನ್ನು ಹೊಕ್ಕನು. ಮಹಾದೇವಿ ! ಸರಸ್ವತಿಯು ಹೀಗೆ ದೇವತೆಗಳ ಸಂತೋಷಕ್ಕಾಗಿ ವಾಡವಾಗ್ನಿಯನ್ನು ತೆಗೆದುಕೊಂಡು ಪ್ರಭಾಸಕ್ಷೇತ್ರಕ್ಕೆ ಬಂದಿದ್ದಳು.

೧೦೨-೧೦೩. ಅವಳು ಕುರುಕ್ಷೇತ್ರ, ಭದ್ರಾವರ್ತ, ಪುಷ್ಕರ, ಶ್ರೀಕಲಾ, ಪ್ರಭಾಸಕ್ಷೇತ್ರಗಳಲ್ಲಿ ವಿಶ್ರಾಂತಿಗೊಂಡು ಹಿಂದೆ ತ್ರೇತಾಯುಗದಲ್ಲಿಯೂ ಈ ಮನ್ವಂತರದಲ್ಲಿಯೂ ಲವಣಸಾಗರದಲ್ಲಿ ದೇವಮಾತೆಯೆಂಬ ಹೆಸರಿನಿಂದ ನೆಲೆಸಿದಳು.

೧೦೪. ಸರಸ್ವತಿಯ ಮತ್ತು ವಾಡವಾಗ್ನಿಯ ಚರಿತ್ರೆಯು ಈರೀತಿಯಾಗಿರುವುದು. ಈ ಮನ್ವಂತರವು ಕಳೆಯಲು ಮತ್ತೊಂದು ವಾಡವಾಗ್ನಿಯು ಹುಟ್ಟುವುದು.

೧೦೫. ರುದ್ರನ ಕ್ರೋಧದಿಂದ ಹುಟ್ಟಿದ ಆ ವಾಡವಾಗ್ನಿಯು ಜ್ವಾಲಾಮುಖವೆಂದೂ, ಸರಸ್ವತಿಯು ಬ್ರಾಹ್ಮೀ ಎಂದೂ ಪ್ರಸಿದ್ಧರಾಗುವರು.

೧೦೬-೧೦೭. ಈಗ ಈ ನದಿಯ ಹೆಸರು ಸರಸ್ವತಿಯೆಂದಿರುವುದು. ಹಿಂದೆ ಈ ಸರಸ್ವತಿಗೆ ಕಮಂಡಲುಭವಾ ಎಂದು ಹೆಸರಿದ್ದಿತು. ಸಮುದ್ರಕ್ಕೆ ಹಿಂದೆ ರತ್ನಾಕರ

ಅಸ್ಮಿನ್ಮನ್ವಂತರೇ ದೇವಿ ಸಾಗರೇತಿ ಪ್ರಕೀರ್ತಿತಂ ।
ಕ್ಷಾರೋದೇತಿ ಭವಿಷ್ಯಂ ತು ನಾಮ ದೇವಿ ಪ್ರಕೀರ್ತಿತಂ ॥ ೧೦೭ ॥
ಏವಂ ಜಾನಾತಿ ಯಃ ಕಶ್ಚಿತ್ಸ ತೀರ್ಥಫಲಮಶ್ನುತೇ ।
ಸ್ವರ್ಗನಿಃಶ್ರೇಣಿಸಂಭೂತಾ ಪ್ರಭಾಸೇ ತು ಸರಸ್ವತೀ ॥ ೧೦೮ ॥
ನಾಪುಣ್ಯವದ್ಭಿಃ ಸಂಪ್ರಾಪ್ತುಂ ಪುಂಭಿಃ ಶಕ್ಯಾ ಮಹಾನದೀ ।
ಪ್ರಾಚೀ ಸರಸ್ವತೀ ದೇವಿ ಸರ್ವತ್ರ ಚ ಸದುರ್ಲಭಾ ।
ವಿಶೇಷೇಣ ಕುರುಕ್ಷೇತ್ರೇ ಪ್ರಭಾಸೇ ಪುಷ್ಕರೇ ತಥಾ ॥ ೧೦೯ ॥
ಏವಂ ಪ್ರಭಾವಾ ಸಾ ದೇವೀ ವಡವಾಽನಲಧಾರಿಣೀ ।
ಅಗ್ನಿತೀರ್ಥಸಮೀಪಸ್ಥಾ ಸ್ಥಿತಾ ದೇವೀ ಸರಸ್ವತೀ ॥ ೧೧೦ ॥
ತಾಮಾದೌ ಪೂಜಯೇದ್ಯಸ್ತು ಸ ತೀರ್ಥಫಲಮಶ್ನುತೇ ।
ಸಾಗರಂ ಯಚ್ಚ ತತ್ತೀರ್ಥಂ ಪಾಪಘ್ನಂ ಪುಣ್ಯವರ್ಧನಂ ॥ ೧೧೧ ॥
ದರ್ಶನಾದೇವ ತಸ್ಯೈವ ಮಹಾಕ್ರತುಫಲಂ ಲಭೇತ್ ।
ಅಗ್ನಿಚಿತ್ಕಪಿಲಾ ಸತ್ರೀ ರಾಜಾ ಭಿಕ್ಷುರ್ಮಹೋದಧಿಃ ॥ ೧೧೨ ॥
ದೃಷ್ಟಮಾತ್ರಾಃ ಪುನಂತ್ಯೇತೇ ತಸ್ಮಾತ್ಪಶ್ಯೇದ್ಧಿ ಭಾವಿತಃ ।
ಅಗ್ನಿತೀರ್ಥೇ ನರಃ ಸ್ನಾತ್ವಾ ಪಾವಕೇ ಪ್ರಕ್ಷಿಪೇತ್ತತಃ ।
ಗುಗ್ಗುಲಂ ಭಾರಸಹಿತಂ ಸೋಽಗ್ನಿಲೋಕೇ ಮಹೀಯತೇ ॥ ೧೧೩ ॥

ಎಂದು ನಾಮವಿದ್ದಿತು. ಈ ಮನ್ವಂತರದಲ್ಲಿ ಸಾಗರ ಎಂದಾಯಿತು. ಮುಂದೆ ಕ್ಷಾರೋದ ಎಂದು ಹೆಸರಾಗುವುದು.

೧೦೮.–೧೦೯. ಇದನ್ನರಿತವನು ತೀರ್ಥಫಲವನ್ನು ಪಡೆಯುವನು. ಪ್ರಭಾಸದಲ್ಲಿರುವ ಸ್ವರ್ಗಕ್ಕೆ ಮೆಟ್ಟಲಂತಿರುವ ಸರಸ್ವತಿಯನ್ನು ಪಾಪಿಗಳು ಹೊಂದಲು ಶಕ್ತರಲ್ಲ. ದೇವಿ! ಪೂರ್ವಾಭಿಮುಖಳಾದ ಸರಸ್ವತಿಯು ಎಲ್ಲೆಡೆಯಲ್ಲಿಯೂ ದುರ್ಲಭಳು. ಕುರುಕ್ಷೇತ್ರ, ಪ್ರಭಾಸ, ಪುಷ್ಕರ ಕ್ಷೇತ್ರಗಳಲ್ಲಿ ಆ ಸರಸ್ವತಿಯು ಅತ್ಯಂತ ದುರ್ಲಭಳು.

೧೧೦. ಇಂತಹ ಮಾಹಾತ್ಮ್ಯವುಳ್ಳ ಸರಸ್ವತಿಯು ವಡವಾನಲನನ್ನು ಧರಿಸಿ ಅಗ್ನಿತೀರ್ಥದ ಸಮೀಪದಲ್ಲಿರುವಳು.

೧೧೧–೧೧೩. ಅವಳನ್ನು ಮೊದಲು ಪೂಜಿಸಿದವನು ತೀರ್ಥಫಲವನ್ನು ಹೊಂದುವನು. ಪಾಪವನ್ನು ಪರಿಹರಿಸುವುದೂ, ಪುಣ್ಯವನ್ನು ಹೆಚ್ಚಿಸುವುದೂ ಆದ ಆ ತೀರ್ಥವನ್ನೂ, ಸಾಗರವನ್ನೂ ನೋಡುವುದರಿಂದ ಮಹಾ ಯಾಗವನ್ನು ಮಾಡಿದ ಫಲವು ಲಭಿಸುವುದು. ಅಗ್ನಿಹೋತ್ರಿ, ಕಪಿಲಗೋವು, ಸತ್ರಯೆಂಬ ಯಾಗವನು ಮಾಡಿದವನು, ರಾಜ, ಸನ್ಯಾಸಿ, ಸಮುದ್ರಗಳನ್ನು ನೋಡುವುದರಿಂದಲೆ ಪವಿತ್ರಗೊಳಿಸುವುದರಿಂದ ಭಕ್ತಿಯುಳ್ಳವನು ಇವನ್ನು ನೋಡಬೇಕು.

ಏವಂ ಸಂಕ್ಷೇಪತಃ ಪ್ರೋಕ್ತೋ ಹ್ಯಗ್ನಿತೀರ್ಥಮಹೋದಯಃ ।
ಸರಸ್ವತ್ಯಾಶ್ಚ ಮಾಹಾತ್ಮ್ಯಂ ಸರ್ವಪಾತಕನಾಶನಂ ॥ ೧೧೪ ॥
ಸ್ನಾತ್ವಾಽಗ್ನಿತೀರ್ಥೇ ವಿಧಿವತ್ಕಂಕಣಂ ಪ್ರಕ್ಷಿಪೇತ್ತತಃ ।
ಸುವರ್ಣಸ್ಯ ಮಹಾದೇವಿ ಯಥಾವಿತ್ತಾನುಸಾರತಃ ॥ ೧೧೫ ॥
ತತಃ ಸರಸ್ವತೀಂ ಪೂಜ್ಯ ಕಪರ್ದಿನಮಥಾರ್ಚಯೇತ್ ॥ ೧೧೬ ॥
ತತಃ ಕೇದಾರನಾಮಾನಂ ಭೀಮೇಶ್ವರಮತಃಪರಂ ।
ಭೈರವೇಶ್ವರನಾಮಾನಂ ಚಂಡೀಶ್ವರಮತಃಪರಂ ॥ ೧೧೭ ॥
ತತಃ ಸೋಮೇಶ್ವರಂ ದೇವಂ ಪೂಜಯೇದ್ವಿಧಿವನ್ನರಃ ।
ನವಗ್ರಹೇಶ್ವರಾನಿಷ್ಟ್ವಾ ರುದ್ರೈಕಾದಶಕಂ ತಥಾ ॥ ೧೧೮ ॥
ತತಃ ಸಂಪೂಜಯೇದ್ದೇವಂ ಬ್ರಹ್ಮಾಣಂ ಬಾಲರೂಪಿಣಂ ।
ಏವಂ ರೌದ್ರೀ ಸಮಾಖ್ಯಾತಾ ಯಾತ್ರಾ ಪಾತಕನಾಶಿನೀ ॥ ೧೧೯ ॥
ಮಾಹಾತ್ಮ್ಯಮಖಿಲಂ ತಸ್ಯಾ ಯೋ ಜಾನಾತಿ ನರೋತ್ತಮಃ ।
ನಿವಸನ್ ಕ್ಷೇತ್ರಮಧ್ಯೇ ತು ಸ ತೀರ್ಥಫಲಮಶ್ನುತೇ ॥ ೧೨೦ ॥
ಏವಂ ಕೃತ್ವಾ ತತೋ ಗಚ್ಛೇನ್ಮಹಾದೇವೀಂ ಸರಸ್ವತೀಂ ॥ ೧೨೧ ॥

ಮನುಷ್ಯನು ಅಗ್ನಿತೀರ್ಥದಲ್ಲಿ ಮಿಂದು ಅಗ್ನಿಗೆ ಇಪ್ಪತ್ತು ತೊಲೆ ಗುಗ್ಗುಲುವನ್ನು ಹಾಕಿದವನು ಅಗ್ನಿಲೋಕದಲ್ಲಿ ಪೂಜ್ಯನಾಗುವನು.

೧೧೪. ಹೀಗೆ ಸಂಕ್ಷೇಪವಾಗಿ ಅಗ್ನಿತೀರ್ಥದ ಮಾಹಾತ್ಮ್ಯವನ್ನೂ, ಸಕಲ ಪಾಪಗಳನ್ನು ಪರಿಹರಿಸುವ ಸರಸ್ವತಿಯ ಪ್ರಭಾವವನ್ನೂ ಹೇಳಿರುವೆನು.

೧೧೫. ಮಹಾದೇವಿ! ಅಗ್ನಿತೀರ್ಥದಲ್ಲಿ ವಿಧಿಯಂತೆ ಮಿಂದು ಅನಂತರ ವಿತ್ತಾನುಗುಣವಾಗಿ ಸುವರ್ಣದ ಕಂಕಣವನ್ನು ಹಾಕಬೇಕು.

೧೧೬–೧೧೮. ಬಳಿಕ ಸರಸ್ವತಿಯನ್ನೂ, ಅನಂತರ ಕಪರ್ದಿಯನ್ನೂ ಪೂಜಿಸಬೇಕು. ತರುವಾಯ ಕೇದಾರನೆಂಬ ಭೀಮೇಶ್ವರನನ್ನೂ, ಅನಂತರ ಭೈರವೇಶ್ವರನೆಂಬ ಚಂಡೀಶ್ವರನನ್ನೂ, ಬಳಿಕ ಸೋಮೇಶ್ವರನನ್ನೂ, ನವಗ್ರಹೇಶ್ವರನನ್ನೂ, ಏಕಾದಶರುದ್ರರನ್ನೂ ಪೂಜಿಸಬೇಕು.

೧೧೯. ತರುವಾಯ ಬಾಲರೂಪಿಯಾದ ಬ್ರಹ್ಮನನ್ನು ಅರ್ಚಿಸಬೇಕು. ಹೀಗೆ ಪಾಪವನ್ನು ಪರಿಹರಿಸುವ ರೌದ್ರೀಯಾತ್ರಾಕ್ರಮವನ್ನು ಹೇಳಿರುವೆನು.

೧೨೦. ಆ ಸರಸ್ವತಿಯ ಮಾಹಾತ್ಮ್ಯವನ್ನೆಲ್ಲ ಅರಿತು ಆ ಕ್ಷೇತ್ರದಲ್ಲಿ ವಾಸ ಮಾಡುವ ಮಾನವನು ತೀರ್ಥಫಲವನ್ನು ಪಡೆಯುವನು.

೧೨೧. ಮನುಷ್ಯನು ಈ ರೀತಿ ಕಾರ್ಯವನ್ನಾಚರಿಸಿದರೆ ಸರಸ್ವತಿಯ ಸಮೀಪವನ್ನು ಸೇರುವನು.

ಸರಸ್ವತೀವಾಸಸಮಾ ಕುತೋ ಗುಣಾಃ
ಸರಸ್ವತೀವಾಸಸಮಾ ಕುತೋ ರತಿಃ ।
ಸರಸ್ವತೀಂ ಪ್ರಾಪ್ಯ ದಿವಂ ಗತಾ ನರಾ
ಪುನಃ ಸ್ಮರಿಷ್ಯಂತಿ ನದೀಂ ಸರಸ್ವತೀಂ ॥ ೧೨೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಸರಸ್ವತ್ಯಬ್ಧಿ ಸಮಾಗಮಾಽಗ್ನಿತೀರ್ಥಮಾಹಾತ್ಮ್ಯವರ್ಣನಂ ನಾಮ
॥ ಪಂಚತ್ರಿಂಶೋಽಧ್ಯಾಯಃ ॥

---

೧೨೨. ಸರಸ್ವತೀಕ್ಷೇತ್ರದಲ್ಲಿ ವಾಸಮಾಡುವುದರಿಂದುಂಟಾಗುವ ಗುಣಗಳೂ, ಆ ಕ್ಷೇತ್ರದಲ್ಲಿ ವಾಸಿಸುವುದಕ್ಕೆ ಸಮಾನವಾದ ಸುಖವೂ ಬೇರೆ ಯಾವುದರಿಂದುಂಟಾಗುವುದು ? ಸರಸ್ವತೀನದಿಯನ್ನು ಹೊಂದಿ ದೇವಲೋಕವನ್ನು ಪಡೆದ ಮಾನವರು ಮರಳಿ ಸರಸ್ವತೀನದಿಯನ್ನು ಸ್ಮರಿಸುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ ಸರಸ್ವತ್ಯಬ್ಧಿ ಸಮಾಗಮಾಽಗ್ನಿತೀರ್ಥಮಾಹಾತ್ಮ್ಯವರ್ಣನವೆಂಬ ಮೂವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ತ್ರಿಂಶೋಽಧ್ಯಾಯಃ

ಪ್ರಾಚೀಸರಸ್ವತೀಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಯದೇತದ್ಭವತಾ ಪ್ರೋಕ್ತಂ ಪ್ರಾಚೀ ಸರ್ವತ್ರ ದುರ್ಲಭಾ ।
ವಿಶೇಷೇಣ ಕುರುಕ್ಷೇತ್ರೇ ಪ್ರಭಾಸೇ ಪುಷ್ಕರೇ ತಥಾ ॥ ೧ ॥
ಕಥಂ ಪ್ರಭಾಸಮಾಸಾದ್ಯ ಸಂಸ್ಥಿತಾ ಪಾಪನಾಶಿನೀ ।
ಮಾಹಾತ್ಮ್ಯಮಖಿಲಂ ತಸ್ಯಾಃ ಪ್ರಾಚ್ಯಾಃ ಪಾತಕನಾಶನಂ ।
ಕಥಯಸ್ವ ಮಹೇಶಾನ ಯದ್ಯಹಂ ತೇ ಪ್ರಿಯಾ ವಿಭೋ ॥ ೨ ॥

ಈಶ್ವರ ಉವಾಚ :—

ಸಾಧು ಪ್ರೋಕ್ತಂ ತ್ವಯಾ ಭದ್ರೇ ಪ್ರಾಚೀ ಸರ್ವತ್ರ ದುರ್ಲಭಾ ।
ಕುರುಕ್ಷೇತ್ರೇ ಪುಷ್ಕರೇ ಚ ತಸ್ಮಾತ್ಪ್ರಾಭಾಸಿಕೇಽಧಿಕಾ ॥ ೩ ॥
ಪ್ರಭಾಸೇ ತು ಮಹಾದೇವೀ ಪ್ರಾಚೀಂ ಪಾಪಪ್ರಣಾಶಿನೀಂ ।
ನಾಪುಣ್ಯೋ ವೇದ ದೇವೇಶಿ ಕರ್ಮನಿರ್ಮೂಲನಕ್ಷಮಾಂ ॥ ೪ ॥

ಕನ್ನಡದ ಅನುವಾದ

ಪ್ರಾಚೀಸರಸ್ವತೀಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ:—ನೀನು ಹೇಳಿರುವ ಪ್ರಾಚೀಸರಸ್ವತಿಯು ಕುರುಕ್ಷೇತ್ರ, ಪುಷ್ಕರ ತೀರ್ಥಗಳಲ್ಲಿ ದುರ್ಲಭಳು.

೨. ಮಹೇಶ್ವರ! ನಾನು ನಿನಗೆ ಪ್ರಿಯಳಾಗಿದ್ದರೆ ಈ ಪ್ರಾಚೀಸರಸ್ವತಿಯು ಹೇಗೆ ಪ್ರಭಾಸವನ್ನು ಸೇರಿ ನೆಲೆಸಿದಳು? ಪಾಪವನ್ನು ನಿವಾರಿಸುವ ಆ ದಿವ್ಯನದಿಯ ಸಕಲ ಮಾಹಾತ್ಮ್ಯವನ್ನೂ ಹೇಳು.

೩. ಈಶ್ವರನು ಹೇಳುತ್ತಾನೆ:—ಮಂಗಳಕರಳೆ! ನೀನು ಪ್ರಾಚೀ ಸರಸ್ವತಿಯು ಕುರುಕ್ಷೇತ್ರ, ಪುಷ್ಕರ ಮೊದಲಾದ ಕ್ಷೇತ್ರಗಳಲ್ಲಿ ದುರ್ಲಭಳೆಂದು ಸರಿಯಾಗಿ ಹೇಳಿರುವೆ. ಅಂತಹ ಸರಸ್ವತಿಯು ಪ್ರಭಾಸಕ್ಷೇತ್ರದಲ್ಲಿ ನೆಲೆಸಿರುವುದರಿಂದ ಆ ಕ್ಷೇತ್ರವು ಅತ್ಯುತ್ತಮವಾದುದು.

೪. ಮಹಾದೇವಿ! ಪ್ರಭಾಸದಲ್ಲಿ ನೆಲೆಸಿರುವ, ಪಾಪವನ್ನು ಪರಿಹರಿಸುವ ಆ ಪ್ರಾಚೀಸರಸ್ವತಿಯನ್ನು ಪಾಪಿಯು ತಿಳಿಯುವುದಿಲ್ಲ.

ಯೇ ಪಿಬಂತಿ ನರಾಃ ಪುಣ್ಯಾಂ ಪ್ರಾಚೀಂ ದೇವೀಂ ಸರಸ್ವತೀಂ ।
ನ ತೇ ಮನುಷ್ಯಾ ವಿಜ್ಞೇಯಾಃ ಸತ್ಯಂ ಸತ್ಯಂ ವರಾನನೇ ॥ ೫ ॥
ಧನ್ಯಾಸ್ತೇ ಮುನಯಸ್ತೇ ಚ ಪುಣ್ಯಾಸ್ತೇ ಚ ತಪಸ್ವಿನಃ ।
ಯೇ ಚ ಸಾರಸ್ವತಂ ತೋಯಂ ಪಿಬಂತ್ಯಹರಹಃ ಸದಾ ॥ ೬ ॥
ದೇವಾಸ್ತೇ ನ ಮನುಷ್ಯಾಸ್ತೇ ನದೀಸ್ತಿಸ್ರಃ ಪಿಬಂತಿ ಯೇ ।
ಚಂದ್ರಭಾಗಾಂ ಚ ಗಂಗಾಂ ಚ ತಥಾ ದೇವೀಂ ಸರಸ್ವತೀಂ ॥ ೭ ॥
ಭುಕ್ತ್ವಾ ವಾ ಯದಿ ವಾಽಭುಕ್ತ್ವಾ ದಿವಾ ವಾ ಯದಿ ವಾ ನಿಶಿ ।
ನ ಕಾಲನಿಯಮಸ್ತತ್ರ ಯತ್ರ ಪ್ರಾಚೀ ಸರಸ್ವತೀ ॥ ೮ ॥
ಪ್ರಾಚೀಂ ಸರಸ್ವತೀಂ ಯೇ ತು ಪಿಬಂತಿ ಸತತಂ ಮೃಗಾಃ ।
ತೇಽಪಿ ಸ್ವರ್ಗಂ ಗಮಿಷ್ಯಂತಿ ಯಜ್ಞೈರ್ದ್ವಿಜವರಾ ಯಥಾ ॥ ೯ ॥
ಸರ್ವಕಾಮಪ್ರಪೂರ್ತ್ಯರ್ಥಂ ನೃಣಾಂ ತತ್ಕ್ಷೇತ್ರಮುತ್ತಮಂ ।
ಚಿಂತಾಮಣಿಸಮಾ ದೇವೀ ಯತ್ರ ಪ್ರಾಚೀ ಸರಸ್ವತೀ ॥ ೧೦ ॥
ಯಥಾ ಕಾಮದುಘಾ ಗಾವಃ ಸರ್ವಕಾಮಫಲಪ್ರದಾಃ ।
ತಥಾ ಸ್ವರ್ಗಾಽಪವರ್ಗಾಭ್ಯಾಂ ಪ್ರಾಚೀ ದೇವೀ ಸರಸ್ವತೀ ॥ ೧೧ ॥

---

೫. ಓ ಸುವದನೆ ! ಪುಣ್ಯಕರಳಾದ ಪ್ರಾಚೀಸರಸ್ವತಿಯ ಜಲವನ್ನು ಕುಡಿಯುವವನು ನಿಜವಾಗಿಯೂ, ಮನುಷ್ಯನಲ್ಲ ;ಅವನು ದೇವತೆಯೆ !

೬. ಪ್ರತಿದಿನವೂ ಸರಸ್ವತೀನದಿಯ ನೀರನ್ನು ಕುಡಿಯುವ ಮುನಿಗಳೂ ತಪಸ್ವಿಗಳೂ ಪುಣ್ಯವಂತರು.

೭. ಚಂದ್ರಭಾಗಾ, ಗಂಗಾ, ಸರಸ್ವತೀ ನದಿಗಳ ಜಲವನ್ನು ಕುಡಿಯುವವರು ಮನುಷ್ಯರಲ್ಲ. ದೇವತೆಗಳೇ.

೮. ಸರಸ್ವತಿಯ ನೀರನ್ನು ಊಟಮಾಡಿದ ತರುವಾಯವಾಗಲಿ, ಊಟಮಾಡದವೆಯಾಗಲಿ, ಹಗಲಾಗಲಿ, ರಾತ್ರಿಯಾಗಲಿ ಕಾಲನಿಯಮವಿಲ್ಲವೆ ಕುಡಿಯಬಹುದು.

೯. ಪ್ರಾಚೀಸರಸ್ವತಿಯ ನೀರನ್ನು ಪಾನಮಾಡುವ ಮೃಗಗಳೂ ಯಜ್ಞ ಮಾಡಿದ ಬ್ರಾಹ್ಮಣರಂತೆ ಸ್ವರ್ಗಲೋಕವನ್ನು ಪಡೆಯುವುವು.

೧೦. ಪ್ರಾಚೀಸರಸ್ವತಿಯಿರುವ ಕ್ಷೇತ್ರವು ಮನುಷ್ಯರಿಗೆ ಇಷ್ಟಾರ್ಥಗಳನ್ನು ನೀಡುವುದರಲ್ಲಿ ಚಿಂತಾಮಣಿರತ್ನಕ್ಕೆ ಸಮಾನವಾದುದು

೧೧. ಕಾಮಧೇನುವು ಸಕಲೇಷ್ಟಾರ್ಥಗಳನ್ನು ಕೊಡುವಂತೆ ಪ್ರಾಚೀಸರಸ್ವತಿಯು ಸ್ವರ್ಗಮೋಕ್ಷಗಳನ್ನೀಯುವಳು.

ಅಷ್ಟಾಽಶೀತಿಸಹಸ್ರಾಣಿ ಮುನೀನಾಮೂರ್ಧ್ವರೇತಸಾಂ ।
ಯತ್ರ ಸ್ಥಿತಾನಿ ಸನ್ಯಾಸಂ ತಸ್ಮಾತ್ಕಿಮಧಿಕಂ ಸ್ಮೃತಂ ॥ ೧೨ ॥
ಯತ್ರ ಮಂಕಣಕಃ ಸಿದ್ಧಃ ಪ್ರಾಚೀನೇ ನಿಯತಾತ್ಮವಾನ್ ।
ಬ್ರಹ್ಮಹತ್ಯಾವ್ರತಂ ಚೀರ್ಣಂ ಮಯಾ ಯತ್ರ ವರಾನನೇ ॥ ೧೩ ॥
ವೃಷತೀರ್ಥೇ ಮಹಾಪುಣ್ಯೇ ಪ್ರಾಚೀಕೂಲಸಮಾಶ್ರಿತೇ ।
ನಿವೃತ್ತೇ ಭಾರತೇ ಯುದ್ಧೇ ತಸ್ಮಿಂಸ್ತೀರ್ಥೇ ಕಿರೀಟಿನಾ ।
ಪ್ರಾಯಶ್ಚಿತ್ತಂ ಪುರಾ ಚೀರ್ಣಂ ವಿಷ್ಣುನಾ ಪ್ರೇರಿತಾತ್ಮನಾ ॥ ೧೪ ॥
ತ್ರೈಲೋಕ್ಯೇ ಸರ್ವತೀರ್ಥಾನಾಂ ತತ್ತೀರ್ಥಂ ಪ್ರವರಂ ಸ್ಮೃತಂ ।
ಪಾಪಘ್ನಂ ಪುಣ್ಯಜನನಂ ಪ್ರಾಣಿನಾಂ ಪುಣ್ಯಕೀರ್ತಿದಂ ॥ ೧೫ ॥

ಸೂತ ಉವಾಚ :—

ಇತ್ಯೇವಮುಕ್ತೇ ಸಾ ದೇವೀ ಶಂಕರಂ ಲೋಕಶಂಕರಂ ।
ಪ್ರಾಯಶ್ಚಿತ್ತಂ ಕಥಂ ಪ್ರಾಪ್ತಃ ಪಾರ್ಥಃ ಪರಪುರಂಜಯಃ ।
ಜ್ಞಾತಿಕ್ಷಯೋದ್ಭವಂ ಪಾಪಂ ಕಥಂ ನಾಶಮಗಾತ್ಪ್ರಭೋ ॥ ೧೬ ॥
ಏವಮುಕ್ತಃ ಪುನಃ ಪ್ರಾಹ ವಿಶ್ವೇಶೋ ನೀಲಲೋಹಿತಃ ।
ಪ್ರಾಯಶ್ಚಿತ್ತಸ್ಯ ಸಂಪ್ರಾಪ್ತಃ ಕಾರಣಂ ತದ್ಯಥಾ ಸ್ಥಿತಂ ॥ ೧೭ ॥

---

೧೨. ಬ್ರಹ್ಮಚಾರಿಗಳಾದ ಎಂಬತ್ತೆಂಟುಸಾವಿರ ಮುನಿಗಳು ಇತರ ಕ್ಷೇತ್ರಗಳನ್ನು ತ್ಯಜಿಸಿ ಈ ಕ್ಷೇತ್ರದಲ್ಲಿ ನೆಲೆಸಿರುವುದರಿಂದ ಈ ಕ್ಷೇತ್ರಕ್ಕಿಂತ ಉತ್ತಮವಾದುದಾವುದು?

೧೩–೧೪. ಈ ಪ್ರಾಚೀಸರಸ್ವತಿಯ ದಡದಲ್ಲಿರುವ ವೃಷಭ ತೀರ್ಥದಲ್ಲಿ ಜಿತೇಂದ್ರಿಯನಾದ ಮಂಕಣಕನು ತಪಸ್ಸಿದ್ಧಿಯನ್ನು ಪಡೆದಿರುವನು. ನಾನಿಲ್ಲಿ ಬ್ರಹ್ಮ ಹತ್ಯೆಯನ್ನು ನೀಗಿಸುವ ವ್ರತವನ್ನಾಚರಿಸಿರುವೆನು. ಹಿಂದೆ ಅರ್ಜುನನು ಭಾರತ ಯುದ್ಧವು ಮುಗಿದ ತರುವಾಯ ಶ್ರೀಕೃಷ್ಣನ ಪ್ರೇರಣೆಯಿಂದ ಈ ತೀರ್ಥದಲ್ಲಿ ಪ್ರಾಯಶ್ಚಿತ್ತವನ್ನಾಚರಿಸಿರುವನು.

೧೫. ಈ ತೀರ್ಥವು ಮೂರುಲೋಕಗಳಲ್ಲಿರುವ ಸಮಸ್ತ ತೀರ್ಥಗಳಲ್ಲಿ ಪಾಪವನ್ನು ಪರಿಹರಿಸುವುದೂ, ಪುಣ್ಯವನ್ನುಂಟುಮಾಡುವುದೂ, ಪುಣ್ಯಕರವಾದ ಕೀರ್ತಿಯನ್ನೀಯುವುದೂ ಆದ ಉತ್ತಮ ತೀರ್ಥವಾಗಿರುವುದು.

೧೬. ಸೂತನು ಹೇಳುತ್ತಾನೆ :—ಶಂಕರನು ಹೀಗೆನ್ನಲು ದೇವಿಯು " ಶತ್ರು ನಾಶಕನಾದ ಪಾರ್ಥನು ಪ್ರಾಯಶ್ಚಿತ್ತವನ್ನು ಹೇಗೆ ಮಾಡಿಕೊಂಡನು ? ಸ್ವಾಮಿ ! ಬಂಧುಗಳನ್ನು ವಧಿಸಿದ ಆವನ ಪಾಪವು ಹೇಗೆ ನೀಗಿತು ? "

೧೭. ದೇವಿಯು ಹೀಗೆ ಕೇಳಲು ನೀಲಕಂಠನು ಮರಳಿ ಪಾರ್ಥನು ಪ್ರಾಯಶ್ಚಿತ್ತವನ್ನಾಚರಿಸಲು ಕಾರಣವನ್ನು ಹೇಳಿದನು.

ಈಶ್ವರ ಉವಾಚ :—
ಶೃಣುಷ್ವಾವಹಿತಾ ಭದ್ರೇ ಕಥಾಂ ಪಾತಕನಾಶಿನೀಂ ।
ಯಾಂ ಶ್ರುತ್ವಾ ಮಾನವೋ ಭಕ್ತ್ಯಾ ಪವಿತ್ರಾತ್ಮಾ ಪ್ರಜಾಯತೇ ॥ ೧೮ ॥
ಯೋಽಸೌ ದೇವಿ ಸಮಾಖ್ಯಾತಃ ಕಿರೀಟೀ ಶ್ವೇತವಾಹನಃ ।
ಸ ಜಿತ್ವಾ ಕೌರವಾನ್ ಸರ್ವಾನ್ ಸಂಹೃತ್ಯ ಹಯಕುಂಜರಾನ್ ॥ ೧೯ ॥
ಪಶ್ಚಾತ್ಸುಯೋಧನಂ ಹತ್ವಾ ಭೀಮೇನ ಪ್ರಯಯೌ ಗೃಹಾನ್ ।
ನಾರಾಯಣೇನ ಸಹಿತೋ ನರೋಽಸೌ ಪ್ರಸ್ಥಿತೋ ರಣಾತ್ ॥ ೨೦ ॥
ದ್ರಷ್ಟುಂ ಧರ್ಮಸುತಂ ಹೃಷ್ಟಃ ಪ್ರಣತಃ ಪ್ರಾಂಜಲಿಃ ಸ್ಥಿತಃ ।
ಸ ವಿಜ್ಞಾಯ ತದಾಽಽಯಾಂತೌ ನರನಾರಯಣಾವುಭೌ ॥ ೨೧ ॥
ರಾಜಾ ಯುಧಿಷ್ಠಿರಃ ಪ್ರಾಹ ದ್ವಾರಸ್ಥಾನ್ ದ್ವಾರಪಾಲಕಾನ್ ।
ಭವದ್ಭಿರೇತಾವಾಯಾಂತೌ ನಿಷೇಧ್ಯೌ ದ್ವಾರಿ ಸಂಸ್ಥಿತೌ ॥ ೨೨ ॥
ನರನಾರಾಯಣೌ ಕ್ರೂರೌ ಪಾಪಪಂಕಾನುಲೇಪಿನೌ ।
ಏವಮೇತದಿತಿ ಪ್ರೋಕ್ತೌ ತೌ ತದಾ ದ್ವಾರಮಾಗತೌ ॥ ೨೩ ॥
ಭವಂತೌ ನೇಚ್ಛತಿ ದ್ರಷ್ಟುಂ ರಾಜಾ ದುರ್ನಯಕಾರಿಣೌ ।
ತತ್ರಸ್ಥಃ ಪೃಷ್ಟವಾನ್ ಭೂಯಃ ಪ್ರತೀಹಾರಂ ನರಃ ಸ್ವಯಂ ॥ ೨೪ ॥
ಆವಾಂ ಕಿಂ ಕಾರಣಂ ರಾಜಾ ನೇಕ್ಷತೇ ವಶವರ್ತಿನೌ ।
ಪ್ರೋವಾಚ ಪ್ರಣತೋ ರಾಜಾ ತತೋ ದ್ವಾಃಸ್ಥಂ ಪುರಃಸ್ಥಿತಂ ॥ ೨೫ ॥

---

೧೮. ಈಶ್ವರನು ಹೇಳುತ್ತಾನೆ :—ಮಂಗಳಕರಳೆ ! ಪಾಪವನ್ನು ಪರಿಹರಿಸುವ ಈ ಕಥೆಯನ್ನು ಸಾವಧಾನಮನಸ್ಸಿನಿಂದ ಕೇಳು. ಮಾನವನು ಈ ಕಥೆಯನ್ನು ಭಕ್ತಿಯಿಂದ ಕೇಳಿದರೆ ಪರಿಶುದ್ಧನಾಗುವನು.

೧೯—೨೬. ಶ್ವೇತಾಶ್ವವಾಹನನಾದ ಧನಂಜಯನು ಕೌರವರನ್ನೆಲ್ಲ ಸದೆಬಡಿದು ಆನೆ ಕುದುರೆಗಳನ್ನು ಕೊಂದು ಬಳಿಕ ಭೀಮನ ಮೂಲಕ ದುರ್ಯೋಧನನ್ನು ವಧಿಸಿ ಕೃಷ್ಣಭೀಮರೊಡನೆ ರಣರಂಗದಿಂದ ಹೊರಟು ಸಂತೋಷದಿಂದ ಧರ್ಮರಾಜನನ್ನು ನೋಡಲು ಕೈಮುಗಿದು ನಿಂತನು. ಆ ಯುಧಿಷ್ಠಿರನು ಬರುತ್ತಿರುವ ಪಾರ್ಥಕೃಷ್ಣರನ್ನೀಕ್ಷಿಸಿ ದ್ವಾರಪಾಲಕರನ್ನು ಕುರಿತು, "ನೀವು ಈಗ ಇಲ್ಲಿಗೆ ಬರುತ್ತಿರುವವರೂ, ಪಾಪವೆಂಬ ಕೆಸರಿನಿಂದ ಅನುಲಿಪ್ತರೂ, ಕ್ರೂರರೂ ಆದ ಕೃಷ್ಣಾರ್ಜುನರನ್ನು ತಡೆಯಿರಿ" ಎಂದನು. ದ್ವಾರಪಾಲಕರು ಹಾಗೆಯೇ ಆಗಲೆಂದು ಬಾಗಿಲಿನ ಹತ್ತಿರ ಬಂದಿರುವ ಆ ಕೃಷ್ಣಾರ್ಜುನರನ್ನು ಕುರಿತು "ಎಲೈ ಕೃಷ್ಣಾರ್ಜುನರೇ ! ದೊರೆಯು ದುಷ್ಕಾರ್ಯವನ್ನಾಚರಿಸಿದ ನಿಮ್ಮನ್ನು ನೋಡಲಿಚ್ಛಿಸುವುದಿಲ್ಲ" ಎಂದರು. ಆಗ ಅರ್ಜುನನು ಸೇವಕರಾದ ನಮ್ಮನ್ನು ರಾಜನು ನೋಡುವುದಿಲ್ಲವೇಕೆ ? ಎಂದು ಕೇಳಿದನು. ಧರ್ಮರಾಜನು ನಮಸ್ಕರಿಸಿ ಬಾಗಿಲಿನಲ್ಲಿ ಕೃಷ್ಣನೊಡನೆ ನಿಂತಿರುವ

ನಾರಾಯಣೇನ ಸಹಿತಂ ನರಂ ನರಕನಿರ್ಭಯಂ ।
ದುರ್ಯೋಧನೇನ ಸಹಿತಾ ಬಾಂಧವಾಸ್ತೇ ಯತೋ ಹತಾಃ ।
ಪಿತೃತುಲ್ಯಾಶ್ಚ ರಾಜಾನಸ್ತೇನ ವೈ ಪಾಪಭಾಜನಂ ॥ ೨೬ ॥
ಏವಮುಕ್ತೇ ತು ತೇನಾಽಥ ಮುಖಮಾಲೋಕಿತಂ ಹರೇಃ ।
ತೇನ ಪ್ರೋಕ್ತಮಿದಂ ತಥ್ಯಂ ಯತ್ತೇ ರಾಜ್ಞಾ ಪ್ರಭಾಷಿತಂ ॥ ೨೭ ॥
ಏವಮುಕ್ತೇ ನರಃ ಪ್ರಾಹ ಪುನರೇವ ಜನಾರ್ದನಂ ।
ಕಥಯಸ್ವ ಕಥಂ ಪಾಪಾತ್ಕೃಷ್ಣ ಶುದ್ಧ್ಯಾಮಹೇ ವಯಂ ॥ ೨೮ ॥
ತೀರ್ಥಸ್ನಾನೇನ ಮೇ ಶುದ್ಧಿರ್ಯಥಾ ಸ್ಯಾತ್ತದ್ವದ ಸ್ಫುಟಂ ।
ತಚ್ಚ ಗಂಗಾದಿಕಂ ಕೃಷ್ಣ ಯಥಾಽಸ್ಯಾಽಘಸ್ಯ ನಾಶನಂ ॥ ೨೯ ॥

ಕೃಷ್ಣ ಉವಾಚ :—

ಮಾ ಗಯಾಂ ಗಚ್ಛ ಕೌಂತೇಯ ಮಾ ಗಂಗಾಂ ಮಾ ಚ ಪುಷ್ಕರಂ ।
ತತ್ರ ಗಚ್ಛ ಕುರುಶ್ರೇಷ್ಠ ಯತ್ರ ಪ್ರಾಚೀಸರಸ್ವತೀ ॥ ೩೦ ॥
ಬ್ರಹ್ಮಘ್ನಾಶ್ಚ ಸುರಾಪಾಶ್ಚ ಯೇ ಚಾಽನ್ಯೇ ಪಾಪಕಾರಿಣಃ ।
ತತ್ರ ಸ್ನಾತ್ವಾ ವಿಮುಚ್ಯಂತೇ ಯತ್ರ ಪ್ರಾಚೀ ಸರಸ್ವತೀ ॥ ೩೧ ॥

ನರಕಭಯವಿಲ್ಲದ ಅರ್ಜುನನ್ನು ಕುರಿತು ನೀನು ತಂದೆಗೆ ಸಮಾನರಾದ ದುರ್ಯೋಧನನೇ ಮೊದಲಾದ ಬಂಧುಗಳನ್ನು ಕೊಂದುದರಿಂದ ಪಾಪಿಯಾಗಿರುವೆ" ಎಂದನು.

೨೭. ಯುಧಿಷ್ಠಿರನು ಹೀಗೆ ಹೇಳಲು ಅರ್ಜುನನು ಶ್ರೀಕೃಷ್ಣನ ಮುಖವನ್ನು ನೋಡಿದನು. ಅವನು ದೊರೆಯು ಹೇಳಿರುವುದು ನಿಜವೆಂದನು.

೨೮. ಕೃಷ್ಣನು ಹೀಗೆ ನುಡಿಯಲು ಪಾರ್ಥನು ಕೃಷ್ಣನನ್ನು ಕುರಿತು " ಕೃಷ್ಣ ! ನಾವು ಈ ಪಾಪದಿಂದ ಹೇಗೆ ಶುದ್ಧರಾಗುವೆವು ?

೨೯. ತೀರ್ಥಸ್ನಾನದಿಂದ ಶುದ್ಧಿಗೊಳ್ಳುವುದು ಹೇಗೆಂಬುದನ್ನು ಸ್ಪಷ್ಟವಾಗಿ ಹೇಳು. ಗಂಗಾದಿ ತೀರ್ಥಗಳು ಈ ಪಾಪವನ್ನು ಪರಿಹರಿಸುವುವೇ ?

೩೦. ಕೃಷ್ಣನು ಹೇಳುತ್ತಾನೆ:—ಅರ್ಜುನ! ಗಯೆ, ಗಂಗೆ, ಪುಷ್ಕರತೀರ್ಥಗಳಿಗೆ ಹೋಗಬೇಡ. ಪ್ರಾಚೀಸರಸ್ವತೀ ತೀರ್ಥಕ್ಕೆ ಹೋಗು.

೩೧. ಪ್ರಾಚೀಸರಸ್ವತೀ ತೀರ್ಥದಲ್ಲಿ ಬ್ರಹ್ಮಹತ್ಯೆ ಮಾಡಿದವರೂ, ಸುರಾಪಾನ ಮಾಡಿದವರೂ, ಇತರ ಪಾಪವನ್ನಾಚರಿಸಿದವರೂ ಮಿಂದು ಪಾಪಮುಕ್ತರಾಗುವರು.

ನಾರಾಯಣೇನ ಪ್ರೋಕ್ತೋಽಸೌ ನರಸ್ತದ್ವಚನಾದ್ದ್ರುತಂ |
ಸಹಿತಸ್ತೇನ ಸಂಪ್ರಾಪ್ತಃ ಪ್ರಾಚೀನಂ ತೀರ್ಥಮುತ್ತಮಂ || ೩೨ ||
ತ್ರಿರಾತ್ರೋಪೋಷಿತಃ ಸ್ನಾತಸ್ತ್ರಿಕಾಲಂ ನಿಯತಾತ್ಮವಾನ್ ||
ತೇನ ತಸ್ಮಾದ್ವಿನಿರ್ಮುಕ್ತಃ ಪಾತಕಾತ್ಪೂರ್ವಸಂಚಿತಾತ್ || ೩೩ ||
ವಿಜ್ಞಾಯ ಶುದ್ಧಮೇನಂ ತು ರಾಜಾ ಧರ್ಮಸುತೋ ದ್ರುತಂ |
ಭ್ರಾತೃಭಿಃ ಸಹಿತಃ ಪ್ರಾಪ್ತಸ್ತಂ ದ್ರಷ್ಟುಂ ನರಪುಂಗವಂ || ೩೪ ||
ತತಸ್ತಂ ಪ್ರಣತಂ ದೃಷ್ಟ್ವಾ ಧರ್ಮಪುತ್ರಃ ಪುರಃಸ್ಥಿತಂ |
ಆಲಿಲಿಂಗ ಪ್ರಹೃಷ್ಟಾತ್ಮಾ ಪೃಷ್ಟವಾಂಶ್ಚಾಪ್ಯನಾಮಯಂ || ೩೫ ||
ಭೀಮಾದಿಭಿರ್ಭ್ರಾತೃಭಿಶ್ಚ ತದಾ ಗುರುಗಣೈರ್ವೃತಃ |
ಆಲಿಂಗಿತಃ ಪ್ರಹೃಷ್ಟೈಸ್ತು ನರೋ ಗುಣಗಣೈರ್ವೃತಃ || ೩೬ ||
ಏತದ್ಧಿ ತನ್ಮಹಾತೀರ್ಥಂ ಪ್ರಾಚೀನೇತಿ ಚ ಶಬ್ದಿತಂ |
ಸ್ನಾನಕ್ರಮೇಣ ಮರ್ತ್ಯಾನಾಮನ್ಯೇಷಾಮಪಿ ಪಾವಕಂ || ೩೭ ||
ತ್ರಿರಾತ್ರೋಪೋಷಿತಃ ಸ್ನಾತಸ್ತೀರ್ಥೇಽಸ್ಮಿನ್ ಬ್ರಹ್ಮಹಾಽಪಿ ಯಃ |
ವಿಮುಕ್ತಃ ಪಾತಕಾತ್ತಸ್ಮಾನ್ಮೋದತೇ ದಿವಿ ರುದ್ರವತ್ || ೩೮ ||

---

೩೨. ಕೃಷ್ಣನು ಹೀಗೆನ್ನಲು ಅರ್ಜುನನು ಅವನೊಡನೆ ಕೂಡಲೆ ಉತ್ತಮವಾದ ಪ್ರಾಚೀತೀರ್ಥಕ್ಕೆ ತೆರಳಿದನು.

೩೩. ಅಲ್ಲಿ ಮೂರು ರಾತ್ರಿ ಉಪವಾಸವಿದ್ದು ತ್ರಿಕಾಲಸ್ನಾನಮಾಡಿ ಜಿತೇಂದ್ರಿಯನಾಗಿ ಹಿಂದೆ ಮಾಡಿದ ಮಹಾಪಾತಕದಿಂದ ಮುಕ್ತನಾದನು.

೩೪. ಪಾರ್ಥನು ಶುದ್ಧನಾಗಿರುವನೆಂದು ತಿಳಿದು ಧರ್ಮರಾಜನು ಅವನನ್ನು ನೋಡಲು ಜಾಗ್ರತೆಯಾಗಿ ಸಹೋದರರೊಡನೆ ಅಲ್ಲಿಗೆ ಬಂದನು.

೩೫. ಧರ್ಮರಾಜನು ಅಲ್ಲಿ ತನ್ನನ್ನು ಮಣಿದು ಮುಂದೆ ನಿಂತಿರುವ ಅರ್ಜುನನನ್ನು ಆಲಿಂಗಿಸಿ ಅವನನ್ನು, "ಕುಶಲವೆ ?" ಎಂದು ಪ್ರಶ್ನಿಸಿದನು.

೩೬. ಆಗ ಭೀಮಾದಿ ಸಹೋದರರೂ ಗುರುಗಳೊಡನೆ ಸಂತೋಷದಿಂದ ಗುಣಶಾಲಿಯಾದ ಅರ್ಜುನನನ್ನು ಆಲಿಂಗಿಸಿದರು.

೩೭. ಪ್ರಾಚೀ ಎಂಬ ಈ ಮಹಾತೀರ್ಥವು ಸ್ನಾನಮಾಡುವುದರಿಂದ ಇತರ ಮಾನವರ ಪಾಪವನ್ನೂ ಪರಿಹರಿಸುವುದು.

೩೮. ಬ್ರಹ್ಮಹತ್ಯೆಮಾಡಿದವನೂ ಮೂರು ರಾತ್ರಿ ಉಪವಾಸವಿದ್ದು ಇಲ್ಲಿ ಮಿಂದರೆ ಆ ಪಾಪದಿಂದ ಮುಕ್ತನಾಗಿ ದೇವಲೋಕದಲ್ಲಿ ರುದ್ರನಂತೆ ಮೆರೆಯುವನು.

ಪ್ರಾಚೀನೇ ದೇವ್ಯಹಂ ನಿತ್ಯಂ ವಸಾಮಿ ಸಹಿತಸ್ತ್ವಯಾ ।
ಪ್ರಭಾಸೇ ತು ಮಹಾಕ್ಷೇತ್ರೇ ವಿಶೇಷಾತ್ತತ್ರ ಭಾಮಿನಿ ॥ ೩೯ ॥
ಸರಸ್ವತ್ಯುತ್ತರೇ ತೀರೇ ಯಸ್ತ್ಯಜೇದಾತ್ಮನಸ್ತನುಂ ।
ಪ್ರಾಚೀನೇ ನು ವರಾರೋಹೇ ನ ಚೇಹಾಗಚ್ಛತೇ ಪುನಃ ॥ ೪೦ ॥
ಆಪ್ಲುತೋ ವಾಜಿಮೇಧಸ್ಯ ಫಲಂ ಪ್ರಾಪ್ಸ್ಯತಿ ಪುಷ್ಕಲಂ ।
ನಿಯಮೈಶ್ಚೋಪವಾಸೈಶ್ಚ ಶೋಷಯೇದ್ದೇಹಮಾತ್ಮನಃ ॥ ೪೧ ॥
ಜಲಾಹಾರಾ ವಾಯುಭಕ್ಷಾಃ ಪರ್ಣಾಹಾರಾಶ್ಚ ತಾಪಸಾಃ ।
ಯಥಾ ಸ್ಥಂಡಿಲಗಾ ನಿತ್ಯಂ ಯೇ ಚಾನ್ಯನಿಯಮಾಃ ಪೃಥಕ್ ॥ ೪೨ ॥
ಏವಂ ಮಂಕ್ಯಾಶ್ರಮೇ ಯೇಷಾಂ ವಸತಾಂ ಮೃತ್ಯುರಾಗತಃ ।
ನ ತೇ ಮನುಷ್ಯಾ ದೇವಾಸ್ತೇ ಸತ್ಯಮೇತದ್ಬ್ರವೀಮಿ ತೇ ॥ ೪೩ ॥
ಅಸ್ಮಿಂಸ್ತೀರ್ಥೇ ತು ಯೋ ದದ್ಯಾತ್ತ್ರುಟಿಮಾತ್ರಂ ತು ಕಾಂಚನಂ ।
ಶ್ರದ್ಧಯಾ ದ್ವಿಜಮುಖ್ಯಾಯ ಮೇರುತುಲ್ಯಂ ಫಲಂ ಲಭೇತ್ ॥ ೪೪ ॥
ಅಸ್ಮಿಂಸ್ತೀರ್ಥೇ ತು ಯೇ ಶ್ರಾದ್ಧಂ ಕರಿಷ್ಯಂತಿ ಚ ಮಾನವಾಃ ।
ಏಕವಿಂಶತ್ಕುಲೋಪೇತಾಃ ಸ್ವರ್ಗಂ ಯಾಸ್ಯಂತಿ ತೇ ಧ್ರುವಂ ॥ ೪೫ ॥

---

೩೯. ದೇವಿ! ನಾನು ನಿನ್ನೊಡನೆ ಪ್ರಾಚೀತೀರ್ಥದಲ್ಲಿಯೂ, ಪ್ರಭಾಸ ಮಹಾಕ್ಷೇತ್ರದಲ್ಲಿಯೂ ವಾಸಿಸುವೆನು.

೪೦. ಪ್ರಾಚೀಸರಸ್ವತಿಯ ಉತ್ತರ ದಡದಲ್ಲಿ ಶರೀರವನ್ನು ತ್ಯಜಿಸಿದವನು ಮರಳಿ ಜನಿಸುವುದಿಲ್ಲ.

೪೧–೪೨. ಇಲ್ಲಿ ಮಿಂದ ಮನುಷ್ಯನು ಅಶ್ವಮೇಧಯಾಗದ ಸಂಪೂರ್ಣಫಲವನ್ನೂ, ಜಲಾಹಾರಿಗಳೂ, ವಾಯುಭಕ್ಷರೂ, ಪರ್ಣಾಹಾರಿಗಳೂ, ಸ್ಥಂಡಿಲಶಾಯಿಗಳೂ, ಇತರ ನಿಯಮಗಳನ್ನಾಚರಿಸುವರೂ ಆದ ತಾಪಸರು ನಿಯಮೋಪವಾಸಗಳಿಂದ ದೇಹವನ್ನು ದಂಡಿಸಿ ಪಡೆಯುವ ಪುಣ್ಯವನ್ನೂ ಹೊಂದುವನು.

೪೩. ಹೀಗೆ ಮಂಕ್ಯಾಶ್ರಮದಲ್ಲಿ ವಾಸಿಸುತ್ತ ದೇಹವನ್ನು ತ್ಯಜಿಸಿದ ಮಾನವರು ದೇವತೆಗಳೇ ಆಗುವರು. ಇದನ್ನು ನಿಜವಾಗಿ ಹೇಳುವೆನು.

೪೪. ಈ ತೀರ್ಥದಲ್ಲಿ ದ್ವಿಜವರ್ಯನಿಗೆ ಶ್ರದ್ಧೆಯಿಂದ ಮೂರು ಅಣುವಿನಷ್ಟು ಸುವರ್ಣವನ್ನಿತ್ತವನು ಮೇರು ಪರ್ವತದಷ್ಟು ಪುಣ್ಯವನ್ನು ಹೊಂದುವನು.

೪೫. ಈ ತೀರ್ಥದಲ್ಲಿ ಶ್ರಾದ್ಧಮಾಡಿದ ಮಾನವರು ಇಪ್ಪತ್ತೊಂದು ಕುಲದವರೊಡನೆ ಸ್ವರ್ಗವನ್ನೈದುವರು.

ಪಿತೄಣಾಂ ವಲ್ಲಭೇ ತೀರ್ಥೇ ಪಿಂಡೇನೈಕೇನ ತರ್ಪಿತಾಃ ।
ಬ್ರಹ್ಮಲೋಕಂ ಗಮಿಷ್ಯಂತಿ ಗಯಾಶ್ರಾದ್ಧಕೃತೋ ಯಥಾ ॥ ೪೬ ॥
ಕೃಷ್ಣಪಕ್ಷೇ ಚತುರ್ದಶ್ಯಾಂ ಸ್ನಾನಂ ಚ ವಿಹಿತಂ ಸದಾ ।
ಪಿಣ್ಯಾಕೈಂಗುದಕೇನಾಽಪಿ ಪಿಂಡಂ ತತ್ರ ದದಾತಿ ಯಃ ।
ಪಿತೄಣಾಮಕ್ಷಯಾ ತೃಪ್ತಿಃ ಪಿತೃಲೋಕಂ ಸ ಗಚ್ಛತಿ ॥ ೪೭ ॥
ಭೂಯಶ್ಚಾಽನ್ನಂ ಪ್ರಯಚ್ಛಂತಿ ಮೋಕ್ಷಮಾರ್ಗಂ ವ್ರಜಂತಿ ತೇ ॥ ೪೮ ॥
ದಧಿ ದದ್ಯಾದ್ಯೋಽಪಿ ತತ್ರ ಬ್ರಾಹ್ಮಣಾಯ ಮನೋರಮಂ ।
ಸೋಽಗ್ನಿಲೋಕಂ ಸಮಾಸಾದ್ಯ ಭುಂಕ್ತೇ ಭೋಗಾನ್ ಸುಶೋಭನಾನ್ ॥
ಊರ್ಣಾಂ ಪ್ರಾವರಣಂ ಯೋಽಪಿ ಭಕ್ತ್ಯಾ ದದ್ಯಾದ್ದ್ವಿಜೋತ್ತಮೇ ।
ಸೋಽಪಿ ಯಾತಿ ಪರಾಂ ಸಿದ್ಧಿಂ ಮರ್ತ್ಯೈರನ್ಯೈಸ್ಸುದುರ್ಲಭಾಂ ॥ ೫೦ ॥
ಯೇ ಚಾಽತ್ರ ಮಲನಾಶಾಯ ವಿಶೇಯುರ್ಮಾನವಾ ಜಲಂ ।
ಗೋಪ್ರದಾನಸಮಂ ತೇಷಾಂ ಸುಖೇನ ಫಲಮಾದಿಶೇತ್ ॥ ೫೧ ॥

---

೪೬. ಪಿತೃಗಳಿಗೆ ಪ್ರಿಯವಾದ ಈ ತೀರ್ಥದಲ್ಲಿ ಒಂದು ಪಿಂಡವನ್ನಿತ್ತರೂ, ಗಯಾಶ್ರಾದ್ಧಮಾಡಿದಂತೆ ಪಿತೃಗಳು ತೃಪ್ತರಾಗುತ್ತಾರೆ. ಶ್ರಾದ್ಧಮಾಡಿದವರು ಬ್ರಹ್ಮಲೋಕಕ್ಕೆ ತೆರಳುವರು.

೪೭. ಇಲ್ಲಿ ಯಾವಾಗಲೂ ಕೃಷ್ಣಪಕ್ಷಚತುರ್ದಶೀ ದಿನದ ಸ್ನಾನವು ಶಾಸ್ತ್ರವಿಹಿತವಾಗಿರುವುದು. ಇಲ್ಲಿ ಹಿಂಡಿ, ಇಂಗಳದಫಲಗಳಿಂದ ಪಿಂಡವನ್ನಿತ್ತರೆ ಪಿತೃಗಳು ತೃಪ್ತರಾಗಿ ಪಿತೃಲೋಕವನ್ನು ಸೇರುವರು.

೪೮. ಆ ಪಿತೃಗಳು ಅತ್ಯಂತವಾಗಿ ಅನ್ನವನ್ನು ಕೊಡುವರು. ಮತ್ತು ತಾವೂ ಮೋಕ್ಷವನ್ನು ಪಡೆಯುವರು.

೪೯. ಇಲ್ಲಿ ಬ್ರಾಹ್ಮಣನಿಗೆ ಮನೋಹರವಾದ ಮೊಸರನ್ನಿತ್ತವನು ಅಗ್ನಿಲೋಕವನ್ನು ಪಡೆದು ಒಳ್ಳೆಯಭೋಗಗಳನ್ನನುಭವಿಸುವನು.

೫೦. ಉಣ್ಣೆಯ ಕಂಬಳಿಯನ್ನು ಬ್ರಾಹ್ಮಣೋತ್ತಮರಿಗೆ ದಾನ ಮಾಡಿದವನು ಇತರ ಮಾನವರಿಗೆ ದುರ್ಲಭವಾದ ಇಷ್ಟಸಿದ್ಧಿಯನ್ನು ಪಡೆಯುವನು.

೫೧. ಕೊಳೆಯನ್ನುನೀಗಿಸಿಕೊಳ್ಳುವುದಕ್ಕಾಗಿ ಈ ತೀರ್ಥದ ನೀರಿನಲ್ಲಿ ಪ್ರವೇಶಮಾಡಿದ ಮಾನವರಿಗೆ ಗೋದಾನಮಾಡಿದ ಪುಣ್ಯವು ಲಭಿಸುವುದು.

ಭಾವೇನ ಯೋ ನರಸ್ತತ್ರ ಕಶ್ಚಿತ್ಸ್ನಾನಂ ಸಮಾಚರೇತ್ ।
ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ॥ ೫೨ ॥

ತರ್ಪಣಾತ್ಪಿಂಡದಾನಾಚ್ಚ ನರಕೇಷ್ವಪಿ ಸಂಸ್ಥಿತಾಃ ।
ಸ್ವರ್ಗಂ ಪ್ರಯಾಂತಿ ಪಿತರಃ ಸುಪುತ್ರೇಣ ಹಿ ತಾರಿತಾಃ ॥ ೫೩ ॥

ಪ್ರಾಚೀಂ ಸರಸ್ವತೀಂ ಪ್ರಾಪ್ಯ ಯಾತಿ ತೀರ್ಥಂ ಹಿಮಾಲಯಂ ।
ಸಕರಸ್ಥಂ ಸಮುತ್ಸೃಜ್ಯ ಕೂರ್ಪರೇಣ ಸಮಾಲಿಹೇತ್ ॥ ೫೪ ॥

ಯಂ ಯಂ ಕಾಮಮಭಿಧ್ಯಾಯ ತಸ್ಮಿನ್ ಪ್ರಾಣಾನ್ ಪರಿತ್ಯಜೇತ್ ।
ತಂ ತಂ ಸಕಲಮಾಪ್ನೋತಿ ತೀರ್ಥಮಾಹಾತ್ಮ್ಯಯೋಗತಃ ॥ ೫೫ ॥

ಅನ್ಯದ್ದೇವಿ ಪುರಾ ಗೀತಂ ಗಾಂಗೇಯೇನ ಯುಧಿಷ್ಠಿರೇ ।
ಸತ್ಯಮೇವ ಹಿ ಗಂಗಾಯಾಂ ವಯಂ ಜಾತಾ ಯುಧಿಷ್ಠಿರ ॥ ೫೬ ॥
ಯಾಃ ಕಾಶ್ಚಿತ್ಸರಿತೋ ಲೋಕೇ ತಾಸಾಂ ಪುಣ್ಯಾ ಸರಸ್ವತೀ ॥ ೫೭ ॥

---

೫೨. ಈ ತೀರ್ಥದಲ್ಲಿ ಭಕ್ತಿಯಿಂದ ಮಿಂದ ಮಾನವನು ಸಕಲ ಪಾಪಮುಕ್ತನಾಗಿ ಬ್ರಹ್ಮಲೋಕದಲ್ಲಿ ಪೂಜ್ಯನಾಗುವನು.

೫೩. ಸುಪುತ್ರನು ತರ್ಪಣ, ಪಿಂಡಪ್ರದಾನಗಳನ್ನು ಮಾಡುವುದರಿಂದ ಪಿತೃಗಳು ನರಕದಲ್ಲಿದ್ದರೂ ಪಾಪಮುಕ್ತರಾಗಿ ಸ್ವರ್ಗವನ್ನು ಸೇರುವರು.

೫೪. ಪ್ರಾಚೀಸರಸ್ವತಿಯನ್ನು ಹೊಂದಿದ್ದರೂ ಅಲ್ಲಿ ಸ್ನಾನಾದಿಗಳನ್ನು ಮಾಡದೆ ತ್ಯಜಿಸಿ ಹಿಮಾಲಯಕ್ಕೆ ಹೋಗುವವನು ಕೈಯಲ್ಲಿರುವುದನ್ನು ಬಿಟ್ಟು ಮೊಳಕೈಯ್ಯಿಂದ ತೆಗೆದುಕೊಳ್ಳಲು ಪ್ರಯತ್ನಿಸುವವನಂತಾಗುವನು.

೫೫. ಮನುಷ್ಯನು ಯಾವ ಯಾವ ಇಷ್ಟಾರ್ಥವನ್ನು ಆಲೋಚಿಸಿ ಅಲ್ಲಿ ಪ್ರಾಣವನ್ನು ತ್ಯಜಿಸುವನೊ, ಆಯಾ ಇಷ್ಟಾರ್ಥವನ್ನು ಈ ತೀರ್ಥದ ಮಾಹಾತ್ಮ್ಯದಿಂದ ಪಡೆಯುವನು.

೫೬–೫೭. ದೇವಿ ! ಹಿಂದೆ ಭೀಷ್ಮನು ಯುಧಿಷ್ಠಿರನನ್ನು ಕುರಿತು "ಯುಧಿಷ್ಠಿರ! ನಾವು ಗಂಗೆಯಲ್ಲಿ ಜನಿಸಿರುವುದೇನೊ ನಿಜ. ಆದರೆ ಪ್ರಪಂಚದಲ್ಲಿರುವ ನದಿಗಳಲ್ಲಿ ಸರಸ್ವತೀ ನದಿಯು ಪುಣ್ಯಕರವಾದುದು". ಎಂದು ಹೇಳಿದ್ದಾನೆ.

ಸರಸ್ವತೀ ಸರ್ವನದೀಷು ಪುಣ್ಯಾ
ಸರಸ್ವತೀ ಲೋಕಸುಖಾವಹಾ ಸದಾ ।
ಸರಸ್ವತೀಂ ಪ್ರಾಪ್ಯ ಸುದುಃಖಿತಾ ನರಾಃ
ಸದಾ ನ ಶೋಚಂತಿ ಪರತ್ರ ಚೇಹ ಚ ॥ ೫೮ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಾಚೀ ಸರಸ್ವತೀಮಾಹಾತ್ಮ್ಯವರ್ಣನಂ ನಾಮ
ಷಟ್ತ್ರಿಂಶೋಽಧ್ಯಾಯಃ

---

೫೮. ಸರಸ್ವತೀ ನದಿಯು ಸಕಲನದಿಗಳಲ್ಲಿ ಪುಣ್ಯಕರವೂ, ಜನರಿಗೆ ಸುಖವನ್ನೀಯುವುದೂ ಆಗಿರುವುದು. ಅತ್ಯಂತ ದುಃಖಪಡುತ್ತಿರುವ ಮಾನವರು ಸರಸ್ವತೀ ನದಿಯನ್ನು ಹೊಂದಿದರೆ ಇಹಪರಗಳಲ್ಲಿ ದುಃಖಗೊಳ್ಳುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪ್ರಾಚೀಸರಸ್ವತೀಮಾಹಾತ್ಮ್ಯವರ್ಣನವೆಂಬ
ಮೂವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತತ್ರಿಂಶೋಽಧ್ಯಾಯಃ

ಕಂಕಣಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಕಿಮರ್ಥಂ ಕಂಕಣಂ ದೇವ ಕ್ಷಿಪ್ಯತೇ ಲವಣಾಂಭಸಿ ।
ತಸ್ಯ ಪುಣ್ಯಂ ನ ಪೂರ್ವೋಕ್ತಂ ಯಥಾವದ್ವಕ್ತುಮರ್ಹಸಿ ॥ ೧ ॥
ಕೇ ಮಂತ್ರಾಃ ಕಿಂ ವಿಧಾನಂ ತತ್ಕಸ್ಮಿನ್ಕಾಲೇ ಮಹತ್ಫಲಂ ।
ಕಿಂ ಪುರಾಽಭೂಚ್ಚ ತದ್ವೃತ್ತಂ ಭಗವನ್ಕಂಕಣಾಶ್ರಿತಂ ॥ ೨ ॥

ಈಶ್ವರ ಉವಾಚ :—

ಆಸೀತ್ಪುರಾ ಮಹೀಪಾಲೋ ಬೃಹದ್ರಥ ಇತಿ ಶ್ರುತಃ ।
ತಸ್ಯ ಭಾರ್ಯಾಽಭವತ್ಸಾಧ್ವೀ ನಾಮ್ನಾ ಚೇಂದುಮತೀ ಪ್ರಿಯಾ ॥ ೩ ॥
ನ ದೇವೀ ನ ಚ ಗಂಧರ್ವೀ ನಾಽಽಸುರೀ ನ ಚ ಕಿನ್ನರೀ ।
ತಾದೃಗ್ರೂಪಾ ಮಹಾದೇವಿ ಯಾದೃಶೀ ಸಾ ಸುಮಧ್ಯಮಾ ॥ ೪ ॥

ಕನ್ನಡದ ಅನುವಾದ

ಕಂಕಣಮಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ :—ಸ್ವಾಮಿ ! ಲವಣಸಾಗರದಲ್ಲಿ ಏತಕ್ಕೆ ಕಂಕಣವನ್ನು ಹಾಕಬೇಕು ? ಇದರಿಂದುಂಟಾಗುವ ಪುಣ್ಯವನ್ನು ನೀನು ಹಿಂದೆ ಈ ವಿಚಾರವನ್ನು ಹೇಳಲಿಲ್ಲ. ಅದನ್ನು ಈಗ ಹೇಳು.

೨. ಪೂಜ್ಯನೆ! ಆ ಕಂಕಣವನ್ನು ಹಾಕುವುದಕ್ಕೆ ಮಂತ್ರವಾವುದು ? ಅದರ ವಿಧಾನವಾವುದು ? ಯಾವ ಕಾಲದಲ್ಲಿ ಹಾಕಿದರೆ ಹೆಚ್ಚು ಪುಣ್ಯವು ಲಭಿಸುವುದು ? ಅದರ ಸಂಬಂಧವಾದ ಇತಿಹಾಸವೇನು ?

೩. ಈಶ್ವರನು ಹೇಳುತ್ತಾನೆ :—ಹಿಂದೆ ಬೃಹದ್ರಥನೆಂಬ ದೊರೆಯಿದ್ದನು. ಅವನಿಗೆ ಇಂದುಮತಿಯೆಂಬ ಪತಿವ್ರತೆಯಾದ ಓರ್ವಸತಿಯಿದ್ದಳು.

೪. ಗಂಧರ್ವ, ಅಸುರ, ಕಿನ್ನರರಲ್ಲಿ ಅಂತಹ ಸುಂದರಿಯಾದ ಯಾವ ಅಂಗನೆಯೂ, ಇರಲಿಲ್ಲ.

ಶೀಲರೂಪಗುಣೋಪೇತಾ ನಿತ್ಯಂ ಸಾ ತು ಪತಿವ್ರತಾ ।
ಸರ್ವಯೋಷಿದ್ಗುಣೈರ್ಯುಕ್ತಾ ಯಥಾ ಸಾಧ್ವೀ ಹ್ಯರುಂಧತೀ ॥ ೫ ॥
ಪ್ರಧಾನಾ ಸ್ತ್ರೀಸಹಸ್ರಸ್ಯ ಸೌಭಾಗ್ಯಮದಗರ್ವಿತಾ ।
ನ ವಿನಾ ಸ ತಯಾ ರೇಮೇ ಮುಹೂರ್ತಮಪಿ ಪಾರ್ಥಿವಃ ॥ ೬ ॥
ಏಕದಾ ತಸ್ಯ ರಾಜರ್ಷೇರರ್ಧಾಸನಗತಾ ಸತೀ ।
ಯಾವತ್ತಿಷ್ಠತಿ ರಾಜೇಂದ್ರಮೃಷಿಸ್ತಾವದುಪಾಗತಃ ।
ಕಣ್ವೋ ನಾಮ ಮಹಾತೇಜಾಸ್ತಪಸ್ವೀ ವೇದಪಾರಗಃ ॥ ೭ ॥
ತಮಾಗತಮಥೋ ದೃಷ್ಟ್ವಾ ಸಹಸೋತ್ಥಾಯ ಪಾರ್ಥಿವಃ ।
ಪೂಜಾಂ ಕೃತ್ವಾ ಯಥಾನ್ಯಾಯಂ ದತ್ತ್ವಾ ಚಾಽರ್ಘ್ಯಮನುತ್ತಮಂ ॥ ೮ ॥
ಸುಖಾಸೀನಂ ತತೋ ಮತ್ವಾ ವಿಶ್ರಾಂತಂ ಮುನಿಪುಂಗವಂ ।
ಅಪೃಚ್ಛತ್ಕುಶಲಂ ರಾಜಾ ಸ ಸರ್ವಂ ಚಾನ್ವಮೋದಯತ್ ॥ ೯ ॥
ತತೋ ಧರ್ಮಕಥಾಂ ಚಕ್ರೇ ಸ ಋಷಿರ್ನೃಪಸನ್ನಿಧೌ ॥ ೧೦ ॥
ತತಃ ಕಥಾಽವಸಾನೇ ಸಾ ಭಾರ್ಯಾ ತಸ್ಯ ಮಹೀಪತೇಃ ।
ಅಬ್ರವೀದಮೃತಂ ವಾಕ್ಯಂ ಕೃತಾಂಜಲಿಪುಟಾ ಸತೀ ॥ ೧೧ ॥

---

೫. ಅವಳು ಅರುಂಧತಿಯಂತೆ ಸತ್ಸ್ವಭಾವ, ಸೌಂದರ್ಯಗಳಿಂದಲೂ, ಸ್ತ್ರೀಸಹಜವಾದ ಸಕಲ ಗುಣಗಳಿಂದಲೂ ಸಹಿತಳಾಗಿ ಪತಿವ್ರತೆಯಾಗಿದ್ದಳು.

೬. ದೊರೆಯು ಸಾವಿರ ಮಂದಿ ರಾಣಿಯರಲ್ಲಿ ಮುಖ್ಯಳಾಗಿ ಸೌಂದರ್ಯವುಳ್ಳ ಅವಳನ್ನು ಒಂದು ಮುಹೂರ್ತಕಾಲವಾದರೂ ಬಿಟ್ಟು ವಿನೋದಪಡುತ್ತಿರಲಿಲ್ಲ.

೭. ಒಂದಾನೊಂದು ದಿನ ಆ ರಾಣಿಯು ಅರಸನ ಅರ್ಧಾಸನದಲ್ಲಿ ಕುಳಿತಿರಲು ಅತಿ ತೇಜಸ್ವಿಯೂ ವೇದಾಧ್ಯಯನ ಸಂಪನ್ನನೂ ಆದ ಕಣ್ವನೆಂಬ ಮಹರ್ಷಿಯು ಅಲ್ಲಿಗೆ ಬಂದನು.

೮–೯. ಆಗ ದೊರೆಯು ಬಂದಿರುವ ಮುನಿಯನ್ನು ಕಂಡಕೂಡಲೆ ಎದ್ದು ಅವನಿಗೆ ವಿಧಿಯಂತೆ ಪೂಜೆಗೈದು ಅರ್ಘ್ಯವನ್ನಿತ್ತು ಸುಖವಾಗಿ ಕುಳಿತಿರುವ ಅವನು ವಿಶ್ರಾಂತಿಗೊಂಡಿರುವನೆಂದರಿತು ಕ್ಷೇಮವನ್ನು ಕೇಳಿದನು. ಅವನೆಲ್ಲ ವಿಷಯದಲ್ಲಿ ಸೌಖ್ಯವಾಗಿರುವೆನೆಂದನು.

೧೦. ಬಳಿಕ ಆ ಮಹರ್ಷಿಯು ರಾಜನೆಡೆಯಲ್ಲಿ ಧರ್ಮಕಥೆಯನ್ನು ಹೇಳಿದನು.

೧೧. ಕಥೆಯ ಕೊನೆಯಲ್ಲಿ ಆ ಅರಸನ ರಾಣಿಯು ಕೈಮುಗಿದುಕೊಂಡು ಸವಿನುಡಿಯನ್ನು ನುಡಿದಳು:

ಇಂದುಮತ್ಯುವಾಚ :—

ತ್ವಂ ವೇತ್ಸಿ ಭಗವನ್ ಸರ್ವಮತೀತಾನಾಗತಂ ವಿಭೋ ।
ಪೃಚ್ಛೇ ತ್ವಾಂ ಕೌತುಕಾವಿಷ್ಟಾ ತಸ್ಮಾತ್ತ್ವಂ ಕ್ಷಂತುಮರ್ಹಸಿ ॥ ೧೨ ॥
ಅನ್ಯದೇಹೋದ್ಭವಂ ಕರ್ಮ ಮಮ ಸರ್ವಂ ಪ್ರಕೀರ್ತಯ ।
ಈದೃಶಂ ಮಮ ಸೌಭಾಗ್ಯಂ ಪತಿರ್ದೇವಸುತೋಪಮಃ ॥ ೧೩ ॥
ಸೌಭಾಗ್ಯಂ ಪತಿದೇವತ್ವಂ ಶೀಲಂ ತ್ರೈಲೋಕ್ಯವಿಶ್ರುತಂ ।
ಕಿಂ ಪ್ರಭಾವೋ ವ್ರತಸ್ಯೈವ ಉತಾಹೋ ಪ್ರೋಷಿತಸ್ಯ ವಾ ॥ ೧೪ ॥
ದಾನಸ್ಯ ವಾ ಮುನಿಶ್ರೇಷ್ಠ ಯನ್ಮೇ ಸೌಭಾಗ್ಯಮುತ್ತಮಂ ।
ವಶೋ ರಾಜಾ ಮಹಾಬಾಹುರ್ಮಮ ವಾಕ್ಯಾನುಗಃ ಸದಾ ॥ ೧೫ ॥
ಏತನ್ಮೇ ಸರ್ವಮಾಚಕ್ಷ್ವ ಪರಂ ಕೌತಹಲಂ ಹಿ ಮೇ ॥ ೧೬ ॥

ಸೂತ ಉವಾಚ :—

ತಸ್ಯಾಸ್ತದ್ವಚನಂ ಶ್ರುತ್ವಾ ಧ್ಯಾತ್ವಾ ಚ ಸುಚಿರಂ ಮುನಿಃ ।
ಅಬ್ರವೀತ್ಪ್ರಹಸನ್ವಾಕ್ಯಂ ಕಣ್ವೋ ವೇದವಿದಾಂ ವರಃ ॥ ೧೭ ॥

ಕಣ್ವ ಉವಾಚ :—

ಶೃಣು ರಾಜ್ಞಿ ಪ್ರವಕ್ಷ್ಯಾಮಿ ಅನ್ಯದೇಹೋದ್ಭವಂ ತವ ।
ನ ರೋಷಶ್ಚ ತ್ವಯಾ ಕಾರ್ಯೋ ಲಜ್ಜಾ ವಾಽಪಿ ಸುಮಧ್ಯಮೇ ॥ ೧೮ ॥

---

೧೨. ಇಂದುಮತಿಯು ಹೇಳುತ್ತಾಳೆ:—ಪೂಜ್ಯನೆ! ನೀನು ಹಿಂದಿನ ಮುಂದಿನ ವಿಷಯಗಳನ್ನೆಲ್ಲ ಅರಿತಿರುವೆ. ಕುತೂಹಲದಿಂದ ನಿನ್ನನ್ನು ಕೇಳುತ್ತೇನೆ. ಆದುದರಿಂದ ನೀನು ನನ್ನನ್ನು ಕ್ಷಮಿಸಬೇಕು.

೧೩–೧೬. ನನ್ನ ಇತರ ಜನ್ಮದ ಕರ್ಮವನ್ನು ಹೇಳು. ನನ್ನ ಸೌಭಾಗ್ಯವು ಹೀಗಿರುವುದು. ನನ್ನ ಪತಿಯು ದೇವತೆಯಂತಿರುವನು. ಪತಿಯು ದೇವತೆಯಂತಿರುವುದೇ ಸೌಭಾಗ್ಯವು. ನನ್ನ ನಡತೆಯು ಮೂರು ಲೋಕಗಳಲ್ಲಿ ಪ್ರಸಿದ್ಧವಾಗಿದೆ. ಮಹಾನುಭಾವನಾದ ದೊರೆಯು ನನ್ನ ಅಧೀನನಾಗಿ ಯಾವಾಗಲೂ ನನ್ನ ಮಾತನ್ನು ನಡೆಸುವನು. ಇದು ನಾನು ಆಚರಿಸಿದ ವ್ರತದ ಪ್ರಭಾವವೊ? ಅಥವಾ ಉಪವಾಸ ದಾನಗಳ ಮಹಾತ್ಮ್ಯವೊ? ಇದನ್ನೆಲ್ಲ ನನಗೆ ಹೇಳು. ನಾನು ಅತ್ಯಂತ ಕುತೂಹಲವುಳ್ಳವಳಾಗಿದ್ದೇನೆ.

೧೭. ಸೂತನು ಹೇಳುತ್ತಾನೆ:—ಕಣ್ವಮಹರ್ಷಿಯು ಅವಳ ಮಾತನ್ನು ಕೇಳಿ ಬಹಳ ಹೊತ್ತು ಚಿಂತಿಸಿ ನಗುತ್ತ ಇಂತೆಂದನು.

೧೮. ಕಣ್ವನು ಹೇಳುತ್ತಾನೆ:—ರಾಣಿಯೆ! ನಿನ್ನ ಇನ್ನೊಂದು ಜನ್ಮದ ಸಮಾಚಾರವನ್ನು ಹೇಳುವೆನು. ಕೇಳು. ನೀನು ಕೋಪಗೊಳ್ಳಬಾರದು. ಅಥವಾ ಲಜ್ಜೆಗೊಳ್ಳಬಾರದು.

ತ್ವಮಾಸೀದನ್ಯದೇಹೇ ತು ಆಭೀರೀ ಪಂಚಭರ್ತೃಕಾ ।
ಸೌರಾಷ್ಟ್ರವಿಷಯೇ ಹೀನಾ ದೇವಂ ಸೋಮೇಶ್ವರಂ ಗತಾ ॥ ೧೯ ॥
ತತಃ ಸ್ನಾತುಂ ಪ್ರವಿಷ್ಟಾ ಚ ಸಾಗರೇ ಲವಣಾಂಭಸಿ ।
ಹತಾ ಕಲ್ಲೋಲಮಾಲಾಭಿರ್ವಿಹ್ವಲತ್ವಮುಪಾಗತಾ ॥ ೨೦ ॥
ತವ ಹಸ್ತಾಚ್ಚ್ಯುತಂ ತತ್ರ ಹೈಮಂ ಕಂಕಣಮೇವ ಚ ।
ನಷ್ಟಂ ಸಮುದ್ರಸಲಿಲೇ ಪಶ್ಚಾತ್ತಾಪಸ್ತು ತೇ ಸ್ಥಿತಃ ॥ ೨೧ ॥
ಅಥ ಕಾಲೇನ ಮಹತಾ ಪಂಚತ್ವಂ ತ್ವಮುಪಾಗತಾ ।
ದಶಾರ್ಣಾಧಿಪತೇರ್ಗೇಹೇ ತತೋ ಜಾತಾಽಸಿ ಸುಂದರಿ ॥ ೨೨ ॥
ಬೃಹದ್ರಥೇನ ಚೋಢಾಸಿ ಕಂಕಣಸ್ಯ ಪ್ರಭಾವತಃ ।
ನ ವ್ರತಂ ನ ತಪೋ ದಾನಂ ತ್ವಯಾ ಚೀರ್ಣಂ ಪುರಾ ಶುಭೇ ॥ ೨೩ ॥
ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ತಚ್ಛ್ರುತ್ವಾ ಸಾ ವಿಶಾಲಾಕ್ಷೀ ತ್ರಪಯಾಽಧೋಮುಖೀ ತಥಾ ।
ಆಸೀತ್ತೂಷ್ಣೀಂ ತದಾ ದೇವೀ ಶ್ರುತ್ವಾ ವಾಕ್ಯಂ ಚ ತಾದೃಶಂ ॥ ೨೪ ॥
ಏವಂ ನಿವೇದ್ಯ ಸ ಮುನೀ ರಾಜಪತ್ನೀಂ ವರಾನನೇ ।
ಜಗಾಮ ಭವನಂ ಸ್ವಂ ಚ ಆಮಂತ್ರ್ಯ ವಸುಧಾಧಿಪಂ ॥ ೨೫ ॥

೧೯–೨೦. ನೀನು ಹಿಂದಿನ ಜನ್ಮದಲ್ಲಿ ಐದು ಮಂದಿ ಪತಿಗಳುಳ್ಳ ನೀಚ ಶೂದ್ರ ಸ್ತ್ರೀಯಾಗಿ ಸೌರಾಷ್ಟ್ರ ದೇಶದಲ್ಲಿ ವಾಸಿಸುತ್ತ ಸೋಮೇಶ್ವರಕ್ಷೇತ್ರಕ್ಕೆ ಹೋಗಿ ಅಲ್ಲಿ ಸಮುದ್ರದಲ್ಲಿ ಸ್ನಾನಮಾಡಲು ಪ್ರವೇಶಮಾಡಿದೆ. ಆಗ ನೀನು ಅಲೆಗಳ ಹೊಡೆತದಿಂದ ವ್ಯಥೆಗೊಂಡೆ.

೨೧. ಆಗ ನಿನ್ನ ಕೈಯಿಂದ ಸುವರ್ಣ ಕಂಕಣವು ಬಿದ್ದು ಸಮುದ್ರದ ನೀರಿನಲ್ಲಿ ಮುಳುಗಿಹೋಗಲು ನೀನು ವ್ಯಥೆಗೊಂಡೆ.

೨೨. ಸುಂದರಿ ! ನೀನು ಬಳಿಕ ಅನೇಕ ವರ್ಷಗಳು ಕಳೆಯಲು ಮೃತಳಾಗಿ ದಶಾರ್ಣದೇಶದ ದೊರೆಯ ಮನೆಯಲ್ಲಿ ಜನಿಸಿದೆ.

೨೩. ಕಂಕಣದ ಮಾಹಾತ್ಮ್ಯದಿಂದ ನಿನ್ನನ್ನು ಬೃಹದ್ರಥನು ಮದುವೆ ಮಾಡಿ ಕೊಂಡನ.. ನೀನು ಹಿಂದೆ ವ್ರತ, ತಪಸ್ಸು, ದಾನ ಇವುಗಳನ್ನು ಮಾಡಲಿಲ್ಲ.

೨೪. ನೀನು ನನ್ನನ್ನು ಕೇಳಿದ್ದನ್ನೆಲ್ಲ ಹೇಳಿರುವೆನು. " ಎನ್ನಲು ಅದನ್ನು ಕೇಳಿ ಆ ಇಂದುಮತಿಯು ನಾಚಿಕೆಯಿಂದ ಮುಖವನ್ನು ತಗ್ಗಿಸಿಕೊಂಡಳು.

೨೫. ಆ ಮುನಿಯು ರಾಣಿಗೆ ಹೀಗೆ ತಿಳಿಸಿ ರಾಜನನ್ನು ಕೇಳಿಕೊಂಡು ತನ್ನ ಮನೆಗೆ ತೆರಳಿದನು.

ಜ್ಞಾತ್ವಾ ಫಲಂ ಕಂಕಣಸ್ಯ ಮುನೇಸ್ತಸ್ಯ ಪ್ರಭಾವತಃ ।
ಗತ್ವಾ ಸೋಮೇಶ್ವರಂ ದೇವಂ ಸ್ನಾತ್ವಾ ಚ ಲವಣಾಂಭಸಿ ॥ ೨೬ ॥
ಪ್ರಾಕ್ಷಿಪತ್ಕಂಕಣಂ ತತ್ರ ಪ್ರತಿವರ್ಷಂ ಮಹಾಪ್ರಭೇ ।
ತತೋ ದೇವತ್ವಮಾಪನ್ನಾ ಪ್ರಭಾವಾತ್ತಸ್ಯ ಭಾಮಿನಿ ॥ ೨೭ ॥

ಈಶ್ವರ ಉವಾಚ :—

ಏಷ ಪ್ರಭಾವಃ ಸುಮಹಾನ್ಕಂಕಣಸ್ಯ ಪ್ರಕೀರ್ತಿತಃ ।
ಸರ್ವಕಾಮಪ್ರದೋ ದೇವಿ ಸರ್ವಪಾಪಪ್ರಣಾಶನಃ ॥ ೨೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಸೋಮೇಶ್ವರ ಮಾಹಾತ್ಮ್ಯೇ ಕಂಕಣಮಾಹಾತ್ಮ್ಯವರ್ಣನಂ ನಾಮ ಸಪ್ತತ್ರಿಂಶೋಽಧ್ಯಾಯಃ

೨೬–೨೭. ಆ ಇಂದುಮತಿಯು ಆ ಕಣ್ವಮುನಿಯ ಪ್ರಭಾವದಿಂದ ಕಂಕಣದ ಫಲವನ್ನರಿತು ಪ್ರತಿವರ್ಷವೂ ಸೋಮೇಶ್ವರನೆಡೆಗೆ ಹೋಗಿ ಲವಣಸಮುದ್ರದಲ್ಲಿ ಮಿಂದು ಕಂಕಣವನ್ನೆಸೆದಳು. ಅದರಿಂದವಳು ದೇವತೆಯಾದಳು.

೨೮. ಈಶ್ವರನು ಹೇಳುತ್ತಾನೆ:—ದೇವಿ! ಸಕಲೇಷ್ಟಾರ್ಥಗಳನ್ನು ಈಡೇರಿಸಿ ಕೊಡುವುದೂ, ಸಮಸ್ತ ಪಾಪಗಳನ್ನೂ ಪರಿಹರಿಸುವುದೂ ಆದ ಕಂಕಣದ ಈ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ ಪ್ರಭಾಸಖಂಡ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ ಸೋಮೇಶ್ವರ ಮಾಹಾತ್ಮ್ಯದಲ್ಲಿ ಕಂಕಣಮಾಹಾತ್ಮ್ಯವರ್ಣನ ವೆಂಬ ನಲವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟತ್ರಿಂಶೋಽಧ್ಯಾಯಃ

ಕಪರ್ದಿವಿನಾಯಕಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಯದೇತದ್ಭವತಾ ಪ್ರೋಕ್ತಂ ಪಶ್ಯೇತ್ಪೂರ್ವಂ ಕಪರ್ದಿನಂ ।
ಭಗವನ್ ಸಂಶಯಂ ಹ್ಯೇನಂ ಯಥಾವದ್ವಕ್ತುಮರ್ಹಸಿ ॥ ೧ ॥
ಸ ಭೃತ್ಯಃ ಖಲು ದೇವೇಶ ತವ ಶಂಭೋ ಮಹಾಪ್ರಭಃ ।
ಪ್ರಭೋರನಂತರಂ ಭೃತ್ಯ ಏಷ ಧರ್ಮಃ ಸನಾತನಃ ॥ ೨ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಯಥಾ ಪೂಜ್ಯತಮೋ ಹಿ ಸಃ ।
ಕಪರ್ದೀ ಸರ್ವದೇವಾನಾಮಾದ್ಯೋ ವಿಘ್ನೇಶ್ವರಃ ಪ್ರಭುಃ ॥ ೩ ॥
ಯೋಽಸಾವತೀಂದ್ರಿಯಗ್ರಾಹ್ಯಃ ಪ್ರಭಾಸಕ್ಷೇತ್ರಸಂಸ್ಥಿತಃ ।
ಸೋಮೇಶ್ವರೋ ಮಹಾದೇವಿ ಲಿಂಗರೂಪೀ ಸದಾಶಿವಃ ॥ ೪ ॥

ಕನ್ನಡದ ಅನುವಾದ

ಕಪರ್ದಿವಿನಾಯಕಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ :— ಪೂಜ್ಯನೇ ! ನೀನು ಮೊದಲು ಕಪರ್ದಿಯನ್ನು ದರ್ಶನಮಾಡಬೇಕೆಂದು ಹೇಳಿರುವೆ. ಈ ವಿಷಯದಲ್ಲಿ ನನಗೆ ಸಂದೇಹ ವುಂಟಾಗಿದೆ. ಅದರ ಯಥಾರ್ಥವನ್ನು ನನಗೆ ತಿಳಿಯ ಹೇಳು.

೨. ಅತಿಶಯಕಾಂತಿಯುಳ್ಳವನಾದರೂ ಅವನು ನಿನ್ನ ಸೇವಕನಷ್ಟೆ. ಸ್ವಾಮಿಯ ದರ್ಶನವನ್ನು ಮಾಡಿದ ಮೇಲೆ ಸೇವಕನನ್ನು ನೋಡುವುದು ಸನಾತನ ಧರ್ಮದ ಪದ್ಧತಿಯಾಗಿರುವುದು.

೩. ಈಶ್ವರನು ಹೇಳುತ್ತಾನೆ :—ದೇವಿ ! ಸಕಲ ದೇವತೆಗಳಿಗೆ ಮೊದಲನೆಯವನೂ, ವಿಘ್ನಗಳಿಗೆ ಒಡೆಯನೂ ಆದ ಆ ಕಪರ್ದಿಯು ಹೇಗೆ ಪೂಜ್ಯನೆಂಬುದನ್ನು ಹೇಳುವೆನು. ಕೇಳು.

೪–೫. ಮಹಾದೇವಿ ! ಪ್ರಭಾಸಕ್ಷೇತ್ರದಲ್ಲಿ ಲಿಂಗರೂಪದಿಂದ ನೆಲೆಸಿರುವ ಅತೀಂದ್ರಿಯಗ್ರಾಹ್ಯನಾದ ಸೋಮೇಶ್ವರನ ಎಡಭಾಗದಲ್ಲಿ ವರಾಹನೆಂಬ ವಿಷ್ಣುವು

ತಸ್ಯ ನಾಮೇ ಸ್ಥಿತೋ ವಿಘ್ನವರ್ಗನಾಶ ಇತಿ ಯಃ ಸ್ಮೃತಃ ।
ತಸ್ಯ ದಕ್ಷಿಣಭಾಗೇ ತು ಸ್ಥಿತೋ ಬ್ರಹ್ಮಾ ಪ್ರಜಾಪತಿಃ ।
ಕಪರ್ದಿರೂಪಮಾಸ್ಥಾಯ ಸಾವಿತ್ರ್ಯಾಃ ಕೋಪಕಾರಣಾತ್ ॥ ೫॥
ಕೃತೇ ಹೇರಂಬನಾಮಾ ತು ತ್ರೇತಾಯಾಂ ವಿಘ್ನಮರ್ದನಃ ।
ಲಂಬೋದರೋ ದ್ವಾಪರೇ ತು ಕಪರ್ದೀ ತು ಕಲೌ ಸ್ಮೃತಃ ॥ ೬ ॥
ಏವಂ ಯುಗೇ ಯುಗೇ ತಸ್ಯ ಅವತಾರಃ ಪೃಥಕ್ ಪೃಥಕ್ ।
ಯಥಾ ಕಾರ್ಯಾನುರೂಪೇಣ ಜಾಯತೇ ಚ ಪುನಃ ಪುನಃ ॥ ೭ ॥
ಅಷ್ಟಾವಿಂಶತಿಮೇ ತತ್ರ ದೇವಿ ಪ್ರಾಪ್ತೇ ಚತುರ್ಯುಗೇ ।
ಕಾರಣಾತ್ಮಾ ಯಥೋತ್ಪನ್ನಃ ಕಪರ್ದೀ ತತ್ರ ಮೇ ಶೃಣು ॥ ೮ ॥
ಪುರಾ ದ್ವಾಪರಸಂಧೌ ತು ಸಂಪ್ರಾಪ್ತೇ ಚ ಕಲೌ ಯುಗೇ ।
ಸ್ತ್ರಿಯೋ ಮ್ಲೇಚ್ಛಾಶ್ಚ ಶೂದ್ರಾಶ್ಚ ಯೇ ಚಾನ್ಯೇ ಪಾಪಕಾರಿಣಃ ।
ಪ್ರಯಾಂತಿ ಸ್ವರ್ಗಮೇವಾಽಽತು ದೃಷ್ಟ್ವಾ ಸೋಮೇಶ್ವರಂ ಪ್ರಭುಂ ॥ ೯ ॥
ನ ಯಜ್ಞಾ ನ ತಪೋ ದಾನಂ ನ ಸ್ವಾಧ್ಯಾಯೋ ವ್ರತಂ ನ ಚ ।
ಕುರ್ವಂತೋಽಪಿ ನರಾ ದೇವಿ ಸರ್ವೇ ಯಾಂತಿ ಶಿವಾಲಯಂ ॥ ೧೦ ॥

ನೆಲಸಿರುವನು. ಅವನ ದಕ್ಷಿಣಭಾಗದಲ್ಲಿ ಚತುರ್ಮುಖನು ಸಾವಿತ್ರಿಯ ಕೋಪದಿಂದ ಕಪರ್ದಿರೂಪವನ್ನು ಧರಿಸಿರುವನು.

೬. ಇವನು ಕೃತಯುಗದಲ್ಲಿ ಹೇರಂಬನೆಂದೂ, ತ್ರೇತಾಯುಗದಲ್ಲಿ ವಿಘ್ನಮರ್ದನನೆಂದೂ, ದ್ವಾಪರದಲ್ಲಿ ಲಂಬೋದರನೆಂದೂ, ಕಲಿಯುಗದಲ್ಲಿ ಕಪರ್ದಿಯೆಂದೂ, ಪ್ರಸಿದ್ಧನಾಗಿರುವನು.

೭. ಹೀಗೆ ಪ್ರತಿಯುಗದಲ್ಲಿಯೂ ಕಾರ್ಯಕ್ಕೆ ತಕ್ಕಂತೆ ಆ ಕಪರ್ದಿಯ ಅವತಾರವು ಬೇರೆ ಬೇರೆಯಾಗುವುದು.

೮. ದೇವಿ! ಇಪ್ಪತ್ತೆಂಟನೆಯ ಚತುರ್ಯುಗವು ಒದಗಲು ಕಾರಣ ಸ್ವರೂಪನಾದ ಆ ಕಪರ್ದಿಯು ಹುಟ್ಟಿದ ಕ್ರಮವನ್ನು ಕೇಳು.

೯. ಹಿಂದೆ ದ್ವಾಪರ ಸಂಧಿಯಲ್ಲಿ ಕಲಿಯುಗವು ಪ್ರಾಪ್ತವಾಗಲು ಪಾಪವನ್ನಾಚರಿಸಿರುವ ಹೆಂಗಸರೂ, ಮ್ಲೇಚ್ಛರೂ ಶೂದ್ರರೂ, ಸೋಮೇಶ್ವರನನ್ನು ಸಂದರ್ಶಿಸಿ ಸ್ವರ್ಗಕ್ಕೆ ಹೋಗುತ್ತಿದ್ದರು.

೧೦. ಯಜ್ಞ, ತಪಸ್ಸು, ದಾನ, ವೇದಾಧ್ಯಯನ, ವ್ರತ ಮೊದಲಾದುವನು ಮಾಡುತ್ತಿದ್ದವರು ಸಹ ಶಿವಾಲಯವನ್ನು ಸೇರುತ್ತಿರಲಿಲ್ಲ.

ತಂ ಪ್ರಭಾವಂ ವಿದಿತ್ವೈವಂ ಸೋಮೇಶ್ವರಸಮುದ್ಭವಂ ।
ಅಗ್ನಿಷ್ಟೋಮಾದಿಕಾಃ ಸರ್ವಾಃ ಕ್ರಿಯಾ ನಷ್ಟಾಃ ಸುರೇಶ್ವರಿ ॥ ೧೧ ॥
ತತೋ ಬಾಲಾಶ್ಚ ವೃದ್ಧಾಶ್ಚ ಋಷಯೋ ವೇದಪಾರಗಾಃ ।
ಶೂದ್ರಾಃ ಸ್ತ್ರಿಯೋಽಪಿ ತಂ ದೃಷ್ಟ್ವಾ ಪ್ರಯಾಂತಿ ಪರಮಾಂ ಗತಿಂ ॥ ೧೨ ॥
ನಷ್ಟಯಜ್ಞೋತ್ಸವೇ ಕಾಲೇ ಶೂನ್ಯೇ ಚ ವಸುಧಾತಲೇ ।
ಊರ್ಧ್ವಬಾಹುಭಿರಾಕ್ರಾಂತಂ ಪರಿಪೂರ್ಣಂ ತ್ರಿವಿಷ್ಟಪಂ ॥ ೧೩ ॥
ತತೋ ದೇವಾ ಮಹೇಂದ್ರಾದ್ಯಾ ದುಃಖೇನೈವ ಸಮನ್ವಿತಾಃ ।
ಪರಿಭೂತಾ ಮನುಷ್ಯೈಸ್ತೇ ಶಂಕರಂ ಶರಣಂ ಗತಾಃ ॥ ೧೪ ॥
ಊಚುಃ ಪ್ರಾಂಜಲಯಃ ಸರ್ವ ಇಂದ್ರಾದ್ಯಾಃ ಸುರಸತ್ತಮಾಃ ।
ವ್ಯಾಪ್ತೋಽಯಂ ಮಾನುಷೈಃ ಸ್ವರ್ಗಃ ಪ್ರಸಾದಾತ್ತವ ಶಂಕರ ॥ ೧೫ ॥
ನಿವಾಸಾಯ ಪ್ರಭೋಽಸ್ಮಾಕಂ ಸ್ಥಾನಂ ಕಿಂಚಿತ್ಸಮಾದಿಶ ।
ಅಹಂ ಶ್ರೇಷ್ಠೋ ಹ್ಯಹಂ ಶ್ರೇಷ್ಠ ಇತ್ಯೇವಂ ತೇ ಪರಸ್ಪರಂ ।
ಜಲ್ಪಂತಃ ಸರ್ವತೋ ದೇವ ಪರ್ಯಟಂತಿ ಯಥೇಚ್ಛಯಾ ॥ ೧೬ ॥

---

೧೧. ಸೋಮೇಶ್ವರನ ಈ ಮಾಹಾತ್ಮ್ಯವನ್ನು ತಿಳಿದು ಅಗ್ನಿಷ್ಟೋಮ ಮೊದಲಾದ ಸಕಲ ಸತ್ಕರ್ಮಗಳೂ ನಷ್ಟವಾದುವು.

೧೨. ಬಳಿಕ ಬಾಲಕರು, ಮುದುಕರು, ವೇದಪಾರಂಗತರಾದ ಋಷಿಗಳು, ಶೂದ್ರರು, ಹೆಂಗಸರು ಇವರೆಲ್ಲರೂ ಆ ಸೋಮೇಶ್ವರನ ಸಂದರ್ಶನವನ್ನು ಮಾಡಿ ಉತ್ತಮಗತಿಯನ್ನು ಪಡೆದರು.

೧೩. ಯಜ್ಞೋತ್ಸವಗಳು ಹಾಳಾದುವು. ಭೂಮಿಯು ಶೂನ್ಯವಾಯಿತು. ದೇವಲೋಕದಲ್ಲಿ ಜನರು ತುಂಬಿ ಸ್ಥಳವು ಸಾಕಾಗದೆ ಹೋಯಿತು. ಆಗ ಅಲ್ಲಿ ವಾಸಿಸುತ್ತಿದ್ದವರೆಲ್ಲರೂ ತೋಳನ್ನು ಮೇಲಕ್ಕೆತ್ತಿಕೊಂಡು ನಿಂತರು.

೧೪. ಅನಂತರ ಇಂದ್ರಾದಿದೇವತೆಗಳು ದುಃಖಗೊಂಡು ಮನುಷ್ಯರಿಂದ ತಿರಸ್ಕರಿಸಲ್ಪಟ್ಟವರಾಗಿ ಮಹೇಶ್ವರನನ್ನು ಮರೆಹೊಕ್ಕರು.

೧೫. ಅವರು ಆ ಶಿವನನ್ನು ಕುರಿತು ಕೈಮುಗಿದುಕೊಂಡು, "ಓ ಶಂಕರ ! ನಿನ್ನ ಅನುಗ್ರಹದಿಂದ ಸ್ವರ್ಗವು ಮನುಷ್ಯರಿಂದ ವ್ಯಾಪ್ತವಾಗಿರುವುದು.

೧೬. ಸ್ವಾಮಿ ! ನಮಗೆ ವಾಸಮಾಡಲು ಯಾವುದಾದರೂ ಒಂದು ಸ್ಥಳವನ್ನು ತೋರಿಸು. ಭೂಲೋಕದಿಂದ ಬಂದ ಆ ಮನುಷ್ಯರು ನಾನು ಶ್ರೇಷ್ಠನು. ನಾನು ಶ್ರೇಷ್ಠನು ಎಂದು ಪರಸ್ಪರವಾಗಿ ಹೇಳಿಕೊಳ್ಳುತ್ತ ಸ್ವೇಚ್ಛೆಯಿಂದ ಎಲ್ಲೆಡೆಯಲ್ಲಿಯೂ ಸಂಚರಿಸುತ್ತಿರುವರು.

ಧರ್ಮರಾಜಃ ಸುಧರ್ಮಾತ್ಮಾ ತೇಷಾಂ ಕರ್ಮ ಶುಭಾಶುಭಂ ।
ಸ್ವಯಂ ಲಿಖಿತಮಾಲೋಕ್ಯ ತೂಷ್ಣೀಮಾಸ್ತೇ ಸುವಿಸ್ಮಿತಃ ॥ ೧೭ ॥
ಯೇಷಾಮಥ ಕೃತಂ ಸಜ್ಜಂ ಕುಂಭೀಪಾಕಂ ಸುದಾರುಣಂ ।
ರೌರವಃ ಶಾಲ್ಮಲಿರ್ದೇವ ದೃಷ್ಟ್ವಾ ತಾನ್ ದಿವಿ ಸಂಸ್ಥಿತಾನ್ ।
ವೈಲಕ್ಷ್ಯಂ ಪರಮಂ ಗತ್ವಾ ವ್ಯಾಪಾರಂ ತ್ಯಕ್ತವಾನಸೌ ॥ ೧೮ ॥

ಶ್ರೀ ಭಗವಾನುವಾಚ :—

ಪ್ರತಿಜ್ಞಾತಂ ಮಯಾ ಸರ್ವಂ ಭಕ್ತ್ಯಾ ತುಷ್ಟೇನ ವೈ ಸುರಾಃ ।
ಸೋಮಾಯ ಮಮ ಸಾನ್ನಿಧ್ಯಮಸ್ಮಿನ್ ಕ್ಷೇತ್ರೇ ಭವಿಷ್ಯತಿ ॥ ೧೯ ॥
ನ ಶಕ್ಯಮನ್ಯಥಾ ಕರ್ತುಮಾತ್ಮನೋ ಯದುದೀರಿತಂ ।
ಏವಂ ಯಾಸ್ಯಂತಿ ತೇ ಸ್ವರ್ಗಂ ಯೇ ಮಾಂ ದ್ರಕ್ಷ್ಯಂತಿ ತತ್ರ ವೈ ॥ ೨೦ ॥
ಭಯೋದ್ವಿಗ್ನಾಸ್ತತೋ ದೇವಾಃ ಪಾರ್ವತೀಂ ಪ್ರೇಕ್ಷ್ಯ ವಿಶ್ವತಃ ।
ಊಚುಃ ಪ್ರಾಂಜಲಯಃ ಸರ್ವೇ ತ್ವಮಸ್ಮಾಕಂ ಗತಿರ್ಭವ ॥ ೨೧ ॥
ಏವಮುಕ್ತ್ವಾಽಸ್ತುವನ್ದೇವಾಃ ಸ್ತೋತ್ರೇಣಾನೇನ ಸತ್ತಮ ।
ಜಾನುಭ್ಯಾಂ ಧರಣೀಂ ಗತ್ವಾ ಶಿರಸ್ಯಾಧಾಯ ಚಾಂಜಲಿಂ ॥ ೨೨ ॥

---

೧೭. ಧರ್ಮಾತ್ಮನಾದ ಯಮನು ತಾನು ಬರೆದಿಟ್ಟಿರುವ ಅವರ ಶುಭಾಶುಭ ಕರ್ಮಗಳನ್ನು ನೋಡಿ ಆಶ್ಚರ್ಯದಿಂದ ಸುಮ್ಮನಿರುವನು.

೧೮. ಈ ಯಮನು ಯಾರಿಗೆ ಭಯಂಕರವಾದ ಕುಂಭೀಪಾಕ, ಶಾಲ್ಮಲಿ, ರೌರವ ನರಕಗಳು ಸಿದ್ಧವಾಗಿವೆಯೊ, ಅವರು ಸ್ವರ್ಗದಲ್ಲಿರುವುದನ್ನು ಕಂಡು ಅತ್ಯಂತ ವಿಸ್ಮಯಗೊಂಡು ತನ್ನ ಕೆಲಸವನ್ನು ತ್ಯಜಿಸಿದನು.

೧೯. ಮಹೇಶ್ವರನು ಹೇಳುತ್ತಾನೆ :—ದೇವತೆಗಳೆ ! ಭಕ್ತಿಯಿಂದ ಸಂತುಷ್ಟನಾದ ನಾನು ಚಂದ್ರನಿಗಾಗಿ ಈ ಕ್ಷೇತ್ರದಲ್ಲಿ ಸನ್ನಿಹಿತನಾಗಿರುವೆನೆಂದು ಪ್ರತಿಜ್ಞೆ ಮಾಡಿರುವೆನು.

೨೦. ನಾನು ಹೇಳಿದುದನ್ನು ವ್ಯತ್ಯಾಸಮಾಡಲು ಶಕ್ಯವಲ್ಲ. ಹೀಗೆಯೇ ಆ ಪ್ರಭಾಸಕ್ಷೇತ್ರದಲ್ಲಿ ನನ್ನನ್ನು ನೋಡಿದವರು ಸ್ವರ್ಗವನ್ನು ಹೊಂದುವರು.

೨೧. ಬಳಿಕ ಆ ದೇವತೆಗಳು ಭಯಗೊಂಡು ಪಾರ್ವತಿಯನ್ನು ನೋಡಿ ಕೈಮುಗಿದುಕೊಂಡು, "ನೀನು ನಮಗೆ ಗತಿಯನ್ನು ಕಲ್ಪಿಸು" ಎಂದರು.

೨೨. ದೇವತೆಗಳು ಹೀಗೆಂದು ಹೇಳಿ ಮೊಣಕಾಲೂರಿ ತಲೆಯಲ್ಲಿ ಕೈಯನ್ನು ಜೋಡಿಸಿಕೊಂಡು ಆ ಪಾರ್ವತಿಯನ್ನು ಹೀಗೆ ಸ್ತುತಿಸಿದರು:

ದೇವಾ ಊಚುಃ :—

ನಮಸ್ತೇ ದೇವದೇವೇಶಿ ನಮಸ್ತೇ ವಿಶ್ವಧಾತ್ರಿಕೇ ।
ನಮಸ್ತೇ ಪದ್ಮಪತ್ರಾಕ್ಷಿ ನಮಸ್ತೇ ಕಾಂಚನದ್ಯುತೇ ॥ ೨೩ ॥
ನಮಸ್ತೇ ಸಂಹರ್ತ್ರಿ ಕರ್ತ್ರಿ ನಮಸ್ತೇ ಶಂಕರಪ್ರಿಯೇ ।
ಕಾಲರಾತ್ರಿ ನಮಸ್ತುಭ್ಯಂ ನಮಸ್ತೇ ಗಿರಿಪುತ್ರಿಕೇ ॥ ೨೪ ॥
ಆರ್ಯೇ ಭದ್ರೇ ವಿಶಾಲಾಕ್ಷಿ ನಮಸ್ತೇ ಲೋಕಸುಂದರಿ ।
ತ್ವಂ ರತಿಸ್ತ್ವಂ ಧೃತಿಸ್ತ್ವಂ ಶ್ರೀಸ್ತ್ವಂ ಸ್ವಾಹಾ ತ್ವಂ ಸುಧಾ ಸತೀ ॥ ೨೫ ॥
ತ್ವಂದುರ್ಗಾ ತ್ವಂ ಮತಿರ್ಮೇಧಾ ತ್ವಂ ಸರ್ವಂ ತ್ವಂ ವಸುಂಧರಾ ।
ತ್ವಯಾ ಸರ್ವಮಿದಂ ವ್ಯಾಪ್ತಂ ತ್ರೈಲೋಕ್ಯಂ ಸಚರಾಚರಂ ॥ ೨೬ ॥
ನದೀಷು ಪರ್ವತಾಗ್ರೇಷು ಸಾಗರೇಷು ಗುಹಾಸು ಚ ।
ಅರಣ್ಯೇಷು ಚ ಚೈತ್ಯೇಷು ಸಂಗ್ರಾಮೇಷ್ವಾಶ್ರಮೇಷು ಚ ॥ ೨೭ ॥
ತ್ರೈಲೋಕ್ಯೇ ತತ್ರ ಪಶ್ಯಾಮೋ ಯತ್ರ ತ್ವಂ ದೇವಿ ನ ಸ್ಥಿತಾ ।
ಏತಜ್ಜ್ಞಾತ್ವಾ ವಿಶಾಲಾಕ್ಷಿ ತ್ರಾಹಿ ನೋ ಮಹತೋ ಭಯಾತ್ ॥ ೨೮ ॥

---

೨೩. ದೇವತೆಗಳು ಹೇಳುತ್ತಾರೆ:—ದೇವತೆಗಳಿಗೆ ಒಡತಿಯೂ, ಪ್ರಪಂಚವನ್ನು ರಕ್ಷಿಸುವವಳೂ, ಕಮಲ ದಳಗಳಂತೆ ನಯನಗಳುಳ್ಳವಳೂ, ಸುವರ್ಣದಂತೆ ಕಾಂತಿಯುಳ್ಳವಳೂ ಆದ ಓ ಪಾರ್ವತಿ! ನಿನಗೆ ನಮಸ್ಕಾರವು.

೨೪. ಪ್ರಪಂಚವನ್ನು ಸೃಷ್ಟಿಸಿ ಸಂಹರಿಸುವವಳೂ, ಪ್ರಳಯಕಾಲ ರಾತ್ರಿಯಂತಿರುವವಳೂ, ಗಿರಿರಾಜನ ತನಯಳೂ ಆದ ಪಾರ್ವತಿಯೆ! ನಿನಗೆ ನಮಸ್ಕಾರವು.

೨೫. ಪೂಜ್ಯಳೂ ಮಂಗಳಕರಳೂ, ವಿಶಾಲನೇತ್ರಳೂ, ಲೋಕದಲ್ಲಿ ಅತಿಶಯ ಸುಂದರಿಯೂ ಆದ ಓ ಪಾರ್ವತಿ! ರತಿ, ಧೃತಿ, ಲಕ್ಷ್ಮಿ, ಸ್ವಾಹಾ, ಅಮೃತಗಳು ನೀನೇ ಆಗಿರುವೆ.

೨೬. ದುರ್ಗಾ, ಮೇಧಾ, ಮತಿ, ಭೂಮಿಯೆಲ್ಲವೂ ನೀನೇ ಆಗಿರುವೆ. ನಿನ್ನಿಂದ ಚರಾಚರಾತ್ಮಕವಾದ ಈ ಪ್ರಪಂಚವು ವ್ಯಾಪ್ತವಾಗಿರುವುದು.

೨೭–೨೮. ನದಿ, ಪರ್ವತಶಿಖರ, ಸಮುದ್ರ, ಗುಹೆ, ಅರಣ್ಯ, ಮನೆ, ಯುದ್ಧಾಂಗಣ, ಆಶ್ರಮ ಇವುಗಳಲ್ಲೆಲ್ಲ ನೀನಿಲ್ಲದ ಸ್ಥಳವನ್ನೆ ನಾವು ನೋಡಲಿಲ್ಲ. ದೇವಿ! ನಮ್ಮ ಕಷ್ಟವನ್ನರಿತು ನಮ್ಮನ್ನು ರಕ್ಷಿಸು.

ಈಶ್ವರ ಉವಾಚ :—

ಏವಮುಕ್ತಾ ತು ಸಾ ದೇವೀ ದೇವೈರಿಂದ್ರಪುರೋಗಮೈಃ ।
ಕಾರುಣ್ಯಾನ್ನಿಜದೇಹಂ ತ್ವಂ ತದಾ ಮರ್ದಿತವತ್ಯಸಿ ॥ ೨೯ ॥
ಮರ್ದಯಂತ್ಯಾಸ್ತವ ತದಾ ಸಂಜಾತಂ ಚ ಮಹನ್ಮಲಂ ।
ತತ್ರ ಜಜ್ಞೇ ಗಜೇಂದ್ರಾಸ್ಯಶ್ಚತುರ್ಬಾಹುರ್ಮನೋಹರಃ ॥ ೩೦ ॥
ತತೋಽಬ್ರವೀತ್ಸುರಾನ್ ಸರ್ವಾನ್ ಭವತೀ ಕರುಣಾತ್ಮಿಕಾ ।
ಏಷ ಏವ ಮಯಾ ಸೃಷ್ಟೋ ಯುಷ್ಮಾಕಂ ಹಿತಕಾಮ್ಯಯಾ ॥ ೩೧ ॥
ಏಷ ವಿಘ್ನಾನಿ ಸರ್ವಾಣಿ ಪ್ರಾಣಿನಾಂ ಸಂವಿಧಾಸ್ಯತಿ ॥ ೩೨ ॥
ಮೋಹೇನ ಮಹತಾವಿಷ್ಟಾಃ ಕಾಮೋಪಹತಬುದ್ಧಯಃ ।
ಸೋಮನಾಥಮಪಶ್ಯಂತೋ ಯಾಸ್ಯಂತಿ ನರಕಂ ನರಾಃ ॥ ೩೩ ॥
ಏವಂ ತೇ ವಚನಂ ಶ್ರುತ್ವಾ ಸರ್ವೇ ತೇ ಹೃಷ್ಟಮಾನಸಾಃ ।
ಸ್ವಸ್ಥಾನಂ ಭೇಜಿರೇ ದೇವಾಸ್ತ್ಯಕ್ತ್ವಾ ಮಾನುಷಜಂ ಭಯಂ ॥ ೩೪ ॥
ಅಥೇಭವದನಃ ಪ್ರಾಹ ತ್ವಾಂ ದೇವಿ ವಿನಯಾನ್ವಿತಃ ।
ಕಿಂ ಕರೋಮಿ ವಿಶಾಲಾಕ್ಷಿ ಆದೇಶೋ ದೀಯತಾಂ ಮಮ ॥ ೩೫ ॥

---

೨೯. ಈಶ್ವರನು ಹೇಳುತ್ತಾನೆ:—ದೇವತೆಗಳು ಹೀಗೆನ್ನಲು ನೀನು ದಯೆಗೊಂಡು ನಿನ್ನ ದೇಹವನ್ನು ಉಜ್ಜಿದೆ.

೩೦. ಆಗ ನಿನ್ನ ದೇಹದಿಂದ ಕೊಳೆಯುಂಟಾಗಲು ಅದರಿಂದ ನಾಲ್ಕು ತೋಳುಗಳುಳ್ಳವನೂ ಆನೆಯ ಮುಖವುಳ್ಳವನೂ ಆದ ಕಪರ್ದಿಯು ಜನಿಸಿದನು.

೩೧. ಬಳಿಕ ದಯಾಶಾಲಿನಿಯಾದ ನೀನು ದೇವತೆಗಳನ್ನೆಲ್ಲ ಕುರಿತು, "ನಿಮಗೆ ಹಿತವನ್ನುಂಟುಮಾಡಲು ಇವನನ್ನು ಸೃಷ್ಟಿಸಿರುವೆನು.

೩೨–೩೩. ಇವನು ಪ್ರಾಣಿಗಳಿಗೆ ಅನೇಕ ವಿಘ್ನಗಳನ್ನುಂಟುಮಾಡುವನು. ಅದರಿಂದ ಮೋಹಗೊಂಡವರೂ, ಕಾಮದಿಂದ ನಷ್ಟವಾದ ಬುದ್ಧಿಯುಳ್ಳವರೂ ಆದ ಮಾನವರು ಸೋಮನಾಥನನ್ನು ನೋಡದೆ ನರಕವನ್ನು ಹೊಂದುವರು" ಎಂದು ಹೇಳಿದೆ.

೩೪. ದೇವತೆಗಳು ನಿನ್ನೀ ಮಾತನ್ನು ಕೇಳಿ ಸಂತೋಷಗೊಂಡು ಮನುಷ್ಯರಿಂದುಂಟಾದ ಭಯವನ್ನು ತ್ಯಜಿಸಿ ತಂತಮ್ಮ ಸ್ಥಾನವನ್ನು ಸೇರಿದರು.

೩೫. ತರುವಾಯ ಗಜಾಸ್ಯನು ನಿನ್ನನ್ನು ಕುರಿತು ವಿನಯದಿಂದ, "ಓ ವಿಶಾಲಾಕ್ಷಿಯಾದ ದೇವಿಯೆ ! ನಾನೀಗ ಏನನ್ನು ಮಾಡಲಿ. ಅಪ್ಪಣೆಮಾಡು", ಎಂದನು.

ಶ್ರೀ ಭಗವತ್ಯುವಾಚ :—

ಗಚ್ಛ ಪ್ರಾಭಾಸಿಕಂ ಕ್ಷೇತ್ರಂ ಯತ್ರ ಸನ್ನಿಹಿತೋ ಹರಃ ।
ತದ್ರಕ್ಷ ಮಾನುಷಾಣಾಂ ಚ ಯಥಾ ನಾಽಽಯಾತಿ ಗೋಚರಂ ॥ ೩೬ ॥
ಲಿಂಗಂ ತು ದೇವದೇವಸ್ಯ ಸ್ಥಾಪಿತಂ ಶಶಿನಾ ಸ್ವಯಂ ।
ಭವತ್ಯಾದೇಶಿತೋ ನಿತ್ಯಂ ನೃಣಾಂ ವಿಘ್ನಂ ಕರೋತಿ ಯಃ ॥ ೩೭ ॥
ಪ್ರಸ್ಥಿತಂ ಪುರುಷಂ ದೃಷ್ಟ್ವಾ ಸೋಮನಾಥಂ ಪ್ರತಿ ಪ್ರಭುಂ ।
ಸ ಕರೋತಿ ಮಹಾವಿಘ್ನಂ ಕಪರ್ದೀ ಲೋಕಪೂಜಿತಃ ॥ ೩೮ ॥
ಪುತ್ರದಾರಗೃಹಕ್ಷೇತ್ರಧನಧಾನ್ಯಸಮುದ್ಭವಂ ।
ಜನಯೇತ್ಸ ಮಹಾಮೋಹಂ ತತಃ ಪಶ್ಯತಿ ನೋ ಹರಂ ॥ ೩೯ ॥
ಅಥವಾ ಗಡುಗಂಡಾದಿವ್ಯಾಧಿಂ ಚೈವ ಸಮುತ್ಸೃಜೇತ್ ।
ತೈರ್ಗ್ರಸ್ತಃ ಪುರುಷೋ ಮೋಹಾನ್ನ ಪಶ್ಯತಿ ತತೋ ಹರಂ ॥ ೪೦ ॥
ತಸ್ಮಾತ್ಸರ್ವಪ್ರಯತ್ನೇನ ಸೋಮೇಶ್ವರಪರೀಪ್ಸಯಾ ।
ಸ ನಿತ್ಯಂ ಪೂಜನೀಯಸ್ತು ಸ್ಮರ್ತವ್ಯಸ್ತು ದಿವಾನಿಶಂ ॥ ೪೧ ॥

---

೩೬. ಪಾರ್ವತಿಯು ಹೇಳುತ್ತಾಳೆ :—ನೀನು ಶಿವನು ಸನ್ನಿಹಿತನಾಗಿರುವ ಪ್ರಾಭಾಸಿಕ ಕ್ಷೇತ್ರಕ್ಕೆ ಹೋಗು. ಅವನನ್ನು ಮನುಷ್ಯರ ದೃಷ್ಟಿಗೆ ಬೀಳದಂತೆ ಕಾಪಾಡು.

೩೭. ಚಂದ್ರನು ಮಹೇಶ್ವರಲಿಂಗವನ್ನು ಆ ಕ್ಷೇತ್ರದಲ್ಲಿ ಸ್ಥಾಪಿಸಿರುವನು. ನಿನ್ನಿಂದ ಅಪ್ಪಣೆಮಾಡಲ್ಪಟ್ಟ ಕಪರ್ದಿಯು ಯಾವಾಗಲೂ ಮನುಷ್ಯನಿಗೆ ಸೋಮೇಶ್ವರನ ದರ್ಶನವಾಗದಂತೆ ವಿಘ್ನವನ್ನುಂಟುಮಾಡುವನು.

೩೮. ಲೋಕಪೂಜ್ಯನಾದ ಕಪರ್ದಿಯು ಸೋಮನಾಥನನ್ನು ನೋಡಲು ಹೊರಟ ಮನುಷ್ಯನಿಗೆ ಮಹಾವಿಘ್ನವನ್ನೊಡ್ಡುವನು.

೩೯. ಅವನು ಮನುಷ್ಯನಿಗೆ ಮಕ್ಕಳು, ಹೆಂಡತಿ, ಮನೆ, ಹೊಲ, ಧನ, ಧಾನ್ಯಗಳಲ್ಲಿ ಮೋಹವನ್ನುಂಟುಮಾಡುವನು. ಅದರಿಂದ ಮನುಷ್ಯನು ಸೋಮನಾಥನನ್ನು ನೋಡುವುದಿಲ್ಲ.

೪೦. ಅಥವಾ ಆತನು ಗಡುಗಂಡ ಮೊದಲಾದ ರೋಗಗಳನ್ನುಂಟುಮಾಡುವನು. ಅದರಿಂದ ನರಳಿ ಮೋಹಗೊಂಡ ಮಾನವನು ಸೋಮನಾಥನ ದರ್ಶನವನ್ನು ಮಾಡುವುದಿಲ್ಲ.

೪೧. ಆದುದರಿಂದ ಸೋಮೇಶ್ವರನನ್ನು ನೋಡಲಿಚ್ಛಿಸುವವನು ಸಕಲ ಪ್ರಯತ್ನದಿಂದಲೂ ಆ ಕಪರ್ದಿಯನ್ನು ಯಾವಾಗಲೂ ಪೂಜಿಸುತ್ತ ಸ್ಮರಿಸುತ್ತಿರಬೇಕು

ಸ್ತೋತ್ರೇಣಾನೇನ ದೇವೇಶಿ ಸರ್ವವಿಘ್ನಾಂತಕೇನ ವೈ ।
ಸಮಾರಾಧ್ಯ ಗಣಾಧ್ಯಕ್ಷಃ ಪ್ರಭಾಸಕ್ಷೇತ್ರರಕ್ಷಕಃ ॥ ೪೨ ॥
ತತ್ತೇಽಹಂ ಸಂಪ್ರವಕ್ಷ್ಯಾಮಿ ಸ್ತೋತ್ರಂ ತದ್ವಿಘ್ನಮರ್ದನಂ ।
ಕಪರ್ದಿನೋ ಮಹಾದೇವಿ ಸಾವಧಾನಾಽವಧಾರಯ ॥ ೪೩ ॥
ಓಂ ನಮೋ ವಿಘ್ನರಾಜಾಯ ನಮಸ್ತೇಽಸ್ತು ಕಪರ್ದಿನೇ ।
ನಮೋ ಮಹೋಗ್ರದಂಷ್ಟ್ರಾಯ ಪ್ರಭಾಸಕ್ಷೇತ್ರವಾಸಿನೇ ॥ ೪೪ ॥
ಕಪರ್ದಿನಂ ನಮಸ್ಕೃತ್ಯ ಯಾತ್ರಾ ನಿರ್ವಿಘ್ನಹೇತವೇ ।
ಸ್ತೋಷ್ಯೇಽಹಂ ವಿಘ್ನರಾಜಾನಂ ಸಿದ್ಧಿಬುದ್ಧಿಪ್ರಿಯಂ ಶುಭಂ ॥ ೪೫ ॥
ಮಹಾಗಣಪತಿಂ ಶೂರಮಜಿತಂ ಜಯವರ್ಧನಂ ।
ಏಕದಂತಂ ದ್ವಿದಂತಂ ಚ ಚತುರ್ದಂತಂ ಚತುರ್ಭುಜಂ ॥ ೪೬ ॥
ತ್ರ್ಯಕ್ಷಂ ಚ ಶೂಲಹಸ್ತಂ ಚ ರಕ್ತನೇತ್ರಂ ವರಪ್ರದಂ ।
ಅಜೇಯಂ ಶಂಕುಕರ್ಣಂ ಚ ಪ್ರಚಂಡಂ ದಂಡನಾಯಕಂ ।
ಆಯಸ್ಕದಂಡಿನಂ ಚೈವ ಹುತವಕ್ತ್ರಂ ಹುತಪ್ರಿಯಂ ॥ ೪೭ ॥

---

೪೨. ದೇವೇಶಿ ! ಪ್ರಭಾಸಕ್ಷೇತ್ರವಾಸಿಯಾದ ಆ ಗಣಾಧ್ಯಕ್ಷನನ್ನು ಸಕಲ ವಿಘ್ನಗಳನ್ನು ನಿವಾರಿಸುವ ಈ ಸ್ತೋತ್ರದಿಂದ ಆರಾಧಿಸಬೇಕು.

೪೩. ವಿಘ್ನವನ್ನು ಪರಿಹರಿಸುವ ಕಪರ್ದಿಯ ಆ ಸ್ತೋತ್ರವನ್ನು ನಿನಗೆ ಹೇಳುವೆನು. ನೀನು ಅದನ್ನು ಸಾವಧಾನದಿಂದ ಕೇಳು.

೪೪. "ವಿಘ್ನಗಳಿಗೊಡೆಯನೂ, ಉಗ್ರವಾದ ದಾಡೆಯುಳ್ಳವನೂ, ಪ್ರಭಾಸ ಕ್ಷೇತ್ರವಾಸಿಯೂ ಆದ ಕಪರ್ದಿಗೆ ನಮಸ್ಕಾರವು.

೪೫. ನಾನು ಹೀಗೆ ಕಪರ್ದಿಯನ್ನು ನಮಸ್ಕರಿಸಿ ಯಾತ್ರೆಯು ನಿರ್ವಿಘ್ನವಾಗಿ ನೆರವೇರುವುದಕ್ಕಾಗಿ ಸಿದ್ಧಿಬುದ್ಧಿಗಳಿಗೆ ಪ್ರಿಯನಾದ ಅವನನ್ನು ಸ್ತುತಿಸುವೆನು.

೪೬–೪೮. ಮಹಾಗಣಗಳಿಗೆ ಒಡೆಯನೂ, ಶೂರನೂ, ಅಜೇಯನೂ, ಜಯವನ್ನು ಹೆಚ್ಚಿಸುವವನೂ, ಒಂದು, ಎರಡು, ನಾಲ್ಕು ದಂತಗಳುಳ್ಳವನೂ, ನಾಲ್ಕು ತೋಳುಗಳುಳ್ಳವನೂ, ಮೂರು ಕಣ್ಣುಗಳುಳ್ಳವನೂ, ಶೂಲವನ್ನು ಹಿಡಿದವನೂ, ಕೆಂಪುಕಣ್ಣುಗಳುಳ್ಳವನೂ, ವರವನ್ನು ಕೊಡುವವನೂ, ಶಂಕುವಿನಂತೆ ಕಿವಿಯುಳ್ಳವನೂ, ಭಯಂಕರನೂ, ಶಿಕ್ಷೆಗೆ ಒಡೆಯನೂ, ಕಬ್ಬಿಣದ ದಂಡವುಳ್ಳವನೂ, ಶುದ್ಧವಾದ ಮುಖವುಳ್ಳವನೂ, ಹೋಮದಲ್ಲಿ ಪ್ರೀತಿಯುಳ್ಳವನೂ, ಸಮಸ್ತ ಕಾರ್ಯಗಳಲ್ಲಿ

ಅನರ್ಚಿತೋ ವಿಘ್ನಕರಃ ಸರ್ವಕಾರ್ಯೇಷು ಯೋ ನೃಣಾಂ ।
ತಂ ನಮಾಮಿ ಗಣಾಧ್ಯಕ್ಷಂ ಭೀಮಮುಗ್ರಮುಮಾಸುತಂ ॥ ೪೮ ॥
ಮದವಂತಂ ವಿರೂಪಾಕ್ಷಮಿಭವಕ್ತ್ರಸಮುಪ್ರಭಂ ।
ಧ್ರುವಂ ಚ ನಿಶ್ಚಲಂ ಶಾಂತಂ ತಂ ನಮಾಮಿ ವಿನಾಯಕಂ ॥ ೪೯ ॥
ತ್ವಯಾ ಪೂರ್ವೇಣ ವಪುಷಾ ದೇವಾನಾಂ ಕಾರ್ಯಸಿದ್ಧಯೇ ।
ಗಜರೂಪಂ ಸಮಾಸ್ಥಾಯ ತ್ರಾಸಿತಾಃ ಸರ್ವದಾನವಾಃ ॥ ೫೦ ॥
ಋಷೀಣಾಂ ದೇವತಾನಾಂಚ ನಾಯಕತ್ವಂ ಪ್ರಕಾಶಿತಂ ॥ ೫೧ ॥
ಇತಿ ಸ್ತುತಃ ಸುರೈರಗ್ರೇ ಪೂಜ್ಯಸೇ ತ್ವಂ ಭವಾತ್ಮಜ ।
ತ್ವಾಮಾರಾಧ್ಯ ಗಣಾಧ್ಯಕ್ಷಮಿಭವಕ್ತ್ರಸಮುಪ್ರಭಂ ॥ ೫೨ ॥
ಧ್ರುವಂ ಚ ನಿಶ್ಚಲಂ ಶಾಂತಂ ಪರೀತಂ ವಿಜಯಶ್ರಿಯಾ ।
ಕಾರ್ಯಾರ್ಥಂ ರಕ್ತಕುಸುಮೈ ರಕ್ತಚಂದನವಾರಿಭಿಃ ॥ ೫೩ ॥
ರಕ್ತಾಂಬರಧರೋ ಭೂತ್ವಾ ಚತುರ್ಥ್ಯಾಮರ್ಚಯೇತ್ತು ಯಃ ।
ಏಕಕಾಲಂ ದ್ವಿಕಾಲಂ ವಾ ನಿಯತೋ ನಿಯತಾಽಶನಃ ॥ ೫೪ ॥
ರಾಜಾನಂ ರಾಜಪುತ್ರಂ ವಾ ರಾಜಮಂತ್ರಿಣಮೇವ ಚ ।
ರಾಜ್ಯಂ ವಾ ಸರ್ವವಿಘ್ನೇಶೋ ವಶೀ ಕುರ್ಯಾತ್ಸರಾಷ್ಟ್ರಕಂ ॥ ೫೫ ॥

ಪೂಜಿಸದ ಮಾನವರಿಗೆ ವಿಘ್ನಗಳನ್ನೆಸಗುವವನೂ, ಉಮಾಸುತನೂ ಆದ ಗಣಾಧ್ಯಕ್ಷನನ್ನು ವಂದಿಸುವೆನು.

೪೯. ಮದವಂತನೂ, ವಿರೂಪಾಕ್ಷನೂ, ಆನೆಯಂತೆ ಮುಖದ ಕಾಂತಿಯುಳ್ಳವನೂ, ಸ್ಥಿರನೂ, ಶಾಂತನೂ ಆದ ಆ ವಿನಾಯಕನನ್ನು ವಂದಿಸುತ್ತೇನೆ.

೫೦. ನೀನು ಹಿಂದೆ ದೇವತೆಗಳ ಕಾರ್ಯಸಿದ್ಧಿಗಾಗಿ ಆನೆಯರೂಪವನ್ನು ಧರಿಸಿ ಸಮಸ್ತ ದಾನವರನ್ನು ಭಯಗೊಳಿಸಿರುವೆ.

೫೧. ನೀನು ಋಷಿಗಳಿಗೂ, ದೇವತೆಗಳಿಗೂ ಒಡೆಯನಾಗಿ ಬೆಳಗಿದೆ.

೫೨. ಶಿವನ ತನಯನಾದ ಎಲೈ ಕಪರ್ದಿಯೆ ! ಹೀಗೆ ದೇವತೆಗಳು ಎಲ್ಲಕ್ಕೂ ಮೊದಲು ಗಣಾಧ್ಯಕ್ಷನೂ, ಗಜವಕ್ತ್ರ ಸಮಪ್ರಭನೂ ಆದ ನಿನ್ನನ್ನುಸ್ತುತಿಸಿ ಪೂಜಿಸುತ್ತಿರುವರು.

೫೩–೫೫. ಕೆಂಪುಬಣ್ಣದ ವಸ್ತ್ರವನ್ನು ಧರಿಸಿ ಚತುರ್ಥಿಯದಿನ ಸ್ಥಿರನೂ, ಶಾಂತನೂ, ಜಯಸಂಪತ್ತಿನಿಂದ ಸಹಿತನೂ ಆದ ಗಣೇಶನನ್ನು ಕೆಂಪುಹೂಗಳಿಂದಲೂ, ಕೆಂಪುಗಂಧದ ನೀರಿನಿಂದಲೂ ಒಂದು ಹೊತ್ತು ಅಥವಾ ಎರಡು ಹೊತ್ತು ಮಿತಾಹಾರಿಯೂ, ಜಿತೇಂದ್ರಿಯನೂ ಆಗಿ ಕಾರ್ಯಕ್ಕೋಸ್ಕರ ಪೂಜಿಸಿದವನಿಗೆ ವಿಘ್ನೇಶನು ರಾಜನನ್ನಾಗಲಿ, ರಾಜಪುತ್ರನನ್ನಾಗಲಿ, ಮಂತ್ರಿಯನ್ನಾಗಲಿ, ರಾಜ್ಯವನ್ನಾಗಲಿ ವಶಮಾಡಿಕೊಡುವನು.

ಯತ್ಫಲಂ ಸರ್ವತೀರ್ಥೇಷು ಸರ್ವಯಜ್ಞೇಷು ಯತ್ಫಲಂ ।
ಸ ತತ್ಫಲಮವಾಪ್ನೋತಿ ಸ್ಮೃತ್ವಾ ದೇವಂ ವಿನಾಯಕಂ ॥ ೫೬ ॥
ವಿಷಮಂ ನ ಭವೇತ್ತಸ್ಯ ನ ಸ ಗಚ್ಛೇತ್ಪರಾಭವಂ ।
ನ ಚ ವಿಘ್ನಂ ಭವೇತ್ತಸ್ಯ ಜನೋ ಜಾತಿಸ್ಮರೋ ಭವೇತ್ ॥ ೫೭ ॥
ಯ ಇದಂ ಪಠತಿ ಸ್ತೋತ್ರಂ ಷಡ್ಭಿರ್ಮಾಸೈರ್ವರಂ ಲಭೇತ್ ।
ಸಂವತ್ಸರೇಣ ಸಿದ್ಧಿಂ ಚ ಲಭತೇ ನಾತ್ರ ಸಂಶಯಃ ॥ ೫೮ ॥
ಪ್ರಸಾದಾದ್ದರ್ಶನಂ ಯಾತಿ ತಸ್ಯ ಸೋಮೇಶ್ವರಃ ಪ್ರಭುಃ ॥ ೫೯ ॥
ಕಪರ್ದಾಕಾರಮುದರಂ ಯತೋಽಸ್ಯ ಸಮುದಾಹೃತಂ ।
ತತೋಽಸ್ಯ ನಾಮ ಜಾನೀಹಿ ಕಪರ್ದೀತಿ ಮಹಾತ್ಮನಃ ॥ ೬೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಪರ್ದಿವಿನಾಯಕಮಾಹಾತ್ಮ್ಯವರ್ಣನಂ ನಾಮ
॥ ಅಷ್ಟತ್ರಿಂಶೋಽಧ್ಯಾಯಃ ॥

---

೫೬. ವಿನಾಯಕನನ್ನು ಸ್ಮರಿಸಿದವನು ಸರ್ವತೀರ್ಥಗಳ ಮತ್ತು ಸಕಲ ಯಜ್ಞಗಳ ಫಲವನ್ನು ಪಡೆಯುವನು.

೫೭. ಅವನಿಗೆ ಕಷ್ಟವೂ, ಅಪಜಯವೂ, ವಿಘ್ನಗಳೂ ಉಂಟಾಗುವುದಿಲ್ಲ. ಅವನು ತನ್ನ ಹಿಂದಿನ ಜನ್ಮದ ವೃತ್ತಾಂತವನ್ನು ಬಲ್ಲವನಾಗುವನು.

೫೮. ಈ ಸ್ತೋತ್ರವನ್ನು ಪಠಿಸಿದವನು ಆರು ತಿಂಗಳಲ್ಲಿ ವರವನ್ನು ಪಡೆಯುತ್ತಾನೆ. ಒಂದು ವರ್ಷದಲ್ಲಿ ಇಷ್ಟಸಿದ್ಧಿಯನ್ನು ಹೊಂದುವನು. ಈ ವಿಷಯದಲ್ಲಿ ಸಂದೇಹವಿಲ್ಲ.

೫೯. ಈ ಕಪರ್ದಿಯ ಅನುಗ್ರಹದಿಂದ ಸೋಮೇಶ್ವರನು ತನ್ನ ದರ್ಶನವನ್ನು ಕೊಡುವನು.

೬೦. ಇವನ ಹೊಟ್ಟೆಯು ಕಪರ್ದದ (ಕವಡೆಯ) ಆಕಾರವುಳ್ಳುದಾದ್ದರಿಂದ ಇವನಿಗೆ ಕಪರ್ದಿಯೆಂದು ಹೆಸರಾಯಿತು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಪರ್ದಿವಿನಾಯಕಮಾಹಾತ್ಮ್ಯವರ್ಣನವೆಂಬ
ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಚತ್ವಾರಿಂಶೋಽಧ್ಯಾಯಃ

ಕೇದಾರೇಶ್ವರಲಿಂಗಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ಸಂಪೂಜ್ಯ ವಿಧಿನಾ ದೇವದೇವಂ ಕಪರ್ದಿನಂ ।
ತತೋ ಗಚ್ಛೇನ್ಮಹಾದೇವಿ ಲಿಂಗಂ ಕೇದಾರಸಿಂಸ್ಥಿತಂ ॥ ೧ ॥
ತಸ್ಯೈವಾಗ್ನೇಯಭಾಗಸ್ಥಂ ಭೀಮೇಶ್ವರಸಮೀಪಗಂ ।
ಸ್ವಯಂಭೂತಂ ಮಹಾದೇವಿ ಕಲ್ಪಲಿಂಗಂ ಮಮ ಪ್ರಿಯಂ ॥ ೨ ॥
ಮಯಾ ಸಂಪೂಜಿತಂ ದೇವಿ ವೃದ್ಧಿಲಿಂಗಂ ಮಹಾಪ್ರಭಂ ।
ನಿರಾಹಾರಸ್ತು ಯಸ್ತತ್ರ ಕರೋತ್ಯೇಕಂ ಪ್ರಜಾಗರಂ ॥ ೩ ॥
ಚತುರ್ದಶ್ಯಾಂ ವಿಶೇಷೇಣ ತಸ್ಯ ಲೋಕಾಃ ಸನಾತನಾಃ ।
ರುದ್ರೇಶ್ವರೇತಿ ದೇವಸ್ಯ ತ್ವಾಸೀನ್ನಾಮ ಪುರಾ ಯುಗೇ । ॥ ೪ ॥
ತಿಷ್ಯೇಽಸ್ಮಿಂತು ಪುನಃ ಪ್ರಾಪ್ತೇ ಮ್ಲೇಚ್ಛಸ್ಪರ್ಶಭಯಾತುರಾಃ ।
ಅಸ್ಮಿಂಲ್ಲಿಂಗೇ ಲಯಂ ಯಾತಃ ಕೇದಾರಶ್ಚಾಬ್ಧಿಸನ್ನಿಧೌ ॥ ೫ ॥

ಕನ್ನಡದ ಅನುವಾದ

ಕೇದಾರೇಶ್ವರಲಿಂಗಮಾಹಾತ್ಮ್ಯವರ್ಣನ

೧-೪. ಈಶ್ವರನು ಹೇಳುತ್ತಾನೆ:-ಶಾಸ್ತ್ರರೀತಿಯಿಂದ ಕಪರ್ದಿಯನ್ನು ಪೂಜಿಸಿದ ತರುವಾಯ ಕೇದಾರದಲ್ಲಿರುವುದೂ, ಆ ಕಪರ್ದಿಯ ಆಗ್ನೇಯ ಭಾಗದಲ್ಲಿ ಭೀಮೇಶ್ವರನ ಹತ್ತಿರವಿರುವುದೂ, ಸ್ವಯಂವ್ಯಕ್ತವಾಗಿ ಬೆಳೆಯುತ್ತಿರುವುದೂ, ನಾನು ಪೂಜಿಸಿರುವುದೂ, ಅತಿಶಯ ಕಾಂತಿಯುಳ್ಳದೂ ಆದ ಶಿವಲಿಂಗದೆಡೆಗೆ ಹೋಗಬೇಕು. ಇದಕ್ಕೆ ಹಿಂದಿನ ಯುಗದಲ್ಲಿ ಇದಕ್ಕೆ ರುದ್ರೇಶ್ವರನೆಂಬ ಹೆಸರಿದ್ದಿತು. ಇಲ್ಲಿ ಚತುರ್ದಶೀ ದಿನ ಉಪವಾಸವಿದ್ದು ಜಾಗರಣೆ ಮಾಡಿದವನಿಗೆ ಶಾಶ್ವತ ಲೋಕಗಳು ಲಭಿಸುವುವು.

೫. ಈ ಕಲಿಯುಗವು ಬರಲು ಮ್ಲೇಚ್ಛರು ಮುಟ್ಟುವರೆಂಬ ಭಯದಿಂದ ಸಮುದ್ರದ ಹತ್ತಿರದಲ್ಲಿರುವ ಈ ಲಿಂಗದಲ್ಲಿ ಅಡಗಿರುವುದು.

ತೇನ ಕೇದಾರನಾಮೇತಿ ತಸ್ಯ ಖ್ಯಾತಂ ಧರಾತಲೇ ।
ಮಾಘೇ ಮಾಸಿ ಯತಾಹಾರಃ ಸ್ನಾತ್ವಾ ತು ಲವಣೋದಧೌ ॥ ೬ ॥

ಪದ್ಮಕೇ ತು ಮಹಾಕುಂಡೇ ಮಧ್ಯೇಽಸ್ಯ ಲವಣಾಂಭಸಃ ।
ರುದ್ರೇಶಾದ್ದಕ್ಷಿಣೇ ಭಾಗೇ ಧನುಷಾಂ ದಶಕೇ ಸ್ಥಿತೇ ॥ ೭ ॥

ಸ್ನಾತ್ವಾ ವಿಧಾನತೋ ದೇವಿ ರುದ್ರೇಶಂ ಚಾರ್ಚಯಿಷ್ಯತಿ ।
ಸಮ್ಯಕ್ಕೇದಾರಯಾತ್ರಾಯಾಃ ಫಲಂ ತಸ್ಯ ಭವಿಷ್ಯತಿ ॥ ೮ ॥

ಬ್ರಹ್ಮಹತ್ಯಾದಿಪಾಪಾನಾಂ ಪೂಜನಾನ್ನಾಶನಂ ಮಹತ್ ।
ಅಥ ತಸ್ಯೈವ ದೇವಸ್ಯ ಇತಿಹಾಸಂ ಪುರಾತನಂ ॥ ೯ ॥

ಸರ್ವಕಾಮಪ್ರದಂ ನೃಣಾಂ ಕಥ್ಯತೇ ತೇ ಸುರಪ್ರಿಯೇ ।
ಆಸೀದ್ರಾಜಾ ಪುರಾ ದೇವಿ ಶಶಬಿಂದುರಿತಿ ಶ್ರುತಃ ॥ ೧೦ ॥

ಸಾರ್ವಭೌಮೋ ಮಹೀಪಾಲೋ ವಿಪಕ್ಷಗಣಸೂದನಃ ।
ಕಲಿದ್ವಾಪರಯೋಃ ಸಂಧೌ ಸಂಭೂತಃ ಪೃಥಿವೀಪತಿಃ ॥ ೧೧ ॥

ತಸ್ಯ ಭಾರ್ಯಾಽಭವತ್ಸಾಧ್ವೀ ಪ್ರಾಣೇಭ್ಯೋಽಪಿ ಗರೀಯಸೀ ।
ನ ದೇವೀ ನ ಚ ಗಂಧರ್ವೀ ನಾಸುರೀ ನ ಚ ಪನ್ನಗೀ ॥ ೧೨ ॥

ತಾದೃಗ್ರೂಪಾ ವರಾರೋಹೇ ಯಥಾಽಸ್ಯ ಶುಭಲೋಚನಾ ।
ತಸ್ಯ ಹೇಮಮಯಂ ಪದ್ಮಂ ಶತಪತ್ರಂ ಮನೋರಮಂ ॥ ೧೩ ॥

೬—೧೧. ಅದರಿಂದ ಈ ಲಿಂಗಕ್ಕೆ ಕೇದಾರವೆಂದು ಹೆಸರಾಯಿತು. ಮಾನವನು ಮಾಘ ಮಾಸದಲ್ಲಿ ಉಪವಾಸವಿದ್ದು ಸಮುದ್ರದ ಮಧ್ಯದಲ್ಲಿ ರುದ್ರೇಶ್ವರನ ದಕ್ಷಿಣದಲ್ಲಿ ಹತ್ತು ಬಿಲ್ಲಿನ ದೂರದಲ್ಲಿರುವ ಪದ್ಮಕವೆಂಬ ಮಹಾಕುಂಡದಲ್ಲಿ ಮಿಂದು ವಿಧಿಯಂತೆ ರುದ್ರೇಶ್ವರನನ್ನು ಪೂಜಿಸಿದರೆ ಕೇದಾರ ಯಾತ್ರೆಯ ಫಲವು ಲಭಿಸುವುದು. ಮತ್ತು ಬ್ರಹ್ಮಹತ್ಯೆ ಮೊದಲಾದ ಪಾಪಗಳೂ ನೀಗುವುವು. ಪ್ರಿಯಳೆ! ಮಾನವರಿಗೆ ಸಕಲೇಷ್ಟವನ್ನೀಯುವ ಆ ರುದ್ರೇಶ್ವರನ ಹಿಂದಿನ ಇತಿಹಾಸವನ್ನು ಹೇಳುವೆನು. ಹಿಂದೆ ಕಲಿ ದ್ವಾಪರ ಯುಗಗಳ ಸಂಧಿ ಕಾಲದಲ್ಲಿ ಶತ್ರುಗಳನ್ನು ನಾಶಗೊಳಿಸುವ ಶಶಬಿಂದುವೆಂಬ ಸಾರ್ವಭೌಮನೊಬ್ಬನಿದ್ದನು.

೧೨—೧೩. ಅವನಿಗೆ ದೇವ, ಗಂಧರ್ವ, ಅಸುರ, ನಾಗಸ್ತ್ರೀಯರಲ್ಲಿಲ್ಲದ ಸೌಂದರ್ಯವುಳ್ಳವಳೂ ಪ್ರಾಣಕ್ಕಿಂತಲೂ ಶ್ರೇಷ್ಠಳೂ ಪತಿವ್ರತೆಯೂ ಆದ ಪತ್ನಿಯಿದ್ದಳು. ಅವನು ಆಕಾಶದಲ್ಲಿ ಸಂಚರಿಸುವ ವೇಗವುಳ್ಳ ಸುವರ್ಣ ಕಮಲದಿಂದ ಸ್ವೇಚ್ಛೆಯಾಗಿ

ಖೇಚರಂ ವೇಗಿ ನಿತ್ಯಂ ಚ ತಸ್ಯ ರಾಜ್ಞೋ ಮಹಾತ್ಮನಃ ।
ಸತೇನ ಪರ್ಯಟಂಲ್ಲೋಕಾನ್ ಸರ್ವಾನ್ ದೇವಿ ಸ್ವಕಾಮತಃ ॥ ೧೪ ॥

ಏಕದಾ ಫಾಲ್ಗುನೇ ಮಾಸಿ ಶುಕ್ಲಪಕ್ಷೇ ವರಾನನೇ ।
ಚತುರ್ದಶ್ಯಾಂ ತು ಸಂಪ್ರಾಪ್ತಃ ಪ್ರಭಾಸಕ್ಷೇತ್ರಮುತ್ತಮಂ ॥ ೧೫ ॥
ಅಥಾಽಪಶ್ಯದೃಷೀನ್ ಸರ್ವಾಂಛ್ರೀಸೋಮೇಶಪುರಃಸ್ಥಿತಾನ್ ।
ರಾತ್ರೌ ಜಾಗರಣಾರ್ಥಾಯ ಜಪಹೋಮಪರಾಯಣಾನ್ ॥ ೧೬ ॥
ಸ ದೃಷ್ಟ್ವಾ ಸೋಮನಾಥಂ ತು ಪ್ರಣಿಪತ್ಯ ವಿಧಾನತಃ ।
ಪೂಜಯಾಮಾಸ ಸರ್ವಾಂಸ್ತಾನ್ ಯಥಾರ್ಹಂ ಭಕ್ತಿಸಂಯುತಃ ॥ ೧೭ ॥
ತತಃ ಕೇದಾರಮಾಸಾದ್ಯ ಸಂಸ್ನಾಪ್ಯ ವಿಧಿವತ್ಪ್ರಿಯೇ ।
ಪೂಜಯಿತ್ವಾ ವಿಚಿತ್ರಾಭಿಃ ಪುಷ್ಪಮಾಲಾಭಿರೀಶ್ವರಂ ॥ ೧೮ ॥
ನೈವೇದ್ಯೈರ್ವಿವಿಧೈರ್ವಸ್ತ್ರೈರ್ಭೂಷಣೈಶ್ಚ ಮನೋಹರೈಃ ।
ತತೋಽತ್ರ ಕಾರಯಾಮಾಸ ಜಾಗರಂ ಸುಸಮಾಹಿತಃ ॥ ೧೯ ॥

ತತಸ್ತೇ ಮುನಯಃ ಸರ್ವೇ ಕುತೂಹಲಸಮನ್ವಿತಾಃ ।
ಚ್ಯವನೋ ಯಾಜ್ಞವಲ್ಕ್ಯಶ್ಚ ಶಾಂಡಿಲ್ಯಃ ಶಾಕಟಾಯನಃ ॥ ೨೦ ॥

ಸಕಲ ಲೋಕಗಳಲ್ಲಿ ಸಂಚರಿಸುತ್ತ ಒಂದಾನೊಂದು ದಿನ ಫಾಲ್ಗುಣ ಮಾಸದ ಶುಕ್ಲ ಪಕ್ಷದ ಚತುರ್ದಶಿಯ ದಿನ ಪ್ರಭಾಸಕ್ಷೇತ್ರಕ್ಕೆ ಬಂದನು.

೧೬. ಅಲ್ಲಿ ಅವನು ರಾತ್ರಿ ಶ್ರೀ ಸೋಮೇಶ್ವರನ ಮುಂದೆ ಜಾಗರಣೆಗಾಗಿ ಜಪ ಹೋಮಗಳಲ್ಲಿ ಆಸಕ್ತರಾದ ಋಷಿಗಳನ್ನು ನೋಡಿದನು.

೧೭. ಅವನು ಸೋಮನಾಥನನ್ನು ನೋಡಿ ನಮಸ್ಕರಿಸಿ ಆ ಎಲ್ಲ ಮುನಿಗಳನ್ನೂ ಯಥೋಚಿತವಾಗಿ ಭಕ್ತಿಯಿಂದ ಅರ್ಚಿಸಿದನು.

೧೮–೧೯. ಬಳಿಕ ಅವನು, ಕೇದಾರವನ್ನು ಹೊಂದಿ ವಿಧಿಯಂತೆ ಈಶ್ವರನಿಗೆ ಅಭಿಷೇಕಮಾಡಿ ನಾನಾ ಬಗೆಯ ಹೂವುಗಳಿಂದಲೂ, ನೈವೇದ್ಯದಿಂದಲೂ, ವಸ್ತ್ರ ಭೂಷಣಗಳಿಂದಲೂ ಪೂಜಿಸಿ ಸಾವಧಾನ ಮನಸ್ಸಿನಿಂದ ಜಾಗರಣೆ ಮಾಡಿದನು.

೨೦–೨೧. ಅನಂತರ ಚ್ಯವನ, ಯಾಜ್ಞವಲ್ಕ್ಯ, ಶಾಂಡಿಲ್ಯ, ಶಾಕಟಾಯನ, ಪೈಙ್ಗ್ಯ, ಜೈಮಿನಿ ಕ್ರೌಂಚ, ನಾರದ, ಪರ್ವತ, ಶಿಲ ಮೊದಲಾದ ಮುನಿಗಳು

ರೈಭ್ಯೋಽಥ ಜೈಮಿನಿಃ ಕ್ರೌಂಚೋ ನಾರದಃ ಪರ್ವತಃ ಶಿಲಃ
ಮಾರ್ಕಂಡಂ ಪುರತಃ ಕೃತ್ವಾ ಜಗ್ಮುಸ್ತಸ್ಯ ಸಮೀಪತಃ || ೨೧ ||
ಚಕ್ರುಃ ಕಥಾಃ ಸುವಿಚಿತ್ರಾ ಇತಿಹಾಸಾನಿ ಭೂರಿಶಃ ||
ಕೀರ್ತಯಂತಃ ಸ್ಥಿತಾಸ್ತತ್ರ ಪಪ್ರಚ್ಛು ರಾಜಸತ್ತಮಂ || ೨೨ ||

ಋಷಯ ಊಚುಃ :—

ಕಸ್ಮಾತ್ಸೋಮೇಶ್ವರಂ ದೇವಂ ಪರಿತ್ಯಜ್ಯ ನರಾಧಿಪ ।
ಕೇದಾರಸ್ಯ ಪುರೋಽಕಾರ್ಷೀರ್ಜಾಗರಂ ತದ್ಬ್ರವೀಹಿ ನಃ ।
ನೂನಂ ವೇತ್ಸಿ ಫಲಂ ಚಾಽಸ್ಯ ಲಿಂಗಸ್ಯ ತ್ವಂ ಮಹೋದಯಂ || ೨೩ ||

ರಾಜೋವಾಚ :—

ಶೃಣ್ವಂತು ಬ್ರಾಹ್ಮಣಾಃ ಸರ್ವೇ ಅನ್ಯದೇಹೋದ್ಭವಂ ಮಮ ।
ಪುರಾಽಹಂ ಶೂದ್ರಜಾತೀಯ ಆಸಂ ಬ್ರಾಹ್ಮಣಪೂಜಕಃ || ೨೪ ||
ಸೌರಾಷ್ಟ್ರವಿಷಯೇ ಶುಭ್ರೇ ಧನಧಾನ್ಯಸಮಾಕುಲೇ ।
ಅಥ ಕಾಲಾಂತರೇ ತತ್ರ ಅನಾವೃಷ್ಟಿರಭೂದ್ದ್ವಿಜಾಃ || ೨೫ ||
ತತೋಽಹಂ ಕ್ಷುಧಯಾವಿಷ್ಟಃ ಪ್ರಭಾಸಂ ಕ್ಷೇತ್ರಮಾಸ್ಥಿತಃ ।
ಅಥಾಽಪಶ್ಯಂ ಸರಃ ಶುಭ್ರಂ ಹರಿಣೀಮೂಲಸಂಸ್ಥಿತಂ || ೨೬ ||

ಮಾರ್ಕಂಡ ಮುನಿಯನ್ನು ಮುಂದಿರಿಸಿಕೊಂಡು ಕುತೂಹಲದಿಂದ ಆ ರಾಜನ ಬಳಿಗೆ ಹೋದರು.

೨೨. ಅವರು ಅಲ್ಲಿ ದೊರೆಗೆ ವಿಚಿತ್ರ ಕಥೆಗಳನ್ನೂ, ಅನೇಕ ಇತಿಹಾಸಗಳನ್ನೂ ಹೇಳುತ್ತ ಅವನನ್ನು ಹೀಗೆ ಪ್ರಶ್ನಿಸಿದರು.

೨೩. ಋಷಿಗಳು ಹೇಳುತ್ತಾರೆ:—ದೊರೆಯೆ! ನೀನು ಸೋಮೇಶ್ವರನನ್ನು ತ್ಯಜಿಸಿ ಕೇದಾರೇಶ್ವರನ ಮುಂದೆ ಜಾಗರಣೆಯನ್ನು ಏಕೆ ಮಾಡಿದೆ? ನೀನು ನಿಶ್ಚಯವಾಗಿಯೂ, ಇದರ ಫಲವನ್ನೂ, ಈ ಶಿವಲಿಂಗದ ಮಾಹಾತ್ಮ್ಯವನ್ನೂ ತಿಳಿದಿರುವೆ. ಅದನ್ನು ನಮಗೆ ಹೇಳು.

೨೪—೨೫. ರಾಜನು ಹೇಳುತ್ತಾನೆ:—ಎಲೈ ಬ್ರಾಹ್ಮಣರೇ! ಇದು ನನ್ನ ಮತ್ತೊಂದು ಜನ್ಮದ ವೃತ್ತಾಂತ; ಕೇಳಿರಿ. ನಾನು ಹಿಂದೆ ಸೌರಾಷ್ಟ್ರದೇಶದಲ್ಲಿ ಧನಧಾನ್ಯಗಳಿಂದ ತುಂಬಿದ ಶೂದ್ರರ ಕುಲದಲ್ಲಿ ಹುಟ್ಟಿ ಬ್ರಾಹ್ಮಣರನ್ನು ಪೂಜಿಸುತ್ತಿದ್ದೆನು. ಒಂದಾನೊಂದುವೇಳೆ ಅಲ್ಲಿ ಅನಾವೃಷ್ಟಿಯಾಯಿತು.

೨೬—೨೭. ಬಳಿಕ ನಾನು ಹಸಿವುಗೊಂಡು ಪ್ರಭಾಸಕ್ಷೇತ್ರಕ್ಕೆ ಹೋಗಿ ಆಯಾಸಗೊಂಡವನಾಗಿ ಹರಣೀನದಿಯ ದಡದಲ್ಲಿರುವುದೂ, ಕಮಲ ಸಮೂಹಗಳಿಂದ

ತತ್ರ ರಾಮಸರೋ ನಾಮ ಪದ್ಮಿನೀಷಂಡಮಂಡಿತಂ ।
ಕ್ಷೀರೋದಾಂಬುಧಿಸಂಕಾಶಂ ದೃಷ್ಟ್ವಾ ಸ್ನಾತಃ ಕ್ಷಮಾನ್ವಿತಃ ॥ ೨೭ ॥

ಸಂತರ್ಪ್ಯ ಚ ಪಿತೄನ್ ದೇವಾನ್ ಪೀತ್ವಾ ಸ್ವಚ್ಛಮಥೋದಕಂ ।
ತತೋಽಹಂ ಭಾರ್ಯಯಾ ಪ್ರೋಕ್ತೋ ಗೃಹಾಣೇಮಾನ್ ಸರೋರು-
ಹಾನ್ ॥ ೨೮ ॥

ಏತತ್ಸಮೀಪತೋ ರಮ್ಯಂ ದೃಶ್ಯತೇ ಸ್ಥಾನಮುತ್ತಮಂ ।
ವಿಕ್ರೀಣೀಮೋಽತ್ರ ಗತ್ವಾ ತು ಯೇನ ಸ್ಯಾದ್ಭೋಜನಂ ವಿಭೋ ॥ ೨೯ ॥

ಅಥಾವತೀರ್ಯ ಸಲಿಲಂ ಗೃಹೀತಾನಿ ಮಯಾ ದ್ವಿಜಾಃ ।
ಕಮಲಾನಿ ಸುಭೂರೀಣಿ ಪ್ರಸ್ಥಿತಶ್ಚ ಪುರಂ ಪ್ರತಿ ॥ ೩೦ ॥

ತತ್ರ ಗತ್ವಾ ಚ ರಥ್ಯಾಸು ಚತ್ವರೇಷು ತ್ರಿಕೇಷು ಚ ।
ಪ್ರಫುಲ್ಲಕಮಲಾನ್ಯೇವ ಕ್ರೇತುಂ ನೈ ಮುನಿಸತ್ತಮಾಃ ॥ ೩೧ ॥

ನ ಕಶ್ಚಿತ್ಪ್ರತಿಗೃಹ್ಣಾತಿ ಅಸ್ತಂ ಪ್ರಾಪ್ತೋ ದಿವಾಕರಃ ।
ಪ್ರಾಸಾದಂ ಕಂಚಿದಾಸಾದ್ಯ ಸುಪ್ತೋಽಹಂ ಸಹ ಭಾರ್ಯಯಾ ॥ ೩೨ ॥

ಅಲಂಕೃತವಾಗಿರುವುದೂ, ಕ್ಷೀರಸಮುದ್ರದಂತಿರುವುದೂ ಆದ ರಾಮಸರಸ್ಸನ್ನು ನೋಡಿ ಅಲ್ಲಿ ಮಿಂದೆನು.

೨೮–೨೯. ಅನಂತರ ಪಿತೃಗಳಿಗೂ, ದೇವತೆಗಳಿಗೂ ತರ್ಪಣಮಾಡಿ ಸ್ವಚ್ಛವಾದ ನೀರನ್ನು ಕುಡಿದ ನನ್ನನ್ನು ಕುರಿತು ನನ್ನ ಪತ್ನಿಯು, "ಈ ಕಮಲಗಳನ್ನು ತೆಗೆದುಕೊ. ಇಲ್ಲಿ ಹತ್ತಿರದಲ್ಲಿಯೇ ಮನೋಹರವಾದ ಪ್ರದೇಶವು ಕಾಣುವುದು. ಅಲ್ಲಿ ಈ ತಾವರೆ ಹೂವುಗಳನ್ನು ಮಾರೋಣ. ಅದರಿಂದ ನಮಗೆ ಊಟವಾದೀತು." ಎಂದಳು.

೩೦. ಬ್ರಾಹ್ಮಣರೇ ! ತರುವಾಯ ನಾನು ನೀರಲ್ಲಿಳಿದು ಅನೇಕ ತಾವರೆಹೂವುಗಳನ್ನು ತೆಗೆದುಕೊಂಡು ಪಟ್ಟಣವನ್ನು ಕುರಿತು ಪ್ರಯಾಣಮಾಡಿದೆನು.

೩೧–೩೨. ಅಲ್ಲಿ ಬೀದಿಗಳಲ್ಲಿಯೂ, ಚೌಕಗಳಲ್ಲಿಯೂ, ಮೂರು ದಾರಿ ಸೇರುವ ಸ್ಥಳದಲ್ಲಿಯೂ ಅರಳಿದ ಕಮಲಗಳನ್ನು ತೆಗೆದುಕೊಂಡು ಮಾರುವುದಕ್ಕಾಗಿ ಸಂಚರಿಸಿದರೂ ಯಾರೂ ಕೊಂಡುಕೊಳ್ಳಲಿಲ್ಲ. ಅಷ್ಟರಲ್ಲಿಯೂ ಸೂರ್ಯನು ಮುಳುಗಿದನು. ನಾನು ಒಂದು ದೇವಾಲಯಕ್ಕೆ ಹೋಗಿ ಪತ್ನಿಯೊಡನೆ ಮಲಗಿದನು.

ತತ್ರ ಸುಪ್ತಸ್ಯ ಮೇ ಬುದ್ಧಿಃ ಶ್ರುತ್ವಾ ಗೀತಧ್ವನಿಂ ತದಾ ।
ಸಮುತ್ಪನ್ನಾ ಸಭಾರ್ಯಸ್ಯ ಕ್ಷುಧಾರ್ತಸ್ಯ ವಿಶೇಷತಃ ॥
ನೂನಂ ಜಾಗರಣಂ ಹ್ಯೇತತ್ಕಸ್ಮಿಂಶ್ಚಿದ್ವಿಬುಧಾಲಯೇ ॥ ೩೩ ॥
ಸರೋರುಹಾಣಿ ಚಾದಾಯ ವ್ರಜಾಮ್ಯತ್ರ ಸುರಾಲಯೇ ।
ಯದಿ ಕಶ್ಚಿತ್ಪ್ರಗೃಹ್ಣಾತಿ ಪ್ರಾಣಯಾತ್ರಾ ತತೋ ಭವೇತ್ ॥ ೩೪ ॥
ಅಥೋತ್ಥಾಯ ಸಮಾಯಾತೋ ಹ್ಯತ್ರಾಽಹಂ ಮುನಿಪುಂಗವಾಃ ।
ಅಪಶ್ಯಂಲಿಂಗಮೇತತ್ತು ಪೂಜಿತಂ ಕುಸುಮೈಃ ಶುಭೈಃ ॥ ೩೫ ॥
ರುದ್ರೇಶ್ವರಾಽಭಿಧಮಿದಂ ವೃದ್ಧಲಿಂಗಂ ಸ್ವಯಂಭುವಂ ।
ವೇಶ್ಯಾನಂಗವತೀ ನಾಮ್ನೀ ಶಿವರಾತ್ರಿಪರಾಯಣಾ ॥ ೩೬ ॥
ಜಾಗರ್ತಿ ಪುರತಸ್ತಸ್ಯ ಗೀತನೃತ್ಯೋತ್ಸವಾದಿನಾ ।
ತತಃ ಕಶ್ಚಿನ್ಮಯಾ ದೃಷ್ಟಃ ಕಿಮೇತದ್ರಾತ್ರಿಜಾಗರಂ ॥ ೩೭ ॥
ಕೇಯಂ ಸ್ತ್ರೀ ದೃಶ್ಯತೇಽತ್ಯರ್ಥಂ ಗೀತನೃತ್ಯೋತ್ಸವೇ ರತಾ ।
ಸೋಽಬ್ರವೀಚ್ಛಿವಧರ್ಮೋಕ್ತಾ ಶಿವರಾತ್ರಿಃ ಸುಧರ್ಮದಾ ॥ ೩೮ ॥
ತಾಂ ಚಾನಂಗವತೀ ನಾಮ್ನೀ ವೇಶ್ಯೇಯಂ ಧರ್ಮಸಂಯುತಾ ।
ಜಾಗರ್ತಿ ಪರಮಂ ಶ್ರೇಯಃ ಶಿವರಾತ್ರಿವ್ರತಂ ಶುಭಂ ॥ ೩೯ ॥

೩೩-೩೪. ಅಲ್ಲಿ ಮಲಗಿ ಹಸಿವುಗೊಂಡ ನನಗೆ ಸಂಗೀತದ ಧ್ವನಿಯು ಕೇಳಿಸಿತು. ಯಾವುದೊ ಒಂದು ದೇವಾಲಯದಲ್ಲಿ ಜಾಗರಣೆ ನಡೆಯುತ್ತಿದೆ. ನಾನು ಈ ಕಮಲಗಳನ್ನು ತೆಗೆದುಕೊಂಡು ಅಲ್ಲಿಗೆ ಹೋದರೆ ಯಾರಾದರೂ ಕೊಂಡುಕೊಳ್ಳಬಹುದು. ಅದರಿಂದ ನನ್ನ ಜೀವನವಾಗಬಹುದೆಂದು" ಆಲೋಚಿಸಿದೆನು.

೩೮. ಬಳಿಕ ನಾನು ಎದ್ದು ಇಲ್ಲಿಗೆ ಬಂದು ಹೂವುಗಳಿಂದ ಪೂಜಿತವೂ ಸ್ವಯಂವ್ಯಕ್ತವೂ ಆದ ರುದ್ರೇಶ್ವರವೆಂಬ ಲಿಂಗವನ್ನು ಕಂಡೆನು. ಅದರ ಮುಂದೆ ಅನಂಗವತಿಯೆಂಬ ಸೂಳೆಯು ಶಿವರಾತ್ರಿವ್ರತನಿರತಳಾಗಿ ಗೀತ, ನೃತ್ಯಗಳಿಂದ ಜಾಗರಣೆಮಾಡುತ್ತಿದ್ದಳು. ತರುವಾಯ ನಾನು ಅಲ್ಲಿ ಒಬ್ಬನನ್ನು ಕಂಡು ಈ ರಾತ್ರಿ ಜಾಗರಣೆಯು ಏತಕ್ಕಾಗಿ ನಡೆಯುತ್ತಿದೆ? ಗೀತನೃತ್ಯೋತ್ಸವಗಳಲ್ಲಿ ಆಸಕ್ತಳಾಗಿರುವ ಈ ಹೆಂಗಸಾರು ? –ಎಂದು ಪ್ರಶ್ನಿಸಿದೆನು. ಅವನು " ಈದಿನ ಶಿವಧರ್ಮದಲ್ಲಿ ಹೇಳಲ್ಪಟ್ಟ ಅತಿ ಪುಣ್ಯವನ್ನೀಯುವ ಶಿವರಾತ್ರಿಯು.

೩೬. ಅನಂಗವತಿಯೆಂಬ ಧರ್ಮಿಷ್ಠಳಾದ ಈ ವೇಶ್ಯೆಯು ಅತ್ಯಂತ ಶ್ರೇಯಸ್ಸನ್ನುಂಟುಮಾಡುವ ಶಿವರಾತ್ರಿ ವ್ರತವನ್ನಾಚರಿಸುತ್ತ ಜಾಗರಣೆಮಾಡುತ್ತಿರುವಳು.

ಶಿವರಾತ್ರಿವ್ರತಂ ಹ್ಯೇತದ್ಯಃ ಸಮ್ಯಕ್ಕುರುತೇ ನರಃ ।
ನ ಸ ದುಃಖಮವಾಪ್ನೋತಿ ನ ದಾರಿದ್ರ್ಯಂ ನ ಬಂಧನಂ ॥ ೪೦ ॥
ದುಷ್ಟಂ ಚಾರಿಷ್ಟಯೋಗಂ ವಾ ನ ರೋಗಂ ನ ಭಯಂ ಕ್ವಚಿತ್ ।
ಸುಖಸೌಭಾಗ್ಯಸಂಪನ್ನೋ ಜಾಯತೇ ಸತ್ಕುಲೇ ನರಃ ॥ ೪೧ ॥
ತೇಜಸ್ವೀ ಚ ಯಶಸ್ವೀ ಚ ಸರ್ವಕಲ್ಯಾಣಭಾಜನಂ ।
ಭವೇದಸ್ಯ ಪ್ರಸಾದೇನ ಏವಮಾಹುರ್ಮನೀಷಿಣಃ ॥ ೪೨ ॥

ರಾಜೋವಾಚ :—

ಅಥ ಮೇ ಬುದ್ಧಿರುತ್ಪನ್ನಾ ತದ್ವ್ರತಂ ಪ್ರತಿ ನಿಶ್ಚಲಾ ।
ಚಿಂತಿತಂ ಮನಸಾ ಹ್ಯೇತನ್ಮಯಾ ಬ್ರಾಹ್ಮಣಸತ್ತಮಾಃ ॥ ೪೩ ॥
ಅನ್ನಾಭಾವಾನ್ಮಮೋತ್ಪನ್ನ ಉಪವಾಸೋ ಬಲಾದ್ಯತಃ ।
ತದಹಂ ಪದ್ಮಕೇ ತೀರ್ಥೇ ಸ್ನಾತ್ವಾ ಚ ಲವಣಾಂಭಸಿ ॥ ೪೪ ॥
ಏತೈಃ ಸರೋರುಹೈರ್ದೇವಂ ಪೂಜಯಾಮಿ ಮಹೇಶ್ವರಂ ।
ತತೋ ಮಯಾ ಸಭಾರ್ಯೇಣ ರುದ್ರೇಶಃ ಸಂಪ್ರಪೂಜಿತಃ ॥ ೪೫ ॥

೪೦–೪೨. ಈ ಶಿವರಾತ್ರಿಯ ವ್ರತವನ್ನಾಚರಿಸುವ ಮನುಷ್ಯನು ರುದ್ರೇಶ್ವರನ ಅನುಗ್ರಹದಿಂದ ದುಃಖವನ್ನೂ, ದಾರಿದ್ರ್ಯವನ್ನೂ, ಸಂಸಾರಬಂಧನವನ್ನೂ, ದುಷ್ಟವಾದ ಅರಿಷ್ಟಯೋಗವನ್ನೂ, ಭಯವನ್ನೂ ಹೊಂದುವುದಿಲ್ಲ. ಒಳ್ಳೆಯ ವಂಶದಲ್ಲಿ ಸುಖಸೌಭಾಗ್ಯಗಳಿಂದ ಕೂಡಿ ಜನಿಸುವನು. ತೇಜಸ್ವಿಯೂ, ಕೀರ್ತಿವಂತನೂ ಆಗಿ ಸಮಸ್ತ ಕಲ್ಯಾಣಗಳಿಗೆ ಆಶ್ರಯನಾಗುವನು.” ಎಂದು ಜ್ಞಾನಿಗಳು ಹೇಳುವರು.

೪೩. ರಾಜನು ಹೇಳುತ್ತಾನೆ:—ಬಳಿಕ ನನಗೆ ಆ ವ್ರತವನ್ನಾಚರಿಸಬೇಕೆಂಬ ದೃಢವಾದ ಬುದ್ಧಿಯುಂಟಾಯಿತು. ಬ್ರಾಹ್ಮಣವರ್ಯರೆ! ನಾನು ಮನಸ್ಸಿನಿಂದ ಹೀಗೆ ಆಲೋಚಿಸಿದೆನು.

೪೪–೪೫. “ಅನ್ನವಿಲ್ಲದ್ದರಿಂದ ನಾನು ಬಲಾತ್ಕಾರವಾಗಿ ಉಪವಾಸ ಮಾಡಬೇಕಾಯಿತು. ಆದ್ದರಿಂದ ನಾನು ಈ ಸಮುದ್ರದಲ್ಲಿರುವ ಪದ್ಮಕ ತೀರ್ಥದಲ್ಲಿ ಮಿಂದು ಈ ತಾವರೆ ಹೂವುಗಳಿಂದ ಮಹೇಶ್ವರನನ್ನಾರಾಧಿಸುವೆನು.” ಎಂದಾಲೋಚಿಸಿ ಪತ್ನಿಯೊಡನೆ ರುದ್ರೇಶ್ವರನನ್ನು ಪೂಜಿಸಿದೆನು.

ಪದ್ಮೈಸ್ತೈಶ್ಚ ಭಕ್ತಿಯುಕ್ತೇನ ಸಭಾರ್ಯೇಣ ವಿಶೇಷತಃ ।
ಜಾಗ್ರತ್ಸ್ಥಿತಸ್ತು ದೇವಾಗ್ರೇ ತಾಂ ರಾತ್ರಿಂ ಸಹ ಭಾರ್ಯಯಾ ॥ ೪೭ ॥

ತತಃ ಪ್ರಭಾತಸಮಯ ಉದಿತೇ ಸೂರ್ಯಮಂಡಲೇ ।
ಸಾ ವೇಶ್ಯಾ ಮಾಮುವಾಚೇದಂ ಕಲಧೌತಫಲತ್ರಯಂ ॥ ೪೮ ॥

ಗೃಹಾಣ ಮೂಲ್ಯಂ ಪದ್ಮಾನಾಂ ಗೃಹೀತಂ ಹಿ ಮಯಾ ತತ್ ।
ಸಾತ್ತ್ವಿಕಂ ಭಾವಮಾಸ್ಥಾಯ ಸಭಾರ್ಯೇಣ ದ್ವಿಜೋತ್ತಮಾಃ ॥ ೪೯ ॥

ತತೋ ಭಿಕ್ಷಾಂ ಸಮಾಹೃತ್ಯ ಪ್ರಾಣಯಾತ್ರಾ ಮಯಾ ಕೃತಾ ।
ಕಾಲೇನ ಮಹತಾ ಪ್ರಾಪ್ತಃ ಕಾಲಧರ್ಮಂ ಮುನೀಶ್ವರಾಃ ॥ ೪೯ ॥

ಇಯಂ ಮೇ ದಯಿತಾ ಸಾಧ್ವೀ ಪ್ರಾಣೇಭ್ಯೋಽಪಿ ಗರೀಯಸೀ ।
ಮಮ ದೇಹಂ ಸಮಾದಾಯ ಪ್ರವಿಷ್ಟಾ ಹವ್ಯವಾಹನಂ ॥ ೫೦ ॥

ತತ್ಪ್ರಭಾವಾದಹಂ ಜಾತಃ ಸಾರ್ವಭೌಮೋ ಮಹೀಪತಿಃ ।
ಜಾತಿಸ್ಮರಃ ಸಭಾರ್ಯಸ್ತು ಸತ್ಯಮೇತದ್ದ್ವಿಜೋತ್ತಮಾಃ ॥ ೫೧ ॥

ಏತಸ್ಮಾತ್ಕಾರಣಾದಸ್ಯ ಭಕ್ತಿರ್ಲಿಂಗಸ್ಯ ಚೋಪರಿ ।
ಮಮ ನಿತ್ಯಂ ಸಭಾರ್ಯಸ್ಯ ಸತ್ಯಮೇತದ್ಬ್ರವೀಮಿ ವಃ ॥ ೫೨ ॥

---

೪೭. ಹೀಗೆ ನಾನು ಪತ್ನಿಯೊಡನೆ ಭಕ್ತಿಯಿಂದ ಕಮಲಗಳಿಂದ ಆ ಸ್ವಾಮಿಯನ್ನು ಪೂಜಿಸಿ ಆ ರಾತ್ರಿ ಭಾರ್ಯೆಯೊಡನೆ ಆ ರುದ್ರೇಶ್ವರನ ಮುಂದೆ ಜಾಗರಣೆ ಮಾಡಿದೆನು.

೪೮–೫೦. ತರುವಾಯ ಬೆಳಗ್ಗೆ ಸೂರ್ಯನುದಯಿಸಲು ಆ ವೇಶ್ಯೆಯು ನನ್ನನ್ನು ಕುರಿತು, "ಈ ಕಮಲಗಳಿಗೆ ಬೆಲೆಯಾಗಿ ಈ ಮೂರು ಚಿನ್ನದ ಫಲಗಳನ್ನು ತೆಗೆದುಕೋ" ಎಂದಳು. ನಾನು ಆ ಫಲಗಳನ್ನು ತೆಗೆದುಕೊಳ್ಳದೆ ಸಾತ್ವಿಕನಾಗಿ ಪತ್ನಿಯೊಡನೆ ಭಿಕ್ಷಾಟನೆಮಾಡಿ ಜೀವಿಸಿದೆನು. ಅನಂತರ ಬಹಳ ಕಾಲದ ಮೇಲೆ ನಾನು ಮೃತನಾಗಲು ಪ್ರಾಣಕ್ಕಿಂತಲೂ ಅಧಿಕಳಾದ ಈ ನನ್ನ ಪತಿವ್ರತೆಯಾದ ಸತಿಯು ನನ್ನ ಶರೀರದೊಡನೆ ಬೆಂಕಿಯನ್ನು ಪ್ರವೇಶಿಸಿದಳು.

೫೧. ದ್ವಿಜವರ್ಯರೆ! ಆ ಪುಣ್ಯದಿಂದ ಪತ್ನಿಯಿಂದ ಸಹಿತನಾದ ನಾನು ಪೂರ್ವಜನ್ಮದ ಸ್ಮೃತಿಯುಳ್ಳ ಸಾರ್ವಭೌಮನಾಗಿ ಹುಟ್ಟಿದೆನು.

೫೨. ಈ ಕಾರಣದಿಂದ ಸಭಾರ್ಯನಾದ ನನಗೆ ಈ ಶಿವಲಿಂಗದಲ್ಲಿ ಭಕ್ತಿಯುಂಟಾಗಿರುವುದು. ನಿಜವಾಗಿ ನಿಮಗೆ ಇದನ್ನು ಹೇಳುತ್ತೇನೆ.

ಮಯಾ ಕ್ರಿಯಾವಿಹೀನೇನ ಭಕ್ತಿಬಾಹ್ಯೇನ ಸತ್ತಮಾಃ ।
ವ್ರತಮೇತತ್ಸಮಾಚೀರ್ಣಂ ತಸ್ಯೇದಂ ಸುಮಹತ್ಫಲಂ ॥ ೫೩ ॥

ಅಧುನಾ ಭಕ್ತಿಯುಕ್ತಸ್ಯ ಯಥೋಪಕರಣಾನ್ವಿತಮ್ ।
ಭವಿಷ್ಯೇ ಯತ್ಫಲಂ ಕಿಂಚಿನ್ನೋ ವೇದ್ಮಿ ಚ ಮುನೀಶ್ವರಾಃ ।
ಯೇನ ಸೋಮೇಶಮುತ್ಸೃಜ್ಯ ಅತ್ರಾಽಹಂ ಭಕ್ತಿತತ್ಪರಃ ॥ ೫೪ ॥

ಈಶ್ವರ ಉವಾಚ :—

ಏವಂ ಶ್ರುತ್ವಾ ತು ತೇ ವಿಪ್ರಾ ವಿಸ್ಮಯೋತ್ಫುಲ್ಲಲೋಚನಾಃ ।
ಸಾಧು ಸಾಧ್ವಿತಿ ಜಲ್ಪಂತೋ ರಾಜಾನಾಂ ಸಂಪ್ರಶಂಸಿರೇ ॥ ೫೫ ॥

ಪೂಜಯಾಮಾಸುರನಿಶಂ ಲಿಂಗಂ ತತ್ರ ಸ್ವಯಂಭುವಂ ।
ತತೋಽಸೌ ಪಾರ್ಥಿವಶ್ರೇಷ್ಠೋ ಲಿಂಗಸ್ಯಾಸ್ಯ ಪ್ರಸಾದತಃ ।
ಸಂಸಿದ್ಧಿಂ ಪರಮಾಂ ಪ್ರಾಪ್ತೋ ದುರ್ಲಭಾಂ ತ್ರಿದಶೈರಪಿ ॥ ೫೬ ॥

ಸಾ ಚ ವೇಶ್ಯಾ ಭಗವತೀ ಶಿವರಾತ್ರಿಪ್ರಭಾವತಃ ।
ತಸ್ಯ ಲಿಂಗಸ್ಯ ಮಾಹಾತ್ಮ್ಯಾದ್ರಂಭಾ ನಾಮಾಽಪ್ಸರಾಭವತ್ ॥ ೫೭ ॥

---

೫೩. ಸಾಧುವರ್ಯರೆ ! ಕ್ರಿಯಾಹೀನನೂ, ಭಕ್ತಿಯಿಲ್ಲದವನೂ ಆದ ನಾನು ಈ ವ್ರತವನ್ನಾಚರಿಸಿರುವೆನು. ಇದು ಅದರ ಮಹಾಫಲವು.

೫೪. ಈಗ ನಾನು ಸೋಮೇಶನನ್ನು ಬಿಟ್ಟು ಇಲ್ಲಿ ಭಕ್ತಿಯಿಂದೆಸಗಿದ ಪೂಜೆಯಿಂದ ಮುಂದೆ ಆಗುವ ಫಲವನ್ನರಿಯೆನು.

೫೫. ಇದನ್ನು ಕೇಳಿ ಆ ಬ್ರಾಹ್ಮಣರು ಆಶ್ಚರ್ಯದಿಂದರಳಿದ ಕಣ್ಣುಗಳುಳ್ಳವರಾಗಿ, "ಒಳ್ಳೆಯದು ಒಳ್ಳೆಯದು", ಎಂದು ಹೇಳುತ್ತ ರಾಜನನ್ನು ಹೊಗಳಿದರು.

೫೬. ಅಲ್ಲಿರುವ ಸ್ವಯಂವ್ಯಕ್ತವಾದ ರುದ್ರೇಶ್ವರಲಿಂಗವನ್ನು ಪೂಜಿಸಿದರು. ತರುವಾಯ ಆ ಚಕ್ರವರ್ತಿಯು ರುದ್ರೇಶ್ವರನ ಅನುಗ್ರಹದಿಂದ ದೇವತೆಗಳಿಗೂ ಹೊಂದಲಾಗದ ಉತ್ತಮ ಸಿದ್ಧಿಯನ್ನು ಪಡೆದನು.

೫೭. ಪೂಜ್ಯಳಾದ ಆ ವೇಶ್ಯೆಯೂ ಶಿವರಾತ್ರಿಯ ಪ್ರಭಾವದಿಂದಲೂ, ಆ ರುದ್ರೇಶ್ವರಲಿಂಗದ ಮಾಹಾತ್ಮ್ಯೆಯಿಂದಲೂ ರಂಭೆಯೆಂಬ ಅಪ್ಸರೆಯಾದಳು.

ತಸ್ಮಾತ್ಸರ್ವಪ್ರಯತ್ನೇನ ತಲ್ಲಿಂಗಂ ಪೂಜಯೇದ್ಬುಧಃ ।
ಧರ್ಮಕಾಮಾರ್ಥಮೋಕ್ಷಂ ಚ ಯೋ ವಾಂಛತ್ಯಖಿಲಪ್ರದಂ ॥ ೫೮ ॥

ಇತಿ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಕೇದಾರೇಶ್ವರ
(ರುದ್ರೇಶ್ವರ) ಲಿಂಗಮಾಹಾತ್ಮ್ಯವರ್ಣನಂ ನಾಮ
ಏಕೋನಚತ್ವಾರಿಂಶೋಽಧ್ಯಾಯ

---

೫೮. ಆದುದರಿಂದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಬಯಸುವ ಪ್ರಾಜ್ಞನು ಸಕಲೇಷ್ಟಾರ್ಥಗಳನ್ನೀಯುವ ಆ ಲಿಂಗವನ್ನು ಸಮಸ್ತ ಪ್ರಯತ್ನದಿಂದಾರಾಧಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕೇದಾರೇಶ್ವರ (ರುದ್ರೇಶ್ವರ) ಲಿಂಗಮಾಹಾತ್ಮ್ಯವರ್ಣನವೆಂಬ
ಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಚತ್ವಾರಿಂಶೋऽಧ್ಯಾಯಃ

ಭೀಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶ್ವೇತಕೇತುಪ್ರತಿಷ್ಠಿತಂ ।
ಲಿಂಗಂ ಮಹಾಪ್ರಭಾವಂ ತು ಭೀಮೇನಾರಾಧಿತಂ ಪುರಾ ॥ ೧ ॥
ಕೇದಾರೇಶ್ವರಸಾನ್ನಿಧ್ಯೇ ನಾऽತಿದೂರೇ ವ್ಯವಸ್ಥಿತಂ ।
ಪೂಜಯೇತ್ತದ್ವಿಧಾನೇನ ಕ್ಷೀರಸ್ನಾನಾದಿಭಿಃ ಕ್ರಮಾತ್ ।
ಯಾತ್ರಾಫಲಮಭಿಪ್ರೇಪ್ಸುಃ ಪ್ರೇತ್ಯ ಸ್ವರ್ಗಫಲಾಯ ವೈ ॥ ೨ ॥

ದೇವ್ಯುವಾಚ :—

ಶ್ವೇತಕೇತೋಸ್ತು ಯದ್ದೇವ ಲಿಂಗಂ ಪ್ರೋಕ್ತಂ ತ್ವಯಾ ಮಮ ।
ತಸ್ಯ ಜಾತಂ ಕಥಂ ದೇವ ನಾಮ ಭೀಮೇಶ್ವರೇತಿ ಚ ॥ ೩ ॥
ಕಥಂ ವಿನಿರ್ಮಿತಂ ಪೂರ್ವಂ ತಸ್ಮಿನ್ ದೃಷ್ಟೇ ತು ಕಿಂ ಫಲಂ ॥ ೪ ॥

ಈಶ್ವರ ಉವಾಚ :—

ಆಸೀತ್ತ್ರೇತಾಯುಗೇ ಪೂರ್ವಂ ರಾಜಾ ಸ್ವಾಯಂಭುವೇऽಂತರೇ ।
ಶ್ವೇತಕೇತುರಿತಿ ಖ್ಯಾತೋ ರಾಜರ್ಷಿಃ ಸುಮಹಾತಪಾಃ ॥ ೫ ॥

ಕನ್ನಡದ ಅನುವಾದ

ಭೀಮೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಿನೆ :—ದೇವಿ ! ಯಾತ್ರೆಯ ಫಲವನ್ನೂ, ಸ್ವರ್ಗವನ್ನೂ ಅಪೇಕ್ಷಿಸುವ ಮಾನವನು ಬಳಿಕ ಕೇದಾರೇಶ್ವರನ ಸಮೀಪದಲ್ಲಿರುವ ಹಿಂದೆ ಶ್ವೇತಕೇತುವು ಪ್ರತಿಷ್ಠೆಮಾಡಿದ ಭೀಮನು ಪೂಜಿಸಿರುವ ಅತಿಶಯಮಾಹಾತ್ಮ್ಯವುಳ್ಳ ಶಿವಲಿಂಗವನ್ನು ಪೂಜಿಸಬೇಕು.

೩. ದೇವಿಯು ಹೇಳುತ್ತಾಳೆ :—ಸ್ವಾಮಿ ! ಶ್ವೇತಕೇತುವು ಶಿವಲಿಂಗವನ್ನು ಪ್ರತಿಷ್ಠೆಮಾಡಿದನೆಂದು ಹೇಳಿದೆ. ಆ ಲಿಂಗಕ್ಕೆ ಭೀಮೇಶ್ವರವೆಂದು ಹೆಸರಾಗಲು ಕಾರಣವೇನು ?

೪. ಆ ಶಿವಲಿಂಗವು ಹಿಂದೆ ಹೇಗೆ ನಿರ್ಮಿಸಲ್ಪಟ್ಟಿರುವುದಷ್ಟೆ. ಅದನ್ನು ದರ್ಶನ ಮಾಡಿದ್ದರಿಂದಾಗುವ ಫಲವೇನು ?

೫. ಈಶ್ವರನು ಹೇಳುತ್ತಾನೆ :—ಹಿಂದೆ ತ್ರೇತಾಯುಗದಲ್ಲಿ ಸ್ವಾಯಂಭುವ ಮನ್ವಂತರದಲ್ಲಿ ಅತ್ಯಂತ ತಪಸ್ವಿಯಾದ ಶ್ವೇತಕೇತುವೆಂಬ ಪ್ರಸಿದ್ಧ ರಾಜರ್ಷಿಯಿದ್ದನು.

ಸ ಪ್ರಭಾಸಂ ಸಮಾಗತ್ಯ ಪ್ರತಿಷ್ಠಾಪ್ಯ ಮಹೇಶ್ವರಂ ।
ತಪಸ್ತೇಪೇ ಸುವಿಪುಲಂ ಸಾಗರಸ್ಯ ತಟೇ ಶುಭೇ ॥ ೬ ॥
ಪಂಚಾಗ್ನಿಸಾಧಕೋ ಗ್ರೀಷ್ಮೇ ವರ್ಷಾಸ್ವಾಕಾಶಗಸ್ತಥಾ ।
ಹೇಮಂತೋ ಜಲಮಧ್ಯಸ್ಥೋ ನವ ವರ್ಷಾಣಿ ಪಂಚ ಚ ॥ ೭ ॥
ತತಶ್ಚತುರ್ದಶೇ ದೇವಿ ತಪಸಾ ನಿಯಮೇನ ಚ ।
ತುಷ್ಟೇನೋಕ್ತೋ ಮಯಾ ದೇವಿ ವರಂ ವರಯ ಸುವ್ರತ ॥ ೮ ॥
ಶ್ವೇತಕೇತುರಥೋವಾಚ ಭಕ್ತಿಂ ದೇಹಿ ಸುನಿಶ್ಚಲಾಂ ।
ಸ್ಥಾನೇಽಸ್ಮಿನ್ ಸ್ಥೀಯತಾಂ ದೇವ ಯದಿ ತುಷ್ಟೋಽಸಿ ಮೇ ಪ್ರಭೋ ॥೯॥
ಏವಮಸ್ತ್ವಿತ್ಯಥೋಕ್ತ್ವಾಽಹಂ ತಸ್ಯಾಂತರ್ಧಾನಮಾಗತಃ ।
ತತಃ ಕಾಲಾಂತರೇಽತೀತೇ ಶ್ವೇತಕೇತುರ್ಮಹಾಪ್ರಭಃ ॥ ೧೦ ॥
ಸಮಾರಾಧ್ಯ ತ್ವಿದಂ ಲಿಂಗಂ ಪ್ರಾಪ್ತಃ ಸ್ಥಾನಂ ಮಹೋದಯಂ ।
ತತೋ ಜಾತಂ ನಾಮ ತಸ್ಯ ಶ್ವೇತಕೇತ್ವೀಶ್ವರಂ ಶ್ರುತಂ ॥ ೧೧ ॥
ಅಗ್ನಿತೀರ್ಥೇ ಮಹಾಪುಣ್ಯೇ ಸರ್ವಪಾತಕನಾಶನೇ ।
ತತಃ ಕಲಿಯುಗೇ ಪ್ರಾಪ್ತೇ ಭ್ರಾತೃಭಿಶ್ಚ ಸಮನ್ವಿತಃ ॥ ೧೨ ॥

೬–೭. ಅವನು ಪ್ರಭಾಸಕ್ಷೇತ್ರಕ್ಕೆ ಬಂದು ಮಹೇಶ್ವರನನ್ನು ಪ್ರತಿಷ್ಠೆಮಾಡಿ ಸಮುದ್ರದ ದಡದಲ್ಲಿ ಗ್ರೀಷ್ಮಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿಯೂ, ಮಳೆಗಾಲದಲ್ಲಿ ಬಯಲಿನಲ್ಲಿಯೂ, ಹೇಮಂತರ್ತುವಿನಲ್ಲಿ ನೀರಿನ ನಡುವೆಯೂ ನಿಂತು ಹದಿನಾಲ್ಕು ವರ್ಷಕಾಲ ಅತಿಶಯವಾದ ತಪಸ್ಸನ್ನಾಚರಿಸಿದನು.

೮. ಬಳಿಕ ಹದಿನಾಲ್ಕನೆಯ ವರ್ಷದಲ್ಲಿ ತಪಸ್ಸಿನಿಂದಲೂ ನಿಯಮದಿಂದಲೂ ಸಂತುಷ್ಟನಾದ ನಾನು, ವರವನ್ನು ಕೇಳಿಕೊ, ಎಂದೆನು.

೯. ಶ್ವೇತಕೇತುವು "ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ ನನಗೆ ನಿನ್ನಲ್ಲಿ ದೃಢ ಭಕ್ತಿಯನ್ನು ನೀಡು. ನೀನು ಈ ಸ್ಥಳದಲ್ಲಿ ನೆಲಸು" ಎಂದನು.

೧೦–೧೪. ನಾನು ಹಾಗೆಯೇ ಆಗಲೆಂದು ಹೇಳಿ ಅದೃಶ್ಯನಾದೆನು. ಬಳಿಕ ಕಾಲ ಕ್ರಮದಿಂದ ಶ್ವೇತಕೇತುವು ಈ ಶಿವಲಿಂಗವನ್ನು ಪೂಜಿಸಿ ಉತ್ತಮಸ್ಥಾನವನ್ನು ಪಡೆದನು. ಅನಂತರ ಪುಣ್ಯಕರವಾದ ಅಗ್ನಿತೀರ್ಥದಲ್ಲಿರುವ ಈ ಲಿಂಗಕ್ಕೆ ಶ್ವೇತಕೇತ್ವೀಶ್ವರ ಎಂದು ಹೆಸರಾಯಿತು. ಅನಂತರ ಕಲಿಯುಗವು ಬರಲು ಆಜಾನುಬಾಹುವೂ, ವಾಯುತನಯನೂ, ನನ್ನ ಅಂಶದಿಂದ ಹುಟ್ಟಿರುವವನೂ ಆದ ಭೀಮಸೇನನು

ತೀರ್ಥಯಾತ್ರಾಪ್ರಸಂಗೇನ ಯದಾ ಪ್ರಭಾಸಮಾಗತಃ ।
ಭೀಮಸೇನೋ ಮಹಾಬಾಹುರ್ವಾಯುಪುತ್ರೋ ಮಮಾಂಶಜಃ ॥ ೧೩ ॥
ತಲ್ಲಿಂಗಂ ಪೂಜಯಾಮಾಸ ಕೃತ್ವಾ ಜಾಗೇಶ್ವರಂ ನಿಜಂ ।
ಮತ್ವಾ ತೀರ್ಥಂ ಮಹಾಪುಣ್ಯಂ ಸಾಗರಸ್ಯ ಸಮೀಪತಃ ॥ ೧೪ ॥
ತದಾ ಪ್ರಭೃತಿ ಭೀಮೇಶಂ ಪುನರ್ನಾಮಾಭವಚ್ಛುಭಂ ।
ದೃಷ್ಟಮಾತ್ರೇಣ ತೇನೈವ ಸಕೃಲ್ಲಿಂಗೇನ ಭಾಮಿನಿ ॥ ೧೫ ॥
ಅನ್ಯಜನ್ಮಕೃತಾನ್ಯೇವ ಪಾಪಾನಿ ಸುಬಹೂನ್ಯಪಿ ।
ನಾಶಮಾಯಾಂತಿ ಸರ್ವಾಣಿ ತಥೈವಾಽಮುಷ್ಮಿಕಾಣಿ ತು ॥ ೧೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೀಮೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತ್ವಾರಿಂಶೋಽಧ್ಯಾಯಃ ॥

ಸಹೋದರರೊಡನೆ ಯಾತ್ರೆಗಾಗಿ ಪ್ರಭಾಸಕ್ಷೇತ್ರಕ್ಕೆ ಬಂದನು. ಅವನು ಸಮುದ್ರದ ಸಮೀಪದಲ್ಲಿರುವ ಜಾಗೇಶ್ವರ ತೀರ್ಥಕ್ಕೆ ಹೋಗಿ ಆ ಶಿವಲಿಂಗವನ್ನು ಪೂಜಿಸಿದನು.

೧೫–೧೬. ಅದು ಮೊದಲ್ಗೊಂಡು ಆ ಲಿಂಗಕ್ಕೆ ಭೀಮೇಶವೆಂಬ ಹೆಸರಾಯಿತು ಪ್ರಿಯಳೆ! ಆ ಲಿಂಗವನ್ನು ಒಂದುಸಾರಿ ನೋಡುವುದರಿಂದಲೇ ಇತರ ಜನ್ಮದಲ್ಲಿ ಮಾಡಿದ ಪಾಪಗಳೂ ಆಮುಷ್ಮಿಕಪಾಪಗಳೂ ಎಲ್ಲವೂ ನಾಶವಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬುಧೇಶ್ವರಮಾಹಾತ್ಮ್ಯವರ್ಣನವೆಂಬ
ನಲವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಏಕಚತ್ವಾರಿಂಶೋಽಧ್ಯಾಯಃ ॥

ಭೈರವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ಪೂರ್ವದಿಗ್ಭಾಗೇ ಸರಸ್ವತ್ಯಾ ಪ್ರತಿಷ್ಠಿತಂ ।
ಲಿಂಗಂ ಮಹಾಪ್ರಭಾವಂ ತು ಸೋಮೇಶಾದಗ್ನಿಗೋಚರೇ ॥ ೧ ॥
ಭೈರವೇಶ್ವರರೂಪಸ್ತು ವಾಡವಃ ಕುಂಭಸಂಸ್ಥಿತಃ ।
ಯತ್ರ ದೇವ್ಯಾ ಸಮಾನೀತಃ ಸಾಗರಸ್ಯ ಸಮೀಪತಃ ॥ ೨ ॥
ವಿಶ್ರಾಮಾರ್ಥಂ ಕ್ಷಣಂ ಮುಕ್ತ್ವಾ ದೇವ್ಯಾ ಲಿಂಗಂ ಪ್ರತಿಷ್ಠಿತಂ ।
ಸಮಭ್ಯರ್ಚ್ಯ ವಿಧಾನೇನ ಗೃಹೀತ್ವಾ ವಡವಾನಲಂ ।
ಸಮುದ್ರಮಧ್ಯೇ ಚಿಕ್ಷೇಪ ದೇವಾನಾಂ ಹಿತಕಾಮ್ಯಯಾ ॥ ೩ ॥
ತತೋ ಹೃಷ್ಟತರಾ ದೇವಾಃ ಶಂಖದುಂದುಭಿನಿಃಸ್ವನೈಃ ।
ಪೂರಯಂತೋಽಂಬರಂ ದೇವೀಮೀಡಿರೇ ಪುಷ್ಪವೃಷ್ಟಿಭಿಃ ॥ ೪ ॥
ದೇವಮಾತೇತಿ ತೇ ನಾಮ ಕೃತ್ವೋಚುಸ್ತಾಂ ತದಾ ಸುರಾಃ ।
ಕೃತ್ವಾ ತು ಭೈರವಂ ಕಾರ್ಯಮಸಾಧ್ಯಂ ದೇವದಾನವೈಃ ॥ ೫ ॥

ಕನ್ನಡದ ಅನುವಾದ

ಭೈರವೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಆ ಭೀಮೇಶ್ವರನ ಪೂರ್ವದಿಕ್ಕಿನಲ್ಲಿ ಸೋಮೇಶ್ವರನ ಆಗ್ನೇಯಭಾಗದಲ್ಲಿ ಅತಿ ಮಾಹಾತ್ಮ್ಯವುಳ್ಳ ಭೈರವೇಶ್ವರ ಲಿಂಗ ವಿರುವುದು. ಇಲ್ಲಿ ಸರಸ್ವತಿಯು ಕಲಶದಲ್ಲಿರುವ ವಾಡವಾಗ್ನಿಯನ್ನು ಸಮುದ್ರದ ಬಳಿಗೆ ತಂದು ವಿಶ್ರಾಂತಿಗಾಗಿ ಕ್ಷಣಕಾಲ ಅದನ್ನು ಅಲ್ಲಿರಿಸಿ ಲಿಂಗವನ್ನು ಸ್ಥಾಪಿಸಿ ಪೂಜೆಮಾಡಿ ದೇವತೆಗಳ ಹಿತಕ್ಕಾಗಿ ವಡವಾಗ್ನಿಯನ್ನು ಸಮುದ್ರದ ಮಧ್ಯದಲ್ಲಿ ಎಸೆದಳು.

೪. ಬಳಿಕ ಸಂತೋಷಗೊಂಡ ದೇವತೆಗಳು ಶಂಖದುಂದುಭಿ ಧ್ವನಿಗಳಿಂದ ಆಕಾಶವನ್ನು ತುಂಬಿಸುತ್ತ ಹೂಮಳೆ ಸುರಿಸುತ್ತ ಆ ಸರಸ್ವತಿಯನ್ನು ಸ್ತುತಿಗೈದರು.

೫–೬. ಆ ದೇವತೆಗಳು ಆ ಸರಸ್ವತಿಗೆ ದೇವಮಾತೆಯೆಂದು ಹೆಸರಿಟ್ಟು ದೇವದಾನವರಿಗೆ ಮಾಡಲಾಗದ ಭಯಂಕರ ಕಾರ್ಯವನ್ನೆಸಗಿ ಈ ಲಿಂಗವನ್ನು ಪ್ರತಿಷ್ಠೆಮಾಡಿದ್ದರಿಂದ, “ಓ ಸರಸ್ವತಿ ! ನೀನು ಸಕಲ ಪಾಪವನ್ನು ಪರಿಹರಿಸುವ

ಪ್ರತಿಷ್ಠಿತವತೀ ಚಾಽತ್ರ ಯಸ್ಮಾಲ್ಲಿಂಗಂ ಮಹೋದಯಂ ।
ತ್ವಂ ಸರ್ವಸರಿತಾಂ ಶ್ರೇಷ್ಠಾ ಸರ್ವಪಾತಕನಾಶಿನೀ ।
ತಸ್ಮಾದ್ಭೈರವನಾಮೇತಿ ಲಿಂಗಂ ಖ್ಯಾತಿಂ ಗಮಿಷ್ಯತಿ ॥ ೬ ॥
ಇತ್ಯುಕ್ತ್ವಾ ತು ತದಾ ದೇವೀ ಭೈರವೇಶ್ವರನೈರ್ಋತೇ ।
ಸಾಗರಸ್ಯ ಸ್ಥಿತಾ ರಮ್ಯೇ ತತ್ರ ಮೂರ್ತಿಮತೀ ಸತೀ ॥ ೭ ॥
ಪೂಜಯೇತ್ತಾಂ ವಿಧಾನೇನ ತಂ ತಥಾ ಭೈರವೇಶ್ವರಂ ।
ಮಹಾನವಮ್ಯಾಂ ಯತ್ನೇನ ಕೃತ್ವಾ ಸ್ನಾನಂ ವಿಧಾನತಃ ।
ಸರಸ್ವತೀಂ ಪೂಜಯಿತ್ವಾ ವಾಗ್ದೋಷಾನ್ಮುಚ್ಯತೇಽಖಿಲಾತ್ ॥ ೮ ॥
ತಸ್ಯಾ ಲಿಂಗಂ ತು ಸಂಪೂಜ್ಯ ಸಂಸ್ನಾಪ್ಯ ಪಯಸಾ ಪೃಥಕ್ ।
ಅಘೋರೇಣೈವ ವಿಧಿವತ್ಸಮ್ಯಗ್ಯಾತ್ರಾಫಲಂ ಲಭೇತ್ ॥ ೯ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ॥
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೈರವೇಶ್ವರಮಾಹಾತ್ಮ್ಯವರ್ಣನಂ ನಾಮ
ಏಕಚತ್ವಾರಿಂಶೋಽಧ್ಯಾಯಃ

ನದಿಗಳಲ್ಲಿ ಉತ್ತಮಳಾಗಿರುವೆ. ಈ ಶಿವಲಿಂಗವು ಭೈರವವೆಂದು ಪ್ರಸಿದ್ಧನಾಗುವುದು.” ಎಂದರು.

೭. ದೇವತೆಗಳು ಹೀಗೆನ್ನಲು ಆ ಸರಸ್ವತಿಯು ಭೈರವೇಶ್ವರನ ನೈಋತ್ಯ ದಿಕ್ಕಿನಲ್ಲಿ ಸಮುದ್ರದ ಹತ್ತಿರ ರಮ್ಯವಾದ ಸ್ಥಳದಲ್ಲಿ ದೇಹವನ್ನು ಧರಿಸಿನೆಲಸಿದ್ದಳು.

೮. ಭೈರವೇಶ್ವರನನ್ನು ಪೂಜಿಸಿ ಮಹಾ ನವಮಿದಿನ ಸ್ನಾನಮಾಡಿ ವಿಧಿಯಂತೆ ಪ್ರಯತ್ನದಿಂದ ಆ ಸರಸ್ವತಿಯನ್ನು ಪೂಜಿಸಿದ ಮಾನವನು ಸಕಲ ವಾಗ್ದೋಷದಿಂದ ಮುಕ್ತನಾಗುವನು.

೯. ಆ ಭೈರವೇಶ್ವರ ಲಿಂಗವನ್ನು ಹಾಲಿನಿಂದ ಅಘೋರೇತ್ಯಾದಿ ಮಂತ್ರದಿಂದ ಅಭಿಷೇಕಮಾಡಿ ವಿಧಿಯಂತೆ ಪೂಜಿಸಿದ ಮನುಷ್ಯನು ಯಾತ್ರಾಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೈರವೇಶ್ವರಮಾಹಾತ್ಮ್ಯವರ್ಣನವೆಂಬ
ನಲವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಚತ್ವಾರಿಂಶೋಽಧ್ಯಾಯಃ

ಚಂಡೀಶಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚಂಡೀಶಂ ದೇವಮುತ್ತಮಂ ।
ಸೋಮೇಶಾದೀಶದಿಗ್ಭಾಗೇ ಧನುಷಾಂ ಸಪ್ತಕೇ ಸ್ಥಿತಂ ॥ ೧ ॥

ದಂಡಪಾಣೇಸ್ತು ಭವನಾದ್ದಕ್ಷಿಣೇ ನಾಽತಿದೂರಗಂ ।
ಚಂಡ್ಯಾ ಪ್ರತಿಷ್ಠಿತಂ ಪೂರ್ವಂ ಚಂಡೇನಾರಾಧಿತಂ ತತಃ ॥ ೨ ॥

ಗಣೇನ ಮಮ ದೇವೇಶಿ ತತ್ಕೃತ್ವಾ ದುಷ್ಕರಂ ತಪಃ ।
ತೇನ ಚಂಡೇಶ್ವರಂ ಲಿಂಗಂ ಪ್ರಖ್ಯಾತಂ ಧರಣೀತಲೇ ॥ ೩ ॥

ಸ್ನಾಪಯೇತ್ಪಯಸಾ ಪೂರ್ವಂ ದಧ್ನಾ ಘೃತಯುತೇನ ಚ ।
ಮಧುನೇಕ್ಷುರಸೇನೈವ ಕುಂಕುಮೇನ ವಿಲೇಪಯೇತ್ ॥ ೪ ॥

ಕನ್ನಡದ ಅನುವಾದ

ಚಂಡೀಶಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ದೇವಿ ! ತರುವಾಯ ಸೋಮೇಶ್ವರನ ಈಶಾನ್ಯ ದಿಕ್ಕಿನಲ್ಲಿ ಏಳು ಬಿಲ್ಲಿನ ದೂರದಲ್ಲಿರುವ ಚಂಡೀಶನೆಡೆಗೆ ಹೋಗಬೇಕು.

೨–೩. ಹಿಂದೆ ಚಂಡಿಯು ದಂಡಪಾಣಿಯ ಆಲಯದ ದಕ್ಷಿಣದಲ್ಲಿ ಸಮೀಪದಲ್ಲಿಯೇ ಪ್ರತಿಷ್ಠೆಮಾಡಿರುವ ಚಂಡೀಶ್ವರನನ್ನು ನನ್ನ ಗಣನಾದ ಚಂಡನು ದುಷ್ಕರ ತಪಸ್ಸನ್ನಾಚರಿಸಿ ಪೂಜಿಸಿದನು. ಅದರಿಂದ ಆ ಲಿಂಗವು ಭೂಮಿಯಲ್ಲಿ ಚಂಡೇಶ್ವರ ಎಂದು ಹೆಸರಾಯಿತು.

೪. ಮೊದಲು ಆ ಚಂಡೇಶ್ವರನಿಗೆ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಕಬ್ಬಿನರಸಗಳಿಂದ ಪಂಚಾಮೃತ ಸ್ನಾನಮಾಡಿಸಿ ಕುಂಕುಮವನ್ನು ಹಚ್ಚಬೇಕು.

ಕರ್ಪೂರಕೋಶೀರಮಿಶ್ರೇಣ ಮೃಗನಾಭಿರಸೇನ ಚ ।
ಚಂದನೇನ ಸುಗಂಧೇನ ಪುಷ್ಪೈಃ ಸಂಪೂಜಯೇತ್ತತಃ ॥ ೫ ॥
ದಗ್ಧ್ವಾ ಧೂಪಂ ಪುರೋ ದೇವಿ ತತೋ ದೇವಸ್ಯ ಚಾಗುರುಂ ।
ವಸ್ತ್ರೈಃ ಸಂಪೂಜಯೇತ್ಪಶ್ಚಾದಾತ್ಮವಿತ್ತಾನುಸಾರತಃ ॥ ೬ ॥
ನೈವೇದ್ಯಂ ಪರಮಾನ್ನಂ ಚ ದತ್ವಾ ದೀಪಸಮನ್ವಿತಂ ।
ತತೋ ದದ್ಯಾದ್ದ್ವಿಜಾತಿಭ್ಯೋ ಯಥಾಶಕ್ತ್ಯಾ ತು ದಕ್ಷಿಣಾಂ ॥ ೭ ॥
ದಕ್ಷಿಣಾಂ ದಿಶಮಾಸ್ಥಾಯ ಯತ್ಕಿಂಚಿತ್ತತ್ರ ದೀಯತೇ ।
ಚಂಡೀಶಸ್ಯ ವರಾರೋಹೇ ತತ್ಸರ್ವಂ ಚಾಽಕ್ಷಯಂ ಭವೇತ್ ॥ ೮ ॥
ಯಃ ಶ್ರಾದ್ಧಂ ಕುರುತೇ ತತ್ರ ಚಂಡೀಶಸ್ಯ ತು ದಕ್ಷಿಣೇ ।
ಆಕಲ್ಪಂ ತೃಪ್ತಿಮಾಯಾಂತಿ ಪಿತರಸ್ತಸ್ಯ ಭಾಮಿನಿ ॥ ೯ ॥
ಅಯನೇ ಚೋತ್ತರೇ ಪ್ರಾಪ್ತೇ ಯಃ ಕುರ್ಯಾದ್ಘೃತಕಂಬಲಂ ।
ನ ಸ ಭೂಯೋಽತ್ರ ಸಂಸಾರೇ ಜನ್ಮ ಪ್ರಾಪ್ನೋತಿ ದಾರುಣಂ ॥ ೧೦ ॥

---

೫. ಅನಂತರ ಕರ್ಪೂರ, ಲಾವಂಚಗಳಿಂದ ಕೂಡಿದ ಕಸ್ತೂರಿ, ಗಂಧ, ಹೂವುಗಳಿಂದ ಅರ್ಚಿಸಬೇಕು.

೬–೭. ಬಳಿಕ ಆ ಚಂಡೇಶ್ವರನಿಗೆ ಅಗುರು ಧೂಪವನ್ನು ಸಮರ್ಪಿಸಿ ತನ್ನ ಐಶ್ವರ್ಯಕ್ಕನುಗುಣವಾಗಿ ವಸ್ತ್ರಗಳಿಂದ ಪೂಜಿಸಿ ಪರಮಾನ್ನವನ್ನು ನಿವೇದಿಸಿ, ದೀಪವನ್ನಿತ್ತು ಬ್ರಾಹ್ಮಣರಿಗೆ ಶಕ್ತ್ಯನುಸಾರ ದಕ್ಷಿಣೆಯನ್ನು ಕೊಡಬೇಕು.

೮. ಪ್ರಿಯಳೆ! ಅಲ್ಲಿ ದಕ್ಷಿಣ ದಿಕ್ಕಿನಲ್ಲಿ ಚಂಡೀಶನಿಗೆ ಯಾವುದನ್ನು ಅರ್ಪಿಸಿದರೂ ಅದೆಲ್ಲವೂ ಅಕ್ಷಯವಾಗುವುದು.

೯. ದೇವಿ! ಚಂಡೀಶನಿಗೆ ದಕ್ಷಿಣ ಭಾಗದಲ್ಲಿ ಶ್ರಾದ್ಧವನ್ನು ಮಾಡಿದರೆ ಅವನ ಪಿತೃಗಳು ಕಲ್ಪಾವಸಾನದವರೆಗೆ ತೃಪ್ತರಾಗಿರುವರು.

೧೦. ಉತ್ತರಾಯಣದಲ್ಲಿ ಆ ಚಂಡೀಶನಿಗೆ ಘೃತಕಂಬಲವನ್ನು ಸಮರ್ಪಿಸಿದವನು ಈ ಸಂಸಾರದಲ್ಲಿ ಮರಳಿ ಭಯಂಕರ ಜನ್ಮವನ್ನು ಹೊಂದುವುದಿಲ್ಲ.

ಏವಂ ಕೃತ್ವಾ ನರೋ ಭಕ್ತ್ಯಾ ಯಾತ್ರಾಂ ದೇವಸ್ಯ ಶೂಲಿನಃ ।
ನಿರ್ಮಾಲ್ಯಾತಿಕ್ರಮೋದ್ಭೂತೈರಜ್ಞಾನಾದ್ಭಕ್ಷಣೋದ್ಭವೈಃ ।
ಪಾಪೈಃ ಪ್ರಮುಚ್ಯತೇ ಜಂತುಸ್ತಥಾಽನ್ಯೈಃ ಕರ್ಮಸಂಭವೈಃ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಂಡೀಶ್ವರ ಮಾಹಾತ್ಮ್ಯವರ್ಣನಂ ನಾಮ
॥ ದ್ವಿಚತ್ವಾರಿಂಶೋಽಧ್ಯಾಯಃ ॥

---

೧೧. ಹೀಗೆ ಭಕ್ತಿಯಿಂದ ಆ ಚಂಡೀಶ್ವರನಿಗೆ ಯಾತ್ರೆಗೈದವನು ನಿರ್ಮಾಲ್ಯವನ್ನು ತಿರಸ್ಕರಿಸಿದ್ದರಿಂದಲೂ, ಅಜ್ಞಾನದಿಂದ ಅವನ ನೈವೇದ್ಯವನ್ನು ಭಕ್ಷಿಸಿದ್ದರಿಂದಲೂ, ಇತರ ಕರ್ಮದಿಂದಲೂ ಉಂಟಾದ ಪಾಪದಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಂಡೀಶ್ವರಮಾಹಾತ್ಮ್ಯವರ್ಣನವೆಂಬ
ನಲವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಚತ್ವಾರಿಂಶೋಽಧ್ಯಾಯಃ

ಆದಿತ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇದ್ವರಾರೋಹೇ ಲಿಂಗಂ ಸೂರ್ಯಪ್ರತಿಷ್ಠಿತಂ ।
ಸೋಮೇಶಾತ್ಪಶ್ಚಿಮೇ ಭಾಗೇ ಧನುಷಾಂ ಸಪ್ತಕೇ ಸ್ಥಿತಂ ।
ಆದಿತ್ಯೇಶ್ವರನಾಮಾನಂ ಸರ್ವಪಾತಕನಾಶನಂ ॥ ೧ ॥
ತ್ರೇತಾಯುಗೇ ಮಹಾದೇವಿ ಸಮುದ್ರೇಣ ಮಹಾತ್ಮನಾ ।
ರತ್ನೈಃ ಸಂಪೂಜಿತಂ ಲಿಂಗಂ ವರ್ಷಾಣಾಮಯುತಂ ಪ್ರಿಯೇ ॥ ೨ ॥
ತೇನ ರತ್ನೇಶ್ವರಂ ನಾಮ ಸಾಂಪ್ರತಂ ಪ್ರಥಿತಂ ಕ್ಷಿತೌ ।
ಪಂಚಾಽಮೃತೇನ ಸಂಸ್ನಾಪ್ಯ ಪಂಚರತ್ನೈಃ ಪ್ರಪೂಜಯೇತ್ ॥ ೩ ॥
ತತೋ ರಾಜೋಪಚಾರೇಣ ಪೂಜಯೇದ್ವಿಧಿವನ್ನರಃ ।
ಏವಂ ಕೃತೇ ಮಹಾದೇವಿ ಮೇರುದಾನಫಲಂ ಲಭೇತ್ ॥ ೪ ॥
ಸರ್ವೇಷಾಂ ಚೈವ ಯಜ್ಞಾನಾಂ ದಾನಾನಾಂ ನಾಽತ್ರ ಸಂಶಯಃ ॥ ೫ ॥
ತೀರ್ಥಾನಾಂ ಚಾಽಪಿ ಸರ್ವೇಷಾಂ ಯಚ್ಚಾಽನ್ಯತ್ಸುಕೃತಂ ಭುವಿ ।
ಉದ್ಧರೇತ್ಪಿತೃವರ್ಗಂ ಚ ಮಾತೃವರ್ಗಂ ಚ ಮಾನವಃ ॥ ೬ ॥

ಕನ್ನಡದ ಅನುವಾದ

ಆದಿತ್ಯೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಪ್ರಿಯಳೆ! ಬಳಿಕ ಸೂರ್ಯನು ಪ್ರತಿಷ್ಠೆ ಮಾಡಿರುವ ಸೋಮೇಶ್ವರನ ಪಶ್ಚಿಮ ಭಾಗದಲ್ಲಿ ಏಳು ಬಿಲ್ಲಿನ ದೂರದಲ್ಲಿರುವ ಸಕಲ ಪಾಪನಾಶಕನಾದ ಆದಿತ್ಯೇಶ್ವರನ ಬಳಿಗೆ ಹೋಗಬೇಕು.

೨. ದೇವಿ! ತ್ರೇತಾಯುಗದಲ್ಲಿ ಮಹಾತ್ಮನಾದ ಸಮುದ್ರನು ಹತ್ತು ಸಾವಿರ ವರ್ಷ ಈ ಲಿಂಗವನ್ನು ರತ್ನಗಳಿಂದ ಪೂಜಿಸಿರುವನು.

೩–೪. ಅದರಿಂದ ಭೂಮಿಯಲ್ಲಿ ಈ ಲಿಂಗವು ಪ್ರಕೃತದಲ್ಲಿ ರತ್ನೇಶ್ವರನೆಂದು ಪ್ರಸಿದ್ಧವಾಗಿದೆ. ಮನುಷ್ಯನು ಈ ಲಿಂಗಕ್ಕೆ ಪಂಚಾಮೃತಸ್ನಾನ ಮಾಡಿಸಿ ಪಂಚರತ್ನಗಳಿಂದ ಪೂಜಿಸಿ ರಾಜೋಪಚಾರದಿಂದ ಆರಾಧಿಸಬೇಕು. ಹೀಗೆ ಮಾಡಿದರೆ ಮೇರು ಪರ್ವತವನ್ನು ದಾನಮಾಡಿದ ಫಲವು ಲಭಿಸುವುದು.

೫. ಸಮಸ್ತ ಯಜ್ಞ, ದಾನಗಳನ್ನು ಮಾಡಿದ ಪುಣ್ಯವೂ ದೊರೆಯುವುದು.

೬. ಭೂಮಿಯಲ್ಲಿರುವ ಸಮಸ್ತ ತೀರ್ಥಗಳಲ್ಲಿ ಮಿಂದ ಪುಣ್ಯವೂ ಲಭಿಸುವುದು. ತಾಯಿತಂದೆಗಳ ಕುಲದವರನ್ನು ಉದ್ಧಾರ ಮಾಡುವನು.

ಬಾಲ್ಯೇ ವಯಸಿ ಯತ್ಪಾಪಂ ವಾರ್ಧಕೇ ಯೌವನೇಽಪಿ ವಾ ।
ಕ್ಷಾಲಯೇಚ್ಚೈವ ತತ್ಸರ್ವಂ ದೃಷ್ಟ್ವಾ ರತ್ನೇಶ್ವರಂ ನರಃ ॥ ೭ ॥
ಧೇನುದಾನಂ ಪ್ರಶಂಸಂತಿ ತಸ್ಮಿನ್ ಸ್ಥಾನೇ ಮಹರ್ಷಯಃ ।
ಧೇನುದಸ್ತಾರಯೇನ್ನೂನಂ ದಶಪೂರ್ವಾನ್ ದಶಾಽಪರಾನ್ ॥ ೮ ॥
ದೇವಸ್ಯ ದಕ್ಷಿಣೇ ಭಾಗೇ ಯೋ ಜಪೇಚ್ಛತರುದ್ರಿಯಂ ।
ಸಂಪೂಜ್ಯ ವಿಧಿವಲ್ಲಿಂಗಂ ನ ಸ ಭೂಯಃ ಪ್ರಜಾಯತೇ ॥ ೯ ॥
ಏವಂ ಸಂಕ್ಷೇಪತಃ ಪ್ರೋಕ್ತಮಾದಿತ್ಯೇಶಮಹೋದಯಂ ।
ಶ್ರುತ್ವಾಽವಧಾರ್ಯ ಯತ್ನೇನ ಮುಚ್ಯತೇ ಕರ್ಮಬಂಧನೈಃ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಆದಿತ್ಯೇಶ್ವರ ಮಹಾತ್ಮ್ಯವರ್ಣನಂ ನಾಮ
॥ ತ್ರಿಚತ್ವಾರಿಂಶೋಽಧ್ಯಾಯಃ ॥

---

೭. ರತ್ನೇಶ್ವರನನ್ನು ದರ್ಶನ ಮಾಡಿದ ಮಾನವನ ಬಾಲ್ಯ, ಯೌವನ, ಮುಪ್ಪು ಗಳಲ್ಲಿ ಮಾಡಿದ ಪಾಪವೆಲ್ಲ ಪರಿಹಾರವಾಗುವುದು.

೮. ಅಲ್ಲಿ ಮಾಡಿದ ಗೋದಾನವು ಉತ್ತಮವಾದುದೆಂದು ಮಹರ್ಷಿಗಳು ಹೊಗಳುತ್ತಾರೆ. ಗೋದಾನವನ್ನಿತ್ತವನು ನಿಶ್ಚಯವಾಗಿಯೂ ಹಿಂದಿನ ಮತ್ತು ಮುಂದಿನ ಹತ್ತು ಮಂದಿ ಪಿತೃಗಳನ್ನು ಉದ್ಧಾರ ಮಾಡುವನು.

೯. ಈ ರತ್ನೇಶ್ವರನ ದಕ್ಷಿಣಭಾಗದಲ್ಲಿ ಶತರುದ್ರಿಯವನ್ನು ಜಪಿಸಿ ವಿಧಿಯಂತೆ ಪೂಜಿಸಿದವನು ಮರಳಿ ಜನಿಸುವುದಿಲ್ಲ.

೧೦. ಹೀಗೆ ಆದಿತ್ಯೇಶ್ವರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳಿ ಪ್ರಯತ್ನದಿಂದ ಮನಸ್ಸಿನಲ್ಲಿಟ್ಟುಕೊಂಡವನು ಕರ್ಮಬಂಧಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಆದಿತ್ಯೇಶ್ವರಮಾಹಾತ್ಮ್ಯವರ್ಣನವೆಂಬ
ನಲವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಶ್ಚತ್ವಾರಿಂಶೋಽಧ್ಯಾಯಃ

ಸೋಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಆದಿತ್ಯೇಶಂ ಸಮಭ್ಯರ್ಚ್ಯ ಪುನಃ ಸೋಮೇಶ್ವರಂ ವ್ರಜೇತ್ ।
ತಂ ಸಂಪೂಜ್ಯ ವಿಧಾನೇನ ಪಂಚಾಂಗೇನ ವಿಶೇಷತಃ ॥ ೧ ॥
ದೃಷ್ಟ್ವಾ ಸೋಮೇಶ್ವರಂ ಚೈವ ಸಾಷ್ಟಾಂಗಂ ಪ್ರಣಿಪತ್ಯ ಚ ।
ಪ್ರದಕ್ಷಿಣಾದಿಕಂ ಕುರ್ಯಾತ್ಸಂಪಶ್ಯೇಚ್ಚ ಪುನಃಪುನಃ ॥ ೨ ॥
ಸೂರ್ಯಾಚಂದ್ರಮಸೋರ್ಲಿಂಗಂ ತ್ರಿಃಕೃತ್ವಾ ಪ್ರಯತಃ ಶುಚಿಃ ।
ಅಗ್ನಿಷೋಮಾತ್ಮಕಂ ಕರ್ಮ ತೇನ ಸರ್ವಂ ಕೃತಂ ಭವೇತ್ ॥ ೩ ॥
ಉಮಾದೇವೀಂ ತತೋ ಗಚ್ಛೇತ್ಸೋಮೇಶ್ವರಸಮೀಪತಃ
ದ್ವಿತೀಯಾಂ ತು ತತೋ ಗಚ್ಛೇದ್ದೈತ್ಯಸೂದನಸನ್ನಿಧೌ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸೋಮೇಶ್ವರ ಲಿಂಗಮಾಹಾತ್ಮ್ಯವರ್ಣನಂ ನಾಮ
॥ ಪಂಚಚತ್ವಾರಿಂಶೋಽಧ್ಯಾಯಃ ॥

ಕನ್ನಡದ ಅನುವಾದ

ಸೋಮೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಆದಿತ್ಯೇಶ್ವರನನ್ನು ಪೂಜಿಸಿದ ತರುವಾಯ ಮರಳಿ ಸೋಮೇಶ್ವರನೆಡೆಗೆ ಹೋಗಬೇಕು. ಅವನನ್ನು ಪಂಚಾಂಗವಿಧಾನದಿಂದ ಅರ್ಚಿಸಿ ಸ್ತುತಿಸಿ ಸಾಷ್ಟಾಂಗ ನಮಸ್ಕಾರಮಾಡಿ ಪ್ರದಕ್ಷಿಣೆಗೈದು ಮತ್ತೆ ದರ್ಶನ ಮಾಡಬೇಕು.

೩. ಜಿತೇಂದ್ರಿಯನೂ, ಶುದ್ಧನೂ ಆಗಿ ಆ ಸೂರ್ಯಚಂದ್ರರು ಪ್ರತಿಷ್ಠೆಮಾಡಿದ ಲಿಂಗಗಳನ್ನು ಮೂರುಸಾರಿ ಪೂಜಿಸಿದವನು ಅಗ್ನಿಷೋಮ ಯಾಗವನ್ನು ಮಾಡಿದವನಂತಾಗುವನು.

೪. ಅನಂತರ ದ್ವಿತೀಯಾದಿನ ಸೋಮೇಶ್ವರನ ಹತ್ತಿರವಿರುವ ಉಮಾದೇವಿಯ ಮತ್ತು ವಿಷ್ಣುವಿನ ಸಮೀಪಕ್ಕೆ ಹೋಗಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ ಸೋಮೇಶ್ವರ ಮಾಹಾತ್ಮ್ಯವರ್ಣನವೆಂಬ ನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಪಂಚಚತ್ವಾರಿಂಶೋಽಧ್ಯಾಯಃ

ಅಂಗಾರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅಂಗಾರೇಶ್ವರಮುತ್ತಮಂ ।
ಸ್ಥಾಪಿತಂ ಭೂಮಿಪುತ್ರೇಣ ಸೋಮೇಶಾದೀಶಗೋಚರೇ ॥ ೧ ॥
ತ್ರಿಪುರಂ ದಗ್ಧುಕಾಮಸ್ಯ ಪುರಾ ಮಮ ವರಾನನೇ ।
ಕ್ರೋಧಾದಶ್ರು ವಿನಿಷ್ಕ್ರಾಂತಂ ಲೋಚನತ್ರಿತಯೇನ ತು ॥ ೨ ॥
ತಚ್ಚ ಭೂಮೌ ನಿಪತಿತಂ ತತೋ ಭೂಮಿಸುತೋಽಭವತ್ ।
ಸ ಪ್ರಭಾಸಂ ತತೋ ಗತ್ವಾ ಬಾಲ್ಯಾತ್ಪ್ರಭೃತಿ ಶಂಕರಂ ॥ ೩ ॥
ತಪಸಾಽಽರಾಧಯಾಮಾಸ ಬಹೂನ್ ವರ್ಷಗಣಾನ್ ಪ್ರಿಯೇ ।
ತಸ್ಯ ತುಷ್ಟೋ ಮಹಾದೇವಃ ಸುಪ್ರೀತಾತ್ಮಾ ವರಂ ದದೌ ॥ ೪ ॥
ಸೋಽಬ್ರವೀದ್ಯದಿ ಮೇ ದೇವ ತುಷ್ಟೋಽಸಿ ವೃಷಭಧ್ವಜ ।
ಗ್ರಹತ್ವಂ ದೇಹಿ ಸರ್ವೇಶ ನ ಚಾನ್ಯಂ ವರಮುತ್ಸಹೇ ॥ ೫ ॥

ಕನ್ನಡದ ಅನುವಾದ

ಅಂಗಾರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ದೇವಿ! ಬಳಿಕ ಅಂಗಾರಕನು ಸೋಮೇಶನ ಈಶಾನ್ಯ ದಿಕ್ಕಿನಲ್ಲಿ ಸ್ಥಾಪಿಸಿರುವ ಅಂಗಾರೇಶ್ವರನೆಡೆಗೆ ಹೋಗಬೇಕು.

೨. ಪ್ರಿಯಳೆ! ಹಿಂದೆ ನಾನು ತ್ರಿಪುರವನ್ನು ಸುಡಲು ಬಯಸಲು ಕೋಪದಿಂದ ನನ್ನ ಮೂರು ಕಣ್ಣುಗಳಿಂದಲೂ ಜಲವು ಹೊರಟಿತು.

೩–೪. ಅದು ಭೂಮಿಯಲ್ಲಿ ಬೀಳಲು ಅಂಗಾರಕನು ಜನಿಸಿದನು. ಅವನು ಪ್ರಭಾಸಕ್ಷೇತ್ರಕ್ಕೆ ಹೋಗಿ ಬಾಲ್ಯದಿಂದಲೂ ಮಹೇಶ್ವರನನ್ನು ಅನೇಕ ವರ್ಷಕಾಲ ತಪಸ್ಸಿನಿಂದ ಸಂತೋಷಗೊಳಿಸಿದನು. ಅವನ ವಿಷಯದಲ್ಲಿ ಸಂತುಷ್ಟನಾದ ಮಹೇಶ್ವರನು ಅವನಿಗೆ ವರವನ್ನಿತ್ತನು.

೫. ಆ ಅಂಗಾರಕನು ಶಂಕರನನ್ನು ಕುರಿತು, "ಮಹೇಶ್ವರ! ನೀನು ನನ್ನಲ್ಲಿ ಸಂತುಷ್ಟನಾಗಿದ್ದರೆ ನನ್ನನ್ನು ಗ್ರಹವನ್ನಾಗಿ ಮಾಡು. ಬೇರೆ ವರವನ್ನು ನಾನು ಬಯಸುವುದಿಲ್ಲ." ಎಂದನು.

ಸ ತಥೇತಿ ಪ್ರತಿಜ್ಞಾಯ ಪುನಸ್ತಂ ವಾಕ್ಯಮಬ್ರವೀತ್ ।
ಇಹಾಗತ್ಯ ನರೋ ಯೋ ಮಾಂ ಪೂಜಯಿಷ್ಯತಿ ಭಕ್ತಿತಃ ॥ ೬ ॥
ನ ಭವಿಷ್ಯತಿ ವೈ ಪೀಡಾ ತಾವಕೀ ತಸ್ಯ ಕುತ್ರಚಿತ್ ।
ಪುಷ್ಪಾಣಿ ರಕ್ತವರ್ಣಾನಿ ಮಧ್ವಾಜ್ಯಾಕ್ತಾನಿ ಭೂರಿಶಃ ॥ ೭ ॥
ಹೋಮಯಿಷ್ಯತಿ ಯೋ ಭಕ್ತ್ಯಾ ಲಕ್ಷಮೇಕಂ ತದಗ್ರತಃ ।
ಪಂಚೋಪಚಾರವಿಧಿನಾ ತ್ವಾಂ ತು ಸಂಪೂಜ್ಯ ಯತ್ನತಃ ॥ ೮ ॥
ತಸ್ಯ ಜನ್ಮಾವಧಿರ್ನೈವ ತವ ಪೀಡಾ ಭವಿಷ್ಯತಿ ।
ತಥಾ ವಿದ್ರುಮದಾನೇನ ಲಪ್ಸ್ಯತೇ ಫಲಮೀಪ್ಸಿತಂ ॥ ೯ ॥
ಏವಮುಕ್ತ್ವಾ ಸ ಭಗವಾನತ್ರೈವಾಂತರಧೀಯತ ।
ಭೌಮೋಽಪಿ ಗ್ರಹಮಧ್ಯಸ್ಥೋ ವಿಮಾನೇನ ವಿರಾಜತೇ ॥ ೧೦ ॥
ಏವಂ ಸಂಕ್ಷೇಪತಃ ಪ್ರೋಕ್ತಂ ಭೌಮಮಾಹಾತ್ಮ್ಯಮುತ್ತಮಂ ।
ಶ್ರುತಂ ಹರತಿ ಪಾಪಾನಿ ತಥಾರೋಗ್ಯಂ ಪ್ರಯಚ್ಛತಿ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಅಂಗಾರೇಶ್ವರಮಾಹಾತ್ಮ್ಯವರ್ಣನಂ ನಾಮ ಪಂಚಚತ್ವಾರಿಂಶೋಽಧ್ಯಾಯಃ

೬–೯. ಅವನು ಹಾಗೆಯೇ ಆಗಲೆಂದು ಹೇಳಿ ಮರಳಿ ಅಂಗಾರಕನನ್ನು ಕುರಿತು "ಇಲ್ಲಿಗೆ ಬಂದು ನನ್ನನ್ನು ಪೂಜಿಸಿದ ಮನುಷ್ಯನಿಗೆ ಎಲ್ಲಿಯೂ ನಿನ್ನ ಪೀಡೆಯುಂಟಾಗುವುದಿಲ್ಲ. ನಿನ್ನ ಮುಂದೆ ಕೆಂಪು ಬಣ್ಣದ ಒಂದು ಲಕ್ಷ ಹೂವುಗಳನ್ನು ಜೇನು, ತುಪ್ಪಗಳಿಂದ ನೆನೆಯಿಸಿ ಭಕ್ತಿಯಿಂದ ಹೋಮ ಮಾಡಿ ನಿನ್ನನ್ನು ಪಂಚೋಪಚಾರ ಕ್ರಮದಿಂದ ಪೂಜಿಸಿದವನಿಗೆ ದೇಹಾವಸಾನದವರೆಗೆ ನಿನ್ನ ಬಾಧೆಯುಂಟಾಗುವುದಿಲ್ಲ. ಹಾಗೆಯೇ ಹವಳವನ್ನು ದಾನಮಾಡುವುದರಿಂದ ಇಷ್ಟವಾದ ಫಲವನ್ನುಪಡೆಯುವನು" ಎಂದನು.

೧೦. ಪೂಜ್ಯನಾದ ಶಂಕರನು ಹೀಗೆ ಹೇಳಿ ಅಲ್ಲಿಯೇ ಅದೃಶ್ಯನಾದನು. ಅಂಗಾರಕನೂ ಗ್ರಹಗಳ ಮಧ್ಯದಲ್ಲಿ ವಿಮಾನದಲ್ಲಿ ವಿರಾಜಿಸಿದನು.

೧೧. ಹೀಗೆ ಉತ್ತಮವಾದ ಅಂಗಾರಕನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ನಿನಗೆ ಹೇಳಿರುವೆನು. ಇದು ಕೇಳಿದವನ ಪಾಪವನ್ನು ನೀಗಿಸಿ ಆರೋಗ್ಯವನ್ನು ಕೊಡುವುದು

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದಲ್ಲಿ ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ ಅಂಗಾರೇಶ್ವರಮಾಹಾತ್ಮ್ಯವರ್ಣನವೆಂಬ ನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಷಟ್ಚತ್ವಾರಿಂಶೋಽಧ್ಯಾಯಃ

ಬುಧೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಯೈವೋತ್ತರತಃ ಸ್ಥಿತಂ ।
ಲಿಂಗಂ ಮಹಾಪ್ರಭಾವಂ ತು ಬುಧೇಶ್ವರಮಿತಿ ಶ್ರುತಂ ॥ ೧ ॥
ಧನುಷಾಂ ದ್ವಿತಯೇ ಚೈವ ನಾಽತಿದೂರೇ ವ್ಯವಸ್ಥಿತಂ ।
ಸರ್ವಪಾಪಹರಂ ಲಿಂಗಂ ದರ್ಶನಾದೇವ ಭಾಮಿನಿ ॥ ೨ ॥
ಬುಧೇನ ಚೈವ ದೇವೇಶಿ ತತ್ರ ತಪ್ತ್ವಾ ಮಹಾತಪಃ ।
ಸ್ಥಾಪಿತಂ ವಿಮಲಂ ಲಿಂಗಂ ಸಮಾರಾಧ್ಯ ಸದಾಶಿವಂ ॥ ೩ ॥
ವರ್ಷಾಣ್ಯಯುತಾನಿ ಚತ್ವಾರಿ ಸಂಪೂಜ್ಯ ತು ವಿಧಾನತಃ ।
ಅನನ್ಯಚೇತಾಃ ಶಾಂತಾತ್ಮಾ ಪ್ರತ್ಯಕ್ಷೀಕೃತವಾನ್ ಭವಂ ॥ ೪ ॥
ತತಸ್ತುಷ್ಟಮನಾ ದೇವೋ ಗ್ರಹತ್ವಂ ತಸ್ಯ ತದ್ದದೌ ।
ತಂ ಸಂಪೂಜ್ಯ ವಿಧಾನೇನ ಸೋಮಪುತ್ರಪ್ರತಿಷ್ಠಿತಂ ।
ಸೌಮ್ಯಾಷ್ಟಮ್ಯಾಂ ವಿಶೇಷೇಣ ರಾಜಸೂಯಫಲಂ ಲಭೇತ್ ॥ ೫ ॥

ಕನ್ನಡದ ಅನುವಾದ

ಬುಧೇಶ್ವರಮಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ದೇವಿ ! ತರುವಾಯ ಅಲ್ಲಿಯೇ ಉತ್ತರ ದಿಕ್ಕಿನಲ್ಲಿರುವ, ಅತಿಶಯವಾದ ಮಾಹಾತ್ಮ್ಯವುಳ್ಳ ಬುಧೇಶ್ವರಲಿಂಗದ ಹತ್ತಿರಕ್ಕೆ ಹೋಗಬೇಕು.

೨. ಆ ಅಂಗಾರೇಶ್ವರ ಲಿಂಗದ ಎರಡು ಬಿಲ್ಲಿನ ದೂರದಲ್ಲಿರುವ ಈ ಬುಧೇಶ್ವರ ಲಿಂಗವು ದರ್ಶನದಿಂದಲೇ ಸಕಲ ಪಾಪಗಳನ್ನೂ ಪರಿಹರಿಸುವುದು.

೩. ದೇವೇಶಿ! ಅಲ್ಲಿ ಬುಧನು ಮಹಾತಪಸ್ಸನ್ನಾಚರಿಸಿ ಸದಾಶಿವನನ್ನಾರಾಧಿಸಿ ಶುದ್ಧವಾದ ಈ ಲಿಂಗವನ್ನು ಪ್ರತಿಷ್ಠೆ ಮಾಡಿರುವನು.

೪. ಶಾಂತಾತ್ಮನಾದ ಬುಧನು ನಲವತ್ತು ಸಾವಿರ ವರ್ಷ ಸ್ಥಿರ ಮನಸ್ಸಿನಿಂದ ಆ ಲಿಂಗವನ್ನು ಪೂಜಿಸಿ ಮಹೇಶ್ವರನನ್ನು ಸಾಕ್ಷಾತ್ಕರಿಸಿದನು.

೫. ಅನಂತರ ಶಿವನು ಸಂತುಷ್ಟನಾಗಿ ಅವನಿಗೆ ಗ್ರಹತ್ವವನ್ನು ಕೊಟ್ಟನು. ಬುಧವಾರ ಅಷ್ಟಮೀ ದಿನ ಆ ಬುಧನು ಪ್ರತಿಷ್ಠೆ ಮಾಡಿರುವ ಲಿಂಗವನ್ನು ವಿಧಿಯಿಂದ ಪೂಜಿಸಿದವನು ರಾಜಸೂಯ ಯಾಗದ ಫಲವನ್ನು ಪಡೆಯುವನು.

ನ ದೌರ್ಭಾಗ್ಯಂ ಕುಲೇ ತಸ್ಯ ನ ಚೈವೇಷ್ಟವಿಯೋಜನಂ ।
ಶತ್ರುತೋ ನ ಭಯಂ ತಸ್ಯ ಭವೇತ್ತಸ್ಯ ಪ್ರಸಾದತಃ ॥ ೬ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಬುಧದೈವತಂ ।
ಶ್ರುತ್ವಾಽಭಿನಂದ್ಯ ಪ್ರಯತಃ ಪ್ರಾಪ್ನೋತಿ ಪರಮಂ ಪದಂ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಬುಧೇಶ್ವರಮಾಹಾತ್ಮ್ಯವರ್ಣನಂ ನಾಮ ಷಟ್ಚತ್ವಾರಿಂಶೋಽಧ್ಯಾಯಃ ॥

---

೬. ಬುಧನ ಅನುಗ್ರಹದಿಂದ ಅವನ ವಂಶದಲ್ಲಿ ಬಡತನವೂ, ಇಷ್ಟ ಜನರ ವಿನಿಯೋಗವೂ ಉಂಟಾಗುವುದಿಲ್ಲ. ಶತ್ರುಗಳ ಭಯವೂ ಇರುವುದಿಲ್ಲ.

೭. ಹೀಗೆ ಸಂಕ್ಷೇಪವಾಗಿ ಬುಧನ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು. ಇದನ್ನು ಶುದ್ಧನಾಗಿ ಕೇಳಿ ಸಂತೋಷಗೊಂಡ ಮಾನವನು ಉತ್ತಮ ಸ್ಥಾನವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಬುಧೇಶ್ವರಮಾಹಾತ್ಮ್ಯವರ್ಣನವೆಂಬ ನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಚತ್ವಾರಿಂಶೋಽಧ್ಯಾಯಃ

ಬೃಹಸ್ಪತೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಗುರುನಿಷೇವಿತಂ ।
ಉಮಾಯಾಃ ಪೂರ್ವದಿಗ್ಭಾಗೇ ಸಿದ್ಧೇಶಾಗ್ನೇಯಗೋಚರೇ ॥ ೧ ॥
ಸಂಸ್ಥಿತಂ ತು ಮಹಲ್ಲಿಂಗಂ ದೇವಾಚಾರ್ಯಪ್ರತಿಷ್ಠಿತಂ ।
ಆರಾಧ್ಯ ಪರಯಾ ಭಕ್ತ್ಯಾ ಲಿಂಗಂ ವರ್ಷಸಹಸ್ರಕಂ ॥ ೨ ॥
ತೋಷಯಾಮಾಸ ದೇವೇಶಂ ಭರ್ಗಂ ಶರ್ವಮುಮಾಪತಿಂ ।
ಪ್ರಾಪ್ತವಾನಖಿಲಾನ್ಕಾಮಾನಪ್ರಾಪ್ಯಾನಕೃತಾತ್ಮಭಿಃ ॥ ೩ ॥
ದೇವಾನಾಂ ಚೈವ ಪೂಜ್ಯತ್ವಂ ಪ್ರಾಪ್ಯ ಜ್ಞಾನಮುಥೈಶ್ವರಂ ।
ಗ್ರಹತ್ವಂ ಚ ತಥಾ ಪ್ರಾಪ್ಯ ಮೋದತೇ ದಿವಿ ಸಾಂಪ್ರತಂ ॥ ೪ ॥
ತಂ ದೃಷ್ಟ್ವಾ ಮಾನವೋ ಭಕ್ತ್ಯಾ ನ ದುರ್ಗತಿಮವಾಪ್ನುಯಾತ್ ।
ಬೃಹಸ್ಪತಿಕೃತಂ ಲಿಂಗಂ ಯೇ ಪಶ್ಯಂತಿ ನರೋತ್ತಮಾಃ ॥ ೫ ॥
ಬೃಹಸ್ಪತಿಕೃತಾ ಪೀಡಾ ನೈವ ತೇಷಾಂ ಹಿ ಜಾಯತೇ ।
ತತ್ರ ಶುಕ್ಲಚತುರ್ದಶ್ಯಾಂ ಗುರುವಾರೇ ತಥಾ ಪ್ರಿಯೇ ॥ ೬ ॥

ಕನ್ನಡದ ಅನುವಾದ

ಬೃಹಸ್ಪತೀಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ದೇವಿ ! ಬಳಿಕ ಉಮಾತೀರ್ಥದ ಪೂರ್ವದಲ್ಲಿ ಸಿದ್ಧೇಶ್ವರನ ಆಗ್ನೇಯದಿಕ್ಕಿನಲ್ಲಿ ಬೃಹಸ್ಪತಿಯು ಪ್ರತಿಷ್ಠೆಮಾಡಿರುವ ಬೃಹಸ್ಪತೀಶ್ವರಲಿಂಗದ ಸಮೀಪಕ್ಕೆ ಹೋಗಬೇಕು. ಬೃಹಸ್ಪತಿಯು ಈ ಶಿವಲಿಂಗವನ್ನು ನೂರು ವರ್ಷಕಾಲ ಅತಿ ಭಕ್ತಿಯಿಂದ ಆರಾಧಿಸಿ ಮಹೇಶ್ವರನನ್ನು ಸಂತೋಷಗೊಳಿಸಿ ಪಾಪಿಗಳಿಗೆ ಹೊಂದಲಶಕ್ಯವಾದ ಸಕಲೇಷ್ಟಾರ್ಥಗಳನ್ನು ಪಡೆದನು.

೪. ದೇವತೆಗಳಿಗೆ ಪೂಜ್ಯನಾಗಿ ಈಶ್ವರಜ್ಞಾನವನ್ನು ಪಡೆದು ಅವನು ಗ್ರಹತ್ವವನ್ನು ಹೊಂದಿ ಈಗ ಸ್ವರ್ಗಲೋಕದಲ್ಲಿ ಸಂತೋಷಗೊಳ್ಳುತ್ತಿದ್ದಾನೆ.

೫–೭. ಅವನನ್ನು ಭಕ್ತಿಯಿಂದ ನೋಡಿದ ಮಾನವನು ದುರ್ಗತಿಯನು ಹೊಂದುವುದಿಲ್ಲ, ಅವನು ಪ್ರತಿಷ್ಠೆಮಾಡಿದ ಲಿಂಗವನ್ನು ದರ್ಶನಗೈದ ಮನುಷ್ಯನಿಗೆ ಬೃಹಸ್ಪತಿ ಪೀಡೆಯುಂಟಾಗುವುದಿಲ್ಲ. ಪ್ರಿಯಳೆ ! ಶುಕ್ಲಪಕ್ಷದ ಚತುರ್ದಶೀ ಗುರು

ಸಂಪೂಜ್ಯ ವಿಧಿವಲ್ಲಿಂಗಂ ಸಮ್ಯಗ್ರಾಜೋಪಚಾರತಃ ।
ಅಥವಾ ಭಕ್ತಿಭಾವೇನ ಪ್ರಾಪ್ನುಯಾತ್ಪರಮಂ ಪದಂ ॥ ೭ ॥
ಸ್ನಾನಂ ಫಲಸಹಸ್ರೇಣ ಪಂಚಾಮೃತರಸೇನ ಯಃ ।
ಕರೋತಿ ಭಕ್ತ್ಯಾ ಮರ್ತ್ಯೋ ವೈ ಮುಚ್ಯತೇ ಸ ಋಣತ್ರಯಾತ್ ॥ ೮ ॥
ಮಾತೃಕಾತ್ಪೈತೃಕಾದ್ದೇವಿ ತಥಾ ಗುರುಸಮುದ್ಭವಾತ್ ।
ಸರ್ವಪಾಪವಿಶುದ್ಧಾತ್ಮಾ ನಿರ್ದ್ವಂದ್ವೋ ಮುಕ್ತಿಮಾಪ್ನುಯಾತ್ ॥ ೯ ॥
ಏವಂ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಗುರುದೈವತಂ ।
ಶೃಣುಯಾದ್ಯಸ್ತು ಭಾವೇನ ತಸ್ಯ ಪ್ರೀತೋ ಗುರುರ್ಭವೇತ್ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬೃಹಸ್ಪತೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತಚತ್ವಾರಿಂಶೋಽಧ್ಯಾಯಃ ॥

ವಾರದದಿನ ಆ ಲಿಂಗವನ್ನು ಭಕ್ತಿಯಿಂದ ಶಾಸ್ತ್ರೋಕ್ತ ರೀತಿಯಿಂದ ರಾಜೋಪಚಾರಗಳನ್ನು ಮಾಡಿ ಪೂಜಿಸಿದ ಮನುಷ್ಯನು ಉತ್ತಮಪದವಿಯನ್ನು ಪಡೆಯುವನು.

೮. ನೂರು ಫಲಗಳಿಂದಲೂ, ಪಂಚಾಮೃತದಿಂದಲೂ ಅಭಿಷೇಕಮಾಡಿದವನು ಋಣತ್ರಯಗಳಿಂದ ಮುಕ್ತನಾಗುವನು.

೯. ಅಲ್ಲದೆ ತಾಯಿ, ತಂದೆ, ಗುರುಗಳಿಂದುಂಟಾದ ಸಮಸ್ತ ಪಾಪಗಳಿಂದಲೂ ಮುಕ್ತನಾಗಿ ಮೋಕ್ಷವನ್ನು ಹೊಂದುವನು.

೧೦. ಹೀಗೆ ಬೃಹಸ್ಪತೀಶ್ವರಲಿಂಗದ ಮಾಹಾತ್ಮ್ಯವನ್ನು ನಿನಗೆ ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಭಕ್ತಿಯಿಂದ ಕೇಳಿದ ನರನ ವಿಷಯದಲ್ಲಿ ಗುರುವು ಸಂತುಷ್ಟನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬೃಹಸ್ಪತೀಶ್ವರಮಾಹಾತ್ಮ್ಯವರ್ಣನವೆಂಬ
ನಲವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಚತ್ವಾರಿಂಶೋಽಧ್ಯಾಯಃ

ಶುಕ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಶುಕ್ರಪ್ರತಿಷ್ಠಿತಂ ।
ಸರ್ವಪಾಪಹರಂ ದೇವಿ ವಿಭೂತೀಶ್ವರಪಶ್ಚಿಮೇ ॥ ೧ ॥
ನಾಽತಿದೂರೇ ಸ್ಥಿತಂ ತತ್ರ ಸ್ವಯಂ ಶುಕ್ರೇಣ ನಿರ್ಮಿತಂ ।
ಯತ್ರ ಸಂಜೀವನೀಂ ಪ್ರಾಪ್ತೋ ವಿದ್ಯಾಂ ರುದ್ರಪ್ರಭಾವತಃ ॥ ೨ ॥
ಸಂತಪ್ಯ ತು ಮಹಾಘೋರಂ ತಪೋವರ್ಷಸಹಸ್ರಕಂ ।
ಸಂಪ್ರಸಾದ್ಯ ವಿರೂಪಾಕ್ಷಂ ಯೋಽವಾಪ ಗ್ರಹತಾಂ ಸುಧೀಃ ॥ ೩ ॥
ಗ್ರಸ್ತೇನ ಶಂಭುನಾ ಯೇನ ದೇವಕಾರ್ಯಾರ್ಥಸಿದ್ಧಯೇ ।
ತತ್ರೋದರಗತೇನೈವ ತಪಸ್ತಪ್ತಂ ಸುದುಷ್ಕರಂ ॥ ೪ ॥

ಕನ್ನಡದ ಅನುವಾದ

ಶುಕ್ರೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ದೇವಿ ! ಬಳಿಕ ವಿಭೂತೀಶ್ವರನ ಪಶ್ಚಿಮದಲ್ಲಿ ಹತ್ತಿರದಲ್ಲಿಯೇ ಶುಕ್ರನು ಪ್ರತಿಷ್ಠೆಮಾಡಿರುವ ಸಕಲ ಪಾಪವನ್ನು ಪರಿಹರಿಸುವ ಶುಕ್ರೇಶ್ವರಲಿಂಗದ ಸಮೀಪಕ್ಕೆ ಹೋಗಬೇಕು. ಅಲ್ಲಿ ಶುಕ್ರನು ರುದ್ರನ ಪ್ರಭಾವದಿಂದ ಸಂಜೀವಿನೀವಿದ್ಯೆಯನ್ನು ಪಡೆದಿರುವನು.

೩. ಅಲ್ಲದೇ ಒಂದು ಸಾವಿರ ವರ್ಷ ಘೋರತಪಸ್ಸನ್ನಾಚರಿಸಿ ಶಿವನನ್ನು ಸಂತೋಷಗೊಳಿಸಿ ಗ್ರಹತ್ವವನ್ನು ಹೊಂದಿದನು.

೪. ಶಂಕರನು ದೇವಕಾರ್ಯದ ಸಿದ್ಧಿಗಾಗಿ ಶುಕ್ರನನ್ನು ನುಂಗಲು ಅವನು ಆ ಪರಮೇಶ್ವರನ ಹೊಟ್ಟೆಯಲ್ಲಿಯೇ ದುಷ್ಕರ ತಪಸ್ಸನ್ನು ಮಾಡಿದನು.

ವರ್ಷಾಣಾಮಯುತಂ ಸಾಗ್ರಂ ತುಷ್ಟಿಂ ನೀತೋ ಮಹೇಶ್ವರಃ ।
ನಿಷ್ಕಾಸಿತಸ್ತತಃ ಶೀಘ್ರಂ ಶುಕ್ರಮಾರ್ಗೇಣ ಶಂಭುನಾ ॥ ೫ ॥

ತತಃ ಶುಕ್ರೇತಿ ನಾಮಾಽಭೂದ್ಭಾರ್ಗವಸ್ಯ ಮಹಾತ್ಮನಃ ।
ತದಾರಾಧಯತೇ ಲಿಂಗಂ ಯಃ ಕೃತ್ವಾ ನಿಶ್ಚಲಂ ಮನಃ ॥ ೬ ॥
ಮೃತ್ಯುಂಜಯಂ ಜಪೇಲ್ಲಕ್ಷಂ ಸ ಸಮೀಹಿತಮಾಪ್ನುಯಾತ್ ॥ ೭ ॥

ತಂ ದೃಷ್ಟ್ವಾ ತ್ವಥವಾ ಸ್ಪೃಷ್ಟ್ವಾ ಜನ್ಮಾದಿಮರಣಾಂತಕಾತ್ ।
ಮುಚ್ಯತೇ ಪಾತಕಾನ್ಮರ್ತ್ಯಃ ಪ್ರಸಾದಾತ್ತಸ್ಯ ಭಾಮಿನಿ ॥ ೮ ॥

ಮೃತಸಂಜೀವನಾದ್ಯಂ ಯದೈಶ್ವರ್ಯಮಣಿಮಾದಿಕಂ ।
ಪ್ರಾಪ್ನುಯಾನ್ನಾತ್ರ ಸಂದೇಹೋ ಯಸ್ಯ ಭಕ್ತಿಃ ಸುನಿಶ್ಚಲಾ ॥ ೯ ॥

ಪಂಚಾಮೃತೇನ ಸಂಸ್ನಾಪ್ಯ ದೇವಂ ಶುಕ್ರಪ್ರತಿಷ್ಠಿತಂ ।
ಸುಗಂಧಪುಷ್ಪೈಃ ಸಂಪೂಜ್ಯ ಶೌಕ್ರೀಂ ಪೀಡಾಂ ಸ ನಾಽಽಪ್ನುಯಾತ್ ॥೧೦॥

---

೫. ಹತ್ತು ಸಾವಿರ ವರ್ಷಗಳ ಮೇಲೆ ಆ ತಪಸ್ಸಿನಿಂದ ಸಂತುಷ್ಟನಾದ ಶಿವನು ಅವನನ್ನು ರೇತಸ್ಸಿನ ಮಾರ್ಗದಿಂದ ಹೊರಗೆ ಬಿಟ್ಟನು.

೬–೭. ಆದರಿಂದ ಭಾರ್ಗವನಿಗೆ ಶುಕ್ರನೆಂದು ಹೆಸರಾಯಿತು. ಆ ಲಿಂಗವನ್ನು ಸ್ಥಿರಮನಸ್ಸಿನಿಂದ ಪೂಜಿಸಿ ಒಂದು ಲಕ್ಷ ಮೃತ್ಯುಂಜಯ ಜಪವನ್ನು ಮಾಡಿದವನು ಇಷ್ಟಾರ್ಥವನ್ನು ಹೊಂದುವನು.

೮. ಆ ಲಿಂಗವನ್ನು ಮುಟ್ಟುವುದರಿಂದಲೂ ಅಥವಾ ನೋಡುವುದರಿಂದಲೂ ಶಂಕರನ ಅನುಗ್ರಹದಿಂದ ಮನುಷ್ಯನು ಹುಟ್ಟಿದ ಮೊದಲ್ಗೊಂಡು ಮರಣದವರೆಗೆ ಮಾಡಿದ ಪಾಪವು ಪರಿಹಾರವಾಗುವುದು.

೯. ಶಿವನಲ್ಲಿ ದೃಢಭಕ್ತಿಯುಳ್ಳವನು ಮೃತಸಂಜೀವಿನಿ, ಅಣಿಮಾದ್ಯೈಶ್ವರ್ಯಗಳನ್ನು ಹೊಂದುವನು. ಇದರಲ್ಲಿ ಸಂದೇಹವಿಲ್ಲ.

೧೦. ಶುಕ್ರನು ಪ್ರತಿಷ್ಠೆಮಾಡಿರುವ ಆ ಶಿವಲಿಂಗವನ್ನು ಪಂಚಾಮೃತದಿಂದ ಅಭಿಷೇಕಮಾಡಿ ಸುಗಂಧ ಭರಿತವಾದ ಹೂವುಗಳಿಂದ ಪೂಜಿಸಿದವನಿಗೆ ಶುಕ್ರಪೀಡೆಯು ಉಂಟಾಗುವುದಿಲ್ಲ.

ಇತಿ ಸರ್ವಂ ಸಮಾಸೇನ ಮಾಹಾತ್ಮ್ಯಂ ಶುಕ್ರದೈವತಂ ।
ಕಥಿತಂ ತವ ಸುಶ್ರೋಣಿ ಶ್ರುತಂ ಪಾಪಭಯಾಪಹಂ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶುಕ್ರೇಶ್ವಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಚತ್ವಾರಿಂಶೋಽಧ್ಯಾಯಃ ॥

---

೧೧. ಸುಂದರಿ ! ಹೀಗೆ ಕೇಳುವುದರಿಂದಲೆ ಪಾಪವನ್ನು ಪರಿಹರಿಸುವ ಶುಕ್ರೇಶ್ವರನ ಮಾಹಾತ್ಮ್ಯವನ್ನು ನಿನಗೆ ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಶುಕ್ರೇಶ್ವರಮಾಹಾತ್ಮ್ಯವರ್ಣನವೆಂಬ ನಲವತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಪಂಚಾಶೋಽಧ್ಯಾಯಃ

ಶನೈಶ್ಚರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾಚ್ಛುಕ್ರೇಶ್ವರಾದ್ಗಚ್ಛೇದ್ದೇವಿ ಲಿಂಗಂ ಮಹಾಪ್ರಭಂ ।
ಶನೈಶ್ಚರೈಶ್ವರಂ ನಾಮ ಮಹಾಪಾತಕನಾಶನಂ ॥ ೧ ॥
ಬುಧೇಶ್ವರಾತ್ಪಶ್ಚಿಮತೋ ಹ್ಯಜಾದೇವ್ಯಗ್ನಿಗೋಚರೇ ।
ತಸ್ಯಾ ಧನುಃಪಂಚಕೇನ ನಾಽತಿದೂರೇ ವ್ಯವಸ್ಥಿತಂ ॥ ೨ ॥
ಕಲ್ಪಲಿಂಗಂ ಮಹಾದೇವಿ ಪೂಜಿತಂ ದೇವದಾನವೈಃ ।
ಛಾಯಾಪುತ್ರೇಣ ಸಂತಪ್ತಂ ತಪಃ ಪರಮದುಷ್ಕರಂ ॥ ೩ ॥
ಅನಾದಿನಿಧನೋ ದೇವೋ ಯೇನ ಲಿಂಗೇಽವತಾರಿತಃ ।
ಪ್ರಾಪ್ತವಾನ್ ಯೋ ಗ್ರಹೇಶತ್ವಂ ಭಕ್ತ್ಯಾ ಶಂಭೋಃ ಪ್ರಸಾದತಃ ॥ ೪ ॥
ಯಸ್ಯ ದೃಷ್ಟ್ಯಾ ಬಿಭೇತಿ ಸ್ಮ ದೇವಾಸುರಗಣೋ ಮಹಾನ್ ।
ನ ಸ ಕೋಽಪ್ಯಸ್ತಿ ವೈ ಪ್ರಾಣೀ ಬ್ರಹ್ಮಾಂಡೇ ಸಚರಾಚರೇ ॥ ೫ ॥

ಕನ್ನಡದ ಅನುವಾದ

ಶನೈಶ್ಚರೇಶ್ವರಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ದೇವಿ! ಆ ಶುಕ್ರೇಶ್ವರಲಿಂಗದಿಂದ, ಅತ್ಯಂತ ಕಾಂತಿಯುಳ್ಳದ್ದೂ, ಮಹಾಪಾತಕವನ್ನು ನೀಗಿಸುವುದೂ, ಬುಧೇಶ್ವರನ ಪಶ್ಚಿಮದಲ್ಲಿ ಅಜಾದೇವಿಯ ಆಗ್ನೇಯದಿಕ್ಕಿನಲ್ಲಿ ಐದು ಬಿಲ್ಲಿನ ದೂರದಲ್ಲಿರುವುದೂ, ದೇವದಾನವರಿಂದ ಪೂಜಿಸಲ್ಪಟ್ಟುದೂ ಆದ ಶನೈಶ್ಚರೇಶ್ವರಲಿಂಗದೆಡೆಗೆ ಹೋಗಬೇಕು. ಇಲ್ಲಿ ಛಾಯಾತನಯನಾದ ಶನೈಶ್ಚರನು ಅತ್ಯಂತ ದುಷ್ಕರವಾದ ತಪಸ್ಸನ್ನು ಮಾಡಿರುವನು.

೪. ಇಲ್ಲಿ ಆದ್ಯಂತರಹಿತನಾದ ಮಹೇಶ್ವರನು ಈ ಲಿಂಗದಲ್ಲಿ ಸನ್ನಿಹಿತನಾಗಿರುವನು. ಶನೈಶ್ಚರನು ಶಂಕರನ ಅನುಗ್ರಹದಿಂದ ಗ್ರಹಗಳಿಗಧಿಪತಿಯಾದನು.

೫-೭. ಶನೈಶ್ಚರನನ್ನು ಕಂಡು ದೇವಾಸುರರು ಭಯಪಡುವರು. ಚರಾಚರಾತ್ಮಕವಾದ ಪ್ರಪಂಚದಲ್ಲಿ ಶನೈಶ್ಚರನಿಂದ ಪೀಡಿಸಲ್ಪಡದ ದೇವತೆಗಳಾಗಲಿ,

ದೇವೋ ವಾ ದಾನವೋ ವಾऽಪಿ ಸೌರಿಣಾ ಪೀಡಿತೋ ನ ಯಃ ।
ಶನಿವಾರೇಣ ಸಂಪೂಜ್ಯ ಭಕ್ತ್ಯಾ ಸೌರೀಶ್ವರಂ ಶಿವಮ್ ॥ ೬ ॥
ಶಮೀಪತ್ರೈರ್ಮಹಾದೇವಿ ತಿಲಮಾಷಗುಡೌದನೈಃ ।
ಸಂತರ್ಪ್ಯ ತು ವಿಧಾನೇನ ದದ್ಯಾತ್ಕೃಷ್ಣಂ ವೃಷಂ ದ್ವಿಜೇ ॥ ೭ ॥
ಸ್ತುತ್ವಾ ಸ್ತೋತ್ರೈಶ್ಚ ವಿವಿಧೈಃ ಪುರಾಣಶ್ರುತಿಸಂಭವೈಃ ।
ಅಥ ವೈ ತೇನ ದೇವೇಶಃ ಸ್ತೋತ್ರೇಣ ಪರಿತೋಷಿತಃ ॥ ೮ ॥
ರಾಜ್ಞಾ ದಶರಥೇನೈವ ಕೃತೇನ ತು ಬಲೀಯಸಾ ।
ಸ್ತುತ್ಯಃ ಸೌರೀಶ್ವರೋ ದೇವಃ ಸರ್ವಪೀಡೋಪಶಾಂತಯೇ ॥ ೯ ॥

ದೇವ್ಯುವಾಚ :—

ಕಥಂ ದಶರಥೋ ರಾಜಾ ಚಕ್ರೇ ಶಾನೈಶ್ಚರೀಂ ಸ್ತುತಿಂ ।
ಕಥಂ ಸಂತುಷ್ಟಿಮಗಮತ್ತಸ್ಯ ದೇವಃ ಶನೈಶ್ಚರಃ ॥ ೧೦ ॥

ಈಶ್ವರ ಉವಾಚ :—

ರಘುವಂಶೇऽತಿವಿಖ್ಯಾತೋ ರಾಜಾ ದಶರಥೋ ಬಲೀ ।
ಚಕ್ರವರ್ತೀ ಸ ವಿಜ್ಞೇಯಃ ಸಪ್ತದ್ವೀಪಾಧಿಪಃ ಪುರಾ ॥ ೧೧ ॥
ಕೃತ್ತಿಕಾಂತೇ ಶನಿಂ ಕೃತ್ವಾ ದೈವಜ್ಞೈರ್ಜ್ಞಾಪಿತೋ ಹಿ ಸಃ ।
ರೋಹಿಣೀಂ ಭೇದಯಿತ್ವಾ ತು ಶನಿರ್ಯಾಸ್ಯತಿ ಸಾಂಪ್ರತಮ್ ॥ ೧೨ ॥

ದಾನವರಾಗಲಿ, ಇತರ ಯಾವ ಪ್ರಾಣಿಗಳಾಗಲಿ ಇಲ್ಲ. ಶನಿವಾರದ ದಿನ ಭಕ್ತಿಯಿಂದ ಶನೈಶ್ಚರೇಶ್ವರನನ್ನು ಶಮೀಪತ್ರಗಳಿಂದ ಪೂಜಿಸಿ ವಿಧಿಯಂತೆ ಎಳ್ಳು, ಉದ್ದು, ಬೆಲ್ಲದ ಅನ್ನಗಳಿಂದ ತೃಪ್ತಿಗೊಳಿಸಿ ಬ್ರಾಹ್ಮಣನಿಗೆ ಕರಿ ಯೆತ್ತನ್ನು ದಾನಮಾಡಬೇಕು.

೮–೯. ವೇದಪುರಾಣಗಳಲ್ಲಿರುವ ನಾನಾವಿಧ ಸ್ತೋತ್ರಗಳಿಂದ ಸ್ತುತಿಸಬೇಕು. ಅಥವಾ ಬಲಶಾಲಿಯಾದ ದಶರಥರಾಜನು ಮಾಡಿದ ಸ್ತೋತ್ರವೊಂದರಿಂದ ಸಕಲ ಬಾಧೆಗಳ ನಿವಾರಣೆಗಾಗಿ ಸ್ತುತಿಸಿ ಆ ಶನೈಶ್ಚರೇಶ್ವರನನ್ನು ಸಂತೋಷಗೊಳಿಸಬೇಕು.

೧೦. ದೇವಿಯು ಹೇಳುತ್ತಾಳೆ :—ದಶರಥರಾಜನು ಶನೈಶ್ಚರೇಶ್ವರನನ್ನು ಹೇಗೆ ಸ್ತುತಿಸಿದನು ? ಅದರಿಂದ ಆ ರಾಜನ ವಿಷಯದಲ್ಲಿ ಶಿವನು ಹೇಗೆ ಸಂತುಷ್ಟನಾದನು ?

೧೧. ಈಶ್ವರನು ಹೇಳುತ್ತಾನೆ :—ರಘುವಂಶದಲ್ಲಿ ಅತಿ ಪ್ರಸಿದ್ಧನಾದ ಸಪ್ತ ದ್ವೀಪಗಳಿಗರಸನಾದ ದಶರಥನೆಂಬ ಚಕ್ರವರ್ತಿಯಿದ್ದನು.

೧೨. ಅವನಿಗೆ ಜ್ಯೋತಿಷ್ಯರು, "ಶನಿಯು ಈಗ ಕೃತ್ತಿಕಾನಕ್ಷತ್ರದಲ್ಲಿರುವನು. ಅವನು ರೋಹಿಣೀನಕ್ಷತ್ರವನ್ನು ಭೇದಿಸಿಕೊಂಡು ಮುಂದಕ್ಕೆ ಹೋಗುವನು.

ಉಕ್ತಂ ಶಕಟಭೇದಂ ತು ಸುರಾಽಸುರಭಯಂಕರಂ ।
ದ್ವಾದಶಾಬ್ದಂ ತು ದುರ್ಭಿಕ್ಷಂ ಭವಿಷ್ಯತಿ ಸುದಾರುಣಂ ॥ ೧೩ ॥
ಏತಚ್ಛ್ರುತ್ವಾ ಮುನೇರ್ವಾಕ್ಯಂ ಮಂತ್ರಿಭಿಃ ಸಹಿತೋ ನೃಪಃ ।
ಆಕುಲಂ ತು ಜಗದ್ದೃಷ್ಟ್ವಾ ಪೌರಜಾನಪದಾದಿಕಂ ॥ ೧೪ ॥
ವದಂತಿ ಸತತಂ ಲೋಕಾ ನಿಯಮೇನ ಸಮಾಗತಾಃ ।
ದೇಶಾಶ್ಚ ನಗರಗ್ರಾಮಾ ಭಯಾಕ್ರಾಂತಾಃ ಸಮಂತತಃ ।
ಮುನೀನ್ ವಸಿಷ್ಠಪ್ರಮುಖಾನ್ ಪಪ್ರಚ್ಛ ಚ ಸ್ವಯಂ ನೃಪ ॥ ೧೫ ॥

ದಶರಥ ಉವಾಚ :—

ಸಮಾಧಾನಂ ಕಿಮತ್ರಾಸ್ತೇ ಬ್ರೂಹಿ ಮೇ ದ್ವಿಜಸತ್ತಮಃ ॥ ೧೬ ॥

ವಸಿಷ್ಠ ಉವಾಚ :—

ಪ್ರಾಜಾಪತ್ಯೇ ಚ ನಕ್ಷತ್ರೇ ತಸ್ಮಿನ್ ಭಿನ್ನೇ ಕುತಃ ಪ್ರಜಾ ।
ಅಯಂ ಯೋಗೋ ಹ್ಯಸಾಧ್ಯಸ್ತು ಬ್ರಹ್ಮೇಂದ್ರಾದಿಭಿಃ ಸುರೈಃ ॥ ೧೭ ॥
ತದಾ ಸಂಚಿಂತ್ಯ ಮನಸಾ ಸಾಹಸಂ ಪರಮಂ ಮಹತ್ ।
ಸಮಾದಾಯ ಧನುರ್ದಿವ್ಯಂ ದಿವ್ಯೈರಸ್ತ್ರೈಃ ಸಮನ್ವಿತಂ ॥ ೧೮ ॥

---

೧೩. ಇದು ಸುರಾಸುರರಿಗೆ ಭಯವನ್ನುಂಟುಮಾಡುವ ಶಕಟಭೇದವೆಂಬ ಯೋಗವು. ಇದರಿಂದ ರಾಜ್ಯದಲ್ಲಿ ಹನ್ನೆರಡು ವರ್ಷಕಾಲ ದಾರುಣ ದುರ್ಭಿಕ್ಷೆ ಯುಂಟಾಗುವುದು."

೧೪–೧೫. ಆ ದೊರೆಯು ಮಂತ್ರಿಗಳೊಡನೆ ಜೋಯಿಸರ ನುಡಿಯನ್ನು ಕೇಳಿ ಪಟ್ಟಣ, ದೇಶ ಮೊದಲಾದುವುಗಳು ವ್ಯಾಕುಲಗೊಂಡಿರುವುದನ್ನು ಕಂಡು ಯಾವಾಗಲೂ ಪ್ರಜೆಗಳು ದೇಶ, ನಗರ, ಗ್ರಾಮಗಳು ಭಯಗೊಂಡಿವೆಯೆಂದು ಬಂದು ಹೇಳಿರುವುದನ್ನು ಕೇಳಿ ವಸಿಷ್ಠರೇ ಮೊದಲಾದ ಮುನಿಗಳನ್ನು ಹೀಗೆ ಪ್ರಶ್ನಿಸಿದನು.

೧೬. ದಶರಥನು ಹೇಳುತ್ತಾನೆ:—ವಸಿಷ್ಠಮುನಿವರ್ಯನೆ! ಈ ಅನಿಷ್ಟವು ಪರಿಹಾರವಾಗಲು ಏನು ಸಮಾಧಾನವಿರುವುದು? ಅದನ್ನು ನನಗೆ ಹೇಳು.

೧೭. ವಸಿಷ್ಠನು ಹೇಳುತ್ತಾನೆ:—ಸಾರ್ವಭೌಮ! ಬ್ರಹ್ಮದೇವತಾಕವಾದ ರೋಹಿಣೀ ನಕ್ಷತ್ರವು ಭಿನ್ನವಾಗಲು ಪ್ರಜೆಗಳು ಬದುಕುವ ಬಗೆ ಹೇಗೆ? ಈ ಯೋಗವನ್ನು ನಿವಾರಿಸಲು ಬ್ರಹ್ಮೇಂದ್ರಾದಿ ದೇವತೆಗಳಿಗೂ ಅಸಾಧ್ಯ. ಎಂದನು."

೧೮–೨೦. ಆಗ ದಶರಥನು ಮನಸ್ಸಿನಿಂದ ಮಹಾಸಾಹಸ ಮಾಡುವುದಾಗಿ ಆಲೋಚಿಸಿ ದಿವ್ಯಾಸ್ತ್ರಗಳಿಂದ ಕೂಡಿದ ದಿವ್ಯ ಧನಸ್ಸನ್ನು ತೆಗೆದುಕೊಂಡು ರತ್ನ

ರಥಮಾರುಹ್ಯ ವೇಗೇನ ಗತೋ ನಕ್ಷತ್ರಮಂಡಲಂ ।
ರಥಂ ತು ಕಾಂಚನಂ ದಿವ್ಯಂ ಮಣಿರತ್ನವಿಭೂಷಿತಂ ॥ ೧೯ ॥

ಧ್ವಜೈಶ್ಚ ಚಾಮರೈಶ್ಛತ್ರೈಃ ಕಿಂಕಿಣೀಶತಶೋಭಿತಂ ।
ಹಂಸವರ್ಣಹಯೈರ್ಯುಕ್ತಂ ಮಹಾಕೇತುಸಮನ್ವಿತಂ ॥ ೨೦ ॥

ದೀಪ್ಯಮಾನೋ ಮಹಾರತ್ನೈಃ ಕಿರೀಟಮುಕುಟೋಜ್ವಲಃ ।
ಬಭ್ರಾಜ ಸ ತದಾಕಾಶೇ ದ್ವಿತೀಯ ಇವ ಭಾಸ್ಕರಃ ॥ ೨೧ ॥

ಆಕರ್ಣಂ ಚಾಪಮಾಪೂರ್ಯ ಸಂಹಾರಾಸ್ತ್ರಂ ನಿಯೋಜ್ಯ ಚ ।
ಕೃತ್ತಿಕಾಂತೇ ಶನಿಂ ಜ್ಞಾತ್ವಾ ಪ್ರವಿಶ್ಯ ಕಿಲ ರೋಹಿಣೀಂ ॥ ೨೨ ॥

ದೃಷ್ಟ್ವಾ ದಶರಥೋಽಸ್ಯಾಗ್ರೇ ತಸ್ಥೌ ಸಭ್ರುಕುಟೀಮುಖಃ ।
ಸಂಹಾರಾಸ್ತ್ರಂ ಶನಿರ್ದೃಷ್ಟ್ವಾ ಸುರಾಽಸುರನಿಮರ್ದನಂ ॥ ೨೩ ॥

ಹಸಿತ್ವಾ ತದ್ಭಯಾತ್ಸೌರಿರಿದಂ ವಚನಮಬ್ರವೀತ್ ।
ಪೌರುಷಂ ತವ ರಾಜೇಂದ್ರ ಪರಂ ರಿಪುಭಯಂಕರಂ ॥ ೨೪ ॥

ದೇವಾಽಸುರಮನುಷ್ಯಾಶ್ಚ ಸಿದ್ಧವಿದ್ಯಾಧರೋರಗಾಃ ।
ಮಯಾ ವಿಲೋಕಿತಾಃ ಸರ್ವೇ ಭಯಂ ಯಾಶ್ತ್ರ ವ್ರಜಂತಿ ತೇ ॥ ೨೫ ॥

ಭೂಷಿತವೂ, ಧ್ವಜ, ಚಾಮರ, ಛತ್ರ, ಕಿರುಗಂಟೆಗಳಿಂದ ಅಲಂಕಾರಗೊಂಡುವೂ, ಹಂಸದಂತೆ ಬೆಳ್ಳಗಿರುವ ಕುದುರೆಗಳಿಂದಲೂ, ದೊಡ್ಡ ಧ್ವಜದಿಂದಲೂ ಕೂಡಿರುವುದಾದ ಮಹಾರಥವನ್ನೇರಿ ನಕ್ಷತ್ರ ಮಂಡಲಕ್ಕೆ ಹೋದನು.

೨೧. ಅಲ್ಲಿ ಮಹಾರತ್ನಗಳಿಂದಲೂ, ಕಿರೀಟದಿಂದಲೂ ವಿರಾಜಿಸುತ್ತಿರುವ ಆ ದಶರಥನು ಎರಡನೆಯ ಸೂರ್ಯನಂತೆ ಕಂಗೊಳಿಸಿದನು.

೨೨-೨೪. ಅವನು ಕಿವಿಯವರೆಗೆ ಬಿಲ್ಲನ್ನು ಎಳೆದು ಸಂಹಾರಾಸ್ತ್ರವನ್ನು ಜೋಡಿಸಿ ಕೃತ್ತಿಕಾ ನಕ್ಷತ್ರದ ಕೊನೆಯಲ್ಲಿ ರೋಹಿಣೀ ನಕ್ಷತ್ರವನ್ನು ಪ್ರವೇಶಿಸಿದ ಶನಿಯನ್ನು ಕಂಡು ಹುಬ್ಬುಗಂಟು ಹಾಕಿಕೊಂಡು ಅವನ ಮುಂದೆ ನಿಂತನು. ಶನಿಯು ಸುರಾಸುರರನ್ನು ನಾಶಗೊಳಿಸುವ ಆ ಸಂಹಾರಾಸ್ತ್ರವನ್ನು ಕಂಡು ನಕ್ಕು ಅವನು ಭಯದಿಂದ ಇಂತೆಂದನು. "ನೃಪವರ್ಯನೆ! ನಿನ್ನ ಪೌರುಷವು ಶತ್ರುಗಳಿಗೆ ಭಯವನ್ನುಂಟು ಮಾಡುವುದು.

೨೫. ನಾನು ನೋಡಿದೊಡನೆ ದೇವತೆಗಳೂ, ದಾನವರೂ, ಮನುಷ್ಯರೂ, ಸಿದ್ಧರೂ ವಿದ್ಯಾಧರರೂ, ನಾಗರೂ ಭಯಗೊಳ್ಳುವರು.

ತುಷ್ಟೋಽಹಂ ತವ ರಾಜೇಂದ್ರ ತಪಸಾ ಪೌರುಷೇಣ ಚ ।
ವರಂ ಬ್ರೂಹಿ ಪ್ರದಾಸ್ಯಾಮಿ ಮನಸಾ ಯದಭೀಪ್ಸಿತಂ ॥ ೨೬ ॥

ದಶರಥ ಉವಾಚ :—

ರೋಹಿಣೀಂ ಭೇದಯಿತ್ವಾ ತು ನ ಗಂತವ್ಯಂ ತ್ವಯಾ ಶನೇ ।
ಸರಿತಃ ಸಾಗರಾ ಯಾವದ್ಯಾವಚ್ಚಂದ್ರಾರ್ಕಮೇದಿನೀ ॥ ೨೭ ॥
ಯಾಚಿತಂ ತೇ ಮಯಾ ಸೌರೇ ನಾಽನ್ಯಮಿಚ್ಛಾಮಿ ತೇ ವರಂ ।
ಏವಮುಕ್ತಃ ಶನಿಃ ಪ್ರಾದಾದ್ವರಂ ತಸ್ಮೈ ತು ಶಾಶ್ವತಂ ॥ ೨೮ ॥
ಪ್ರಾಪ್ಯೈವಂ ತು ವರಂ ರಾಜಾ ಕೃತಕೃತ್ಯೋಽಭವತ್ತದಾ ।
ಪುನರೇವಾಽಬ್ರವೀತ್ಸೌರಿರ್ವರಂ ವರಯ ಸುವ್ರತ ॥ ೨೯ ॥
ಪ್ರಾರ್ಥಯಾಮಾಸ ಹೃಷ್ಟಾತ್ಮಾ ವರಮೇವಂ ಶನೇಸ್ತದಾ ।
ನ ಭೇತ್ತವ್ಯಂ ಚ ಶಕಟಂ ತ್ವಯಾ ಭಾಸ್ಕರನಂದನ ॥ ೩೦ ॥
ದ್ವಾದಶಾಬ್ದಂ ತು ದುರ್ಭಿಕ್ಷಂ ನ ಕರ್ತವ್ಯಂ ಕದಾಚನ ।
ಕೀರ್ತಿರೇಷಾ ಮದೀಯಾ ಚ ತ್ರೈಲೋಕ್ಯೇ ವಿಚರಿಷ್ಯತಿ ॥ ೩೧ ॥

---

೨೬. ರಾಜೇಂದ್ರ! ನಿನ್ನ ತಪಸ್ಸಿನಿಂದಲೂ, ಪೌರುಷದಿಂದಲೂ ನಾನು ಮೆಚ್ಚಿರುವೆನು. ನಿನಗಿಷ್ಟವಾದ ವರವನ್ನು ಕೇಳಿಕೊ. ಕೊಡುವೆನು."

೨೭. ದಶರಥನು ಹೇಳುತ್ತಾನೆ:—ಶನಿಯೆ! ನೀನು ನದಿಗಳೂ, ಸಮುದ್ರಗಳೂ, ಚಂದ್ರಸೂರ್ಯರೂ ಇರುವವರೆಗೆ ರೋಹಿಣೀ ನಕ್ಷತ್ರವನ್ನು ಭೇದಿಸಬಾರದು.

೨೮. ನಾನು ಬೇರೆ ವರವನ್ನು ಕೇಳಿಕೊಳ್ಳುವುದಿಲ್ಲ. ಎನ್ನಲು ಶನಿಯು ಆವನಿಗೆ ಆ ಶಾಶ್ವತವರವನ್ನಿತ್ತನು.

೨೯. ದಶಥನು ಈ ವರವನ್ನು ಪಡೆದು ಕೃತಕೃತ್ಯನಾದನು. ಮರಳಿ ಶನಿಯು ವರವನ್ನು ಕೇಳು ಎಂದನು.

೩೦–೩೧. ಆಗ ರಾಜನು ಸಂತೋಷಗೊಂಡು, "ಸೂರ್ಯತನಯ! ನೀನು ಶಕಟವನ್ನು ಭೇದಿಸಿ ದ್ವಾದಶ ವರ್ಷದ ದುರ್ಭಿಕ್ಷೆಯನ್ನುಂಟುಮಾಡಬಾರದು. ನನ್ನೀ ಕೀರ್ತಿಯು ಮೂರು ಲೋಕದಲ್ಲಿಯೂ ವ್ಯಾಪಿಸಲಿ?" ಎಂದನು.

ಈಶ್ವರ ಉವಾಚ :—

ವರದ್ವಯಂ ತತಃ ಪ್ರಾಪ್ಯ ಹೃಷ್ಟರೋಮಾ ಸ ಪಾರ್ಥಿವಃ ।
ರಥೋಪರಿ ಧನುರ್ಮುಕ್ತ್ವಾ ಭೂತ್ವಾ ಚೈವ ಕೃತಾಂಜಲಿಃ ॥ ೩೨ ॥
ಧ್ಯಾತ್ವಾ ಸರಸ್ವತೀಂ ದೇವೀಂ ಗಣನಾಥಂ ವಿನಾಯಕಂ ।
ರಾಜಾ ದಶರಥಃ ಸ್ತೋತ್ರಂ ಸೌರೇರಿದಮಥಾಽಕರೋತ್ ॥ ೩೩ ॥

ರಾಜೋವಾಚ :—

ನಮೋ ನೀಲಮಯೂಖಾಯ ನೀಲೋತ್ಪಲನಿಭಾಯ ಚ ।
ನಮೋ ನಿರ್ಮಾಂಸದೇಹಾಯ ದೀರ್ಘಶ್ಮಶ್ರುಜಟಾಯ ಚ ॥ ೩೪ ॥
ನಮೋ ವಿಶಾಲನೇತ್ರಾಯ ಶುಷ್ಕೋದರಭಯಾನಕ ।
ನಮಃ ಪರುಷಗಾತ್ರಾಯ ಸ್ಥೂಲರೋಮಾಯ ವೈ ನಮಃ ॥ ೩೫ ॥
ನಮೋ ನಿತ್ಯಂ ಕ್ಷುಧಾರ್ತಾಯ ನಿತ್ಯತೃಪ್ತಾಯ ವೈ ನಮಃ ।
ನಮಃ ಕಾಲಾಗ್ನಿರೂಪಾಯ ಕೃತಾಂತಕ ನಮೋಽಸ್ತು ತೇ ॥ ೩೬ ॥
ನಮೋ ದೀರ್ಘಾಯ ಶುಷ್ಕಾಯ ಕಾಲದೃಷ್ಟೇ ನಮೋಽಸ್ತು ತೇ ।
ನಮಸ್ತೇ ಕೋಟರಾಕ್ಷಾಯ ದುರ್ನಿರೀಕ್ಷ್ಯಾಯ ವೈ ನಮಃ ॥ ೩೭ ॥

೩೨–೩೩. ಈಶ್ವರನು ಹೇಳುತ್ತಾನೆ:—ದಶರಥನು ಈ ಎರಡು ವರಗಳನ್ನು ಪಡೆದು ರೋಮಾಂಚಗೊಂಡು ಬಿಲ್ಲನ್ನು ರಥದಲ್ಲಿರಿಸಿ ಕೈಮುಗಿದುಕೊಂಡು ಸರಸ್ವತೀ, ವಿನಾಯಕರನ್ನು ಧ್ಯಾನಿಸಿ ಶನಿಯನ್ನು ಹೀಗೆ ಸ್ತೋತ್ರಗೈದನು.

೩೪. ರಾಜನು ಹೇಳುತ್ತಾನೆ:—ನೀಲ ಕಾಂತಿಯುಳ್ಳವನೂ, ನೀಲೋತ್ಪಲಕ್ಕೆ ಸಮಾನವಾದವರ್ಣವುಳ್ಳವನೂ, ಮಾಂಸವಿಲ್ಲದ ಶರೀರವುಳ್ಳವನೂ, ಉದ್ದವಾದ ಮೀಸೆ, ಜಟೆಗಳುಳ್ಳವನೂ ಆದ ಓ ಶನೈಶ್ಚರ! ನಿನಗೆ ನಮಸ್ಕಾರವು.

೩೫. ವಿಶಾಲವಾದ ಕಣ್ಣುಗಳುಳ್ಳವನೂ, ಒಣಗಿದ ಹೊಟ್ಟೆಯಿಂದ ಭಯಂಕರನೂ, ಕಠಿನವಾದ ದೇಹವುಳ್ಳವನೂ, ದಪ್ಪವಾದ ಕೂದಲುಳ್ಳವನೂ ಆದ ಓ ಶನೈಶ್ಚರ! ನಿನಗೆ ನಮಸ್ಕಾರವು.

೩೬. ಯಾವಾಗಲೂ ಹಸಿವುಗೊಂಡವನೂ, ತೃಪ್ತಿಗೊಂಡವನೂ, ಕಾಲಾಗ್ನಿರೂಪನೂ ಮೃತ್ಯುಸ್ವರೂಪನೂ ಆದ ಶನೈಶ್ಚರನೆ! ನಿನಗೆ ನಮಸ್ಕಾರವು.

೩೭. ಉದ್ದವಾದವನೂ, ಒಣಗಿರುವವನೂ, ಪ್ರಳಯದೃಷ್ಟಿಯುಳ್ಳವನೂ ಪೊಟರೆಯಂತಿರುವ ಕಣಿಗಣ್ಣುಳ್ಳವನೂ ಆದ ಓ ಶನೈಶ್ಚರನೆ! ನಿನಗೆ ನಮಸ್ಕಾರವು.

ನಮೋ ಘೋರಾಯ ರೌದ್ರಾಯ ಭೀಷಣಾಯ ಕರಾಲಿನೇ ।
ನಮಸ್ತೇ ಸರ್ವಭಕ್ಷಾಯ ವಲೀಮುಖ ನಮೋಽಸ್ತು ತೇ ॥ ೩೮ ॥
ಸೂರ್ಯಪುತ್ರ ನಮಸ್ತೇಽಸ್ತು ಭಾಸ್ಕರೇ ಭಯದಾಯಕ ।
ಅಧೋದೃಷ್ಟೇ ನಮಸ್ತುಭ್ಯಂ ವಪುಃಶ್ಯಾಮ ನಮೋಽಸ್ತು ತೇ ॥ ೩೯ ॥
ನಮೋ ಮಂದಗತೇ ತುಭ್ಯಂ ನಿಸ್ತ್ರಿಂಶಾಯ ನಮೋ ನಮಃ ।
ನಮಸ್ತೇ ಉಗ್ರರೂಪಾಯ ಚಂಡತೇಜಾಯ ತೇ ನಮಃ ॥ ೪೦ ॥
ತಪಸಾ ದಗ್ಧದೇಹಾಯ ನಿತ್ಯಂ ರೋಗರತಾಯ ಚ ।
ನಮಸ್ತೇ ಜ್ಞಾನನೇತ್ರಾಯ ಕಶ್ಯಪಾತ್ಮಜಸೂನವೇ ॥ ೪೧ ॥
ತುಷ್ಟೋ ದದಾಸಿ ವೈ ರಾಜ್ಯಂ ರುಷ್ಟೋ ಹರಸಿ ತತ್ಕ್ಷಣಾತ್ ।
ದೇವಾಸುರಮನುಷ್ಯಾಶ್ಚ ಪಶುಪಕ್ಷಿಸರೀಸೃಪಾಃ ॥ ೪೨ ॥
ತ್ವಯಾ ವಿಲೋಕಿತಾಃ ಸೌರೇ ದೈನ್ಯಮಾಶು ವ್ರಜಂತಿ ಚ ।
ಬ್ರಹ್ಮಾ ಶಕ್ರೋ ಯಮಶ್ಚೈವ ಋಷಯಃ ಸಪ್ತತಾರಕಾಃ ॥ ೪೩ ॥
ರಾಜ್ಯಭ್ರಷ್ಟಾಶ್ಚ ತೇ ಸರ್ವೇ ತವ ದೃಷ್ಟ್ಯಾ ವಿಲೋಕಿತಾಃ ।
ದೇಶಾಶ್ಚ ನಗರಗ್ರಾಮಾ ದ್ವೀಪಾಶ್ಚೈವಾದ್ರಯಸ್ತಥಾ ॥ ೪೪ ॥
ರೌದ್ರದೃಷ್ಟ್ಯಾ ತು ಯೇ ದೃಷ್ಟಾಃ ಕ್ಷಯಂ ಗಚ್ಛಂತಿ ತತ್ಕ್ಷಣಾತ್ ॥ ೪೫ ॥

---

೩೮. ಭಯಂಕರನೂ, ಕರಾಳನೂ, ಸರ್ವ ಭಕ್ಷಕನೂ, ಸುಕ್ಕುಹಿಡಿದ ಮುಖವುಳ್ಳವನೂ ಆದ ಓ ಶನೈಶ್ಚರ ! ನಿನಗೆ ನಮಸ್ಕಾರವು.

೩೯. ಸೂರ್ಯತನಯನೂ, ಭಯಂಕರನೂ, ಕೆಳದೃಷ್ಟಿಯುಳ್ಳವನೂ, ನೀಲ ದೇಹನೂ ಆಗಿರುವ ಎಲೈ ಶನೈಶ್ಚರನೆ ! ನಿನಗೆ ನಮಸ್ಕಾರವು.

೪೦. ಮಂದಗಮನವುಳ್ಳವನೂ, ಕ್ರೂರನೂ, ಕಠಿನರೂಪನೂ, ಭಯಂಕರ ತೇಜಸ್ಸುಳ್ಳವನೂ ಆದ ಎಲೈ ಶನೈಶ್ಚರನೆ ! ನಿನಗೆ ನಮಸ್ಕಾರವು.

೪೧. ತಪಸ್ಸಿನಿಂದ ಸುಟ್ಟದೇಹವುಳ್ಳವನೂ, ಯೋಗಾಸಕ್ತನೂ, ಜ್ಞಾನವೇ ಕಣ್ಣಾದವನೂ ಆದ ಶನೈಶ್ಚರ ! ನಿನಗೆ ನಮಸ್ಕಾರವು.

೪೨–೪೫. ನೀನು ಸಂತುಷ್ಟನಾಗಿ ರಾಜ್ಯವನ್ನೀಯುವೆ. ಕುಪಿತನಾಗಿ ಕೂಡಲೇ ಅದನ್ನು ಅಪಹರಿಸುವೆ. ನೀನು ನೋಡಿದೊಡನೆ ದೇವತೆಗಳೂ, ಅಸುರರೂ, ಮನುಷ್ಯರೂ, ಪಶುಗಳೂ, ಪಕ್ಷಿಗಳೂ, ಹಾವುಗಳೂ, ದೀನ ದೀನರಾಗುವರು. ನಿನ್ನ ನೋಟದಿಂದ ಬ್ರಹ್ಮ, ಇಂದ್ರ, ಯಮ, ಋಷಿಗಳು, ಏಳು ನಕ್ಷತ್ರರ್ಷಿಗಳು ಎಲ್ಲರೂ ರಾಜ್ಯಭ್ರಷ್ಟರಾಗಿರುವರು. ನೀನು ರೌದ್ರದೃಷ್ಟಿಯಿಂದೀಕ್ಷಿಸಿದಕೂಡಲೇ ದೇಶ, ನಗರ, ಗ್ರಾಮ, ದ್ವೀಪ, ಪರ್ವತ ಇವುಗಳು ಎಲ್ಲವೂ ನಾಶವಾಗುವುವು.

ಪ್ರಸಾದಂ ಕುರು ಮೇ ಸೌರೇ ವರಾರ್ಥೇಽಹಂ ತವಾಶ್ರಿತಃ ।
ಸೌರೇ ಕ್ಷಮಸ್ವಾಽಪರಾಧಂ ಸರ್ವಭೂತಹಿತಾಯ ಚ ॥ ೪೬ ॥

ಈಶ್ವರ ಉವಾಚ :—

ಏವಂ ಸ್ತುತಸ್ತದಾ ಸೌರೀ ರಾಜ್ಞಾ ದಶರಥೇನ ಚ ।
ಗ್ರಹರಾಜಃ ಶನಿರ್ವಾಕ್ಯಂ ಹೃಷ್ಟರೋಮಾಽಬ್ರವೀದಿದಂ ॥ ೪೭ ॥

ಶನಿರುವಾಚ :—

ತುಷ್ಟೋಽಹಂ ತವ ರಾಜೇಂದ್ರ ಸ್ತವೇನಾನೇನ ಸುವ್ರತ ।
ವರಂ ಬ್ರೂಹಿ ಪ್ರದಾಸ್ಯಾಮಿ ಸ್ವೇಚ್ಛಯಾ ರಘುನಂದನ ॥ ೪೮ ॥

ದಶರಥ ಉವಾಚ :—

ಅದ್ಯಪ್ರಭೃತಿ ಪಿಂಗಾಕ್ಷ ಪೀಡಾ ಕಾರ್ಯಾ ನ ಕಸ್ಯಚಿತ್ ।
ದೇವಾಽಸುರಮನುಷ್ಯಾಣಾಂ ಪಶುಪಕ್ಷಿಸರೀಸೃಪಾಂ ॥ ೪೯ ॥

ಶನಿರುವಾಚ :—

ಗ್ರಹಾಣಾಂ ದುರ್ಗ್ರಹೋ ಜ್ಞೇಯೋ ಗ್ರಹಪೀಡಾಂ ಕರೋಮ್ಯಹಂ ।
ಅದೇಯಂ ಪ್ರಾರ್ಥಿತಂ ರಾಜನ್ ಕಿಂಚಿದ್ಯುಕ್ತಂ ದದಾಮ್ಯಹಂ ॥ ೫೦ ॥

---

೪೬. ಶನೈಶ್ಚರ! ವರಕ್ಕಾಗಿ ನಿನ್ನನ್ನಾಶ್ರಯಿಸಿದ ನನಗೆ ಅನುಗ್ರಹಮಾಡು. ಸಕಲ ಪ್ರಾಣಿಗಳ ಹಿತಕ್ಕಾಗಿ ನಾನು ಮಾಡಿದ ಅಪರಾಧವನ್ನು ಕ್ಷಮಿಸು.

೪೭. ಈಶ್ವರನು ಹೇಳುತ್ತಾನೆ :—ಹೀಗೆ ದಶರಥನು ಸ್ತುತಿಸಲು ಗ್ರಹರಾಜನಾದ ಶನಿಯು ರೋಮಾಂಚಗೊಂಡು ಇಂತೆಂದನು.

೪೮. ಶನಿಯು ಹೇಳುತ್ತಾನೆ:—ರಾಜಶ್ರೇಷ್ಠನೇ! ನಿನ್ನೀಸ್ತುತಿಗೆ ನಾನು ಮೆಚ್ಚಿರುವೆನು. ನಿನ್ನ ಇಷ್ಟಾನುಸಾರ ವರವನ್ನು ಕೇಳಿಕೊ. ಕೊಡುವೆನು.

೪೯. ದಶರಥನು ಹೇಳುತ್ತಾನೆ :—ಹಳದಿಯಕಣ್ಣುಳ್ಳ ಓ ಶನೈಶ್ಚರನೆ! ನೀನು ಇನ್ನು ಮುಂದೆ ದೇವತೆ, ಅಸುರ, ಮನುಷ್ಯ, ಪಶು, ಪಕ್ಷಿ, ಹಾವು ಇವುಗಳಲ್ಲಿ ಯಾರನ್ನೂ ಪೀಡಿಸಬಾರದು.

೫೦. ಶನಿಯು ಹೇಳುತ್ತಾನೆ :—ದೊರೆಯೆ! ಗ್ರಹಗಳಲ್ಲಿ ದುಷ್ಟನಾದ ನಾನು ಗ್ರಹಪೀಡೆಯನ್ನು ಮಾಡುತ್ತಿರುವೆನು. ನೀನು ಕೊಡಬಾರದ ವರವನ್ನೇ ಬೇಡಿರುವೆ. ನಾನು ಅದರಲ್ಲಿ ಉಚಿತವಾದುದನ್ನು ಕೊಡುವೆನು.

ತ್ವಯಾ ಪ್ರೋಕ್ತಂ ಮಮ ಸ್ತೋತ್ರಂ ಯೇ ಪಠಿಷ್ಯಂತಿ ಮಾನವಾಃ ।
ಪುರುಷಾಶ್ಚ ಸ್ತ್ರಿಯೋ ವಾಽಪಿ ಮದ್ಭಯೇನೋಪಪೀಡಿತಾಃ ॥ ೫೧ ॥
ದೇವಾಽಸುರಮನುಷ್ಯಾಸ್ತು ಸಿದ್ಧವಿದ್ಯಾಧರೋರಗಾಃ ।
ಮೃತ್ಯುಸ್ಥಾನೇ ಸ್ಥಿತೋ ವಾಽಪಿ ಜನ್ಮಸ್ತ್ರಾಂತಗತಸ್ತಥಾ ॥ ೫೨ ॥
ಏಕಕಾಲಂ ದ್ವಿಕಾಲಂ ವಾ ತೇಷಾಂ ಶ್ರೇಯೋ ದದಾಮ್ಯಹಂ ।
ಪೂಜಯಿತ್ವಾ ಜಪೇತ್ ಸ್ತೋತ್ರಂ ಭೂತ್ವಾ ಚೈವ ಕೃತಾಂಜಲಿಃ ॥ ೫೩ ॥
ತಸ್ಯ ಪೀಡಾಂ ನ ಚೈವಾಽಹಮಿಹ ಕುರ್ಯಾಂ ಕದಾಚನ ।
ಜನ್ಮಸ್ಥಾನೇ ಸ್ಥಿತೋ ವಾಽಪಿ ಮೃತ್ಯುಸ್ಥಾನೇ ಸ್ಥಿತೋಽಪಿ ಚ ॥ ೫೪ ॥
ಜನ್ಮಋಕ್ಷೇ ಚ ಲಗ್ನೇ ಚ ದಶಾಸ್ವಂತರ್ದಶಾಸು ಚ ।
ರಕ್ಷಾಮಿ ಸತತಂ ತಸ್ಯ ಪೀಡಾಂ ಚಾಽನ್ಯಗ್ರಹಸ್ಯ ಚ ॥ ೫೫ ॥
ಅನೇನೈವ ಪ್ರಕಾರೇಣ ಪೀಡಾಮುಕ್ತಸ್ತ್ವಸೌ ಭವೇತ್ ।
ಏತತ್ಪ್ರೋಕ್ತಂ ಮಯಾ ದತ್ತಂ ವರಂ ಚ ರಘುನಂದನ ॥ ೫೬ ॥

ಈಶ್ವರ ಉವಾಚ :—

ವರದ್ವಯಂ ಚ ಸಂಪ್ರಾಪ್ಯ ರಾಜಾ ದಶರಥಃ ಪುರಾ ।
ಮೇನೇ ಕೃತಾರ್ಥಮಾತ್ಮಾನಂ ನಮಸ್ಕೃತ್ಯ ಶನೈಶ್ಚರಂ ॥ ೫೭ ॥

೫೧–೫೪. ನನ್ನ ಭಯದಿಂದ ಪೀಡಿತರಾದ ದೇವ, ಅಸುರ, ಮನುಷ್ಯ, ಸಿದ್ಧ, ವಿದ್ಯಾಧರ, ನಾಗ ಇವರು ಪುರುಷರಾಗಲಿ, ಸ್ತ್ರೀಯಾಗಲಿ ಕೈಮುಗಿದುಕೊಂಡು ದಿನಕ್ಕೆ ಒಂದುಸಲ ಅಥವಾ ಎರಡುಸಲ ನೀನು ಹೇಳಿದ ಸ್ತೋತ್ರವನ್ನು ಪಠಿಸಿ ಭಕ್ತಿಯಿಂದ ಪೂಜಿಸಿದರೆ ನಾನು ಜನ್ಮ, ಅನುಜನ್ಮ, ಮೃತ್ಯುಸ್ಥಾನಗಳಲ್ಲಿದ್ದರೂ ಅವರನ್ನು ಪೀಡಿಸುವುದಿಲ್ಲ.

೫೫. ಮತ್ತು ಜನ್ಮನಕ್ಷತ್ರ, ಲಗ್ನ, ದಶೆ, ಅಂತರ್ದಶೆಗಳಲ್ಲಿ ಇರುವ ಇತರ ಗ್ರಹಗಳು ಪೀಡಿಸದಂತೆ ನೋಡಿಕೊಳ್ಳುವೆನು.

೫೬. ದಶರಥ! ಈ ಕ್ರಮದಿಂದಲೆ ಗ್ರಹಪೀಡಿತನು ಪೀಡೆಯಿಲ್ಲದವನಾಗುವನು. ಈ ವರವನ್ನು ನಿನಗಿತ್ತಿರುವೆನು.

೫೭–೫೮. ಈಶ್ವರನು ಹೇಳುತ್ತಾನೆ :—ಹೀಗೆ ದಶರಥನು ಎರಡು ವರಗಳನ್ನು ಪಡೆದು ತಾನು ಧನ್ಯನಾದೆನೆಂದರಿತು ಶನೈಶ್ಚರನನ್ನು ನಮಸ್ಕರಿಸಿ ಸ್ತುತಿಸಿ ಅವನ ಅನುಮತಿಯನ್ನು ಪಡೆದು ದೇವತೆಗಳಿಂದ ಪೂಜಿತನಾಗಿ ರಥವನ್ನೇರಿ ತನ್ನ ಸ್ಥಾನಕ್ಕೆ ತೆರಳಿದನು.

ಶನಿಂ ಸ್ತುತ್ವಾಽಭ್ಯನುಜ್ಞಾತೋ ರಥಮಾರುಹ್ಯ ವೀರ್ಯವಾನ್ ।
ಸ್ವಸ್ಥಾನಂ ಗತವಾನ್ರಾಜಾ ಪೂಜ್ಯಮಾನೋ ದಿವೌಕಸೈಃ ॥ ೫೮ ॥
ಯ ಇದಂ ಪ್ರಾತರುತ್ಥಾಯ ಸೌರಿವಾರೇ ಪಠೇನ್ನರಃ ।
ಸರ್ವಗ್ರಹೋದ್ಭವಾ ಪೀಡಾ ನ ಭವೇದ್ಭುವಿ ತಸ್ಯ ತು ॥ ೫೯ ॥
ಶನೈಶ್ಚರಂ ಸ್ಮರೇದ್ದೇವಂ ನಿತ್ಯಂ ಭಕ್ತಿಸಮನ್ವಿತಃ ।
ಪೂಜಯಿತ್ವಾ ಪಠೇತ್ಸ್ತೋತ್ರಂ ತಸ್ಯ ತುಷ್ಯತಿ ಭಾಸ್ಕರಿಃ ॥ ೬೦ ॥
ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ಶನಿದೈವತಂ ।
ಸರ್ವಪಾಪೋಪಶಮನಂ ಸರ್ವಕಾಮಫಲಪ್ರದಂ ॥ ೬೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶನೈಶ್ಚರೇಶ್ವರ ಮಾಹಾತ್ಮ್ಯವರ್ಣನಂ ನಾಮ
॥ ಏಕೋನಪಂಚಾಶೋಽಧ್ಯಾಯಃ ॥

---

೫೯. ಶನಿವಾರದ ದಿನ ಬೆಳಗ್ಗೆ ಎದ್ದು ಈ ಸ್ತೋತ್ರವನ್ನು ಪಠಿಸಿದ ಮನುಷ್ಯನಿಗೆ ಸಮಸ್ತ ಗ್ರಹಗಳ ಪೀಡೆಯೂ ಉಂಟಾಗುವುದಿಲ್ಲ.

೬೦. ನಿತ್ಯವೂ ಭಕ್ತಿಯಿಂದ ಶನೈಶ್ಚರನನ್ನು ಸ್ಮರಿಸಿ ಪೂಜಿಸಿ ಈ ಸ್ತೋತ್ರವನ್ನು ಪಠಿಸಿದವನಲ್ಲಿ ಶನಿಯು ಸಂತುಷ್ಟನಾಗುವನು.

೬೧. ದೇವಿ! ನಿನಗೆ ಸರ್ವಪಾಪಗಳನ್ನು ಪರಿಹರಿಸುವುದೂ, ಸಕಲೇಷ್ಟಾರ್ಥಗಳನ್ನೀಯುವುದೂ ಆದ ಶನಿ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶನೈಶ್ಚರೇಶ್ವರಮಾಹಾತ್ಮ್ಯವರ್ಣನವೆಂಬ ನಲವತ್ತೊಂಬತ್ತನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಪಂಚಾಶೋಽಧ್ಯಾಯಃ ॥

ರಾಹ್ವೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ರಾಹುಪ್ರತಿಷ್ಠಿತಂ
ಶನೈಶ್ಚರೇಶ್ವರಾದ್ದೇವಿ ವಾಯವ್ಯೇ ಸಂಪ್ರತಿಷ್ಠಿತಂ ॥ ೧ ॥
ಅಜಾದೇವ್ಯಾಶ್ಚೋತ್ತರತೋ ಧನುಷಾಂ ಸಪ್ತಕೇ ಸ್ಥಿತಂ ।
ಮಂಗಲಾಯಾಃ ಸಮೀಪಸ್ಥಂ ನಾಽತಿದೂರೇ ವ್ಯವಸ್ಥಿತಂ ॥ ೨ ॥
ಲಿಂಗಂ ಮಹಾಪ್ರಭಾವಂ ತು ಸೈಂಹಿಕೇಯಪ್ರತಿಷ್ಠಿತಂ ।
ತತ್ರ ವರ್ಷಸಹಸ್ರಂ ತು ವೈಪ್ರಚಿತ್ತಿಸ್ತಪಾಽಕರೋತ್ ॥ ೩ ॥
ಸ್ವರ್ಭಾನುಃ ಸ ಮಹಾವೀರ್ಯೋ ವಕ್ತ್ರಯೋಧೀ ಮಹಾಸುರಃ ।
ಸಮಾರಾಧ್ಯ ಮಹಾದೇವಂ ದಿವ್ಯೇನ ತಪಸಾ ಪ್ರಭುಂ ॥ ೪ ॥
ಲಿಂಗೇಽವತಾರಯಾಮಾಸ ಜಗದ್ದೀಪಂ ಮಹೇಶ್ವರಂ ।
ಯಶ್ಚೈನಂ ಪೂಜಯೇದ್ಭಕ್ತ್ಯಾ ನರಃ ಸಮ್ಯಕ್ಚ ಪಶ್ಯತಿ ।
ತಸ್ಯ ಪಾಪಂ ಕ್ಷಯಂ ಯಾತಿ ಅಪಿ ಬ್ರಹ್ಮವಧೋದ್ಭವಂ ॥ ೫ ॥

ಕನ್ನಡದ ಅನುವಾದ

ರಾಹ್ವೀಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಶನೈಶ್ಚರೇಶ್ವರನ ವಾಯವ್ಯ ದಿಕ್ಕಿನಲ್ಲಿಯೂ, ಅಜಾದೇವಿಯ ಉತ್ತರದಲ್ಲಿಯೂ ಮಂಗಳಾದೇವಿಯ ಹತ್ತಿರದಲ್ಲಿಯೂ ಏಳು ಬಿಲ್ಲಿನ ದೂರದಲ್ಲಿ ರಾಹುವು ಪ್ರತಿಷ್ಠೆಮಾಡಿರುವ ಮಹಾ ಮಾಹಾತ್ಮ್ಯವುಳ್ಳ ರಾಹ್ವೀಶ್ವರನೆಡೆಗೆ ಹೋಗಬೇಕು. ಅಲ್ಲಿ ವೈಪ್ರಚಿತ್ತಿಯು ಒಂದು ಸಾವಿರ ವರ್ಷಕಾಲ ತಪಸ್ಸನ್ನಾಚರಿಸಿರುವನು.

೪–೫. ಅತ್ಯಂತ ಬಲಶಾಲಿಯೂ, ಮುಖದಿಂದ ಯುದ್ಧಮಾಡುವವನೂ ಆದ ಆ ರಾಹುವು ದಿವ್ಯ ತಪಸ್ಸಿನಿಂದ ಮಹಾದೇವನನ್ನು ಆರಾಧಿಸಿ ಅವನನ್ನು ಲಿಂಗದಲ್ಲಿ ಅವತಾರ ಮಾಡಿಸಿದನು. ಇವನನ್ನು ಭಕ್ತಿಯಿಂದ ಪೂಜಿಸುವವನೂ, ಚೆನ್ನಾಗಿ ದರ್ಶನ ಮಾಡುವವನೂ ಬ್ರಹ್ಮಹತ್ಯಾಪಾಪದಿಂದ ಕೂಡ ಮುಕ್ತನಾಗುವನು.

ನಾಂಧೋ ನ ಬಧಿರೋ ಮೂಕೋ ರೋಗೀ ನ ರಿನ ಚ ನಿರ್ಧನಃ ।
ಕದಾಚಿಜ್ಜಾಯತೇ ಮರ್ತ್ಯಸ್ತೇನ ದೃಷ್ಟೇನ ಭೂತಲೇ ॥ ೬ ॥
ಸುಖಸೌಭಾಗ್ಯಸಂಪನ್ನಸ್ತದಾ ಭವತಿ ರೂಪವಾನ್ ।
ಸರ್ವಕಾಮಸಮೃದ್ಧಾತ್ಮಾ ಮೋದತೇ ದಿವಿ ದೇವವತ್ । ॥ ೭ ॥
ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ರಾಹುದೈವತಂ ।
ಶ್ರುತ್ವಾ ತು ಮೋಹನಿರ್ಯಾತೋ ನರೋ ನಿಷ್ಕಲ್ಮಷೋ ಭವೇತ್ ॥ ೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರಾಹ್ವೀಶ್ವರ ಮಾಹಾತ್ಮ್ಯವರ್ಣನಂ ನಾಮ
ಪಂಚಾಶೋಽಧ್ಯಾಯಃ

---

೬. ಅವನನ್ನು ದರ್ಶನ ಮಾಡಿದವನು ಕುರುಡ, ಕಿವುಡ, ಮೂಗ, ರೋಗಿಷ್ಠ, ಬಡವನಾಗಿ ಯಾವಾಗಲೂ ಜನಿಸುವುದಿಲ್ಲ.

೭. ಮತ್ತು ಸುಖ ಸೌಭಾಗ್ಯಗಳಿಂದ ತುಂಬಿದವನಾಗಿ ಸಕಲೇಷ್ಟಾರ್ಥಗಳನ್ನು ಪಡೆದು ದೇವಲೋಕದಲ್ಲಿ ದೇವತೆಯಂತೆ ಆನಂದಿಸುವನು.

೮. ದೇವಿ! ನಿನಗೆ ಈ ರೀತಿ ರಾಹ್ವೀಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಕೇಳಿದ ಮಾನವನು ಮೋಹ ಮುಕ್ತನಾಗಿ ಪಾಪರಹಿತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರಾಹ್ವೀಶ್ವರಮಾಹಾತ್ಮ್ಯವರ್ಣನವೆಂಬ
ಐವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಪಂಚಾಶೋಽಧ್ಯಾಯಃ

ಕೇತ್ವೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕೇತುಲಿಂಗಂ ಮಹಾಪ್ರಭಂ ।
ರಾಹ್ವೀಶಾನಾದುತ್ತರೇ ಚ ಮಂಗಲಾಯಾಶ್ಚ ದಕ್ಷಿಣೇ ॥ ೧ ॥
ಧನುಷೋಂತರಮಾನೇನ ನಾಽತಿದೂರೇ ವ್ಯವಸ್ಥಿತಂ ।
ಲಿಂಗಂ ಮಹಾಪ್ರಭಾವಂ ಹಿ ಸರ್ವಪಾತಕನಾಶನಂ ॥ ೨ ॥
ಕೇತುರ್ನಾಮ ಗ್ರಹೋಽತ್ಯುಗ್ರಃ ಶಿವಸದ್ಭಾವಭಾವಿತಃ ।
ವರ್ತುಲೋಽತೀವವಿಸ್ತೀರ್ಣೋ ಲೋಚನಾಭ್ಯಾಂ ಸುಭೀಷಣಃ ॥ ೩ ॥
ಪಲಾಲಧೂಮಸಂಕಾಶೋ ಗ್ರಹಪೀಡಾಪಹಾರಕಃ ।
ತತ್ರಾಽಕರೋತ್ತಪಶ್ಚೋಗ್ರಂ ದಿವ್ಯಾಬ್ದಾನಾಂ ಶತಂ ಪ್ರಿಯೇ ॥ ೪ ॥
ತಸ್ಯ ತುಷ್ಟೋ ಮಹಾದೇವೋ ಗ್ರಹತ್ವಂ ಪ್ರದದೌ ಪ್ರಿಯೇ ।
ಏಕಾದಶಶತಾನಾಂ ಚ ಗ್ರಹಾಣಾಮಾಧಿಪತ್ಯತಾಂ ॥ ೫ ॥

ಕನ್ನಡದ ಅನುವಾದ

ಕೇತ್ವೀಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ರಾಹ್ವೀಶನ ಉತ್ತರದಲ್ಲಿ ಮಂಗಳೆಯ ದಕ್ಷಿಣದಲ್ಲಿ ಒಂದು ಬಿಲ್ಲಿನ ದೂರದಲ್ಲಿ ಸಮೀಪದಲ್ಲಿರುವ ಅತ್ಯಂತ ಮಾಹಾತ್ಮ್ಯವುಳ್ಳುದೂ, ಸಕಲ ಪಾಪಗಳನ್ನು ಪರಿಹರಿಸುವುದೂ ಆದ ಕೇತು ಲಿಂಗವನ್ನು ಹೊಂದಬೇಕು.

೩-೪. ಪ್ರಿಯಳೆ! ಅತ್ಯಂತ ಭಯಂಕರನೂ, ಶಿವಭಕ್ತನಿರತನೂ, ವರ್ತುಲಾಕಾರನೂ, ಅತ್ಯಂತ ವಿಶಾಲನೂ, ಭಯಂಕರವಾದ ಕಣ್ಣುಗಳುಳ್ಳವನೂ, ಹೊಟ್ಟಿನ ಹೊಗೆಯಂತಿರುವವನೂ, ಗ್ರಹಪೀಡೆಯನ್ನು ನಿವಾರಿಸುವವನೂ ಆದ ಕೇತುವು ಅಲ್ಲಿ ದಿವ್ಯ ಶತನೂರು ವರ್ಷಗಳ ಕಾಲ ಘೋರ ತಪಸ್ಸನ್ನಾಚರಿಸಿದನು.

೫. ಮಹಾದೇವನು ಅವನಲ್ಲಿ ಸಂತುಷ್ಟನಾಗಿ ಗ್ರಹತ್ವವನ್ನಿತ್ತು ಅವನನ್ನು ಸಾವಿರದ ನೂರು ಗ್ರಹಗಳಿಗೆ ಒಡೆಯನನ್ನಾಗಿ ಮಾಡಿದನು.

ತತ್ರಸ್ಥಂ ಪೂಜಯೇದ್ಭಕ್ತ್ಯಾ ಕೇತುಲಿಂಗಂ ಮಹಾಪ್ರಭಂ ।
ಕೇತೂದಯೇ ಮಹಾಘೋರೇ ತಸ್ಮಿನ್ ದೃಷ್ಟೇ ವಿಶೇಷತಃ ॥ ೬ ॥
ಗ್ರಹಪೀಡಾಸು ಚೋಗ್ರಾಸು ಪೂಜಯೇತ್ತಂ ವಿಧಾನತಃ ।
ಪುಷ್ಪೈರ್ಗಂಧೈಸ್ತಥಾಧೂಪೈರ್ನೈವೇದ್ಯೈರ್ವಿವಿಧೈಃ ಶುಭೈಃ ॥ ೭ ॥
ತೋಷಯೇದ್ವಿಧಿವದ್ದೇವಂ ಕೇತುಂ ಕಲ್ಮಷನಾಶನಂ ॥ ೮ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಕೇತುಲಿಂಗಂ ಮಹೋದಯಂ ।
ಗ್ರಹಪೀಡೋಪಶಮನಂ ಸರ್ವಪಾತಕನಾಶನಂ ॥ ೯ ॥
ಏತಾನಿ ನವ ಲಿಂಗಾನಿ ಗ್ರಹಾಣಾಂ ಕಥಿತಾನಿ ತೇ ।
ಯಃ ಪಶ್ಯತಿ ನರೋ ನಿತ್ಯಂ ತಸ್ಯ ಪೀಡಾಭಯಂ ಕುತಃ ॥ ೧೦ ॥
ನ ದೌರ್ಭಾಗ್ಯಂ ಕುಲೇ ತಸ್ಯ ನ ರೋಗೀ ನೈವ ದುಃಖಿತಃ ।
ಜಾಯತೇ ಪುತ್ರವದ್ದೇವಿ ತಂ ರಕ್ಷಂತಿ ಮಹಾಗ್ರಹಾಃ ॥ ೧೧ ॥
ಇತಿ ತೇ ಕಥಿತಂ ಸಮ್ಯಕ್ಚತುರ್ದಶಾಯತನಂ ಪ್ರಿಯೇ ।
ವಿಘ್ನೇಶ್ವರಂ ಸಮಾರಭ್ಯ ಯಾವತ್ಕೇತುಪ್ರತಿಷ್ಠಿತಂ ॥ ೧೨ ॥
ನವಗ್ರಹೇಶ್ವರಾಣಾಂ ತು ಮಾಹಾತ್ಮ್ಯಂ ಪಾಪನಾಶನಂ ।
ತಥೈವ ಪಂಚಲಿಂಗಾನಾಂ ಶ್ರುತ್ವಾ ಪಾಪೈಃ ಪ್ರಮುಚ್ಯತೇ ॥ ೧೩ ॥

---

೬. ಅತಿ ಘೋರವಾದ ಕೇತೂದಯಕಾಲದಲ್ಲಿ ಅಲ್ಲಿರುವ ಕೇತು ಲಿಂಗವನ್ನು ಭಕ್ತಿಯಿಂದ ಪೂಜಿಸಬೇಕು.

೭–೮. ಕಠಿನ ಗ್ರಹ ಪೀಡೆಗಳಲ್ಲಿ ಆ ಕೇತುವನ್ನು ವಿಧಿಯಂತೆ ಪುಷ್ಪ, ಗಂಧ, ಧೂಪ, ಮತ್ತು ನಾನಾ ಬಗೆಯ ನೈವೇದ್ಯಗಳಿಂದ ಪೂಜಿಸಿ ಸಂತೋಷಗೊಳಿಸಬೇಕು.

೯. ಹೀಗೆ ಅತಿಶಯ ಮಾಹಾತ್ಮ್ಯವುಳ್ಳದೂ, ಗ್ರಹಪೀಡೆಯನ್ನು ನಿವಾರಿಸುವುದೂ, ಸಕಲಪಾಪಗಳನ್ನು ಪರಿಹಾರ ಮಾಡುವುದೂ, ಆದ ಕೇತು ಲಿಂಗವನ್ನು ಸಂಕ್ಷೇಪವಾಗಿ ನಿನಗೆ ಹೇಳಿರುವೆನು.

೧೦–೧೧. ನಿನಗೆ ಹೇಳಿರುವ ಈ ಒಂಬತ್ತು ಗ್ರಹಗಳ ಲಿಂಗಗಳನ್ನು ನಿತ್ಯವೂ ದರ್ಶನಮಾಡುವವನಿಗೆ ಪೀಡೆಯುಂಟಾಗುವುದಿಲ್ಲ. ಅವನ ವಂಶದಲ್ಲಿ ಬಡತನವೂ, ರೋಗಿಯೂ, ದುಃಖಿಯೂ ಹುಟ್ಟುವುದಿಲ್ಲ. ಮಹಾಗ್ರಹಗಳು ಅವನನ್ನು ಮಗನಂತೆ ಕಾಪಾಡುವರು.

೧೨. ಪ್ರಿಯಳೆ! ನಿನಗೆ ಹೀಗೆ ವಿನಾಯಕನನ್ನಾರಂಭಿಸಿ ಕೇತುಲಿಂಗದವರೆಗೆ ಹದಿನಾಲ್ಕು ದೇವಾಲಯಗಳನ್ನು ಹೇಳಿದ್ದೇನೆ.

೧೩. ಪಾಪವನ್ನು ನೀಗಿಸುವ ನವಗ್ರಹೇಶ್ವರ ಮಾಹಾತ್ಮ್ಯವನ್ನೂ, ಪಂಚ ಲಿಂಗಗಳ ಮಾಹಾತ್ಮ್ಯವನ್ನೂ ಕೇಳಿದವನು ಸಕಲ ಪಾಪ ಮುಕ್ತನಾಗುವನು.

ಕಪರ್ದಿನಂ ಸಮಾರಭ್ಯ ಚಂಡನಾಥಾಂತಕಾನಿ ಚ ।
ಪಂಚೈವ ಮುದ್ರಾಲಿಂಗಾನಿ ನಾಽಪುಣ್ಯೋ ವೇದ ಮಾನವಃ ॥ ೧೪ ॥
ಸೂರ್ಯೇಶ್ವರಂ ಸಮಾರಭ್ಯ ಕೇತುಲಿಂಗಾಂತಕಾನಿ ವೈ ।
ನವಗ್ರಹಾಣಾಂ ಲಿಂಗಾನಿ ನಾಽನ್ಯೋ ಜಾನಾತಿ ಕಶ್ಚನ ॥ ೧೫ ॥
ಚತುರ್ದಶವಿಧಾ ತ್ವೇವಂ ಪ್ರೋಕ್ತಾಽಽಯತನಸಂಗತಿಃ ।
ಯಶ್ಚೈನಾಂ ವೇದ ಭಾವೇನ ಸ ಕ್ಷೇತ್ರಫಲಮಶ್ನುತೇ ॥ ೧೬ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕೇಶ್ವೇಶ್ವರಮಾಹಾತ್ಮ್ಯವರ್ಣನಂ ನಾಮ
ಏಕಪಂಚಾಶೋಽಧ್ಯಾಯಃ

---

೧೪. ಕಪರ್ದಿಯನ್ನಾರಂಭಿಸಿ ಚಂಡನಾಥನವರೆಗೆ ಇರುವ ಐದು ಮುದ್ರಾಲಿಂಗಗಳನ್ನು ಪಾಪಿಯು ತಿಳಿಯುವುದಿಲ್ಲ.

೧೫. ಸೂರ್ಯೇಶ್ವರನನ್ನಾರಂಭಿಸಿ ಕೇತು ಲಿಂಗದವರೆಗೆ ಇರುವ ನವಗ್ರಹ ಲಿಂಗಗಳನ್ನು ಭಕ್ತನಲ್ಲದವನು ತಿಳಿಯುವುದಿಲ್ಲ.

೧೬. ಹೀಗೆ ಹದಿನಾಲ್ಕು ದೇವಾಲಯಗಳನ್ನು ಹೇಳಿರುವೆನು. ಇದನ್ನು ಭಕ್ತಿಯಿಂದರಿತವನು ಕ್ಷೇತ್ರಫಲವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕೇಶ್ವೇಶ್ವರಮಾಹಾತ್ಮ್ಯವರ್ಣನವೆಂಬ
ಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಪಂಚಾಶತ್ತಮೋಽಧ್ಯಾಯಃ

ಸಿದ್ಧೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಪಂಚಾಽಥ ಸಿದ್ಧಲಿಂಗಾನಿ ಕಥಯಾಮಿ ಯಶಸ್ವಿನಿ ।
ಯೇಷಾಂ ದರ್ಶನತೋ ದೇವಿ ಸಿದ್ಧಾ ಯಾತ್ರಾ ಭವೇನ್ನೃಣಾಂ ॥ ೧ ॥
ಸೋಮೇಶಾದೀಶದಿಗ್ಭಾಗೇ ವರಾರೋಹೇತಿ ಯಾ ಸ್ಮೃತಾ ।
ತಸ್ಯಾಶ್ಚ ಪೂರ್ವದಿಗ್ಭಾಗೇ ದೇವಂ ಸಿದ್ಧೇಶ್ವರಂ ಪರಂ ।
ಅಭಿಗಮ್ಯ ನರೋ ಭಕ್ತ್ಯಾ ಅಣಿಮಾದಿಕಮಾಪ್ನುಯಾತ್ ॥ ೨ ॥
ಸಿದ್ಧೈಃ ಪ್ರತಿಷ್ಠಿತಂ ಲಿಂಗಂ ದೃಷ್ಟ್ವಾ ಭಕ್ತ್ಯಾ ತು ಮಾನವಃ ।
ಮುಚ್ಯತೇ ಪಾತಕೈಃ ಸರ್ವೈಃ ಸಿದ್ಧಲೋಕಂ ಸ ಗಚ್ಛತಿ ॥ ೩ ॥
ವಿಘ್ನಾನಿ ನಾಶಮಾಯಾಂತಿ ತತ್ರ ಕ್ಷೇತ್ರನಿವಾಸಿನಾಂ ।
ಕಾಮಃ ಕ್ರೋಧೋ ಭಯಂ ಲೋಭೋ ರಾಗೋ ಮತ್ಸರ ಏವ ಚ ॥ ೪ ॥
ಈರ್ಷ್ಯಾದಂಭಸ್ತಥಾಽಽಲಸ್ಯಂ ನಿದ್ರಾಮೋಹಸ್ತ್ವಹಂಕೃತಿಃ ।
ಏತಾನಿ ವಿಘ್ನರೂಪಾಣಿ ಸಿದ್ಧೇರ್ವಿಘ್ನಕರಾಣಿ ತು ॥ ೫ ॥

ಕನ್ನಡದ ಅನುವಾದ

ಸಿದ್ಧೇಶ್ವರ ಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಎಲೌ ಕೀರ್ತಿಮತಿಯಾದ ಓ ದೇವಿಯೆ! ಬಳಿಕ ಐದು ಸಿದ್ಧಲಿಂಗಗಳನ್ನು ಹೇಳುತ್ತೇನೆ. ಇವುಗಳನ್ನು ದರ್ಶನಮಾಡುವುದರಿಂದ ಯಾತ್ರೆಯು ನೆರವೇರುವುದು.

೨. ಸೋಮೇಶ್ವರನ ಈಶಾನ್ಯದಿಕ್ಕಿನಲ್ಲಿರುವ ವರಾರೋಹೆಯ ಪೂರ್ವಭಾಗದಲ್ಲಿ ಸಿದ್ಧೇಶ್ವರ ಲಿಂಗವಿರುವುದು. ಇದನ್ನು ಹೊಂದಿ ದರ್ಶನಮಾಡಿದ ಮಾನವನು ಅಣಿಮಾದ್ಯೈಶ್ವರ್ಯವನ್ನು ಪಡೆಯುವನು.

೩. ಮನುಷ್ಯನು ಸಿದ್ಧರು ಪ್ರತಿಷ್ಠೆಮಾಡಿದ ಲಿಂಗವನ್ನು ಭಕ್ತಿಯಿಂದ ದರ್ಶನ ಮಾಡಿದರೆ ಸಕಲ ಪಾಪಮುಕ್ತನಾಗಿ ಸಿದ್ಧಲೋಕವನ್ನು ಸೇರುವನು.

೪–೬. ಕಾಮ, ಕ್ರೋಧ, ಭಯ, ಲೋಭ, ರಾಗ, ಮತ್ಸರ, ಅಸೂಯೆ, ದಂಭ, ಆಲಸ್ಯ, ನಿದ್ರಾ, ಮೋಹ, ಅಲಂಕಾರಗಳೆಂಬ ಕಾರ್ಯಸಿದ್ಧಿಯ ವಿಘ್ನಗಳು

ತಾನಿ ನಾಶಂ ಸಮಾಯಾಂತಿ ತತ್ರ ಸಿದ್ಧೇಶ್ವರಾರ್ಚನಾತ್ ।
ಏವಂ ಜ್ಞಾತ್ವಾ ತು ಯತ್ನೇನ ತತ್ರ ಯಾತ್ರಾಂ ಸಮಾಚರೇತ್ ॥ ೬ ॥
ಇತ್ಯೇವಂ ಕಥಿತಂ ದೇವಿ ಸಿದ್ಧೇಶ್ವರಮಹೋದಯಂ ।
ಸರ್ವಕಾಮಪ್ರದಂ ನೃಣಾಂ ಶ್ರುತಂ ಪಾತಕನಾಶನಂ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಿದ್ಧೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವಿಪಂಚಾಶತ್ತಮೋಽಧ್ಯಾಯಃ ॥

ಸಿದ್ಧೇಶ್ವರನ ಪೂಜೆಯಿಂದ ನಾಶವಾಗುವುವು. ಇದನ್ನರಿತು ಅಲ್ಲಿ ಯಾತ್ರೆಯನ್ನು ಮಾಡಬೇಕು.

೭. ದೇವಿ! ಹೀಗೆ ನಿನಗೆ ಸಿದ್ಧೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಕೇಳಿದ ಮಾನವರಿಗೆ ಸಕಲೇಷ್ಟಾರ್ಥಗಳು ಲಭಿಸುವುವು. ಮತ್ತು ಸಕಲಪಾಪಗಳೂ ನಾಶವಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಸಿದ್ಧೇಶ್ವರಮಾಹಾತ್ಮ್ಯವರ್ಣನವೆಂಬ
ಐವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಪಂಚಾಶೋಽಧ್ಯಾಯಃ

ಕಪಿಲೇಶ್ವರಮಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕಪಿಲೇಶ್ವರಮುತ್ತಮಂ ।
ತಸ್ಯೈವ ಪೂರ್ವದಿಗ್ಭಾಗೇ ನಾಽತಿದೂರೇ ವ್ಯವಸ್ಥಿತಂ ॥ ೧ ॥
ಲಿಂಗಂ ಮಹಾಪ್ರಭಾವಂ ತು ದರ್ಶನಾತ್ಪಾಪನಾಶನಂ ।
ಕಪಿಲೋ ನಾಮ ರಾಜರ್ಷಿರ್ಯತ್ರ ತಪ್ತ್ವಾ ಮಹತ್ತಪಃ ॥ ೨ ॥
ಸಂಪ್ರಾಪ್ತಃ ಪರಮಾಂ ಸಿದ್ಧಿಂ ಪ್ರತಿಷ್ಠಾಪ್ಯ ಮಹೇಶ್ವರಂ ।
ದೇವಸಾನ್ನಿಧ್ಯಮೀಶಾನಂ ತಸ್ಮಿಂಲ್ಲಿಂಗೇ ಸದಾ ಹರಿಃ ॥ ೩ ॥
ಶುಕ್ಲಪಕ್ಷೇ ಚತುರ್ದಶ್ಯಾಂ ಸರ್ವಲೋಕಹಿತಾರ್ಥತಃ ।
ಸಪ್ತಕೃತ್ವೋ ಮಹಾದೇವಂ ಸೋಮೇಶಂ ಕಪಿಲೇಶ್ವರಂ ।
ಯಃ ಪಶ್ಯೇತ್ಪ್ರಯತೋ ಭೂತ್ವಾ ಸಗೋದಾನಫಲಂ ಲಭೇತ್ ॥ ೪ ॥

ಕನ್ನಡದ ಅನುವಾದ

ಕಪಿಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಉತ್ತಮವಾದ ಕಪಿಲೇಶ್ವರಕ್ಕೆ ಹೋಗಬೇಕು. ಅದು ಆ ಸಿದ್ಧೇಶ್ವರನ ಪೂರ್ವದಿಕ್ಕಿಗೆ ಸಮೀಪ ದಲ್ಲಿರುವುದು.

೨-೩. ಉತ್ತಮ ಮಾಹಾತ್ಮ್ಯವುಳ್ಳ ಆ ಲಿಂಗವನ್ನು ನೋಡುವುದರಿಂದ ಪಾಪವು ಪರಿಹಾರವಾಗುವುದು. ಇಲ್ಲಿ ಕಪಿಲನೆಂಬ ರಾಜರ್ಷಿಯು ತಪಸ್ಸನ್ನಾಚರಿಸಿ ಮಹೇಶ್ವರನನ್ನು ಪ್ರತಿಷ್ಠೆಮಾಡಿ ಉತ್ತಮ ಸಿದ್ಧಿಯನ್ನು ಪಡೆದಿರುವನು. ಆ ಲಿಂಗದಲ್ಲಿ ಯಾವಾಗಲೂ ಈಶ್ವರನ ಸಾನ್ನಿಧ್ಯದೊಡನೆ ಹರಿಯ ಸಾನ್ನಿಧ್ಯವೂ ಇರುವುದು.

೪. ಶುಕ್ಲಪಕ್ಷದ ಚತುರ್ದಶೀದಿನ ಸಕಲ ಲೋಕಹಿತವನ್ನುಂಟುಮಾಡುವ ಸೋಮೇಶ ಮತ್ತು ಕಪಿಲೇಶ್ವರರನ್ನು ಶುದ್ಧನಾಗಿ ಏಳು ಸಾರಿ ದರ್ಶನ ಮಾಡಿದವನು ಗೋವುಗಳನ್ನು ದಾನಮಾಡಿದ ಫಲವನ್ನು ಪಡೆಯುವನು.

ತಿಲಧೇನುಂ ಚ ಯೋ ದದ್ಯಾತ್ತಸ್ಮಿಂಸ್ತೀರ್ಥೇ ಸಮಾಹಿತಃ ।
ತಿಲಸಂಖ್ಯಾಯುಗಾನ್ಯೇವ ಸ ಸ್ವರ್ಗೇ ವಸತಿ ಪ್ರಿಯೇ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಪಿಲೇಶ್ವರ ಮಾಹಾತ್ಮ್ಯವರ್ಣನಂ ನಾಮ
ತ್ರಿಪಂಚಾಶೋಽಧ್ಯಾಯಃ

---

೫. ಪ್ರಿಯಳೆ! ಆ ತೀರ್ಥದಲ್ಲಿ ಸಾವಧಾನ ಮನಸ್ಸಿನಿಂದ ತಿಲಧೇನುವನ್ನು ದಾನಮಾಡಿದವನು ಆ ತಿಲಸಂಖ್ಯೆಯಷ್ಟು ಯುಗಗಳ ಕಾಲ ಸ್ವರ್ಗದಲ್ಲಿ ವಾಸಿಸುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಪಿಲೇಶ್ವರಮಾಹಾತ್ಮ್ಯವರ್ಣನವೆಂಬ
ಐವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಚತ್ವಾರಿಂಶೋಽಧ್ಯಾಯಃ

ಗಂಧರ್ವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗಂಧರ್ವೇಶ್ವರಮುತ್ತಮಂ ।
ದಂಡಪಾಣೇಸ್ತು ಭವನಾದುತ್ತರೇ ನಿಕಟೇ ಸ್ಥಿತಂ ॥ ೧ ॥
ಯತ್ರ ಗಂಧರ್ವರಾಜೋ ವೈ ಘನವಾಹೇತಿ ವಿಶ್ರುತಃ ।
ತಸ್ಯ ಗಂಧರ್ವಸೇನೇತಿ ಖ್ಯಾತಾ ಪುತ್ರೀ ಮಹಾಪ್ರಭಾ ॥ ೨ ॥
ಶಿಖಂಡಿನಾ ಗಣೇನೈವ ಸಾ ಶಪ್ತಾ ರೂಪಗರ್ವಿತಾ ।
ತತೋ ಗೋಶೃಂಗಋಷಿಣಾ ದತ್ತಸ್ತಸ್ಯಾ ಅನುಗ್ರಹಃ ॥ ೩ ॥
ಸೋಮವಾರವ್ರತೇನೈವ ಸೋಮೇಶಾರಾಧನಂ ಪ್ರತಿ ।
ತತಃ ಕ್ಷೇತ್ರಂ ಸಮಾಗತ್ಯ ತಪಶ್ಚಕ್ರೇಸುದುಶ್ಚರಂ ॥ ೪ ॥
ಲಿಂಗಂ ಪ್ರತಿಷ್ಠಯಾಮಾಸ ತತ್ರ ಗಂಧರ್ವರಾಟ್ ಸ್ವಯಂ ।
ತಥೈವ ಪುತ್ರ್ಯಾ ತಸ್ಯೈವ ತತ್ರ ಲಿಂಗಂ ಪ್ರತಿಷ್ಠಿತಂ ॥ ೫ ॥
ಅಥ ತತ್ರೈವ ದೇವೇಶಿ ದಂಡಪಾಣೇಃ ಸಮೀಪತಃ ।
ಘನವಾಹೇಶ್ವರಂ ನಾಮ ಯೋ ಲಿಂಗಂ ಯತ್ನತೋಽರ್ಚಯೇತ್ ॥ ೬ ॥

ಕನ್ನಡದ ಅನುವಾದ

ಗಂಧರ್ವೇಶ್ವರಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ದಂಡಪಾಣಿಯ ಆಲಯದ ಉತ್ತರಭಾಗದ ಹತ್ತಿರವಿರುವ ಗಂಧರ್ವೇಶ್ವರನನ್ನು ಹೊಂದಬೇಕು.

೨–೫. ಹಿಂದೆ ಘನವಾಹನನೆಂಬ ಪ್ರಸಿದ್ಧ ಗಂಧರ್ವರಾಜನಿದ್ದನು. ಅವನ ಸೌಂದರ್ಯದಿಂದ ಅಹಂಕಾರಗೊಂಡ ಮಗಳಾದ ಗಂಧರ್ವಸೇನೆಗೆ ಶಿಖಂಡಿಯೆಂಬ ಶಿವಗಣಾಧಿಶನು ಶಾಪಕೊಡಲು ಗೋಶೃಂಗನೆಂಬ ಮುನಿಯು ಅವಳಿಗೆ ಅನುಗ್ರಹಮಾಡಿ ಸೋಮವಾರ ವ್ರತವನ್ನಾಚರಿಸಲು ಆಜ್ಞೆಮಾಡಿದನು. ಅದರಂತೆ ಗಂಧರ್ವರಾಜನು ಪ್ರಭಾಸಕ್ಷೇತ್ರಕ್ಕೆ ಬಂದು ಘೋರತಪಸ್ಸನ್ನಾಚರಿಸಿ ಶಿವಲಿಂಗವನ್ನು ಪ್ರತಿಷ್ಠೆ ಮಾಡಿದನು. ಅವನ ಮಗಳಾದ ಗಂಧರ್ವಸೇನೆಯೂ ಅಲ್ಲಿ ಲಿಂಗವನ್ನು ಸ್ಥಾಪಿಸಿದಳು.

೬. ಆದ್ದರಿಂದ ದಂಡಪಾಣಿಯ ಹತ್ತಿರದಲ್ಲಿರುವ ಘನವಾಹೇಶ್ವರ ಲಿಂಗವನ್ನು ಪ್ರಯತ್ನದಿಂದ ಶುದ್ಧನಾಗಿ ಪೂಜಿಸಬೇಕು

ಗಂಧರ್ವಲೋಕಮಾಪ್ನೋತಿ ದೃಷ್ಟ್ವಾ ಸ ಪ್ರಯತಃ ಶುಚಿಃ ।
ಇತಿ ತೇ ಕಥಿತಂ ದೇವಿ ಗಾಂಧರ್ವಂ ಲಿಂಗಮುತ್ತಮಂ ॥ ೭ ॥
ತೃತೀಯಂ ಸರ್ವಪಾಪಾನಾಂ ನಾಶನಂ ಪುಣ್ಯವರ್ಧನಂ ।
ಅಗ್ನಿತೀರ್ಥೇ ನರಃ ಸ್ನಾತ್ವಾ ಪೂಜ್ಯ ಗಂಧರ್ವಪೂಜಿತಂ ॥ ೮ ॥
ಅಯನೇ ಚೋತ್ತರೇ ಪ್ರಾಪ್ತೇ ನಿರ್ವಾಣಮಧಿಗಚ್ಛತಿ ।
ಶ್ರುತ್ವಾಽಭಿನಂದ್ಯ ಮಾಹಾತ್ಮ್ಯಂ ಮುಚ್ಯತೇ ಮಹತೋ ಭಯಾತ್ ॥ ೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಂಧರ್ವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಃಪಂಚಾಶೋಽಧ್ಯಾಯಃ ॥

೭–೯. ಆದರಿಂದವನು ಗಂಧರ್ವಲೋಕವನ್ನು ಪಡೆಯುವನು. ದೇವಿ! ಹೀಗೆ ನಿನಗೆ ಸಕಲ ಪಾಪವನ್ನು ಪರಿಹರಿಸಿ ಪುಣ್ಯವನ್ನು ಹೆಚ್ಚಿಸುವ ಮೂರನೆಯ ಗಾಂಧರ್ವ ಲಿಂಗವನ್ನು ತಿಳಿಸಿರುವೆನು. ಮನುಷ್ಯನು ಅಗ್ನಿತೀರ್ಥದಲ್ಲಿ ಮಿಂದು ಗಂಧರ್ವೇಶ್ವರ ಲಿಂಗವನ್ನು ಪೂಜಿಸಿದರೆ ಉತ್ತರಾಯಣವು ಬರಲು ಮೋಕ್ಷವನ್ನು ಪಡೆಯುವನು. ಈ ಮಾಹಾತ್ಮ್ಯವನ್ನು ಕೇಳಿ ಅಭಿನಂದಿಸಿದವನು ಮಹಾಭಯದಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಂಧರ್ವೇಶ್ವರಮಾಹಾತ್ಮ್ಯವರ್ಣನವೆಂಬ ಐವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಪಂಚಪಂಚಾಶೋಽಧ್ಯಾಯಃ

ವಿಮಲೇಶ್ವರಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ಪೂರ್ವೇ ವಿಮಲೇಶ್ವರಂ ।
ಗೌರ್ಯಾಃ ಪೂರ್ವಸಮೀಪಸ್ಥಂ ನಾಽತಿದೂರೇ ವ್ಯವಸ್ಥಿತಂ ॥ ೧ ॥

ಗುರೋರ್ನೈರ್ಋತ್ಯದಿಗ್ಭಾಗೇ ಸ್ಥಿತಂ ಪಾಪಪ್ರಣಾಶನಂ ।
ಅಪಿ ಕೃತ್ವಾ ಮಹಾಪಾಪಂ ನಾರೀ ವಾ ಪುರುಷೋಽಪಿ ವಾ ॥ ೨ ॥

ಕ್ಷಯಾಭಿಭೂತದೇಹೋ ವಾ ತಂ ಸಮಭ್ಯರ್ಚ್ಯ ಭಕ್ತಿತಃ ।
ಸರ್ವದುಃಖಾಂತಗೋ ಭೂತ್ವಾ ನಿರ್ಮಲಂ ಪದಮಾಪ್ನುಯಾತ್ ॥ ೩ ॥

ಗಂಧರ್ವಸೇನಾ ಯತ್ರೈವ ವಿಮಲಾಽಭೂತ್ಕ್ಷಯಾನ್ವಿತಾ ।
ವಿಮಲೇಶ್ವರನಾಮ್ನಾ ವೈ ತಲ್ಲಿಂಗಂ ಪ್ರಥಿತಂ ಕ್ಷಿತೌ ॥ ೪ ॥

ಕನ್ನಡದ ಅನುವಾದ

ವಿಮಲೇಶ್ವರಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಗಂಧರ್ವೇಶ್ವರನ ಪೂರ್ವಭಾಗದಲ್ಲಿ ಬೃಹಸ್ಪತೀಶ್ವರನ ನೈಋತ್ಯದಿಕ್ಕಿನಲ್ಲಿ ಗೌರಿಯ ಹತ್ತಿರವಿರುವ ಪಾಪ ಪರಿಹಾರಕವಾದ ವಿಮಲೇಶ್ವರನೆಡೆಗೆ ಹೋಗಬೇಕು. ಹೆಂಗಸಾಗಲಿ, ಗಂಡಸಾಗಲಿ ಮಹಾಪಾಪವನ್ನು ಮಾಡಿದ್ದರೂ, ಕ್ಷಯರೋಗ ಪೀಡಿತರಾಗಿದ್ದರೂ, ಆ ವಿಮಲೇಶ್ವರನನ್ನು ಭಕ್ತಿಯಿಂದ ಪೂಜಿಸಿದರೆ ಸಕಲ ದುಃಖವೂ ಪರಿಹಾರವಾಗಿ ನಿರ್ಮಲವಾದ ಸ್ಥಾನವನ್ನು ಪಡೆಯುವರು.

೪. ಇಲ್ಲಿಯೇ ಕ್ಷಯಪೀಡಿತಳಾದ ಗಂಧರ್ವಸೇನೆಯು ಶುದ್ಧಳಾದುದರಿಂದ ಆ ಲಿಂಗವು ಭೂಮಿಯಲ್ಲಿ ವಿಮಲೇಶ್ವರವೆಂಬ ಹೆಸರನ್ನು ಪಡೆದಿರುವುದು.

ಇತಿ ತೇ ಕಥಿತಂ ಸರ್ವಂ ವಿಮಲೇಶ್ವರಸೂಚಕಂ
ಮಾಹಾತ್ಮ್ಯಂ ಸರ್ವಪಾಪಘ್ನಂ ತುರೀಯಂ ಭವಸುಂದರಿ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಿಮಲೇಶ್ವರಮಾಹಾತ್ಮ್ಯವರ್ಣನಂ ನಾಮ
ಪಂಚಪಂಚಾಶೋಽಧ್ಯಾಯಃ

---

೫. ಸುಂದರಿ! ಹೀಗೆ ನಿನಗೆ ಪಾಪವನ್ನು ನೀಗಿಸುವ ನಾಲ್ಕನೆಯ ವಿಮಲೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ
ಪ್ರಭಾಸಖಂಡ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಿಮಲೇಶ್ವರಮಾಹಾತ್ಮ್ಯವರ್ಣನ ವೆಂಬ
ಐವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ತ್ರಿಂಶೋಽಧ್ಯಾಯಃ

ಧನದೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ತೇ ಪಂಚಮಂ ವಚ್ಮಿ ಸಿದ್ಧಲಿಂಗಂ ಮಹಾಪ್ರಭಂ ।
ಬ್ರಹ್ಮಣೋ ನೈರ್ಋತೇ ಭಾಗೇ ಧನುಷಾಂ ಷೋಡಶೇ ಸ್ಥಿತಂ ॥ ೧ ॥
ರಾಹುಲಿಂಗಸ್ಯ ಚಾಭ್ಯಾಶೇ ಲಿಂಗಂ ಧನದನಿರ್ಮಿತಂ ।
ಧನದತ್ವಂ ಸ ಸಂಪ್ರಾಪ್ತೋ ಯತ್ರ ತಪ್ತ್ವಾ ಮಹತ್ತಪಃ ॥ ೨ ॥
ಸಂಸ್ಥಾಪ್ಯ ವಿಧಿವತ್ಪೂಜ್ಯ ಲಿಂಗಂ ವರ್ಷಸಹಸ್ರಕಂ ।
ಅಲಕಾಧಿಪತಿರ್ಜಾತಸ್ತತ್ರ ಶಂಭೋಃ ಪ್ರಸಾದತಃ ॥ ೩ ॥
ಜಾತಿಂ ಸ್ಮೃತ್ವಾ ಪೂರ್ವಿಕಾಂ ತು ಜ್ಞಾತ್ವಾ ದೀಪದಶಾಫಲಂ ।
ಶಿವರಾತ್ರೇಃ ಪ್ರಭಾವಂ ತು ಪ್ರಭಾಸಂ ಪುನರಾಗತಃ ॥ ೪ ॥
ಪ್ರಭಾವಾಽತಿಶಯಂ ಜ್ಞಾತ್ವಾ ಸ್ಥಾಪಯಾಮಾಸ ಶಂಕರಂ ।
ತತ್ರ ಪ್ರತ್ಯಕ್ಷತಾಂ ನೀತಸ್ತಪಸಾ ಯೇನ ಶಂಕರಃ ॥ ೫ ॥

ಕನ್ನಡದ ಅನುವಾದ

ಧನದೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಎಲೈ ದೇವಿಯೇ ! ಐದನೆಯದಾದ, ಬ್ರಹ್ಮಲಿಂಗದಿಂದ ನೈರ್ಋತ್ಯ ದಿಕ್ಕಿನಲ್ಲಿ ಹದಿನಾರು ಬಿಲ್ಲಿನ ದೂರದಲ್ಲಿರುವ ಮಹಾ ಪ್ರಭಾವಯುತವಾದ ಸಿದ್ಧಲಿಂಗವನ್ನು ಹೇಳುತ್ತೇನೆ.

೨. ರಾಹುಲಿಂಗದ ಹತ್ತಿರ ಕುಬೇರನಿಂದ ಸ್ಥಾಪಿಸಲ್ಪಟ್ಟ ಈ ಶಿವಲಿಂಗದ ಸಮೀಪ ದಲ್ಲಿ, ಉತ್ತಮ ತಪಸ್ಸನ್ನು ಮಾಡಿ ಕುಬೇರನು ಧನಪತಿ ಸ್ಥಾನವನ್ನು ಹೊಂದಿದನು

೩. ಈ ಸಿದ್ಧಲಿಂಗವನ್ನು ಸ್ಥಾಪಿಸಿ, ವಿಧಿವತ್ತಾಗಿ ಸಾವಿರ ವರ್ಷ ಪೂಜಿಸಿ, ಈಶ್ವರನ ಅನುಗ್ರಹದಿಂದ " ಅಲಕಾ " ಎಂಬ ನಗರಕ್ಕೆ ಒಡೆಯನಾದನು.

೪. ತನ್ನ ಪೂರ್ವಜನ್ಮದಲ್ಲಿ, ಶಿವರಾತ್ರಿಯಲ್ಲಿ ದೀಪದಾನ ಮಾಡಿದ ಫಲದ ಮಹಿಮೆಯಿಂದ ಈಗ ಈ ಪ್ರಭಾಸಕ್ಷೇತ್ರಕ್ಕೆ ಮತ್ತೆ ಬಂದನು.

೫. ಈ ಪ್ರಭಾವದಿಂದ ಪ್ರಭಾಸದಲ್ಲಿ ಶಂಕರನನ್ನು ಪ್ರತಿಷ್ಠೆಮಾಡಿ ತಪಸ್ಸಿನಿಂದ ಪರಮೇಶ್ವರನನ್ನು ಪ್ರತ್ಯಕ್ಷಮಾಡಿಕೊಂಡನು.

ಮಹಾಭಕ್ತ್ಯಾ ಮಹಾದೇವಿ ತಸ್ಮಿಂಲ್ಲಿಂಗೇಽವತಾರಿತಃ ।
ತಂ ದೃಷ್ಟ್ವಾ ಮಾನವೋ ಭಕ್ತ್ಯಾ ಪೂಜಯಿತ್ವಾ ಯಥಾವಿಧಿ ॥ ೬ ॥
ಪಂಚೋಪಚಾರೈಃ ಸದ್ಭಕ್ತ್ಯಾ ಗಂಧಧೂಪಾನುಲೇಪನೈಃ ।
ತಸ್ಯಾನ್ವಯೇ ದರಿದ್ರಶ್ಚ ಕದಾಽಪಿ ನ ಭವಿಷ್ಯತಿ ॥ ೭ ॥
ಯೇ ಚೈತತ್ಪೂಜಯಿಷ್ಯಂತಿ ಲಿಂಗಂ ಭಕ್ತಿಯುತಾ ನರಾಃ ।
ಅಜೇಯಾಸ್ತೇ ಭವಿಷ್ಯಂತಿ ಶತ್ರೂಣಾಂ ದರ್ಪನಾಶನಾಃ ॥ ೮ ॥
ಇತಿ ತೇ ಕಥಿತಂ ಸರ್ವಂ ಧನದೇಶಮಹೋದಯಂ ।
ಶ್ರುತ್ವಾಽನುಮೋದ್ಯ ಯತ್ನೇನ ದರಿದ್ರೋ ನೈವ ಜಾಯತೇ ॥ ೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಧನದೇಶ್ವರ ಮಾಹಾತ್ಮ್ಯವರ್ಣನಂ ನಾಮ
ಷಟ್ಪಂಚಾಶೋಽಧ್ಯಾಯಃ

೬–೭. ದೇವಿ! ಭಕ್ತಿಯಿಂದ ಆ ಶುಭಲಿಂಗದಲ್ಲಿ ಕಾಣಿಸಿಕೊಂಡ ನನ್ನನ್ನು ಮಾನವನು ಭಕ್ತಿಯಿಂದ ನೋಡಿ, ವಿಧಿವತ್ತಾಗಿ ಪಂಚೋಪಚಾರಗಳಿಂದಲೂ, ಗಂಧ ಧೂಪಾದಿಗಳಿಂದಲೂ ಪೂಜೆ ಮಾಡಿದಲ್ಲಿ ಅವನ ಕುಲದಲ್ಲಿ, ದರಿದ್ರರಾಗಿ ಯಾರೂ ಹುಟ್ಟುವುದಿಲ್ಲ.

೮. ಯಾರು ಭಕ್ತಿಯಿಂದ ಆ ಶಿವಲಿಂಗವನ್ನು ಪೂಜಿಸುತ್ತಾರೆಯೋ, ಅವರು ಶತ್ರುಗಳ ಅಹಂಕಾರವನ್ನು ಅಡಗಿಸಿ ಜಯಶಾಲಿಗಳಾಗುವರು.

೯. ದೇವಿ! ನಿನಗೆ ಧನದೇಶ್ವರನ ಮಹಿಮೆಯನ್ನು ಹೇಳಿರುವೆನು. ಪ್ರಯತ್ನ ಪೂರ್ವಕವಾಗಿ ಇದನ್ನು ಕೇಳಿದವನು ಬಡವನಾಗಿ ಎಂದಿಗೂ ಆಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಧನದೇಶ್ವರಮಾಹಾತ್ಮ್ಯವರ್ಣನವೆಂಬ
ಐವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಸಪ್ತಪಂಚಾಶೋಽಧ್ಯಾಯಃ ॥

ವರಾರೋಹಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಪಂಚೈವಂ ಸಿದ್ಧಲಿಂಗಾನಿ ಕಥಿತಾನಿ ತವ ಪ್ರಿಯೇ ।
ಯಶ್ಚೈನಂ ವೇದ ಸಂಕೇತಂ ಕ್ಷೇತ್ರವಾಸೀ ಸ ಉಚ್ಯತೇ ॥ ೧ ॥
ಅಥ ಶಕ್ತಿತ್ರಯಾಣಾಂ ತೇ ರೌದ್ರೀಣಾಂ ವಚ್ಮಿ ವಿಸ್ತರಂ ।
ಇಚ್ಛಾಕ್ರಿಯಾಜ್ಞಾನಶಕ್ತ್ಯಸ್ತಿಸ್ರಸ್ತಾಃ ಪರಕೀರ್ತಿತಾಃ ॥ ೨ ॥
ಪುನಸ್ತಾಸಾಂ ಪೂಜನಾಯಾನುಕ್ರಮಂ ಕ್ರಮಶಃ ಶೃಣು ।
ಚತುರ್ದಶ ತಥಾ ಪಂಚ ಪೂರ್ವಮುಕ್ತಾನಿ ಯಾನಿ ತು ॥ ೩ ॥
ಚತ್ವಾರಿ ತ್ರೀಣಿ ಚೈಕಂ ವಾ ಯಥಾಶಕ್ತ್ಯಾಽಭಿಪೂಜ್ಯ ಚ ।
ಲಿಂಗಾನಿ ತಾನಿ ಸಂಪೂಜ್ಯ ಶಕ್ತೀಸ್ತಿಸ್ರಸ್ತತೋಽರ್ಚಯೇತ್ ॥ ೪ ॥
ಸೋಮೇಶಾದೀಶದಿಗ್ಭಾಗೇ ವರಾರೋಹೇತಿ ಯಾ ಸ್ಮೃತಾ ।
ಅಮಾ ಕಲಾ ಸಾ ಸೋಮಸ್ಯ ಉಮಾ ಪಶ್ಚಾತ್ಪ್ರಕೀರ್ತಿತಾ ॥ ೫ ॥

ಕನ್ನಡದ ಅನುವಾದ

ವರಾರೋಹಾಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಪ್ರಿಯಳೆ! ನಿನಗೆ ಐದು ಸಿದ್ಧ ಲಿಂಗಗಳನ್ನು ಹೇಳಿರುವೆನು. ಈ ಲಿಂಗಗಳ ರಹಸ್ಯವನ್ನರಿತವನು ಕ್ಷೇತ್ರವಾಸಿಯೆನ್ನಿಸಿಕೊಳ್ಳುವನು.

೨. ತರುವಾಯ ಇಚ್ಛಾ, ಕ್ರಿಯಾ, ಜ್ಞಾನವೆಂಬ ಮೂರು ರುದ್ರಶಕ್ತಿಗಳ ಮಾಹಾತ್ಮ್ಯವನ್ನು ವಿಸ್ತಾರವಾಗಿ ಹೇಳುವೆನು.

೩–೪. ಅವರನ್ನು ಪೂಜಿಸುವ ಕ್ರಮವನ್ನೂ ಕೇಳು. ಹಿಂದೆ ಹೇಳಿದ ಹತ್ತೊಂಬತ್ತು ಲಿಂಗಗಳಲ್ಲಿ ನಾಲ್ಕನ್ನಾಗಲಿ, ಮೂರನ್ನಾಗಲಿ, ಒಂದನ್ನಾಗಲಿ ಶಕ್ತ್ಯನುಸಾರ ಪೂಜಿಸಿ ಬಳಿಕ ಈ ಮೂರು ಶಕ್ತಿಗಳನ್ನಾರಾಧಿಸಬೇಕು.

೫. ಸೋಮೇಶ್ವರನ ಈಶಾನ್ಯದಿಕ್ಕಿನಲ್ಲಿ ಚಂದ್ರ ಅಮಾ ಎಂಬ ಕಲೆಯು ವರಾರೋಹೆಯೆಂದು ಪ್ರಸಿದ್ಧಳಾಗಿರುವಳು. ಆಕೆಗೆ ಉಮಾ ಎಂದೂ ಹೆಸರಾಗಿರುವುದು.

ಇಚ್ಛಾಶಕ್ತಿಸ್ತು ಸಾ ಜ್ಞೇಯಾ ಪ್ರಭಾಸಕ್ಷೇತ್ರಸಂಸ್ಥಿತಾ ।
ತತ್ರ ದೇವಿ ಹಿತಾರ್ಥಾಯ ಸರ್ವೇಷಾಂ ಪ್ರಾಣಿನಾಂ ಭುವಿ ॥ ೬ ॥
ತಸ್ಯಾ ಮಾಹಾತ್ಮ್ಯಮಖಿಲಂ ಕಥಯಾಮಿ ತವಾಽಧುನಾ ।
ಪುರಾ ಸೋಮೇನ ತ್ಯಕ್ತಾಭಿರ್ಭಾರ್ಯಾಭಿಸ್ತು ವರಾನನೇ ॥ ೭ ॥
ಷಡ್ವಿಂಶದ್ಭಿಸ್ತಪಸ್ತಪ್ತಂ ಕ್ಷೇತ್ರೇ ಪ್ರಾಭಾಸಿಕೇ ಶುಭೇ ।
ಗೌರೀ ಸಾಽಽರಾಧ್ಯಮಾನಾಽಥ ದಿವ್ಯವರ್ಷಗಣಾನ್ ಬಹೂನ್ ॥ ೮ ॥
ತಾಸಾಂ ಪ್ರತ್ಯಕ್ಷತಾಂ ಪ್ರಾಪ್ತಾ ಪಾರ್ವತೀಪರಮೇಶ್ವರೀ ।
ಉವಾಚ ವರದಾ ಬ್ರೂತ ಯದ್ವೋ ಮನಸಿ ಸಂಸ್ಥಿತಂ ॥ ೯ ॥
ಅಥ ತಾಶ್ಚಾಽಬ್ರುವನ್ ದೇವಿ ಯದಿ ತುಷ್ಟಾಸಿ ಪಾರ್ವತಿ ।
ಸೌಭಾಗ್ಯಂ ದೇಹಿ ನೋ ಭೂರಿ ಲಾವಣ್ಯಂ ಪರಮಂ ತಥಾ ॥ ೧೦ ॥
ತ್ಯಕ್ತಾಃ ಸರ್ವಾ ವಯಂ ದೇವಿ ನಿರ್ದೋಷಾಃ ಸ್ವಾಮಿನಾ ಶುಭೇ ।
ದೌರ್ಭಾಗ್ಯದೋಷಸಂದಗ್ಧಾ ದೌರ್ಭಾಗ್ಯೇಣ ತು ಪೀಡಿತಾಃ ॥ ೧೧ ॥

ಗೌರ್ಯುವಾಚ:—

ಅದ್ಯ ಪ್ರಭೃತಿ ಸರ್ವಾ ವಃ ಸಮಂ ದ್ರಕ್ಷ್ಯತಿ ರಾತ್ರಿಪಃ ।
ಪ್ರಸಾದಾನ್ಮಮ ಚಾರ್ವಂಗ್ಯೋ ನೈತನ್ಮಿಥ್ಯಾ ಭವಿಷ್ಯತಿ ॥ ೧೨ ॥

೬-೮. ಇವಳೇ ಪ್ರಭಾಸಕ್ಷೇತ್ರಗಳಲ್ಲಿರುವ ಇಚ್ಛಾಶಕ್ತಿಯು. ದೇವಿ! ಸಕಲ ಪ್ರಾಣಿಗಳ ಹಿತಕ್ಕಾಗಿ ಈಗ ಇವಳ ಸಮಸ್ತ ಮಾಹಾತ್ಮ್ಯವನ್ನು ನಿನಗೆ ಹೇಳುವೆನು. ಅಲ್ಲಿ ಚಂದ್ರನಿಂದ ತೊರೆಯಲ್ಪಟ್ಟ ಇಪ್ಪತ್ತಾರು ಜನ ಪತ್ನಿಯರು ಪ್ರಾಭಾಸಿಕ ಕ್ಷೇತ್ರದಲ್ಲಿ ಅನೇಕ ದಿವ್ಯವರ್ಷಗಳ ಕಾಲ ಗೌರೀದೇವಿಯನ್ನಾರಾಧಿಸುತ್ತ ತಪಸ್ಸನ್ನು ಮಾಡಿದರು.

೯. ಅವರಿಗೆ ಗೌರಿಯು ಪ್ರತ್ಯಕ್ಷಳಾಗಿ ನಿಮ್ಮ ಮನಸ್ಸಿನಲ್ಲಿರುವುದನ್ನು ಹೇಳಿರಿ. ವರವನ್ನೀಯುವೆನೆಂದಳು.

೧೦. ಬಳಿಕ ಆ ಚಂದ್ರನ ಸತಿಯರು "ದೇವಿ! ನೀನು ಸಂತೋಷಗೊಂಡಿರುವ ಪಕ್ಷದಲ್ಲಿ ನಮಗೆ ಸೌಂದರ್ಯವನ್ನೂ, ಸೌಭಾಗ್ಯವನ್ನೂ ಕೊಡು.

೧೧. ನಮ್ಮ ಪತಿಯು ದೋಷವಿಲ್ಲದ ನಮ್ಮನ್ನು ತ್ಯಜಿಸಿರುವನು. ಆದರಿಂದ ನಾವು ದೌರ್ಭಾಗ್ಯ ಪೀಡಿತರಾಗಿದ್ದೇವೆ ?" ಎಂದರು.

೧೨. ಗೌರಿಯು ಹೇಳುತ್ತಾಳೆ :—ಇದು ಮೊದಲ್ಗೊಂಡು ನನ್ನ ಅನುಗ್ರಹದಿಂದ ಚಂದ್ರನು ನಿಮ್ಮನ್ನೆಲ್ಲ ಸಮವಾಗಿ ಕಾಣುವನು. ನೀವು ಲಾವಣ್ಯವತಿಯರಾಗುವಿರಿ. ಈ ಮಾತು ಸುಳ್ಳಲ್ಲ.

ವರದಾ ಚೇತಿ ಮನ್ನಾಮ ವರದಾನಾದ್ಭವಿಷ್ಯತಿ ।
ಇಹಾಽಽಗತ್ಯ ತು ಯಾ ನಾರೀ ಪೂಜಯಿಷ್ಯತಿ ಮಾಂ ಶುಭಾಂ ॥ ೧೩ ॥
ನ ದೌರ್ಭಾಗ್ಯಂ ಕುಲೇ ತಸ್ಯಾಃ ಕ್ವಚಿತ್ಪ್ರಾಪ್ಸ್ಯಂತಿ ಯೋಷಿತಃ ।
ಮಾಘಮಾಸೇ ತೃತೀಯಾಯಾಮುಪವಾಸಪರಾಯಣಾ ॥ ೧೪ ॥
ಯಾ ಮಾಂ ದ್ರಕ್ಷ್ಯತಿ ಸುಶ್ರೋಣೀ ಮತ್ತುಲ್ಯಾ ಸಾ ಭವಿಷ್ಯತಿ ।
ದಂಪತೀ ಷೋಡಶೈವಾತ್ರ ಪರಿಧಾಪ್ಯ ಪ್ರಯತ್ನತಃ ॥ ೧೫ ॥
ಫಲಾನಿ ಭಕ್ಷ್ಯಭೋಜ್ಯಂ ಚ ಪಕ್ವಾನ್ನಾನಿ ಚ ಷೋಡಶ ।
ಯಾ ಪ್ರದಾಸ್ಯತಿ ವೈ ನಾರೀ ಸಾ ತೂಮೈವ ಭವಿಷ್ಯತಿ ॥ ೧೬ ॥
ಏತದ್ಗೌರೀವ್ರತಂ ನಾಮ ತೃತೀಯಾಯಾಂ ತು ಕಾರಯೇತ್ ।
ಅಪ್ರಸೂತಾ ಚ ಯಾ ನಾರೀ ಯಾ ನಾರೀ ದುರ್ಭಗಾ ಭವೇತ್ ॥ ೧೭ ॥
ಪುಮಾನಸಕೃದಪ್ಯೇವಂ ಕೃತ್ವಾ ಪ್ರಾಪ್ಸ್ಯತ್ಯಭೀಪ್ಸಿತಂ ।
ಏವಮುಕ್ತ್ವಾ ಸ್ಥಿತಾ ತತ್ರ ಸಾ ದೇವೀ ಚಾರುಲೋಚನಾ ॥ ೧೮ ॥
ಪಶ್ಯತೇ ರಾತ್ರಿನಾಥಶ್ಚ ಸರ್ವಾಸ್ತಾ ರೋಹಿಣೀಂ ಯಥಾ ।
ಅನ್ಯಾಽಪಿ ದುಃಖಸಂದಗ್ಧಾ ದೌರ್ಭಾಗ್ಯೇಣ ತು ಪೀಡಿತಾ ॥ ೧೯ ॥

೧೩–೧೬. ನಿಮಗೆ ವರವನ್ನಿತ್ತುದರಿಂದ ನನಗೆ ವರದಾ ಎಂದು ಹೆಸರಾಗುವುದು. ಮಂಗಳಕರಳಾದ ನನ್ನನ್ನು ಇಲ್ಲಿಗೆ ಬಂದು ಪೂಜಿಸಿದ ನಾರಿಯವಂಶದಲ್ಲಿ ಒಬ್ಬ ಹೆಂಗಸೂ ದೌರ್ಭಾಗ್ಯವತಿಯಾಗುವುದಿಲ್ಲ. ಮಾಘಮಾಸದ ತದಿಗೆಯ ದಿನ ಉಪವಾಸಮಾಡಿ ನನ್ನನ್ನು ದರ್ಶನಗೈದ ಅಂಗನೆಯು ನಾನೇ ಆಗುವಳು. ಇಲ್ಲಿ ಹದಿನಾರು ಮಂದಿ ದಂಪತಿಗಳಿಗೆ ವಸ್ತ್ರ, ಫಲ, ಭಕ್ಷ್ಯ, ಭೋಜ್ಯ, ಪಕ್ವಾನ್ನಗಳನ್ನು ದಾನಮಾಡಿದ ಸ್ತ್ರೀಯು ಉಮೆಯೇ ಆಗುವಳು.

೧೭. ಬಂಜೆಯೂ, ದೌರ್ಭಾಗ್ಯವತಿಯೂ ಆದ ನಾರಿಯು ತದಿಗೆಯ ದಿನ ಈ ಗೌರೀವ್ರತವನ್ನಾಚರಿಸಬೇಕು.

೧೮. ಗಂಡಸೂ ಅನೇಕಸಾರಿ ಪೂಜಿಸಿದರೆ ಇಷ್ಟಾರ್ಥವನ್ನು ಪಡೆಯುವನು. ಹೀಗೆ ಹೇಳಿ ಸುಂದರಿಯಾದ ಉಮಾದೇವಿಯು ಅಲ್ಲಿ ನೆಲೆಸಿದಳು.

೧೯–೨೧. ಚಂದ್ರನೂ ಸಹ ಆ ಎಲ್ಲ ಪತ್ನಿಯರನ್ನೂ ರೋಹಿಣಿಯಂತೆಯೇ ನೋಡುತ್ತಿದ್ದನು. ರೋಹಿಣಿಯೂ ದುಃಖಗೊಂಡು ದೌರ್ಭಾಗ್ಯವತಿಯಾಗಿ ಆ ಉಮಾದೇವಿಯನ್ನು ಪೂಜಿಸಿ ಸೌಭಾಗ್ಯವತಿಯಾದಳು. ಹೀಗೆ ಆ ಇಚ್ಛಾಶಕ್ತಿಯ ಮಾಹಾತ್ಮ್ಯ

ಅಪ್ಪೂಜಯದುಮಾಂ ದೇವೀಂ ಸುಭಗಾ ಸಾಽಭವತ್ತತಃ ।
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಶಕ್ತಿಸಂಭವಂ ॥ ೨೦ ॥
ಸೋಮೇಶ್ವರೇ ವರಾರೋಹಾ ನಾಮೇತಿ ಕಥಿತಂ ತವ ।
ಸರ್ವಪಾಪಕ್ಷಯಕರಂ ಸರ್ವದಾರಿದ್ರ್ಯನಾಶನಂ ॥ ೨೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವರಾರೋಹಾಮಾಹಾತ್ಮ್ಯವರ್ಣನಂ ನಾಮ
ಸಪ್ತಪಂಚಾಶೋಽಧ್ಯಾಯಃ

ವನ್ನು ಸಂಕ್ಷೇಪವಾಗಿ ಹೇಳಿರುವೆನು. ನಾನು ನಿನಗೆ ಹೇಳಿದ ಸೋಮೇಶ್ವರನ ಸಮೀಪದಲ್ಲಿರುವ ವರಾರೋಹೆಯ ನಾಮವು ಸಕಲ ಪಾಪವನ್ನು ಪರಿಹರಿಸುವುದೂ, ಸಮಸ್ತ ದಾರಿದ್ರ್ಯವನ್ನೂ ನೀಗಿಸುವುದೂ ಆಗಿರುವುದು.

ಇಲ್ಲಿಗೆ ಎಂಭತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ವರಾರೋಹಾಮಾಹಾತ್ಮ್ಯವರ್ಣನವೆಂಬ
ಐವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಪಂಚಾಶೋಽಧ್ಯಾಯಃ

ಅಜಾಪಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ದ್ವಿತೀಯಾಂ ತೇ ವಚ್ಮಿ ಶಕ್ತಿಂ ದೇವಿ ಕ್ರಿಯಾತ್ಮಿಕಾಂ ।
ಪ್ರಭಾಸಸ್ಥಾಂ ಮಹಾದೇವೀಂ ದೇವಾನಾಂ ಪ್ರೀತಿದಾಯಿನೀಂ ॥ ೧ ॥
ಸೋಮೇಶಾದ್ವಾಯವೇ ಭಾಗೇ ಷಷ್ಟಿಧನ್ವಂತರೇ ಸ್ಥಿತಾ ।
ತತ್ರ ಪೀಠಂ ಮಹಾದೇವಿ ಯೋಗಿನೀಗಣವಂದಿತಂ ॥ ೨ ॥
ತಸ್ಮಿನ್ ಸ್ಥಾನೇ ಸ್ಥಿತಂ ದೇವಿ ಪಾತಾಲವಿವರಂ ಮಹತ್ ।
ತಸ್ಮಿನ್ ಮಹಾಪ್ರಭೇ ಸ್ಥಾನೇ ರಕ್ಷಾರೂಪೇಣ ಸಂಸ್ಥಿತಾಂ ॥ ೩ ॥
ಪಾತಾಲನಿಧಿನಿಕ್ಷೇಪದಿವ್ಯೌಷಧಿರಸಾಯನಂ ।
ಕ್ಷೇತ್ರಮಧ್ಯೇ ಸ್ಥಿತಂ ಸರ್ವಂ ತದರ್ಚನರತೋ ಲಭೇತ್ ॥ ೪ ॥
ಭೈರವೀತಿ ಚ ತದ್ದೇವ್ಯಾಃ ಪೂರ್ವಂ ನಾಮ ಪ್ರಕೀರ್ತಿತಂ ।
ಅಸ್ಮಿನ್ ಪುನಶ್ಚಾಂತರೇ ತು ಅಷ್ಟಾವಿಂಶೇ ಚತುರ್ಯುಗೇ ।
ತ್ರೇತಾಯುಗಮುಖೇ ರಾಜಾ ಅಜಾಪಾಲೋ ಬಭೂವ ಹ ॥ ೫ ॥

ಕನ್ನಡದ ಅನುವಾದ

ಅಜಾಪಾಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ತರುವಾಯ ಪ್ರಭಾಸಕ್ಷೇತ್ರದಲ್ಲಿರುವ ದೇವತೆಗಳಿಗೆ ಸಂತೋಷವನ್ನೀಯುವ ಕ್ರಿಯಾಶಕ್ತಿಯನ್ನು ನಿನಗೆ ಹೇಳುವೆನು.

೨. ಸೋಮೇಶ್ವರನಿಗೆ ವಾಯುವ್ಯ ದಿಕ್ಕಿನಲ್ಲಿ ಅರುವತ್ತು ಬಿಲ್ಲಿನ ದೂರದಲ್ಲಿ ಯೋಗಿನಿಯರ ಸಮೂಹದಿಂದ ವಂದಿಸಲ್ಪಟ್ಟ ಒಂದು ಪೀಠವಿರುವುದು.

೩. ಅಲ್ಲಿ ಒಂದು ದೊಡ್ಡ ಪಾತಾಳರಂಧ್ರವಿರುವುದು. ಅತಿಶಯವಾದ ಕಾಂತಿಯುಳ್ಳ ಆ ಸ್ಥಳದಲ್ಲಿ ಆ ಕ್ರಿಯಾ ಶಕ್ತಿದೇವತೆಯು ನೆಲೆಸಿರುವಳು.

೪. ಅವಳನ್ನು ಪೂಜಿಸಿದ ಮನುಷ್ಯನು ಆ ಕ್ಷೇತ್ರದ ಮಧ್ಯದಲ್ಲಿರುವ ಪಾತಾಳ ನಿಧಿ, ನಿಕ್ಷೇಪ, ದಿವ್ಯೌಷಧಿ, ರಸಾಯನಗಳನ್ನು ಪಡೆಯುವನು.

೫. ಅವಳಿಗೆ ಹಿಂದೆ ಭೈರವಿಯೆಂಬ ಹೆಸರಿದ್ದಿತು. ಈ ಇಪ್ಪತ್ತೆಂಟನೆಯ ಚತುರ್ಯುಗದ ತ್ರೇತಾಯುಗದ ಆರಂಭದಲ್ಲಿ ಅಜಾಪಾಲನೆಂಬ ದೊರೆಯಿದ್ದನು.

ತೇನ ಚಾಽಽಗತ್ಯ ಕ್ಷೇತ್ರೇಽಸ್ಮಿನ್ ಪಂಚವರ್ಷಶತಾನಿ ಚ ।
ಭೈರವೀ ಪೂಜಿತಾ ದೇವಿ ವ್ಯಾಧಿಗ್ರಸ್ತೇನ ಭಾಮಿನಿ ॥ ೬ ॥
ತತಃ ಪ್ರೋವಾಚ ತಂ ದೇವೀ ಸಂತುಷ್ಟಾ ರಾಜಸತ್ತಮಂ ।
ಅಲಂ ಕ್ಲೇಶೇನ ರಾಜರ್ಷೇ ತುಷ್ಟಾಽಹಂ ತವ ಭಕ್ತಿತಃ ॥ ೭ ॥
ಇತ್ಯುಕ್ತಃ ಸ ತದಾ ರಾಜಾ ಕೃತಾಂಜಲಿಪುಟಃ ಸುಧೀಃ ।
ಪ್ರಣಮ್ಯೋವಾಚ ತಾಂ ದೇವೀಮಾನಂದಾಸ್ರಾವಿಲೇಕ್ಷಣಃ ॥ ೮ ॥
ಯದಿ ತುಷ್ಟಾಽಸಿ ಮೇ ದೇವೀ ವರಾರ್ಹೋ ಯದಿ ವಾಽಪ್ಯಹಂ ।
ಸರ್ವೇ ರೋಗಾಃ ಶರೀರಾನ್ಮೇ ನಾಶಂ ಯಾಂತು ಬಹಿಃಕೃತಾಃ ॥ ೯ ॥
ಏವಮುಕ್ತಾ ತು ಸಾ ದೇವೀ ಪುನಃ ಪ್ರೋವಾಚ ತಂ ನೃಪಂ ।
ಸರ್ವಮೇವ ಮಹಾರಾಜ ಯಥೋಕ್ತಂ ತೇ ಭವಿಷ್ಯತಿ ॥ ೧೦ ॥
ಇತ್ಯುಕ್ತೇ ತು ತದಾ ದೇವ್ಯಾ ತಸ್ಯ ರಾಜ್ಞಃ ಕಲೇವರಾತ್ ।
ನಿರ್ಗತಾ ವ್ಯಾಧಯಸ್ತತ್ರ ಅಜಾರೂಪೇಣ ವೈ ಪೃಥಕ್ ॥ ೧೧ ॥
ಸಹಸ್ರಾಣಾಂ ತು ಪಂಚೈವ ನಿಯುತಂ ಸಾರ್ಧಮೇವ ಚ ।
ಇತಿ ವೃತ್ತೇ ಮಹಾದೇವ್ಯಾ ಪುನಃ ಪ್ರೋಕ್ತೋ ನರಾಧಿಪಃ ॥ ೧೨ ॥

---

೬. ರೋಗಪೀಡಿತನಾದ ಆ ಅಜಾಪಾಲನು ಈ ಕ್ಷೇತ್ರಕ್ಕೆ ಬಂದು ಐನೂರುವರ್ಷ ಕಾಲ ಈ ಭೈರವಿಯನ್ನು ಪೂಜಿಸಿದನು.

೭. ಬಳಿಕ ಸಂತುಷ್ಟಳಾದ ಆ ದೇವಿಯು ಆ ನೃಪೇಂದ್ರನನ್ನು ಕುರಿತು "ರಾಜರ್ಷಿಯೆ ! ದುಃಖಪಡಬೇಡ. ನಿನ್ನ ಭಕ್ತಿಗೆ ಮೆಚ್ಚಿರುವೆನು." ಎಂದಳು.

೮. ಅವಳು ಹೀಗೆನ್ನಲು ಆ ದೊರೆಯು ಕೈ ಮುಗಿದು ವಂದಿಸಿ ಆನಂದಬಾಷ್ಪ ವನ್ನು ಸುರಿಸುತ್ತ ಅವಳನ್ನು ಕುರಿತು ಇಂತೆಂದನು.

೯. "ದೇವಿ ! ನೀನು ಮೆಚ್ಚಿದ್ದರೆ ನಾನು ವರಕ್ಕೆ ಯೋಗ್ಯನಾಗಿದ್ದರೆ ನನ್ನದೇಹ ದಲ್ಲಿರುವ ರೋಗಗಳೆಲ್ಲ ನೀಗಲಿ." ಎಂದನು.

೧೦. ರಾಜನು ಹೀಗೆನ್ನಲು ಆ ದೇವಿಯು ಅವನನ್ನು ಕುರಿತು ನೀನು ಕೇಳಿದಂತೆ ಎಲ್ಲವೂ ಆಗುವುದು " ಎಂದಳು.

೧೧. ದೇವಿಯು ಹೀಗೆ ಹೇಳಲು ಆ ರಾಜನ ಶರೀರದಿಂದ ರೋಗಗಳು ಹೆಣ್ಣು ಆಡುಗಳ ರೂಪದಿಂದ ಪ್ರತ್ಯೇಕವಾಗಿ ಹೊರಗೆ ಹೊರಟವು.

೧೨. ಹೀಗೆ ಐದೂವರೆ ಸಾವಿರ ಆಡುಗಳು ದೇಹದಿಂದ ಹೊರಗೆ ಹೊರಡಲು ದೇವಿಯು ಮರಳಿ ಇಂತೆಂದಳು.

ರಾಜನ್ನೇತಾನಜಾರೂಪಾನ್ವ್ಯಾಧೀನ್ ಪಾಲಯ ಕೃತ್ಸ್ನಶಃ ।
ಕಿಂಕುರ್ವಾಣಾ ಭವಿಷ್ಯಂತಿ ತವೈವಾದೇಶಕಾರಿಣಃ ॥ ೧೩ ॥
ಅಜಾಪಾಲೇತಿ ತೇ ನಾಮ ಖ್ಯಾತಂ ಲೋಕೇ ಭವಿಷ್ಯತಿ ।
ತವ ನಾಮ್ನಾ ಮಮ ನಾಮ ಅಜಾಪಾಲೇಶ್ವರೀತಿ ಚ ॥
ಭವಿಷ್ಯತಿ ಧರಾಪೃಷ್ಠೇ ತಚ್ಚ ಯಾವಚ್ಚತುರ್ಯುಗಂ ॥ ೧೪ ॥
ಅಷ್ಟಮ್ಯಾಂ ಚ ಚತುರ್ದಶ್ಯಾಂ ಯೋಽತ್ರ ಮಾಂ ಪೂಜಯಿಷ್ಯತಿ ।
ತಸ್ಯಾಽಷ್ಟಗುಣಮೈಶ್ವರ್ಯಂ ದಾಸ್ಯೇ ತುಷ್ಟಾ ನ ಸಂಶಯಃ ॥ ೧೫ ॥
ಆಶ್ವಯುಕ್ಛುಕ್ಲಾಷ್ಟಮ್ಯಾಂ ಚ ತ್ರಿಃ ಕೃತ್ವಾ ತು ಪ್ರದಕ್ಷಿಣಾಂ ।
ಸೋಮೇಶಂ ಮಧ್ಯತಃ ಕೃತ್ವಾ ಸಂಸ್ನಾಪ್ಯಾಭ್ಯರ್ಚ್ಯ ಮಾಂ ಪೃಥಕ್ ॥
ತಸ್ಯ ವರ್ಷತ್ರಯಂ ರಾಜನ್ ನ ಭೀಃ ಶೋಕೋ ಭವಿಷ್ಯತಿ ॥ ೧೬ ॥
ಯಾ ತು ವಂಧ್ಯಾ ಭವೇನ್ನಾರೀ ರೋಗಿಣೀ ದುರ್ಭಗಾ ತಥಾ ।
ತಯೋಕ್ತಾ ನವಮೀ ಕಾರ್ಯಾ ಮಮಾಗ್ರೇ ತುಷ್ಟಿವರ್ಧಿನೀ ॥ ೧೭ ॥
ಈಶ್ವರ ಉವಾಚ :—
ಇತ್ಯುಕ್ತ್ವಾ ತು ತದಾ ದೇವೀ ತತ್ರೈವಾಂತರ್ಹಿತಾಽಭವತ್ ।
ಪ್ರಭಾಸಕ್ಷೇತ್ರಮಧ್ಯಸ್ಥಃ ಸ ರಾಜಾಽತುಲವಿಕ್ರಮಃ ॥ ೧೮ ॥

---

೧೩. ಅರಸ! ನೀನು ಈ ಆಡುಗಳ ರೂಪಗಳಾಗಿರುವ ಈ ರೋಗಗಳನ್ನೆಲ್ಲ ಕಾಪಾಡು. ಇವು ನಿನ್ನ ಅಪ್ಪಣೆಯನ್ನು ನೆರವೇರಿಸುವ ಆಳುಗಳಾಗಿರುವುವು.

೧೪. ಲೋಕದಲ್ಲಿ ಅಜಾಪಾಲ ಎಂದು ನಿನ್ನ ಹೆಸರು ಪ್ರಸಿದ್ಧವಾಗುವುದು. ಇದರಿಂದ ನಾಲ್ಕು ಯುಗಗಳವರೆಗೆ ನನ್ನ ಹೆಸರು ಅಜಾಪಾಲೇಶ್ವರಿ ಎಂದಾಗುವುದು.

೧೫. ಇಲ್ಲಿರುವ ನನ್ನನ್ನು ಅಷ್ಟಮೀ ಚತುರ್ದಶೀ ದಿನಗಳಲ್ಲಿ ಪೂಜಿಸಿದವನಿಗೆ ನಾನು ಒಲಿದು ಅಣಿಮಾದ್ಯಷ್ಟೈಶ್ವರ್ಯವನ್ನೀಯುವೆನು.

೧೬. ಆಶ್ವಿನ ಶುಕ್ಲಪಕ್ಷದ ಅಷ್ಟಮೀ ದಿನ ಸೋಮೇಶ್ವರನನ್ನು ನಡುವೆ ಇರಿಸಿಕೊಂಡು ನನ್ನನ್ನು ಮೂರುಸಾರಿ ಪ್ರದಕ್ಷಿಣೆ ಮಾಡಿ ಪ್ರತ್ಯೇಕವಾಗಿ ನನ್ನನ್ನು ಅಭಿಷೇಕಮಾಡಿ ಪೂಜಿಸಿದವನಿಗೆ ಮೂರು ವರ್ಷಕಾಲ ಭಯ, ಶೋಕಗಳುಂಟಾಗುವುದಿಲ್ಲ.

೧೭. ಬಂಜೆಯೂ, ರೋಗವುಳ್ಳವಳೂ, ದೌರ್ಭಾಗ್ಯವತಿಯೂ, ಆವ ನಾರಿಯು ಆಶ್ವಿನ ಶುಕ್ಲ ನವಮೀ ದಿನ ನನ್ನನ್ನು ಪೂಜಿಸಿ ಸಂತೋಷಗೊಳಿಸಬೇಕು.

೧೮–೨೦. ಆ ದೇವಿಯು ಹೀಗೆ ನುಡಿದು ಅಲ್ಲಿಯೇ ಅದೃಶ್ಯಳಾದಳು. ಆ ಅಜಾಪಾಲನು ಪ್ರಭಾಸಕ್ಷೇತ್ರದ ಮಧ್ಯದಲ್ಲಿ ವಾಸಿಸುತ್ತ ವ್ಯಾಧಿರೂಪಗಳಾದ ಆ ಆಡು

ಪಾಲಯಾಮಾಸ ಧರ್ಮಾತ್ಮಾ ತಾನಜಾನ್ವ್ಯಾಧಿರೂಪಿಣಃ ।
ಔಷಧೀರ್ವಿವಿಧಾಕಾರಾಸ್ತೇಷಾಂ ಯಾಃ ಪುಷ್ಟಿಹೇತವಃ ॥ ೧೯ ॥
ತತ್ರ ವರ್ಷಶತಂ ಸಾಗ್ರಂ ಪುಷ್ಟಿಂ ನೀತಾ ಅಜಾಃ ಪೃಥಕ್ ।
ಮಹಾನಿಧಾನಸಂಸ್ಥಾನಮಜಾಪಾಲೇನ ನಿರ್ಮಿತಂ ॥ ೨೦ ॥
ಅಥ ತಸ್ಯಾಃ ಪ್ರಸಾದೇನ ಸ ರಾಜಾ ಪೃಥುವಿಕ್ರಮಃ ।
ಸಪ್ತದ್ವೀಪಾಧಿಪೋ ಜಾತಃ ಸೂರ್ಯವಂಶವಿಭೂಷಣಃ ॥ ೨೧ ॥

ದೇವ್ಯುವಾಚ :—

ಅತ್ಯಾಶ್ಚರ್ಯಮಿದಂ ದೇವ ಅಜಾದೇವ್ಯಾಃ ಸಮುದ್ಭವಂ ।
ಪುನಶ್ಚ ಶ್ರೋತುಮಿಚ್ಛಾಮಿ ತಸ್ಯ ರಾಜ್ಞೋಽದ್ಭುತಂ ಮಹತ್ ॥ ೨೨ ॥
ಕಥಂ ರಾಜಾ ಸ ದೇವೇಶ ಸಪ್ತದ್ವೀಪಾಂ ವಸುಂಧರಾಂ ।
ಶಶಾಸ ಏಕ ಏವಾಽಸೌ ಕಥಂ ತೇ ವ್ಯಾಧಯಃ ಕೃತಾಃ ॥ ೨೩ ॥

ಈಶ್ವರ ಉವಾಚ :—

ಪುರಾ ಬಭೂವ ರಾಜರ್ಷಿರ್ದಿಲೀಪ ಇತಿ ವಿಶ್ರುತಃ ।
ದೀರ್ಘೋ ನಾಮ ಸುತಸ್ತಸ್ಯ ರಘುಸ್ತಸ್ಮಾದಜಾಯತ ॥ ೨೪ ॥

ಗಳನ್ನು ಪುಷ್ಟಿಯನ್ನುಂಟುಮಾಡುವ ನಾನಾ ಬಗೆಯ ಔಷಧಿಗಳಿಂದ ಪೋಷಿಸಿದನು; ರಾಜ್ಯದಲ್ಲಿ ದೊಡ್ಡ ಬೊಕ್ಕಸವನ್ನೂ ನಿರ್ಮಿಸಿದನು.

೨೧. ತರುವಾಯ ಮಹಾ ಪರಾಕ್ರಮಶಾಲಿಯಾದ ಆ ಅಜಾಪಾಲನು ಆ ದೇವಿಯ ಅನುಗ್ರಹದಿಂದ ಸಪ್ತದ್ವೀಪಗಳಿಗೆ ಒಡೆಯನಾಗಿ ಸೂರ್ಯವಂಶಕ್ಕೆ ಅಲಂಕಾರಪ್ರಾಯನಾದನು.

೨೨. ದೇವಿಯು ಹೇಳುತ್ತಾಳೆ:—ಸ್ವಾಮಿಯೆ! ಅಜಾದೇವಿಯ ಈ ಕಾರ್ಯವು ಅತ್ಯದ್ಭುತವಾಗಿರುವುದು. ಮರಳಿ ಆ ರಾಜನ ಮಹಾ ಕಾರ್ಯವನ್ನು ಕೇಳ ಬಯಸುವೆನು.

೨೩. ಅವನು ಒಬ್ಬನೇ ಈ ಏಳು ದ್ವೀಪಗಳುಳ್ಳ ಭೂಮಂಡಲವನ್ನು ಹೇಗೆ ಆಳಿದನು? ವ್ಯಾಧಿಗಳಾದ ಆ ಆಡುಗಳನ್ನು ಏನು ಮಾಡಿದನು?

೨೪. ಈಶ್ವರನು ಹೇಳುತ್ತಾನೆ:—ಹಿಂದೆ ದಿಲೀಪನೆಂಬ ರಾಜರ್ಷಿಯಿದ್ದನು. ಅವನಿಗೆ ದೀರ್ಘನೆಂದು ಪ್ರಸಿದ್ಧನಾದ ರಘುವೆಂಬ ಮಗನು ಹುಟ್ಟಿದನು.

ಅಜಃ ಪುತ್ರೋ ರಘೋಶ್ಚಾಽಪಿ ತಸ್ಮಾದ್ಯತ್ನಾಽತಿವೀರ್ಯವಾನ್ ।
ಸ ಭೈರವೀಂ ಸಮಾರಾಧ್ಯ ಕೃತ್ವಾ ವ್ಯಾಧೀನಜಾಗಣಾನ್ ॥ ೨೫ ॥
ಪಾಲಯಾಮಾಸ ಸಂಹೃಷ್ಟೋ ಹ್ಯಜಾಪಾಲಸ್ತತೋಽಭವತ್ ।
ತಸ್ಮಿನ್ಕಾಲೇ ಬಭೂವಾಽಥ ರಾವಣೋ ರಾಕ್ಷಸೇಶ್ವರಃ ॥ ೨೬ ॥
ಲಂಕಾಸ್ಥಿತಃ ಸುರಗಣಾನ್ನಿಯುಯೋಜ ಸ್ವಕರ್ಮಸು ।
ಅಖಂಡಮಂಡಲಂ ಚಂದ್ರಮಾತಪತ್ರಂ ಚಕಾರ ಹ ॥ ೨೭ ॥
ಇಂದ್ರಂ ಸೇನಾಪತಿಂ ಚಕ್ರೇ ವಾಯುಂ ಪಾಂಸುಪ್ರಮಾರ್ಜಕಂ ।
ವರುಣಂ ದೂತಕರ್ಮಸ್ಥಂ ಧನದಂ ಧನರಕ್ಷಕಂ ॥ ೨೮ ॥
ಯಮಂ ಸಂಯಮನೇಽರೀಣಾಂ ಯುಯುಜೇ ಮಂತ್ರಣೇ ಮನುಂ ।
ಮೇಘಾಸ್ಸ್ಪರ್ದಂತಿ ಲಿಂಪಂತಿ ದ್ರುಮಾಃ ಪುಷ್ಪಾಣಿ ಚಿಕ್ಷಿಪುಃ ॥ ೨೯ ॥
ಸಪ್ತರ್ಷಯಃ ಶಾಂತಿಪರಾ ಬ್ರಾಹ್ಮಣಾಃ ಶಂಸಿನಃ ಸ್ತ್ರಿಯಃ ।
ನಾಗಾ ಯಾಮಿಕಕಕ್ಷ್ಯಾಯಾಂ ಗಂಧರ್ವಾ ಗೀತತತ್ಪರಾಃ ॥ ೩೦ ॥
ಪ್ರೇಕ್ಷಣೀಯೇಽಪ್ಸರೋವೃಂದಂ ವಾದ್ಯೇ ವಿದ್ಯಾಧರಾ ವೃತಾಃ ।
ಗಂಗಾದ್ಯಾಃ ಸರಿತಃ ಪಾನೇ ಗಾರ್ಹಪತ್ಯೇ ಹುತಾಶನಃ ॥ ೩೧ ॥

೨೫—೨೭. ಅತ್ಯಂತ ಶಕ್ತಿಯುಳ್ಳ ರಘುವಿನ ಮಗನಾದ ಅಜನು ಭೈರವಿಯನ್ನು ಪೂಜಿಸಿ ರೋಗಗಳನ್ನು ಆಡುಗಳನ್ನಾಗಿಮಾಡಿ ಅವುಗಳನ್ನು ಸಂತೋಷದಿಂದ ಕಾಪಾಡಿದನು. ಆದರಿಂದ ಅವನು ಅಜಾಪಾಲನೆಂದಾದನು. ಆ ಸಮಯದಲ್ಲಿ ಲಂಕಾನಿವಾಸಿಯಾದ ರಾವಣನೆಂಬ ರಾಕ್ಷಸನು ದೇವತೆಗಳನ್ನು ತನ್ನ ಕಾರ್ಯಗಳನ್ನು ನೆರವೇರಿಸುವುದಕ್ಕೆ ನಿಯಮಿಸಿದನು. ಸಂಪೂರ್ಣ ಮಂಡಲವುಳ್ಳ ಚಂದ್ರನನ್ನು ಕೊಡೆಯಾಗಿಮಾಡಿಕೊಂಡನು.

೨೮—೨೯. ಇಂದ್ರನನ್ನು ಸೇನಾಪತಿಯನ್ನಾಗಿಯೂ, ವಾಯುವನ್ನು ದೂಳನ್ನು ಗುಡಿಸುವವನನ್ನಾಗಿಯೂ, ವರುಣನನ್ನು ದೂತನನ್ನಾಗಿಯೂ, ಕುಬೇರನನ್ನು ಹಣವನ್ನು ಕಾಪಾಡುವವನನ್ನಾಗಿಯೂ ಮಾಡಿದನು. ಶತ್ರುಗಳನ್ನು ಕೊಲ್ಲುವುದಕ್ಕೆ ಯಮನನ್ನು, ಮಂತ್ರಾಲೋಚನೆಗೆ ಮನುವನ್ನು ನೇಮಿಸಿದನು. ಮೋಡಗಳು ನೀರನ್ನು ಸುರಿಸಿ ಸಾರಿಸಿದುವು. ಮರಗಳು ಹೂವುಗಳನ್ನು ಸುರಿಸಿದುವು.

೩೦. ಸಪ್ತರ್ಷಿಗಳು ಶಾಂತಿಪಾಠಮಾಡುವವರೂ, ಬ್ರಾಹ್ಮಣರು ಹೊಗಳುವವರೂ, ನಾಗರು ಪಹರೆನಡೆಸುವವರೂ, ಗಂಧರ್ವರು ಹಾಡುವವರೂ ಆದರು.

೩೧—೩೩. ಅಪ್ಸರರನ್ನು ನಾಟಕದಲ್ಲಿಯೂ, ವಿದ್ಯಾಧರರನ್ನು ವಾದ್ಯಗಳನ್ನು ನುಡಿಸುವುದರಲ್ಲಿಯೂ, ಗಂಗಾದಿ ನದಿಗಳನ್ನು ಕುಡಿಯುವ ನೀರಿನಲ್ಲಿಯೂ, ಅಗ್ನಿಯನ್ನು ಅಡಿಗೆ

ವಿಶ್ವಕರ್ಮಾಂಗಸಂಸ್ಕಾರೇ ತೇನ ಶಿಲ್ಪೀ ನಿಯೋಜಿತಃ ।
ತಿಷ್ಠಂತಿ ಪಾರ್ಥಿವಾಃ ಸರ್ವೇ ಪುರಃ ಸೇವಾವಿಧಾಯಿನಃ ॥ ೩೨ ॥
ದೃಶ್ಯಂತೇ ಭಾಸ್ವರೈ ರತ್ನೈಃ ಪ್ರಸ್ಫಲಂತೋ ವಿಭೂಷಣೈಃ ।
ತಾನ್ ದೃಷ್ಟ್ವಾ ರಾವಣಃ ಪ್ರಾಹ ಪ್ರಹಸ್ತಂ ಪ್ರತಿಹಾರಕಂ ॥ ೩೩ ॥
ಸೇವಾಂ ಕರ್ತುಂ ಮಮ ಸ್ಥಾನೇ ಬ್ರೂಹಿ ಕೇಽತ್ರ ಸಮಾಗತಾಃ ।
ಉವಾಚ ಸ ಪ್ರಣಮ್ಯಾಗ್ರೇ ದಂಡಪಾಣಿರ್ನಿಶಾಚರಃ ॥ ೩೪ ॥
ಏಷ ಕಾಕುತ್ಸ್ಥೋ ಮಾಂಧಾತಾ ಧುಂಧುಮಾರೋ ನಲೋಽರ್ಜುನಃ ।
ಯಯಾತಿರ್ನಹುಷೋ ಭೀಮೋ ರಾಘವೋಽಯಂ ವಿದೂರಥಃ ॥ ೩೫ ॥
ಏತೇ ಚಾಽನ್ಯೇ ಚ ಬಹವೋ ರಾಜಾನ ಇಹ ಚಾಽಽಗತಾಃ ।
ಸೇವಾಕರಾಸ್ತವ ಸ್ಥಾನೇ ನಾಽಜಾಪಾಲ ಇಹಾಽಽಗತಃ ॥ ೩೬ ॥
ರಾವಣಃ ಕುಪಿತಃ ಪ್ರಾಹ ಶೀಘ್ರಂ ದೂತಂ ವಿಸರ್ಜಯ ।
ಇತ್ಯುಕ್ತ್ವಾ ಪ್ರಹಿತೋ ದೂತೋ ಧೂಮ್ರಾಕ್ಷೋ ನಾಮ ರಾಕ್ಷಸಃ ॥ ೩೭ ॥
ಧೂಮ್ರಾಕ್ಷ ಗಚ್ಛ ಬ್ರೂಹಿ ತ್ವಮಜಾಪಾಲಂ ಮಮಾಜ್ಞಯಾ ।
ಸೇವಾಂ ಕರ್ತುಂ ಮಮಾಗಚ್ಛ ಕರಂ ವಾ ಯಚ್ಛ ಪಾರ್ಥಿವ ॥ ೩೮ ॥

ಮಾಡುವುದರಲ್ಲಿಯೂ, ವಿಶ್ವಕರ್ಮನನ್ನು ಕ್ಷೌರಕಾರ್ಯದಲ್ಲಿಯೂ ನೇಮಿಸಿದನು. ಸಮಸ್ತರಾಜರೂ ಪ್ರಕಾಶಮಾನವಾದ ರತ್ನಗಳಿಂದಲೂ, ಒಡವೆಗಳಿಂದಲೂ ಅಲಂಕೃತರಾಗಿ ಭಯಭಕ್ತಿಭರಿತರಾಗಿ ಅವನನ್ನು ಸೇವಿಸುತ್ತಿದ್ದರು. ಅವರನ್ನು ನೋಡಿ ಆ ರಾವಣನು ದ್ವಾರಪಾಲಕನಾದ ಪ್ರಹಸ್ತನನ್ನು ಕುರಿತು ಇಂತೆಂದನು.

೩೪. "ನನ್ನನ್ನು ಸೇವಿಸಲು ಇಲ್ಲಿಗೆ ಯಾರು ಯಾರು ಬಂದಿರುವರು ?" ಎನ್ನಲು ದಂಡವನ್ನು ಧರಿಸಿರುವ ಆ ರಾಕ್ಷಸನು ಅವನನ್ನು ನಮಸ್ಕರಿಸಿ ಹೀಗೆಂದನು.

೩೫–೩೬. "ಇಗೋ, ಕಾಕುತ್ಸ್ಥ, ಮಾಂಧಾತಾ, ದುಂದುಮಾರ, ಅನಲ, ಅರ್ಜುನ, ಯಯಾತಿ, ನಹುಷ, ಭೀಮ ರಘುವಂಶದಲ್ಲಿ ಜನಿಸಿದ ವಿದೂರಥ ಇವರೇ ಅಲ್ಲದೆ ಇತರ ಬಹುಮಂದಿ ರಾಜರೂ ಸೇವಿಸಲು ಬಂದಿದ್ದಾರೆ. ಆದರೆ ಆ ಅಜಾಪಾಲನು ಮಾತ್ರ ಬರಲಿಲ್ಲ."

೩೭–೪೩. ರಾವಣನು ಕುಪಿತನಾಗಿ ತ್ವರೆಯಿಂದ ದೂತನನ್ನು ಕಳುಹಿಸು ಎಂದು ಹೇಳಿ ಧೂಮ್ರಾಕ್ಷನನ್ನು ಕರೆದು, "ಧೂಮ್ರಾಕ್ಷ! ನೀನು ಅಜಾಪಾಲನೆಡೆಗೆ

ಅಥವಾ ಚಂದ್ರಹಾಸೇನ ತ್ವಾಂ ಕರಿಷ್ಯೇ ವಿಕಂಧರಂ ।
ರಾವಣೇನೈವಮುಕ್ತಸ್ತು ಧೂಮ್ರಾಕ್ಷೋ ಗರುಡೋ ಯಥಾ ॥ ೩೯ ॥
ಸಂಪ್ರಾಪ್ತಸ್ತಾಂ ಪುರೀಂ ರಮ್ಯಾಂ ತಚ್ಚ ರಾಜಕುಲಂ ಗತಃ ।
ದದರ್ಶಾಯಾಂತಮೇಕಂ ಸ ಅಜಾಪಾಲಮಜಾವೃತಂ ॥ ೪೦ ॥
ಮುಕ್ತಕೇಶಂ ಮುಕ್ತಕಚ್ಛಂ ಸ್ವರ್ಣಕಂಬಲಧಾರಿಣಂ ।
ಯಷ್ಟಿಸ್ಕಂಧಂ ರೇಣುವೃತಂ ವ್ಯಾಧಿಭಿಃ ಪರಿವಾರಿತಂ ॥ ೪೧ ॥
ನಿಘ್ನಂತಮಿವ ಶಾರ್ದೂಲಂ ಸರ್ವೋಪದ್ರವನಾಶನಂ ।
ಮಹ್ಯಾಮಾಲಿಖ್ಯ ನಾಮಾನಿ ವಿನಿಘ್ನಂತಂ ದ್ವಿಷಾಂಗಣಂ ॥ ೪೨ ॥
ಸ್ನಾತಂ ಭುಕ್ತಂ ನಿಜಸ್ಥಾನೇ ಕೃತಕೃತ್ಯಂ ಮನುಂ ಯಥಾ ।
ದೃಷ್ಟ್ವಾ ಹೃಷ್ಟಮನಾಃ ಪ್ರಾಹ ಧೂಮ್ರಾಕ್ಷೋ ರಾವಣೋದಿತಂ ॥ ೪೩ ॥
ಅಜಾಪಾಲೋಽಪಿ ಸಾಕ್ಷೇಪಂ ಪ್ರತ್ಯುಕ್ತ್ವಾ ಕಾರಣೋತ್ತರಂ ।
ಪ್ರೇಷಯಾಮಾಸ ಧೂಮ್ರಾಕ್ಷಂ ತತಃ ಕೃತ್ಯಂ ಸಮಾದಧೇ ॥ ೪೪ ॥

ಹೋಗಿ ನನ್ನ ಆಜ್ಞೆಯಿಂದ ಹೀಗೆ ಹೇಳು: "ನನ್ನನ್ನು ಸೇವಿಸಲು ಇಲ್ಲಿಗೆ ಬಾ, ಅಥವಾ ಕಪ್ಪವನ್ನು ಕೊಡು. ಹಾಗೆಮಾಡದಿದ್ದರೆ ಚಂದ್ರಹಾಸವೆಂಬ ಕತ್ತಿಯಿಂದ ನಿನ್ನ ಕುತ್ತಿಗೆಯನ್ನು ಕತ್ತರಿಸುವೆನು." ರಾವಣನು ಹೀಗೆನ್ನಲು ಧೂಮ್ರಾಕ್ಷನು ಗರುಡನಂತೆ ಆ ಅಜಾಪಾಲನ ಪಟ್ಟಣಕ್ಕೆ ಹೋಗಿ ಅವನ ಅರಮನೆಯನ್ನು ಸೇರಿದನು. ಅಲ್ಲಿ ಅವನು ಅರಮನೆಗೆ ಆಡುಗಳ ಹಿಂಡಿನೊಡನೆ ಬರುತ್ತಿರುವವನೂ, ಕೂದಲುಗಳನ್ನು ಕೆದರಿ ಕೊಂಡಿರುವವನೂ, ಕಚ್ಚೆಯಿಲ್ಲದವನೂ, ಚಿನ್ನದ ಕಂಬಳಿಯನ್ನು ಧರಿಸಿದವನೂ, ಹೆಗಲಲ್ಲಿ ದೊಣ್ಣೆಯನ್ನಿಟ್ಟುಕೊಂಡಿರುವವನೂ, ಧೂಳಿನಿಂದ ಮಲಿನನಾದವನೂ, ರೋಗಗಳಿಂದ ಸಹಿತನೂ, ಹುಲಿಯನ್ನು ಕೊಲ್ಲುವವನೊ ಎಂಬಂತಿರುವವನೂ, ಎಲ್ಲ ತೊಂದರೆಗಳನ್ನು ನಿವಾರಿಸುವವನೂ, ನೆಲದಮೇಲೆ ಹಗೆಗಳ ಹೆಸರನ್ನು ಬರೆದು ಅವರನ್ನು ಕೊಲ್ಲುತ್ತಿರುವವನೂ, ಮಿಂದು, ಉಂಡು ತನ್ನ ಸ್ಥಾನದಲ್ಲಿ ಮನುವಿನಂತೆ ಧನ್ಯನೂ ಆದ ಅಜಾಪಾಲನನ್ನು ಕಂಡು ಸಂತೋಷಗೊಂಡು ರಾವಣನು ಹೇಳಿದ ಮಾತನ್ನು ಹೇಳಿದನು.

೪೪. ಅಜಾಪಾಲನು ಆಕ್ಷೇಪಸಹಿತವಾಗಿ ಸಕಾರಣವಾಗಿ ಉತ್ತರವನ್ನಿತ್ತು ಧೂಮ್ರಾಕ್ಷನನ್ನು ಕಳುಹಿಸಿ ತಾನು ಮಾಡಬೇಕಾದ ಕಾರ್ಯವನ್ನಾರಂಭಿಸಿದನು.

ಜ್ವರಮಾಕಾರಿಯಿತ್ವಾ ತು ಪ್ರೋವಾಚೇದಂ ಮಹೀಪತಿಃ ।
ಗಚ್ಛ ಲಂಕಾಧಿಪಸ್ಥಾನಮಾಚರ ತ್ವಂ ಯಥೋದಿತಂ ॥ ೪೫ ॥
ನಿಯುಕ್ತಸ್ತ್ವಜಪಾಲೇನ ಜ್ವರೋ ದಿವಿ ಜಗಾಮ ಹ ।
ಗತ್ವಾ ಚ ಕಂಪಯಾಮಾಸ ರಾವಣಂ ರಾಕ್ಷಸೇಶ್ವರಂ ॥ ೪೬ ॥
ರಾವಣಸ್ತಂವಿದಿತ್ವಾ ತು ಜ್ವರಂ ಪರಮದಾರುಣಂ ।
ಪ್ರೋವಾಚ ತಿಷ್ಠತು ನೃಪಸ್ತೇನ ಮೇ ನ ಪ್ರಯೋಜನಂ ॥ ೪೭ ॥
ತತಃ ಸ ವಿಜ್ವರೋ ರಾಜಾ ಬಭೂವ ಧನದಾನುಜಃ ।
ಏವಂ ತಸ್ಯ ಚರಿತ್ರಾಣಿ ಸಂತಿ ಚಾನ್ಯಾನಿ ಕೋಟಿಶಃ ॥ ೪೮ ॥
ಅಜಾಪಾಲಸ್ಯ ದೇವೇಶಿ ಸೂರ್ಯವತ್ಸ್ವಿಟ್ಕಿರೀಟಿನಃ ।
ತೇನೈಷಾರಾಧಿತಾ ದೇವೀ ಅಜಾಪಾಲೇನ ಧೀಮತಾ ॥
ಸರ್ವರೋಗಪ್ರಶಮನೀ ಸರ್ವೋಪದ್ರವನಾಶಿನೀ ॥ ೪೯ ॥
ಪೂಜಯೇತ್ತಾಂ ವಿಧಾನೇನ ಭೋಗೇಪ್ಸುರ್ಯದಿ ಮಾನವಃ ।
ಗಂಧೈರ್ಧೂಪೈರಲಂಕಾರೈರ್ವಸ್ತ್ರೈರನ್ಯೈಶ್ಚ ಭಕ್ತಿತಃ ॥ ೫೦ ॥

---

೪೫. ಅವನು ಜ್ವರವನ್ನು ಕರೆದು ನೀನು ಲಂಕೇಶನೆಡೆಗೆ ಹೋಗಿ ನಾನು ಹೇಳಿದಂತೆ ಮಾಡೆಂದನು.

೪೬. ಜ್ವರವು ಅಜಾಪಾಲನ ಅಪ್ಪಣೆಯಂತೆ ಆಕಾಶ ಮಾರ್ಗದಿಂದ ಲಂಕೆಗೆ ಹೋಗಿ ರಾಕ್ಷಸರೊಡೆಯನಾದ ರಾವಣನನ್ನು ನಡುಗಿಸಿತು.

೪೭. ರಾವಣನು ಅತಿ ಭಯಂಕರವಾದ ಆ ಜ್ವರವನ್ನರಿತು ಆ ಅಜಾಪಾಲನು ಅಲ್ಲಿಯೇ ಇರಲಿ. ಅವನಿಂದ ನನಗೆ ಪ್ರಯೋಜನವಿಲ್ಲ ಎಂದನು.

೪೮. ಬಳಿಕ ಕುಬೇರನ ಸಹೋದರನಾದ ಆ ರಾವಣನು ಜ್ವರವಿಲ್ಲದವನಾದನು. ಹೀಗೆ ಆ ಅಜಾಪಾಲನ ಚರಿತ್ರೆಗಳು ಅನೇಕ ಕೋಟಿಯಾಗಿರುವುವು.

೪೯–೫೦. ದೇವೇಶಿ! ಸೂರ್ಯ ಕಾಂತಿಯ ಕಿರೀಟವುಳ್ಳವನಾದ ಅಜಾಪಾಲನು ಪೂಜಿಸಿದ, ಸಮಸ್ತ ರೋಗಗಳನ್ನೂ, ಸಮಸ್ತ ತೊಂದರೆಗಳನ್ನೂ ಪರಿಹರಿಸುವ ಆ ದೇವಿಯನ್ನು ಸುಖಭೋಗವನ್ನಿಚ್ಛಿಸುವ ಮನುಷ್ಯನು ಗಂಧ, ಧೂಪ, ಭೂಷಣ, ವಸ್ತ್ರ ಮತ್ತು ಇತರ ವಸ್ತುಗಳಿಂದ ಭಕ್ತಿಪೂರ್ವಕವಾಗಿ ಆರಾಧಿಸಬೇಕು.

ಇತಿ ತೇ ಕಥಿತಂ ಸರ್ವಮಜಾದೇವ್ಯಾಃ ಸಮುದ್ಭವಂ ।
ಸರ್ವದುಃಖೋಪಶಮನಂ ಸರ್ವಪಾತಕನಾಶನಂ ॥ ೫೧ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಜಾಪಾಲೇಶ್ವರೀಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಪಂಚಾಶೋಽಧ್ಯಾಯಃ ॥

---

೫೧. ಹೀಗೆ ನಿನಗೆ ಅಜಾದೇವಿಯ ಸರ್ವದುಃಖಗಳನ್ನೂ ಸರ್ವಪಾಪಗಳನ್ನೂ ಪರಿಹರಿಸುವ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ ಮಾಹಾತ್ಮ್ಯದಲ್ಲಿ
ಅಜಾಪಾಲೇಶ್ವರೀಮಾಹಾತ್ಮ್ಯವರ್ಣನವೆಂಬ
ಐವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಏಕೋನಷಷ್ಟಿತಮೋಽಧ್ಯಾಯಃ

ಅಜಾದೇವೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ವಚ್ಮಿ ತೃತೀಯಾಂ ತೇ ಜ್ಞಾನಶಕ್ತಿಂ ಶಿವಾತ್ಮಿಕಾಂ ।
ಪ್ರಭಾಸಕ್ಷೇತ್ರಮಧ್ಯಸ್ಥಾಂ ದಾರಿದ್ರ್ಯೌಘವಿನಾಶಿನೀಂ ॥ ೧ ॥
ಅಜೇತಿ ನಾಮ್ನೀಂ ತಾಂ ದೇವೀಂ ರಾಜ್ಞೀಶಾದ್ದಕ್ಷಿಣೇ ಸ್ಥಿತಾಂ ।
ಮಮ ವಕ್ತ್ರಾದ್ವಿನಿಷ್ಕ್ರಾಂತಾ ಷಷ್ಠಾದ್ವೈ ವಿಷ್ಣುಪೂಜಿತಾತ್ ॥ ೨ ॥

ದೇವ್ಯುವಾಚ :—

ಪಂಚವಕ್ತ್ರಾಣಿ ದೇವೇಶ ಪ್ರಸಿದ್ಧಾನಿ ತವ ಪ್ರಭೋ ।
ಷಷ್ಠಂ ಯದ್ವದನಂ ದೇವ ತಸ್ಯ ಕಿಂ ನಾಮ ಸಂಸ್ಕೃತಂ ।
ಸಮುತ್ಪನ್ನಾ ಕಥಂ ತಸ್ಮಾದಜಾದೇವೀತಿ ಯಾ ಶ್ರುತಾ ॥ ೩ ॥

ಈಶ್ವರ ಉವಾಚ :

ಸಾಧು ಪೃಷ್ಟಂ ತ್ವಯಾ ದೇವಿ ಯದ್ಗೋಪ್ಯಂ ಸ್ವಸುತೇಷ್ವಪಿ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಅಪ್ರಸಿದ್ಧಾಗಮೋದಿತಂ ॥ ೪ ॥

ಕನ್ನಡದ ಅನುವಾದ

ಅಜಾದೇವೀಮಾಹಾತ್ಮ್ಯವರ್ಣನ

೧—೨. ಬಳಿಕ ನಿನಗೆ ಪ್ರಭಾಸಕ್ಷೇತ್ರದ ನಡುವೆ ರಾಜ್ಞೀಶ್ವರನ ದಕ್ಷಿಣಭಾಗದಲ್ಲಿರುವವಳೂ, ಶಿವಾಸ್ವರೂಪಳೂ, ಬಡತನವನ್ನು ನೀಗಿಸುವವಳೂ, ವಿಷ್ಣುವು ಪೂಜಿಸಿದ ನನ್ನ ಆರನೆಯ ಬಾಯಿಯಿಂದ ಹೊರಟವಳೂ, ಆದ ಅಜಾ ಎಂಬ ಮೂರನೆಯ ಜ್ಞಾನಶಕ್ತಿಯನ್ನು ಹೇಳುವೆನು.

೩. ದೇವಿಯು ಹೇಳುತ್ತಾಳೆ:—ದೇವೇಶ! ನಿನ್ನ ಐದು ಮುಖಗಳು ಪ್ರಸಿದ್ಧವಾಗಿರುವುವು. ಆರನೆಯ ಮುಖದ ಹೆಸರೇನು? ಆ ಅಜಾ ದೇವಿಯು ಆ ಮುಖದಿಂದ ಹೇಗೆ ಹುಟ್ಟಿದಳು?

೪. ಈಶ್ವರನು ಹೇಳುತ್ತಾನೆ:—ಸರಿಯಾಗಿ ಕೇಳಿರುವೆ. ನನ್ನ ಮಕ್ಕಳಿಗೂ, ಹೇಳದೆ ಗುಟ್ಟಾಗಿಟ್ಟಿರುವ ಯಾವ ಪ್ರಸಿದ್ಧಾಗಮದಲ್ಲಿಯೂ ಹೇಳದಿರುವ ಈ ರಹಸ್ಯವನ್ನು ನಿನಗೆ ಹೇಳುವೆನು.

ವಕ್ತ್ರಾಣಿ ಮಮ ದೇವೇಶಿ ಸಪ್ತಾಽಽಸನ್ ಪೂರ್ವಮೇವ ಹಿ ।
ಸದ್ಯೋಜಾತಾದಿ ಪಂಚೈವ ಷಷ್ಠಂ ಸ್ಮೃತಮಜೇತಿ ಚ ॥ ೫ ॥

ಸಪ್ತಮಂ ಪಿಚುನಾಮೇತಿ ಸಪ್ತೈವಂ ವದನಾನಿ ಮೇ ।
ತೇಭ್ಯೋಽಜಂ ಬ್ರಹ್ಮಣೇ ದತ್ತಂ ಪಿಚುವಕ್ತ್ರಂ ತು ವಿಷ್ಣವೇ ॥ ೬ ॥

ತಸ್ಮಾದಹಂ ಮಹಾದೇವಿ ಪಂಚವಕ್ತ್ರೋಽಧುನಾಽಭವಂ ।
ಅಜಸ್ತು ಬ್ರಹ್ಮಾ ಸಂಜಜ್ಞೇ ಪಿತುರ್ವಿಷ್ಣುರಜಾಯತ ॥ ೭ ॥

ಅಜವಕ್ತ್ರಾನ್ ಮಹಾದೇವಿ ಅಜಾ ಜಾತಾ ಮಹಾಪ್ರಭಾ ।
ಅಂಧಾಸುರರಣೇ ಘೋರೇ ಮಮ ಕ್ರೋಧೇನ ಭಾಮಿನಿ ॥ ೮ ॥

ಖಡ್ಗಚರ್ಮಧರಾ ದೇವೀ ಸುರೂಪಾ ಸಿಂಹವಾಹಿನಿ ।
ಮರ್ದಯಂತೀ ಮಹಾದೈತ್ಯಾನ್ ದೇವೀಕೋಟಿಸಮನ್ವಿತಾ ॥ ೯ ॥

ತಸ್ಯಾ ಭಯೇನ ಯೇ ದೈತ್ಯಾ ವಿದ್ರುತಾ ದಕ್ಷಿಣಾರ್ಣವಂ ।
ಪೃಷ್ಠತೋಽನುಯಯೌ ತಾನ್ಸೃ ಸಾ ದೇವೀ ಸಿಂಹವಾಹಿನೀ ॥ ೧೦ ॥

ಇತಸ್ತತಸ್ತೇ ಧಾವಂತೋ ಮಾರ್ಯಮಾಣಾಶ್ಚ ತದ್ಗಣೈಃ ।
ಪ್ರಭಾಸಕ್ಷೇತ್ರಸಂಪ್ರಾಪ್ತಾ ನಶ್ಯಮಾನಾ ಮಹಾರ್ಣವಂ ॥ ೧೧ ॥

೫–೬. ದೇವೇಶಿ! ಹಿಂದೆ ನನಗೆ ಏಳು ಮುಖಗಳಿದ್ದುವು. ಅವುಗಳಲ್ಲಿ ಐದು ಮುಖಗಳು ಸದ್ಯೋಜಾತಾದಿಗಳು; ಆರನೆಯದು ಅಜಾ ಎಂಬುದು. ಏಳನೆಯದು ಪಿಚು ಎಂಬುದು. ಅವುಗಳಲ್ಲಿ ಅಜ ಎಂಬ ಮುಖವನ್ನು ಬ್ರಹ್ಮನಿಗೂ, ಪಿಚು ಎಂಬ ಮುಖವನ್ನು ವಿಷ್ಣುವಿಗೂ ಕೊಟ್ಟಿರುವೆನು.

೭. ಮಹಾದೇವಿ! ಆದುದರಿಂದ ನಾನು ಈಗ ಐದು ಮುಖಗಳುಳ್ಳವನಾದೆನು. ಬ್ರಹ್ಮನು ಅಜನೂ, ವಿಷ್ಣುವು ಪಿಚುವೂ ಆದರು.

೮–೯. ದೇವಿ! ಅಂಧಾಸುರನ ಘೋರ ಯುದ್ಧದಲ್ಲಿ ನನ್ನ ಕೋಪದಿಂದ ಖಡ್ಗ ಮೃಗದ ಚರ್ಮವನ್ನು ಧರಿಸಿದವಳೂ, ಸಿಂಹವಾಹನೆಯೂ, ಅನೇಕ ದೇವಿಯರೊಡನೆ ಮಹಾದೈತ್ಯರನ್ನು ಮರ್ದಿಸುವವಳೂ ಆದ ಅಜಾ ಎಂಬುವಳು ಅಜವೆಂಬ ಮುಖದಿಂದ ಹುಟ್ಟಿದಳು.

೧೦. ಆ ದೇವಿಯು ಸಿಂಹವನ್ನೇರಿ ತನ್ನ ಭಯದಿಂದ ದಕ್ಷಿಣ ಸಮುದ್ರಕ್ಕೆ ಓಡಿ ಹೋದ ದೈತ್ಯರನ್ನು ಹಿಂಬಾಲಿಸಿದಳು.

ಕೇಚಿತ್ತತ್ರ ಹತಾ ದೈತ್ಯಾಃ ಕೇಚಿತ್ಪಾತಾಲಮಾಯಯುಃ ।
ನಿಃಶೇಷಾನ್ನಿಹತಾನ್ ದೃಷ್ಟ್ವಾ ಸಾ ದೇವೀ ಸಿಂಹವಾಹಿನೀ ॥ ೧೨ ॥
ಕ್ಷೇತ್ರಂ ಪವಿತ್ರಮಾಜ್ಞಾಯ ತತ್ರ ಸ್ಥಾನೇ ಸ್ಥಿತಾ ಶುಭಾ ।
ಸೋಮೇಶಾದೀಶಕೋಣಸ್ಥಾ ಸೌರೀಶಾದುತ್ತರೇ ಸ್ಥಿತಾ ॥ ೧೩ ॥
ಯಸ್ತಾಂ ತತ್ರ ಸ್ಥಿತಾಂ ಪಶ್ಯೇದ್ಯೋಷಿದ್ವಾಽಪಿ ನರೋಽಪಿ ವಾ ।
ಸ ಭೂಯಾತ್ಸತ್ವಸೌಭಾಗ್ಯೈಃ ಸಪ್ತ ಜನ್ಮಾನಿ ಸಂಯುತಃ ॥ ೧೪ ॥
ಗೀತವಾದ್ಯಾದಿಕಂ ನೃತ್ಯಂ ಯಸ್ತತ್ರ ಕುರುತೇ ನರಃ ।
ತಸ್ಯಾನ್ವಯೇ ನ ದೌರ್ಭಾಗ್ಯಂ ಭೂಯಾತ್ತಸ್ಯಾಃ ಪ್ರಸಾದತಃ ॥ ೧೫ ॥
ಘೃತೇನ ದೀಪಕಂ ತತ್ರ ಯಾ ನಾರೀ ಸಂಪ್ರಯಚ್ಛತಿ ।
ರಕ್ತವರ್ತ್ಯಾ ಮಹಾದೇವಿ ಯಾವಂತಸ್ತತ್ರ ತಂತವಃ ।
ತಾವಜ್ಜನ್ಮಾಂತರಾಣ್ಯೇವ ಸಾ ಸೌಭಾಗ್ಯಮವಾಪ್ನುಯಾತ್ ॥ ೧೬ ॥
ಯಶ್ಚೈತತ್ತು ಪಠೇನ್ನಿತ್ಯಂ ತೃತೀಯಾಯಾಂ ವಿಶೇಷತಃ ।
ಶೃಣುಯಾದ್ವಾಽಪಿ ಯೋ ಭಕ್ತ್ಯಾ ಸ ಕಾಮಾನಖಿಲಾಂಲ್ಲಭೇತ್ ॥ ೧೭ ॥
ಇತಿ ಸಂಕ್ಷೇಪತಃ ಪ್ರೋಕ್ತೋ ರುದ್ರಶಕ್ತಿತ್ರಯಕ್ರಮಃ ॥ ೧೮ ॥

೧೨-೧೪. ಅವರಲ್ಲಿ ಕೆಲವರು ಅಲ್ಲಿಯೇ ಹತರಾದರು. ಕೆಲವರು ಪಾತಾಳವನ್ನು ಸೇರಿದರು. ಆ ದೇವಿಯು ಅವರೆಲ್ಲರೂ ನಿಶ್ಶೇಷವಾಗಿ ಹತರಾಗಿರುವುದನ್ನು ನೋಡಿ ಆ ಪ್ರಭಾಸವು ಪವಿತ್ರಕ್ಷೇತ್ರವೆಂದು ಭಾವಿಸಿ ಅಲ್ಲಿಯೇ ನೆಲೆಸಿದಳು. ಸೋಮೇಶ್ವರನ ಈಶಾನ್ಯದಲ್ಲಿಯೂ ಸೌರೀಶ್ವರನ ಉತ್ತರ ದಿಕ್ಕಿನಲ್ಲಿಯೂ ಇರುವ ಆ ಅಜಾದೇವಿಯನ್ನು ದರ್ಶನಮಾಡಿದ ಹೆಂಗಸಾಗಲಿ, ಗಂಡಸಾಗಲಿ ಏಳು ಜನ್ಮಗಳಲ್ಲಿ ಸತ್ವಸೌಭಾಗ್ಯಗಳಿಂದ ಸಹಿತರಾಗುತ್ತಾರೆ.

೧೫. ಅಲ್ಲಿ ದೇವಿಯ ಸಮ್ಮುಖದಲ್ಲಿ ಸಂಗೀತ, ವಾದ್ಯ, ನೃತ್ಯಗಳನ್ನು ಮಾಡಿದ ಮಾನವನ ವಂಶದಲ್ಲಿ ಆಕೆಯ ಅನುಗ್ರಹದಿಂದ ದೌರ್ಭಾಗ್ಯವುಂಟಾಗುವುದಿಲ್ಲ.

೧೬. ಮಹಾದೇವಿ! ಅಲ್ಲಿ ಕೆಂಪು ಬತ್ತಿಯಿಂದ ತುಪ್ಪದ ದೀಪವನ್ನು ಹೊತ್ತಿಸಿದ ಹೆಂಗಸು ಆ ಬತ್ತಿಯಲ್ಲಿರುವ ನೂಲಿನಷ್ಟು ಜನ್ಮಗಳಲ್ಲಿ ಸೌಭಾಗ್ಯವನ್ನು ಹೊಂದುವಳು.

೧೭. ಈ ಅಜಾದೇವಿಯ ಮಾಹಾತ್ಮ್ಯವನ್ನು ತದಿಗೆ ದಿನ ಭಕ್ತಿಯಿಂದ ಪಠಿಸಿದವನು ಅಥವಾ ಕೇಳಿದವನು ಸಮಸ್ತಾಭೀಷ್ಟಗಳನ್ನೂ ಪಡೆಯುವನು.

೧೮. ಹೀಗೆ ಸಂಕ್ಷೇಪವಾಗಿ ಮೂರು ರುದ್ರ ಶಕ್ತಿಗಳುಂಟಾದ ಕ್ರಮವನ್ನು ಹೇಳಿರುವೆನು.

ಏತಾಃ ಶಕ್ತೀಃ ಪೂಜಯಿತ್ವಾ ಸೋಮೇಶಂ ಪೂಜಯೇತ್ತತಃ ।
ಸಮ್ಯಗ್ಯಾತ್ರಾಫಲಾಪೇಕ್ಷೀ ಏಕಾಂ ವಾ ವರದಾಮಥ ॥ ೧೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಜಾದೇವೀಮಾಹಾತ್ಮ್ಯವರ್ಣನಂ ನಾಮ
॥ ಏಕೋನಷಷ್ಟಿತಮೋಽಧ್ಯಾಯಃ ॥

---

೧೯. ಯಾತ್ರೆಯ ಸಂಪೂರ್ಣ ಫಲಗಳನ್ನು ಅಪೇಕ್ಷಿಸುವ ಮಾನವನು ಈ ಮೂರು ಶಕ್ತಿಗಳನ್ನಾಗಲಿ ಅಥವಾ ವರದಾ ಎಂಬ ಒಂದು ಶಕ್ತಿಯನ್ನಾಗಲಿ ಪೂಜಿಸಿ ಬಳಿಕಸೋಮೇಶ್ವರನನ್ನು ಆರಾಧಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ
ಅಜಾದೇವೀಮಾಹಾತ್ಮ್ಯವರ್ಣನನೆಂಬ
ಐವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಷ್ಟಿತಮೋಽಧ್ಯಾಯಃ

ಮಂಗಲಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಪ್ರಭಾಸಕ್ಷೇತ್ರದೂತೀನಾಂ ತ್ರಿತಯಂ ವರವರ್ಣಿನಿ ।
ಅಥ ತೇ ಸಂಪ್ರವಕ್ಷ್ಯಾಮಿ ಶೃಣು ಹ್ಯೇಕಮನಾಃ ಪ್ರಿಯೇ ॥ ೧ ॥
ಪ್ರಥಮಾ ಮಂಗಲಾ ದೇವೀ ವಿಶಾಲಾಕ್ಷೀ ದ್ವಿತೀಯಕಾ ।
ತಥಾ ಚತ್ವರದೇವೀ ತು ತೃತೀಯಾ ಪರಿಕೀರ್ತಿತಾ ॥ ೨ ॥
ಯಥಾಽನುಕ್ರಮತಃ ಪೂಜ್ಯಾಃ ಶಕ್ತಯಸ್ತಾ ವರಾನನೇ ।
ಪ್ರಭಾಸಕ್ಷೇತ್ರಯಾತ್ರಾಯಾಃ ಫಲಪ್ರೇಪ್ಸುರ್ನರೋ ಯದಿ ॥ ೩ ॥

ದೇವ್ಯುವಾಚ :—

ಕಸ್ಮಿನ್ ಸ್ಥಾನೇ ಸ್ಥಿತಾ ದೇವ ದೂತ್ಯಸ್ತಾಃ ಕ್ಷೇತ್ರರಕ್ಷಿಕಾಃ ।
ಕಸ್ಯ ತಾಃ ಕಥಮಾರಾಧ್ಯಾಃ ಕಥಂ ಪೂಜ್ಯಾ ಜಗತ್ಪತೇ ॥ ೪ ॥

ಕನ್ನಡದ ಅನುವಾದ

ಮಂಗಳಾಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಪ್ರಿಯಳೆ! ತರುವಾಯ ನಿನಗೆ ಮೂರು ಮಂದಿ ಪ್ರಭಾಸಕ್ಷೇತ್ರದೂತಿಯರನ್ನು ಹೇಳುವೆನು. ಒಮ್ಮನಸ್ಸಿನಿಂದ ಕೇಳುವವಳಾಗು.

೨. ಮೊದಲನೆಯವಳು ಮಂಗಳಾದೇವಿ, ಎರಡನೆಯವಳು ವಿಶಾಲಾಕ್ಷಿ, ಮೂರನೆಯವಳು ಚತ್ವರದೇವಿಯು.

೩. ಮನುಷ್ಯನು ಪ್ರಭಾಸಕ್ಷೇತ್ರದ ಯಾತ್ರಾಫಲವನ್ನು ಬಯಸುವುದಾದರೆ ಆ ಮೂರು ಶಕ್ತಿಗಳನ್ನು ಕ್ರಮದಿಂದ ಪೂಜಿಸಬೇಕು.

೪. ದೇವಿಯು ಹೇಳುತ್ತಾಳೆ :—ಜಗದೊಡೆಯನೆ! ಕ್ಷೇತ್ರವನ್ನು ರಕ್ಷಿಸುವ ಆ ದೂತಿಯರು ಎಲ್ಲಿರುವರು? ಅವರಾರು? ಅವರನ್ನು ಪೂಜಿಸುವ ಬಗೆ ಹೇಗೆ?

ಈಶ್ವರ ಉವಾಚ :—

ಬ್ರಾಹ್ಮೀ ತು ಮಂಗಲಾ ಪ್ರೋಕ್ತಾ ವಿಶಾಲಾಕ್ಷೀ ತು ವೈಷ್ಣವೀ ।
ರೌದ್ರೀ ಶಕ್ತಿಃ ಸಮಾಖ್ಯಾತಾ ದೇವೀ ಸಾ ಚತ್ವರಪ್ರಿಯಾ ॥ ೫ ॥
ಮಂಗಲಾ ಪ್ರಥಮಂ ಪೂಜ್ಯಾ ಅಜಾದೇವ್ಯುತ್ತರೇ ಸ್ಥಿತಾ ।
ರಾಷ್ಟ್ರೀಶಾದ್ದಕ್ಷಿಣೇ ಭಾಗೇ ನಾಽತಿದೂರೇ ವರಾನನೇ ॥ ೬ ॥
ಸೋಮೇಶ್ವರಂ ಪ್ರತಿಷ್ಠಾಪ್ಯ ಪ್ರಾರಬ್ಧೇ ಯಜ್ಞಕರ್ಮಣಿ ।
ಸೋಮೇನ ತತ್ರ ದೇವಾನಾಮಾಗತಾ ಸಾ ದಿದೃಕ್ಷಯಾ ॥ ೭ ॥
ಬ್ರಹ್ಮಾದೀನಾಂ ಚ ಸಾ ಯಸ್ಮಾನ್ಮಾಂಗಲ್ಯಂ ಕೃತವತ್ಯುಮೇ ।
ತಸ್ಮಾತ್ಸಾ ಮಂಗಲಾ ಪ್ರೋಕ್ತಾ ಸರ್ವಮಾಂಗಲ್ಯದಾಯಿನೀ ॥ ೮ ॥
ತೃತೀಯಾಯಾಂ ತು ಯಾ ನಾರೀ ನರೋ ವಾ ಪೂಜಯಿಷ್ಯತಿ ।
ತಸ್ಯಾಽಮಂಗಲ್ಯದುಃಖಾನಿ ನಾಶಂ ಯಾಸ್ಯಂತಿ ಕೃತ್ಸ್ನಶಃ ॥ ೯ ॥
ದಂಪತೀಭೋಜನಂ ತತ್ರ ಫಲದಾನಂ ಸಕಂಚುಕಂ ।
ಪ್ರಶಸ್ತಂ ಪೃಷದಾಜ್ಯಸ್ಯ ಪ್ರಾಶನಂ ಪಾಪನಾಶನಂ ॥ ೧೦ ॥

---

೫. ಈಶ್ವರನು ಹೇಳುತ್ತಾನೆ :—ಮಂಗಳೆಯು ಬ್ರಾಹ್ಮೀ ಶಕ್ತಿಯೂ, ವಿಶಾಲಾಕ್ಷಿಯು ವೈಷ್ಣವೀಶಕ್ತಿಯೂ, ಚತ್ವರಪ್ರಿಯಳು ರೌದ್ರೀಶಕ್ತಿಯೂ ಆಗಿರುವಳು.

೬. ಪ್ರಿಯಳೆ! ಅಜಾದೇವಿಯ ಉತ್ತರದಿಕ್ಕಿನಲ್ಲಿ ರಾಷ್ಟ್ರೀಶನ ದಕ್ಷಿಣದಲ್ಲಿ ಹತ್ತಿರದಲ್ಲಿರುವ ಮಂಗಳೆಯನ್ನು ಮೊದಲು ಪೂಜಿಸಬೇಕು.

೭. ಚಂದ್ರನು ದೇವತೆಗಳೊಡನೆ ಸೋಮೇಶ್ವರನನ್ನು ಪ್ರತಿಷ್ಠೆಮಾಡಿ ಯಜ್ಞವನ್ನಾರಂಭಿಸಲು ಆ ದೇವಿಯು ಅದನ್ನು ನೋಡಲು ಅಲ್ಲಿಗೆ ಬಂದಳು.

೮. ಪಾರ್ವತಿ! ಅವಳು ಬ್ರಹ್ಮಾದಿದೇವತೆಗಳಿಗೆ ಮಂಗಳವನ್ನುಂಟು ಮಾಡಿದ್ದರಿಂದ ಸಕಲಮಂಗಳವನ್ನೀಯುವ ಮಂಗಳೆಯೆಂದು ಪ್ರಸಿದ್ಧಳಾದಳು.

೯. ತದಿಗೆ ದಿನ ಹೆಂಗಸಾಗಲಿ, ಗಂಡಸಾಗಲಿ ಆ ಮಂಗಳೆಯನ್ನು ಪೂಜಿಸಿದರೆ ಅವರ ಸಮಸ್ತ ಅಮಂಗಳದ ದುಃಖವೂ ಪರಿಹಾರವಾಗುವುದು.

೧೦. ಅಲ್ಲಿ ದಂಪತಿಭೋಜನ, ಕಂಚುಕ, ಫಲದಾನ, ಮೊಸರು ಮಿಶ್ರವಾದ ತುಪ್ಪದ ಪ್ರಾಶನ ಇವುಗಳು ಅತ್ಯಂತ ಪ್ರಶಸ್ತವಾದುವು.

ಇತಿ ಸಂಕ್ಷೇಪತಃ ಪ್ರೋಕ್ತಂ ಮಹಾಭಾಗ್ಯಂ ಮಹೋದಯಂ ।
ಮಂಗಲಾಯಾಶ್ಚ ಮಾಹಾತ್ಮ್ಯಂ ಸರ್ವಪಾತಕನಾಶನಂ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಂಗಲಾಮಾಹಾತ್ಮ್ಯವರ್ಣನಂ ನಾಮ
॥ ಷಷ್ಟಿತಮೋಽಧ್ಯಾಯಃ ॥

---

೧೧. ಹೀಗೆ ಸಂಕ್ಷೇಪವಾಗಿ ಅತ್ಯಂತ ಭಾಗ್ಯವನ್ನೀಯುವುದೂ, ಸಮಸ್ತ ಪಾತಕಗಳನ್ನು ನಾಶಗೊಳಿಸುವುದೂ ಆದ ಮಂಗಳೆಯ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಂಗಳಾಮಾಹಾತ್ಮ್ಯವರ್ಣನವೆಂಬ
ಅರುವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಷಷ್ಟಿತಮೋಽಧ್ಯಾಯಃ

ಲಲಿತೋಮಾವಿಶಾಲಾಕ್ಷೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವೀಂ ಕ್ಷೇತ್ರದೂತೀಂ ತು ವೈಷ್ಣವೀಂ ।
ಶ್ರೀದೈತ್ಯಸೂದನಾದ್ದೇವಿ ಪೂರ್ವಭಾಗೇ ವ್ಯವಸ್ಥಿತಾಂ ॥ ೧ ॥
ಯೋಗೇಶ್ವರ್ಯಾಸ್ತಥೈಶಾನ್ಯಾಂ ಧನುಷಾ ಸಪ್ತಕೇ ಸ್ಥಿತಾಂ ।
ಮಹಾದೌರ್ಭಾಗ್ಯದಗ್ಧಾನಾಂ ಸ್ಥಿತಾಂ ಭೇಷಜರೂಪಿಣೀಂ ॥ ೨ ॥
ಚಾಕ್ಷುಷಸ್ಯಾಂತರೇ ದೇವಿ ಯದಾ ದೈತ್ಯಾ ಬಲೋತ್ಕಟಾಃ ।
ಹನ್ಯಮಾನಾ ವಿಷ್ಣುನಾಽಥ ದಕ್ಷಿಣಾಂ ದಿಶಮಾವಿಶನ್ ॥ ೩ ॥
ತತ್ರ ವರ್ಷಶತಂ ಸಾಗ್ರಂ ದೈತ್ಯಾಶ್ಚಕ್ರುರ್ಮಹಾಹವಂ ।
ವಿಷ್ಣುನಾ ಸಹ ದೇವೇಶಿ ದಿವ್ಯಾಸ್ತ್ರೈಶ್ಚ ಪೃಥಗ್ವಿಧೈಃ ॥ ೪ ॥
ದುಃಖವಧ್ಯಾಂಸ್ತತೋ ಜ್ಞಾತ್ವಾ ವಿಷ್ಣುಃ ಕಮಲಲೋಚನಃ ।
ಸಸ್ಮಾರ ಭೈರವೀಂ ಶಕ್ತಿಂ ಮಹಾಮಾಯಾಂ ಮಹಾಪ್ರಭಾಂ ॥ ೫ ॥

ಕನ್ನಡದ ಅನುವಾದ

ಲಲಿತೋಮಾವಿಶಾಲಾಕ್ಷೀಮಾಹಾತ್ಮ್ಯವರ್ಣನಂ

೧–೨. ಈಶ್ವರನು ಹೇಳುತ್ತಾನೆ:—ಬಳಿಕ ವಿಷ್ಣುವಿನ ಪೂರ್ವಭಾಗದಲ್ಲಿ ಯೋಗೇಶ್ವರಿಯ ಈಶಾನ್ಯದಿಕ್ಕಿನಲ್ಲಿ ಏಳುಬಿಲ್ಲಿನ ದೂರದಲ್ಲಿ ದೌರ್ಭಾಗ್ಯ ಪೀಡಿತರಿಗೆ ಔಷಧದಂತಿರುವ ಕ್ಷೇತ್ರದೂತಿಯಾದ ವೈಷ್ಣವೀ ಶಕ್ತಿಯ ಹತ್ತಿರ ಹೋಗಬೇಕು.

೩. ಚಾಕ್ಷುಷಮನ್ವಂತರದಲ್ಲಿ ವಿಷ್ಣುವು ಬಲೋದ್ಧತರಾದ ದೈತ್ಯರನ್ನು ಕೊಲ್ಲುತ್ತಿರಲು ಅವರು ದಕ್ಷಿಣ ದಿಕ್ಕಿಗೆ ಓಡಿ ಹೋದರು.

೪. ಅವರು ಅಲ್ಲಿ ನೂರು ವರ್ಷಕಾಲ ವಿಷ್ಣುವಿನೊಡನೆ ಬಗೆ ಬಗೆಯ ದಿವ್ಯಾಸ್ತ್ರಗಳಿಂದ ಕಾಳಗವಾಡಿದರು.

೫. ವಿಷ್ಣುವು ತರುವಾಯ ಆ ದೈತ್ಯರನ್ನು ವಧಿಸುವುದು ಕಷ್ಟವೆಂದರಿತು ಅತ್ಯಂತ ಕಾಂತಿಯುಳ್ಳ ಭೈರವೀ ಶಕ್ತಿಯನ್ನು ಸ್ಮರಿಸಿದನು.

ಸಾ ಸ್ಮೃತಾ ಕ್ಷಣಮಾತ್ರೇಣ ವಿಷ್ಣುನಾ ಪ್ರಭವಿಷ್ಣುನಾ ।
ತತ್ರಾಽಽಗತಾ ಮಹಾದೇವೀ ಆನಂದಸ್ಫುರಿತೇಕ್ಷಣಾ ॥ ೬ ॥
ವಿಶಾಲೇ ತು ಕೃತೇ ದೇವ್ಯಾ ಲೋಚನೇ ವಿಷ್ಣುದರ್ಶನಾತ್ ।
ವಿಶಾಲಾಕ್ಷೀ ತತೋ ಜಾತಾ ತತ್ರಸ್ಥಾ ದೈತ್ಯನಾಶಿನೀ ॥ ೭ ॥
ಅಸ್ಮಿನ್ಕಲ್ಪೇ ಸಮಾಖ್ಯಾತಾ ಲಲಿತೋಮಾ ವರಾನನೇ ।
ಉಮಾದ್ವಯಂ ಸಮಾಖ್ಯಾತಂ ಸೋಮೇಶೇ ದೈತ್ಯಸೂದನೇ ॥ ೮ ॥
ಪೂರ್ವಂ ಸೋಮೇಶ್ವರಂ ಪಶ್ಯೇತ್ಪಶ್ಚಾಚ್ಚ್ರೀದೈತ್ಯಸೂದನೇ ।
ಉಮಾದ್ವಯಂ ಪೂಜಯಿತ್ವಾ ತೀರ್ಥಯಾತ್ರಾಫಲಂ ಲಭೇತ್ ॥ ೯ ॥
ಮಾಘೇ ಮಾಸಿ ತೃತೀಯಾಯಾಂ ವಿಧಿನಾ ಯೋಽರ್ಚಯೇತ್ತು ತಾಂ ।
ನ ಸಂತತಿವಿಹೀನಃಸ್ಯಾತ್ತಸ್ಯ ಕೋಟ್ಯನ್ವಯೇ ನರಃ ॥ ೧೦ ॥
ಯೋ ನಿತ್ಯಮೀಕ್ಷತೇ ತತ್ರ ಭಕ್ತ್ಯಾ ಪರಮಯಾ ಯುತಃ ।
ಆರೋಗ್ಯಸುಖಸೌಭಾಗ್ಯಸಂಯುಕ್ತೋಽಸೌ ಭವೇಚ್ಚಿರಂ ॥ ೧೧ ॥

---

೬. ಪ್ರಭುವಾದ ವಿಷ್ಣುವು ಸ್ಮರಿಸಿದ ಕೂಡಲೆ ಆ ಭೈರವೀ ದೇವಿಯು ಸಂತೋಷದಿಂದ ಹೊಳೆಯುತ್ತಿರುವ ಕಣ್ಣುಗಳುಳ್ಳವಳಾಗಿ ಅಲ್ಲಿಗೆ ಬಂದಳು.

೭. ದೈತ್ಯನಾಶಕಳಾದ ಆ ದೇವಿಯು ವಿಷ್ಣುವನ್ನು ನೋಡಿದ ಕೂಡಲೆ ಕಣ್ಣುಗಳನ್ನು ವಿಶಾಲಗೊಳಿಸಿದ್ದರಿಂದ ವಿಶಾಲಾಕ್ಷಿಯೆಂದು ಹೆಸರನ್ನು ಪಡೆದಳು.

೮. ಪ್ರಿಯಳೆ! ಈ ಕಲ್ಪದಲ್ಲಿ ಅವಳು ಲಲಿತೋಮಾ ಎಂದು ಪ್ರಸಿದ್ಧಿಗೊಂಡಳು. ಹೀಗೆ ಸೋಮೇಶ್ವರನ ಮತ್ತು ವಿಷ್ಣುವಿನ ಹತ್ತಿರ ಇಬ್ಬರು ಉಮಾದೇವಿಯರಾದರು.

೯. ಮೊದಲು ಸೋಮೇಶ್ವರನಲ್ಲಿಯೂ, ಅನಂತರ ದೈತ್ಯಸೂದನನಲ್ಲಿಯೂ ಇರುವ ಇಬ್ಬರು ಉಮಾದೇವಿಯರನ್ನು ಪೂಜಿಸಿದರೆ ತೀರ್ಥಯಾತ್ರೆಯ ಫಲವು ಲಭಿಸುವುದು.

೧೦. " ಮಾಘಮಾಸದ ತದಿಗೆಯ ದಿನ ನನ್ನನ್ನು ವಿಧಿಯಿಂದ ಪೂಜಿಸಿದವನ ಕೋಟಿವಂಶದಲ್ಲಿಯೂ ಸಂತತಿಯಾಗದಿರುವುದಿಲ್ಲ.

೧೧. ನಿತ್ಯವೂ ಅತಿಶಯಭಕ್ತಿಯಿಂದ ನನ್ನ ದರ್ಶನಮಾಡುವ ಮನುಷ್ಯನು ಬಹಳಕಾಲ ಆರೋಗ್ಯ, ಸುಖ, ಸೌಭಾಗ್ಯಗಳಿಂದ ಕೂಡಿರುವನು. "

ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಲಲಿತೋದ್ಭವಂ ।
ಶ್ರುತಂ ಯತ್ಪಾಪನಾಶಾಯ ಜಾಯತೇ ಧರ್ಮವೃದ್ಧಯೇ ॥ ೧೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಲಿತೋಮಾವಿಶಾಲಾಕ್ಷೀಮಾಹಾತ್ಮ್ಯವರ್ಣನಂ ನಾಮ
॥ ಏಕಷಷ್ಟಿತಮೋಽಧ್ಯಾಯಃ ॥

---

೧೨. ಹೀಗೆ ಲಲಿತಾದೇವಿಯ ಮಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳಿದರೆ ಪಾಪವು ನೀಗಿ ಧರ್ಮವು ವೃದ್ಧಿಯಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ
ಲಲಿತೋಮಾವಿಶಾಲಾಕ್ಷೀಮಾಹಾತ್ಮ್ಯವರ್ಣನವೆಂಬ
ಅರುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಷಷ್ಟಿತಮೋಽಧ್ಯಾಯಃ

ಚತ್ವರಾದೇವೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತೃತೀಯಾಂ ಚತ್ವರಪ್ರಿಯಾಂ ।
ಲಲಿತಾಪೂರ್ವದಿಗ್ಭಾಗೇ ದಶಧನ್ವಂತರೇ ಸ್ಥಿತಾಂ ॥ ೧ ॥
ಕ್ಷೇತ್ರದೂತೀಂ ಮಹಾರೌದ್ರೀಂ ರುದ್ರಶಕ್ತಿಂ ಮಹಾಪ್ರಭಾಂ ।
ಕ್ಷೇತ್ರರಕ್ಷಾವಿಧೌ ತತ್ರ ಮಯಾ ಮುಕ್ತಾಂ ತು ಮಧ್ಯತಃ ॥ ೨ ॥
ಕೋಟಿಭೂತಸಮಾಯುಕ್ತಾ ಮಹಾಕಾಯಾ ಮಹಾಪ್ರಭಾ ।
ಜೀರ್ಣೇ ಗೃಹೇ ತಥೋದ್ಯಾನೇ ಪ್ರಾಸಾದಾಟ್ಟಾಲಕೇ ಪಥಿ ॥ ೩ ॥
ಚತ್ವರೇಷು ಚ ಸರ್ವೇಷು ಕ್ಷೇತ್ರಮಧ್ಯಸ್ಥಿತಾ ಸತೀ ।
ರಾತ್ರೌ ಪರ್ಯಟತೇ ದೇವೀ ಭೂತಾನಾಂ ಕೋಟಿಭಿರ್ವೃತಾ ॥ ೪ ॥
ಮಹಾನವಮ್ಯಾಂ ಯಸ್ತತ್ರ ನಾರೀ ವಾಽಥ ನರೋಽಪಿ ವಾ ।
ನಾನಾಪೂಜೋಪಚಾರೈಶ್ಚ ಪೂಜಯೇದ್ವಿಧಿವಚ್ಛುಭಾಂ ॥ ೫ ॥

ಕನ್ನಡದ ಅನುವಾದ

ಚತ್ವರಾದೇವೀಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಲಲಿತಾ ದೇವಿಯ ಪೂರ್ವದಿಕ್ಕಿನಲ್ಲಿ ಹತ್ತು ಬಿಲ್ಲಿನ ದೂರದಲ್ಲಿ ಅತಿ ಭಯಂಕರಳೂ, ಅತಿಶಯ ಕಾಂತಿಯುಳ್ಳವಳೂ, ಆ ಕ್ಷೇತ್ರದ ರಕ್ಷಣೆಗಾಗಿ ನಡುವೆ ನನ್ನಿಂದ ಸ್ಥಾಪನೆಗೊಂಡಿರುವವಳೂ ಆದ ಮೂರನೆಯ ಚತ್ವರಪ್ರಿಯೆಯೆಂಬ ಕ್ಷೇತ್ರದೂತಿಯಾದ ರುದ್ರಶಕ್ತಿ ಹೊಂದ ಯನ್ನು ಬೇಕು.

೩–೪. ಕೋಟಿ ಭೂತಗಳಿಂದ ಸಹಿತಳೂ, ದೊಡ್ಡ ದೇಹವುಳ್ಳವಳೂ ಆದ ಅವಳು ಹಳೆಮನೆಯಲ್ಲಿಯೂ, ತೋಟದಲ್ಲಿಯೂ, ಮಹಡಿಮನೆಗಳಲ್ಲಿಯೂ, ಕೋಟೆಯ ಬುರುಜುಗಳಲ್ಲಿಯೂ, ದಾರಿಯಲ್ಲಿಯೂ, ಚೌಕಗಳಲ್ಲಿಯೂ ರಾತ್ರಿಯಕಾಲದಲ್ಲಿ ಸಂಚರಿಸುತ್ತಾಳೆ.

೫–೬. ಮಹಾನವಮಿದಿನ ಹೆಂಗಸಾಗಲಿ, ಗಂಡಸಾಗಲಿ ನಾನಾವಿಧೋಪಚಾರಗಳಿಂದ ಮಂಗಳಕರಳಾದ ಆ ದೇವಿಯನ್ನು ಪೂಜಿಸಿದರೆ ಅವಳು ಸಂತುಷ್ಟಳಾಗಿ

ತಸ್ಯ ತುಷ್ಟಾಽಖಿಲಾನ್ಕಾಮಾನ್ ಸಾ ದೇವೀ ಸಂಪ್ರದಾಸ್ಯತಿ ।
ದಂಪತ್ಯೋರ್ಭೋಜನಂ ತತ್ರ ದೇಯಂ ಯಾತ್ರಾಫಲೇಪ್ಸುಭಿಃ ॥ ೬ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಪಾಪನಾಶನಂ ।
ಕ್ಷೇತ್ರದೂತ್ಯಾಸ್ತೃತೀಯಾಯಾಃ ಶ್ರುತಮೈಶ್ವರ್ಯಕಾರಕಂ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚತ್ವರಾದೇವೀಮಾಹಾತ್ಮ್ಯವರ್ಣನಂ ನಾಮ
॥ ದ್ವಿಷಷ್ಟಿತಮೋಽಧ್ಯಾಯಃ ॥

ಸಕಲೇಷ್ಟಾರ್ಥಗಳನ್ನು ಕೊಡುವಳು. ಯಾತ್ರಾ ಫಲವನ್ನಪೇಕ್ಷಿಸುವವರು ಅಲ್ಲಿ ದಂಪತಿಗಳಿಗೆ ಭೋಜನಮಾಡಿಸಬೇಕು.

೭. ಹೀಗೆ ಮೂರನೆಯ ಕ್ಷೇತ್ರದೂತಿಯ ಪಾಪವನ್ನು ಪರಿಹರಿಸುವ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಶ್ರವಣಮಾಡಿದರೆ ಐಶ್ವರ್ಯವುಂಟಾವುದು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚತ್ವರಾದೇವೀಮಾಹಾತ್ಮ್ಯವರ್ಣನವೆಂಬ
ಅರುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಷಷ್ಟಿತಮೋಽಧ್ಯಾಯಃ

ಭೈರವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಭೈರವೇಶ್ವರಮುತ್ತಮಂ ।
ಯೋಗೇಶ್ವರ್ಯಾ ದಕ್ಷಿಣತೋ ನಾತಿದೂರೇ ವ್ಯವಸ್ಥಿತಂ ॥ ೧ ॥

ಸರ್ವಪಾಪಪ್ರಶಮನಂ ದಿವ್ಯೈಶ್ವರ್ಯಪ್ರದಾಯಕಂ ।
ಪುರಾ ದೈತ್ಯವಿನಾಶಾರ್ಥಂ ಯದಾ ದೇವೀ ಕೃತೋದ್ಯಮಾ ॥ ೨ ॥

ತದಾ ಭೈರವಮಾಹೂಯ ದೂತತ್ವೇ ನಿಯುಯೋಜ ಹ ।
ಶಿವದೂತೀ ತದಾ ಖ್ಯಾತಾ ಪಶ್ಚಾದ್ಯೋಗೇಶ್ವರೀತಿ ಚ ॥ ೩ ॥

ಭೈರವೋ ಯತ್ರ ವೈ ದೇವ್ಯಾ ದೂತತ್ವೇ ವಿನಿಯೋಜಿತಃ ।
ತೇನ ಲಿಂಗಂ ಸಮಾಖ್ಯಾತಂ ಭೈರವೇಶ್ವರನಾಮಕಂ ॥ ೪ ॥

ಕನ್ನಡದ ಅನುವಾದ

ಭೈರವೇಶ್ವರಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ;—ಮಹಾದೇವಿ! ಬಳಿಕ ಯೋಗೇಶ್ವರಿಯ ದಕ್ಷಿಣದಲ್ಲಿ ಹತ್ತಿರದಲ್ಲಿರುವ ಸಮಸ್ತ ಪಾಪಗಳನ್ನು ಪರಿಹರಿಸುವವನೂ, ದಿವ್ಯೈಶ್ವರ್ಯವನ್ನು ಕೊಡುವವನೂ ಆದ ಉತ್ತಮನಾದ ಭೈರವೇಶ್ವರನೆಡೆಗೆ ಹೋಗಬೇಕು. ಹಿಂದೆ ದೇವಿಯು ದೈತ್ಯನಾಶಕ್ಕೋಸ್ಕರ ಉದ್ಯುಕ್ತಳಾಗಿ ಭೈರವನನ್ನು ಕರೆದು ದೂತ ಕಾರ್ಯದಲ್ಲಿ ನೇಮಿಸಿದಳು. ಆಗ ಅವಳು ಶಿವದೂತಿಯೆಂದೂ, ತರುವಾಯ ಯೋಗೇಶ್ವರಿಯೆಂದೂ ಪ್ರಸಿದ್ಧಳಾದಳು.

೪. ದೇವಿಯು ಇಲ್ಲಿ ಭೈರವನನ್ನು ದೂತನ ಕೆಲಸದಲ್ಲಿ ನೇಮಿಸಿದ್ದರಿಂದ ಆ ಲಿಂಗವು ಭೈರವೇಶ್ವರನೆಂದು ಪ್ರಸಿದ್ಧವಾಯಿತು.

ಪೂಜಿತಂ ದೇವದೈತ್ಯೈಶ್ಚ ಭೈರವೇಣ ಪ್ರತಿಷ್ಠಿತಂ ।
ಯಸ್ತತ್ಪೂಜಯತೇ ಭಕ್ತ್ಯಾ ಕಾರ್ತಿಕ್ಯಾಂ ವಿಧಿನಾ ನರಃ ।
ನಿರಂತರಂ ವಾ ಷಣ್ಮಾಸಂ ಸೋಽಭೀಷ್ಟಂ ಲಭತೇ ಫಲಂ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೈರವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿಷಷ್ಟಿತಮೋಽಧ್ಯಾಯಃ ॥

---

೫. ಭೈರವನ್ನು ಪ್ರತಿಷ್ಠೆಮಾಡಿದುದೂ ದೇವತೆಗಳಿಂದಲೂ, ದೈತ್ಯರಿಂದಲೂ ಪೂಜಿಸಲ್ಪಟ್ಟದೂ ಆದ ಆ ಲಿಂಗವನ್ನು ಕಾರ್ತಿಕಮಾಸದ ಪೂರ್ಣಿಮಾದಿನದಲ್ಲಿ, ಅಥವಾ ಆರು ತಿಂಗಳಕಾಲ ಪ್ರತಿದಿನವೂ ಆರಾಧಿಸಿದ ಮನುಷ್ಯನು ಇಷ್ಟಾರ್ಥವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೈರವೇಶ್ವರಮಾಹಾತ್ಮ್ಯವರ್ಣನವೆಂಬ
ಅರುವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಷಷ್ಟಿತಮೋಽಧ್ಯಾಯಃ

ಲಕ್ಷ್ಮೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ಪೂರ್ವದಿಗ್ಭಾಗೇ ಧನುಷಾಂ ಪಂಚಕೇ ಸ್ಥಿತಂ ।
ಲಕ್ಷ್ಮೀಶ್ವರೇತಿ ವಿಖ್ಯಾತಂ ದಾರಿದ್ರ್ಯೌಘವಿನಾಶನಂ ॥ ೧ ॥
ಯತ್ರ ದೇವ್ಯಾ ಸಮಾನೀತಾ ಲಕ್ಷ್ಮೀರ್ದೈತ್ಯಾನ್ನಿಹತ್ಯ ಚ ।
ತೇನ ಲಕ್ಷ್ಮೀಶ್ವರಂ ನಾಮ ಸ್ವಯಂ ದೇವ್ಯಾ ಪ್ರತಿಷ್ಠಿತಂ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ಶ್ರೀಪಂಚವಿಧಾನತಃ ।
ನ ವಿಯುಕ್ತೋ ಭವೇಲ್ಲಕ್ಷ್ಮ್ಯಾ ಯಾವನ್ಮನ್ವಂತರಂ ಪ್ರಿಯೇ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಕ್ಷ್ಮೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಃಷಷ್ಟಿತಮೋಽಧ್ಯಾಯಃ ॥

ಕನ್ನಡದ ಅನುವಾದ

ಲಕ್ಷ್ಮೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಆ ಭೈರವೇಶ್ವರನ ಪೂರ್ವದಿಕ್ಕಿನಲ್ಲಿ ಐದು ಬಿಲ್ಲುಗಳ ದೂರದಲ್ಲಿ ಬಡತನವನ್ನು ನೀಗಿಸುವ ಲಕ್ಷ್ಮೀಶ್ವರ ಲಿಂಗವು ಇರುವುದು.

೨. ದೇವಿಯು ಇಲ್ಲಿ ದೈತ್ಯರನ್ನು ವಧಿಸಿ ಲಕ್ಷ್ಮಿಯನ್ನು ತಂದು ಈ ಲಿಂಗವನ್ನು ಪ್ರತಿಷ್ಠೆಮಾಡಿದ್ದರಿಂದ ಇದಕ್ಕೆ ಲಕ್ಷ್ಮೀಶ್ವರವೆಂದು ಹೆಸರಾಯಿತು.

೩. ಪ್ರಿಯಳೆ ! ಸರಸ್ವತೀ ಪಂಚಮಿಯದಿನ ಭಕ್ತಿಯಿಂದ ಆ ಲಕ್ಷ್ಮೀಶ್ವರನನ್ನು ವಿಧಿಯಂತೆ ಪೂಜಿಸಿದವನು ಮನ್ವಂತರದವರೆಗೆ ಲಕ್ಷ್ಮಿಯಿಂದ (ಸಂಪತ್ತಿನಿಂದ) ರಹಿತನಾಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಲಕ್ಷ್ಮೀಶ್ವರಮಾಹಾತ್ಮ್ಯವರ್ಣನವೆಂಬ
ಅರುವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಷಷ್ಟಿತಮೋಽಧ್ಯಾಯಃ

ವಾಡವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ವೈ ವಾಡವೇಶ್ವರಂ ।
ಲಕ್ಷ್ಮೀಶಾದುತ್ತರೇ ಭಾಗೇ ವಿಶಾಲಾಕ್ಷ್ಯಾಶ್ಚ ದಕ್ಷಿಣೇ ॥ ೧ ॥
ಸ್ಥಿತಂ ಮಹಾಪ್ರಭಾವಂ ಹಿ ವಾಡವೇನ ಪ್ರತಿಷ್ಠಿತಂ ।
ಕೃತಸ್ಮರೋ ಯದಾ ದಗ್ಧಃ ಪರ್ವತೋ ವಾಡವಾಗ್ನಿನಾ ॥ ೨ ॥
ಸಮೀಕೃತ್ಯಾಽಖಿಲಂ ಸ್ಥಾನಂ ತೇನ ಲಿಂಗಂ ಪ್ರತಿಷ್ಠಿತಂ ।
ಪೂಜಯೇತ್ತಂ ವಿಧಾನೇನ ದಧ್ನಾ ಸಂಸ್ನಾಪ್ಯ ಶಂಕರಂ ॥ ೩ ॥
ದಧಿ ದದ್ಯಾಚ್ಚ ವೈ ತತ್ರ ಬ್ರಾಹ್ಮಣೇ ವೇದಪಾರಗೇ ।
ಸೋಽಗ್ನಿಲೋಕಮವಾಪ್ನೋತಿ ಸಮ್ಯಗ್ಯಾತ್ರಾಫಲಂ ಲಭೇತ್ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಾಡವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚಷಷ್ಟಿತಮೋಽಧ್ಯಾಯಃ ॥

ಕನ್ನಡದ ಅನುವಾದ

ವಾಡವೇಶ್ವರಮಾಹಾತ್ಮ್ಯವರ್ಣನ

೧-೪. ಈಶ್ವರನು ಹೇಳುತ್ತಾನೆ ;—ಮಹಾದೇವಿ! ತರುವಾಯ ಲಕ್ಷ್ಮೀಶ್ವರನ ಉತ್ತರದಲ್ಲಿ ವಿಶಾಲಾಕ್ಷಿಯ ದಕ್ಷಿಣದಲ್ಲಿ ವಾಡವಾಗ್ನಿಯು ಸ್ಥಾಪಿಸಿದ ಅತಿಮಾಹಾತ್ಮ್ಯಯುಳ್ಳ ವಾಡವೇಶ್ವರ ಲಿಂಗದೆಡೆಗೆ ಹೋಗಬೇಕು. ವಾಡವಾಗ್ನಿಯು ಇಲ್ಲಿ ಕೃತಸ್ಮರ ಪರ್ವತವನ್ನು ಬೂದಿಮಾಡಿದಾಗ ಸಮಸ್ತ ಪ್ರದೇಶವನ್ನೂ ಸರಿಮಾಡಿ ಈ ಲಿಂಗವನ್ನು ಪ್ರತಿಷ್ಠೆಮಾಡಿದನು. ಆ ಶಂಕರನನ್ನು ಮೊಸರಿನಿಂದ ಅಭಿಷೇಕ ಮಾಡಿ ವಿಧಿಯಿಂದ ಪೂಜಿಸಿ ವೇದಾಧ್ಯಯನ ಮಾಡಿದ ಬ್ರಾಹ್ಮಣನಿಗೆ ಮೊಸರನ್ನು ದಾನಮಾಡಿದ ಮನುಷ್ಯನು ಸಂಪೂರ್ಣವಾಗಿ ಯಾತ್ರಾಫಲವನ್ನು ಪಡೆದು ಅಗ್ನಿಲೋಕವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಾಡವೇಶ್ವರಮಾಹಾತ್ಮ್ಯವರ್ಣನವೆಂಬ
ಅರುವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್‌ಷಷ್ಟಿತಮೋಽಧ್ಯಾಯಃ

ಅರ್ಘ್ಯೇಶ್ವರಮಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾಲಿಂಗಮರ್ಘ್ಯೇಶ್ವರಮಿತಿ ಶ್ರುತಂ ।
ಉತ್ತರೇ ತು ವಿಶಾಲಾಕ್ಷ್ಯಾ ನಾಽತಿದೂರೇ ವ್ಯವಸ್ಥಿತಂ ॥ ೧ ॥
ಲಿಂಗಂ ಮಹಾಪ್ರಭಾವಂ ಹಿ ಸುರಗಂಧರ್ವಪೂಜಿತಂ ।
ಯದಾ ದೇವೀ ಸಮಾಯಾತಾ ವಡವಾಽನಲಧಾರಿಣೀ ॥ ೨ ॥
ಪ್ರಭಾಸಕ್ಷೇತ್ರಮಾಸಾದ್ಯ ದೃಷ್ಟ್ವಾ ತತ್ರ ಮಹೋದಧಿಂ ।
ಅರ್ಘ್ಯಂ ದತ್ತವತೀ ತತ್ರ ವಿಧಿನಾ ತನ್ಮಹೋದಧೇಃ ॥ ೩ ॥
ಪ್ರತಿಷ್ಠಾಪ್ಯ ಮಹಲ್ಲಿಂಗಂ ಸಂಪೂಜ್ಯ ವಿಧಿನಾ ತತಃ ।
ಪ್ರವಿವೇಶಾಽಥ ದೇವೇಶಿ ಸ್ನಾನಾರ್ಥಂ ಚ ಮಹೋದಧೌ ॥ ೪ ॥
ಯಸ್ಮಾದರ್ಘ್ಯಂ ಪುರಾ ದತ್ತ್ವಾ ಪಶ್ಚಾದೀಶಃ ಪ್ರತಿಷ್ಠಿತಃ ।
ತೇನಾಽರ್ಘ್ಯೇಶೇತಿ ವಿಖ್ಯಾತಂ ಲಿಂಗಂ ಪಾಪಪ್ರಣಾಶನಂ ॥ ೫ ॥

ಕನ್ನಡದ ಅನುವಾದ

ಅರ್ಘ್ಯೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ:—ಬಳಿಕ ವಿಶಾಲಾಕ್ಷಿಯ ಉತ್ತರದಲ್ಲಿ ದೇವ ಗಂಧರ್ವರು ಪೂಜಿಸಿರುವ ಬಹು ಮಾಹಾತ್ಮ್ಯವುಳ್ಳ ಅರ್ಘ್ಯೇಶ್ವರ ಲಿಂಗವನ್ನು ಹೊಂದಬೇಕು. ಸರಸ್ವತಿಯು ವಡವಾನಲವನ್ನು ಧರಿಸಿ ಈ ಪ್ರಭಾಸಕ್ಷೇತ್ರಕ್ಕೆ ಬಂದು ಸಮುದ್ರವನ್ನು ಕಂಡು ವಿಧಿಯಂತೆ ಆ ಸಮುದ್ರಕ್ಕೆ ಅರ್ಘ್ಯವನ್ನಿತ್ತಳು.

೪. ಬಳಿಕ ವಿಧಿಯಂತೆ ಆ ಶಿವಲಿಂಗವನ್ನು ಪ್ರತಿಷ್ಠೆಮಾಡಿ ಸ್ನಾನಕ್ಕೋಸ್ಕರ ಸಾಗರವನ್ನು ಹೊಕ್ಕಳು.

೫. ಮೊದಲು ಅರ್ಘ್ಯವನ್ನು ಕೊಟ್ಟು ಅನಂತರ ಈಶ್ವರನನ್ನು ಪ್ರತಿಷ್ಠೆ ಮಾಡಿದ್ದರಿಂದ ಆ ಲಿಂಗವು ಅರ್ಘ್ಯೇಶ್ವರನೆಂದು ವಿಖ್ಯಾತವಾಯಿತು.

ಪಂಚಾಮೃತೇನ ಸಂಸ್ನಾಪ್ಯ ವಿಧಿನಾ ಯಸ್ತಮರ್ಚಯೇತ್ ।
ಸಪ್ತ ಜನ್ಮಾನಿ ದೇವೇಶಿ ಸ ವಿದ್ಯಾಮಧಿಗಚ್ಛತಿ ।
ಸಮ್ಯಕ್ಶಾಸ್ತ್ರಪ್ರವಕ್ತಾ ಚ ಸರ್ವಸಂದೇಹವಿತ್ತಮಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅರ್ಘೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಟ್ಷಷ್ಟಿತಮೋಽಧ್ಯಾಯಃ ॥

---

೬. ದೇವೇಶಿ! ಆ ಅರ್ಘ್ಯೇಶ್ವರನನ್ನು ಪಂಚಾಮೃತದಿಂದ ಅಭಿಷೇಕಮಾಡಿ ಅರ್ಚಿಸಿದವನು ಏಳು ಜನ್ಮಗಳಲ್ಲಿ ವಿದ್ಯಾವಂತನಾಗಿ ಶಾಸ್ತ್ರವನ್ನು ಚೆನ್ನಾಗಿ ಪ್ರವಚನ ಮಾಡುವವನೂ, ಸಮಸ್ತ ಸಂದೇಹವನ್ನು ಪರಿಹರಿಸಲು ಸಮರ್ಥನೂ ಆಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅರ್ಘೇಶ್ವರಮಾಹಾತ್ಮ್ಯವರ್ಣನವೆಂಬ
ಅರುವತ್ತಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಸಪ್ತಷಷ್ಟಿತಮೋಽಧ್ಯಾಯಃ

ಕಾಮೇಶ್ವರಮಾಹಾತ್ಮ್ಯವರ್ಣನಂ

ತತೋ ಗಚ್ಛೇನ್ಮಹಾಲಿಂಗಂ ಕಾಮೇಶ್ವರಮಿತಿ ಶ್ರುತಂ ।
ಕಾಮೇನಾರಾಧಿತಂ ಪೂರ್ವಂ ದೈತ್ಯಸೂದನಪಶ್ಚಿಮೇ || ೧ ||

ಧನುಷಾಂ ಸಪ್ತಕೇ ತತ್ರ ಸ್ಥಿತಂ ದೇವಿ ಮಹಾಪ್ರಭಂ ।
ನಿರ್ದಗ್ಧಸ್ತು ಯದಾ ಕಾಮಸ್ತೃತೀಯೇನಾಽಗ್ನಿನಾ ಮಮ || ೨ ||

ತದಾ ವರ್ಷಸಹಸ್ರಂ ತು ಸಮಾರಾಧ್ಯ ಮಹೇಶ್ವರಂ ।
ಪ್ರಪೇದೇ ಕಾಮನಾಸರ್ಗಂ ಯತ್ರಾಽನಂಗಃ ಪುರಾ ಕಿಲ || ೩ ||

ತೇನ ಕಾಮೇಶ್ವರಂ ನಾಮ ಖ್ಯಾತಂ ಲಿಂಗಂ ಧರಾತಲೇ ।
ಸರ್ವಪಾಪಹರಂ ದೇವಿ ಸರ್ವಕಾಮಫಲಪ್ರದಂ || ೪ ||

ಕನ್ನಡದ ಅನುವಾದ

ಕಾಮೇಶ್ವರಮಾಹಾತ್ಮ್ಯವರ್ಣನ

೧-೩. ಮಹಾದೇವಿ! ಬಳಿಕ ದೈತ್ಯಸೂದನನ ಪಶ್ಚಿಮದಲ್ಲಿ ಏಳು ಬಿಲ್ಲಿನ ದೂರದಲ್ಲಿರುವ ಅತಿಶಯ ಕಾಂತಿಯುಳ್ಳದೂ, ಹಿಂದೆ ಮನ್ಮಥನು ಪೂಜಿಸಿರುವುದೂ, ಆದ ಕಾಮೇಶ್ವರ ಲಿಂಗದೆಡೆಗೆ ಹೋಗಬೇಕು. ಹಿಂದೆ ನಾನು ಮನ್ಮಥನನ್ನು ಮೂರನೆಯ ಕಣ್ಣಿನ ಬೆಂಕಿಯಿಂದ ಸುಡಲು ಅವನು ಸಾವಿರ ವರ್ಷಕಾಲ ನನ್ನನ್ನು ಪೂಜಿಸಿ ಇಚ್ಛಾಸಿದ್ಧಿಯನ್ನು ಪಡೆದನು.

೪. ಆದರಿಂದ ಸಮಸ್ತ ಪಾಪಗಳನ್ನು ಪರಿಹರಿಸುವುದೂ, ಸಕಲೇಷ್ಟಾರ್ಥಗಳನ್ನು ನೀಡುವುದೂ, ಆದ ಆ ಲಿಂಗವು ಕಾಮೇಶ್ವರವೆಂದು ಪ್ರಸಿದ್ಧವಾಯಿತು.

ತ್ರಯೋದಶ್ಯಾಂ ವಿಧಾದೇನ ಶುಕ್ಲಾಯಾಂ ಮಾಸಿ ಮಾಧವೇ ।
ಸಂಪೂಜ್ಯ ತಂ ವಿಧಾನೇನ ಸ ಸ್ತ್ರೀಣಾಂ ಕಾಮವದ್ಭವೇತ್ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಾಮೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತಷಷ್ಟಿತಮೋಽಧ್ಯಾಯಃ ॥

---

೫. ವೈಶಾಖ ಶುಕ್ಲಪಕ್ಷ ತ್ರಯೋದಶೀ ದಿನ ವಿಧಿಯಿಂದ ಆ ಕಾಮೇಶ್ವರನನ್ನು ಪೂಜಿಸಿದವನು ಹೆಂಗಸರಿಗೆ ಕಾಮನಂತಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಾಮೇಶ್ವರಮಾಹಾತ್ಮ್ಯವರ್ಣನವೆಂಬ
ಅರುವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಷಷ್ಟಿತಮೋಽಧ್ಯಾಯಃ

ಗೌರೀತಪೋವನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಇತಿ ಪ್ರೋಕ್ತಾನಿ ತೇ ದೇವಿ ವಕ್ತ್ರಲಿಂಗಾನಿ ಪಂಚ ವೈ ।
ಅಥ ತೇ ಸಂಪ್ರವಕ್ಷ್ಯಾಮಿ ಯತ್ರ ಗೌರ್ಯಾಸ್ತಪೋವನಂ ।
ಸ್ಥಾನಂ ಮಹಾಪ್ರಭಾವಂ ಹಿ ಸುರಸಿದ್ಧನಿಷೇವಿತಂ ॥ ೧ ॥
ಸೋಮೇಶಾತ್ಪೂರ್ವದಿಗ್ಭಾಗೇ ಷಷ್ಟಿಧನ್ವಂತರೇ ಸ್ಥಿತಂ ।
ಯತ್ರ ದೇವ್ಯಾ ತಪಸ್ತಪ್ತಂ ಸತ್ಯಾ ವೈ ಪೂರ್ವಜನ್ಮನಿ ॥ ೨ ॥
ಕೃತ್ವಾ ಚ ಪ್ರಣಯಾತ್ಕೋಪಂ ಮಯಾ ಸಾರ್ಧಂ ವರಾನನೇ ।
ಪ್ರಭಾಸಕ್ಷೇತ್ರಮಾಸಾದ್ಯ ಸಂಸ್ಥಿತಾ ಸಾ ತಪಸ್ವಿನೀ ॥ ೩ ॥

ದೇವ್ಯುವಾಚ :—

ಕಿಮರ್ಥಂ ಸಾ ಪರಿತ್ಯಜ್ಯ ಸತೀ ತ್ವಾಂ ತಪಸಿ ಸ್ಥಿತಾ ।
ಕಸ್ಮಿನ್ ಸ್ಥಾನೇ ಸ್ಥಿತಾ ದೇವೀ ಏತನ್ಮೇ ವಿಸ್ತರಾದ್ವದ ॥ ೪ ॥

ಕನ್ನಡದ ಅನುವಾದ

ಗೌರೀತಪೋವನಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ಹೀಗೆ ನಿನಗೆ ಐದು ವಕ್ತ್ರಲಿಂಗಗಳನ್ನು ಹೇಳಿರುತ್ತೇನೆ. ಅನಂತರ ಸೋಮೇಶ್ವರನ ಪೂರ್ವದಿಕ್ಕಿನಲ್ಲಿ ಅರುವತ್ತು ಬಿಲ್ಲಿನ ದೂರದಲ್ಲಿ ದೇವತೆಗಳಿಂದಲೂ, ಸಿದ್ಧರಿಂದಲೂ ಸೇವಿಸಲ್ಪಟ್ಟಅತಿಶಯ ಮಾಹಾತ್ಮ್ಯೆವುಳ್ಳ ಗೌರೀ ತಪೋವನದ ವಿಷಯವನ್ನು ಹೇಳುತ್ತೇನೆ. ಹಿಂದಿನ ಜನ್ಮದಲ್ಲಿ ಸತಿ ದೇವಿಯು ನನ್ನಲ್ಲಿನ ಪ್ರಣಯ ಕೋಪದಿಂದ ಪ್ರಭಾಸಕ್ಷೇತ್ರವನ್ನು ಸೇರಿ ಅಲ್ಲಿ ನೆಲೆಸಿ ತಪಸ್ಸನ್ನಾಚರಿಸಿರುವಳು.

೪. ದೇವಿಯು ಹೇಳುತ್ತಾಳೆ:—ಆ ದೇವಿಯು ಏತಕ್ಕೆ ನಿನ್ನನ್ನು ತ್ಯಜಿಸಿದಳು. ಯಾವಸ್ಥಳದಲ್ಲಿ ತಪಸ್ಸನ್ನಾಚರಿಸಿದಳು ? ಅದನ್ನು ನನಗೆ ವಿಸ್ತಾರವಾಗಿ ಹೇಳು.

ಈಶ್ವರ ಉವಾಚ :—

ಪುರಾಽಽಸೀಸ್ತ್ವಂ ಮಹಾದೇವಿ ಶ್ಯಾಮವರ್ಣಾ ಮನಸ್ವಿನೀ ।
ನಾಮಾರ್ಥಂ ಚ ಮಯಾ ಪ್ರೋಕ್ತಾ ಕಾಲೀತಿ ರಹಸಿ ಸ್ಥಿತಾ ॥ ೫ ॥
ಸಾ ಶ್ರುತ್ವಾ ವಿಸ್ಮಯಂ ವಾಕ್ಯಂ ಭೃಶಂ ರೋಷಪರಾಯಣಾ ।
ಅಬ್ರವೀತ್ಪರುಷಂ ವಾಕ್ಯಂ ಭ್ರುಕುಟೀಕುಟಿಲಾನನಾ ॥ ೬ ॥
ಯಸ್ಮಾತ್ಕಾಲೀತ್ಯಹಂ ಪ್ರೋಕ್ತಾ ತ್ವಯಾ ಶಂಭೋಽತಿವಿಪ್ಲವಾತ್ ।
ತಸ್ಮಾದ್ಯಾಸ್ಯಾಮಿ ಗೌರೀತಿ ಭವಿಷ್ಯಾಮಿ ಚ ಯತ್ರ ಹಿ ॥ ೭ ॥
ಏವಮುಕ್ತ್ವಾ ಮಹಾಭಾಗಾ ಸಖೀಗಣಸಮಾವೃತಾ ।
ಗತ್ವಾ ಪ್ರಭಾಸಕ್ಷೇತ್ರಂ ಸಾ ಪ್ರತಿಷ್ಠಾಪ್ಯ ಮಹೇಶ್ವರಂ ।
ಗೌರೀಶ್ವರೇತಿ ವಿಖ್ಯಾತಂ ಪೂಜಯಂತೀ ವಿಧಾನತಃ ॥ ೮ ॥
ತತೋ ಲಿಂಗಸಮೀಪಸ್ಥಾ ಏಕಪಾದೇ ಸ್ಥಿತಾ ಸತೀ ।
ಲಿಂಗಮಾರಾಧಯಂತೀ ಸಾ ಚಕಾರ ಸುಮಹತ್ತಪಃ ॥ ೯ ॥
ಪಂಚಾಗ್ನಿಸಾಧಿಕಾ ದೇವೀ ಗ್ರೀಷ್ಮೇ ಜಾಪ್ಯಪರಾಯಣಾ ।
ವರ್ಷಾಸ್ವಾಕಾಶಶಯನಾ ಹೇಮಂತೇ ಸಲಿಲಾಶಯಾ ॥ ೧೦ ॥

---

೫. ಈಶ್ವರನು ಹೇಳುತ್ತಾನೆ:—ಮಹಾದೇವಿ! ನೀನು ಹಿಂದೆ ಶ್ಯಾಮವರ್ಣಳಾಗಿದ್ದೆ. ನಾನು ರಹಸ್ಯದಲ್ಲಿ ನಿನಗೆ ಕಾಳೀ ಎಂದು ಹೆಸರನ್ನಿಟ್ಟು ಕರೆದೆನು.

೬–೭. ಆ ನೀನು ಆಶ್ಚರ್ಯಕರವಾದ ನನ್ನ ಮಾತನ್ನು ಕೇಳಿ ಅತ್ಯಂತ ಕುಪಿತಳಾಗಿ ಹುಬ್ಬು ಗಂಟನ್ನು ಹಾಕಿಕೊಂಡು ಶಂಕರ! ನೀನು ಅತಿನೈಚ್ಯ ಭಾವನೆಯಿಂದ ನನ್ನನ್ನು ಕಾಳಿಯೆಂದು ಕರೆದುದರಿಂದ ನಾನು ಗೌರಿಯಾಗುವ ಸ್ಥಳಕ್ಕೆ ಹೋಗುವೆನೆಂದು ಕಠಿನವಾದ ಮಾತನಾಡಿದೆ.

೮–೯. ಹೀಗೆ ನುಡಿದು ನೀನು ಸಖಿಯರೊಡನೆ ಪ್ರಭಾಸಕ್ಷೇತ್ರವನ್ನು ಸೇರಿ ಮಹೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿ ಗೌರೀಶ್ವರನೆಂದು ಪ್ರಸಿದ್ಧಿಗೊಂಡ ಆ ಲಿಂಗವನ್ನು ವಿಧಿಯಂತೆ ಪೂಜಿಸುತ್ತ ಅದರ ಬಳಿ ಒಂಡಿಯಿಂದ ನಿಂತು ಘೋರ ತಪಸ್ಸನ್ನಾಚರಿಸಿರುವೆ.

೧೦–೧೧. ಗ್ರೀಷ್ಮರ್ತುವಿನಲ್ಲಿ ಪಂಚಾಗ್ನಿ ಮಧ್ಯದಲ್ಲಿಯೂ, ಮಳೆಗಾಲದಲ್ಲಿಯೂ ಹಿಮಗಾಲದಲ್ಲಿಯೂ, ಆವರಣವಿಲ್ಲದೆ ಆಕಾಶದಲ್ಲಿಯೂ, ಜಪಿಸುತ್ತ ತಪಸ್ಸನ್ನಾಚರಿಸು

ಯಥಾ ಯಥಾ ತಪೋ ವೃದ್ಧಿಂ ಯಾತಿ ತಸ್ಯಾ ಮಹಾಪ್ರಭಾ ।
ತಥಾ ತಥಾ ಶರೀರಸ್ಯ ಗೌರತ್ವಂ ಪ್ರತಿಪದ್ಯತೇ ॥ ೧೧ ॥
ಕಾಲೇನ ಮಹತಾ ಗೌರೀ ಸರ್ವಾಂಗೇಣಾಽಥ ಸಾಽಭವತ್ ।
ತತೋ ವಿಹಸ್ಯ ಭಗವಾನುವಾಚ ಶಶಿಶೇಖರಃ ॥ ೧೨ ॥
ಗೌರೀತಿ ಚ ಮುಹುರ್ವಾಕ್ಯಮುತ್ತಿಷ್ಠ ವ್ರಜ ಮಂದಿರಂ ।
ವರಂ ವರಯ ಕಲ್ಯಾಣಿ ಯತ್ತೇ ಮನಸಿ ವರ್ತತೇ ॥ ೧೩ ॥

ಗೌರ್ಯುವಾಚ :—

ಯೋ ಮಾಮತ್ರ ಸ್ಥಿತಾಂ ಪಶ್ಯೇನ್ನಾರೀ ವಾ ಪುರುಷೋಽಥ ವಾ ।
ಸ ಭೂಯಾತ್ಪುತ್ರಸೌಭಾಗ್ಯೈಃ ಸಪ್ತ ಜನ್ಮಾನಿ ಸಂಯುತಃ ॥ ೧೪ ॥
ಗೀತವಾದ್ಯಾದಿಕಂ ನೃತ್ಯಂ ಯಃ ಕುರ್ಯಾತ್ಪುರತೋ ಮಮ ।
ತಸ್ಯಾಽನ್ವಯೇ ನ ದೌರ್ಭಾಗ್ಯಂ ಭೂಯಾತ್ತವ ಪ್ರಸಾದತಃ ॥ ೧೫ ॥
ಮಯಾ ಪ್ರತಿಷ್ಠಿತಂ ಲಿಂಗಂ ಪೂರ್ವಮಭ್ಯರ್ಚ್ಯ ಮಾಂ ತತಃ ।
ಪೂಜಯಿಷ್ಯತಿ ಯೋ ಭಕ್ತ್ಯಾ ಸ ಯಾಸ್ಯತಿ ಪರಂ ಪದಂ ॥ ೧೬ ॥
ಗೌರೀಶ್ವರೇತಿ ವಿಖ್ಯಾತಂ ನಾಮ ತಸ್ಯ ಭವೇತ್ಪ್ರಭೋ ।
ತಥೇತ್ಯಹಂ ಪ್ರತಿಜ್ಞಾಯ ತತ್ರ ಸ್ಥಾನೇ ಸ್ಥಿತೋಽಭವಂ ॥ ೧೭ ॥

ತ್ತಿರುವ ಆ ನಿನ್ನ ತಪಸ್ಸು ವೃದ್ಧಿಯಾಗುತ್ತಿದ್ದಾಗ ನಿನ್ನ ಶರೀರವು ಗೌರವರ್ಣವಾಗುತ್ತ ಬಂತು.

೧೨–೧೩. ಹೀಗೆ ಕಾಲಕ್ರಮದಿಂದ ನೀನು ಸಮಸ್ತಾವಯವಗಳಲ್ಲಿಯೂ, ಬೆಳ್ಳಗಾದೆ. ಆಗ ಚಂದ್ರಮೌಳಿಯು ನಕ್ಕು ಗೌರಿಯೆಂದು ನಿನ್ನನ್ನು ಕರೆದು 'ದೇವಿ! ಇನ್ನು ನೀನು ಮನೆಗೆತೆರಳು. ನಿನ್ನ ಮನಸ್ಸಿನಲ್ಲಿರುವುದನ್ನು ಕೇಳಿಕೊ'. ಎಂದನು.

೧೪. ಗೌರಿಯು ಹೇಳುತ್ತಾಳೆ:—"ಪ್ರಭು! ಇಲ್ಲಿರುವ ನನ್ನನ್ನು ಗಂಡಸಾಗಲಿ ಹೆಂಗಸಾಗಲಿ ನೋಡಿದರೆ ಅವರು ಏಳು ಜನ್ಮಗಳಲ್ಲಿ ಮಕ್ಕಳು ಮತ್ತು ಸೌಭಾಗ್ಯಗಳಿಂದ ಕೂಡಿರುವರು.

೧೫. ನನ್ನ ಮುಂದೆ ಗೀತವಾದ್ಯಾದಿಗಳನ್ನು ಮಾಡಿದವನ ವಂಶದಲ್ಲಿ ನಿನ್ನ ಅನುಗ್ರಹದಿಂದ ದೌರ್ಭಾಗ್ಯವುಂಟಾಗುವುದಿಲ್ಲ.

೧೬. ನಾನು ಪ್ರತಿಷ್ಠೆಮಾಡಿದ ಲಿಂಗವನ್ನು ಮೊದಲು ಪೂಜಿಸಿ ಬಳಿಕ ನನ್ನನ್ನು ಭಕ್ತಿಯಿಂದಾರಾಧಿಸುವವನು ಉತ್ತಮ ಪದವಿಯನ್ನು ಹೊಂದುವನು.

೧೭–೧೮. ಸ್ವಾಮಿ ! ಆ ಲಿಂಗಕ್ಕೆ ಗೌರೀಶ್ವರನೆಂದು ಹೆಸರಾಗಲಿ" ಎಂದು ಕೇಳಿಕೊಂಡಳು. ಹಾಗೆಯೇ ಆಗಲೆಂದು ಹೇಳಿ ನಾನು ಆ ಸ್ಥಳದಲ್ಲಿ ದೇವಿಯೊಡನೆ

ದೇವ್ಯಾ ಸಹ ಮಹಾದೇವಿ ಪ್ರಹೃಷ್ಟೇನಾಂತರಾತ್ಮನಾ ।
ಅದ್ಯಾಽಪಿ ಆಯನೇ ಪ್ರಾಪ್ತೇ ಉತ್ತರೇ ದಕ್ಷಿಣೇಽಪಿ ವಾ ॥ ೧೮ ॥
ಗೌರೀಸ್ಥಾನಂ ಸಮಭ್ಯೇತಿ ತತ್ರ ದೇವಗುಣೈರ್ಯುತಃ ।
ತಸ್ಮಿನ್ನಹನಿ ಯಸ್ತತ್ರ ವಿಶಿಷ್ಟಾನಿ ಫಲಾನಿ ಚ ।
ಸಂಪ್ರಯಚ್ಛತಿ ವಿಪ್ರೇಭ್ಯಸ್ತಸ್ಯ ಪುತ್ರಾ ಭವಂತಿ ಚ ॥ ೧೯ ॥
ಪುತ್ರಹೀನಾ ತು ಯಾ ನಾರೀ ನಾಲಿಕೇರಂ ಪ್ರಯಚ್ಛತಿ ।
ಪುತ್ರಂ ಸಾ ಲಭತೇ ಶೀಘ್ರಂ ಸಬಲಂ ಲಕ್ಷಣಾನ್ವಿತಂ ॥ ೨೦ ॥
ಘೃತೇನ ದೀಪಕಂ ತತ್ರ ಯಾ ನಾರೀ ಸಂಪ್ರಯಚ್ಛತಿ ।
ರಕ್ತವರ್ತ್ಯಾ ಮಹಾದೇವಿ ಯಾವತ್ತಸ್ಯೈವ ತಂತವಃ ॥ ೨೧ ॥
ತಾವಜ್ಜನ್ಮಾಂತರಾಣ್ಯೇವ ಸಾ ಸೌಭಾಗ್ಯಮವಾಪ್ನುಯಾತ್ ॥ ೨೨ ॥
ಯಾ ನೃತ್ಯಂ ಕುರುತೇ ತತ್ರ ಭಕ್ತ್ಯಾ ಪರಮಯಾ ಯುತಾ ।
ಆರೋಗ್ಯಸುಖಸೌಭಾಗ್ಯೈಃ ಸಂಯುಕ್ತಾ ಸಾ ಭವೇಚ್ಚಿರಂ ॥ ೨೩ ॥
ತತ್ರಾಂತೇ ಸುಮಹತ್ಕುಂಡಂ ತೀರ್ಥಂ ಸ್ವಚ್ಛೋದಪೂರಿತಂ ।
ಯಃ ಸ್ನಾನಮಾಚರೇತ್ತತ್ರ ಮುಚ್ಯತೇ ಸರ್ವಪಾತಕೈಃ ॥ ೨೪ ॥

ನೆಲೆಸಿದೆನು. ಈಗಲೂ ಉತ್ತರಾಯಣ ಅಥವಾ ದಕ್ಷಿಣಾಯನ ಸಂಕ್ರಮಣ ಬರಲು ಗೌರೀಸ್ಥಾನವನ್ನು ಹೊಂದಿ ಉತ್ತಮ ಗುಣಗಳಿಂದ ಸಹಿತನಾಗಿ ಆ ದಿನ ಬ್ರಾಹ್ಮಣರಿಗೆ ಉತ್ತಮ ಫಲಗಳನ್ನಿತ್ತವನಿಗೆ ಪುತ್ರರು ಜನಿಸುವರು.

೨೦. ಅಲ್ಲಿ ಮಕ್ಕಳಿಲ್ಲದ ಹೆಂಗಸು ತೆಂಗಿನಕಾಯಿಯನ್ನರ್ಪಿಸಿದರೆ ಅವಳು ಶೀಘ್ರನಾಗಿ ಲಕ್ಷಣವುಳ್ಳವನೂ, ಬಲಿಷ್ಠನೂ ಆದ ಮಗನನ್ನು ಪಡೆಯುವಳು.

೨೧-೨೨. ಮಹಾದೇವಿ ! ಅಲ್ಲಿ ಕೆಂಪುಬತ್ತಿಯಿಂದ ತುಪ್ಪದ ದೀಪವನ್ನು ಹೊತ್ತಿಸಿದ ಹೆಂಗಸು ಆ ಬತ್ತಿಯಲ್ಲಿರುವ ನೂಲಿನಷ್ಟು ಜನ್ಮಗಳಲ್ಲಿ ಸೌಭಾಗ್ಯವತಿಯಾಗುವಳು.

೨೩. ಅಲ್ಲಿ ಅತಿಶಯಭಕ್ತಿಯಿಂದ ನೃತ್ಯಮಾಡಿದ ನಾರಿಯು ಬಹುಕಾಲ ಆರೋಗ್ಯ, ಸುಖ, ಸೌಭಾಗ್ಯವುಳ್ಳವಳಾಗುವಳು.

೨೪. ಆ ಪ್ರದೇಶದಲ್ಲಿ ಕೊನೆಯಲ್ಲಿರುವ ಸ್ವಚ್ಛವಾದ ನೀರಿನ ತೀರ್ಥದಲ್ಲಿ ಮಿಂದ ಮನುಷ್ಯನು ಸಕಲ ಪಾಪಗಳಿಂದ ಮುಕ್ತನಾಗುವನು.

ಯಃ ಶ್ರಾದ್ಧಂ ಕುರುತೇ ತತ್ರ ಪಿತೄನುದ್ದಿಶ್ಯ ಭಕ್ತಿತಃ ।
ಸ ಯಾತಿ ಪರಮಂ ಸ್ಥಾನಂ ಪಿತೃಭಿಃ ಸಹ ಪುಣ್ಯಭಾಕ್ ॥ ೨೫ ॥
ತಸ್ಮಾತ್ಸರ್ವಪ್ರಯತ್ನೇನ ಶ್ರಾದ್ಧಂ ತತ್ರ ಸಮಾಚರೇತ್ ।
ಗೀತವಾದ್ಯಾದಿಭಿರ್ನೃತ್ಯೈ ರಾತ್ರೌ ಕುರ್ವೀತ ಜಾಗರಂ ॥ ೨೬ ॥
ದಂಪತ್ಯೋಃ ಪರಿಧಾನಂ ಚ ತತ್ರ ದೇಯಂ ಸದಕ್ಷಿಣಂ ।
ಯಶ್ಚೈತತ್ಪಠತೇ ನಿತ್ಯಂ ತೃತೀಯಾಯಾಂ ವಿಶೇಷತಃ ।
ಪಾರ್ವತ್ಯಾಃ ಪುರತೋ ದೇವಿ ಸ ಸೌಭಾಗ್ಯಮವಾಪ್ನುಯಾತ್ ॥ ೨೭ ॥
ಶೃಣುಯಾದ್ವಾಽಪಿ ಯೋ ಭಕ್ತ್ಯಾ ಸಮ್ಯಗ್ಭಕ್ತಿಪರಾಯಣಃ ।
ಸೋಽಪಿ ಸೌಭಾಗ್ಯಮಾಪ್ನೋತಿ ಯಾವಜ್ಜೀವಂ ನ ಸಂಶಯಃ ॥ ೨೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೌರೀತಪೋವನಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಷಷ್ಟಿತಮೋಽಧ್ಯಾಯಃ ॥

೨೫–೨೬. ಪಿತೃಗಳನ್ನುದ್ದೇಶಿ ಭಕ್ತಿಯಿಂದ ಶ್ರಾದ್ಧಗೈದವನು ಪುಣ್ಯವಂತನಾಗಿ ಪಿತೃಗಳೊಡನೆ ಉತ್ತಮ ಸ್ಥಾನವನ್ನು ಪಡೆಯುವನು. ಆದುದರಿಂದ ಪ್ರಯತ್ನಿಸಿ ಅಲ್ಲಿ ಶ್ರಾದ್ಧವನ್ನು ಮಾಡಬೇಕು. ರಾತ್ರಿಯಲ್ಲಿ ಸಂಗೀತ, ವಾದ್ಯ, ನೃತ್ಯಗಳಿಂದ ಜಾಗರಣೆಮಾಡಬೇಕು.

೨೭. ಅಲ್ಲಿ ದಂಪತಿಗಳಿಗೆ ದಕ್ಷಿಣೆಯೊಡನೆ ಉಡಿಗೆಯನ್ನೀಯಬೇಕು. ಪ್ರತಿದಿನವೂ, ತದಿಗೆ ದಿನ ವಿಶೇಷವಾಗಿಯೂ, ಪಾರ್ವತಿಯ ಮುಂದೆ ಇದನ್ನು ಪಠಿಸುವ ಮನುಷ್ಯನು ಸೌಭಾಗ್ಯವನ್ನು ಹೊಂದುವನು.

೨೮. ಭಕ್ತಿಯಿಂದ ಇದನ್ನು ಚೆನ್ನಾಗಿ ಕೇಳುವವನೂ ದೇಹಾವಸಾನದವರೆಗೆ ಸೌಭಾಗ್ಯವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗೌರೀತಪೋವನಮಾಹಾತ್ಮ್ಯವರ್ಣನವೆಂಬ ಅರುವತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಸಪ್ತತಿತಮೋಽಧ್ಯಾಯಃ

ಗೌರೀಶ್ವರಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಗೌರೀಶ್ವರೇತಿ ವಿಖ್ಯಾತಂ ಯತ್ತ್ವಯಾ ಲಿಂಗಮುತ್ತಮಂ ।
ಕುತ್ರ ತಿಷ್ಠತಿ ತಲ್ಲಿಂಗಂ ಪೂಜಿತಂ ಯತ್ಫಲಂ ಲಭೇತ್ ॥ ೧ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಮಾಹಾತ್ಮ್ಯಂ ಪಾಪನಾಶನಂ ।
ಗೌರೀಶ್ವರಸ್ಯ ದೇವಸ್ಯ ಸರ್ವಕಾಮಪ್ರದಸ್ಯ ವೈ ॥ ೨ ॥
ಇದಂ ತಪೋವನಂ ದೇವಿ ಖ್ಯಾತಂ ಗೌರ್ಯಾ ಮಹಾಪ್ರಭಂ ।
ಧನುಷಾಂ ಪಂಚಪಂಚಾಶತ್ಸಮಂತಾತ್ಪರಿಮಂಡಲಂ ॥ ೩ ॥
ತತ್ರ ಮಧ್ಯೇ ಸ್ಥಿತಾ ದೇವೀ ಏಕಪಾದಾ ತಪೋನ್ವಿತಾ ।
ತಸ್ಯಾ ಉತ್ತರತೋ ದೇವಿ ಕಿಂಚಿದೀಶಾನಸಂಸ್ಥಿತಂ ॥ ೪ ॥
ಧನುಷಾಂ ಚತುರಂತೇ ಚ ಲಿಂಗಂ ಪಾಪಭಯಾಪಹಂ ।
ಯಸ್ತತ್ಪೂಜಯತೇ ಭಕ್ತ್ಯಾ ಲಿಂಗಂ ಭಕ್ತಿಯುತೋ ನರಃ ।
ಕೃಷ್ಣಾಷ್ಟಮ್ಯಾಂ ವಿಶೇಷೇಣ ಸಮುಕ್ತಃ ಪಾತಕೈರ್ಭವೇತ್ ॥ ೫ ॥

ಕನ್ನಡದ ಅನುವಾದ

ಗೌರೀಶ್ವರಮಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ:—ಸ್ವಾಮಿ! ನೀನು ಗೌರೀಶ್ವರವೆಂಬ ಲಿಂಗವನು ಹೇಳಿದೆಯಷ್ಟೆ. ಆ ಲಿಂಗವು ಎಲ್ಲಿರುವುದು? ಅದನ್ನು ಪೂಜಿಸಿದರೆ ಯಾವ ಫಲವು ಲಭಿಸುವುದು?

೨. ಈಶ್ವರನು ಹೇಳುತ್ತಾನೆ:—ದೇವಿ! ಸಕಲೇಷ್ಟಾರ್ಥಗಳನ್ನೀಯುವುದೂ, ಪಾಪವನ್ನು ಪರಿಹರಿಸುವುದೂ ಗೌರೀಶ್ವರನ ಮಾಹಾತ್ಮ್ಯವನ್ನು ಹೇಳುವೆನು. ಕೇಳು.

೩. ಗೌರಿಯ ಅತ್ಯಂತ ಕಾಂತಿಯುಳ್ಳ ಈ ತಪೋವನವು ಐವತ್ತೈದು ಬಿಲ್ಲುಗಳ ದೂರ ಸುತ್ತಲೂ ವ್ಯಾಪ್ತವಾಗಿರುವುದು.

೪–೫. ಈ ತಪೋವನದ ನಡುವೆ ಆಕೆಯು ಒಂದು ಪಾದದಿಂದ ನಿಂತು ತಪಸ್ಸನ್ನಾಚರಿಸಿರುವಳು. ದೇವಿ! ಅವಳ ಉತ್ತರ ದಿಕ್ಕಿನಲ್ಲಿ ಸ್ವಲ್ಪ ಈಶಾನ್ಯದಲ್ಲಿ

ಗೋದಾನಂ ಚಾತ್ರ ಶಂಸಂತಿ ಸುವರ್ಣಂ ದ್ವಿಜಪುಂಗವೇ ।
ಅನ್ನದಾನಂ ವಿಶೇಷೇಣ ಸರ್ವಪಾಪಪ್ರಶಾಂತಯೇ ॥ ೬ ॥
ಗೋಘ್ನೋ ವಾ ಬ್ರಹ್ಮಹಾ ವಾಽಪಿ ತಥಾ ದುಷ್ಕೃತಕರ್ಮಕೃತ್ ।
ಸರ್ವಪಾಪೈಃ ಪ್ರಮುಚ್ಯೇತ ತಸ್ಯ ಲಿಂಗಸ್ಯ ದರ್ಶನಾತ್ ॥ ೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೌರೀಶ್ವರಮಾಹಾತ್ಮ್ಯವರ್ಣನಂ ನಾಮ
ಏಕೋನಸಪ್ತತಿತಮೋಽಧ್ಯಾಯಃ

ನಾಲ್ಕು ಬಿಲ್ಲುಗಳ ದೂರದಲ್ಲಿ ಶುಭಭಯನಿವಾರಕವಾದ ಶಂಭುಲಿಂಗವಿರುವುದು. ಆ ಲಿಂಗವನ್ನು ಕೃಷ್ಣಪಕ್ಷದ ಅಷ್ಟಮಿಯದಿನ ಭಕ್ತಿಯಿಂದ ಪೂಜಿಸಿದ ಮನುಷ್ಯನು ಪಾಪಗಳಿಂದಮುಕ್ತನಾಗುವನು

೬. ಅಲ್ಲಿ ಬ್ರಾಹ್ಮಣೋತ್ತಮನಿಗೆ ಗೋವು, ಸುವರ್ಣ, ಅನ್ನಗಳನ್ನು ದಾನ ಮಾಡಿದರೆ ಸಕಲ ಪಾಪಗಳು ಪರಿಹಾರವಾಗುವುವು.

೭. ಆ ಲಿಂಗವನ್ನು ಗೋವು ಅಥವಾ ಬ್ರಾಹ್ಮಣನನ್ನು ಕೊಂದವನೂ, ಇತರ ಪಾಪಗಳನ್ನಾಚರಿಸಿದವನೂ ನೋಡಿದರೆ ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಗೌರೀಶ್ವರಮಾಹಾತ್ಮ್ಯವರ್ಣನವೆಂಬ
ಅರುವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತತಿತಮೋಽಧ್ಯಾಯಃ

ವರುಣೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವರುಣೇಶ್ವರಮುತ್ತಮಂ ।
ಗೌರೀತಪೋವನಾಗ್ನೇಯ್ಯಾಂ ಧನುಷಾಂ ವಿಂಶತೌ ಸ್ಥಿತಂ ।
ಲಿಂಗಂ ಮಹಾಪ್ರಭಾವಂ ಹಿ ವರುಣೇನ ಪ್ರತಿಷ್ಠಿತಂ ॥ ೧ ॥

ಪೂರ್ವಂ ಪೀತೋ ಯದಾ ದೇವಿ ಸಮುದ್ರಃ ಕುಂಭಜನ್ಮನಾ ।
ತದಾ ಕೋಪೇನ ಸಂತಪ್ತೋ ವರುಣಃ ಸರಿತಾಂ ಪತಿಃ ॥ ೨ ॥

ಕಾರ್ಮಿಕಂ ತು ಸಮಾಜ್ಞಾಯ ಕ್ಷೇತ್ರಂ ಪ್ರಾಭಾಸಿಕಂ ತದಾ ।
ತತ್ರಾಽತಪದ್ದೇವಿ ತಪಃ ಸ ವೈ ಪರಮದುಶ್ಚರಂ ॥ ೩ ॥

ಪ್ರತಿಷ್ಠಾಪ್ಯ ಮಹಾಲಿಂಗಂ ಸಂಪೂಜಯತಿ ಭಕ್ತಿತಃ ।
ವರ್ಷಾಣಾಮಯುತಂ ಸಾಗ್ರಂ ಪೂಜಿತೋ ವೃಷಭಧ್ವಜಃ ॥ ೪ ॥

ಕನ್ನಡದ ಅನುವಾದ

ವರುಣೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಗೌರೀತಪೋವನದ ಆಗ್ನೇಯದಿಕ್ಕಿನಲ್ಲಿ ಇಪ್ಪತ್ತು ಬಿಲ್ಲಿನ ದೂರದಲ್ಲಿರುವ ವರುಣನು ಪ್ರತಿಷ್ಠೆಮಾಡಿರುವ ಅತ್ಯಂತ ಮಾಹಾತ್ಮ್ಯಯುಳ್ಳ ವರುಣೇಶ್ವರಲಿಂಗದೆಡೆಗೆ ಹೋಗಬೇಕು.

೨-೩. ಹಿಂದೆ ಅಗಸ್ತ್ಯನು ಸಮುದ್ರವನ್ನು ಪಾನಮಾಡಲು ನದಿಗಳಿಗೊಡೆಯನಾದ ವರುಣನು ಕೋಪಗೊಂಡು ಪ್ರಭಾಸಕ್ಷೇತ್ರವು ಇಷ್ಟಾರ್ಥವನ್ನೀಯುವುದೆಂದರಿತು ಅಲ್ಲಿ ಅತ್ಯಂತ ದುಷ್ಕರವಾದ ತಪಸ್ಸನ್ನಾಚರಿಸಿದನು.

೪. ಅವನು ಅಲ್ಲಿ ಮಹೇಶ್ವರಲಿಂಗವನ್ನು ಪ್ರತಿಷ್ಠೆ ಮಾಡಿ ಹತ್ತು ಸಾವಿರ ವರ್ಷಕಾಲ ಪೂಜಿಸಿದನು.

ತತಃ ಪ್ರಸನ್ನೋ ದೇವೇಶಿ ನಿಜಗಂಗಾಜಲೇನ ತು ।
ಪೂಜಯಾಮಾಸ ತಂ ರಿಕ್ತಂ ಸಮುದ್ರಂ ಯಾದಸಾಂಪತಿಂ ॥ ೫ ॥
ಛಂದಯಾಮಾಸ ತಂ ಲಿಂಗಂ ವರದಾನೈರನೇಕಧಾ ।
ತತ್ಪ್ರಭೃತ್ಯೇವ ತೇ ಸರ್ವೇ ಸಮುದ್ರಾಃ ಪರಿಪೂರಿತಾಃ ॥ ೬ ॥
ವರುಣೇಶ್ವರನಾಮೇತಿ ತಲ್ಲಿಂಗಂ ತತ್ಪ್ರಭೃತ್ಯಭೂತ್ ॥ ೭ ॥
ಕೋ ಹ್ಯರ್ಥೋ ಬಹುಭಿರ್ಲಿಂಗೈರ್ದೃಷ್ಟೈರ್ವಾ ಸುರಸುಂದರಿ ।
ವರುಣೇಶೇನ ದೃಷ್ಟೇನ ಸರ್ವತೀರ್ಥಫಲಂ ಲಭೇತ್ ॥ ೮ ॥
ಅಷ್ಟಮ್ಯಾಂ ಚ ಚತುರ್ದಶ್ಯಾಂ ತದ್ದಧ್ನಾ ಸ್ನಾಪಯೇದ್ಯದಿ ।
ಸಬ್ರಾಹ್ಮಣಶ್ಚತುರ್ವೇದೋ ಜಾಯತೇ ನಾಽತ್ರ ಸಂಶಯಃ ॥ ೯ ॥
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾಽನ್ಯೇ ವರಾನನೇ ।
ಮೂಕಾಂಧಬಧಿರಾ ಬಾಲಾಃ ಸ್ತ್ರಿಯಶ್ಚೈವ ನಪುಂಸಕಾಃ ॥ ೧೦ ॥
ದೃಷ್ಟ್ವಾ ಗಚ್ಛಂತಿ ತೇ ದೇವಿ ಸ್ವರ್ಗಂ ಧರ್ಮಪರಾಯಣಾಃ ।
ಸ್ನಾನಂ ಜಾಪ್ಯಂ ಬಲಿಂ ಹೋಮಂ ಪೂಜಾಂ ಸ್ತೋತ್ರಂ ಚ ನರ್ತನಂ ।
ತಸ್ಮಿನ್ ಸ್ಥಾನೇ ತು ಯಃ ಕುರ್ಯಾತ್ತತ್ಸರ್ವಂ ಚಾಽಕ್ಷಯಂ ಭವೇತ್ ।

---

೫. ದೇವೇಶಿ ! ಬಳಿಕ ಪ್ರಸನ್ನನಾದ ಮಹೇಶ್ವರನು ಬರಿದಾಗಿರುವ ತನ್ನ ಗಂಗಾಜಲದಿಂದ ಆ ಸಮುದ್ರವನ್ನು ತುಂಬಿಸಿದನು.

೬. ಅನೇಕ ಪ್ರಕಾರವಾಗಿ ವರಗಳನ್ನಿತ್ತು ಆ ವರುಣನನ್ನು ತೃಪ್ತಿಗೊಳಿಸಿದನು. ಅದು ಮೊದಲ್ಗೊಂಡು ಸಮುದ್ರಗಳೆಲ್ಲ ತುಂಬಿದುವು.

೭. ಆ ಲಿಂಗವು ವರುಣೇಶ್ವರನೆಂದು ವಿಖ್ಯಾತವಾಯಿತು.

೮. ಸುರಸುಂದರಿ ! ಅನೇಕ ಶಿವಲಿಂಗಗಳನ್ನು ನೋಡಿ ಪ್ರಯೋಜನವೇನು ? ವರುಣೇಶ್ವರಲಿಂಗವನ್ನು ನೋಡಿದ್ದರಿಂದಲೇ ಸಕಲ ತೀರ್ಥಗಳ ಫಲವೂ ಲಭಿಸುವುದು.

೯. ಅಷ್ಟಮೀ ಮತ್ತು ಚತುರ್ದಶೀದಿನಗಳಲ್ಲಿ ಆ ಶಿವಲಿಂಗವನ್ನು ಮೊಸರಿನಿಂದ ಸ್ನಾನಮಾಡಿಸಿದ ಬ್ರಾಹ್ಮಣನು ನಾಲ್ಕು ವೇದಗಳನ್ನರಿತವನಾಗುವನು.

೧೦–೧೧. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಮೂಕರು, ಕುರುಡರು, ಕಿವುಡರು, ಬಾಲಕರು, ಹೆಂಗಸರು, ನಪುಂಸಕರು ಇವರು ಈ ಲಿಂಗವನ್ನು ದರ್ಶನಮಾಡಿದರೆ ಸ್ವರ್ಗವನ್ನು ಸೇರುತ್ತಾರೆ. ಆ ಸ್ಥಳದಲ್ಲಿ ಸ್ನಾನ, ಜಪ, ಬಲಿ, ಹೋಮ, ಪೂಜೆ, ಸ್ತೋತ್ರ, ನರ್ತನ ಇವುಗಳನ್ನು ಮಾಡಿದರೆ ಅವುಗಳೆಲ್ಲ ಅಕ್ಷಯಗಳಾಗುವುವು.

ಹೈಮಂಪದ್ಮಂ ಮೌಕ್ತಿಕಂ ಚ ದಾನಂ ತತ್ರೈವ ದಾಪಯೇತ್ ।
ಸಮ್ಯಗ್ಯಾತ್ರಾಫಲಾಪೇಕ್ಷೀ ಸ್ವರ್ಗಾಪೇಕ್ಷೀ ತಥಾ ನರಃ ॥ ೧೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವರುಣೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತತಿತಮೋಽಧ್ಯಾಯಃ ॥

---

೧೨. ಯಾತ್ರೆಯ ಫಲವನ್ನು ಸಪೂರ್ಣವಾಗಿ ಬಯಸುವವನೂ ಸ್ವರ್ಗವನ್ನು ಇಚ್ಛಿಸುವವನೂ, ಅಲ್ಲಿ ಸುವರ್ಣಕಮಲವನ್ನು ದಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವರುಣೇಶ್ವರಮಾಹಾತ್ಮ್ಯವರ್ಣನವೆಂಬ
ಎಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಸಪ್ತತಿತಮೋಽಧ್ಯಾಯಃ

ಉಷೇಶ್ವರಮಾಹಾತ್ಮ್ಯವರ್ಣನಂ

ತತೋ ಗಚ್ಛೇನ್ಮಹಾದೇವಿ ಲಿಂಗಂ ತತ್ರೈವ ಸಂಸ್ಥಿತಂ ।
ದಕ್ಷಿಣೇ ವರುಣೇಶಸ್ಯ ಧನುಷಾಂ ತ್ರಿತಯೇ ಸ್ಥಿತಂ ॥ ೧ ॥

ಭಾರ್ಯಯಾ ವರುಣಸ್ಯೈವ ಉಷಾ ನಾಮ್ನ್ಯಾ ವರಾನನೇ ।
ಕೃತ್ವಾ ತಪೋ ಮಹಾಘೋರಂ ಭರ್ತೃದುಃಖಪರೀತಯಾ ॥ ೨ ॥

ಸ್ಥಾಪಿತಂ ತು ಮಹಲ್ಲಿಂಗಂ ಸರ್ವಸಿದ್ಧಿಪ್ರದಾಯಕಂ ।
ಉಷೇಶ್ವರೇತಿ ವಿಖ್ಯಾತಂ ಸರ್ವಸಿದ್ಧಿಪ್ರಪೂಜಿತಂ ॥ ೩ ॥

ಯಸ್ತತ್ಪೂಜಯತೇ ಭಕ್ತ್ಯಾ ಲಿಂಗಂ ಪಾಪಪ್ರಣಾಶನಂ ।
ಮಹಾಪಾಪೌಘಯುಕ್ತೋಽಪಿ ಸ ಗಚ್ಛೇತ್ಪರಮಾಂ ಗತಿಂ ॥ ೪ ॥

ಕನ್ನಡದ ಅನುವಾದ

ಉಷೇಶ್ವರಮಾಹಾತ್ಮ್ಯವರ್ಣನ

೧–೩. ಮಹಾದೇವಿ ! ಬಳಿಕ ವರುಣೇಶ್ವರನ ದಕ್ಷಿಣ ಭಾಗದಲ್ಲಿ ಮೂರುಃ ಬಿಲ್ಲಿನ ದೂರದಲ್ಲಿರುವುದೂ ವರುಣನ ಪತ್ನಿಯಾದ ಉಷೆಯು ಪತಿದುಃಖದಿಂದ ವ್ಯಾಪ್ತಳಾಗಿ ಘೋರತಪಸ್ಸನ್ನಾಚರಿಸಿ ಪ್ರತಿಷ್ಠೆಮಾಡಿರುವುದೂ, ಸಮಸ್ತ ಸಿದ್ಧಿಯನ್ನೀಯುವುದೂ ಆದ ಸಕಲ ಸಿದ್ಧರು ಪೂಜಿಸಿರುವ ಉಷೇಶ್ವರಲಿಂಗವನ್ನು ಹೊಂದಬೇಕು.

೪. ಪಾಪವನ್ನು ನಿವಾರಿಸುವ ಆ ಲಿಂಗವನ್ನು ಭಕ್ತಿಯಿಂದ ಪೂಜಿಸುವವನು ಅತಿ ಘೋರ ಪಾಪಗಳಿಂದ ಸಹಿತನಾಗಿದ್ದರೂ ಉತ್ತಮ ಗತಿಯನ್ನು ಪಡೆಯುವನು.

ಸ್ತ್ರೀಣಾಂ ಸೌಭಾಗ್ಯಫಲದಂ ದುಃಖದೌರ್ಭಾಗ್ಯ ನಾಶನಂ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉಷೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕಸಪ್ತತಿತಮೋಽಧ್ಯಾಯಃ ॥

---

೫. ಆ ಉಷೇಶ್ವರ ಲಿಂಗವು ಹೆಂಗಸರ ದುಃಖ ದೌರ್ಭಾಗ್ಯಗಳನ್ನು ರಿಹರಿಸಿ ಸೌಭಾಗ್ಯವನ್ನೀಯುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉಷೇಶ್ವರಮಾಹಾತ್ಮ್ಯವರ್ಣನವೆಂಬ
ಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಸಪ್ತತಿತಮೋಽಧ್ಯಾಯಃ

ಜಲವಾಸಗಣಪತಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇದ್ವಿಘ್ನೇಶಂ ಜಲವಾಸನಂ ।
ಸರ್ವವಿಘ್ನವಿನಾಶಾಯ ಸರ್ವಕಾರ್ಯಪ್ರಸಿದ್ಧಯೇ ॥ ೧ ॥
ವರುಣೇನ ಮಹಾದೇವಿ ತಪೋ ನಿರ್ವಿಘ್ನಹೇತವೇ ।
ಪೂಜಿತೋ ಜಲಜೈರ್ಭಕ್ತ್ಯಾ ಜಲವಾಸಾಸ್ತತಃ ಸ್ಮೃತಃ ॥ ೨ ॥
ಚತುರ್ಥ್ಯಾಂ ತರ್ಪಯೇದ್ಭಕ್ತ್ಯಾ ಗಂಧೈಃ ಪುಷ್ಪೈಃ ಸಮೋದಕೈಃ
ಯಥಾ ಭಕ್ತ್ಯನುಸಾರೇಣ ತಸ್ಯ ತುಷ್ಯೇದ್ಗಣಾಧಿಪಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಲವಾಸಗಣಪತಿಮಾಹಾತ್ಮ್ಯವರ್ಣನಂ ನಾಮ
॥ ದ್ವಿಸಪ್ತತಿತಮೋಽಧ್ಯಾಯಃ ॥

ಕನ್ನಡದ ಅನುವಾದ

ಜಲವಾಸಗಣಪತಿಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅಲ್ಲಿಯೇ ಜಲವಾಸಗಣಪತಿಯನ್ನು ಸಕಲ ವಿಘ್ನಗಳ ನಿವಾರಣೆಗಾಗಿಯೂ, ಸಮಸ್ತ ಕಾರ್ಯ ಸಿದ್ಧಿಗಾಗಿಯೂ ನೋಡಬೇಕು.

೨. ಈ ಗಣಪತಿಯನ್ನು ವರುಣನು ತನ್ನ ತಪಸ್ಸಿನ ವಿಘ್ನನಿವಾರಣೆಗಾಗಿ ಭಕ್ತಿಯಿಂದ ತಾವರೆಹೂವುಗಳಿಂದ ಪೂಜಿಸಿದ್ದರಿಂದ ಇವನಿಗೆ ಜಲವಾಸನೆಂದು ಹೆಸರಾಯಿತು.

೩. ಚತುರ್ಥಿಯದಿನ ಆ ಗಣಪತಿಯನ್ನು ಭಕ್ತಿಯಿಂದ ಗಂಧ, ಪುಷ್ಪ, ಮೋದಕಗಳನ್ನರ್ಪಿಸಿ ಪೂಜಿಸಿದವನಿಗೆ ಅವನು ಸಂತುಷ್ಟನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಲವಾಸಗಣಪತಿಮಾಹಾತ್ಮ್ಯವರ್ಣನವೆಂಬ
ಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಸಪ್ತತಿತಮೋಽಧ್ಯಾಯಃ

ಕುಮಾರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕುಮಾರೇಶ್ವರಮುತ್ತಮಂ ।
ಲಿಂಗಂ ಮಹಾಪ್ರಭಾವಂ ಹಿ ಮಹಾಪಾತಕನಾಶನಂ ॥ ೧ ॥
ಧನುಷಾಂ ತ್ರಿಂಶತಾ ದೇವಿ ವರುಣಾನ್ನೈರ್‍ಋತೇ ಸ್ಥಿತಂ ।
ಗೌರೀತಪೋವನಾದ್ದೇವಿ ದಕ್ಷಿಣಸ್ಥಾನಸಂಸ್ಥಿತಂ ॥ ೨ ॥
ಷಣ್ಮುಖೇನ ಮಹಾದೇವಿ ತತ್ರ ಕೃತ್ವಾ ಮಹತ್ತಪಃ ।
ಪ್ರತಿಷ್ಠಿತಂ ಮಹಾಲಿಂಗಂ ಕುಮಾರೇಶಸ್ತತೋಽಭವತ್ ॥ ೩ ॥
ಯಸ್ತಂ ಪೂಜಯತೇ ಭಕ್ತ್ಯಾ ಮಾಸಮೇಕಂ ನಿರಂತರಂ ।
ಷಣ್ಮಾಸಸ್ಯಾರ್ಚನೇನ್ನೈವ ಯತ್ಪುಣ್ಯಮುಪಜಾಯತೇ ॥ ೪ ॥
ತತ್ಪುಣ್ಯಂ ಸಕಲಂ ತಸ್ಯ ಕುಮಾರೇಶಾರ್ಚನಾತ್ಸಕೃತ್ ।
ಲಭತೇ ದಿವಸೈಕೇನ ವಿಧಿನಾ ಯದಿ ಪೂಜಯೇತ್ ॥ ೫ ॥

ಕನ್ನಡದ ಅನುವಾದ

ಕುಮಾರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:— ಮಹಾದೇವಿ! ಅನಂತರ ವರುಣೇಶ್ವರನ ನೈಋತ್ಯದಲ್ಲಿಯೂ, ಗೌರೀ ತಪೋವನದ ದಕ್ಷಿಣದಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿಯೂ, ಅತಿಶಯ ಮಾಹಾತ್ಮ್ಯವುಳ್ಳವನೂ, ಮಹಾಪಾತಕಗಳನ್ನು ಪರಿಹರಿಸುವವನೂ ಆಗಿರುವ ಕುಮಾರೇಶ್ವರ ಲಿಂಗವನ್ನು ಹೊಂದಬೇಕು.

೩. ದೇವಿ! ಷಣ್ಮುಖನು ಅಲ್ಲಿ ತಪಸ್ಸನ್ನಾಚರಿಸಿ ಲಿಂಗವನ್ನು ಪ್ರತಿಷ್ಠೆಮಾಡಿದ್ದರಿಂದ ಆ ಲಿಂಗಕ್ಕೆ ಕುಮಾರೇಶನೆಂದು ಹೆಸರಾಯಿತು.

೪-೫. ಆ ಕುಮಾರೇಶನನ್ನು ಒಂದು ತಿಂಗಳು ಪ್ರತಿದಿನವೂ ಭಕ್ತಿಯಿಂದ ಪೂಜಿಸುವುದರಿಂದಲೂ, ಆರು ತಿಂಗಳು ಪೂಜಿಸುವುದರಿಂದಲೂ ಉಂಟಾಗುವ ಪುಣ್ಯವು ಒಂದು ದಿನ ವಿಧಿಯಿಂದ ಆರಾಧಿಸುವುದರಿಂದ ಲಭಿಸುವುದು.

ಕಾಮಂ ಕ್ರೋಧಂ ತಥಾ ಲೋಭಂ ರಾಗಂ ತ್ಯಕ್ತ್ವಾ ತು ಮತ್ಸರಂ ।
ಬ್ರಹ್ಮಚಾರೀ ಯತಿರ್ಭೂತ್ವಾ ಸಕೃದಪ್ಯೇನಮರ್ಚಯೇತ್ ॥ ೭ ॥
ಏವಂ ಸಂಪೂಜಿತೇ ದೇವಿ ಸಮ್ಯಗ್ಯಾತ್ರಾಫಲಂ ಲಭೇತ್ ॥ ೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಮಾರೇಶ್ವರಮಾಹಾತ್ಮ್ಯವರ್ಣನಂನಾಮ
॥ತ್ರಿಸಪ್ತತಿತಮೋಽಧ್ಯಾಯಃ॥

---

೭. ಮನುಷ್ಯನು ಕಾಮ, ಕ್ರೋಧ, ಲೋಭ, ರಾಗ ಮಾತ್ಸರ್ಯಗಳನ್ನು ತ್ಯಜಿಸಿ ಬ್ರಹ್ಮಚಾರಿಯೂ, ಜಿತೇಂದ್ರಿಯನೂ ಆಗಿ ಒಂದು ಸಾರಿಯಾದರೂ ಈ ಕುಮಾರೇಶ್ವರನನ್ನು ಅರ್ಚಿಸಬೇಕು.

೮. ದೇವಿ! ಹೀಗೆ ಪೂಜಿಸಿದರೆ ಸಂಪೂರ್ಣಯಾತ್ರೆಯ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕುಮಾರೇಶ್ವರಮಾಹಾತ್ಮ್ಯವರ್ಣನವೆಂಬ
ಎಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಚತುಃಸಪ್ತತಿತಮೋಽಧ್ಯಾಯಃ

ಶಾಕಲ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶಾಕಲ್ಯೇಶ್ವರಮುತ್ತಮಂ ।
ದೈತ್ಯಸೂದನವಾಯವ್ಯೇ ಧನುಷಾಂ ತ್ರಿಂಶತಾ ಸ್ಥಿತಂ ॥ ೧ ॥
ಶಾಕಲ್ಯೇನ ಮಹಾದೇವಿ ಪೂಜಿತಂ ಸರ್ವಕಾಮದಂ ।
ಶಾಕಲ್ಯೋ ನಾಮ ರಾಜರ್ಷಿರ್ಯತ್ರ ತಪ್ತ್ವಾ ಮಹತ್ತಪಃ ॥ ೨ ॥
ಸಮಾರಾಧ್ಯ ಮಹಾದೇವಂ ಪ್ರತ್ಯಕ್ಷೀಕೃತವಾನ್ ಭವಂ ।
ಲಿಂಗೇಽವತಾರಯಾಮಾಸ ಪ್ರಸನ್ನಂ ತಂ ಮಹೇಶ್ವರಂ ॥ ೩ ॥
ತಸ್ಮಿನ್ ದೃಷ್ಟೇ ವರಾರೋಹೇ ಸಪ್ತಜನ್ಮಕೃತಂ ನೃಣಾಂ ।
ಪಾಪಂ ಪ್ರಣಶ್ಯತೇ ಶೀಘ್ರಂ ತಮಃ ಸೂರ್ಯೋದಯೇ ಯಥಾ ॥ ೪ ॥

ಕನ್ನಡದ ಅನುವಾದ

ಶಾಕಲ್ಯೇಶ್ವರಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಶಾಕಲ್ಯನೆಂಬ ರಾಜರ್ಷಿಯು ಪೂಜಿಸಿದ ಸಮಸ್ತೇಷ್ಟಾರ್ಥಗಳನ್ನೀಯುವ ದೈತ್ಯಸೂದನನ ವಾಯುವ್ಯ ದಿಕ್ಕಿನಲ್ಲಿ ಮೂವತ್ತು ಬಿಲ್ಲಿನ ದೂರದಲ್ಲಿರುವ ಶಾಕಲ್ಯೇಶ್ವರನನ್ನು ಹೊಂದಬೇಕು. ಇಲ್ಲಿ ಶಾಕಲ್ಯನೆಂಬ ರಾಜರ್ಷಿಯು ತಪಸ್ಸನ್ನಾಚರಿಸಿ, ಮಹೇಶ್ವರನನ್ನು ಪೂಜಿಸಲು ಅವನು ಪ್ರಸನ್ನನಾಗಿ ಈ ಲಿಂಗದಲ್ಲಿ ಸನ್ನಿಹಿತನಾದನು.

೪. ಪ್ರಿಯಳೆ! ಆ ಶಾಕಲ್ಯೇಶ್ವರನನ್ನು ನೋಡಿದರೆ ಮನುಷ್ಯರು ಏಳು ಜನ್ಮಗಳಲ್ಲಿ ಮಾಡಿದ ಪಾಪವು ಸೂರ್ಯೋದಯವಾಗಲು ಕತ್ತಲೆಯು ನಾಶವಾಗುವಂತೆ ಪರಿಹಾರವಾಗುವುದು.

ತತ್ರಾಽಷ್ಟಮ್ಯಾಂ ಚತುರ್ದಶ್ಯಾಂ ಸ್ನಾಪಯೇತ್ಪಯಸಾ ಶಿವಂ ।
ಪೂಜಯೇಚ್ಚ ವಿಧಾನೇನ ಗಂಧಪುಷ್ಪಾದಿಭಿಃ ಕ್ರಮಾತ್ ॥ ೫ ॥
ಹಿರಣ್ಯಂ ತತ್ರ ದಾತವ್ಯಂ ಸಮ್ಯಗ್ಯಾತ್ರಾಫಲೇಪ್ಸುಭಿಃ ।
ಚತ್ವಾರಿ ತಸ್ಯ ನಾಮಾನಿ ಕಥ್ಯಮಾನಾನಿ ಮೇ ಶೃಣು ॥ ೬ ॥
ಆದೌ ಕೃತಯುಗೇ ದೇವಿ ಕೀರ್ತಿತೋ ಭೈರವೇಶ್ವರಃ ।
ತತಃ ಸಾವರ್ಣಿಮನುನಾ ಸಮ್ಯಗಾರಾಧಿತಃ ಪ್ರಿಯೇ ॥ ೭ ॥
ಸಾವರ್ಣಿಕೇಶ್ವರಂ ನಾಮ ತ್ರೇತಾಯಾಂ ತಸ್ಯ ಸಂಜ್ಞಿತಂ ।
ತತಸ್ತು ದ್ವಾಪರೇ ದೇವಿ ಗಾಲವೇನ ಮಹಾತ್ಮನಾ ।
ಸಮ್ಯಗಾರಾಧಿತಸ್ತತ್ರ ಲಿಂಗರೂಪೀ ವೃಷಧ್ವಜಃ ॥ ೮ ॥
ತೃತೀಯಂ ತಸ್ಯ ದೇವಸ್ಯ ಗಾಲವೇಶ್ವರಸಂಜ್ಞಿತಂ ।
ಕಲೌ ಯುಗೇ ತು ಸಂಪ್ರಾಪ್ತೇ ಶಾಕಲ್ಯೋ ನಾಮ ವೈ ಮುನಿಃ ॥ ೯ ॥
ಯತ್ರ ಸಿದ್ಧಿಮನುಪ್ರಾಪ್ತ ಐಶ್ವರ್ಯಂ ಚಾಽಣಿಮಾದಿಕಂ ।
ಶಾಕಲ್ಯೇಶ್ವರನಾಮೇತಿ ತತಃ ಖ್ಯಾತಂ ತುರೀಯಕಂ ॥ ೧೦ ॥
ಏವಂ ಚಾತುರ್ಯುಗಂ ನಾಮ ತಸ್ಯ ಲಿಂಗಸ್ಯ ಕೀರ್ತಿತಂ ।

---

೫. ಅಲ್ಲಿ ಅಷ್ಟಮೀ ಮತ್ತು ಚತುರ್ದಶೀ ದಿನ ಮಹೇಶ್ವರನನ್ನು ಕ್ಷೀರದಿಂದ ಅಭಿಷೇಕಮಾಡಿ ಗಂಧಪುಷ್ಪಾದಿಗಳಿಂದ ವಿಧಿಯಂತೆ ಪೂಜಿಸಬೇಕು.

೬. ಯಾತ್ರಾಫಲವನ್ನು ಬಯಸುವವರು ಅಲ್ಲಿ ಹಿರಣ್ಯವನ್ನು ದಾನಮಾಡಬೇಕು. ಆ ಶಾಕಲ್ಯೇಶ್ವರನ ನಾಲ್ಕು ಹೆಸರನ್ನು ಹೇಳುವೆನು. ಕೇಳು.

೭–೧೦. ದೇವಿ ! ಆ ಶಾಕಲ್ಯೇಶ್ವರನು ಮೊದಲು ಕೃತಯುಗದಲ್ಲಿ ಭೈರವೇಶ್ವರನೆಂದೂ, ಅನಂತರ ತ್ರೇತಾಯುಗದಲ್ಲಿ ಸಾವರ್ಣಿಮನುವು ಆರಾಧಿಸಿದ್ದರಿಂದ ಸಾವರ್ಣಿಕೇಶ್ವರನೆಂದೂ, ಬಳಿಕ ದ್ವಾಪರಯುಗದಲ್ಲಿ ಗಾಲವ ಮಹರ್ಷಿಯು ಭಕ್ತಿಯಿಂದ ಪೂಜಿಸಿದ್ದರಿಂದ ಗಾಲವೇಶ್ವರನೆಂದೂ ತರುವಾಯ ಕಲಿಯುಗವು ಪ್ರಾಪ್ತವಾಗಲು ಶಾಕಲ್ಯನೆಂಬ ಮುನಿಯು ಇಲ್ಲಿ ಅಣಿಮಾದ್ಯೈಶ್ವರ್ಯ ಸಿದ್ಧಿಯನ್ನು ಪಡೆದುದರಿಂದ ಶಾಕಲ್ಯೇಶ್ವರನೆಂದೂ ಪ್ರಸಿದ್ಧನಾದನು.

ಪಾಪಘ್ನಂ ಪುಣ್ಯದಂ ನೃಣಾಂ ಕೀರ್ತಿತಂ ಸರ್ವಕಾಮದಂ ॥ ೧೧ ॥
ತಸ್ಯೈವ ದೇವದೇವಸ್ಯ ಕ್ಷೇತ್ರೋತ್ಪತ್ತಿಂ ಶೃಣು ಪ್ರಿಯೇ ॥ ೧೨ ॥
ಅಷ್ಟಾದಶ ಧನುರ್ದೇಽಪಿ ಸಮಂತಾತ್ಪರಿಮಂಡಲಂ ।
ಮಹಾಪಾಪಹರಂ ದೇವಿ ತತ್ರ ಕ್ಷೇತ್ರನಿವಾಸಿನಾಂ ॥ ೧೩ ॥
ಕೃಮಿಕೀಟಪತಂಗಾನಾಂ ತಿರಶ್ಚಾಮಪಿ ಮೋಕ್ಷದಂ ।
ಯತ್ರ ಕೂಪಾದಿತೋಯೇಷು ಜಲಂ ಸಾರಸ್ವತಂ ಸ್ಮೃತಂ ॥ ೧೪ ॥
ಯತ್ರ ತತ್ರ ನರಃ ಸ್ನಾತ್ವಾ ಸ್ವರ್ಗಲೋಕೇ ಮಹೀಯತೇ ।
ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ॥ ೧೫ ॥
ತತ್ಫಲಂ ಸಮವಾಪ್ನೋತಿ ತಸ್ಯ ಲಿಂಗಸ್ಯ ದರ್ಶನಾತ್ ।
ಸೋಮಪರ್ವಣಿ ಸಂಪ್ರಾಪ್ತೇ ಯಸ್ತತ್ರ ಶುಚಿರಾತ್ಮವಾನ್ ॥ ೧೬ ॥
ಅಘೋರಂ ಚ ಜಪೇತ್ಸಮ್ಯಗಾಜ್ಯಹೋಮಸಮನ್ವಿತಂ ।
ತಲ್ಲಿಂಗಸ್ಯ ಸಮೀಪಸ್ಥೋ ಯಾವನ್ಮಾಸಾವಧಿ ಪ್ರಿಯೇ ॥ ೧೭ ॥
ಮಹಾಪಾತಕಯುಕ್ತೋಽಪಿ ಯುಕ್ತೋ ವಾಽಪ್ಯುಪಪಾತಕೈಃ ।
ಸ ಸರ್ವಾಂ ಲಭತೇ ಸಿದ್ಧಿಮುತ್ತಮಾಂ ವರವರ್ಣಿನಿ ॥ ೧೮ ॥

---

೧೧. ಹೀಗೆ ಮನುಷ್ಯರ ಸಕಲ ಪಾಪವನ್ನು ಪರಿಹರಿಸುವುದೂ, ಸಮಸ್ತೇಷ್ಟಾರ್ಥಗಳನ್ನು ನೀಡುವುದೂ ಆದ ಆ ಲಿಂಗದ ನಾಲ್ಕು ಯುಗದ ನಾಮವನ್ನು ಹೇಳಿರುವೆನು.

೧೨. ಆದೇ ಶಾಕಲ್ಯೇಶ್ವರನ ಕ್ಷೇತ್ರದ ಉತ್ಪತ್ತಿಯ ಕ್ರಮವನ್ನು ಹೇಳುವೆನು ಕೇಳು.

೧೩–೧೬. ಸುತ್ತಲೂ ಹದಿನೆಂಟು ಬಿಲ್ಲುಗಳ ವಿಸ್ತೀರ್ಣವಾದ ಆ ಕ್ಷೇತ್ರವು ಅಲ್ಲಿ ವಾಸಿಸುವ ಜನರ ಸಕಲ ಪಾಪಗಳನ್ನು ಪರಿಹರಿಸುವುದೂ, ಕ್ರಿಮಿ, ಕೀಟ, ಪತಂಗಗಳಿಗೂ, ಪಶುಪಕ್ಷಿಗಳಿಗೂ ಮೋಕ್ಷವನ್ನೀಯುವುದೂ, ಆಗಿರುವುದು. ಆ ಕ್ಷೇತ್ರದಲ್ಲಿರುವ ಬಾವಿ ಮೊದಲಾದುವುಗಳಲ್ಲಿರುವ ಸರಸ್ವತೀ ನದಿಯ ನೀರಿನಲ್ಲಿ ಮಿಂದ ಮನುಷ್ಯನು ಸ್ವರ್ಗ ಲೋಕದಲ್ಲಿ ಪೂಜ್ಯನಾಗುವನು. ಚಂದ್ರಗ್ರಹಣ ಕಾಲದಲ್ಲಿ ಶುದ್ಧನಾಗಿ ಆ ಶಾಕಲ್ಯೇಶ್ವರ ಲಿಂಗವನ್ನು ದರ್ಶನ ಮಾಡಿದ ಮನುಷ್ಯನು ಸಹಸ್ರ ಅಶ್ವಮೇಧ ಯಾಗಗಳನ್ನೂ, ನೂರು ವಾಜಪೇಯ ಯಾಗಗಳನ್ನೂ ಮಾಡಿದ ಫಲವನ್ನು ಹೊಂದುವನು.

೧೭–೧೮. ಪ್ರಿಯಳೆ! ಆ ಶಿವಲಿಂಗದ ಹತ್ತಿರ ಒಂದು ತಿಂಗಳವರೆಗೆ ಆಜ್ಯ ಹೋಮದೊಡನೆ ಅಘೋರ ಮಂತ್ರವನ್ನು ಜಪಿಸಿದವನು ಮಹಾಪಾತಕ ಮತ್ತು ಉಪಪಾತಕಗಳಿಂದ ಸಹಿತನಾಗಿದ್ದರೂ ಸಮಸ್ತ ಸಿದ್ಧಿಯನ್ನು ಪಡೆಯುವನು.

ಕಾಮಿಕಂ ತತ್ ಸ್ಮೃತಂ ಲಿಂಗಂ ಸರ್ವಕಾಮಫಲಪ್ರದಂ ।
ಅಘೋರವಕ್ತ್ರಂ ದೇವಸ್ಯ ತತ್ರಸ್ಥಂ ಭೈರವಂ ಮಹತ್ ॥ ೧೯ ॥
ಭೈರವೇಶ್ವರನಾಮೇತಿ ಪೂರ್ವಂ ಖ್ಯಾತಮಭೂದ್ಭುವಿ ।
ಅಸ್ಮಿನ್ಯುಗೇ ತು ಸಂಪ್ರಾಪ್ತೇ ಶಾಕಲ್ಯೇಶ್ವರನಾಮಕಂ ॥ ೨೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಾಕಲ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಃಸಪ್ತತಿತಮೋಽಧ್ಯಾಯಃ ॥

೧೯–೨೦. ಆ ಶುಭಲಿಂಗವು ಸಮಸ್ತೇಷ್ಟಾರ್ಥಗಳನ್ನೀಯುವುದರಿಂದ ಕಾಮಿಕವೆಂದೂ, ಭಯಂಕರ ಮುಖವುಳ್ಳದ್ದರಿಂದ ಭೈರವೇಶ್ವರನೆಂದೂ ಹಿಂದೆ ಪ್ರಸಿದ್ಧವಾಯಿತು. ಈ ಕಲಿಯುಗದಲ್ಲಿ ಶಾಕಲ್ಯೇಶ್ವರನೆಂಬ ಹೆಸರನ್ನು ಪಡೆದಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಾಕಲ್ಯೇಶ್ವರಮಾಹಾತ್ಮ್ಯವರ್ಣನವೆಂಬ
ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

ಪಂಚಸಪ್ತತಿತಮೋಽಧ್ಯಾಯಃ

ಕಲಕಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಕಲಕಲೇಶ್ವರಂ ।
ಶಾಕಲ್ಯೇಶ್ವರನೈರ್ಋತ್ಯೇ ಧನುಷಾಂ ಷಷ್ಟಿಭಿಃ ಸ್ಥಿತಂ ॥ ೧ ॥
ತಚ್ಚತುರ್ಯುಗನಾಮಾಢ್ಯಂ ಸ್ಮೃತಂ ಪಾತಕನಾಶನಂ ।
ಪೂರ್ವಂ ಕಾಮೇಶ್ವರಂ ನಾಮ ತ್ರೇತಾಯಾಂ ಪುಲಹೇಶ್ವರಂ ॥ ೨ ॥
ದ್ವಾಪರೇ ಸಿದ್ಧಿನಾಥಂ ತು ನಾರದೇಶಂ ಕಲೌ ಸ್ಮೃತಂ ।
ತಥಾ ಕಲಕಲೇಶಂ ಚ ನಾಮ ತಸ್ಯೈವ ಕೀರ್ತಿತಂ ॥ ೩ ॥
ಸಮುದ್ರೇ ಚ ಮಹಾಘೋಷ್ಯೇ ಯಸ್ಮಿನ್ಕಾಲೇ ಸರಸ್ವತೀ ।
ಆಗತಾ ಸಾ ಮಹಾಭಾಗಾ ಹೃಷ್ಟಾ ತುಷ್ಟಾ ಸರಿದ್ವರಾ ।
ತಸ್ಯಾ ತೋಯಸ್ಯ ಶಬ್ದೇನ ಸಾಗರಸ್ಯ ಮಹಾತ್ಮನಃ ॥ ೪ ॥

ಕನ್ನಡದ ಅನುವಾದ

ಕಲಕಲೇಶ್ವರ ಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಶಾಕಲ್ಯೇಶ್ವರನ ನೈರ್ಋತ್ಯ ದಿಕ್ಕಿನಲ್ಲಿ ಅರುವತ್ತು ಬಿಲ್ಲುಗಳ ದೂರದಲ್ಲಿರುವುದೂ, ನಾಲ್ಕು ಯುಗಗಳ ಬೇರೆ ಬೇರೆ ಹೆಸರುಳ್ಳುದೂ, ಪಾಪವನ್ನು ನೀಗಿಸುವುದೂ ಆದ ಕಲಕಲೇಶ್ವರನೆಡೆಗೆ ಹೋಗಬೇಕು. ಈ ಲಿಂಗವು ಹಿಂದೆ ಕಾಮೇಶ್ವರನೆಂದೂ, ಬಳಿಕ ತ್ರೇತಾಯುಗದಲ್ಲಿ ಪುಲಹೇಶ್ವರನೆಂದೂ, ದ್ವಾಪರ ಯುಗದಲ್ಲಿ ಸಿದ್ಧಿನಾಥನೆಂದೂ, ಕಲಿಯುಗದಲ್ಲಿ ನಾರದೇಶ ಮತ್ತು ಕಲಕಲೇಶನೆಂದೂ ಹೆಸರನ್ನು ಹೊಂದಿರುವುದು.

೪. ಸರಸ್ವತೀ ನದಿಯು ಸಮುದ್ರವನ್ನು ಸೇರಿದ ಕೂಡಲೆ ಸಮುದ್ರನು ಶಬ್ದಗೈಯಲು ಆ ನದಿಯು ಸಂತೋಷಗೊಂಡಿತು.

ತತೋ ದೇವಾಃ ಸಗಂಧರ್ವಾ ಋಷಯಃ ಸಿದ್ಧಚಾರಣಾಃ ।
ನೇದುಃ ಕಲಕಲಂ ತತ್ರ ತುಮುಲಂ ಲೋಮಹರ್ಷಣಂ ॥ ೫ ॥
ತೇನ ಶಬ್ದೇನ ಮಹತಾ ಮಮ ಮೂರ್ತಿಃ ಸಮುತ್ಥಿತಾ ।
ಕಲ್ಕಲೇಶ್ವರನಾಮೇತಿ ತತೋ ಲಿಂಗಂ ಪ್ರಕೀರ್ತಿತಂ ॥ ೬ ॥
ಇತಿ ತೇ ಪೂರ್ವವೃತ್ತಾಂತಂ ಕಥಿತಂ ನಾಮಕಾರಣಂ ।
ಸಾಂಪ್ರತಂ ತು ಯಥಾಜಾತಂ ಪುನಃ ಕಲಕಲೇಶ್ವರಂ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಶೃಣುಷ್ವೈಕಮನಾಃ ಪ್ರಿಯೇ ॥ ೭ ॥
ಪುರಾ ದ್ವಾಪರಸಂಧೌ ಚ ಪ್ರವಿಷ್ಟೇ ತು ಕಲೌ ಯುಗೇ ।
ನಾರದಸ್ತು ಸಮಾಗತ್ಯ ಕ್ಷೇತ್ರಂ ಪ್ರಾಭಾಸಿಕಂ ಶುಭಂ ।
ಸಂಚಕಾರ ತಪಶ್ಚೋಗ್ರಂ ತತ್ರ ಲಿಂಗಸಮೀಪತಃ ॥ ೮ ॥
ತತೋ ವರ್ಷಶತೇ ಪೂರ್ಣೇ ಸಮಾರಾಧ್ಯ ವೃಷಧ್ವಜಂ ।
ಗಾಂಧರ್ವಂ ಪ್ರಾಪ್ಯ ದೇವೇಶಿ ಭೂಷಿತಂ ಸಪ್ತಭಿಃ ಸ್ವರೈಃ ॥ ೯ ॥
ತತೋ ಹೃಷ್ಟಮನಾ ಭೂತ್ವಾ ತಲ್ಲಿಂಗಸ್ಯ ಸಮೀಪತಃ ।
ಸ ಚಕಾರ ಮಹಾಯಜ್ಞಂ ಪೌಂಡರೀಕಮಿತಿ ಶ್ರುತಂ ॥ ೧೦ ॥

---

೫. ತರುವಾಯ ದೇವತೆಗಳೂ, ಗಂಧರ್ವರೂ, ಋಷಿಗಳೂ, ಸಿದ್ಧರೂ, ಚಾರಣರೂ ರೋಮಾಂಚವನ್ನುಂಟುಮಾಡುವ ಕಲಕಲ ಶಬ್ದವನ್ನು ಮಾಡಿದರು.

೬. ಆ ಮಹಾಶಬ್ದದಿಂದ ಶುಭ ಲಿಂಗವುದ್ಭವಿಸಿ ಕಲಕಲವೆಂಬ ಹೆಸರನ್ನು ಪಡೆಯಿತು.

೭. ಪ್ರಿಯಳೆ! ಹೀಗೆ ನಿನಗೆ ಕಲಕಲವೆಂಬ ಹೆಸರಿಗೆ ಕಾರಣವಾದ ಹಿಂದಿನ ವೃತ್ತಾಂತವನ್ನು ಹೇಳಿರುವೆನು. ಈಗ ಮರಳಿ ಕಲಕಲೇಶ್ವರವೆಂದು ಹೆಸರಾಗಲು ಮತ್ತೊಂದು ಕಾರಣವನ್ನು ಹೇಳುವೆನು. ಒಮ್ಮನಸ್ಸಿನಿಂದ ಕೇಳು.

೮. ಹಿಂದೆ ದ್ವಾಪರ ಸಂಧಿಯಲ್ಲಿ ಕಲಿಯುಗವು ಬರಲು ನಾರದನು ಪ್ರಾಭಾಸಿಕ ಕ್ಷೇತ್ರಕ್ಕೆ ಬಂದು ಈ ಶಿವಲಿಂಗದ ಹತ್ತಿರ ಉಗ್ರತಪಸ್ಸನ್ನಾಚರಿಸಿದನು.

೯. ಬಳಿಕ ನೂರುವರ್ಷಗಳು ಪೂರ್ತಿಯಾಗಲು ಆ ನಾರದನು ಮಹೇಶ್ವರನನ್ನಾರಾಧಿಸಿ ಸಂಗೀತ ವಿದ್ಯೆಯನ್ನು ಪಡೆದು ಅದನ್ನು ಸಪ್ತಸ್ವರಗಳಿಂದ ಅಲಂಕರಿಸಿದನು.

೧೦–೧೧. ಅನಂತರ ಅವನು ಸಂತೋಷಗೊಂಡು ಆ ಲಿಂಗದ ಹತ್ತಿರ

ದೇವದೇವಸ್ಯ ತುಷ್ಟ್ಯರ್ಥಂ ಸ ಸದಾ ಭಾವಿತಾತ್ಮವಾನ್ ।
ಸಮಾಹೂಯ ಋಷೀಂಸ್ತತ್ರ ಬ್ರಹ್ಮಲೋಕಾತ್ಸಹಸ್ರಶಃ ॥ ೧೧ ॥
ತತಃ ಸಂಭೃತಸಂಭಾರೋ ಯಜ್ಞೋಪಕರಣಾನ್ವಿತಃ ।
ಕೃತ್ವಾ ಕುಂಡಾದಿಕಂ ಸರ್ವಂ ಸಮಾರೇಭೇ ತತಃ ಕ್ರತುಂ ॥ ೧೨ ॥
ತತಃ ಸಂಪೂರ್ಣತಾಂ ಪ್ರಾಪ್ತೇ ತಸ್ಮಿನ್ ಕ್ರತೌ ವರಾನನೇ ॥ ೧೩ ॥
ಅಥಾಗಮಂಸ್ತತೋ ವಿಪ್ರಾಸ್ತತ್ರ ಕ್ಷೇತ್ರನಿವಾಸಿನಃ ।
ದಕ್ಷಿಣಾರ್ಥಂ ಮಹಾದೇವಿ ಶತಶೋಽಥ ಸಹಸ್ರಶಃ ॥ ೧೪ ॥
ತತಃ ಸ ಕೌತುಕಾವಿಷ್ಟಸ್ತೇಷಾಂ ಯುದ್ಧಾರ್ಥಮೇವ ಹಿ ।
ಪ್ರಾಕ್ಷಿಪತ್ತತ್ರ ರತ್ನಾನಿ ಸುವರ್ಣಂ ಚ ಮಹೀತಲೇ ॥ ೧೫ ॥
ತತಸ್ತೇ ಬ್ರಾಹ್ಮಣಾಃ ಸರ್ವೇ ಯುಧ್ಯಮಾನಾಃ ಪರಸ್ಪರಂ ।
ಕೋಲಾಹಲಂ ಪರಂ ಚಕ್ರುರ್ಬಹುದ್ರವ್ಯಪರೀಪ್ಸಯಾ ॥ ೧೬ ॥
ಏಕೇ ದಿಗಂಬರಾ ತ್ಯಕ್ತಯಜ್ಞೋಪವೀತಿನಃ ।
ವಿಕಚಾಃ ಕೇಪಿ ದೃಶ್ಯಂತೇ ತ್ವನ್ಯೇ ರುಧಿರವಿಪ್ಲವಾಃ ॥ ೧೭ ॥

ಮಹೇಶ್ವರನ ತೃಪ್ತಿಗಾಗಿ ಬ್ರಹ್ಮಲೋಕದಿಂದ ಸಾವಿರಾರು ಮಂದಿ ಜ್ಞಾನಿಗಳಾದ ಮಹರ್ಷಿಗಳನ್ನು ಕರೆಯಿಸಿ ಪೌಂಡರೀಕವೆಂಬ ಮಹಾಯಜ್ಞವನ್ನು ಆರಂಭಿಸಿದನು.

೧೨–೧೩. ಬಳಿಕ ಯಜ್ಞಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು ಕುಂಡಾದಿಗಳನ್ನು ನಿರ್ಮಿಸಿ ಆ ಯಜ್ಞವನ್ನು ಪೂರಯಿಸಿದನು.

೧೪. ತರುವಾಯ ಆ ಕ್ಷೇತ್ರವಾಸಿಗಳಾದ ಅನೇಕ ಮಂದಿ ಬ್ರಾಹ್ಮಣರು ದಕ್ಷಿಣೆಗಾಗಿ ಅಲ್ಲಿಗೆ ಬಂದರು.

೧೫. ಆ ನಾರದನು ಕುತೂಹಲದಿಂದ ಆ ಬ್ರಾಹ್ಮಣರು ಜಗಳವಾಡುವುದನ್ನು ನೋಡುವುದಕ್ಕಾಗಿ ನೆಲದಮೇಲೆ ರತ್ನಗಳನ್ನೂ, ಚಿನ್ನದನಾಣ್ಯಗಳನ್ನೂ ಎಸೆದನು.

೧೬. ಅನಂತರ ಆ ಬ್ರಾಹ್ಮಣರು ಎಲ್ಲರೂ ಹೆಚ್ಚು ದ್ರವ್ಯಗಳನ್ನು ಹೊಂದುವುದಕ್ಕಾಗಿ ಪರಸ್ಪರ ಜಗಳವಾಡುತ್ತ ಬಹಳವಾಗಿ ಗದ್ದಲವನ್ನುಮಾಡಿದರು.

೧೭–೧೮. ನಾರದನು ಆ ದ್ರವ್ಯವನ್ನು ಎಸೆದುದರಿಂದ ಆ ಬ್ರಾಹ್ಮಣರಲ್ಲಿ ಕೆಲವರು ವಸ್ತ್ರಯಜ್ಞೋಪವೀತಗಳನ್ನು ತ್ಯಜಿಸಿ ದಿಗಂಬರರೂ, ಮತ್ತೆ ಕೆಲವರು ಬಿಡಿಸಿದ ಗಂಟುಳ್ಳವರೂ, ಇನ್ನು ಕೆಲವರು ರಕ್ತದಿಂದ ಒದ್ದೆಯಾದವರೂ ಆದರು

ಅನ್ಯೇ ಪರಸ್ಪರಂ ಜಘ್ನುರ್ಮುಷ್ಟಿಭಿಶ್ಚರಣೈಸ್ತಥಾ ।
ಏವಂ ತತ್ರ ತದಾ ಕ್ಷಿಪ್ತಂ ಯದ್ದ್ರವ್ಯಂ ನಾರದೇನ ತು ॥ ೧೮ ॥

ಅರ್ಥಾಭಾವೇ ತು ವಿತ್ತಸ್ಯ ಯೇ ಚ ವಿಪ್ರಾ ಹ್ಯಕಿಂಚನಾಃ ।
ವಿದ್ಯಾವಿನಯಸಂಪನ್ನಾ ಬ್ರಾಹ್ಮಣೈರ್ಜರ್ಜರೀಕೃತಾಃ ॥ ೧೯ ॥

ತೇ ತಮೂಚುರ್ಭೃಶಂ ಶಾಂತಾಃ ಸ್ಮಯಮಾನಂ ಮುಹುರ್ಮುಹುಃ ।
ಕಲಹಾರ್ಥಂ ಯತೋ ದಾನಂ ತ್ವಯಾ ದತ್ತಮಿದಂ ಮುನೇ ॥ ೨೦ ॥

ವಿದ್ಯಾಯುಕ್ತಾನ್ ಪರಿತ್ಯಜ್ಯ ವಿಧಿಂ ತ್ಯಕ್ತ್ವಾ ತು ಯಾಜ್ಞಿಕಂ ।
ತಸ್ಮಾದಸ್ಯ ಮುನೇ ನಾಮ ಖ್ಯಾತಂ ಕಲಕಲೇಶ್ವರಂ ॥ ೨೧ ॥

ತೇನ ನಾಮ್ನಾ ದ್ವಿಜಶ್ರೇಷ್ಠ ಲಿಂಗಮೇತದ್ಭವಿಷ್ಯತಿ ।
ಏತಸ್ಮಾತ್ಕಾರಣಾದ್ದೇವಿ ಜಾತಂ ಕಲಕಲೇಶ್ವರಂ ॥ ೨೨ ॥

ಯಸ್ತಂ ಸ್ನಾಪ್ಯ ನರೋ ಭಕ್ತ್ಯಾ ಕುರುತೇ ತ್ರಿಃಪ್ರದಕ್ಷಿಣಂ ।
ಸ ಗಚ್ಛೇದ್ರುದ್ರಲೋಕಂ ತು ತ್ವತ್ಪ್ರಸಾದಾದಸಂಶಯಂ ॥ ೨೩ ॥

ಇತರ ಕೆಲವರು ಮುಷ್ಟಿಗಳಿಂದಲೂ, ಕಾಲುಗಳಿಂದಲೂ ಪರಸ್ಪರವಾಗಿ ಹೊಡೆದಾಡಿಕೊಂಡರು.

೧೯-೨೨. ಬಳಿಕ ಬಡವರೂ, ವಿದ್ಯಾ, ವಿನಯಗಳುಳ್ಳವರೂ, ಇತರ ಬ್ರಾಹ್ಮಣರ ಹೊಡೆತದಿಂದ ಶಿಥಿಲಾಂಗರೂ ಆದ ಕೆಲವು ಮಂದಿ ಬ್ರಾಹ್ಮಣರು ದ್ರವ್ಯವನ್ನು ಪಡೆಯದೆ ಅತ್ಯಂತ ಶಾಂತರಾಗಿ ಬ್ರಾಹ್ಮಣರು ಜಗಳವಾಡುವುದನ್ನು ನೋಡಿ ನಗುತ್ತಿರುವ ನಾರದನನ್ನು ನೋಡಿ “ನೀನು ವಿದ್ವಾಂಸರನ್ನು ತ್ಯಜಿಸಿ ಯಜ್ಞದ ವಿಧಿಯನ್ನು ಬಿಟ್ಟು ಕಲಹಕ್ಕಾಗಿ ದಾನವನ್ನು ಕೊಟ್ಟದ್ದರಿಂದ ನಿನಗೆ ಕಲಕಲೇಶ್ವರನೆಂದು ಹೆಸರಾಗುವುದು. ನಿನ್ನೀ ಹೆಸರಿನಿಂದಲೇ ಈ ಲಿಂಗವು ಪ್ರಸಿದ್ಧಿಗೊಳ್ಳುವುದು.” ಎಂದರು. ದೇವಿ ! ಅದರಿಂದಲೇ ಈ ಲಿಂಗಕ್ಕೆ ಕಲಕಲೇಶ್ವರ ಎಂದು ಹೆಸರಾಯಿತು.

೨೩. ಆ ಕಲಕಲೇಶ್ವರನಿಗೆ ಭಕ್ತಿಯಿಂದ ಅಭಿಷೇಕಮಾಡಿ ಮೂರು ಪ್ರದಕ್ಷಿಣೆಗೈದ ಮನುಷ್ಯನು ನಿನ್ನ ಅನುಗ್ರಹದಿಂದ ನಿಶ್ಚಯವಾಗಿಯೂ ರುದ್ರಲೋಕವನ್ನು ಸೇರುವನು.

ಯಸ್ತಂ ಪೂಜಯತೇ ಭಕ್ತ್ಯಾ ಗಂಧಪುಷ್ಪಾನುಲೇಪನೈಃ ।
ಹೇಮ ದತ್ವಾ ದ್ವಿಜಾತಿಭ್ಯಃ ಸ ಗಚ್ಛೇತ್ಪರಮಂ ಪದಂ ॥ ೨೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಲಕಲೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚಸಪ್ತತಿತಮೋಽಧ್ಯಾಯಃ ॥

---

೨೪. ಅವನನ್ನು ಗಂಧ, ಪುಷ್ಪಾದಿಗಳಿಂದ ಪೂಜಿಸಿ ಬ್ರಾಹ್ಮಣರಿಗೆ ಸುವರ್ಣ ವನ್ನಿತ್ತವನು ಉತ್ತಮ ಸ್ಥಾನಕ್ಕೆ ಹೋಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಲಕಲೇಶ್ವರಮಾಹಾತ್ಮ್ಯವರ್ಣನವೆಂಬ
ಎಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್‌ಸಪ್ತತಿತಮೋಽಧ್ಯಾಯಃ

ಲಕುಲೀಶಲಿಂಗದ್ವಯ ಮಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ದೇವದೇವಸ್ಯ ಸಮೀಪಸ್ಥಂ ವಿರಾಜತೇ ।
ಲಿಂಗದ್ವಯಂ ಮಹಾಪುಣ್ಯಂ ಲಕುಲೀಶಪ್ರತಿಷ್ಠಿತಂ ॥ ೧ ॥

ಲಕುಲೇಶ್ವರನಾಮಾಽಸ್ತಿ ತಸ್ಯ ಲಿಂಗದ್ವಯಸ್ಯ ವೈ ।
ತದ್ದೃಷ್ಟ್ವಾ ದೇವದೇವಸ್ಯ ಲಿಂಗದ್ವಯಮನುತ್ತಮಂ ॥ ೨ ॥

ಮುಚ್ಯತೇ ಸಕಲಾತ್ಪಾಪಾದಾಜನ್ಮಮರಣಾಂತಿಕಾತ್ ।
ತತ್ರ ಶುಕ್ಲಚತುರ್ದಶ್ಯಾಂ ಮಾಸಿ ಭಾದ್ರಪದೇ ಪ್ರಿಯೇ ॥ ೩ ॥

ಉಪವಾಸಪರೋ ಭೂತ್ವಾ ಯಃ ಕರೋತಿ ಪ್ರಜಾಗರಂ ।
ಮೂರ್ತಿಮಂತಂ ತು ಸಂಪೂಜ್ಯ ಲಕುಲೀಶಂ ಮಹಾಪ್ರಭಂ ॥ ೪ ॥

ಕನ್ನಡದ ಅನುವಾದ

ಲಕುಲೀಶಲಿಂಗದ್ವಯ ಮಹಾತ್ಮ್ಯವರ್ಣನ

೧-೫. ಈಶ್ವರನು ಹೇಳುತ್ತಾನೆ :—ಆ ಕಲಕಲೇಶ್ವರನ ಹತ್ತಿರದಲ್ಲಿಯೆ ಲಕುಲೀಶನು ಪ್ರತಿಷ್ಠೆಮಾಡಿರುವ ಲಕುಲೇಶ್ವರವೆಂಬ ಮಹಾಪುಣ್ಯ ಸಂಪಾದಕವಾದ ಎರಡು ಲಿಂಗಗಳಿವೆ. ಅವುಗಳನ್ನು ನೋಡಿದವನು ಹುಟ್ಟಿದ ಮೊದಲ್ಗೊಂಡು ಮರಣದವರೆಗೆ ಮಾಡಿದ ಸಮಸ್ತ ಪಾಪಗಳಿಂದಲೂ ಮುಕ್ತನಾಗುವನು, ಪ್ರಿಯಳೆ ! ಭಾದ್ರಪದ ಮಾಸದ ಶುಕ್ಲಚತುರ್ದಶಿಯದಿನ ಉಪವಾಸಮಾಡಿ ಆ ಎರಡು ಲಿಂಗಗಳಲ್ಲಿ

ತತಃ ಸಂಪೂಜ್ಯ ವಿಧಿನಾ ತತ್ರ ಲಿಂಗದ್ವಯಂ ಪೃಥಕ್ ।
ಸಮ್ಯಕ್ಪೂಜಾವಿಧಾನೇನ ಸುತ್ತಿಮಂತ್ರೈರನುಕ್ರಮಾತ್ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಕುಲೀಶಲಿಂಗದ್ವಯ ಮಾಹಾತ್ಮ್ಯವರ್ಣನಂ ನಾಮ
ಷಷ್ಟ್ಯಂಶಾಶೋಽಧ್ಯಾಯಃ

ಲಕುಲೀಶನನ್ನು ಪೂಜೆಯವಿಧಿಯಿಂದಲೂ, ಸ್ತುತಿಮಂತ್ರಗಳಿಂದಲೂ ಚೆನ್ನಾಗಿ ಪೂಜಿಸಿಜಾಗರಣೆಮಾಡಿದವನು ಮಹೇಶ್ವರನ ಉತ್ತಮ ಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಲಕುಲೀಶಲಿಂಗದ್ವಯ ವರ್ಣನವೆಂಬ
ಎಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಸಪ್ತತಿತಮೋಽಧ್ಯಾಯಃ

ಉತ್ತಂಕೇಶ್ವರ ಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಉತ್ತಂಕೇಶ್ವರಮುತ್ತಮಂ ।
ತಸ್ಯೈವ ದಕ್ಷಿಣೇ ಭಾಗೇ ನಾತಿದೂರೇ ವ್ಯವಸ್ಥಿತಂ ।
ಸ್ಥಾಪಿತಂ ಚ ಸ್ವಯಂ ಭಕ್ತ್ಯಾ ಹ್ಯುತ್ತಂಕೇನ ಮಹಾತ್ಮನಾ ॥ ೧ ॥
ತದ್ದೃಷ್ಟ್ವಾ ತು ಮಹಾದೇವಿ ಸ್ಪೃಷ್ಟ್ವಾ ತು ಸುಸಮಾಹಿತಃ ।
ಸಂಪೂಜ್ಯ ವಿಧಿವದ್ಭಕ್ತ್ಯಾ ಮುಚ್ಯತೇ ಸರ್ವಕಿಲ್ಬಿಷಾತ್ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉತ್ತಂಕೇಶ್ವರಮಾಹಾತ್ಮ್ಯವರ್ಣನಂ ನಾಮ
ಸಪ್ತಸಪ್ತತಿತಮೋಽಧ್ಯಾಯಃ

ಕನ್ನಡದ ಅನುವಾದ

ಉತ್ತಂಕೇಶ್ವರಮಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ಲಕುಲೀಶ್ವರನ ದಕ್ಷಿಣಭಾಗದಲ್ಲಿ ಹತ್ತಿರದಲ್ಲಿಯೇ ಮಹಾತ್ಮನಾದ ಉತ್ತಂಕನು ಭಕ್ತಿಯಿಂದ ಸ್ಥಾಪಿಸಿರುವ ಉತ್ತಂಕೇಶ್ವರನನ್ನು ಹೊಂದಬೇಕು.

೨. ಅವನನ್ನು ದರ್ಶನಮಾಡಿ ಸಾವಧಾನ ಮನಸ್ಸಿನಿಂದ ಸ್ಪರ್ಶಿಸಿ ವಿಧಿಯಂತೆ ಪೂಜಿಸಿದವನು ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉತ್ತಂಕೇಶ್ವರಮಾಹಾತ್ಮ್ಯವರ್ಣನವೆಂಬ
ಎಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಸಪ್ತತಿತಮೋಽಧ್ಯಾಯಃ

ವೈಶ್ವಾನರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ವೈಶ್ವಾನರೇಶ್ವರಂ ।
ತಸ್ಯೈವಾಗ್ನೇಯಕೋಣಸ್ಥಂ ಧನುಷಾಂ ಪಂಚಕೇ ಸ್ಥಿತಂ ॥ ೧ ॥
ಪಾಪಘ್ನಂ ಸರ್ವಜಂತೂನಾಂ ದರ್ಶನಾತ್ ಸ್ಪರ್ಶನಾದಪಿ ।
ತತ್ರ ಕಶ್ಚಿಚ್ಛುಕಃ ಪೂರ್ವಂ ನೀಡಂ ದೇವಿ ಚಕಾರ ಹ ॥ ೨ ॥
ಪ್ರಾಸಾದೇ ಭಾರ್ಯಯಾ ಸಾರ್ಧಂ ನಿವಸನ್ ಸುಚಿರಂ ಸ್ಥಿತಃ ।
ತತಸ್ತೌ ದಂಪತೀ ನಿತ್ಯಂ ಪ್ರದಕ್ಷಿಣಂ ಪ್ರಚಕ್ರತುಃ ॥ ೩ ॥
ಕುಲಾಯಸ್ಯ ವಶಾದ್ದೇವಿ ನ ತು ಭಕ್ತ್ಯಾ ಕಥಂಚನ ।
ಕಾಲೇನ ಮಹತಾ ತೌ ಚ ಪಂಚತ್ವಂ ಸಮುಪಸ್ಥಿತೌ ॥ ೪ ॥
ಜಾತೌ ತೇನ ಪ್ರಭಾವೇನ ಯುಕ್ತೌ ಜಾತಿಸ್ಮರೌ ಭುವಿ ।
ಲೋಪಾಮುದ್ರಾಗಸ್ತ್ಯನಾಮ ಪ್ರಸಿದ್ಧಿಂ ಪರಮಾಂ ಗತೌ ॥ ೫ ॥

ಕನ್ನಡದ ಅನುವಾದ

ವೈಶ್ವಾನರೇಶ್ವರಮಾಹಾತ್ಮ್ಯವರ್ಣನ

೧–೫. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಆ ಉತ್ತಂಕೇಶ್ವರನ ಆಗ್ನೇಯ ಮೂಲೆಯಲ್ಲಿ ಐದು ಬಿಲ್ಲಿನ ದೂರದಲ್ಲಿರುವ ದರ್ಶನ, ಮತ್ತು ಸ್ಪರ್ಶದಿಂದ ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವ ವೈಶ್ವಾನರೇಶ್ವರನೆಡೆಗೆ ಹೋಗಬೇಕು. ಅಲ್ಲಿಯ ದೇವಾಲಯದಲ್ಲಿ ಹಿಂದೆ ಒಂದು ಗಿಳಿಯು ಪತ್ನಿಯೊಡನೆ ಗೂಡನ್ನು ಕಟ್ಟಿಕೊಂಡು ಬಹುಕಾಲ ವಾಸಮಾಡುತ್ತಿದ್ದಿತು. ಆ ಶುಕದಂಪತಿಗಳು ಗೂಡಿಗಾಗಿ ನಿತ್ಯವೂ ಆ ವೈಶ್ವಾನರೇಶ್ವರನಿಗೆ ಪ್ರದಕ್ಷಿಣೆಮಾಡುತ್ತಿದ್ದುವು, ಭಕ್ತಿಯಿಂದಲ್ಲ. ಅವು ಬಹುಕಾಲದ ಮೇಲೆ ಮರಣವನ್ನು ಹೊಂದಿ ಆ ವೈಶ್ವಾನರೇಶ್ವರನ ಮಾಹಾತ್ಮ್ಯದಿಂದ ಭೂಮಿಯಲ್ಲಿ ಹಿಂದಿನ ಜನ್ಮದ ಸ್ಮರಣೆಯುಳ್ಳವುಗಳಾಗಿ ಜನಿಸಿ ಲೋಪಾಮುದ್ರಾ, ಅಗಸ್ತ್ಯರೆಂಬ ಹೆಸರಿನಿಂದ ಪ್ರಸಿದ್ಧವಾದುವು.

ಅಥ ಗಾಥಾ ಪುರೀ ಗೀತಾ ಅಗಸ್ತ್ಯೇನ ಮಹಾತ್ಮನಾ ॥
ಸ್ಮರತಾ ಪೂರ್ವದೇಹಂ ತು ವಿಸ್ಮಯೇನಾಽನುಭೂತಿಜಾ ॥ ೬ ॥
ಕೃತ್ವಾ ಪ್ರದಕ್ಷಿಣಂ ಸಮ್ಯಗ್ವಹ್ನೀಶಂ ಯಃ ಪ್ರಪಶ್ಯತಿ ।
ನೂನಂ ಪ್ರಸಿದ್ಧಿಮಾಪ್ನೋತಿ ಇತಶ್ಚಾಽಹಂ ಯಥಾ ಪುರಾ ॥ ೭ ॥
ಏವಂ ದೇವಿ ತವಾಖ್ಯಾತಂ ಮಾಹಾತ್ಮ್ಯಂ ವಹ್ನಿದೈವತಂ ।
ಶ್ರುತಂ ಪಾಪಹರ ನೃಣಾಂ ಸರ್ವಕಾಮಫಲಪ್ರದಂ ॥ ೮ ॥
ಘೃತೇನ ತಂ ತು ಸಂಸ್ನಾಪ್ಯ ವಿಧಿನಾ ವೈ ಸಮರ್ಚಯೇತ್ ।
ಹೇಮ ದದ್ಯಾಚ್ಚ ವಿಪೇಂದ್ರೇ ಸಮ್ಯಕ್ ಶ್ರದ್ಧಾಸಮನ್ವಿತಃ ॥ ೯ ॥
ಏವಂ ಕೃತ್ವಾ ವಿಧಾನೇನ ಸಮ್ಯಗ್ಯಾತ್ರಾಫಲಂ ಲಭೇತ್ ।
ವಹ್ನಿಲೋಕಂ ತು ಸಂಪ್ರಾಪ್ಯ ಮೋದತೇ ಕಾಲಮಕ್ಷಯಂ ॥ ೧೦ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವೈಶ್ವಾನರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಸಪ್ತತಿತಮೋಽಧ್ಯಾಯಃ ॥

---

೬. ಮಹಾತ್ಮನಾದ ಆ ಅಗಸ್ತ್ಯನು ಹಿಂದಿನ ಜನ್ಮದ ಸ್ಮರಣೆಯ ಅನುಭವದಿಂದ ಈ ಶ್ಲೋಕವನ್ನು ಹೇಳಿರುವನು.

೭. "ವಹ್ನೀಶನನ್ನು ಪ್ರದಕ್ಷಿಣೆಮಾಡಿ ದರ್ಶನಗೈದವನು ನಿಶ್ಚಯವಾಗಿಯೂ ನನ್ನಂತೆಯೇ ಪ್ರಸಿದ್ಧನಾಗುವನು."

೮. ದೇವಿ ! ಹೀಗೆ ನಿನಗೆ ವಹ್ನೀಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು. ಮನುಷ್ಯನು ಇದನ್ನು ಕೇಳುವುದರಿಂದ ಅವನ ಪಾಪವು ಪರಿಹಾರವಾಗಿ ಸಮಸ್ತೇಷ್ಟಾರ್ಥಗಳು ಲಭಿಸುವುವು.

೯. ವಿಧಿಯಂತೆ ಆ ವಹ್ನೀಶನಿಗೆ ಆಜ್ಯಾಭಿಷೇಕಮಾಡಿ ಪೂಜಿಸಿ ಶ್ರದ್ಧೆಯಿಂದ ಬ್ರಾಹ್ಮಣೋತ್ತಮನಿಗೆ ಸುವರ್ಣವನ್ನು ದಾನಮಾಡಬೇಕು.

೧೦. ಮಾನವನು ವಿಧಿಯಂತೆ ಹೀಗೆ ಮಾಡಿದರೆ ಯಾತ್ರಾಫಲವನ್ನು ಹೊಂದಿ ಅಗ್ನಿಲೋಕವನ್ನು ಸೇರಿ ಅನಂತಕಾಲದವರೆಗೆ ಆನಂದಪಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ ಮಾಹಾತ್ಮ್ಯದಲ್ಲಿ
ವೈಶ್ವಾನರೇಶ್ವರಮಾಹಾತ್ಮ್ಯವರ್ಣನವೆಂಬ
ಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನನಾಽಶೀತಮೋಽಧ್ಯಾಯಃ

ಲಕುಲೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಕುಲೀಶಂ ಮಹಾಪ್ರಭಂ ।
ತಸ್ಯ ಪಶ್ಚಿಮ ದಿಗ್ಭಾಗೇ ಧನುಷಾಂ ಸಪ್ತಕೇ ಸ್ಥಿತಂ ॥ ೧ ॥

ಪಾಪಘ್ನಂ ಸರ್ವಜಂತೂನಾಂ ಶಾಂತಂ ಮೂರ್ತಿಸ್ಥಿತಂ ಪ್ರಭುಂ ।
ಸಮಾಯಾತಂ ಮಹಾಕ್ಷೇತ್ರೇ ತತ್ರ ಕಾಯಾಽವರೋಹಣಾತ್ ॥ ೨ ॥

ಕೃತ್ವಾ ತತ್ರ ತಪಶ್ಚೋಗ್ರಂ ದೀಕ್ಷಯಿತ್ವಾತ್ಮಶಿಷ್ಯಕಾನ್ ।
ಕುಶಕಾದೀಂಶ್ಚ ಚತುರ ಉಕ್ತ್ವಾ ಶಾಸ್ತ್ರಾಣ್ಯನೇಕಶಃ ॥ ೩ ॥

ನ್ಯಾಯವೈಶೇಷಿಕಾದೀನಿ ತತಃ ಸಿದ್ಧಿಂ ಪರಾಂ ಗತಃ ।
ಏವಂ ಜ್ಞಾತ್ವಾ ತು ಯಃ ಸಮ್ಯಕ್ತಂ ಸಮರ್ಚಯತೇ ನರಃ ॥ ೪ ॥

ಕಾರ್ತಿಕ್ಯಾಂ ತು ವಿಶೇಷೇಣ ಅಯನೇ ಚೋತ್ತರೇಽಪಿ ವಾ ।
ವಿದ್ಯಾದಾನಂ ಚ ತತ್ರೈವ ದದ್ಯಾದ್ವಿಪ್ರಾಯ ಶಾಲಿನೇ ॥ ೫ ॥

ಕನ್ನಡದ ಅನುವಾದ

ಲಕುಲೀಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ವೈಶ್ವಾನರೇಶ್ವರನ ಪಶ್ಚಿಮದಿಕ್ಕಿನಲ್ಲಿ ಏಳು ಬಿಲ್ಲಿನ ದೂರದಲ್ಲಿರುವವನೂ, ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವವನೂ, ಆ ಪ್ರಭಾಸಕ್ಷೇತ್ರಕ್ಕೆ ಬಂದು ದೇಹದಿಂದ ನೆಲೆಸಿರುವವನೂ ಆದ ಲಕುಲೀಶನೆಡೆಗೆ ಹೋಗಬೇಕು.

೩–೬. ಅಲ್ಲಿ ಲಕುಲೀಶಮುನಿಯು ಉಗ್ರತಪಸ್ಸನ್ನಾಚರಿಸಿ ಕುಶಕ ಮೊದಲಾದ ತನ್ನ ನಾಲ್ಕುಮಂದಿ ಶಿಷ್ಯರನ್ನು ದೀಕ್ಷೆಗೊಳಿಸಿ ಅವರಿಗೆ ನ್ಯಾಯವೈಶೇಷಿಕ ಮೊದಲಾದ ಶಾಸ್ತ್ರಗಳನ್ನು ಉಪದೇಶಿಸಿ ಸಿದ್ಧಿಯನ್ನು ಪಡೆದಿರುವನು ಇದನ್ನರಿತು ಆ

ಸಪ್ತಜನ್ಮಾನಿ ವಿಪ್ರಸ್ಯ ಧನಾಢ್ಯಸ್ಯ ಕುಲೇ ಶುಭೇ ।
ಜಾಯತೇ ಮತಿಮಾಂಧೀಮಾಂಛ್ರೀಮಾನೇವಂ ಪುನಃ ಪುನಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಕುಲೀಶ್ವರಮಾಹಾತ್ಮ್ಯವರ್ಣನಂನಾಮ
॥ ಏಕೋನಾಶೀತಿತಮೋಽಧ್ಯಾಯಃ ॥

ಆ ಲಕುಲೀಶನನ್ನು ಕಾರ್ತಿಕಮಾಸದ ಹುಣ್ಣಿಮೆಯದಿನ ಅಥವಾ ಉತ್ತರಾಯಣದಲ್ಲಿ ಬ್ರಾಹ್ಮಣನಾದ ಶಿಷ್ಯನಿಗೆ ವಿದ್ಯೋಪದೇಶಮಾಡಿದವನು ಏಳು ಜನ್ಮಗಳಲ್ಲಿ ಹಣಗಾರನಾದ ಬ್ರಾಹ್ಮಣನ ವಂಶದಲ್ಲಿ ಜನಿಸಿ ಬುದ್ಧಿವಂತನೂ, ಐಶ್ವರ್ಯವಂತನೂ ಆಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಲಕುಲೀಶ್ವರಮಾಹಾತ್ಮ್ಯವರ್ಣನವೆಂಬಎಪ್ಪತ್ತೊಂಬತ್ತನೆಯ
ಅಧ್ಯಾಯವು ಮುಗಿದುದು.

ಅಶೀತಿತಮೋಽಧ್ಯಾಯಃ

ಗೌತಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ಪೂರ್ವದಿಗ್ಭಾಗೇ ಲಿಂಗಂ ಪಾತಕನಾಶನಂ ।
ಗೌತಮೇಶ್ವರನಾಮಾಖ್ಯಂ ದೈತ್ಯಸೂದನಪಶ್ಚಿಮೇ ॥ ೧ ॥

ಧನುಷಾಂ ಪಂಚಕೇ ದೇವಿ ಸಂಸ್ಥಿತಂ ಸರ್ವಕಾಮದಂ ।
ಶಲ್ಯೇನಾರಾಧಿತಂ ಯದ್ವೈ ಮದ್ರರಾಜೇನ ಭಾಮಿನಿ ॥ ೨ ॥

ತತಃ ಕೃತಂ ತಪಶ್ಚೋಗ್ರಂ ಸಮಾರಾಧ್ಯ ಮಹೇಶ್ವರಂ ।
ಅನ್ಯೋಽಪ್ಯೇವಂ ನರೋ ಯಸ್ತು ತಂ ಸಮಾರಾಧಯಿಷ್ಯತಿ ॥ ೩ ॥

ಸ ಪ್ರಾಪ್ಸ್ಯತಿ ಪರಾಂ ಸಿದ್ಧಿಂ ಯಥಾ ಶಲ್ಯೋ ಮಹಾಮನಾಃ ।
ಚೈತ್ರಶುಕ್ಲಚತುರ್ದಶ್ಯಾಂ ಸ್ನಾಪಯೇತ್ಪಯಸಾ ತು ಯಃ ॥ ೪ ॥

ಗಂಧೋದಕೇನ ಚ ತತಃ ಪೂಜಯೇತ್ಕುಸುಮೋತ್ತಮೈಃ ।
ತಥೈವ ವಿಧಿವದ್ಭಕ್ತ್ಯಾ ಸೋಽಶ್ವಮೇಧಫಲಂ ಲಭೇತ್ ॥ ೫ ॥

ಕನ್ನಡದ ಅನುವಾದ

ಗೌತಮೇಶ್ವರಮಾಹಾತ್ಮ್ಯವರ್ಣನ

೧-೫. ಈಶ್ವರನು ಹೇಳುತ್ತಾನೆ :—ಆ ಲಕುಲೀಶ್ವರನ ಪೂರ್ವದಿಕ್ಕಿನಲ್ಲಿ ದೈತ್ಯ ಸೂದನನ ಪಶ್ಚಿಮಕ್ಕೆ ಐದು ಬಿಲ್ಲುಗಳ ದೂರದಲ್ಲಿ ಸಕಲ ಪಾಪವನ್ನು ಪರಿಹರಿಸುವುದೂ, ಸಮಸ್ತೇಷ್ಟಾರ್ಥಗಳನ್ನೀಯುವುದೂ ಆದ ಗೌತಮೇಶ್ವರಲಿಂಗವಿರುವುದು. ಈ ಲಿಂಗವನ್ನು ಮದ್ರರಾಜನಾದ ಶಲ್ಯನು ಪೂಜಿಸಿ ಉಗ್ರತಪಸ್ಸನ್ನು ಮಾಡಿರುವನು. ಇತರ ಮನುಷ್ಯರೂ ಈ ಗೌತಮೇಶ್ವರನನ್ನು ಪೂಜಿಸಿದರೆ ಶಲ್ಯನಂತೆ ಇಷ್ಟಸಿದ್ಧಿಯನ್ನೈದುವರು. ಚೈತ್ರಶುಕ್ಲಚತುರ್ದಶಿಯ ದಿನ ಹಾಲಿನಿಂದಲೂ, ಗಂಧೋದಕದಿಂದಲೂ ಅಭಿಷೇಕಮಾಡಿ ಉತ್ತಮ ಪುಷ್ಪಗಳಿಂದ ಭಕ್ತಿಯಿಂದ ಈ ಗೌತಮೇಶ್ವರನನ್ನು ಪೂಜಿಸಿದವನು ಅಶ್ವಮೇಧಯಾಗ ಮಾಡಿದ ಫಲವನ್ನು ಪಡೆಯುವನು.

ವಾಚಾ ಕೃತಂ ಚ ಯತ್ಪಾಪಂ ಮನಸಾ ಕರ್ಮಣಾऽಥ ವಾ ।
ತತ್ಸರ್ವಂ ನಶ್ಯತೇ ದೇವಿ ತಸ್ಯ ಲಿಂಗಸ್ಯ ದರ್ಶನಾತ್ ॥ ೬ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೌತಮೇಶ್ವರಮಾಹಾತ್ಮ್ಯವರ್ಣನಂ ನಾಮ
ಅಶೀತಿತಮೋऽಧ್ಯಾಯಃ

---

೬. ದೇವಿ! ಆ ಶಿವಲಿಂಗವನ್ನು ಸಂದರ್ಶಿಸುವುದರಿಂದ ವಾಙ್ಮನಃ ಕರ್ಮಗಳಿಂದೆ ಸಗಿದ ಪಾಪವೆಲ್ಲವೂ ಪರಿಹಾರವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗೌತಮೇಶ್ವರಮಾಹಾತ್ಮ್ಯವರ್ಣನವೆಂಬ
ಎಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಏಕಾಶೀತಿತಮೋಽಧ್ಯಾಯಃ

ದೈತ್ಯಸೂದನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವೇಶಂ ದೈತ್ಯಸೂದನಂ ।
ಪಾಪಘ್ನಂ ಸರ್ವಜಂತೂನಾಂ ಪ್ರಭಾಸಕ್ಷೇತ್ರವಾಸಿನಾಂ ॥ ೧ ॥
ಅನಾದಿಯುಗಸಂಸ್ಥಾನಂ ಸರ್ವಕಾಮಪ್ರದಂ ಶುಭಂ ।
ಸಂಸಾರಸಾಗರೇ ಘೋರೇ ಸ್ಥಿತಂ ನೌರಿವ ತಾರಣೇ ॥ ೨ ॥
ಅನ್ಯೇ ಸರ್ವೇಽಪಿ ನಶ್ಯಂತಿ ಕಲ್ಪಾಂತೇ ಬ್ರಹ್ಮಣೋ ದಿನೇ ।
ಏತಾನಿ ಮುಕ್ತ್ವಾ ದೇವೇಶಿ ನ್ಯಗ್ರೋಧಂ ಸಪ್ತಕಲ್ಪಗಂ ॥ ೩ ॥
ಕಲ್ಪವೃಕ್ಷಂ ತಥಾಽಗಾರಂ ವೈಡೂರ್ಯಂ ಪರ್ವತೋತ್ತಮಂ ।
ಶ್ರೀದೈತ್ಯಸೂದನಂ ದೇವಂ ಮಾರ್ಕಂಡೇಯಂ ಮಹಾಮುನಿಂ ॥ ೪ ॥
ಅಕ್ಷಯಾಶ್ಚಾವ್ಯಯಾಶ್ಚೈತೇ ಸಪ್ತಕಲ್ಪಾನಿ ಸುಂದರಿ ।
ದೇವಿ ಕಿಂ ಬಹುನೋಕ್ತೇನ ವರ್ಣಿತೇನ ಪುನಃಪುನಃ ॥ ೫ ॥

ಕನ್ನಡದ ಅನುವಾದ

ದೈತ್ಯಸೂದನಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಪ್ರಭಾಸ ಕ್ಷೇತ್ರವಾಸಿಗಳಾದ ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವವನೂ, ಅನಾದಿಕಾಲ ದಿಂದಲೂ, ಅಲ್ಲಿ ನೆಲಸಿರುವವನೂ, ಸಕಲೇಷ್ಟಾರ್ಥಗಳನ್ನು ಈಡೇರಿಸಿ ಕೊಡುವವನೂ, ಘೋರಸಂಸಾರವೆಂಬ ಸಾಗರವನ್ನು ದಾಟಿಸುವುದರಲ್ಲಿ ಹಡಗಿನಂತಿರುವವನೂ ಆದ ದೈತ್ಯಸೂದನನ್ನು ಹೊಂದಬೇಕು.

೩–೪. ಬ್ರಹ್ಮನ ದಿನವಾದ ಕಲ್ಪಾಂತದಲ್ಲಿ ನ್ಯಗ್ರೋಧ, ಕಲ್ಪವೃಕ್ಷ, ಅಗಾರ, ವೈಡೂರ್ಯಪರ್ವತ, ಶ್ರೀದೈತ್ಯಸೂದನ, ಮಾರ್ಕಂಡೇಯಮುನಿ ಈ ಏಳನ್ನು ಬಿಟ್ಟು ಉಳಿದ ವಸ್ತುಗಳೆಲ್ಲ ನಾಶವಾಗುವುವು.

೫. ದೇವಿ ! ಸಪ್ತಕಲ್ಪಗಳಲ್ಲಿಯೂ ಇವೇಳು ವಿಕಾರಗೊಳ್ಳದೆ ಸ್ಥಿರವಾಗಿರುವುವು. ಬಹುವಾಗಿ ವರ್ಣಿಸುವುದರಿಂದೇನು ಪ್ರಯೋಜನ ?

ಶ್ರೀದೈತ್ಯಸೂದನಾದ್ದೇವಿ ನಾಽನ್ಯಾಽಸ್ತಿ ಭುವಿ ದೇವತಾ ।
ಯವಾಕಾರಂ ತು ತಸ್ಯೈವ ಕ್ಷೇತ್ರಂ ಪಾತಕನಾಶನಂ ॥ ೬ ॥
ಸೇವಿತಂ ಚರ್ಷಿಭಿಃ ಸಿದ್ಧೈರ್ಯಕ್ಷವಿದ್ಯಾಧರೋರಗೈಃ ।
ತಸ್ಯ ಸೀಮಾಂ ಪ್ರವಕ್ಷ್ಯಾಮಿ ವಿಷ್ಣುಕ್ಷೇತ್ರಸ್ಯ ಭಾಮಿನಿ ॥ ೭ ॥
ಪೂರ್ವೇ ಯಮೇಶ್ವರಂ ಯಾವಚ್ಛ್ರೀಸೋಮೇಶಂ ತು ಪಶ್ಚಿಮೇ ।
ಉತ್ತರೇ ತು ವಿಶಾಲಾಕ್ಷಿ ದಕ್ಷಿಣೇ ಸರಿತಾಂ ಪತಿಃ ॥ ೮ ॥
ಏತತ್ಕ್ಷೇತ್ರಂ ಯವಾಕಾರಂ ವೈಷ್ಣವಂ ಪಾಪನಾಶನಂ ॥ ೯ ॥
ಅತ್ರ ಕ್ಷೇತ್ರೇ ಮೃತಾ ಯೇ ತು ಪಾಪಿನೋಽಪಿ ನರಾ ಧ್ರುವಂ ।
ಸ್ವರ್ಗಂ ಗಚ್ಛಂತಿ ತೇ ಸರ್ವೇ ಸಂತಃ ಸುಕೃತಿನೋ ಯಥಾ ॥ ೧೦ ॥
ಅತ್ರ ದತ್ತಂ ಹುತಂ ಜಪ್ತಂ ತಪಸ್ತಪ್ತಂ ಕೃತಂ ಹಿ ಯತ್ ।
ತತ್ಸರ್ವಂ ಚಾಽಕ್ಷಯಂ ಪ್ರೋಕ್ತಂ ಸಪ್ತಕಲ್ಪಾಽವಧಿ ಪ್ರಿಯೇ ॥ ೧೧ ॥
ತತ್ರೈಕಮಪಿ ಯೋ ದೇವಿ ಬ್ರಾಹ್ಮಣಂ ಭೋಜಯಿಷ್ಯತಿ ।
ವಿಧಿನಾ ವಿಷ್ಣುಮುದ್ದಿಶ್ಯ ಕೋಟಿರ್ಭವತಿ ಭೋಜಿತಾ ॥ ೧೨ ॥

೬-೭. ಭೂಮಿಯಲ್ಲಿ ಶ್ರೀ ದೈತ್ಯಸೂದನನಿಗಿಂತ ಉತ್ತಮವಾದ ಬೇರೆ ದೇವತೆಗಳಿಲ್ಲ. ಋಷಿಗಳು, ಸಿದ್ಧರು, ಯಕ್ಷರು, ವಿದ್ಯಾಧರರು, ಉರಗರು—ಇವರಿಂದ ಸೇವಿಸಲ್ಪಟ್ಟ ಯವಾಕಾರವಾದ ಆ ಕ್ಷೇತ್ರವು ಪಾಪವನ್ನು ಪರಿಹರಿಸುವುದು. ಪ್ರಿಯಳೆ! ಆ ವಿಷ್ಣುಕ್ಷೇತ್ರದ ಎಲ್ಲೆಯನ್ನು ಹೇಳುವೆನು.

೮. ಈ ಕ್ಷೇತ್ರದ ಪೂರ್ವದಲ್ಲಿ ಯಮೇಶ್ವರನೂ, ಪಶ್ಚಿಮದಲ್ಲಿ ಸೋಮೇಶನೂ, ಉತ್ತರದಲ್ಲಿ ವಿಶಾಲಾಕ್ಷಿಯೂ, ದಕ್ಷಿಣದಲ್ಲಿ ಸಮುದ್ರವೂ ಇರುವುದು.

೯. ಯವಾಕಾರವಾದ ಈ ವಿಷ್ಣುಕ್ಷೇತ್ರವು ಪಾತಕಗಳನ್ನು ಪರಿಹರಿಸುವುದು.

೧೦. ಈ ಕ್ಷೇತ್ರದಲ್ಲಿ ಮೃತರಾದವರು ಪಾಪಿಗಳಾಗಿದ್ದರೂ ಪುಣ್ಯವಂತರಾದ ಸಜ್ಜನರಂತೆ ಸ್ವರ್ಗಕ್ಕೆ ಹೋಗುವರು.

೧೧. ಪ್ರಿಯಳೆ! ಇಲ್ಲಿ ಮಾಡಿದ ದಾನ, ಹೋಮ, ಜಪ, ತಪಸ್ಸು ಇವುಗಳೆಲ್ಲ ಏಳು ಕಲ್ಪಗಳವರೆಗೆ ಅಕ್ಷಯವಾಗಿರುವುವು.

೧೨. ವಿಷ್ಣುವನ್ನುದ್ದೇಶಿಸಿ ಒಬ್ಬ ಬ್ರಾಹ್ಮಣನನ್ನಾದರೂ ವಿಧಿಯಂತೆ ಭೋಜನ ಮಾಡಿಸಿದರೂ ಕೋಟಿ ಬ್ರಾಹ್ಮಣರನ್ನು ಭೋಜನಮಾಡಿಸಿದ ಫಲವು ಲಭಿಸುವುದು.

ತತ್ರೋಪವಾಸಂ ಯಃ ಕುರ್ಯಾನ್ನರೋ ಭಕ್ತಿಸಮನ್ವಿತಃ ।
ಏಕೇನೈವೋಪವಾಸೇನ ಉಪವಾಸಾಯುತಂ ಫಲಂ ।
ಚಕ್ರತೀರ್ಥೇ ನರಃ ಸ್ನಾತ್ವಾ ಸೋಪವಾಸೋ ಜಿತೇಂದ್ರಿಯಃ ॥ ೧೩ ॥
ದ್ವಾದಶ್ಯಾಂ ಕಾರ್ತಿಕೇ ಮಾಸಿ ದದ್ಯಾದ್ವಿಪ್ರೇಷು ಕಾಂಚನಂ ।
ವಿಷ್ಣುಂ ಸಂಪೂಜ್ಯ ವಿಧಿವನ್ಮುಚ್ಯತೇ ಸರ್ವಪಾತಕೈಃ ॥ ೧೪ ॥

ದೇವ್ಯುವಾಚ :—

ದೈತ್ಯಸೂದನನಾಮೇತಿ ಕಥಂ ತಸ್ಯ ಪ್ರಕೀರ್ತಿತಂ ।
ಕಸ್ಮಿನ್ಕಾಲೇ ತು ದೇವೇಶ ತನ್ಮೇ ವಿಸ್ತರತೋ ವದ ॥ ೧೫ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಮಾಹಾತ್ಮ್ಯಂ ಪಾಪನಾಶನಂ ।
ದೈತ್ಯಸೂದನದೇವಸ್ಯ ಪುರಾವೃತ್ತಂ ಮಹೋದಯಂ ॥ ೧೬ ॥
ದೇವಿ ತಸ್ಯೈವ ನಾಮಾನಿ ಕಲ್ಪೇ ಕಲ್ಪೇ ಭವಂತಿ ವೈ ।
ಅನಾದಿನಿಧನಾನ್ಯೇವ ಸಂಭವಂತಿ ಪುನಃ ಪುನಃ ॥ ೧೭ ॥
ಪೂರ್ವಕಲ್ಪೇ ಶ್ರಿಯಾ ವೃತ್ತೋ ವಾಮನಸ್ತು ದ್ವಿತೀಯಕೇ ।
ವಜ್ರಾಂಗಸ್ತು ತೃತೀಯೇ ವೈ ತುರೀಯೇ ಕಮಲಾಪ್ರಿಯಃ ॥ ೧೮ ॥

೧೩–೧೪. ಅಲ್ಲಿ ಭಕ್ತಿಯಿಂದ ಒಂದು ಉಪವಾಸಮಾಡಿದ ಮಾನವನೂ ಹತ್ತು ಸಾವಿರ ಉಪವಾಸದ ಫಲವನ್ನು ಪಡೆಯುವನು. ಮನುಷ್ಯನು ಕಾರ್ತಿಕ ಮಾಸ ದ್ವಾದಶೀದಿನ ಚಕ್ರತೀರ್ಥದಲ್ಲಿ ಮಿಂದು ಉಪವಾಸಮಾಡಿ ಜಿತೇಂದ್ರಿಯನಾಗಿ ವಿಧಿಯಂತೆ ವಿಷ್ಣುವನ್ನು ಆರಾಧಿಸಿ ಬ್ರಾಹ್ಮಣರಿಗೆ ಸುವರ್ಣ ದಾನಮಾಡಿದರೆ ಸಕಲ ಪಾಪಮುಕ್ತನಾಗುವನು.

೧೫. ದೇವಿಯು ಹೇಳುತ್ತಾಳೆ :—ದೇವತೆಗಳಿಗೊಡೆಯನಾದ ಮಹೇಶ್ವರನೆ! ಅವನಿಗೆ ಯಾವಾಗ ದೈತ್ಯಸೂದನನೆಂದು ಹೆಸರಾಯಿತು ? ಅದನ್ನು ನನಗೆ ವಿಸ್ತಾರವಾಗಿ ಹೇಳು.

೧೬. ಈಶ್ವರನು ಹೇಳುತ್ತಾನೆ:—ದೇವಿ ! ದೈತ್ಯಸೂದನದೇವನ ಪಾಪವನ್ನು ಪರಿಹರಿಸುವ ಮಾಹಾತ್ಮ್ಯವನ್ನೂ ಹಿಂದಿನ ವೃತ್ತಾಂತವನ್ನೂ ನಿನಗೆ ಹೇಳುವೆನು. ಕೇಳು.

೧೭. ದೇವಿ ! ಆ ದೈತ್ಯಸೂದನನ ನಿತ್ಯವಾದ ನಾಮಗಳು ಪ್ರತಿಕಲ್ಪಗಳಲ್ಲಿಯೂ ಬೇರೆ ಬೇರೆಯಾಗುವುವು.

೧೮–೧೯. ಇವನು ಹಿಂದಿನ ಕಲ್ಪದಲ್ಲಿ ಶ್ರೀವೃತ್ತನೆಂದೂ, ಎರಡನೆಯ ಕಲ್ಪದಲ್ಲಿ ವಾಮನನೆಂದೂ, ಮೂರನೆಯ ಕಲ್ಪದಲ್ಲಿ ವಜ್ರಾಂಗನೆಂದೂ, ನಾಲ್ಕನೆಯ ಕಲ್ಪದಲ್ಲಿ

ಪಂಚಮೋ ದುಃಖಹರ್ತಾ ಚ ಷಷ್ಠೇ ತು ಪುರುಷೋತ್ತಮಃ ।
ಶ್ರೀದೈತ್ಯಸೂದನೋ ದೇವಃ ಕಲ್ಪೇ ವೈ ಸಪ್ತಮೇ ಸ್ಮೃತಃ ॥ ೧೯ ॥
ತಸ್ಯೈವ ನಾಮ ಚೋತ್ಪತ್ತಿಂ ಕಥಯಾಮಿ ಯಥಾರ್ಥತಃ ॥ ೨೦ ॥
ಪುರಾ ದೇವಾಸುರೇ ಯುದ್ಧೇ ದಾನವೈರ್ದೇವಕಂಟಕೈಃ ।
ನಿರ್ಜಿತಾ ದೇವತಾಃ ಸರ್ವೇ ಜುಗ್ಮುಸ್ತೇ ಶರಣಂ ಹರಿಂ ॥
ಕ್ಷೀರೋದವಾಸಿನಂ ದೇವಮಸ್ತುವನ್ ಪ್ರಣತಾಃ ಸ್ಥಿತಾಃ ॥ ೨೧ ॥
ದೇವಾ ಊಚುಃ :—
ಜಯ ದೇವ ಜಗನ್ನಾಥ ದೈತ್ಯಾಽಸುರವಿಮರ್ದನ ।
ವರಾಹರೂಪಮಾಸ್ಥಾಯ ಉದ್ಧೃತಾ ವಸುಧಾ ತ್ವಯಾ ॥ ೨೨ ॥
ಉದ್ಧೃತಾ ಮತ್ಸ್ಯರೂಪೇಣ ವೇದಾ ಉದಧಿಮಧ್ಯತಃ ।
ಕೂರ್ಮರೂಪೀ ತಥಾ ಭೂತ್ವಾ ಕ್ಷೀರೋದಾರ್ಣವಮಂಥನಂ ॥ ೨೩ ॥
ಕೃತ್ವಾ ತ್ವಯಾ ಜಗನ್ನಾಥ ಉದ್ಧೃತಾ ಶ್ರೀರ್ನಮೋಽಸ್ತು ತೇ ।
ಶ್ರೀಪತಿಃ ಶ್ರೀಧರೋ ದೇವ ಆರ್ತಾನಾಮಾರ್ತಿನಾಶನಃ ॥ ೨೪ ॥

ಕಮಲಾಪ್ರಿಯನೆಂದೂ, ಐದನೆಯ ಕಲ್ಪದಲ್ಲಿ ದುಃಖಹರ್ತನೆಂದೂ, ಆರನೆಯ ಕಲ್ಪದಲ್ಲಿ ಪುರುಷೋತ್ತಮನೆಂದೂ, ಏಳನೆಯ ಕಲ್ಪದಲ್ಲಿ ಶ್ರೀದೈತ್ಯಸೂದನನೆಂದೂ ಪ್ರಸಿದ್ಧನಾಗಿರುವನು.

೨೦. ಇವನಿಗೆ ದೈತ್ಯಸೂದನನೆಂಬ ಹೆಸರಾಗಲು ಕಾರಣವನ್ನು ಹೇಳುತ್ತೇನೆ.

೨೧. ಹಿಂದೆ ದೇವಾಸುರಯುದ್ಧದಲ್ಲಿ ದೇವತೆಗಳ ಶತ್ರುಗಳಾದ ದಾನವರು ದೇವತೆಗಳನ್ನು ಸೋಲಿಸಲು ಆ ಸುರರು ಕ್ಷೀರಸಮುದ್ರವಾಸಿಯಾದ ನಾರಾಯಣನನ್ನು ಮರೆಹೊಕ್ಕು ನಮಸ್ಕರಿಸಿ ಹೀಗೆ ಸ್ತುತಿಸಿದರು.

೨೨. ದೇವತೆಗಳು ಹೇಳುತ್ತಾರೆ :—ಜಗದೊಡೆಯನೂ, ದೈತ್ಯ, ಅಸುರರನ್ನು ನಾಶಗೊಳಿಸುವವನೂ ಆದ ಓ ನಾರಾಯಣನೆ ! ನೀನು ವರಾಹರೂಪವನ್ನು ಧರಿಸಿ ಭೂಮಿಯನ್ನು ಉದ್ಧಾರಮಾಡಿರುವೆ.

೨೩–೨೪. ಮತ್ಸ್ಯರೂಪನಾಗಿ ಸಮುದ್ರದ ಮಧ್ಯದಿಂದ ವೇದವನ್ನು ಉದ್ಧರಿಸಿದೆ. ಕೂರ್ಮನಾಗಿ ಕ್ಷೀರಸಮುದ್ರವನ್ನು ಕಡೆದು ಲಕ್ಷ್ಮೀದೇವಿಯನ್ನು ಪಡೆದೆ. ಶ್ರೀಪತಿಯೂ, ದುಃಖಿತರ ದುಃಖವನ್ನು ಪರಿಹರಿಸುವವನೂ ಆದ ಎಲೈ ನಾರಾಯಣನೆ! ನಿನಗೆ ನಮಸ್ಕಾರವು.

ಬಲಿರ್ವಾಮನರೂಪೇಣ ತ್ವಯಾ ಬದ್ಧೋಽಸುರಾಽರಿಣಾ ।
ಹಿರಣ್ಯಾಕ್ಷೋ ಮಹಾದೈತ್ಯೋ ಹಿರಣ್ಯಕಶಿಪುರ್ಹತಃ ॥ ೨೫ ॥
ನಾರಸಿಂಹೇನ ರೂಪೇಣ ಅಂತರಿಕ್ಷೇ ಧೃತಸ್ತ್ವಯಾ ।
ದೇವಮೂಲ ಮಹಾದೇವ ಉದ್ಧೃತಂ ಭುವನಂ ತ್ವಯಾ ॥ ೨೬ ॥
ತ್ವಯಾ ವಿನಾ ಜಗನ್ನಾಥ ಭುವನಂ ನಿಷ್ಪ್ರಭೀಕೃತಂ ।
ಸೂರ್ಯೇಣೇವ ತು ವಿಕ್ರಾಂತಂ ತಮೋಭಿರಿವ ದಾನವೈಃ ॥ ೨೭ ॥
ಶ್ರುತ್ವಾ ಸ್ತೋತ್ರಮಿದಂ ದೇವಿ ವಿಷ್ಣುಃ ಕಮಲಲೋಚನಃ ।
ಉವಾಚ ದೇವಾನ್ ಬ್ರಹ್ಮಾದ್ಯಾನ್ ಕ್ಷೀರೋದಾರ್ಣವಬೋಧಿತಃ ॥ ೨೮ ॥
ಭಯಂ ತ್ಯಜಧ್ವಂ ವೈ ದೇವಾ ದಾನವಾನ್ ಪ್ರತಿ ಸರ್ವಥಾ ।
ಅಚಿರೇಣೈವ ಕಾಲೇನ ಘಾತಯಿಷ್ಯಾಮಿ ದಾನವಾನ್ ॥ ೨೯ ॥
ಏವಮುಕ್ತ್ವಾಽಥ ತೈಃ ಸಾರ್ಧಮಾಜಗಾಮ ಜನಾರ್ದನಃ ।
ದಾನವಾನ್ ಘಾತಯಾಮಾಸ ಸ ಚಕ್ರೇಣ ಪೃಥಕ್ ಪೃಥಕ್ ॥ ೩೦ ॥
ಭಯಾರ್ತಾ ದಾನವಾಃ ಸರ್ವೇ ಪಲಾಯನಪರಾಯಣಾಃ ।
ಪ್ರಭಾಸಂ ಕ್ಷೇತ್ರಮಾಸಾದ್ಯ ಸಮುದ್ರಾಽಭಿಮುಖಾ ಭವನ್ ॥ ೩೧ ॥

೨೫–೨೬. ಅಸುರಾಂತಕನಾದ ನೀನು ವಾಮನರೂಪದಿಂದ ಬಲಿಯನ್ನು ನಿಗ್ರಹಿಸಿರುವೆ. ಹಿರಣ್ಯಾಕ್ಷನನ್ನು ಕೊಂದಿರುವೆ. ನಾರಸಿಂಹರೂಪದಿಂದ ಅಂತರಿಕ್ಷದಲ್ಲಿ ಹಿರಣ್ಯಕಶಿಪುವನ್ನುವಧಿಸಿರುವೆ. ದೇವತೆಗಳಿಗೆ ಕಾರಣನಾದ ಎಲೈ ನಾರಾಯಣನೆ! ನೀನು ಹೀಗೆ ಭೂಲೋಕವನ್ನು ಉದ್ಧರಿಸಿರುವೆ.

೨೭. ಜಗನ್ನಾಥ ! ನೀನಿಲ್ಲದಿದ್ದರೆ ಪ್ರಪಂಚವು ಕಳೆಗುಂದುವುದು. ಕತ್ತಲೆಯಂತೆ ಆವರಿಸಿದ್ದ ದಾನವರನ್ನು ಸೂರ್ಯನಂತೆ ನಾಶಗೊಳಿಸಿದೆ.

೨೮. ದೇವಿ ! ಕಮಲಾಕ್ಷನಾದ ವಿಷ್ಣುವು ಈ ಸ್ತೋತ್ರವನ್ನು ಕೇಳಿ ಕ್ಷೀರಸಮುದ್ರದಿಂದೆದ್ದು ಬ್ರಹ್ಮಾದಿದೇವತೆಗಳನ್ನು ಕುರಿತು ಇಂತೆದನು.

೨೯. "ಎಲೈ ದಿವಿಜರೆ ! ನೀವು ದಾನವರಿಗೆ ಹೆದರಬೇಡಿರಿ. ನಾನು ಸ್ವಲ್ಪ ಕಾಲದಲ್ಲಿಯೇ ಅವರನ್ನು ಸಂಹರಿಸುವೆನು.

೩೦. ಆ ಮಹಾವಿಷ್ಣುವು ಹೀಗೆಂದು ಆ ದೇವತೆಗಳೊಡನೆ ದಾನವರೆಡೆಗೆ ಬಂದು ಅವರನ್ನು ಚಕ್ರದಿಂದ ಒಬ್ಬೊಬ್ಬನನ್ನೂ ಬೇರೆ ಬೇರೆಯಾಗಿ ಕೊಂದನು.

೩೧. ದಾನವರೆಲ್ಲ ಭಯಗೊಂಡು ಓಡುತ್ತ ಪ್ರಭಾಸಕ್ಷೇತ್ರಕ್ಕೆ ಬಂದು ಸಮುದ್ರಾಭಿಮುಖರಾದರು.

ನಶ್ಯಮಾನಾಸ್ತತೋ ದೃಷ್ಟ್ವಾ ದೈತ್ಯಾನ್ ದೈತ್ಯವಿನಾಶನಂ ।
ಸಂಜಘ್ನೇ ತಾನ್ ಸ ಚಕ್ರೇಣ ನಿಃಶೇಷಾನ್ ಸರ್ವದಾನವಾನ್ ॥ ೩೨ ॥
ಹತೇಷು ಸರ್ವದೈತ್ಯೇಷು ದೇವಬ್ರಾಹ್ಮಣತಾಪಸೈಃ ।
ಕಲ್ಯಾಣಮಭವತ್ತತ್ರ ಜಗತ್ಸ್ವಸ್ಥಮನಾಕುಲಂ ॥ ೩೩ ॥
ತತ್ಪ್ರಭೃತ್ಯೇವ ದೇವಸ್ಯ ದೈತ್ಯಸೂದನನಾಮ ತತ್ ।
ಏತನ್ಮಾಹಾತ್ಮ್ಯಮತುಲಂ ಕಥಿತಂ ತವ ಸುಂದರಿ ॥
ದೈತ್ಯಸೂದನದೇವಸ್ಯ ಮಹಾಭಾಗ್ಯಂ ಮಹೋದಯಂ ॥ ೩೪ ॥
ತಂ ದೃಷ್ಟ್ವಾ ನ ಜಡೋ ನಾಽಂಧೋ ನ ದರಿದ್ರೋ ನ ದುಃಖಿತಃ ।
ಜಾಯತೇ ಸಪ್ತ ಜನ್ಮಾನಿ ಸತ್ಯಂ ಸತ್ಯಂ ವರಾನನೇ ॥ ೩೫ ॥
ಶ್ರವಣದ್ವಾದಶೀಂ ಪುಣ್ಯಾಂ ರೋಹಿಣ್ಯಾಂ ಚಾಷ್ಟಮೀಂ ಶುಭಾಂ ।
ಶಯನೋತ್ಥಾಪನೀಂ ಚೈವ ನರಃ ಕೃತ್ವಾ ಪ್ರಯತ್ನತಃ ॥ ೩೬ ॥
ಏಕೈಕೇನೋಪವಾಸೇನ ಉಪವಾಸಾಽಯುತಂ ಫಲಂ ।
ಲಭತೇ ನಾಽತ್ರ ಸಂದೇಹೋ ದೈತ್ಯಸೂದನಸನ್ನಿಧೌ ॥ ೩೭ ॥
ಚಂಡಾಲಃ ಶ್ವಪಚೋ ವಾಽಪಿ ತಿರ್ಯಗ್ಯೋನಿಗತೋಽಪಿ ವಾ ।
ಪ್ರಾಣತ್ಯಾಗೇ ಕೃತೇ ತಸ್ಮಿನ್ನಾಚ್ಯುತಂ ಲೋಕಮಾಪ್ನುಯಾತ್ ॥ ೩೮ ॥

---

೩೨. ಆ ವಿಷ್ಣುವು ದೈತ್ಯರು ಅಡಗಿಹೋಗುತ್ತಿರುವುದನ್ನು ಕಂಡು ಅವರನ್ನೆಲ್ಲ ಚಕ್ರದಿಂದ ಸಂಹರಿಸಿದನು.

೩೩. ಹೀಗೆ ಶ್ರೀ ಮಹಾವಿಷ್ಣುವು ಸಮಸ್ತದೈತ್ಯರನ್ನೂ ಕೊಲ್ಲಲು ದೇವತೆಗಳು, ಬ್ರಾಹ್ಮಣರು, ಮುನಿಗಳು ಇವರೊಡನೆ ಪ್ರಪಂಚವು ಸುಖಗೊಂಡಿತು.

೩೪. ಸುಂದರಿ ! ಅದು ಮೊದಲ್ಗೊಂಡು ಆ ವಿಷ್ಣುವಿಗೆ ದೈತ್ಯಸೂದನನೆಂದು ಹೆಸರಾಯಿತು. ಹೀಗೆ ನಿನಗೆ ಆ ದೈತ್ಯಸೂದನನ ಮಹಾಭಾಗ್ಯವನ್ನೀಸಗುವ ಅಸದೃಶಮಾಹಾತ್ಮ್ಯವನ್ನು ಹೇಳಿರುವೆನು.

೩೫. ಪ್ರಿಯಳೆ ! ಆ ದೇವನನ್ನು ನೋಡಿದ ಮಾನವನು ಏಳು ಜನ್ಮಗಳಲ್ಲಿ ಮೂಢನೂ, ಕುರುಡನೂ, ಬಡವನೂ, ದುಃಖಿಗೊಂಡವನೂ ಆಗುವುದಿಲ್ಲ.

೩೬—೩೭. ಈ ದೈತ್ಯಸೂದನನ ಹತ್ತಿರ ಶ್ರವಣದ್ವಾದಶೀ, ರೋಹಿಣೀನಕ್ಷತ್ರ, ಅಷ್ಟಮಿ, ಶಯನೋತ್ಥಾನದ್ವಾದಶೀ ಇವುಗಳಲ್ಲೊಂದೊಂದು ಉಪವಾಸಮಾಡಿದವನು ಹತ್ತು ಸಾವಿರ ಉಪವಾಸಮಾಡಿದ ಫಲವನ್ನು ಪಡೆಯುವನು.

೩೮. ಅಲ್ಲಿ ಶ್ವಪಚರಾದ ಚಂಡಾಲರಾಗಲಿ, ಪಶುಪಕ್ಷಿಗಳಾಗಲಿ ಮೃತರಾದರೆ ವಿಷ್ಣುಲೋಕವನ್ನು ಪಡೆಯುವರು.

ಕಾರ್ತಿಕ್ಯಾಂ ಚೈವ ವೈಶಾಖ್ಯಾಂ ಮಾಸಮೇಕಮುಪೋಷಯೇತ್ ।
ದೈತ್ಯಸೂದನಮಧ್ಯಸ್ಥಃ ಸಮ್ಯಕ್ಛ್ರದ್ಧಾಸಮನ್ವಿತಃ ॥ ೩೯ ॥
ಏಕೈಕೇನೋಪವಾಸೇನ ಕೋಟಿಕೋಟಿ ಪೃಥಕ್ ಪೃಥಕ್ ।
ಲಭತೇ ತತ್ಫಲಂ ಸರ್ವಂ ವಿಷ್ಣುಕ್ಷೇತ್ರಪ್ರಭಾವತಃ ॥ ೪೦ ॥
ದೀಪಂ ದದಾತಿ ಯಸ್ತತ್ರ ಮಾಸಂ ವಾ ಪಕ್ಷಮೇವ ವಾ ।
ಏಕೈಕದೀಪದಾನೇನ ಕೋಟಿದೀಪಫಲಂ ಲಭೇತ್ ॥ ೪೧ ॥
ಪಂಚಾಮೃತೇನ ಸಂಸ್ನಾಪ್ಯ ದೇವದೇವಂ ಚತುರ್ಭುಜಂ ।
ಏಕಾದಶ್ಯಾಂ ನಿರಾಹಾರಃ ಪೂಜಯಿತ್ವಾಽಚ್ಯುತೋ ಭವೇತ್ ॥ ೪೨ ॥
ಚಾತುರ್ಮಾಸ್ಯಂ ವಿಧಾನೇನ ದೈತ್ಯಸೂದನಸನ್ನಿಧೌ ।
ನಿಯಮೇನ ಕ್ಷಿಪೇದ್ಯಸ್ತು ತಸ್ಯ ತುಷ್ಯತಿ ಕೇಶವಃ ॥ ೪೩ ॥
ಅನ್ಯಕ್ಷೇತ್ರೇಷು ಯತ್ಕೃತ್ವಾ ಚಾತುರ್ಮಾಸ್ಯಾನಿ ಕೋಟಿಶಃ ।
ತತ್ಫಲಂ ಲಭತೇ ಸರ್ವಂ ದೈತ್ಯಸೂದನದರ್ಶನಾತ್ ॥ ೪೪ ॥
ಬ್ರಹ್ಮಾಂಡಂ ಸಕಲಂ ದತ್ವಾ ಯತ್ಪುಣ್ಯಫಲಮಾಪ್ನುಯಾತ್ ।
ತತ್ಪುಣ್ಯಂ ಲಭತೇ ಸರ್ವಂ ದೈತ್ಯಸೂದನದರ್ಶನಾತ್ ॥ ೪೫ ॥

೩೯–೪೦. ಆ ದೈತ್ಯಸೂದನನ ಸನ್ನಿಧಿಯಲ್ಲಿ ಕಾರ್ತಿಕ, ವೈಶಾಖಮಾಸಗಳಲ್ಲಿ ಶ್ರದ್ಧೆಯಿಂದ ಉಪವಾಸಮಾಡಿದವನು ಒಂದೊಂದುಪವಾಸದಿಂದಲೂ, ಬೇರೆ ಬೇರೆಯಾಗಿ ವಿಷ್ಣುಕ್ಷೇತ್ರದ ಮಾಹಾತ್ಮ್ಯದಿಂದ ಕೋಟ್ಯುಪವಾಸಗಳ ಫಲವನ್ನು ಹೊಂದುವನು.

೪೧. ಅಲ್ಲಿ ಒಂದು ತಿಂಗಳಾಗಲಿ, ಪಕ್ಷವಾಗಲಿ ದೀಪದಾನವನ್ನು ಮಾಡಿದವನು ಒಂದೊಂದು ದೀಪದಾನದಿಂದ ಕೋಟಿ ದೀಪ ದಾನದ ಫಲವನ್ನು ಪಡೆಯುವನು.

೪೨. ಏಕಾದಶಿಯದಿನ ಉಪವಾಸಮಾಡಿ ವಿಷ್ಣುವನ್ನು ಪಂಚಾಮೃತದಿಂದ ಅಭಿಷೇಕಮಾಡಿ ಪೂಜಿಸಿದವನು ವಿಷ್ಣುವೇ ಆಗುವನು.

೪೩. ದೈತ್ಯಸೂದನನ ಬಳಿಯಲ್ಲಿ ಚಾತುರ್ಮಾಸ್ಯವನ್ನು ವಿಧಿಯಿಂದ ಆಚರಿಸಿದವನವಿಷಯದಲ್ಲಿ ವಿಷ್ಣುವು ಸಂತುಷ್ಟನಾಗುವನು.

೪೪. ಮನುಷ್ಯನು ಇತರ ಕ್ಷೇತ್ರಗಳಲ್ಲಿ ಕೋಟಿ ಚಾತುರ್ಮಾಸ್ಯವ್ರತಗಳನ್ನಾಚರಿಸಿದ ಫಲವನ್ನು ದೈತ್ಯಸೂದನನ ದರ್ಶನದಿಂದಲೇ ಪಡೆಯುತ್ತಾನೆ.

೪೫. ಸಕಲ ಬ್ರಹ್ಮಾಂಡವನ್ನೂ ದಾನಮಾಡಿದರೆ ಲಭಿಸುವ ಪುಣ್ಯವು ಆ ದೈತ್ಯಸೂದನನ ದರ್ಶನದಿಂದ ಲಭಿಸುವುದು.

ಏಕಾದಶ್ಯಾಂ ತು ಯಸ್ತತ್ರ ಕುರುತೇ ಜಾಗರಂ ನರಃ ।
ತತ್ರಸ್ಸೃತ್ತೈಸ್ತಥಾವಾದ್ಯೈಃ ಪ್ರೇಕ್ಷಣೀಯೈಸ್ತಥಾವಿಧೈಃ ।
ಸ ಯಾತಿ ವೈಷ್ಣವಂ ಲೋಕಂ ಯಂ ಗತ್ವಾ ನ ನಿರ್ವತತೇ ॥ ೪೬ ॥

ಹತ್ಯಾಽಯುತಾನೀಹ ಸುಸಂಚಿತಾನಿ
ಸ್ತೇಯಾನಿ ರುಕ್ಮಸ್ಯ ನ ಸಂತಿ ಸಂಖ್ಯಾ।
ನಿಹಂತಿ ಕೇನಾಽಪಿ ಪುರಾ ಕೃತಾನಿ
ಸರ್ವಾಣಿ ಭದ್ರಾ ನಿಶಿ ಜಾಗರೇಣ ॥ ೪೭ ॥

ಮಾರ್ಗಾ ನ ತೇ ಪ್ರೇತಪುರೀ ನ ದೂತಾ
ವನಂ ಚ ತತ್ ಖೇಚರಖಡ್ಗಪತ್ರಂ ।
ಸ್ವಪ್ನೇ ನ ಪಶ್ಯಂತಿ ಚ ತೇ ಮನುಷ್ಯಾ
ಯೇಷಾಂ ಗತಾ ಜಾಗರಣೇನ ಭದ್ರಾ ॥ ೪೮ ॥

ಕನ್ಯಾಸಹಸ್ರಂ ವಿಧಿವದ್ದದಾತಿ
ರತ್ನೈರಲಂಕೃತ್ಯ ಸ್ವಧರ್ಮಬುದ್ಧ್ಯಾ ।
ಗವಾಂ ಸಹಸ್ರಂ ಕುರುಜಾಂಗಲೇ ತು
ತೇಷಾಂ ಪರಂ ಜಾಗರಣೇನ ವಿಷ್ಣೋಃ ॥ ೪೯ ॥

ಕೃತ್ವಾ ಚೈವೋಪವಾಸಂ ಚ ಯೋಽಶ್ನಾತಿ ದ್ವಾದಶೀ ದಿನೇ ।
ನೈವೇದ್ಯಂ ತುಲಸೀಮಿಶ್ರಂ ಹತ್ಯಾಕೋಟಿವಿನಾಶನಂ ॥ ೫೦ ॥

---

೪೬. ಏಕಾದಶಿಯದಿನ ಸಂಗೀತ, ನೃತ್ಯ, ವಾದ್ಯ, ಅಭಿನಯಗಳಿಂದ ಅಲ್ಲಿ ಜಾಗರಣೆಮಾಡಿದವನು ಶಾಶ್ವತವಾದ ವಿಷ್ಣು ಲೋಕವನ್ನು ಪಡೆಯುವನು.

೪೭. ಇಲ್ಲಿ ದ್ವಾದಶಿಯ ರಾತ್ರಿಜಾಗರಣೆ ಮಾಡುವುದರಿಂದ ಹತ್ತು ಸಾವಿರ ಬ್ರಹ್ಮಹತ್ಯೆಗಳೂ, ಅಸಂಖ್ಯಾತಸ್ವರ್ಣಸ್ತೇಯಗಳೂ ಸಂಪೂರ್ಣವಾಗಿ ಪರಿಹಾರವಾಗುವುವು.

೪೮. ಜಾಗರಣೆಯಿಂದ ದ್ವಾದಶಿಯರಾತ್ರಿಯನ್ನು ಕಳೆದ ಮನುಷ್ಯರು ಯಮಪುರಿಯ ದಾರಿಯನ್ನೂ, ಯಮನ ದೂತರನ್ನೂ, ಅಸಿಪತ್ರವನವೆಂಬ ನರಕವನ್ನೂ ಸ್ವಪ್ನದಲ್ಲಿಯೂ ಸಹ ಕಾಣುವುದಿಲ್ಲ.

೪೯. ಧರ್ಮಬುದ್ಧಿಯಿಂದ ಶಾಸ್ತ್ರವನ್ನನುಸರಿಸಿ ರತ್ನಗಳಿಂದಲಂಕರಿಸಿ ಸಾವಿರ ಕನ್ಯೆಯರನ್ನು ದಾನಮಾಡುವುದು, ಕುರುಜಾಂಗಲದಲ್ಲಿ ಸಾವಿರ ಗೋದಾನ ಮಾಡುವುದು ಇವುಗಳಿಗಿಂತ ದೈತ್ಯಸೂದನನ ಸನ್ನಿಧಿಯಲ್ಲಿ ಜಾಗರಣೆ ಮಾಡುವುದು ಅಧಿಕವಾದುದು.

೫೦. ಏಕಾದಶಿಯದಿನ ಉಪವಾಸಮಾಡಿ ದ್ವಾದಶೀದಿನ ತುಲಸೀಸಹಿತವಾದ ವಿಷ್ಣುವಿನ ನೈವೇದ್ಯವನ್ನು ಭುಜಿಸುವುದರಿಂದ ಕೋಟಿ ಬ್ರಹ್ಮಹತ್ಯೆಗಳು ನಾಶವಾಗುವುವು.

ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ದೈತ್ಯಸೂದನದೇವಸ್ಯ ಕಿಮನ್ಯತ್ಪರಿಪೃಚ್ಛಸಿ ॥ ೫೧ ॥
ಪೀತವಸ್ತ್ರಾಣಿ ದೇವಸ್ಯ ಗಾಂ ಹಿರಣ್ಯಂ ಚ ದಾಪಯೇತ್ ।
ಸ್ನಾತ್ವಾ ಚಕ್ರವರೇ ತೀರ್ಥೇ ಮುಚ್ಯತೇ ಸರ್ವಪಾತಕಾತ್ ॥ ೫೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀ ದೈತಸೂದನಮಾಹಾತ್ಮ್ಯವರ್ಣನಂ ನಾಮ
ಏಕಾಽಶೀತಿತಮೋಽಧ್ಯಾಯಃ ॥

---

೫೧. ದೇವಿ ! ಹೀಗೆ ನಿನಗೆ ಪಾಪವನ್ನು ಪರಿಹರಿಸುವ ದೈತ್ಯಸೂದನನ ಮಾಹಾತ್ಮ್ಯವನ್ನು ಹೇಳಿರುವೆನು. ಬೇರೆ ಇನ್ನೇನನ್ನು ಕೇಳುವೆ ?

೫೨. ಶ್ರೇಷ್ಠವಾದ ಚಕ್ರತೀರ್ಥದಲ್ಲಿ ಮಿಂದು ದೈತ್ಯಸೂದನನಿಗೆ ಪೀತಾಂಬರಗಳನ್ನೂ, ಗೋವನ್ನೂ, ಚಿನ್ನವನ್ನೂ ದಾನಮಾಡಿದವನು ಸಕಲ ಪಾಪಗಳಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶ್ರೀದೈತ್ಯಸೂದನಮಾಹಾತ್ಮ್ಯವರ್ಣನವೆಂಬ
ಎಂಬತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವ್ಯಶೀತಿತಮೋಽಧ್ಯಾಯಃ

ಚಕ್ರತೀರ್ಥೋತ್ಪತ್ತಿವೃತ್ತಾಂತವರ್ಣನಂ

ದೇವ್ಯುವಾಚ :—

ಚಕ್ರತೀರ್ಥೇತಿ ಕಿಂ ನಾಮ ತ್ವಯಾ ಪ್ರೋಕ್ತಂ ವೃಷಧ್ವಜ ।
ಕುತ್ರ ತಿಷ್ಠತಿ ತತ್ತೀರ್ಥಂ ಕಿಂ ಪ್ರಭಾವಂ ವದಸ್ವ ಮೇ ॥ ೧ ॥

ಈಶ್ವರ ಉವಾಚ :—

ಪುರಾ ದೇವಾಽಸುರೇ ಯುದ್ಧೇ ಹತ್ವಾ ದೈತ್ಯಾನ್ ಜನಾರ್ದನಃ ।
ಚಕ್ರಂ ಪ್ರಕ್ಷಾಲಯಾಮಾಸ ತತ್ರ ವೈ ರಕ್ತರಂಜಿತಂ ॥ ೨ ॥
ಅಷ್ಟಕೋಟಿಸುತೀರ್ಥಾನಿ ತತ್ರಾನೀಯ ಸ್ವಯಂ ಹರಿಃ ।
ತೀರ್ಥೇ ಪ್ರಕಲ್ಪಯಾಮಾಸ ಶುದ್ಧಿಂ ಕೃತ್ವಾ ಸುದರ್ಶನೇ ।
ತೀರ್ಥಸ್ಯ ಚಕ್ರೇ ನಾಮಾಽಪಿ ಚಕ್ರತೀರ್ಥಮಿತಿ ಶ್ರುತಂ ॥ ೩ ॥
ಅಷ್ಟಾಽಯುತಾನಿ ತೀರ್ಥಾನಾಮಷ್ಟೌ ಕೋಟ್ಯಸ್ತಥೈವ ಚ ।
ತತ್ರ ಸಂತಿ ಮಹಾದೇವಿ ಚಕ್ರತೀರ್ಥೇನ ಸಂಶಯಃ ॥ ೪ ॥
ಯಸ್ತತ್ರ ಕುರುತೇ ಸ್ನಾನಮೇಕಚಿತ್ತೋ ನರೋತ್ತಮಃ ।
ಸರ್ವತೀರ್ಥಾಽಭಿಷೇಕಸ್ಯ ಸ ಪ್ರಾಪ್ನೋತ್ಯಖಿಲಂ ಫಲಂ ॥ ೫ ॥

ಕನ್ನಡದ ಅನುವಾದ

ಚಕ್ರತೀರ್ಥೋತ್ಪತ್ತಿವೃತ್ತಾಂತವರ್ಣನ

೧. ದೇವಿಯು ಹೇಳುತ್ತಾಳೆ :—ಶಂಕರ! ಚಕ್ರತೀರ್ಥದ ಹೆಸರನ್ನು ಹೇಳಿದೆಯಷ್ಟೆ. ಆ ತೀರ್ಥವು ಎಲ್ಲಿರುವುದು? ಅದು ಎಂತಹ ಮಾಹಾತ್ಮ್ಯವುಳ್ಳದು? ಅದನ್ನು ನನಗೆ ಹೇಳು.

೨–೩. ಈಶ್ವರನು ಹೇಳುತ್ತಾನೆ :—ಹಿಂದೆ ವಿಷ್ಣುವು ದೇವಾಸುರಯುದ್ಧದಲ್ಲಿ ದೈತ್ಯರನ್ನು ಕೊಂದು ಆ ತೀರ್ಥದಲ್ಲಿ ಎಂಟು ಕೋಟಿ ತೀರ್ಥಗಳನ್ನು ತಂದಿರಿಸಿ ರಕ್ತಸಿಕ್ತವಾದ ತನ್ನ ಚಕ್ರವನ್ನು ಅಲ್ಲಿ ತೊಳೆದು ಅದಕ್ಕೆ ಚಕ್ರತೀರ್ಥವೆಂದು ಹೆಸರನ್ನಿಟ್ಟನು.

೪. ದೇವಿ! ಆ ಚಕ್ರತೀರ್ಥದಲ್ಲಿ ಎಂಟು ಕೋಟಿ ಎಂಬತ್ತು ಸಾವಿರ ತೀರ್ಥಗಳು ಸನ್ನಿಹಿತವಾಗಿರುವುವು.

೫. ಅಲ್ಲಿ ಒಮ್ಮನಸ್ಸಿನಿಂದ ಮಿಂದ ಮಾನವನು ಸಕಲತೀರ್ಥಗಳಲ್ಲಿಯೂ ಮಿಂದ ಫಲವನ್ನು ಪಡೆಯುವನು.

ತೀರ್ಥಾನಾಮಷ್ಟಕೋಟಿಸ್ತು ನಿವಸಂತಿ ವರಾನನೇ ।
ಏಕಾದಶ್ಯಾಂ ವಿಶೇಷೇಣ ಚಂದ್ರಸೂರ್ಯಗ್ರಹೇ ತಥಾ ॥ ೬ ॥
ತತ್ರ ಸ್ನಾತ್ವಾ ಮಹಾದೇವಿ ಯಜ್ಞಕೋಟಿಫಲಂ ಲಭೇತ್ ।
ತಸ್ಯೈವ ಕಲ್ಪನಾಮಾನಿ ಶೃಣು ತೇ ಕಥಯಾಮ್ಯಹಂ ॥ ೭ ॥
ಕೋಟಿತೀರ್ಥಂ ಪೂರ್ವಕಲ್ಪೇ ಶ್ರೀನಿದಾನಂ ದ್ವಿತೀಯಕೇ ।
ತೃತೀಯೇ ಶತಧಾರಂ ಚ ಚಕ್ರತೀರ್ಥಂ ಚತುರ್ಥಕೇ ॥ ೮ ॥
ಏವಂ ತೇ ಕಲ್ಪನಾಮಾನಿ ಹ್ಯತೀತಾನ್ಯಖಿಲಾನಿ ವೈ ।
ಕಥಿತಾನ್ಯೇವಮನ್ಯಾನಿ ಜ್ಞೇಯಾನಿ ವಿಬುಧೈಃ ಕ್ರಮಾತ್ ॥ ೯ ॥
ತತ್ರ ಯದ್ದೀಯತೇ ದಾನಂ ತಸ್ಯ ಸಂಖ್ಯಾ ನ ವಿದ್ಯತೇ ।
ಅರ್ಧಕ್ರೋಶಪ್ರಮಾಣಂ ಹಿ ವಿಷ್ಣುಕ್ಷೇತ್ರಂ ಪ್ರಕೀರ್ತಿತಂ ॥ ೧೦ ॥
ಬ್ರಹ್ಮಹತ್ಯಾ ನೋಪಸರ್ಪೇತ್ತತ್ಸತ್ಯಮೇತನ್ಮಯೋದಿತಂ ।
ಮಾಸೋಪವಾಸೀ ತತ್ಕ್ಷೇತ್ರೇ ಅಗ್ನಿಹೋತ್ರೀ ಯತವ್ರತಃ ॥ ೧೧ ॥
ಸ್ವಾಧ್ಯಾಯೀ ಯಜ್ಞಯಾಜೀ ಚ ತಪಶ್ಚಾಂದ್ರಾಯಣಾದಿಕಂ ।
ತಿಲೋದಕಂ ಪಿತೄಣಾಂ ಚ ಶ್ರಾದ್ಧಂ ಚ ವಿಧಿಪೂರ್ವಕಂ ॥ ೧೨ ॥
ಏಕರಾತ್ರಂ ತ್ರಿರಾತ್ರಂ ವಾ ಕೃಚ್ಛ್ರಂ ಸಾಂತಪನಂ ತಥಾ ।
ಮಾಸೋಪವಾಸಂ ತಚ್ಚೈವ ಅನ್ಯದ್ವಾ ಪುಣ್ಯಕರ್ಮ ತತ್ ॥ ೧೩ ॥

೬–೭. ಪ್ರಿಯಳೆ! ಅಲ್ಲಿ ಎಂಟು ಕೋಟಿ ತೀರ್ಥಗಳು ನೆಲೆಸಿರುವುವು. ಏಕಾದಶಿಯ ದಿನವೂ, ಚಂದ್ರಸೂರ್ಯರ ಗ್ರಹಣಕಾಲದಲ್ಲಿಯೂ ಅಲ್ಲಿ ಮಿಂದರೆ ಕೋಟಿ ಯಜ್ಞಗಳ ಫಲವು ಲಭಿಸುವುದು. ಇತರ ಕಲ್ಪಗಳಲ್ಲಿದ್ದ ಅದರ ಹೆಸರುಗಳನ್ನು ಹೇಳುವೆನು. ಕೇಳು.

೮. ಮೊದಲನೆಯ ಕಲ್ಪದಲ್ಲಿ ಕೋಟಿತೀರ್ಥವೆಂದೂ, ಎರಡನೆಯ ಕಲ್ಪದಲ್ಲಿ ಶ್ರೀನಿದಾನವೆಂದೂ, ಮೂರನೆಯ ಕಲ್ಪದಲ್ಲಿ ಶತಧಾರವೆಂದೂ, ನಾಲ್ಕನೆಯ ಕಲ್ಪದಲ್ಲಿ ಚಕ್ರತೀರ್ಥವೆಂದೂ, ಆ ತೀರ್ಥಕ್ಕೆ ಹೆಸರಾಗಿರುವುದು.

೯. ಹೀಗೆ ನಿನಗೆ ಹಿಂದಿನ ಕಲ್ಪಗಳ ಸಮಸ್ತ ನಾಮಗಳನ್ನೂ ಹೇಳಿರುವೆನು. ವಿದ್ವಾಂಸರು ಹೀಗೆಯೇ ಇತರ ಹೆಸರುಗಳನ್ನೂ ತಿಳಿಯತಕ್ಕದು.

೧೦. ಅಲ್ಲಿ ಮಾಡಿದ ದಾನವು ಅಸಂಖ್ಯಾತವಾಗುವುದು. ಆ ಕ್ಷೇತ್ರವು ಒಂದು ಮೈಲಿ ವಿಸ್ತೀರ್ಣವಾಗಿರುವುದು.

೧೧–೧೪. ಬ್ರಹ್ಮಹತ್ಯೆಯು ಆ ತೀರ್ಥವನ್ನು ಸಮೀಪಿಸುವುದಿಲ್ಲ. ಅಲ್ಲಿ ಮಾಡಿದ ಮಾಸೋಪವಾಸ, ಅಗ್ನಿಹೋತ್ರ, ವೇದಾಧ್ಯಯನ, ಯಜ್ಞ, ಚಾಂದ್ರಾಯಣಾದಿ ತಪಸ್ಸು, ಪಿತೃಗಳಿಗೆ ತಿಲತರ್ಪಣ, ಶ್ರಾದ್ಧ, ಏಕಾರಾತ್ರ, ಅಥವಾ ತ್ರಿರಾತ್ರ

ದೈತ್ಯಾರಿಕ್ಷೇತ್ರಮಾಸಾದ್ಯ ಯತ್ಕಿಂಚಿತ್ಕುರುತೇ ನರಃ
ಅನ್ಯಕ್ಷೇತ್ರಾತ್ಕೋಟಿಗುಣಂ ಪುಣ್ಯಂ ಭೂಯಾನ್ನ ಸಂಶಯಃ ॥ ೧೪ ॥
ಸುದರ್ಶನೇ ವರೇ ತೀರ್ಥೇ ಗೋದಾನಂ ತತ್ರ ದಾಪಯೇತ್ ।
ಸಮ್ಯಗ್ಯಾತ್ರಾಫಲಪ್ರೇಪ್ಸುಃ ಸರ್ವಪಾಪವಿಶುದ್ಧಯೇ ॥ ೧೫ ॥
ಚಂಡಾಲಃ ಶ್ವಪಚೋ ವಾಽಪಿ ತಿರ್ಯಗ್ಯೋನಿಗತಸ್ತಥಾ ।
ತಸ್ಮಿಂಸ್ತೀರ್ಥೇ ಮೃತಃ ಸಮ್ಯಗಾಚ್ಯುತಂ ಲೋಕಮಾಪ್ನುಯಾತ್ ॥ ೧೬ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಚಕ್ರತೀರ್ಥಸಮುದ್ಭವಂ ।
ಮಾಹಾತ್ಮ್ಯಂ ಸರ್ವಪಾಪಘ್ನಂ ಸರ್ವಕಾಮಫಲಪ್ರದಂ ॥ ೧೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಕ್ರತೀರ್ಥೋತ್ಪತ್ತಿವೃತ್ತಾಂತ ವರ್ಣನಂ ನಾಮ
ದ್ವ್ಯಶೀತಿತಮೋಽಧ್ಯಾಯಃ

ಕೃಚ್ಛ್ರ, ಸಾಂತಪನಗಳನ್ನು, ಮಾಡವುದರಿಂದ ಉಂಟಾದ ಪುಣ್ಯಗಳು ಇತರ ಕ್ಷೇತ್ರದಲ್ಲಿ ಮಾಡುವುದಕ್ಕಿಂತ ಕೋಟಿಯಷ್ಟಾಗುವುದು.

೧೫. ಯಾತ್ರಾಫಲವನ್ನು ಬಯಸುವವನು ಆ ಚಕ್ರತೀರ್ಥದಲ್ಲಿ ಸಕಲ ಪಾಪಶುದ್ಧಿಗಾಗಿ ಗೋವನ್ನು ದಾನಮಾಡಬೇಕು.

೧೬. ಚಂಡಾಲನಾಗಲಿ, ಪಶುಪಕ್ಷಿಗಳಾಗಲಿ ಆ ತೀರ್ಥದಲ್ಲಿ ಮೃತರಾದರೆ ವಿಷ್ಣುಲೋಕವನ್ನು ಪಡೆಯುವರು.

೧೭. ಹೀಗೆ ಸಕಲ ಪಾಪವನ್ನು ಪರಿಹರಿಸುವುದೂ ಸಮಸ್ತೇಷ್ಟಾರ್ಥಗಳನ್ನು ನೀಡುವುದೂ ಆದ ಈ ಚಕ್ರತೀರ್ಥದ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಕ್ರತೀರ್ಥೋತ್ಪತ್ತಿವೃತ್ತಾಂತ ವರ್ಣನವೆಂಬ
ಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರ್ಯಶೀತಿತಮೋಽಧ್ಯಾಯಃ

ಯೋಗೇಶ್ವರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಯ ಪೂರ್ವೇಣ ಸಂಸ್ಥಿತಾಂ ।
ಯೋಗೇಶ್ವರೀಂ ಮಹಾದೇವೀಂ ಯೋಗಸಿದ್ಧಿಫಲಪ್ರದಾಂ ॥ ೧ ॥
ತದುತ್ಪತ್ತಿಂ ಪ್ರವಕ್ಷ್ಯಾಮಿ ಶೃಣು ಶ್ರದ್ಧಾಸಮನ್ವಿತಾ ।
ಪುರಾ ದಾನವಶಾರ್ದೂಲೋ ಮಹಿಷಾಖ್ಯೋ ಮಹಾಬಲಃ ॥ ೨ ॥
ಬಭೂವ ಪ್ರವರೋ ದೇವಿ ಸರ್ವದೇವಭಯಂಕರಃ ।
ಕಾಮರೂಪೀ ಚ ಲೋಕಾಂಸ್ತ್ರೀನ್ ವಶೀಕೃತ್ವಾಽಭವತ್ಸುಖೀ ॥ ೩ ॥
ಕಸ್ಮಿಂಶ್ಚಿದಥ ಕಾಲೇ ತು ಬ್ರಹ್ಮಣಾ ಲೋಕಕಾರಿಣಾ ।
ಸೃಷ್ಟಾ ಮನೋಹರಾ ಕನ್ಯಾ ರೂಪೇಣಾಪ್ರತಿಮಾ ದಿವಿ ॥ ೪ ॥
ಅತಪತ್ಸಾ ತಪೋ ಘೋರಂ ಕನ್ಯಾ ರೂಪವತೀ ಸತೀ ।
ನಾರದೇನ ತತೋ ದೃಷ್ಟಾ ಸಾ ಕದಾಚಿದ್ವರಾನನೇ ॥ ೫ ॥

ಕನ್ನಡದ ಅನುವಾದ

ಯೋಗೇಶ್ವರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಆ ಚಕ್ರತೀರ್ಥದ ಪೂರ್ವದಿಕ್ಕಿನಲ್ಲಿರುವ ಯೋಗಸಿದ್ಧಿಯನ್ನೀಯುವ ಯೋಗೇಶ್ವರೀ ಮಹಾದೇವಿಯೆಡೆಗೆ ಹೋಗಬೇಕು.

೨–೩. ಆ ದೇವಿಯು ಹುಟ್ಟಿದ ಕ್ರಮವನ್ನು ಹೇಳುವೆನು. ಶ್ರದ್ಧೆಯಿಂದ ಕೇಳು. ಹಿಂದೆ ಅತಿಬಲಿಷ್ಠನೂ, ಸಮಸ್ತ ದೇವತೆಗಳಿಗೆ ಭಯವನ್ನುಂಟು ಮಾಡುವವನೂ, ಸ್ವೇಚ್ಛಾರೂಪಿಯೂ ಆದ ಮಹಿಷನೆಂಬ ದಾನವನು ಮೂರು ಲೋಕಗಳನ್ನು ವಶ ಮಾಡಿಕೊಂಡು ಸುಖದಿಂದಿದ್ದನು.

೪. ಅನಂತರ ಒಂದಾನೊಂದು ಕಾಲದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನು ದೇವಲೋಕ ದಲ್ಲಿ ಅತಿಸುಂದರಿಯೂ, ಮನೋಹರಳೂ ಆದ ಕನ್ಯೆಯೋರ್ವಳನ್ನು ಸೃಷ್ಟಿಸಿದನು.

೫. ಆ ಸುಂದರಿಯಾದ ಕನ್ಯೆಯು ಘೋರ ತಪಸ್ಸನ್ನಾಚರಿಸಿದಳು. ಪ್ರಿಯಳೆ! ಒಂದಾನೊಂದು ದಿನ ಅವಳನ್ನು ನಾರದ ಮಹಾಮುನಿಯು ನೋಡಿದನು.

ತತಃ ಸ ಸಹಸಾ ದೇವಿ ವಿಸ್ಮಯಂ ಪರಮಂ ಗತಃ ।
ಅಹೋ ರೂಪಮಹೋ ಧೈರ್ಯಮಹೋ ಕಾಂತಿರಹೋ ವಯಃ ॥ ೬ ॥
ಇತ್ಯೇವಂ ಚಿಂತಯಂಸ್ತತ್ರ ನಾರೀಂ ವಚನಮಬ್ರವೀತ್ ।
ಕುರುಷ್ವಾತ್ಮಪ್ರದಾನಂ ಮೇ ನ ಮೇ ದಾರಪರಿಗ್ರಹಃ ।
ತವಾಽಹಂ ದರ್ಶನಾದ್ದೇವಿ ಕಾಮಬಾಣೇನ ಪೀಡಿತಃ ॥ ೭ ॥
ಸಾಽಬ್ರವೀನ್ನ ಹಿ ಮೇ ಕಾರ್ಯಂ ಕಾಮಧರ್ಮೇಣ ಸತ್ತಮ ।
ಕೌಮಾರಂ ವ್ರತಮಾಸಾದ್ಯ ಸಾಧಯಿಷ್ಯೇ ಯಥೇಪ್ಸಿತಂ ॥ ೮ ।
ನ ಚ ಮನ್ಯುಸ್ತ್ವಯಾ ಕಾರ್ಯೋ ಹ್ಯಸ್ಮಿನ್ನರ್ಥೇ ಕಥಂಚನ ।
ತಸ್ಯಾಸ್ತದ್ವಚನಂ ಶ್ರುತ್ವಾ ಸ ಮುನಿರ್ನಾರದಃ ಪ್ರಿಯೇ ॥ ೯ ॥
ಸಮುದ್ರಾಂತೇಽಗಮದ್ದಿವ್ಯಾಂ ಪುರೀಂ ಮಹಿಷಪಾಲಿತಾಂ ।
ಅರ್ಚಿತೋ ಹಿ ಮುನಿಸ್ತೇನ ಮಹಿಷೇಣ ಮಹಾತ್ಮನಾ ॥ ೧೦ ॥
ಪೃಷ್ಟ್ವಾ ಹ್ಯನಾಮಯಂ ದೇವಿ ದತ್ವಾ ಚಾರ್ಘ್ಯಮನುತ್ತಮಂ ।
ಸೋಽಬ್ರವೀತ್ಪ್ರಾಂಜಲಿರ್ಭೂತ್ವಾ ಕಿಮಾಗಮನಕಾರಣಂ ।
ಬ್ರೂಹಿ ಯತ್ತೇ ವ್ಯವಸಿತಂ ಸರ್ವಂ ಕರ್ತಾಽಸ್ಮಿ ನಾರದ ॥ ೧೧ ॥

೬–೭. ಅವನು ಕೂಡಲೆ ವಿಸ್ಮಯಗೊಂಡು ಅವಳ ರೂಪ, ಧೈರ್ಯ, ಕಾಂತಿ, ವಯಸ್ಸುಗಳು ಅದ್ಭುತವಾದುವೆಂದಾಲೋಚಿಸುತ್ತ ಅವಳನ್ನು ಕುರಿತು "ನಾನಿನ್ನೂ ಮದುವೆ ಮಾಡಿಕೊಂಡಿಲ್ಲ. ನೀನು ನನ್ನನ್ನು ವರಿಸು. ನಿನ್ನನ್ನು ನೋಡಿ ನಾನು ಕಾಮಪೀಡಿತನಾಗಿದ್ದೇನೆ." ಎಂದನು.

೮. ಅವಳು "ಮುನಿವರ್ಯನೆ! ನನಗೆ ಕಾಮದಿಂದ ಪ್ರಯೋಜನವಿಲ್ಲ. ನಾನು ಕುಮಾರೀ ವ್ರತವನ್ನು ಹೊಂದಿ ನನ್ನ ಅಭೀಪ್ಸಿತವನ್ನು ಈಡೇರಿಸಿಕೊಳ್ಳುವೆನು.

೯–೧೧. ಈ ವಿಷಯದಲ್ಲಿ ನೀನು ಕುಪಿತನಾಗಬೇಡ." ಎಂದಳು. ತರುವಾಯ ನಾರದನು ಅವಳ ಆ ಮಾತನ್ನು ಕೇಳಿ ಸಮುದ್ರದ ಮಧ್ಯದಲ್ಲಿರುವ ಮಹಿಷಾಸುರನ ಪಟ್ಟಣಕ್ಕೆ ಹೋದನು. ಮಹಾತ್ಮನಾದ ಮಹಿಷನು ಆ ನಾರದನನ್ನು ಕುಶಲ ಪ್ರಶ್ನೆ ಮಾಡಿ ಅವನಿಗೆ ಅರ್ಘ್ಯವನ್ನಿತ್ತು ಪೂಜಿಸಿ ಕೈಮುಗಿದುಕೊಂಡು "ಮುನಿಯೆ! ನೀವು ಇಲ್ಲಿಗೆ ಬರಲು ಕಾರಣವೇನು? ನಿಮ್ಮ ಮನಸ್ಸಿನಲ್ಲಿರುವುದನ್ನು ಹೇಳಿರಿ ಅದನ್ನು ನೆರವೇರಿಸುವೆನು" ಎಂದನು.

ಅಥೋವಾಚ ಮುನಿಸ್ತತ್ರ ಮಹಿಷಂ ದಾನವೇಶ್ವರಂ ।
ಕನ್ಯಾರತ್ನಂ ಸಮುತ್ಪನ್ನಂ ಜಂಬೂದ್ವೀಪೇ ಮಹಾಸುರ ॥ ೧೨ ॥
ಸ್ವರ್ಗೇ ಮರ್ತ್ಯೇ ಚ ಪಾತಾಲೇ ನ ದೃಷ್ಟಂ ನ ಚ ಮೇ ಶ್ರುತಂ ।
ತಾದೃಗ್ರೂಪಮಹಂ ಯೇನ ಕಾಮಬಾಣವಶೀಕೃತಃ ॥ ೧೩ ॥
ಸ ಶ್ರುತ್ವಾ ವಚನಂ ತಸ್ಯ ಕಾಮಸ್ಯೋತ್ಪಾದನಂ ಪರಂ ।
ಜಗಾಮ ಯತ್ರ ಸಾ ಸಾಧ್ವೀ ಕ್ಷೇತ್ರಂ ಪ್ರಾಭಾಸಿಕೇ ಸ್ಥಿತಾ ॥ ೧೪ ॥
ತಾಮೇವ ಪ್ರಾರ್ಥಯಾಮಾಸ ಬಲೇನ ಮಹತಾ ವೃತಃ ।
ಭಾರ್ಯಾ ಮೇ ಭವ ತ್ವಂ ಭೀರು ಭುಂಕ್ಷ್ವ ಭೋಗಾನ್ಮನೋರಮಾನ್ ।
ಏತತ್ತಪೋ ಮಹಾಭಾಗೇ ವಿರುದ್ಧಂ ಯೌವನಸ್ಯ ತೇ ।
ತಸ್ಯ ತದ್ವಚನಂ ಶ್ರುತ್ವಾ ಜಹಾಸ ವರವರ್ಣಿನೀ ।
ತಸ್ಯಾ ಹಸಂತ್ಯಾ ದೇವೇಶಿ ಶತಶೋಽಥ ಸಹಸ್ರಶಃ ॥ ೧೬ ॥
ನಿಃಶ್ವಾಸಾತ್ಸಹಸಾ ನಾರ್ಯಃ ಶಸ್ತ್ರಹಸ್ತಾ ಭಯಾನಕಾಃ ।
ತಾಭಿರ್ನಿರ್ಧ್ವಂಸಿತಂ ಸೈನ್ಯಂ ಮಹಿಷಸ್ಯ ದುರಾತ್ಮನಃ ॥ ೧೭ ॥

೧೨–೧೩. ತರುವಾಯ ನಾರದನು ಮಹಿಷನನ್ನು ಕುರಿತು "ಜಂಬೂದ್ವೀಪದಲ್ಲಿ ಓರ್ವ ಉತ್ತಮ ಕನ್ಯೆಯು ಜನಿಸಿರುವಳು. ನಾನು ಸ್ವರ್ಗ, ಮರ್ತ್ಯ ಪಾತಾಳ ಲೋಕದಲ್ಲಿ ಕಾಣದ ಅವಳ ಸೌಂದರ್ಯವನ್ನು ನೋಡಿ ಕಾಮಶರಪರವಶನಾದೆನು" ಎಂದನು.

೧೪. ಆ ಮಹಿಷ ದಾನವನು ಕಾಮವನ್ನುಂಟುಮಾಡುವ ಆ ನಾರದನ ಮಾತನ್ನು ಕೇಳಿ ಆ ಸಾಧ್ವೀ ಮಣಿಯಿರುವ ಪ್ರಾಭಾಸಿಕ ಕ್ಷೇತ್ರಕ್ಕೆ ಹೋದನು.

೧೫. ಅಲ್ಲಿ ಮಹಾಬಲಗಳಿಂದ ಸಹಿತನಾದ ಅವನು ಆ ಕನ್ಯೆಯನ್ನು ಕುರಿತು "ಎಲೌ ಅಂಗನೆಯೆ! ನೀನು ನನಗೆ ಪತ್ನಿಯಾಗಿ ಮನೋಹರವಾದ ಭೋಗಗಳನ್ನನುಭವಿಸು. ಭಾಗ್ಯಶಾಲಿನಿಯೆ! ಈ ತಪಸ್ಸು ನಿನ್ನ ಯೌವನಕ್ಕೆ ವಿರುದ್ಧವಾದುದು" ಎಂದು ಪ್ರಾರ್ಥಿಸಿದನು.

೧೬–೧೭. ಆ ಕನ್ಯೆಯು ಅವನ ಮಾತನ್ನು ಕೇಳಿ ನಕ್ಕಳು? ಅವಳು ನಗುತ್ತಿರುವಾಗ ಅವಳ ಉಸಿರಿನಿಂದ ಸಾವಿರಾರು ಮಂದಿ ಶಸ್ತ್ರಗಳನ್ನು ಹಿಡಿದು ಭಯಂಕರರಾಗಿರುವ ಹೆಂಗಸರು ಹುಟ್ಟಿ ದುರಾತ್ಮನಾದ ಆ ಮಹಿಷಾಸುರನ ಸೈನ್ಯವನ್ನು ನಾಶಗೊಳಿಸಿದರು.

ತಸ್ಮಿನ್ನಿಪಾತ್ಯಮಾನೇ ತು ಸೈನ್ಯೇ ದಾನವಸತ್ತಮಃ ।
ಕ್ರೋಧಂ ಕೃತ್ವಾ ತತಃ ಶೀಘ್ರಂ ತಾಮೇವಾಭಿಮುಖೋ ಯಯೌ ॥೧೮॥
ವಿಧೂನ್ವನ್ ಸ ಹಿ ತೇ ತೀಕ್ಷ್ಣಶೃಂಗೇಽಭೀಕ್ಷ್ಣಂ ಭಯಾನಕೇ ।
ತಯಾ ಸಾರ್ಧಂ ಚ ಸುಮಹತ್ಕೃತ್ವಾ ಯುದ್ಧಂ ಮಹಾಸುರಃ ॥ ೧೯ ॥
ಶೃಂಗಾಭ್ಯಾಂ ಜಗೃಹೇ ದೇವೀಂ ಸಾ ತಸ್ಯೋಪರಿ ಸಂಸ್ಥಿತಾ ।
ಪದ್ಭ್ಯಾಮಾಕ್ರಮ್ಯ ಶೂಲೇನ ನಿಹತೋ ದೈತ್ಯಪುಂಗವಃ ॥ ೨೦ ॥
ಭಿನ್ನೇ ಶಿರಸಿ ಖಡ್ಗೇನ ತದ್ರೂಪೋ ನಿಃಸೃತಃ ಪುಮಾನ್ ।
ರೌದ್ರೋಽಪಿ ಸ ಗತಃ ಸ್ವರ್ಗಂ ದೈತ್ಯೋ ದೇವ್ಯಸ್ತ್ರಪಾತಿತಃ ॥ ೨೧ ॥
ತತೋ ದೇವಗಣಾಃ ಸರ್ವೇ ಮಹಿಷಂ ವೀಕ್ಷ್ಯ ನಿರ್ಜಿತಂ ।
ಮಹೇಂದ್ರಾದ್ಯಾಃ ಸ್ತುತಿಂ ಚಕ್ರುರ್ದೇವ್ಯಾಸ್ತುಷ್ಟೇನ ಚೇತಸಾ ॥ ೨೨ ॥

ದೇವಾ ಊಚುಃ :—

ನಮೋ ದೇವಿ ಮಹಾಭಾಗೇ ಗಂಭೀರೇ ಭೀಮದರ್ಶನೇ ।
ನಯಸ್ಥಿತೇ ಸುಸಿದ್ಧಾಂತೇ ತ್ರಿನೇತ್ರೇ ವಿಶ್ವತೋಮುಖೀ ॥ ೨೩ ॥

---

೧೮. ಹೀಗೆ ಸೈನ್ಯವು ನಾಶವಾಗಲು ಆ ಮಹಿಷಾಸುರನು ಕುಪಿತನಾಗಿ ಅವಳಿಗೆ ಇದಿರಾಗಿ ಹೋದನು.

೧೯—೨೦. ಅವನು ಭಯಂಕರವೂ, ಚೂಪಾಗಿಯೂ ಇರುವ ತನ್ನ ಕೊಂಬುಗಳನ್ನು ಅಲ್ಲಾಡಿಸುತ್ತ ಅವಳೊಡನೆ ಘೋರ ಯುದ್ಧವನ್ನು ಮಾಡಿ ಅವಳನ್ನು ತನ್ನ ಕೊಂಬುಗಳಿಂದ ಹೊತ್ತುಕೊಂಡನು. ಅವಳು ಅವನ ಮೇಲೆ ನಿಂತು ಕಾಲುಗಳಿಂದ ಅವನನ್ನೆತ್ತಿ ಹಿಡಿದು ಶೂಲದಿಂದ ಹೊಡೆದಳು.

೨೧. ಅವಳು ಖಡ್ಗದಿಂದ ಮಹಿಷನ ತಲೆಯನ್ನು ಕತ್ತರಿಸಲು ಅವನ ರೂಪದ ಒಬ್ಬ ಮನುಷ್ಯನು ದೇಹದಿಂದ ಹೊರಟನು. ಹೀಗೆ ಆ ಮಹಿಷನು ಭಯಂಕರನಾದಾಗ್ಯೂ ದೇವಿಯ ಅಸ್ತ್ರದಿಂದ ಬೀಳಿಸಲ್ಪಟ್ಟವನಾಗಿ ಸ್ವರ್ಗಕ್ಕೆ ತೆರಳಿದನು.

೨೨. ಬಳಿಕ ಇಂದ್ರಾದಿ ದೇವತೆಗಳು ಮಹಿಷನು ಸೋತು ಸತ್ತಿರುವುದನ್ನು ಕಂಡು ಸಂತೋಷಗೊಂಡ ಮನಸ್ಸಿನಿಂದ ಆ ದೇವಿಯನ್ನು ಹೀಗೆ ಸ್ತುತಿಸಿದರು.

೨೩. ದೇವತೆಗಳು ಹೇಳುತ್ತಾರೆ:—ಮಹಾಭಾಗ್ಯವಂತಳೂ, ಗಂಭೀರಳೂ, ನೀತಿಯನ್ನಾಚರಿಸುವವಳೂ, ಮೂರು ಕಣ್ಣುಗಳುಳ್ಳವಳೂ, ಸರ್ವತೋಮುಖಿಯೂ ಆದ ಓ ದೇವಿಯೆ ! ನಿನಗೆ ನಮಸ್ಕಾರವು.

ವಿದ್ಯಾವಿದ್ಯೇ ಜಯೇ ಜಾಪ್ಯೇ ಮಹಿಷಾಸುರಮರ್ದಿನಿ ।
ಸರ್ವಗೇ ಸರ್ವವಿದ್ಯೇಶೇ ದೇವಿ ವಿಶ್ವಸ್ವರೂಪಿಣಿ ॥ ೨೪ ॥
ವೀತಶೋಕೇ ಧ್ರುವೇ ದೇವಿ ಪದ್ಮಪತ್ರಾಯತೇಕ್ಷಣೇ ।
ಶುದ್ಧಸತ್ವೇ ವ್ರತಸ್ಥೇ ಚ ಚಂಡರೂಪೇ ವಿಭಾವರಿ ॥ ೨೫ ॥
ಋದ್ಧಿಸಿದ್ಧಿಪ್ರದೇ ದೇವಿ ಕಾಲನೃತ್ಯೇ ಧೃತಿಪ್ರಿಯೇ ।
ಶಾಂಕರಿ ಬ್ರಾಹ್ಮಣಿ ಬ್ರಾಹ್ಮಿ ಸರ್ವದೇವನಮಸ್ಕೃತೇ ॥ ೨೬ ॥
ಘಂಟಾಹಸ್ತೇ ಶೂಲಹಸ್ತೇ ಮಹಾಮಹಿಷಮರ್ದಿನಿ ।
ಉಗ್ರರೂಪೇ ವಿರೂಪಾಕ್ಷಿ ಮಹಾಮಾಯೇಽಮೃತೇ ಶಿವೇ ॥ ೨೭ ॥
ಸರ್ವಗೇ ಸರ್ವದೇ ದೇವಿ ಸರ್ವಸತ್ವಮಯೋದ್ಭವೇ ।
ವಿದ್ಯಾಪುರಾಣಶಲ್ಯಾನಾಂ ಜನನಿ ಭೂತಧಾರಿಣಿ ॥ ೨೮ ॥
ಸರ್ವದೇವರಹಸ್ಯಾನಾಂ ಸರ್ವಸತ್ವವತಾಂ ಶುಭೇ ।
ತ್ವಮೇವ ಶರಣಂ ದೇವಿ ವಿದ್ಯಾಽವಿದ್ಯೇ ಶ್ರಿಯೇಽಶ್ರಿಯೇ ॥ ೨೯ ॥
ಏವಂ ಸ್ತುತಾ ಸುರೈರ್ದೇವಿ ಪ್ರಣಮ್ಯ ಋಷಿಭಿಸ್ತಥಾ ।
ಉವಾಚ ಹಸತೀ ವಾಕ್ಯಂ ವೃಣುಧ್ವಂ ವರಮುತ್ತಮಂ ॥ ೩೦ ॥

೨೪—೨೯. ವಿದ್ಯಾವಿದ್ಯಾಸ್ವರೂಪಳೂ, ಜಯಪ್ರದಳೂ, ಜಪಿಸಲರ್ಹಳೂ, ಮಹಿಷಾಸುರನನ್ನು ಸಂಹರಿಸಿದವಳೂ, ಎಲ್ಲ ಕಡೆಯಲ್ಲಿಯೂ ಇರುವವಳೂ, ಸಕಲ ವಿದ್ಯೆಗಳಿಗೆ ಒಡೆಯಳೂ, ವಿಶ್ವರೂಪಳೂ, ದುಃಖವಿಲ್ಲದವಳೂ, ಶಾಶ್ವತಳೂ, ಕಮಲ ದಳದಂತೆ ಕಣ್ಣುಗಳುಳ್ಳವಳೂ, ಸತ್ವರೂಪಳೂ, ನಿಯಮಸ್ಥಳೂ, ಕಠಿನ ಸ್ವರೂಪಳೂ, ವೃದ್ಧಿಸಿದ್ಧಿಗಳನ್ನೀಯುವವಳೂ, ಪ್ರಳಯ ಕಾಲದಲ್ಲಿ ನೃತ್ಯ ಮಾಡುವವಳೂ, ಧೈರ್ಯದಲ್ಲಿ ಪ್ರೀತಿಯುಳ್ಳವಳೂ, ಶಂಕರಪ್ರಿಯಳೂ ಬ್ರಹ್ಮಪ್ರಿಯಳೂ, ಸಮಸ್ತ ದೇವತೆಗಳಿಂದ ನಮಸ್ಕೃತಳಾದವಳೂ, ಕೈಯಲ್ಲಿ ತ್ರಿಶೂಲ ಘಂಟೆಗಳನ್ನು ಹಿಡಿದವಳೂ, ವಿರೂಪಾಕ್ಷಿಯೂ, ಮಹಾಮಾಯಾರೂಪಳೂ, ಮಂಗಳಕರಳೂ, ಸಮಸ್ತವನ್ನೂ ಕೊಡುವವಳೂ, ಸಕಲ ಸತ್ವರೂಪಳೂ, ಚತುರ್ದಶ ವಿದ್ಯೆಗಳಿಗೂ, ಅಷ್ಟಾದಶ ಪುರಾಣಗಳಿಗೆ ಜನನಿಯೂ, ಪ್ರಾಣಿಗಳನ್ನು ರಕ್ಷಿಸುವವಳೂ, ಸಮಸ್ತ ದೇವ ರಹಸ್ಯಗಳಿಗೂ, ಸಮಸ್ತ ಪ್ರಾಣಿಗಳಿಗೂ ರಕ್ಷಕಳೂ, ಲಕ್ಷ್ಮಿ ಅಲಕ್ಷ್ಮಿರೂಪಳೂ ಆದ ಓ ಮಹಾದೇವಿ! ನಿನಗೆ ನಮಸ್ಕಾರವು.

೩೦. ದೇವಿ! ದೇವತೆಗಳೂ, ಋಷಿಗಳೂ, ನಮಸ್ಕರಿಸಿ ಹೀಗೆ ಸ್ತುತಿಸಲು ಆ ಮಹಿಷಾಸುರಮರ್ದಿನಿಯು ನಗುತ್ತ "ಉತ್ತಮ ವರವನ್ನು ಕೇಳಿಕೊಳ್ಳಿರಿ" ಎಂದಳು.

ದೇವಾ ಊಚುಃ :—
ಸ್ತವೇನಾನೇನ ಯೇ ದೇವಿ ಸ್ತುವಂತ್ಯತ್ರ ನರೋತ್ತಮಾಃ ।
ತೇ ಸಂತು ಕಾಮೈಃ ಸಂಪೂರ್ಣಾ ವರವರ್ಷಾ ನಿರಂತರಂ ॥ ೩೧ ॥
ಅಸ್ಮಿನ್ ಕ್ಷೇತ್ರೇ ತ್ವಯಾ ವಾಸೋ ನಿತ್ಯಂ ಕಾರ್ಯಂ ಶುಚಿಸ್ಮಿತೇ ॥ ೩೨ ॥
ಏವಮಸ್ತ್ವಿತಿ ಸಾ ದೇವೀ ದೇವಾನುಕ್ತ್ವಾ ವರಾನನೇ ।
ವಿಸೃಜ್ಯ ಋಷಿಸಂಘಾಂಶ್ಚ ತತ್ರೈವ ನಿರತಾಽಭವತ್ ॥ ೩೩ ॥
ಆಶ್ವಯುಕ್ಛುಕ್ಲಪಕ್ಷಸ್ಯ ನವಮ್ಯಾಂ ಯೋ ವರಾನನೇ ।
ಉಪವಾಸಪರೋ ಭೂತ್ವಾ ತಾಂ ಪ್ರಪಶ್ಯತಿ ಭಕ್ತಿತಃ ।
ತಸ್ಯ ಪಾಪಂ ಕ್ಷಯಂ ಯಾತಿ ತಮಃ ಸೂರ್ಯೋದಯೇ ಯಥಾ ॥ ೩೪ ॥
ಯ ಏತತ್ಪಠತಿ ಸ್ತೋತ್ರಂ ಪ್ರಾತರುತ್ಥಾಯ ಮಾನವಃ ।
ನ ಭೀಃ ಸಂಪದ್ಯತೇ ತಸ್ಯ ಯಾವಜ್ಜೀವಂ ನರಸ್ಯ ವೈ ॥ ೩೫ ॥
ಆಶ್ವಯುಕ್ಛುಕ್ಲಪಕ್ಷೇ ಯಾ ಅಷ್ಟಮೀ ಮೂಲಸಂಯುತಾ ।
ಸಾ ಮಹಾನಾಮಿಕಾ ಪ್ರಾಣಾ ಯೇಷಾಂ ತಸ್ಯಾಂ ಗತಾಃ ಶುಭೇ ॥ ೩೬ ॥
ತೇಷಾಂ ಸ್ವರ್ಗೇ ಧ್ರುವಂ ವಾಸೋ ವೀರಾಸ್ತೇಽಪ್ಸರಸಾಂ ಪ್ರಿಯಾಃ ॥ ೩೭ ॥

---

೩೧. ದೇವತೆಗಳು ಹೇಳುತ್ತಾರೆ :—ದೇವಿ ! ಇಲ್ಲಿ ಈ ಸ್ತೋತ್ರದಿಂದ ನಿನ್ನನ್ನು ಸ್ತುತಿಸಿದ ಮಾನವೋತ್ತಮರು ಸಕಲೇಷ್ಟಾರ್ಥಗಳಿಂದ ಪೂರ್ಣರೂ, ಯಾವಾಗಲೂ ವರವನ್ನೀಯುವವರೂ ಆಗಲಿ.

೩೨. ನೀನು ಯಾವಾಗಲೂ ಈ ಕ್ಷೇತ್ರದಲ್ಲಿ ವಾಸಿಸು.

೩೩. ಪ್ರಿಯಳೆ ! ಆ ದೇವಿಯು ಹಾಗೆಯೇ ಆಗಲೆಂದು ದೇವತೆಗಳಿಗೂ, ಮುನಿಗಳಿಗೂ ಹೇಳಿ ಅವರನ್ನು ಕಳುಹಿಸಿ ತಾನು ಅಲ್ಲಿಯೇ ವಾಸಿಸಿದಳು.

೩೪. ದೇವಿ! ಆಶ್ವಯುಜ ಶುಕ್ಲಪಕ್ಷದ ನವಮೀದಿನ ಉಪವಾಸಮಾಡಿ ಭಕ್ತಿಯಿಂದ ಅವಳನ್ನು ಸಂದರ್ಶಿಸಿದ ಮಾನವನ ಪಾಪವು, ಸೂರ್ಯೋದಯ ಕಾಲದಲ್ಲಿ ಕತ್ತಲೆಯಂತೆ ನಾಶವಾಗುವುದು.

೩೫. ಈ ಸ್ತೋತ್ರವನ್ನು ಬೆಳಗ್ಗೆ ಎದ್ದು ಪಠಿಸುವ ಮನುಷ್ಯನಿಗೆ ದೇಹಾಂತ್ಯದವರೆಗೂ ಯಾವ ಭಯವೂ ಉಂಟಾಗುವುದಿಲ್ಲ.

೩೬–೩೭. ಮೂಲಾನಕ್ಷತ್ರದಿಂದ ಕೂಡಿದ ಆಶ್ವಿನ ಶುಕ್ಲಪಕ್ಷದ ಅಷ್ಟಮಿಯು "ಮಹಾನಾಮಿಕಾ" ಎನ್ನಿಸಿಕೊಳ್ಳುವುದು. ಆ ದಿನ ಮೃತರಾದ ವೀರರು ಸ್ವರ್ಗವನ್ನು ಸೇರಿ ಅಪ್ಸರಸ್ತ್ರೀಯರಿಗೆ ಪ್ರಿಯರಾಗುವರು.

ಮನ್ವಂತರೇಷು ಸರ್ವೇಷು ಕಲ್ಪಾದಿಷು ಸುರೇಶ್ವರಿ ।
ಏಷ ಏವ ಕ್ರಮಃ ಪ್ರೋಕ್ತೋ ವಿಶೇಷಂ ಶೃಣು ಸಾಂಪ್ರತಂ ॥ ೩೮ ॥
ಆಶ್ವಯುಕ್ಛುಕ್ಲಪಕ್ಷೇ ಯಾ ಪಂಚಮೀ ಪಾಪನಾಶಿನೀ ।
ತಸ್ಯಾಂ ಸಂಪೂಜಯೇದ್ರಾತ್ರೌ ಖಡ್ಗಂ ಮಂತ್ರೈರ್ವಿಭೂಷಿತಂ ॥ ೩೯ ॥
ಮಂಡಪಂ ಕಾರಯೇತ್ತತ್ರ ನವಸಪ್ತಕರಂ ತಥಾ ।
ಪ್ರಾಗುದಕ್ಪ್ರವಣೇ ದೇಶೇ ಪತಾಕಾಭಿರಲಂಕೃತಂ ॥
ಯೋಗೇಶ್ವರ್ಯಾಃ ಸನ್ನಿಧಾನೇ ವಿಧಿನಾ ಕಾರಯೇದ್ದ್ವಿಜಃ ॥ ೪೦ ॥
ಆಗ್ನೇಯ್ಯಾಂ ಕಾರಯೇತ್ಕುಂಡಂ ಹಸ್ತಮಾತ್ರಂ ಸುಶೋಭನಂ ।
ಮೇಖಲಾತ್ರಯಸಂಯುಕ್ತಂ ಯೋನ್ಯಾಽಶ್ವತ್ಥದಲಾಭಯಾ ॥ ೪೧ ॥
ಶಾಸ್ತ್ರೋಕ್ತಂ ಮಂತ್ರಸಂಯುಕ್ತಂ ಹೋತವ್ಯಂ ಪಾಯಸಂ ತತಃ ।
ತತಃ ಖಡ್ಗಂ ತು ಸಂಪ್ರಾಪ್ಯ ಪಂಚಾಽಮೃತರಸೇನ ವೈ ।
ಪೂಜಯೇದ್ವಿವಿಧೈಃ ಪುಷ್ಪೈರ್ಮಂತ್ರಪೂರ್ವಂ ದ್ವಿಜೋತ್ತಮೈಃ ॥ ೪೨ ॥
ಅಭೀರ್ವಿಶಸನಂ ಖಡ್ಗಃ ಪ್ರಾಣಿಭೂತೋ ದುರಾಸದಃ ।
ಅಗಮ್ಯೋ ವಿಜಯಶ್ಚೈವ ಧರ್ಮಾಧಾರಸ್ತಥೈವ ಚ ।
ಇತ್ಯಷ್ಟೌ ತವ ನಾಮಾನಿ ಸ್ವಯಮುಕ್ತಾನಿ ವೇಧಸಾ ॥ ೪೩ ॥

---

೩೮. ಸುರೇಶ್ವರಿ! ಮನ್ವಂತರಗಳಲ್ಲಿಯೂ, ಸಮಸ್ತಕಲ್ಪಗಳಲ್ಲಿಯೂ ಈ ಕ್ರಮವೇ ವಿಹಿತವಾಗಿರುವುದು. ವಿಶೇಷವಿಧಿಯನ್ನು ಈಗ ಕೇಳು.

೩೯. ಪಾಪವನ್ನು ಪರಿಹರಿಸುವ ಅಶ್ವಿನ ಶುಕ್ಲಪಕ್ಷದ ಪಂಚಮಿದಿನ ರಾತ್ರಿ ಖಡ್ಗವನ್ನು ಅಲಂಕರಿಸಿ ಮಂತ್ರಗಳಿಂದ ಪೂಜಿಸಬೇಕು.

೪೦. ಬ್ರಾಹ್ಮಣನು ಅಲ್ಲಿ ಯೋಗೇಶ್ವರಿಯ ಬಳಿ ಪೂರ್ವೋತ್ತರ ದಿಕ್ಕಿನಲ್ಲಿ ಸಮದೇಶದಲ್ಲಿ ಪತಾಕೆಗಳಿಂದ ಅಲಂಕಾರಗೊಂಡ ಹದಿನಾಲ್ಕು ಹಸ್ತವಿಸ್ತೀರ್ಣವಾದ ಮಂಡಪವನ್ನು ಮಾಡಿಸಬೇಕು.

೪೧. ಆಗ್ನೇಯ ದಿಕ್ಕಿನಲ್ಲಿ ಒಂದುಹಸ್ತ ಪ್ರಮಾಣವುಳ್ಳದಾಗಿ ಮೂರು ಮೇಖಲೆಗಳಿಂದ ಕೂಡಿದ ಅಶ್ವತ್ಥದಳಾಕಾರದ ಕುಂಡವನ್ನು ರಚಿಸಬೇಕು.

೪೨. ಬಳಿಕ ಶಾಸ್ತ್ರೋಕ್ತಕ್ರಮವಾಗಿ ಮಂತ್ರಗಳಿಂದ ಕೂಡಿದ ಪಾಯಸವನ್ನು ಹೋಮಿಸಿ ಖಡ್ಗಕ್ಕೆ ಪಂಚಾಮೃತಾಭಿಷೇಕಮಾಡಿ ಅದನ್ನು ಬಗೆಬಗೆಯ ಹೂವುಗಳಿಂದ ಪೂಜಿಸಬೇಕು.

೪೩. ಖಡ್ಗವೆ! ಬ್ರಹ್ಮನು ನಿನಗೆ ಅಭೀ, ವಿಶಸನ, ಖಡ್ಗ, ಪ್ರಾಣಿಭೂತ, ದುರಾಸದ, ಅಗಮ್ಯ, ವಿಜಯ, ಧರ್ಮಾಧಾರ ಎಂದು ಎಂಟು ಹೆಸರುಗಳನ್ನು ಇಟ್ಟಿರುವನು.

ನಕ್ಷತ್ರಂ ಕೃತ್ತಿಕಾ ತುಭ್ಯಂ ಗುರುರ್ದೇವೋ ಮಹೇಶ್ವರಃ ।
ಹಿರಣ್ಯಂ ಚ ಶರೀರಂ ತೇ ಧಾತಾ ದೇವೋ ಜನಾರ್ದನಃ ।
ಪಿತಾ ಪಿತಾಮಹೋ ದೇವ ಸ್ತ್ವಂ ಮಾಂ ಪಾಲಯ ಸರ್ವದಾ ॥ ೪೪ ॥

ಇತಿ ಖಡ್ಗಮಂತ್ರಃ :—

ಏವಂ ಸಂಪೂಜ್ಯ ವಿಧಿನಾ ತಂ ಖಡ್ಗಂ ಬ್ರಾಹ್ಮಣೋತ್ತಮೈಃ ।
ಭ್ರಾಮಯೇನ್ನಗರೇ ರಾತ್ರೌ ನಾಂದೀಘೋಷಪುರಸ್ಸರಂ ॥ ೪೫ ॥
ಸರ್ವಸೈನ್ಯೇನ ಸಂಯುಕ್ತಸ್ತತ್ರ ಬ್ರಾಹ್ಮಣಪುಂಗವೈಃ ।
ಏವಂ ಕೃತ್ವಾ ವಿಧಾನಂ ತು ಪುನರ್ಯೋಗೇಶ್ವರೀಂ ನಯೇತ್ ॥
ಉಚ್ಚಾರ್ಯ ಮಂತ್ರಮೇವಂ ವೈ ಖಡ್ಗಂ ತಸ್ಯೈ ಸಮರ್ಪಯೇತ್ ॥ ೪೬ ॥
ಅಂಜನೇನ ಸಮಾಲೇಖ್ಯ ಚಂದನೇನ ವಿಲೇಪಿತಂ ।
ಬಿಲ್ವಪತ್ರಕೃತಾಂ ಮಾಲಾಂ ತಸ್ಯೈ ದೇವ್ಯೈ ನಿವೇದಯೇತ್ ॥ ೪೭ ॥
ದುರ್ಗೇ ದುರ್ಗಾರ್ತಿಹೇ ದೇವಿ ಸರ್ವದುರ್ಗತಿನಾಶಿನಿ ।
ತ್ರಾಹಿ ಮಾಂ ಸರ್ವದುರ್ಗೇಷು ದುರ್ಗೇಽಹಂ ಶರಣಂಗತಃ ॥ ೪೮ ॥
ದತ್ವೈವಮರ್ಘ್ಯಂ ದೇವೇಶಿ ತತ್ರ ಖಡ್ಗಂ ಚ ಜಾಗ್ರಯಾತ್ ।
ನಿತ್ಯಂ ಸಂಪೂಜ್ಯ ವಿಧಿನಾ ಅಷ್ಟಮ್ಯಾಂ ಯಾವದೇವ ಹಿ ॥ ೪೯ ॥

---

೪೪. ನಿನ್ನ ನಕ್ಷತ್ರವು ಕೃತ್ತಿಕೆಯು, ಗುರುವು ಮಹಾದೇವನು. ನಿನ್ನ ಶರೀರವು ಸುವರ್ಣಮಯವಾದುದು. ನಿನ್ನನ್ನು ಧರಿಸಿದವನು ವಿಷ್ಣುವು, ಬ್ರಹ್ಮನು ನಿನ್ನ ತಂದೆಯು, ಯಾವಾಗಲೂ ನನ್ನನ್ನು ಕಾಪಾಡು." ಇದು ಖಡ್ಗಮಂತ್ರವು.

೪೫–೪೭. ಹೀಗೆ ಬ್ರಾಹ್ಮಣೋತ್ತಮರಿಂದ ಖಡ್ಗವನ್ನು ವಿಧಿಯಂತೆ ಪೂಜೆ ಮಾಡಿಸಿ ರಾತ್ರಿ ನಾಂದೀಘೋಷದೊಡನೆಯೂ, ಸಮಸ್ತ ಸೈನ್ಯಗಳೊಡನೆಯೂ ನಗರದಲ್ಲಿ ಸುತ್ತಿಸಿ ಯೋಗೇಶ್ವರಿಯ ಹತ್ತಿರ ತೆಗೆದುಕೊಂಡುಹೋಗಿ ಈ ಮಂತ್ರವನ್ನು ಚ್ಚರಿಸಿ ಅವಳಿಗೆ ಕಾಡಿಗೆ ಗಂಧಗಳಿಂದ ಲೇಪನಮಾಡಲ್ಪಟ್ಟ ಆ ಖಡ್ಗವನ್ನೂ, ಬಿಲ್ವಪತ್ರೆಯಮಾಲೆಯನ್ನೂ ಒಪ್ಪಿಸಬೇಕು.

೪೮. ಮಹಾ ಕಷ್ಟಗಳನ್ನು ಪರಿಹರಿಸುವವಳೂ, ಸಮಸ್ತರ ಬಡತನವನ್ನು ನೀಗಿಸುವವಳೂ ಆದ ಓ ದುರ್ಗೇ! ಸಮಸ್ತ ಕಷ್ಟಗಳಲ್ಲಿ ನನ್ನನ್ನು ಕಾಪಾಡು. ನಾನು ನಿನ್ನನ್ನು ಮರೆಹೊಕ್ಕಿರುವೆನು.

೪೯–೫೦. ದೇವೇಶಿ! ಈ ಮಂತ್ರದಿಂದ ಅರ್ಘ್ಯವನ್ನೂ ಖಡ್ಗವನ್ನೂ ಅವಳಿಗೆ ಕೊಟ್ಟು ಅಷ್ಟಮಿಯವರೆಗೆ ಈ ವಿಧಿಯಿಂದ ನಿತ್ಯವೂ ಪೂಜಿಸಿ ಆ ಅಷ್ಟಮಿಯ ರಾತ್ರಿ

ತದ್ರಾತ್ರೌ ಜಾಗರಂ ಕೃತ್ವಾ ಪ್ರಭಾತೇ ಹ್ಯರುಣೋದಯೇ ।
ಪಾತಯೇನ್ಮಹಿಷಾನ್ಮೇಷಾನಗ್ರತೋ ಗತಕಂಧರಾನ್ ॥ ೫೦ ॥
ಶತಮರ್ಧಶತಂ ವಾಽಪಿ ತದರ್ಧಾರ್ಧಂ ಯಥೇಚ್ಛಯಾ ।
ಸುರಾಸವಭೃತೈಃ ಕುಂಭೈಸ್ತರ್ಪಯೇತ್ಪರಮೇಶ್ವರೀಂ ॥ ೫೧ ॥
ಕಾಪಾಲಿಕೇಭ್ಯಸ್ತದ್ದೇಯಂ ದಾಸೀದಾಸಜನೇ ತಥಾ ।
ತತೋಽಪರಾಹ್ಣಸಮಯೇ ನವಮ್ಯಾಂ ಸ್ಯಂದನೇ ಸ್ಥಿತಾಂ ॥ ೫೨ ॥
ಯೋಗೇಶೀಂ ಭ್ರಾಮಯೇದ್ರಾಷ್ಟ್ರೇ ಸ್ವಯಂ ರಾಜಾ ಸ್ವಸೈನ್ಯವಾನ್ ।
ನದದ್ಭಿಃ ಶಂಖಪಟಹೈಃ ಪಠದ್ಭಿರ್ಬಟುಚಾರಣೈಃ ॥ ೫೩ ॥
ಭೂತೇಭ್ಯಶ್ಚ ಬಲಿಂ ದದ್ಯಾನ್ಮಂತ್ರೇಣಾಽನೇನ ಭಾಮಿನಿ ।
ಸರಕ್ತಂ ಸಜಲಂ ಸಾಽನ್ನಂ ಗಂಧಪುಷ್ಪಾಕ್ಷತೈರ್ಯುತಂ ॥ ೫೪ ॥
ತ್ರೀನ್ವಾರಾಂಸ್ತು ತ್ರಿಶೂಲೇನ ದಿಗ್ವಿದಿಕ್ಷು ಕ್ಷಿಪೇದ್ಬಲಿಂ ।
ಬಲಿಂ ಗೃಹ್ಣಂತ್ವಿಮೇ ದೇವಾ ಆದಿತ್ಯಾ ವಸವಸ್ತಥಾ ॥ ೫೫ ॥
ಮರುತೋಽಥಾಽಶ್ವಿನೌ ರುದ್ರಾಃ ಸುಪರ್ಣಾಃ ಪನ್ನಗಾ ಗ್ರಹಾಃ ।
ಸೌಮ್ಯಾ ಭವಂತು ತೃಪ್ತಾಶ್ಚ ಭೂತಾಃ ಪ್ರೇತಾಃ ಸುಖಾವಹಾಃ ॥ ೫೬ ॥

ಜಾಗರಣೆಮಾಡಿ ಬೆಳಗ್ಗೆ ಅರುಣೋದಯಕಾಲದಲ್ಲಿ ಅವಳ ಮುಂದೆ ನೂರು, ಐವತ್ತು, ಇಪ್ಪತ್ತೈದು ಅಥವಾ ಇದರ ಅರ್ಧದಷ್ಟು ಕೋಣಗಳನ್ನೂ, ಕುರಿಗಳನ್ನು ಕುತ್ತಿಗೆಯನ್ನು ಕತ್ತರಿಸಿ ಕೆಡವಿ ಅವಳನ್ನು ಹೆಂಡದ ಕೊಡಗಳಿಂದ ತೃಪ್ತಿಗೊಳಿಸಬೇಕು.

೫೨–೫೩. ಬಳಿಕ ಅವುಗಳನ್ನು ಕಾಪಾಲಿಕಮತದವರಿಗೂ, ಸೇವಕರಿಗೂ ಕೊಟ್ಟು ನವಮಿಾದಿನ ಅಪರಾಹ್ಣಸಮಯದಲ್ಲಿ ರಾಜನು ಯೋಗೇಶ್ವರೀ ವಿಗ್ರಹವನ್ನು ರಥದಲ್ಲಿ ಕುಳ್ಳಿರಿಸಿ ಸೈನ್ಯಸಹಿತನಾಗಿ ಶಂಖಪಟಹವಾದ್ಯಗಳಿಂದಲೂ, ಸ್ತುತಿಪಾಠಕರ ಸ್ತುತಿಗಳಿಂದಲೂ ರಾಜ್ಯದಲ್ಲಿ ಸುತ್ತಿಸಬೇಕು.

೫೪–೫೬. ಪ್ರಿಯಳೆ! ಈ ಮಂತ್ರದಿಂದ ಭೂತಗಳಿಗೆ ರಕ್ತ, ನೀರು, ಅನ್ನ, ಗಂಧ, ಪುಷ್ಪ, ಅಕ್ಷತೆಗಳಿಂದ ಸಹಿತವಾದ ಬಲಿಯನ್ನು ಮೂರುಸಾರಿ ತ್ರಿಶೂಲದಿಂದ ದಿಕ್ಕು, ವಿದಿಕ್ಕುಗಳಲ್ಲಿ ಎರಚಬೇಕು. ಆದಿತ್ಯರೂ, ವಸುಗಳೂ, ಮರುತ್ತುಗಳೂ, ಅಶ್ವಿನೀದೇವತೆಗಳೂ, ರುದ್ರರೂ, ಸುಪರ್ಣರೂ, ಪನ್ನಗರೂ, ಗ್ರಹರೂ ಈ ಬಲಿಯನ್ನು ಸ್ವೀಕರಿಸಿ ಸೌಮ್ಯರೂ, ತೃಪ್ತರೂ ಆಗಲಿ. ಭೂತಪ್ರೇತಗಳು ಸುಖವನ್ನುಂಟುಮಾಡಲಿ.

ಯ ಏವಂ ಕುರ್ವತೇ ಯಾತ್ರಾಂ ಬ್ರಾಹ್ಮಣಾಃ ಕ್ಷೇತ್ರವಾಸಿನಃ ।
ನ ತೇಷಾಂ ಶತ್ರವೋ ನಾಗ್ನಿರ್ನ ಚೌರಾ ನ ವಿನಾಯಕಾಃ ॥
ವಿಘ್ನಂ ಕುರ್ವಂತಿ ದೇವೇಶಿ ಯೋಗೇಶ್ವರ್ಯಾಃ ಪ್ರಸಾದತಃ ॥ ೫೭ ॥
ಸುಖಿನೋ ಭೋಗಭೋಕ್ತಾರಃ ಸರ್ವಾತಂಕವಿವರ್ಜಿತಾಃ ।
ಭವಂತಿ ಪುರುಷಾ ಭಕ್ತಾ ಯೋಗೇಶ್ವರ್ಯಾಂ ನಿರಂತರಂ ॥ ೫೮ ॥
ಇತ್ಯೇಷ ತೇ ಸಮಾಖ್ಯಾತೋ ಯೋಗೇಶ್ವರ್ಯಾ ಮಹೋತ್ಸವಃ ।
ಪಠತಾಂ ಶೃಣ್ವತಾಂ ಚೈವ ಸರ್ವಾಽಶುಭವಿನಾಶನಃ ॥ ೫೯ ॥
ಶೂಲಾಗ್ರಭಿನ್ನಮಹಿಷಾಸುರಪೃಷ್ಠಪೀಠಾ
ಮುತ್ಖಾತಖಡ್ಗರುಚಿರಾಂಗದಬಾಹುದಂಡಾಂ ।
ಅಭ್ಯರ್ಚ್ಯ ಪಂಚವದನಾನುಗತಾಂ ನವಮ್ಯಾಂ
ದುರ್ಗಾಂ ಸುದುರ್ಗಗಹನಾನಿ ತರಂತಿ ಮರ್ತ್ಯಾಃ ॥೬೦॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರೀಯೋಗೇಶ್ವರೀಮಾಹಾತ್ಮ್ಯವರ್ಣನಂ ನಾಮ
ತ್ರ್ಯಶೀತಿತಮೋಽಧ್ಯಾಯಃ ॥

---

೫೭. ಆ ಕ್ಷೇತ್ರದಲ್ಲಿ ವಾಸಿಸುವ ಬ್ರಾಹ್ಮಣರು ಹೀಗೆ ಯಾತ್ರೆಯನ್ನು ಮಾಡಿದರೆ ಅವರಿಗೆ ಶತ್ರುಗಳು, ಅಗ್ನಿ, ಕಳ್ಳರು, ವಿಘ್ನೇಶ ಇವರು ಯೋಗೇಶ್ವರಿಯ ಅನುಗ್ರಹದಿಂದ ವಿಘ್ನವನ್ನೆಸಗುವುದಿಲ್ಲ.

೫೮. ಯೋಗೇಶ್ವರಿಯ ಭಕ್ತರು ಯಾವಾಗಲೂ ಸುಖಿಗಳೂ, ಭೋಗವನ್ನನುಭವಿಸುವವರೂ, ಸಮಸ್ತ ಕಷ್ಟಗಳಿಲ್ಲದವರೂ ಆಗಿರುವರು.

೫೯. ಹೀಗೆ ಕೇಳುವವರ ಮತ್ತು ಹೇಳುವವರ ಸಕಲಾಮಂಗಳವನ್ನು ನಿವಾರಿಸುವ ಈ ಯೋಗೇಶ್ವರಿಯ ಉತ್ಸವವಿಚಾರವನ್ನು ಹೇಳಿರುವೆನು.

೬೦. ಮನುಷ್ಯರು ಮಹಾನವಮಿಯದಿನ ತ್ರಿಶೂಲದ ಕೊನೆಯಿಂದ ಸೀಳಿದ ಮಹಿಷಾಸುರನ ಬೆನ್ನಿನ ಮೇಲೆ ಕುಳಿತಿರುವವಳೂ, ಹೊಳೆಯುತ್ತಿರುವ ಕತ್ತಿ, ಅಂಗದ ಇವುಗಳಿಂದ ಮನೋಹರವಾದ ತೋಳುಳ್ಳವಳೂ, ಐದುಮುಖಗಳುಳ್ಳವಳೂ ಆದ ದುರ್ಗೆಯನ್ನು ಪೂಜಿಸಿದರೆ ಅತಿಕಷ್ಟಗಳನ್ನು ದಾಟುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಯೋಗೇಶ್ವರೀಮಾಹಾತ್ಮ್ಯವರ್ಣನವೆಂಬ
ಎಂಬತ್ತಮೂರನೆಯ ಅಧ್ಯಾಯವು ಮುಗಿದುದು.

॥ ೮೪ ॥

ಚತುರಶೀತಿತಮೋಽಧ್ಯಾಯಃ

ಆದಿನಾರಾಯಣಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಆದಿನಾರಾಯಣಂ ಹರಿಂ ।
ತಸ್ಯಾಶ್ಚ ಪೂರ್ವದಿಗ್ಭಾಗೇ ಸರ್ವಪಾತಕನಾಶನಂ ॥ ೧ ॥
ಪಾದುಕಾಸನಸಂಯುಕ್ತಂ ಸರ್ವದೈತ್ಯಾಂತಕಾರಿಣಂ ।
ಆದೌ ಕೃತಯುಗೇ ದೇವಿ ದೈತ್ಯೋಽಭೂನ್ಮೇಘವಾಹನಃ ॥ ೨ ॥
ಮಹಾಬಲೋ ಮಹಾಕಾಯೋ ಯೋಜನಾಯುತವಿಸ್ತರಃ ।
ಅಜೇಯಃ ಸರ್ವದೇವಾನಾಂ ತ್ರೈಲೋಕ್ಯಕ್ಷಯಕಾರಕಃ ।
ಬ್ರಹ್ಮಣಾ ತಸ್ಯ ತುಷ್ಟೇನ ವರೋ ದತ್ತೋ ವರಾನನೇ ॥ ೩ ॥
ಯದಾ ಪಾದುಕಯಾ ವಿಷ್ಣುಸ್ತ್ವಾಂ ಹನಿಷ್ಯತಿ ಸಂಯುಗೇ ।
ತದೈವ ಮೃತ್ಯುರ್ಭವಿತಾ ನಾಽನ್ಯಥಾ ಮರಣಂ ತವ ॥ ೪ ॥
ಇತಿ ಲಬ್ಧವರೋ ದೈತ್ಯಃ ಸಂತಾಪಯತಿ ಭೂತಲಂ ।
ಯುಗಾನಾಂ ಕೋಟಿಮೇಕಾಂ ತು ಸದೇವಾಽಸುರಮಾನುಷಂ ॥ ೫ ॥

ಕನ್ನಡದ ಅನುವಾದ

ಆದಿನಾರಾಯಣಮಾಹಾತ್ಮ್ಯವರ್ಣನ

೧-೪. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ಯೋಗೇಶ್ವರಿಯ ಪೂರ್ವದಿಕ್ಕಿನಲ್ಲಿ ಸಕಲ ಪಾಪಗಳನ್ನು ಪರಿಹರಿಸುವವನೂ, ಪಾದುಕಾಸನ ಸಹಿತನೂ, ಸಕಲ ದೈತ್ಯನಾಶಕನೂ ಆದ ಆದಿನಾರಾಯಣನಾದ ಶ್ರೀ ಹರಿಯನ್ನು ಹೊಂದಬೇಕು. ಮೊದಲಿನ ಕೃತಯುಗದಲ್ಲಿ ಅತಿಬಲಿಷ್ಠನೂ, ದೊಡ್ಡ ದೇಹವುಳ್ಳವನೂ, ಹತ್ತು ಸಾವಿರ ಯೋಜನವಿಸ್ತೀರ್ಣನೂ, ಸಮಸ್ತ ದೈತ್ಯರಿಗೂ ಜಯಿಸಲಶಕ್ಯನೂ, ಮೂರು ಲೋಕಗಳನ್ನು ಹಾಳುಮಾಡುವವನೂ ಆದ ಮೇಘವಾಹನನೆಂಬ ದೈತ್ಯನಿದ್ದನು. ಅವನ ವಿಷಯದಲ್ಲಿ ಸಂತುಷ್ಟನಾದ ಬ್ರಹ್ಮನು, "ವಿಷ್ಣುವು ಪಾದುಕೆಯಿಂದ ನಿನ್ನನ್ನು ಹೊಡೆದಾಗಲೆ ನೀನು ಸಾಯುವೆ. ಬೇರೆ ವಿಧದಿಂದ ನಿನಗೆ ಮರಣವಿಲ್ಲ" ಎಂದು ವರವನ್ನಿತ್ತನು.

೫. ಹೀಗೆ ಬ್ರಹ್ಮನಿಂದ ವರವನ್ನು ಪಡೆದ ಆ ದೈತ್ಯನು ದೇವಾಸುರ ಮನುಷ್ಯ ಸಹಿತವಾದ ಭೂಮಿಯನ್ನು ಒಂದುಕೋಟಿಯ ಒಂದು ಯುಗಗಳಕಾಲ ಸಂತಾಪಗೊಳಿಸುತ್ತಿದ್ದನು.

ಸಂತಪ್ಯ ಬಹುಧಾ ದೇವಿ ದಕ್ಷಿಣೋದಧಿಮಾಗತಃ ।
ತತ್ರ ವಿಧ್ವಂಸಯಾಮಾಸ ಋಷೀಣಾಮಾಶ್ರಮಾಣಿ ವೈ ॥ ೬ ॥
ತತಸ್ತು ಋಷಯಃ ಸರ್ವೇ ವಿಧ್ವಸ್ತಾಶ್ರಮಮಂಡಲಾಃ ।
ಶರಣಂ ಚೈವ ಸಂಪ್ರಾಪ್ತಾ ದೇವದೇವಂ ತು ಕೇಶವಂ ।
ಅಜೇಯಂ ತಂ ತು ಸಂಜ್ಞಾತ್ವಾ ತುಷ್ಟುವುರ್ಗರುಡಧ್ವಜಂ ॥ ೭ ॥

ಋಷಯ ಊಚುಃ :—

ನಮಃ ಪರಮಕಲ್ಯಾಣಕಲ್ಯಾಣಾಯಾತ್ಮಯೋಗಿನೇ ।
ಜನಾರ್ದನಾಯ ದೇವಾಯ ಶ್ರೀಧರಾಯ ಚ ವೇಧಸೇ ॥ ೮ ॥
ನಮಃ ಕಮಲಕಿಂಜಲ್ಕಸುವರ್ಣಮುಕುಟಾಯ ಚ ।
ಕೇಶವಾಯಾತಿಸೂಕ್ಷ್ಮಾಯ ಬೃಹನ್ಮೂರ್ತೇ ನಮೋ ನಮಃ ॥ ೯ ॥
ಮಹಾತ್ಮನೇ ವರೇಣ್ಯಾಯ ನಮಃ ಪಂಕಜನಾಭಯೇ ।
ನಮೋಽಸ್ತು ಮಾಯಾಹರಯೇ ಹರಯೇ ಹರಿವೇಧಸೇ ॥ ೧೦ ॥
ಹೈರಣ್ಯಗರ್ಭಗರ್ಭಾಯ ಜಗತಃ ಕಾರಣಾತ್ಮನೇ ।
ಅಚ್ಯುತಾಯ ನಮೋ ನಿತ್ಯಮನಂತಾಯ ನಮೋ ನಮಃ ॥ ೧೧ ॥

---

೬. ಅವನು ಹೀಗೆ ಬಹುಪ್ರಕಾರವಾಗಿ ದುಃಖಗೊಳಿಸಿ ದಕ್ಷಿಣ ಸಮುದ್ರಕ್ಕೆ ಬಂದು ಅಲ್ಲಿರುವ ಮುನಿಗಳ ಆಶ್ರಮಗಳನ್ನು ನಾಶಗೊಳಿಸಿದನು.

೭. ಹೀಗೆ ಆಶ್ರಮಗಳೆಲ್ಲ ನಾಶವಾಗಲು ಮುನಿಗಳು ಆರಾಕ್ಷಸನು ಅಜೇಯನೆಂದರಿತು ಶ್ರೀಮನ್ನಾರಾಯಣನನ್ನು ಮರೆಹೊಕ್ಕು ಅವನನ್ನು ಸ್ತುತಿಸಿದರು.

೮. ಋಷಿಗಳು ಹೇಳುತ್ತಾರೆ:—ಪರಮ ಮಂಗಳಮಂಗಳನೂ, ಯೋಗಿಯೂ, ದುಷ್ಟಸಂಹಾರಕನೂ, ಲಕ್ಷ್ಮಿಯನ್ನು ಎದೆಯಲ್ಲಿ ಧರಿಸಿದವನೂ, ಸೃಷ್ಟಿಕರ್ತನೂ ಆದ ವಿಷ್ಣುವೆ ! ನಿನಗೆ ನಮಸ್ಕಾರವು.

೯. ಕಮಲಕೇಸರದಂತಿರುವ ಚಿನ್ನದ ಕಿರೀಟವುಳ್ಳವನೂ, ಅತಿಸೂಕ್ಷ್ಮನೂ, ದೊಡ್ಡ ಶರೀರವುಳ್ಳವನೂ ಆದ ಎಲೈ ಕೇಶವ! ನಿನಗೆ ನಮಸ್ಕಾರವು.

೧೦. ಶ್ರೇಷ್ಠನೂ, ಮಹಾತ್ಮನೂ, ಪದ್ಮನಾಭನೂ, ನೃಸಿಂಹರೂಪಿಯೂ ಆದ ಹರಿಯೆ! ನಿನಗೆ ನಮಸ್ಕಾರವು.

೧೧. ಬ್ರಹ್ಮನೇ ಗರ್ಭವಾಗುಳ್ಳವನೂ, ಜಗತ್ತಿಗೆ ಕಾರಣನೂ, ಶಾಶ್ವತನೂ ಆದ ಓ ಅಚ್ಯುತ! ನಿನಗೆ ನಮಸ್ಕಾರವು.

ನಮೋ ಮಾಯಾಪಟಚ್ಛನ್ನ ಜಗದ್ಧಾಮ್ನೇ ಮಹಾತ್ಮನೇ ।
ಸಂಸಾರಸಾಗರೋತ್ತಾರಜ್ಞಾನಪೋತಪ್ರದಾಯಿನೇ ।
ಅಕುಂಠಮತಯೇ ಧಾತ್ರೇ ಸರ್ಗಸ್ಥಿತ್ಯಂತಕರ್ಮಣೇ ॥ ೧೨ ॥
ಯಥಾ ಹಿ ವಾಸುದೇವೇತಿ ಪ್ರೋಕ್ತೇ ನಶ್ಯತಿ ಪಾತಕಂ ।
ತಥಾ ವಿಲಯಮಭ್ಯೇತು ದೈತ್ಯೋಽಯಂ ಮೇಘವಾಹನಃ ॥ ೧೩ ॥
ಯಥಾ ವಿಷ್ಣುಃ ಸ್ವಭಕ್ತೇಷು ಪಾಪಮಾಪ್ನೋತಿ ಸಂಸ್ಥಿತಂ ।
ತಥಾ ವಿನಾಶಮಾಯಾತು ದೈತ್ಯೋಽಯಂ ಪಾಪಕರ್ಮಕೃತ್ ॥ ೧೪ ॥
ಸ್ಮೃತಮಾತ್ರೋ ಯಥಾ ವಿಷ್ಣುಃ ಸರ್ವಂ ಪಾಪಂ ವ್ಯಪೋಹತಿ ।
ತಥಾ ಪ್ರಣಾಶಮಭ್ಯೇತು ದೈತ್ಯೋಽಯಂ ಮೇಘವಾಹನಃ ॥ ೧೫ ॥

ಭವಂತು ಭದ್ರಾಣಿ ಸಮಸ್ತದೋಷಾಃ
ಪ್ರಯಾಂತು ನಾಶಂ ಜಗತೋಽಖಿಲಸ್ಯ ।
ಅಭೇದ್ಯಭಕ್ತ್ಯಾ ಪರಮೇಶ್ವರೇಶೇ
ಸ್ಮೃತೇ ಜಗದ್ಧಾತರಿ ವಾಸುದೇವೇ ॥ ೧೬ ॥

---

೧೨. ಮಾಯೆಯಿಂದ ಮುಚ್ಚಿದ ಜಗತ್ತೇ ವಾಸಸ್ಥಾನವಾಗುಳ್ಳವನೂ, ಸಂಸಾರ ಸಮುದ್ರವನ್ನು ದಾಟಲು ದೋಣಿಯಂತಿರುವ ಜ್ಞಾನವನ್ನೀಯುವವನೂ, ಸಂಪೂರ್ಣ ಜ್ಞಾನವುಳ್ಳವನೂ, ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವವನೂ ಆದ ಜನಾರ್ದನ ! ನಿನಗೆ ನಮಸ್ಕಾರವು.

೧೩. ವಾಸುದೇವನೆಂದರೆ ಪಾಪವು ಪರಿಹಾರವಾಗುವಂತೆ ಈ ಮೇಘವಾಹನನೂ ನಾಶಗೊಳ್ಳಲಿ.

೧೪. ವಿಷ್ಣುವು ತನ್ನ ಭಕ್ತರ ಪಾಪವನ್ನು ಆಕರ್ಷಿಸಿಪರಿಹರಿಸುವಂತೆ ಪಾಪ ಕರ್ಮವನ್ನಾಚರಿಸುವ ಈ ದೈತ್ಯನು ಮೃತನಾಗಲಿ.

೧೫. ಸ್ಮರಣಮಾತ್ರದಿಂದ ವಿಷ್ಣುವು ಸಕಲ ಪಾಪಗಳನ್ನೂ ಪರಿಹರಿಸುವಂತೆ ಈ ಮೇಘವಾಹನ ದೈತ್ಯನು ನಾಶಗೊಳ್ಳಲಿ.

೧೬. ಜಗದ್ರಕ್ಷಕನಾದ ಶ್ರೀ ವಿಷ್ಣುವನ್ನು ದೃಢಭಕ್ತಿಯಿಂದ ಸ್ಮರಿಸಿದಕೂಡಲೆ ಮಂಗಳವುಂಟಾಗಲಿ. ಸಮಸ್ತ ಪ್ರಪಂಚದ ಎಲ್ಲದೋಷಗಳೂ ನಾಶಗೊಳ್ಳಲಿ.

ಯೇ ಭೂತಲೇ ಯೇ ದಿವಿ ಯೇಽಂತರಿಕ್ಷೇ
ರಸಾತಲೇ ಪ್ರಾಣಿಗಣಾಶ್ಚ ಕೇಚಿತ್ ।
ಭವಂತು ತೇ ಸಿದ್ಧಿಯುತಾ ನರೋತ್ತಮಾಃ
ಸ್ಮೃತೇ ಜಗದ್ಧಾತರಿ ವಾಸುದೇವೇ ॥ ೧೭ ॥
ಯೇ ಪ್ರಾಣಿನಃ ಕುತ್ರಚಿದತ್ರ ಸಂತಿ
ಬ್ರಹ್ಮಾಂಡಮಧ್ಯೇ ಪರತಶ್ಚ ಕೇಚಿತ್ ।
ತೇಷಾಂ ತು ಸಿದ್ಧಿಃ ಪರಮಾಸ್ತ್ವನಿಂದ್ಯಾ
ಸ್ತುತೇ ಜಗದ್ಧಾತರಿ ವಾಸುದೇವೇ ॥ ೧೮ ॥

ಈಶ್ವರ ಉವಾಚ :—

ಇತಿ ಸ್ತುತಸ್ತದಾ ದೇವಿ ಆದಿನಾರಾಯಣೋ ಹರಿಃ ।
ಜ್ಞಾತ್ವಾ ಸ ಭಾವಿಕಾರ್ಯಂ ತತ್ಸಮಾರುಹ್ಯ ಚ ಪಾದುಕಾಂ ॥ ೧೯ ॥
ಬಭೂವ ತೇಷಾಂ ಪ್ರತ್ಯಕ್ಷ ಋಷೀಣಾಂ ಪಾಪನಾಶನಃ ।
ಉವಾಚ ಪ್ರಣತಾನ್ ಸರ್ವಾನ್ ಕಿಂ ವಾ ಕಾರ್ಯಂ ಹೃದಿ ಸ್ಥಿತಂ ॥ ೨೦ ॥
ಕಥ್ಯತಾಂ ತತ್ಕರಿಷ್ಯಾಮಿ ಯುಷ್ಮತ್ಸ್ತೋತ್ರೇಣ ತರ್ಪಿತಃ ॥ ೨೧ ॥
ಇತ್ಯುಕ್ತ್ವಾ ಋಷಯಃ ಸರ್ವೇ ಕೃತಾಂಜಲಿಪುಟಾಃ ಸ್ಥಿತಾಃ ।
ಆದಿದೇವಂ ಹರಿಂ ಪ್ರೋಚುಃ ಸರ್ವೇ ನತಶಿರೋಧರಾಃ ॥ ೨೨ ॥

---

೧೭. ಆ ವಾಸುದೇವನನ್ನು ಸ್ಮರಣೆಮಾಡಿದ ಕೂಡಲೆ ಭೂಮಿ ಅಂತರಿಕ್ಷ ಪಾತಾಳಗಳಲ್ಲಿರುವ ಪ್ರಾಣಿಗಳೂ, ಮನುಷ್ಯಶ್ರೇಷ್ಠರೂ ಇಷ್ಟ ಸಿದ್ಧಿಯನ್ನು ಪಡೆಯಲಿ.

೧೮. ಆ ವಾಸುದೇವನನ್ನು ಸ್ಮರಿಸಿದ ಕೂಡಲೆ ಬ್ರಹ್ಮಾಂಡದ ಒಳಗೆ ಮತ್ತು ಹೊರಗೆ ಇರುವ ಪ್ರಾಣಿಗಳು ಉತ್ತಮಸಿದ್ಧಿಯನ್ನು ಹೊಂದಲಿ.

೧೯–೨೧. ಈಶ್ವರನು ಹೇಳುತ್ತಾನೆ :—ಋಷಿಗಳು ಹೀಗೆ ಸ್ತುತಿಸಲು ಆ ಆದಿನಾರಾಯಣನು ಮುಂದಿನ ಕಾರ್ಯವನ್ನು ತಿಳಿದು ಪಾದುಕೆಯನ್ನು ಹತ್ತಿ ಆ ಋಷಿಗಳಿಗೆ ಪ್ರತ್ಯಕ್ಷನಾಗಿ ನಮಸ್ಕರಿಸಿದ ಅವರನ್ನು ಕುರಿತು ನಿಮ್ಮ ಮನಸ್ಸಿನಲ್ಲಿರುವ ಕಾರ್ಯವೇನು ? ಅದನ್ನು ಹೇಳಿ ಮಾಡುವೆನು. ನಿಮ್ಮ ಸ್ತೋತ್ರದಿಂದ ಸಂತೋಷ ಗೊಂಡಿದ್ದೇನೆಂದು ಹೇಳಿದನು.

೨೨. ವಿಷ್ಣುವು ಹೀಗೆ ಹೇಳಲು ಆ ಋಷಿಗಳು ಕೈಮುಗಿದುಕೊಂಡು ತಲೆ ಬಾಗಿಸಿ ಅವನನ್ನು ಕುರಿತು ಇಂತೆಂದರು.

ಋಷಯ ಊಚುಃ :—
ಜಾನಾಸಿ ಸರ್ವಂ ತ್ವಂ ದೇವ ನ ಚಾಽಸ್ತ್ಯವಿದಿತಂ ತವ ।
ಇಮಂ ದೈತ್ಯಂ ಮಹಾದೇವ ಸಂಹರಸ್ವ ಮಹಾಬಲಂ ॥
ಯಥೇದಂ ಸಕಲಂ ವಿಶ್ವಂ ನಿರಾತಂಕಂ ಭವೇತ್ಪ್ರಭೋ ॥ ೨೩ ॥
ಇತ್ಯುಕ್ತಸ್ತೈಸ್ತದಾ ವಿಷ್ಣುರ್ದೈತ್ಯಮಾಹೂಯ ಸಂಯುಗೇ ।
ತಾಡಯಾಮಾಸ ತಂ ದೈತ್ಯಂ ಹೃದಿ ಪಾದುಕಯಾ ಶುಭೇ ॥ ೨೪ ॥
ಸ ಹತಃ ಪತಿತೋ ದೈತ್ಯೋ ವಿಗತಾಸುರ್ಮಹೋದಧೌ ।
ಹತ್ವಾ ದೈತ್ಯವರಂ ದೇವಸ್ತತ್ರ ಸ್ಥಾನೇ ಸ್ಥಿತೋಽಭವತ್ ।
ಪಾದುಕಾಸನಸಂಸ್ಥಸ್ತು ತತ್ರಾಽದ್ಯಾಽಪಿ ವರಾನನೇ ॥ ೨೫ ॥
ಯಸ್ತಂ ಪೂಜಯತೇ ಭಕ್ತ್ಯಾ ಏಕಾದಶ್ಯಾಂ ನರೋತ್ತಮಃ ।
ಸೋಽಶ್ವಮೇಧಫಲಂ ಪ್ರಾಪ್ಯ ಮೋದತೇ ದಿವಿ ದೇವವತ್ ॥ ೨೬ ॥
ಗೋಲಕ್ಷಂ ಬ್ರಾಹ್ಮಣೇ ದತ್ವಾ ಯತ್ಫಲಂ ಪ್ರಾಪ್ನುಯಾನ್ನರಃ ।
ತದಾದಿದೇವೇ ಗೋವಿಂದೇ ದೃಷ್ಟೇ ಭಕ್ತ್ಯಾ ಫಲಂ ಲಭೇತ್ ॥ ೨೭ ॥
ಕಲೌ ಕೃತಯುಗಂ ತೇಷಾಂ ಕ್ಲೇಶಸ್ತೇಷಾಂ ಸುಖಾಧಿಕಃ ।
ಆದಿನಾರಾಯಣೋ ದೇವೋ ಯೇಷಾಂ ಹೃದಯಸಂಸ್ಥಿತಃ ॥ ೨೮ ॥

---

೨೩. ಋಷಿಗಳು ಹೇಳುತ್ತಾರೆ :—ಸ್ವಾಮಿ ನೀನೆಲ್ಲವನ್ನೂ ಅರಿತಿರುವೆ. ನಿನಗೆ ತಿಳಿಯದಿರುವುದು ಯಾವುದೂ ಇಲ್ಲ. ಅತ್ಯಂತ ಬಲಿಷ್ಠನಾದ ಈ ಮೇಘವಾಹನನ್ನು ಸಂಹರಿಸು. ಇದರಿಂದ ಸಮಸ್ತ ಪ್ರಪಂಚವೂ ದುಃಖರಹಿತವಾಗಲಿ.

೨೪. ಹೀಗೆ ಋಷಿಗಳು ಹೇಳಲು ವಿಷ್ಣುವು ಆ ದೈತ್ಯನನ್ನು ಕರೆದು ಯುದ್ಧದಲ್ಲಿ ಅವನ ಹೃದಯಕ್ಕೆ ಪಾದುಕೆಯಿಂದ ಹೊಡೆದನು.

೨೫. ಅದರಿಂದ ಆ ದೈತ್ಯನು ಅಸುವನ್ನುನೀಗಿ ಸಮುದ್ರದಲ್ಲಿ ಬಿದ್ದನು. ವಿಷ್ಣುವು ಆ ದೈತ್ಯನನ್ನು ಕೊಂದು ಆ ಸ್ಥಳದಲ್ಲಿ ಪಾದುಕಾಸನದಲ್ಲಿ ಈಗಲೂ ನೆಲೆಸಿರುವನು.

೨೬. ಆ ಆದಿನಾರಾಯಣನನ್ನು ಏಕಾದಶೀದಿನ ಭಕ್ತಿಯಿಂದ ಆರಾಧಿಸಿದ ಮನುಷ್ಯನು ಅಶ್ವಮೇಧಯಾಗದ ಫಲವನ್ನು ಪಡೆದು ದೇವಲೋಕದಲ್ಲಿ ದೇವತೆಗಳಂತೆ ಆನಂದಪಡುವನು.

೨೭. ಆದಿನಾರಾಯಣನನ್ನು ಭಕ್ತಿಯಿಂದ ದರ್ಶನ ಮಾಡಿದವನು ಬ್ರಾಹ್ಮಣರಿಗೆ ಲಕ್ಷಗೋವುಗಳನ್ನು ದಾನ ಮಾಡಿದ ಫಲವನ್ನು ಪಡೆಯುವನು.

೨೮. ಅವನನ್ನು ಧ್ಯಾನಿಸಿದ ಮನುಷ್ಯನಿಗೆ ಕಲಿಯುಗವು ಕೃತಯುಗದಂತೆಯೂ, ಕ್ಲೇಶವು ಪರಿಹಾರವಾಗಿ ಅಧಿಕಸುಖವೂ ಆಗುವುದು.

ಏಕಾದಶ್ಯಾಂ ರವಿದಿನೇ ಸ್ನಾತ್ವಾ ಸನ್ನಿಹಿತಾ ಜಲೇ ।
ಆದಿನಾರಾಯಣಂ ಪೂಜ್ಯ ಮುಚ್ಯತೇ ಭವಬಂಧನಾತ್ ॥ ೨೯ ॥
ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ವಿಷ್ಣುದೈವತಂ ।
ಶ್ರುತಂ ಪಾಪಹರಂ ನೃಣಾಂ ದಾರಿದ್ರ್ಯೌಘವಿನಾಶನಂ ॥ ೩೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಆದಿನಾರಾಯಣಮಾಹಾತ್ಮ್ಯವರ್ಣನಂನಾಮ
॥ ಚತುರಶೀತಿತಮೋಽಧ್ಯಾಯಃ ॥

---

೨೯. ಏಕಾದಶೀ ಭಾನುವಾರದಿನ ಅಲ್ಲಿರುವ ಸನ್ನಿಹಿತಾನದಿಯ ನೀರಿನಲ್ಲಿ ಮಿಂದು ಆದಿನಾರಾಯಣನನ್ನು ಪೂಜಿಸಿದವನು ಸಂಸಾರ ಬಂಧನದಿಂದ ಮುಕ್ತನಾಗುವನು.

೩೦. ದೇವಿ! ಹೀಗೆ ನಿನಗೆ ವಿಷ್ಣುವಿನ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಕೇಳಿದ ಮನುಷ್ಯರ ಪಾಪವೂ, ದಾರಿದ್ರ್ಯವೂ ತೊಲಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಆದಿನಾರಾಯಣಮಾಹಾತ್ಮ್ಯವರ್ಣನವೆಂಬ
ಎಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾಶೀತಿತಮೋಽಧ್ಯಾಯಃ

ಸನ್ನಿಹಿತಾಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ತತ್ರ ಸನ್ನಿಹಿತಾ ಪ್ರೋಕ್ತಾ ಯಾ ತ್ವಯಾ ವೃಷಭಧ್ವಜ ।
ಕಥಂ ದೇವ ಸಮಾಯಾತಾ ಕುರುಕ್ಷೇತ್ರಾನ್ಮಹಾನದೀ ।
ಕಿಂ ಪ್ರಭಾವಾ ತು ಸಾ ಪ್ರೋಕ್ತಾ ಫಲಂ ಸ್ನಾನಾದಿಕೇನ ಕಿಂ ॥ ೧ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಯತ್ರ ಸನ್ನಿಹಿತಾ ಶುಭಾ ।
ಪಾಪಘ್ನೀ ಸರ್ವಜಂತೂನಾಂ ದರ್ಶನಾತ್ಸ್ಪರ್ಶನಾದಪಿ ॥ ೨ ॥
ಆದಿನಾರಾಯಣಾದ್ದೇವಿ ಪಶ್ಚಿಮೇ ಧನುಷಾಂ ತ್ರಯೇ ।
ಸಂಸ್ಥಿತಾ ಸಾ ಮಹಾದೇವೀ ಸರಿದ್ರೂಪಾ ಮಹಾನದೀ ॥ ೩ ॥
ಕಥಯಾಮಿ ಸಮಾಸೇನ ತದುತ್ಪತ್ತಿಂ ಶೃಣು ಪ್ರಿಯೇ ।
ಜರಾಸಂಧಭಯಾದ್ದೇವಿ ವಿಷ್ಣುಃ ಪರಿಜನೈಃ ಸಹ । ॥ ೪ ॥

ಕನ್ನಡದ ಅನುವಾದ

ಸನ್ನಿಹಿತಾಮಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ :—ಶಂಕರ! ನೀನು ಸನ್ನಿಹಿತಾನದಿಯನ್ನು ಪ್ರಸ್ತಾಪಿಸಿರುವೆ. ಆ ಮಹಾನದಿಯು ಕುರುಕ್ಷೇತ್ರದಿಂದ ಈ ಪ್ರಭಾಸಕ್ಕೆ ಹೇಗೆ ಬಂದಿತು? ಅದರ ಮಾಹಾತ್ಮ್ಯವೇನು? ಅದರಲ್ಲಿ ಸ್ನಾನ ಮೊದಲಾದ್ದನ್ನು ಮಾಡುವುದರಿಂದ ಯಾವ ಫಲವು ಲಭಿಸುವುದು?

೨. ಈಶ್ವರನು ಹೇಳುತ್ತಾನೆ :—ದೇವಿ! ದರ್ಶನ ಸ್ಪರ್ಶನದಿಂದ ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವಸನ್ನಿಹಿತಾನದಿಯ ವಿಷಯವನ್ನು ಹೇಳುವೆನು ಕೇಳು.

೩. ಆ ನದಿಯು ಆದಿನಾರಾಯಣನಿಗಿಂತ ಪಶ್ಚಿಮದಲ್ಲಿ ಮೂರು ಬಿಲ್ಲಿನ ದೂರದಲ್ಲಿ ನೆಲೆಸಿರುವುದು.

೪–೫. ಪ್ರಿಯಳೆ! ಅದರ ಉತ್ಪತ್ತಿಯನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. ಶ್ರೀ ಕೃಷ್ಣನು ಜರಾಸಂಧನ ಭಯದಿಂದ ಪರಿಜನರೊಡನೆ ಬಾಲಕರೂ, ವೃದ್ಧರೂ,

ಗೃಹೀತ್ವಾ ಯಾದವಾನ್ ಸರ್ವಾನ್ ಬಾಲವೃದ್ಧವಣಿಗ್ಜನಾನ್ ।
ಸಶೂನ್ಯಾಂ ಮಥುರಾಂ ಕೃತ್ವಾ ಪ್ರಭಾಸಂ ಸಮುಪಾಗತಃ ॥ ೫ ॥
ಸಮುದ್ರಂ ಪ್ರಾರ್ಥಯಾಮಾಸ ಸ್ಥಾನಂ ಸಂವಾಸಹೇತವೇ ।
ಏತಸ್ಮಿನ್ನೇವ ಕಾಲೇ ತು ದೇವದೇವೋ ದಿವಾಕರಃ ॥ ೬ ॥
ಸಂಗ್ರಸ್ತೋ ರಾಹುಣಾ ದೇವಿ ಪರ್ವಕಾಲೇ ಹ್ಯುಪಸ್ಥಿತೇ ।
ತಂ ದೃಷ್ಟ್ವಾ ಯಾದವಾಃ ಸರ್ವೇ ವಿಷಾದಂ ಪರಮಂ ಗತಾಃ ॥ ೭ ॥
ಅಪ್ರಾಪ್ತಾಃ ಸನ್ನಿಹತ್ಯಾಯಾಂ ತಾನುವಾಚ ಜನಾರ್ದನಃ ।
ಮಾ ವಿಷಾದಂ ಯದುಶ್ರೇಷ್ಠಾ ವ್ರಜಧ್ವಂ ಮಯಿ ಸಂಸ್ಥಿತೇ ॥ ೮ ॥
ದೃಶ್ಯತಾಂ ಮತ್ಪ್ರಭಾವೋಽದ್ಯ ಧರ್ಮಾರ್ಥಮಿಹ ಭೂತಲೇ ।
ಆನಯಿಷ್ಯಾಮ್ಯಹಂ ಸಮ್ಯಕ್ಪುಣ್ಯಂ ಸನ್ನಿಹಿತಂ ಸರಃ ॥ ೯ ॥
ಏವಮುಕ್ತ್ವಾ ಸ ಭಗವಾನ್ ಸಮಾಧಿಸ್ಥೋ ಬಭೂವ ಹ ।
ಏವಂ ಸಂಧ್ಯಾಯತಸ್ತಸ್ಯ ವಿಷ್ಣೋರಮಿತತೇಜಸಃ ॥ ೧೦ ॥
ಪ್ರಾದುರ್ಭೂತಾ ತತಸ್ತಸ್ಯ ವಾರಿಧಾರಾಽಗ್ರತಃ ಶುಭಾ ।
ವಿಭೇದ್ಯ ಧರಣೀಪೃಷ್ಠಂ ಸ್ನಾನಾರ್ಥಂ ಚಾಽಸುರದ್ವಿಷಃ ॥ ೧೧ ॥

ವರ್ತಕರೂ ಆದ ಸಕಲ ಯಾದವರನ್ನು ಕರೆದುಕೊಂಡು ಮಥುರಾಪಟ್ಟಣವನ್ನು ಶೂನ್ಯವಾಗಿಸಿ ಪ್ರಭಾಸಕ್ಕೆ ಬಂದನು.

೬–೭. ಅಲ್ಲಿ ಅವನು ಸಮುದ್ರನನ್ನು ಕುರಿತು ವಾಸಕ್ಕೆ ಸ್ಥಳವನ್ನು ಕೇಳಿದನು. ದೇವಿ! ಈ ಸಮಯದಲ್ಲಿಯೇ ಪರ್ವಕಾಲವು ಒದಗಲು ಸೂರ್ಯನಿಗೆ ರಾಹುಗ್ರಹಣವು ಸಂಭವಿಸಿತು. ಅದನ್ನು ನೋಡಿ ಸಕಲ ಯಾದವರು ಅತ್ಯಂತಖಿನ್ನರಾದರು.

೮. ಅವರು ಮುಂದಕ್ಕೆ ಬಾರದಿರಲು ಅವರನ್ನು ಕುರಿತು ಕೃಷ್ಣನು ಇಂತೆಂದನು. "ಎಲೈ ಯಾದವೋತ್ತಮರೆ! ನಾನಿರಲು ನೀವೇಕೆ ವಿಷಣ್ಣರಾಗಬೇಕು!

೯. ಈಗ ನನ್ನ ಸಾಮರ್ಥ್ಯವನ್ನು ನೋಡಿರಿ. ನಾನು ಧರ್ಮಕ್ಕೋಸ್ಕರ ಭೂಮಿಯಲ್ಲಿ ಪುಣ್ಯಕರವಾದ ಸನ್ನಿಹಿತವೆಂಬ ಸರೋವರವನ್ನು ತರಿಸುವೆನು".

೧೦–೧೧. ವಿಷ್ಣುವು ಹೀಗೆಂದು ನುಡಿದು ಧ್ಯಾನಾಸಕ್ತನಾದನು. ಹೀಗೆ ಧ್ಯಾನಿಸುತ್ತಿರುವ ಅತ್ಯಂತ ತೇಜಸ್ವಿಯಾದ ಆ ವಿಷ್ಣುವಿನ ಮುಂದೆ ಮಂಗಳಕರವಾದ ನೀರಿನ ಧಾರೆಯು ಭೂಮಿಯನ್ನು ಭೇದಿಸಿಕೊಂಡು ಕೃಷ್ಣನ ಸ್ನಾನಕ್ಕಾಗಿ ಮೇಲಕ್ಕೆದ್ದಿತು.

ತತಸ್ತೇ ಯಾದವಾಃ ಸರ್ವೇ ರಾಮಸಾಂಬಪುರೋಗಮಾಃ ।
ಚಕ್ರುಃ ಸ್ನಾನಂ ಮಹಾದೇವಿ ರಾಹುಗ್ರಸ್ತೇ ದಿವಾಕರೇ ॥ ೧೨ ॥
ಪ್ರಾಪ್ತಪುಣ್ಯಾ ಬಭೂವುಸ್ತೇ ಸನ್ನಿಹಿತ್ಯಾಸಮುದ್ಭವಂ ।
ಕುರುಕ್ಷೇತ್ರಸ್ಯ ಯಾತ್ರಾಯಾಃ ಪ್ರಾಪ್ಯ ಸಮ್ಯಕ್ಫಲಂ ಹಿ ತೇ ॥ ೧೩ ॥
ಏವಂ ತತ್ಸಮನುಪ್ರಾಪ್ತಂ ಪುಣ್ಯಂ ಸಾನ್ನಿಹಿತಂ ಸರಃ ।
ತತ್ರ ಸ್ನಾತ್ವಾ ಮಹಾದೇವಿ ರಾಹುಗ್ರಸ್ತೇ ದಿವಾಕರೇ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತ್ಯಶೇಷತಃ ॥ ೧೪ ॥
ಯಸ್ತತ್ರ ಭೋಜಯೇದ್ವಿಪ್ರಂ ಷಡ್ರಸಂ ವಿಧಿಪೂರ್ವಕಂ ।
ಏಕೇನ ಭೋಜಿತೇನೈವ ಕೋಟಿರ್ಭವತಿ ಭೋಜಿತಾ ॥ ೧೫ ॥
ಯಸ್ತತ್ರ ಕಾರಯೇದ್ಧೋಮಂ ಸನ್ನಿಹಿತ್ಯಾಸಮೀಪತಃ ।
ಏಕೈಕಾಹುತಿದಾನೇನ ಕೋಟಿ ಹೋಮಫಲಂ ಲಭೇತ್ ॥ ೧೬ ॥
ಮಂತ್ರಜಾಪ್ಯಂ ತು ಕುರುತೇ ತತ್ರ ಸ್ಥಾನೇ ಸ್ಥಿತೋ ಯದಿ ।
ಏಕೈಕಮಂತ್ರಜಾಪ್ಯೇನ ಕೋಟಿಜಾಪ್ಯಫಲಂ ಲಭೇತ್ ॥ ೧೭ ॥
ಸುವರ್ಣದಾನಂ ದಾತವ್ಯಂ ತತ್ರ ಯಾತ್ರಾಫಲೇಪ್ಸುಭಿಃ ।
ಸ್ನಾತ್ವಾ ಸಂಪೂಜನೀಯಶ್ಚ ಆದಿದೇವೋ ಜನಾರ್ದನಃ ॥ ೧೮ ॥

---

೧೨. ದೇವಿ! ಬಳಿಕ ಆ ಸೂರ್ಯಗ್ರಹಣದಲ್ಲಿ ಬಲರಾಮ ಸಾಂಬ ಮೊದಲಾದ ಯಾದವರು ಆ ಸರೋವರದಲ್ಲಿ ಮಿಂದರು.

೧೩. ಅವರು ಸನ್ನಿಹಿತ್ಯಾ ಸರೋವರದಿಂದುಂಟಾದ ಪುಣ್ಯವನ್ನು ಪಡೆದು ಕುರುಕ್ಷೇತ್ರಯಾತ್ರೆಯ ಸಂಪೂರ್ಣ ಫಲವನ್ನು ಹೊಂದಿದರು.

೧೪. ಹೀಗೆ ಸನ್ನಿಹಿತ್ಯಾ ಸರೋವರವು ಅಲ್ಲಿಗೆ ಬಂದಿರುವುದು. ಮಹಾದೇವಿ! ಸೂರ್ಯನು ರಾಹುಗ್ರಸ್ತನಾಗಲು ಅಲ್ಲಿ ಮಿಂದವನು ಅಗ್ನಿಷ್ಟೋಮಯಾಗದ ಸಂಪೂರ್ಣ ಫಲವನ್ನು ಪಡೆಯುವನು.

೧೫. ಅಲ್ಲಿ ಒಬ್ಬ ಬ್ರಾಹ್ಮಣನಿಗೆ ಷಡ್ರಸಾನ್ನ ಭೋಜನಮಾಡಿಸಿದವನು ಕೋಟಿ ಬ್ರಾಹ್ಮಣರಿಗೆ ಭೋಜನ ಮಾಡಿಸಿದ ಫಲವನ್ನು ಹೊಂದುವನು.

೧೬. ಆ ಸನ್ನಿಹತ್ಯಾ ಸರದ ಹತ್ತಿರ ಹೋಮಮಾಡಿದವನು ಒಂದೊಂದು ಆಹುತಿದಾನದಿಂದ ಕೋಟಿ ಹೋಮದ ಫಲವನ್ನು ಪಡೆಯುವನು.

೧೭. ಅಲ್ಲಿ ಕುಳಿತು ಮಂತ್ರವನ್ನು ಜಪಿಸುವವನು ಒಂದೊಂದು ಮಂತ್ರಜಪದಿಂದ ಕೋಟಿ ಮಂತ್ರಜಪದ ಫಲವನ್ನು ಹೊಂದುವನು.

೧೮. ಅಲ್ಲಿ ಯಾತ್ರೆಯ ಫಲವನ್ನು ಬಯಸುವವರು ಸುವರ್ಣ ದಾನವನ್ನಿತ್ತು ಆ ನದಿಯಲ್ಲಿ ಮಿಂದು ಆದಿನಾರಾಯಣನನ್ನು ಪೂಜಿಸಬೇಕು.

ಇತಿ ವೈ ಕಥಿತಂ ಸಮ್ಯಕ್ಫಲಂ ಸಾನ್ನಿಹಿತಂ ತವ ।
ಶ್ರುತಂ ಪಾಪಹರಂ ನೃಣಾಂ ಸಮ್ಯಕ್ಛ್ರದ್ಧಾವತಾಂ ಪ್ರಿಯೇ ॥ ೧೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸನ್ನಿಹಿತ್ಯಾಮಾಹಾತ್ಮ್ಯವರ್ಣನಂ ನಾಮ
॥ ಪಂಚಾಶೀತಿತಮೋಽಧ್ಯಾಯಃ ॥

---

೧೯. ಪ್ರಿಯಳೆ! ಹೀಗೆ ನಿನಗೆ ಸನ್ನಿಹಿತಾನದಿಯಸ್ನಾನದ ಫಲವನ್ನು ಹೇಳಿರುವೆನು. ಇದನ್ನು ಶ್ರದ್ಧೆಯಿಂದ ಕೇಳಿದ ಮಾನವರ ಪಾಪವು ಪರಿಹಾರವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ ಮಾಹಾತ್ಮ್ಯದಲ್ಲಿ
ಸನ್ನಿಹಿತ್ಯಾಮಾಹಾತ್ಮ್ಯವರ್ಣನವೆಂಬ
ಎಂಬತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡಶೀತಿತಮೋಽಧ್ಯಾಯಃ

ಪಾಂಡವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯಾಸ್ತು ದಕ್ಷಿಣೇ ಭಾಗೇ ಸ್ಥಿತಂ ಲಿಂಗಂ ಮಹಾಪ್ರಭಂ ।
ಪಾಂಡವೇಶ್ವರನಾಮಾಢ್ಯಂ ಪಂಚಭಿಃ ಸ್ಥಾಪಿತಂ ಕ್ರಮಾತ್ ॥ ೧ ॥
ಗುಪ್ತಚರ್ಯಾಂ ಯದಾ ಯಾತಾಃ ಪಾಂಡವಾ ವನವಾಸಿನಃ ॥
ತೀರ್ಥಯಾತ್ರಾಪ್ರಸಂಗೇನ ಪ್ರಭಾಸಂ ಕ್ಷೇತ್ರಮಾಗತಾಃ ॥ ೨ ॥
ತಸ್ಮಿನ್ಕಾಲೇ ಮಹಾದೇವಿ ಸಂಪ್ರಾಪ್ತೇ ಸೋಮಪರ್ವಣಿ ।
ಸ್ಥಾಪಯಾಮಾಸುಸ್ತೇ ಸರ್ವೇ ಲಿಂಗಂ ಸನ್ನಿಹಿತಾತಟೇ ॥ ೩ ॥
ಮಾರ್ಕಂಡಪ್ರಮುಖಾನ್ ಕೃತ್ವಾ ಋತ್ವಿಜೋ ಬ್ರಾಹ್ಮಣೋತ್ತಮಾನ್ ।
ವೇದೋಕ್ತೈಃ ಕಾರಯಾಮಾಸುರಭಿಷೇಕಂ ವೃಷಾಂ ದದುಃ ॥ ೪ ॥
ತತಃ ಪ್ರಸನ್ನಾ ಋಷಯೋ ಮಾರ್ಕಂಡಪ್ರಮುಖಾಃ ಪ್ರಿಯೇ ।
ಪ್ರತಿಷ್ಠಿತಸ್ಯ ಲಿಂಗಸ್ಯ ಪಾಂಡವೈರ್ವರವರ್ಣಿನಿ ॥ ೫ ॥

ಕನ್ನಡದ ಅನುವಾದ

ಪಾಂಡವೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಆ ಸನ್ನಿಹಿತ್ಯಾನದಿಯ ದಕ್ಷಿಣ ದಿಕ್ಕಿನಲ್ಲಿ ಪಂಚಪಾಂಡವರು ಸ್ಥಾಪಿಸಿರುವ ಪಾಂಡವೇಶ್ವರವೆಂಬ ಅತ್ಯಂತ ಕಾಂತಿಯುಳ್ಳ ಲಿಂಗವಿರುವುದು.

೨. ವನವಾಸಿಗಳಾದ ಪಾಂಡವರು ಅಜ್ಞಾತವಾಸವನ್ನಾಚರಿಸುತ್ತಿರುವಾಗ ತೀರ್ಥಯಾತ್ರಾಕ್ರಮದಿಂದ ಪ್ರಭಾಸಕ್ಷೇತ್ರಕ್ಕೆ ಬಂದರು.

೩. ಮಹಾದೇವಿ! ಅವರೆಲ್ಲರೂ ಚಂದ್ರಗ್ರಹಣ ಕಾಲದಲ್ಲಿ ಸನ್ನಿಹಿತಾ ತೀರದಲ್ಲಿ ಶಿವಲಿಂಗವನ್ನು ಸ್ಥಾಪಿಸಿದರು.

೪. ಮಾರ್ಕಂಡೇಯನೇ ಮೊದಲಾದ ಬ್ರಾಹ್ಮಣೋತ್ತಮರನ್ನು ಋತ್ವಿಜರನ್ನಾಗಿಮಾಡಿ ವೇದೋಕ್ತ ಮಂತ್ರಗಳಿಂದ ಆ ಶಿವಲಿಂಗಕ್ಕೆ ಅಭಿಷೇಕಮಾಡಿಸಿ ಎತ್ತುಗಳನ್ನು ದಾನಮಾಡಿದರು.

೫. ಪ್ರಿಯಳೆ! ಹೀಗೆ ಪಾಂಡವರು ಶಿವಲಿಂಗವನ್ನು ಪ್ರತಿಷ್ಠೆಮಾಡಲು ಮಾರ್ಕಂಡೇಯನೇ ಮೊದಲಾದ ಋಷಿಗಳು ಸಂತುಷ್ಟರಾದರು.

ಋಷಯ ಊಚುಃ :—

ಯೇ ಚೈತತ್ಪೂಜಯಿಷ್ಯಂತಿ ಲಿಂಗಂ ಪಾಂಡವಪೂಜಿತಂ ।
ತೇ ವೈ ಪೂಜ್ಯಾ ಭವಿಷ್ಯಂತಿ ದೇವದಾನವರಕ್ಷಸಾಂ ॥ ೧ ॥
ಅಶ್ವಮೇಧಫಲಂ ತೇಷಾಂ ಸಮ್ಯಕ್ಛ್ರದ್ಧಾರ್ಚನೇನ ವೈ ।
ಭವಿಷ್ಯತಿ ನ ಸಂದೇಹೋ ಹ್ಯಸ್ಮದ್ವಾಕ್ಯಪ್ರಭಾವತಃ ॥ ೨ ॥
ಸ್ನಾತ್ವಾ ಸನ್ನಿಹಿತಾಕುಂಡೇ ಯೋಽರ್ಚಯೇತ್ಪಾಂಡವೇಶ್ವರಂ ।
ಮಾಘೇ ಮಾಸಿ ಸಮಗ್ರೇ ತು ಸ ಸಾಕ್ಷಾತ್ಪುರುಷೋತ್ತಮಃ ॥ ೩ ॥
ದರ್ಶನೇನಾಽಪಿ ತಸ್ಯಾಽಪಿ ಪಾಪಂ ಯಾತಿ ಸಹಸ್ರಧಾ ।
ವಿಷ್ಣುರೂಪೋ ಹಿ ಸ ಪ್ರೋಕ್ತೋ ನಾಽತ್ರ ಕಾರ್ಯಾ ವಿಚಾರಣಾ ॥ ೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ,
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಾಂಡವೇಶ್ವರಮಾಹಾತ್ಮ್ಯವರ್ಣನಂ ನಾಮ
ಷಡಶೀತಿತಮೋಽಧ್ಯಾಯಃ

---

೧. ಋಷಿಗಳು ಹೇಳುತ್ತಾರೆ:—ಪಾಂಡವರು ಪೂಜಿಸಿದ ಈ ಶಿವಲಿಂಗವನ್ನು ಆರಾಧಿಸುವವರು ದೇವದಾನವ ರಾಕ್ಷಸರಿಗೆ ಪೂಜ್ಯರಾಗುತ್ತಾರೆ.

೨. ನಮ್ಮ ಮಾತಿನ ಪ್ರಭಾವದಿಂದ ಆ ಲಿಂಗವನ್ನು ಶ್ರದ್ಧೆಯಿಂದ ಪೂಜಿಸಿದವರಿಗೆ ಅಶ್ವಮೇಧಯಾಗದ ಫಲವು ಲಭಿಸುವುದು.

೩. ಮಾಘಮಾಸದಲ್ಲಿ ಪ್ರತಿದಿನವೂ ಸನ್ನಿಹಿತಾಕುಂಡದಲ್ಲಿ ಮಿಂದು ಪಾಂಡವೇಶ್ವರನನ್ನು ಪೂಜಿಸಿದವನು ಸಾಕ್ಷಾನ್ನಾರಾಯಣನೇ ಆಗುವನು.

೪. ಆ ಪಾಂಡವೇಶ್ವರನನ್ನು ದರ್ಶನಮಾಡುವುದರಿಂದಲೇ ಪಾಪವು ಸಾವಿರ ವಿಧವಾಗಿ ನಾಶವಾಗುವುದು. ಅಂತಹ ಮನುಷ್ಯನು ವಿಷ್ಣುರೂಪನೆಂದು ಹೇಳಿದೆ. ಈ ವಿಷಯದಲ್ಲಿ ವಿಚಾರವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಾಂಡವೇಶ್ವರಮಾಹಾತ್ಮ್ಯ ವರ್ಣನವೆಂಬ
ಎಂಬತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಾಽಶೀತಿತಮೋಽಧ್ಯಾಯಃ

ಭೂತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಏವಂ ಕೃತ್ವಾ ನರೋ ಯಾತ್ರಾಂ ಸಮ್ಯಕ್ಛ್ರದ್ಧಾಸಮನ್ವಿತಃ ।
ತತೋ ಗಚ್ಛೇನ್ಮಹಾದೇವಿ ರುದ್ರಾನೇಕಾದಶ ಕ್ರಮಾತ್ ॥ ೧ ॥
ಪ್ರಭಾಸಕ್ಷೇತ್ರಮಧ್ಯಸ್ಥಾನ್ ಮಹಾಪಾತಕನಾಶನಾನ್ ।
ಯದೇಕಾದಶಧಾ ಪಾಪಮರ್ಜಿತಂ ಮನುಜೈಃ ಪೃಥಕ್ ॥ ೨ ॥
ತದೇಕಾದಶರುದ್ರಾಣಾಂ ಪೂಜನಾತ್ಕ್ಷಯಮೇಷ್ಯತಿ ।
ಸಂಕ್ರಾಂತಾವಯನೇವಾಽಪಿ ಚಂದ್ರಸೂರ್ಯಗ್ರಹೇಽಥವಾ ॥ ೩ ॥
ಅನ್ಯಾಸು ಪುಣ್ಯತಿಥಿಷು ಸಮ್ಯಗ್ಭಾವೇನ ಭಾವಿತಃ ।
ಪೂಜಯೇದಾನುಪೂರ್ವ್ಯೇಣ ರುದ್ರೈಕಾದಶಕಂ ಕ್ರಮಾತ್ ॥ ೪ ॥
ತೇಷಾಂ ನಾಮಾನಿ ವಕ್ಷ್ಯಾಮಿ ಯಾನ್ಯತೀತಾನಿ ಮೇ ಪುರಾ ।
ಆದ್ಯೇ ಕೃತಯುಗೇ ತಾನಿ ಶೃಣು ದೇವಿ ಯಥಾರ್ಥತಃ ॥ ೫ ॥

ಕನ್ನಡದ ಅನುವಾದ

ಭೂತೇಶ್ವರಮಾಹಾತ್ಮ್ಯವರ್ಣನ

೧–೪. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಹೀಗೆ, ಮನುಷ್ಯನು ಶ್ರದ್ಧೆಯಿಂದ ಯಾತ್ರೆಯನ್ನು ಮಾಡಿ ಬಳಿಕ ಪ್ರಭಾಸಕ್ಷೇತ್ರದ ಮಧ್ಯದಲ್ಲಿರುವ ಮಹಾಪಾತಕಗಳನ್ನು ನಾಶಗೊಳಿಸುವ ಏಕಾದಶರುದ್ರರನ್ನು ಹೊಂದಬೇಕು. ಮಾನವರು ಏಕಾದಶ ವಿಧವಾಗಿ ಮಾಡಿದ ಪಾಪವು ಏಕಾದಶರುದ್ರರನ್ನು ಪೂಜಿಸುವುದರಿಂದ ನಾಶವಾಗುವುದು. ಅಯನಸಂಕ್ರಾಂತಿ ದಿನವಾಗಲಿ, ಚಂದ್ರಸೂರ್ಯರ ಗ್ರಹಣ ಕಾಲದಲ್ಲಾಗಲಿ, ಇತರ ಪುಣ್ಯ ತಿಥಿಗಳಲ್ಲಾಗಲಿ ಏಕಾದಶ ರುದ್ರರನ್ನು ಕ್ರಮವಾಗಿ ಭಕ್ತಿಯಿಂದ ಪೂಜಿಸಬೇಕು.

೫. ಹಿಂದೆ ಕೃತಯುಗದಲ್ಲಿ ಕಳೆದುಹೋದ ನನ್ನ ಆ ಹನ್ನೊಂದು ಹೆಸರುಗಳನ್ನು ಯಥಾರ್ಥವಾಗಿ ಹೇಳುವೆನು. ಕೇಳು.

ಅಜೈಕಪಾದಹಿರ್ಬುಧ್ನ್ಯೋ ವಿರೂಪಾಕ್ಷೋಽಥ ರೈವತಃ ।
ಹರಶ್ಚ ಬಹುರೂಪಶ್ಚ ತ್ರ್ಯಂಬಕಶ್ಚ ಸುರೇಶ್ವರಃ ।
ವೃಷಾಕಪಿಶ್ಚ ಶಂಭುಶ್ಚ ಕಪರ್ದೀ ಚಾಽಪರಾಜಿತಃ ॥ ೬ ॥
ಆದೌ ಕೃತಯುಗೇ ದೇವಿ ತ್ರೇತಾಯಾಂ ದ್ವಾಪರೇಽಪಿ ವಾ ।
ಕಲೌ ಯುಗೇ ತು ಸಂಪ್ರಾಪ್ತೇ ಜಾತಂ ನಾಮಾಂತರಂ ಪುನಃ ॥ ೭ ॥
ಏಕಾದಶಧಾ ರುದ್ರಾಣಾಂ ತಾನಿ ತೇ ವಚ್ಮಿ ಸಾಂಪ್ರತಂ ।
ಭೂತೇಶೋ ನೀಲರುದ್ರಶ್ಚ ಕಪಾಲೀ ವೃಷವಾಹನಃ ॥ ೮ ॥
ತ್ರ್ಯಂಬಕೋ ಘೋರನಾಮಾ ಚ ಮಹಾಕಾಲೋಽಥ ಭೈರವಃ ।
ಮೃತ್ಯುಂಜಯೋಽಥ ಕಾಮೇಶೋ ಯೋಗೇಶ ಇತಿ ಕೀರ್ತಿತಃ ।
ಏಕಾದಶೈತೇ ರುದ್ರಾಸ್ತೇ ಕಥಿತಾಃ ಕ್ರಮಶಃ ಪ್ರಿಯೇ ॥ ೯ ॥
ಅನಾದಿನಿಧನಾ ದೇವಿ ಭೇದಭಿನ್ನಾಸ್ತು ತೇ ಪೃಥಕ್ ।
ಏಕಾದಶಸ್ವರೂಪೇಣ ಪೃಥಙ್ನಾಮ ಪ್ರಭೇದತಃ ॥ ೧೦ ॥

ದೇವ್ಯುವಾಚ :—

ಭಗವನ್ ವಿಸ್ತರಾದ್ಬ್ರೂಹಿ ಲಿಂಗೈಕಾದಶಕಕ್ರಮಂ ।
ಸ್ಥಾನಸೀಮಾಪ್ರಭೇದೇನ ಮಹಾತ್ಮ್ಯೋತ್ಪತ್ತಿಕಾರಣೈಃ ॥ ೧೧ ॥

೬–೭. ಅಜೈಕಪಾದ ಅಹಿರ್ಬುಧ್ನ್ಯ, ವಿರೂಪಾಕ್ಷ, ರೈವತ, ಹರ, ಬಹುರೂಪ, ತ್ರ್ಯಂಬಕ, ಸುರೇಶ್ವರ, ವೃಷಾಕಪಿ, ಶಂಭು, ಕಪರ್ದೀ, ಅಪರಾಜಿತ ಎಂಬ ಹೆಸರುಗಳು ಕೃತ, ತ್ರೇತಾ, ದ್ವಾಪರಯುಗಗಳಲ್ಲಿ ಪ್ರಸಿದ್ಧವಾದುವು. ಕಲಿಯುಗವು ಬರಲು ಬೇರೆ ನಾಮಗಳಾದುವು.

೮–೯. ಈಗ ಆ ಹೆಸರುಗಳನ್ನು ಹೇಳುತ್ತೇನೆ. ಭೂತೇಶ, ನೀಲರುದ್ರ, ಕಪಾಲಿ, ವೃಷವಾಹನ, ತ್ರ್ಯಂಬಕ, ಘೋರ, ಮಹಾಕಾಲ, ಭೈರವ, ಮೃತ್ಯುಂಜಯ, ಕಾಮೇಶ, ಯೋಗೇಶ ಎಂದು ಕ್ರಮವಾಗಿ ಹನ್ನೊಂದು ಹೆಸರುಗಳಾಗಿರುವುವು.

೧೦. ದೇವಿ! ನಿತ್ಯರಾಗಿರುವ ಇವರು ವಿಭಿನ್ನನಾಮಗಳಿಂದ ಬೇರೆ ಬೇರೆಯಾಗಿರುವರು.

೧೧. ದೇವಿಯು ಹೇಳುತ್ತಾಳೆ :—ಪೂಜ್ಯನೆ! ಹನ್ನೊಂದು ಲಿಂಗಗಳ ಸ್ಥಾನ ಮತ್ತು ಎಲ್ಲೆಕಟ್ಟುಗಳ ಕ್ರಮದಿಂದ ಸಹಿತವಾಗಿ ಮಾಹಾತ್ಮ್ಯ ಮತ್ತು ಉತ್ಪತ್ತಿ ಕಾರಣಗಳನ್ನು ಹೇಳು.

ಕಥಂ ಪೂಜ್ಯಾನಿ ತಾನೀಶ ಕೇ ಮಂತ್ರಾಃ ಕೋ ವಿಧಿಃ ಸ್ಮೃತಃ ।
ಕಸ್ಮಿನ್ ಪರ್ವಣಿ ಕಾಲೇ ವಾ ಸರ್ವಂ ವಿಸ್ತರಶೋ ವದ ॥ ೧೨ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ರಹಸ್ಯಂ ಪಾಪನಾಶನಂ ।
ಸೋಮನಾಥಾದಿತಃ ಕೃತ್ವಾ ಸಿದ್ಧಿನಾಥಾದಿಕಾರಣಂ ॥ ೧೩ ॥
ಯಚ್ಛ್ರುತ್ವಾ ಮುಚ್ಯತೇ ಜಂತುಃ ಪಾತಕೈಃ ಪೂರ್ವಸಂಚಿತೈಃ ।
ಯೇ ಚೈಕಾದಶ ರುದ್ರಾ ವೈ ತವ ಪ್ರೋಕ್ತಾ ಮಯಾ ಪ್ರಿಯೇ ॥ ೧೪ ॥
ದಶ ತೇ ವಾಯವಃ ಪ್ರೋಕ್ತಾ ಆತ್ಮಾ ಚೈಕಾದಶಃ ಸ್ಮೃತಃ ।
ತೇಷಾಂ ನಾಮಾನಿ ವಕ್ಷ್ಯಾಮಿ ವಾಯೂನಾಂ ಶೃಣು ಮೇ ಕ್ರಮಾತ್ ॥
ಪ್ರಾಣೋಽಪಾನಃ ಸಮಾನಶ್ಚ ಹ್ಯುದಾನೋ ವ್ಯಾನ ಏವ ಚ ।
ನಾಗಶ್ಚ ಕೂರ್ಮಃ ಕೃಕಲೋ ದೇವದತ್ತೋ ಧನಂಜಯಃ ॥ ೧೬ ॥
ಆತ್ಮಾ ಚೇತಿ ಕ್ರಮಾತ್ ಜ್ಞೇಯಾ ರುದ್ರಾಧಿಪತಯಃ ಕ್ರಮಾತ್ ।
ತೇಷಾಂ ಯಾತ್ರಾಂ ಕ್ರಮಾದ್ವಕ್ಷ್ಯೇ ಸರ್ವಪ್ರಾಣಿಹಿತಾಯ ವೈ । ॥ ೧೭ ॥
ರುದ್ರಾಣಾಮಾದಿದೇವೋಽಸೌ ಪೂರ್ವೇ ಸೋಮೇಶ್ವರಃ ಪ್ರಿಯೇ ।
ಭೂತೇಶ್ವರೇತಿ ನಾಮ್ನಾ ವೈ ಪೂಜಯೇತ್ತಂ ವಿಧಾನತಃ ॥ ೧೮ ॥
ರಾಜೋಪಚಾರಯೋಗೇನ ಶ್ರದ್ಧಾಪೂತೇನ ಚೇತಸಾ ।
ಪಂಚಾಮೃತೇನ ಸಂಸ್ನಾಪ್ಯ ಸದ್ಯೋಜಾತೇನ ಪೂಜಯೇತ್ ॥ ೧೯ ॥

---

೧೨. ಶಂಕರ! ಆ ಲಿಂಗಗಳನ್ನು ಯಾವ ಪರ್ವಕಾಲದಲ್ಲಿ ಹೇಗೆ ಪೂಜಿಸಬೇಕು. ಪೂಜೆಯ ಮಂತ್ರ ಮತ್ತು ವಿಧಿಗಳಾವುವು. ಎಲ್ಲವನ್ನೂ ವಿಸ್ತಾರವಾಗಿ ಹೇಳು.

೧೩–೧೭. ಈಶ್ವರನು ಹೇಳುತ್ತಾನೆ :—ದೇವಿ! ಸೋಮನಾಥನನ್ನಾರಂಭಿಸಿ ಸಿದ್ಧನಾಥನವರೆಗಿನ ಪಾಪವನ್ನು ನಾಶಗೊಳಿಸುವ ಶಿವಲಿಂಗಗಳ ರಹಸ್ಯವಾದ ಕಾರಣಗಳನ್ನು ಹೇಳುವೆನು ಕೇಳು. ಇದನ್ನು ಕೇಳಿದ ಜಂತುವು ಹಿಂದಿನ ಪಾಪಗಳಿಂದ ಮುಕ್ತವಾಗುವುದು. ಪ್ರಿಯಳೆ! ಆ ಏಕಾದಶ ರುದ್ರರಿಗೆ ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಎಂಬ ಹತ್ತು ಮಂದಿ ವಾಯುಗಳೂ, ಆತ್ಮನೂ ಅಧಿಪತಿಗಳಾಗಿರುವರು. ಸಕಲಪ್ರಾಣಿಗಳ ಹಿತಕ್ಕಾಗಿ ಅವರ ಯಾತ್ರೆಯ ಕ್ರಮವನ್ನು ಹೇಳುವೆನು.

೧೮–೨೧. ರುದ್ರರಲ್ಲಿ ಮೊದಲನೆಯವನಾದ ಸೋಮೇಶ್ವರನಿಗೆ ಭೂತೇಶ ಎಂಬ ಹೆಸರು ಪ್ರಸಿದ್ಧವಾಗಿರುವುದು. ಏಕಾದಶ ರುದ್ರರ ಯಾತ್ರೆಯನ್ನು ಇಚ್ಛಿಸುವವನು ವಿಘ್ನಪರಿಹಾರಕ್ಕಾಗಿ ಅವನಿಗೆ ಶ್ರದ್ಧೆಯಿಂದ ರಾಜೋಪಚಾರಗಳನ್ನಿತ್ತು ಪಂಚಾಮೃತ ಸ್ನಾನಮಾಡಿಸಿ ಸದ್ಯೋಜಾತವೆಂಬ ಮಂತ್ರದಿಂದಲೂ, ಮನೋಹರ ಪುಷ್ಪಗಳಿಂದಲೂ

ಪುಷ್ಪೈರ್ಮನೋಹರೈರ್ಭಕ್ತ್ಯಾ ಧ್ಯಾತ್ವಾ ದೇವಂ ಸದಾಶಿವಂ ।
ತ್ರಿಭಿಃ ಪ್ರದಕ್ಷಿಣೀಕೃತ್ಯ ಸಾಷ್ಟಾಂಗಂ ಪ್ರಣಿಪತ್ಯ ಚ ॥ ೨೦ ॥
ರುದ್ರೈಕಾದಶಯಾತ್ರಾರ್ಥೀ ನಿರ್ವಿಘ್ನಾರ್ಥಂ ವ್ರಜೇತ್ತತಃ ।
ಭೂತೇಶ್ವರೇತಿ ಯನ್ನಾಮ ಪ್ರೋಕ್ತಂ ತತ್ತೇ ಬ್ರವೀಮ್ಯಹಂ ॥ ೨೧ ॥
ಮಹದಾದಿವಿಶೇಷಾಂತಂ ಭೂತಜಾಲಂ ಯದೀರಿತಂ ।
ಪಂಚವಿಂಶತಿಸಂಖ್ಯಾಕಂ ತೇಷಾಮಿಶೋ ಯತಃ ಸ್ಮೃತಃ ॥ ೨೨ ॥
ತೇನ ಭೂತೇಶ್ವರೇತ್ಯುಕ್ತಂ ನಾಮ ತಸ್ಯ ಪುರಾ ಕಿಲ ।
ಪಂಚವಿಂಶತಿ ತತ್ವಾನಿ ಜ್ಞಾತ್ವಾ ಮುಕ್ತಿಮವಾಪ್ನುಯಾತ್ ॥ ೨೩ ॥
ಭೂತೇಶರುದ್ರಂ ಸಂಪೂಜ್ಯ ಗಚ್ಛೇದ್ವೈ ಮುಕ್ತಿಮವ್ಯಯಾಂ ।
ಇತಿ ಸಂಕ್ಷೇಪತಃ ಪ್ರೋಕ್ತಮಾದಿರುದ್ರಸ್ಯ ಕೀರ್ತನಂ ।
ಕೀರ್ತನೀಯಂ ದ್ವಿಜಾತೀನಾಂ ಕೀರ್ತಿತಂ ಪುಣ್ಯವರ್ಧನಂ ॥ ೨೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೂತೇಶ್ವರಮಾಹಾತ್ಮ್ಯವರ್ಣನಂ ನಾಮ
ಸಪ್ತಾಶೀತಿತಮೋಽಧ್ಯಾಯಃ

ಪೂಜಿಸಬೇಕು. ಅನಂತರ ಭಕ್ತಿಯಿಂದ ಧ್ಯಾನಿಸಿ ಮೂರು ಪ್ರದಕ್ಷಿಣೆಮಾಡಿ ಸಾಷ್ಟಾಂಗ ಪ್ರಣಾಮಗೈದು ಬಳಿಕ ಅಲ್ಲಿಂದ ಹೊರಡಬೇಕು. ಈಗ ಅವನಿಗೆ ಭೂತೇಶ್ವರ ಎಂದು ಹೆಸರಾಗಲು ಕಾರಣವನ್ನು ಹೇಳುವೆನು.

೨೨-೨೩. ಮಹದಾದಿ ವಿಶೇಷಾಂತವಾದ ಇಪ್ಪತ್ತೈದು ತತ್ವಗಳಿಗೆ ಅವನು ಕಾರಣನಾದ್ದರಿಂದ ಹಿಂದೆ ಅವನಿಗೆ ಭೂತೇಶ ಎಂದು ಹೆಸರಾಯಿತು. ಈ ಇಪ್ಪತ್ತೈದು ತತ್ವಗಳನ್ನರಿತವನು ಮುಕ್ತನಾಗುವನು.

೨೪. ಈ ಭೂತೇಶರುದ್ರನನ್ನು ಪೂಜಿಸಿದವನು ಶಾಶ್ವತವಾದ ಮೋಕ್ಷವನ್ನು ಪಡೆಯುವನು. ಹೀಗೆ ಸಂಕ್ಷೇಪವಾಗಿ ಬ್ರಾಹ್ಮಣರಿಗೆ ಹೇಳಲು ಯೋಗ್ಯವಾದುದೂ ಪುಣ್ಯವನ್ನು ಹೆಚ್ಚಿಸುವುದೂ ಆದ ಆದಿರುದ್ರನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದ
ಭೂತೇಶ್ವರಮಾಹಾತ್ಮ್ಯವರ್ಣನವೆಂಬ
ಎಂಬತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾಶೀತಿತಮೋಽಧ್ಯಾಯಃ

ನೀಲರುದ್ರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ನೀಲರುದ್ರಂ ದ್ವಿತೀಯಕಂ ||
ಭೂತೇಶಾದುತ್ತರೇಭಾಗೇ ಧನುಷಾಂ ಷೋಡಶೇ ಸ್ಥಿತಂ || ೧ ||
ಮಹಾಲಿಂಗಂ ಮಹಾದೇವಿ ಗಣಗಂಧರ್ವಪೂಜಿತಂ ।
ಸಂಸ್ನಾಪ್ಯ ತಂ ವಿಧಾನೇನ ಈಶಮಂತ್ರೇಣ ಪೂಜಯೇತ್ || ೨ ||
ಕುಮುದೋತ್ಪಲಸಂಭಾರೈಃ ಸಮ್ಯಕ್ಸಂಭಾವಿತಾತ್ಮವಾನ್ ।
ಕೃತ್ವಾ ಪ್ರದಕ್ಷಿಣಾಂ ತಸ್ಯ ನಮಸ್ಕಾರೇಣ ಪೂಜಯೇತ್ || ೩ ||
ಏವಂ ಕೃತ್ವಾ ನರೋ ದೇವಿ ರಾಜಸೂಯಫಲಂ ಲಭೇತ್ ।
ವೃಷಸ್ತತ್ರೈವ ದಾತವ್ಯಃ ಸಮ್ಯಗ್ಯಾತ್ರಾಫಲೇಪ್ಸುಭಿಃ || ೪ ||
ನೀಲಾಂಜನನಿಭೋ ದೈತ್ಯೋ ನಿಹತಶ್ಚಾಂತಕಃ ಪುರಾ ।
ತಸ್ಯ ರೋದಯಿತಾ ಸ್ತ್ರೀಣಾಂ ನೀಲರುದ್ರಸ್ತತಃ ಸ್ಮೃತಃ || ೫ ||

ಕನ್ನಡದ ಅನುವಾದ

ನೀಲರುದ್ರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಭೂತೇಶ್ವರನ ಉತ್ತರ ದಿಕ್ಕಿನಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿರುವ ಎರಡನೆಯ ನೀಲರುದ್ರನ ಸನ್ನಿಧಿಗೆ ಹೋಗಬೇಕು.

೨–೩. ಗಣ ಗಂಧರ್ವನು ಪೂಜಿಸಿದ ಆ ಶಿವಲಿಂಗಕ್ಕೆ ಅಭಿಷೇಕಮಾಡಿ ಈಶ ಮಂತ್ರದಿಂದಲೂ, ನೈದಿಲೆ, ಕನ್ನೈದಿಲೆ ಪುಷ್ಪಗಳಿಂದಲೂ ಭಕ್ತಿಯಿಂದ ಚೆನ್ನಾಗಿ ಪೂಜಿಸಿ ಪ್ರದಕ್ಷಿಣ ನಮಸ್ಕಾರಮಾಡಬೇಕು.

೪. ಹೀಗೆ ಮಾಡಿದ ಮಾನವನು ರಾಜಸೂಯಯಾಗದ ಫಲವನ್ನು ಪಡೆಯುವನು. ಸಂಪೂರ್ಣ ಯಾತ್ರಾ ಫಲವನ್ನು ಬಯಸುವವರು ಅಲ್ಲಿ ವೃಷಭವನ್ನು ದಾನಮಾಡಬೇಕು.

೫. ಹಿಂದೆ ಮಹೇಶ್ವರನು ಕಾಡಿಗೆಯಂತಿರುವ ನೀಲದೈತ್ಯನನ್ನು ಕೊಂದು ಅವನ ಸ್ತ್ರೀಯರು ಅಳುವಂತೆ ಮಾಡಿದ್ದರಿಂದ ನೀಲರುದ್ರನೆಂದು ಹೆಸರನ್ನು ಪಡೆದನು.

ತಸ್ಯ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಪಾಪನಾಶನಂ ।
ಸಮ್ಯಕ್ಶ್ರದ್ಧಾನ್ವಿತೈಃ ಪ್ರಾಪ್ಯಂ ಶ್ರಾವ್ಯಂ ತದ್ದರ್ಶನೋತ್ಸುಕೈಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಏಕಾದಶರುದ್ರ
ಮಾಹಾತ್ಮ್ಯೇ ನೀಲರುದ್ರಮಾಹಾತ್ಮ್ಯವರ್ಣನಂನಾಮ
॥ಅಷ್ಟಾಶೀತಿತಮೋಽಧ್ಯಾಯಃ॥

---

೬. ಪಾಪವನ್ನು ಪರಿಹರಿಸುವುದೂ, ಶ್ರದ್ಧೆಯುಳ್ಳವರಿಂದ ಹೊಂದಲು ಯೋಗ್ಯವಾದುದೂ, ದರ್ಶನದಲ್ಲಿ ಕುತೂಹಲವುಳ್ಳವರಿಂದ ಹೊಂದಲು ಯೋಗ್ಯವಾದುದೂ ಕೇಳಲರ್ಹವಾದುದೂ ಆದ ಆ ನೀಲರುದ್ರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನೀಲರುದ್ರಮಾಹಾತ್ಮ್ಯವರ್ಣನವೆಂಬ
ಎಂಬತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನನವತಿತಮೋಽಧ್ಯಾಯಃ

ಕಪಾಲೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇದ್ವರಾರೋಹೇ ಕಪಾಲೀಶ್ವರಮುತ್ತಮಂ ।
ರುದ್ರಂ ತೃತೀಯಂ ಪಾಪಘ್ನಂ ನೀಲರುದ್ರಸ್ಯ ಪೂರ್ವತಃ ॥ ೧ ॥

ಬುಧೇಶ್ವರಾತ್ಪಶ್ಚಿಮತೋ ಧನುಷಾಂ ಸಪ್ತಕೇ ಸ್ಥಿತಂ ।
ಛಿನ್ನಂ ಮಯಾ ಪುರಾ ದೇವಿ ಬ್ರಹ್ಮಣಃ ಪಂಚಮಂ ಶಿರಃ ॥ ೨ ॥

ತತ್ಕಪಾಲಂ ಕರೇ ಲಗ್ನಂ ಪ್ರಭಾಸಕ್ಷೇತ್ರಮಾಗತಃ ।
ತತೋ ವರ್ಷಸಹಸ್ರಂ ತು ಸಂಸ್ಥಿತಃ ಕ್ಷೇತ್ರಮಧ್ಯತಃ ॥ ೩ ॥

ಕಪಾಲಧಾರೀ ದಿಗ್ವಾಸಾಃ ಕಪಾಲೀ ತೇನ ಚ ಸ್ಮೃತಃ ।
ತನ್ಮಯಾ ಪೂಜಿತಂ ಲಿಂಗಂ ವರ್ಷಾಣಾಮಯುತಂ ಪ್ರಿಯೇ ॥ ೪ ॥

ಕಪಾಲಿರೂಪಮಾಸ್ಥಾಯ ಕಪಾಲೀಶಸ್ತತಃ ಸ್ಮೃತಃ ।
ಸರ್ವಪಾಪಹರೋ ನೄಣಾಂ ದರ್ಶನಾತ್ ಸ್ಪರ್ಶನಾದಪಿ ॥ ೫ ॥

ಕನ್ನಡದ ಅನುವಾದ

ಕಪಾಲೀಶ್ವರಮಾಹಾತ್ಮ್ಯವರ್ಣನ

೧–೬. ಈಶ್ವರನು ಹೇಳುತ್ತಾನೆ:— ದೇವಿ! ಬಳಿಕ ಬುಧೇಶ್ವರನ ಪಶ್ಚಿಮದಲ್ಲಿ ನೀಲರುದ್ರನ ಪೂರ್ವದಲ್ಲಿ ಏಳು ಬಿಲ್ಲುಗಳ ದೂರದಲ್ಲಿರುವವನೂ, ಕಪಾಲೀಶ್ವರನೆಂಬ ಮೂರನೆಯ ರುದ್ರನನ್ನು ಹೊಂದಬೇಕು. ಹಿಂದೆ ನಾನು ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಲು ಆ ಕಪಾಲವು ನನ್ನ ಕೈಯಲ್ಲಿ ಅಂಟಿಕೊಂಡಿತು. ಅದರಿಂದ ನಾನು ಪ್ರಭಾಸಕ್ಷೇತ್ರಕ್ಕೆ ಬಂದು ಆ ಕ್ಷೇತ್ರದ ನಡುವೆ ಒಂದು ಸಾವಿರ ವರ್ಷಕಾಲ ಕಪಾಲವನ್ನು ಧರಿಸಿ ದಿಗಂಬರನಾಗಿ ನೆಲಸಿದೆನು. ಆದರಿಂದ ನನಗೆ ಕಪಾಲೀ ಎಂದು ಹೆಸರಾಯಿತು. ಪ್ರಿಯಳೆ! ಹತ್ತು ಸಾವಿರ ವರ್ಷಕಾಲ ಕಪಾಲಿಯಾಗಿ ನಾನು ಆ ಲಿಂಗವನ್ನು ಪೂಜಿಸಿದ್ದರಿಂದ ಅದು ಕಪಾಲೀಶವೆಂದು ಪ್ರಸಿದ್ಧವಾಯಿತು. ನಾನು ದರ್ಶನ, ಸ್ಪರ್ಶನದಿಂದ ಸಕಲ ಪಾಪವನ್ನು ಪರಿಹರಿಸುವ ಆ ಲಿಂಗವನ್ನು ಪಾಪಿಗಳಾದ

ಮಯೈವ ತವ ನಿಯುಕ್ತಾ ವೈ ರಕ್ಷಾರ್ಥಂ ಶೂಲಪಾಣಯಃ ।
ಗಣಾಃ ಸಹಸ್ರಶೋ ದೇವಿ ಪಾಪಿನಾಂ ದುಷ್ಟಚೇತಸಾಂ ॥ ೬ ॥
ತಸ್ಮಾತ್ಸರ್ವಪ್ರಯತ್ನೇನ ಸಮ್ಯಕ್ಛ್ರದ್ಧಾಸಮನ್ವಿತಃ ।
ಪೂಜಯೇತ್ತಂ ಮಹಾದೇವಂ ಕಪಾಲಿನಮನಾಮಯಂ ॥ ೭ ॥
ಹಿರಣ್ಯಂ ತತ್ರ ದಾತವ್ಯಂ ಬ್ರಾಹ್ಮಣೇ ವೇದಪಾರಗೇ ।
ಪೂಜಯಿತ್ವಾ ವಿಧಾನೇನ ಸಮ್ಯಕ್ತತ್ಪುರುಷಾಣುನಾ ॥ ೮ ॥
ಜನ್ಮಪ್ರಭೃತಿ ಯತ್ಪಾಪಂ ಪ್ರಾಣಿಭಿಃ ಸಮುಪಾರ್ಜಿತಂ ।
ಷಡಶೀತಿಮುಖೇ ದೃಷ್ಟ್ವಾ ತಲ್ಲಿಂಗಂ ತು ವ್ಯಪೋಹತಿ ॥ ೯ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಪಾಪನಾಶನಂ ।
ಕಪಾಲಿರುದ್ರದೇವಸ್ಯ ತೃತೀಯಸ್ಯ ವರಾನನೇ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಪಾಲೀಶ್ವರಮಾಹಾತ್ಮ್ಯವರ್ಣನಂ ನಾಮ
ಏಕೋನನವತಿತಮೋಽಧ್ಯಾಯಃ ॥

ದುಷ್ಟರಿಂದ ರಕ್ಷಿಸುವುದಕ್ಕಾಗಿ ಶೂಲಧಾರಿಗಳಾದ ಸಾವಿರಾರು ಗಣಗಳನ್ನು ನೇಮಿಸಿರುವೆನು.

೭. ಆದ್ದರಿಂದ ಸರ್ವಪ್ರಯತ್ನದಿಂದಲೂ, ಶ್ರದ್ಧೆಯಿಂದಲೂ ಆ ಕಪಾಲೀಶ್ವರನನ್ನು ಪೂಜಿಸಬೇಕು.

೮. ಆ "ಲಿಂಗವನ್ನು ತತ್ಪುರುಷಾಯ ವಿದ್ಮಹೇ" ಇತ್ಯಾದಿ ಮಂತ್ರದಿಂದ ಪೂಜಿಸಿ ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ಸುವರ್ಣವನ್ನು ದಾನಮಾಡಬೇಕು.

೯. ಷಡಶೀತಿ ಪುಣ್ಯಕಾಲದಲ್ಲಿ ಆ ಲಿಂಗವನ್ನು ನೋಡಿದ ಪ್ರಾಣಿಯ ಹುಟ್ಟಿದ ಮೊದಲ್ಗೊಂಡು ಮಾಡಿದ ಪಾಪವು ಪರಿಹಾರವಾಗುವುದು.

೧೦. ಹೀಗೆ ಪಾಪವನ್ನು ಪರಿಹರಿಸುವ ಮೂರನೆಯ ಕಪಾಲಿರುದ್ರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಪಾಲೀಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವತಿತಮೋಽಧ್ಯಾಯಃ

ವೃಷವಾಹನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚತುರ್ಥಂ ರುದ್ರಮುತ್ತಮಂ ।
ವೃಷಭೇಶ್ವರನಾಮಾನಂ ಕಲ್ಪಲಿಂಗಂ ಸುರಪ್ರಿಯಂ ॥ ೧ ॥
ಬಾಲರೂಪೀ ಮಹಾದೇವಿ ಯತ್ರ ಬ್ರಹ್ಮಾ ಸ್ವಯಂ ಸ್ಥಿತಃ ।
ತಸ್ಯೈವ ಚೋತ್ತರೇ ಭಾಗೇ ಧನುಷಾಂ ತ್ರಿತಯೇ ಸ್ಥಿತಂ ॥ ೨ ॥
ಆದ್ಯಂ ಮಹಾಪ್ರಭಾವಂ ಹಿ ನಾಪುಣ್ಯೋ ವೇದ ಮಾನವಃ ।
ತಸ್ಯೈವ ಕಲ್ಪನಾಮಾನಿ ಸಾಂಪ್ರತಂ ಪ್ರಬ್ರವೀಮಿ ತೇ ॥ ೩ ॥
ಪೂರ್ವಕಲ್ಪೇ ಮಹಾದೇವಿ ಬ್ರಹ್ಮೇಶ್ವರ ಇತಿ ಸ್ಮೃತಃ ।
ಬ್ರಹ್ಮಣಾರಾಧಿತಃ ಪೂರ್ವಂ ವರ್ಷಾಣಾಮಯುತಂ ಪ್ರಿಯೇ ॥ ೪ ॥
ಸೃಷ್ಟಿಕಾಮೇನ ದೇವೇನ ತತಸ್ತುಷ್ಟೋ ಮಹೇಶ್ವರಃ ।
ಚತುರ್ವಿಧಾಂ ಭೂತಸೃಷ್ಟಿಂ ತತಶ್ಚಕ್ರೇ ಪಿತಾಮಹಃ ॥ ೫ ॥

ಕನ್ನಡದ ಅನುವಾದ

ವೃಷವಾಹನೇಶ್ವರಮಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಬಾಲರೂಪಿಯಾದ ಬ್ರಹ್ಮನ ಉತ್ತರದಲ್ಲಿ ಮೂರು ಬಿಲ್ಲುಗಳ ದೂರದಲ್ಲಿರುವ ವೃಷಭೇಶ್ವರನೆಂಬ ನಾಲ್ಕನೆಯ ರುದ್ರನ ಕಲ್ಪಲಿಂಗವನ್ನು ಹೊಂದಬೇಕು.

೩. ಅತ್ಯಂತ ಮಾಹಾತ್ಮ್ಯವುಳ್ಳ ಮೊದಲನೆಯ ಆ ಶಿವಲಿಂಗವನ್ನು ಪಾಪಿಯು ತಿಳಿಯುವುದಿಲ್ಲ. ಈಗ ಅವನ ಕಲ್ಪನಾಮಗಳನ್ನು ನಿನಗೆ ಹೇಳುವೆನು.

೪. ಮಹಾದೇವಿ! ಹಿಂದಿನ ಕಲ್ಪದಲ್ಲಿ ಸೃಷ್ಟಿಸಲು ಅಪೇಕ್ಷಿಸುವ ಬ್ರಹ್ಮನು ಹತ್ತುಸಾವಿರ ವರ್ಷಕಾಲ ಈ ಲಿಂಗವನ್ನು ಪೂಜಿಸಿದ್ದರಿಂದ ಇದಕ್ಕೆ ಬ್ರಹ್ಮೇಶ್ವರನೆಂದು ಹೆಸರಾಯಿತು. ಪಿತಾಮಹನು ತನ್ನ ಪೂಜೆಯಿಂದ ಮಹೇಶ್ವರನು ಸಂತುಷ್ಟನಾಗಲು ನಾಲ್ಕು ವಿಧವಾದ ಪ್ರಾಣಿಗಳನ್ನು ಸೃಷ್ಟಿಸಿದನು.

ಬ್ರಹ್ಮಣಸ್ಸ್ವೀಶಭಾವೇನ ಗತಸ್ತುಷ್ಟಿಂ ಯತೋ ಹರಃ ।
ತೇನ ಬ್ರಹ್ಮೇಶ್ವರಂ ನಾಮ ತಸ್ಮಿಂಲ್ಲಿಂಗೇ ಪುರಾಽಭವತ್ ॥ ೬ ॥
ತತೋ ದ್ವಿತೀಯಕಲ್ಪೇ ತು ಸಂಪ್ರಾಪ್ತೇ ವರವರ್ಣಿನಿ ।
ರೈವತೇಶ್ವರನಾಮೇತಿ ಪ್ರಖ್ಯಾತಂ ಧರಣೀತಲೇ ॥ ೭ ॥
ರೈವತೋ ನಾಮ ರಾಜಾಽಭೂದ್ಬ್ರಹ್ಮಾಂಡೇ ಸ ಚರಾಚರೇ ।
ಜಗದ್ಯೋ ನಿರ್ಜಿಗಾಯೇದಂ ತಲ್ಲಿಂಗಸ್ಯ ಪ್ರಭಾವತಃ ॥ ೮ ॥
ರೈವತೇಶ್ವರನಾಮಾಽಭೂತ್ತೇನ ಲಿಂಗಂ ಮಹಾಪ್ರಭಂ ।
ಪುನಸ್ತೃತೀಯಕಲ್ಪೇ ತು ಸಂಪ್ರಾಪ್ತೇ ವರವರ್ಣಿನಿ ॥ ೯ ॥
ವೃಷಭೇಶ್ವರನಾಮಾಽಭೂತ್ತಸ್ಯ ಲಿಂಗಸ್ಯ ಭಾಮಿನಿ ।
ಮಮೈವ ವಾಹನಂ ಯೋಽಸೌ ಧರ್ಮೋಽಯಂ ವೃಷರೂಪಧೃಕ್ ॥ ೧೦ ॥
ತೇನ ತತ್ಪೂಜಿತಂ ಲಿಂಗಂ ದಿವ್ಯಾಬ್ದಾನಾಂ ಸಹಸ್ರಕಂ ।
ತತಸ್ತುಷ್ಟೇನ ದೇವೇಶಿ ನೀತಃ ಸಾಯುಜ್ಯತಾಂ ವೃಷಃ ॥ ೧೧ ॥
ತೇನ ತಲ್ಲಿಂಗಮಭವದ್ವೃಷಭೇಶೇತಿ ಭೂತಲೇ ।
ತತಶ್ಚತುರ್ಥೇ ಸಂಪ್ರಾಪ್ತೇ ವಾರಾಹೇ ಕಲ್ಪಸಂಜ್ಞಿತೇ ॥ ೧೨ ॥
ಅಷ್ಟಾವಿಂಶತಿತಮೇ ತತ್ರ ತ್ರೇತಾಯುಗಮುಖೇ ತದಾ ।
ಇಕ್ಷ್ವಾಕುರ್ನಾಮ ರಾಜಾಽಭೂತ್ಸೂರ್ಯವಂಶವಿಭೂಷಣಃ ॥ ೧೩ ॥

---

೬. ಇಲ್ಲಿ ಈಶ್ವರನು ಬ್ರಹ್ಮನಿಗೆ ಸ್ವಾಮಿಯಾಗಿ ಸಂತುಷ್ಟನಾದ್ದರಿಂದ ಆ ಲಿಂಗವು ಬ್ರಹ್ಮೇಶ್ವರನೆಂದು ಹೆಸರುಗೊಂಡಿತು.

೭. ಬಳಿಕ ಎರಡನೆಯ ಕಲ್ಪದಲ್ಲಿ ಆ ಲಿಂಗವು ಭೂಮಿಯಲ್ಲಿ ರೈವತೇಶ್ವರನೆಂದು ವಿಖ್ಯಾತವಾಯಿತು.

೮–೧೧. ಚರಾಚರ ವಸ್ತುಗಳಿಂದ ಕೂಡಿದ ಈ ಬ್ರಹ್ಮಾಂಡದಲ್ಲಿ ವಾಸುತ್ತಿದ್ದ ರೈವತನೆಂಬ ರಾಜನು ಆ ಲಿಂಗದ ಮಾಹಾತ್ಮ್ಯದಿಂದ ಈ ಪ್ರಪಂಚವನ್ನು ಜಯಿಸಿದುವನು. ಆದರಿಂದ ರೈವತೇಶ್ವರನೆಂದು ಪ್ರಖ್ಯಾತವಾಯಿತು. ಬಳಿಕ ಮೂರನೆಯ ಕಲ್ಪವು ಬರಲು ಆ ಲಿಂಗವನ್ನು ವೃಷಭರೂಪವನ್ನು ಧರಿಸಿದ ಧರ್ಮವು ನನ್ನ ವಾಹನವಾಗಿ ಸಾವಿರ ದಿವ್ಯ ವರ್ಷಗಳಕಾಲ ಪೂಜಿಸಿದ್ದರಿಂದ ಆ ಲಿಂಗವು ವೃಷಭೇಶ್ವರನೆಂದು ಪ್ರಸಿದ್ಧವಾಯಿತು. ಬಳಿಕ ನಾನು ಆ ವೃಷಭದಲ್ಲಿ ಸಂತುಷ್ಟನಾಗಿ ಸಾಯುಜ್ಯ ಮುಕ್ತಿಯನ್ನಿತ್ತೆನು.

೧೨–೧೩. ಅನಂತರ ನಾಲ್ಕನೆಯ ವಾರಾಹ ಕಲ್ಪವು ಬರಲು ಇಪ್ಪತ್ತೆಂಟನೆಯ ತ್ರೇತಾಯುಗದ ಆರಂಭದಲ್ಲಿ ಸೂರ್ಯವಂಶಕ್ಕೆ ಅಲಂಕಾರ ಪ್ರಾಯನಾದ ಇಕ್ಷ್ವಾಕುವೆಂಬ ರಾಜನಿದ್ದನು.

ಸ ಲಿಂಗಂ ಪೂಜಯಾಮಾಸ ತ್ರಿಕಾಲಂ ಭಕ್ತಿಭಾವಿತಃ ।
ಏಕಾಹಾರೋ ಜಿತಾಹಾರೋ ಭೂಮಿಶಾಯೀ ಜಿತೇಂದ್ರಿಯಃ ॥ ೧೪ ॥
ಏವಂ ಕಾಲೇ ಬಹುವಿಧೇ ತತಸ್ತುಷ್ಟೋ ಮಹೇಶ್ವರಃ ।
ದದೌ ರಾಜ್ಯಂ ಮಹೋದಗ್ರಂ ಸಂತತಿಂ ಪುತ್ರಪೌತ್ರಿಕೀಂ ॥ ೧೫ ॥
ಇಕ್ಷ್ವಾಕ್ವೀಶ್ವರನಾಮಾಽಭೂತ್ತೇನೇದಂ ಲಿಂಗಮುತ್ತಮಂ ।
ಯಸ್ತಂ ಪೂಜಯತೇ ಭಕ್ತ್ಯಾ ದೇವಂ ವೃಷಭವಾಹನಂ ॥ ೧೬ ॥
ಸಪ್ತಜನ್ಮಕೃತೈಃ ಪಾಪೈರ್ಮುಚ್ಯತೇ ನಾಽತ್ರಸಂಶಯಃ ।
ತ್ರಿಂಶದ್ಧನುಃಪ್ರಮಾಣೇನ ತಸ್ಯ ಕ್ಷೇತ್ರಂ ಚತುರ್ದಿಶಂ ॥ ೧೭ ॥
ಸ್ನಾನಂ ಜಾಪ್ಯಂ ಬಲಿಂ ಹೋಮಂ ಪೂಜಾಂ ಸ್ತೋತ್ರಮುದೀರಣಂ ।
ತಸ್ಮಿಂಸ್ತೀರ್ಥೇ ತು ಯಃ ಕುರ್ಯಾತ್ತತ್ಸರ್ವಂ ಚಾಕ್ಷಯಂ ಭವೇತ್ ॥೧೮॥
ಚತುಷ್ಕೋಣಾಂತರಾ ಕ್ಷೇತ್ರಮೇವಂ ಮಾತ್ರಾ ಪ್ರಮಾಣತಃ ।
ಏಕರಾತ್ರೋಷಿತೋ ಭೂತ್ವಾ ತಸ್ಯ ಲಿಂಗಸ್ಯ ಸನ್ನಿಧೌ ॥ ೧೯ ॥
ಬ್ರಹ್ಮಚರ್ಯೇಣ ಜಾಗರ್ತಿ ಸ ಪಾಪೈಃ ಸಂಪ್ರಮುಚ್ಯತೇ ।
ಹೋಮಜಾಪ್ಯಸಮಾಧಿಸ್ಥೋ ನೃತ್ಯಗೀತಾದಿವಾದನೈಃ ॥ ೨೦ ॥

---

೧೪. ಅವನು ಮೂರುಕಾಲದಲ್ಲಿಯೂ ಏಕಭಕ್ತನೂ, ಆಹಾರವನ್ನು ತಡೆದವನೂ, ಭೂಮಿಯಲ್ಲಿ ಮಲಗಿದವನೂ, ಜಿತೇಂದ್ರಿಯನೂ ಆಗಿ ಆ ಲಿಂಗವನ್ನು ಪೂಜಿಸಿದನು.

೧೫. ಹೀಗೆ ಬಹುಕಾಲವು ಕಳೆಯಲು ಸಂತುಷ್ಟನಾದ ಮಹೇಶ್ವರನು ಆ ಇಕ್ಷ್ವಾಕು ರಾಜನಿಗೆ ಉತ್ತಮ ರಾಜ್ಯವನ್ನೂ, ಪುತ್ರಪೌತ್ರರಿಂದ ಕೂಡಿದ ಸಂತತಿಯನ್ನೂ ಕೊಟ್ಟನು.

೧೬–೧೭. ಅದರಿಂದ ಈ ಲಿಂಗಕ್ಕೆ ಇಕ್ಷ್ವಾಕ್ವೀಶ್ವರ ಎಂದು ಹೆಸರಾಯಿತು. ಆ ವೃಷಭವಾಹನ ದೇವನನ್ನು ಭಕ್ತಿಯಿಂದ ಪೂಜಿಸಿದ ಮಾನವನು ಏಳು ಜನ್ಮಗಳಲ್ಲಿ ಮಾಡಿದ ಪಾಪಗಳಿಂದ ನಿಶ್ಚಯವಾಗಿಯೂ ಮುಕ್ತನಾಗುವನು. ಆ ಕ್ಷೇತ್ರವು ನಾಲ್ಕು ದಿಕ್ಕುಗಳಲ್ಲಿಯೂ ಮೂವತ್ತು ಬಿಲ್ಲುಗಳ ವಿಸ್ತೀರ್ಣವಾಗಿದೆ.

೧೮. ಆ ತೀರ್ಥದಲ್ಲಿ ಮಾಡಿದ ಸ್ನಾನ, ಜಪ, ಬಲಿ, ಹೋಮ, ಪೂಜೆ, ಸ್ತೋತ್ರ, ವೇದಪಾರಾಯಣ ಇವುಗಳು ಅಕ್ಷಯವಾಗುವುವು.

೧೯–೨೩. ಹಿಂದೆ ಹೇಳಿದ ವಿಸ್ತೀರ್ಣವುಳ್ಳ ನಾಲ್ಕು ಮೂಲೆಯ ಆ ಕ್ಷೇತ್ರದಲ್ಲಿರುವ ಆ ಲಿಂಗದ ಹತ್ತಿರ ಒಂದು ರಾತ್ರಿ ಉಪವಾಸವಿದ್ದು ಬ್ರಹ್ಮಚಾರಿಯಾಗಿ

ಗೋಘ್ನೋ ವಾ ಬ್ರಹ್ಮಹಾ ವಾಪಿ ಮುಚ್ಯತೇ ದುಷ್ಕೃತೈರ್ನರಃ ।
ಯಃ ಸಂಪ್ರೀಣಯತೇ ವಿಪ್ರಾಂಸ್ತತ್ರ ಭೋಜ್ಯೈಃ ಪೃಥಗ್ವಿಧೈಃ ॥ ೨೧ ॥
ಏಕಸ್ಮಿನ್ ಭೋಜಿತೇ ವಿಪ್ರೇ ಕೋಟಿರ್ಭವತಿ ಭೋಜಿತಾ ।
ಭೈರವಂ ಚೈವ ಕೇದಾರಂ ಪುಷ್ಕರಂ ದ್ಯುತಿಜಂಗಮಂ ॥ ೨೨ ॥
ವಾರಾಣಸೀ ಕುರುಕ್ಷೇತ್ರಂ ಮಹಾಕಾಲಂ ಚ ನೈಮಿಷಂ ।
ಏತತ್ತೀರ್ಥಾಷ್ಟಕಂ ದೇವಿ ತಸ್ಮಿಂಲ್ಲಿಂಗೇ ವ್ಯವಸ್ಥಿತಂ ॥ ೨೩ ॥
ಮಾಘೇ ಕೃಷ್ಣಚತುರ್ದಶ್ಯಾಂ ತತ್ರ ಯೋ ಜಾಗೃಯಾನ್ನಿಶಿ ।
ಸಂಪೂಜ್ಯ ವಿಧಿನಾ ದೇವಂ ಸ ತೀರ್ಥಾಷ್ಟಫಲಂ ಲಭೇತ್ ॥ ೨೪ ॥
ದದಾತಿ ತತ್ರ ಯಃ ಪಿಂಡಂ ನಷ್ಟೇಂದೌ ಶಿವಸನ್ನಿಧೌ ।
ತೃಪ್ಯಂತಿ ಪಿತರಸ್ತಸ್ಯ ಯಾವದ್ಬ್ರಹ್ಮದಿನಾಂತಕಂ ॥ ೨೫ ॥
ದಧಿಕ್ಷೀರ ಘೃತೇನೈವ ಪಂಚಗವ್ಯಕುಶೋದಕೈಃ ।
ಕುಂಕುಮಾಗರುಕರ್ಪೂರೈಸ್ತಲ್ಲಿಂಗಂ ಪೂಜಯೇನ್ನಿಶಿ ॥ ೨೬ ॥
ಸಂಮಂತ್ರ್ಯಾಘೋರಮಂತ್ರೇಣ ಧ್ಯಾತ್ವಾ ದೇವಂ ಸದಾಶಿವಂ ।
ಏವಂ ಕೃತ್ವಾ ಮಹಾದೇವಿ ಮುಚ್ಯತೇ ಪಂಚಪಾತಕೈಃ ॥ ೨೭ ॥

ಜಾಗರಣೆಮಾಡಿದವನು ಪಾಪಮುಕ್ತನಾಗುವನು. ಅಲ್ಲಿ ಗೋಹತ್ಯೆ ಅಥವಾ ಬ್ರಹ್ಮಹತ್ಯೆಮಾಡಿದ ಪಾಪಿ ಮಾನವನು ಸಹ ಹೋಮ, ಜಪ, ಧ್ಯಾನ, ನೃತ್ಯ, ಸಂಗೀತ ಮೊದಲಾದುವುಗಳಿಂದ ಆ ವೃಷಭೇಶ್ವರನನ್ನು ಸಂತೋಷಗೊಳಿಸಿದರೆ ಪಾಪಮುಕ್ತನಾಗುವನು. ಅಲ್ಲಿ ಬಗೆ ಬಗೆಯ ಭೋಜ್ಯ ವಸ್ತುಗಳಿಂದ ಬ್ರಾಹ್ಮಣರನ್ನು ಸಂತೋಷಗೊಳಿಸಿದರೆ ಒಬ್ಬೊಬ್ಬ ಬ್ರಾಹ್ಮಣನ ಭೋಜನದಿಂದ ಕೋಟಿ ಬ್ರಾಹ್ಮಣರನ್ನು ಭೋಜನ ಮಾಡಿಸಿದಂತಾಗುವುದು. ಭೈರವ, ಕೇದಾರ, ಪುಷ್ಕರ, ದ್ಯುತಿಜಂಗಮ, ಕಾಶೀ, ಕುರುಕ್ಷೇತ್ರ, ಮಹಾಕಾಲ, ನೈಮಿಷ ಎಂಬ ಎಂಟು ತೀರ್ಥಗಳು ಆ ಲಿಂಗದಲ್ಲಿ ನೆಲೆಸಿರುವುವು.

೨೪. ಅಲ್ಲಿ ಮಾಘಕೃಷ್ಣ ಚತುರ್ದಶೀದಿನ ರಾತ್ರಿ ವೃಷಭೇಶ್ವರನನ್ನು ಆರಾಧಿಸಿ ಜಾಗರಣೆ ಮಾಡಿದವನು ಆ ಎಂಟು ತೀರ್ಥಗಳ ಯಾತ್ರಾ ಫಲವನ್ನು ಪಡೆಯುವನು.

೨೫. ಅಲ್ಲಿ ಶಿವನ ಸನ್ನಿಧಿಯಲ್ಲಿ ಅಮಾವಾಸ್ಯೆಯದಿನ ಪಿತೃಗಳಿಗೆ ಪಿಂಡ ಪ್ರದಾನ ಮಾಡಿದವನ ಪಿತೃಗಳು ಕಲ್ಪಾಂತ್ಯದವರೆಗೆ ತೃಪ್ತರಾಗಿರುವರು.

೨೬–೨೭. ಮಹಾದೇವಿ ! ಮೊಸರು, ಹಾಲು, ತುಪ್ಪ ಮೊದಲಾದ ಪಂಚಗವ್ಯ ವಸ್ತುಗಳಿಂದಲೂ, ಕುಶೋದಕ, ಕುಂಕುಮ, ಅಗರು, ಕರ್ಪೂರಗಳಿಂದಲೂ ಆ ಲಿಂಗವನ್ನು ರಾತ್ರಿ ಪೂಜಿಸಿ, ಅಘೋರಮಂತ್ರದಿಂದ ಮಂತ್ರಿಸಿ, ಧ್ಯಾನಮಾಡಿದವನು ಪಂಚ ಮಹಾಪಾತಕಗಳಿಂದ ಮುಕ್ತನಾಗುವನು.

ಅಷ್ಟಮ್ಯಾಂ ಚ ಚತುರ್ದಶ್ಯಾಂ ದಧ್ನಾ ಸಂಸ್ನಾಪಯೇದ್ಯದಿ ।
ಸ ಬ್ರಾಹ್ಮಣಶ್ಚತುರ್ವೇದೋ ಜಾಯತೇ ನಾಽತ್ರ ಸಂಶಯಃ ॥ ೨೮ ॥
ಕ್ಷೀರೇಣ ಸ್ನಾಪಯೇದ್ದೇವಿ ಯದಿ ತಂ ವೃಷಭೇಶ್ವರಂ ।
ಸಪ್ತಧೇನುಸಹಸ್ರಾಣಾಂ ಸ ಫಲಂ ವಿಂದತೇ ಮಹತ್ ॥ ೨೯ ॥
ಜನ್ಮಾಂತರೇಣ ಯತ್ಪಾಪಂ ಸಾಂಪ್ರತಂ ಯತ್ಕೃತಂ ಪ್ರಿಯೇ ।
ತತ್ಸರ್ವಂ ನಾಶಮಾಯಾತಿ ಘೃತಸ್ನಾನೇನ ಭಾಮಿನಿ ॥ ೩೦ ॥
ಪಂಚಗವ್ಯೇನ ಯೋ ದೇವಿ ಸ್ನಾಪಯೇದ್ವೃಷಭೇಶ್ವರಂ ।
ಸ ದಹೇತ್ಸರ್ವಪಾಪಾನಿ ಸರ್ವಯಜ್ಞಫಲಂ ಲಭೇತ್ ॥ ೩೧ ॥
ತದ್ದೃಷ್ಟ್ವಾ ಬ್ರಹ್ಮಹಾ ಗೋಘ್ನಃ ಸ್ತೇಯೀ ಚ ಗುರುತಲ್ಪಗಃ ।
ಶರಣಾಗತಘಾತೀ ಚ ಮಿತ್ರವಿಶ್ರಂಭಘಾತಕಃ ॥ ೩೨ ॥
ದುಷ್ಟಪಾಪಸಮಾಚಾರೋ ಮಾತೃಹಾ ಪಿತೃಹಾ ತಥಾ ।
ಮುಚ್ಯತೇ ಸರ್ವಪಾಪೈಸ್ತು ತಲ್ಲಿಂಗಾರಾಧನೋದ್ಯತಃ ॥ ೩೩ ॥
ಕಾರ್ತಿಕಂ ಸಕಲಂ ಯಸ್ತು ಪೂಜಯೇದ್ಬ್ರಹ್ಮಣಾ ಸಹ ।
ಬ್ರಹ್ಮೇಶ್ವರಂ ಮಹಾಲಿಂಗಂ ಸ ಮುಕ್ತಃ ಪಾತಕೈರ್ಭವೇತ್ ॥ ೩೪ ॥

---

೨೮. ಅಷ್ಟಮೀ, ಚತುರ್ದಶೀದಿನಗಳಲ್ಲಿ ಆ ಲಿಂಗವನ್ನು ಮೊಸರಿನಿಂದ ಅಭಿಷೇಕಮಾಡಿದವನು ನಾಲ್ಕು ವೇದಗಳನ್ನು ಅಧ್ಯಯನಮಾಡಿದ ಬ್ರಾಹ್ಮಣನಾಗಿ ಜನಿಸುವನು.

೨೯. ದೇವಿ! ಆ ವೃಷಭೇಶ್ವರನನ್ನು ಹಾಲಿನಿಂದ ಅಭಿಷೇಕಮಾಡಿದರೆ ಏಳು ಸಾವಿರ ಗೋವುಗಳನ್ನು ದಾನಮಾಡಿದ ಫಲವು ಲಭಿಸುವುದು.

೩೦. ಪ್ರಿಯಳೆ! ಘೃತಾಭಿಷೇಕ ಮಾಡುವುದರಿಂದ ಜನ್ಮಾಂತರದಲ್ಲಿಯೂ, ಈ ಜನ್ಮದಲ್ಲಿಯೂ ಮಾಡಿದ ಪಾಪವೆಲ್ಲ ಪರಿಹಾರವಾಗುವುದು.

೩೧. ವೃಷಭೇಶ್ವರನನ್ನು ಪಂಚಗವ್ಯದಿಂದ ಅಭಿಷೇಕಮಾಡಿದವನ ಸಕಲ ಪಾಪಗಳೂ ಭಸ್ಮವಾಗುವುವು ಅವನು ಸಕಲ ಯಜ್ಞಗಳನ್ನೂ ಮಾಡಿದ ಫಲವನ್ನು ಪಡೆಯುವನು.

೩೨–೩೩. ಆ ವೃಷಭೇಶ್ವರನನ್ನು ದರ್ಶನಗೈದು ಪೂಜಿಸಿದವನು ಬ್ರಾಹ್ಮಣನನ್ನೂ ಗೋವುಗಳನ್ನೂ ಕೊಂದವನು, ಸ್ವರ್ಣಸ್ತೇಯ ಮಾಡಿದವನು, ಗುರುತಲ್ಪಗಾಮಿಯು, ಶರಣಾಗತರನ್ನು ಕೊಂದವನು, ಮಿತ್ರವಿಶ್ವಾಸ ಘಾತಕನು, ದುಷ್ಟನಡತೆಯುಳ್ಳವನು, ಮಾತಾಪಿತೃಗಳ ಹತ್ಯೆಮಾಡಿದವನು ಆಗಿದ್ದರೂ ಸಕಲ ಪಾಪಗಳಿಂದ ಮುಕ್ತನಾಗುವನು.

೩೪. ಕಾರ್ತಿಕಮಾಸವೆಲ್ಲ ಬ್ರಹ್ಮೇಶ್ವರ ಲಿಂಗವನ್ನು ಪೂಜಿಸಿದವನ ಪಾಪವು ಪರಿಹಾರವಾಗುವುದು.

ತೇನ ದತ್ತಂ ಭವೇತ್ಸರ್ವಂ ಗುರವಸ್ತೇನ ತೋಷಿತಾಃ ।
ಶ್ರಾದ್ಧಂ ಕೃತಂ ಗಯಾತೀರ್ಥೇ ತೇನ ತಪ್ತಂ ಮಹತ್ತಪಃ ॥ ೩೫ ॥
ಯೇನ ದೇವಾಧಿದೇವೋಽಸೌ ಪೂಜಿತೋ ವೃಷಭೇಶ್ವರಃ ।
ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ದೇವಪೂಜಿತಂ ।
ವೃಷಭೇಶ್ವರದೇವಸ್ಯ ಕಲ್ಪಲಿಂಗಸ್ಯ ಭಾಮಿನಿ ॥ ೩೬ ॥
ಯಃ ಶೃಣೋತಿ ಮಹಾದೇವಿ ಮಾಹಾತ್ಮ್ಯಂ ದೈವದೇವತಂ ।
ಮೂರ್ಖೋ ವಾ ಪಂಡಿತೋ ವಾಽಪಿ ಸ ಯಾತಿ ಪರಮಾಂ ಗತಿಂ ॥ ೩೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವೃಷವಾಹನೇಶ್ವರಮಾಹಾತ್ಮ್ಯವರ್ಣನಂ ನಾಮ
॥ ನವತಿತಮೋಽಧ್ಯಾಯಃ ॥

---

೩೫. ದೇವೋತ್ತಮನಾದ ವೃಷಭೇಶ್ವರನನ್ನು ಪೂಜಿಸಿದವನು ಸಕಲದಾನ ಮಾಡಿದವನಂತೆಯೂ, ಗಯಾತೀರ್ಥದಲ್ಲಿ ಶ್ರಾದ್ಧಗೈದವನಂತೆಯೂ. ಮಹಾ ತಪಸ್ಸನ್ನಾಚರಿಸಿದವನಂತೆಯೂ ಆಗುವನು. ಅವನ ಗುರುಗಳು ಸಂತುಷ್ಟರಾಗುವರು.

೩೬. ದೇವಿ! ಹೀಗೆ ನಿನಗೆ ವೃಷಭೇಶ್ವರಕಲ್ಪಲಿಂಗದ ದೇವಪೂಜ್ಯವಾದ ಮಾಹಾತ್ಮ್ಯವನ್ನು ಹೇಳಿರುವೆನು.

೩೭. ಮಹಾದೇವಿ! ಈ ಮಾಹಾತ್ಮ್ಯವನ್ನು ಕೇಳಿದವನು ಮೂರ್ಖನಾಗಲಿ ಪಂಡಿತನಾಗಲಿ ಉತ್ತಮಗತಿಯನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವೃಷವಾಹನೇಶ್ವರಮಾಹಾತ್ಮ್ಯವರ್ಣನ ವೆಂಬ
ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕನವತಿತಮೋಽಧ್ಯಾಯಃ

ತ್ರ್ಯಂಬಕೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತ್ರ್ಯಂಬಕೇಶ್ವರಮವ್ಯಯಂ ।
ತತ್ಪಂಚಮಂ ಸಮಾಖ್ಯಾತಂ ರುದ್ರಾಣಾಮಾದಿದೈವತಂ ॥ ೧ ॥
ಶಿಖಂಡೀಶ್ವರಮಾಖ್ಯಾತಂ ಪೂರ್ವಂ ತ್ರೇತಾಯುಗೇ ಪ್ರಿಯೇ
ತಚ್ಚಾಽದ್ಯಾಹಂ ಪ್ರವಕ್ಷ್ಯಾಮಿ ಯಥಾ ಸಂಜ್ಞಾಯತೇ ನರೈಃ ॥ ೨ ॥
ಅಸ್ತಿ ಸಾಂಬಪುರಂ ದೇವಿ ತತ್ರಸ್ಥಂ ಪರಮೇಶ್ವರಿ ।
ತಸ್ಯೈವೋತ್ತರದಿಗ್ಭಾಗೇ ಸ್ಥಾನಂ ಕಾಪಾಲಿಕಂ ಸ್ಮೃತಂ ॥ ೩ ॥
ಕಪಾಲೇಶ್ವರನಾಮಾ ಚ ಯತ್ರೇಶೋ ಲಿಂಗಮೂರ್ತಿಮಾನ್ ।
ಸಂಸ್ಥಿತಃ ಪಾಪನಾಶಾಯ ದರ್ಶನಾತ್ ಸ್ಪರ್ಶನಾನ್ನೃಣಾಂ ॥ ೪ ॥
ತಸ್ಮಾದೀಶಾನದಿಗ್ಭಾಗೇ ಧನುಷಾಂ ಷೋಡಶಾಂತರೇ ।
ತ್ರ್ಯಂಬಕೇಶ್ವರನಾಮಾ ಚ ತತ್ರ ರುದ್ರಃ ಸ್ಥಿತಃ ಸ್ವಯಂ ॥ ೫ ॥

ಕನ್ನಡ ಅನುವಾದ

ತ್ರ್ಯಂಬಕೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ರುದ್ರರಲ್ಲಿ ಮೊದಲನೆಯ ದೇವತೆಯಾದ ಐದನೆಯ ತ್ರ್ಯಂಬಕೇಶ್ವರನ ಸನ್ನಿಧಿಗೆ ಹೋಗಬೇಕು.

೨. ಈ ತ್ರ್ಯಂಬಕೇಶ್ವರನು ಹಿಂದೆ ತ್ರೇತಾಯುಗದಲ್ಲಿ ಶಿಖಂಡೀಶ್ವರನೆಂದು ಪ್ರಖ್ಯಾತನಾಗಿದ್ದನು. ಮಾನವರು ಅವನ್ನು ತಿಳಿದುಕೊಳ್ಳುವ ಬಗೆಯನ್ನು ಈಗ ಹೇಳುವೆನು.

೩, ೪. ಪರಮೇಶ್ವರಿ! ಆ ಪ್ರಭಾಸಕ್ಷೇತ್ರದಲ್ಲಿ ಸಾಂಬಪುರವಿರುವುದು. ಅದರ ಉತ್ತರ ದಿಕ್ಕಿನಲ್ಲಿರುವ ಕಾಪಾಲಿಕವೆಂಬ ಸ್ಥಳದಲ್ಲಿ ಶಂಕರನು ಕಪಾಲೇಶ್ವರನೆಂಬ ಹೆಸರಿನಿಂದ ಲಿಂಗಮೂರ್ತಿಯುಳ್ಳವನಾಗಿ ದರ್ಶನ, ಸ್ಪರ್ಶನಗಳಿಂದ ಮಾನವರ ಪಾಪವನ್ನು ಪರಿಹರಿಸುವುದಕ್ಕಾಗಿ ನೆಲೆಸಿರುವನು.

೫–೬. ಆ ಕಪಾಲೇಶ್ವರನ ಈಶಾನ್ಯದಿಕ್ಕಿನಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿ ಸಮಸ್ತ ಜನರಿಗೆ ಅನುಗ್ರಹಿಸುವವನೂ, ಸಮಸ್ತೇಷ್ಟಾರ್ಥಗಳನ್ನೀಯುವವನೂ

ಸರ್ವಾನುಗ್ರಹಕರ್ತಾ ಚ ಸರ್ವಕಾಮಫಲಪ್ರದಃ ।
ಪುರಾ ಯತ್ರಾತಪದ್ದೇವಿ ತಪೋ ಘೋರಂ ಸುದುಷ್ಕರಂ ।
ಗುರುರ್ನಾಮಾ ಋಷಿವರೋ ದೇವದಾನವದುಃಸಹಂ ॥ ೬ ॥
ಕೋಟೀನಾಂ ತ್ರಿತಯಂ ಯೇನ ತ್ರ್ಯಂಬಕೋ ಮಂತ್ರನಾಯಕಃ ।
ಜಪ್ತೋ ದಿವ್ಯೇನ ವಿಧಿನಾ ತ್ರಿಕಾಲಂ ಪೂಜ್ಯ ಶಂಕರಂ ॥ ೭ ॥
ತತಃ ಪ್ರಸಾದ್ಯ ದೇವೇಶಂ ದಿವ್ಯೈಶ್ವರ್ಯಮವಾಪ ಸಃ ।
ಚಕ್ರೇ ನಾಮ ಸ್ವಯಂ ತಸ್ಯ ತ್ರ್ಯಂಬಕೇಶ್ವರಮವ್ಯಯಂ ॥ ೮ ॥
ಜಪ್ತ್ವಾ ತು ತ್ರ್ಯಂಬಕಂ ಮಂತ್ರಂ ಯತಃ ಸಿದ್ಧಿಮವಾಪ ಸಃ ।
ದಿವ್ಯಾಷ್ಟಗುಣಮೈಶ್ವರ್ಯಂ ತೇನಾಸೌ ತ್ರ್ಯಂಬಕೇಶ್ವರಃ ॥ ೯ ॥
ಸರ್ವಪಾತಕವಿಧ್ವಂಸೀ ದರ್ಶನಾತ್ಸ್ಪರ್ಶನಾದಪಿ ।
ಯಸ್ತ್ರ್ಯಂಬಕಂ ಜಪೇದ್ವಿಪ್ರಸ್ತ್ರ್ಯಂಬಕೇಶ್ವರಸನ್ನಿಧೌ ।
ಸ ಪ್ರಾಪ್ನೋತಿ ಮಹಾಸಿದ್ಧಿಂ ಪ್ರತ್ಯಕ್ಷಂ ರುದ್ರ ಏವ ಸಃ ॥ ೧೦ ॥
ದರ್ಶನಾದಪಿ ತಸ್ಯಾಥ ಪಾಪಂ ಯಾತಿ ಸಹಸ್ರಧಾ ।
ಯಸ್ತಂ ಪೂಜಯತೇ ಭಕ್ತ್ಯಾ ವಿಧಿನಾ ಭಾವಮಾಸ್ಥಿತಃ ।
ವಾಮದೇವೇನ ಮಂತ್ರೇಣ ಸ ಮುಕ್ತಃ ಪಾತಕೈರ್ಭವೇತ್ । ॥ ೧೧ ॥

ಆದ ತ್ರ್ಯಂಬಕೇಶ್ವರನೆಂಬ ರುದ್ರನಿರುವನು. ಇಲ್ಲಿ ಹಿಂದೆ ಗುರುವೆಂಬ ಋಷಿವರ್ಯನು ದೇವದಾನವರಿಗೆ ಸಹಿಸಲಾಗದ ಘೋರತಪಸ್ಸನ್ನು ಮಾಡಿದನು.

೭. ಅವನು ಶಂಕರನನ್ನು ತ್ರಿಕಾಲದಲ್ಲಿಯೂ ಪೂಜಿಸಿ ಮೂರುಕೋಟಿಸಾರಿ ತ್ರ್ಯಂಬಕಮಹಾಮಂತ್ರವನ್ನು ದಿವ್ಯವಿಧಿಯಿಂದ ಜಪಿಸಿದನು.

೮. ಅದರಿಂದ ಪ್ರಸನ್ನನಾದ ಮಹೇಶ್ವರನಿಂದ ಅವನು ದಿವ್ಯೈಶ್ವರ್ಯವನ್ನು ಪಡೆದು ಆ ರುದ್ರನಿಗೆ ತ್ರ್ಯಂಬಕೇಶ್ವರನೆಂಬ ಹೆಸರನ್ನಿಟ್ಟನು.

೯. ಅವನು ತ್ರ್ಯಂಬಕ ಮಂತ್ರವನ್ನು ಜಪಿಸಿ ಅಷ್ಟೈಶ್ವರ್ಯವನ್ನು ಪಡೆದುದರಿಂದ ಆ ರುದ್ರನು ತ್ರ್ಯಂಬಕೇಶ್ವರನಾದನು.

೧೦. ದರ್ಶನ, ಸ್ಪರ್ಶನದಿಂದ ಸಕಲ ಪಾಪಗಳನ್ನು ಪರಿಹರಿಸುವ ಆ ತ್ರ್ಯಂಬಕೇಶ್ವರನ ಸಮ್ಮುಖದಲ್ಲಿ ತ್ರ್ಯಂಬಕಮಂತ್ರವನ್ನು ಜಪಿಸುವವನು ಮಹಾಸಿದ್ಧಿಯನ್ನು ಪಡೆದು ಪ್ರತ್ಯಕ್ಷ ರುದ್ರನೇ ಆಗುವನು.

೧೧. ಆ ತ್ರ್ಯಂಬಕೇಶ್ವರನ ದರ್ಶನದಿಂದಲೇ ಪಾಪವು ಸಾವಿರ ವಿಧವಾಗಿ ನಾಶವಾಗುವುದು. ಅವನನ್ನು ಭಕ್ತಿಯಿಂದ ವಾಮದೇವ ಮಂತ್ರದಿಂದ ಪೂಜಿಸಿದವನು ಪಾತಕಗಳಿಂದ ಮುಕ್ತನಾಗುವನು.

ಚೈತ್ರಶುಕ್ಲಚತುರ್ದಶ್ಯಾಂ ತತ್ರ ಯೋ ಜಾಗ್ರಯಾನ್ನಿಶಿ ।
ಪೂಜಾಸ್ತುತಿಕಥಾಭಿಶ್ಚ ಸ ಪ್ರಾಪ್ನೋತೀಪ್ಸಿತಂ ಫಲಂ ॥ ೧೨ ॥
ಧೇನುಸ್ತತ್ರೈವ ದಾತವ್ಯಾ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೧೩ ॥
ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ತ್ರ್ಯಂಬಕೇಶ್ವರರುದ್ರಸ್ಯ ನೃಣಾಂ ಪುಣ್ಯಫಲಪ್ರದಂ ॥ ೧೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತ್ರ್ಯಂಬಕೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕನವತಿತಮೋಽಧ್ಯಾಯಃ ॥

---

೧೨. ಅಲ್ಲಿ ಚೈತ್ರಶುಕ್ಲಚತುರ್ದಶೀದಿನ ರಾತ್ರಿ ಪೂಜೆ, ಸ್ತುತಿ, ಕಥೆಗಳಿಂದ ಜಾಗರಣೆ ಮಾಡುವವನು. ಅಭೀಪ್ಸಿತ ಫಲವನ್ನು ಪಡೆಯುವನು.

೧೩, ಯಾತ್ರೆಯ ಸಂಪೂರ್ಣ ಫಲವನ್ನು ಬಯಸುವವರು ಅಲ್ಲಿ ಗೋವನ್ನು ದಾನಮಾಡಬೇಕು.

೧೪. ದೇವಿ ! ಹೀಗೆ ನಿನಗೆ ಮನುಷ್ಯರ ಪಾಪವನ್ನು ಪರಿಹರಿಸುವುದೂ, ಪುಣ್ಯವನ್ನೀಯುವುದೂ ಆದ ತ್ರ್ಯಂಬಕೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತ್ರ್ಯಂಬಕೇಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿನವತಿತಮೋಽಧ್ಯಾಯಃ

ಅಘೋರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅಘೋರೇಶ್ವರಮುತ್ತಮಂ ।
ಷಷ್ಠಂ ಲಿಂಗಂ ಸಮಾಖ್ಯಾತಂ ತದ್ವಕ್ತ್ರಂ ಭೈರವಂ ಸ್ಮೃತಂ ॥ ೧ ॥
ತ್ರ್ಯಂಬಕೇಶ್ವರವಾಯವ್ಯೇ ಧನುಷಾಂ ಪಂಚಕೇ ಸ್ಥಿತಂ ।
ಸರ್ವಕಾಮಪ್ರದಂ ಪುಣ್ಯಂ ಕಲಿಕಲ್ಮಷನಾಶನಂ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ಸ್ನಾನಪೂಜಾದಿಭಿಃ ಕ್ರಮಾತ್ ।
ಮೇರುದಾನಸ್ಯ ಕೃತ್ಸ್ನಸ್ಯ ಸ ಲಭೇನ್ಮನುಜಃ ಫಲಂ ॥ ೩ ॥
ದಕ್ಷಿಣಾಮುರ್ತಿಮಾಸ್ಥಾಯ ಯತ್ಕಿಂಚಿತ್ತತ್ರ ದೀಯತೇ ।
ಅಘೋರೇಶ್ವರದೇವಸ್ಯ ತತ್ಸರ್ವಂ ಚಾಕ್ಷಯಂ ಭವೇತ್ ॥ ೪ ॥
ಯಃ ಶ್ರಾದ್ಧಂ ಕುರುತೇ ತತ್ರ ಅಘೋರೇಶ್ವರದಕ್ಷಿಣೇ ।
ಆಕಲ್ಪಂ ತೃಪ್ತಿಮಾಯಾಂತಿ ಪಿತರಸ್ತಸ್ಯ ತರ್ಪಿತಾಃ ॥ ೫ ॥

ಕನ್ನಡ ಅನುವಾದ

ಅಘೋರೇಶ್ವರಮಾಹಾತ್ಮ್ಯವರ್ಣನ

೧—೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಭಯಂಕರವಾದ ಮುಖವುಳ್ಳವನೂ, ತ್ರ್ಯಂಬಕೇಶ್ವರನ ವಾಯುವ್ಯದಲ್ಲಿ ಐದು ಬಿಲ್ಲುಗಳ ದೂರದಲ್ಲಿರುವವನೂ, ಸಕಲೇಷ್ಟಾರ್ಥಗಳನ್ನೀಯುವವನೂ, ಕಲಿದೋಷವನ್ನು ನೀಗಿಸುವವನೂ ಆದ ಆರನೆಯ ಅಘೋರೇಶ್ವರನೆಡೆಗೆ ಹೋಗಬೇಕು.

೩. ಅವನಿಗೆ ಅಭಿಷೇಕ, ಪೂಜೆ ಮೊದಲಾದುವುಗಳನ್ನು ಭಕ್ತಿಯಿಂದ ಮಾಡಿದವನು ಸಂಪೂರ್ಣವಾದ ಮೇರು ಪರ್ವತವನ್ನು ದಾನಮಾಡಿದ ಫಲವನ್ನು ಹೊಂದುವನು.

೪. ಅಲ್ಲಿ ದಕ್ಷಿಣಾಮೂರ್ತಿಯನ್ನುದ್ದೇಶಿಸಿ ಅಘೋರೇಶ್ವರನಿಗೆ ಸಮರ್ಪಿಸಿದುದೆಲ್ಲವೂ ಅಕ್ಷಯವಾಗುವುವು.

೫. ಅಘೋರೇಶ್ವರನ ದಕ್ಷಿಣದಲ್ಲಿ ಶ್ರಾದ್ಧಗೈದವನ ಪಿತೃಗಳು ಕಲ್ಪಾಂತ್ಯದವರೆಗೆ ತೃಪ್ತಿಗೊಳ್ಳುವರು.

ಕಿಂ ಶ್ರಾದ್ಧೇನ ಗಯಾತೀರ್ಥೇ ವಾಜಿಮೇಧೇನ ಕಿಂ ಪ್ರಿಯೇ ।
ತತ್ರ ಶ್ರಾದ್ಧೇನ ತತ್ಸರ್ವಂ ಫಲಮಭ್ಯಧಿಕಂ ಲಭೇತ್ ॥ ೬ ॥
ತ್ರುಟಿಮಾತ್ರಮಪಿ ಸ್ವರ್ಣಂ ಯಾತ್ರಾಯಾಂ ಯಃ ಪ್ರಯಚ್ಛತಿ ।
ಸ ಸರ್ವಂ ಫಲಮಾಪ್ನೋತಿ ಮಹಾದಾನಸ್ಯ ಭೂರಿಶಃ ॥ ೭ ॥
ಬ್ರಹ್ಮಕೂರ್ಚಂ ಚರೇದ್ಯಸ್ತು ಸೋಮಾಷ್ಟಮ್ಯಾಂ ವಿಧಾನತಃ ।
ಅಘೋರೇಶ್ವರಸಾನ್ನಿಧ್ಯೇ ಅಘೋರೇಣಾಭಿಮಂತ್ರಿತಂ ।
ಷಡಬ್ದಸ್ಯ ಮಹತ್ತೇನ ಪ್ರಾಯಶ್ಚಿತ್ತಂ ಕೃತಂ ಭವೇತ್ ॥ ೮ ॥
ಇತಿ ಸಂಕ್ಷೇಪತಃ ಪ್ರೋಕ್ತಮಘೋರೇಶಮಹೋದಯಂ ।
ಮಾಹಾತ್ಮ್ಯಂ ಸರ್ವಪಾಪಘ್ನಂ ಶ್ರುತಂ ಸರ್ವಾರ್ಥಸಾಧಕಂ ॥ ೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಘೋರೇಶ್ವರಮಾಹಾತ್ಮ್ಯವರ್ಣನಂ ನಾಮ
ದ್ವಿನವತಿತಮೋಽಧ್ಯಾಯಃ

---

೬. ಪ್ರಿಯಳೆ! ಗಯೆಯಲ್ಲಿ ಶ್ರಾದ್ಧಮಾಡುವುದರಿಂದೂ, ಅಶ್ವಮೇಧಯಾಗ ಗೈಯುವುದರಿಂದಲೂ ಏನು ಪ್ರಯೋಜನ? ಆ ಅಘೋರೇಶ್ವರನ ದಕ್ಷಿಣದಲ್ಲಿ ಶ್ರಾದ್ಧಮಾಡುವುದರಿಂದ ಅದಕ್ಕಿಂತಲೂ ಹೆಚ್ಚಾದ ಪುಣ್ಯವು ಲಭಿಸುವುದು.

೭. ಅಲ್ಲಿ ಯಾತ್ರಾ ಕಾಲದಲ್ಲಿ ತ್ರ್ಯಣುಕದಷ್ಟು (ಸ್ವಲ್ಪ) ಚಿನ್ನದ ದಾನವನ್ನು ಮಾಡಿದವನು ಅನೇಕ ಮಹಾದಾನಗಳನ್ನು ಮಾಡಿದ ಫಲವನ್ನು ಪಡೆಯುವನು.

೮. ಅಷ್ಟಮಿ ಸೋಮವಾರದಿನ ಅಘೋರೇಶ್ವರನ ಸಮೀಪದಲ್ಲಿ ಅಘೋರ ಮಂತ್ರದಿಂದ ಅಭಿಮಂತ್ರಿಸಿದ ಬ್ರಹ್ಮಕೂರ್ಚವನ್ನು ಮಾಡುವವನು ಆರುವರ್ಷಕಾಲ ಮಹಾಪ್ರಾಯಶ್ಚಿತ್ತವನ್ನಾಚರಿಸಿದವನಂತಾಗುವನು.

೯. ಹೀಗೆ ಸಕಲ ಪಾಪಗಳನ್ನು ಪರಿಹರಿಸುವುದೂ, ಶ್ರವಣ ಮಾತ್ರದಿಂದ ಸಕಲೇಷ್ಟಾರ್ಥಗಳನ್ನು ಸಾಧಿಸುವುದೂ ಆದ ಅಘೋರೇಶ್ವರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಘೋರೇಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಣವತಿತಮೋಽಧ್ಯಾಯಃ

ಮಹಾಕಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇದ್ವರಾರೋಹೇ ಮಹಾಕಾಲೇಶ್ವರಂ ಪರಂ ।
ಅಘೋರೇಶಾದುತ್ತರತಃ ಕಿಂಚಿದ್ವಾಯವ್ಯಸಂಸ್ಥಿತಂ ॥ ೧ ॥
ಧನುಷಾಂ ತ್ರಿಂಶತಾ ದೇವಿ ಶ್ರುತಂ ಪಾತಕನಾಶನಂ ।
ಪೂರ್ವಂ ಕೃತಯುಗೇ ದೇವಿ ಸ್ಮೃತಂ ಚಿತ್ರಾಂಗದೇಶ್ವರಂ ॥ ೨ ॥
ಮಹಾಕಾಲೇಶ್ವರಂ ದೇವಿ ಕಲೌ ನಾಮ ಪ್ರಕೀರ್ತಿತಂ ।
ಕಾಲರೂಪೀ ಮಹಾರುದ್ರಸ್ತಸ್ಮಿಂಲ್ಲಿಂಗೇ ವ್ಯವಸ್ಥಿತಃ ॥ ೩ ॥
ಚರಾಚರಗುರುಃ ಸಾಕ್ಷಾದ್ದೇವದಾನವದರ್ಪಹಾ ।
ಸೂರ್ಯರೂಪೇಣ ಯತ್ಸರ್ವಂ ಬ್ರಹ್ಮಾಂಡೇ ಗ್ರಸತೇ ಪ್ರಿಯೇ ॥ ೪ ॥
ಸ ದೇವಃ ಸಂಸ್ಥಿತೋ ದೇವಿ ತಸ್ಮಿಂಲ್ಲಿಂಗೇ ಮಹಾಪ್ರಭಃ ।
ಯಸ್ತತ್ಪೂಜಯತೇ ಭಕ್ತ್ಯಾ ಕಲ್ಯೇ ಲಿಂಗಂ ಮಮ ಪ್ರಿಯಂ ।
ಷಡಕ್ಷರೇಣ ಮಂತ್ರೇಣ ಮೃತ್ಯುಂ ಜಯತಿ ತತ್ಕ್ಷಣಾತ್ ॥ ೫ ॥

ಕನ್ನಡದ ಅನುವಾದ

ಮಹಾಕಾಲೇಶ್ವರ ಮಾಹಾತ್ಮ್ಯವರ್ಣನ

೧–೫. ಈಶ್ವರನು ಹೇಳುತ್ತಾನೆ:—ಪ್ರಿಯಳೇ! ಬಳಿಕ ಅಘೋರೇಶ್ವರನ ಉತ್ತರದಲ್ಲಿ ಸ್ವಲ್ಪವಾಯವ್ಯ ದಿಕ್ಕಿನಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿರುವ ಪಾಪವನ್ನು ಪರಿಹರಿಸುವ ಮಹಾಕಾಲೇಶ್ವರನನ್ನು ಹೊಂದಬೇಕು. ದೇವಿ! ಈ ಲಿಂಗವು ಹಿಂದೆ ಕೃತಯುಗದಲ್ಲಿ ಚಿತ್ರಾಂಗದೇಶ್ವರನೆಂದು ಪ್ರಸಿದ್ಧವಾಗಿದ್ದಿತು. ಈ ಕಲಿಯುಗದಲ್ಲಿ ಮಹಾಕಾಲೇಶ್ವರನೆಂದು ಹೆಸರುಗೊಂಡಿದೆ. ಈ ಲಿಂಗದಲ್ಲಿ ಚರಾಚರ ಪ್ರಪಂಚಕ್ಕೆ ಗುರುವೂ, ದೇವದಾನವರ ಅಹಂಕಾರವನ್ನು ನಾಶಗೊಳಿಸುವವನೂ ಆದ ಕಾಲರೂಪಿಯಾದ ಮಹಾರುದ್ರನು ನೆಲಸಿರುವನು. ಪ್ರಿಯಳೇ! ಸೂರ್ಯರೂಪದಿಂದ ಬ್ರಹ್ಮಾಂಡವನ್ನೆಲ್ಲ ನುಂಗುತ್ತಿರುವ ಕಾಲರುದ್ರನು ಈ ಲಿಂಗದಲ್ಲಿರುವನು. ಪ್ರಾತಃ ಕಾಲದಲ್ಲಿ ನನಗೆ ಪ್ರಿಯವಾದ ಆ ಲಿಂಗವನ್ನು ಭಕ್ತಿಯಿಂದ ಷಡಕ್ಷರ ಮಂತ್ರದಿಂದ ಪೂಜಿಸುವವನು ಕೂಡಲೆ ಮೃತ್ಯುವನ್ನು ದಾಟುವನು.

ಕೃಷ್ಣಾಷ್ಟಮ್ಯಾಂ ವಿಶೇಷೇಣ ಗುಗ್ಗುಲಂ ಘೃತಸಂಯುತಂ ।
ಯೋ ವಹೇದ್ವಿಧಿವತ್ತತ್ರ ಪೂಜಾಂ ಕೃತ್ವಾ ನಿಶಾಗಮೇ ॥ ೬ ॥
ಅಪರಾಧಸಹಸ್ರಂ ತು ಕ್ಷಮತೇ ತಸ್ಯ ಭೈರವಃ ।
ಧೇನುದಾನಂ ಪ್ರಶಂಸಂತಿ ತಸ್ಮಿನ್ ಸ್ಥಾನೇ ಮಹರ್ಷಯಃ ॥ ೭ ॥
ಧೇನುದಸ್ತಾರಯೇನ್ನೂನಂ ದಶಪೂರ್ವಾನ್ ದಶಾಽಪರಾನ್ ।
ದೇವಸ್ಯ ದಕ್ಷಿಣೇ ಭಾಗೇ ಯೋ ಜಪೇಚ್ಛತರುದ್ರಿಯಂ ॥ ೮ ॥
ಉದ್ಧರೇತ್ಪಿತೃವರ್ಗಂ ಚ ಮಾತೃವರ್ಗಂ ಚ ಮಾನವಃ ।
ಬಾಲ್ಯೇ ವಯಸಿ ಯತ್ಪಾಪಂ ವಾರ್ಧಕೇ ಯೌವನೇಽಪಿ ವಾ ।
ಕ್ಷಾಲಯೇಚ್ಚೈವ ತತ್ಸರ್ವಂ ದೃಷ್ಟ್ವಾ ಕಾಲೇಶ್ವರಂ ಹರಂ ॥ ೯ ॥
ಅಯನೇ ಚೋತ್ತರೇ ಪ್ರಾಪ್ತೇ ಯಃ ಕುರ್ಯಾದ್ಘೃತಕಂಬಲಂ ।
ನ ಸ ಭೂಯೋಽತ್ರ ಸಂಸಾರೇ ಜನ್ಮಪ್ರಾಪ್ನೋತಿ ದಾರುಣಂ ॥ ೧೦ ॥
ನ ದುಃಖಿತೋ ದರಿದ್ರೋ ವಾ ದುರ್ಭಗೋ ವಾ ಪ್ರಜಾಯತೇ ।
ಸಪ್ತಜನ್ಮಾಂತರಾಣ್ಯೇವ ಮಹಾಕಾಲೇಶದರ್ಶನಾತ್ ॥ ೧೧ ॥
ಧನಧಾನ್ಯಸಮಾಯುಕ್ತೇ ಸ್ಫೀತೇ ಸಂಜಾಯತೇ ಕುಲೇ ।
ಭಕ್ತಿರ್ಭವತಿ ಭೂಯೋಽಪಿ ಮಹಾಕಾಲೇಶ್ವರಾರ್ಚನೇ ॥ ೧೨ ॥

೬–೭. ಅಲ್ಲಿ ಕೃಷ್ಣಾಷ್ಟಮಿಯದಿನ ರಾತ್ರಿ ವಿಧಿಯಂತೆ ಪೂಜಿಸಿ ಆಜ್ಯಸಹಿತವಾದ ಗುಗ್ಗುಲು ಧೂಪವನ್ನು ಹಾಕುವವನ ಸಾವಿರ ಅಪರಾಧಗಳನ್ನು ಭೈರವನು ಕ್ಷಮಿಸುವನು. ಮಹರ್ಷಿಗಳು ಅಲ್ಲಿ ಗೋದಾನಮಾಡುವುದನ್ನು ಹೊಗಳುತ್ತಾರೆ.

೮–೯. ಧೇನುವನ್ನು ದಾನವಿತ್ತವನು ಪೂರ್ವಾಪರ ಹತ್ತು ತಲೆಯ ಪಿತೃಗಳನ್ನು ಉದ್ಧರಿಸುವನು. ಆ ಮಹಾಕಾಲೇಶ್ವರನ ದಕ್ಷಿಣ ದಿಕ್ಕಿನಲ್ಲಿ ಶತರುದ್ರಿಯವನ್ನು ಜಪಿಸುವ ಮಾನವನು ಪಿತೃವರ್ಗವನ್ನೂ, ಮಾತೃವರ್ಗವನ್ನೂ ಉದ್ಧಾರಮಾಡುವನು. ಮಹಾಕಾಲೇಶ್ವರನನ್ನು ದರ್ಶನ ಗೈದ ಮಾನವನು ಬಾಲ್ಯ, ಯೌವನ, ವಾರ್ಧಕ್ಯದಲ್ಲಿ ಮಾಡಿದ ಪಾಪಗಳನ್ನೆಲ್ಲ ಪರಿಹರಿಸಿಕೊಳ್ಳುವನು.

೧೦. ಉತ್ತರಾಯಣದಲ್ಲಿ ಇಲ್ಲಿ ಘೃತಕಂಬಲವನ್ನು ದಾನ ಕೊಟ್ಟವನು ಮರಳಿ ಸಂಸಾರದಲ್ಲಿ ದಾರುಣವಾದ ಜನ್ಮವನ್ನು ಪಡೆಯುವುದಿಲ್ಲ.

೧೧. ಆ ಮಹಾಕಾಲೇಶ್ವರನ ದರ್ಶನದಿಂದ ಮನುಷ್ಯನು ಏಳು ಜನ್ಮಗಳಲ್ಲಿ ದುಃಖಗೊಂಡವನೂ, ಬಡವನೂ, ದುರ್ಭಗನೂ ಆಗುವುದಿಲ್ಲ.

೧೨. ಮತ್ತು ಧನಧಾನ್ಯಗಳಿಂದಕೂಡಿದ ಪರಿಶುದ್ಧ ಕೀರ್ತಿಯುಳ್ಳ ವಂಶದಲ್ಲಿ ಜನಿಸಿ ಮಹಾಕಾಲೇಶ್ವರಾರ್ಚನೆಯಲ್ಲಿ ಭಕ್ತಿಯುಳ್ಳವನಾಗುವನು.

ಇತಿ ಸಂಕ್ಷೇಪತಃ ಪ್ರೋಕ್ತಂ ಮಹಾಕಾಲೇಶ್ವರಂ ಪ್ರಿಯೇ ।
ಚಿತ್ರಾಂಗದೋ ಗಣೋ ದೇವಿ ತೇನ ಚಾರಾಧಿತಂ ಪುರಾ ॥ ೧೩ ॥
ದಿವ್ಯಾಬ್ದಾನಾಂ ಸಹಸ್ರಂ ತು ಮಹಾಕಾಲೇಶ್ವರಂ ಹಿ ತತ್ ।
ಚಿತ್ರಾಂಗದೇಶ್ವರಂ ನಾಮ ತೇನ ಖ್ಯಾತಂ ಧರಾತಲೇ ॥ ೧೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಹಾಕಾಲೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿನವತಿತಮೋಽಧ್ಯಾಯಃ ॥

೧೩–೧೪. ಪ್ರಿಯಳೆ! ಹೀಗೆ ಸಂಕ್ಷೇಪವಾಗಿ ಮಹಾಕಾಲೇಶ್ವರನ ವಿಷಯವನ್ನು ಹೇಳಿರುವೆನು. ಚಿತ್ರಾಂಗದನೆಂಬ ಗಣಾಧಿಪನು ದಿವ್ಯ ಸಹಸ್ರ ವರ್ಷಗಳಕಾಲ ಆ ಮಹಾಕಾಲೇಶ್ವರನನ್ನು ಪೂಜಿಸಿದ್ದರಿಂದ ಆವನು ಭೂಮಿಯಲ್ಲಿ ಚಿತ್ರಾಂಗದೇಶ್ವರನೆಂಬ ಹೆಸರಿನಿಂದ ಪ್ರಸಿದ್ಧನಾದನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಮಹಾಕಾಲೇಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಚತುರ್ನವತಿತಮೋಽಧ್ಯಾಯಃ

ಭೈರವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಭೈರವೇಶ್ವರಮುತ್ತಮಂ ।
ತಸ್ಯೈವ ವಹ್ನಿಕೋಣಸ್ಥಂ ಧನುಷಾಂ ದಶಕೇ ಸ್ಥಿತಂ ॥ ೧ ॥
ಸರ್ವಕಾಮಪ್ರದಂ ದೇವಿ ದಾರಿದ್ರ್ಯೌಘವಿನಾಶನಂ ।
ಪೂರ್ವಂ ಚಂಡೇಶ್ವರಂ ನಾಮ ಖ್ಯಾತಂ ಕೃತಯುಗೇ ಪ್ರಿಯೇ ॥ ೨ ॥
ಚಂಡೋ ನಾಮ ಗಣೋ ದೇವಿ ತೇನ ಚಾರಾಧಿತಂ ಪುರಾ ।
ದಿವ್ಯಾಬ್ದಾನಾಂ ಸಹಸ್ರಂ ತು ತೇನ ಚಂಡೇಶ್ವರಂ ಸ್ಮೃತಂ ॥ ೩ ॥
ತಂ ದೃಷ್ಟ್ವಾ ದೇವದೇವೇಶಂ ಸ್ಪೃಷ್ಟ್ವಾ ಚ ಸುಸಮಾಹಿತಃ ।
ಮುಚ್ಯತೇ ಸಕಲಾತ್ಪಾಪಾದಾಜನ್ಮಮರಣಾಂತಿಕಾತ್ ॥ ೪ ॥

ಕನ್ನಡದ ಅನುವಾದ

ಭೈರವೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಆ ಮಹಾಕಾಳೇಶ್ವರನ ಆಗ್ನೇಯ ಮೂಲೆಯಲ್ಲಿ ಹತ್ತು ಬಿಲ್ಲುಗಳ ದೂರದಲ್ಲಿರುವ ಸಕಲೇಷ್ಟಾರ್ಥಗಳನ್ನೀಯುವವನೂ, ಬಡತನವನ್ನು ನೀಗಿಸುವವನೂ, ಹಿಂದೆ ಕೃತಯುಗದಲ್ಲಿ ಚಂಡೇಶ್ವರನೆಂದು ಪ್ರಸಿದ್ಧನಾದನೂ ಆದ ಭೈರವೇಶ್ವರನೆಡೆಗೆ ಹೋಗಬೇಕು.

೩. ದೇವಿ! ಹಿಂದೆ ಚಂಡನೆಂಬ ಶಿವಗಣನು ದಿವ್ಯಸಾವಿರ ವರ್ಷಗಳಕಾಲ ಆ ಲಿಂಗವನ್ನು ಪೂಜಿಸಿದ್ದರಿಂದ ಚಂಡೇಶ್ವರನೆಂದು ಪ್ರಸಿದ್ಧವಾಯಿತು.

೪. ಆ ಮಹೇಶ್ವರನನ್ನು ಸಾವಧಾನ ಮನಸ್ಸಿನಿಂದ ದರ್ಶನ ಸ್ಪರ್ಶನಗೈದವನು ಹುಟ್ಟಿದ ಮೊದಲ್ಗೊಂಡು ಮರಣಾಂತ್ಯದವರೆಗೆ ಮಾಡಿದ ಪಾಪದಿಂದ ಮುಕ್ತನಾಗುವನು.

ತತ್ರ ಕೃಷ್ಣಚತುರ್ದಶ್ಯಾಂ ಮಾಸೇ ಭಾದ್ರಪದೇ ಪ್ರಿಯೇ
ಉಪವಾಸಪರೋ ಭೂತ್ವಾ ಯಃ ಕರೋತಿ ಪ್ರಜಾಗರಂ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ॥ ೫ ॥

ವಾಚಿಕಂ ಮಾನಸಂ ಪಾಪಂ ಕರ್ಮಣಾ ಯದುಪಾರ್ಜಿತಂ ।
ತತ್ಸರ್ವಂ ನಾಶಮಾಯಾತಿ ತಸ್ಯ ಲಿಂಗಸ್ಯ ದರ್ಶನಾತ್ ॥ ೬ ॥

ತಿಲಾ ಹಿರಣ್ಯಂ ವಸ್ತ್ರಾಣಿ ತತ್ರ ದೇಯಂ ಮನೀಷಿಣೇ ।
ಸರ್ವಕಿಲ್ಬಿಷನಾಶಾರ್ಥಂ ಸಮ್ಯಗ್ಯಾತ್ರಾಫಲೇಪ್ಸುನಾ ॥ ೭ ॥

ಭೈರವಾಕಾರಮಾಸ್ಥಾಯ ಕಲ್ಪಾಂತೇ ಸ ಹರೇದ್ಯತಃ ।
ವಿಶ್ವಂ ಸಮಗ್ರಂ ದೇವೇಶಿ ತೇನಾಽಸೌ ಭೈರವಃ ಸ್ಮೃತಃ ॥ ೮ ॥

ಅಸ್ಮಿನ್ ಕಲ್ಪೇ ಮಹಾದೇವಿ ಪ್ರಭಾಸಕ್ಷೇತ್ರಮಾಸ್ಥಿತಃ ।
ಬಭೂವ ಭೈರವೋ ರುದ್ರಃ ಕಲ್ಪಾತೇ ಲಿಂಗಮೂರ್ತಿಮಾನ್ ॥ ೯ ॥

---

೫. ಪ್ರಿಯಳೆ! ಅಲ್ಲಿ ಭಾದ್ರಪದ ಮಾಸದ ಕೃಷ್ಣ ಚತುರ್ದಶೀಯ ದಿನ ಉಪವಾಸ ವಿದ್ದು ಜಾಗರಣೆ ಮಾಡುವವನು ಮಹೇಶ್ವರನ ಸ್ಥಾನವನ್ನು ಪಡೆಯುವನು.

೬. ಆ ಲಿಂಗವನ್ನು ನೋಡುವುದರಿಂದ ಕಾಯಿಕ, ವಾಚಿಕ, ಮಾನಸಿಕ ಪಾಪಗಳೆಲ್ಲ ನಾಶವಾಗುವವು.

೭. ಯಾತ್ರಾಫಲವನ್ನು ಬಯಸುವವನು ಸಕಲ ಪಾಪಗಳ ನಾಶಕ್ಕಾಗಿ ವಿದ್ವಾಂಸ ನಿಗೆ ಎಳ್ಳು, ಚಿನ್ನ, ವಸ್ತ್ರಗಳನ್ನು ದಾನಮಾಡಬೇಕು.

೮. ದೇವೇಶಿ! ಆ ರುದ್ರನು ಪ್ರಳಯಕಾಲದಲ್ಲಿ ಭಯಂಕರಾಕೃತಿಯನ್ನು ಹೊಂದಿ ಸಮಸ್ತ ಪ್ರಪಂಚವನ್ನು ಸಂಹರಿಸುವುದರಿಂದ ಭೈರವೇಶ್ವರನೆಂದು ಪ್ರಸಿದ್ಧ ನಾದನು.

೯. ಮಹಾದೇವಿ! ಭೈರವರುದ್ರನು ಈ ಕಲ್ಪದಲ್ಲಿ ಪ್ರಭಾಸಕ್ಷೇತ್ರದಲ್ಲಿ ನೆಲೆಸಿ ಲಿಂಗಮೂರ್ತಿಯಾದನು.

ಏವಂ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಭೈರವೇಶ್ವರಂ ।
ಯಚ್ಛ್ರುತ್ವಾ ಮುಚ್ಯತೇ ಜಂತುಃ ಪಾತಕಾದತಿಭೈರವಾತ್ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೈರವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುರ್ನವತಿತಮೋಽಧ್ಯಾಯಃ ॥

---

೧೦. ಹೀಗೆ ಸಂಕ್ಷೇಪವಾಗಿ ಭೈರವೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಕೇಳಿದ ಮಾನವನು ಅತಿಭಯಂಕರವಾದ ಪಾಪದಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೈರವೇಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚನವತಿತಮೋಽಧ್ಯಾಯಃ

ಮೃತ್ಯುಂಜಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇದ್ವರಾರೋಹೇ ಲಿಂಗಂ ಮೃತ್ಯುಂಜಯೇಶ್ವರಂ ।
ತಸ್ಯೈವ ವಹ್ನಿಕೋಣಸ್ಥಂ ಧನುಷಾಂ ದಶಕೇ ಸ್ಥಿತಂ ॥ ೧ ॥
ಪಶ್ಚಿಮೇ ಸಾಗರಾದಿತ್ಯಾತ್ ಸ್ಥಿತಂ ಧನುಶ್ಚತುಷ್ಟಯೇ ।
ಪಾಪಘ್ನಂ ಸರ್ವಜಂತೂನಾಂ ದರ್ಶನಾತ್ ಸ್ಪರ್ಶನಾದಪಿ ॥ ೨ ॥
ಪೂರ್ವೇ ಯುಗೇ ಸಮಾಖ್ಯಾತಂ ನಾಮ ನಂದೀಶ್ವರೇತಿ ಚ ।
ಯತ್ರ ತಪ್ತಂ ತಪೋ ಘೋರಂ ನಂದಿನಾಮ್ನಾ ಗಣೇನ ಮೇ ॥ ೩ ॥
ಪ್ರತಿಷ್ಠಾಪ್ಯ ಮಹಾಲಿಂಗಂ ನಿತ್ಯಂ ಪೂಜಾಪರೇಣ ಚ ।
ತತ್ರ ಜಪ್ತೋ ಮಹಾಮಂತ್ರೋ ಮೃತ್ಯುಂಜಯ ಇತಿ ಶ್ರುತಃ ॥ ೪ ॥
ಕೋಟೀನಾಂ ನಿಯುತಂ ದೇವಿ ತತಸ್ತುಷ್ಟೋಮಹೇಶ್ವರಃ ।
ದದೌ ಗಣೇಶತಾಂ ತಸ್ಯ ಮುಕ್ತಿಂ ಸಾಮೀಪ್ಯಗಾಂ ತಥಾ ॥ ೫ ॥

ಕನ್ನಡದ ಅನುವಾದ

ಮೃತ್ಯುಂಜಯಮಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ತರುವಾಯ ಪ್ರಿಯಳೆ! ಆ ಭೈರವೇಶ್ವರನ ಆಗ್ನೇಯ ದಿಕ್ಕಿನಲ್ಲಿ ಹತ್ತು ಬಿಲ್ಲಿನ ದೂರದಲ್ಲಿಯೂ, ಸಾಗರಾದಿತ್ಯನ ಪಶ್ಚಿಮದಲ್ಲಿ ನಾಲ್ಕು ಬಿಲ್ಲಿನ ದೂರದಲ್ಲಿಯೂ ಇರುವ ದರ್ಶನ ಸ್ಪರ್ಶನಗಳಿಂದ ಸಮಸ್ತ ಪ್ರಾಣಿಗಳ ಪಾಪವನ್ನು ಪರಿಹರಿಸುವುದೂ ಆದ ಮೃತ್ಯುಂಜಯೇಶ್ವರನ ಸಮೀಪಕ್ಕೆ ಹೋಗಬೇಕು.

೩. ಹಿಂದಿನ ಯುಗದಲ್ಲಿ ನಂದಿಯೆಂಬ ಶಿವಗಣನು ಅಲ್ಲಿ ತಪಸ್ಸನ್ನಾಚರಿಸಿದ್ದರಿಂದ ಆ ಲಿಂಗಕ್ಕೆ ನಂದೀಶ್ವರವೆಂದು ಹೆಸರಾಯಿತು.

೪–೫. ನಂದಿಯು ಅಲ್ಲಿ ಮಹಾಲಿಂಗವನ್ನು ಪ್ರತಿಷ್ಠೆಮಾಡಿ ನಿತ್ಯವೂ ಪೂಜಿಸುತ್ತ ಅನೇಕಕೋಟಿ ಮೃತ್ಯುಂಜಯ ಮಹಾಮಂತ್ರವನ್ನು ಜಪಿಸಿದ್ದರಿಂದ ಮಹೇಶ್ವರನು ಸಂತುಷ್ಟನಾಗಿ ಅವನಿಗೆ ಗಣೇಶತ್ವವನ್ನೂ, ಸಾಮೀಪ್ಯಮುಕ್ತಿಯನ್ನೂ ಕೊಟ್ಟನು.

ಮೃತ್ಯುಂಜಯೇನ ಮಂತ್ರೇಣ ತಸ್ಯ ತುಷ್ಟೋ ಯತೋ ಹರಃ ।
ತೇನ ಮೃತ್ಯುಂಜಯೇಶೇತಿ ಖ್ಯಾತಂ ಲಿಂಗಂ ಧರಾತಲೇ ॥ ೬ ॥
ಯಸ್ತಂ ಪೂಜಯತೇ ಭಕ್ತ್ಯಾ ಪಶ್ಯೇದ್ಧ್ಯಾ ಭಾವಿತಾತ್ಮವಾನ್ ।
ನಾಶಯೇತ್ತಸ್ಯ ಪಾಪಾನಿ ಸಪ್ತಜನ್ಮಾರ್ಜಿತಾನ್ಯಪಿ ॥ ೭ ॥
ಸ್ನಾಪಯೇತ್ಪಯಸಾ ಲಿಂಗಂ ದಧ್ನಾ ಘೃತಯುತೇನ ಚ ।
ಮಧುನೇಕ್ಷುರಸೇನೈವ ಕುಂಕುಮೇನ ವಿಲೇಪಯೇತ್ ॥ ೮ ॥
ಕರ್ಪೂರೋಶೀರಮಿಶ್ರೇಣ ಮೃಗನಾಭಿರಸೇನ ಚ ।
ಚಂದನೇನ ಸುಗಂಧೇನ ಪುಷ್ಪೈಃ ಸಂಪೂಜಯೇತ್ತತಃ ॥ ೯ ॥
ದದ್ಯಾದ್ಧೂಪಂ ಪುರೋ ದೇವಿ ತತೋ ದೇವಸ್ಯ ಚಾಗುರುಂ ।
ವಸ್ತ್ರೈಃ ಸಂಪೂಜ್ಯ ವಿವಿಧೈರಾತ್ಮವಿತ್ತಾನುಸಾರತಃ ॥ ೧೦ ॥
ನೈವೇದ್ಯಂ ಪರಮಾನ್ನಂ ಚ ದತ್ವಾ ದೀಪಸಮನ್ವಿತಂ ।
ಅಷ್ಟಾಂಗಂ ಪ್ರಣಿಪಾತಂ ಚ ತತಃ ಕಾರ್ಯಂ ಚ ಭಕ್ತಿತಃ ॥ ೧೧ ॥
ಹೇಮದಾನಂ ಪ್ರದಾತವ್ಯಂ ಬ್ರಾಹ್ಮಣೇ ವೇದಪಾರಗೇ ॥ ೧೨ ॥
ಏವಂ ಯಾತ್ರಾ ಭವೇತ್ತಸ್ಯ ಶಾಸ್ತ್ರೋಕ್ತಾ ನಾತ್ರ ಸಂಶಯಃ
ಏವಂ ಕೃತ್ವಾ ನರೋ ದೇವಿ ಲಭತೇ ಜನ್ಮನಃ ಫಲಂ ॥ ೧೩ ॥

---

೬. ಅಲ್ಲಿ ನಂದಿಯು ಮಾಡಿದ ಮೃತ್ಯುಂಜಯ ಮಂತ್ರಜಪದಿಂದ ಹರನು ಸಂತುಷ್ಟನಾದ್ದರಿಂದ ಆ ಲಿಂಗವು ಭೂಮಿಯಲ್ಲಿ ಮೃತ್ಯುಂಜಯೇಶವೆಂದು ಪ್ರಸಿದ್ಧವಾಯಿತು.

೭. ಆ ಶಿವನನ್ನು ಭಕ್ತಿಯಿಂದ ಧ್ಯಾನಿಸಿ ಪೂಜಿಸಿದವನ ಏಳು ಜನ್ಮಗಳಲ್ಲಿ ಮಾಡಿದ ಪಾಪಗಳು ಪರಿಹಾರವಾಗುವವು.

೮. ಆ ಲಿಂಗವನ್ನು ಮೊಸರು, ಹಾಲು, ತುಪ್ಪ, ಜೇನು, ಕಬ್ಬಿನ ರಸಗಳಿಂದ ಅಭಿಷೇಕಮಾಡಿ ಕುಂಕುಮವನ್ನು ಲೇಪನಮಾಡಬೇಕು.

೯. ಬಳಿಕ ಕರ್ಪೂರ, ಲಾವಂಚ ಕಸ್ತೂರಿಗಳಿಂದ ಸುಗಂಧವಾದ ಗಂಧದಿಂದಲೂ ಹೂವುಗಳಿಂದಲೂ ಪೂಜಿಸಬೇಕು.

೧೦–೧೨. ಅನಂತರ ಆ ಲಿಂಗದ ಮುಂದೆ ಅಗುರು ಧೂಪವನ್ನಿಟ್ಟು ತನ್ನ ಐಶ್ವರ್ಯಕ್ಕೆ ತಕ್ಕಂತೆ ನಾನಾ ವಸ್ತ್ರಗಳಿಂದ ಪೂಜಿಸಿ ದೀಪದೊಡನೆ ಪರಮಾನ್ನವನ್ನು ನಿವೇದಿಸಿ ಭಕ್ತಿಯಿಂದ ಸಾಷ್ಟಾಂಗ ಪ್ರಣಾಮಗೈದು ವೇದಪಾರಂಗತನಾದ ಬ್ರಾಹ್ಮಣನಿಗೆ ಸುವರ್ಣವನ್ನು ದಾನಮಾಡಬೇಕು.

೧೩. ಹೀಗೆ ಮಾಡಿದರೆ ಅವನ ಯಾತ್ರೆಯು ನಿಶ್ಚಯವಾಗಿಯೂ ಶಾಸ್ತ್ರರೀತಿಯಿಂದ ಸಾರ್ಥಕವಾಗುವುದು. ಇದರಿಂದ ಮಾನವನು ತನ್ನ ಜನ್ಮದ ಫಲವನ್ನು ಪಡೆಯುವನು.

ಇತಿ ಸಂಕ್ಷೇಪತಃ ಪ್ರೋಕ್ತಂ ಮೃತ್ಯುಂಜಯಮಹೋದಯಂ ।
ಪಾಪಘ್ನಂ ಸರ್ವಜಂತೂನಾಂ ಸರ್ವಕಾಮಫಲಪ್ರದಂ ॥ ೧೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮೃತ್ಯುಂಜಯಮಾಹಾತ್ಮ್ಯವರ್ಣನಂ ನಾಮ
॥ ಪಂಚನವತಿತಮೋಽಧ್ಯಾಯಃ ॥

---

೧೪. ಹೀಗೆ ಸಕಲಪ್ರಾಣಿಗಳ ಪಾಪವನ್ನು ನೀಗಿಸುವುದೂ, ಸಮಸ್ತೇಷ್ಟಾರ್ಥಗಳನ್ನೀಯುವುದೂ ಆದ ಮೃತ್ಯುಂಜಯನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದ
ಮೃತ್ಯುಂಜಯಮಾಹಾತ್ಮ್ಯವರ್ಣನವೆಂಬ
ತೊಂಬತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಣ್ಣವತಿತಮೋಽಧ್ಯಾಯಃ

ಕಾಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕಾಮೇಶ್ವರಮಿತಿ ಸ್ಮೃತಂ ।
ತಸ್ಯೈವೋತ್ತರದಿಗ್ಭಾಗೇ ಧನುಷಾಂ ತ್ರಿತಯೇ ಸ್ಥಿತಂ ।
ರತೀಶ್ವರಮಿತಿ ಖ್ಯಾತಂ ತ್ರೇತಾಯಾಂ ತತ್ಸುರೇಶ್ವರಿ ॥ ೧ ॥
ಯಸ್ಮಿನ್ ದೃಷ್ಟೇ ಮನುಷ್ಯಾಣಾಂ ಪೂಜಿತೇ ತು ವರಾನನೇ ।
ನಶ್ಯೇಚ್ಚ ಸಪ್ತಜನ್ಮಾಘಂ ಗೃಹಭಂಗಶ್ಚ ನೋ ಭವೇತ್ ॥ ೨ ॥

ದೇವ್ಯುವಾಚ :—

ಕೇನಾಽಯಂ ಸ್ಥಾಪಿತೋ ದೇವ ಕಸ್ಮಾತ್ಪ್ರೋಕ್ತೋ ರತೀಶ್ವರಃ ।
ದರ್ಶನೇನಾಽಸ್ಯ ಕಿಂ ಶ್ರೇಯಃ ಸರ್ವಂ ವಿಸ್ತರತೋ ವದ ॥ ೩ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ರತಿರ್ನಾಮಾಽಭವತ್ಸಾಧ್ವೀ ಕಾಮಪತ್ನೀ ಯಶಸ್ವಿನೀ ॥ ೪ ॥

ಕನ್ನಡದ ಅನುವಾದ

ಕಾಮೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಆ ಮೃತ್ಯುಂಜಯ ಲಿಂಗದ ಉತ್ತರ ದಿಕ್ಕಿನಲ್ಲಿ ಮೂರು ಬಿಲ್ಲುಗಳ ದೂರದಲ್ಲಿರುವ ತ್ರೇತಾಯುಗದಲ್ಲಿ ರತೀಶ್ವರನೆಂದು ಪ್ರಖ್ಯಾತಿಗೊಂಡ ಕಾಮೇಶ್ವರನಲ್ಲಿಗೆ ಹೋಗಬೇಕು.

೨. ಇವನನ್ನು ದರ್ಶನಮಾಡಿ ಪೂಜಿಸಿದ ಮಾನವರ ಏಳು ಜನ್ಮಗಳ ಪಾಪಗಳು ನಾಶವಾಗುವುದಲ್ಲದೆ ಗೃಹಭಂಗವಾಗಲಾರದು.

೩. ದೇವಿಯು ಹೇಳುತ್ತಾಳೆ :—ಸ್ವಾಮಿ ! ಈ ಶಿವಲಿಂಗವನ್ನು ಯಾರು ಪ್ರತಿಷ್ಠೆ ಮಾಡಿದರು ? ರತೀಶ್ವರನೆಂದು ಹೆಸರಾಗಲು ಕಾರಣವೇನು. ಇವನನ್ನು ನೋಡುವುದರಿಂದ ಏನು ಶ್ರೇಯಸ್ಸಾಗುವುದು ? ಎಲ್ಲವನ್ನೂ ವಿಸ್ತಾರವಾಗಿ ಹೇಳು.

೪. ಈಶ್ವರನು ಹೇಳುತ್ತಾನೆ :—ದೇವಿ ! ಪಾಪವನ್ನು ಪರಿಹರಿಸುವ ಕಥೆಯನ್ನು ಹೇಳುವೆನು. ಕೇಳು. ಮನ್ಮಥನ ಪತ್ನಿಯಾದ ರತಿಯೆಂಬ ಪತಿವ್ರತಾ ಸ್ತ್ರೀಯಿದ್ದಳು.

ದಗ್ಧೇ ಮನಸಿಜೇ ಪೂರ್ವಂ ದೇವೇನ ತ್ರಿಪುರಾರಿಣಾ ।
ತದರ್ಥಾಯ ತಪಸ್ತೇಪೇ ತಸ್ಮಿನ್ ದೇಶೇ ರತಿಃ ಕಿಲ ॥ ೫ ॥
ಅಂಗುಷ್ಠಾಗ್ರೇಣ ತಿಷ್ಠಂತ್ಯಾ ಯಾವದ್ಯುಗಚತುಷ್ಟಯಂ ।
ಆರಾಧಿತೋ ಮಹಾದೇವಃ ಶಾಂತೇನ ಮನಸಾ ಪ್ರಿಯೇ ॥ ೬ ॥
ಕಸ್ಮಿಂಶ್ಚಿದಥ ಕಾಲೇ ತು ನಿರ್ಭಿದ್ಯ ಧರಣೀತಲಂ ।
ತದಗ್ರತಃ ಸಮುತ್ತಸ್ಥೌ ಲಿಂಗಂ ಮಾಹೇಶ್ವರಂ ಪ್ರಿಯೇ ॥ ೭ ॥
ಏತಸ್ಮಿನ್ನೇವ ಕಾಲೇ ತು ವಾಗುವಾಚಾಶರೀರಿಣೀ ।
ಆಹ್ಲಾದಯಂತೀ ಸಹಸಾ ತಸ್ಯಾಶ್ಚಿತ್ತಂ ವರಾನನೇ ॥ ೮ ॥
ಯಸ್ಮಾನ್ಮಾಹೇಶ್ವರಂ ಲಿಂಗಂ ತ್ವದ್ಭಕ್ತ್ಯಾ ಸಹಸೋತ್ಥಿತಂ ।
ಪೂಜಯೇಸ್ತನ್ಮಹಾಭಾಗೇ ತತಃ ಕಾಂತಮವಾಪ್ಸ್ಯಸಿ ॥ ೯ ॥
ಏತಚ್ಛ್ರುತ್ವಾ ಚ ಸಾಧ್ವೀ ತು ದೇವದೂತಸ್ಯ ಭಾಷಿತಂ ।
ತಲ್ಲಿಂಗಂ ಪೂಜಯಾಮಾಸ ಸಾ ಭಕ್ತ್ಯಾ ಪರಯಾ ಯುತಾ ॥ ೧೦ ॥
ತತಃ ಕಾಮಃ ಸಮುತ್ತಸ್ಥೌ ಸುಪ್ತೋತ್ಥಿತ ಇವ ಪ್ರಿಯೇ ।
ತತಃ ಪ್ರಭೃತಿ ತಲ್ಲಿಂಗಂ ಕಾಮೇಶ್ವರಮಿತಿ ಶ್ರುತಂ ॥ ೧೧ ॥
ತತಃ ಸಾ ಕಾಮದಯಿತಾ ವಾಕ್ಯಮೇತದುವಾಚ ಹ ।
ಪ್ರಹೃಷ್ಟಾ ಕಾಮದೇವಾಪ್ತ್ಯಾ ಪುರತಃ ಪುಷ್ಪಧನ್ವನಃ ॥ ೧೨ ॥

---

೫. ಆ ರತಿದೇವಿಯು ತನ್ನ ಪತಿಯಾದ ಮನ್ಮಥನು ಶಂಕರನಿಂದ ಸುಡಲ್ಪಡಲು ಅವಳು ಆ ಸ್ಥಳದಲ್ಲಿ ಮನ್ಮಥನಿಗಾಗಿ ತಪಸ್ಸನ್ನಾಚರಿಸಿದಳು.

೬–೭. ಆ ರತಿಯು ಹೆಬ್ಬೆರಳಿನ ಕೊನೆಯಿಂದ ನಿಂತು ನಾಲ್ಕು ಯುಗಗಳವರೆಗೆ ಶಾಂತವಾದ ಮನಸ್ಸಿನಿಂದ ಮಹೇಶ್ವರನನ್ನಾರಾಧಿಸಲು ಒಂದಾನೊಂದು ದಿನ ಅವಳ ಮುಂದೆ ಭೂಮಿಯನ್ನು ಭೇದಿಸಿಕೊಂಡು ಮಹೇಶ್ವರಲಿಂಗವು ಮೇಲಕ್ಕೆಬಂದಿತು.

೮–೯. ಈ ಸಮಯದಲ್ಲಿ "ನೀನು ಮಾಡಿದ ಭಕ್ತಿಯಿಂದ ಆವಿರ್ಭವಿಸಿದ ಮಾಹೇಶ್ವರ ಲಿಂಗವನ್ನು ಪೂಜಿಸು. ಆದರಿಂದ ನೀನು ಪತಿಯನ್ನು ಪಡೆಯುವೆ" ಎಂದು ನುಡಿದ ಅಶರೀರವಾಣಿಯು ಅವಳ ಮನಸ್ಸನ್ನು ಸಂತೋಷಗೊಳಿಸಿತು.

೧೦. ದೇವದೂತನ ಈ ಮಾತನ್ನು ಕೇಳಿ ಪತಿವ್ರತೆಯಾದ ಆ ರತಿಯು ಪರಮ ಭಕ್ತಿಯಿಂದ ಆ ಶಿವಲಿಂಗವನ್ನು ಪೂಜಿಸಿದನು.

೧೧. ತರುವಾಯ ಮನ್ಮಥನು ಮಲಗಿ ಎದ್ದವನಂತೆ ಮೇಲಕ್ಕೆದ್ದನು. ಅದು ಮೊದಲ್ಗೊಂಡು ಆ ಲಿಂಗವು ಕಾಮೇಶ್ವರವೆಂದು ಪ್ರಸಿದ್ಧವಾಯಿತು.

೧೨. ಮನ್ಮಥಪ್ರಿಯಳಾದ ರತಿಯು ಪತಿಪ್ರಾಪ್ತಿಯಿಂದ ಸಂತೋಷಗೊಂಡು ಮನ್ಮಥನ ಸಮ್ಮುಖದಲ್ಲಿ ಹೀಗೆಂದಳು.

ಪೂಜಯಿಷ್ಯಂತಿ ಯೇ ಚಾನ್ಯೇ ಲಿಂಗಮೇತತ್ಸಮಾಹಿತಾಃ ।
ಏವಂ ತೇ ವಾಂಛಿತಾಂ ಸಿದ್ಧಿಂ ಭೂಯೋ ಯಾಸ್ಯಂತಿ ಸದ್ಗತಿಂ ॥ ೧೩ ॥
ಮನೋಭೀಷ್ಟಂ ತಥಾ ಸರ್ವಂ ಯದ್ಯಪಿ ಸ್ಯಾತ್ಸುದುರ್ಲಭಂ ।
ತತ್ಪ್ರಾಪ್ಸ್ಯಂತಿ ನ ಸಂದೇಹೋ ಲಿಂಗಸ್ಯಾಸ್ಯ ಪ್ರಸಾದತಃ ॥ ೧೪ ॥
ಏವಮುಕ್ತ್ವಾ ಗತಾ ಸಾಧ್ವೀ ರತಿಃ ಕಾಮೇನ ಸಂಯುತಾ ।
ಸ್ವಸ್ಥಾನಂ ಪೂರ್ಣಕಾಮಾ ಸಾ ಪ್ರಹೃಷ್ಟೇನಾಂತರಾತ್ಮನಾ ॥ ೧೫ ॥
ಏನಂ ಚೈತ್ರತ್ರಯೋದಶ್ಯಾಂ ಶುಕ್ಲಾಯಾಂ ಯಃ ಸಮರ್ಚತಿ ।
ಸ ಕಾಮವದ್ಭವೇನ್ನ್ರೂಣಾಂ ಶ್ರುತಂ ಸೌಭಾಗ್ಯದಾಯಕಂ ॥ ೧೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಾಮೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಣ್ಣವತಿತಮೋಽಧ್ಯಾಯಃ ॥

---

೧೩. "ಸಾವಧಾನ ಮನಸ್ಸಿನಿಂದ ಈ ಲಿಂಗವನ್ನು ಪೂಜಿಸಿದವರು ಸಹ ಹೀಗೆಯೇ ಇಷ್ಟ ಸಿದ್ಧಿಯನ್ನು ಪಡೆದು ಸದ್ಗತಿಯನ್ನು ಹೊಂದುವರು.

೧೪. ಹಾಗೆಯೇ ಈ ಲಿಂಗದ ಅನುಗ್ರಹದಿಂದ ದುರ್ಲಭವಾದ ಅಭೀಷ್ಟವನ್ನೆಲ್ಲ ಪಡೆಯುವರು."

೧೫. ಪತಿವ್ರತೆಯಾದ ಆ ರತಿಯು ಅಭೀಷ್ಟವನ್ನು ಪಡೆದು ಸಂತೋಷಗೊಂಡು ಹೀಗೆ ಹೇಳಿ ಮನ್ಮಥನೊಡನೆ ತನ್ನ ಸ್ಥಾನಕ್ಕೆ ಹೊರಟು ಹೋದಳು.

೧೬. ಈ ಕಾಮೇಶ್ವರನನ್ನು ಚೈತ್ರಶುಕ್ಲ ತ್ರಯೋದಶೀದಿನ ಪೂಜಿಸಿದವನು. ಮನ್ಮಥನಂತಾಗುವನು. ಈ ಮಾಹಾತ್ಮ್ಯವನ್ನು ಕೇಳಿದ ಮಾನವರ ಸಮಸ್ತ ಸ್ವಾರ್ಥಗಳೂ ಕೈಗೂಡುತ್ತವೆ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಾಮೇಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತನವತಿತಮೋಽಧ್ಯಾಯಃ

ಯೋಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯೋಗೇಶ್ವರಮಿತಿ ಶ್ರುತಂ ।
ಕಾಮೇಶಾದ್ವಾಯುವೇ ಭಾಗೇ ಧನುಷಾಂ ಸಪ್ತಕೇ ಸ್ಥಿತಂ ॥ ೧ ॥
ಲಿಂಗಂ ಮಹಾಪ್ರಭಾವಂ ಹಿ ದರ್ಶನಾತ್ಪಾಪನಾಶನಂ ।
ಪೂರ್ವೇ ಯುಗೇ ತು ಸಂಖ್ಯಾತಂ ಗಣೇಶ್ವರಮಿತಿ ಶ್ರುತಂ ॥ ೨ ॥
ಪುರಾ ಮಮ ಗಣಾ ದೇವಿ ಅಸಂಖ್ಯಾತಾ ಮಹಾಬಲಾಃ ।
ಕ್ಷೇತ್ರಂ ಮಾಹೇಶ್ವರಂ ಜ್ಞಾತ್ವಾ ಪ್ರಭಾಸಂ ಸಮುಪಾಗಮನ್ ॥ ೩ ॥
ತತ್ರಸ್ಥಾಶ್ಚ ತಪೋ ಘೋರಂ ತೇಪುಸ್ತೇ ಯೋಗಮಾಶ್ರಿತಾಃ ।
ದಿವ್ಯಾಬ್ದಾನಾಂ ಸಹಸ್ರಂ ತು ತತಸ್ತುಷ್ಟೋ ಮಹೇಶ್ವರಃ ॥ ೪ ॥
ಸಾಲೋಕ್ಯಾಂ ಚ ದದೌ ಮುಕ್ತಿಂ ತೇಷಾಂ ಯೋಗಬಲೇನ ವೈ ।
ಯಸ್ಮಾತ್ ಷಡಂಗಯೋಗೇನ ತೇಷಾಂ ತುಷ್ಟೋ ವೃಷಧ್ವಜಃ ।
ತೇನ ಯೋಗೇಶ್ವರಂ ನಾಮ ಲಿಂಗಂ ಯೋಗಫಲಪ್ರದಂ ॥ ೫ ॥

ಕನ್ನಡದ ಅನುವಾದ

ಯೋಗೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಕಾಮೇಶ್ವರನ ವಾಯುವ್ಯದಿಕ್ಕಿನಲ್ಲಿ ಏಳು ಬಿಲ್ಲಿನ ದೂರದಲ್ಲಿರುವ ಯೋಗೇಶ್ವರನೆಡೆಗೆ ಹೋಗಬೇಕು.

೨. ಅತ್ಯಂತ ಮಾಹಾತ್ಮ್ಯವುಳ್ಳದೂ, ದರ್ಶನದಿಂದ ಪಾಪವನ್ನು ನೀಗಿಸುವುದೂ ಆದ ಆ ಲಿಂಗವು ಹಿಂದಿನ ಯುಗದಲ್ಲಿ ಗಣೇಶ್ವರನೆಂದು ಪ್ರಸಿದ್ಧವಾಯಿತು.

೩. ದೇವಿ ! ಹಿಂದೆ ಅತ್ಯಂತ ಬಲಿಷ್ಠರಾದ ನನ್ನ ಅಸಂಖ್ಯಾತ ಗಣಗಳು ಮಹೇಶ್ವರನ ಪ್ರಭಾಸಕ್ಷೇತ್ರವನ್ನರಿತು ಅಲ್ಲಿಗೆ ಬಂದವು.

೪–೫. ಆ ಗಣಗಳು ಅಲ್ಲಿ ವಾಸಿಸುತ್ತ ದಿವ್ಯಸಾವಿರ ವರ್ಷಗಳಕಾಲ ಘೋರ ತಪಸ್ಸನ್ನು ಮಾಡಿದರು. ಅವರ ಯೋಗಬಲದಿಂದ ತುಷ್ಟನಾದ ಮಹೇಶ್ವರನು ಆ ಗಣಗಳಿಗೆ ಸಾಲೋಕ್ಯಮುಕ್ತಿಯನ್ನಿತ್ತನು. ಆ ಗಣಗಳ ಯೋಗಬಲದಿಂದ ಮಹೇಶ್ವರನು ಸಂತುಷ್ಟನಾದ್ದರಿಂದ ಆ ಲಿಂಗವು ಯೋಗೇಶ್ವರನೆಂದು ಹೆಸರನ್ನು ಪಡೆದು ಯೋಗಫಲವನ್ನೀಯುವುದು.

ಯಸ್ತಮರ್ಚಯತೇ ಭಕ್ತ್ಯಾ ಸಮ್ಯಕ್ಪೂಜಾವಿಧಾನತಃ ।
ಸ ಯೋಗಸಿದ್ಧಿಮಾಪ್ನೋತಿ ಮೋದತೇ ದಿವಿ ದೇವವತ್ ॥ ೬ ॥
ಯೋ ದದ್ಯಾತ್ಕಾಂಚನಂ ಮೇರುಂ ಕೃತ್ಸ್ನಾಂ ಚೈವ ವಸುಂಧರಾಂ ।
ಯೋಗೇಶಂ ಪೂಜಯೇದ್ಯಸ್ತು ಸ ತಯೋರಧಿಕಃ ಸ್ಮೃತಃ ॥ ೭ ॥
ವೃಷಭಸ್ತತ್ರ ದಾತವ್ಯಃ ಸಂಪೂರ್ಣಫಲಹೇತವೇ ।
ಏವಮೇಕಾದಶ ಪ್ರೋಕ್ತಾ ರುದ್ರಾಃ ಪ್ರಾಭಾಸಮಾಶ್ರಿತಾಃ ।
ನಿತ್ಯಂ ಪೂಜ್ಯಾಶ್ಚ ವಂದ್ಯಾಶ್ಚ ಕ್ಷೇತ್ರಸ್ಯ ಫಲಮೀಪ್ಸುಭಿಃ ॥ ೮ ॥
ಯ ಏತಾಂ ಚೈವ ಶೃಣುಯಾದ್ರುದ್ರೈಕಾದಶಸಂಹಿತಾಂ ।
ತಸ್ಯ ಕ್ಷೇತ್ರಫಲಂ ಸರ್ವಂ ಪ್ರಭಾಸಾಂತರವಾಸಿನಃ ॥ ೯ ॥
ಯಶ್ಚೈತಾನ್ನೈವ ಜಾನಾತಿ ರುದ್ರಾನ್ ಪ್ರಾಭಾಸಮಾಶ್ರಿತಾನ್ ।
ಸ ಕ್ಷೇತ್ರಮಧ್ಯಸಂಸ್ಥೋಽಪಿ ನಾಸ್ತ್ಯೇವ ಸ ಪಶುಃ ಸ್ಮೃತಃ ॥ ೧೦ ॥
ಏತೇಷಾಂ ಚೈವ ರುದ್ರಾಣಾಂ ಸರ್ವಾನ್ ವಾಪ್ಯೇಕಮೇವ ವಾ ।
ಸೋಮೇಶ್ವರಂ ಪೂಜಯಿತ್ವಾ ಜಪೇದ್ವೈ ಶತರುದ್ರಿಯಂ ।
ಸರ್ವೇಷಾಂ ಲಭತೇ ಪುಣ್ಯಂ ರುದ್ರಾಣಾಂ ನಾತ್ರ ಸಂಶಯಃ ॥ ೧೧ ॥

---

೬. ಅವನನ್ನು ವಿಧ್ಯುಕ್ತ ಪೂಜಾಕ್ರಮದಿಂದ ಭಕ್ತಿಪೂರ್ವಕವಾಗಿ ಅರ್ಚಿಸಿದ ಮಾನವನು ಯೋಗಸಿದ್ಧಿಯನ್ನು ಪಡೆದು ದೇವಲೋಕದಲ್ಲಿ ದೇವತೆಗಳಂತೆ ಆನಂದಿಸುವನು.

೭. ಸುವರ್ಣ ಮೇರು ಶೈಲವನ್ನೂ, ಸಮಗ್ರ ಭೂಮಿಯನ್ನೂ ದಾನಮಾಡಿದ ವನಿಗಿಂತ ಯೋಗೇಶ್ವರನನ್ನು ಪೂಜಿಸಿದವನು ಅಧಿಕನು.

೮. ಸಂಪೂರ್ಣ ಫಲಪ್ರಾಪ್ತಿಗಾಗಿ ಅಲ್ಲಿ ವೃಷಭವನ್ನು ದಾನಮಾಡಬೇಕು. ಹೀಗೆ ಪ್ರಭಾಸದಲ್ಲಿರುವ ಹನ್ನೊಂದುಮಂದಿ ರುದ್ರರನ್ನು ಹೇಳಿರುವೆನು. ಕ್ಷೇತ್ರಫಲ ವನ್ನಿಚ್ಛಿಸುವವರು ಅವನನ್ನು ನಿತ್ಯವೂ ಪೂಜಿಸಬೇಕು.

೯. ಪ್ರಭಾಸದಲ್ಲಿ ವಾಸಿಸುವವನು ಈ ಏಕಾದಶರುದ್ರ ಸಂಹಿತೆಯನ್ನು ಕೇಳಿದರೆ ಸಕಲ ಕ್ಷೇತ್ರಫಲವನ್ನು ಹೊಂದುವನು.

೧೦. ಪ್ರಭಾಸದಲ್ಲಿ ನೆಲೆಸಿರುವ ಈ ರುದ್ರರನ್ನರಿಯದವನು ಕ್ಷೇತ್ರದ ನಡುವೆ ಇದ್ದಾಗ್ಗೂ ಕ್ಷೇತ್ರಫಲವನ್ನು ಹೊಂದದೆ ಪಶುವೆನ್ನಿಸಿ ಕೊಳ್ಳುವನು.

೧೧. ಈ ರುದ್ರರನ್ನೆಲ್ಲ ಅರ್ಚಿಸಬೇಕು. ಅಥವಾ ಸೋಮೇಶ್ವರನನ್ನೊಬ್ಬ ನನ್ನು ಪೂಜಿಸಿ ಶತರುದ್ರಿಯವನ್ನು ಜಪಿಸಿದವನು ಸಕಲ ರುದ್ರರನ್ನೂ ಅರ್ಚಿಸಿದ ಫಲವನ್ನು ನಿಶ್ಚಯವಾಗಿಯೂ ಪಡೆಯುವನು.

ಇದಂ ರಹಸ್ಯಂ ಸಂಖ್ಯಾತಂ ಮಾಹಾತ್ಮ್ಯಂ ತವ ಭಾಮಿನಿ ।
ರುದ್ರಾಣಾಂ ಪಾಪಶಮನಂ ಶ್ರುತಂ ಪುಣ್ಯವಿವರ್ಧನಂ ॥ ೧೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಯೋಗೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತನವತಿತಮೋಽಧ್ಯಾಯಃ ॥

---

೧೨. ಪ್ರಿಯಳೆ! ಹೀಗೆ ಪಾಪವನ್ನು ನೀಗಿಸುವುದೂ. ಪುಣ್ಯವನ್ನು ಹೆಚ್ಚಿಸುವುದೂ, ರಹಸ್ಯವೂ ಆದ ಏಕಾದಶರುದ್ರರ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಲ್ಲಿ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಯೋಗೇಶ್ವರಮಾಹಾತ್ಮ್ಯವರ್ಣನವೆಂಬ
ತೊಂಬತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟನವತಿತಮೋಽಧ್ಯಾಯಃ

ಪೃಥ್ವೀಶ್ವರ (ಚಂದ್ರೇಶ್ವರ)ಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚಂಡೇಶ್ವರಮಿತಿ ಶ್ರುತಂ ।
ಸೋಮೇಶಾದ್ವಾಯುವೇ ಭಾಗೇ ಧನುಷಾಂ ಷಷ್ಟಿಭಿಃ ಸ್ಥಿತಂ ॥ ೧ ॥
ದಿವ್ಯಂ ಲಿಂಗಂ ಮಹಾದೇವಿ ಸರ್ವಪಾತಕನಾಶನಂ ।
ತತ್ಪೂರ್ವೇ ತು ಯುಗೇ ಖ್ಯಾತಂ ಮನೋಃ ಸ್ವಾಯಂಭುವಾಂತರೇ ॥ ೨ ॥
ತ್ರೇತಾಯುಗಮುಖೇ ದೇವಿ ಪೃಥಿವ್ಯಾ ಸಂಪ್ರತಿಷ್ಠಿತಂ ।
ಪೂರ್ವಮನ್ವಂತರೇ ಚಾಸ್ಮಿನ್ ಲಿಂಗಂ ಪೃಥ್ವೀಶ್ವರಂ ಪ್ರಿಯೇ ॥ ೩ ॥
ಪುನಶ್ಚಂದ್ರೇಣ ತತ್ಪ್ರಾಪ್ತಂ ಲಿಂಗಂ ಚಂದ್ರೇಶ್ವರಂ ಪ್ರಿಯೇ ।
ಬ್ರಹ್ಮಹತ್ಯಾದಿಪಾಪಾನಾಂ ನಾಶನಂ ಪುಣ್ಯವರ್ಧನಂ ॥ ೪ ॥
ತಂ ದೃಷ್ಟ್ವಾ ಮಾನವೋ ದೇವಿ ಸಪ್ತಜನ್ಮಸಮುದ್ಭವೈಃ ।
ಮುಚ್ಯತೇ ಕಲ್ಮಷೈಃ ಸರ್ವೈಃ ಕೃತಕೃತ್ಯಸ್ತು ಜಾಯತೇ ॥ ೫ ॥

ಕನ್ನಡದ ಅನುವಾದ

ಪೃಥ್ವೀಶ್ವರ (ಚಂದ್ರೇಶ್ವರ)ಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಸೋಮೇಶ್ವರನ ವಾಯವ್ಯ ದಿಕ್ಕಿನಲ್ಲಿ ಅರುವತ್ತು ಬಿಲ್ಲುಗಳ ದೂರದಲ್ಲಿರುವ ಸಕಲಪಾಪವನ್ನು ನೀಗಿಸುವ ಚಂಡೇಶ್ವರ ಲಿಂಗವೆಡೆಗೆ ಹೋಗಬೇಕು. ಅದು ಒಂದಿನ ಯುಗದ ಸ್ವಾಯಂಭುವ ಮನ್ವಂತರದಲ್ಲಿ ಚಂಡೇಶ್ವರನೆಂದು ವಿಖ್ಯಾತವಾಯಿತು.

೩. ದೇವಿ! ತ್ರೇತಾಯುಗದ ಆರಂಭದಲ್ಲಿ ಭೂಮಿಯು ಅದನ್ನು ಪ್ರತಿಷ್ಠೆ ಮಾಡಿದ್ದರಿಂದ ಅದು ಪೃಥ್ವೀಶ್ವರನೆಂದು ಪ್ರಸಿದ್ಧಿಗೊಂಡಿತು.

೪. ಮರಳಿ ಚಂದ್ರನಿಂದ ಹೊಂದಲ್ಪಟ್ಟ ಆ ಚಂದ್ರೇಶ್ವರನೆಂಬ ಲಿಂಗವು ಬ್ರಹ್ಮಹತ್ಯಾದಿ ಪಾಪಗಳನ್ನು ಪರಿಹರಿಸುವುದೂ, ಪುಣ್ಯವನ್ನು ಹೆಚ್ಚಿಸುವುದೂ ಆಗಿರುವುದು.

೫. ಮನುಷ್ಯನು ಆ ಶಿವಲಿಂಗವನ್ನು ದರ್ಶನಮಾಡಿದರೆ ಏಳು ಜನ್ಮಗಳಲ್ಲಿ ಮಾಡಿದ ಸಕಲ ಪಾಪಗಳಿಂದಲೂ ಮುಕ್ತನಾಗಿ ಧನ್ಯನಾಗುವನು.

ದೇವ್ಯುವಾಚ :—

ಕಥಂ ಪೃಥ್ವೀಶ್ವರಂ ಖ್ಯಾತಂ ತಲ್ಲಿಂಗಂ ಪಾಪನಾಶನಂ ।
ಕಥಂ ಪುನಃ ಸಮಾಖ್ಯಾತಂ ಚಂದ್ರೇಶ್ವರಮಿತಿ ಪ್ರಭೋ ।
ಏತದ್ವಿಸ್ತರತೋ ಬ್ರೂಹಿ ಶ್ರೋತುಕಾಮಾಽಹಮಾದರಾತ್ ॥ ೬ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ಯಾಂ ಶ್ರುತ್ವಾ ಮುಚ್ಯತೇ ಜಂತುಸ್ತ್ರಿವಿಧೈಃ ಕರ್ಮಬಂಧನೈಃ ॥ ೭ ॥
ಆಸೀತ್ಪೂರ್ವಂ ಮಹಾದೇವಿ ದೈತ್ಯಭಾರಾರ್ದಿತಾ ಮಹೀ ।
ಸಾಽಧೋ ವ್ರಜಂತೀ ಸಹಸಾ ಗೋರೂಪಾ ಸಂಬಭೂವ ಹ ॥ ೮ ॥
ಇತಸ್ತತೋ ಧಾವಮಾನಾ ನ ಲೇಭೇ ನಿರ್ವೃತಿಂ ಕ್ವಚಿತ್ ।
ತತೋ ವರ್ಷಶತೇ ಪೂರ್ಣೇ ಭ್ರಮಮಾಣಾ ಕ್ವಚಿತ್ ಕ್ವಚಿತ್ ॥ ೯ ॥
ಆಸಸಾದ ಮಹಾಕ್ಷೇತ್ರಂ ಪ್ರಭಾಸಮಿತಿ ವಿಶ್ರುತಂ ।
ದೇವದಾನವಗಂಧರ್ವೈಃ ಸೇವಿತಂ ಪಾಪನಾಶನಂ ॥ ೧೦ ॥
ತತ್ರ ಸ್ಥಿತ್ವಾ ಮಹಾಕ್ಷೇತ್ರೇ ಕೃತ್ವಾ ಮನಸಿ ನಿಶ್ಚಯಂ ।
ಲಿಂಗಂ ಪ್ರತಿಷ್ಠಯಾಮಾಸ ಭಕ್ತ್ಯಾ ಪರಮಯಾ ಯುತಾ ॥ ೧೧ ॥

---

೬. ದೇವಿಯು ಹೇಳುತ್ತಾಳೆ :—ಸ್ವಾಮಿ! ಆ ಲಿಂಗವು ಪೃಥ್ವೀಶ್ವರವೆಂದೂ, ಚಂದ್ರೇಶ್ವರವೆಂದೂ ಹೇಗೆ ಪ್ರಸಿದ್ಧಿಗೊಂಡಿತು? ಇದನ್ನು ವಿಸ್ತಾರವಾಗಿ ಹೇಳು. ನಾನು ಆದರದಿಂದ ಕೇಳಬಯಸುವೆನು.

೭. ಈಶ್ವರನು ಹೇಳುತ್ತಾನೆ;—ದೇವಿ! ಪಾಪವನ್ನು ಪರಿಹರಿಸುವ ಈ ಕಥೆಯನ್ನು ಹೇಳುವೆನು; ಕೇಳು. ಇದನ್ನು ಕೇಳಿದ ಮನುಷ್ಯನು ತ್ರಿವಿಧಕರ್ಮ ಬಂಧನದಿಂದ ಮುಕ್ತನಾಗುವನು.

೮. ಮಹಾದೇವಿ! ಹಿಂದೆ ದೈತ್ಯರ ಭಾರದಿಂದ ಪೀಡಿತಳಾದ ಭೂಮಿಯು ಕೆಳಗಿಳಿದು ಕೂಡಲೆ ಗೋರೂಪಧಾರಿಣಿಯಾದಳು.

೯–೧೦. ಅವಳು ಇಲ್ಲಿ ಅಲ್ಲಿ ಓಡುತ್ತ ಎಲ್ಲಿಯೂ ಸುಖಗೊಳ್ಳದೆ ನೂರು ವರ್ಷಗಳ ತರುವಾಯ ದೇವ, ದಾನವ, ಗಂಧರ್ವರು ಸೇವಿಸಿದುದೂ, ಪಾಪವನ್ನು ಪರಿಹರಿಸುವುದೂ ಆದ ಪ್ರಭಾಸಕ್ಷೇತ್ರವನ್ನು ಹೊಂದಿದಳು.

೧೧–೧೩ ಅವಳು ಆ ಮಹಾಕ್ಷೇತ್ರದಲ್ಲಿ ವಾಸಿಸುತ್ತ ಮನಸ್ಸಿನಲ್ಲಿ ದೃಢವಾಗಿ ನಿಶ್ಚಯಿಸಿ ಅತಿಭಕ್ತಿಯಿಂದ ಶಿವಲಿಂಗವನ್ನು ಪ್ರತಿಷ್ಠೆಮಾಡಿ ನೂರು ವರ್ಷ

ವರ್ಷಾಣಾಂ ಚ ಶತಂ ಸಾಗ್ರಂ ಕೃತೇ ತಪಸಿ ದುಶ್ಚರೇ ।
ತುತೋಷ ಭಗವಾನ್ ರುದ್ರೋ ಧರಿತ್ರೀಂ ವಾಕ್ಯಮಬ್ರವೀತ್ ॥ ೧೨ ॥

ದೇವಿ ವಿಶ್ವಂಭರೇ ಸರ್ವಂ ತಪಃ ಸುಚರಿತಂ ತ್ವಯಾ ।
ಮಾ ಶೋಕಂ ಕುರು ಕಲ್ಯಾಣಿ ಭವಿಷ್ಯತಿ ತವೇಪ್ಸಿತಂ ॥ ೧೩ ॥

ದೈತ್ಯಾ ನಾಶಂ ಗಮಿಷ್ಯಂತಿ ವಿಷ್ಣುನಾ ನಿಹತಾ ಭುವಿ ।
ಭವಿತ್ರೀ ತ್ವಂ ಮಹಾದೇವಿ ದೈತ್ಯಭಾರವಿವರ್ಜಿತಾ । ॥ ೧೪ ॥
ಇದಂ ತ್ವಯಾ ಸ್ಥಾಪಿತಂ ಯಲ್ಲಿಂಗಂ ಪರಮಶೋಭನಂ ।
ಧರಿತ್ರೀ ನಾಮ್ನಾ ವಿಖ್ಯಾತಂ ಲೋಕೇ ಖ್ಯಾತಿಂ ಗಮಿಷ್ಯತಿ ॥ ೧೫ ॥

ಅತ್ರಾಹಂ ಸಂಸ್ಥಿತೋ ನಿತ್ಯಂ ಲಿಂಗರೂಪೀ ಮಹಾಪ್ರಭುಃ ।
ಸ್ಥಾಸ್ಯಾಮಿ ಕಲ್ಪೇ ಕಲ್ಪೇ ವೈ ನೃಣಾಂ ಪಾಪಾಽಪಹಾರಕಃ ॥ ೧೬ ॥

ಮೂರ್ತ್ಯಷ್ಟಕಸಮಾಯುಕ್ತೋ ಲಿಂಗೇಽಸ್ಮಿನ್ ಸಂಸ್ಥಿತಃ ಸದಾ ।
ನೃಣಾಂ ನಾಶಯಿತಾ ಪಾಪಂ ಪೂರ್ವಜನ್ಮಶತಾರ್ಜಿತಂ ॥ ೧೭ ॥

ಕಾಲ ಮತ್ಸರ ತಪಸ್ಸನ್ನಾಚರಿಸಲು ಪೂಜ್ಯನಾದ ರುದ್ರನು ಪ್ರಸನ್ನನಾಗಿ ಇಂತೆಂದನು.

೧೩. "ಭೂದೇವಿ! ನೀನು ಉತ್ತಮದಿಂದ ತಪಸ್ಸನ್ನು ಆಚರಿಸಿರುವೆ, ಮಂಗಳ ಕರಳೆ! ಶೋಕಿಸಬೇಡ. ನಿನ್ನ ಇಷ್ಟಾರ್ಥವು ಕೈಗೂಡುವುದು.

೧೪. ದೈತ್ಯರು ವಿಷ್ಣುವಿನಿಂದ ಹತರಾಗಿ ನಾಶಗೊಳ್ಳುವರು. ನೀನು ದೈತ್ಯರ ಭಾರದಿಂದ ರಹಿತಳಾಗುವೆ.

೧೫. ನೀನಿಲ್ಲಿ ಸ್ಥಾಪಿಸಿರುವ ಅತ್ಯಂತ ಮಂಗಳಕರವಾದ ಲಿಂಗವು ಧರಿತ್ರೀ ಎಂಬ ಹೆಸರಿನಿಂದ ಲೋಕದಲ್ಲಿ ವಿಖ್ಯಾತವಾಗುವುದು.

೧೬. ನಾನಿಲ್ಲಿ ಲಿಂಗರೂಪಿಯಾಗಿ ನೆಲೆಸಿ ಪ್ರತಿಕಲ್ಪದಲ್ಲಿಯೂ ಮನುಷ್ಯರ ಪಾಪವನ್ನು ಪರಿಹರಿಸುವೆನು.

೧೭. ಈ ಲಿಂಗವಲ್ಲಿ ಅಷ್ಟ ಮೂರ್ತಿಗಳೊಡನೆ ನಾನಿದ್ದು ಮಾನವರ ಅನೇಕ ಜನ್ಮಗಳ ಪಾಪವನ್ನು ದರ್ಶನಮಾತ್ರದಿಂದಲೇ ನೀಗಿಸುವೆನು.

ಭಾದ್ರೇ ಕೃಷ್ಣತೃತೀಯಾಯಾಂ ಯಶ್ಚೈತಂ ಪೂಜಯಿಷ್ಯತಿ ।
ಸೋಽಶ್ವಮೇಧಸಹಸ್ರಸ್ಯ ಫಲಮಾಪ್ಸ್ಯತ್ಯಸಂಶಯಂ ॥ ೧೮ ॥
ಸರ್ವತೀರ್ಥಾಭಿಷೇಕಸ್ಯ ಸರ್ವೇಷಾಂ ದಾನಕರ್ಮಣಾಂ ।
ಭವಿಷ್ಯತಿ ಫಲಂ ತಸ್ಯ ಲಿಂಗಸ್ಯೈವಾಸ್ಯ ಪೂಜನಾತ್ ॥ ೧೯ ॥
ಧನುಷಾಂ ಷೋಡಶಂ ಯಾವತ್ಸಮಂತಾತ್ಪರಿಮಂಡಲಂ ।
ಕ್ಷೇತ್ರಮಸ್ಯ ಸಮಾಖ್ಯಾತಂ ಪ್ರಾಣಿನಾಂ ಮುಕ್ತಿದಾಯಕಂ ॥ ೨೦ ॥
ತಸ್ಮಿನ್ ಮೃತಾಃ ಪ್ರಾಣಿನೋ ಯೇ ಕಾಮತೋ ವಾಽಪ್ಯಕಾಮತಃ ।
ಕೃಮಿಕೀಟಸಮಾ ವಾಽಪಿ ತೇ ಯಾಂತಿ ಪರಮಾಂ ಗತಿಂ ॥ ೨೧ ॥
ಯೋ ದದ್ಯಾತ್ಕಾಂಚನಂ ಮೇರುಂ ಕೃತ್ಸ್ನಾಂ ವಾಽಪಿ ವಸುಂಧರಾಂ ।
ಯಃ ಪೂಜಯತಿ ಪೃಥ್ವೀಶಂ ಸ ತಯೋರಧಿಕಃ ಸ್ಮೃತಃ ॥ ೨೨ ॥

ಈಶ್ವರ ಉವಾಚ :—

ಇತಿ ದತ್ವಾ ವರಾನ್ ದೇವಸ್ತತ್ರೈವಾಂತರಧೀಯತ ।
ಪೃಥಿವೀಶ್ವರನಾಮಾಽಭೂತ್ತತ್ಪ್ರಭೃತ್ಯೇವ ಶಂಕರಃ ॥ ೨೩ ॥

---

೧೮. ಭಾದ್ರಪದ ಮಾಸದ ಕೃಷ್ಣಪಕ್ಷ ತೃತೀಯಾದಿನ ಈ ಲಿಂಗವನ್ನು ಪೂಜಿಸಿದವನು ಸಾವಿರ ಅಶ್ವಮೇಧಯಾಗಗಳ ಫಲವನ್ನು ನಿಶ್ಚಯವಾಗಿಯೂ ಪಡೆಯುವನು.

೧೯. ಈ ಲಿಂಗದ ಪೂಜೆಯಿಂದಲೇ ಸಕಲ ತೀರ್ಥಸ್ನಾನ, ಸಮಸ್ತ ದಾನಗಳ ಫಲವೂ ಲಭಿಸುವುದು.

೨೦. ಪ್ರಾಣಿಗಳಿಗೆ ಮೋಕ್ಷವನ್ನೀಯುವ ಈ ಕ್ಷೇತ್ರದ ಸುತ್ತಳತೆಯು ಹದಿನಾರು ಬಿಲ್ಲುಗಳ ವಿಸ್ತೀರ್ಣವಾಗಿರುವುದು.

೨೧. ಆ ಕ್ಷೇತ್ರದಲ್ಲಿ ಇಷ್ಟವಿದ್ದಾಗಲಿ, ಇಷ್ಟವಿಲ್ಲದೆಯಾಗಲಿ ಮೃತರಾದ ಪ್ರಾಣಿಗಳು ಕೃಮಿಕೀಟಗಳಿಗೆ ಸಮರಾಗಿದ್ದರೂ ಉತ್ತಮ ಗತಿಯನ್ನು ಪಡೆಯುವರು.

೨೨. ಪೃಥ್ವೀಶನನ್ನು ಪೂಜಿಸಿದವನು ಸುವರ್ಣಮೇರುವನ್ನೂ ಸಂಪೂರ್ಣ ಭೂಮಿಯನ್ನೂ ದಾನಮಾಡಿದವನಿಗಿಂತಲೂ ಅಧಿಕನಾಗುವನು.

೨೩. ಈಶ್ವರನು ಹೇಳುತ್ತಾನೆ :—ಮಹೇಶ್ವರನು ಹೀಗೆ ವರವನ್ನಿತ್ತು ಅಲ್ಲಿಯೇ ಕಣ್ಮರೆಯಾದನು. ಅದು ಮೊದಲ್ಗೊಂಡು ಆ ಲಿಂಗವು ಪೃಥಿವೀಶ್ವರವೆಂಬ ಹೆಸರನ್ನು ಪಡೆಯಿತು.

ಪುನರಸ್ಮಿನ್ ಮಹಾಕಲ್ಪೇ ವಾರಾಹ ಇತಿ ವಿಶ್ರುತೇ ।
ಕದಾಚಿದ್ದಕ್ಷಶಾಪೇನ ಕ್ಷೀಣಶ್ಚಂದ್ರೋ ಬಭೂವ ಹ ॥ ೨೪ ॥

ಪಪಾತ ಭೂತಲೇ ದೇವಿ ಯಕ್ಷ್ಮಣಾ ಪೀಡಿತಃ ಶಶೀ ।
ಕ್ಷೇತ್ರಂ ಪ್ರಭಾಸಮಾಸಾದ್ಯ ತನ್ಮಹೋದಧಿಸನ್ನಿಧೌ ॥ ೨೫ ॥

ದೃಷ್ಟ್ವಾ ಪೃಥ್ವೀಶ್ವರಂ ಲಿಂಗಂ ಸಪ್ರಭಾವಂ ಮಹಾಪ್ರಭಂ ।
ತತ್ಪೂಜಾನಿರತೋ ಭೂತ್ವಾ ವರ್ಷಾಣಾಂ ತು ಸಹಸ್ರಕಂ ॥ ೨೬ ॥

ಅತಪತ್ಸ ತಪೋ ರೌದ್ರಂ ಶೀರ್ಣಪರ್ಣಾಂಬುಭಕ್ಷಕಃ ।
ಯತಃ ಸಮಭವದ್ದೇವ್ಯಾಃ ಸರ್ವಾಹ್ಲಾದಕರಃ ಶಶೀ ॥ ೨೭ ॥

ತಲ್ಲಿಂಗಸ್ಯೈವಮಾಹಾತ್ಮ್ಯಾತ್ತತಶ್ಚಂದ್ರೇಶ್ವರೋಽಭವತ್ ।
ತಸ್ಯ ಲಿಂಗಸ್ಯ ಮಾಹಾತ್ಮ್ಯಾಚ್ಚಂದ್ರಮಾ ಗತಕಲ್ಮಷಃ ॥ ೨೮ ॥

ಅವಾಪ ಸಿದ್ಧಿಮತ್ಯುಗ್ರಾಂ ಸ್ಪರ್ಶಲಿಂಗಪ್ರಕಾಶಿನೀಂ ।
ಸೋಮನಾಥೇತಿ ಯಾಂ ಪ್ರಾಹುಃ ಪ್ರಸಿದ್ಧಾಂ ಲಿಂಗರೂಪಿಣೀಂ ॥ ೨೯ ॥

---

೨೪. ಮರಳಿ ಈ ವಾರಾಹಕಲ್ಪದಲ್ಲಿ ಚಂದ್ರನು ಒಂದಾನೊಂದುಕಾಲದಲ್ಲಿ ದಕ್ಷನ ಶಾಪದಿಂದ ಕ್ಷೀಣನಾದನು.

೨೫. ಹೀಗೆ ಕ್ಷಯರೋಗದಿಂದ ಪೀಡಿತನಾದ ಚಂದ್ರನು ಸಮುದ್ರ ಸಮೀಪದ ಪ್ರಭಾಸಕ್ಷೇತ್ರದಲ್ಲಿ ಬಿದ್ದನು.

೨೬–೨೮. ಅಲ್ಲಿ ಆ ಚಂದ್ರನು ಮಹೇಶ್ವರನನ್ನು ಪುನಃ ಕಂಡು ಸಾವಿರ ವರ್ಷಗಳ ಕಾಲ ಅವನ ಪೂಜೆಯಲ್ಲಿ ಆಸಕ್ತನಾಗಿ ಒಣಗಿದ ಎಲೆಗಳನ್ನು ತಿನ್ನುತ್ತ ನೀರನ್ನು ಕುಡಿಯುತ್ತ ಘೋರತಪಸ್ಸನ್ನು ಮಾಡಿದನು. ಆದರಿಂದವನು ಆ ಶಿವಲಿಂಗದ ಮಾಹಾತ್ಮ್ಯದಿಂದ ಎಲ್ಲರಿಗೂ ಆನಂದವನ್ನುಂಟುಮಾಡುವ ಕಾಂತಿಯುಳ್ಳವನಾದನು. ಚಂದ್ರನು ಪೂಜಿಸಿದ್ದರಿಂದ ಆ ಲಿಂಗವು ಚಂದ್ರೇಶ್ವರವೆಂದು ಪ್ರಸಿದ್ಧವಾಯಿತು. ಹೀಗೆ ಚಂದ್ರನು ಪುನಃ ದೋಷರಹಿತನಾದನು.

೨೯. ಅವನು ಸ್ಪರ್ಶಲಿಂಗವನ್ನು ಪ್ರಕಾಶಗೊಳಿಸುವ ಸೋಮನಾಥವೆಂದು ಪ್ರಸಿದ್ಧವಾದ ಲಿಂಗರೂಪಸಿದ್ಧಿಯನ್ನು ಪಡೆದನು.

ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಚಂದ್ರದೈವತಂ ।
ಶ್ರುತಂ ಹರತಿ ಪಾಪಾನಿ ತಥಾಽಽರೋಗ್ಯಂ ಪ್ರಯಚ್ಛತಿ ॥ ೩೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪೃಥ್ವೀಶ್ವರ(ಚಂದ್ರೇಶ್ವರ)ಮಾಹಾತ್ಮ್ಯವರ್ಣನಂ ನಾಮ
॥ ಅಷ್ಟನವತಿತಮೋಽಧ್ಯಾಯಃ ॥

---

೩೦. ಹೀಗೆ ಚಂದ್ರೇಶ್ವರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳಿದರೆ ಪಾಪವು ಪರಿಹಾರವಾಗಿ ಆರೋಗ್ಯವುಂಟಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪೃಥ್ವೀಶ್ವರ (ಚಂದ್ರೇಶ್ವರ)ಮಾಹಾತ್ಮ್ಯ ವರ್ಣನವೆಂಬ
ತೊಂಬತ್ತೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಏಕೋನಶತತಮೋಽಧ್ಯಾಯಃ

ದಂಡಪಾಣಿಚಕ್ರಧರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯತ್ರ ಚಕ್ರಧರಃ ಸ್ಥಿತಃ ।
ದಂಡಪಾಣಿಶ್ಚ ದೇವೇಶಿ ಯತ್ರೈಕಸ್ಥಾನಸಂಸ್ಥಿತಃ || ೧ ||

ಚಂದ್ರೇಶಾತ್ಪೂರ್ವದಿಗ್ಭಾಗೇ ಸೋಮೇಶಾದುತ್ತರೇ ಸ್ಥಿತಃ ।
ಧನುಷಾಂ ಪಂಚಸಂಸ್ಥಾನೇ ಗಂಧರ್ವೇಶಾತ್ಸಮೀಪತಃ || ೨ ||

ಉಮಾಯಾ ನೈರ್ಋತೇ ಭಾಗೇ ಬ್ರಹ್ಮದೇವರ್ಷಿಸಂಸ್ಥಿತಃ ।
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಸರ್ವಪಾತಕನಾಶಿನೀಂ || ೩ ||
ಪೌಂಡ್ರಕೋ ವಾಸುದೇವಸ್ತು ವಾರಾಣಸ್ಯಾಂ ಪುರಾಽಭವತ್ ।
ತೇನ ಶ್ರುತಂ ಪುರಾಣಂ ತು ಪಠ್ಯಮಾನಂ ದ್ವಿಜಾತಿಭಿಃ || ೪ ||
ಕಲ್ಪಾದೌ ದ್ವಾಪರಾಂತೇ ತು ಕ್ಷತ್ರಿಯಾಣಾಂ ನಿವೇಶನೇ ।
ಅವತಾರಂ ಮಹಾಬಾಹುರ್ವಾಸುದೇವಃ ಕರಿಷ್ಯತಿ || ೫ ||

ಕನ್ನಡದ ಅನುವಾದ

ದಂಡಪಾಣಿಚಕ್ರಧರಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ತರುವಾಯ ಓ ಮಹಾದೇವಿ! ಚಂದ್ರೇಶ್ವರನ ಪೂರ್ವಭಾಗದಲ್ಲಿ ಸೋಮೇಶನ ಉತ್ತರಕ್ಕೆ ಉಮೆಯ ನೈಋತ್ಯಭಾಗದಲ್ಲಿ ಗಂಧರ್ವೇಶನ ಹತ್ತಿರ ಐದು ಬಿಲ್ಲಿನ ದೂರದಲ್ಲಿರುವ ಬ್ರಹ್ಮರ್ಷಿ ದೇವರ್ಷಿಗಳಿಂದ ಪೂಜಿಸಲ್ಪಟ್ಟ ಒಂದೆಡೆಯಲ್ಲಿಯೇ ನೆಲಸಿರುವ ಚಕ್ರಧರದಂಡಪಾಣಿಗಳನ್ನು ಹೊಂದ ಬೇಕು. ಈಗ ಸಕಲ ಪಾಪವನ್ನು ಪರಿಹರಿಸುವ ಆ ಚಕ್ರಧರನ ಉತ್ಪತ್ತಿಯನ್ನು ಹೇಳುವೆನು.

೪-೫. ಹಿಂದೆ ಕಾಶಿಯಲ್ಲಿ ಪೌಂಡ್ರಕವಾಸುದೇವನೆಂಬವನಿದ್ದನು. ಬ್ರಾಹ್ಮಣರು ಹೇಳುತ್ತಿರುವ " ಕಲ್ಪಾದಿಯಲ್ಲಿ ದ್ವಾಪರಯುಗದ ಕೊನೆಯಲ್ಲಿ ಕ್ಷತ್ರಿಯರ ಮನೆಯಲ್ಲಿ ವಿಷ್ಣುವು ಅವತಾರಮಾಡುವನು." ಎಂಬ ಪುರಾಣವಚನವನ್ನು ಕೇಳಿದನು.

ಸ ತು ಮೂಢಮತಿರ್ಮೇನೇ ಅಹಂ ವಿಷ್ಣುರಿತಿ ಪ್ರಿಯೇ ।
ಚಿಹ್ನಾನಿ ಧಾರಯಾಮಾಸ ಚಕ್ರಾದೀನಿ ವರಾನನೇ ॥ ೬ ॥
ಸ ದೂತಂ ಪ್ರೇಷಯಾಮಾಸ ದ್ವಾರಕಾಯಾಂ ಮಹೋದರಂ ।
ಸ ಗತ್ವಾ ಪ್ರಾಹ ವಿಷ್ಣುಂ ವೈ ಚಕ್ರಾದೀನಿ ಪರಿತ್ಯಜ ॥ ೭ ॥
ಇತ್ಯಾಹ ಪೌಂಡ್ರಕೋ ರಾಜಾ ನಚೇವ್ವಧಮವಾಪ್ಸ್ಯಸಿ ।
ತತಶ್ಚ ಭಗವಾನ್ ವಿಷ್ಣುಃ ಪ್ರಾಹಾಸ್ಯ ರುಚಿರಂ ವಚಃ ॥ ೮ ॥
ವಾಚ್ಯಃ ಸ ಪೌಂಡ್ರಕೋ ರಾಜಾ ತ್ವಯಾ ಹಂತ ವಚೋ ಮಮ ।
ಗೃಹೀತಚಕ್ರ ಏವಾಽಹಂ ಕಾಶೀಮಾಗಮ್ಯ ತೇ ಪುರೀಂ ॥ ೯ ॥
ಸಂತ್ಯಕ್ಷ್ಯಾಮಿ ತತಶ್ಚಕ್ರಂ ಗದಾಂ ಚೇಮಾಮಸಂಶಯಂ ।
ತದ್ಗ್ರಾಹ್ಯಂ ಭವತಾ ಚಕ್ರಮನ್ಯದ್ವಾ ಯತ್ತವೇಪ್ಸಿತಂ ॥ ೧೦ ॥
ಇತ್ಯುಕ್ತೇಽಥ ಗತೇ ದೂತೇ ಸಂಸ್ಮೃತ್ಯಾಽಭ್ಯಾಗತಂ ಹರಿಃ ।
ಗರುತ್ಮಂತಂ ಸಮಾರುಹ್ಯ ತ್ವರಿತಸ್ತತ್ಪುರಂ ಯಯೌ ॥ ೧೧ ॥
ಮಿತ್ರಸ್ನೇಹಾತ್ತತಸ್ತಸ್ಯ ಕಾಶಿರಾಜಃ ಸಹಾಽನುಗಃ ।
ಸರ್ವಸೈನ್ಯಪರೀವಾರಸ್ತತಃ ಪೌಂಡ್ರಮುಪಾಯಯೌ ॥ ೧೨ ॥

---

೬. ಮೂಢಮತಿಯಾದ ಅವನು ನಾನೇ ವಿಷ್ಣುವೆಂದರಿತು ಚಕ್ರವೇಮೊದಲಾದ ವಿಷ್ಣುವಿನ ಚಿಹ್ನೆಗಳನ್ನು ಧರಿಸಿದನು.

೭–೧೦. ಅವನು ದ್ವಾರಕೆಯಲ್ಲಿರುವ ಶ್ರೀಕೃಷ್ಣನೆಡೆಗೆ ಮಹೋದರನೆಂಬ ದೂತನನ್ನು ಕಳುಹಿಸಿದನು. ಆ ದೂತನು ಶ್ರೀಕೃಷ್ಣನನ್ನು ಹೊಂದಿ "ನೀನು ಚಕ್ರವೇಮೊದಲಾದವುಗಳನ್ನು ತ್ಯಜಿಸು. ಇಲ್ಲದಿದ್ದರೆ ಹತನಾಗುವೆ" ಎಂಬ ಪೌಂಡ್ರಕನ ಮಾತನ್ನು ತಿಳಿಸಿದನು. ಕೃಷ್ಣನು ಆ ದೂತನನ್ನು ಕುರಿತು "ನಾನು ಚಕ್ರವನ್ನು ಧರಿಸಿ ಕಾಶಿಗೆ ಬಂದು ಅದನ್ನೂ ಗದೆಯನ್ನೂ ಅಲ್ಲಿ ಬಿಡುವೆನು. ಆ ಪೌಂಡ್ರಕನು ಅದನ್ನಾಗಲಿ, ಬೇರೆ ಯಾವುದನ್ನಾಗಲಿ ಧರಿಸಲಿ" ಈ ಮಾತನ್ನು ಪೌಂಡ್ರಕನಿಗೆ ತಿಳಿಸು ಎಂದನು.

೧೧. ಅದರಂತೆ ದೂತನು ಹೊರಟುಹೋಗಲು ಕೃಷ್ಣನು ಸ್ಮರಣಮಾತ್ರದಿಂದ ತನ್ನಡೆಗೆ ಬಂದ ಗರುಡನನ್ನೇರಿ ಶೀಘ್ರವಾಗಿ ಆ ಪೌಂಡ್ರಕನ ಪುರಿಗೆ ಹೋದನು.

೧೨. ಬಳಿಕ ಕಾಶಿರಾಜನು ಮಿತ್ರನಾದ ಪೌಂಡ್ರಕನಲ್ಲಿರುವ ಸ್ನೇಹದಿಂದ ಸೈನ್ಯಪರಿವಾರದೊಡನೆ ಅವನಿಗೆ ಬೆಂಬಲನಾದನು.

ತತೋ ಬಲೇನ ಮಹತಾ ಕಾಶಿರಾಜಬಲೇನ ಚ ।
ಪೌಂಡ್ರಕೋ ವಸುದೇವೋಽಸೌ ಕೇಶವಾಭಿಮುಖೋ ಯಯೌ ॥ ೧೩ ॥
ತಂ ದದರ್ಶ ಹರಿರ್ದೂರಾದ್ಘೋರೇ ಸ್ಯಂದನೇ ಸ್ಥಿತಂ ।
ಚಕ್ರಹಸ್ತಂ ಗದಾಶಾರ್ಙ್ಗಸಂಯುತಂ ಗರುಡಧ್ವಜಂ ॥ ೧೪ ॥
ತಂ ದೃಷ್ಟ್ವಾ ಭಾವಗಂಭೀರಂ ಜಹಾಸ ಗರುಡಧ್ವಜಃ ।
ಉವಾಚ ಪೌಂಡ್ರಕಂ ಮೂಢಮಾತ್ಮಚಿಹ್ನೋಪಲಕ್ಷಿತಂ ॥ ೧೫ ॥
ಪೌಂಡ್ರಕೋಕ್ತಂ ತ್ವಯಾ ಯತ್ತು ದೂತವಕ್ತ್ರೇಣ ಮಾಂ ಪ್ರತಿ ।
ಸಮುತ್ಸೃಜೇತಿ ಚಿಹ್ನಾನಿ ತಚ್ಚ ಸರ್ವಂ ತ್ಯಜಾಮ್ಯಹಂ ॥ ೧೬ ॥
ಚಕ್ರಮೇತತ್ಸಮುತ್ಸೃಷ್ಟಂ ಗದೇಯಂ ಚ ವಿಸರ್ಜಿತಾ ।
ಗುರುತ್ಮಾನೇಷ ತೇ ಗತ್ವಾ ಸಮಾರೋಹ ತು ವೈ ಧ್ವಜಂ ॥ ೧೭ ॥
ಇತ್ಯುಚ್ಚಾರ್ಯ ವಿಮುಕ್ತೇನ ಚಕ್ರೇಣಾಽಸೌ ನಿಪಾತಿತಃ ।
ರಥಶ್ಚ ಗದಯಾ ಭಗ್ನೋ ಗಜಾಶ್ಚಾಶ್ವಾಶ್ಚ ಚೂರ್ಣಿತಾಃ ॥ ೧೮ ॥
ತತೋ ಹಾಹಾಕೃತೇ ಲೋಕೇ ಕಾಶಿನಾಥೋ ಮಹಾಬಲೀ ।
ಯುಯುಧೇ ವಾಸುದೇವೇನ ಮಿತ್ರದುಃಖೇನ ದುಃಖಿತಃ ॥ ೧೯ ॥

---

೧೩. ಪೌಂಡ್ರಕನು ತನ್ನ ಸೈನ್ಯದಿಂದಲೂ ಕಾಶಿರಾಜನ ಸೈನ್ಯದಿಂದಲೂ ಸಹಿತನಾಗಿ ಕೃಷ್ಣನನ್ನು ಎದುರಿಸಿದನು.

೧೪. ಕೃಷ್ಣನು ದೂರದಲ್ಲಿ ದೊಡ್ಡರಥದಲ್ಲಿ ಚಕ್ರ, ಗದೆ, ಶಾರ್ಙ್ಗಗಳನ್ನು ಹಿಡಿದು ಗರುಡಧ್ವಜನಾಗಿ ಕುಳಿತಿರುವ ಪೌಂಡ್ರಕವಾಸುದೇವನನ್ನು ಕಂಡನು.

೧೫. ಗಂಭೀರನೂ, ಮೂಢನೂ, ತನ್ನ ಚಿಹ್ನೆಗಳನ್ನು ಧರಿಸಿದವನೂ, ಆದ ಆ ಪೌಂಡ್ರಕವಾಸುಧೇವನನ್ನು ಕಂಡು ನಕ್ಕು ಕೃಷ್ಣನಿಂತೆಂದನು.

೧೬. "ಪೌಂಡ್ರಕ! ನೀನು ದೂತನ ಮುಖದಿಂದ ಚಕ್ರವೇ ಮೊದಲಾದ ಚಿಹ್ನೆಗಳನ್ನು ನಾನು ತ್ಯಜಿಸಬೇಕೆಂದು ಹೇಳಿ ಕಳುಹಿಸಿರುವೆ. ಅದರಂತೆ ನಾನು ಅದನ್ನೆಲ್ಲ ತ್ಯಜಿಸುವೆನು.

೧೭. ಇಗೊ ಚಕ್ರ, ಗದೆಗಳನ್ನು ಬಿಟ್ಟೆನು. ಈ ಗರುಡನು ನಿನ್ನ ಧ್ವಜವನ್ನೇರಲಿ.

೧೮. ಕೃಷ್ಣನು ಹೀಗೆಂದು ಚಕ್ರವನ್ನು ತ್ಯಜಿಸಲು ಅದು ಅವನನ್ನು ಕೆಡವಿತು. ಗದೆಯು ರಥವನ್ನು ಮುರಿದು ಕುದುರೆಗಳನ್ನು ಪುಡಿಮಾಡಿತು.

೧೯. ತರುವಾಯ ಜನರು ಹಾಹಾಕಾರಗೈಯಲು ಅತಿಬಲಿಷ್ಠನಾದ ಕಾಶೀರಾಜನು ಗೆಳೆಯನ ಮರಣದಿಂದ ದುಃಖಿತನಾಗಿ ಕೃಷ್ಣನೊಡನೆ ಕಾಳಗವಾಡಿದನು.

ಕಾಶೀಪುರ್ಯಾಂ ಸ ಚಿಕ್ಷೇಪ ಕುರ್ವಂಲ್ಲೋಕಸ್ಯ ವಿಸ್ಮಯಂ || ೨೦ ||
ಹತ್ವಾ ತು ಪೌಂಡ್ರಕಂ ಶೌರಿಃ ಕಾಶಿರಾಜಂ ಚ ಸಾನುಗಂ |
ಪುನರ್ದ್ವಾರವತೀಂ ಪ್ರಾಪ್ತೋ ಮೃಗಯಾಯಾಂ ಗತೋ ಯಥಾ || ೨೧ ||
ತತಃ ಕಾಶಿಪತೇಃ ಪುತ್ರಃ ಪಿತುರ್ದುಃಖೇನ ದುಃಖಿತಃ |
ಶಂಕರಂ ತೋಷಯಾಮಾಸ ಸ ಚ ತಸ್ಮೈ ವರಂ ದದೌ || ೨೨ ||
ಸ ವವ್ರೇ ಭಗವನ್ ಕೃತ್ಯಾ ಪಿತುರ್ಹಂತುರ್ವಧಾಯ ಮೇ |
ಸಮುತ್ತಿಷ್ಠತು ಕೃಷ್ಣಸ್ಯ ತ್ವತ್ಪ್ರಸಾದಾತ್ಸುರೇಶ್ವರ || ೨೩ ||
ಏವಂ ಭವಿಷ್ಯತೀತ್ಯುಕ್ತೇ ದಕ್ಷಿಣಾಗ್ನೇಸ್ತು ಮಧ್ಯತಃ |
ಮಹಾಕೃತ್ಯಾ ಸಮುತ್ತಸ್ಥೌ ಪ್ರಸ್ಥಿತಾ ದ್ವಾರಕಾಂ ಪ್ರತಿ || ೨೪ ||
ಜ್ವಾಲಾಮಾಲಾಕರಾಲಾಂ ತಾಂ ಯಾದವಾ ಭಯವಿಹ್ವಲಾಃ |
ದೃಷ್ಟ್ವಾ ಜನಾರ್ದನಂ ಸರ್ವೇ ಶರಣಾರ್ಥಮುಪಾಗತಾಃ || ೨೫ ||
ತತಃ ಸುದರ್ಶನಂ ತಸ್ಯಾ ಮುಮೋಚ ಗರುಡಧ್ವಜಃ |
ವಧಾಯ ಸಾ ತತೋ ಭಗ್ನಾ ಚಕ್ರತೇಜೋಽಭಿಪೀಡಿತಾ || ೨೬ ||

---

೨೦. ಬಳಿಕ ಶ್ರೀಕೃಷ್ಣನು ಶಾರ್ಙ್ಗದಿಂದ ಶರಗಳನ್ನು ಬಿಟ್ಟು ಅವನ ಶಿರಸ್ಸನ್ನು ಕತ್ತರಿಸಿ ಜನರಿಗೆ ಆಶ್ಚರ್ಯವನ್ನುಂಟುಮಾಡುತ್ತ ಕಾಶೀಪಟ್ಟಣದಲ್ಲಿ ಸೆದನು.

೨೧. ಕೃಷ್ಣನು ಪೌಂಡ್ರಕನನ್ನೂ, ಪರಿವಾರದೊಡನೆ ಕಾಶಿರಾಜನನ್ನೂ ವಧಿಸಿ ಬೇಟೆಗೆ ಹೋದವನಂತೆ ಮರಳಿ ದ್ವಾರವತಿಗೆ ಬಂದನು.

೨೨. ಅನಂತರ ಆ ಕಾಶಿರಾಜ ತನಯನು ತಂದೆಯ ಮರಣದಿಂದ ದುಃಖಗೊಂಡು ಮಹೇಶ್ವರನನ್ನು ತಪಸ್ಸಿನಿಂದ ಸಂತೋಷಗೊಳಿಸಿದನು. ಸಂತೋಷಗೊಂಡ ಶಂಕರನಾದರೊ ಅವನಿಗೆ ವರವನ್ನಿತ್ತನು.

೨೩. ಅವನು ಆಗಲಿ, "ಶಂಕರ ! ನಿನ್ನ ಅನುಗ್ರಹದಿಂದ ನನ್ನ ತಂದೆಯನ್ನು ಕೊಂದವನನ್ನು ಕೊಲ್ಲಲು ಕೃತ್ಯದೇವತೆಯು ಹುಟ್ಟಲಿ" ಎಂದು ವರವನ್ನು ಬೇಡಿ ಕೊಂಡನು.

೨೪. ಶಂಕರನು ಹಾಗೆಯೇ ಆಗಲೆನ್ನಲು ದಕ್ಷಿಣಾಗ್ನಿ ಮಧ್ಯದಿಂದ ದೊಡ್ಡ ಆಭಿಚಾರಿಕ ದೇವತೆಯು ಹುಟ್ಟಿ ದ್ವಾರಕೆಯನ್ನು ಕುರಿತು ಹೊರಟಿತು.

೨೫. ಯಾದವರು ಜ್ವಲಿಸುತ್ತಿರುವ ಆ ದೇವತೆಯನ್ನು ನೋಡಿ ಭಯಗೊಂಡು ಶ್ರೀ ಕೃಷ್ಣನನ್ನು ಮರೆಹೊಕ್ಕರು.

೨೬. ಶ್ರೀಕೃಷ್ಣನು ಆ ದೇವತೆಯನ್ನು ಸಂಹರಿಸಲು ಚಕ್ರವನ್ನು ಪ್ರಯೋಗಿಸಿದನು. ಅದು ಚಕ್ರದ ತೇಜಸ್ಸಿನಿಂದ ವ್ಯಥೆಗೊಂಡು ಜ್ವಾಲಾರಹಿತವಾಯಿತು.

ಕೃತ್ಯಾಮನುಜಗಾಮಾಶು ವಿಷ್ಣೋಶ್ಚಕ್ರಂ ಸುದರ್ಶನಂ ।
ಕೃತ್ಯಾ ವಾರಾಣಸೀಂ ಪ್ರಾಪ್ತಾ ತಸ್ಯಾಶ್ಚಕ್ರಂತು ಪೃಷ್ಠತಃ ॥ ೨೭ ॥
ತತಃ ಸಾ ಭಯಸಂತ್ರಸ್ತಾ ಶಂಕರಂ ಶರಣಂ ಗತಾ ।
ಸೋಮನಾಥಂ ಜಗನ್ನಾಥಂ ನಾಽನ್ಯಃ ಶಕ್ತೋ ಹಿ ರಕ್ಷಿತುಂ ॥ ೨೮ ॥
ತತಶ್ಚಕ್ರಂ ವರೈರ್ಬಾಣೈಸ್ತಾಡಯಾಮಾಸ ಶಂಕರಃ ।
ತಚ್ಚ ದ್ವಾರವತೀಂ ಪ್ರಾಪ್ತಂ ಶಿವಸಾಯಕಮಿಶ್ರಿತಂ ॥ ೨೯ ॥
ತದ್ದೃಷ್ಟ್ವಾ ಶಿವನಾಮಾಂಕೈಸ್ತಾಡಿತಂ ಭಗವಾನ್ ಹರಿಃ ।
ಚಕ್ರಂ ಶರೈಸ್ತತಃ ಕ್ರುದ್ಧೋ ಗೃಹೀತ್ವಾ ಚ ಕರೇಣ ತತ್ ।
ಜಗಾಮ ತತ್ರ ಯತ್ರಾಸ್ತೇ ಸೋಮೇಶಃ ಕಾಲಭೈರವಃ ॥ ೩೦ ॥
ಸ ಗತ್ವಾ ರೋಷತಾಮ್ರಾಕ್ಷಶ್ಚಕ್ರೋದ್ಯತಕರಃ ಸ್ಥಿತಃ ।
ಕೃತ್ಯಾಂ ಹಂತುಂ ಮತಿಂ ಚಕ್ರೇ ಕಾಲಭೈರವನಿರ್ಮಿತಾಂ ॥ ೩೧ ॥
ದೃಷ್ಟೋ ದೇವ್ಯೈಸ್ತತಃ ಸರ್ವೈರ್ದಂಡಪಾಣಿಗಣೇನ ಚ ।
ದೇವಾನಾಂ ಪ್ರೇಕ್ಷತಾಂ ತತ್ರ ದಂಡಪಾಣಿರ್ಮಹಾಗಣಃ ।
ಚಕ್ರೋದ್ಯತಕರಂ ದೃಷ್ಟ್ವಾ ವಿಷ್ಣುಂ ಪ್ರಾಹಾಬ್ಜಲೋಚನಂ ॥ ೩೨ ॥

ದಂಡಪಾಣಿರುವಾಚ :—

ಮಾ ಕ್ರೋಧಂ ಕುರು ದೇವೇಶ ಕೃತ್ಯಾಂ ಪ್ರತಿ ಜಗತ್ಪ್ರಭೋ ॥ ೩೩ ॥

---

೨೭. ಅದು ಚಕ್ರದಿಂದ ಹಿಂಬಾಲಿಸಲ್ಪಟ್ಟು ಕಾಶಿಯನ್ನು ಸೇರಿತು.

೨೮. ಬಳಿಕ ಆ ದೇವತೆಯು ಭಯಗೊಂಡು ಶಂಕರನನ್ನು ಮರೆಹೊಕ್ಕಿತು. ಶಂಕರನನ್ನು ಬಿಟ್ಟರೆ ಯಾರುತಾನೆ ಅದನ್ನು ರಕ್ಷಿಸಲು ಶಕ್ತರು?

೨೯. ಆ ಮಹೇಶ್ವರನು ಉತ್ತಮವಾದ ಬಾಣಗಳಿಂದ ಚಕ್ರವನ್ನು ಹೊಡೆದನು. ಆಗ ಚಕ್ರವು ಶಿವನೆಸೆದ ಬಾಣದೊಡನೆ ದ್ವಾರವತಿಯನ್ನು ಸೇರಿತು.

೩೦. ಕೃಷ್ಣನು ಶಿವನಾಮಾಂಕಿತವಾದ ಬಾಣಗಳಿಂದ ಹೊಡೆಯಲ್ಪಟ್ಟ ಚಕ್ರವನ್ನು ಕೈಯಲ್ಲಿ ಹಿಡಿದುಕೊಂಡು ಕಾಲಭೈರವನೆಡೆಗೆ ತೆರಳಿದನು.

೩೧. ಅವನು ಅಲ್ಲಿ ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ ಚಕ್ರವನ್ನು ಎತ್ತಿ ಕಾಲಭೈರವನು ನಿರ್ಮಿಸಿದ ಅಭಿಚಾರಿಕ ದೇವತೆಯನ್ನು ಕೊಲ್ಲಲು ನಿಶ್ಚಯಿಸಿದನು.

೩೨. ದೇವತೆಗಳೂ, ದಂಡಪಾಣಿಯೆಂಬ ಗಣನೂ ಆ ಕೃಷ್ಣನನ್ನು ಕಂಡರು. ಆ ದೇವತೆಗಳು ನೋಡುತ್ತಿರುವಾಗಲೆ ದಂಡಪಾಣಿಯು ಚಕ್ರವನ್ನು ಎತ್ತಿಕೊಂಡು ಪುಂಡರೀಕಾಕ್ಷನನ್ನು ಕುರಿತು ಇಂತೆಂದನು.

೩೩. ದಂಡಪಾಣಿಯು ಹೇಳುತ್ತಾನೆ:—ದೇವೇಶನಾದ ಎಲೈ ಶ್ರೀಕೃಷ್ಣನೆ! ಈ ದೇವತೆಯ ವಿಷಯದಲ್ಲಿ ಕುಪಿತನಾಗಬೇಡ.

ಅಮೋಘಂ ಯುಧಿ ತೇ ಚಕ್ರಂ ಕೃತ್ಯಾ ಚಾಽಪಿ ಚ ಶಾಂಕರೀ ।
ಏವಂ ಚಕ್ರವಿನಿರ್ಮುಕ್ತೇ ಭವೇತ್ಕ್ರೋಧೋ ಹರೇ ಯದಿ ।
ಭವಿಷ್ಯತಿ ಮಹದ್ದುಃಖಂ ಲೋಕಾನಾಂ ಸಂಕ್ಷಯೋ ಹಿ ವಾ ॥ ೩೪ ॥
ನ ಮೋಕ್ತವ್ಯಮತಶ್ಚಕ್ರಃ ಶೃಣು ಭೂಯೋ ವಚಶ್ಚ ನಃ ।
ಅತ್ರ ಸ್ಥಾನೇ ನಿಯುಕ್ತೋಽಹಂ ಶಂಕರೇಣ ಪುರಾ ಹರೇ ॥ ೩೫ ॥
ಪಾಪಿನಾಂ ರಕ್ಷಣಾರ್ಥಂ ವೈ ವಿಘ್ನಾರ್ಥಂ ದುಷ್ಟಚೇತಸಾಂ ।
ತಸ್ಮಾತ್ತ್ವಂ ಮಮ ಸಾನ್ನಿಧ್ಯೇ ತಿಷ್ಠ ಚಕ್ರಧರೋ ಹರೇ ॥ ೩೬ ॥
ಅತ್ರ ಚಕ್ರಧರಂ ದೇವಂ ಪೂಜಯಿಷ್ಯಂತಿ ಮಾನವಾಃ ।
ಧೂಪಮಾಲ್ಯೋಪಹಾರೈಶ್ಚ ನೈವೇದ್ಯೈರ್ವಿವಿಧೈರಪಿ ॥ ೩೭ ॥
ವಿಷ್ಣುರುವಾಚ :—
ಏಷ ಏವ ನಿವೃತ್ತೋಽಹಂ ತವ ವಾಕ್ಯಾಂಕುಶೇನ ವೈ ।
ಅತ್ರ ಚಕ್ರೋದ್ಯತಕರಃ ಸ್ಥಾಸ್ಯೇ ತವ ಸಮೀಪತಃ ॥ ೩೮ ॥
ಏವಂ ಹಿ ಸಂಸ್ಥಿತೋ ದೇವಸ್ತತ್ರ ಚಕ್ರಧರಃ ಪ್ರಿಯೇ ।
ದಂಡಪಾಣಿಶ್ಚ ಭಗವಾನ್ಮಮ ರೂಪೀ ಗಣೇಶ್ವರಃ ॥ ೩೯ ॥
ಯಸ್ತೌ ಪೂಜಯತೇ ಭಕ್ತ್ಯಾ ದಂಡಪಾಣಿಹರೀ ಕ್ರಮಾತ್ ।
ಸ ಪಾಪಕಂಚುಕೈರ್ಮುಕ್ತೋ ಗಚ್ಛೇಚ್ಛಿವಪುರಂ ನರಃ ॥ ೪೦ ॥

---

೩೪. ನಿನ್ನ ಚಕ್ರವೂ, ಶಂಕರನ ಈ ದೇವತೆಯೂ ಯುದ್ಧದಲ್ಲಿ ವ್ಯರ್ಥವಾಗುವುವಲ್ಲ. ನೀನು ಹರನಲ್ಲಿ ಕೋಪಗೊಂಡು ಹೀಗೆ ಚಕ್ರವನ್ನು ಪ್ರಯೋಗಿಸಿದರೆ ಲೋಕದ ಜನರಿಗೆ ಅತ್ಯಂತ ದುಃಖವಾಗಲಿ, ನಾಶವಾಗಲಿ ಸಂಭವಿಸುವುದು.

೩೫–೩೬. ಕೃಷ್ಣ ! ಆದ್ದರಿಂದ ನೀನು ಚಕ್ರವನ್ನು ಪ್ರಯೋಗಿಸಬೇಡ. ಮರಳಿ ನನ್ನ ನುಡಿಯನ್ನು ಲಾಲಿಸು. ಶಂಕರನು ನನ್ನನ್ನಿಲ್ಲಿ ಪಾಪಿಗಳ ರಕ್ಷಣೆಗಾಗಿಯೂ, ದುಷ್ಟರಿಗೆ ವಿಘ್ನವನ್ನುಂಟುಮಾಡುವುದಕ್ಕಾಗಿಯೂ ನಿಯಮಿಸಿರುವನು. ಆದ್ದರಿಂದ ನೀನು ನನ್ನ ಬಳಿ ಚಕ್ರವನ್ನು ಧರಿಸಿ ನೆಲೆಸು.

೩೭. ಇಲ್ಲಿ ಮಾನವರು ಚಕ್ರಧರನಾದ ನಿನ್ನನ್ನು ಧೂಪ, ಮಾಲ್ಯ, ಉಪಹಾರಗಳಿಂದಲೂ, ಬಗೆ ಬಗೆಯ ನೈವೇದ್ಯಗಳಿಂದಲೂ ಪೂಜಿಸುವರು".

೩೮. ವಿಷ್ಣುವು ಹೇಳುತ್ತಾನೆ:—ಇದೋ ! ನಾನು ನಿನ್ನ ಮಾತೆಂಬ ಅಂಕುಶದಿಂದ ಹಿಂದಿರುಗಿದೆನು. ಇಲ್ಲಿ ಚಕ್ರವನ್ನು ಧರಿಸಿ ನಿನ್ನ ಬಳಿಯೇ ನೆಲಸುವೆನು.

೩೯. ಪ್ರಿಯಳೆ ! ಹೀಗೆ ಚಕ್ರಧಾರಿಯಾದ ವಿಷ್ಣುವೂ, ನನ್ನ ಸ್ವರೂಪನೇ ಆದ ದಂಡಪಾಣಿ ಗಣೇಶ್ವರನೂ ಅಲ್ಲಿ ನಿಂತರುವರು.

೪೦. ಆ ದಂಡಪಾಣಿ, ಕೃಷ್ಣರನ್ನು ಭಕ್ತಿಯಿಂದ ಪೂಜಿಸಿದವನು ಪಾಪವೆಂಬ ಕಂಚುಕದಿಂದ ಮುಕ್ತನಾಗಿ ಶಿವನ ಪಟ್ಟಣವಾದ ಕೈಲಾಸವನ್ನು ಸೇರುವನು.

ಮಾಘೇ ಮಾಸಿ ಚತುರ್ದಶ್ಯಾಂ ಕೃಷ್ಣಾಷ್ಟಮ್ಯಾಂ ವಿಶೇಷತಃ ।
ಗಂಧಧೂಪೋಪಹಾರೈರ್ಯಃ ಪೂಜಯೇದ್ದಂಡನಾಯಕಂ ।
ತಸ್ಯ ಕ್ಷೇತ್ರೇ ನಿವಸತೋ ನ ವಿಘ್ನಂ ಜಾಯತೇ ಕ್ವಚಿತ್ ॥ ೪೧ ॥
ಏಕಾದಶ್ಯಾಂ ಜಿತಾಹಾರೋ ಯೋಽರ್ಚಯೇಚ್ಚಕ್ರಪಾಣಿನಂ ।
ಸ ಮುಕ್ತಃ ಪಾತಕೈಃ ಸರ್ವೈರ್ಯಾತಿ ವಿಷ್ಣೋಃ ಸಲೋಕತಾಂ ॥ ೪೨ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಚಕ್ರಪಾಣಿನಃ ।
ದಂಡಪಾಣಿಗಣಸ್ಯಾಽಪಿ ಶ್ರುತಂ ಪಾಪೌಘನಾಶನಂ ॥ ೪೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದಂಡಪಾಣಿ ಚಕ್ರಧರಮಾಹಾತ್ಮ್ಯವರ್ಣನಂ ನಾಮ
॥ ಏಕೋನಸಪ್ತತಿತಮೋಽಧ್ಯಾಯಃ ॥

---

೪೧. ಮಾಘ ಮಾಸದಲ್ಲಿ ಚತುರ್ದಶೀ, ಕೃಷ್ಣಾಷ್ಟಮೀ ದಿನಗಳಲ್ಲಿ ದಂಡಪಾಣಿಯನ್ನು ಗಂಧ, ಧೂಪ, ಉಪಹಾರಗಳಿಂದ ಪೂಜಿಸಿ ಆ ಕ್ಷೇತ್ರದಲ್ಲಿ ವಾಸಿಸುವವನಿಗೆ ಯಾವುದೊಂದು ಕಾರ್ಯದಲ್ಲಿಯೂ, ವಿಘ್ನವುಂಟಾಗುವುದಿಲ್ಲ.

೪೨. ಏಕಾದಶಿಯ ದಿನ ಉಪವಾಸವಿದ್ದು ಚಕ್ರಪಾಣಿಯನ್ನರ್ಚಿಸಿದವನು ಸಮಸ್ತ ಪಾತಕಗಳಿಂದಲೂ ಮುಕ್ತನಾಗಿ ವಿಷ್ಣುಲೋಕವನ್ನು ಸೇರುವನು.

೪೩. ಹೀಗೆ ಪಾಪವನ್ನು ಪರಿಹರಿಸುವ ಚಕ್ರಪಾಣಿ, ದಂಡಪಾಣಿಗಳ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದಂಡಪಾಣಿಚಕ್ರಧರಮಾಹಾತ್ಮ್ಯವರ್ಣನವೆಂಬ
ತೊಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶತತಮೋಽಧ್ಯಾಯಃ

ಸಾಂಬಾಯ ದುರ್ವಾಸಸಾ ಶಾಪಪ್ರದಾನವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಯೋರುತ್ತರಸಂಸ್ಥಿತಃ ।
ತಥಾ ವಾಯವ್ಯದಿಗ್ಭಾಗೇ ಬ್ರಹ್ಮಣೋ ಬಾಲರೂಪಿಣಃ ॥ ೧ ॥
ಸಾಂಬಾದಿತ್ಯಂ ಸುರಶ್ರೇಷ್ಠೇ ಯಃ ಸಾಂಬೇನ ಪ್ರತಿಷ್ಠಿತಃ ।
ಸ್ಥಾನಾನಿ ತ್ರೀಣಿ ದೇವಸ್ಯ ದ್ವೀಪೇಽಸ್ಮಿನ್ ಭಾಸ್ಕರಸ್ಯ ತು ॥ ೨ ॥
ಪೂರ್ವಂ ಮಿತ್ರವನಂ ನಾಮ ತಥಾ ಮುಂಡೀರಮುಚ್ಯತೇ ।
ಪ್ರಭಾಸಕ್ಷೇತ್ರಮಾಸ್ಥಾಯ ಸಾಂಬಾದಿತ್ಯಸ್ತೃತೀಯಕಃ ॥ ೩ ॥
ತಸ್ಮಿನ್ ಕ್ಷೇತ್ರೇ ಮಹಾದೇವಿ ಪುರಂ ಯತ್ಸಾಂಬಸಂಜ್ಞಕಂ ।
ದ್ವಿತೀಯಂ ಶಾಶ್ವತಂ ಸ್ಥಾನಂ ತತ್ರ ಸೂರ್ಯಸ್ಯ ನಿತ್ಯಶಃ ॥ ೪ ॥
ಪ್ರೀತ್ಯಾ ಸಾಂಬಸ್ಯ ತತ್ರಾರ್ಕೋ ಜನಸ್ಯಾನುಗ್ರಹಾಯ ಚ ।
ತತ್ರ ದ್ವಾದಶಭಾಗೇನ ಮಿತೋ ಮೈತ್ರೇಣ ಚಕ್ಷುಷಾ ॥ ೫ ॥
ಅವಲೋಕಯನ್ ಜಗತ್ಸರ್ವಂ ಶ್ರೇಯೋರ್ಥಂ ತಿಷ್ಠತೇ ಸದಾ ।
ಪ್ರಯುಕ್ತಾಂ ವಿಧಿವತ್ಪೂಜಾಂ ಗೃಹ್ಣಾತಿ ಭಗವಾನ್ ಸ್ವಯಂ ॥ ೬ ॥

ಕನ್ನಡದ ಅನುವಾದ

ಸಾಂಬನಿಗೆ ದುರ್ವಾಸನ ಶಾಪಪ್ರದಾನವರ್ಣನ

೧-೩. ಈಶ್ವರನು ಹೇಳುತ್ತಾನೆ:—ಬಳಿಕ ಮಹಾದೇವಿ! ಆ ದಂಡಪಾಣಿ ಚಕ್ರಧರರ ಉತ್ತರದಲ್ಲಿ ಬಾಲರೂಪಿ ಬ್ರಹ್ಮನ ವಾಯವ್ಯ ದಿಕ್ಕಿನಲ್ಲಿರುವ ಸಾಂಬಾದಿತ್ಯನನ್ನು ಹೊಂದಬೇಕು. ಇವನನ್ನು ಸಾಂಬನು ಪ್ರತಿಷ್ಠೆಮಾಡಿದನು. ಈ ದ್ವೀಪದಲ್ಲಿ ಭಾಸ್ಕರನ ಮಿತ್ರವನ, ಮುಂಡೀರ, ಪ್ರಭಾಸಕ್ಷೇತ್ರದ ಸಾಂಬಪುರಗಳೆಂಬ ಮೂರು ಸ್ಥಾನಗಳಿರುವುವು.

೪-೬. ಮಹಾದೇವಿ ! ಆ ಪ್ರಭಾಸಕ್ಷೇತ್ರದಲ್ಲಿರುವ ಸಾಂಬಪುರವೆಂಬ ಎರಡನೆಯ ಸ್ಥಾನದಲ್ಲಿ ಸೂರ್ಯನು ಸಾಂಬನಿಗೂ, ಜನರಿಗೂ ಅನುಗ್ರಹ ಮಾಡುವುದಕ್ಕಾಗಿ ತನ್ನ ಕಣ್ಣಿನ ಹನ್ನೆರಡನೆಯ ಒಂದು ಭಾಗದಿಂದ ಪ್ರಪಂಚವನ್ನೆಲ್ಲ ನೋಡುತ್ತ ವಿಧಿಯಿಂದೆಸಗಿದ ಪೂಜೆಯನ್ನು ಪರಿಗ್ರಹಿಸುತ್ತ ಯಾವಾಗಲೂ ನೆಲಸಿರುವನು.

ದೇವ್ಯುವಾಚ :—

ಕೋಽಯಂ ಸಾಂಬಃ ಸುತಃ ಕಸ್ಯ ಯಸ್ಯ ನಾಮ್ನಾ ರವೇಃ ಪುರಂ ।
ಯಸ್ಯ ಪ್ರಾಽಯಂ ಸಹಸ್ರಾಂಶುರ್ವರದಃ ಪುಣ್ಯಕರ್ಮಣಃ ॥ ೭ ॥

ಈಶ್ವರ ಉವಾಚ :—

ಯ ಏತೇ ದ್ವಾದಶಾದಿತ್ಯಾ ವಿರಾಜಂತೇ ಮಹಾಬಲಾಃ ।
ತೇಷಾಂ ಯೋ ವಿಷ್ಣುಸಂಜ್ಞಸ್ತು ಸರ್ವಲೋಕೇಷು ವಿಶ್ರುತಃ ॥ ೮ ॥
ಇಹಾಸೌ ವಾಸುದೇವತ್ವಮವಾಪ ಭಗವಾನ್ ವಿಭುಃ ॥ ೯ ॥
ತಸ್ಯ ಸಾಂಬಃ ಸುತೋ ಜಜ್ಞೇ ಜಾಂಬವತ್ಯಾಂ ಮಹಾಬಲಃ ।
ಸ ತು ಪಿತ್ರಾ ಭೃಶಂ ಶಪ್ತಃ ಕುಷ್ಠರೋಗಮವಾಪ್ತವಾನ್ ।
ತೇನ ಸಂಸ್ಥಾಪಿತಃ ಸೂರ್ಯೋ ನಿಜನಾಮ್ನಾ ಪುರಂ ಕೃತಂ ॥ ೧೦ ॥

ದೇವ್ಯುವಾಚ :—

ಶಪ್ತಃ ಕಸ್ಮಿನ್ನಿಮಿತ್ತೇಽಸೌ ಪಿತ್ರಾ ಪುತ್ರಃ ಸ್ವಯಂ ಪುನಃ ।
ನಾಲ್ಪಂ ಸ್ಯಾತ್ಕಾರಣಂ ದೇವ ಯೇನಾಸೌ ಶಪ್ತವಾನ್ ಸುತಂ ॥ ೧೧ ॥

ಈಶ್ವರ ಉವಾಚ :—

ಶೃಣುಷ್ವಾವಹಿತಾ ಭೂತ್ವಾ ತಸ್ಯ ಯಚ್ಛಾಪಕಾರಣಂ ।
ದುರ್ವಾಸಾ ನಾಮ ಭಗವಾನ್ ಮಮೈವಾಂಶಸಮುದ್ಭವಃ ॥ ೧೨ ॥

---

೭. ದೇವಿಯು ಹೇಳುತ್ತಾಳೆ :—ಸೂರ್ಯನ ಪಟ್ಟಣವು ಯಾವನ ಹೆಸರನ್ನು ಹೊಂದಿತೊ, ಪುಣ್ಯವಂತನಾದ ಯಾವನಿಗೆ ಸೂರ್ಯನು ವರವನ್ನಿತ್ತನೊ ಆ ಸಾಂಬನು ಯಾರು ? ಯಾರ ಮಗನು ?

೮. ಈಶ್ವರನು ಹೇಳುತ್ತಾನೆ :—ಈಗ ಅತಿ ಬಲಿಷ್ಠರಾಗಿ ಪ್ರಕಾಶಿಸುವ ಹನ್ನೆರಡುಮಂದಿ ಸೂರ್ಯರಲ್ಲಿ ಸಮಸ್ತ ಲೋಕಗಳಲ್ಲಿ ಪ್ರಸಿದ್ಧನಾದ ವಿಷ್ಣುವೆಂಬ ಸೂರ್ಯನು ಇಲ್ಲಿ ವಾಸುದೇವತ್ವವನ್ನು ಹೊಂದಿದನು.

೯–೧೦. ಅವನಿಂದ ಜಾಂಬವತಿಯೆಂಬ ಪತ್ನಿಯಲ್ಲಿ ಅತ್ಯಂತ ಬಲಿಷ್ಠನಾದ ಸಾಂಬನೆಂಬ ಪುತ್ರನು ಜನಿಸಿದನು. ಅವನು ತಂದೆಯ ಶಾಪದಿಂದ ಕುಷ್ಠರೋಗವನ್ನು ಹೊಂದಿ ಸೂರ್ಯನನ್ನು ಪ್ರತಿಷ್ಠೆಮಾಡಿ ತನ್ನ ಹೆಸರಿನಿಂದ ಪಟ್ಟಣವನ್ನು ನಿರ್ಮಿಸಿದನು.

೧೧. ದೇವಿಯು ಹೇಳುತ್ತಾಳೆ :—ತಂದೆಯು ತನ್ನ ಮಗನನ್ನು ಏತಕ್ಕೆ ಶಪಿಸಿದನು ? ಇದಕ್ಕೆ ಸಾಮಾನ್ಯ ಕಾರಣವಿರಲಾರದು.

೧೨–೧೩. ಈಶ್ವರನು ಹೇಳುತ್ತಾನೆ :—ದೇವಿ ! ಆ ಶಾಪದ ಕಾರಣವನ್ನು ಸಾವಧಾನಮನಸ್ಸಿನಿಂದ ಕೇಳು. ನನ್ನ ಅಂಶಸಂಭೂತನಾದ ದುರ್ವಾಸನೆಂಬ

ಅಟಮಾನಃ ಸ ಭಗವಾಂಸ್ತ್ರೀಲ್ಲೋಕಾನ್ಪ್ರಚಚಾರ ಹ ।
ಅಥ ಪ್ರಾಪ್ತೋ ದ್ವಾರವತೀಂ ಲೋಕಾಃ ಸಂಜಜ್ಞಿರೇ ಪುರಃ ॥ ೧೩ ॥
ತಮಾಗತಮೃಷಿಂ ದೃಷ್ಟ್ವಾ ಸಾಂಬೋ ರೂಪೇಣ ಗರ್ವಿತಃ ।
ಪಿಂಗಾಕ್ಷಂ ಜಟಿಲಂ ರೂಕ್ಷಂ ವಿಸ್ವರೂಪಂ ಕೃಶಂ ತಥಾ ॥ ೧೪ ॥
ಅವಮಾನಂ ಚಕಾರಾಸೌ ದರ್ಶನಾತ್ಸ್ಪರ್ಶನಾತ್ತಥಾ ।
ದೃಷ್ಟ್ವಾ ತಸ್ಯ ಮುಖಂ ಮುಂಡೋ ವಕ್ತ್ರಂ ಚಕ್ರೇ ತಥಾತ್ಮನಃ ।
ಚಕ್ರೇ ಯದುಕುಲಶ್ರೇಷ್ಠೋ ಗರ್ವಿತೋ ಯೌವನೇನ ತು ॥ ೧೫ ॥
ಅಥ ಕ್ರುದ್ಧೋ ಮಹಾತೇಜಾ ದುರ್ವಾಸಾ ಋಷಿಸತ್ತಮಃ ।
ಸಾಂಬಂ ಪ್ರೋವಾಚ ಭಗವಾನ್ವಿಧುನ್ವನ್ಮುಖಮಾತ್ಮನಃ ॥ ೧೬ ॥
ಯಸ್ಮಾದ್ವಿರೂಪಂ ಮಾಂ ದೃಷ್ಟ್ವಾ ಆತ್ಮರೂಪೇಣ ಗರ್ವಿತಃ ।
ಗಮನೇ ದರ್ಶನೇ ಮಹ್ಯಮಹಂಕಾರಃ ಕೃತೋ ಯತಃ ।
ತಸ್ಮಾತ್ತ್ವಂ ಕುಷ್ಠರೋಗೇಣ ನ ಚಿರೇಣ ಗ್ರಸಿಷ್ಯಸೇ ॥ ೧೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಾಂಬಾಯ ದುರ್ವಾಸಸಾ ಶಾಪಪ್ರದಾನ ವರ್ಣನಂ ನಾಮ
ಶತತಮೋಽಧ್ಯಾಯಃ

ಮುನಿಯು ಮೂರುಲೋಕಗಳಲ್ಲಿಯೂ ಸಂಚರಿಸುತ್ತ ದ್ವಾರವತಿಗೆ ಬಂದನು. ಆಗ ಜನರು ಅವನನ್ನು ಅರಿತರು.

೧೪–೧೫ ತನ್ನ ಸೌಂದರ್ಯದಿಂದಲೂ, ಯೌವನದಿಂದಲೂ ಮತ್ತನಾದ ಸಾಂಬನು ಬಂದಿರುವ ಹಳದಿ ಬಣ್ಣದ ಕಣ್ಣುಗಳುಳ್ಳವನೂ, ಜಟಾಧಾರಿಯೂ, ಕಠಿನನೂ, ಕುರೂಪಿಯೂ, ಕೃಶನೂ ಆದ ಆ ಮುನಿವರ್ಯನನ್ನು ಕಂಡು ದರ್ಶನ ಸ್ಪರ್ಶದಿಂದ ಅವನಿಗೆ ಅವಮಾನಮಾಡಿದನು. ಹಾಗೆಯೇ ಅವನ ಮುಖವನ್ನು ಕಂಡು ತನ್ನ ಮುಖವನ್ನು ಹಾಗೆಯೇ ಮಾಡಿ ಅಣಕಿಸಿದನು.

೧೬–೧೭. ಆದರಿಂದ ಕುಪಿತನಾದ ದುರ್ವಾಸ ಮುನಿವರ್ಯನು ಸಾಂಬನನ್ನು ಕುರಿತು ಇಂತೆಂದನು. "ನೀನು ನಿನ್ನ ರೂಪದಿಂದ ಅಹಂಕಾರಗೊಂಡು ವಿರೂಪನಾದ ನನ್ನನ್ನು ನೋಡಿ ನಡಿಗೆಯಲ್ಲಿಯೂ, ನೋಟದಲ್ಲಿಯೂ ಅಣಕಿಸಿದ್ದರಿಂದ ಶೀಘ್ರವಾಗಿಯೆ ಕುಷ್ಠರೋಗದಿಂದ ಪೀಡಿತನಾಗುವೆ?

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಸಾಂಬನಿಗೆ ದುರ್ವಾಸ ಶಾಪಪ್ರದಾನವರ್ಣನವೆಂಬ
ನೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋತ್ತರಶತತಮೋಽಧ್ಯಾಯಃ

ಸಾಂಬಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಏತಸ್ಮಿನ್ನೇವ ಕಾಲೇ ತು ನಾರದೋ ಭಗವಾನೃಷಿಃ ।
ಬ್ರಹ್ಮಣೋ ಮಾನಸಃ ಪುತ್ರಸ್ತ್ರಿಷು ಲೋಕೇಷು ಗರ್ವಿತಃ ॥ ೧ ॥
ಸರ್ವಲೋಕಚರಃ ಸೋಽಪಿ ಯುವಾ ದೇವನಮಸ್ಕೃತಃ ।
ತಥಾ ಯದೃಚ್ಛಯಾ ಚಾಯಮಟಮಾನಃ ಸಮಂತತಃ ॥ ೨ ॥
ವಾಸುದೇವಂ ಸ ವೈ ದ್ರಷ್ಟುಂ ನಿತ್ಯಂ ದ್ವಾರವತೀಂ ಪುರೀಂ ।
ಆಯಾತಿ ಋಷಿಭಿಃ ಸಾರ್ಧಂ ಕ್ರೋಧೇನ ಋಷಿಸತ್ತಮಃ ॥ ೩ ॥
ಅಥಾಭ್ಯಾಗಚ್ಛತಸ್ತಸ್ಯ ಸರ್ವೇ ಯದುಕುಮಾರಕಾಃ ।
ಯೇ ಪ್ರದ್ಯುಮ್ನಪ್ರಭೃತಯಸ್ತೇ ಚ ಪ್ರಹ್ವಾನನಾಃ ಸ್ಥಿತಾಃ ॥ ೪ ॥
ಅಭಾವಾಚ್ಚಾರ್ಘ್ಯಪಾದ್ಯಾನಾಂ ಪೂಜಾಂ ಚಕ್ರುಃ ಸಮಂತತಃ ।
ಸಾಂಬಸ್ತ್ವವಶ್ಯಭಾವಿತ್ವಾತ್ತಸ್ಯ ಶಾಪಸ್ಯ ಕಾರಣಾತ್ ॥ ೫ ॥

ಕನ್ನಡದ ಅನುವಾದ

ಸಾಂಬಾದಿತ್ಯಮಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಈ ಸಮಯದಲ್ಲಿ ಬ್ರಹ್ಮನ ಮಾನಸ ಪುತ್ರನೂ, ಮೂರುಲೋಕಗಳಲ್ಲಿ ಅಹಂಕಾರಗೊಂಡವನೂ, ಸಮಸ್ತಲೋಕಗಳಲ್ಲಿ ಸಂಚರಿಸುವವನೂ, ಯುವಕನೂ, ದೇವತೆಗಳಿಂದ ನಮಸ್ಕಾರ ಮಾಡಲ್ಪಟ್ಟವನೂ ಆದ ನಾರದಮುನಿಯು ಸ್ವೇಚ್ಛೆಯಿಂದ ಎಲ್ಲಾ ಕಡೆಯಲ್ಲಿಯೂ ಸಂಚರಿಸುತ್ತ ಶ್ರೀ ಕೃಷ್ಣನನ್ನು ನೋಡಲು ಕೋಪದಿಂದ ಮುನಿಗಳೊಡನೆ ದ್ವಾರವತೀ ಪಟ್ಟಣಕ್ಕೆ ಬಂದನು.

೪–೬. ಬರುತ್ತಿರುವ ಅವನನ್ನು ಕಂಡು ಪ್ರದ್ಯುಮ್ನನೇ ಮೊದಲಾದ ಯಾದವರು ಅರ್ಘ್ಯಪಾದ್ಯವಿಲ್ಲದಿದ್ದುದರಿಂದ ಕೇವಲ ವಿನಯದಿಂದ ಅವನನ್ನು ಪೂಜಿಸಿದರು.

ಅವಜ್ಞಾಂ ಕುರುತೇ ನಿತ್ಯಂ ನಾರದಸ್ಯ ಮಹಾತ್ಮನಃ ।
ರತಿಕ್ರೀಡಾಸವೈರ್ನಿತ್ಯಂ ರೂಪಯೌವನಗರ್ವಿತಃ ॥ ೬ ॥

ಅವಿನೀತಂ ತು ತಂ ದೃಷ್ಟ್ವಾ ಚಿಂತಯಾಮಾಸ ನಾರದಃ ।
ಅಸ್ಯಾಹಮವಿನೀತಸ್ಯ ಕರಿಷ್ಯೇ ವಿನಯಂ ಶುಭಂ ॥ ೭ ॥

ಏವಂ ಸ ಚಿಂತಯಿತ್ವಾ ತು ವಾಸುದೇವಮಥಾಬ್ರವೀತ್ ।
ಇಮಾಃ ಷೋಡಶಸಾಹಸ್ರಾಃ ಸ್ತ್ರಿಯೋ ಯಾ ದೇವಸತ್ತಮ ॥ ೮ ॥

ಸರ್ವಾಸ್ತಾಸಾಂ ಸದಾ ಸಾಂಬೇ ಭಾವೋ ದೇವ ಸಮಾಶ್ರಿತಃ ।
ರೂಪೇಣಾಪ್ರತಿಮಃ ಸಾಂಬೋ ಲೋಕೇಽಸ್ಮಿನ್ ಸಚರಾಚರೇ ॥ ೯ ॥
ಸದಾಽರ್ಹಂತಿ ಚ ತಾಸ್ತಸ್ಯ ದರ್ಶನಂ ಹ್ಯಪಿ ಸತ್ ಸ್ತ್ರಿಯಃ ।

ಶ್ರುತ್ವೈವಂ ನಾರದಾದ್ವಾಕ್ಯಂ ಚಿಂತಯಾಮಾಸ ಕೇಶವಃ ॥ ೧೦ ॥
ಯದೇತನ್ನಾರದೇನೋಕ್ತಂ ಸತ್ಯಮತ್ರ ತು ಕಿಂ ಭವೇತ್ ।

ಏವಂ ಚ ಶ್ರೂಯತೇ ಲೋಕೇ ಚಾಪಲ್ಯಂ ಸ್ತ್ರೀಷು ವಿದ್ಯತೇ ।
ಶ್ಲೋಕಾವಿಮೌ ಪುರಾ ಗೀತೌ ಚಿತ್ತಜ್ಞೈರ್ಯೋಷಿತಾಂ ದ್ವಿಜೈಃ ॥ ೧೧ ॥

ರತಿಕ್ರೀಡೆ ಮತ್ತು ಮದ್ಯಗಳಿಂದಲೂ, ಸೌಂದರ್ಯದಿಂದಲೂ ಯೌವನದಿಂದಲೂ ಅಹಂಕಾರಗೊಂಡ ಸಾಂಬನು ಅವಶ್ಯವಾಗಿ ಆ ನಾರದನ ಶಾಪವನ್ನು ಹೊಂದಬೇಕಾದುದರಿಂದ ಮಹಾತ್ಮನಾದ ಆ ಮುನಿಗೆ ಅವಮಾನಮಾಡಿದನು.

೭–೧೦. ನಾರದನು ಅವಿನಯವುಳ್ಳ ಆ ಸಾಂಬನನ್ನು ಕಂಡು ಅವನನ್ನು ವಿನೀತನನ್ನಾಗಿ ಮಾಡುವೆನೆಂದಾಲೋಚಿಸಿ ಕೃಷ್ಣನನ್ನು ಕುರಿತು ಇಂತೆಂದನು. "ದೇವೋತ್ತಮ ! ಸಾಂಬನು ಈ ಪ್ರಪಂಚದಲ್ಲಿ ಅತ್ಯಂತ ಸೌಂದರ್ಯವುಳ್ಳವನಾದ್ದರಿಂದ ಈ ಹದಿನಾರು ಸಾವಿರಮಂದಿ ಹೆಂಗಸರು ಅವನಲ್ಲಿ ಅನುರಾಗವುಳ್ಳವರಾಗಿರುವರು. ಈ ಸ್ತ್ರೀಯರು ಅವನ ದರ್ಶನವನ್ನು ಸತತವೂ ಅಪೇಕ್ಷಿಸುವರು". ಎಂದು ನಾರದನು ಹೇಳಲು ಶ್ರೀ ಕೃಷ್ಣನು ಆಲೋಚಿಸಿದನು.

೧೧. "ನಾರದನು ಹೇಳಿದ ಈ ಮಾತು ನಿಜವಾದುದೇ? ಲೋಕದಲ್ಲಿ ಹೆಂಗಸರು ಚಪಲೆಯರೆಂದು ಕೇಳಿರುವೆನು. ಸ್ತ್ರೀಯರ ಮನಸ್ಸನ್ನರಿತ ಬ್ರಾಹ್ಮಣರು ಈ ಎರಡು ಪದ್ಯಗಳನ್ನು ಹೇಳಿರುವರು.

ಪೌಂಶ್ಚಲ್ಯಾದತಿಚಾಪಲ್ಯಾದಜ್ಞಾನಾಚ್ಚ ಸ್ವಭಾವತಃ ।
ರಕ್ಷಿತಾ ಯತ್ನತೋಽಪಿ ಹ್ಯೇತಾ ವಿಕುರ್ವಂತಿ ಹಿ ಭರ್ತೃಷು ॥ ೧೨ ॥
ನೈತಾ ರೂಪಂ ಪರೀಕ್ಷಂತೇ ನಾಽಽಸಾಂ ವಯಸಿ ಸಂಶ್ರಯಃ ।
ಸುರೂಪಂ ವಾ ವಿರೂಪಂ ವಾ ಪುಮಾನಿತ್ಯೇವ ಭುಂಜತೇ ॥ ೧೩ ॥

ಈಶ್ವರ ಉವಾಚ :—

ಮನಸಾ ಚಿಂತಯಿತ್ವೈವಂ ಕೃಷ್ಣೋ ನಾರದಮಬ್ರವೀತ್ ।
ನ ಹ್ಯಹಂ ಶ್ರದ್ದಧಾಮ್ಯೇತದ್ಯದೇತದ್ಭಾಷಿತಂ ಪುರಾ ॥ ೧೪ ॥
ಬ್ರುವಾಣಮೇವಂ ದೇವಂ ತು ನಾರದಃ ಪ್ರತ್ಯುವಾಚ ಹ ।
ತಥಾಹಂ ತು ಕರಿಷ್ಯಾಮಿ ಯಥಾ ಶ್ರದ್ಧಾಸ್ಯತೇ ಭವಾನ್ ॥ ೧೫ ॥
ಏವಮುಕ್ತ್ವಾ ಯಯೌ ಭೂಯೋ ನಾರದಸ್ತು ಯಥಾಗತಂ ।
ತತಃ ಕತಿಪಯಾಹಸ್ಯ ದ್ವಾರಕಾಂ ಪುನರಭ್ಯಗಾತ್ ॥ ೧೬ ॥
ತಸ್ಮಿನ್ನಹನಿ ದೇವೋಽಪಿ ಸಹಾಂತಃಪೌರಕೈರ್ಜನೈಃ ।
ಅನುಭೂಯ ಜಲಕ್ರೀಡಾಂ ಪಾನಮಾಸೇವತೇ ರಹಃ ॥ ೧೭ ॥
ರಮ್ಯೇ ರೈವತಕೋದ್ಯಾನೇ ನಾನಾದ್ರುಮವಿಭೂಷಿತೇ ।
ಸರ್ವರ್ತುಕುಸುಮೈರ್ನಿತ್ಯಂ ವಾಸಿತೇ ಸರ್ವಕಾಮನೇ ॥ ೧೮ ॥

---

೧೨. "ಹೆಂಗಸರನ್ನು ಗಂಡಂದಿರು ವ್ಯಭಿಚಾರದಿಂದಲೂ, ಅತಿ ಚಾಪಲ್ಯದಿಂದಲೂ, ಸ್ವಾಭಾವಿಕ ಮೂಢತನದಿಂದಲೂ ಪ್ರಯತ್ನದಿಂದ ರಕ್ಷಿಸಿದರೂ ಅವರು ವಿಕಾರಗೊಳ್ಳುವರು.

೧೩. ಇವರು ಸೌಂದರ್ಯವನ್ನೂ, ವಯಸ್ಸನ್ನೂ ಪರೀಕ್ಷಿಸದೆ ಪುರುಷನು ಸುಂದರನಾಗಲಿ, ಕುರೂಪಿಯಾಗಲಿ ಅವನೊಡನೆ ರತಿ ಸೌಖ್ಯವನ್ನನುಭವಿಸುವರು".

೧೪. ಈಶ್ವರನು ಹೇಳುತ್ತಾನೆ:—ಕೃಷ್ಣನು ಮನಸ್ಸಿನಿಂದ ಹೀಗೆ ಆಲೋಚಿಸಿ ನಾರದನನ್ನು ಕುರಿತು ನೀನು ಹಿಂದೆ ಹೇಳಿದ ಮಾತನ್ನು ನಾನು ನಂಬುವುದಿಲ್ಲ. ಎಂದನು.

೧೫–೧೬. ಹೀಗೆ ಹೇಳುತ್ತಿರುವ ಕೃಷ್ಣನನ್ನು ಕುರಿತು ನಾರದನು ನೀನು ನಂಬುವಂತೆ ನಾನು ಮಾಡುವೆನೆಂದು ಹೊರಟು ಹೋದನು. ಅವನು ಮರಳಿ ಕೆಲವು ದಿವಸಗಳ ಮೇಲೆ ದ್ವಾರಕೆಗೆ ಹಿಂದಿರುಗಿ ಬಂದನು.

೧೭. ಆ ದಿನ ಶ್ರೀ ಕೃಷ್ಣನು ರಾಣಿವಾಸದ ಹೆಂಗಸರೊಡನೆ ಜಲಕ್ರೀಡೆಯನ್ನು ಮಾಡಿ ರಹಸ್ಯದಲ್ಲಿ ಪಾನೀಯವನ್ನು ಕುಡಿಯುತ್ತಿದ್ದನು.

೧೮–೨೪. ಹೀಗೆ ಶ್ರೀ ಕೃಷ್ಣನು ಅನೇಕ ವೃಕ್ಷಗಳಿಂದ ಅಲಂಕಾರಗೊಂಡುದೂ ಎಲ್ಲರಿಗೂ ಕಾಮವನ್ನುಂಟುಮಾಡುವುದೂ, ಅರಳಿದ ಅನೇಕ ತಾವರೆ ಹೂವುಗಳಿಂದ

ನಾನಾಜಲಜಪುಲ್ಲಾಭಿದೀರ್ಘಿಕಾಭಿರಲಂಕೃತೇ ।
ಹಂಸಸಾರಸಸಂಘುಷ್ಟೇ ಚಕ್ರವಾಕೋಪಶೋಭಿತೇ ॥ ೧೯ ॥
ತಸ್ಮಿನ್ ಸ ರಮತೇ ದೇವಃ ಸ್ತ್ರೀಭಿಃ ಪರಿವೃತಸ್ತದಾ ।
ಹಾರನೂಪುರಕೇಯೂರರಶನಾದ್ಯೈರ್ವಿಭೂಷಣೈಃ ॥ ೨೦ ॥
ಭೂಷಿತಾನಾಂ ವರಸ್ತ್ರೀಣಾಂ ಸರ್ವಾಂಗೀಣಾಂ ವಿಶೇಷತಃ ।
ತತ್ರಸ್ಥಃ ಪಿಬತೇ ಪಾನಂ ಶುಭಗಂಧಾನ್ವಿತಂ ಶುಭಂ ॥ ೨೧ ॥
ಏತಸ್ಮಿನ್ನಂತರೇ ಬುದ್ಧ್ವಾ ಮದ್ಯಮತ್ತಾಸ್ತತಃ ಸ್ತ್ರಿಯಃ ।
ಉವಾಚ ನಾರದಃ ಸಾಂಬಮಸ್ಮಿಂಸ್ತಿಷ್ಠ ಕುಮಾರಕ ॥ ೨೨ ॥
ತ್ವಾಂ ಸಮಾಹ್ವಯತೇ ದೇವೋ ನ ಯುಕ್ತಂ ಸ್ಥಾತುಮತ್ರ ತೇ ।
ತದ್ವಾಕ್ಯಾರ್ಥಮಬುದ್ಧ್ವೈವ ನಾರದೇನಾಥ ನೋದಿತಃ ॥ ೨೩ ॥
ಗತ್ವಾ ತು ಸತ್ವರಂ ಸಾಂಬಃ ಪ್ರಣಾಮಮಕರೋತ್ಪಿತುಃ ।
ನಿರ್ದಿಷ್ಟಮಾಸನಂ ಭೇಜೇ ಯಥಾಭಾವೇನ ವಿಷ್ಣುನಾ ॥ ೨೪ ॥
ಏತಸ್ಮಿನ್ನಂತರೇ ತತ್ರ ಯಾಸ್ತು ವೈ ಚಾಲ್ಪಸಾತ್ತ್ವಿಕಾಃ ।
ತಾ ದೃಷ್ಟ್ವಾ ಸಹಸಾ ಸಾಂಬಂ ಸರ್ವಾಶ್ಚುಕ್ಷುಭಿರೇ ಸ್ತ್ರಿಯಃ ॥ ೨೫ ॥
ನ ಸ ದೃಷ್ಟಃ ಪುರಾ ಯಾಭಿರಂತಃಪುರನಿವಾಸಿಭಿಃ ।
ಮದ್ಯದೋಷಾತ್ತತಸ್ತಾಸಾಂ ಸ್ಮೃತಿಲೋಪಾತ್ತಥಾ ಬಹು ॥ ೨೬ ॥

ರಮ್ಯವಾದ ಕೊಳಗಳಿಂದ ಅಲಂಕಾರಗೊಂಡುದೂ, ಹಂಸ ಸಾರಸಗಳ ಧ್ವನಿಯಿಂದ ಸಹಿತವಾದುದೂ, ಚಕ್ರವಾಕ ಪಕ್ಷಿಗಳಿಂದ ವಿರಾಜಿಸುವುದೂ ಆದ ರೈವತಕ ಪರ್ವತದ ಉದ್ಯಾನದಲ್ಲಿ ಹಾರ, ನೂಪುರ, ಕೇಯೂರ, ರಶನೆಯೇ ಮೊದಲಾದ ಒಡವೆಗಳಿಂದ ಭೂಷಿತರಾದ ಸರ್ವಾಂಗ ಸುಂದರಿಯರಾದ ಉತ್ತಮಾಂಗನೆಯರೊಡನೆ ವಿನೋದಿಸುತ್ತ ಮನೋಹರ ಗಂಧದಿಂದ ಕೂಡಿದ ಪಾನೀಯವನ್ನು ಕುಡಿಯುತ್ತಿರಲು ನಾರದನು ಅಲ್ಲಿ ಸ್ತ್ರೀಯರು ಮದ್ಯದಿಂದ ಮತ್ತರಾಗಿರುವುದನ್ನು ತಿಳಿದು ಸಾಂಬನನ್ನು ಕುರಿತು, "ಕುಮಾರ ! ಇಲ್ಲಿರುವ ನಿನ್ನನ್ನು ನಿನ್ನ ತಂದೆಯು ಕರೆಯುತ್ತಿದ್ದಾನೆ. ನೀನಿಲ್ಲಿರುವುದು ಉಚಿತವಲ್ಲ". ಎಂದು ಹೇಳಿದನು. ಆಗ ಸಾಂಬನು ನಾರದನ ಮಾತಿನ ಅರ್ಥವನ್ನರಿಯದೆ ಅವನ ಪ್ರೇರಣೆಯಿಂದ ತಂದೆಯ ಹತ್ತಿರ ಹೋಗಿ ಅವನಿಗೆ ನಮಸ್ಕರಿಸಿ ಕೃಷ್ಣನು ತೋರಿಸಿದ ಆಸನದಲ್ಲಿ ಕುಳಿತನು.

೨೫. ಈ ಮಧ್ಯದಲ್ಲಿ ಅಲ್ಲಿ ನೆರೆದ ಸ್ತ್ರೀಯರಲ್ಲಿ ಚಪಲ ಚಿತ್ತರಾದ ಹೆಂಗಸರೆಲ್ಲ ಆ ಸಾಂಬನನ್ನು ಕಂಡು ಕೂಡಲೆ ಕಾಮವಿಕಾರಗೊಂಡರು.

೨೬–೨೭. ಅಂತಃಪುರದಲ್ಲಿ ವಾಸಿಸುವುದರಿಂದ ಹಿಂದೆ ಆ ಸಾಂಬನನ್ನು ನೋಡದವರೂ, ಮದ್ಯದೋಷದಿಂದ ಮತ್ತರಾಗಿ ಸ್ಮೃತಿಯಿಲ್ಲದವರೂ ಸ್ವಭಾವ

ಸ್ವಭಾವತೋಽಲ್ಪಸತ್ತ್ವಾನಾಂ ಜಘನಾನಿ ವಿಸುಸ್ರುವುಃ ।
ಶ್ರೂಯತೇ ಚಾಪ್ಯಯಂ ಶ್ಲೋಕಃ ಪುರಾಣಪ್ರಥಿತಃ ಕ್ಷಿತೌ ॥ ೨೭ ॥
ಬ್ರಹ್ಮಚರ್ಯೇಽಪಿ ವರ್ತಂತ್ಯಾ ಯೋಗಿನ್ಯಾ ವಾ ಪ್ರಮಾದತಃ ।
ಪ್ರಕೃಷ್ಟಂ ಪುರುಷಂ ದೃಷ್ಟ್ವಾ ವರಾಂಗಂ ಕ್ಲಿದ್ಯತೇ ಸ್ತ್ರಿಯಾಃ ॥ ೨೮ ॥
ಲೋಕೇಽಪಿ ದೃಶ್ಯತೇ ಹ್ಯೇತನ್ಮದ್ಯಸ್ಯಾಪ್ಯಥ ಸೇವನಾತ್ ।
ಲಜ್ಜಾಂ ಮುಂಚಂತಿ ನಿಃಶಂಕಾ ಹ್ರೀಮತ್ಯೋ ಹ್ಯಪಿ ಚ ಸ್ತ್ರಿಯಃ ॥ ೨೯ ॥
ಸಮಾಂಸೈರ್ಭೋಜನೈಃ ಸ್ನಿಗ್ಧೈಃ ಪಾನೈಃ ಸೀಧುಸುರಾಸವೈಃ ।
ಗಂಧೈರ್ಮನೋಜ್ಞೈರ್ವಸ್ತ್ರೈಶ್ಚ ಕಾಮಃ ಸ್ತ್ರೀಷು ವಿಜೃಂಭತಿ ॥ ೩೦ ॥
ಮದ್ಯಂ ನ ದೇಯಮತ್ಯರ್ಥಂ ಪುರುಷೇಣ ವಿಪಶ್ಚಿತಾ ।
ಮದೋನ್ಮತ್ತಾಃ ಸ್ವಭಾವೇನ ಪೂರ್ವಂ ಸಂತಿ ಯತಃ ಸ್ತ್ರಿಯಃ ॥ ೩೧ ॥
ನಾರದೋಽಪ್ಯಥ ತಂ ಸಾಂಬಂ ಪ್ರೇಷಯಿತ್ವಾ ತ್ವರಾನ್ವಿತಃ ।
ಆಜಗಾಮಾಥ ತತ್ರೈವ ಸಾಂಬಸ್ಯಾನುಪದೇನ ತು ॥ ೩೨ ॥
ಆಯಾಂತಂ ತಾಃ ಸ್ವಯಂ ದೃಷ್ಟ್ವಾ ಪ್ರಿಯಸೌಮನಸಂ ಮುನಿಂ ।
ಸಹಸೇವೋತ್ಥಿತಾಃ ಸರ್ವಾ ಮದೋನ್ಮತ್ತಾ ಅಪಿ ಸ್ತ್ರಿಯಃ ॥ ೩೩ ॥

ದಿಂದ ಚಪಲ ಚಿತ್ತರೂ ಆದ ಅಂಗನೆಯರ ಯೋನಿಗಳು ದ್ರವಿಸಿವುವು. ಈ ವಿಷಯ ದಲ್ಲಿ ಪುರಾಣ ಪ್ರಸಿದ್ಧವಾದೊಂದು ಶ್ಲೋಕವು ಕೇಳಿಬರುವುದು.

೨೮. "ಸ್ತ್ರೀಯು ಬ್ರಹ್ಮಚಾರಿಣಿಯಾಗಲಿ, ಸನ್ಯಾಸಿನಿಯಾಗಲಿ ಪ್ರಮಾದ ದಿಂದ ಸುಂದರ ಪುರುಷನನ್ನು ನೋಡಿದ ಕೂಡಲೆ ಅವಳ ಯೋನಿಯು ದ್ರವಿಸು ವುದು"

೨೯. ಪ್ರಪಂಚದಲ್ಲಿ ಲಜ್ಜೆಯುಳ್ಳ ಹೆಂಗಸರೂ ಮದ್ಯ ಸೇವನೆಯಿಂದ ನಾಚಿಕೆ ಯನ್ನು ತ್ಯಜಿಸುವುದನ್ನು ಕಾಣುತ್ತೇವೆ.

೩೦. ಮಾಂಸಸಹಿತ ಭೋಜನ, ರುಚಿಯಾದ ಪಾನ, ಹೆಂಡ, ಮನೋಹರ ವಾದ ಗಂಧ, ವಸ್ತ್ರ ಇವುಗಳಿಂದ ಹೆಂಗಸರ ಕಾಮವು ಹೆಚ್ಚುವುದು.

೩೧. ಅಭಿಜ್ಞನಾದ ಪುರುಷನು ಸ್ವಾಭಾವಿಕವಾಗಿ ಮತ್ತರಾಗಿರುವ ಹೆಂಗಸರಿಗೆ ಮದ್ಯವನ್ನು ಕೊಡಬಾರದು.

೩೨. ನಾರದನಾದರೋ ಸಾಂಬನನ್ನು ತಂದೆಯ ಬಳಿಗೆ ಕಳುಹಿಸಿ ತಾನೂ ಶೀಘ್ರವಾಗಿ ಅವನ ಹಿಂದೆಯೇ ಅಲ್ಲಿಗೆ ಬಂದನು.

೩೩. ಆ ಹೆಂಗಸರು ಮದೋನ್ಮತ್ತರಾಗಿದ್ದರೂ ಬರುತ್ತಿರುವ ಪ್ರಿಯನಾದ ಆ ನಾರದನನ್ನು ಕಂಡು ಕೂಡಲೆ ಮೇಲಕ್ಕೆದ್ದರು.

ತಾಸಾಮುತ್ಥಿತಾನಾಂ ತು ವಾಸುದೇವಸ್ಯ ಪಶ್ಯತಃ ।
ಭಿತ್ವಾ ವಾಸಾಂಸ್ಯನರ್ಘಾಣಿ ಪಾತ್ರೇಷು ಪತಿತಾನಿ ತು ॥ ೩೪ ॥
ಜಘನೇಷು ವಿಲಗ್ನಾನಿ ತಾನಿ ಪೇತುಃ ಪೃಥಕ್ ಪೃಥಕ್ ।
ತದ್ದೃಷ್ಟ್ವಾ ತು ಹರಿಃ ಕ್ರುದ್ಧಸ್ತಾಃ ಶಶಾಪ ತತೋಽಬಲಾಃ ॥ ೩೫ ॥
ಯಸ್ಮಾದ್ಗತಾನಿ ಚೇತಾಂಸಿ ಮಾಂ ಮುಕ್ತ್ವಾಽನ್ಯತ್ರ ವಃ ಸ್ತ್ರಿಯಃ ।
ತಸ್ಮಾತ್ಪತಿಕೃತಾಂಲ್ಲೋಕಾನಾಯುಷೋಽಂತೇ ನ ಯಾಸ್ಯಥ ॥ ೩೬ ॥
ಪತಿಲೋಕಾತ್ಪರಿಭ್ರಷ್ಟಾಃ ಸ್ವರ್ಗಮಾರ್ಗಾತ್ತಥೈವ ಚ ।
ಭೂತ್ವಾ ಹ್ಯಶರಣಾ ಭೂಯೋ ದಸ್ಯುಹಸ್ತಂ ಗಮಿಷ್ಯಥ ॥ ೩೭ ॥
ಶಾಪದೋಷಾತ್ತತಸ್ತಸ್ಮಾತ್ತಾಃ ಸ್ತ್ರಿಯೋ ಗಾಂ ಗತೇ ಹರೌ ॥
ಹೃತಾಃ ಪಾಂಚನದೈಶ್ಚೋರೈರರ್ಜುನಸ್ಯ ಪ್ರಪಶ್ಯತಃ ॥ ೩೮ ॥
ಅಲ್ಪಸತ್ವಾಶ್ಚ ಯಾಶ್ಚಾಸಂಸ್ತಾ ಗತಾ ದೂಷಣಂ ಸ್ತ್ರಿಯಃ ।
ರುಕ್ಮಿಣೀ ಸತ್ಯಭಾಮಾ ಚ ತಥಾ ಜಾಂಬವತೀ ಪ್ರಿಯೇ ॥ ೩೯ ॥
ನ ಪ್ರಾಪ್ತಾ ದಸ್ಯುಹಸ್ತಂ ತಾಃ ಸ್ವೇನ ಸತ್ವೇನ ರಕ್ಷಿತಾಃ ।
ಶಪ್ತ್ವೈವಂ ತಾಃ ಸ್ತ್ರಿಯಃ ಕೃಷ್ಣಃ ಸಾಂಬಮಪ್ಯಶಪತ್ಪುನಃ ॥ ೪೦ ॥

೩೪–೩೫. ಶ್ರೀ ಕೃಷ್ಣನು ನೋಡುತ್ತಿರುವಾಗಲೇ ಮೇಲಕ್ಕೆದ್ದ ಆ ಹೆಂಗಸರ ಅಮೂಲ್ಯವಾದ ಬಟ್ಟೆಗಳನ್ನು ಭೇದಿಸಿ ಯೋನಿಯಿಂದ ಶೋಣಿತವು ಕೆಳಕ್ಕೆ ಬಿದ್ದಿತು. ಅದನ್ನು ನೋಡಿ ಕೃಷ್ಣನು ಕುಪಿತನಾಗಿ ಆ ಹೆಂಗಸರನ್ನು ಶಪಿಸಿದನು.

೩೬. "ಎಲೌ ಅಂಗನೆಯರೆ! ನಿಮ್ಮ ಮನಸ್ಸು ನನ್ನನ್ನು ತ್ಯಜಿಸಿ ಅನ್ಯಪುರುಷನಲ್ಲಿ ಆಸಕ್ತವಾದುದರಿಂದ ನೀವು ದೇಹಾವಸಾನದಲ್ಲಿ ಪತಿಲೋಕವನ್ನು ಸೇರುವುದಿಲ್ಲ.

೩೭. ಪತಿಲೋಕದಿಂದಲೂ, ಸ್ವರ್ಗಮಾರ್ಗದಿಂದಲೂ ಭ್ರಷ್ಟರಾಗಿ ರಕ್ಷಕರಿಲ್ಲದೆ ನೀವು ಕಳ್ಳರ ಕೈಯನ್ನು ಸೇರುವಿರಿ.

೩೮–೪೧. ಈ ಶಾಪದಿಂದ ಅಲ್ಪ ಸತ್ವರಾದ ಆ ಹೆಂಗಸರು ಕೃಷ್ಣನು ಪರಂಧಾಮವನ್ನೈದಲು ಅರ್ಜುನನು ನೋಡುತ್ತಿರುವಾಗಲೇ ಪಂಚನದದ ಚೋರರಿಂದ ಅಪಹರಿಸಲ್ಪಟ್ಟು ದೋಷಗ್ರಸ್ತರಾದರು. ರುಕ್ಮಿಣಿ ಸತ್ಯಭಾಮೆ, ಜಾಂಬವತಿಯರು ಮಾತ್ರ ತಮ್ಮ ಸತ್ವಗುಣದಿಂದ ರಕ್ಷಿತರಾಗಿ ಕ ರ ಕೈಯನ್ನು ಸೇರಲಿಲ್ಲ. ಕೃಷ್ಣನು ಆ ಸ್ತ್ರೀಯರನ್ನು ಹೀಗೆ ಶಪಿಸಿ ಸಾಂಬನನ್ನು "ನಿನ್ನ ಸುಂದರವಾದ

ಯಸ್ಮಾದತೀವ ತೇ ಕಾಂತಂ ದೃಷ್ಟ್ವಾ ರೂಪಮಿಮಾಃ ಸ್ತ್ರಿಯಃ ।
ಕ್ಷುಬ್ಧಾಃ ಸರ್ವಾ ಯತಸ್ತಸ್ಮಾತ್ಕುಷ್ಠರೋಗಮವಾಪ್ನುಹಿ ॥ ೪೧ ॥
ತಸ್ಯ ತದ್ವಚನಂ ಶ್ರುತ್ವಾ ಸಾಂಬೋ ಲಜ್ಜಾಸಮನ್ವಿತಃ ।
ಉವಾಚ ಪ್ರಹಸನ್ವಾಕ್ಯಂ ಸ ಸ್ಮರನ್ಮುನಿಸತ್ತಮಂ ॥ ೪೨ ॥
ಅನಿಮಿತ್ತಮಹಂ ತಾತ ಭಾವದೋಷವಿವರ್ಜಿತಃ ।
ಶಪ್ತೋ ನ ಮೇಽತ್ರ ವೈ ಕ್ರುದ್ಧೋ ದುರ್ವಾಸಾ ನಾನ್ಯಥಾ ವದೇತ್ ॥ ೪೩ ॥
ಏವಮುಕ್ತ್ವಾ ತತಃ ಸಾಂಬಃ ಕೃಷ್ಣಂ ಕಮಲಲೋಚನಂ ।
ತತೋ ವೈರಾಗ್ಯಸಂಯುಕ್ತಶ್ಚಿಂತಾಶೋಕಪರಾಯಣಃ ॥ ೪೪ ॥
ಪ್ರಭಾಸಕ್ಷೇತ್ರಮಗಮತ್ಸರ್ವಪಾತಕನಾಶನಂ ।
ಏವಂ ತತ್ಕ್ಷೇತ್ರಮಾಸಾದ್ಯ ತಪಸ್ತೇಪೇ ಸುದಾರುಣಂ ॥ ೪೫ ॥
ಪ್ರತಿಷ್ಠಾಪ್ಯ ಸಹಸ್ರಾಂಶುಂ ದೇವಂ ಪಾಪನಿಷೂದನಂ ।
ತತಶ್ಚಾರಾಧಯಾಮಾಸ ಪರಂ ನಿಯಮಮಾಶ್ರಿತಃ ॥ ೪೬ ॥
ತ್ರಿಸಂಧ್ಯಂ ಪೂಜಯಾಮಾಸ ದಿವ್ಯಗಂಧಾನುಲೇಪನೈಃ ।
ಸ್ತೋತ್ರೇಣಾನೇನ ಭಕ್ತ್ಯಾ ವೈ ಸ್ತೌತಿ ನಿತ್ಯಂ ದಿನಾಧಿಪಂ ॥ ೪೭ ॥

ಸಾಂಬ ಉವಾಚ :—

ನಮಸ್ತ್ರೈಲೋಕ್ಯದೀಪಾಯ ನಮಸ್ತೇ ತಿಮಿರಾಪಹ ।
ನಮಃ ಪಂಕಜನಾಥಾಯ ನಮಃ ಕುಮುದಶತ್ರವೇ ॥ ೪೮ ॥

ಆಕೃತಿಯನ್ನು ನೋಡಿ ಸ್ತ್ರೀಯರು ಅತ್ಯಂತ ಚಂಚಲಚಿತ್ತರಾದ್ದರಿಂದ ನೀನು ಕುಷ್ಠ ರೋಗಿಯಾಗು" ಎಂದು ಶಪಿಸಿದನು.

೪೨–೪೫. ಸಾಂಬನು ಕೃಷ್ಣನ ಆ ಶಾಪೋಕ್ತಿಯನ್ನು ಕೇಳಿ ಲಜ್ಜೆಗೊಂಡು. ನಗುತ್ತ ದುರ್ವಾಸ ಮುನಿಯನ್ನು ಸ್ಮರಿಸಿ, "ತಂದೆಯೆ! ದೋಷವಿಲ್ಲದ ನನ್ನನ್ನು ಕಾರಣವಿಲ್ಲದೆ ಶಪಿಸಿದೆ. ಕುಪಿತನಾದ ದುರ್ವಾಸನ ಮಾತು ವ್ಯರ್ಥವಾಗಲಾರದು" ಎಂದು ತಂದೆಗೆ ಹೇಳಿ ವೈರಾಗ್ಯಗೊಂಡು ಚಿಂತೆ, ಮತ್ತು ಶೋಕಗಳಿಂದ ಮರಗುತ್ತ ಸಕಲ ಪಾಪಗಳನ್ನೂ ನೀಗಿಸುವ ಪ್ರಭಾಸಕ್ಷೇತ್ರವನ್ನು ಸೇರಿ ಕಠಿನವಾದ ತಪಸ್ಸನ್ನಾಚರಿಸಿದನು.

೪೬–೪೭. ಅಲ್ಲಿ ಅವನು ಪಾಪವನ್ನು ನಾಶಗೊಳಿಸುವ ಸೂರ್ಯನನ್ನು ಪ್ರತಿಷ್ಠೆ ಮಾಡಿ ಅತಿಶಯವಾದ ನಿಯಮವನ್ನಾಶ್ರಯಿಸಿ ತ್ರಿಸಂಧ್ಯೆಗಳಲ್ಲಿ ದಿವ್ಯ ಗಂಧಗಳಿಂದ ಪೂಜಿಸುತ್ತ ಭಕ್ತಿಯಿಂದ ಈ ಸ್ತೋತ್ರದಿಂದ ಮಾಡಿದನು.

೪೮. ಸಾಂಬನು ಹೇಳುತ್ತಾನೆ:— ಮೂರು ಲೋಕಕ್ಕೆ ದೀಪದಂತಿರುವವನೂ, ಕತ್ತಲೆಯನ್ನು ನಿವಾರಿಸುವವನೂ, ಕಮಲ ಬಾಂಧವನೂ, ಕಮುದ ಪುಷ್ಪಗಳ ಶತ್ರುವೂ ಆದ ಓ ಆದಿತ್ಯ! ನಿನಗೆ ನಮಸ್ಕಾರವು.

ನಮೋ ಜಗತ್ಪ್ರತಿಷ್ಠಾಯ ಜಗದ್ಧಾತ್ರೇ ನಮೋಽಸ್ತು ತೇ ।
ದೇವದೇವ ನಮಸ್ಯಾಮಿ ಸೂರ್ಯಂ ತ್ರೈಲೋಕ್ಯದೀಪಕಂ ॥ ೪೯ ॥

ಆದಿತ್ಯವರ್ಣೋ ಭುವನಸ್ಯ ಗೋಪ್ತಾ
ಅಪೂರ್ವ ಏಷ ಪ್ರಥಮಃ ಸುರಾಣಾಂ ।
ಹಿರಣ್ಯಗರ್ಭಃ ಪುರುಷೋ ಮಹಾತ್ಮಾ
ಸ ಪಠ್ಯತೇ ವೈ ತಮಸಃ ಪರಸ್ತಾತ್ ॥ ೫೦ ॥

ಇತಿ ಸ್ತುತಸ್ತದಾ ಸೂರ್ಯಃ ಪ್ರಸನ್ನೇನಾಂತರಾತ್ಮನಾ ।
ಉವಾಚ ದರ್ಶನಂ ಗತ್ವಾ ಸಾಂಬಂ ಜಾಂಬವತೀಸುತಂ ॥ ೫೧ ॥

ಸಾಂಬ ಸಾಂಬ ಮಹಾಬಾಹೋ ಶೃಣು ಗೋವಿಂದನಂದನ ।
ಸ್ತೋತ್ರೇಣಾನೇನ ತುಷ್ಟೋಽಹಂ ವರಂ ಬ್ರೂಹಿ ಯದೀಪ್ಸಿತಂ ॥ ೫೨ ॥

ಸಾಂಬ ಉವಾಚ :—

ಕೃಷ್ಣೇನಾಽಹಂ ಸುರಶ್ರೇಷ್ಠ ಶಪ್ತಃ ಪಾಪಃ ಸುದುರ್ಮತಿಃ ।
ಕುಷ್ಠಾಂತಂ ಕುರು ಮೇ ದೇವ ಯದಿ ತುಷ್ಟೋಽಸಿ ಮೇ ಪ್ರಭೋ ॥ ೫೩ ॥

---

೪೯. ಜಗತ್ತಿನ ಸ್ಥಿತಿಗೆ ಕಾರಣನೂ, ಜಗತ್ತನ್ನು ರಕ್ಷಿಸುವವನೂ, ಆದ ಭಾಸ್ಕರ! ನಿನಗೆ ನಮಸ್ಕಾರವು.

೫೦. ಎಲೈ ಸೂರ್ಯನೇ ನೀನು ಲೋಕರಕ್ಷಕನೂ, ಅನಾದಿಯೂ, ದೇವತೆಗಳಲ್ಲಿ ಮೊದಲನೆಯವನೂ, ಹಿರಣ್ಯಗರ್ಭನೂ, ಮಹಾತ್ಮನೂ, ತಮಸ್ಸಿನಿಂದ ರಹಿತನೂ, ಆಗಿರುವೆ."

೫೧. ಹೀಗೆ ಸಾಂಬನು ಸ್ತುತಿಸಲು ಸೂರ್ಯನು ಪ್ರತ್ಯಕ್ಷನಾಗಿ ಪ್ರಸನ್ನವಾದ ಮನಸ್ಸಿನಿಂದ ಅವನನ್ನು ಕುರಿತು ಇಂತೆಂದನು.

೫೨. "ಮಹಾಬಾಹುವೂ, ಕೃಷ್ಣನ ಮಗನೂ ಆದ ಸಾಂಬ! ನಿನ್ನೀ ಸ್ತೋತ್ರದಿಂದ ನಾನು ಪ್ರಸನ್ನನಾಗಿರುವೆನು. ಇಷ್ಟವಾದ ವರವನ್ನು ಕೇಳಿಕೊ."

೫೩. ಸಾಂಬನು ಹೇಳುತ್ತಾನೆ:—ಸುರಶ್ರೇಷ್ಠನಾದ ಎಲೈ ಸೂರ್ಯ ಭಗವಂತನೇ! ಪಾಪಿಯಾದ ನನ್ನನ್ನು ಶ್ರೀ ಕೃಷ್ಣನು ಶಪಿಸಿರುವನು. ನನ್ನಲ್ಲಿ ನೀನು ಪ್ರಸನ್ನನಾಗಿದ್ದರೆ ಈ ಕುಷ್ಠರೋಗವನ್ನು ಪರಿಹರಿಸು.

ಶ್ರೀಭಾನುರುವಾಚ :—
ಭೂಯ ಏವ ಮಹಾಭಾಗ ನೀರೋಗಸ್ತ್ವಂ ಭವಿಷ್ಯಸಿ ।
ಯಾದೃಗ್ರೂಪಃ ಪುರಾ ಹ್ಯಾಸೀರ್ಮಮ ಚೈವ ಪ್ರಸಾದತಃ ॥ ೫೪ ॥
ಅದ್ಯಪ್ರಭೃತಿ ನೇಕ್ಷ್ಯಾಸ್ತಾ ವಿಷ್ಣುಭಾರ್ಯಾಃ ಕಥಂಚನ ।
ನ ತಾಸಾಂ ದರ್ಶನೇ ಜಾತು ಸ್ಥಾತವ್ಯಂ ಯದುನಂದನ ॥ ೫೫ ॥
ತಾಸಾಮೀರ್ಷ್ಯಾಪರೀತೇನ ವಿಷ್ಣುನಾ ಪ್ರಭವಿಷ್ಣುನಾ ।
ಕುಷ್ಠಂ ತೇ ಯಾದವಶ್ರೇಷ್ಠ ಪ್ರದತ್ತಂ ಹಿ ಮಹಾತ್ಮನಾ ॥ ೫೬ ॥
ಯೋ ಮಾಂ ಸ್ತೋತ್ರೇಣ ಚಾನೇನ ಸಮಾಗತ್ಯ ಚ ಸ್ತೋಷ್ಯತಿ ।
ನ ತಸ್ಯಾನ್ವಯಸಂಭೂತಃ ಕುಷ್ಠೀ ಕಶ್ಚಿದ್ಭವಿಷ್ಯತಿ ॥ ೫೭ ॥
ಅಥಾದಿತ್ಯಸ್ಯ ನಾಮಾನಿ ಸಮ್ಯಗ್ಜ್ಞಾನೀಹಿ ದ್ವಾದಶ ।
ದ್ವಾದಶೈವ ತಥಾನ್ಯಾನಿ ತಾನಿ ವಕ್ಷ್ಯಾಮ್ಯಶೇಷತಃ ॥ ೫೮ ॥
ಆದಿತ್ಯಃ ಸವಿತಾ ಸೂರ್ಯೋ ಮಿಹಿರೋಽರ್ಕಃ ಪ್ರತಾಪನಃ ।
ಮಾರ್ತಂಡೋ ಭಾಸ್ಕರೋ ಭಾನುಶ್ಚಿತ್ರಭಾನುರ್ದಿವಾಕರಃ ॥ ೫೯ ॥
ರವಿರ್ದ್ವಾದಶನಾಮ್ನೈವಂ ಜ್ಞೇಯಃ ಸಾಮಾನ್ಯನಾಮಭಿಃ ।
ವಿಷ್ಣುರ್ಧಾತಾ ಭಗಃ ಪೂಷಾ ಮಿತ್ರೋಽಂಶುರ್ವರುಣೋಽರ್ಯಮಾ ॥
ಇಂದ್ರೋ ವಿವಸ್ವಾಂಸ್ತ್ವಷ್ಟಾ ಚ ಪರ್ಜನ್ಯೋ ದ್ವಾದಶಃ ಸ್ಮೃತಃ ।
ಇತಿ ತೇ ದ್ವಾದಶಾದಿತ್ಯಾಃ ಪೃಥಕ್ತ್ವೇನ ಪ್ರಕೀರ್ತಿತಾಃ ॥ ೬೦ ॥

---

೫೪. ಸೂರ್ಯನು ಹೇಳುತ್ತಾನೆ :—ಭಾಗ್ಯವಂತನೆ ನೀನು ನನ್ನ ಅನುಗ್ರಹದಿಂದ ಹಿಂದಿನಂತೆ ರೋಗವಿಲ್ಲದವನಾಗಿರುವೆ.

೫೫. ಸಾಂಬ ! ನೀನು ಇದು ಮೊದಲ್ಗೊಂಡು ಕೃಷ್ಣಪತ್ನಿಯರನ್ನು ನೋಡಕೂಡದು. ಅವರ ದರ್ಶನವು ಒದಗಲು ಅಲ್ಲಿ ನಿಲ್ಲಲೂಬಾರದು.

೫೬. ಆ ಗೋಪಿಯರಲ್ಲಿ ಅಸೂಯೆಗೊಂಡ ಮಹಾತ್ಮನಾದ ಕೃಷ್ಣನು ನಿನಗೆ ಕುಷ್ಠ ರೋಗವು ಸಂಭವಿಸುವಂತೆ ಶಾಪಕೊಟ್ಟನು.

೫೭. ಇಲ್ಲಿಗೆ ಬಂದು ನನ್ನನ್ನು ಈ ಸ್ತೋತ್ರದಿಂದ ಸ್ತುತಿಸುವವನ ವಂಶದಲ್ಲಿ ಯಾರೂ ಕುಷ್ಠಿಯಾಗುವುದಿಲ್ಲ.

೫೮. ಬಳಿಕ ಸೂರ್ಯನ ಇಪ್ಪತ್ತನಾಲ್ಕು ನಾಮಗಳನ್ನು ಹೇಳುವೆನು. ಚೆನ್ನಾಗಿ ತಿಳಿದುಕೊ.

೫೯–೬೦. ಆದಿತ್ಯ, ಸವಿತಾ, ಸೂರ್ಯ, ಮಿಹಿರ, ಅರ್ಕ, ಪ್ರತಾಪನ, ಮಾರ್ತಂಡ, ಭಾಸ್ಕರ, ಭಾನು, ಚಿತ್ರಭಾನು, ದಿವಾಕರ, ರವಿ ಎಂದು ಇವು ಹನ್ನೆರಡು ಸಾಮಾನ್ಯ ನಾಮಗಳು. ವಿಷ್ಣು, ಧಾತಾ, ಭಗ, ಪೂಷಾ, ಮಿತ್ರ, ಅಂಶು, ವರುಣ, ಅರ್ಯಮಾ, ಇಂದ್ರ, ವಿವಸ್ವಾನ್, ತ್ವಷ್ಟಾ, ಪರ್ಜನ್ಯ ಎಂಬ ಹನ್ನೆರಡು ಇತರ ನಾಮಗಳು.

ಉತ್ತಿಷ್ಠಂತಿ ಸದಾ ಹ್ಯೇತೇ ಮಾಸೈರ್ದ್ವಾದಶಭಿಃ ಕ್ರಮಾತ್ ।
ವಿಷ್ಣುಸ್ತಪತಿ ವೈ ಚೈತ್ರೇ ವೈಶಾಖೇ ಚಾರ್ಯಮಾ ಸದಾ ॥ ೬೨ ॥
ವಿವಸ್ವಾನ್ ಜ್ಯೇಷ್ಠಮಾಸೇ ತು ಆಷಾಢೇ ಚಾಂಶುಮಾಂಸ್ತಥಾ ।
ಪರ್ಜನ್ಯಃ ಶ್ರಾವಣೇ ಮಾಸಿ ವರುಣಃ ಪ್ರೌಷ್ಠಸಂಜ್ಞಿಕೇ ॥ ೬೩ ॥
ಇಂದ್ರಶ್ಚಾಶ್ವಯುಜೇ ಮಾಸಿ ಧಾತಾ ತಪತಿ ಕಾರ್ತಿಕೇ ।
ಮಾರ್ಗಶೀರ್ಷೇ ತಥಾ ಮಿತ್ರಃ ಪೌಷೇ ಪೂಷಾ ದಿವಾಕರಃ ॥ ೬೪ ॥
ಮಾಘೇ ಭಗಸ್ತು ವಿಜ್ಞೇಯಸ್ತ್ವಷ್ಟಾ ತಪತಿ ಫಾಲ್ಗುನೇ ।
ಶತೈರ್ದ್ವಾದಶಭಿರ್ವಿಷ್ಣೂ ರಶ್ಮೀನಾಂ ದೀಪ್ಯತೇ ಸದಾ ॥ ೬೫ ॥
ದೀಪ್ಯತೇ ಗೋಸಹಸ್ರೇಣ ಶತೈಶ್ಚ ತ್ರಿಭಿರರ್ಯಮಾ ।
ದ್ವಿಸಪ್ತಕೈರ್ವಿವಸ್ವಾಂಸ್ತು ಅಂಶುಮಾನ್ಪಂಚಕೈಸ್ತ್ರಿಭಿಃ ॥ ೬೬ ॥
ವಿವಸ್ವಾನಿವ ಪರ್ಜನ್ಯೋ ವರುಣಶ್ಚಾರ್ಯಮಾ ಇವ ।
ಇಂದ್ರಸ್ತು ದ್ವಿಗುಣೈಃ ಷಡ್ಭಿರ್ಭಾತ್ಯೇಕಾದಶಭಿಃ ಶತೈಃ ॥ ೬೭ ॥
ಮಿತ್ರವಚ್ಚ ಭಗಸ್ತ್ವಷ್ಟಾ ಸಹಸ್ರೇಣ ಶತೇನ ಚ ।
ಉತ್ತರೋಪಕ್ರಮೇಽರ್ಕಸ್ಯ ವರ್ಧಂತೇ ರಶ್ಮಯಃ ಸದಾ ।
ದಕ್ಷಿಣೋಪಕ್ರಮೇ ಭೂಯೋ ಹ್ರಸಂತೇ ಸೂರ್ಯರಶ್ಮಯಃ ॥ ೬೮ ॥

೬೨–೬೫. ಇವರು ಹನ್ನೆರಡು ತಿಂಗಳಲ್ಲಿ ಕ್ರಮವಾಗಿ ಉದಯಿಸುತ್ತಾರೆ. ವಿಷ್ಣುವು ಚೈತ್ರಮಾಸದಲ್ಲಿಯೂ, ಅರ್ಯಮನು ವೈಶಾಖ ಮಾಸದಲ್ಲಿಯೂ, ವಿವಸ್ವಂತನು ಜ್ಯೇಷ್ಠ ಮಾಸದಲ್ಲಿಯೂ, ಅಂಶುಮಂತನು ಆಷಾಢದಲ್ಲಿಯೂ, ಪರ್ಜನ್ಯನು ಶ್ರಾವಣದಲ್ಲಿಯೂ, ವರುಣನು ಭಾದ್ರಪದದಲ್ಲಿಯೂ, ಇಂದ್ರನು ಆಶ್ವಯುಜ ಮಾಸದಲ್ಲಿಯೂ, ಧಾತನು ಕಾರ್ತಿಕದಲ್ಲಿಯೂ, ಮಿತ್ರನು ಮಾರ್ಗಶೀರ್ಷದಲ್ಲಿಯೂ, ಪೂಷನು ಪುಷ್ಯದಲ್ಲಿಯೂ, ಭಗನು ಮಾಘದಲ್ಲಿಯೂ, ತ್ವಷ್ಟೃವು ಫಾಲ್ಗುನದಲ್ಲಿಯೂ ಪ್ರಕಾಶಗೊಳ್ಳುವನು. ವಿಷ್ಣುವು ಸಾವಿರದಿನ್ನೂರು ಕಿರಣಗಳಿಂದ ಯಾವಾಗಲೂ ಪ್ರಕಾಶಿಸುತ್ತಿರುತ್ತಾನೆ.

೬೬. ಅರ್ಯಮನು ಸಾವಿರದ ಮುನ್ನೂರ ಕಿರಣಗಳಿಂದಲೂ, ವಿವಸ್ವಂತನು ಸಾವಿರದ ನಾನೂರು ಕಿರಣಗಳಿಂದಲೂ, ಅಂಶುಮಂತನು ಸಾವಿರದೈನೂರು ಕಿರಣಗಳಿಂದಲೂ ಪ್ರಕಾಶಿಸುವನು.

೬೭. ಪರ್ಜನ್ಯನು ವಿವಸ್ವಂತನಂತೆಯೂ, ವರುಣನು ಅರ್ಯಮನಂತೆಯೂ ಕಂಗೊಳಿಸುವನು. ಇಂದ್ರನು ಸಾವಿರದ ಏಳನೂರು ಕಿರಣಗಳಿಂದ ವಿರಾಜಿಸುವನು.

೬೮. ಭಗನು ಮಿತ್ರನಂತೆಯೂ, ತ್ವಷ್ಟೃವು ಸಾವಿರದ ಒಂದುನೂರು ಕಿರಣಗಳಿಂದಲೂ ಪ್ರಕಾಶಿಸುವನು. ಉತ್ತರಾಯಣವು ಆರಂಭಿಸಲು ಸೂರ್ಯನ ಕಾಂತಿಗಳು ಹೆಚ್ಚುವುವು. ದಕ್ಷಿಣಾಯನಾರಂಭವಾಗಲು ಕಡಮೆಯಾಗುವುವು.

ಏವಂ ದ್ವಾದಶಮೂರ್ತಿಸ್ಥಃ ಪ್ರಭಾಸಕ್ಷೇತ್ರಮಧ್ಯತಃ ।
ಸಾಂಬಾದಿತ್ಯೇತಿ ವಿಖ್ಯಾತಃ ಸ್ಥಾಸ್ಯೇ ಮನ್ವಂತರಾಂತರೇ ॥ ೧೯ ॥
ಮಾಘಸ್ಯ ಶುಕ್ಲಪಕ್ಷೇ ತು ಪಂಚಮ್ಯಾಂ ಯಾದವೋತ್ತಮ ।
ಏಕಭಕ್ತಂ ಸದಾ ಖ್ಯಾತಂ ಷಷ್ಠ್ಯಾಂ ನಕ್ತಮುದಾಹೃತಂ ॥ ೨೦ ॥
ಸಪ್ತಮ್ಯಾಮುಪವಾಸಂ ತು ಕೃತ್ವಾ ಸಾಂಬಾರ್ಕಸನ್ನಿಧೌ ।
ರಕ್ತಚಂದನಮಿಶ್ರೈಸ್ತು ಕರವೀರೈರ್ಮಹಾವ್ರತಃ ॥ ೨೧ ॥
ದತ್ವಾ ಕುಂದರಕಂ ಧೂಪಂ ಪೂಜಯೇದ್ಭಾಸ್ಕರಂ ಬುಧಃ ।
ಬ್ರಾಹ್ಮಣಾನ್ದಿವ್ಯಭೋಜ್ಯೇನ ಭೋಜಯಿತ್ವಾಽಥ ಶಕ್ತಿತಃ ॥ ೨೨ ॥
ಏವಂ ಯಃ ಕುರುತೇ ಸಮ್ಯಕ್ಸಾಂಬಾದಿತ್ಯಸ್ಯ ಪೂಜನಂ ।
ಸಮ್ಯಕ್ಛ್ರದ್ಧಾಸಮಾಯುಕ್ತಃ ಸಂಪ್ರಾಪ್ಸ್ಯತ್ಯಖಿಲಂ ಫಲಂ ॥ ೨೩ ॥
ಈಶ್ವರ ಉವಾಚ :—
ಏವಮುಕ್ತ್ವಾ ಸಹಸ್ರಾಂಶುಸ್ತತ್ರೈವಾಂತರಧೀಯತ ।
ಸಾಂಬೋಽಪಿ ನಿರ್ಜರೋ ಭೂತ್ವಾ ದ್ವಾರಕಾಂ ಪುನರಾಗಮತ್ ॥ ೨೪ ॥

---

೧೯. ನಾನು ಹೀಗೆ ಹನ್ನೆರಡು ಮೂರ್ತಿಗಳಲ್ಲಿ ನೆಲಸಿ ಪ್ರಭಾಸಕ್ಷೇತ್ರದ ಮಧ್ಯದಲ್ಲಿ ಸಾಂಬಾದಿತ್ಯನೆಂದು ಪ್ರಸಿದ್ಧನಾಗಿ ಅನೇಕ ಮನ್ವಂತರಗಳವರೆಗೆ ನೆಲಸಿರುತ್ತೇನೆ.

೨೦-೨೨. ಯಾದವಶ್ರೇಷ್ಠನಾದ ಎಲೈ ಸಾಂಬನೇ! ಮಾಘಶುಕ್ಲ ಪಂಚಮಿಯ ದಿನ ಒಂದು ಭೋಜನದಿಂದಲೂ, ಷಷ್ಠಿಯದಿನ ರಾತ್ರಿಯೂ ಸಪ್ತಮೀ ದಿನ ದಿನವೆಲ್ಲ ಉಪವಾಸದಿಂದಲೂ ಸಾಂಬಾದಿತ್ಯನನ್ನು ರಕ್ತಚಂದನ, ಕಣಿಗಲೆ ಹೂವು ಕುಂದರಕ ಧೂಪ ಇವುಗಳಿಂದಲೂ ಅರ್ಚಿಸಿ ಬ್ರಾಹ್ಮಣರಿಗೆ ಶಕ್ತ್ಯನುಸಾರ ದಿವ್ಯಭೋಜನವನ್ನು ಮಾಡಿಸಬೇಕು.

೨೩. ಹೀಗೆ ಸಾಂಬಾದಿತ್ಯನನ್ನು ಶ್ರದ್ಧೆಯಿಂದ ಶಾಸ್ತ್ರೋಕ್ತ ವಿಧಿಯಿಂದ ಚೆನ್ನಾಗಿ ಪೂಜಿಸುವ ಮಾನವನು ಸಂಪೂರ್ಣ ಫಲವನ್ನು ಪಡೆಯುವನು.

೨೪. ಈಶ್ವರನು ಹೇಳುತ್ತಾನೆ :—ಆದಿತ್ಯನು ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನವಾದನು. ಸಾಂಬನೂ ಜರಾರಹಿತನಾಗಿ ದ್ವಾರಕೆಗೆ ಮರಳಿ ಬಂದನು.

ಇತ್ಯೇತತ್ಕಥಿತಂ ದೇವಿ ಸಾಂಬಾದಿತ್ಯಮಹೋದಯಂ ।
ಶ್ರುತಂ ಹರತಿ ಪಾಪಾನಿ ತಥಾऽऽರೋಗ್ಯಂ ಪ್ರಯಚ್ಛತಿ ॥ ೭೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಾಂಬಾದಿತ್ಯಮಾಹಾತ್ಮ್ಯವರ್ಣನಂ ನಾಮ
॥ ಏಕೋತ್ತರಶತತಮೋಽಧ್ಯಾಯಃ ॥

---

೭೫. ದೇವಿ! ಹೀಗೆ ಸಾಂಬಾದಿತ್ಯನ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಕೇಳಿದವನಿಗೆ ಸೂರ್ಯನು ಪಾಪವನ್ನು ನೀಗಿಸಿ ಆರೋಗ್ಯವನ್ನು ಕೊಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಾಂಬಾದಿತ್ಯಮಾಹಾತ್ಮ್ಯವರ್ಣನವೆಂಬ
ನೂರೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವ್ಯಶೀತ್ಯುತ್ತರಶತತಮೋಽಧ್ಯಾಯಃ

ಕಂಟಕಶೋಧಿನೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—
ತತೋ ಗಚ್ಛೇನ್ಮಹಾದೇವಿ ದೇವೀಂ ಕಂಟಕಶೋಧಿನೀಂ ।
ತಸ್ಯೈವೋತ್ತರದಿಗ್ಭಾಗೇ ಧನುರ್ದ್ವಿತಯಸಂಸ್ಥಿತಾಂ ॥ ೧ ॥
ಮಹಿಷಘ್ನೀಂ ಮಹಾಕಾಯಾಂ ಬ್ರಹ್ಮದೇವರ್ಷಿಪೂಜಿತಾಂ ।
ಪುರಾ ಯೇ ಕಲ್ಮಷೋಪೇತಾ ದಾನವಾ ದೇವಕಂಟಕಾಃ ॥ ೨ ॥
ಯುಗೇ ಯುಗೇ ಶೋಧಯೇತ್ತಾಂಸ್ತೇನ ಕಂಟಕಶೋಧಿನೀ ।
ಆಶ್ವಯುಕ್ಛುಕ್ಲಪಕ್ಷೇ ತು ನವಮ್ಯಾಂ ತಾಮಥಾರ್ಚಯೇತ್ ॥ ೩ ॥
ಪಶುಪುಷ್ಪೋಪಹಾರೈಶ್ಚ ದೀಪಧೂಪೈಸ್ತಥೋತ್ತಮೈಃ ।
ತಸ್ಯಾರಯೋ ನ ಜಾಯಂತೇ ಯಾವದ್ವರ್ಷಂ ವರಾನನೇ ॥ ೪ ॥
ಯಸ್ತಾಂ ಪಶ್ಯತಿ ಸದ್ಭಕ್ತ್ಯಾ ಭೂತಾಯಾ ನಿತ್ಯಮೇವ ವಾ ।
ತಂ ಪುತ್ರಮಿವ ಕಲ್ಯಾಣೀ ಸಂರಕ್ಷತಿ ನ ಸಂಶಯಃ ॥ ೫ ॥

ಕನ್ನಡದ ಅನುವಾದ

ಕಂಟಕಶೋಧಿನೀಮಾಹಾತ್ಮ್ಯವರ್ಣನ

೧–೪. ಈಶ್ವರನು ಹೇಳುತ್ತಾನೆ :—ಎಲೌ ಮಹಾದೇವಿಯೆ ! ಬಳಿಕ ಸಾಂಬಾದಿತ್ಯನ ಉತ್ತರದಿಕ್ಕಿನಲ್ಲಿ ಎರಡು ಬಿಲ್ಲುಗಳ ದೂರದಲ್ಲಿರುವವಳೂ, ಮಹಿಷಾಸುರನನ್ನು ವಧಿಸಿದವಳೂ, ಮಹಾಶರೀರವುಳ್ಳವಳೂ, ಬ್ರಹ್ಮರ್ಷಿ, ದೇವರ್ಷಿಗಳಿಂದ ಅರ್ಚಿತಳಾದವಳೂ ಆದ ಕಂಟಕ ಶೋಧಿನಿಯ ಸನ್ನಿಧಿಗೆ ಹೋಗಬೇಕು. ಪಾಪಿಗಳೂ, ದೇವಶತ್ರುಗಳೂ ಆದ ದಾನವರನ್ನು ಪ್ರತಿಯುಗದಲ್ಲಿಯೂ ಕೊಲ್ಲುವುದರಿಂದ ಅವಳು ಕಂಟಕ ಶೋಧಿನಿಯೆಂಬ ಹೆಸರನ್ನು ಪಡೆದಿರುವಳು. ಆಶ್ವಯುಜ ಶುಕ್ಲಪಕ್ಷ ನವಮಿಾದಿನ ಅವಳನ್ನು, ಪಶು, ಪುಷ್ಪ, ದೀಪ, ಧೂಪಗಳಿಂದ ಪೂಜಿಸುವವನಿಗೆ ಆ ವರ್ಷವೆಲ್ಲ ಶತ್ರುಬಾಧೆಯಿರುವುದಿಲ್ಲ.

೫. ಕೃಷ್ಣಪಕ್ಷ ಚತುರ್ದಶೀದಿನ ಅಥವಾ ನಿತ್ಯವೂ ಅವಳನ್ನು ದರ್ಶನಮಾಡಿದ ಮಾನವನನ್ನು ಆ ದೇವಿಯು ತನ್ನ ಮಗನನ್ನು ಎಂತೋ ಅಂತು ಕಾಪಾಡುವಳು.

ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಪಾಪನಾಶನಂ ।
ದೇವಿ ಕಂಟಕಶೋಧಿನ್ಯಾಃ ಶ್ರುತಂ ರಕ್ಷಾಕರಂ ಪರಂ ॥ ೬ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಂಟಕಶೋಧಿನೀಮಾಹಾತ್ಮ್ಯವರ್ಣನಂ ನಾಮ
ದ್ವ್ಯುತ್ತರಶತತಮೋಽಧ್ಯಾಯಃ

---

೬. ದೇವಿ! ಹೀಗೆ ಕಂಟಕಶೋಧನಿಯ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳಿದವನನ್ನು ಆಕೆಯು ಕಾಪಾಡುವಳು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಂಟಕಶೋಧಿನೀಮಾಹಾತ್ಮ್ಯ ವರ್ಣನವೆಂಬ
ನೂರೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರ್ಯಧಿಕಶತತಮೋಽಧ್ಯಾಯಃ

ಕಪಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇದ್ವರಾರೋಹೇ ಕಪಾಲೇಶ್ವರಮುತ್ತಮಂ ।
ತಸ್ಯಾ ಉತ್ತರದಿಗ್ಭಾಗೇ ಸುರಗಂಧರ್ವಪೂಜಿತಂ ॥ ೧ ॥
ಪುರಾ ಯಜ್ಞೇ ವರ್ತಮಾನೇ ದಕ್ಷರಾಜಸ್ಯ ಧೀಮತಃ ।
ಉಪವಿಷ್ಟೇಷು ವಿಪ್ರೇಷು ಹೂಯಮಾನೇ ಹುತಾಶನೇ ॥ ೨ ॥
ಜಾಲ್ಮರೂಪಧರೋ ಭೂತ್ವಾ ಶಂಕರಸ್ತತ್ರ ಚಾಽಽಗತಃ ।
ಜೀರ್ಣಕಂಥಾನ್ವಿತೋ ದೇವಿ ಮಲವಾನ್ ಧೂಲಿಧೂಸರಃ ॥ ೩ ॥
ಅಥ ತೇ ಬ್ರಾಹ್ಮಣಾಃ ಕ್ರುದ್ಧಾ ದೃಷ್ಟ್ವಾ ತಂ ಜಾಲ್ಮರೂಪಿಣಂ ।
ಕಪಾಲಧಾರಿಣಂ ಸರ್ವೇ ಧಿಕ್ಛಬ್ದೈಸ್ತಂ ಜಗರ್ಹಿರೇ ॥ ೪ ॥
ಅಸಕೃತ್ಪಾಪ ಪಾಪೇತಿ ಗಚ್ಛ ಗಚ್ಛ ನರಾಧಮ ।
ಯಜ್ಞವೇದಿರ್ನ ಚಾರ್ಹಾ ಹಿ ಮಾನುಷಾಸ್ಥಿಧರಸ್ಯ ತೇ ॥ ೫ ॥

ಕನ್ನಡದ ಅನುವಾದ

ಕಪಾಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಆ ಕಂಟಕಶೋಧಸಿಯ ಉತ್ತರದಲ್ಲಿ ಸುರ ಗಂಧರ್ವರು ಪೂಜಿಸಿರುವ ಕಪಾಲೇಶ್ವರನೆಡೆಗೆ ಹೋಗಬೇಕು.

೨–೩. ಹಿಂದೆ ದಕ್ಷಯಜ್ಞವು ನಡೆಯುತ್ತಿರಲು, ಬ್ರಾಹ್ಮಣರು ಕುಳಿತಿರಲು ಅಗ್ನಿಯು ಹೋಮಿಸಲ್ಪಡುತ್ತಿರಲು ಶಂಕರನು ಹಳೆಯ ಕಂಥೆಯನ್ನು ಧರಿಸಿ ಧೂಳಿನಿಂದ ಮಲಿನನೂ, ಆಗಿ ಅವಿವೇಕಿಯ ರೂಪವನ್ನು ತಾಳಿ ಅಲ್ಲಿಗೆ ಬಂದನು.

೪. ಬ್ರಾಹ್ಮಣರು ಕಪಾಲವನ್ನು ಧರಿಸಿದ ಅವನನ್ನು ಕಂಡು ಕುಪಿತರಾಗಿ ಛೀ ಎಂದು ನಿಂದಿಸಿದರು.

೫. ಇಷ್ಟೆಯಲ್ಲದೆ ಅವರು ಅನೇಕಸಾರಿ "ಪಾಪಿಷ್ಠ ! ನರಾಧಮ ! ಮನುಷ್ಯನ ಮೂಳೆಯನ್ನು ಧರಿಸಿದ ನಿನಗೆ ಯಜ್ಞವೇದಿಯ ಪ್ರವೇಶವು ಯುಕ್ತವಲ್ಲ." ಎಂದು ಗದರಿಸಿದರು.

ಅಥ ಪ್ರಹಸ್ಯ ಭಗವಾನ್ ಯಜ್ಞವೇದ್ಯಾಂ ಸುರೇಶ್ವರಿ ।
ಕ್ಷಿಪ್ತ್ವಾ ಕಪಾಲಂ ನಷ್ಟೋಽಸೌ ನ ಸ ಜ್ಞಾತೋ ಮುನೀಶಿಭಿಃ ॥ ೬ ॥
ತಸ್ಮಿನ್ನಷ್ಟೇ ಕಪಾಲಂ ತತ್ಕ್ಷಿಪ್ತಂ ಮಂಡಪಬಾಹ್ಯತಃ ।
ತಥಾಽನ್ಯತ್ತತ್ರ ಸಂಜಾತಂ ತದ್ರೂಪಂ ಚ ವರಾನನೇ ॥ ೭ ॥
ಕ್ಷಿಪ್ತಂ ಕ್ಷಿಪ್ತಂ ಪುನಸ್ತತ್ರ ಜಾಯತೇ ಚ ಮಹೀತಲೇ ।
ಏವಂ ಶತಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ॥ ೮ ॥
ತತ್ರ ಕ್ಷಿಪ್ತಾನಿ ಜಾತಾನಿ ತತಸ್ತೇ ವಿಸ್ಮಯಾನ್ವಿತಾಃ ।
ಅಥೋಚುರ್ಮುನಯಃ ಸರ್ವೇ ನಿರ್ವಿಣ್ಣಾಶ್ಚಾಽಸ್ಯ ಚೇಷ್ಟಿತಂ ॥ ೯ ॥
ಕೋಽನ್ಯೋ ದೇವಾನ್ಮಹಾದೇವಾದ್ಗಂಗಾಕ್ಲಾಳಿತಶೇಖರಾತ್ ।
ಸಮರ್ಥ ಈದೃಶಂ ಕರ್ತುಮಸ್ಮಿನ್ಯಜ್ಞೇ ವಿಶೇಷತಃ ॥ ೧೦ ॥
ತತಸ್ತೇ ವಿವಿಧೈಃ ಸ್ತೋತ್ರೈಃ ಸ್ತುವಂತೋ ವೃಷಭಧ್ವಜಂ ।
ಹೋಮಂ ಚಕ್ರುರ್ಮಹುರ್ವಹ್ನೌ ಮಂತ್ರೈಸ್ತೈಃ ಶತರುದ್ರಿಯೈಃ ॥ ೧೧ ॥
ತತಃ ಪ್ರತ್ಯಕ್ಷತಾಂ ಪ್ರಾಪ್ತಸ್ತೇಷಾಂ ದೇವೋ ಮಹೇಶ್ವರಃ ।
ತತಸ್ತೇ ವಿವಿಧೈಃ ಸ್ತೋತ್ರೈಃ ಸ್ತುಷ್ಟುವುಃ ಶೂಲಪಾಣಿನಂ ।
ವೇದೋಕ್ತಮಂತ್ರೈರ್ವಿವಿಧೈಃ ಪುರಾಣೋಕ್ತೈಸ್ತಥೈವ ಚ ॥ ೧೨ ॥

೬-೭. ತರುವಾಯ ಶ್ರೀ ಮಹೇಶ್ವರನು ನಕ್ಕು ಯಜ್ಞವೇದಿಯಲ್ಲಿ ಕಪಾಲವನ್ನೆಸೆದು ಅದೃಶ್ಯನಾದನು. ಅವನನ್ನು ಜ್ಞಾನಿಗಳೂ ಇಂಥವನೆಂದು ತಿಳಿಯಲಿಲ್ಲ.

೮. ಪ್ರಿಯಳೆ! ಶಂಕರನು ಅದೃಶ್ಯನಾಗಲು ಬ್ರಾಹ್ಮಣರು ಆ ಕಪಾಲವನ್ನು ಮಂಡಪದ ಹೊರಗೆ ಎಸೆದರು. ಬಳಿಕ ಅಂತಹ ಮತ್ತೊಂದು ಕಪಾಲವು ಅಲ್ಲಿ ಉದ್ಭವಿಸಿತು.

೯-೧೧. ಅವರು ಅಲ್ಲಿ ಆವಿರ್ಭವಿಸಿದ ಕಪಾಲಗಳನ್ನೆಲ್ಲ ಎಸೆಯುತ್ತಿದ್ದರೂ ಭೂಮಿಯಿಂದ ಮತ್ತೆ ಮತ್ತೆ ಕಪಾಲಗಳು ಹುಟ್ಟಿಬರುತ್ತಿದ್ದವು. ಹೀಗೆ ಅನೇಕ ಅರ್ಬುದ ಸಂಖ್ಯೆಯ ಕಪಾಲಗಳನ್ನು ಹೊರಗೆ ಎಸೆದರೂ ಮರಳಿ ಕಪಾಲಗಳು ಹುಟ್ಟುತ್ತಿರುವುದನ್ನು ನೋಡಿ ಆ ಮುನಿಗಳು ಆಶ್ಚರ್ಯಗೊಂಡು ನಿರ್ವಿಣ್ಣರಾಗಿ ಈ ಯಜ್ಞದಲ್ಲಿ ಗಂಗಾಧರನಾದ ಮಹೇಶ್ವರನಿಗಿಂತ ಇಂತಹ ಕೆಲಸವನ್ನು ಮಾಡಲು ಬೇರೆ ಯಾರುಶಕ್ತರು? ಎಂದಾಲೋಚಿಸಿ ಆ ಮಹಾದೇವನನ್ನು ವಿವಿಧ ಸ್ತೋತ್ರಗಳಿಂದ ಸ್ತುತಿಸುತ್ತ ಅಗ್ನಿಯಲ್ಲಿ ಶತರುದ್ರಿಯ ಮಂತ್ರಗಳಿಂದ ಹೋಮಿಸಿದರು.

೧೨. ಬಳಿಕ ಮಹೇಶ್ವರನು ಅವರಿಗೆ ಪ್ರತ್ಯಕ್ಷನಾಗಲು ಅವರು ಅವನನ್ನು ನಾನಾವಿಧಸ್ತೋತ್ರಗಳಿಂದಲೂ, ವೇದೋಕ್ತಮಂತ್ರಗಳಿಂದಲೂ, ಪುರಾಣೋಕ್ತ ಮಂತ್ರಗಳಿಂದಲೂ, ಸ್ತೋತ್ರಮಾಡಿದರು.

ಋಷಯ ಊಚುಃ :—

ಓಂ ನಮೋ ಮೂಲಪ್ರಕೃತಯೇ ಅಜಿತಾಯ ಮಹಾತ್ಮನೇ ।
ಅನಾವೃತಾಯ ದೇವಾಯ ನಿಃಸ್ಪೃಹಾಯ ನಮೋನಮಃ ॥ ೧೩ ॥
ನಮ ಆದ್ಯಾಯ ಬೀಜಾಯ ಆರ್ಷೇಯಾಯ ಪ್ರವರ್ತಿನೇ ।
ಅನಂತರಾಯ ಚೈಕಾಯ ಅವ್ಯಕ್ತಾಯ ನಮೋನಮಃ ॥ ೧೪ ॥
ನಾನಾವಿಚಿತ್ರಭುಜಗಾಂಗದಭೂಷಣಾಯ
ಸರ್ವೇಶ್ವರಾಯ ವಿರಜಾಯ ನಮೋ ವರಾಯ ।
ವಿಶ್ವಾತ್ಮನೇ ಪರಮಕಾರಣಕಾರಣಾಯ
ಫುಲ್ಲಾರವಿಂದವಿಪುಲಾಯತಲೋಚನಾಯ ॥ ೧೫ ॥
ಅದೃಶ್ಯಮವ್ಯಕ್ತಮನಾದಿಮವ್ಯಯಂ
ಯದಕ್ಷರಂ ಬ್ರಹ್ಮ ವದಂತಿ ಸರ್ವಗಂ ।
ನಿಶಾಮ್ಯ ಯಂ ಮೃತ್ಯುಮುಖಾತ್ ಪ್ರಮುಚ್ಯತೇ
ತಮಾದಿದೇವಂ ಶರಣಂ ಪ್ರಪದ್ಯೇ ॥ ೧೬ ॥

---

೧೩. ಋಷಿಗಳು ಹೇಳುತ್ತಾರೆ :—ಮೂಲಪ್ರಕೃತಿರೂಪನೂ, ಯಾರಿಂದಲೂ ಜಯಿಸಲ್ಪಡದವನೂ, ಮಹಾತ್ಮನೂ, ಆವರಣವಿಲ್ಲದವನೂ ಆಶೆಯಿಲ್ಲದವನೂ ಆದ ಓ ಮಹೇಶ್ವರಾ ! ನಿನಗೆ ನಮಸ್ಕಾರವು.

೧೪. ಅನಾದಿಯೂ, ಮೂಲಕಾರಣನೂ, ಲೋಕ ಪ್ರವರ್ತಕನೂ, ಆನಂದ ಸಾಂದ್ರನೂ, ಅವ್ಯಕ್ತನೂ ಆದ ಎಲೈ ಶಂಕರನೆ ! ನಿನಗೆ ನಮಸ್ಕಾರವು.

೧೫. ಬಗೆಬಗೆಯ ನಾಗಗಳಿಂದ ಅಲಂಕಾರಗೊಂಡವನೂ, ಸರ್ವೇಶ್ವರನೂ, ದೋಷರಹಿತನೂ, ಉತ್ತಮನೂ, ಪ್ರಪಂಚರೂಪನೂ, ಉತ್ತಮಕಾರಣಗಳಿಗೆ ಕಾರಣನೂ, ಅರಳಿದ ಕಮಲಗಳಂತೆ ಕಣ್ಣುಗಳುಳ್ಳವನೂ ಆದ ಓ ಶಂಕರ! ನಿನಗೆ ನಮಸ್ಕಾರವು.

೧೬. ವೇದಗಳು ಯಾವನನ್ನು ಅದೃಶ್ಯನನ್ನಾಗಿಯೂ, ಅವ್ಯಕ್ತನನ್ನಾಗಿಯೂ, ಆದಿಯಿಲ್ಲದವನನ್ನಾಗಿಯೂ. ವಿಕಾರರಹಿತನನ್ನಾಗಿಯೂ, ನಾಶವಿಲ್ಲದವನನ್ನಾಗಿಯೂ ಸರ್ವವ್ಯಾಪಿಯನ್ನಾಗಿಯೂ ಹೇಳುವವೋ, ಯಾವನ ಸಾಕ್ಷಾತ್ಕಾರವನ್ನು ಪಡೆದವನು ಮರಣ ರಹಿತನಾಗುವನೊ, ಆ ಶಂಕರನನ್ನು ಮರೆಹೋಗುವೆವು.

ಏವಂ ಸ್ತುತಸ್ತದಾ ಸರ್ವೈರ್ಋಷಿಭಿರ್ಗತಕಲ್ಮಷೈಃ ।
ತತಸ್ತುಷ್ಟೋ ಮಹಾದೇವಸ್ತೇಷಾಂ ಪ್ರತ್ಯಕ್ಷತಾಂ ಗತಃ ।
ಅಬ್ರವೀತ್ತಾನೃಷೀನ್ದೇವೋ ವೃಣುಧ್ವಂ ವರಮುತ್ತಮಂ ॥ ೧೭ ॥
ಬ್ರಾಹ್ಮಣಾ ಊಚುಃ :—
ಯದಿ ತುಷ್ಟೋಽಸಿ ನೋ ದೇವ ಸ್ಥಾನೇಽಸ್ಮಿನ್ನಿರತೋ ಭವ ।
ಅಸಂಖ್ಯಾತಾನಿ ಯಸ್ಮಾಚ್ಚ ಕಪಾಲಾನಿ ಸುರೇಶ್ವರ ॥ ೧೮ ॥
ಪುನಃ ಪುನಃ ಪ್ರವೃತ್ತಾನಿ ವ್ಯಪನೀತಾನ್ಯಪಿ ಪ್ರಭೋ ।
ಅಸ್ಮಿನ್ನಸಂಶಯಂ ಸ್ಥಾನೇ ಕಪಾಲೇಶ್ವರನಾಮಭೃತ್ ॥ ೧೯ ॥
ಸ್ವಯಂ ತು ಲಿಂಗಂ ದೇವೇಶ ತಿಷ್ಠೇನ್ಮನ್ವಂತರಾಂತರಂ ।
ಕಪಾಲೇಶ್ವರನಾಮ್ನಾ ತ್ವಮಸ್ಮಿನ್ ಸ್ಥಾನೇ ಸ್ಥಿತಿಂ ಕುರು ॥ ೨೦ ॥
ಯೇಽತ್ರ ತ್ವಾಂ ಪೂಜಯಿಷ್ಯಂತಿ ಧೂಪಮಾಲ್ಯಾನುಲೇಪನೈಃ ।
ತೇಷಾಂ ತು ಪರಮಂ ಸ್ಥಾನಂ ಯದ್ದೇವೈರಪಿ ದುರ್ಲಭಂ ॥ ೨೧ ॥
ಬಾಢಮಿತ್ಯೇವಮುಕ್ತ್ವಾಽಸೌ ಸ್ಥಿತಸ್ತತ್ರ ಮಹೇಶ್ವರಃ ।
ಪುನಃ ಪ್ರವರ್ತಿತೋ ಯಜ್ಞೋ ನಿಶಾನಾಥಸ್ಯ ಭಾಮಿನಿ ॥ ೨೨ ॥
ತಸ್ಮಿನ್ ದೃಷ್ಟೇ ಲಭೇನ್ಮರ್ತ್ಯೋ ವಾಜಿಮೇಧಫಲಂ ಪ್ರಿಯೇ ।
ಮುಚ್ಯತೇ ಪಾತಕೈಃ ಸರ್ವೈಃ ಪೂರ್ವಜನ್ಮಾರ್ಜಿತೈರಪಿ ॥ ೨೩ ॥

---

೧೭. ನಿರ್ದೋಷಿಗಳಾದ ಮುನಿಗಳು ಹೀಗೆ ಸ್ತುತಿಸಲು ಸಂತುಷ್ಟನಾದ ಮಹಾದೇವನು ಅವರಿಗೆ ಪ್ರತ್ಯಕ್ಷನಾಗಿ ವರವನ್ನು ಕೇಳಿಕೊಳ್ಳಿರಿ ಎಂದನು.

೧೮–೨೦. ಬ್ರಾಹ್ಮಣರು ಹೇಳುತ್ತಾರೆ:—ಶಂಕರ! ನೀನು ಸಂತುಷ್ಟನಾಗಿದ್ದರೆ ಈ ಸ್ಥಳದಲ್ಲಿ ನೆಲೆಸು. ಇಲ್ಲಿ ಅಸಂಖ್ಯಾಕವಾದ ಕಪಾಲಗಳು ಹುಟ್ಟಿ ಎಸೆಯಲ್ಪಟ್ಟರೂ ಮೇಲೆ ಮೇಲೆ ಕಪಾಲಗಳು ಹುಟ್ಟುತ್ತಲೇ ಇದ್ದುದರಿಂದ ನೀನು ಕಪಾಲೇಶ್ವರನೆಂಬ ಹೆಸರಿನಿಂದ ಪ್ರಸಿದ್ಧನಾಗಿ ಈ ಲಿಂಗದಲ್ಲಿ ಸನ್ನಿಹಿತನಾಗಿರು.

೨೧. ಧೂಪ, ಮಾಲ್ಯ, ಗಂಧಗಳಿಂದ ನಿನ್ನನ್ನು ಪೂಜಿಸುವವರಿಗೆ ದೇವದುರ್ಲಭವಾದ ಉತ್ತಮಸ್ಥಾನವು ಲಭಿಸಲಿ.

೨೨. ಈಶ್ವರನು ಅದನ್ನು ಒಪ್ಪಿ ಅಲ್ಲಿಯೇ ನೆಲೆಸಿದನು. ಮರಳಿ ಚಂದ್ರನು ಮಾಡುತ್ತಿದ್ದ ಯಜ್ಞವು ಮುಂದುವರಿಯಿತು.

೨೩. ಪ್ರಿಯಳೆ! ಮನುಷ್ಯನು ಕಪಾಲೇಶ್ವರನನ್ನು ದರ್ಶನಮಾಡಿದರೆ ಅಶ್ವಮೇಧಯಾಗದ ಫಲವು ದೊರೆಯುವುದು. ಮತ್ತು ಹಿಂದಿನ ಜನ್ಮಗಳಲ್ಲಿ ಮಾಡಿದ ಸಮಸ್ತ ಪಾಪಗಳಿಂದಲೂ ಅವನು ಮುಕ್ತನಾಗುವನು.

ಇದಂ ಮಾಹಾತ್ಮ್ಯಮಖಿಲಮಭೂತ್ಸ್ವಾಯಂಭುವಾಂತರೇ ।
ವೈವಸ್ವತೇ ಪುನಶ್ಚಾಸ್ಯದ್ದಕ್ಷಯಜ್ಞವಿನಾಶಕೃತ್ ॥ ೨೪ ॥
ಕಪಾಲೀತಿ ಮಹೇಶಾನೋ ದಕ್ಷೇಣೋಕ್ತಃ ಪುರಾ ಹರಃ ।
ತೇನ ಯಜ್ಞಸ್ಯ ವಿಧ್ವಂಸಂ ಕಪಾಲೀ ತಮಥಾಕರೋತ್ ।
ಕಪಾಲೇಶ್ವರನಾಮೇತಿ ಸ್ಥಿತೋಽಸ್ಮಿನ್ಮಾನವಾಂತರೇ ॥ ೨೫ ॥
ಅಥಾಸ್ಯ ನಾಮ ದೇವಸ್ಯ ಸೂರ್ಯಸಾವರ್ಣಿಕೇಽಂತರೇ ।
ಭವಿಷ್ಯತಿ ವರಾರೋಹೇ ನಾಮ ತತ್ತ್ವೇಶ್ವರೇತಿ ಚ ॥ ೨೬ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ರುದ್ರದೈವತಂ ।
ಪಾಪಘ್ನಂ ಸರ್ವಜಂತೂನಾಂ ಪಶುಪಾಶವಿಮೋಕ್ಷಣಂ ॥ ೨೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಪಾಲೇಶ್ವರಮಾಹಾತ್ಮ್ಯವರ್ಣನಂನಾಮ
॥ತ್ರ್ಯಧಿಕಶತತಮೋಽಧ್ಯಾಯಃ॥

---

೨೪. ಈ ಮಾಹಾತ್ಮ್ಯವೆಲ್ಲ ಸ್ವಾಯಂಭುವ ಮನ್ವಂತರದಲ್ಲಿ ನಡೆಯಿತು. ವೈವಸ್ವತ ಮನ್ವಂತರದಲ್ಲಿ ಮರಳಿ ಶಂಕರನು ದಕ್ಷಯಜ್ಞವನ್ನು ನಾಶಗೊಳಿಸಿದನು.

೨೫. ಹಿಂದೆ ದಕ್ಷನು ಮಹೇಶ್ವರನನ್ನು ಕಪಾಲಿಯೆಂದು ಕರೆದನು. ಆದರಿಂದ ಕಪಾಲಧಾರಿಯಾದ ಈಶ್ವರನು ಆ ದಕ್ಷನ ಯಜ್ಞವನ್ನು ನಾಶಗೊಳಿಸಿ ಕಪಾಲೇಶ್ವರನೆಂದು ಈ ಮನ್ವಂತರದಲ್ಲಿ ವಿಖ್ಯಾತನಾದನು.

೨೬. ಪ್ರಿಯಳೆ! ಅನಂತರ ಸೂರ್ಯಸಾವರ್ಣಿಕ ಮನ್ವಂತರದಲ್ಲಿ ಈ ಕಪಾಲೇಶ್ವರನು ತತ್ತ್ವೇಶ್ವರನೆಂದು ಪ್ರಸಿದ್ಧನಾಗುವನು.

೨೭. ಹೀಗೆ ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವುದೂ, ಸಂಸಾರ ಬಂಧನವನ್ನು ಬಿಡಿಸುವುದೂ ಆದ ಮಹೇಶ್ವರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಪಾಲೇಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರಧಿಕಶತತಮೋಽಧ್ಯಾಯಃ

ಕೋಟೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕೋಟೀಶ್ವರಮನುತ್ತಮಂ ।
ತಸ್ಮಾದುತ್ತರತೋ ದೇವಿ ಕೋಟೀಶಮಿತಿ ವಿಶ್ರುತಂ ॥ ೧ ॥
ಪಾಪಘ್ನಂ ಸರ್ವಜಂತೂನಾಂ ಪಶುಪಾಶವಿಮೋಕ್ಷದಂ ।
ಪುರಾ ಪಾಶುಪತಾ ದೇವಿ ಕಪಾಲೇಶ್ವರಸನ್ನಿಧೌ ॥ ೨ ॥
ತಪಃ ಕುರ್ವಂತಿ ವಿಪುಲಂ ಭಸ್ಮೋದ್ಧೂಳಿತವಿಗ್ರಹಾಃ ।
ಜಟಾಮುಕುಟಸಂಯುಕ್ತಾ ಮುಂಜಮೇಖಲಧಾರಿಣಃ ॥ ೩ ॥
ಶಾಂತಃ ಸರ್ವೇ ಜಿತಕ್ರೋಧಾ ಬ್ರಾಹ್ಮಣಾಃ ಶಿವಯೋಗಿನಃ ।
ತಪಃ ಕುರ್ವಂತಿ ತತ್ರಸ್ಥಾ ವ್ಯಾಪ್ಯ ಕ್ಷೇತ್ರಂ ಚತುರ್ದಿಶಂ ॥ ೪ ॥
ಕೋಟಿಸಂಖ್ಯಾ ಮಹಾದೇವಿ ಮಂತ್ರಜಾಪ್ಯಪರಾಯಣಾಃ ।
ಸಮ್ಯಕ್ಸಂಸ್ಥಾಪ್ಯ ತೇ ಲಿಂಗಂ ಕಪಾಲೇಶಸಮೀಪಗಂ ॥ ೫ ॥

ಕನ್ನಡದ ಅನುವಾದ

ಕೋಟೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಆ ಕಪಾಲೇಶ್ವರನ ಉತ್ತರದಲ್ಲಿರುವ ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವುದೂ, ಬಂಧನವನ್ನು ಬಿಡಿಸಿ ಮೋಕ್ಷವನ್ನೀಯುವುದೂ ಆದ ಕೋಟೀಶ್ವರ ಲಿಂಗವನ್ನು ಹೊಂದಬೇಕು.

೨-೫. ದೇವಿ! ಹಿಂದೆ ಕಪಾಲೇಶ್ವರನ ಬಳಿಯಲ್ಲಿ ಭಸ್ಮಾನುಲಿಪ್ತವಾದ ಶರೀರವುಳ್ಳವರೂ, ಜಟಾ, ಕಿರೀಟಸಹಿತರೂ, ಮೌಂಜೀಮೇಖಲೆಗಳನ್ನು ಧರಿಸಿದವರೂ, ಶಾಂತರೂ, ಕ್ರೋಧವನ್ನು ಜಯಿಸಿದವರೂ, ಮಂತ್ರಜಪದಲ್ಲಿ ನಿರತರೂ. ಶಿವಯೋಗಿಗಳೂ ಆದ ಪಾಶುಪತಮತಾವಲಂಬಿಗಳಾದ ಕೋಟಿ ಬ್ರಾಹ್ಮಣರು ಕಪಾಲೇಶ್ವರನ ಸನ್ನಿಧಿಯಲ್ಲಿ ಶಿವಲಿಂಗವನ್ನು ಸ್ಥಾಪಿಸಿ ಆ ಕ್ಷೇತ್ರದ ನಾಲ್ಕು ದಿಕ್ಕುಗಳಲ್ಲಿಯೂ ತಪಸ್ಸನ್ನಾಚರಿಸಿದರು.

ತತಸ್ತೇ ಪೂಜಯಾಂಚಕ್ರುಸ್ತಲ್ಲಿಂಗಂ ಭಕ್ತಿಸಂಯುತಾಃ ।
ತತಸ್ತುಷ್ಟೋ ಮಹಾದೇವೋ ಮುಕ್ತಿಂ ತೇಷಾಂ ದದೌ ಹರಃ ॥ ೧ ॥
ಋಷಯಃ ಕೋಟಿಸಂಖ್ಯಾತಾಸ್ತಸ್ಮಿನ್ಸಿದ್ಧಾ ಯತಃ ಪ್ರಿಯೇ ।
ತೇನ ಕೋಟೀಶ್ವರಂ ಲಿಂಗಂ ನಾಮ್ನಾ ಖ್ಯಾತಂ ಧರಾತಲೇ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ಕೋಟೀಶ್ವರಮನಾಮಯಂ ।
ಸ ಕೋಟಿಮಂತ್ರಜಾಪಸ್ಯ ಫಲಂ ಪ್ರಾಪ್ಸ್ಯತಿ ಮಾನವಃ ॥ ೩ ॥
ಹಿರಣ್ಯಂ ತತ್ರ ದಾತವ್ಯಂ ಬ್ರಾಹ್ಮಣೇ ವೇದಪಾರಗೇ ।
ಕೋಟಿಹೋಮಫಲಂ ತಸ್ಯ ಸಮ್ಯಗ್ಯಾತ್ರಾಫಲಂ ಭವೇತ್ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕೋಟೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುರಧಿಕಶತತಮೋಽಧ್ಯಾಯಃ ॥

---

೧. ಅವರು ಭಕ್ತಿಯಿಂದ ಆ ಲಿಂಗವನ್ನು ಪೂಜಿಸಲು ಮಹಾದೇವನು ಸಂತುಷ್ಟನಾಗಿ ಅವರಿಗೆ ಮುಕ್ತಿಯನ್ನಿತ್ತನು.

೨. ಪ್ರಿಯಳೆ! ಕೋಟಿ ಮುನಿಗಳು ಇಲ್ಲಿ ತಪಸ್ಸಿದ್ಧಿಯನ್ನು ಪಡೆದುದರಿಂದ ಆ ಲಿಂಗವು ಈ ಭೂಮಿಯಲ್ಲಿ ಕೋಟೀಶ್ವರವೆಂದು ವಿಖ್ಯಾತವಾಯಿತು.

೩. ನಿತ್ಯನಾದ ಆ ಕೋಟೀಶ್ವರನನ್ನು ಪೂಜಿಸಿದ ಮಾನವನು ಕೋಟಿ ಮಂತ್ರ ಜಪಗಳ ಫಲವನ್ನು ಪಡೆಯುವನು.

೪. ಅಲ್ಲಿ ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ಚಿನ್ನವನ್ನು ದಾನ ಮಾಡಿದವನು ಕೋಟಿ ಹೋಮದ ಫಲವನ್ನೂ, ಯಾತ್ರಾಫಲವನ್ನೂ ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕೋಟೀಶ್ವರಮಾಹಾತ್ಮ್ಯವರ್ಣನವೆಂಬ
ನೂರನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾಧಿಕಶತತಮೋಽಧ್ಯಾಯಃ

ಬ್ರಹ್ಮಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥಾನ್ಯತ್ಸಂಪ್ರವಕ್ಷ್ಯಾಮಿ ರಹಸ್ಯಂ ಸ್ಥಾನಮುತ್ತಮಂ ।
ಸರ್ವಪಾಪಹರಂ ನೃಣಾಂ ವಿಸ್ತರಾತ್ಕಥಯಾಮಿ ತೇ ॥ ೧ ॥
ಪ್ರಧಾನದೇವಮಾಹಾತ್ಮ್ಯಂ ಮಾಹಾತ್ಮ್ಯಂ ಕಲ್ಪವಾಸಿನಾಂ ।
ಸೋಮೇಶೋ ದೈತ್ಯಹಂತಾ ಚ ಬಾಲರೂಪೀ ಪಿತಾಮಹಃ ॥ ೨ ॥
ಅರ್ಕಸ್ಥಲಸ್ತಥಾದಿತ್ಯಃ ಪ್ರಭಾಸಃ ಶಶಿಭೂಷಣಃ ।
ಏತೇ ಷಟ್ಪ್ರವರಾ ದೇವಾಃ ಕ್ಷೇತ್ರೇ ಪ್ರಾಭಾಸಿಕೇ ಸ್ಥಿತಾಃ ॥ ೩ ॥
ತೇಷಾಂ ದರ್ಶನಮಾತ್ರೇಣ ಕೃತಕೃತ್ಯಃ ಪ್ರಜಾಯತೇ ।
ಮುಚ್ಯತೇ ಪಾತಕೈರ್ಘೋರೈರಾಜನ್ಮಜನಿತೈರ್ಧ್ರುವಂ ॥ ೪ ॥

ದೇವ್ಯುವಾಚ :—

ಪೂರ್ವೇಷಾಮುಕ್ತದೇವಾನಾಂ ಮಾಹಾತ್ಮ್ಯಂ ಕಥಿತಂ ತ್ವಯಾ ।
ಪ್ರಭಾಸೇ ಬಾಲರೂಪೀತಿ ಯತ್ಪ್ರೋಕ್ತಂ ತತ್ಕಥಂ ವಚಃ ॥ ೫ ॥

ಕನ್ನಡದ ಅನುವಾದ

ಬ್ರಹ್ಮಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ತರುವಾಯ ಮನುಷ್ಯರ ಪಾಪವನ್ನು ನೀಗಿಸುವ ಉತ್ತಮಸ್ಥಾನವನ್ನೂ ಪ್ರಧಾನ ದೇವತೆಗಳ ಮಾಹಾತ್ಮ್ಯವನ್ನೂ, ಕಲ್ಪವಾಸಿಗಳ ಮಾಹಾತ್ಮ್ಯವನ್ನೂ ವಿಸ್ತಾರವಾಗಿ ಹೇಳುವೆನು. ಸೋಮೇಶ, ದೈತ್ಯಸೂದನ, ಬಾಲರೂಪಿಯಾದ ಬ್ರಹ್ಮ, ಅರ್ಕಸ್ಥಳಾದಿತ್ಯ, ಪ್ರಭಾಸ, ಮಹೇಶ್ವರ ಈ ಆರು ಮಂದಿ ದೇವತೆಗಳು ಪ್ರಭಾಸಕ್ಷೇತ್ರದಲ್ಲಿರುವರು.

೪. ಮನುಷ್ಯನು ಇವರ ದರ್ಶನದಿಂದ ಧನ್ಯನಾಗಿ ಜನ್ಮಮೊದಲ್ಗೊಂಡು ಮಾಡಿದ ಪಾಪದಿಂದ ನಿಶ್ಚಯವಾಗಿಯೂ ಮುಕ್ತನಾಗುವನು.

೫–೬. ದೇವಿಯು ಹೇಳುತ್ತಾಳೆ :—ದೇವೇಶ ! ನೀನು ಹೇಳಿದ ಈ ದೇವತೆಗಳ ಮಾಹಾತ್ಮ್ಯವನ್ನು ಹಿಂದೆಯೇ ನನಗೆ ತಿಳಿಸಿರುವೆ. ಆದರೆ ಇತಸ್ಥಳಗಳಲ್ಲಿ ವೃದ್ಧರೂಪ

ಅನ್ಯೇಷು ಸರ್ವಸ್ಥಾನೇಷು ವೃದ್ಧರೂಪೀ ಪಿತಾಮಹಃ ।
ಕಥಂ ಚ ಸಮನುಪ್ರಾಪ್ತೋ ಮಾಹಾತ್ಮ್ಯಂ ತಸ್ಯ ಕಿಂ ಸ್ಮೃತಂ ॥ ೬ ॥
ಕಥಂ ಸ ಪೂಜ್ಯೋ ದೇವೇಶ ಯಾತ್ರಾ ಕಾರ್ಯಾ ಕಥಂ ನೃಭಿಃ ।
ಏತದ್ವಿಸ್ತರತೋ ಬ್ರೂಹಿ ಪ್ರಸನ್ನೋ ಯದಿ ಮೇ ಪ್ರಭೋ ॥ ೭ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಮಾಹಾತ್ಮ್ಯಂ ಬ್ರಹ್ಮಸಂಭವಂ ।
ಯಸ್ಯ ಶ್ರವಣಮಾತ್ರೇಣ ಮುಚ್ಯತೇ ಸರ್ವಪಾತಕೈಃ ॥ ೮ ॥
ನಾಸ್ತಿ ಬ್ರಹ್ಮಸಮೋ ದೇವೋ ನಾಸ್ತಿ ಬ್ರಹ್ಮಸಮೋ ಗುರುಃ ।
ನಾಸ್ತಿ ಬ್ರಹ್ಮಸಮಂ ಜ್ಞಾನಂ ನಾಸ್ತಿ ಬ್ರಹ್ಮಸಮಂ ತಪಃ ॥ ೯ ॥
ತಾವದ್ಭ್ರಮಂತಿ ಸಂಸಾರೇ ದುಃಖಶೋಕಭಯಪ್ಲುತಾಃ ।
ನ ಭವಂತಿ ಸುರಜ್ಯೇಷ್ಠೇ ಯಾವದ್ಭಕ್ತಾಃ ಪಿತಾಮಹೇ ॥ ೧೦ ॥
ಸಮಾಸಕ್ತಂ ಯಥಾ ಚಿತ್ತಂ ಜಂತೋರ್ವಿಷಯಗೋಚರೇ ।
ಯದ್ಯೇವಂ ಬ್ರಹ್ಮಣೇ ನ್ಯಸ್ತಂ ಕೋ ನ ಮುಚ್ಯೇತ ಬಂಧನಾತ್ ॥ ೧೧ ॥

ದೇವ್ಯುವಾಚ :—

ಏವಂ ಮಾಹಾತ್ಮ್ಯಸಂಯುಕ್ತೋ ಯದಿ ಬ್ರಹ್ಮಾ ಜಗದ್ಗುರುಃ ।
ಪ್ರಾಭಾಸಿಕೇ ಮಹಾತೀರ್ಥೇ ಕಸ್ಮಿನ್ ಸ್ಥಾನೇ ತು ಸಂಸ್ಥಿತಃ ॥ ೧೨ ॥

ನಾಗಿರುವ ಬ್ರಹ್ಮನು ಈ ಪ್ರಭಾಸದಲ್ಲಿ ಬಾಲರೂಪಿಯಾಗಿರುವನೆಂದು ಹೇಳಿದೆಯಷ್ಟೆ. ಅದು ಹೇಗೆ ? ಅವನ ಮಾಹಾತ್ಮ್ಯವೇನು ?

೭. ನಾಥ! ನೀನು ಪ್ರಸನ್ನನಾಗಿದ್ದರೆ ಈ ಬ್ರಹ್ಮನನ್ನು ಹೇಗೆ ಪೂಜಿಸಬೇಕು ? ಯಾತ್ರೆಯನ್ನು ಹೇಗೆಮಾಡಬೇಕು ? ಇದನ್ನು ವಿಸ್ತಾರವಾಗಿ ನನಗೆ ಹೇಳು.

೮. ಈಶ್ವರನು ಹೇಳುತ್ತಾನೆ:—ದೇವಿ! ಕೇಳುವುದರಿಂದಲೇ ಸಕಲ ಪಾಪವನ್ನು ಪರಿಹರಿಸುವ ಬ್ರಹ್ಮನ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೯-೧೦. ಬ್ರಹ್ಮನಿಗೆ ಸಮನಾದ ದೇವತೆಯೂ, ಗುರುವೂ, ಜ್ಞಾನವೂ, ತಪಸ್ಸೂ ಇಲ್ಲ. ಸುರೋತ್ತಮನಾದ ಪಿತಾಮಹನಲ್ಲಿ ಭಕ್ತಿಯುಳ್ಳವನಾಗುವವರೆಗೆ ಮನುಷ್ಯನು ಸಂಸಾರದಲ್ಲಿ ದುಃಖಭಯಗಳಿಂದ ಸಹಿತನಾಗಿ ಸಂಚರಿಸುವನು.

೧೧. ಮನುಷ್ಯನು ವಿಷಯಗಳಲ್ಲಿ ಆಸಕ್ತನಾಗುವಂತೆ ಬ್ರಹ್ಮನಲ್ಲಿ ಮನವನ್ನಿಟ್ಟರೆ ಬಂಧನದಿಂದ ಅವಶ್ಯವಾಗಿ ಮುಕ್ತನಾಗುವನು.

೧೨. ದೇವಿಯು ಹೇಳುತ್ತಾಳೆ:—ಜಗದ್ಗುರುವಾದ ಬ್ರಹ್ಮನು ಇಂತಹ ಮಾಹಾತ್ಮ್ಯವುಳ್ಳವನಾದರೆ ಅವನು ಪ್ರಭಾಸ ಮಹಾತೀರ್ಥದಲ್ಲಿ ಯಾವ ಸ್ಥಳದಲ್ಲಿ ನೆಲೆಸಿರುವನು ?

ಕಿಮರ್ಥಮಾಗತಸ್ತತ್ರ ಕಸ್ಮಿನ್ಕಾಲೇ ಸುರೋತ್ತಮಃ ।
ಕಥಂ ಸ ಪೂಜ್ಯೋ ವಿಪ್ರೇಂದ್ರೈಸ್ತಿಥೌ ಕಸ್ಯಾಂ ಕ್ರಮಾದ್ವದ ॥ ೧೩ ॥
ಈಶ್ವರ ಉವಾಚ :—
ಸೋಮನಾಥಸ್ಯ ಐಶಾನ್ಯಾಂ ಸಾಂಬಾದಿತ್ಯಾಗ್ನಿಗೋಚರೇ ।
ಬ್ರಹ್ಮಣಃ ಪರಮಂ ಸ್ಥಾನಂ ಬ್ರಹ್ಮಲೋಕ ಇವಾಪರಃ ॥ ೧೪ ॥
ತಿಷ್ಠಂತೇ ಕಲ್ಪಸಂಸ್ಥಾ ಯೇ ತತ್ರ ಕಲ್ಪಾಂತವಾಸಿನಃ ।
ತತ್ರ ಸ್ಥಾನೇ ಸ್ಥಿತೋ ದೇವಿ ಬಾಲರೂಪೀ ಪಿತಾಮಹಃ ॥ ೧೫ ॥
ಜಗತ್ಪ್ರಭುರ್ಲೋಕಕರ್ತಾ ಸತ್ವಮೂರ್ತಿರ್ಮಹಾಪ್ರಭಃ ।
ಆಗತಶ್ಚಾಷ್ಟವರ್ಷಸ್ತು ಕ್ಷೇತ್ರೇ ಪ್ರಾಭಾಸಿಕೇ ಶುಭೇ ॥ ೧೬ ॥
ತತ್ರಾಽಕರೋತ್ತಪೋ ಘೋರಂ ದಿವ್ಯಾಬ್ದಾನಾಂ ಸಹಸ್ರಕಂ ।
ಸಂಸ್ಥಾಪ್ಯ ತು ಮಹಾಲಿಂಗಂ ಸಿಸೃಕ್ಷುರ್ವಿವಿಧಾಃ ಪ್ರಜಾಃ ॥ ೧೭ ॥
ತತಃ ಕಾಲಾಂತರೇಽತೀತೇ ಸೋಮೇನ ಪ್ರಾರ್ಥಿತೋ ವಿಭುಃ ।
ಕ್ಷಯರೋಗವಿಮುಕ್ತೇನ ಸಮ್ಯಕ್ಛ್ರದ್ಧಾನ್ವಿತೇನ ವೈ ॥ ೧೮ ॥

---

೧೩. ಆ ಬ್ರಹ್ಮನು ಪ್ರಭಾಸಕ್ಕೆ ಯಾವಾಗ ಏತಕ್ಕೆ ಬಂದನು ? ಬ್ರಾಹ್ಮಣರು ಯಾವ ತಿಥಿಯಲ್ಲಿ ಅವನನ್ನು ಹೇಗೆ ಪೂಜಿಸಬೇಕು ? ಅದನ್ನು ಹೇಳು.

೧೪. ಈಶ್ವರನು ಹೇಳುತ್ತಾನೆ :—ಸೋಮನಾಥನ ಈಶಾನ್ಯದಿಕ್ಕಿನಲ್ಲಿ ಸಾಂಬಾದಿತ್ಯನ ಆಗ್ನೇಯದಲ್ಲಿ ಬ್ರಹ್ಮಲೋಕದಂತಿರುವ ಬ್ರಹ್ಮನ ಉತ್ತಮಸ್ಥಾನವಿರುವುದು.

೧೫. ದೇವಿ ! ಅಲ್ಲಿ ಕಲ್ಪಾಂತವಾಸಿಗಳಾದ ದೇವತೆಗಳೂ ಬಾಲರೂಪಿಯಾದ ಬ್ರಹ್ಮನೂ ಇರುವರು.

೧೬. ಜಗದೊಡೆಯನೂ, ಲೋಕವನ್ನು ಸೃಷ್ಟಿಸುವವನೂ, ಸಾತ್ವಿಕ ದೇಹವುಳ್ಳವನೂ, ಅತಿಶಯ ಕಾಂತಿಯುಕ್ತವನೂ ಆದ ಬ್ರಹ್ಮನು ಎಂಟು ವರ್ಷ ವಯಸ್ಸುಳ್ಳವನಾಗಿ ಮಂಗಳಕರವಾದ ಪ್ರಾಭಾಸಿಕಕ್ಷೇತ್ರಕ್ಕೆ ಬಂದನು.

೧೭. ಅವನು ಅಲ್ಲಿ ನಾನಾವಿಧ ಪ್ರಜೆಗಳನ್ನು ಸೃಷ್ಟಿಸಲೋಸುಗ ಮಹೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿ ದಿವ್ಯ ಸಾವಿರ ವರ್ಷಕಾಲ ಘೋರ ತಪಸ್ಸನ್ನಾಚರಿಸಿದನು.

೧೮—೨೦. ಬಳಿಕ ಬಹು ಕಾಲ ಕಳೆಯಲು ಕ್ಷಯ ರೋಗದಿಂದ ಮುಕ್ತನಾದ ಚಂದ್ರನು ಶ್ರದ್ಧೆಯಿಂದ ಪ್ರಾಭಾಸಿಕ ಕ್ಷೇತ್ರದಲ್ಲಿ ಲಿಂಗವನ್ನು ಪ್ರತಿಷ್ಠೆ ಮಾಡುವುದಕ್ಕಾಗಿ

ಲಿಂಗಪ್ರತಿಷ್ಠಾಹೇತೋರ್ವೈ ಕ್ಷೇತ್ರೇ ಪ್ರಾಭಾಸಿಕೇ ಶುಭೇ ।
ಕೋಟಿಬ್ರಹ್ಮರ್ಷಿಭಿಃ ಸಾರ್ಧಂ ಸಹಿತೋ ವಿಶ್ವಕರ್ಮಣಾ ॥
ಕಾರಯಾಮಾಸ ವಿಧಿವತ್ಪ್ರತಿಷ್ಠಾಂ ಲಿಂಗಮುತ್ತಮಂ ॥ ೧೯ ॥
ಪ್ರತಿಷ್ಠಾಪ್ಯ ತತೋ ಲಿಂಗಂ ಸೋಮನಾಥಂ ವರಾನನೇ ।
ದಾಪಯಾಮಾಸ ವಿಪ್ರೇಭ್ಯೋ ಭೂರಿಶೋ ಯಜ್ಞದಕ್ಷಿಣಾಂ ॥ ೨೦ ॥
ಏವಂ ಪ್ರತಿಷ್ಠಿತಂ ಲಿಂಗಂ ಬ್ರಹ್ಮಣಾ ಲೋಕಕರ್ತೃಣಾ ।
ವರ್ಷಾಣಿ ಚಾತ್ರ ಜಾತಾನಿ ಪ್ರಭಾಸೇ ಬಾಲರೂಪಿಣಃ ॥ ೨೧ ॥
ಚತ್ವಾರಿಂಶದ್ದ್ವಯಂ ಚೈವ ಕ್ಷೇತ್ರಮಧ್ಯನಿವಾಸಿನಃ ।
ಏವಂ ಪರಾರ್ಧಮಗಮತ್ಪ್ರಭಾಸಕ್ಷೇತ್ರವಾಸಿನಃ ॥ ೨೨ ॥

ದೇವ್ಯುವಾಚ :—

ಬ್ರಹ್ಮಣೋ ದಿನಮಾನಂ ತು ಮಾಸವರ್ಷಸಹಸ್ರಕಂ ।
ತತ್ಸರ್ವಂ ವಿಸ್ತರಾದ್ಬ್ರೂಹಿ ಯಥಾಯುರ್ಬ್ರಹ್ಮಣಃ ಸ್ಮೃತಂ ॥ ೨೩ ॥

ಈಶ್ವರ ಉವಾಚ :—

ಪರಮಾಯುಃ ಸ್ಮೃತೋ ಬ್ರಹ್ಮಾ ಪರಾರ್ಧಂ ತಸ್ಯ ವೈ ಗತಂ ।
ಪ್ರಭಾಸಕ್ಷೇತ್ರಸಂಸ್ಥಸ್ಯ ದ್ವಿತೀಯಂ ಭವತೇಽಧುನಾ ॥ ೨೪ ॥

ಬೇಡಿಕೊಳ್ಳಲು ಬ್ರಹ್ಮನು ಕೋಟಿ ಬ್ರಹ್ಮರ್ಷಿಗಳು, ವಿಶ್ವಕರ್ಮ ಇವರೊಡನೆ ಸೋಮನಾಥನನ್ನು ಪ್ರತಿಷ್ಠೆಮಾಡಿ ಬ್ರಾಹ್ಮಣರಿಗೆ ಬಹುಕಾಲ ಯಜ್ಞದ ದಕ್ಷಿಣೆಯನ್ನು ಕೊಡಿಸಿದನು.

೨೧೨೨. ಹೀಗೆ ಬ್ರಹ್ಮನು ಲಿಂಗವನ್ನು ಪ್ರತಿಷ್ಠೆಮಾಡಿದ ತರುವಾಯ ಪ್ರಭಾಸ ಕ್ಷೇತ್ರವಾಸಿಯಾದ ಆ ಲಿಂಗಕ್ಕೆ ಎಂಬತ್ತು ಪರಾರ್ಧ ವರ್ಷಗಳು ಕಳೆದುವು.

೨೩. ದೇವಿಯು ಹೇಳುತ್ತಾಳೆ :—ಬ್ರಹ್ಮನ ದಿನಮಾನವಾದ ಸಾವಿರ ಮಾಸ ವರ್ಷಗಳನ್ನೂ, ಅವನ ಆಯಸ್ಸನ್ನೂ ವಿಸ್ತಾರವಾಗಿ ಹೇಳು.

೨೪. ಈಶ್ವರನು ಹೇಳುತ್ತಾನೆ :—ಬ್ರಹ್ಮನು ಸಂಪೂರ್ಣವಾದ ಆಯಸ್ಸುಳ್ಳವನು. ಅವನ ಪರಾರ್ಧ ಆಯುಸ್ಸು ಕಳೆದಿರುತ್ತದೆ. ಈಗ ಪ್ರಭಾಸ ಕ್ಷೇತ್ರದಲ್ಲಿರುವ ಅವನ ಎರಡನೆಯ ಪರಾರ್ಧವು ಕಳೆಯುತ್ತಿದೆ.

ಯದಾ ಪ್ರಾಭಾಸಿಕೇ ಕ್ಷೇತ್ರೇ ಬ್ರಹ್ಮಾ ಲೋಕಪಿತಾಮಹಃ
ಆಗತಶ್ಚಾಷ್ಟವರ್ಷಸ್ತು ಬಾಲರೂಪೀ ತದೋಚ್ಯತೇ || ೨೫ ||
ಅನ್ಯೇಷು ಸರ್ವತೀರ್ಥೇಷು ವೃದ್ಧರೂಪೀ ಪಿತಾಮಹಃ ।
ಮುಕ್ತ್ವಾ ಪ್ರಾಭಾಸಿಕಂ ಕ್ಷೇತ್ರಂ ಸದೈವ ವಿಬುಧಪ್ರಿಯೇ || ೨೬ ||
ಬ್ರಹ್ಮಾಂಡೇ ಯಾನಿ ತೀರ್ಥಾನಿ ಬ್ರಹ್ಮಣಸ್ತೇಷು ಯೇ ಸ್ಮೃತಾಃ ।
ತೇಷಾಮಾದ್ಯೋ ಮಹಾತೇಜಾಃ ಪ್ರಭಾಸೇ ಯೋ ವ್ಯವಸ್ಥಿತಃ || ೨೭ ||
ಕಲ್ಪೇಕಲ್ಪೇ ತು ನಾಮಾನಿ ಶೃಣು ತ್ವಂ ತಾನಿ ವೈ ಪ್ರಿಯೇ ।
ಸ್ವಯಂಭೂಃ ಪ್ರಥಮೇ ಕಲ್ಪೇ ದ್ವಿತೀಯೇ ಪದ್ಮಭೂಃ ಸ್ಥಿತಃ || ೨೮ ||
ತೃತೀಯೇ ವಿಶ್ವಕರ್ಮೇತಿ ಬಾಲರೂಪೀ ಚತುರ್ಥಕೇ ।
ಏತಾನಿ ಮುಖ್ಯನಾಮಾನಿ ಕಥಿತಾನಿ ಸ್ವಯಂಭುವಃ || ೨೯ ||
ನಿತ್ಯಂ ಸಂಸ್ಮರತೇ ಯಸ್ತು ಸ ದೀರ್ಘಾಯುರ್ನರೋ ಭವೇತ್ || ೩೯ ||
ಚಂದ್ರಸೂರ್ಯಗ್ರಹಾಃ ಸರ್ವೇ ಸದೇವಾಸುರಮಾನುಷಾಃ ।
ತ್ರೈಲೋಕ್ಯಂ ನಶ್ಯತೇ ಸರ್ವಂ ಬ್ರಹ್ಮರಾತ್ರಿಸಮಾಗಮೇ || ೩೧ ||

---

೨೫. ಲೋಕಪಿತಾಮಹನಾದ ಬ್ರಹ್ಮನು ಎಂಟು ವರ್ಷದ ಬಾಲಕನಾಗಿ ಪ್ರಭಾಸಕ್ಷೇತ್ರಕ್ಕೆ ಬಂದನು. ಆಗ ಅವನು ಬಾಲರೂಪಿಯೆನಿಸಿದ್ದನು.

೨೬. ವಿಬುಧ ಪ್ರಿಯಳಾದ ಓ ದೇವಿಯೇ! ಪ್ರಾಭಾಸಿಕ ಕ್ಷೇತ್ರವನ್ನು ಬಿಟ್ಟು ಇತರ ಎಲ್ಲ ತೀರ್ಥಗಳಲ್ಲಿಯೂ ಬ್ರಹ್ಮನು ವೃದ್ಧನಾಗಿರುವನು.

೨೭. ಬ್ರಹ್ಮಾಂಡದ ಎಲ್ಲಾ ತೀರ್ಥಗಳಲ್ಲಿರುವ ಬ್ರಹ್ಮರಿಗು ಪ್ರಾಭಾಸ ಕ್ಷೇತ್ರದಲ್ಲಿ ನೆಲಸಿರುವ ಈ ಬ್ರಹ್ಮನು ಮೊದಲನೆಯವನು.

೨೮-೩೦. ಪ್ರಿಯಳೆ! ಆ ಬ್ರಹ್ಮನ ಒಂದೊಂದು ಕಲ್ಪದ ನಾಮಗಳನ್ನು ಕೇಳು. ಅವನು ಮೊದಲಿನ ಕಲ್ಪದಲ್ಲಿ ಸ್ವಯಂಭೂ ಎಂದೂ, ದ್ವಿತೀಯ ಕಲ್ಪದಲ್ಲಿ ಪದ್ಮಭೂ ಎಂದೂ, ತೃತೀಯ ಕಲ್ಪದಲ್ಲಿ ವಿಶ್ವಕರ್ಮನೆಂದೂ, ನಾಲ್ಕನೆಯ ಕಲ್ಪದಲ್ಲಿ ಬಾಲರೂಪಿ ಯೆಂದೂ ಪ್ರಸಿದ್ಧನಾಗಿರುವನು. ಹೀಗೆ ಆ ಬ್ರಹ್ಮನ ಮುಖ್ಯವಾದ ಹೆಸರುಗಳನ್ನು ಹೇಳಿರುವೆನು. ಅವನನ್ನು ನಿತ್ಯವೂ ಸ್ಮರಿಸುವ ಮನುಷ್ಯನು ದೀರ್ಘಾಯುಸ್ಸುಳ್ಳವನಾಗುವನು.

೩೧. ಬ್ರಹ್ಮನಿಗೆ ರಾತ್ರಿಯಾಗಲು ಚಂದ್ರಸೂರ್ಯನೇ ಮೊದಲಾದ ಗ್ರಹದೇವತೆಗಳೂ, ದೇವ, ಅಸುರ, ಮನುಷ್ಯರೂ, ಮೂರುಲೋಕಗಳೂ ಸಂಪೂರ್ಣವಾಗಿ ನಾಶವಾಗುವುವು.

ಪುನರ್ದಿನೇ ತು ಸಂಜಾತೇ ಪ್ರಬುದ್ಧಃ ಸನ್ಪಿತಾಮಹಃ ।
ತಥಾ ಸೃಷ್ಟಿಂ ಪ್ರಕುರುತೇ ಯಥಾಪೂರ್ವಮಭೂತ್ಪ್ರಿಯೇ ॥ ೩೨ ॥
ದಿನಮಾನಂ ಪ್ರವಕ್ಷ್ಯಾಮಿ ಬ್ರಹ್ಮಣೋ ಲೋಕಕರ್ತೃಣಃ ।
ನೇತ್ರಭಾಗಾಚ್ಚತುರ್ಭಾಗಸ್ತ್ರುಟಿಃ ಕಾಲೋ ನಿಗದ್ಯತೇ ॥ ೩೩ ॥
ತಸ್ಮಾಚ್ಚ ದ್ವಿಗುಣಂ ಜ್ಞೇಯಂ ನಿಮಿಷಾಂತಂ ವರಾನನೇ ।
ನಿಮಿಷೈಃ ಪಂಚದಶಭಿಃ ಕಾಷ್ಠಾ ಇತ್ಯುಚ್ಯತೇ ಬುಧೈಃ ।
ತ್ರಿಂಶದ್ಭಿಶ್ಚೈವ ಕಾಷ್ಠಾಭಿಃ ಕಲಾ ಪ್ರೋಕ್ತಾ ಮನೀಷಿಭಿಃ ॥ ೩೪ ॥
ತ್ರಿಂಶತ್ಕಲೋ ಮುಹೂರ್ತಃ ಸ್ಯಾದ್ದಿನಂ ಪಂಚದಶೈಸ್ತು ತೈಃ ।
ದಿನಮಾನಾ ನಿಶಾ ಜ್ಞೇಯಾ ಅಹೋರಾತ್ರಂ ತಯೋರ್ಭವೇತ್ ॥ ೩೫ ॥
ತೈಃ ಪಂಚದಶಭಿಃ ಪಕ್ಷಃ ಪಕ್ಷಾಭ್ಯಾಂ ಮಾಸ ಉಚ್ಯತೇ ।
ಮಾಸೈಶ್ಚೈವಾಯನಂ ಷಡ್ಭಿರಬ್ದಂ ಸ್ಯಾದಯನದ್ವಯಾತ್ ॥ ೩೬ ॥
ಚತ್ವಾರಿಂಶದ್ಧಿ ಲಕ್ಷಾಣಿ ಲಕ್ಷಾಣಾಂ ತ್ರಿತಯಂ ಪುನಃ ।
ವಿಂಶತಿಶ್ಚ ಸಹಸ್ರಾಣಿ ಜ್ಞೇಯಂ ಸೌರಂ ಚತುರ್ಯುಗಂ ॥ ೩೭ ॥
ಚತುರ್ಯುಗೈಕಸಪ್ತತ್ಯಾ ಮನ್ವಂತರಮುದಾಹೃತಂ ।
ಐಂದ್ರಮೇತದ್ಭವೇದಾಯುಃ ಸಮಾಸಾತ್ತವ ಕೀರ್ತಿತಂ ॥ ೩೮ ॥

---

೩೨. ಪ್ರಿಯಳೆ! ಮರಳಿ ಹಗಲಾಗಲು ಬ್ರಹ್ಮನು ಎಚ್ಚರಗೊಂಡು ಮೊದಲಿನಂತೆ ಪ್ರಪಂಚ ಸೃಷ್ಟಿಯನ್ನು ಮಾಡುವನು.

೩೩. ಲೋಕಗಳನ್ನು ಸೃಷ್ಟಿಸುವ ಬ್ರಹ್ಮನ ದಿನದ ಪ್ರಮಾಣವನ್ನು ಹೇಳುವೆನು. ರೆಪ್ಪೆಹಾಕುವುದರ ನಾಲ್ಕನೆಯ ಒಂದುಭಾಗವು ತ್ರುಟಿಯೆನ್ನಿವುದು.

೩೪–೩೬. ಅದರ ಇಮ್ಮಡಿ ಕಾಲವು ನಿಮಿಷವೂ, ಹದಿನೈದು ನಿಮಿಷಗಳಿಂದ ಕಾಷ್ಠವೂ, ಮೂವತ್ತು ಕಾಷ್ಠಗಳಿಂದ ಕಲೆಯೂ, ಮೂವತ್ತು ಕಲೆಗಳಿಂದ ಮುಹೂರ್ತವೂ, ಹದಿನೈದು ಮುಹೂರ್ತಗಳಿಂದ ದಿನವೂ, ಅಷ್ಟೇ ಪ್ರಮಾಣದಿಂದ ರಾತ್ರಿಯೂ ಇವೆರಡರಿಂದ ಅಹೋರಾತ್ರವೂ, ಈ ಹದಿನೈದು ಅಹೋರಾತ್ರಗಳಿಂದ ಪಕ್ಷವೂ, ಎರಡು ಪಕ್ಷಗಳಿಂದ ತಿಂಗಳೂ, ಆರುತಿಂಗಳಿಂದ ಅಯನವೂ, ಎರಡು ಅಯನಗಳಿಂದ ವರ್ಷವೂ ಆಗುವುದು.

೩೭. ನಲವತ್ತಮೂರು ಲಕ್ಷದ ಇಪತ್ತು ಸಾವಿರ ವರ್ಷಗಳಿಂದ ಸೌರಮಾನದ ಚತುರ್ಯುಗಗಳಾಗುವುವು.

೩೮. ಎಪ್ಪತ್ತೊಂದು ಚತುರ್ಯುಗಗಳಿಂದ ಒಂದು ಮನ್ವಂತರವಾಗುವುದು. ಇದು ಇಂದ್ರನ ಆಯುಸ್ಸಿನ ಪ್ರಮಾಣವು. ಹೀಗೆ ಸಂಕ್ಷೇಪವಾಗಿ ನಿನಗೆ ಹೇಳಿರುವೆನು.

ಸ್ವಾಯಂಭುವೋ ಮನುಃ ಪೂರ್ವಂ ಮನುಃ ಸ್ವಾರೋಚಿಷಸ್ತತಃ ।
ಔತ್ತಮಸ್ತಾಮಸಶ್ಚೈವ ರೈವತಶ್ಚಾಕ್ಷುಷಸ್ತತಃ ॥ ೩೯ ॥
ವೈವಸ್ವತೋಽರ್ಕಸಾವರ್ಣಿರ್ಬ್ರಹ್ಮಸಾವರ್ಣಿರೇವ ಚ ।
ಧರ್ಮಸಾವರ್ಣಿನಾಮಾ ಚ ರೌಚ್ಯೋ ಭೌತ್ಯಸ್ತಥೈವ ಚ ॥ ೪೦ ॥
ಚತುರ್ದಶೈತೇ ಮನವಃ ಸಂಖ್ಯಾತಾಸ್ತೇ ಯಥಾಕ್ರಮಂ ।
ಭೂತಾನ್ಭವಿಷ್ಯಾನಿಂದ್ರಾಂಶ್ಚ ಸರ್ವಾನ್ವಕ್ಷ್ಯೇ ತವ ಕ್ರಮಾತ್ ॥ ೪೧ ॥
ವಿಶ್ವಭುಕ್ ವಿಪಶ್ಚಿಚ್ಚ ಸುಕೀರ್ತಿಃ ಶಿಬಿರೇವ ಚ ।
ವಿಭುರ್ಮನೋಭುವಶ್ಚೈವ ತಥೌಜಸ್ವೀ ಬಲಿರ್ಬಲೀ ॥ ೪೨ ॥
ಅದ್ಭುತಶ್ಚ ತಥಾ ಶಾಂತೀ ರಮ್ಯೋ ದೇವವರೋ ವೃಷಾ ।
ಋತಧಾಮಾ ದಿವಃಸ್ವಾಮೀ ಶುಚಿಃ ಶಕ್ರಾಶ್ಚತುರ್ದಶ ॥ ೪೩ ॥
ಏತೇ ಸರ್ವೇ ವಿನಶ್ಯಂತಿ ಬ್ರಹ್ಮಣೋ ದಿವಸೇ ಪ್ರಿಯೇ ।
ರಾತ್ರಿಸ್ತು ತಾವತೀ ಜ್ಞೇಯಾ ಕಲ್ಪಮಾನಮಿದಂ ಸ್ಮೃತಂ ॥ ೪೪ ॥
ಪ್ರಥಮಂ ಶ್ವೇತಕಲ್ಪಸ್ತು ದ್ವಿತೀಯೋ ನೀಲಲೋಹಿತಃ
ವಾಮದೇವಸ್ತೃತೀಯಸ್ತು ತತೋ ರಾಥಂತರೋಽಪರಃ ॥ ೪೫ ॥
ರೌರವಂ ಪಂಚಮಃ ಪ್ರೋಕ್ತಾಃ ಷಷ್ಠಃ ಪ್ರಾಣ ಇತಿ ಸ್ಮೃತಃ ।
ಸಪ್ತಮೋಽಥ ಬೃಹತ್ಕಲ್ಪಃ ಕಂದರ್ಪೋಽಷ್ಟಮ ಉಚ್ಯತೇ ॥ ೪೬ ॥

೩೯–೪೧. ಸ್ವಾಯಂಭುವ, ಸ್ವರೋಚಿಷ, ಔತ್ತಮ, ತಾಮಸ, ರೈವತ್ವ ಚಾಕ್ಷುಷ, ವೈವಸ್ವತ, ಅರ್ಕಸಾವರ್ಣಿ, ಬ್ರಹ್ಮಸಾವರ್ಣಿ, ಧರ್ಮಸಾವರ್ಣಿ, ರೌಚ್ಯ, ಭೌತ್ಯ, ರುದ್ರಸಾವರ್ಣಿ, ದಕ್ಷಸಾವರ್ಣಿ ಎಂಬ ಹದಿನಾಲ್ಕು ಮನುಗಳನ್ನು ಹೇಳಿರುವೆನು. ಇನ್ನು ಭೂತಭವಿಷ್ಯರಾದ ಸಮಸ್ತ ಇಂದ್ರರನ್ನೂ ಕ್ರಮವಾಗಿ ಹೇಳುವೆನು.

೪೨–೪೪. ವಿಶ್ವಭುಕ್, ವಿಪಶ್ಚಿತ್, ಶಿಬಿ, ವಿಭು, ಮನೋಭುವ, ಓಜಸಿ ಬಲಿ, ಅದ್ಭುತ, ಶಾಂತಿ, ರಮ್ಯ, ದೇವವರ, ವೃಷಾ, ಋತಧಾಮಾ, ಶುಚಿ ಎಂಬ ಹದಿನಾಲ್ಕು ಮಂದಿ ಇಂದ್ರರು ಬ್ರಹ್ಮನ ದಿವಸದ ಕೊನೆಯಲ್ಲಿ ನಾಶವಾಗುವರು. ರಾತ್ರಿಯೂ ಹೀಗೆಯೇ ಆಗಿರುವುದು. ಇದು ಒಂದು ಕಲ್ಪದ ಪ್ರಮಾಣವಾಗಿರುವುದು.

೪೫–೫೨. ಶ್ವೇತ, ನೀಲಲೋಹಿತ, ವಾಮದೇವ, ರಥಂತರ, ರೌರವ, ಪ್ರಾಣ, ಬೃಹತ್, ಕಂದರ್ಪ, ಸದ್ಯ, ಈಶಾನ, ಧ್ಯಾನ, ಸಾರಸ್ವತ, ಉದಾನ, ಗರುಡ, ಕೌರ್ಮ ಎಂದು ಹದಿನೈದು ಕಲ್ಪಗಳು ಕ್ರಮವಾಗಿರುವುವು. ಈ ಹದಿನೈದನೆ ಕಲ್ಪವೇ ಬ್ರಹ್ಮನಿಗೆ ಹುಣ್ಣಿಮೆಯಾಗಿರುವುದು. ನಾರಸಿಂಹ, ಸಮಾಧಿ, ಆಗ್ನೇಯ, ಸೋಮ,

ಸದ್ಯೋಽಥ ನವಮಃ ಪ್ರೋಕ್ತ ಈಶಾನೋ ದಶಮಃ ಸ್ಮೃತಃ ।
ಧ್ಯಾನ ಏಕಾದಶಃ ಪ್ರೋಕ್ತಸ್ತಥಾ ಸಾರಸ್ವತೋಽಪರಃ ॥ ೪೭ ॥
ತ್ರಯೋದಶ ಉದಾನಸ್ತು ಗರುಡೋಽಥ ಚತುರ್ದಶಃ ।
ಕೌರ್ಮಃ ಪಂಚದಶೋ ಜ್ಞೇಯಃ ಪೌರ್ಣಮಾಸೀ ಪ್ರಜಾಪತೇಃ ॥ ೪೮ ॥
ಷೋಡಶೋ ನಾರಸಿಂಹಸ್ತು ಸಮಾಧಿಸ್ತು ತತಃ ಪರಂ ।
ಆಗ್ನೇಯೋಽಷ್ಟಾದಶಃ ಪ್ರೋಕ್ತಃ ಸೋಮಕಲ್ಪಸ್ತತೋಽಪರಃ ॥ ೪೯ ॥
ಭಾವನೋ ವಿಂಶತಿಃ ಪ್ರೋಕ್ತಃ ಸುಪ್ತಮಾಲೀತಿ ಚಾಪರಃ ।
ವೈಕುಂಠಶ್ಚಾರ್ಚಿಷೋ ರುದ್ರೋ ಲಕ್ಷ್ಮೀಕಲ್ಪಸ್ತಥಾಪರೇ ॥ ೫೦ ॥
ಸಪ್ತವಿಂಶೋಽಥ ವೈರಾಜೋ ಗೌರೀಕಲ್ಪಸ್ತಥಾಂಽಧಕಃ ।
ಮಾಹೇಶ್ವರಸ್ತಥಾ ಪ್ರೋಕ್ತಸ್ತ್ರಿಪುರೋ ಯತ್ರ ಘಾತಿತಃ ॥ ೫೧ ॥
ಪಿತೃಕಲ್ಪಸ್ತಥಾಂತೇ ಚ ಯಾ ಕುಹೂರ್ಬ್ರಹ್ಮಣಃ ಸ್ಮೃತಾ ।
ತ್ರಿಂಶತ್ಕಲ್ಪಾಃ ಸಮಾಖ್ಯಾತಾ ಬ್ರಹ್ಮಣೋ ಮಾಸಿ ವೈ ಪ್ರಿಯೇ ॥ ೫೨ ॥
ಅತೀತಾಃ ಕಥಿತಾಃ ಸರ್ವೇ ವಾರಾಹೋ ವರ್ತತೇಽಧುನಾ ।
ಪ್ರತಿಪದ್ಬ್ರಹ್ಮಣೋ ಯತ್ರ ವಾರಾಹೇಣೋದ್ಧೃತಾ ಮಹೀ ॥ ೫೩ ॥
ತ್ರಿಂಶತ್ಕಲ್ಪೈಃ ಸ್ಮೃತೋ ಮಾಸೋ ವರ್ಷಂ ದ್ವಾದಶಭಿಸ್ತು ತೈಃ ।
ಅನೇನ ವರ್ಷಮಾನೇನ ತದಾ ಬ್ರಹ್ಮಾಽಷ್ಟವಾರ್ಷಿಕಃ ।
ಆನೀತಃ ಸೋಮರಾಜೇನ ಸೋಮನಾಥಃ ಪ್ರತಿಷ್ಠಿತಃ ॥ ೫೪ ॥

ಭಾವನ, ಸುಪ್ತಮಾಲೀ, ವೈಕುಂಠ, ಆರ್ಚಿಷ, ರುದ್ರ, ಲಕ್ಷ್ಮೀ, ವೈರಾಜ, ಗೌರೀ, ಅಂಧಕ, ಮಾಹೇಶ್ವರ, ಪಿತೃ ಎಂಬ ಹದಿನಾರರಿಂದ ಮೂವತ್ತು ಕಲ್ಪಗಳಾಗಿರುವುವು. ಈ ಮೂವತ್ತನೆಯ ಕಲ್ಪವೇ ಬ್ರಹ್ಮನಿಗೆ ಅಮಾವಾಸ್ಯೆಯು, ಈ ಮೂವತ್ತು ಕಲ್ಪಗಳು ಕಳೆದರೆ ಬ್ರಹ್ಮನಿಗೊಂದು ತಿಂಗಳಾಗುವುದು.

೫೩. ಹೀಗೆ ಕಳೆದ ಕಲ್ಪಗಳನ್ನೆಲ್ಲ ಹೇಳಿರುವೆನು. ಈ ಬ್ರಹ್ಮನ ಪಾಡ್ಯದ ದಿನ ವರಾಹನು ಭೂಮಿಯನ್ನು ಎತ್ತಿದ್ದರಿಂದ ವಾರಾಹವೆಂದು ಪ್ರಸಿದ್ಧವಾದ ಕಲ್ಪವು ನಡೆಯುತ್ತಿರುವುದು.

೫೪. ಈ ಮೂವತ್ತು ಕಲ್ಪಗಳಿಂದ ತಿಂಗಳೂ, ಈ ಹನ್ನೆರಡು ತಿಂಗಳಿಂದ ವರ್ಷವೂ ಆಗುವುದು. ಈ ವರ್ಷ ಪ್ರಮಾಣದಿಂದ ಎಂಟು ವರ್ಷದವನಾದ ಬ್ರಹ್ಮನನ್ನು ಚಂದ್ರನು ಇಲ್ಲಿಗೆ ಕರೆತಂದು ಸೋಮನಾಥನನ್ನು ಪ್ರತಿಷ್ಠೆಮಾಡಿದನು.

ಏವಂ ಕ್ಷೇತ್ರೇ ನಿವಸತಃ ಪ್ರಭಾಸೇ ಬಾಲರೂಪಿಣಃ ।
ಪರಾರ್ಧಮೇಕಮಗಮದ್ದ್ವಿತೀಯಂ ವರ್ತತೇಽಧುನಾ ॥ ೫೫ ॥
ಏವಂ ಮಹಾಪ್ರಭಾವೋಽಸೌ ಪ್ರಭಾಸಕ್ಷೇತ್ರಮಧ್ಯಗಃ ।
ಬ್ರಹ್ಮಾ ಸ್ವಯಂಭೂರ್ಭಗವಾನ್ಬಾಲತ್ವಾತ್ಕ್ಷೇತ್ರಮಾಶ್ರಿತಃ ॥ ೫೬ ॥
ಸ ವೈ ಪೂಜ್ಯೋ ನಮಸ್ಕಾರ್ಯೋ ವಂದನೀಯೋ ಮನೀಷಿಭಿಃ ।
ಆದೌ ಸ ಏವ ಪೂಜ್ಯಃ ಸ್ಯಾತ್ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೫೭ ॥
ಯಸ್ತಂ ಪೂಜಯತೇ ಭಕ್ತ್ಯಾ ಸಮಾಂ ಪೂಜಯತೇ ಧ್ರುವಂ ।
ಯಸ್ತಂ ದ್ವೇಷ್ಟಿ ಸಮಾಂ ದ್ವೇಷ್ಟಿ ಯೋಽದ್ಯ ಪೂಜ್ಯೋ ಮಮೈವ ಸಃ ॥ ೫೮ ॥
ಬ್ರಹ್ಮಣಾ ಪೂಜ್ಯಮಾನೇನ ಅಹಂ ವಿಷ್ಣುಶ್ಚ ಪೂಜಿತಃ ।
ವಿಷ್ಣುನಾ ಪೂಜ್ಯಮಾನೇನ ಅಹಂ ಬ್ರಹ್ಮಾ ಚ ಪೂಜಿತಃ ॥ ೫೯ ॥
ಮಯಾ ಪೂಜಿತಮಾತ್ರೇಣ ಬ್ರಹ್ಮವಿಷ್ಣೂ ಚ ಪೂಜಿತೌ ।
ಸತ್ತ್ವಂ ಬ್ರಹ್ಮಾ ರಜೋ ವಿಷ್ಣುಸ್ತಮೋಽಹಂ ಸಂಪ್ರಕೀರ್ತಿತಃ ॥ ೬೦ ॥

---

೫೫. ಹೀಗೆ ಪ್ರಭಾಸಕ್ಷೇತ್ರದಲ್ಲಿ ವಾಸಿಸುತ್ತಿರುವ ಬಾಲರೂಪನಾದ ಬ್ರಹ್ಮನ ಮೊದಲನೆಯ ಪರಾರ್ಧವು ಕಳೆಯಿತು. ಈಗ ಎರಡನೆ ಪರಾರ್ಧವು ನಡೆಯುತ್ತಿದೆ.

೫೬. ಹೀಗೆ ಅತ್ಯಂತ ಮಾಹಾತ್ಮ್ಯವುಳ್ಳ ಪ್ರಭಾಸಕ್ಷೇತ್ರದ ಮಧ್ಯದಲ್ಲಿರುವ ಬ್ರಹ್ಮನು ಬಾಲ್ಯದಲ್ಲಿಯೇ ಈ ಕ್ಷೇತ್ರವನ್ನಾಶ್ರಯಿಸಿದನು.

೫೭. ಯಾತ್ರಾಫಲವನ್ನಪೇಕ್ಷಿಸುವವರು ಮೊದಲು ಇವನನ್ನು ಪೂಜಿಸಬೇಕು.

೫೮. ಭಕ್ತಿಯಿಂದ ಈ ಬ್ರಹ್ಮನನ್ನು ಪೂಜಿಸುವವನು ನಿಜವಾಗಿಯೂ ನನ್ನನ್ನು ಪೂಜಿಸುವನು. ಇವನನ್ನು ದ್ವೇಷಿಸುವವನು ನನ್ನನ್ನು ದ್ವೇಷಿಸುವನು. ಇವನಿಗೆ ಪೂಜ್ಯನಾದವನು ನನಗೂ ಪೂಜ್ಯನು.

೫೯. ಬ್ರಹ್ಮನು ಪೂಜಿಸಲ್ಪಡುವುದರಿಂದ ನಾನೂ ವಿಷ್ಣುವೂ ಪೂಜಿಸಲ್ಪಟ್ಟಂತಾಗುವೆವು. ವಿಷ್ಣುವನ್ನು ಪೂಜಿಸುವುದರಿಂದ ನಾನೂ ಬ್ರಹ್ಮನೂ ಪೂಜಿಸಲ್ಪಟ್ಟಂತಾಗುವೆವು.

೬೦. ನನ್ನನ್ನು ಪೂಜಿಸುವುದರಿಂದ ಬ್ರಹ್ಮ ವಿಷ್ಣುಗಳು ಪೂಜಿಸಲ್ಪಟ್ಟಂತಾಗುವರು. ಬ್ರಹ್ಮನು ಸತ್ವಗುಣಪ್ರಚುರನೂ, ವಿಷ್ಣುವು ರಜೋಗುಣಪ್ರಚುರನೂ, ಆಗಿರುವರು. ನಾನು ತಮೋಗುಣಪ್ರಚುರನಾಗಿರುವೆನು.

ವಾಯುರ್ಬ್ರಹ್ಮಾಽನಲೋ ರುದ್ರೋ ವಿಷ್ಣುರಾಪಃ ಪ್ರಕೀರ್ತಿತಃ ।
ರಾತ್ರಿರ್ವಿಷ್ಣುರಹೋ ರುದ್ರೋ ಯಾ ಸಂಧ್ಯಾ ಸ ಪಿತಾಮಹಃ ॥ ೬೧ ॥
ಸಾಮವೇದೋ ಹ್ಯಹಂ ದೇವಿ ಬ್ರಹ್ಮಾ ಋಗ್ವೇದ ಉಚ್ಯತೇ ।
ಯಜುರ್ವೇದೋ ಭವೇದ್ವಿಷ್ಣುಃ ಕುಲಾಧಾರೋ ಹ್ಯಥರ್ವಣಃ ॥ ೬೨ ॥
ಉಷ್ಣಕಾಲೋ ಹ್ಯಹಂ ದೇವಿ ವರ್ಷಾಕಾಲಃ ಪಿತಾಮಹಃ ।
ಶೀತಕಾಲೋ ಭವೇದ್ವಿಷ್ಣುರೇವಂ ಕಾಲತ್ರಯಂ ಹಿ ಸಃ ॥ ೬೩ ॥
ದಕ್ಷಿಣಾಗ್ನಿರಹಂ ಜ್ಞೇಯೋ ಗಾರ್ಹಪತ್ಯೋ ಹರಿಃ ಸ್ಮೃತಃ ।
ಬ್ರಹ್ಮಾ ಚಾಹವನೀಯಸ್ತು ಏವಂ ಸರ್ವಂ ತ್ರಿದೈವತಂ ॥ ೬೪ ॥
ಅಹಂ ಲಿಂಗಸ್ವರೂಪಸ್ಥೋ ಭಗೋ ವಿಷ್ಣುಃ ಪ್ರಕೀರ್ತಿತಃ ।
ಬೀಜಸಂಸ್ಥೋ ಭವೇದ್ಬ್ರಹ್ಮಾ ವಿಷ್ಣುರಾಪಃ ಪ್ರಕೀರ್ತಿತಃ ॥ ೬೫ ॥
ಅಹಮಾಕಾಶರೂಪಸ್ಥ ಏವಂ ತತ್ತ್ವಮಯಂ ಪ್ರಭುಃ ।
ಆಕಾಶಾತ್ಸ್ರವತೇ ಯಚ್ಚ ತದ್ಬೀಜಂ ಬ್ರಹ್ಮಸಂಸ್ಥಿತಂ ।
ಸ್ವರೂಪಂ ಬ್ರಾಹ್ಮಮಾಶ್ರಿತ್ಯ ಬ್ರಹ್ಮಾ ಬೀಜಪ್ರರೋಹಕಃ ॥ ೬೬ ॥
ನಾಭಿಮಧ್ಯೇ ಸ್ಥಿತೋ ಬ್ರಹ್ಮಾ ವಿಷ್ಣುಶ್ಚ ಹೃದಯಾಂತರೇ ।
ವಕ್ತ್ರಮಧ್ಯೇ ಅಹಂ ದೇವಿ ಆಧಾರಃ ಸರ್ವದೇಹಿನಾಂ ॥ ೬೭ ॥

---

೬೧. ಬ್ರಹ್ಮನು ವಾಯುವೂ, ರುದ್ರನು ಬೆಂಕಿಯೂ, ವಿಷ್ಣುವು ಜಲವೂ ರಾತ್ರಿಯು ವಿಷ್ಣುವೂ, ಹಗಲು ರುದ್ರನೂ, ಸಂಧ್ಯಾಕಾಲವು ಬ್ರಹ್ಮನೂ ಆಗಿರುವರು.

೬೨. ದೇವಿ! ನಾನು ಸಾಮವೇದಸ್ವರೂಪನು, ಬ್ರಹ್ಮನು ಋಗ್ವೇದಸ್ವರೂಪನು, ವಿಷ್ಣುವು ಯಜುರ್ವೇದ ಮತ್ತು ಅಥರ್ವಣವೇದಸ್ವರೂಪನು ಆಗಿರುವೆವು.

೬೩. ದೇವಿ! ನಾನು ಉಷ್ಣಕಾಲ, ಬ್ರಹ್ಮನು ಮಳೆಗಾಲ, ವಿಷ್ಣುವು ಶೀತಕಾಲ, ಆಗಿರುವೆವು.

೬೪. ನಾನು ದಕ್ಷಿಣಾಗ್ನಿಯೂ, ವಿಷ್ಣುವು ಗಾರ್ಹಪತ್ಯನೂ, ಬ್ರಹ್ಮನು ಆಹವನೀಯನೂ ಆಗಿರುವೆವು. ಹೀಗೆ ಎಲ್ಲವೂ ಮೂರು ದೇವತೆಗಳುಳ್ಳವು.

೬೫–೬೬. ನಾನು ಲಿಂಗರೂಪನೂ, ವಿಷ್ಣುವು ಭಗರೂಪನೂ, ಬ್ರಹ್ಮನು ಬೀಜಸ್ಥನೂ, ಆಗಿರುವೆವು. ಹೀಗೆ ತತ್ವರೂಪನಾದ ಬ್ರಹ್ಮನು ಬ್ರಹ್ಮಸ್ವರೂಪವನ್ನು ಆಶ್ರಯಿಸಿ ಆಕಾಶದಿಂದ ಬೀಳುವ ಬೀಜವನ್ನು ಮೊಳಕೆಯಾಗುವಂತೆ ಮಾಡುವನು.

೬೭. ಬ್ರಹ್ಮನು ನಾಭಿಮಧ್ಯದಲ್ಲಿಯೂ, ವಿಷ್ಣುವು ಹೃದಯದ ನಡುವೆಯೂ, ನಾನು ಮುಖದ ಮಧ್ಯದಲ್ಲಿಯೂ ನೆಲೆಸಿ ಸಕಲ ಪ್ರಾಣಿಗಳಿಗೂ ಆಧಾರವಾಗಿರುವೆವು.

ಯಶ್ಚಾಹಂ ಸ ಸ್ವಯಂ ಬ್ರಹ್ಮಾ ಯೋ ಬ್ರಹ್ಮಾ ಸ ಹುತಾಶನಃ ।
ಯಾ ದೇವೀ ಸ ಸ್ವಯಂ ವಿಷ್ಣುರ್ಯೋ ವಿಷ್ಣುಃ ಸ ಚ ಚಂದ್ರಮಾಃ ॥ ೧೮ ॥
ಯಃ ಕಾಲಃ ಸ ಸ್ವಯಂ ಬ್ರಹ್ಮಾ ಯೋ ರುದ್ರಃ ಸ ಚ ಭಾಸ್ಕರಃ ।
ಏವಂ ಶಕ್ತಿವಿಶೇಷೇಣ ಪರಂ ಬ್ರಹ್ಮ ಸ್ಥಿತಂ ಪ್ರಿಯೇ ॥ ೧೯ ॥
ಓಂಕಾರಸ್ತತ್ಪರಂ ಬ್ರಹ್ಮ ಗಾಯತ್ರೀ ಪ್ರಕೃತಿಃ ಪರಾ ।
ಉಭಾವೇತೌ ನರೋ ಜ್ಞಾತ್ವಾ ನ ವಿಚ್ಯವತಿ ಮುಚ್ಯತೇ ॥ ೨೦ ॥
ಏವಂ ಯೋ ವೇದ ದೇವೇಶಿ ಅದ್ವೈತಂ ಪರಮಾಕ್ಷರಂ ।
ಸ ಸರ್ವಂ ವೇದ ನೈವಾನ್ಯೋ ಭೇದಕರ್ತಾ ನರಾಧಮಃ ॥ ೨೧ ॥
ಏಕರೂಪಂ ಪರಂ ಬ್ರಹ್ಮ ಕಾರ್ಯಭಾವಾತ್ಪೃಥಕ್ ಸ್ಥಿತಃ ।
ಯಸ್ತಂ ದ್ವೇಷ್ಟಿ ವರಾರೋಹೇ ಬ್ರಹ್ಮದ್ವೇಷ್ಟಾ ಸ ಉಚ್ಯತೇ ॥ ೨೨ ॥
ದಕ್ಷಿಣಾಂಗೇ ಸ್ಥಿತೋ ಬ್ರಹ್ಮಾ ವಾಮಾಂಗೇ ಮಮ ಕೇಶವಃ ।
ಯಸ್ತಯೋರ್ದ್ವೇಷಮಾಧತ್ತೇ ಸ ದ್ವೇಷ್ಟಾ ಮಮ ಭಾಮಿನಿ ॥ ೨೩ ॥

---

೧೮. ದೇವಿ ! ನಾನೇ ಬ್ರಹ್ಮನು. ಯಾವನು ಬ್ರಹ್ಮನೊ ಅವನೇ ಅಗ್ನಿಯು, ವಿಷ್ಣುವು. ಆ ವಿಷ್ಣುವೇ ಚಂದ್ರನು.

೧೯. ಪ್ರಿಯಳೆ! ಯಮನೆ ಬ್ರಹ್ಮನು. ರುದ್ರನೆ ಸೂರ್ಯನು. ಹೀಗೆ ಪರಬ್ರಹ್ಮನು ಶಕ್ತಿವಿಶೇಷದಿಂದಿರುವನು.

೨೦. ಆ ಪರಬ್ರಹ್ಮನು ಓಂಕಾರ ರೂಪನೂ, ಪರಪ್ರಕೃತಿಯು ಗಾಯತ್ರೀ ರೂಪಳೂ ಆಗಿರುವರು. ಇವರಿಬ್ಬರನ್ನು ತಿಳಿದ ಮಾನವನು ಮುಕ್ತಿಯನ್ನೈದುವನು.

೨೧. ಓ ದೇವೇಶಿಯೇ! ಹೀಗೆ ಪರಬ್ರಹ್ಮನ ಅದ್ವೈತರೂಪವನ್ನರಿತವನು ಎಲ್ಲವನ್ನೂ ತಿಳಿಯುವನು. ಭೇದವನ್ನು ಪ್ರತಿಪಾದಿಸುವ ಅಧಮ ಮನುಷ್ಯನು ಎಲ್ಲವನ್ನೂ ತಿಳಿಯುವುದಿಲ್ಲ.

೨೨. ಒಬ್ಬನೇ ಬ್ರಹ್ಮನು ಕಾರ್ಯವಶದಿಂದ ಪ್ರತ್ಯೇಕನಾಗಿ ತೋರುವನು. ಪ್ರಿಯಳೆ! ಅವನನ್ನು ದ್ವೇಷಿಸುವವನು ಬ್ರಹ್ಮದ್ವೇಷಿಯೆನಿಸಿಕೊಳ್ಳುವನು.

೨೩. ನನ್ನ ದೇಹದ ದಕ್ಷಿಣ ಭಾಗದಲ್ಲಿ ಬ್ರಹ್ಮನೂ, ಎಡಭಾಗದಲ್ಲಿ ವಿಷ್ಣುವೂ ಇರುವರು. ಅವರಿಬ್ಬರನ್ನು ದ್ವೇಷಿಸುವವನು ನನಗೂ ದ್ವೇಷಿಯಾಗುವನು.

ಏವಂ ಜ್ಞಾತ್ವಾ ವರಾರೋಹೇ ಹ್ಯಭಿನ್ನೇನಾಂತರಾತ್ಮನಾ ।
ಬ್ರಹ್ಮಾಣಂ ಕೇಶವಂ ರುದ್ರಮೇಕರೂಪೇಣ ಪೂಜಯೇತ್ ॥ ೭೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಹ್ಮಮಾಹಾತ್ಮ್ಯವರ್ಣನಂ ನಾಮ
॥ ಪಂಚಾಧಿಕಶತತಮೋಽಧ್ಯಾಯಃ ॥

---

೭೪. ಪ್ರಿಯಳೆ! ಇದನ್ನರಿತು ಅಭೇದಬುದ್ಧಿಯಿಂದ ಬ್ರಹ್ಮ, ವಿಷ್ಣು, ಮಹೇಶ್ವರನನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬ್ರಹ್ಮಮಾಹಾತ್ಮ್ಯವರ್ಣನವೆಂಬ
ನೂರೈದನೆಯುನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡುತ್ತರಶತತಮೋಽಧ್ಯಾಯಃ

ಬ್ರಾಹ್ಮಣಪ್ರಶಂಸಾವರ್ಣನಂ

ದೇವ್ಯುವಾಚ :—

ಏವಮದ್ವೈತಭಾವೇನ ಯದ್ಬ್ರಹ್ಮ ಪರಿಕೀರ್ತಿತಂ ।
ತಸ್ಯ ಪೂಜಾವಿಧಾನಂ ಮೇ ಕಥಯಸ್ವ ಯಥಾರ್ಥತಃ ॥ ೧ ॥
ಕ್ಷೇತ್ರೇ ಪ್ರಾಭಾಸಿಕೇ ದೇವ ಬಾಲರೂಪೀ ಪಿತಾಮಹಃ ।
ಸ ಕಥಂ ಪೂಜ್ಯತೇ ಲೋಕೈಃ ಪರಬ್ರಹ್ಮಸ್ವರೂಪವಾನ್ ॥ ೨ ॥
ಕೇ ಮಂತ್ರಾಃ ಕಿಂ ವಿಧಾನಂ ತದ್ಬ್ರಾಹ್ಮಣಾಸ್ತತ್ರ ಕೀದೃಶಾಃ ।
ತತ್ರ ಸ್ಥಿತಾನಾಂ ವಿಪ್ರಾಣಾಂ ಕಥಂ ಕ್ಷೇತ್ರಫಲಂ ಭವೇತ್ ॥ ೩ ॥
ಕತಿ ಪ್ರಕಾರಾಸ್ತೇ ವಿಪ್ರಾಸ್ತತ್ರ ಕ್ಷೇತ್ರನಿವಾಸಿನಃ ।
ಕಿಮಾಚಾರಾ ಮಹಾದೇವ ಕಿಂ ಶೀಲಾಃ ಕಿಂ ಪರಾಯಣಾಃ ॥ ೪ ॥
ಏತದ್ವಿಸ್ತರತೋ ಬ್ರೂಹಿ ಬ್ರಾಹ್ಮಣಾನಾಂ ಮಹೋದಯಂ ॥ ೫ ॥

ಕನ್ನಡದ ಅನುವಾದ

ಬ್ರಾಹ್ಮಣಪ್ರಶಂಸಾವರ್ಣನ

೧. ದೇವಿಯು ಹೇಳುತ್ತಾಳೆ :—ಹೇಗೆ ಸಮಸ್ತ ವಸ್ತ್ವಭಿನ್ನವಾದ ಪರಬ್ರಹ್ಮನ ಪೂಜೆಯ ಕ್ರಮವನ್ನು ನನಗೆ ಯಥಾರ್ಥವಾಗಿ ಹೇಳು.

೨. ಪ್ರಾಭಾಸಿಕ ಕ್ಷೇತ್ರದಲ್ಲಿ ಬಾಲರೂಪಿಯಾಗಿ ನೆಲೆಸಿರುವ ಪರಬ್ರಹ್ಮಸ್ವರೂಪನಾದ ಬ್ರಹ್ಮನನ್ನು ಜನರು ಹೇಗೆ ಪೂಜಿಸುವರು.

೩. ಪೂಜೆಯ ಮಂತ್ರವಾವುದು? ವಿಧಿಯಾವುದು? ಬ್ರಾಹ್ಮಣರು ಯಾರು? ಅಲ್ಲಿರುವ ಬ್ರಾಹ್ಮಣರಿಗೆ ಕ್ಷೇತ್ರಫಲವು ಹೇಗೆ ಲಭಿಸುವುದು?

೪. ಮಹಾದೇವ! ಆ ಕ್ಷೇತ್ರವಾಸಿಗಳಾದ ಬ್ರಾಹ್ಮಣರು ಎಷ್ಟು ಬಗೆಯಾಗಿರುವರು ? ಅವರು ಎಂತಹ ಆಚಾರವುಳ್ಳವರು? ಅವರ ನಡತೆಯು ಎಂತಹುದು? ಯಾವುದರಲ್ಲಿ ಆಸಕ್ತರಾಗಿರುವರು ?

೫. ಈ ಬ್ರಾಹ್ಮಣರ ಮಾಹಾತ್ಮ್ಯವನ್ನು ವಿಸ್ತಾರವಾಗಿ ಹೇಳು.

ಈಶ್ವರ ಉವಾಚ :—

ಸಾಧು ಸಾಧು ಮಹಾದೇವಿ ಸಮ್ಯಕ್ಪ್ರಶ್ನವಿಶಾರದೇ ।
ಶೃಣುಷ್ವೈಕಮನಾ ಭೂತ್ವಾ ಮಾಹಾತ್ಮ್ಯಂ ವಿಪ್ರದೈವತಂ ॥ ೬ ॥
ಯಚ್ಛ್ರುತ್ವಾ ಮಾನವೋ ದೇವಿ ಮುಚ್ಯತೇ ಸರ್ವಪಾತಕೈಃ ।
ಯೇ ಕೇಚಿತ್ಸಾಗರಾಂತಾಯಾಂ ಪೃಥಿವ್ಯಾಂ ಕೀರ್ತಿತಾ ದ್ವಿಜಾಃ ॥ ೭ ॥
ತದ್ರೂಪಂ ಮಮ ದೇವೇಶಿ ಪ್ರತ್ಯಕ್ಷಂ ಧರಣೀತಲೇ ।
ಪ್ರತ್ಯಕ್ಷಂ ಬ್ರಾಹ್ಮಣಾ ದೇವಾಃ ಪರೋಕ್ಷಂ ದಿವಿ ದೇವತಾಃ ॥ ೮ ॥
ಬ್ರಾಹ್ಮಣಾ ಮತ್ಪ್ರಿಯಾ ನಿತ್ಯಂ ಬ್ರಾಹ್ಮಣಾ ಮಾಮಕೀ ತನುಃ ।
ಯಸ್ತಾನರ್ಚಯತೇ ಭಕ್ತ್ಯಾ ಸ ಮಾಮರ್ಚಯತೇ ಸದಾ ॥ ೯ ॥
ಯಸ್ತಾಂಸ್ತೋಷಯತೇ ಭಕ್ತ್ಯಾ ಸ ಚ ಮಾಂ ಪರಿತೋಷಯೇತ್ ॥ ೧೦ ॥
ಯೇ ಬ್ರಾಹ್ಮಣಾಃ ಸೋಽಹಮಸಂಶಯಂ ಪ್ರಿಯೇ
ತೇಷ್ವರ್ಚಿತೇಷ್ವರ್ಚಿತೋಽಹಂ ಭವೇಯಂ ।
ತೇಷ್ವೇವ ತುಷ್ಟೇಷ್ವಹಮೇವ ತುಷ್ಟೋ
ವೈರಂ ಚ ತೈರ್ಯಸ್ಯ ಮಮಾಪಿ ವೈರಂ ॥ ೧೧ ॥

೬-೮. ಈಶ್ವರನು ಹೇಳುತ್ತಾನೆ :—ಪ್ರಶ್ನೆಮಾಡುವುದರಲ್ಲಿ ನಿಪುಣಳಾದ ಮಹಾದೇವಿ! ಚೆನ್ನಾಗಿ ಪ್ರಶ್ನಿಸಿದೆ. ಏಕಮನಸ್ಸಿನಿಂದ ಬ್ರಾಹ್ಮಣರ ಮಾಹಾತ್ಮ್ಯವನ್ನು ಕೇಳು. ಇದನ್ನು ಕೇಳಿದ ಮನುಷ್ಯನು ಸಕಲ ಪಾಪಗಳಿಂದ ಮುಕ್ತನಾಗುವನು. ದೇವೇಶಿ! ಸಮುದ್ರಾಂತವಾಗಿರುವ ಈ ಭೂಮಿಯಲ್ಲಿ ನೆಲೆಸಿರುವ ಎಲ್ಲ ಬ್ರಾಹ್ಮಣರೂ ನನ್ನ ಪ್ರತ್ಯಕ್ಷರೂಪರು. ಮತ್ತು ಪ್ರತ್ಯಕ್ಷದೇವತೆಗಳು. ದೇವಲೋಕದಲ್ಲಿರುವವರು ಅಪ್ರತ್ಯಕ್ಷ ದೇವತೆಗಳು.

೯. ಬ್ರಾಹ್ಮಣರು ನನಗೆ ಯಾವಾಗಲೂ ಪ್ರಿಯರು. ಬ್ರಾಹ್ಮಣರೇ ನನ್ನ ದೇಹವು. ಭಕ್ತಿಯಿಂದ ಅವರನ್ನರ್ಚಿಸುವವರು ಯಾವಾಗಲೂ ನನ್ನನ್ನು ಅರ್ಚಿಸಿದಂತಾಗುವುದು.

೧೦. ಆ ಬ್ರಾಹ್ಮಣರನ್ನು ಸಂತೋಷಗೊಳಿಸಿದರೆ ನನಗೂ ಸಂತೋಷವಾಗುವುದು.

೧೧. ಪ್ರಿಯಳೆ! ಬ್ರಾಹ್ಮಣರೇ ನಾನು. ಅವರನ್ನು ಪೂಜಿಸಿದರೆ ನನ್ನನ್ನು ಪೂಜಿಸಿದಂತಾಗುವುದು. ಅವರು ಸಂತೋಷಗೊಂಡರೆ ನಾನು ಸಂತೋಷಗೊಳ್ಳುವೆನು. ಅವರನ್ನು ದ್ವೇಷಿಸುವವನು ನನ್ನನ್ನೂ ದ್ವೇಷಿಸುವನು.

ಯಶ್ಚಂದನೈಃ ಸಾಗುರುಗಂಧಮಾಲ್ಯೈ
ರಭ್ಯರ್ಚಯೇಚ್ಛೈಲಮಯೀಂ ಮಮಾರ್ಚಾಂ ।
ಅಸೌ ನ ಮಾಮರ್ಚಯತೇಽರ್ಚಯನ್ವೈ
ವಿಪ್ರಾರ್ಚನಾದರ್ಚಿತ ಏವ ಚಾಹಂ ॥ ೧೨ ॥
ಯಾವಂತಃ ಪೃಥಿವೀಮಧ್ಯೇ ಚೀರ್ಣದೇವವ್ರತಾ ದ್ವಿಜಾಃ ।
ಅಚೀರ್ಣವ್ರತವೇದಾ ವಾ ತೇಽಪಿ ಪೂಜ್ಯಾ ದ್ವಿಜಾಃ ಪ್ರಿಯೇ ॥ ೧೩ ॥
ನ ಬ್ರಾಹ್ಮಣಾನ್ಪರೀಕ್ಷೇತ ಶ್ರಾದ್ಧೇ ಕ್ಷೇತ್ರನಿವಾಸಿನಃ ।
ಸುಮಹಾನ್ಪರಿವಾದೋಽಸ್ಯ ಬ್ರಾಹ್ಮಣಾನಾಂ ಪರೀಕ್ಷಣೇ ॥ ೧೪ ॥
ಕಾಣಾಃ ಖಂಜಾಶ್ಚ ಕುಬ್ಜಾಶ್ಚ ದರಿದ್ರಾ ವ್ಯಾಧಿತಸ್ತಥಾ ।
ಸರ್ವೇ ಶ್ರಾದ್ಧೇ ನಿಯೋಕ್ತವ್ಯಾ ಮಿಶ್ರಿತಾ ವೇದಪಾರಗೈಃ ॥ ೧೫ ॥
ಬ್ರಾಹ್ಮಣಾ ಜಾತಿತಃ ಪೂಜ್ಯಾ ವೇದಾಭ್ಯಾಸಾತ್ತತಃ ಪರಂ ।
ತತೋಽರ್ಥಂ ಹವ್ಯಕವ್ಯೇಷು ನ ನಿಂದ್ಯಾ ಬ್ರಾಹ್ಮಣಾಃ ಕ್ವಚಿತ್ ॥ ೧೬ ॥
ಕಾಣಾನ್ಕುಂಟಾಂಶ್ಚ ಕುಬ್ಜಾಂಶ್ಚ ದರಿದ್ರಾನ್ವ್ಯಾಧಿತಾನಪಿ ।
ನಾವಮನ್ಯೇದ್ದ್ವಿಜಾನ್ಪ್ರಾಜ್ಞೋ ಮಮ ರೂಪಂ ಯತಃ ಸ್ಮೃತಂ ॥ ೧೭ ॥

---

೧೨. ಚಂದನ, ಅಗುರುಗಂಧ, ಮಾಲ್ಯಗಳಿಂದ ಶಿಲಾರೂಪವಾದ ನನ್ನ ಪ್ರತಿಮೆಯನ್ನು ಪೂಜಿಸಿದರೆ ನನ್ನನ್ನು ಪೂಜಿಸಿದಂತಾಗುವುದಿಲ್ಲ. ಬ್ರಾಹ್ಮಣರನ್ನು ಪೂಜಿಸಿದರೆ ನನ್ನನ್ನು ಪೂಜಿಸಿದಂತಾಗುವುದು.

೧೩. ಪ್ರಿಯಳೆ! ವೇದವ್ರತವನ್ನನುಷ್ಠಾನ ಮಾಡಿದವರೇ ಆಗಲಿ, ಹಾಗಿಲ್ಲದವರೇ ಆಗಲಿ ಭೂಮಿಯಲ್ಲಿರುವ ಬ್ರಾಹ್ಮಣರೆಲ್ಲರೂ ಪೂಜ್ಯರು.

೧೪. ಶ್ರಾದ್ಧದಲ್ಲಿ ಕ್ಷೇತ್ರ ನಿವಾಸಿಗಳಾದ ಬ್ರಾಹ್ಮಣರನ್ನು ಪರೀಕ್ಷಿಸಬಾರದು. ಬ್ರಾಹ್ಮಣರನ್ನು ಪರೀಕ್ಷಿಸಿದರೆ ದೊಡ್ಡ ಅಪವಾದವು ಸಂಭವಿಸುವುದು.

೧೫. ಶ್ರಾದ್ಧದಲ್ಲಿ ವೇದಾಧ್ಯಯನ ಸಂಪನ್ನರಾದ ಬ್ರಾಹ್ಮಣರೊಡನೆ ಕುರುಡ, ಕುಂಟ, ಗೂನು ಬೆನ್ನಿನವ, ಬಡವ, ರೋಗಿ ಇಂತಹ ಬ್ರಾಹ್ಮಣರನ್ನೂ ನಿಮಂತ್ರಣ ಮಾಡತಕ್ಕದು.

೧೬. ಹವ್ಯಕವ್ಯಗಳಲ್ಲಿ ಬ್ರಾಹ್ಮಣರು ಜಾತಿಮಾತ್ರದಿಂದಲೂ, ವೇದಾಭ್ಯಾಸದಿಂದಲೂ, ದ್ರವ್ಯದಿಂದಲೂ ಪೂಜ್ಯರು. ಅವರನ್ನು ಒಂದೆಡೆಯಲ್ಲಿಯೂ ನಿಂದಿಸಬಾರದು.

೧೭. ವಿದ್ವಾಂಸನು ನನ್ನ ಸ್ವರೂಪರಾಗಿರುವ ಬ್ರಾಹ್ಮಣರು ಕುರುಡ, ಕುಂಟ, ಕುಬ್ಜ, ದರಿದ್ರ, ರೋಗಿಗಳಾಗಿದ್ದರೂ ಅವರನ್ನು ಅವಮಾನ ಮಾಡಬಾರದು.

ಬಹವೋ ಹಿ ನ ಜಾನಂತಿ ನರಾ ಜ್ಞಾನಬಹಿಷ್ಕೃತಾಃ ।
ಯಥಾಹಂ ದ್ವಿಜರೂಪೇಣ ಚರಾಮಿ ಪೃಥಿವೀಮಿಮಾಂ ॥ ೧೮ ॥

ಮದ್ರೂಪಾನ್ ಘ್ನಂತಿ ಯೇ ವಿಪ್ರಾನ್ವಿಕರ್ಮ ಕಾರಯಂತಿ ಚ ।
ಅಪ್ರೇಷಣೇ ಪ್ರೇಷಯಂತಿ ದಾಸತ್ವಂ ಕಾರಯಂತಿ ಚ ॥ ೧೯ ॥

ಮೃತಾಂಸ್ತಾನ್ಕರಪತ್ರೇಣ ಯಮದೂತಾ ಮಹಾಬಲಾಃ ।
ನಿಕೃಂತಂತಿ ಯಥಾ ಕಾಷ್ಠಂ ಸೂತ್ರಮಾರ್ಗೇಣ ಶಿಲ್ಪಿನಃ ॥ ೨೦ ॥

ಯೇ ಚೈವಾಶ್ಲಕ್ಷ್ಣಯಾ ವಾಚಾ ತರ್ಜಯಂತಿ ನರಾಧಮಾಃ ।
ವದಂತಿ ಪರುಷಂ ಕ್ರೋಧಾತ್ಪಾದೇನ ನಿಹನಂತಿ ಚ ॥ ೨೧ ॥

ಮೃತಾಂಸ್ತಾನ್ಯಮಲೋಕಾ ಹಿ ನಿಹತ್ಯ ಧರಣೀತಲೇ ।
ಕ್ರೂರಪಾದೇನ ಚಾಕ್ರಮ್ಯ ಕ್ರೋಧಸಂರಕ್ತಲೋಚನಾಃ ॥ ೨೨ ॥

ಅಗ್ನಿವರ್ಣೈಶ್ಚ ಸಂದಂಶೈರ್ಜಿಹ್ವಾಮುದ್ಧರತೇ ಯಮಃ ।
ಯೇ ತು ವಿಪ್ರಾನ್ನಿರೀಕ್ಷಂತೇ ಪಾಪಾಃ ಪಾಪೇನ ಚಕ್ಷುಷಾ ॥ ೨೩ ॥

---

೧೮. ಮೂಢರಾದ ಮಾನವರನೇಕರು ಬ್ರಾಹ್ಮಣ ರೂಪದಿಂದ ಭೂಮಿಯಲ್ಲಿ ಸಂಚರಿಸುವ ನನ್ನನ್ನು ತಿಳಿಯುವುದಿಲ್ಲ.

೧೯-೨೦. ಯಾರು ನನ್ನ ಸ್ವರೂಪದಿಂದಿರುವ ಬ್ರಾಹ್ಮಣರನ್ನು ಕೊಲ್ಲುವರೊ, ಅವರಿಂದ ದುಷ್ಕರ್ಮವನ್ನು ಮಾಡಿಸುವರೊ, ಕಳಿಸಕೂಡದ ಸ್ಥಳಕ್ಕೆ ಕಳುಹಿಸುವರೊ, ಸೇವೆಯನ್ನು ಮಾಡಿಸುವರೊ, ಆ ಮನುಷ್ಯರು ಮೃತರಾದ ಕೂಡಲೇ ಅವರನ್ನು ಅತಿ ಬಲಿಷ್ಠರಾದ ಯಮ ದೂತರು ಬಡಗಿಗಳು ನೂಲಿನ ಗೆರೆಯನ್ನನುಸರಿಸಿ ಮರದ ದಿಮ್ಮಿಗಳನ್ನು ಗರಗಸದಿಂದ ಸೀಳುವಂತೆ ಸೀಳುವರು.

೨೧-೨೩. ಬ್ರಾಹ್ಮಣರನ್ನು ಕಠಿನವಾದ ಮಾತಿನಿಂದ ಹೆದರಿಸುವವರೂ, ಕೋಪದಿಂದ ಕಾಲಿನಿಂದ ಒದೆಯುವವರೂ ಆದ ಮನುಷ್ಯರು ಮೃತರಾದ ಕೂಡಲೆ ಅವರನ್ನು ಯಮನು ತನ್ನ ಲೋಕದಲ್ಲಿ ನೆಲದ ಮೇಲೆ ಕೆಡವಿ ಕೋಪದಿಂದ ತನ್ನ ಕಠಿನವಾದ ಕಾಲಿನಿಂದ ತುಳಿದು ಬೆಂಕಿಯ ಬಣ್ಣದ ಇಕ್ಕಳದಿಂದ ನಾಲಿಗೆಯನ್ನು ಕೀಳುತ್ತಾನೆ. ಪಾಪ ದೃಷ್ಟಿಯಿಂದ ಬ್ರಾಹ್ಮಣರನ್ನು ಕಾಣುವ ಪಾಪಿಗಳು ಅಬ್ರಾಹ್ಮಣ್ಯರೂ, ಬ್ರಹ್ಮದ್ವೇಷಿಗಳೂ ಎನ್ನಿಸಿಕೊಳ್ಳುವರು. ಅವರ ಕಣ್ಣುಗಳನ್ನು ಭಯಂಕರವೂ

ಅಬ್ರಹ್ಮಣ್ಯಾಸ್ತು ತೇ ಬಾಹ್ಯಾ ನಿತ್ಯಂ ಬ್ರಹ್ಮದ್ವಿಷೋ ನರಾಃ ।
ತೇಷಾಂ ಘೋರಾ ಮಹಾಕಾಯಾ ವಜ್ರತುಂಡಾ ಭಯಾನಕಾಃ ।
ಉದ್ಧರಂತಿ ಮುಹೂರ್ತೇನ ಚಕ್ಷುಃ ಕಾಕಾ ಯಮಾಜ್ಞಯಾ || ೨೪ ||
ಯಸ್ತಾಡಯತಿ ವಿಪ್ರಂ ವೈ ಕ್ಷತೇ ಕುರ್ಯಾದ್ಧಿ ಶೋಣಿತಂ ।
ಅಸ್ಥಿಭಂಗಂ ಚ ಪಾಪಃ ಕುರ್ಯಾತ್ ಪ್ರಾಣೈರ್ವಾಪಿ ವಿಯೋಜಯೇತ್ ||
ಬ್ರಹ್ಮಘ್ನಃ ಸ ತು ವಿಜ್ಞೇಯೋ ನ ತಸ್ಯ ನಿಷ್ಕೃತಿಃ ಸ್ಮೃತಾ ।
ಪಂಚಾಶತ್ಕೋಟಿಸಂಖ್ಯೇಷು ನರಕೇಷ್ವನುಪೂರ್ವಶಃ || ೨೬ ||
ಸ ಬಹೂನಿ ಸಹಸ್ರಾಣಿ ವರ್ಷಾಣಿ ಪಚ್ಯತೇ ಭೃಶಂ ।
ತಸ್ಮಾದ್ವಿಪ್ರೋ ವರಾರೋಹೇ ನಮಸ್ಕಾರ್ಯೋ ನೃಭಿಃ ಸದಾ || ೨೭ ||
ಅನ್ನಪಾನಪ್ರದಾನೈಸ್ತು ಪೂಜ್ಯಾ ಹಿ ಸತತಂ ದ್ವಿಜಾಃ ।
ಸರ್ವೇಷಾಂ ಚೈವ ದಾನಾನಾಂ ವಿಪ್ರಾಃ ಸರ್ವೇಽಧಿಕಾರಿಣಃ || ೨೮ ||
ನಾನ್ಯಃ ಸಮರ್ಥೋ ದೇವೇಶಿ ಗೃಹ್ಣನ್ಯಾತ್ಯಧಮಾಂ ಗತಿಂ ।
ತಪಸಾ ಪಾವಿತೋ ದೇವಿ ಬ್ರಾಹ್ಮಣೋ ಧೂತಕಿಲ್ಬಿಷಃ || ೨೯ ||
ನ ಸೀದೇತ್ಪ್ರತಿಗೃಹ್ಣಾನಃ ಪೃಥಿವೀಮಸುಸಾಗರಾಂ ।
ನಾಸ್ತಿ ಕಿಂಚಿನ್ಮಹಾದೇವಿ ದುಷ್ಕೃತಂ ಬ್ರಾಹ್ಮಣಸ್ಯ ತು || ೩೦ ||

ದೊಡ್ಡ ದೇಹವುಳ್ಳವೂ, ವಜ್ರದಂತಿರುವ ಕೊಕ್ಕುಳ್ಳವೂ ಆದ ಕಾಗೆಗಳು ಯಮನ ಅಪ್ಪಣೆಯಿಂದ ಸ್ವಲ್ಪ ಕಾಲದಲ್ಲಿಯೇ ಕೀಳುತ್ತವೆ.

೨೫—೨೬. ಬ್ರಾಹ್ಮಣನನ್ನು ಹೊಡೆದು ಗಾಯಮಾಡಿ ರಕ್ತವನ್ನು ಸುರಿಸಿದವನೂ, ಮೂಳೆಯನ್ನು ಮುರಿದವನೂ, ಕೊಂದವನೂ ಬ್ರಹ್ಮಘ್ನನಾಗುವನು. ಅವನಿಗೆ ಪ್ರಾಯಶ್ಚಿತ್ತವಿಲ್ಲ. ಅವನು ಐವತ್ತು ಕೋಟಿ ನರಕಗಳಲ್ಲಿ ಅನೇಕವರ್ಷಗಳ ಕಾಲ ಅತ್ಯಂತವಾಗಿ ದುಃಖಗೊಳ್ಳುವನು ಆದುದರಿಂದ ಮನುಷ್ಯರು ಯಾವಾಗಲೂ ಬ್ರಾಹ್ಮಣನನ್ನು ನಮಸ್ಕರಿಸಬೇಕು.

೨೮. ಬ್ರಾಹ್ಮಣರನ್ನು ಯಾವಾಗಲೂ ಅನ್ನಪಾನಗಳಿಂದ ಪೂಜಿಸಬೇಕು. ಎಲ್ಲ ದಾನಗಳಿಗೂ ಬ್ರಾಹ್ಮಣರು ಅಧಿಕಾರಿಗಳಾಗಿರುವರು.

೨೯. ದೇವೇಶಿ! ಇತರ ಜಾತಿಯಮಾನವರು ದಾನವನ್ನು ಸ್ವೀಕರಿಸಲು ಶಕ್ತರಲ್ಲ, ಅವರು ದಾನವನ್ನು ತೆಗೆದುಕೊಂಡರೆ ಅಧಮಗತಿಯನ್ನು ಹೊಂದುವರು. ಬ್ರಾಹ್ಮಣನು ತಪಸ್ಸಿನಿಂದ ಪಾಪರಹಿತನಾಗಿ ಪವಿತ್ರನಾಗಿರುವನು.

೩೦. ಬ್ರಾಹ್ಮಣನು ಸಮುದ್ರದ ವರೆಗಿನ ಭೂಮಿಯನ್ನು ದಾನ ತೆಗೆದುಕೊಂಡರೂ ಕೆಡುವುದಿಲ್ಲ. ಬ್ರಾಹ್ಮಣನಲ್ಲಿ ಸ್ವಲ್ಪವೂ ಪಾಪವಿರುವುದಿಲ್ಲ.

ಯಸ್ತು ಸ್ಥಿತಃ ಸದಾಽಧ್ಯಾತ್ಮೇ ನಿತ್ಯಂ ಸದ್ಭಾವಭಾವಿತಃ ।
ಬ್ರಾಹ್ಮಣೋ ಹಿ ಮಹದ್ಭೂತಂ ಜನ್ಮನಾ ಸಹ ಜಾಯತೇ ॥ ೩೧ ॥
ಲೋಕೇ ಲೋಕೇಶ್ವರಾಶ್ಚಾಪಿ ಸರ್ವೇ ಬ್ರಾಹ್ಮಣಪೂಜಕಾಃ ।
ತತಸ್ತಾನ್ನಾವಮನ್ಯೇತ ಯದೀಚ್ಛೇಜ್ಜೀವಿತಂ ಚಿರಂ ॥ ೩೨ ॥
ಬ್ರಾಹ್ಮಣಾಃ ಕುಪಿತಾ ಹನ್ಯುರ್ಭಸ್ಮೀಕುರ್ಯುಃ ಸ್ವತೇಜಸಾ ।
ಲೋಕಾನನ್ಯಾನ್ ಸೃಜೇಯುರ್ಲೋಕಪಾಲಾಂಸ್ತಥಾಽಪರಾನ್ ॥ ೩೩ ॥
ಅಪೇಯಃ ಸಾಗರೋ ಯೈಶ್ಚ ಕೃತಃ ಕೋಪಾನ್ಮಹಾತ್ಮಭಿಃ ।
ಯೇಷಾಂ ಕೋಪಾಗ್ನಿರದ್ಯಾಪಿ ದಂಡಕೇ ನೋಪಶಾಮ್ಯತಿ ॥ ೩೪ ॥
ಏತೇ ಸ್ವರ್ಗಸ್ಯ ನೇತಾರೋ ದೇವದೇವಾಃ ಸನಾತನಾಃ ।
ಏಭಿಶ್ಚಾಪಿ ಕೃತಃ ಪಂಥಾ ದೇವಯಾನಃ ಸ ಉಚ್ಯತೇ ॥ ೩೫ ॥
ತೇ ಪೂಜ್ಯಾಸ್ತೇ ನಮಸ್ಕಾರ್ಯಾಸ್ತೇಷು ಸರ್ವಂ ಪ್ರತಿಷ್ಠಿತಂ ।
ತೇ ವೈ ಲೋಕಾನಿಮಾನ್ ಸರ್ವಾನ್ಧಾರಯಂತಿ ಪರಸ್ಪರಂ ॥ ೩೬ ॥

---

೩೧. ಬ್ರಾಹ್ಮಣನು ಯಾವಾಗಲೂ ಸಾಧುವಾಗಿ ಪರಮಾತ್ಮ ಧ್ಯಾನನಿರತನಾಗಿರುವನು. ಅವನು ಹುಟ್ಟುವಾಗಲೆ ಮಹಾನುಭಾವನಾಗಿರುವನು.

೩೨. ಪ್ರಪಂಚದಲ್ಲಿ ಲೋಕಪಾಲಕರಾದ ದೇವತೆಗಳೂ ಬ್ರಾಹ್ಮಣರನ್ನು ಪೂಜಿಸುವರು. ಆದುದರಿಂದ ಬಹುಕಾಲ ಬದುಕಲಿಚ್ಛಿಸುವವನು ಅವನನ್ನು ಅವಮಾನ ಮಾಡಬಾರದು.

೩೩. ಕುಪಿತರಾದ ದ್ವಿಜರು ತಮ್ಮ ತೇಜಸ್ಸಿನಿಂದ ಕೊಲ್ಲುವರು. ಬೂದಿ ಮಾಡುವರು. ಬೇರೆ ಲೋಕಗಳನ್ನೂ, ಲೋಕಪಾಲಕರನ್ನೂ ಸೃಷ್ಟಿಸುವರು.

೩೪. ಮಹಾತ್ಮರಾದ ಬ್ರಾಹ್ಮಣರು ಸಮುದ್ರದ ನೀರನ್ನು ಕುಡಿಯಲನರ್ಹವಾಗಿ ಮಾಡಿದರು. ಅವರ ಕೋಪಾಗ್ನಿಯು ಈಗಲೂ ದಂಡಕಾರಣ್ಯದಲ್ಲಿ ಶಾಂತವಾಗುವುದಿಲ್ಲ.

೩೫. ದೇವತೆಗಳಿಗೂ ದೇವತೆಗಳಾಗಿ ಸನಾತನರಾದ ಈ ಬ್ರಾಹ್ಮಣರು ಸ್ವರ್ಗಕ್ಕೆ ಒಡೆಯರಾಗಿರುವರು. ಅವರು ಮಾಡಿದ ದಾರಿಯು ದೇವಯಾನವೆಂದು ಹೇಳಿಸಿಕೊಳ್ಳಲ್ಪಡುವುದು.

೩೬. ಅವರು ಪೂಜ್ಯರೂ, ವಂದ್ಯರೂ ಆಗಿರುವರು. ಅವರಲ್ಲಿ ಎಲ್ಲವೂ ನೆಲೆಸಿರುವುದು. ಅವರು ಈ ಸಕಲ ಲೋಕಗಳನ್ನೂ ಅನ್ಯೋನ್ಯವಾಗಿ ಧರಿಸಿರುವರು.

ಗೂಢಸ್ವಾಧ್ಯಾಯತಪಸೋ ಬ್ರಾಹ್ಮಣಾಃ ಶಂಸಿತವ್ರತಾಃ ।
ವಿದ್ಯಾಸ್ನಾತಾ ವ್ರತಸ್ನಾತಾ ಅನಪಾಶ್ರಿತ್ಯ ಜೀವಿನಃ ॥ ೩೭ ॥
ಆಶೀವಿಷಾ ಇವ ಕ್ರುದ್ಧಾ ಉಪಚರ್ಯಾ ಹಿ ಬ್ರಾಹ್ಮಣಾಃ ।
ತಪಸಾ ದೀಪ್ಯಮಾನಾಸ್ತೇ ದಹೇಯುಃ ಸಾಗರಾನಪಿ ॥ ೩೮ ॥
ಬ್ರಾಹ್ಮಣೇಷು ಚ ತುಷ್ಟೇಷು ತುಷ್ಯಂತೇ ಸರ್ವದೇವತಾಃ ।
ತೇ ಗತಿಃ ಸರ್ವಭೂತಾನಾಮಧ್ಯಾತ್ಮಗತಿಚಿಂತಕಾಃ ॥ ೩೯ ॥
ಆದಿಮಧ್ಯಾವಸಾನಾನಾಂ ಜ್ಞಾನಾನಾಂ ಛಿನ್ನಸಂಶಯಾಃ ।
ಪರಾಪರವಿಶೇಷಜ್ಞಾ ನೇತಾರಃ ಪರಮಾಂ ಗತಿಂ ।
ಅವಧ್ಯಾ ಬ್ರಾಹ್ಮಣಾಸ್ತಸ್ಮಾತ್ಪಾಪೇಷ್ವಪಿ ರತಾಃ ಸದಾ ॥ ೪೦ ॥
ಯಶ್ಚ ಸರ್ವಮಿದಂ ಹನ್ಯಾದ್ಬ್ರಾಹ್ಮಣಂ ಚಾಪಿ ತತ್ಸಮಂ ।
ಸೋಽಗ್ನಿಃ ಸೋಽರ್ಕೋ ಮಹಾತೇಜಾ ವಿಷಂ ಭವತಿ ಕೋಪಿತಃ ॥ ೪೧ ॥
ಭೂತಾನಾಮಗ್ರಭುಗ್ವಿಪ್ರೋ ವರ್ಣಶ್ರೇಷ್ಠಃ ಪಿತಾ ಗುರುಃ ।
ನ ಸ್ಕಂದತೇ ನ ವ್ಯಥತೇ ನ ವಿನಶ್ಯತಿ ಕರ್ಹಿಚಿತ್ ॥ ೪೨ ॥

---

೩೭. ಬ್ರಾಹ್ಮಣರು ಗುಪ್ತವಾಗಿ ವೇದಾಧ್ಯಯನ ತಪಸ್ಸುಗಳಲ್ಲಿ ನಿರತರೂ, ಕಠಿನನಿಯಮವುಳ್ಳವರೂ, ವಿದ್ಯಾ, ವ್ರತಗಳಲ್ಲಿ ಪಾರಂಗತರೂ ಮತ್ತೊಬ್ಬರ ಆಶ್ರಯವಿಲ್ಲದೆ ಜೀವಿಸುವವರೂ ಆಗಿರುವರು.

೩೮. ಕುಪಿತರಾದ ಬ್ರಾಹ್ಮಣರು ನಾಗರಹಾವಿನಂತೆ ತೀಕ್ಷ್ಣವಾದ ವಿಷವುಳ್ಳವರು ಉಪಚರಿಸಬೇಕು. ಅವರು ತಪಸ್ಸಿನಿಂದ ಪ್ರಕಾಶಗೊಂಡು ಸಮುದ್ರಗಳನ್ನೂ ಸುಟ್ಟಾರು.

೩೯. ಬ್ರಾಹ್ಮಣರು ಸಂತುಷ್ಟರಾದರೆ ಸಕಲದೇವತೆಗಳೂ ಸಂತೋಷಗೊಳ್ಳುವರು. ಪರಮಾತ್ಮಧ್ಯಾನನಿರತರಾದ ಅವರು ಸಕಲ ಪ್ರಾಣಿಗಳಿಗೂ ಆಶ್ರಯರು.

೪೦. ಆದಿಮಧ್ಯಾವಸಾನರೂಪವಾದ ಜ್ಞಾನಗಳಲ್ಲಿ ಸಂಶಯವಿಲ್ಲದ ಪರಾಪರವಸ್ತುಗಳ ವಿಶೇಷವನ್ನರಿತ ಆ ಬ್ರಾಹ್ಮಣರು ಉತ್ತಮ ಗತಿಯನ್ನೀಯುವರು. ಆದುದರಿಂದ ಅವರು ಯಾವಾಗಲೂ ಪಾಪಕಾರ್ಯಗಳಲ್ಲಿ ನಿರತರಾಗಿದ್ದರೂ ಕೊಲ್ಲಲನರ್ಹರು.

೪೧. ಬ್ರಾಹ್ಮಣನು ಈ ಸಮಸ್ತ ಪ್ರಪಂಚವನ್ನೂ, ತನಗೆ ಸಮನಾದ ಇತರ ಬ್ರಾಹ್ಮಣನನ್ನೂ ನಾಶಮಾಡಿಯಾನು. ಅಗ್ನಿ ಸೂರ್ಯರಂತೆ ಅತ್ಯಂತ ತೇಜಸ್ವಿಯಾದ ಅವನನ್ನು ಕೋಪಗೊಳಿಸಿದರೆ ವಿಷದಂತಾಗುವನು.

೪೨! ಪ್ರಾಣಿಗಳಲ್ಲಿ ಪ್ರಥಮಭೋಕ್ತನೂ, ವರ್ಣೋತ್ತಮನೂ, ತಂದೆಯೂ, ಗುರುವೂ ಆದ ಬ್ರಾಹ್ಮಣನು ಒಂದು ಕಡೆಯಲ್ಲಿಯೂ ಭ್ರಷ್ಟನೂ, ವ್ಯಥೆಗೊಂಡವನೂ, ನಷ್ಟನೂ ಆಗುವುದಿಲ್ಲ.

ವರಿಷ್ಠಮಗ್ನಿಹೋತ್ರಾದ್ಧಿ ಬ್ರಾಹ್ಮಣಸ್ಯ ಮುಖೇ ಹುತಂ ।
ವಿಪ್ರಾಣಾಂ ವಪುರಾಶ್ರಿತ್ಯ ಸರ್ವಾಸ್ತಿಷ್ಠಂತಿ ದೇವತಾಃ ॥ ೪೩ ॥
ಅತಃ ಪೂಜ್ಯಾಸ್ತು ತೇ ವಿಪ್ರಾ ಅಲಾಭೇ ಪ್ರತಿಮಾದಯಃ ॥ ೪೪ ॥
ಅವಿದ್ವೋ ವಾ ಸವಿದ್ವೋ ವಾ ಬ್ರಾಹ್ಮಣೋ ಮಮ ದೈವತಂ ।
ಪ್ರಣೀತಶ್ಚಾಪ್ರಣೀತಶ್ಚ ಯಥಾಗ್ನಿರ್ದೈವತಂ ಮಹತ್ ॥ ೪೫ ॥
ಸ್ಮಶಾನೇಷ್ವಪಿ ತೇಜಸ್ವೀ ಪಾವಕೋ ನೈವ ದುಷ್ಯತಿ ।
ಹವ್ಯಕವ್ಯವ್ಯಪೇತೋಽಪಿ ಬ್ರಾಹ್ಮಣೋ ನೈವ ದುಷ್ಯತಿ ॥ ೪೬ ॥
ಮಹಾಪಾತಕವರ್ಜ್ಯಂ ಹಿ ಪೂಜ್ಯೋ ವಿಪ್ರೋ ವರಾನನೇ ।
ಸರ್ವಥಾ ಬ್ರಾಹ್ಮಣಾಃ ಪೂಜ್ಯಾಃ ಸರ್ವಥಾ ದೈವತಂ ಮಹತ್ ।
ತಸ್ಮಾತ್ಸರ್ವಪ್ರಯತ್ನೇನ ರಕ್ಷೇದಾಪದ್ಗತಂ ದ್ವಿಜಂ ॥ ೪೭ ॥
ಏವಂ ವಿಪ್ರಾ ಮಹಾದೇವಿ ಪೂಜ್ಯಾಃ ಸರ್ವತ್ರ ಮಾನವೈಃ ।
ಕಿಂ ಪುನಃ ಸಂಜಿತಾತ್ಮನೋ ವಿಶೇಷಾತ್ ಕ್ಷೇತ್ರವಾಸಿನಃ ॥ ೪೮ ॥

---

೪೩. ಅಗ್ನಿಹೋತ್ರಕ್ಕಿಂತ ಬ್ರಾಹ್ಮಣನ ಮುಖದಲ್ಲಿ ಹೋಮಿಸಿದುದು ಉತ್ತಮವಾದುದು. ಸರ್ವ ದೇವತೆಗಳೂ, ಬ್ರಾಹ್ಮಣರ ದೇಹವನ್ನಾಶ್ರಯಿಸಿ ನೆಲೆಸಿರುವರು.

೪೪. ಆದುದರಿಂದ ಆ ಬ್ರಾಹ್ಮಣರು ಪೂಜ್ಯರು. ಬ್ರಾಹ್ಮಣರು ಸಿಕ್ಕದಿದ್ದರೆ ಪ್ರತಿಮೆ ಮೊದಲಾದವುಗಳನ್ನು ಪೂಜಿಸಬೇಕು.

೪೫. ಬ್ರಾಹ್ಮಣನು ವಿದ್ಯಾವಂತನಾಗಿರಲಿ ಆಗದಿರಲಿ ಅವನು ನನಗೆ ಸಂಸ್ಕಾರವನ್ನು ಹೊಂದಿದ ಅಥವಾ ಹೊಂದದಿರುವ ಬೆಂಕಿಯಂತೆ ಉತ್ತಮ ದೇವತೆಯು.

೪೬. ತೇಜಸ್ಸುಳ್ಳ ಅಗ್ನಿಯು ಸ್ಮಶಾನದಲ್ಲಿದ್ದರೂ ದುಷ್ಟವಾಗುವುದಿಲ್ಲ. ಬ್ರಾಹ್ಮಣನು ಹವ್ಯಕವ್ಯರಹಿತನಾದರೂ ದುಷ್ಟವಾಗುವುದಿಲ್ಲ.

೪೭. ಪ್ರಿಯಳೆ! ಮಹಾಪಾತಕವನ್ನೆಸಗಿದ ವಿಪ್ರನು ಪೂಜ್ಯನು. ಸರ್ವ ಪ್ರಕಾರದಿಂದಲೂ ಬ್ರಾಹ್ಮಣರು ಪೂಜ್ಯರು ಮತ್ತು ಉತ್ತಮ ದೇವತೆಗಳು. ಆದುದರಿಂದ ಸಕಲ ಪ್ರಯತ್ನಗಳಿಂದ ಆಪತ್ತನ್ನು ಹೊಂದಿದ ದ್ವಿಜನನ್ನು ಕಾಪಾಡಬೇಕು.

೪೮. ಮಹಾದೇವಿ! ಹೀಗೆ ಮನುಷ್ಯರು ಎಲ್ಲೆಡೆಯಲ್ಲಿಯೂ, ಬ್ರಾಹ್ಮಣರನ್ನು ಪೂಜಿಸಬೇಕು. ಜಿತೇಂದ್ರಿಯರೂ, ಕ್ಷೇತ್ರವಾಸಿಗಳೂ ಆದ ಬ್ರಾಹ್ಮಣರ ವಿಷಯದಲ್ಲಿ ಹೇಳತಕ್ಕದ್ದೇನಿದೆ.

ಅಥ ಕ್ಷೇತ್ರಸ್ಥಿತಾನಾಂ ಚ ಚತುರಾಶ್ರಮವಾಸಿನಾಂ ।
ವಿಪ್ರಾಣಾಂ ವೃತ್ತಿತೋ ಭೇದಂ ಪ್ರವಕ್ಷ್ಯಾಮ್ಯಾನುಪೂರ್ವಶಃ ॥ ೪೯ ॥
ಕ್ಷೇತ್ರಸ್ಯ ಸಂನ್ಯಾಸವಿಧಿಂ ಯೇ ಜಾನಂತಿ ದ್ವಿಜಾತಯಃ ।
ವೃತ್ತಿಭೇದಂ ಕ್ರಮಾಚ್ಚೈವ ತೇ ಕ್ಷೇತ್ರಫಲಭಾಗಿನಃ ॥ ೫೦ ॥
ಯಥಾ ಕ್ಷೇತ್ರೇ ನಿವಸತಾ ವರ್ತಿತವ್ಯಂ ದ್ವಿಜಾತಿನಾ ।
ಪ್ರಾಜಾಪತ್ಯಾದಿಭೇದೇನ ತಚ್ಛೃಣು ತ್ವಂ ವರಾನನೇ ॥ ೫೧ ॥
ಪ್ರಾಜಾಪತ್ಯಾ ಮಹೀಪಾಲಾಃ ಕಪೋತಾ ಗ್ರಂಥಿಕಾಸ್ತಥಾ ।
ಕುಟಿಕಾಶ್ಚಾಥ ವೈತಾಲಾಃ ಪದ್ಮಹಂಸಾ ವರಾನನೇ ॥ ೫೨ ॥
ಧೃತರಾಷ್ಟ್ರಾ ಬಕಾಃ ಕಂಕಾ ಗೋಪಾಲಾಶ್ಚೈವ ಭಾಮಿನಿ ।
ತ್ರುಟಿಕಾ ಮಠರಾಶ್ಚೈವ ಗುಟಿಕಾ ದಂಡಿಕಾಃ ಪರೇ ॥ ೫೩ ॥
ಕ್ಷೇತ್ರಸ್ಥಾನಾಮಿಮೇ ಭೇದಾ ವೃತ್ತಿಂ ತೇಷಾಂ ಶೃಣುಷ್ವ ಚ ॥ ೫೪ ॥
ಅಹಿಂಸಾ ಗುರುಶುಶ್ರೂಷಾ ಸ್ವಾಧ್ಯಾಯಃ ಶೌಚಸಂಯಮಃ ।
ಸತ್ಯಮಸ್ತೇಯಮೇತದ್ಧಿ ಪ್ರಾಜಾಪತ್ಯಂ ವ್ರತಂ ಸ್ಮೃತಂ ॥ ೫೫ ॥
ಕ್ಷಯಪುಷ್ಟ್ಯರ್ಥವಿದ್ವೇಷಕರ್ಮಭಿಃ ಶಾಂತಿಕಾದಿಭಿಃ ।
ಪಾಲಯಂತಿ ಮಹೀಂ ಯಸ್ಮಾನ್ಮಹೀಪಾಲಾಸ್ತತಃ ಸ್ಮೃತಾಃ ॥ ೫೬ ॥

---

೪೯. ತರುವಾಯ ಕ್ಷೇತ್ರನಿವಾಸಿಗಳಾದ ನಾಲ್ಕು ಆಶ್ರಮದ ಬ್ರಾಹ್ಮಣರ ವೃತ್ತಿಯಿಂದ ಭೇದವನ್ನು ಕ್ರಮವಾಗಿ ಹೇಳುವೆನು.

೫೦. ಕ್ಷೇತ್ರ, ಸಂನ್ಯಾಸ ಇವುಗಳ ವಿಧಿಯನ್ನೂ, ಬೇರೆ ಬೇರೆ ವೃತ್ತಗಳನ್ನೂ ಅರಿತ ಬ್ರಾಹ್ಮಣರು ಕ್ಷೇತ್ರಫಲವನ್ನು ಪಡೆಯುವರು.

೫೧, ಸುಂದರಿ! ಪ್ರಾಜಾಪತ್ಯಾದಿ ಭೇದಗಳಿಂದ ಭಿನ್ನರಾಗಿ ಕ್ಷೇತ್ರದಲ್ಲಿ ವಾಸಿಸುವ ಬ್ರಾಹ್ಮಣರು ಹೇಗಿರಬೇಕೆಂಬುದನ್ನು ಹೇಳುವೆನು; ಕೇಳು.

೫೨–೫೪. ಪ್ರಾಜಾಪತ್ಯ, ಮಹೀಪಾಲ, ಕಪೋತ, ಗ್ರಂಥಿಕ. ಕುಟಿಕ, ವೈತಾಲ, ಪದ್ಮ, ಹಂಸ, ಧೃತರಾಷ್ಟ್ರ, ಬಕ, ಕಂಕ, ಗೋಪಾಲ, ತ್ರುಟಿಕ, ಮಠರ, ಗುಟಿಕ. ದಂಡಿಕ ಎಂದು ಕ್ಷೇತ್ರವಾಸಿಗಳು ಬೇರೆ ಬೇರೆಯಾಗಿರುವರು. ಅವರ ವೃತ್ತಿಯನ್ನು ಕೇಳು.

೫೫. ಅಹಿಂಸಾ, ಗುರುಸೇವೆ, ವೇದಾಧ್ಯಯನ, ಶೌಚ, ಇಂದ್ರಿಯನಿಗ್ರಹ, ಸತ್ಯ, ಅಸ್ತೇಯ (ಕದಿಯದಿರುವುದು) ಇವು ಪ್ರಾಜಾಪತ್ಯ ಬ್ರಾಹ್ಮಣರ ನಿಯಮಗಳು.

೫೬. ಕ್ಷಯ, ಪುಷ್ಟಿ, ಅರ್ಥ ದ್ವೇಷ, ಶಾಂತಿ ಮೊದಲಾದ ಕರ್ಮಗಳಿಂದ ಬ್ರಾಹ್ಮಣರು ಭೂಮಿಯನ್ನು ಕಾಪಾಡುವುದರಿಂದ ಅವರು ಮಹೀಪಾಲರೆಂದು ಪ್ರಸಿದ್ಧರಾದರು.

ಪತಿತಾ ಯೇ ಕಣಾ ಭೂಮೌ ಸಂಹರಂತಿ ಕಪೋತವತ್ ।
ಉದ್ಧೃತ್ಯಾಜೀವನಂ ಯೇಷಾಂ ಕಪೋತಾಸ್ತೇ ತು ಸಾಧಕಾಃ ॥ ೫೭ ॥
ಗೃಹಂ ಕೃತ್ವಾ ತು ಸದ್ಗ್ರಂಥಾಃ ಸಹಸೈವ ತ್ಯಜಂತಿ ಯೇ ।
ಕುಟಿಕಾಃ ಸಾಧಕಾಸ್ತೇ ವೈ ಶಿವಾರಾಧನತತ್ಪರಾಃ ॥ ೫೮ ॥
ತೀರ್ಥಾಸಕ್ತಾಃ ಸಪತ್ನೀಕಾ ಯಥಾಲಬ್ಧೋಪಜೀವಿನಃ ।
ಮಹಾಸಾಹಸಸಂಯುಕ್ತಾಸ್ತೇ ವೈತಾಲಾಖ್ಯಾಸ್ತು ಸಾಧಕಾಃ ॥ ೫೯ ॥
ಸಂಯತಾಃ ಕಾಮನಾಸಕ್ತಾಃ ರಾಜ್ಯಕಾಮಾರ್ಥಸಾಧಕಾಃ ।
ಪದ್ಮಾಸ್ತೇ ಸಾಧಕಾಃ ಖ್ಯಾತಾ ಭಿಕ್ಷಾಚರ್ಯಾರತಾಃ ಸದಾ ॥ ೬೦ ॥
ಜ್ಞಾನಯೋಗಸಮಾಯುಕ್ತಾ ದ್ವೈತಾಚಾರರತಾಶ್ಚ ಯೇ ।
ಹಂಸಾಸ್ತೇ ಸಾಧಕಾಃ ಖ್ಯಾತಾಃ ಸ್ವಯಮುತ್ಪನ್ನಸಂವಿದಃ ॥ ೬೧ ॥
ಬ್ರಹ್ಮಚರ್ಯೇಣ ಸತ್ತ್ವೇನ ತಥಾಲುಬ್ಧತಯಾಪಿ ವಾ ।
ಜಿತಂ ಜಗದ್ಧಾರಯಂತೋ ಧೃತರಾಷ್ಟ್ರಾ ಮತಾಸ್ತು ಯೇ ॥ ೬೨ ॥
ಗೂಢಾಶ್ಚರಂತಿ ಯೇ ಜ್ಞಾನಂ ವ್ರತಂ ಧರ್ಮಮಥಾಪಿ ವಾ ।
ಸ್ವಾರ್ಥೈಕಾಗತನಿಷ್ಠಾಸ್ತು ಬಕಾಸ್ತೇ ಸಾಧಕಾಃ ಮತಾಃ ॥ ೬೩ ॥

---

೫೭. ಭೂಮಿಯಲ್ಲಿ ಬಿದ್ದಿರುವ ಕಾಳುಗಳನ್ನು ಪಾರಿವಾಳದಂತೆ ಆರಿಸಿ ತಿಂದು ಜೀವಿಸುವವರು ಕಪೋತ ಬ್ರಾಹ್ಮಣರು.

೫೮. ಮನೆಯನ್ನು ನಿರ್ಮಿಸಿ ಕೂಡಲೆ ಬಿಡುವವರೂ ಶಿವಪೂಜೆಯಲ್ಲಿ ಆಸಕ್ತರೂ ಆದ ಬ್ರಾಹ್ಮಣರು ಕುಟಿಕರೆಸುವರು.

೫೯. ಹೆಂಡತಿಯೊಡನೆ ತೀರ್ಥಯಾತ್ರಾಸಕ್ತರಾಗಿ ಸಿಕ್ಕಿದಷ್ಟನ್ನು ತಿಂದು ಜೀವಿಸುವವರೂ, ಅತಿಶಯ ಸಾಹಸವುಳ್ಳವರೂ ಆದ ಬ್ರಾಹ್ಮಣರು ವೈತಾಳರು.

೬೦. ಜಿತೇಂದ್ರಿಯರೂ, ಕಾಮಾಸಕ್ತರೂ, ರಾಜ್ಯ, ಕಾಮ, ಅರ್ಥಗಳನ್ನು ಸಾಧಿಸುವವರೂ, ಭಿಕ್ಷಾಟನೆಯಲ್ಲಿ ನಿರತರೂ ಆದವರು ಪದ್ಮಬ್ರಾಹ್ಮಣರು.

೬೧. ಜ್ಞಾನಯೋಗ ದ್ವೈತಾಚಾರದಲ್ಲಿ ನಿರತರೂ, ಶಾಸ್ತ್ರಾದಿವ್ಯಾಸಂಗವಿಲ್ಲದೆ ತಾನಾಗಿಯೇ ಜನಿಸಿದ ಜ್ಞಾನವುಳ್ಳಸಾಧಕರಾದ ಬ್ರಾಹ್ಮಣರು ಹಂಸರು.

೬೨. ಬ್ರಹ್ಮಚರ್ಯದಿಂದಲೂ, ಸತ್ವಗುಣದಿಂದಲೂ, ಅಲೋಭದಿಂದಲೂ, ಪ್ರಪಂಚವನ್ನು ಜಯಿಸಿ ಪೋಷಿಸುವವರು ಧೃತರಾಷ್ಟ್ರ ಬ್ರಾಹ್ಮಣರು.

೬೩. ಜ್ಞಾನವನ್ನಾಗಲಿ, ವ್ರತವನ್ನಾಗಲಿ, ಧರ್ಮವನ್ನಾಗಲಿ ಗುಪ್ತವಾಗಿ ಆಚರಿಸುತ್ತ ಸ್ವಾರ್ಥದಲ್ಲಿ ನಿರತರಾದವರು ಬಕ ಬ್ರಾಹ್ಮಣರು.

ಜಲಾಶ್ರಯಂ ಸಮಾಶ್ರಿತ್ಯ ಸ್ಥಿತಾ ಉತ್ಕೃಷ್ಟಸಿದ್ಧಯೇ ।
ಬಿಸಶೃಂಗಾಟಿಕಾಹಾರಾಸ್ತೇ ಕಂಕಾಃ ಸಾಧಕಾಃ ಸ್ಮೃತಾಃ ॥ ೬೪ ॥
ಗೋಭಿಃ ಸಾರ್ಧಂ ವ್ರಜಂತ್ಯತ್ರ ಗೋಷ್ಠೇ ಚ ನಿವಸಂತಿ ಯೇ ।
ಪಂಚಗವ್ಯರಸಾ ಯೇ ವೈ ಗೋಪಾಲಾಸ್ತೇ ತು ಸಾಧಕಾಃ ॥ ೬೫ ॥
ಕೃಚ್ಛ್ರಚಾಂದ್ರಾಯಣೈಶ್ಚೈವ ಕ್ಷಪಯಂತಿ ಸ್ವಕಂ ವಪುಃ ।
ತ್ರುಟಿಮಾತ್ರಾಶನಾಸ್ತೇ ತು ತ್ರುಟಿಕಾಃ ಸಾಧಕಾ ಮತಾಃ ॥ ೬೬ ॥
ಕೃತ್ವಾ ಕುಶಮಯೀಂ ಪತ್ನೀಂ ಮಠೇ ಯೇ ಗೃಹಮೇಧಿನಃ ।
ಭೈಕ್ಷವೃತ್ತಿರತಾಃ ಶುದ್ಧಾ ಮಠರಾಸ್ತೇ ತು ಸಾಧಕಾಃ ॥ ೬೭ ॥
ಗ್ರಾಸಮಾತ್ರಸಮಾನಾಭಿರ್ಗುಟಿಕಾಭಿರಥಾಷ್ಟಭಿಃ ।
ಕಂದಮೂಲಫಲೋತ್ಥಾಭಿರ್ಗುಟಿಕಾಸ್ತೇ ದ್ವಿಜಾತಯಃ ॥ ೬೮ ॥
ಸ್ವದೇಹದಂಡನೈರ್ಯುಕ್ತಾ ರಾತ್ರೌ ವೀರಾಸನೇ ಸ್ಥಿತಾಃ ।
ದಂಡಿನಸ್ತೇ ಸಮಾಖ್ಯಾತಾಃ ಸರ್ವಮೇತತ್ತವೋದಿತಂ ॥ ೬೯ ॥
ಸಾಮಾನ್ಯೋಽಪಿ ವಿಶೇಷಶ್ಚ ವೃತ್ತಿನೋ ಗೃಹಿಣೋಽಪಿ ವಾ ।
ತೇಷಾಂ ಭೇದೋ ಮಯಾ ಖ್ಯಾತಃ ಸಮ್ಯಕ್ ಕ್ಷೇತ್ರನಿವಾಸಿನಾಂ ॥ ೭೦ ॥

---

೬೪. ಉತ್ಕೃಷ್ಟವಾದ ಇಷ್ಟಸಿದ್ಧಿಗಾಗಿ ಸರೋವರದಲ್ಲಿದ್ದು ತಾವರೆ ದಂಟು, ಕಾಯಿಗಳನ್ನು ತಿನ್ನುತ್ತ ಜೀವಿಸುವವನು ಕಂಕ ಬ್ರಾಹ್ಮಣರು.

೬೫. ಗೋವುಗಳೊಡನೆ ಸಂಚರಿಸುತ್ತಲೂ, ಗೋವಿನ ಕೊಟ್ಟಿಗೆಯಲ್ಲಿ ವಾಸಿಸುತ್ತಲೂ, ಪಂಚಗವ್ಯವನ್ನು ಕುಡಿಯುತ್ತಲೂ ಜೀವಿಸುವ ಬ್ರಾಹ್ಮಣರು ಗೋಪಾಲರು.

೬೬. ತ್ರ್ಯಣುಕದಷ್ಟು ಆಹಾರವನ್ನು ತಿನ್ನುತ್ತ ಕೃಚ್ಛ್ರಚಾಂದ್ರಾಯಣಗಳಿಂದ ಶರೀರವನ್ನು ಕ್ಷೀಣಗೊಳಿಸುವವರು ತ್ರುಟಿಕ ಬ್ರಾಹ್ಮಣರು.

೬೭. ದರ್ಭೆಯರೂಪದಿಂದಿರುವ ಪತ್ನಿಯನ್ನು ನಿರ್ಮಿಸಿ ಮಠದಲ್ಲಿ ಭಿಕ್ಷೆಯಿಂದ ಜೀವಿಸುತ್ತ ಶುದ್ಧರಾದ ಗೃಹಸ್ಥರು ಮಠರ ಬ್ರಾಹ್ಮಣರು.

೬೮. ಗೆಡ್ಡೆ ಗೆಣಸುಗಳ ಗ್ರಾಸಪರಿಮಾಣದ ಎಂಟು ಗುಳಿಗೆಗಳಿಂದ ಜೀವಿಸುವವರು ಗುಟಿಕ ಬ್ರಾಹ್ಮಣರು.

೬೯. ತಮ್ಮ ದೇಹವನ್ನು ದಂಡಿಸುತ್ತ ರಾತ್ರಿಯಲ್ಲಿ ವೀರಾಸನದಲ್ಲಿರುವವರು ದಂಡಿ ಬ್ರಾಹ್ಮಣರು. ಹೀಗೆ ಸಮಸ್ತವನ್ನೂ ನಿನಗೆ ಹೇಳಿರುವೆನು.

೭೦. ಹೀಗೆ ಪ್ರಭಾಸಕ್ಷೇತ್ರವಾಸಿಗಳಾದ ಯತಿಗಳ ಮತ್ತು ಗೃಹಸ್ಥರ ಸಾಮಾನ್ಯ ವಿಶೇಷ ಭೇದಗಳನ್ನು ನಿನಗೆ ಚೆನ್ನಾಗಿ ಹೇಳಿರುವೆನು.

ಏವಮಾದಿಧರ್ಮಯುಕ್ತಾಃ ಪ್ರಭಾಸಕ್ಷೇತ್ರವಾಸಿನಃ ।
ತೈಃ ಪೂಜ್ಯೋ ಭಗವಾನ್ದೇವೋ ಬಾಲರೂಪೀ ಪಿತಾಮಹಃ ॥ ೨೧ ॥
ಮಹಾಪಾತಕಿನೋ ಯೇ ತು ಯೇ ತು ವಿಪ್ರೈರ್ಬಹಿಷ್ಕೃತಾಃ
ನ ಚ ತೇ ಸಂಸ್ಪೃಶೇಯುರ್ವೈ ಬ್ರಹ್ಮಾಣಂ ಬಾಲರೂಪಿಣಂ ॥ ೨೨ ॥
ಬ್ರಹ್ಮಚಾರೀ ಸದಾ ದಾಂತೋ ಜಿತಕ್ರೋಧೋ ಜಿತೇಂದ್ರಿಯಃ ।
ಏವಂ ತೇ ಬ್ರಾಹ್ಮಣಾಃ ಖ್ಯಾತಾಃ ಕ್ಷೇತ್ರಮಧ್ಯನಿವಾಸಿನಃ ॥ ೨೩ ॥
ತೈಃ ಪೂಜ್ಯೋ ಭಗವಾನ್ದೇವೋ ಬಾಲರೂಪೀ ಪಿತಾಮಹಃ ।
ಯೋ ವೇದಾಧ್ಯಯನೇ ಯುಕ್ತಾಸ್ತೈಃ ಪ್ರಪೂಜ್ಯಃ ಪಿತಾಮಹಃ ॥ ೨೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಾಹ್ಮಣಪ್ರಶಂಸಾವರ್ಣನಂ ನಾಮ
ಷಡುತ್ತರಶತತಮೋಽಧ್ಯಾಯಃ

---

೨೧. ಪ್ರಭಾಸಕ್ಷೇತ್ರವಾಸಿಗಳು ಇವೇ ಮೊದಲಾದ ಧರ್ಮಗಳಿಂದ ಸಹಿತರಾಗಿ ಬಾಲರೂಪಿಯಾದ ಬ್ರಹ್ಮನನ್ನು ಪೂಜಿಸುವರು.

೨೨. ಮಹಾಪಾತಕಿಗಳೂ, ಬ್ರಾಹ್ಮಣರಿಂದ ಬಹಿಷ್ಕೃತರೂ ಆದವರು ಬಾಲರೂಪಿಯಾದ ಬ್ರಹ್ಮನನ್ನು ಮುಟ್ಟಕೂಡದು.

೨೩. ಆ ಕ್ಷೇತ್ರದ ಮಧ್ಯದಲ್ಲಿ ವಾಸಿಸುವ ಬ್ರಾಹ್ಮಣರು ಬ್ರಹ್ಮಚಾರಿಗಳೂ, ಸಿಟ್ಟಿಲ್ಲದವರೂ, ಜಿತೇಂದ್ರಿಯರೂ, ದಾಂತರೂ ಆಗಿರುವರು.

೨೪. ವೇದಾಧ್ಯಯನ ಸಂಪನ್ನರಾದ ಆ ಬ್ರಾಹ್ಮಣರು ಬಾಲರೂಪಿ ಬ್ರಹ್ಮನನ್ನು ಪೂಜಿಸಲರ್ಹರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬ್ರಾಹ್ಮಣಪ್ರಶಂಸಾವರ್ಣನವೆಂಬ
ನೂರಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತೋತ್ತರಶತತಮೋಽಧ್ಯಾಯಃ

ಬಾಲರೂಪಿಬ್ರಹ್ಮಣೋ ಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ಪೂಜಾವಿಧಾನಂ ತೇ ಕಥಯಾಮಿ ಸಮಾಸತಃ ।
ಭಕ್ತಿಭೇದಾನ್ಪೃಥಕ್ತಸ್ಯ ಬ್ರಹ್ಮಣೋ ಬಾಲರೂಪಿಣಃ ॥ ೧ ॥
ರಥಯಾತ್ರಾವಿಧಾನಂ ತು ಸ್ತೋತ್ರಮಂತ್ರವಿಧಿಕ್ರಮಂ ।
ವಿವಿಧಾ ಭಕ್ತಿರುದ್ದಿಷ್ಟಾ ಮನೋವಾಕ್ಕಾಯಸಂಭವಂ ॥ ೨ ॥
ಲೌಕಿಕೀ ವೈದಿಕೀ ಚಾಪಿ ಭವೇದಾಧ್ಯಾತ್ಮಿಕೀ ತಥಾ ।
ಧ್ಯಾನಧಾರಣಯಾಯಾತು ವೇದಾನಾಂ ಸ್ಮರಣೇನ ಚ ।
ಬ್ರಹ್ಮಪ್ರೀತಿಕರೀ ಚೈಷಾ ಮಾನಸೀ ಭಕ್ತಿರುಚ್ಯತೇ ॥ ೩ ॥
ಮಂತ್ರವೇದನಮಸ್ಕಾರೈರಗ್ನಿಶ್ರಾದ್ಧವಿಧಾನಕೈಃ ।
ಜಾಪ್ಯೈಶ್ಚಾರಣ್ಯಕೈಶ್ಚೈವ ವಾಚಿಕೀ ಭಕ್ತಿರುಚ್ಯತೇ ॥ ೪ ॥
ವ್ರತೋಪವಾಸನಿಯಮೈಶ್ಚಿತೇಂದ್ರಿಯನಿರೋಧಿಭಿಃ ।
ಕೃಚ್ಛ್ರಸಾಂತಪನೈಶ್ಚಾನ್ಯೈಸ್ತಥಾ ಚಾಂದ್ರಾಯಣಾದಿಭಿಃ ॥ ೫ ॥

ಕನ್ನಡದ ಅನುವಾದ

ಬಾಲರೂಪಿಬ್ರಹ್ಮಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ:—ತರುವಾಯ ನಿನಗೆ ಭಕ್ತಿಭೇದದಿಂದ ಬೇರೆ ಬೇರೆಯಾದ ಬಾಲರೂಪಿ ಬ್ರಹ್ಮನ ಪೂಜೆಯ ಕ್ರಮವನ್ನೂ ರಥೋತ್ಸವದ ಕ್ರಮವನ್ನೂ, ಸ್ತೋತ್ರಮಂತ್ರಗಳ ವಿಧಿಯನ್ನೂ ಹೇಳುವೆನು. ಮನಸ್ಸು, ಮಾತು, ದೇಹಗಳಿಂದುಂಟಾದ ಭಕ್ತಿಯು ಲೌಕಿಕೀ, ವೈದಿಕೀ, ಆಧ್ಯಾತ್ಮಿಕೀ ಎಂದು ಬಗೆ ಬಗೆಯಾಗಿರುವುದು. ಧ್ಯಾನ, ಧಾರಣ, ವೇದಸ್ಮರಣಾದಿಗಳಿಂದ ಬ್ರಹ್ಮನಿಗೆ ಪ್ರೀತಿಯನ್ನುಂಟುಮಾಡುವ ಭಕ್ತಿಯು ಮಾನಸೀ ಭಕ್ತಿಯೆನಿಸಿಕೊಳ್ಳುವುದು.

೪. ಮಂತ್ರ, ವೇದ, ನಮಸ್ಕಾರಗಳಿಂದಲೂ, ಅಗ್ನಿಯಲ್ಲಿ ಶ್ರಾದ್ಧಮಾಡುವುದರಿಂದಲೂ, ಜಪ ಆರಣ್ಯಕಪಾರಾಯಣಾದಿಗಳಿಂದಲೂ ಮಾಡುವ ಭಕ್ತಿಯು ವಾಚಿಕೀ ಎನ್ನಿಸಿಕೊಳ್ಳುವುದು.

೫–೬. ವ್ರತ, ಉಪವಾಸ, ನಿಯಮ, ಇಂದ್ರಿಯನಿಗ್ರಹ, ಕೃಚ್ಛ್ರ, ಸಾಂತಪನ, ಚಾಂದ್ರಾಯಣವೇ ಮೊದಲಾದ ವೇದೋಕ್ತವಾದ ಉಪವಾಸ, ಇತರ

ಬ್ರಹ್ಮೋಕ್ತೈಶ್ಚೋಪವಾಸೈಶ್ಚ ತಥಾನ್ಯೈಶ್ಚ ಶುಭವ್ರತೈಃ ।
ಕಾಯಿಕೀ ಭಕ್ತಿರಾಖ್ಯಾತಾ ತ್ರಿವಿಧಾತು ದ್ವಿಜನ್ಮನಾಂ ॥ ೬ ॥
ಗೋಘೃತಕ್ಷೀರದಧಿಭಿರ್ಮಧ್ವಿಕ್ಷುಸುಕುಶೋದಕೈಃ ।
ಗಂಧಮಾಲ್ಯೈಶ್ಚ ವಿವಿಧೈರ್ವಸ್ತುಭಿಶ್ಚೋಪಪಾದಿಭಿಃ ॥ ೭ ॥
ಘೃತಗುಗ್ಗುಲಧೂಪೈಶ್ಚ ಕೃಷ್ಣಾಗರುಸುಗಂಧಿಭಿಃ ।
ಭೂಷಣೈರ್ಹೇಮರತ್ನಾದ್ಯೈಶ್ಚಿತ್ರಾಭಿಃ ಸ್ರಗ್ಭಿರೇವ ಚ ॥ ೮ ॥
ನ್ಯಾಸೈಃ ಪರಿಸರೈಃ ಸ್ತೋತ್ರೈಃ ಪತಾಕಾಭಿಸ್ತಥೋತ್ಸವೈಃ ।
ನೃತ್ಯವಾದಿತ್ರಗೀತೈಶ್ಚ ಸರ್ವವಸ್ತೂಪಹಾರಕೈಃ ॥ ೯ ॥
ಭಕ್ಷ್ಯಭೋಜ್ಯಾನ್ನಪಾನೈಶ್ಚ ಯಾ ಪೂಜಾ ಕ್ರಿಯತೇ ನರೈಃ ।
ಪಿತಾಮಹಂ ಸಮುದ್ದಿಶ್ಯ ಸಾ ಭಕ್ತಿರ್ಲೌಕಿಕೀ ಮತಾ ॥ ೧೦ ॥
ವೇದಮಂತ್ರಹವಿರ್ಭಾಗೈಃ ಕ್ರಿಯಾ ಯಾ ವೈದಿಕೀ ಸ್ಮೃತಾ ॥ ೧೧ ॥
ದರ್ಶೇ ಚ ಪೌರ್ಣಮಾಸ್ಯಾಂ ಚ ಕರ್ತವ್ಯಂ ಚಾಗ್ನಿಹೋತ್ರಜಂ ।
ಪ್ರಾಶನಂ ದಕ್ಷಿಣಾದಾನಂ ಪುರೋಡಾಶ ಇತಿ ಕ್ರಿಯಾ ॥ ೧೨ ॥
ಇಷ್ಟಿರ್ಧೃತಿಃ ಸೋಮಪಾನಂ ಯಾಜ್ಞಿಯಂ ಕರ್ಮ ಸರ್ವಶಃ ।
ಋಗ್ಯಜುಃಸಾಮಜಾಪ್ಯಾನಿ ಸಂಹಿತಾಧ್ಯಯನಾನಿ ಚ ।
ಕ್ರಿಯಂತೇ ಬ್ರಹ್ಮಾಣಮುದ್ದಿಶ್ಯ ಸಾ ಭಕ್ತಿರ್ವೈದಿಕೋಚ್ಯತೇ ॥ ೧೩ ॥

ಶುಭವ್ರತಗಳು ಇವುಗಳಿಂದ ಮಾಡುವ ಭಕ್ತಿಯು ಕಾಯಿಕೀ ಭಕ್ತಿಯೆನಿಸಿಕೊಳ್ಳುವುದು. ಹೀಗೆ ಬ್ರಾಹ್ಮಣರ ಮೂರು ವಿಧವಾದ ಭಕ್ತಿಯನ್ನು ಹೇಳಿರುವೆನು.

೭–೧೦. ಆಕಳ ತುಪ್ಪ, ಹಾಲು, ಮೊಸರು, ಜೇನುತುಪ್ಪ, ಕಬ್ಬು, ದರ್ಭೆಯ ನೀರು, ಗಂಧ, ಮಾಲ್ಯ, ನಾನಾವಿಧವಸ್ತುಗಳು ಕೃಷ್ಣಾಗುರುವಿನಿಂದ ಸುವಾಸನೆಯಾವ ಘೃತ, ಗುಗ್ಗುಲುಧೂಪ, ಚಿನ್ನ, ರತ್ನ ಮೊದಲಾದುವುಗಳ ಒಡವೆಗಳು, ನಾನಾ ಬಗೆಯ ಪುಷ್ಪಹಾರಗಳು, ನ್ಯಾಸ, ಪರಿಸರ, ಸ್ತೋತ್ರ, ಪತಾಕೆ, ಉತ್ಸವ, ನೃತ್ಯ, ವಾದ್ಯ, ಗಾನ, ಸಮಸ್ತವಸ್ತುಗಳಕಾಣಿಕೆ, ಭಕ್ಷ್ಯ, ಭೋಜ್ಯ, ಅನ್ನ, ಪಾನ ಇವುಗಳಿಂದ ಬ್ರಹ್ಮನನ್ನು ಉದ್ದೇಶಿಸಿ ಮಾಡುವ ಪೂಜೆಯು ಲೌಕಿಕಭಕ್ತಿಯೆನ್ನಿಸಿಕೊಳ್ಳುವುದು.

೧೧–೧೩. ವೇದಮಂತ್ರ, ಹವಿಸ್ಸುಗಳಿಂದ ಮಾಡುವ ವೈದಿಕಕ್ರಿಯೆಗಳೂ, ಬ್ರಹ್ಮನನ್ನು ಉದ್ದೇಶಿಸಿ ದರ್ಶಪೌರ್ಣಮಾಸ್ಯೆಯಲ್ಲಿ ಮಾಡುವ ಅಗ್ನಿಹೋತ್ರ, ದಕ್ಷಿಣೆ, ಪುರೋಡಾಶ, ಇಷ್ಟಿ, ಧೃತಿ, ಸೋಮಪಾನ ಮೊದಲಾದ ಯಜ್ಞಕ್ರಿಯೆಗಳೂ, ಋಗ್ಯಜುಸ್ಸಾಮವೇದಗಳ ಪಾರಾಯಣವೂ ವೈದಿಕಭಕ್ತಿಯು.

ಪ್ರಾಣಾಯಾಮಪರೋ ನಿತ್ಯಂ ಧ್ಯಾನವಾನ್ಜಿತೇಂದ್ರಿಯಃ ।
ಭೈಕ್ಷ್ಯಭಕ್ಷೀ ವ್ರತೀ ಚಾಪಿ ಸರ್ವಪ್ರತ್ಯಾಹೃತೇಂದ್ರಿಯಃ || ೧೪ ||
ಧಾರಣಾಂ ಹೃದಯೇ ಕೃತ್ವಾ ಧ್ಯಾಯಮಾನಃ ಪ್ರಜೇಶ್ವರಂ ।
ಹೃತ್ಪದ್ಮಕರ್ಣಿಕಾಸೀನಂ ರಕ್ತವರ್ಣಂ ಸುಲೋಚನಂ || ೧೫ ||
ಪಶ್ಯನ್ನುದ್ದ್ಯೋತಿತಮುಖಂ ಬ್ರಹ್ಮಾಣಂ ಸುಕಟೀತಟಂ ।
ರಕ್ತವರ್ಣಂ ಚತುರ್ಬಾಹುಂ ವರದಾಭಯಹಸ್ತಕಂ ।
ಏವಂ ಯಶ್ಚಿಂತಯೇದ್ದೇವಂ ಬ್ರಹ್ಮಭಕ್ತಃ ಸ ಉಚ್ಯತೇ || ೧೬ ||
ವಿಧಿಂ ಚ ಶೃಣು ಮೇ ದೇವಿ ಯಃ ಸ್ಮೃತಃ ಕ್ಷೇತ್ರವಾಸಿನಾಂ || ೧೭ ||
ನಿರ್ಮಮಾ ನಿರಹಂಕಾರಾ ನಿಃಸಂಗಾ ನಿಷ್ಪರಿಗ್ರಹಾಃ ।
ಚತುರ್ವರ್ಗೇಽಪಿ ನಿಃಸ್ನೇಹಾಃ ಸಮಲೋಷ್ಟಾಶ್ಮಕಾಂಚನಾಃ || ೧೮ ||
ಭೂತಾನಾಂ ಕರ್ಮಭಿರ್ನಿತ್ಯಂ ತ್ರಿವಿಧೈರಭಯಪ್ರದಾಃ ।
ಪ್ರಾಣಾಯಾಮಪರಾ ನಿತ್ಯಂ ಪರಧ್ಯಾನಪರಾಯಣಾಃ || ೧೯ ||
ಜಾಪಿನಃ ಶುಚಯೋ ನಿತ್ಯಂ ಯತಿಧರ್ಮಕ್ರಿಯಾಪರಾಃ ।
ಸಾಂಖ್ಯಯೋಗವಿಧಿಜ್ಞಾ ಯೇ ಧರ್ಮವಿಚ್ಛಿನ್ನಸಂಶಯಾಃ || ೨೦ ||

೧೪–೧೬. ನಿತ್ಯವೂ ಪ್ರಾಣಾಯಾಮನಿರತನೂ, ಜಿತೇಂದ್ರಿಯನೂ, ಭಿಕ್ಷಾನ್ನವನ್ನು ತಿನ್ನುವವನೂ, ವ್ರತಪರ್‍ನನೂ ಆಗಿ ಹೃದಯಪದ್ಮದ ಕರ್ಣಿಕೆಯಲ್ಲಿ ಕುಳಿತಿರುವವನೂ, ರಕ್ತವರ್ಣನೂ, ಸುಂದರವಾದ ಕಣ್ಣುಗಳುಳ್ಳವನೂ, ಪ್ರಕಾಶಗೊಂಡ ಮುಖವುಳ್ಳವನೂ, ಸುಂದರವಾದ ಸೊಂಟವುಳ್ಳವನೂ, ನಾಲ್ಕು ತೋಳುಗಳುಳ್ಳವನೂ, ವರದಾಭಯಹಸ್ತಗಳುಳ್ಳವನೂ ಆದ ಬ್ರಹ್ಮನನ್ನು ಹೃದಯದಲ್ಲಿ ನೋಡುತ್ತ ಧ್ಯಾನಿಸುವವನು ಬ್ರಹ್ಮಭಕ್ತನೆನ್ನಿಸಿಕೊಳ್ಳುವನು.

೧೭. ದೇವಿ ! ಇನ್ನು ಕ್ಷೇತ್ರವಾಸಿಗಳ ಕರ್ತವ್ಯವನ್ನು ಕೇಳು.

೧೮–೨೦. ಮಮತೆ ಅಹಂಕಾರಗಳಿಲ್ಲದವರೂ, ವಿಷಯಾಸಕ್ತಿಯಿಲ್ಲದವರೂ, ಪರಿಗ್ರಹರಹಿತರೂ, ಧರ್ಮಾರ್ಥಕಾಮಮೋಕ್ಷಗಳಲ್ಲಿ ಪ್ರೀತಿಯಿಲ್ಲದವರೂ, ಮಣ್ಣಿನ ಹೆಂಟೆ, ಕಲ್ಲು, ಚಿನ್ನಗಳನ್ನು ಸಮವಾಗಿ ಕಾಣುವವರೂ, ಯಾವಾಗಲೂ ತ್ರಿವಿಧ ಕರ್ಮಗಳಿಂದ ಪ್ರಾಣಿಗಳಿಗೆ ಅಭಯವನ್ನೀಯುವವರೂ, ಪ್ರಾಣಾಯಾಮನಿರತರೂ, ಪರಮಾತ್ಮಧ್ಯಾನಾಸಕ್ತರೂ, ಮಂತ್ರಗಳನ್ನು ಜಪಿಸುವವರೂ, ಶುದ್ಧರೂ, ಸಂನ್ಯಾಸ ಧರ್ಮಕ್ರಿಯೆಗಳಲ್ಲಿ ಆಸಕ್ತರೂ, ಸಾಂಖ್ಯಯೋಗವಿಧಿಗಳನ್ನರಿತವರೂ, ಧರ್ಮದಿಂದ ಪರಿಹಾರವಾದ ಸಂಶಯವುಳ್ಳವರೂ, ನಿತ್ಯವೂ ಬ್ರಹ್ಮನ ಪೂಜೆಯಲ್ಲಿ ನಿರತರೂ ಆದವರು ಕ್ಷೇತ್ರವಾಸಿ ಬ್ರಾಹ್ಮಣರು. ಅವರು ಬಾಲರೂಪಿಯಾದ ಬ್ರಹ್ಮನನ್ನು

ಬ್ರಹ್ಮಪೂಜಾರತಾ ನಿತ್ಯಂ ತೇ ವಿಪ್ರಾಃ ಕ್ಷೇತ್ರವಾಸಿನಃ ।
ತೈರ್ಯಥಾ ಪೂಜನೀಯೋ ವೈ ಬಾಲರೂಪೀ ಪಿತಾಮಹಃ || ೨೧ ||
ತಥಾಹಂ ಕೀರ್ತಯಿಷ್ಯಾಮಿ ಶೃಣುಷ್ವೈಕಮನಾಃ ಪ್ರಿಯೇ ।
ಸ್ನಾತ್ವಾ ತು ವಿಮಲೇ ತೀರ್ಥೇ ಶುಕ್ಲಾಂಬರಧರಃ ಶುಚಿಃ ।
ಪೂಜೋಪಹಾರಸಂಯುಕ್ತಸ್ತತೋ ಬ್ರಹ್ಮಾಣಮರ್ಚಯೇತ್ || ೨೨ ||
ಪೂರ್ವಂ ಸಂಸ್ನಾಪ್ಯ ವಿಧಿನಾ ಪಂಚಾಮೃತರಸೋದಕೈಃ ।
ಗೋಮೂತ್ರಂ ಗೋಮಯಂ ಕ್ಷೀರಂ ದಧಿಸರ್ಪಿಃ ಕುಶೋದಕಂ || ೨೩ ||
ಗಾಯತ್ರ್ಯಾ ಗೃಹ್ಯ ಗೋಮೂತ್ರಂ ಗಂಧದ್ವಾರೇತಿ ಗೋಮಯಂ ।
ಆಪ್ಯಾಯಸ್ವೇತಿ ಚ ಕ್ಷೀರಂ ದಧಿಕ್ರಾವ್ಣೇತಿ ವೈ ದಧಿ || ೨೪ ||
ತೇಜೋಽಸಿ ಶುಕ್ರಮಿತ್ಯಾಜ್ಯಂ ದೇವಸ್ಯ ತ್ವಾ ಕುಶೋದಕಂ ।
ಆಪೋಹಿಷ್ಠೇತಿ ಮಂತ್ರೇಣ ಪಂಚಗವ್ಯೇವ ಸ್ನಾಪಯೇತ್ || ೨೫ ||
ಕಪಿಲಾಪಂಚಗವ್ಯೇನ ಕುಶವಾರಿಯುತೇನ ಚ ।
ಸ್ನಾಪಯೇನ್ಮಂತ್ರಪೂತೇನ ಬ್ರಹ್ಮಸ್ನಾನಂ ಹಿ ತತ್ ಸ್ಮೃತಂ || ೨೬ ||
ವರ್ಷಕೋಟಿಸಹಸ್ರೈಸ್ತು ಯತ್ಪಾಪಂ ಸಮುಪಾರ್ಜಿತಂ ।
ಸುರಜ್ಯೇಷ್ಠಂ ತು ಸಂಸ್ನಾಪ್ಯ ದಹೇತ್ಸರ್ವಂ ನ ಸಂಶಯಃ || ೨೭ ||

ಪೂಜಿಸುವ ಕ್ರಮವನ್ನು ಹೇಳುವೆನು. ಚಿತ್ತೈಕಾಗ್ರ್ಯದಿಂದ ಕೇಳು. ಬ್ರಾಹ್ಮಣನು ಶುದ್ಧಜಲದಲ್ಲಿ ಮಿಂದು ಬಿಳಿಯವಸ್ತ್ರವನ್ನುಟ್ಟು ಪೂಜಾಸಾಮಾಗ್ರಿಗಳನ್ನು ಸಂಗ್ರಹಿಸಿಕೊಂಡು ಶುದ್ಧನಾಗಿ ಬ್ರಹ್ಮನನ್ನು ಅರ್ಚಿಸಬೇಕು.

೨೩–೨೫. ಮೊದಲು ಪಂಚಾಮೃತಗಳಿಂದ ಸ್ನಾನಮಾಡಿಸಿ "ಗಾಯತ್ರಿ"ಯಿಂದ ಗೋಮೂತ್ರವನ್ನೂ, "ಗಂಧದ್ವಾರೇ"ತ್ಯಾದಿ ಮಂತ್ರದಿಂದ ಗೋಮಯವನ್ನೂ, "ಅಪ್ಯಾಯಸ್ವೇತ್ಯಾದಿ" ಮಂತ್ರದಿಂದ ಹಾಲನ್ನೂ, "ದಧಿಕ್ರಾವ್ಣೇ"ತ್ಯಾದಿ ಮಂತ್ರದಿಂದ ಮೊಸರನ್ನೂ, "ತೇಜೋಽಸಿ ಶುಕ್ರ"ಮಿತ್ಯಾದಿ ಮಂತ್ರದಿಂದ ಆಜ್ಯವನ್ನೂ, "ದೇವಸ್ಯ ತ್ವೇತ್ಯಾದಿ" ಮಂತ್ರದಿಂದ ಕುಶೋದಕವನ್ನೂ ಒಟ್ಟಿಗೆ ಸೇರಿಸಿ "ಆಪೋಹಿಷ್ಠೇ"ತ್ಯಾದಿ ಮಂತ್ರಗಳಿಂದ ಪಂಚಗವ್ಯದಿಂದಲೂ ಅಭಿಷೇಕ ಮಾಡಬೇಕು

೨೬. ಕುಶೋದಕದಿಂದ ಸಹಿತವಾದ ಕಪಿಲಗೋವಿನ ಶುದ್ಧವಾದ ಪಂಚಗವ್ಯದಿಂದ ಮಂತ್ರಪೂರ್ವಕವಾಗಿ ಅಭಿಷೇಕಮಾಡಿದರೆ ಅದು ಬ್ರಹ್ಮಸ್ನಾನವೆನ್ನಿಸಿಕೊಳ್ಳುವುದು.

೨೭. ಬ್ರಹ್ಮನಿಗೆ ಮಾಡಿದ ಅಭಿಷೇಕವು ಅನೇಕ ಕೋಟಿ ವರ್ಷಗಳಿಂದ ಮಾಡಿದ ಪಾಪವನ್ನು ಭಸ್ಮಗೊಳಿಸುವುದು.

ಏವಂ ಸಂಸ್ನಾಪ್ಯ ವಿಧಿನಾ ಬ್ರಹ್ಮಾಣಂ ಬಾಲರೂಪಿಣಂ ।
ಕರ್ಪೂರಾಗರುತೋಯೇನ ತತಃ ಸಂಸ್ನಾಪಯೇದ್ದ್ವಿಜಃ ॥ ೨೮ ॥
ಏವಂ ಕೃತ್ವಾರ್ಚಯೇದ್ದೇವಂ ಗಾಯತ್ರೀನ್ಯಾಸಯೋಗತಃ ।
ಮೂರ್ಧ್ನಃ ಪಾದತಲಂ ಯಾವತ್ಪ್ರಣವಂ ವಿನ್ಯಸೇದ್ಬುಧಃ ॥ ೨೯ ॥
ತಕಾರಂ ವಿನ್ಯಸೇನ್ಮೂರ್ಧ್ನಿ ಸಕಾರಂ ಮುಖಮಂಡಲೇ ।
ವಿಕಾರಂ ಕಂಠದೇಶೇ ತು ತುಕಾರಂ ಚಾಂಗಸಂಧಿಷು ॥ ೩೦ ॥
ವಕಾರಂ ಹೃದಿ ಮಧ್ಯೇ ತು ರೇಕಾರಂ ಪಾರ್ಶ್ವಯೋರ್ದ್ವಯೋಃ ।
ಣಿಕಾರಂ ದಕ್ಷಿಣೇ ಕುಕ್ಷೌ ಯಕಾರಂ ವಾಮಸಂಜ್ಞಿತೇ ॥ ೩೧ ॥
ಭಕಾರಂ ಕಟಿನಾಭಿಸ್ಥಂ ಗೋಕಾರಂ ಪಾರ್ಶ್ವಯೋರ್ದ್ವಯೋಃ ।
ದೇಕಾರಂ ಜಾನುನೋರ್ನ್ಯಸ್ಯ ವಕಾರಂ ಪಾದಪದ್ಮಯೋಃ ॥ ೩೨ ॥
ಸ್ಯಕಾರಮಂಗುಷ್ಠಯೋರ್ನ್ಯಸ್ಯ ಧೀಕಾರಮುರಸಿ ನ್ಯಸೇತ್ ।
ಮಕಾರಂ ಜಾನುಮೂಲೇ ತು ಹಿಕಾರಂ ಗುಹ್ಯಮಾಶ್ರಿತಂ ॥ ೩೩ ॥
ಧಿಕಾರಂ ಹೃದಯೇ ನ್ಯಸ್ಯ ಯೋಕಾರಂ ಚಾಧರೋಷ್ಠಕೇ ।
ಯೋಕಾರಂ ಚ ತಥೈವಾನ್ಯಮುತ್ತರೋಷ್ಠೇ ನ್ಯಸೇತ್ಸುಧೀಃ ॥ ೩೪ ॥

---

೨೮. ಬ್ರಾಹ್ಮಣನು ಹೀಗೆ ಬ್ರಹ್ಮನಿಗೆ ಅಭಿಷೇಕಮಾಡಿ ಬಳಿಕ ಕರ್ಪೂರ, ಅಗುರುಗಂಧಗಳ ನೀರಿನಿಂದ ಸ್ನಾನಮಾಡಿಸಬೇಕು.

೨೯. ತರುವಾಯ ಬ್ರಹ್ಮನ ತಲೆಯಿಂದ ಕಾಲಿನವರೆಗೆ ಗಾಯತ್ರೀನ್ಯಾಸದೊಡನೆ ಪ್ರಣವನ್ಯಾಸಮಾಡಿ ಪೂಜಿಸಬೇಕು.

೩೦–೩೪. ಬ್ರಹ್ಮನ ತಲೆಯಲ್ಲಿ ತಕಾರವನ್ನೂ, ಮುಖದಲ್ಲಿ ಸಕಾರವನ್ನೂ, ಕಂಠದಲ್ಲಿ ವಿಕಾರವನ್ನೂ, ಅಂಗಸಂಧಿಗಳಲ್ಲಿ ತುಕಾರವನ್ನೂ, ಹೃದಯದ ಮಧ್ಯದಲ್ಲಿ ವಕಾರವನ್ನೂ, ಎರಡು ಪಾರ್ಶ್ವಗಳಲ್ಲಿ ರೇಕಾರವನ್ನೂ, ಬಲಹೊಟ್ಟೆಯಲ್ಲಿ ಣಿಕಾರವನ್ನೂ, ಎಡಹೊಟ್ಟೆಯಲ್ಲಿ ಯಕಾರವನ್ನೂ, ಸೊಂಟ ನಾಭಿಗಳಲ್ಲಿ ಭಕಾರವನ್ನೂ, ಎರಡು ಪಾರ್ಶ್ವಗಳಲ್ಲಿ ಗೋಕಾರವನ್ನೂ, ಮೊಣಕಾಲುಗಳಲ್ಲಿ ದೇಕಾರವನ್ನೂ, ಪಾದಕಮಲಗಳಲ್ಲಿ ವಕಾರವನ್ನೂ, ಎರಡು ಅಂಗುಷ್ಠಗಳಲ್ಲಿ ಸ್ಯಕಾರವನ್ನೂ, ಎದೆಯಲ್ಲಿ ಧೀಕಾರವನ್ನೂ, ಮೊಣಕಾಲಿನ ಬುಡದಲ್ಲಿ ಮಕಾರವನ್ನೂ, ಗುಹ್ಯದಲ್ಲಿ ಹಿಕಾರವನ್ನೂ, ಹೃದಯದಲ್ಲಿ ಧಿಕಾರವನ್ನೂ, ಕೆಳತುಟಿಯಲ್ಲಿ ಯೋಕಾರವನ್ನೂ, ಮೇಲಿನ ತುಟಿಯಲ್ಲಿ ಮತ್ತೊಂದು ಯೋಕಾರವನ್ನೂ ಮೂಗಿನ ಕೊನೆಯಲ್ಲಿ ಸಕಾರವನ್ನೂ, ಕಣ್ಣುಗಳಲ್ಲಿ

ನಕಾರಂ ನಾಸಿಕಾಗ್ರೇ ತು ಪ್ರಕಾರಂ ನೇತ್ರಮಾಶ್ರಿತಂ ।
ಚೋಕಾರಂ ಚ ಭ್ರುವೋರ್ಮಧ್ಯೇ ದಕಾರಂ ಪ್ರಾಣಮಾಶ್ರಿತಂ ॥ ೩೫ ॥
ಯಾತ್ಕಾರಂ ಚ ಲಲಾಟಾಂತೇ ವಿನ್ಯಸೇದ್ವೈ ಸುರೇಶ್ವರಿ ।
ನ್ಯಾಸಂ ಕೃತ್ವಾತ್ಮನೋ ದೇಹೇ ದೇವೇ ಕುರ್ಯಾತ್ತಥಾ ಪ್ರಿಯೇ ॥ ೩೬ ॥
ಸರ್ವೋಪಹಾರಸಂಪನ್ನಂ ಕೃತ್ವಾ ಸಮ್ಯಙ್ನಿರೀಕ್ಷಯೇತ್ ।
ಕುಂಕುಮಾಗರುಕರ್ಪೂರಚಂದನೇನ ವಿಮಿಶ್ರಿತಂ ॥ ೩೭ ॥
ಗಂಧತೋಯೈರುಪಸ್ಕೃತ್ಯ ಗಾಯತ್ರ್ಯಾ ಪ್ರಣವೇನ ಚ ।
ಪ್ರೋಕ್ಷಯೇತ್ಸರ್ವದ್ರವ್ಯಾಣಿ ಪಶ್ಚಾದರ್ಚನಮಾರಭೇತ್ ॥ ೩೮ ॥
ದಿವ್ಯೈಃ ಪುಷ್ಪೈಃ ಸುಗಂಧೈಶ್ಚ ಮಾಲತೀಕಮಲಾದಿಭಿಃ ।
ಅಶೋಕೈಃ ಶತಪತ್ರೈಶ್ಚ ಬಕುಲೈಃ ಪೂಜಯೇತ್ಕ್ರಮಾತ್ ॥ ೩೯ ॥
ಕೃಷ್ಣಾಗರುಸುಧೂಪೇನ ಘೃತದೀಪೈಸ್ತಥೋತ್ತಮೈಃ ।
ತತಃ ಪ್ರದಾಪಯೇತ್ತತ್ರ ನೈವೇದ್ಯಂ ವಿವಿಧಂ ಕ್ರಮಾತ್ ॥ ೪೦ ॥
ಖಂಡಲಡ್ಡುಕಶ್ರೀವೇಷ್ಟಕಾಂಸಾರಾಶೋಕಪಲ್ಲವೈಃ ।
ಸ್ವಸ್ತಿಕೋಲ್ಲಿಪಿಕಾದುಗ್ಧತಿಲವೇಷ್ಟಕಿಲಾಟಿಕಾಂ ॥ ೪೧ ॥

ಪ್ರಕಾರವನ್ನೂ, ಚೋಕಾರವನ್ನು ಹುಬ್ಬುಗಳ ಮಧ್ಯದಲ್ಲಿಯೂ, ಪ್ರಾಣದಲ್ಲಿಯೂ ದಕಾರವನ್ನೂ, ಯಾತ್ಕಾರವನ್ನು ಹಣೆಯ ಕೊನೆಯಲ್ಲಿಯೂ ಹೀಗೆ ತನ್ನ ದೇಹದಲ್ಲಿ ವಿನ್ಯಾಸ ಮಾಡಿದ ತರುವಾಯ ಬ್ರಹ್ಮನ ದೇಹದಲ್ಲಿ ವಿನ್ಯಾಸ ಮಾಡಬೇಕು.

೩೭–೩೮. ಆ ಸ್ವಾಮಿಯನ್ನು ಸಕಲ ಉಪಹಾರಯುಕ್ತನನ್ನಾಗಿಮಾಡಿ ಚೆನ್ನಾಗಿ ನೋಡಬೇಕು. ಕುಂಕುಮ, ಅಗುರು, ಕರ್ಪೂರ, ಗಂಧಗಳಿಂದ ಮಿಶ್ರವಾದ ನೀರನ್ನು ಗಾಯತ್ರಿ, ಪ್ರಣವಗಳಿಂದ ಸಮಸ್ತ ದ್ರವ್ಯಗಳಲ್ಲಿ ಪ್ರೋಕ್ಷಿಸಿ ಅನಂತರ ಪೂಜೆಯನ್ನಾರಂಭಿಸಬೇಕು.

೩೯–೪೦. ಸುಗಂಧವಾದ ಜಾಜಿ, ತಾವರೆ, ಅಶೋಕ, ಬಕುಲ ಮೊದಲಾದ ಹೂವುಗಳಿಂದ ಪೂಜಿಸಿ ಕೃಷ್ಣಾಗುರು ಧೂಪವನ್ನೂ, ಉತ್ತಮವಾದ ಘೃತ ದೀಪಗಳನ್ನೂ ಅರ್ಪಿಸಿ ವಿವಿಧ ನೈವೇದ್ಯಗಳನ್ನು ಸಮರ್ಪಿಸಬೇಕು.

೪೧–೪೪. ಖಂಡ, ಲಡ್ಡುಕ, ಶ್ರೀವೇಷ್ಟ, ಕಾಂಸಾರ, ಅಶೋಕಪಲ್ಲವ, ಸ್ವಸ್ತಿಕ, ಉಲ್ಲಿಪಿಕ, ದುಗ್ಧ, ತಿಲವೇಷ್ಟ, ಕಿಲಾಟಕ ಮೊದಲಾದ ನೈವೇದ್ಯ

ಫಲಾನಿ ಚೈವ ಪಕ್ವಾನಿ ಮೂಲಮಂತ್ರೇಣ ದಾಪಯೇತ್ ।
ಋಗ್ವೇದಂ ಚ ಯಜುರ್ವೇದಂ ಸಾಮವೇದಂ ಚ ಪೂಜಯೇತ್ ॥ ೪೨ ॥
ಜ್ಞಾನಂ ವೈರಾಗ್ಯಮೈಶ್ವರ್ಯಂ ಧರ್ಮಂ ಸಂಪೂಜಯೇದ್ಬುಧಃ ।
ಈಶಾನಾದಿಕ್ರಮಾದ್ದೇವಿ ದಿಶಾಸು ವಿದಿಶಾಸು ಚ ॥ ೪೩ ॥
ಚತುರ್ದಶವಿದ್ಯಾಸ್ಥಾನಾನಿ ಬ್ರಹ್ಮಣೋಽಗ್ರೇ ಪ್ರಪೂಜಯೇತ್ ।
ಹೃದಯಾನಿ ತತೋ ನ್ಯಸ್ಯ ದೇವಸ್ಯ ಪುರತಃ ಕ್ರಮಾತ್ ॥ ೪೪ ॥
ಆಪೋಹಿಷ್ಠೇತಿ ಋಗಿಯಂ ಹೃದಯಂ ಪರಿಕೀರ್ತಿತಂ ।
ಋತಂ ಸತ್ಯಂ ಶಿಖಾ ಪ್ರೋಕ್ತಾ ಉದುತ್ಯಂ ನೇತ್ರಮಾದಿಶೇತ್ ॥ ೪೫ ॥
ಚಿತ್ರಂ ದೇವಾನಾಮಿತ್ಯೇವಂ ಸರ್ವಲೋಕೇಷು ವಿಶ್ರುತಂ ।
ಬ್ರಹ್ಮಂಸ್ತೇ ಛಾದಯಾಮೀತಿ ಕವಚಂ ಸಮುದಾಹೃತಂ ॥ ೪೬ ॥
ಭೂರ್ಭುವಃ ಸ್ವರಿತೀರೇಶ ಪೂಜನಂ ಪರಿಕೀರ್ತಿತಂ ।
ಗಾಯತ್ರ್ಯಾ ಪೂಜಯೇದ್ದೇವಮೋಂಕಾರೇಣಾಭಿಮಂತ್ರಿತಂ ॥ ೪೭ ॥
ಪ್ರಣವೇನಾಪರಾನ್ ಸರ್ವಾನೃಗ್ವೇದಾದೀನ್ಪ್ರಪೂಜಯೇತ್ ।
ಗಾಯತ್ರೀ ಪರಮೋ ಮಂತ್ರೋ ವೇದಮಾತಾ ವಿಭಾವರೀ ॥ ೪೮ ॥
ಗಾಯತ್ರ್ಯಕ್ಷರತತ್ತ್ವೈಸ್ತು ಬ್ರಹ್ಮಾಣಂ ಯಸ್ತು ಪೂಜಯೇತ್ ।
ಉಪೋಷ್ಯ ಪಂಚದಶ್ಯಾಂ ತು ಸ ಯಾತಿ ಪರಮಂ ಪದಂ ॥ ೪೯ ॥

ಪದಾರ್ಥಗಳನ್ನೂ, ಮಾಗಿದ ಹಣ್ಣುಗಳನ್ನೂ ಮೂಲ ಮಂತ್ರದಿಂದ ನಿವೇದಿಸಬೇಕು. ಋಗ್ವೇದ, ಯಜುರ್ವೇದ, ಸಾಮವೇದ, ಜ್ಞಾನ, ವೈರಾಗ್ಯ, ಐಶ್ವರ್ಯ ಧರ್ಮಗಳನ್ನೂ, ಈಶಾನ್ಯಾದಿ ದಿಕ್ಕು ವಿದಿಕ್ಕುಗಳಲ್ಲಿ ಹದಿನಾಲ್ಕು ವಿದ್ಯಾಸ್ಥಾನಗಳನ್ನೂ ಪೂಜಿಸಿ ಬ್ರಹ್ಮನ ಮುಂದೆ ಹೃದಯನ್ಯಾಸ ಮಾಡಬೇಕು.

೪೫–೪೬. ಆಪೋಹಿಷ್ಠೇತ್ಯಾದಿ ಮಂತ್ರವು ಹೃದಯವೂ, ಋತಂ ಸತ್ಯಂ ಇತ್ಯಾದಿ ಮಂತ್ರವು ಶಿಖೆಯೂ, ಉದುತ್ಯಂ ಇತ್ಯಾದಿ ಮಂತ್ರವು ಕಣ್ಣೂ, ಚಿತ್ರಂ ದೇವಾನಾ ಮಿತ್ಯಾದಿ ಮಂತ್ರವು ಸಕಲ ಲೋಕಪ್ರಸಿದ್ಧವಾದ ಕವಚವೂ ಆಗಿರುವುದು.

೪೭. ಆ ಬ್ರಹ್ಮದೇವನನ್ನು ಓಂಕಾರದಿಂದ ಅಭಿಮಂತ್ರಿಸಿ ಭೂರ್ಭುವಸ್ಸ್ವ, ಎಂಬಮಂತ್ರದಿಂದಲೂ ಗಾಯತ್ರಿಯಿಂದಲೂ ಪೂಜಿಸಬೇಕು.

೪೮. ಪ್ರಣವದಿಂದ ಇತರ ಋಗ್ವೇದ ಮೊದಲಾದುವುಗಳನ್ನೆಲ್ಲ ಅರ್ಚಿಸಬೇಕು. ಉತ್ತಮವಾದ ಗಾಯತ್ರಿಯು ವಿಭಾವರಿಯೆಂಬ ವೇದಮಾತೆಯು.

೪೯. ಹುಣ್ಣಿಮೆಯದಿನ ಉಪವಾಸಮಾಡಿ ಗಾಯತ್ರ್ಯಕ್ಷರ ಸಂಖ್ಯೆಯ ತತ್ತ್ವಗಳಿಂದ ಬ್ರಹ್ಮನನ್ನು ಪೂಜಿಸಿದವನು ಉತ್ತಮಸ್ಥಾನವನ್ನು ಪಡೆಯುವನು.

ಸಂಸಾರಸಾಗರಂ ಘೋರಮುತ್ತಿತೀರ್ಷುರ್ದ್ವಿಜೋ ಯದಿ ।
ಪ್ರಭಾಸೇ ಕಾರ್ತಿಕೇ ಮಾಸಿ ಬ್ರಹ್ಮಾಣಂ ಪೂಜಯೇತ್ಸದಾ ॥ ೫೦ ॥
ಯಸ್ಯ ದರ್ಶನಮಾತ್ರೇಣ ಅಶ್ವಮೇಧಫಲಂ ಲಭೇತ್ ।
ಕಸ್ತಂ ನ ಪೂಜಯೇದ್ವಿದ್ವಾನ್ಪ್ರಭಾಸೇ ಬಾಲರೂಪಿಣಂ ॥ ೫೧ ॥
ಯಸ್ಯೈಕದಿವಸಪ್ರಾಂತೇ ಸದೇವಾಸುರಮಾನವಾಃ ।
ವಿಲಯಂ ಯಾಂತಿ ದೇವೇಶಿ ಕಸ್ತಂ ನ ಪ್ರತಿಪೂಜಯೇತ್ ॥ ೫೨ ॥
ಪಿತಾ ಯಃ ಸರ್ವದೇವಾನಾಂ ಭೂತಾನಾಂ ಚ ಪಿತಾಮಹಃ ।
ಯಸ್ಮಾದೇಷ ಸ ತೈಃ ಪೂಜ್ಯೋ ಬ್ರಾಹ್ಮಣೈಃ ಕ್ಷೇತ್ರವಾಸಿಭಿಃ ॥ ೫೩ ॥
ರುದ್ರರೂಪೀ ವಿಶ್ವರೂಪೀ ಸ ಏವ ಭುವನೇಶ್ವರಃ ।
ಪೌರ್ಣಮಾಸ್ಯಾಮುಪೋಷಿತ್ವಾ ಬ್ರಹ್ಮಾಣಂ ಜಗತಾಂ ಪತಿಂ ।
ಅರ್ಚಯೇದ್ಯೋ ವಿಧಾನೇನ ಸೋಽಶ್ವಮೇಧಫಲಂ ಲಭೇತ್ ॥ ೫೪ ॥
ಕಾರ್ತಿಕೇ ಮಾಸಿ ದೇವಸ್ಯ ರಥಯಾತ್ರಾ ಪ್ರಕೀರ್ತಿತಾ ।
ಯಾಂ ಕೃತ್ವಾ ಮಾನವೋ ಭಕ್ತ್ಯಾ ಯಾತಿ ಬ್ರಹ್ಮಸಲೋಕತಾಂ ॥ ೫೫ ॥
ಕಾರ್ತಿಕೇ ಮಾಸಿ ದೇವೇಶಿ ಪೌರ್ಣಮಾಸ್ಯಾಂ ಚತುರ್ಮುಖಂ ।
ಮಾರ್ಗೇಣ ಚರ್ಮಣಾ ಸಾರ್ಧಂ ಸಾವಿತ್ರ್ಯಾ ಚ ಪರಂತಪಃ ॥ ೫೬ ॥

---

೫೦. ಘೋರವಾದ ಸಂಸಾರ ಸಾಗರವನ್ನು ದಾಟಲಿಚ್ಛಿಸುವ ಮಾನವನು ಪ್ರಭಾಸ ಕ್ಷೇತ್ರದಲ್ಲಿರುವ ಬ್ರಹ್ಮನನ್ನು ಕಾರ್ತಿಕ ಮಾಸದಲ್ಲಿ ಪೂಜಿಸಬೇಕು.

೫೧. ದರ್ಶನ ಮಾತ್ರದಿಂದ ಅಶ್ವಮೇಧಯಾಗದ ಫಲವನ್ನೀಯುವ ಪ್ರಭಾಸ ಕ್ಷೇತ್ರದಲ್ಲಿರುವ ಬಾಲರೂಪಿಯಾದ ಆ ಬ್ರಹ್ಮನನ್ನು ಯಾವನು ತಾನೆ ಪೂಜಿಸುವುದಿಲ್ಲ!

೫೨. ದೇವೇಶಿ! ಯಾವನ ಒಂದು ದಿವಸದ ಕೊನೆಯಲ್ಲಿ ದೇವಾಸುರಮಾನವರು ನಾಶಗೊಳ್ಳುವರೊ, ಅವನನ್ನು ಯಾರು ತಾನೆ ಪೂಜಿಸುವುದಿಲ್ಲ!

೫೩. ಆ ಬ್ರಹ್ಮನು ಸಕಲ ದೇವತೆಗಳಿಗೆ ತಂದೆಯೂ, ಪ್ರಾಣಿಗಳಿಗೆ ಪಿತಾಮಹನೂ ಆಗಿರುವುದರಿಂದ ಅವನನ್ನು ಕ್ಷೇತ್ರವಾಸಿಗಳಾದ ಬ್ರಾಹ್ಮಣರೆಲ್ಲರೂ ಪೂಜಿಸಬೇಕು.

೫೪. ರುದ್ರರೂಪನೂ, ವಿಶ್ವರೂಪನೂ ಆದ ಅವನೇ ಜಗದೊಡೆಯನು. ಜಗತ್ಪತಿಯಾದ ಅವನನ್ನು ಹುಣ್ಣಿಮೆಯದಿನ ಉಪವಾಸಮಾಡಿ ವಿಧಿಯಿಂದ ಪೂಜಿಸಿದವನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

೫೫. ಕಾರ್ತಿಕ ಮಾಸದಲ್ಲಿ ಬ್ರಹ್ಮನ ರಥೋತ್ಸವವನ್ನು ಭಕ್ತಿಯಿಂದ ಮಾಡಿದವನು ಬ್ರಹ್ಮ ಲೋಕವನ್ನು ಸೇರುವನು.

೫೬–೬೦. ಕಾರ್ತಿಕ ಮಾಸದ ಹುಣ್ಣಿಮೆಯದಿನ ರಾಜನಾದವನು ಮೊದಲು ಬ್ರಾಹ್ಮಣಭೋಜನಮಾಡಿಸಿ ಅಗ್ನಿಯನ್ನು ಪೂಜಿಸಿ ಬ್ರಾಹ್ಮಣರಿಂದ ಪುಣ್ಯಾಹವನ್ನು

ಭ್ರಾಮಯೇನ್ನಗರಂ ಸರ್ವಂ ನಾನಾವಾದ್ಯೈಃ ಸಮನ್ವಿತಂ ।
ಸ್ಥಾಪಯೇದ್ಭ್ರಾಮಯಿತ್ವಾ ತು ಸಕಲಂ ನಗರಂ ನೃಪಃ ॥ ೫೭ ॥
ಬ್ರಾಹ್ಮಣಾನ್ಭೋಜಯಿತ್ವಾಗ್ರೇ ಶಾಂಡಿಲೇಯಂ ಪ್ರಪೂಜ್ಯ ಚ ।
ಆರೋಪಯೇದ್ರಥೇ ದೇವಂ ಪುಣ್ಯವಾದಿತ್ರನಿಃಸ್ವನೈಃ ॥ ೫೮ ॥
ರಥಾಗ್ರೇ ಶಾಂಡಿಲೀಪುತ್ರಂ ಪೂಜಯಿತ್ವಾ ವಿಧಾನತಃ ।
ಬ್ರಾಹ್ಮಣಾನ್ವಾಚಯಿತ್ವಾ ಚ ಕೃತ್ವಾ ಪುಣ್ಯಾಹಮಂಗಲಂ ॥ ೫೯ ॥
ದೇವಮಾರೋಪಯಿತ್ವಾ ತು ರಥೇ ಕುರ್ಯಾತ್ಪ್ರಜಾಗರಂ ।
ನಾನಾವಿಧೈಃ ಪ್ರೇಕ್ಷಣಕೈಃ ಬ್ರಹ್ಮಘೋಷೈಶ್ಚ ಪುಷ್ಕಲೈಃ ॥ ೬೦ ॥
ನಾರೋಢವ್ಯಂ ರಥೇ ದೇವಿ ಶೂದ್ರೇಣ ಶುಭಮಿಚ್ಛತಾ ।
ನಾಧರ್ಮೇಣ ವಿಶೇಷಣ ಮುಕ್ತ್ವೈಕಂ ಭೋಜಕಂ ಪ್ರಿಯೇ ॥ ೬೧ ॥
ಬ್ರಹ್ಮಣೋ ದಕ್ಷಿಣೇ ಪಾರ್ಶ್ವೇ ಸಾವಿತ್ರೀಂ ಸ್ಥಾಪಯೇತ್ಪ್ರಿಯೇ ।
ಭೋಜಕಂ ವಾಮಪಾರ್ಶ್ವೇ ತು ಪುರತಃ ಪಂಕಜಂ ನ್ಯಸೇತ್ ॥ ೬೨ ॥
ಏವಂ ತೂರ್ಯನಿನಾದೈಶ್ಚ ಶಂಖಶಬ್ದೈಶ್ಚ ಪುಷ್ಕಲೈಃ ।
ಭ್ರಾಮಯಿತ್ವಾ ರಥಂ ದೇವಿ ಪುರಂ ಸರ್ವಂ ಚ ದಕ್ಷಿಣಂ ।
ಸ್ವಸ್ಥಾನೇ ಸ್ಥಾಪಯೇದ್ಭೂಯಃ ಕೃತ್ವಾ ನಿರಾಜನಂ ಬುಧಃ ॥ ೬೩ ॥
ಯ ಏವಂ ಕುರುತೇ ಯಾತ್ರಾಂ ಭಕ್ತ್ಯಾ ಯಶ್ಚಾಪಿ ಪಶ್ಯತಿ ।
ರಥಂ ವಾಽಕರ್ಷಯೇದ್ಯಸ್ತು ಸ ಗಚ್ಛೇದ್ಬ್ರಹ್ಮಣಃ ಪದಂ ॥ ೬೪ ॥

ಮಾಡಿಸಿ ಬ್ರಹ್ಮದೇವನನ್ನು ಕೃಷ್ಣಾಜಿನದಿಂದ ಹೊದಿಸಿ ಸಾವಿತ್ರಿಯೊಡನೆ ನಾನಾವಾದ್ಯಗಳು ಶಬ್ದಗೈಯುತ್ತಿರಲು ರಥದಲ್ಲಿ ಕುಳ್ಳಿರಿಸಿ ನಾಟಕ, ವೇದಘೋಷಗಳನ್ನು ಮಾಡಿಸಿ ಜಾಗರಣೆ ಮಾಡಬೇಕು.

೬೧. ಪ್ರಿಯಳೆ! ಭೋಜಕನೊಬ್ಬನನ್ನು ಬಿಟ್ಟು ಶುಭವನ್ನು ಬಯಸುವ ಶೂದ್ರನು ಬ್ರಹ್ಮರಥವನ್ನೇರಿ ಅಧರ್ಮವನ್ನಾಚರಿಸಬಾರದು.

೬೨. ಬ್ರಹ್ಮನ ದಕ್ಷಿಣ ಭಾಗದಲ್ಲಿ ಸಾವಿತ್ರಿಯನ್ನೂ, ವಾಮಭಾಗದಲ್ಲಿ ಭೋಜಕನನ್ನೂ, ಮುಂದೆ ಕಮಲವನ್ನೂ ಇಡಬೇಕು,

೬೩. ಹೀಗೆ ವಾದ್ಯ ಘೋಷಗಳಿಂದಲೂ ಅತಿಶಯವಾದ ಶಂಖಧ್ವನಿಗಳಿಂದಲೂ ಬ್ರಹ್ಮದೇವನನ್ನು ಊರಿನ ಸುತ್ತಲೂ ಸುತ್ತಿಸಿ ಮಂಗಳಾರತಿಯನ್ನು ಮಾಡಿ ಮರಳಿ ಸ್ವಸ್ಥಾನದಲ್ಲಿ ಸ್ಥಾಪಿಸಬೇಕು.

೬೪. ಹೀಗೆ ರಥೋತ್ಸವವನ್ನು ಮಾಡಿದವನೂ, ಭಕ್ತಿಯಿಂದ ಅವನನ್ನು ಸಂದರ್ಶಿಸಿದವನೂ, ಅವನ ರಥವನ್ನು ಎಳೆದವನೂ ಬ್ರಹ್ಮಲೋಕವನ್ನು ಹೊಂದುವರು.

ಯೋ ದೀಪಂ ಧಾರಯೇತ್ತತ್ರ ಬ್ರಹ್ಮಣೋ ರಥಪೃಷ್ಠಗಃ ।
ಪದೇ ಪದೇಽಶ್ವಮೇಧಸ್ಯ ಸ ಫಲಂ ವಿಂದತೇ ಮಹತ್ ॥ ೧೫ ॥
ಯೋ ನ ಕಾರಯತೇ ರಾಜಾ ರಥಯಾತ್ರಾಂ ತು ಬ್ರಹ್ಮಣಃ ।
ಸ ಪಚ್ಯತೇ ಮಹಾದೇವಿ ರಾರವೇ ಕಾಲಮಕ್ಷಯಂ ॥ ೧೬ ॥
ತಸ್ಮಾತ್ಸರ್ವಪ್ರಯತ್ನೇನ ರಾಷ್ಟ್ರಸ್ಯ ಕ್ಷೇಮಮಿಚ್ಛತಾ ।
ರಥಯಾತ್ರಾಂ ವಿಶೇಷೇಣ ಸ್ವಯಂ ರಾಜಾ ಪ್ರವರ್ತಯೇತ್ ॥ ೧೭ ॥
ಪ್ರತಿಪದ್ಬ್ರಾಹ್ಮಣಾಂಶ್ಚಾಪಿ ಭೋಜಯೇದ್ವಿಧಿವತ್ಸುಧೀಃ ।
ವಾಸೋಭಿರಹಿತೈಶ್ಚಾಪಿ ಗಂಧಮಾಲ್ಯಾನುಲೇಪನೈಃ ॥ ೧೮ ॥
ಕಾರ್ತಿಕೇ ಮಾಸ್ಯಮಾವಾಸ್ಯಾಂ ಯಸ್ತು ದೀಪಪ್ರದೀಪನಂ ।
ಶಾಲಾಯಾಂ ಬ್ರಹ್ಮಣಃ ಕುರ್ಯಾತ್ಸ ಗಚ್ಛೇತ್ಪರಮಂ ಪದಂ ॥ ೧೯ ॥
ಉತ್ಸವೇಷು ಚ ಸರ್ವೇಷು ಸರ್ವಕಾಲೇ ವಿಶೇಷತಃ ।
ಪೂಜಯೇಯುರಿಮಂ ವಿಪ್ರಾ ಬ್ರಹ್ಮಾಣಂ ಜಗತಾಂ ಗುರುಂ ॥ ೨೦ ॥
ಯಥಾಕೃತ್ಯಪ್ರಯೋಗೇಣ ಸಮ್ಯಕ್ಛ್ರದ್ಧಾಸಮನ್ವಿತಾಃ ।
ಪೂಜ್ಯೋ ದಿವ್ಯೋಪಚಾರೇಣ ಯಥಾವಿತ್ತಾನುಸಾರತಃ ॥ ೨೧ ॥

---

೧೫. ಬ್ರಹ್ಮನ ರಥದ ಹಿಂದೆ ದೀಪವನ್ನು ಹಿಡಿದುಕೊಂಡು ಹೋಗುವವನು ಪ್ರತಿ ಹೆಜ್ಜೆಯಲ್ಲಿಯೂ ಅಶ್ವಮೇಧಯಾಗದ ಫಲವನ್ನು ಪಡೆಯುವನು.

೧೬. ಈ ರಥೋತ್ಸವವನ್ನು ಮಾಡಿಸದಿದ್ದಲ್ಲಿ ದೊರೆಯು ಅನೇಕ ವರ್ಷಗಳ ಕಾಲ ರೌರವ ನರಕದಲ್ಲಿಬಿದ್ದು ದುಃಖಗೊಳ್ಳುವನು.

೧೭. ಆದುದರಿಂದ ತನ್ನ ದೇಶದ ಕ್ಷೇಮವನ್ನು ಬಯಸುವ ರಾಜನು ತಾನೇ ಸಕಲ ಪ್ರಯತ್ನಗಳಿಂದ ಬ್ರಹ್ಮ ರಥೋತ್ಸವವನ್ನು ಮಾಡಿಸಬೇಕು.

೧೮. ಪಾಡ್ಯದ ದಿನ ಬ್ರಾಹ್ಮಣರನ್ನು ಭೋಜನ ಮಾಡಿಸಿ ಅವರನ್ನು ಹೊಸ ಬಟ್ಟೆಗಳಿಂದಲೂ, ಗಂಧ, ಮಾಲ್ಯ, ಅನುಲೇಪನ ದ್ರವ್ಯಗಳಿಂದಲೂ ಅರ್ಚಿಸಬೇಕು.

೧೯. ಕಾರ್ತಿಕ ಬಹುಳ ಅಮಾವಾಸ್ಯೆಯ ದಿನ ಬ್ರಹ್ಮದೇವಾಲಯದಲ್ಲಿ ದೀಪವನ್ನು ಹೊತ್ತಿಸುವವನು ಉತ್ತಮಸ್ಥಾನವನ್ನು ಪಡೆಯುವನು.

೨೦. ಬ್ರಾಹ್ಮಣರು ಉತ್ಸವ ಕಾಲಗಳಲ್ಲೆಲ್ಲ ಜಗದ್ಗುರುವಾದ ಬ್ರಹ್ಮನನ್ನು ಪೂಜಿಸಬೇಕು.

೨೧. ಮನುಷ್ಯರು ವಿಧಿಯಂತೆ ಶ್ರದ್ಧೆಯಿಂದ ತಮ್ಮಲ್ಲಿರುವ ದ್ರವ್ಯವನ್ನನುಸರಿಸಿ ದಿವ್ಯೋಪಚಾರಗಳಿಂದ ಆ ಬ್ರಹ್ಮದೇವನನ್ನು ಪೂಜಿಸಬೇಕು.

ಏವಂ ತೇ ಕಥಿತಂ ದೇವಿ ಪೂಜಾಮಾಹಾತ್ಮ್ಯಮುತ್ತಮಂ ।
ಪ್ರಭಾಸಕ್ಷೇತ್ರಮಾಹಾತ್ಮ್ಯಂ ಬ್ರಹ್ಮಣೋ ಬಾಲರೂಪಿಣಃ ॥ ೭೨ ॥
ತಸ್ಯಾಹಂ ಕಥಯಿಷ್ಯಾಮಿ ನಾಮ್ನಾಮಷ್ಟೋತ್ತರಂ ಶತಂ ।
ಪ್ರದತ್ವಾ ಚ ಪಠಿತ್ವಾ ಚ ಯಜ್ಞಾಯುತಫಲಂ ಲಭೇತ್ ॥ ೭೩ ॥
ಗಾಯತ್ರ್ಯಾ ಲಕ್ಷಜಾಪ್ಯೇನ ಸಮ್ಯಗ್ಜಪ್ತೇನ ಯತ್ಫಲಂ ।
ತತ್ಫಲಂ ಸಮವಾಪ್ನೋತಿ ಸ್ತೋತ್ರಸ್ಯಾಸ್ಯ ಉದೀರಣಾತ್ ॥ ೭೪ ॥
ಇದಂ ಸ್ತೋತ್ರವರಂ ದಿವ್ಯಂ ರಹಸ್ಯಂ ಪಾಪನಾಶನಂ ।
ನ ದೇಯಂ ದುಷ್ಟಬುದ್ಧೀನಾಂ ನಿಂದಕಾನಾಂ ತಥೈವ ಚ ॥ ೭೫ ॥
ಬ್ರಾಹ್ಮಣಾಯ ಪ್ರದಾತವ್ಯಂ ಶ್ರೋತ್ರಿಯಾಯ ಮಹಾತ್ಮನೇ ।
ವಿಷ್ಣುನಾ ಹಿ ಪುರಾ ಪೃಷ್ಟಂ ಬ್ರಹ್ಮಣಃ ಸ್ತೋತ್ರಮುತ್ತಮಂ ॥ ೭೬ ॥
ಕೇಷು ಕೇಷು ಚ ಸ್ಥಾನೇಷು ದೇವದೇವ ಪಿತಾಮಹ ।
ಸಂಚಿಂತ್ಯತ್ತನ್ಮಮಾಚಕ್ಷ್ವ ತ್ವಂ ಹಿ ಸರ್ವವಿದುತ್ತಮ ॥ ೭೭ ॥

ಬ್ರಹ್ಮೋವಾಚ :—

ಪುಷ್ಕರೇಽಹಂ ಸುರಶ್ರೇಷ್ಠೋ ಗಯಾಯಾಂ ಪ್ರಪಿತಾಮಹಃ ।
ಕಾನ್ಯಕುಬ್ಜೇ ವೇದಗರ್ಭೋ ಭೃಗುಕ್ಷೇತ್ರೇ ಚತುರ್ಮುಖಃ ॥ ೭೮ ॥

---

೭೨. ದೇವಿ ಹೀಗೆ ನಿನಗೆ ಪ್ರಭಾಸಕ್ಷೇತ್ರದಲ್ಲಿರುವ ಬಾಲರೂಪಿಯಾದ ಬ್ರಹ್ಮನ ಪೂಜಾಮಾಹಾತ್ಮ್ಯವನ್ನು ಹೇಳಿರುವೆನು.

೭೩. ಇನ್ನು ಬಾಲರೂಪಿ ಬ್ರಹ್ಮನ ನೂರೆಂಟು ನಾಮಗಳನ್ನು ಹೇಳುವೆನು. ಇದನ್ನು ಉಪದೇಶಿಸುವವನೂ, ಜಪಿಸುವವನೂ ಹತ್ತು ಸಾವಿರ ಯಜ್ಞಗಳ ಫಲವನ್ನು ಪಡೆಯುವನು.

೭೪. ಈ ಸ್ತೋತ್ರವನ್ನು ಹೇಳುವುದರಿಂದ ಮನುಷ್ಯನು ಗಾಯತ್ರಿಯನ್ನು ವಿಧ್ಯುಕ್ತವಾಗಿ ಒಂದು ಲಕ್ಷ ಸಾರಿ ಜಪಿಸಿದ ಫಲವನ್ನು ಹೊಂದುವನು.

೭೫. ರಹಸ್ಯವೂ, ಪಾಪವನ್ನು ಪರಿಹರಿಸುವುದೂ ಆದ ಈ ಉತ್ತಮ ಸ್ತೋತ್ರವನ್ನು ನಿಂದಿಸುವ ದುಷ್ಟಬುದ್ಧಿಗಳಿಗೆ ಹೇಳಕೂಡದು.

೭೬. ಹಿಂದೆ ವಿಷ್ಣುವು ಶ್ರೋತ್ರಿಯನೂ, ಮಹಾತ್ಮನೂ ಆದ ಬ್ರಾಹ್ಮಣನಿಗೆ ಹೇಳಬೇಕಾದ ಈ ಸ್ತೋತ್ರವನ್ನು ಹೀಗೆ ಪ್ರಶ್ನೆಮಾಡಿರುವನು.

೭೭. "ಪಿತಾಮಹ! ನಿನ್ನನ್ನು ಯಾವಯಾವ ಸ್ಥಾನಗಳಲ್ಲಿ ಹೇಗೆ ಹೇಗೆ ಧ್ಯಾನಿಸಬೇಕು. ಅದನ್ನು ನನಗೆ ಹೇಳು."

೭೮–೧೦೩. ಬ್ರಹ್ಮನು ಹೇಳುತ್ತಾನೆ:—ಪುಷ್ಕರದಲ್ಲಿ ಸುರಶ್ರೇಷ್ಠನೆಂದೂ, ಗಯೆಯಲ್ಲಿ ಪ್ರಪಿತಾಮಹನೆಂದೂ, ಕಾನ್ಯಕುಬ್ಜದಲ್ಲಿ ವೇದಗರ್ಭನೆಂದೂ, ಭೃಗುಕ್ಷೇತ್ರದಲ್ಲಿ ಚತುರ್ಮುಖನೆಂದೂ, ಕೌಬೇರಿಯಲ್ಲಿ ಸೃಷ್ಟಿಕರ್ತನೆಂದೂ, ನಂದಿಪುರದಲ್ಲಿ ಬೃಹಸ್ಪತಿ

ಕೌಬೇರ್ಯಾಂ ಸೃಷ್ಟಿಕರ್ತಾ ಚ ನಂದಿಪುರ್ಯಾಂ ಬೃಹಸ್ಪತಿಃ ।
ಪ್ರಭಾಸೇ ಬಾಲರೂಪೀ ಚ ವಾರಾಣಸ್ಯಾಂ ಸುರಪ್ರಿಯಃ ॥ ೭೯ ॥
ದ್ವಾರಾವತ್ಯಾಂ ಚಕ್ರದೇವೋ ವೈದಿಶೇ ಭುವನಾಧಿಪಃ ।
ಪೌಂಡ್ರಕೇ ಪುಂಡರೀಕಾಕ್ಷಃ ಪೀತಾಕ್ಷೋ ಹಸ್ತಿನಾಪುರೇ ॥ ೮೦ ॥
ಜಯಂತ್ಯಾಂ ವಿಜಯಶ್ಚಾಸೌ ಜಯಂತಃ ಪುರುಷೋತ್ತಮೇ ।
ವಾಡೇಷು ಪದ್ಮಹಸ್ತೋಽಹಂ ತಮೋಲಿಪ್ತೇ ತಮೋನುದಃ ॥ ೮೧ ॥
ಅಹಿಚ್ಛತ್ರ್ಯಾಂ ಜನಾನಂದಃ ಕಾಂಚೀಪುರ್ಯಾಂ ಜನಪ್ರಿಯಃ ।
ಕರ್ಣಾಟಸ್ಯ ಪುರೇ ಬ್ರಹ್ಮಾ ಋಷಿಕುಂಡೇ ಮುನಿಸ್ತಥಾ ॥ ೮೨ ॥
ಶ್ರೀಕಂಠೇ ಶ್ರೀನಿವಾಸಶ್ಚ ಕಾಮರೂಪೇ ಶುಭಂಕರಃ ।
ಉಚ್ಛ್ರಯಾಣೇ ದೇವಕರ್ತಾ ಸ್ರಷ್ಟಾ ಜಾಲಂಧರೇ ತಥಾ ॥ ೮೩ ॥
ಮಲ್ಲಿಕಾಖ್ಯೇ ತಥಾ ವಿಷ್ಣುರ್ಮಹೇಂದ್ರೇ ಭಾರ್ಗವಸ್ತಥಾ ।
ಗೋನರ್ದಃ ಸ್ಥವಿರಾಕಾರೇ ಹ್ಯುಜ್ಜಯಿನ್ಯಾಂ ಪಿತಾಮಹಃ ॥ ೮೪ ॥
ಕೌಶಾಂಬ್ಯಾಂ ತು ಮಹಾದೇವೋ ಹ್ಯಯೋಧ್ಯಾಯಾಂ ತು ರಾಘವಃ ।
ವಿರಂಚಿಶ್ಚಿತ್ರಕೂಟೇ ತು ವಾರಾಹೋ ವಿಂಧ್ಯಪರ್ವತೇ ॥ ೮೫ ॥

ಯೆಂದೂ, ಪ್ರಭಾಸದಲ್ಲಿ ಬಾಲರೂಪಿಯೆಂದೂ, ಕಾಶಿಯಲ್ಲಿ ಸುರಪ್ರಿಯನೆಂದೂ, ದ್ವಾರಾವತಿಯಲ್ಲಿ ಚಕ್ರದೇವನೆಂದೂ, ವೈದಿಶದಲ್ಲಿ ಭುವನಾಧಿಪನೆಂದೂ, ಪೌಂಡ್ರಕದಲ್ಲಿ ಪುಂಡರೀಕಾಕ್ಷನೆಂದೂ, ಹಸ್ತಿನಾಪುರಿಯಲ್ಲಿ ಪೀತಾಕ್ಷನೆಂದೂ, ಜಯಂತಿಯಲ್ಲಿ ವಿಜಯನೆಂದೂ, ಪುರುಷೋತ್ತಮದಲ್ಲಿ ಜಯಂತನೆಂದೂ. ವಾಡದಲ್ಲಿ ಪದ್ಮಹಸ್ತನೆಂದೂ, ತಮೋಲಿಪ್ತದಲ್ಲಿ ತಮೋನುದನೆಂದೂ, ಅಹಿಚ್ಛತ್ರದಲ್ಲಿ ಜನಾನಂದನೆಂದೂ, ಕಾಂಚೀಪಟ್ಟಣದಲ್ಲಿ ಜನಪ್ರಿಯನೆಂದೂ, ಕರ್ಣಾಟ ಪಟ್ಟಣದಲ್ಲಿ ಬ್ರಹ್ಮನೆಂದೂ, ಋಷಿಕುಂಡದಲ್ಲಿ ಮುನಿಯೆಂದೂ, ಶ್ರೀಕಂಠದಲ್ಲಿ ಶ್ರೀನಿವಾಸನೆಂದೂ, ಕಾಮರೂಪದಲ್ಲಿ ಶುಭಂಕರನೆಂದೂ, ಉಚ್ಚ್ರಯಾಣದಲ್ಲಿ ದೇವಕರ್ತನೆಂದೂ, ಜಾಲಂಧರದಲ್ಲಿ ಸ್ರಷ್ಟನೆಂದೂ, ಮಲ್ಲಿಕಾಪುರದಲ್ಲಿ ವಿಷ್ಣುವೆಂದೂ, ಮಹೇಂದ್ರದಲ್ಲಿ ಭಾರ್ಗವನೆಂದೂ, ಸ್ಥವಿರಾಕಾರದಲ್ಲಿ ಗೋನರ್ದನೆಂದೂ, ಉಜ್ಜಯಿನಿಯಲ್ಲಿ ಪಿತಾಮಹನೆಂದೂ, ಕೌಶಾಂಬಿಯಲ್ಲಿ ಮಹಾದೇವನೆಂದೂ, ಅಯೋಧ್ಯೆಯಲ್ಲಿ ರಾಘವನೆಂದೂ. ಚಿತ್ರಕೂಟದಲ್ಲಿ ವಿರಂಚಿಯೆಂದೂ, ವಿಂಧ್ಯಪರ್ವದಲ್ಲಿ ವಾರಾಹನೆಂದೂ, ಗಂಗಾದ್ವಾರದಲ್ಲಿ ಸುರುಶ್ರೇಷ್ಠನೆಂದೂ, ಹಿಮಾಲಯದಲ್ಲಿ ಶಂಕರನೆಂದೂ, ದೇಹಿಕೆಯಲ್ಲಿ ಸ್ರುಚಾಹಸ್ತನೆಂದೂ, ಅರ್ಬುದದಲ್ಲಿ ಪದ್ಮಹಸ್ತನೆಂದೂ ವೃಂದಾವನದಲ್ಲಿ ಪದ್ಮನೇತ್ರನೆಂದೂ, ನೈಮಿಷದಲ್ಲಿ ಕುಶಹಸ್ತನೆಂದೂ, ಗೋಪ ಕ್ಷೇತ್ರದಲ್ಲಿ ಗೋವಿಂದನೆಂದೂ, ಯಮುನಾ

ಗಂಗಾದ್ವಾರೇ ಸುರಶ್ರೇಷ್ಠೋ ಹಿಮವಂತೇ ತು ಶಂಕರಃ ।
ದೇಹಿಕಾಯಾಂ ಸ್ರುಚಾಹಸ್ತಃ ಪದ್ಮಹಸ್ತಸ್ತಥಾಬ್ರ್ಬುದೇ ॥ ೮೬ ॥
ವೃಂದಾವನೇ ಪದ್ಮನೇತ್ರಃ ಕುಶಹಸ್ತಶ್ಚ ನೈಮಿಷೇ ।
ಗೋಪಕ್ಷೇತ್ರೇ ಚ ಗೋವಿಂದಃ ಸುರೇಂದ್ರೋ ಯಮುನಾತಟೇ ॥ ೮೭ ॥
ಭಾಗೀರಥ್ಯಾಂ ಪದ್ಮತನುರ್ಜನಾನಂದೋ ಜನಸ್ಥಲೇ
ಕೌಂಕಣೇ ಚ ಸ ಮಧ್ವಕ್ಷಃ ಕಾಂಪಿಲ್ಯೇ ಕನಕಪ್ರಭಃ ॥ ೮೮ ॥
ಖೇಟಕೇ ಚಾನ್ನದಾತಾ ಚ ಶಂಭುಶ್ಚೈವ ಕ್ರತುಸ್ಥಲೇ ।
ಲಂಕಾಯಾಂ ಚೈವ ಪೌಲಸ್ತ್ಯಃ ಕಾಶ್ಮೀರೇ ಹಂಸವಾಹನಃ ॥ ೮೯ ॥
ವಸಿಷ್ಠಶ್ಚಾಬ್ರ್ಬುದೇ ಚೈವ ನಾರದಶ್ಚೋತ್ಪಲಾವನೇ ।
ಮೇಧಕೇ ಶ್ರುತಿದಾತಾ ಚ ಪ್ರಯಾಗೇ ಯಜುಷಾಂ ಪತಿಃ ॥ ೯೦ ॥
ಶಿವಲಿಂಗೇ ಸಾಮವೇದೋ ಮರ್ಕಟೇ ಚ ಮಧುಪ್ರಿಯಃ ।
ನಾರಾಯಣಶ್ಚ ಗೋಮಂತೇ ವಿದರ್ಭಾಯಾಂ ದ್ವಿಜಪ್ರಿಯಃ ॥ ೯೧ ॥
ಅಂಕುಲಕೇ ಬ್ರಹ್ಮಗರ್ಭೋ ಬ್ರಹ್ಮವಾಹೇ ಸುತಪ್ರಿಯಃ ।
ಇಂದ್ರಪ್ರಸ್ಥೇ ದುರಾಧರ್ಷಶ್ಚಂಪಾಯಾಂ ಸುರಮರ್ದನಃ ॥ ೯೨ ॥

ದಡದಲ್ಲಿ ಸುರೇಂದ್ರನೆಂದೂ, ಭಾಗೀರಥಿಯಲ್ಲಿ ಪದ್ಮತನುವೆಂದೂ, ಜನಸ್ಥಳದಲ್ಲಿ ಜನಾನಂದನೆಂದೂ, ಕೌಂಕಣದಲ್ಲಿ ಮಧ್ವಕ್ಷನೆಂದೂ, ಕಾಂಪಿಲ್ಯದಲ್ಲಿ ಕನಕಪ್ರಭನೆಂದೂ, ಖೇಟಕದಲ್ಲಿ ಅನ್ನದಾತನೆಂದೂ ಕ್ರತುಸ್ಥಳದಲ್ಲಿ ಶಂಭುವೆಂದೂ, ಲಂಕೆಯಲ್ಲಿ ಪೌಲಸ್ತ್ಯನೆಂದೂ, ಕಾಶ್ಮೀರದಲ್ಲಿ ಹಂಸವಾಹನನೆಂದೂ, ಅರ್ಬುದದಲ್ಲಿ ವಸಿಷ್ಠನೆಂದೂ, ಉತ್ಪಲಾವನದಲ್ಲಿ ನಾರದನೆಂದೂ, ಮೇಧಕದಲ್ಲಿ ಶ್ರುತಿದಾತನೆಂದೂ, ಪ್ರಯಾಗದಲ್ಲಿ ಯಜುಷ್ಪತಿಯೆಂದೂ. ಶಿವಲಿಂಗದಲ್ಲಿ ಸಾಮವೇದನೆಂದೂ, ಮರ್ಕಟದಲ್ಲಿ ಮಧುಪ್ರಿಯನೆಂದೂ, ಗೋಮಂತದಲ್ಲಿ ನಾರಾಯಣನೆಂದೂ, ವಿದರ್ಭದಲ್ಲಿ ದ್ವಿಜಪ್ರಿಯನೆಂದೂ, ಅಂಕುಲದಲ್ಲಿ ಬ್ರಹ್ಮಗರ್ಭನೆಂದೂ, ಬ್ರಹ್ಮವಾಹದಲ್ಲಿ ಸುತಪ್ರಿಯನೆಂದೂ, ಇಂದ್ರಪ್ರಸ್ಥದಲ್ಲಿ ದುರಾಧರ್ಷನೆಂದೂ, ಚಂಪೆಯಲ್ಲಿ ಸುರಮರ್ದನನೆಂದೂ, ವಿರಜೆಯಲ್ಲಿ ಮಹಾರೂಪನೆಂದೂ, ಸುರೂಪದಲ್ಲಿ ರಾಷ್ಟ್ರವರ್ಧನನೆಂದೂ, ಕದಂಬಕದಲ್ಲಿ ಜನಾಧ್ಯಕ್ಷನೆಂದೂ, ಸಮಸ್ಥಲದಲ್ಲಿ ದೇವಾಧ್ಯಕ್ಷನೆಂದೂ, ರುದ್ರಪೀಠದಲ್ಲಿ ಗಂಗಾಧರನೆಂದೂ, ಸುಪೀಠದಲ್ಲಿ ಜಲದನೆಂದೂ, ತ್ರ್ಯಂಬಕದಲ್ಲಿ ತ್ರಿಪುರಾರಿಯೆಂದೂ, ಶ್ರೀಶೈಲದಲ್ಲಿ ತ್ರಿಲೋಚನನೆಂದೂ, ಪ್ಲಕ್ಷಪುರದಲ್ಲಿ ಮಹಾದೇವನೆಂದೂ, ಕಪಾಲದಲ್ಲಿ ವೇಧನಾಶನನೆಂದೂ, ಶೃಂಗವೇರ ಪುರದಲ್ಲಿ ಶೌರಿಯೆಂದೂ, ನಿಮಿಷದಲ್ಲಿ ಚಕ್ರಧಾರಕನೆಂದೂ, ನಂದಿಪುರಿಯಲ್ಲಿ ವಿರೂಪಾಕ್ಷನೆಂದೂ, ಪ್ಲಕ್ಷಪಾದಪದಲ್ಲಿ ಗೌತಮನೆಂದೂ, ಹಸ್ತಿನಾಥದಲ್ಲಿ ಮಾಲ್ಯವಂತನೆಂದೂ, ವಾಚಿಕದಲ್ಲಿ ದ್ವಿಜೇಂದ್ರನೆಂದೂ, ಇಂದ್ರಪುರಿಯಲ್ಲಿ

ವಿರಜಾಯಾಂ ಮಹಾರೂಪಃ ಸುರೂಪೋ ರಾಷ್ಟ್ರವರ್ಧನೇ ।
ಕದಂಬಕೇ ಜನಾಧ್ಯಕ್ಷೋ ದೇವಾಧ್ಯಕ್ಷಃ ಸಮುಸ್ಥಲೇ ॥ ೯೩ ॥

ಗಂಗಾಧರೋ ರುದ್ರಪೀಠೇ ಸುಪೀಠೇ ಜಲದಃ ಸ್ಮೃತಃ ।
ತ್ರ್ಯಂಬಕೇ ತ್ರಿಪುರಾರಿಶ್ಚ ಶ್ರೀಶೈಲೇ ಚ ತ್ರಿಲೋಚನಃ ॥ ೯೪ ॥

ಮಹಾದೇವಃ ಪ್ಲಕ್ಷಪುರೇ ಕಪಾಲೇ ಪೇಧನಾಶನಃ ।
ಶೃಂಗವೇರಪುರೇ ಶೌರಿರ್ನಿಮಿಷೇ ಚಕ್ರಧಾರಕಃ ॥ ೯೫ ॥

ನಂದಿಪುರ್ಯಾಂ ವಿರೂಪಾಕ್ಷೋ ಗೌತಮಃ ಪ್ಲಕ್ಷಪಾದಪೇ ।
ಮಾಲ್ಯವಾನ್ ಹಸ್ತಿನಾಥೇ ತು ದ್ವಿಜೇಂದ್ರೋ ವಾಚಿಕೇ ತಥಾ ॥ ೯೬ ॥

ಇಂದ್ರಪುರ್ಯಾಂ ದಿವಾನಾಥೋ ಭೂತಿಕಾಯಾಂ ಪುರಂದರಃ ।
ಹಂಸಬಾಹುಶ್ಚ ಚಂದ್ರಾಯಾಂ ಚಂಪಾಯಾಂ ಗರುಡಪ್ರಿಯಃ ॥ ೯೭ ॥

ಮಹೋದಯೇ ಮಹಾಯಕ್ಷಃ ಸುಯಜ್ಞಃ ಪೂತಕೇ ವನೇ ।
ಸಿದ್ಧೇಶ್ವರೇ ಶುಕ್ಲವರ್ಣೋ ವಿಭಾಯಾಂ ಪದ್ಮಬೋಧಕಃ ॥ ೯೮ ॥

ದೇವದಾರುವನೇ ಲಿಂಗೀ ಉದಕೇಥ ಉಮಾಪತಿಃ ।
ವಿನಾಯಕೋ ಮಾತೃಸ್ಥಾನೇ ಅಲಕಾಯಾಂ ಧನಾಧಿಪಃ ॥ ೯೯ ॥

ತ್ರಿಕೂಟೇ ಚೈವ ಗೋವಿಂದಃ ಪಾತಾಲೇ ವಾಸುಕಿಸ್ತಥಾ ।
ಕೋವಿದಾರೇ ಯುಗಾಧ್ಯಕ್ಷಃ ಸ್ತ್ರೀರಾಜ್ಯೇ ಚ ಸುರಪ್ರಿಯಃ ॥ ೧೦೦ ॥

ಪೂರ್ಣಗಿರ್ಯಾಂ ಸುಭೋಗಶ್ಚ ಶಾಲ್ಮಲ್ಯಾಂ ತಕ್ಷಕಸ್ತಥಾ ।
ಅಮರೇ ಪಾಪಹಾ ಚೈವ ಅಂಬಿಕಾಯಾಂ ಸುದರ್ಶನಃ ॥ ೧೦೧ ॥

ನರವಾಪ್ಯಾಂ ಮಹಾವೀರಃ ಕಾಂತಾರೇ ದುರ್ಗನಾಶನಃ ।
ಪದ್ಮವತ್ಯಾಂ ಪದ್ಮಗೃಹೋ ಗಗನೇ ಮೃಗಲಾಂಛನಃ ॥ ೧೦೨ ॥

ದಿವಾನಾಥನೆಂದೂ, ಭೂತಿಕೆಯಲ್ಲಿ ಪುರಂದರನೆಂದೂ, ಚಂದ್ರೆಯಲ್ಲಿ ಹಂಸಬಾಹುವೆಂದೂ. ಚಂಪೆಯಲ್ಲಿ ಗರುಡಪ್ರಿಯನೆಂದೂ, ಮಹೋದಯದಲ್ಲಿ ಮಹಾಯಕ್ಷನೆಂದೂ, ಪೂತಕ ವನದಲ್ಲಿ ಸುಯಜ್ಞನೆಂದೂ, ಸಿದ್ಧೇಶ್ವರದಲ್ಲಿ ಶುಕ್ಲವರ್ಣನೆಂದೂ, ವಿಭೆಯಲ್ಲಿ ಪದ್ಮಬೋಧಕನೆಂದೂ, ದೇವದಾರುವನದಲ್ಲಿ ಲಿಂಗಿಯೆಂದೂ, ಉದಕದಲ್ಲಿ ಉಮಾಪತಿಯೆಂದೂ, ಮಾತೃಸ್ಥಾನದಲ್ಲಿ ವಿನಾಯಕನೆಂದೂ, ಅಲಕೆಯಲ್ಲಿ ಧನಾಧಿಪನೆಂದೂ, ತ್ರಿಕೂಟದಲ್ಲಿ ಗೋವಿಂದನೆಂದೂ, ಪಾತಾಳದಲ್ಲಿ ವಾಸುಕಿಯೆಂದೂ, ಕೋವಿದಾರದಲ್ಲಿ ಯುಗಾಧ್ಯಕ್ಷನೆಂದೂ, ಸ್ತ್ರೀರಾಜ್ಯದಲ್ಲಿ ಸುರಪ್ರಿಯನೆಂದೂ, ಪೂರ್ಣಗಿರಿಯಲ್ಲಿ ಸುಭೋಗನೆಂದೂ, ಶಾಲ್ಮಲಿಯಲ್ಲಿ ತಕ್ಷಕನೆಂದೂ, ಅಮರದಲ್ಲಿ ಪಾಪಹನೆಂದೂ,

ಅಷ್ಟೋತ್ತರಂ ನಾಮಶತಂ ಯತ್ರೈತತ್ಪರಿಪಠ್ಯತೇ ।
ತತ್ರೈವ ಮಮ ಸಾಂನಿಧ್ಯಂ ತ್ರಿಸಂಧ್ಯಂ ಮಧುಸೂದನ ॥ ೧೦೩ ॥
ಏತೇಷಾಮಪಿ ಯಸ್ತ್ವೇಕಂ ಪಶ್ಯೇದ್ವೈ ಬಾಲರೂಪಿಣಂ ।
ಸರ್ವೇಷಾಂ ಲಭತೇ ಪುಣ್ಯಂ ಪೂರ್ವೋಕ್ತಾನಾಂ ಚ ವೇಧಸಾಂ ॥ ೧೦೪ ॥
ಏತೈರ್ಯೋ ನಾಮಭಿಃ ಕೃಷ್ಣ ಪ್ರಭಾಸೇ ಸ್ತೌತಿ ಮಾಂ ಸದಾ ।
ಸ್ಥಾನಂ ಮೇ ವಿಜಯಂ ಲಬ್ಧ್ವಾ ಮೋದತೇ ಶಾಶ್ವತೀಃ ಸಮಾಃ ॥ ೧೦೫ ॥
ಮಾನಸಂ ವಾಚಿಕಂ ಚೈವ ಕಾಯಿಕಂ ಚೈವ ದುಷ್ಕೃತಂ ।
ತತ್ಸರ್ವಂ ನಾಶಮಾಯಾತಿ ಮಮ ಸ್ತೋತ್ರಾನುಕೀರ್ತನಾತ್ ॥ ೧೦೬ ॥
ಪುಷ್ಪೋಪಹಾರೈರ್ಧೂಪೈಶ್ಚ ಬ್ರಾಹ್ಮಣಾನಾಂ ಚ ತರ್ಪಣೈಃ ।
ಧ್ಯಾನೇನ ಚ ಸ್ಥಿರೇಣಾಶು ಪ್ರಾಪ್ಯತೇ ಯತ್ಫಲಂ ನರೈಃ ।
ತತ್ಫಲಂ ಸಮವಾಪ್ನೋತಿ ಮಮ ಸ್ತೋತ್ರಾನುಕೀರ್ತನಾತ್ ॥ ೧೦೭ ॥
ಬ್ರಹ್ಮಹತ್ಯಾದಿ ಪಾಪಾನಿ ಇಹಲೋಕೇ ಕೃತಾನ್ಯಪಿ ।
ಅಕಾಮತಃ ಕಾಮತೋ ವಾ ತಾನಿ ನಶ್ಯಂತಿತತ್ಕ್ಷಣಾತ್ ॥ ೧೦೮ ॥

ಅಂಬಿಕೆಯಲ್ಲಿ ಸುದರ್ಶನನೆಂದೂ, ನರವಾಪಿಯಲ್ಲಿ ಮಹಾವೀರನೆಂದೂ, ಕಾಂತಾರದಲ್ಲಿ ದುರ್ಗನಾಶನನೆಂದೂ, ಪದ್ಮವತಿಯಲ್ಲಿ ಪದ್ಮಗೃಹನೆಂದೂ, ಗಗನದಲ್ಲಿ ಮೃಗಲಾಂಛನನೆಂದೂ ನನ್ನ ನೂರೆಂಟು ನಾಮಗಳನ್ನು ಸಂಧ್ಯಾಕಾಲದಲ್ಲಿ ಉಚ್ಚರಿಸುವ ಸ್ಥಳದಲ್ಲಿ ನಾನು ಸನ್ನಿಹಿತನಾಗಿರುವೆನು.

೧೦೪. ಇದರಲ್ಲಿ ಬಾಲರೂಪಿ ಬ್ರಹ್ಮನೊಬ್ಬನನ್ನು ಸಂದರ್ಶಿಸಿದರೆ ಹಿಂದಿನ ಸಕಲ ಬ್ರಹ್ಮರ ದರ್ಶನದಿಂದುಂಟಾದ ಪುಣ್ಯವು ಲಭಿಸುವುದು.

೧೦೫. ಕೃಷ್ಣ ! ಈ ನಾಮಗಳಿಂದ ಪ್ರಭಾಸತೀರ್ಥದಲ್ಲಿ ನನ್ನನ್ನು ಯಾವಾಗಲೂ ಸ್ತುತಿಸುವವನು ಜಯಶೀಲವಾದ ನನ್ನ ಸ್ಥಾನವನ್ನು ಪಡೆದು ಅನೇಕ ವರ್ಷಗಳಕಾಲ ಆನಂದಪಡುವನು.

೧೦೬. ನನ್ನನ್ನು ಸ್ತುತಿಸುವುದರಿಂದ ಮಾನಸಿಕ, ವಾಚಿಕ, ಕಾಯಿಕವಾದ ಸಮಸ್ತ ಪಾಪಗಳೂ ನಾಶವಾಗುವುವು.

೧೦೭. ಮನುಷ್ಯನು ಪುಷ್ಪಧೂಪಗಳ ಪೂಜೆಗಳಿಂದಲೂ, ಬ್ರಾಹ್ಮಣ ಸಂತರ್ಪಣೆಯಿಂದಲೂ, ಸ್ಥಿರಧ್ಯಾನದಿಂದಲೂ ಪಡೆಯುವ ಪುಣ್ಯವನ್ನು ನನ್ನನ್ನು ಸ್ತುತಿಸುವುದರಿಂದಲೇ ಪಡೆಯುವನು.

೧೦೮. ಈ ಲೋಕದಲ್ಲಿ ಜ್ಞಾನಾಜ್ಞಾನಗಳಿಂದ ಮಾಡಿದ ಬ್ರಹ್ಮಹತ್ಯೆಮೊದಲಾದ ಪಾಪಗಳು ಕೂಡಲೆ ನಾಶವಾಗುವುವು.

ಇದಂ ಸ್ತೋತ್ರಂ ಮಮಾಭೀಷ್ಟಂ ಶೃಣುಯಾದ್ವಾ ಪಠೇಚ್ಚ ವಾ ।
ಸ ಮುಕ್ತಃ ಪಾತಕೈಃ ಸರ್ವೈಃ ಪ್ರಾಪ್ನುಯಾನ್ಮಹದೀಪ್ಸಿತಂ ॥ ೧೦೯ ॥
ಅನ್ಯದ್ರಹಸ್ಯಂ ತೇ ವಚ್ಮಿ ಶೃಣು ಕೃಷ್ಣ ಯಥಾರ್ಥತಃ ॥ ೧೧೦ ॥
ಆಗ್ನೇಯಂ ತು ಯದಾ ಋಕ್ಷಂ ಕಾರ್ತಿಕ್ಯಾಂ ಭವತಿ ಕ್ವಚಿತ್ ।
ಮಹತೀ ಸಾ ತಿಥಿರ್ಜ್ಞೇಯಾ ಪ್ರಭಾಸೇ ಮಮ ವಲ್ಲಭಾ ॥ ೧೧೧ ॥
ಪ್ರಾಜಾಪತ್ಯಂ ಯದಾ ಋಕ್ಷಂ ತಿಥೌ ತಸ್ಯಾಂ ಭವೇದ್ಯದಿ ।
ಸಾ ಮಹಾಕಾರ್ತಿಕೀ ಪುಣ್ಯಾ ದೇವಾನಾಮಪಿ ದುರ್ಲಭಾ ॥ ೧೧೨ ॥
ಮಂದೇಽರ್ಕೇ ಗುರೌ ವಾಽಪಿ ಕಾರ್ತಿಕೀ ಕೃತ್ತಿಕಾಯುತಾ ।
ತತ್ರಾಶ್ವಮೇಧಿಕಂ ಪುಣ್ಯಂ ದೃಷ್ಟ್ವಾ ವೈ ಬಾಲರೂಪಿಣಂ ॥ ೧೧೩ ॥
ವಿಶಾಖಾಸು ಯದಾ ಸೂರ್ಯಃ ಕೃತ್ತಿಕಾಸು ಚ ಚಂದ್ರಮಾಃ ।
ಸ ಯೋಗಃ ಪದ್ಮಕೋ ನಾಮ ಪ್ರಭಾಸೇ ದುರ್ಲಭೋ ಹರೇ ॥ ೧೧೪ ॥
ತಸ್ಮಿನ್ಯೋಗೇ ನರೋ ದೃಷ್ಟ್ವಾ ಪ್ರಭಾಸೇ ಬಾಲರೂಪಿಣಂ ।
ಪಾಪಕೋಟಿಯುತೋ ವಾಽಪಿ ಯಮಲೋಕಂ ನ ಪಶ್ಯತಿ ॥ ೧೧೫ ॥

---

೧೦೯. ನನಗೆ ಪ್ರಿಯವಾದ ಈ ಸ್ತೋತ್ರವನ್ನು ಕೇಳುವವನೂ, ಸಕಲ ಪಾಪಗಳಿಂದಲೂ ಮುಕ್ತನಾಗಿ ಅತಿಶಯವಾದ ಇಷ್ಟಾರ್ಥವನ್ನು ಪಡೆಯುವನು.

೧೧೦. ಕೃಷ್ಣ ! ನಿನಗೆ ಮತ್ತೊಂದು ರಹಸ್ಯವನ್ನು ಹೇಳುವೆನು. ಕೇಳು.

೧೧೧. ಪ್ರಭಾಸಕ್ಷೇತ್ರದಲ್ಲಿ ಕಾರ್ತಿಕ ಶುದ್ಧ ಪೂರ್ಣಿಮಾ ದಿನ ಕೃತ್ತಿಕಾ ನಕ್ಷತ್ರದ ಯೋಗವಿದ್ದರೆ ಅದು ನನಗೆ ಪ್ರಿಯವಾದ ಮಹಾತಿಥಿಯು.

೧೧೨. ಆ ಹುಣ್ಣಿಮೆಯು ದಿನ ರೋಹಿಣೀ ನಕ್ಷತ್ರದ ಯೋಗವಿದ್ದರೆ ಮಹಾತಿಥಿಯೆನಿಸುವುದು. ಕಾರ್ತಿಕೀ ಎಂಬ ಆ ತಿಥಿಯು ದೇವತೆಗಳಿಗೂದುರ್ಲಭವಾದುದು.

೧೧೩. ಕಾರ್ತಿಕ ಶುದ್ಧ ಪೂರ್ಣಿಮೆಯು ಕೃತ್ತಿಕಾ ನಕ್ಷತ್ರದಿಂದ ಸಹಿತವಾದ ಶನಿ ಅಥವಾ ಗುರುವಾರದ ದಿನ ಬಾಲರೂಪಿ ಬ್ರಹ್ಮನನ್ನು ನೋಡಿದವನು ಅಶ್ವಮೇಧ ಯಾಗದ ಫಲವನ್ನು ಪಡೆಯುವನು.

೧೧೪. ಕೃಷ್ಣ ! ಸೂರ್ಯನು ವಿಶಾಖಾ ನಕ್ಷತ್ರದಲ್ಲಿಯೂ, ಚಂದ್ರನು ಕೃತ್ತಿಕಾ ನಕ್ಷತ್ರದಲ್ಲಿಯೂ ಇದ್ದರೆ ಅದು ಪದ್ಮಕವೆಂಬ ಯೋಗವಾಗುವುದು. ಅದು ಪ್ರಭಾಸ ಕ್ಷೇತ್ರದಲ್ಲಿ ದುರ್ಲಭವಾದುದು.

೧೧೫. ಆ ಯೋಗದಲ್ಲಿ ಪ್ರಭಾಸವಾಸಿಯಾದ ಬಾಲರೂಪಿ ಬ್ರಹ್ಮನನ್ನು ಕಂಡವನು ಅನೇಕ ಪಾಪಗಳಿಂದ ಸಹಿತನಾದರೂ ಯಮಲೋಕವನ್ನು ನೋಡುವುದಿಲ್ಲ.

ಈಶ್ವರ ಉವಾಚ :—

ಇತ್ಯೇವಂ ಕಥಿತಂ ಸ್ತೋತ್ರಂ ಬ್ರಹ್ಮಣಾ ಹರಯೇ ಪುನಃ ।
ಮಯಾ ತವ ಸಮಾಖ್ಯಾತಂ ಮಾಹಾತ್ಮ್ಯಂ ಬ್ರಹ್ಮದೈವತಂ ॥ ೧೧೬ ॥
ಸರ್ವಪಾಪಹರಂ ನೃಣಾಂ ಶ್ರುತಂ ಸರ್ವಾರ್ಥಸಾಧಕಂ ।
ಭೂಮಿದಾನಂ ಚ ದಾತವ್ಯಂ ತತ್ರ ಯಾತ್ರಾಫಲೇಪ್ಸುಭಿಃ ॥ ೧೧೭ ॥
ಕಮಂಡಲುಃ ಶ್ವೇತವಸ್ತ್ರಂ ಮಹಾದಾನಾನಿ ಷೋಡಶ ।
ತತ್ರೈವ ದೇವಿ ದೇಯಾನಿ ಬ್ರಹ್ಮಣೇ ಬಾಲರೂಪಿಣೇ ॥ ೧೧೮ ॥
ಮಹಾಪರ್ವಣಿ ಸಂಪ್ರಾಪ್ತೇ ಕುರ್ಯುಃ ಪಾರಾಯಣಂ ದ್ವಿಜಾಃ ।
ಸರ್ವೇ ತೇ ಬ್ರಾಹ್ಮಣಾ ದೇವಿ ಕ್ಷೇತ್ರಮಧ್ಯನಿವಾಸಿನಃ ॥ ೧೧೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬಾಲರೂಪಿಬ್ರಹ್ಮಣೋ ಮಾಹಾತ್ಮ್ಯವರ್ಣನಂ ನಾಮ
॥ ಸಪ್ತೋತ್ತರಶತತಮೋಽಧ್ಯಾಯಃ ॥

---

೧೧೬. ಹೀಗೆ ಬ್ರಹ್ಮನು ವಿಷ್ಣುವಿಗೆ ಈ ಸ್ತೋತ್ರವನ್ನು ಹೇಳಿರುವನು. ನಾನು ಈ ಬ್ರಹ್ಮನ ಮಾಹಾತ್ಮ್ಯವನ್ನು ನಿನಗೆ ಹೇಳಿವೆನೆ.

೧೧೭–೧೧೮. ಇದು ಕೇಳಿದ ಮನುಷ್ಯನ ಸಮಸ್ತ ಪಾಪಗಳನ್ನು ಪರಿಹರಿಸಿ ಸಕಲೇಷ್ಟಾರ್ಥಗಳನ್ನು ಕೊಡುವುದು. ಯಾತ್ರೆಯ ಫಲವನ್ನಪೇಕ್ಷಿಸುವ ಮನುಷ್ಯನು ಅಲ್ಲಿ ಬಾಲರೂಪಿ ಬ್ರಹ್ಮನಿಗೆ ಭೂಮಿಯನ್ನೂ, ಕಮಂಡಲುವನ್ನೂ, ಶ್ವೇತವಸ್ತ್ರವನ್ನೂ, ಷೋಡಶಮಹಾದಾನಗಳನ್ನೂ ಕೊಡಬೇಕು.

೧೧೯. ಮಹಾಪರ್ವವು ಬರಲು ಆ ಪ್ರಭಾಸಕ್ಷೇತ್ರವಾಸಿಗಳಾದ ಸಕಲ ಬ್ರಾಹ್ಮಣರೂ ವೇದಪಾರಾಯಣವನ್ನು ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬಾಲರೂಪಿಬ್ರಹ್ಮಮಾಹಾತ್ಮ್ಯವರ್ಣನವೆಂಬ
ನೂರೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟೋತ್ತರಶತತಮೋಽಧ್ಯಾಯಃ

ಪ್ರತ್ಯೂಷೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಸೂನಾಂ ಲಿಂಗಮುತ್ತಮಂ ।
ಸೋಮೇಶಾದೀಶದಿಗ್ಭಾಗೇ ಪಂಚಾಶದ್ಧನುಷಾಂತರೇ ॥ ೧ ॥
ಸ್ಥಿತಂ ಲಿಂಗಂ ಮಹಾದೇವಿ ಚತುರ್ವಕ್ತ್ರಂ ಸುರಪ್ರಿಯಂ ।
ಪ್ರತ್ಯೂಷೇಶ್ವರನಾಮಾನಂ ಮಹಾಪಾತಕನಾಶನಂ ॥ ೨ ॥
ದರ್ಶನಾತ್ತಸ್ಯ ದೇವಸ್ಯ ಸಪ್ತಜನ್ಮಾಂತರೋದ್ಭವಂ ।
ಪಾಪಂ ಪ್ರಣಾಶಮಾಯಾತಿ ಸತ್ಯಂ ಸತ್ಯಂ ವರಾನನೇ ॥ ೩ ॥

ದೇವ್ಯುವಾಚ :—

ಕೋಽಸೌ ಪ್ರತ್ಯೂಷನಾಮೇತಿ ಕಥಂ ಲಿಂಗಂ ಪ್ರತಿಷ್ಠಿತಂ ।
ಕಸ್ಯ ಪುತ್ರಃ ಸ ವಿಖ್ಯಾತ ಏತನ್ಮೇ ವದ ಶಂಕರ ॥ ೪ ॥

ಕನ್ನಡದ ಅನುವಾದ

ಪ್ರತ್ಯೂಷೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಸೋಮೇಶ್ವರನ ಈಶಾನ್ಯ ದಿಕ್ಕಿನಲ್ಲಿ ಐವತ್ತು ಬಿಲ್ಲುಗಳ ದೂರದಲ್ಲಿರುವ ನಾಲ್ಕು ಮುಖಗಳುಳ್ಳದ್ದೂ, ದೇವಪ್ರಿಯವಾದುದೂ, ಮಹಾಪಾತಕಗಳನ್ನು ನಾಶಗೊಳಿಸುವುದೂ ಆದ ಪ್ರತ್ಯೂಷೇಶ್ವರನೆಂಬ ವಸುಲಿಂಗದೆಡೆಗೆ ಹೋಗಬೇಕು.

೩. ಪ್ರಿಯಳೆ! ಆ ಪ್ರತ್ಯೂಷೇಶ್ವರನ ದರ್ಶನದಿಂದ ಮನುಷ್ಯನ ಏಳು ಜನ್ಮಗಳ ಪಾಪವು ಪರಿಹಾರವಾಗುವುದು.

೪. ದೇವಿಯು ಹೇಳುತ್ತಾಳೆ:—ಶಂಕರ! ಈ ಪ್ರತ್ಯೂಷನೆಂಬುವವನು ಯಾರು? ಯಾರ ಮಗನು? ಅವನು ಲಿಂಗವನ್ನು ಹೇಗೆ ಪ್ರತಿಷ್ಠೆಮಾಡಿದನು? ಇದನ್ನು ನನಗೆ ಹೇಳು.

ಈಶ್ವರ ಉವಾಚ :—

ದಕ್ಷೋ ಬ್ರಹ್ಮಸುತೋ ದೇವಿ ಪ್ರಜಾಪತಿರಿತಿ ಸ್ಮೃತಃ ।
ತಸ್ಯ ಕನ್ಯಾಃ ಪುರಾ ಷಷ್ಟಿರ್ದದೌ ಧರ್ಮಾಯ ವೈ ದಶ ॥ ೫ ॥
ತಾಸಾಂ ಮಧ್ಯೇ ಮಹಾದೇವಿ ಏಕಾ ವಿಶ್ವೇತಿ ವಿಶ್ರುತಾ ।
ಸಾ ಧರ್ಮಾಚ್ಚ ಮಹಾದೇವಿ ಅಷ್ಟಾವಜನಯತ್ಸುತಾನ್ ॥ ೬ ॥
ಆಪೋ ಧ್ರುವಶ್ಚ ಸೋಮಶ್ಚ ಧರಶ್ಚೈವಾನಲೋಽನಿಲಃ ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋಽಷ್ಟ್ ಪ್ರಕೀರ್ತಿತಾಃ ॥ ೭ ॥
ತೇಷಾಂ ಮಧ್ಯೇ ಸಪ್ತಮೋಽಸೌ ಪ್ರತ್ಯೂಷ ಇತಿ ವಿಶ್ರುತಃ ।
ಸ ಪುತ್ರಕಾಮೋ ದೇವೇಶಿ ಪ್ರಭಾಸಂ ಕ್ಷೇತ್ರಮಾಗತಃ ॥ ೮ ॥
ಸ ಜ್ಞಾತ್ವಾ ಕಾಮಿಕಂ ಕ್ಷೇತ್ರಂ ಪ್ರತಿಷ್ಠಾಪ್ಯ ಮಹೇಶ್ವರಂ ।
ತಪಶ್ಚಚಾರ ವಿಪುಲಂ ದಿವ್ಯಂ ವರ್ಷಶತಂ ಪ್ರಿಯೇ ।
ಧ್ಯಾಯನ್ದೇವಂ ಮಹಾದೇವಂ ಶಾಂತಸ್ತದ್ಗತಮಾನಸಃ ॥ ೯ ॥
ತತಸ್ತುಷ್ಟೋ ಮಹಾದೇವಸ್ತಸ್ಯ ಭಕ್ತ್ಯಾ ನಿರಂಜನಃ ।
ದದೌ ತಸ್ಯ ಸುತಂ ದೇವಿ ದೇವಲಂ ಯೋಗಿನಾಂ ವರಂ ॥ ೧೦ ॥

---

೫. ಈಶ್ವರನು ಹೇಳುತ್ತಾನೆ!—ದೇವಿ! ಹಿಂದೆ ಬ್ರಹ್ಮನ ಸುತನಾದ ದಕ್ಷ ಪ್ರಜಾಪತಿಯು ತನ್ನ ಅರುವತ್ತು ಜನ ಕನ್ಯೆಯರನ್ನು ಯಮಧರ್ಮನಿಗೆ ಮದುವೆಮಾಡಿ ಕೊಟ್ಟನು.

೬. ಅವರಲ್ಲಿ ವಿಶ್ವೆಯೆಂಬ ಓರ್ವ ಕನ್ಯೆಯು ಧರ್ಮರಾಜನಿಂದ ಎಂಟು ಜನ ಮಕ್ಕಳನ್ನು ಪಡೆದಳು.

೭. ಆಪ, ಧ್ರುವ, ಸೋಮ, ಧರ, ಅನಲ, ಅನಿಲ, ಪ್ರತ್ಯೂಷ, ಪ್ರಭಾಸ ಎಂಬ ಆ ಎಂಟು ಜನ ಪುತ್ರರು ಅಷ್ಟವಸುಗಳೆಂದು ಪ್ರಸಿದ್ಧರಾದರು.

೮. ಅವರಲ್ಲಿ ಏಳನೆಯವನಾದ ಪ್ರತ್ಯೂಷನು ಪುತ್ರಾರ್ಥಿಯಾಗಿ ಪ್ರಭಾಸಕ್ಕೆ ಬಂದನು.

೯. ಆ ಕ್ಷೇತ್ರವು ಕಾಮ್ಯ ಫಲವನ್ನು ಕೊಡುವುದೆಂದರಿತು ಅವನು ಅಲ್ಲಿ ಮಹೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿ ಆ ಮಹೇಶ್ವರನಲ್ಲಿಟ್ಟ ಮನಸ್ಸುಳ್ಳವನಾಗಿ ಅವನನ್ನು ಧ್ಯಾನಿಸುತ್ತ ಶಾಂತನಾಗಿ ದಿವ್ಯ ಶತವರ್ಷಗಳಕಾಲ ತಪಸ್ಸನ್ನಾಚರಿಸಿದನು.

೧೦. ತರುವಾಯ ನಿರ್ದುಷ್ಟನಾದ ಮಹೇಶ್ವರನು ಆ ಪ್ರತ್ಯೂಷನ ಭಕ್ತಿಗೆ ಮೆಚ್ಚಿ ಆವನಿಗೆ ದೇವಲನೆಂಬ ಯೋಗಿವರ್ಯನಾದ ಮಗನನ್ನು ಅನುಗ್ರಹಿಸಿದನು.

ತತಃ ಪ್ರಭೃತಿ ದೇವೇಶಿ ತಲ್ಲಿಂಗಸ್ಯ ಪ್ರಭಾವತಃ ।
ದೇವಲೋ ಭಗವಾನ್ ಯೋಗೀ ಪ್ರತ್ಯೂಷಸ್ಯಾಽಭವತ್ಸುತಃ ॥ ೧೧ ॥
ಅನೇನ ಕಾರಣೇನಾಥ ಪ್ರತ್ಯೂಷೇಶ್ವರಸಂಜ್ಞಿತಃ ॥ ೧೨ ॥
ಯಶ್ಚಾನಪತ್ಯಃ ಪುರುಷಸ್ತಂ ಸಮಾರಾಧಯಿಷ್ಯತಿ ।
ತಸ್ಯಾನ್ವವಾಯೇ ದೇವೇಶಿ ಸಂತತಿರ್ನ ವಿನಶ್ಯತಿ ॥ ೧೩ ॥
ಯಃ ಪ್ರತ್ಯೂಷೇ ಮಹಾದೇವಿ ಪ್ರತ್ಯೂಷೇಶ್ವರಮುತ್ತಮಂ ।
ಪೂಜಯಿಷ್ಯತಿ ಸದ್ಭಕ್ತ್ಯಾ ಸತತಂ ನಿಯತಾತ್ಮವಾನ್ ।
ತಸ್ಯೈಷ್ಯತಿ ಕ್ಷಯಂ ಪಾಪಮಪಿ ಬ್ರಹ್ಮವಧೋದ್ಭವಂ ॥ ೧೪ ॥
ವೃಷಸ್ತತ್ರೈವ ದಾತವ್ಯಃ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೧೫ ॥
ಮಾಘೇ ಕೃಷ್ಣಚತುರ್ದಶ್ಯಾಂ ಜಾಗೃಯಾತ್ತತ್ರ ವೈ ನಿಶಿ ।
ಸರ್ವೇಷಾಂ ದಾನಯಜ್ಞಾನಾಂ ಫಲಂ ಜಾಗರಣಾಲ್ಲಭೇತ್ ॥ ೧೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರತ್ಯೂಷೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟೋತ್ತರಶತತಮೋಽಧ್ಯಾಯಃ ॥

---

೧೧. ಅದು ಮೊದಲ್ಗೊಂಡು ಆ ಪ್ರತ್ಯೂಷನ ಮಗನಾದ ದೇವಲನು ಆ ಲಿಂಗದ ಮಾಹಾತ್ಮ್ಯದಿಂದ ಯೋಗಿಯಾದನು.

೧೨. ಈ ಕಾರಣದಿಂದ ಆ ಲಿಂಗವು ಪ್ರತ್ಯೂಷೇಶ್ವರವೆಂದು ಪ್ರಸಿದ್ಧವಾಯಿತು.

೧೩. ಮಕ್ಕಳಿಲ್ಲದ ಮನುಷ್ಯನು ಆ ಪ್ರತ್ಯೂಷೇಶ್ವರನನ್ನು ಪೂಜಿಸಿದರೆ ಅವನ ವಂಶದಲ್ಲಿ ಸಂತತಿಯು ಅವಿಚ್ಛಿನ್ನವಾಗಿ ಸಾಗುವುದು.

೧೪. ಮಹಾದೇವಿ! ಈ ಪ್ರತ್ಯೂಷೇಶ್ವರನನ್ನು ಬೆಳಗ್ಗೆ ಭಕ್ತಿಯಿಂದ ಯಾವಾಗಲೂ ಸ್ಥಿರಮನಸ್ಸಿನಿಂದ ಪೂಜಿಸುವವನ ಬ್ರಹ್ಮಹತ್ಯೆಯಿಂದುಂಟಾದ ಪಾಪವೂ ಸಹ ನಾಶವಾಗುವುದು.

೧೫. ಯಾತ್ರಾಫಲವನ್ನಪೇಕ್ಷಿಸುವವನು ಅಲ್ಲಿ ವೃಷಭವನ್ನು ದಾನಮಾಡಬೇಕು.

೧೬. ಮಾಘ ಕೃಷ್ಣಚತುರ್ದಶೀ ದಿನ ರಾತ್ರಿ ಅಲ್ಲಿ ಜಾಗರಣೆ ಮಾಡಿದರೆ ಸಕಲ ದಾನ, ಯಜ್ಞಗಳ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪ್ರತ್ಯೂಷೇಶ್ವರಮಾಹಾತ್ಮ್ಯವರ್ಣನವೆಂಬ
ನೂರೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವೋತ್ತರಶತತಮೋಽಧ್ಯಾಯಃ

ಅನಿಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅನಿಲೇಶ್ವರಮುತ್ತಮಂ ।
ತಸ್ಯೋತ್ತರೇಶಾನದಿಕ್ಸ್ಥಂ ಧನುಷಾಂ ತ್ರಿತಯೇ ಪ್ರಿಯೇ ॥ ೧ ॥
ಲಿಂಗಂ ಮಹಾಪ್ರಭಾವಂ ಹಿ ದರ್ಶನಾತ್ಪಾಪನಾಶನಂ ।
ವಸೂನಾಂ ಪಂಚಮೋ ಯೋಽಸಾವನಿಲಃ ಪರಿಕೀರ್ತಿತಃ ॥ ೨ ॥
ಸ ಚಾಽಽರಾಧ್ಯ ಮಹಾದೇವಂ ಪ್ರತ್ಯಕ್ಷೀಕೃತವಾನ್ಭವಂ ।
ಲಿಂಗಂ ಪ್ರತಿಷ್ಠಯಾಮಾಸ ಸಮ್ಯಕ್ಛ್ರದ್ಧಾಸಮನ್ವಿತಃ ॥ ೩ ॥
ಏವಮೀಶಪ್ರಭಾವೇನ ಸುತಸ್ತಸ್ಯಾಪ್ಯಭೂದ್ಬಲೀ ।
ಮನೋಜವೇತಿ ವಿಖ್ಯಾತೋ ಹ್ಯವಿಜ್ಞಾತಗತಿಸ್ತಥಾ ॥ ೪ ॥
ತಂ ದೃಷ್ಟ್ವಾ ವ್ಯಾಧಿನಾ ಮರ್ತ್ಯೋ ಪೀಡ್ಯತೇ ನ ಕದಾಚನ ।
ನಾಂಧೋ ನ ಬಧಿರೋ ಮೂಕೋ ನ ರೋಗೀ ನ ಚ ನಿರ್ಧನಃ ।
ಕದಾಚಿಜ್ಜಾಯತೇ ಮರ್ತ್ಯಸ್ತೇನ ದೃಷ್ಟೇನ ಭೂತಲೇ ॥ ೫ ॥

ಕನ್ನಡದ ಅನುವಾದ

ಅನಿಲೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಆ ಪ್ರತ್ಯೂಷೇಶ್ವರನ ಈಶಾನ್ಯದಿಕ್ಕಿನಲ್ಲಿ ಮೂರು ಬಿಲ್ಲಿನ ದೂರದಲ್ಲಿ ನೆಲಸಿ ದರ್ಶನದಿಂದಲೇ ಪಾಪವನ್ನು ಪರಿಹರಿಸುವ ಅತಿಶಯ ಮಾಹಾತ್ಮ್ಯವುಳ್ಳ ಅನಿಲೇಶ್ವರನೆಡೆಗೆ ಹೋಗಬೇಕು. ವಸುಗಳಲ್ಲಿ ಐದನೆಯವನಾದ ಅನಿಲನೆಂಬುವನು ಮಹೇಶ್ವರನನ್ನು ಪೂಜಿಸಿ ಅವನನ್ನು ಸಾಕ್ಷಾತ್ಕರಿಸಿ ಶ್ರದ್ಧೆಯಿಂದ ಲಿಂಗವನ್ನು ಪ್ರತಿಷ್ಠೆಮಾಡಿದನು.

೪. ಆ ಅನಿಲನಿಗೆ ಈಶ್ವರನ ಪ್ರಭಾವದಿಂದ ಮನೋಜವನೆಂದು ಪ್ರಸಿದ್ಧನಾದ ಬಲಿಷ್ಠಸುತನು ಜನಿಸಿದನು.

೫. ಅವನ ದರ್ಶನದಿಂದ ಮಾನವನು ಯಾವಾಗಲೂ ರೋಗಪೀಡಿತನಾಗುವುದಿಲ್ಲ. ಕುರುಡ, ಕಿವುಡ, ಮೂಕ, ಬಡವನಾಗಿ ಜನಿಸುವುದಿಲ್ಲ.

ಪುಷ್ಪಮೇಕಂ ತು ಯೋ ದದ್ಯಾತ್ತಸ್ಯ ಲಿಂಗಸ್ಯ ಚೋಪರಿ ।
ಸುಖಸೌಭಾಗ್ಯಸಂಪನ್ನಃ ಸ ಸದಾ ರೂಪವಾನ್ ಭವೇತ್ ॥ ೬ ॥
ಶ್ರುತ್ವಾಽನುಮೋದ್ಯ ಭಾವೇನ ಸರ್ವಕಾಮೈಃ ಸಮೃದ್ಧ್ಯತೇ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅನಿಲೇಶ್ವರಮಾಹಾತ್ಮ್ಯವರ್ಣನಂ ನಾಮ
॥ ನವೋತ್ತರಶತತಮೋಽಧ್ಯಾಯಃ ॥

---

೬. ಆ ಲಿಂಗದಮೇಲೆ ಒಂದು ಹೂವನ್ನಿಟ್ಟವನು ಸಹ ಯಾವಾಗಲೂ ಸುಖ ಸೌಭಾಗ್ಯದಿಂದ ಕೂಡಿ ಸುಂದರನಾಗುವನು.

೭. ದೇವಿ! ಹೀಗೆ ಪಾಪವನ್ನು ಪರಿಹರಿಸುವ ಅನಿಲೇಶ್ವರಮಾಹಾತ್ಮ್ಯವನು ಹೇಳಿರುವೆನು. ಇವನ್ನು ಭಕ್ತಿಯಿಂದ ಕೇಳಿ ಅನುಮೋದಿಸಿದವನು ಸಮಸ್ತೇಷ್ಟಾರ್ಥಗಳಿಂದ ಸಮೃದ್ಧಿಗೊಳ್ಳುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅನಿಲೇಶ್ವರಮಾಹಾತ್ಮ್ಯವರ್ಣನವೆಂಬ
ನೂರೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದಶೋತ್ತರಶತತಮೋಽಧ್ಯಾಯಃ

ಪ್ರಭಾಸೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇದ್ವರಾರೋಹೇ ಪ್ರಭಾಸೇಶ್ವರಮುತ್ತಮಂ ।
ಗೌರೀತಪೋವನಾದ್ದೇವಿ ಪಶ್ಚಿಮೇ ಸಮುದಾಹೃತಂ ॥ ೧ ॥
ಧನುಷಾಂ ಸಪ್ತಕೇ ದೇವಿ ನಾತಿದೂರೇ ವ್ಯವಸ್ಥಿತಂ ।
ಸ್ಥಾಪಿತಂ ತನ್ಮಹಾಲಿಂಗಂ ವಸೂನಾಮಷ್ಟಮೇನ ಹಿ ॥ ೨ ॥
ಪ್ರಭಾಸ ಇತಿ ನಾಮ್ನಾ ಹಿ ಶಿವಪೂಜಾರತೇನ ವೈ ।
ಸ ಪುತ್ರಕಾಮೋ ದೇವೇಶಿ ಪ್ರಭಾಸಕ್ಷೇತ್ರಮಾಗತಃ ॥ ೩ ॥
ಪ್ರತಿಷ್ಠಾಪ್ಯ ಮಹಾಲಿಂಗಂ ಚಚಾರ ವಿಪುಲಂ ತಪಃ ।
ಆಗ್ನೇಯಮಿತಿ ವಿಖ್ಯಾತಂ ದಿವ್ಯಾಬ್ದಾನಾಂ ಶತಂ ಪ್ರಿಯೇ ॥ ೪ ॥
ತತಸ್ತಸ್ಯ ಮಹಾದೇವಿ ಸಮ್ಯಕ್ಛ್ರದ್ಧಾನ್ವಿತಸ್ಯ ವೈ ।
ತುತೋಷ ಭಗವಾನ್ರುದ್ರೋ ದದೌ ಯನ್ಮನಸೀಪ್ಸಿತಂ ॥ ೫ ॥

ಕನ್ನಡದ ಅನುವಾದ

ಪ್ರಭಾಸೇಶ್ವರಮಾಹಾತ್ಮ್ಯವರ್ಣನ

೧-೪. ಈಶ್ವರನು ಹೇಳುತ್ತಾನೆ :—ಪ್ರಿಯಳೆ! ಬಳಿಕ ಗೌರೀತಪೋವನದ ಪಶ್ಚಿಮದಲ್ಲಿ ಏಳು ಬಿಲ್ಲಿನದೂರದಲ್ಲಿ ಶಿವಪೂಜಾನಿರತನಾದ ಪ್ರಭಾಸನೆಂಬ ಎಂಟನೆಯ ವಸುವು ಸ್ಥಾಪಿಸಿರುವ ಪ್ರಭಾಸೇಶ್ವರವೆಂಬ ಮಹಾಲಿಂಗವೆಡೆಗೆ ಹೋಗಬೇಕು. ಪುತ್ರಾರ್ಥಿಯಾದ ಆ ಪ್ರಭಾಸನು ಪ್ರಭಾಸಕ್ಷೇತ್ರಕ್ಕೆ ಬಂದು ದಿವ್ಯಶತವರ್ಷಗಳ ಕಾಲ ಆಗ್ನೇಯವೆಂಬ ಘೋರತಪಸ್ಸನ್ನಾಚರಿಸಿದನು.

೫. ಮಹಾದೇವಿ ! ತರುವಾಯ ಶ್ರದ್ಧೆಯುಳ್ಳ ಅವನ ವಿಷಯದಲ್ಲಿ ಸಂತುಷ್ಟನಾದ ಪೂಜ್ಯಮಹೇಶ್ವರನು ಅವನ ಮನೋರಥವನ್ನು ಪೂರ್ಣಮಾಡಿದನು.

ಬೃಹಸ್ಪತೇಸ್ತು ಭಗಿನೀ ಭುವನಾ ಬ್ರಹ್ಮವಾದಿನೀ ।
ಪ್ರಭಾಸಸ್ಯ ತು ಸಾ ಭಾರ್ಯಾ ವಸೂನಾಮಷ್ಟಮಸ್ಯ ಚ ॥ ೬ ॥
ವಿಶ್ವಕರ್ಮಾ ಸುತಸ್ತಸ್ಯಾಃ ಸೃಷ್ಟಿಕರ್ತಾ ಪ್ರಜಾಪತಿಃ ।
ದೇವಾನಾಂ ತಕ್ಷಕೋ ವಿದ್ವಾನ್ ಮನೋರ್ಮಾತಾಮಹಃ ಸ್ಮೃತಃ ॥ ೭ ॥
ತಕ್ಷಕಃ ಸೂರ್ಯಬಿಂಬಸ್ಯ ತೇಜಸಃ ಶಾತನೋ ಮಹಾನ್ ।
ಏವಂ ತಸ್ಯಾಽಭವತ್ಪುತ್ರೋ ವಸೂನಾಮಷ್ಟಮಸ್ಯ ವೈ ॥ ೮ ॥
ಪ್ರಭಾಸನಾಮ್ನೋ ದೇವೇಶಿ ತಲ್ಲಿಂಗಾರಾಧನೋದ್ಯತಃ ।
ಇತಿ ತೇ ಕಥಿತಂ ದೇವಿ ಪ್ರಭಾಸೇಶ್ವರಸೂಚಕಂ ॥ ೯ ॥
ಮಾಹಾತ್ಮ್ಯಂ ಸರ್ವಪಾಪಘ್ನಂ ಸರ್ವಕಾಮಪ್ರದಂ ಶುಭಂ ।
ಯಸ್ತಂ ಪೂಜಯತೇ ಭಕ್ತ್ಯಾ ಸಮ್ಯಕ್ಛ್ರದ್ಧಾಸಮನ್ವಿತಃ ॥ ೧೦ ॥
ಭೂಮಿಶಾಯೀ ನಿರಾಹಾರೋ ಜಪನ್ವೈ ಶತರುದ್ರಿಯಂ ।
ಮಾಘೇ ಮಾಸಿ ಚತುರ್ದಶ್ಯಾಂ ಸ್ನಾತ್ವಾ ಸಾಗರಸಂಗಮೇ ॥ ೧೧ ॥
ಪಂಚಾಮೃತೇನ ಸಂಸ್ನಾಪ್ಯ ಪೂಜಯಿತ್ವಾ ವಿಧಾನತಃ ॥ ೧೨ ॥

---

೬. ಆ ಎಂಟನೆಯ ವಸುವಾದ ಪ್ರಭಾಸನಿಗೆ ಬೃಹಸ್ಪತಿಯ ಸಹೋದರಿಯಾದ ಬ್ರಹ್ಮಜ್ಞಾನವುಳ್ಳ ಭುವನೆಯೆಂಬವಳು ಭಾರ್ಯೆಯಾಗಿದ್ದಳು.

೭–೧೩. ಆ ಭುವನೆಪ್ರಭಾಸರೀರ್ವರಿಂದ ಸೃಷ್ಟಿಕರ್ತನೂ, ದೇವತೆಗಳ ಬಡಗಿಯೂ, ವಿದ್ವಾಂಸನೂ, ಮನುವಿನ ಮಾತಾಮಹನೂ, ಸೂರ್ಯಬಿಂಬವನ್ನು ಕಡೆದು ತೇಜಸ್ಸನ್ನು ಕಡಮೆಮಾಡಿದವನೂ ಆದ ವಿಶ್ವಕರ್ಮನೆಂಬವನು ಜನಿಸಿದನು. ದೇವಿ ! ಹೀಗೆ ಸಕಲ ಪಾಪವನ್ನು ಪರಿಹರಿಸುವುದೂ, ಸಮಸ್ತೇಷ್ಟಾರ್ಥಗಳನ್ನೀಯುವುದೂ ಆದ ಆ ಪ್ರಭಾಸೇಶ್ವರನ ಮಾಹಾತ್ಮ್ಯೆಯನ್ನು ನಿನಗೆ ಹೇಳಿರುವೆನು. ಅವನನ್ನು ಮಾಘಮಾಸದ ಕೃಷ್ಣ ಚತುರ್ದಶಿಯದಿನ ಸಾಗರಮೇಳನದಲ್ಲಿಮಿಂದು ನೆಲದ ಮೇಲೆ ಮಲಗುತ್ತ ಆಹಾರವಿಲ್ಲದೆ ಶತರುದ್ರಿಯವನ್ನು ಜಪಿಸುತ್ತ ಪಂಚಾಮೃತಾಭಿಷೇಕಮಾಡಿ ಶ್ರದ್ಧಾಭಕ್ತಿಗಳೊಡನೆ ವಿಧಿಯಿಂದ ಪೂಜಿಸಿ ಯಾತ್ರಾಮಹೋತ್ಸವವನ್ನು ಮಾಡುವಮನುಷ್ಯನು ಸಕಲಪಾಪಗಳಿಂದಲೂ ಮುಕ್ತನಾಗಿ ಸಮಸ್ತೇಷ್ಟಾರ್ಥಸಮೃದ್ಧ

ಯಃ ಏವಂ ಕುರುತೇ ದೇವಿ ಸಮ್ಯಗ್ಯಾತ್ರಾಮಹೋತ್ಸವಂ ।
ಸ ಮುಕ್ತಃ ಪಾತಕೈಃ ಸರ್ವೈಃ ಸರ್ವಕಾಮ್ಯೈಃ ಸಮೃಧ್ಯತೇ ।
ವೃಷಸ್ತತ್ರೈವ ದಾತವ್ಯಃ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೧೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಭಾಸೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದಶೋತ್ತರಶತತಮೋಽಧ್ಯಾಯಃ ॥

ನಾಗುವನು. ಯಾತ್ರಾಫಲವನ್ನು ಬಯಸುವವನು ಅಲ್ಲಿ ಎತ್ತನ್ನು ದಾನ ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪ್ರಭಾಸೇಶ್ವರಮಾಹಾತ್ಮ್ಯವರ್ಣನವೆಂಬ
ನೂರಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಾದಶೋತ್ತರಶತತಮೋಽಧ್ಯಾಯಃ

ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪುಷ್ಕರಾರಣ್ಯಮುತ್ತಮಂ ।
ತಸ್ಮಾದೀಶಾನಕೋಣಸ್ಥಂ ಧನುಷಾಂ ಷಷ್ಟಿಭಿಃ ಸ್ಥಿತಂ ॥ ೧ ॥
ತತ್ರ ಕುಂಡಂ ಮಹಾದೇವಿ ಹ್ಯಷ್ಟಪುಷ್ಕರಸಂಜ್ಞಿತಂ ।
ಸರ್ವಪಾಪಹರಂ ದೇವಿ ದುಷ್ಪ್ರಾಪ್ಯಮಕೃತಾತ್ಮಭಿಃ ॥ ೨ ॥
ತತ್ರ ಕುಂಡಸಮೀಪೇ ತು ಪುರಾ ರಾಮೇಣ ಧೀಮತಾ ।
ಸ್ಥಾಪಿತಂ ತನ್ಮಹಾಲಿಂಗಂ ರಾಮೇಶ್ವರ ಇತಿ ಸ್ಮೃತಂ ॥ ೩ ॥
ತಸ್ಯ ಪೂಜನಮಾತ್ರೇಣ ಮುಚ್ಯತೇಬ್ರಹ್ಮಹತ್ಯಯಾ ॥ ೪ ॥

ಶ್ರೀ ದೇವ್ಯುವಾಚ :—

ಭಗವನ್ವಿಸ್ತರಾದ್ಬ್ರೂಹಿ ರಾಮೇಶ್ವರಸಮುದ್ಭವಂ ।
ಕಥಂ ತತ್ರಾಗಮದ್ರಾಮಃ ಸಸೀತಶ್ಚ ಸಲಕ್ಷ್ಮಣಃ ॥ ೫ ॥

ಕನ್ನಡದ ಅನುವಾದ

ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :— ಮಹಾದೇವಿ ! ಬಳಿಕ ಆ ಪ್ರಭಾಸೇಶ್ವರನ ಈಶಾನ್ಯ ಮೂಲೆಯಲ್ಲಿ ಅರವತ್ತು ಬಿಲ್ಲಿನ ದೂರದಲ್ಲಿರುವ ಉತ್ತಮವಾದ ಪುಷ್ಕರಾರಣ್ಯಕ್ಕೆ ಹೋಗಬೇಕು.

೨. ದೇವಿ! ಅಲ್ಲಿ ಸಕಲ ಪಾಪಗಳನ್ನೂ ಪರಿಹರಿಸುವುದೂ ಪಾಪಿಗಳಿಗೆ ಹೊಂದಲ ಶಕ್ಯವಾದುದೂ ಆದ ಅಷ್ಟಪುಷ್ಕರವೆಂಬ ಕುಂಡವಿರುವುದು.

೩. ಆ ಕುಂಡದ ಹತ್ತಿರ ಹಿಂದೆ ರಾಮನು ಪ್ರತಿಷ್ಠೆಮಾಡಿದ ರಾಮೇಶ್ವರವೆಂಬ ಮಹಾಲಿಂಗವಿರುವುದು.

೪. ಅದನ್ನು ಪೂಜಿಸುವುದರಿಂದಲೆ ಮಾನವನು ಬ್ರಹ್ಮಹತ್ಯೆಯಿಂದ ಮುಕ್ತನಾಗುವನು.

೫–೬. ದೇವಿಯು ಹೇಳುತ್ತಾಳೆ:—ಪೂಜ್ಯನೆ ! ರಾಮೇಶ್ವರನು ಉತ್ಪತ್ತಿಯಾದ ಬಗೆಯನ್ನು ವಿಸ್ತಾರವಾಗಿ ಹೇಳು. ರಾಮನು ಸೀತಾಲಕ್ಷ್ಮಣರೊಡನೆ ಅಲ್ಲಿಗೆ ಹೇಗೆ

ಕಥಂ ಪ್ರತಿಷ್ಠಿತಂ ಲಿಂಗಂ ಪುಷ್ಕರೇ ಪಾಪತಸ್ಕರೇ ।
ಏತದ್ವಿಸ್ತರತೋ ಬ್ರೂಹಿ ಫಲಂ ಮಾಹಾತ್ಮ್ಯಸಂಯುತಂ ॥ ೬ ॥

ಈಶ್ವರ ಉವಾಚ :—

ಚತುರ್ವಿಂಶಯುಗೇ ರಾಮೋ ವಸಿಷ್ಠೇನ ಪುರೋಧಸಾ ।
ಪುರಾ ರಾವಣನಾಶಾರ್ಥಂ ಜಜ್ಞೇ ದಶರಥಾತ್ಮಜಃ ॥ ೭ ॥
ತತಃ ಕಾಲಾಂತರೇ ದೇವಿ ಋಷಿಶಾಪಾನ್ಮಹಾತಪಾಃ ।
ಯಯೌ ದಾಶರಥೀ ರಾಮಃ ಸಸೀತಃ ಸಲಕ್ಷ್ಮಣಃ ॥ ೮ ॥
ವನವಾಸಾಯ ನಿಷ್ಕ್ರಾಂತೋ ದಿವ್ಯೈರ್ಬ್ರಹ್ಮರ್ಷಿಭಿರ್ವೃತಃ ।
ತತೋ ಯಾತ್ರಾಪ್ರಸಂಗೇನ ಪ್ರಭಾಸಂ ಕ್ಷೇತ್ರಮಾಗತಃ ॥ ೯ ॥
ತಂ ದೇಶಂ ತು ಸಮಾಸಾದ್ಯ ಸುಶ್ರಾಂತೋ ನಿಷಸಾದ ಹ ।
ಅಸ್ತಂಗತೇ ತತಃ ಸೂರ್ಯೇ ಪರ್ಣಾನ್ಯಾಸ್ತೀರ್ಯ ಭೂತಲೇ ॥ ೧೦ ॥
ಸುಷ್ವಾಪಾಥ ನಿಶಾಶೇಷೇ ದದೃಶೇ ಪಿತರಂ ಸ್ವಕಂ ।
ಸ್ವಪ್ನೇ ದಶರಥಂ ದೇವಿ ಸೌಮ್ಯರೂಪಂ ಮಹಾಪ್ರಭಂ ॥ ೧೧ ॥
ಪ್ರಾತರುತ್ಥಾಯ ತತ್ಸರ್ವಂ ಬ್ರಾಹ್ಮಣೇಭ್ಯೋ ನ್ಯವೇದಯುತ್ ।
ಯಥಾ ದಶರಥಃ ಸ್ವಪ್ನೇ ದೃಷ್ಟಸ್ತೇನ ಮಹಾತ್ಮನಾ ॥ ೧೨ ॥

ಬಂದನು? ಅವನು ಪಾಪವನ್ನು ನೀಗಿಸುವ ಪುಷ್ಕರ ಕ್ಷೇತ್ರದಲ್ಲಿ ಹೇಗೆ ಆ ಲಿಂಗವನ್ನು ಪ್ರತಿಷ್ಠೆಮಾಡಿದನು? ಇದನ್ನೂ ಮಾಹಾತ್ಮ್ಯೆಯಿಂದ ಸಹಿತನಾದ ಫಲವನ್ನೂ ವಿಸ್ತಾರವಾಗಿ ಹೇಳು.

೭. ಈಶ್ವರನು ಹೇಳುತ್ತಾನೆ:—ಹಿಂದೆ ರಾವಣನ ನಾಶಕ್ಕೋಸ್ಕರ ದಶರಥನ ಮಗನಾದ ರಾಮನು ಭೂಲೋಕದಲ್ಲಿ ಜನಿಸಿದನು. ಅವನಿಗೆ ವಸಿಷ್ಠಮುನಿಯು ಪುರೋಹಿತನಾದನು.

೮–೯. ದೇವಿ ! ಅತಿ ತಪಸ್ವಿಯಾದ ಅವನು ಅನೇಕ ವರ್ಷಗಳ ತರುವಾಯ ಋಷಿಶಾಪದಿಂದ ಸೀತಾಲಕ್ಷ್ಮಣರಿಂದಲೂ, ದೇವರ್ಷಿಗಳಿಂದಲೂ, ಬ್ರಹ್ಮರ್ಷಿಗಳಿಂದಲೂ ಸಹಿತನಾಗಿ ತೀರ್ಥಯಾತ್ರೆಗಾಗಿ ಪ್ರಭಾಸಕ್ಷೇತ್ರಕ್ಕೆ ಬಂದನು.

೧೦. ಅವನು ಆ ಕ್ಷೇತ್ರಕ್ಕೆ ಬರಲು ಸೂರ್ಯನು ಮುಳುಗಿದನು. ಆಗ ಬಳಲಿದ ಅವನು ನೆಲದ ಮೇಲೆ ಎಲೆಗಳನ್ನು ಹಾಸಿ ಕುಳಿತುಕೊಂಡನು.

೧೧. ಬಳಿಕ ನಿದ್ರಿಸಿದ ರಾಮನು ಬೆಳಗಿನ ಜಾಮದಲ್ಲಿ ಸ್ವಪ್ನದಲ್ಲಿ ಸೌಮ್ಯರೂಪನೂ, ಅತಿಶಯ ಕಾಂತಿಯುಳ್ಳವನೂ ಆದ ತನ್ನ ತಂದೆಯನ್ನು ಕಂಡನು.

೧೨. ಅವನು ಬೆಳಗ್ಗೆದ್ದು ತಾನು ಸ್ವಪ್ನದಲ್ಲಿ ದಶರಥನನ್ನು ನೋಡಿರುವುದನ್ನು ಬ್ರಾಹ್ಮಣರಿಗೆ ತಿಳಿಸಿದನು.

ಬ್ರಾಹ್ಮಣಾ ಊಚುಃ :—

ವೃದ್ಧಿಕಾಮಾಶ್ಚ ಪಿತರೋ ವರದಾಸ್ತವ ರಾಘವ ।
ದರ್ಶನಂ ಹಿ ಪ್ರಯಚ್ಛಂತಿ ಸ್ವಪ್ನಾಂತೇ ಹಿ ಸ್ವವಂಶಜೇ ॥ ೧೩ ॥

ಏತತ್ತೀರ್ಥಂ ಮಹಾಪುಣ್ಯಂ ಸುಗುಪ್ತಂ ಶಾರ್ಙ್ಗಧನ್ವನಃ ।
ಪುಷ್ಕರೇತಿ ಸಮಾಖ್ಯಾತಂ ಶ್ರಾದ್ಧಮತ್ರ ಪ್ರದೀಯತಾಂ ॥ ೧೪ ॥

ನೂನಂ ದಶರಥೋ ರಾಜಾ ತೀರ್ಥೇ ಚಾಸ್ಮಿನ್ಸಮೀಹತೇ ।
ತ್ವಯಾ ದತ್ತಂ ಶುಭಂ ಪಿಂಡಂ ತತಃ ಸ ದರ್ಶನಂ ಗತಃ ॥ ೧೫ ॥

ಈಶ್ವರ ಉವಾಚ :—

ತೇಷಾಂ ತದ್ವಚನಂ ಶ್ರುತ್ವಾ ರಾಮೋ ರಾಜೀವಲೋಚನಃ ।
ನಿಮಂತ್ರಯಾಮಾಸ ತದಾ ಶ್ರಾದ್ಧಾರ್ಹಾನ್ಬ್ರಾಹ್ಮಣಾನ್ ಶುಭಾನ್ ॥ ೧೬ ॥

ಅಬ್ರವೀಲ್ಲಕ್ಷ್ಮಣಂ ಪಾರ್ಶ್ವೇ ಸ್ಥಿತಂ ವಿನತಕಂಧರಂ ।
ಫಲಾರ್ಥಂ ವ್ರಜ ಸೌಮಿತ್ರೇ ಶ್ರಾದ್ಧಾರ್ಥಂ ತ್ವರಯಾಽನ್ವಿತಃ ॥ ೧೭ ॥

---

೧೩. ಬ್ರಾಹ್ಮಣರು ಹೇಳುತ್ತಾರೆ:—ರಾಮ ! ವೃದ್ಧಿಯನ್ನು ಬಯಸುವ ಪಿತೃಗಳು ವರವನ್ನು ಕೊಡಲೋಸುಗ ಸ್ವಪ್ನದ ಕೊನೆಯಲ್ಲಿ ತನ್ನ ವಂಶದವರಿಗೆ ದರ್ಶನವನ್ನೀಯುವರು.

೧೪. ಇದು ವಿಷ್ಣುವಿನ ಅತಿ ಪವಿತ್ರವಾದ ಪುಷ್ಕರವೆಂಬ ತೀರ್ಥವು. ಇಲ್ಲಿ ಪಿತೃಗಳಿಗೆ ಶ್ರಾದ್ಧವನ್ನು ಮಾಡು.

೧೫. ನಿಶ್ಚಯವಾಗಿಯೂ ದಶರಥರಾಜನು ಈ ತೀರ್ಥದಲ್ಲಿ ನೀನು ಕೊಡುವ ಪಿಂಡವನ್ನು ಅಪೇಕ್ಷಿಸುತ್ತಾನೆ. ಆದ್ದರಿಂದಲೇ ಅವನು ನಿನಗೆ ದರ್ಶನವನ್ನಿತ್ತಿರುವನು.

೧೬. ಈಶ್ವರನು ಹೇಳುತ್ತಾನೆ :—ರಾಮನು ಬ್ರಾಹ್ಮಣರ ಆ ಮಾತನ್ನು ಕೇಳಿ ಶ್ರಾದ್ಧಕ್ಕೆ ತಕ್ಕವರಾದ ಉತ್ತಮ ಬ್ರಾಹ್ಮಣರನ್ನು ನಿಮಂತ್ರಣಮಾಡಿದನು.

೧೭. ಪಾರ್ಶ್ವದಲ್ಲಿ ತಲೆತಗ್ಗಿಸಿ ನಿಂತಿರುವ ಲಕ್ಷ್ಮಣನನ್ನು ಕುರಿತು "ಲಕ್ಷ್ಮಣ ! ಶ್ರಾದ್ಧಕ್ಕೆ ಅವಶ್ಯಕವಾದ ಫಲವನ್ನು ತರುವುದಕ್ಕೋಸ್ಕರ ತ್ವರೆಯಿಂದಹೋಗು." ಎಂದನು.

ಸ ತಥೇತಿ ಪ್ರತಿಜ್ಞಾಯ ಜಗಾಮ ರಘುನಂದನಃ ।
ಆನಯಾಮಾಸ ಶೀಘ್ರಂ ಸ ಫಲಾನಿ ವಿವಿಧಾನಿ ಚ ॥ ೧೮ ॥
ಬಿಲ್ವಾನಿ ಚ ಕಪಿತ್ಥಾನಿ ತಿಂದುಕಾನಿ ಚ ಭೂರಿಶಃ ।
ಬದರಾಣಿ ಕರೀರಾಣಿ ಕರಮರ್ದಾನಿ ಚ ಪ್ರಿಯೇ ॥ ೧೯ ॥
ಚಿರ್ಭಟಾನಿ ಪರೂಷಾಣಿ ಮಾತುಲಿಂಗಾನಿ ವೈ ತಥಾ ।
ನಾಲಿಕೇರಾಣಿ ಶುಭ್ರಾಣಿ ಇಂಗುದೀಸಂಭವಾನಿ ಚ ॥ ೨೦ ॥
ಅಥೈತಾನಿ ಪಪಾಚಾಶು ಸೀತಾ ಜನಕನಂದಿನೀ ।
ತತಸ್ತು ಕುತಪೇ ಕಾಲೇ ಸ್ನಾತ್ವಾ ವಲ್ಕಲಭೃತ್ ಶುಚಿಃ ॥ ೨೧ ॥
ಬ್ರಾಹ್ಮಣಾನಾನಯಾಮಾಸ ಶ್ರಾದ್ಧಾರ್ಹಾನ್ದ್ವಿಜಸತ್ತಮಾನ್ ।
ಗಾಲವೋ ದೇವಲೋ ರೈಭ್ಯೋ ಯವಕ್ರೀತೋಽಥ ಪರ್ವತಃ ॥ ೨೨ ॥
ಭರದ್ವಾಜೋ ವಸಿಷ್ಠಶ್ಚ ಜಾಬಾಲಿರ್ಗೌತಮೋ ಭೃಗುಃ ।
ಏತೇ ಚಾನ್ಯೇ ಚ ಬಹವೋ ಬ್ರಾಹ್ಮಣಾ ವೇದಪಾರಗಾಃ ॥ ೨೩ ॥
ಶ್ರಾದ್ಧಾರ್ಥಂ ತಸ್ಯ ಸಂಪ್ರಾಪ್ತಾ ರಾಮಸ್ಯಾಕ್ಲಿಷ್ಟಕರ್ಮಣಃ ।
ಏತಸ್ಮಿನ್ನೇವ ಕಾಲೇ ತು ರಾಮಃ ಸೀತಾಮಭಾಷತ ॥ ೨೪ ॥
ಏಹಿ ವೈದೇಹಿ ವಿಪ್ರಾಣಾಂ ದೇಹಿ ಪಾದಾವನೇಜನಂ ।
ಏತತ್ ಶ್ರುತ್ವಾಽಥ ಸಾ ಸೀತಾ ಪ್ರವಿಷ್ಟಾ ವೃಕ್ಷಮಧ್ಯತಃ ॥ ೨೫ ॥

೧೮–೨೦. ಆ ಲಕ್ಷ್ಮಣನು ಹಾಗೆಯೇ ಆಗಲೆಂದು ಒಪ್ಪಿ ಹೊರಟು ಬಿಲ್ವ, ಬೇಲ, ತಿಂದುಕ, ಬದರ, ಕರೀರ, ಕರಮರ್ದ, ಚಿರ್ಭಟ, ಪರೂಷ, ಮಾದಲ, ತೆಂಗು, ಇಂಗುದೀ ಮೊದಲಾದ ಹಲ ಬಗೆಯ ಹಣ್ಣುಗಳನ್ನು ತಂದನು.

೨೧–೨೩. ಅನಂತರ ಜಾನಕಿಯು ಅವುಗಳನ್ನು ಬೇಯಿಸಿ ಅಡುಗೆ ಮಾಡಿದಳು. ರಾಮನು ಕುತಪಕಾಲದಲ್ಲಿ ಮಿಂದು ನಾರು ಬಟ್ಟೆಯನ್ನುಟ್ಟು ಶುದ್ಧನಾಗಿ ಗಾಲವ, ದೇವಲ, ರೈಭ್ಯ, ಯವಕ್ರೀತ, ಪರ್ವತ, ಭರದ್ವಾಜ, ವಸಿಷ್ಠ, ಜಾಬಾಲಿ, ಗೌತಮ, ಭೃಗು ಇವರೇ ಮೊದಲಾದ ವೇದಾಧ್ಯಯನಸಂಪನ್ನರೂ, ಶ್ರಾದ್ಧಕ್ಕೆ ಯೋಗ್ಯರೂ ಆದ ಬ್ರಾಹ್ಮಣರನ್ನು ಕರೆಯಿಸಿದನು.

೨೪. ಹೀಗೆ ಬ್ರಾಹ್ಮಣರೆಲ್ಲರೂ ಬರಲು ರಾಮನು ಸೀತೆಯನ್ನು ಕುರಿತು ಇಂತೆಂದನು.

೨೫–೨೬. "ಜಾನಕಿ! ಇಲ್ಲಿ ಬಾ. ಬ್ರಾಹ್ಮಣರಿಗೆ ಕಾಲನ್ನು ತೊಳೆಯುವುದಕ್ಕೆ ನೀರನ್ನು ಕೊಡು." ಇದನ್ನು ಕೇಳಿ ಸೀತೆಯು ವೃಕ್ಷಮಧ್ಯವನ್ನು ಪ್ರವೇಶಿಸಿ ಪೊದೆ

ಗುಲ್ಮೈರಾಚ್ಛಾದ್ಯ ಚಾತ್ಮಾನಂ ರಾಮಸ್ಯಾದರ್ಶನೇ ಸ್ಥಿತಾ ।
ಮುಹುರ್ಮುಹುರ್ಯದಾ ರಾಮಃ ಸೀತಾಸೀತೇತ್ಯಭಾಷತ ॥ ೨೬ ॥
ಜ್ಞಾತ್ವಾ ತಾಂ ಲಕ್ಷ್ಮಣೋ ನಷ್ಟಾಂ ಕೋಪಾವಿಷ್ಟಂ ಚ ರಾಘವಂ ।
ಸ್ವಯಮೇವ ತದಾ ಚಕ್ರೇ ಬ್ರಾಹ್ಮಣಾರ್ಹಪ್ರತಿಕ್ರಿಯಾಂ ॥ ೨೭ ॥
ಅಥ ಭುಕ್ತೇಷು ವಿಪ್ರೇಷು ಕೃತಪಿಂಡಪ್ರದಾನಕೇ ।
ಆಗತಾ ಜಾನಕೀ ಸೀತಾ ಯತ್ರ ರಾಮೋ ವ್ಯವಸ್ಥಿತಃ ॥ ೨೮ ॥
ತಾಂ ದೃಷ್ಟ್ವಾ ಪರುಷೈರ್ವಾಕ್ಯೈರ್ಭರ್ತ್ಸಯಾಮಾಸ ರಾಘವಃ ।
ಧಿಗ್ಧಿಕ್ಪಾಪೇ ದ್ವಿಜಾಂಸ್ತ್ಯಕ್ತ್ವಾ ಪಿತೃಕೃತ್ಯಮಹೋದಯಂ ।
ಕ್ವ ಗತಾಽಸಿ ಚ ಮಾಂ ಹಿತ್ವಾ ಶ್ರಾದ್ಧಕಾಲೇ ಹ್ಯುಪಸ್ಥಿತೇ ॥ ೨೯ ॥

ಈಶ್ವರ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ಭಯಭೀತಾ ಚ ಜಾನಕೀ ॥ ೩೦ ॥
ಕೃತಾಂಜಲಿಪುಟಾ ಭೂತ್ವಾ ವೇಪಮಾನಾ ಹ್ಯಭಾಷತ ।
ಮಾ ಕೋಪಂ ಕುರು ಕಲ್ಯಾಣ ಮಾ ಮಾಂ ನಿರ್ಭರ್ತ್ಸಯ ಪ್ರಭೋ ॥
ಶೃಣು ಯಸ್ಮಾದ್ವಿಭೋಽನ್ಯತ್ರ ಗತಾ ತ್ಯಕ್ತ್ವಾ ತವಾಂತಿಕಂ ।
ದೃಷ್ಟಸ್ತ್ವವ ಪಿತಾ ಮೇಽದ್ಯ ತಥಾ ಚೈವ ಪಿತಾಮಹಃ ॥ ೩೧ ॥

ಯಲ್ಲವಿತುಕೊಂಡು ರಾಮನು ನೋಡದಿರುವಂತೆ ಇದ್ದಳು. ರಾಮನು ಅನೇಕ ಬಾರಿ ಸೀತೆಯನ್ನು ಕರೆದನು.

೨೭. ಆಗ ಲಕ್ಷ್ಮಣನು ಆ ಸೀತೆಯು ಅದೃಶ್ಯಳಾಗಿರುವುದನ್ನೂ ರಾಮನು ಕೋಪಗೊಂಡಿರುವುದನ್ನೂ ನೋಡಿ ತಾನೇ ಬ್ರಾಹ್ಮಣರನ್ನು ಪಾದ್ಯಾದಿಗಳಿಂದ ಉಪಚರಿಸಿದನು.

೨೮. ಬ್ರಾಹ್ಮಣರ ಊಟವಾದಮೇಲೆ ಪಿಂಡಪ್ರದಾನವಾಗಲು ರಾಮನೆಡೆಗೆ ಸೀತೆಯು ಬಂದಳು.

೨೯. ರಾಮನು ಅವಳನ್ನು ನೋಡಿ " ಎಲಾ ಪಾಪಿಷ್ಠಳೆ! ಶ್ರಾದ್ಧಕಾಲದಲ್ಲಿ ಬ್ರಾಹ್ಮಣರನ್ನೂ, ಪಿತೃಕ್ರಿಯೆಯನ್ನೂ, ನನ್ನನ್ನೂ ಬಿಟ್ಟು ಎಲ್ಲಿಗೆ ಹೋದೆ ? ಎಂದು ಕಠಿನವಾದ ಮಾತುಗಳಿಂದ ಗದರಿದನು.

೩೦–೩೧. ಈಶ್ವರನು ಹೇಳುತ್ತಾನೆ:—ಅವನ ಆ ಮಾತುಗಳನ್ನು ಕೇಳಿ ಭಯಗೊಂಡ ಜಾನಕಿಯು ನಡುಗುತ್ತ ಕೈಮುಗಿದುಕೊಂಡು ಇಂತೆಂದಳು. " ಮಂಗಳಕರನೆ! ಸಿಟ್ಟಾಗಬೇಡ. ನನ್ನನ್ನು ಹೆದರಿಸಬೇಡ.

೩೧–೩೩. ನಾಥ! ನಿನ್ನ ಸಮೀಪದಿಂದ ನಾನು ದೂರ ಹೋಗಲು ಕಾರಣವನ್ನು ಕೇಳು ಈಗ ಬ್ರಾಹ್ಮಣೋತ್ತಮರ ಅಂಗಗಳಲ್ಲಿ ನಿನ್ನ ತಂದೆ, ಅಜ್ಜ,

ತಸ್ಯ ಪೂರ್ವತರಶ್ಚಾಪಿ ತಥಾ ಮಾತಾಮಹಾದಯಃ ।
ಅಂಗೇಷು ಬ್ರಾಹ್ಮಣೇಂದ್ರಾಣಾಮಾಕ್ರಾಂತಾಸ್ತೇ ಪೃಥಕ್ ಪೃಥಕ್ ॥
ತತೋ ಲಜ್ಜಾ ಸಮುಭವತ್ತತ್ರ ಮೇ ರಘುನಂದನ ।
ಪಿತ್ರಾ ತವ ಮಹಾಬಾಹೋ ಮನೋಜ್ಞಾನಿ ಶುಭಾನಿ ಚ ॥ ೩೪ ॥
ಭಕ್ಷ್ಯಾಣಿ ಭಕ್ಷಿತಾನ್ಯೇವ ಯಾನಿ ವೈ ಗುಣವಂತಿ ಚ ।
ಸ ಕಥಂ ಸುಕಷಾಯಾಣಿ ಕ್ಷಾರಾಣಿ ಕಟುಕಾನಿ ಚ ।
ಭಕ್ಷಯಿಷ್ಯತಿ ರಾಜೇಂದ್ರ ತತೋ ಮೇ ದುಃಖಮಾವಿಶತ್ ॥ ೩೫ ॥
ಏತಸ್ಮಾತ್ಕಾರಣಾನ್ನಷ್ಟಾ ಲಜ್ಜಯಾಽಹಂ ರಘೂದ್ವಹ ।
ದೃಷ್ಟ್ವಾ ಶ್ವಶುರವರ್ಗಂ ಸ್ವಂ ತಸ್ಮಾತ್ಕೋಪಂ ಪರಿತ್ಯಜ ॥ ೩೬ ॥
ತಸ್ಯಾಸ್ತದ್ವಚನಂ ಶ್ರುತ್ವಾ ವಿಸ್ಮಿತೋ ರಾಘವೋಽಭವತ್ ।
ವಿಶೇಷೇಣ ದದೌ ತಸ್ಮಿನ್ ಶ್ರಾದ್ಧಂ ತೀರ್ಥೇ ತು ಪುಷ್ಕರೇ ॥ ೩೭ ॥
ತತ್ರ ಪುಷ್ಕರಸಾನ್ನಿಧ್ಯೇ ದಕ್ಷಿಣೇ ಧನುಷಾಂ ತ್ರಯೇ ।
ಲಿಂಗಂ ಪ್ರತಿಷ್ಠಯಾಮಾಸ ರಾಮೇಶ್ವರಮಿತಿ ಶ್ರುತಂ ॥ ೩೮ ॥
ಯಸ್ತಂ ಪೂಜಯತೇ ಭಕ್ತ್ಯಾ ಗಂಧಪುಷ್ಪಾದಿಭಿಃ ಕ್ರಮಾತ್ ।
ಸ ಪ್ರಾಪ್ನೋತಿ ಪರಂ ಸ್ಥಾನಂ ಯತ್ರ ದೇವೋ ಜನಾರ್ದನಃ ॥ ೩೯ ॥

ಮುತ್ತಜ್ಜ ಇವರೂ ಮಾತಾಮಹ ಮೊದಲಾದ ಮಾತೃವರ್ಗದ ಕಡೆಯ ಪಿತೃಗಳೂ ಪ್ರತ್ಯೇಕವಾಗಿ ಸನ್ನಿಹಿತರಾಗಿರುವುದನ್ನು ನಾನು ಕಂಡು ಲಜ್ಜಿತಳಾದೆನು. ಮನೋಹರವೂ, ಮಂಗಳಕರವೂ, ಗುಣವುಳ್ಳವೂ ಆದ ಭಕ್ಷ್ಯಗಳನ್ನು ಭಕ್ಷಿಸುತ್ತಿದ್ದ ನಿನ್ನ ತಂದೆಯು ಒಗರೂ, ಕಹಿಯೂ, ಆದ ಭಕ್ಷ್ಯಗಳನ್ನು ಹೇಗೆ ತಿನ್ನುವನೆಂದು ನನಗೆ ದುಃಖವುಂಟಾಯಿತು.

೩೬. ಇದರಿಂದ ನಾನು ಮಾವನ ಕಡೆಯವರನ್ನು ಕಂಡು ನಾಚಿಕೆಗೊಂಡು ಅಡಗಿಕೊಂಡೆನು. ಆದ್ದರಿಂದ ನೀನು ಕೋಪವನ್ನು ಬಿಡು."

೩೭. ಸೀತೆಯ ಮಾತನ್ನು ಕೇಳಿ ಆಶ್ಚರ್ಯಗೊಂಡ ರಾಘವನು ಆ ಪುಷ್ಕರ ತೀರ್ಥದಲ್ಲಿ ವಿಶೇಷವಾಗಿ ಶ್ರಾದ್ಧವನ್ನು ಮಾಡಿದನು.

೩೮. ಅಲ್ಲದೆ ಆ ಪುಷ್ಕರ ತೀರ್ಥದ ದಕ್ಷಿಣದಲ್ಲಿ ಮೂರು ಬಿಲ್ಲುಗಳ ದೂರದಲ್ಲಿಯೇ ರಾಮೇಶ್ವರವೆಂಬ ಲಿಂಗವನ್ನು ಪ್ರತಿಷ್ಠೆ ಮಾಡಿದನು.

೩೯. ಆ ರಾಮೇಶ್ವರಲಿಂಗವನ್ನು ಗಂಧಪುಷ್ಪಾದಿಗಳಿಂದ ಭಕ್ತಿಪೂರ್ವಕ ಕ್ರಮವಾಗಿ ಪೂಜಿಸಿದವನು ಶ್ರೀ ಜನಾರ್ಧನನ ವೈಕುಂಠಲೋಕವನ್ನು ಸೇರುವನು.

ಕಿಮತ್ರ ಬಹುನೋಕ್ತೇನ ದ್ವಾದಶ್ಯಾಂ ಯತ್ಪ್ರದಾಪಯೇತ್ ।
ನ ತತ್ರ ಪರಿಸಂಖ್ಯಾನಂ ತ್ರಿಷು ಲೋಕೇಷು ವಿದ್ಯತೇ ॥ ೪೦ ॥
ಶುಕ್ರಾಂಗಾರಕಸಂಯುಕ್ತಾ ಚತುರ್ಥೀ ಯಾ ಭವೇತ್ಕ್ವಚಿತ್ ।
ಷಷ್ಠೀ ವಾಽತ್ರ ವರಾರೋಹೇ ತತ್ರ ಶ್ರಾದ್ಧೇ ಮಹತ್ಫಲಂ ॥ ೪೧ ॥
ಯಾವದ್ದ್ವಾದಶವರ್ಷಾಣಿ ಪಿತರಶ್ಚ ಪಿತಾಮಹಾಃ ।
ತರ್ಪಿತಾ ನಾನ್ಯಮಿಚ್ಛಂತಿ ಪುಷ್ಕರೇ ಸ್ವಕುಲೋದ್ಭವೇ ॥ ೪೨ ॥
ತತ್ರ ಯೋ ವಾಜಿನಂ ದದ್ಯಾತ್ಸಮ್ಯಗ್ಭಕ್ತಿಸಮನ್ವಿತಃ ।
ಅಶ್ವಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೪೩ ॥
ಇತಿ ತೇ ಕಥಿತಂ ಸಮ್ಯಕ್ ಮಾಹಾತ್ಮ್ಯಂ ಪಾಪನಾಶನಂ ।
ರಾಮೇಶ್ವರಸ್ಯ ದೇವಸ್ಯ ಪುಷ್ಕರಸ್ಯ ಚ ಭಾಮಿನಿ ॥ ೪೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನಂನಾಮ
॥ ಏಕಾದಶೋತ್ತರಶತತಮೋಽಧ್ಯಾಯಃ ॥

---

೪೦. ಬಹುವಾಗಿ ಹೇಳಿ ಪ್ರಯೋಜನವೇನು? ದ್ವಾದಶೀ ದಿನ ಅಲ್ಲಿ ದಾನಮಾಡಿದುದರ ಫಲದ ಸಂಖ್ಯೆಯು ಮೂರು ಲೋಕದಲ್ಲಿಯೂ ಇರುವುದಿಲ್ಲ.

೪೧. ಪ್ರಿಯಳೆ! ಶುಕ್ರವಾರ ಅಥವಾ ಮಂಗಳವಾರ ಚತುರ್ಥಿಯಾಗಲಿ ಷಷ್ಠಿಯಾಗಲಿ ಬಂದಲ್ಲಿ ಆ ದಿನ ಅಲ್ಲಿ ಮಾಡಿದ ಶ್ರಾದ್ಧವು ಮಹಾಫಲವುಳ್ಳದಾಗುವುದು.

೪೨. ಈ ಪುಷ್ಕರ ಕ್ಷೇತ್ರದಲ್ಲಿ ಹನ್ನೆರಡು ವರ್ಷಕಾಲ ತರ್ಪಣ ಮಾಡುವುದರಿಂದ ತೃಪ್ತಿಗೊಂಡ ಪಿತೃಗಳು ತಮ್ಮ ವಂಶದ ಬೇರೆಯವನು ಶ್ರಾದ್ಧ ಮಾಡುವುದನ್ನು ನಿರೀಕ್ಷಿಸುವುದಿಲ್ಲ.

೪೩. ಅಲ್ಲಿ ಭಕ್ತಿಯಿಂದ ಅಶ್ವದಾನ ಮಾಡಿದ ಮಾನವನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

೪೪. ಪ್ರಿಯಳೆ! ಹೀಗೆ ನಿನಗೆ ಪಾಪವನ್ನು ಪರಿಹರಿಸುವ ರಾಮೇಶ್ವರನ ಹಾಗೂ ಪುಷ್ಕರ ಕ್ಷೇತ್ರದ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನವೆಂಬ
ನೂರಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾದಶೋತ್ತರಶತತಮೋಽಧ್ಯಾಯಃ

ಲಕ್ಷ್ಮಣೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಕ್ಷ್ಮಣೇಶ್ವರಮುತ್ತಮಂ ।
ರಾಮೇಶಾತ್ಪೂರ್ವದಿಗ್ಭಾಗೇ ಧನುಸ್ತ್ರಿಂಶಸಂಸ್ಥಿತಂ ॥ ೧ ॥
ಸ್ಥಾಪಿತಂ ಲಕ್ಷ್ಮಣೇನೈವ ತತ್ರ ಯಾತ್ರಾಗತೇನ ವೈ ।
ಮಹಾಪಾಪಹರಂ ದೇವಿ ತಲ್ಲಿಂಗಂ ಸುರಪೂಜಿತಂ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ನೃತ್ಯಗೀತಾದಿವಾದನೈಃ ।
ಹೋಮಜಾಪ್ಯೈಃ ಸಮಾದಿಸ್ಥಃ ಸ ಯಾತಿ ಪರಮಾಂ ಗತಿಂ ॥ ೩ ॥
ಅನ್ನೋದಕಂ ಹಿರಣ್ಯಂ ಚ ತತ್ರ ದೇಯಂ ದ್ವಿಜಾತಯೇ ।
ಸಂಪೂಜ್ಯ ದೇವದೇವೇಶಂ ಗಂಧಪುಷ್ಪಾದಿಭಿಃ ಕ್ರಮಾತ್ ॥ ೪ ॥

ಕನ್ನಡದ ಅನುವಾದ

ಲಕ್ಷ್ಮಣೇಶ್ವರಮಾಹಾತ್ಮ್ಯವರ್ಣನ

೧—೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ರಾಮೇಶ್ವರನಿಗೆ ಪೂರ್ವ ದಿಕ್ಕಿನಲ್ಲಿ ಮೂವತ್ತು ಬಿಲ್ಲಿನ ದೂರದಲ್ಲಿ ಯಾತ್ರೆಗಾಗಿ ಬಂದ ಲಕ್ಷ್ಮಣನು ಸ್ಥಾಪಿಸಿರುವುದೂ, ಅತಿಶಯ ಪಾಪವನ್ನು ಪರಿಹರಿಸುವುದೂ. ದೇವತೆಗಳಿಂದ ಪೂಜಿಸಲ್ಪಟ್ಟಿದ್ದೂ, ಆದ ಲಕ್ಷ್ಮಣೇಶ್ವರನೆಡೆಗೆ ಹೋಗಬೇಕು.

೩. ಅವನನ್ನು ನೃತ್ಯ, ಗೀತವೇ ಮೊದಲಾದ ಉಪಚಾರಗಳಿಂದಲೂ, ಹೋಮ ಜಪಗಳಿಂದಲೂ, ಭಕ್ತಿಯಿಂದ ಪೂಜಿಸಿ ಧ್ಯಾನಿಸುವವನು ಉತ್ತಮ ಗತಿಯನ್ನು ಪಡೆಯುವನು.

೪. ಅಲ್ಲಿ ಲಕ್ಷ್ಮಣೇಶ್ವರನನ್ನು ಗಂಧ, ಪುಷ್ಪವೇ ಮೊದಲಾದುವುಗಳಿಂದ ಕ್ರಮವಾಗಿ ಪೂಜಿಸಿ ಬ್ರಾಹ್ಮಣರಿಗೆ ಅನ್ನ, ನೀರು, ಸುವರ್ಣಗಳನ್ನು ದಾನಮಾಡಬೇಕು.

ಮಾಘೇ ಕೃಷ್ಣಚತುರ್ದಶ್ಯಾಂ ವಿಶೇಷಸ್ತತ್ರ ಪೂಜನೇ ।
ಸ್ನಾನಂ ದಾನಂ ಜಪಸ್ತತ್ರ ಭವೇದಕ್ಷಯಕಾರಕಂ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಕ್ಷ್ಮಣೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವಾದಶೋತ್ತರಶತತಮೋಽಧ್ಯಾಯಃ ॥

---

೫. ಅಲ್ಲಿ ಮಾಘ ಕೃಷ್ಣ ಚತುರ್ದಶೀ ದಿನ ಮಾಡಿದ ಪೂಜೆ, ಸ್ನಾನ, ದಾನ, ಜಪಗಳು ಅಕ್ಷಯವಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಲಕ್ಷ್ಮಣೇಶ್ವರಮಾಹಾತ್ಮ್ಯವರ್ಣನವೆಂಬ
ನೂರಹನ್ನೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ತ್ರಯೋದಶೋತ್ತರಶತತಮೋಽಧ್ಯಾಯಃ

ಜಾನಕೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಜಾನಕೀಶ್ವರಮುತ್ತಮಮ್ ।
ರಾಮೇಶಾನ್ನೈರ್ಋತೇ ಭಾಗೇ ಧನುಸ್ತ್ರಿಂಶಕಸಂಸ್ಥಿತಂ ॥ ೧ ॥
ಪಾಪಘ್ನಂ ಸರ್ವಜಂತೂನಾಂ ಜಾನಕ್ಯಾಽರಾಧಿತಂ ಪುರಾ ।
ಪ್ರತಿಷ್ಠಿತಂ ವಿಶೇಷೇಣ ಸಮ್ಯಗಾರಾಧ್ಯ ಶಂಕರಂ ॥ ೨ ॥
ಪೂರ್ವಂ ತಸ್ಯೈವ ಲಿಂಗಸ್ಯ ವಸಿಷ್ಠೇಶೇತಿ ನಾಮ ವೈ ।
ತತ್ಪಶ್ಚಾ ಜಾನಕೀಶೇತಿ ತ್ರೇತಾಯಾಂ ಪ್ರಥಿತಂ ಕ್ಷಿತೌ ॥ ೩ ॥
ತತಃ ಷಷ್ಟಿಸಹಸ್ರಾಣಿ ವಾಲಖಿಲ್ಯಾ ಮಹರ್ಷಯಃ
ತತ್ರ ಸಿದ್ಧಿಮನುಪ್ರಾಪ್ತಾಸ್ತೇನ ಸಿದ್ಧೇಶ್ವರೇತಿ ಚ ॥ ೪ ॥
ಖ್ಯಾತಂ ಕಲೌ ಮಹಾದೇವಿ ಯುಗಲಿಂಗಂ ಮಹಾಪ್ರಭಂ ।
ತದ್ದೃಷ್ಟ್ವಾ ಮುಚ್ಯತೇ ಪಾಪೈರ್ದುಃಖದೌರ್ಭಾಗ್ಯಸಂಭವೈಃ ॥ ೫ ॥

ಕನ್ನಡದ ಅನುವಾದ

ಜಾನಕೀಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ರಾಮೇಶ್ವರನ ನೈರ್ಋತ್ಯ ದಿಕ್ಕಿನಲ್ಲಿ ಮೂವತ್ತು ಬಿಲ್ಲಿನ ದೂರದಲ್ಲಿರುವ ಸಕಲ ಪ್ರಾಣಿಗಳ ಪಾಪವನ್ನು ನಿವಾರಿಸುವುದೂ, ಜಾನಕಿಯು ಪ್ರತಿಷ್ಠೆಮಾಡಿ ಪೂಜಿಸಿರುವುದೂ, ಆದ ಜಾನಕೀಶ್ವರನೆಡೆಗೆ ಹೋಗಬೇಕು.

೩. ಪೂರ್ವದಲ್ಲಿ ಆ ಲಿಂಗವು ವಸಿಷ್ಠೇಶನೆಂದು ಪ್ರಸಿದ್ಧವಾಗಿದ್ದಿತು. ಅನಂತರ ತ್ರೇತಾಯುಗದಲ್ಲಿ ಜಾನಕೀಶನೆಂದು ವಿಖ್ಯಾತವಾಯಿತು.

೪–೫. ದೇವಿ! ಅನಂತರ ಕಲಿಯುಗದಲ್ಲಿ ಅರುವತ್ತು ಸಾವಿರ ಮಂದಿ ವಾಲಖಿಲ್ಯರು ಅಲ್ಲಿ ಸಿದ್ಧಿಯನ್ನು ಪಡೆಯುವುದರಿಂದ ಸಿದ್ಧೇಶ್ವರವೆಂದು ಪ್ರಸಿದ್ಧವಾಯಿತು. ಮಾನವನು ಅದನ್ನು ನೋಡಿ ದುಃಖ ದೌರ್ಭಾಗ್ಯಗಳಿಂದ ಉಂಟಾದ ಪಾಪದಿಂದ ಮುಕ್ತನಾಗುವನು.

ಯಸ್ತಂ ಪೂಜಯತೇ ಭಕ್ತ್ಯಾ ನಾರೀ ವಾ ಪುರುಷೋಽಪಿ ವಾ ।
ಸಂಸ್ನಾಪ್ಯ ವಿಧಿವದ್ಭಕ್ತ್ಯಾ ಸ ಮುಕ್ತಃ ಪಾತಕೈರ್ಭವೇತ್ ॥ ೬ ॥
ಸ್ನಾತ್ವಾ ಚ ಪುಷ್ಕರೇ ತೀರ್ಥೇ ಯಸ್ತಲ್ಲಿಂಗಂ ಪ್ರಪೂಜಯೇತ್ ।
ನಿಯತೋ ನಿಯತಾಹಾರೋ ಮಾಸಮೇಕಂ ನಿರಂತರಂ ॥ ೭ ॥
ದಿನೇದಿನೇ ಭವೇತ್ತಸ್ಯ ವಾಜಿಮೇಧಾಧಿಕಂ ಫಲಂ ।
ಮಾಘೇ ಮಾಸಿ ತೃತೀಯಾಯಾಂ ಯಾ ನಾರೀ ತಂ ಪ್ರಪೂಜಯೇತ್ ।
ತದನ್ವಯೇಽಪಿ ದೌರ್ಭಾಗ್ಯಂ ದುಃಖಂ ಶೋಕಶ್ಚ ನೋ ಭವೇತ್ ॥ ೮ ॥
ಇತಿ ತೇ ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ಶ್ರುತಂ ಹರತಿ ಪಾಪಾನಿ ಸೌಭಾಗ್ಯಂ ಸಂಪ್ರಯಚ್ಛತಿ ॥ ೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಾನಕೀಶ್ವರಮಾಹಾತ್ಮ್ಯವರ್ಣನಂ ನಾಮ
ತ್ರಯೋದಶೋತ್ತರಶತತಮೋಽಧ್ಯಾಯಃ

---

೬. ಹೆಂಗಸಾಗಲಿ. ಗಂಡಸಾಗಲಿ ಅವನನ್ನು ವಿಧಿಯಂತೆ ಅಭಿಷೇಕ ಮಾಡಿ ಪೂಜಿಸಿದರೆ ಪಾಪ ಮುಕ್ತರಾಗುವರು.

೭-೮. ಒಂದು ತಿಂಗಳು ಪುಷ್ಕರ ತೀರ್ಥದಲ್ಲಿ ಮಿಂದು ಮಿತಾಹಾರಿಯಾಗಿ ಪ್ರತಿನಿತ್ಯವೂ ಪೂಜಿಸಿದ ಮಾನವನಿಗೆ ಅಶ್ವಮೇಧ ಯಾಗಕ್ಕಿಂತ ಅಧಿಕವಾದ ಫಲವು ಲಭಿಸುವುದು. ಮಾಘಮಾಸದ ತದಿಗೆಯ ದಿನ ಅವನನ್ನು ಪೂಜಿಸಿದ ಹೆಂಗಸಿನ ವಂಶದವರಿಗೆ ದೌರ್ಭಾಗ್ಯದುಃಖವು ಉಂಟಾಗುವುದಿಲ್ಲ.

೯. ದೇವಿ! ಹೀಗೆ ನಿನಗೆ ಪಾಪವನ್ನು ಪರಿಹರಿಸುವ ಜಾನಕೀಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು. ಜಾನಕೀಶ್ವರನು ಈ ಮಹಾತ್ಮ್ಯವನ್ನು ಕೇಳಿದವನ ಪಾಪಗಳನ್ನು ಪರಿಹರಿಸಿ ಸೌಭಾಗ್ಯವನ್ನು ಕೊಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಾನಕೀಶ್ವರಮಾಹಾತ್ಮ್ಯವರ್ಣನವೆಂಬ
ನೂರಹದಿಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ದಶೋತ್ತರಶತತಮೋಽಧ್ಯಾಯಃ

ವಾಮನಸ್ವಾಮಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿಷ್ಣುಂ ಪಾಪಪ್ರಣಾಶನಂ ।
ವಾಮನಸ್ವಾಮಿನಾಮಾನಂ ಸರ್ವಪಾತಕನಾಶನಂ ॥ ೧ ॥
ಪುಷ್ಕರಾನ್ನೈರ್ಋತೇ ಭಾಗೇ ಧನುರ್ವಿಂಶತಿಭಿಃ ಸ್ಮೃತಂ ।
ಯದಾ ಬದ್ಧೋ ಬಲಿರ್ದೇವಿ ವಿಷ್ಣುನಾ ಪ್ರಭವಿಷ್ಣುನಾ ॥ ೨ ॥
ತದಾ ತತ್ರ ಪದಂ ನ್ಯಸ್ತಂ ದಕ್ಷಿಣಂ ವಿಶ್ವರೂಪಿಣಾ ।
ದ್ವಿತೀಯಂ ಮೇರುಶೃಂಗೇ ತು ತೃತೀಯಂ ಗಗನೇ ಪ್ರಿಯೇ ॥ ೩ ॥
ಯಾವದೂರ್ಧ್ವಂ ಚೋತ್ಕ್ಷಿಪತಿ ತಾವದ್ಭಿನ್ನಂ ಸುದೂರತಃ ।
ಪಾದಾಗ್ರೇಣ ತು ಬ್ರಹ್ಮಾಂಡಂ ನಿಷ್ಕ್ರಾಂತಂ ಸಲಿಲಂ ತತಃ ॥ ೪ ॥
ತತಃ ಸ್ವಜಾನುಮಾತ್ರೇಣ ಸಂಪ್ರಾಪ್ತಂ ಪೃಥಿವೀತಲೇ ।
ತತೋ ವಿಷ್ಣುಪದೀ ಗಂಗಾ ಪ್ರಸಿದ್ಧಿಮಗಮತ್ಕ್ಷಿತೌ ॥ ೫ ॥
ಪೂರ್ವಂ ಸಾ ಪುಷ್ಕರೇ ಪ್ರಾಪ್ತಾ ಪುಷ್ಕರಾತ್ಸಾ ಮಹಾನದೀ ।
ಪುಷ್ಕರಂ ಕಥ್ಯತೇ ವ್ಯೋಮ ಪುಷ್ಕರಂ ಕಥ್ಯತೇ ಜಲಂ ।
ತೇನ ತತ್ಪುಷ್ಕರಂ ಖ್ಯಾತಂ ಸಂನಿಧಾನಂ ಪ್ರಜಾಪತೇಃ ॥ ೬ ॥

ಕನ್ನಡದ ಅನುವಾದ

ವಾಮನಸ್ವಾಮಿಮಾಹಾತ್ಮ್ಯವರ್ಣನ

೧–೫. ಈಶ್ವರನು ಹೇಳುತ್ತಾನೆ:—ಬಳಿಕ ಪುಷ್ಕರ ಕ್ಷೇತ್ರಕ್ಕಿಂತ ನೈರ್ಋತ್ಯ ದಿಕ್ಕಿನಲ್ಲಿ ಇಪ್ಪತ್ತು ಬಿಲ್ಲುಗಳ ದೂರದಲ್ಲಿರುವ ಪಾಪವನ್ನು ಪರಿಹರಿಸುವ ವಾಮನ ಸ್ವಾಮಿಯೆಂಬ ವಿಷ್ಣುವಿನ ಸನ್ನಿಧಿಗೆ ಹೋಗಬೇಕು. ಸಮರ್ಥನಾದ ವಿಷ್ಣುವು ಬಲಿಯನ್ನು ಬಂಧಿಸಿದ ಕೂಡಲೆ ತನ್ನ ಬಲಗಾಲನ್ನು ಅಲ್ಲಿಟ್ಟಿರುವನು. ಎರಡನೆಯ ಪಾದವನ್ನು ಮೇರು ಶಿಖರದಲ್ಲಿಟ್ಟು ಮೂರನೆಯ ಪಾದವನ್ನು ಆಕಾಶದಲ್ಲಿಡಲು ಮೇಲಕ್ಕೆತ್ತುವಷ್ಟರಲ್ಲಿ ಕಾಲಿನ ಕೊನೆಯಿಂದ ದೂರದಲ್ಲಿ ಬ್ರಹ್ಮಾಂಡವು ಒಡೆದು ಆಕಾಶ ಗಂಗೆಯ ನೀರು ಅಲ್ಲಿಂದ ಹೊರಟಿತು. ಆ ನೀರು ಭೂಮಿಯಲ್ಲಿ ಒಂದು ಮೊಣಕಾಲಿನಷ್ಟು ತಂಗಲು ಗಂಗೆಯು ವಿಷ್ಣುಪದೀ ಎಂದು ಪ್ರಸಿದ್ಧಳಾದಳು.

೬. ಆ ಗಂಗಾಮಹಾನದಿಯು ಮೊದಲು ಆಕಾಶದಿಂದ ಉಷ್ಕರ ಕ್ಷೇತ್ರಕ್ಕೆ ಬಂದಿತು. ಆಕಾಶವೂ, ನೀರೂ ಪುಷ್ಕರ ಎಂಬ ಹೆಸರನ್ನು ಪಡೆದಿರುವುದರಿಂದ ಬ್ರಹ್ಮನ ಸಾನ್ನಿಧ್ಯವುಳ್ಳ ಆ ಕ್ಷೇತ್ರವು ಪುಷ್ಕರವೆಂಬ ಹೆಸರುಳ್ಳದ್ದಾಯಿತು.

ತತ್ರ ಸ್ನಾನಂ ನರಃ ಕೃತ್ವಾ ಯಃ ಪಶ್ಯತಿ ಹರೇಃ ಪದಂ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ಹರಿಃ ಸ್ವಯಂ ॥ ೭ ॥
ತತ್ರ ಪಿಂಡಪ್ರದಾನೇನ ತೃಪ್ತಿಃ ಸ್ಯಾತ್ಕೋಟಿವಾರ್ಷಿಕೀ ।
ಪಿತೄಣಾಂ ಚ ವರಾರೋಹೇ ಹ್ಯೇತದಾಹ ಹರಿಃ ಸ್ವಯಂ ॥ ೮ ॥
ಅತ್ರ ಗಾಥಾ ಪುರಾ ಗೀತಾ ವಸಿಷ್ಠೇನ ಮಹರ್ಷಿಣಾ ।
ವಾಮನಸ್ವಾಮಿನಂ ದೃಷ್ಟ್ವಾ ತಾಂ ಶೃಣುಷ್ವ ಸಮಾಹಿತಾ ॥ ೯ ॥
ಸ್ನಾತ್ವಾ ತು ಪುಷ್ಕರೇ ತೀರ್ಥೇ ದೃಷ್ಟ್ವಾ ವಿಷ್ಣುಪದಂ ತತಃ ।
ಅಪಿ ಕೃತ್ವಾ ಮಹತ್ಪಾಪಂ ಕಿಮತಃ ಪರಿತಪ್ಯತೇ ॥ ೧೦ ॥
ಯಸ್ತತ್ರೋಪಾನಹೌ ದದ್ಯಾದ್ಬ್ರಾಹ್ಮಣಾಯ ಯತವ್ರತಃ ।
ಸ ಯಾನವರಮಾರೂಢೋ ವಿಷ್ಣುಲೋಕೇ ಮಹೀಯತೇ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಾಮನಸ್ವಾಮಿಮಾಹಾತ್ಮ್ಯವರ್ಣನಂ ನಾಮ
॥ ಚತುರ್ದಶೋತ್ತರಶತತಮೋಽಧ್ಯಾಯಃ ॥

---

೭. ಆ ಪುಷ್ಕರಕ್ಷೇತ್ರದಲ್ಲಿ ಮಿಂದು ಶ್ರೀಮಹಾವಿಷ್ಣುವಿನ ಪಾದವನ್ನು ದರ್ಶನ ಮಾಡುವ ನರನು ವಿಷ್ಣುವಿನ ಉತ್ತಮ ಸ್ಥಾನವನ್ನು ಹೊಂದುವನು.

೮. ಪ್ರಿಯಳೆ! ಅಲ್ಲಿ ಪಿತೃಗಳಿಗೆ ಪಿಂಡಪ್ರದಾನ ಮಾಡುವುದರಿಂದ ಅವರು ಕೋಟಿ ವರ್ಷಗಳಕಾಲ ತೃಪ್ತರಾಗಿರುವರೆಂದು ಶ್ರೀ ವಿಷ್ಣುವು ತಾನೇ ಹೇಳಿರುವನು.

೯. ಈ ವಿಷಯದಲ್ಲಿ ವಸಿಷ್ಠ ಮಹರ್ಷಿಯು ವಾಮನ ಸ್ವಾಮಿಯನ್ನು ಕಂಡು ಹೇಳಿದ ಒಂದು ಗಾಥೆಯಿರುವುದು. ಅದನ್ನು ಸಾವಧಾನ ಮನಸ್ಸಿನಿಂದ ಕೇಳು.

೧೦. ಪುಷ್ಕರ ತೀರ್ಥದಲ್ಲಿ ಮಿಂದು ವಿಷ್ಣುಪಾದವನ್ನು ದರ್ಶನ ಮಾಡಿದವನು ಮಹಾಪಾಪವನ್ನು ಮಾಡಿದ್ದರೂ ಆ ಪಾಪದ ಪರಿಹಾರಕ್ಕಾಗಿ ತಪಸ್ಸನ್ನು ಮಾಡಬೇಕಾಗಿರುವುದಿಲ್ಲ.

೧೧. ಅಲ್ಲಿ ವ್ರತವನ್ನಾಚರಿಸುತ್ತ ಬ್ರಾಹ್ಮಣನಿಗೆ ಪಾದರಕ್ಷೆಗಳನ್ನು ದಾನಮಾಡಿದವನು ಉತ್ತಮವಾದ ವಾಹನವನ್ನೇರಿ ವಿಷ್ಣುಲೋಕವನ್ನು ಸೇರಿ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಾಮನಸ್ವಾಮಿಮಹಾತ್ಮ್ಯವರ್ಣನವೆಂಬ
ನೂರಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚದಶೋತ್ತರಶತತಮೋಽಧ್ಯಾಯಃ

ಪುಷ್ಕರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪುಷ್ಕರೇಶ್ವರಮುತ್ತಮಂ ।
ತಸ್ಯೈವ ದಕ್ಷಿಣೇ ಭಾಗೇ ಜಾನಕೀಶ್ವರಮುತ್ತಮಂ ॥ ೧ ॥
ಲಿಂಗಂ ಮಹಾಪ್ರಭಾವಂ ತು ಬ್ರಹ್ಮಪುತ್ರೇಣ ಪೂಜಿತಂ ।
ಸನತ್ಕುಮಾರಮುನಿನಾ ಶ್ರದ್ಧಯಾ ಹೇಮಪುಷ್ಕರೈಃ ॥ ೨ ॥
ಪೂಜಿತಂ ತದ್ವಿಧಾನೇನ ತೇನ ತತ್ಪುಷ್ಕರೇಶ್ವರಂ ।
ಖ್ಯಾತಂ ತತ್ರ ವರಾರೋಹೇ ಸರ್ವಪಾತಕನಾಶನಂ ॥ ೩ ॥
ಯಸ್ತಂ ಪೂಜಯತೇ ಭಕ್ತ್ಯಾ ಗಂಧಪುಷ್ಪಾದಿಭಿಃ ಕ್ರಮಾತ್ ।
ಯಾತ್ರಾ ಕೃತಾ ಭವೇತ್ತೇನ ಪೌಷ್ಕರೀ ನಾತ್ರ ಸಂಶಯಃ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಷ್ಕರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚದಶೋತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಪುಷ್ಕರೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಜಾನಕೀಶ್ವರನ ದಕ್ಷಿಣ ಭಾಗದಲ್ಲಿರುವ ಬ್ರಹ್ಮಪುತ್ರನಾದ ಸನತ್ಕುಮಾರಮುನಿಯು ಶ್ರದ್ಧಾಪೂರ್ವಕವಾಗಿ ಸುವರ್ಣಕಮಲಗಳಿಂದ ಅರ್ಚಿಸಿದ ಅತ್ಯಂತ ಮಾಹಾತ್ಮ್ಯವುಳ್ಳ ಪುಷ್ಕರೇಶ್ವರನ ಸಮೀಪಕ್ಕೆ ಹೋಗಬೇಕು.

೩. ಸನತ್ಕುಮಾರನು ಪಾಪವನ್ನು ಪರಿಹರಿಸುವ ಈ ಲಿಂಗವನ್ನು ಕಮಲಗಳಿಂದ ಪೂಜಿಸಿರುವುದರಿಂದ ಈ ಲಿಂಗವು ಪುಷ್ಕರೇಶ್ವರನೆಂದು ವಿಖ್ಯಾತವಾಯಿತು.

೪. ಆ ಪುಷ್ಕರೇಶ್ವರನನ್ನು ಗಂಧ ಪುಷ್ಪ ಮೊದಲಾದುವುಗಳಿಂದ ಪೂಜಿಸಿದವನು ಪುಷ್ಕರಕ್ಷೇತ್ರದ ಯಾತ್ರೆಯನ್ನು ಮಾಡಿದವನಂತಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪುಷ್ಕರೇಶ್ವರಮಾಹಾತ್ಮ್ಯವರ್ಣನವೆಂಬ
ನೂರಹದಿನೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷೋಡಶೋತ್ತರಶತತಮೋಽಧ್ಯಾಯಃ

ಶಂಖೋದಕಕುಂಡೇಶ್ವರೀಗೌರೀವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವೀಂ ಸೌಭಾಗ್ಯಕಾರಿಣೀಂ ।
ಕುಂಡೇಶ್ವರೀತಿ ವಿಖ್ಯಾತಾಂ ಪುಷ್ಕರಾದ್ವಾಯುಗೋಚರೇ ॥ ೧ ॥
ಧನುಷಾಂ ತ್ರಿಂಶತಾ ದೇವಿ ಭೂತನಾಥಾಚ್ಚ ನೈರ್‌ಋತೇ ।
ಸಂಸ್ಥಿತಾ ಪಾಪದಮನೀ ದಾರಿದ್ರ್ಯಾಘವಿನಾಶಿನೀ ॥ ೨ ॥
ತಸ್ಯಾ ನೈರ್‌ಋತದಿಗ್ಭಾಗೇ ಧನುಃಪಂಚದಶೇ ಸ್ಥಿತಂ ।
ಶಂಖೋದಕಂ ನಾಮ ಕುಂಡಂ ಸರ್ವಪಾತಕನಾಶನಂ ॥ ೩ ॥
ತತ್ರ ಸ್ನಾತ್ವಾ ತು ಯೋ ಮರ್ತ್ಯೋ ನಾರೀ ವಾ ಶುಭಚಾರಿಣಿ ।
ಪೂಜಯೇತ್ತಾಂ ಮಹಾದೇವಿ ಶಂಖಾವರ್ತೇತಿ ವಿಶ್ರುತಾಂ ॥ ೪ ॥
ಕಲೌ ಕುಂಡೇಶ್ವರೀ ನಾಮ ಸರ್ವಸೌಖ್ಯಪ್ರದಾಯಿನೀ ।
ಶಂಖೋ ನಾಮ ಪುರಾ ದೇವಿ ವಿಷ್ಣುನಾ ನಿಹತಃ ಪ್ರಿಯೇ ॥ ೫ ॥
ತಸ್ಯ ದೇಹಂ ಸಮಾದಾಯ ಮಹಾಂತಂ ಶಂಖರೂಪಿಣಂ ।
ತೀರ್ಥೋದಕೇನ ಸಂಪೂರ್ಯ ಪ್ರಭಾಸಂ ಕ್ಷೇತ್ರಮಾಗತಃ ॥ ೬ ॥

ಕನ್ನಡದ ಅನುವಾದ

ಶಂಖೋದಕಕುಂಡೇಶ್ವರೀಗೌರೀವರ್ಣನ

೧–೨. ಈಶ್ವರನು ಹೇಳುತ್ತಾನೆ.—ಮಹಾದೇವಿ ! ಬಳಿಕ ಪುಷ್ಕರಕ್ಷೇತ್ರದ ವಾಯುವ್ಯದಿಕ್ಕಿನಲ್ಲಿ ಭೂತನಾಥನ ನೈರ್‌ಋತ್ಯದಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿರುವವಳೂ, ಪಾಪದಾರಿದ್ರ್ಯಗಳನ್ನು ನೀಗಿಸುವವಳೂ, ಸೌಭಾಗ್ಯವನ್ನುಂಟುಮಾಡುವವಳೂ ಆದ ಕುಂಡೇಶ್ವರಿಯ ಬಳಿಗೆ ಹೋಗಬೇಕು.

೩. ಅವಳ ನೈಋತ್ಯದಿಕ್ಕಿನಲ್ಲಿ ಹದಿನೈದು ಬಿಲ್ಲುಗಳ ದೂರದಲ್ಲಿ ಸಕಲ ಪಾಪಗಳನ್ನು ಪರಿಹರಿಸುವ ಶಂಖೋದಕವೆಂಬ ಕುಂಡವಿರುವುದು.

೪. ಪುರುಷನಾಗಲಿ, ಹೆಂಗಸಾಗಲಿ ಆ ಕುಂಡದ ಮಂಗಳಕರವಾದ ಜಲದಲ್ಲಿ ಮಿಂದು ಶಂಖಾವರ್ತೆಯೆಂದು ಪ್ರಸಿದ್ಧಳಾದ ಆ ಕುಂಡೇಶ್ವರಿಯನ್ನು ಪೂಜಿಸಬೇಕು.

೫–೮. ಪ್ರಿಯಳೆ ! ಹಿಂದೆ ವಿಷ್ಣುವು ಶಂಖನೆಂಬ ದೈತ್ಯನನ್ನು ಕೊಂದು ಶಂಖರೂಪವಾದ ಅವನ ದೊಡ್ಡ ದೇಹಕ್ಕೆ ತೀರ್ಥಜಲವನ್ನು ತುಂಬಿ ಅದನ್ನು ಪ್ರಭಾಸ ಕ್ಷೇತ್ರಕ್ಕೆ ತಂದು ತೊಳೆದು ಆ ತೀರ್ಥಕ್ಕೆ ಕಾಂತಿಯನ್ನೆಸಗಿ ಮೇಘಗಂಭೀರವಾದ

ತತ್ರ ಶಂಖಂ ತು ಪ್ರಕ್ಷಾಳ್ಯ ಕೃತಂ ತೀರ್ಥಂ ಮಹಾಪ್ರಭಂ ।
ತತ್ರ ಪೂರಿತವಾನ್ ಶಂಖಂ ಮೇಘಗಂಭೀರನಿಸ್ವನಂ ॥ ೭ ॥
ತಸ್ಯ ನಾದೇನ ಮಹತಾ ದೇವೀ ತತ್ರ ಸಮಾಗತಾ ।
ಪೃಚ್ಛಂತೀ ಕಾರಣಂ ತತ್ರ ತತ್ಕುಂಡಸ್ಯ ಸಮೀಪಗಾ ।
ತೇನ ಕುಂಡೇಶ್ವರೀ ಖ್ಯಾತಾ ಕುಂಡಂ ಶಂಖೋದಕಂ ಸ್ಮೃತಂ ॥ ೮ ॥
ಮಾಘೇ ಮಾಸಿ ತೃತೀಯಾಯಾಂ ಯಸ್ತಾಂ ಪೂಜಯತೇ ನರಃ ।
ನಾರೀ ವಾ ಭಕ್ತಿಸಂಯುಕ್ತಾ ಸ ಗೌರೀಪದಮಾಪ್ನುಯಾತ್ ॥ ೯ ॥
ದಂಪತ್ಯೋರ್ಭೋಜನಂ ತತ್ರ ದೇಯಂ ಯಾತ್ರಾಫಲೇಪ್ಸುಭಿಃ ।
ಕಂಚುಕಂ ಫಲದಾನಂ ಚ ಗೌರಿಣೀನಾಂ ಚ ಭೋಜನಂ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಶಂಖೋದಕ
ಕುಂಡೇಶ್ವರೀಗೌರೀಮಹಾಕಾಲೀಮಾಹಾತ್ಮ್ಯವರ್ಣನಂ ನಾಮ
॥ ಷೋಡಶೋತ್ತರಶತತಮೋಽಧ್ಯಾಯಃ ॥

ಧ್ವನಿಯನ್ನೀಯುವ ಆ ಶಂಖವನ್ನು ಊದಿದನು. ಪಾಪವನ್ನು ಪರಿಹರಿಸುವವಳೂ ಕಲಿಯುಗದಲ್ಲಿ ಕುಂಡೇಶ್ವರಿಯೆಂದು ವಿಖ್ಯಾತಳೂ ಆಗಿ ಅಲ್ಲಿ ವಾಸಿಸುತ್ತಿರುವ ಆ ದೇವಿಯು ಆ ಮಹಾಶಬ್ದವನ್ನು ಕೇಳಿ ಶಂಖೋದಕಕುಂಡದಬಳಿಯಲ್ಲಿ ನಿಂತು ಆ ಶಬ್ದಕ್ಕೆ ಕಾರಣವನ್ನು ಕೇಳಿದಳು. ಆದರಿಂದ ಅವಳು ಕುಂಡೇಶ್ವರಿಯೆಂದೂ, ಆ ಕುಂಡವು ಶಂಖೋದಕವೆಂದೂ ಪ್ರಸಿದ್ಧವಾಯಿತು.

೯. ಮಾಘಮಾಸದ ತದಿಗೆಯ ದಿನ ಗಂಡಸಾಗಲಿ, ಹೆಂಗಸಾಗಲಿ ಆ ದೇವಿಯನ್ನು ಭಕ್ತಿಯಿಂದ ಪೂಜಿಸಿದರೆ ಅವರು ಗೌರಿಯ ಸ್ಥಾನವನ್ನು ಹೊಂದುವರು.

೧೦. ಯಾತ್ರಾಫಲವನ್ನಪೇಕ್ಷಿಸುವವರು ಅಲ್ಲಿ ದಂಪತಿಗಳಿಗೆ ಭೋಜನವನ್ನು ಮಾಡಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂಧಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಂಖೋದಕ ಕುಂಡೇಶ್ವರೀಗೌರೀಮಾಹಾತ್ಮ್ಯವರ್ಣನವೆಂಬ
ನೂರಹದಿನಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತದಶೋತ್ತರಶತತಮೋಽಧ್ಯಾಯಃ

ಭೂತನಾಥೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಭೂತನಾಥೇಶ್ವರಂ ಹರಂ ।
ಕುಂಡೇಶ್ವರ್ಯಾ ಈಶಭಾಗೇ ಧನುಷಾಂ ವಿಂಶಕೇಽಂತರೇ ॥ ೧ ॥
ಕಲ್ಪಲಿಂಗಂ ಮಹಾದೇವಿ ಹ್ಯನಾದಿನಿಧನಂ ಸ್ಥಿತಂ ।
ಪೂರ್ವಂ ತ್ರೇತಾಯುಗೇ ದೇವಿ ವೀರಭದ್ರೇಶ್ವರೀತಿ ಚ ॥ ೨ ॥
ಪ್ರಖ್ಯಾತಂ ಭುವಿ ದೇವೇಶಿ ಕಲೌ ಭೂತೇಶ್ವರಂ ಸ್ಮೃತಂ।
ಪುರಾ ದ್ವಾಪರಸಂಧೌ ಚ ತತ್ರ ಭೂತಾನಿ ಕೋಟಿಶಃ ॥ ೩ ॥
ಸಂಸ್ಥಿತಂ ಪರಮಾಂ ಜಗ್ಮುಸ್ತಲ್ಲಿಂಗಸ್ಯ ಪ್ರಭಾವತಃ ।
ತೇನ ಭೂತೇಶ್ವರಂ ನಾಮ ಪ್ರಖ್ಯಾತಂ ಧರಣೀತಲೇ ॥ ೪ ॥
ತತ್ರ ಕೃಷ್ಣಚತುರ್ದಶ್ಯಾಂ ರಾತ್ರೌ ಸಂಪೂಜ್ಯ ಶಂಕರಂ ।
ದಕ್ಷಿಣಾಂ ದಿಶಮಾಶ್ರಿತ್ಯ ಅಘೋರಂ ಪೂಜಯೇತ್ತು ಯಃ ॥ ೫ ॥

ಕನ್ನಡದ ಅನುವಾದ

ಭೂತನಾಥೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಕುಂಡೇಶ್ವರಿಯ ಈಶಾನ್ಯಭಾಗದಲ್ಲಿ ಇಪ್ಪತ್ತು ಬಿಲ್ಲುಗಳ ದೂರದಲ್ಲಿರುವ ಭೂತನಾಥೇಶ್ವರನೆಂಬ ಹರನೆಡೆಗೆ ಹೋಗಬೇಕು.

೨–೪. ಅನಾದಿಯಾದ ಈ ಕಲ್ಪಲಿಂಗವು ಹಿಂದೆ ತ್ರೇತಾಯುಗದಲ್ಲಿ ವೀರಭದ್ರೇಶ್ವರನೆಂದೂ, ಈ ಕಲಿಯುಗದಲ್ಲಿ ಭೂತೇಶ್ವರನೆಂದೂ ಪ್ರಸಿದ್ಧವಾಗಿರುವುದು. ಹಿಂದೆ ದ್ವಾಪರಯುಗದ ಸಂಧಿಕಾಲದಲ್ಲಿ ಕೋಟಿ ಪ್ರಾಣಿಗಳು ಈ ಕಲ್ಪಲಿಂಗದ ಮಾಹಾತ್ಮ್ಯದಿಂದ ಉತ್ತಮಸಿದ್ಧಿಯನ್ನು ಹೊಂದಿರುವುವು. ಆದರಿಂದ ಈ ಲಿಂಗವು ಭೂತೇಶ್ವರನೆಂದು ಪ್ರಸಿದ್ಧವಾಗಿರುವುದು.

೫–೬. ಅಲ್ಲಿ ಕೃಷ್ಣಚತುರ್ದಶೀದಿನ ರಾತ್ರಿ ಶಂಕರನನ್ನು ಪೂಜಿಸಿ ದಕ್ಷಿಣ ದಿಕ್ಕನ್ನಾಶ್ರಯಿಸಿ ಅಘೋರೇಶ್ವರನನ್ನು ದೃಢಚಿತ್ತನೂ, ಜಿತೇಂದ್ರಿಯನೂ, ಭಯ

ದೃಢಂ ಜಿತೇಂದ್ರಿಯೋ ಭೂತ್ವಾ ನಿರ್ಭಯೋ ಧ್ಯಾನಸಂಯುತಃ ।
ತಸ್ಯೈವ ಜಾಯತೇ ಸಿದ್ಧಿರ್ಯಾ ಕಾಚಿದ್ಭೂತಲೇ ಸ್ಥಿತಾ ॥ ೬ ॥
ತಿಲಹೇಮಪ್ರದಾನಂ ಚ ಪಿಂಡದಾನಂ ಚ ತತ್ರ ವೈ ।
ಪಿತೄನುದ್ದಿಶ್ಯ ದದ್ಯಾದ್ವೈ ತೇಷಾಂ ಪ್ರೇತತ್ವಮುಕ್ತಯೇ ॥ ೭ ॥
ಇತಿ ನಿಗದಿತಮೇತದ್ಭೂತನಾಥೇಶ್ವರಸ್ಯ
ಪ್ರಚುರ ಕಲಿಮಲಾನಾಂ ನಾಶನಂ ಪುಣ್ಯಹೇತುಃ ।
ಪಠತಿ ಚ ಪುರುಷೋ ವಾ ಯಃ ಶೃಣೋತೀಹ ಭಕ್ತ್ಯಾ
ಸುರವರಮಹಿಮಾನಂ ಮುಚ್ಯತೇ ಪಾತಕೌಘೈಃ ॥ ೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಕುಂಡೇಶ್ವರೀ
ಮಾಹಾತ್ಮ್ಯೇ ಭೂತನಾಥೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತದಶೋತ್ತರಶತತಮೋಽಧ್ಯಾಯಃ ॥

ರಹಿತನೂ, ಧ್ಯಾನನಿರತನೂ ಆಗಿ ಪೂಜಿಸಿದವನಿಗೆ ಭೂಮಿಯಲ್ಲಾಗಬೇಕಾದ ಇಷ್ಟಾರ್ಥವು ಕೈಗೂಡುವುದು.

೭. ಅಲ್ಲಿ ಪಿತೃಗಳ ಪ್ರೇತತ್ವ ನಿವೃತ್ತಿಗಾಗಿ ಆ ಪಿತೃಗಳನ್ನುದ್ದೇಶಿಸಿ ಎಳ್ಳು, ಸುವರ್ಣ, ಪಿಂಡಗಳನ್ನು ದಾನಮಾಡಬೇಕು.

೮. ಹೀಗೆ ಭೂತನಾಥೇಶ್ವರನ ಅತಿಶಯವಾದ ಕಲಿದೋಷವನ್ನು ಪರಿಹರಿಸುವುದೂ, ಪುಣ್ಯವನ್ನುಂಟುಮಾಡುವುದೂ ಆದ ಮಾಹಾತ್ಮ್ಯವನ್ನು ಹೇಳಿರುವೆನು. ಆದನ್ನು ಭಕ್ತಿಯಿಂದ ಹೇಳುವವನೂ, ಕೇಳುವವನೂ ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೂತನಾಥೇಶ್ವರಮಾಹಾತ್ಮ್ಯವರ್ಣನವೆಂಬ
ನೂರಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾದಶೋತ್ತರಶತತಮೋಽಧ್ಯಾಯಃ

ಗೋಪ್ಯಾದಿತ್ಯಮಾಹಾತ್ಮ್ಯವರ್ಣನಂ

ತತೋ ಗಚ್ಛೇನ್ಮಹಾದೇವಿ ಗೋಪ್ಯಾದಿತ್ಯಮನುತ್ತಮಂ ।
ಭೂತೇಶಾದ್ವಾಯವೇ ಭಾಗೇ ಧನುಷಾಂ ತ್ರಿಂಶಕೇಽಂತರೇ ॥ ೧ ॥
ಬಲಾತಿಬಲದೈತ್ಯಘ್ನ್ಯಾ ದಕ್ಷಿಣಾಗ್ನೇಯಸಂಸ್ಥಿತಂ ।
ಧನುಷಾಂ ದಶಕೇ ದೇವಿ ಸಂಸ್ಥಿತಂ ಪಾಪನಾಶನಂ ॥ ೨ ॥
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಮಹಾಪಾಪಹರಾಂ ಶುಭಾಂ ।
ಯಾಂ ಶ್ರುತ್ವಾ ಮಾನವೋ ಭಕ್ತ್ಯಾ ದುಃಖಶೋಕೈಃ ಪ್ರಮುಚ್ಯತೇ ॥ ೩ ॥
ಪುರಾ ಕೃಷ್ಣೋ ಮಹಾತೇಜಾ ಯದಾ ಪ್ರಭಾಸಮಾಗತಃ ।
ಸಹಿತೋ ಯಾದವೈಃ ಸರ್ವೈಃ ಷಟ್ಪಂಚಾಶತಿಕೋಟಿಭಿಃ ॥ ೪ ॥
ಷೋಡಶೈವ ಸಹಸ್ರಾಣಿ ಗೋಪ್ಯಸ್ತತ್ರ ಸಮಾಗತಾಃ ।
ಲಕ್ಷಮೇಕಂ ಯಥಾ ಷಷ್ಟಿರೇತೇ ಕೃಷ್ಣಸುತಾಃ ಪ್ರಿಯೇ ॥ ೫ ॥

ಕನ್ನಡದ ಅನುವಾದ

ಗೋಪ್ಯಾದಿತ್ಯಮಾಹಾತ್ಮ್ಯವರ್ಣನವೆಂಬ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಭೂತೇಶನಿಂದ ವಾಯುವ್ಯದಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿ ಬಲಾತಿಬಲ ದೈತ್ಯಘ್ನಿಯ ಆಗ್ನೇಯದಲ್ಲಿ ಹತ್ತು ಬಿಲ್ಲುಗಳ ದೂರದಲ್ಲಿರುವ ಗೋಪ್ಯಾದಿತ್ಯನೆಡೆಗೆ ಹೋಗಬೇಕು.

೩. ಪಾಪವನ್ನು ನೀಗಿಸುವ ಆ ಗೋಪ್ಯಾದಿತ್ಯನ ಉತ್ಪತ್ತಿಯ ಕ್ರಮವನ್ನು ಹೇಳುವೆನು. ಇದನ್ನು ಭಕ್ತಿಯಿಂದ ಕೇಳುವ ಮಾನವನು ಅನೇಕ ದುಃಖಗಳಿಂದ ಮುಕ್ತನಾಗುವನು.

೪. ಹಿಂದೆ ಅತಿ ತೇಜಸ್ವಿಯಾದ ಕೃಷ್ಣನು ಐವತ್ತಾರು ಕೋಟಿ ಯಾದವರೊಡನೆ ಪ್ರಭಾಸಕ್ಷೇತ್ರಕ್ಕೆ ಬಂದನು.

೫. ಆಗ ಅಲ್ಲಿಗೆ ಹದಿನಾರು ಸಾವಿರ ಗೋಪಿಯರೂ, ಒಂದು ಲಕ್ಷದ ಅರುವತ್ತು ಮಂದಿ ಕೃಷ್ಣನ ಮಕ್ಕಳೂ ಅಲ್ಲಿಗೆ ಬಂದರು.

ತತ್ರ ಪ್ರಾಭಾಸಿಕೇ ಕ್ಷೇತ್ರೇ ಸಂಸ್ಥಿತಾಃ ಪಾಪನಾಶನೇ ।
ಯಾದವಸ್ಥಲಮಾಸಾದ್ಯ ಯಾವದ್ರೈವತಕೋ ಗಿರಿಃ ॥ ೬ ॥
ತತ್ರ ದ್ವಾದಶವರ್ಷಾಣಿ ಸಂಸ್ಥಿತಾಸ್ತೇ ಮಹಾಬಲಾಃ ।
ಕ್ಷೇತ್ರಂ ಪವಿತ್ರಮಾದಾಯ ಶಿವಲಿಂಗಾನಿ ತೇ ಪೃಥಕ್ ।
ಸ್ಥಾಪಯಾಂಚಕ್ರಿರೇ ಸರ್ವೇ ಹ್ಯಂಕಿತಾನಿ ಸ್ವನಾಮಭಿಃ ॥ ೭ ॥
ಏವಂ ಸಮಗ್ರಂ ತತ್ಕ್ಷೇತ್ರಂ ಯಾವದ್ದ್ವಾದಶಯೋಜನಂ ।
ಧ್ವಜಲಿಂಗಾಂಕಿತಂ ಚಕ್ರುಃ ಸರ್ವೇ ಯಾದವಪುಂಗವಾಃ ॥ ೮ ॥
ಹಸ್ತಹಸ್ತಾಂತರೇ ದೇವಿ ಪ್ರಾಸಾದಾಃ ಕ್ಷೇತ್ರಮಧ್ಯತಃ ।
ಸುವರ್ಣಕಲಶೋಪೇತಾಃ ಪತಾಕಾಕುಲಿತಾಂಬರಾಃ ।
ವಿರಾಜಂತೇ ತು ತತ್ರಸ್ಥಾಃ ಕೀರ್ತಿಸ್ತಂಭಾ ಹರೇರಿವ ॥ ೯ ॥
ತತೋ ಗೋಪ್ಯೋ ಮಹಾದೇವಿ ಆದ್ಯಾಯಾಃ ಷೋಡಶ ಸ್ಮೃತಾಃ
ತಾಸಾಂ ನಾಮಾನಿ ತೇ ವಕ್ಷ್ಯೇ ತಾನಿ ಹ್ಯೇಕಮನಾಃ ಶೃಣು ॥ ೧೦ ॥
ಲಂಬಿನೀ ಚಂದ್ರಿಕಾ ಕಾಂತಾ ಕ್ರೂರಾ ಶಾಂತಾ ಮಹೋದಯಾ ।
ಭೀಷಣೀ ನಂದನಾಽಶೋಕಾ ಸುಪರ್ಣಾ ವಿಮಲಾಽಕ್ಷಯಾ ॥ ೧೧ ॥

೬–೭. ಅತಿ ಬಲಿಷ್ಠರಾದ ಆ ಯಾದವರು ಪಾಪವನ್ನು ಪರಿಹರಿಸುವ ಆ ಪ್ರಭಾಸ ಕ್ಷೇತ್ರದಲ್ಲಿ ಯಾದವ ಸ್ಥಲವನ್ನಾರಂಭಿಸಿ ರೈವತಕ ಪರ್ವತದವರೆಗೆ ಹನ್ನೆರಡುವರ್ಷ ಕಾಲ ನೆಲಸಿ ಆ ಕ್ಷೇತ್ರವನ್ನು ಪವಿತ್ರಗೊಳಿಸಿ ತಮ್ಮನಾಮಾಂಕಿತವಾದ ಶಿವಲಿಂಗಗಳನ್ನು ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಪ್ರತಿಷ್ಠೆಮಾಡಿದರು.

೮. ಯಾದವೋತ್ತಮರು ಹೀಗೆ ಹನ್ನೆರಡು ಗಾವುದ ವಿಸ್ತೀರ್ಣವಾದ ಆ ಪ್ರಭಾಸಕ್ಷೇತ್ರವನ್ನು ಸಂಪೂರ್ಣವಾಗಿ ತಮ್ಮ ಧ್ವಜಗಳ ಚಿಹ್ನೆಯುಳ್ಳದನ್ನಾಗಿ ಮಾಡಿದರು.

೯. ದೇವಿ! ಆ ಕ್ಷೇತ್ರದ ನಡುವೆ ಪ್ರತಿಯೊಂದು ಗೇಣುದೂರದಲ್ಲಿಯೂ ಸುವರ್ಣ ಕಲಶಗಳಿಂದಲೂ, ಪತಾಕೆಗಳಿಂದಲೂ ಕೂಡಿದ ಆ ಯಾದವರ ಭವನಗಳು ಕೃಷ್ಣನ ಕೀರ್ತಿಸ್ತಂಭಗಳಂತೆ ಹೊಳೆದುವು.

೧೦. ಮಹಾದೇವಿ! ಮೊದಲಿನ ಹದಿನಾರು ಮಂದಿ ಗೋಪಿಯರ ನಾಮಗಳನ್ನು ಹೇಳುವೆನು. ಅವುಗಳನ್ನು ಒಮ್ಮನಸ್ಸಿನಿಂದ ಕೇಳು.

೧೧–೧೨. ಲಂಬಿನೀ, ಚಂದ್ರಿಕಾ, ಕಾಂತಾ, ಕ್ರೂರಾ, ಶಾಂತಾ, ಮಹೋದಯಾ, ಭೀಷಣೀ, ನಂದನಾಶೋಕ, ಸುಪರ್ಣಾ, ವಿಮಲಾ, ಅಕ್ಷಯಾ,

ಶುಭದಾ ಶೋಭನಾ ಪುಣ್ಯಾ ಹಂಸಸ್ಯೈತಾಃ ಕಲಾಃ ಸ್ಮೃತಾಃ ।
ಹಂಸ ಏವ ಮತಃ ಕೃಷ್ಣಃ ಪರಮಾತ್ಮಾ ಜನಾರ್ದನಃ ॥ ೧೨ ॥
ತಸ್ಯೈತಾಃ ಶಕ್ತಯೋ ದೇವಿ ಷೋಡಶೈವ ಪ್ರಕೀರ್ತಿತಾಃ ।
ಚಂದ್ರರೂಪೀ ತತಃ ಕೃಷ್ಣಃ ಕಲಾರೂಪಾಸ್ತು ತಾಃ ಸ್ಮೃತಾಃ ॥ ೧೩ ॥
ಸಂಪೂರ್ಣಮಂಡಲಾ ತಾಸಾಂ ಮಾಲಿನೀ ಷೋಡಶೀ ಕಲಾ ।
ಪ್ರತಿಪತ್ತಿಥಿಮಾರಭ್ಯ ಸಂಚರತ್ಯಾಸು ಚಂದ್ರಮಾಃ ॥ ೧೪ ॥
ಷೋಡಶೈವ ಕಲಾಃ ಯಾಸ್ತಾ ಗೋಪೀರೂಪಾ ವರಾನನೇ ।
ಏಕೈಕಶಸ್ತಾಃ ಸಂಭಿನ್ನಾಃ ಸಹಸ್ರೇಣ ಪೃಥಕ್ಪೃಥಕ್ ॥ ೧೫ ॥
ಏವಂ ತೇ ಕಥಿತಂ ದೇವಿ ರಹಸ್ಯಂ ಜ್ಞಾನಸಂಭವಂ ।
ಏವಂ ಯೋ ವೇದ ಪುರುಷಃ ಸ ಜ್ಞೇಯೋ ವೈಷ್ಣವೋ ಬುಧೈಃ ॥ ೧೬ ॥
ಅಥ ತಾಭಿಃ ಕೃತಾನ್ ಜ್ಞಾತ್ವಾ ಪ್ರಾಸಾದಾನ್ಯಾದವೈಃ ಪೃಥಕ್ ।
ತತೋ ಗೋಪ್ಯೋಽಪಿ ತಾಃ ಸರ್ವಾಃ ಸಹಸ್ರಾಣಿ ತು ಷೋಡಶ ।
ಕೃಷ್ಣಮಾಜ್ಞಾಪ್ಯ ಭಾವೇನ ಸ್ಥಾಪಯಾಂಚಕ್ರಿರೇ ರವಿಂ ॥ ೧೭ ॥
ಋಷಿಭಿರ್ನಾರದಾದ್ಯೈಸ್ತಾಸ್ತಥಾ ಕ್ಷೇತ್ರನಿವಾಸಿಭಿಃ ।
ತಂ ಪ್ರತಿಷ್ಠಾಪಯಾಮಾಸುಃ ಪ್ರತಿಷ್ಠಾವಿಧಿನಾ ರವಿಂ ॥ ೧೮ ॥

ಶುಭದಾ, ಶೋಭನಾ, ಪುಣ್ಯಾ ಎಂಬ ಹದಿನೈದು ಜನರು ಹಂಸ ನಾಮಕನಾದ ಶ್ರೀ ಕೃಷ್ಣನ ಕಲೆಗಳು.

೧೩. ದೇವಿ! ಈ ಹದಿನೈದು ಜನರು ಆ ಕೃಷ್ಣನ ಶಕ್ತಿಗಳು. ಆದುದರಿಂದ ಅವನು ಚಂದ್ರರೂಪನೂ, ಈ ಗೋಪಿಯರು ಕಲಾರೂಪರೂ ಆಗಿರುವರು.

೧೪. ಅವರಲ್ಲಿ ಸಂಪೂರ್ಣ ಮಂಡಲವುಳ್ಳ ಮಾಲಿನಿಯು ಹದಿನಾರನೆಯ ಕಲೆಯು. ಚಂದ್ರನು ಪಾಡ್ಯವನ್ನಾರಂಭಿಸಿ ಹುಣ್ಣಿಮೆಯವರೆಗೂ ಈ ಕಲೆಗಳಲ್ಲಿ ಸಂಚರಿಸುತ್ತಾನೆ.

೧೫. ಗೋಪೀರೂಪವಾದ ಈ ಹದಿನಾರು ಕಲೆಗಳಲ್ಲಿ ಒಂದೊಂದು ಕಲೆಯೂ ಪ್ರತ್ಯೇಕವಾಗಿ ಸಾವಿರ ಪ್ರಕಾರವಾಗಿರುವುದು.

೧೬. ದೇವಿ! ಹೀಗೆ ನಿನಗೆ ಜ್ಞಾನರಹಸ್ಯವನ್ನು ಹೇಳಿರುವೆನು. ಇದನ್ನರಿತ ಮನುಷ್ಯನು ವೈಷ್ಣವನೆಂದು ತಿಳಿಯಬೇಕು.

೧೭–೧೮. ಬಳಿಕ ಹದಿನಾರು ಸಾವಿರ ಮಂದಿ ಗೋಪಿಯರು ಯಾದವರು ನಿರ್ಮಿಸಿರುವ ಅರಮನೆಗಳನ್ನು ಕಂಡು ತಾವೂ ಕೃಷ್ಣನ ಅನುಮತಿಯನ್ನು ಪಡೆದು ನಾರದಾದಿ ಮುನಿಗಳಿಂದಲೂ, ಕ್ಷೇತ್ರವಾಸಿಗಳಿಂದಲೂ, ಶಾಸ್ತ್ರೋಕ್ತ ವಿಧಿಯಂತೆ ಸೂರ್ಯನನ್ನು ಪ್ರತಿಷ್ಠೆ ಮಾಡಿಸಿದರು.

ಪ್ರತಿಷ್ಠಿತೇ ತತಃ ಸೂರ್ಯೇ ದದುರ್ದಾನಾನಿ ಭೂರಿಶಃ ।
ತತಃ ಕ್ಷೇತ್ರನಿವಾಸಿಭ್ಯೋ ಗೋಭೂಹೇಮಾಂಬರಾಣಿ ಚ ॥ ೧೯ ॥
ತತ್ರ ತೇ ಋಷಯಃ ಸರ್ವೇ ಸಂತುಷ್ಟಾ ಹೃಷ್ಟಮಾನಸಾಃ ।
ಚಕ್ರುರ್ನಾಮ ರವೇಸ್ತತ್ರ ಗೋಪ್ಯಾದಿತ್ಯೇತಿ ವಿಶ್ರುತಂ ।
ಸರ್ವಪಾಪಹರಂ ದೇವಂ ಮಹಾಸೌಭಾಗ್ಯದಾಯಕಂ ॥ ೨೦ ॥
ಏವಂ ಕೃತೇ ಕೃತಾರ್ಥಾಸ್ತಾಃ ಸಂಪ್ರಾಪ್ಯಾತಿಮಹದ್ಯಶಃ ।
ಜಗ್ಮುರ್ಯಥಾಗತಂ ಸರ್ವಾ ದ್ವಾರಕಾಂ ಕೃಷ್ಣಸಂಯುತಾಃ ॥ ೨೧ ॥
ಪುನಃ ಕಾಲಾಂತರೇ ದೇವಿ ಶಾಪಾದ್ದುರ್ವಾಸಸಃ ಪ್ರಿಯೇ ।
ಯಾದವಸ್ಥಲತಾಂ ಪ್ರಾಪ್ತಾಃ ಪ್ರಭಾಸೇ ಪಾಪನಾಶನೇ ॥ ೨೨ ॥
ಏವಂ ತೇ ಕಥಿತೋ ದೇವಿ ಗೋಪ್ಯಾದಿತ್ಯಸಮುದ್ಭವಃ ।
ಮಾಹಾತ್ಮ್ಯಂ ತಸ್ಯ ತೇ ವಚ್ಮಿ ಪೂಜಾವಂದನಜಂ ಕ್ರಮಾತ್ ॥ ೨೩ ॥
ಅಸ್ಮಿನ್ನಿತ್ರವನೇ ದೇವಿ ಯೋ ಗೋಪೀಭಿಃ ಪ್ರತಿಷ್ಠಿತಃ ।
ತಸ್ಯ ದರ್ಶನಮಾತ್ರೇಣ ದುಃಖಶೋಕೈಃ ಪ್ರಮುಚ್ಯತೇ ॥ ೨೪ ॥

---

೧೯. ಸೂರ್ಯನನ್ನು ಪ್ರತಿಷ್ಠೆಮಾಡಿದ ತರುವಾಯ ಅವರು ಆ ಕ್ಷೇತ್ರವಾಸಿಗಳಿಗೆ ಗೋವು, ಭೂಮಿ, ವಸ್ತ್ರ ಮೊದಲಾದ ಅನೇಕ ದಾನಗಳನ್ನಿತ್ತರು.

೨೦. ಬಳಿಕ ಆ ಮುನಿಗಳು ಸಂತುಷ್ಟರಾಗಿ ಸೂರ್ಯನಿಗೆ ಪ್ರಸಿದ್ಧವೂ, ಸಕಲ ಪಾಪವನ್ನು ಪರಿಹರಿಸುವುದೂ, ಅತಿಶಯ ಸೌಭಾಗ್ಯವನ್ನೀಯುವುದೂ, ಆದ ಗೋಪ್ಯಾದಿತ್ಯನೆಂಬ ಹೆಸರನ್ನಿಟ್ಟರು.

೨೧. ಅವರು ಹೀಗೆ ಕೃತಾರ್ಥರಾಗಿ ಮಹಾ ಯಶಸ್ಸನ್ನು ಪಡೆದು ಕೃಷ್ಣನೊಡನೆ ದ್ವಾರಕೆಗೆ ಹೋದರು.

೨೨. ದೇವಿ! ಮರಳಿ ಆ ಗೋಪಾಂಗನೆಯರು ದುರ್ವಾಸ ಮುನಿಯ ಶಾಪದಿಂದ ಕಾಲಾಂತರದಲ್ಲಿ ಪ್ರಭಾಸದಲ್ಲಿರುವ ಯಾದವ ಸ್ಥಳವನ್ನು ಹೊಂದಿದರು.

೨೩. ಹೀಗೆ ನಿನಗೆ ಗೋಪ್ಯಾದಿತ್ಯನ ಉತ್ಪತ್ತಿಯನ್ನು ಹೇಳಿರುವೆನು. ಈಗ ಅವನ ಪೂಜೆ, ನಮಸ್ಕಾರಗಳಿಂದುಂಟಾದ ಮಾಹಾತ್ಮ್ಯವನ್ನು ಕ್ರಮವಾಗಿ ನಿನಗೆ ಹೇಳುವೆನು.

೨೪. ಈ ರವಿವನದಲ್ಲಿ ಗೋಪಿಯರು ಪ್ರತಿಷ್ಠಿಸಿರುವ ಆದಿತ್ಯನ ದರ್ಶನಮಾತ್ರದಿಂದ ಮಾನವನು ದುಃಖಮುಕ್ತನಾಗುವನು.

ಸುತಪ್ತೇನೇಹ ತಪಸಾ ಯಜ್ಞೈರ್ವಾ ಬಹುದಕ್ಷಿಣೈಃ ।
ತಾಂ ಗತಿಂ ತೇ ನರಾ ಯಾಂತಿ ಯೇ ಗೋಪೀರವಿಮಾಶ್ರಿತಾಃ ॥ ೨೫ ॥
ಯೇನ ಸರ್ವಾತ್ಮನಾ ಭಾವೋ ಗೋಪ್ಯಾದಿತ್ಯೇ ನಿವೇಶಿತಃ ।
ಮಹೇಶ್ವರಿ ಕೃತಾರ್ಥತ್ವಾತ್ಸ ಶ್ಲಾಘ್ಯೋ ಧನ್ಯ ಏವ ಸಃ ॥ ೨೬ ॥
ಅಪಿ ನಃ ಸ ಕುಲೇ ಧನ್ಯೋ ಜಾಯತೇ ಕುಲಪಾವನಃ ।
ಭಾಗ್ಯವಾನ್ ಭಕ್ತಿಭಾವೇನ ಯೇನ ಭಾನುರುಪಾಸಿತಃ ॥ ೨೭ ॥
ಸಪ್ತಮ್ಯಾಂ ಪೂಜಯೇದ್ಯಸ್ತು ಮಾಘೇ ಮಾಸ್ಯುಷಸಿ ಪ್ರಿಯೇ ।
ಸಪ್ತಾವರಾನ್ಸಪ್ತ ಪೂರ್ವಾನ್ಪಿತೄನ್ಸೋಽಪ್ಯುದ್ಧರೇನ್ನರಃ ॥ ೨೮ ॥
ಭಿನತ್ತಿ ರೋಗಾನ್ ದುಶ್ಚೇಷ್ಟಾನ್ದುರ್ಜಯಾನ್ ಜಯತಿ ಹ್ಯರೀನ್ ॥ ೨೯ ॥
ನ ಸಪ್ತಮ್ಯಾಂ ಸ್ಪೃಶೇತ್ತೈಲಂ ನೀಲವಸ್ತ್ರಂ ನ ಧಾರಯೇತ್ ।
ನ ಚಾಪ್ಯಾಮಲಕೈಃ ಸ್ನಾನಂ ನ ಕುರ್ಯಾತ್ಕಲಹಂ ಕ್ವಚಿತ್ ॥ ೩೦ ॥
ನೀಲರಕ್ತೇನ ವಸ್ತ್ರೇಣ ಯತ್ಕರ್ಮ ಕುರುತೇ ದ್ವಿಜಃ ।
ಸ್ನಾನಂ ದಾನಂ ಜಪೋ ಹೋಮಃ ಸ್ವಾಧ್ಯಾಯಃ ಪಿತೃತರ್ಪಣಂ ।
ವೃಥಾ ತಸ್ಯ ಮಹಾಯಜ್ಞಾ ನೀಲಸೂತ್ರಸ್ಯ ಧಾರಣಾತ್ ॥ ೩೧ ॥

---

೨೫. ಈ ಗೋಪ್ಯಾದಿತ್ಯನನ್ನು ಆಶ್ರಯಿಸಿದ ಮಾನವರು ತಪಸ್ಸು, ಬಹಳ ದಕ್ಷಿಣೆಯುಳ್ಳ ಯಜ್ಞ ಇವುಗಳಿಂದ ಲಭಿಸುವ ಗತಿಯನ್ನು ಪಡೆಯುವರು.

೨೬. ಗೋಪ್ಯಾದಿತ್ಯನಲ್ಲಿ ಸರ್ವವಿಧದಿಂದ ಮನಸ್ಸನ್ನಿಟ್ಟವನು ಧನ್ಯನಾಗುವುದರಿಂದ ಶ್ಲಾಘ್ಯನಾಗುವನು.

೨೭. ಭಕ್ತಿಯಿಂದ ಗೋಪ್ಯಾದಿತ್ಯನನ್ನು ಸೇವಿಸಿದವನು ನಮ್ಮ ವಂಶದಲ್ಲಿ ಪವಿತ್ರನಾಗಿಯೂ, ಪುಣ್ಯವಂತನಾಗಿಯೂ ಜನಿಸುವನು.

೨೮-೨೯. ಮಾಘಮಾಸದ ಸಪ್ತಮೀದಿನ ಉಷಃಕಾಲದಲ್ಲಿ ಗೋಪ್ಯಾದಿತ್ಯನನ್ನು ಪೂಜಿಸಿದವನು ಹಿಂದಿನ ಮತ್ತು ಮುಂದಿನ ಏಳು ತಲೆಯ ಪಿತೃಗಳನ್ನು ಉದ್ಧರಿಸುವನು. ಮತ್ತು ದುಶ್ಚೇಷ್ಟೆಯ ರೋಗಗಳನ್ನೂ, ಜಯಿಸಲಾಗದ ಶತ್ರುಗಳನ್ನೂ ನಿವಾರಿಸುವನು.

೩೦. ಆ ದಿನ ಎಳ್ಳೆಣ್ಣೆಯನ್ನು ಮುಟ್ಟಕೂಡದು. ನೀಲವಸ್ತ್ರವನ್ನುಡಬಾರದು. ನೆಲ್ಲಿಹಿಂಡಿಯಿಂದ ಸ್ನಾನಮಾಡಬಾರದು. ಯಾವೊಂದು ವಿಷಯದಲ್ಲಿಯೂ ಜಗಳವಾಡಬಾರದು.

೩೧. ಬ್ರಾಹ್ಮಣನು ನೀಲವಸ್ತ್ರವನ್ನುಟ್ಟುಮಾಡಿದ ಸ್ನಾನ, ದಾನ, ಜಪ, ಹೋಮ, ವೇದಾಧ್ಯಯನ, ಪಿತೃತರ್ಪಣ ಇವುಗಳೂ, ಮಹಾಯಜ್ಞಗಳೂ ನಿಷ್ಫಲವಾಗುವುವು.

ನೀಲರಕ್ತಂ ಯದಾ ವಸ್ತ್ರಂ ವಿಪ್ರಸ್ತ್ವಂಗೇಷು ಧಾರಯೇತ್ ।
ಅಹೋರಾತ್ರೋಷಿತೋ ಭೂತ್ವಾ ಪಂಚಗವ್ಯೇನ ಶುದ್ಧ್ಯತಿ ॥ ೩೨ ॥
ರೋಮಕೂಪೇ ಯದಾ ಗಚ್ಛೇದ್ರಸಂ ನೀಲಸ್ಯ ಕಸ್ಯಚಿತ್ ।
ಪತಿತಸ್ತು ಭವೇದ್ವಿಪ್ರಸ್ತ್ರಿಭಿಃ ಕೃಚ್ಛ್ರೈರ್ವ್ಯಪೋಹತಿ ॥ ೩೩ ॥
ನೀಲಮಧ್ಯಂ ಯದಾ ಗಚ್ಛೇತ್ತ್ರಮಾದಾದ್ಬ್ರಾಹ್ಮಣಃ ಕ್ವಚಿತ್ ।
ಅಹೋರಾತ್ರೋಷಿತೋ ಭೂತ್ವಾ ಪಂಚಗವ್ಯೇನ ಶುದ್ಧ್ಯತಿ ॥ ೩೪ ॥
ನೀಲದಾರು ಯದಾ ಭಿದ್ಯೇದ್ಬ್ರಾಹ್ಮಣಾನಾಂ ಶರೀರಕೇ ।
ಶೋಣಿತಂ ದೃಶ್ಯತೇ ತತ್ರ ದ್ವಿಜಶ್ಚಾಂದ್ರಾಯಣಂ ಚರೇತ್ ॥ ೩೫ ॥
ಕುರ್ಯಾದಜ್ಞಾನತೋ ಯಸ್ತು ನೀಲಂ ವೈ ದಂತಧಾವನಂ ।
ಕೃತ್ವಾ ಕೃಚ್ಛ್ರದ್ವಯಂ ತಸ್ಯ ಶುದ್ಧಿರುಕ್ತಾ ಮನೀಷಿಭಿಃ ॥ ೩೬ ॥
ಇತ್ಯೇತತ್ಕಥಿತಂ ದೇವಿ ಗೋಪ್ಯಾದಿತ್ಯಮಹೋದಯಂ ।
ಪಾಪಘ್ನಂ ಸರ್ವಜಂತೂನಾಂ ಶ್ರುತಂ ಸರ್ವಾರ್ಥಸಾಧಕಂ ॥ ೩೭ ॥

---

೩೨. ನೀಲವಸ್ತ್ರವನ್ನುಟ್ಟು ದುಷ್ಟನಾದ ಮಾನವನು ಒಂದು ದಿನ ಉಪವಾಸ ಮಾಡಿ ಪಂಚಗವ್ಯವನ್ನು ಪ್ರಾಶನಮಾಡಿದರೆ ಶುದ್ಧನಾಗುವನು.

೩೩. ಯಾವುದಾದರೂ ನೀಲೀರಸವು ರೋಮರಂಧ್ರದಲ್ಲಿ ಒಳಗೆ ಸೇರುವುದರಿಂದ ಪತಿತನಾದ ಬ್ರಾಹ್ಮಣನು ಮೂರು ಕೃಚ್ಛ್ರಗಳನ್ನು ಮಾಡಿದರೆ ಶುದ್ಧನಾಗುವನು.

೩೪. ನೀಲಿಯ ನಡುವೆ ಹೋಗಿ ಪಾತಕಿಯಾದ ಬ್ರಾಹ್ಮಣನು ಒಂದು ದಿನ ಉಪವಾಸಮಾಡಿ ಪಂಚಗವ್ಯವನ್ನು ಪ್ರಾಶನಮಾಡಿದರೆ ಶುದ್ಧನಾಗುವನು.

೩೫. ಬ್ರಾಹ್ಮಣನ ಶರೀರವು ನೀಲಿಕಾಷ್ಠದಿಂದ ಗಾಯಗೊಂಡು ರಕ್ತವು ಸುರಿದರೆ ಅವನು ಚಾಂದ್ರಾಯಣವನ್ನಾಚರಿಸಬೇಕು.

೩೬. ಅಜ್ಞಾನದಿಂದ ನೀಲಕಾಷ್ಠದಿಂದ ದಂತಧಾವನಮಾಡಿಕೊಂಡವನು ಎರಡು ಕೃಚ್ಛ್ರಗಳಿಂದ ಶುದ್ಧನಾಗುವನು.

೩೭. ದೇವಿ! ಹೀಗೆ ಸಕಲ ಪ್ರಾಣಿಗಳ ಪಾಪವನ್ನು ಪರಿಹರಿಸುವುದೂ, ಶ್ರವಣಮಾತ್ರದಿಂದ ಸಕಲೇಷ್ಟಾರ್ಥಗಳನ್ನು ಸಾಧಿಸುವುದೂ ಆದ ಗೋಪ್ಯಾದಿತ್ಯನ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಗವಾಂ ಶತಸಹಸ್ರೈಸ್ತು ದತ್ತೈರ್ಯತ್ಕುರುಜಾಂಗಲೇ ।
ಪುಣ್ಯಂ ಭವತಿ ದೇವೇಶಿ ತದ್ಗೋಪ್ಯಾದಿತ್ಯದರ್ಶನೇ ॥ ೩೮ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೋಪ್ಯಾದಿತ್ಯವರ್ಣನಂ ನಾಮ
ಅಷ್ಟಾದಶೋತ್ತರಶತತಮೋಽಧ್ಯಾಯಃ

---

೩೮. ದೇವೇಶಿ! ಗೋಪ್ಯಾದಿತ್ಯನ ದರ್ಶನದಿಂದ ಕುರುಜಾಂಗಲದಲ್ಲಿ ಒಂದು ಸಹಸ್ರ ಗೋವುಗಳನ್ನು ದಾನಮಾಡಿದ ಪುಣ್ಯವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗೋಪ್ಯಾದಿತ್ಯವರ್ಣನವೆಂಬ
ನೂರಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನವಿಂಶತ್ಯುತ್ತರಶತತಮೋಽಧ್ಯಾಯಃ

ಬಲಾತಿಬಲದೈತ್ಯಘ್ನೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಹಾದೇವೀಂ ಮಹಾಪ್ರಭಾಂ ।
ಬಲಾತಿಬಲದೈತ್ಯಘ್ನೀಂ ನಾಮ್ನೇತಿ ಪ್ರಥಿತಾಂ ಕ್ಷಿತೌ ॥ ೧ ॥
ಅನಾದಿನಿಧನಾಂ ದೇವೀಂ ತತ್ರ ಕ್ಷೇತ್ರೇ ವ್ಯವಸ್ಥಿತಾಂ ।
ಕೋಟಿಭೂತಪರೀವಾರಾಂ ಸರ್ವದೈತ್ಯನಿಬರ್ಹಿಣೀಂ ॥ ೨ ॥

ದೇವ್ಯುವಾಚ :—

ಬಲಾತಿಬಲದೈತ್ಯಘ್ನೀ ಕಥಮುಕ್ತಾ ತ್ವಯಾ ಪ್ರಭೋ ।
ಬಲಾತಿಬಲನಾಮಾನೌ ಕಥಂ ದೈತ್ಯೌ ನಿಪಾತಿತೌ ॥ ೩ ॥
ಕುತ್ರ ತಿಷ್ಠತಿ ಸಾ ದೇವಿ ಕಿಂ ಪ್ರಭಾವಾ ಮಹೇಶ್ವರ ।
ಮಾಹಾತ್ಮ್ಯಮಖಿಲಂ ತಸ್ಯಾಃ ಸರ್ವಂ ವಿಸ್ತರತೋ ವದ ॥ ೪ ॥

ಕನ್ನಡದ ಅನುವಾದ

ಬಲಾತಿಬಲದೈತ್ಯಘ್ನೀಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ಪ್ರಭಾಸಕ್ಷೇತ್ರದಲ್ಲಿ ನೆಲಸಿರುವ ಅತಿಶಯ ಕಾಂತಿಯುಳ್ಳವಳೂ, ಅನಾದಿಯೂ, ಕೋಟಿ ಸಂಖ್ಯೆಯ ಭೂತಗಳಿಂದ ಸಹಿತಳೂ, ಸಕಲ ದೈತ್ಯರನ್ನು ಕೊಲ್ಲುವಳೂ ಆದ ಬಲಾತಿಬಲದೈತ್ಯಘ್ನಿಯೆಂಬ ಮಹಾದೇವಿಯ ಸನ್ನಿಧಿಗೆ ಹೋಗಬೇಕು.

೩. ದೇವಿಯು ಹೇಳುತ್ತಾಳೆ :—ನಾಥ! ಆ ದೇವಿಯನ್ನು ಬಲಾತಿಬಲದೈತ್ಯಘ್ನಿಯೆಂದ ಹೇಗೆ ಹೇಳಿದೆ? ಅವಳು ಬಲಾತಿಬಲ ದೈತ್ಯರನ್ನು ಹೇಗೆ ಕೊಂದಳು?

೪. ಮಹೇಶ್ವರ! ಆ ದೇವಿಯು ಎಲ್ಲಿರುವಳು? ಅವಳ ಮಾಹಾತ್ಮ್ಯವೇನು? ಅವಳ ಮಾಹಾತ್ಮ್ಯವನ್ನೆಲ್ಲ ನನಗೆ ವಿಸ್ತಾರವಾಗಿ ಹೇಳು.

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ಯಾಂ ಶ್ರುತ್ವಾ ಮಾನವೋ ಭಕ್ತ್ಯಾ ಮುಚ್ಯತೇ ಸರ್ವಪಾತಕೈಃ ॥ ೫ ॥
ಆಸೀದ್ರಕ್ತಾಸುರೋ ನಾಮ ಮಹಿಷಸ್ಯ ಸುತೋ ಬಲೀ ।
ಮಹಾಕಾಯೋ ಮಹಾಬಾಹುರ್ಹಿರಣ್ಯಾಕ್ಷ ಇವಾಪರಃ ॥ ೬ ॥
ಬಲಾತಿಬಲನಾಮಾನೌ ತಸ್ಯ ಪುತ್ರೌ ಬಭೂವತುಃ ।
ತೌ ವಿಜಿತ್ಯ ಸುರಾನ್ಸರ್ವಾನ್ ದೇವೇಂದ್ರಾಗ್ನಿಪುರೋಗಮಾನ್ ॥ ೭ ॥
ತ್ರೈಲೋಕ್ಯೇಽಸ್ಮಿನ್ನಿರಾತಂಕೌ ಚಕ್ರತೂ ರಾಜ್ಯಮಂಜಸಾ ।
ತಯೋಃ ಸೇನಾಮುಖೇ ವೀರಾಸ್ತ್ರಯಸ್ತ್ರಿಂಶತ್ಪ್ರಕೀರ್ತಿತಾಃ ॥ ೮ ॥
ರೌದ್ರಾತ್ಮಾನೋ ಮಹಾಯೋಧಾಃ ಸಹಸ್ರಾಕ್ಷೌಹಿಣೀಮುಖಾಃ ।
ಸಿಂಹಸ್ಕಂಧಾ ಮಹಾಕಾಯಾ ದುರಾತ್ಮಾನೋ ಮಹಾಬಲಾಃ ॥ ೯ ॥
ಧೂಮ್ರಾಕ್ಷೋ ಭೀಮದಂಷ್ಟ್ರಶ್ಚ ಕಾಲವಶ್ಯೋ ಮಹಾಹನುಃ ।
ಬ್ರಹ್ಮಘ್ನೋ ಯಜ್ಞಕೋಪಶ್ಚ ಸ್ತ್ರೀಘ್ನಃ ಪಾಪನಿಕೇತನಃ ॥ ೧೦ ॥
ವಿದ್ಯುನ್ಮಾಲೀ ಚ ಬಂಧೂಕಃ ಶಂಕುಕರ್ಣೋ ವಿಭಾವಸುಃ ।
ದೇವಾಂತಕೋ ವಿಕರ್ಮಾ ಚ ದುರ್ಭಿಕ್ಷಃ ಕ್ರೂರ ಏವ ಚ ॥ ೧೧ ॥

---

೫. ಈಶ್ವರನು ಹೇಳುತ್ತಾನೆ:—ದೇವಿ ! ಪಾಪವನ್ನು ನೀಗಿಸುವ ಆ ಕಥೆಯನ್ನು ಹೇಳುವೆನು. ಕೇಳು. ಇದನ್ನು ಭಕ್ತಿಯಿಂದ ಕೇಳಿದ ಮಾನವನು ಸಕಲ ಪಾಪಗಳಿಂದ ಮುಕ್ತನಾಗುವನು.

೬. ಮಹಾಕಾಯನೂ, ಉದ್ದವಾದ ತೋಳುಗಳುಳ್ಳವನೂ, ಹಿರಣ್ಯಾಕ್ಷನಂತಿರುವವನೂ, ಮಹಿಷಾಸುರನ ಮಗನೂ, ಬಲಿಷ್ಠನೂ ಆದ ರಕ್ತಾಸುರನೆಂಬುವನಿದ್ದನು.

೭-೯. ಅವನ ಮಕ್ಕಳಾದ ಬಲಾತಿಬಲರೆಂಬ ದೈತ್ಯರು ದೇವೇಂದ್ರ, ಅಗ್ನಿ ಮೊದಲಾದ ಸಕಲ ದೇವತೆಗಳನ್ನು ಗೆದ್ದು ಮೂರು ಲೋಕದಲ್ಲಿ ನಿರ್ಭಯರಾಗಿ ರಾಜ್ಯಭಾರ ಮಾಡುತ್ತಿದ್ದರು. ಅವರ ಸೇನೆಯಲ್ಲಿ ಭಯಂಕರರೂ, ಸಾವಿರ ಅಕ್ಷೌಹಿಣೀ ಸೈನ್ಯ ಸಹಿತರೂ, ಸಿಂಹದಂತೆ ಹೆಗಲುಳ್ಳವರೂ, ದೊಡ್ಡ ದೇಹವುಳ್ಳವರೂ, ದುಷ್ಟರೂ, ಅತಿ ಬಲಿಷ್ಠರೂ ಆದ ಮೂವತ್ತು ಮೂರು ಮಂದಿ ಸೇನಾಪತಿಗಳಿದ್ದರು,

೧೦-೧೫. ಅವರು ಧೂಮ್ರಾಕ್ಷ, ಭೀಮದಂಷ್ಟ್ರ, ಕಾಲವಶ್ಯ, ಮಹಾಹನು ಬ್ರಹ್ಮಘ್ನ, ಯಜ್ಞಕೋಪ, ಸ್ತ್ರೀಘ್ನ, ಪಾಪನಿಕೇತನ, ವಿದ್ಯುನ್ಮಾಲೀ, ಬಂಧೂಕ, ಶಂಕುಕರ್ಣ, ವಿಭಾವಸು, ದೇವಾಂತಕ, ವಿಕರ್ಮಾ, ದುರ್ಭಿಕ್ಷ, ಕ್ರೂರ, ಹಯಗ್ರೀವ

ಹಯಗ್ರೀವೋಽಶ್ವಕರ್ಣಶ್ಚ ಕೇತುಮಾನ್ವೃಷಭೋ ದ್ವಿಜಃ ।
ಶರಭಃ ಶಲಭೋ ವ್ಯಾಘ್ರೋ ನಿಕುಂಭೋ ಮಣಿಕೋ ಬಕಃ ॥ ೧೨ ॥

ಶೂರ್ಪಕೋ ವಿಕ್ಷರೋ ಮಾಲೀ ಕಾಲೋ ದಂಡಕಕೇರಲಃ ।
ಏತೇ ದೈತ್ಯಾ ಮಹಾಕಾಯಾಸ್ತಯೋಃ ಸೇನಾಧಿಕಾರಿಣಃ ॥ ೧೩ ॥

ಏವಂ ತೈಃ ಪೃಥಿವೀ ವ್ಯಾಪ್ತಾ ಪಂಚಾಶತ್ಕೋಟಿವಿಸ್ತರಾ ।
ಏವಂ ಜ್ಞಾತ್ವಾ ತದಾ ದೇವಾ ಭಯೇನೋದ್ವಿಗ್ನಮಾನಸಾಃ ॥ ೧೪ ॥

ಸರ್ವೈರ್ದೇವರ್ಷಿಭಿಃ ಸಾರ್ಧಂ ಜಗ್ಮುಸ್ತೇ ಹಿಮವದ್ವನಂ ।
ಸ್ತೋತ್ರೇಣಾನೇನ ತಾಂ ದೇವೀಂ ತುಷ್ಟುವುಃ ಪ್ರಯತಾಸ್ತದಾ ॥ ೧೫ ॥

ದೇವಾ ಊಚುಃ :—

ಜಯಾಕ್ಷರೇ ಜಯಾಽನಂತೇ ಜಯಾಽವ್ಯಕ್ತೇ ನಿರಾಮಯೇ ।
ಜಯ ದೇವಿ ಮಹಾಮಾಯೇ ಜಯ ದೇವರ್ಷಿವಂದಿತೇ ॥ ೧೬ ॥

ಜಯ ವಿಶ್ವೇಶ್ವರೇ ಗಂಗೇ ಜಯ ಸರ್ವಾರ್ಥಸಿದ್ಧಿದೇ ।
ಜಯ ಬ್ರಹ್ಮಾಣಿ ಕೌಮಾರಿ ಜಯ ನಾರಾಯಣೀಶ್ವರೀ ॥ ೧೭ ॥

ಜಯ ಬ್ರಹ್ಮಾಣಿ ಚಾಮುಂಡೇ ಜಯೇಂದ್ರಾಣಿ ಮಹೇಶ್ವರಿ ।
ಜಯ ಮಾತರ್ಮಹಾಲಕ್ಷ್ಮಿ ಜಯ ಪಾರ್ವತಿ ಸರ್ವಗೇ ॥ ೧೮ ॥

ಅಶ್ವಕರ್ಣ, ಕೇತುಮಾನ್, ವೃಷಭ, ದ್ವಿಜ, ಶರಭ, ಶಲಭ, ವ್ಯಾಘ್ರ, ನಿಕುಂಭ, ಮಣಿಕ, ಬಕ, ಶೂರ್ಪಕ, ವಿಕ್ಷರ, ಮಾಲೀ, ಕಾಲ, ದಂಡಕ, ಕೇರಲ, ಎಂಬುವರು.

೧೪–೧೫. ಹೀಗೆ ಅವರಿಂದ ಐವತ್ತು ಕೋಟಿ ಗಾವುದಗಳ ವಿಸ್ತೀರ್ಣವಾದ ಭೂಮಿಯು ವ್ಯಾಪ್ತವಾಗಲು ದೇವತೆಗಳು ಭಯಗೊಂಡು ಸಕಲ ದೇವರ್ಷಿಗಳೊಡನೆ ಹಿಮಾಲಯದ ಕಾಡಿಗೆ ಹೋಗಿ ಶುದ್ಧರಾಗಿ ಈ ಸ್ತೋತ್ರದಿಂದ ದೇವಿಯನ್ನು ಸ್ತುತಿಸಿದರು.

೧೬. ದೇವತೆಗಳು ಹೇಳುತ್ತಾರೆ :—ನಾಶರಹಿತಳೂ, ಅವಸಾನವಿಲ್ಲದವಳೂ, ಅವ್ಯಕ್ತಳೂ, ದೋಷವಿಲ್ಲದವಳೂ, ಮಹಾಮಾಯಾರೂಪಳೂ, ದೇವತೆಗಳಿಂದ ವಂದಿತಳೂ ಆದ ದೇವಿ ! ನಿನಗೆ ಜಯವಾಗಲಿ.

೧೭. ಪ್ರಪಂಚದೊಡತಿಯೂ ಸಮಸ್ತೇಷ್ಟಾರ್ಥಸಿದ್ಧಿಯನ್ನೀಯುವವಳೂ, ಬ್ರಹ್ಮನ ರಾಣಿಯೂ, ನಾರಾಯಣಿಯೂ, ಈಶ್ವರಿಯೂ ಆದ ಓ ದೇವಿ! ನಿನಗೆ ಜಯವಾಗಲಿ.

೧೮. ಚಾಮುಂಡಿಯೂ, ಶಚಿಯೂ, ಮಹಾಲಕ್ಷ್ಮಿಯೂ, ಪಾರ್ವತಿಯೂ ಆದ ದೇವಿಯೆ ! ನಿನಗೆ ಜಯವಾಗಲಿ.

ಜಯ ದೇವಿ ಜಗತ್ಸ್ರಷ್ಟ್ರೇ ಜಯೈರಾವತಿ ಭಾರತಿ ।
ಜಯಾನಂತೇ ಜಯ ಜಯೇ ಜಯ ದೇವಿ ಜಲಾವಿಲೇ ॥ ೧೯ ॥
ಜಯೇಶಾನಿ ಶಿವೇ ಶರ್ವೇ ಜಯ ನಿತ್ಯಂ ಜಯಾರ್ಚಿತೇ ।
ಮೋಕ್ಷದೇ ಜಯ ಸರ್ವಜ್ಞೇ ಜಯ ಧರ್ಮಾರ್ಥಕಾಮದೇ ॥ ೨೦ ॥
ಜಯ ಗಾಯತ್ರಿ ಕಲ್ಯಾಣಿ ಜಯ ಸಹ್ಯೇ ವಿಭಾವರಿ ।
ಜಯ ದುರ್ಗೇ ಮಹಾಕಾಲಿ ಶಿವದೂತಿ ಜಯಾಽಜಯೇ ॥ ೨೧ ॥
ಜಯ ಚಂಡೇ ಮಹಾಮುಂಡೇ ಜಯ ನಂದೇ ಶಿವಪ್ರಿಯೇ ।
ಜಯ ಕ್ಷೇಮಂಕರಿ ಶಿವೇ ಜಯ ಕಲ್ಯಾಣಿ ರೇವತಿ ॥ ೨೨ ॥
ಜಯೋಮೇ ಸಿದ್ಧಿಮಾಂಗಲ್ಯೇ ಹರಸಿದ್ಧೇ ನಮೋಽಸ್ತು ತೇ ।
ಜಯಾಪರ್ಣೇ ಜಯಾನಂದೇ ಮಹಿಷಾಸುರಘಾತಿನಿ ॥ ೨೩ ॥
ಜಯ ಮೇಧೇ ವಿಶಾಲಾಕ್ಷಿ ಜಯಾನಂಗೇ ಸರಸ್ವತಿ ।
ಜಯಾಶೇಷಗುಣಾವಾಸೇ ಜಯಾವರ್ತೇ ಸುರಾಂತಕೇ ॥ ೨೪ ॥

---

೧೯. ಜಗತ್ತಿನ ಸೃಷ್ಟಿಕರ್ತಳೂ, ಐರಾವತಿಯೂ, ಭಾರತಿಯೂ, ಅನಂತಳೂ ಆದ ದೇವಿ! ನಿನಗೆ ಜಯವಾಗಲಿ.

೨೦. ಈಶ್ವರನ ರಾಣಿಯೂ, ಜಯನಿಂದ ಪೂಜಿತಳೂ, ಮೋಕ್ಷವನ್ನೀಯುವವಳೂ, ಸಮಸ್ತವನ್ನರಿತವಳೂ, ಧರ್ಮಾರ್ಥಕಾಮಗಳನ್ನು ಕೊಡುವವಳೂ ಆದ ಆ ದೇವಿ ! ನಿನಗೆ ಜಯವಾಗಲಿ.

೨೧. ಗಾಯತ್ರೀರೂಪಳೂ, ಮಂಗಳಕರಳೂ, ರಾತ್ರಿರೂಪಳೂ, ದುರ್ಗೆಯೂ, ಮಹಾಕಾಳಿಯೂ, ಶಿವನ ದೂತಿಯೂ, ಜಯಿಸಲಶಕ್ಯಳೂ ಆದ ದೇವಿ! ನಿನಗೆ ಜಯವಾಗಲಿ.

೨೨. ಕಠಿನಳೂ, ಮಹಾಮುಂಡಳೂ, ಸಂತೋಷಪ್ರದಳೂ, ಕ್ಷೇಮವನ್ನುಂಟು ಮಾಡುವವಳೂ, ರೇವತಿಯೂ ಆದ ಶಿವೆ ! ನಿನಗೆ ಜಯವಾಗಲಿ.

೨೩. ಉಮೆಯೂ, ಮಂಗಳಸಿದ್ಧಿಯನ್ನೀಯುವವಳೂ, ಹರನ ತಪಸ್ಸಿಗೆ ಒಲಿದವಳೂ, ಅಪರ್ಣೆಯೂ, ಆನಂದರೂಪಳೂ, ಮಹಿಷಾಸುರನನ್ನು ಕೊಂದವಳೂ ಆದ ದೇವಿ ! ನಿನಗೆ ಜಯವಾಗಲಿ.

೨೪. ಬುದ್ಧಿರೂಪಳೂ, ವಿಶಾಲ ನಯನಳೂ, ಸರಸ್ವತಿರೂಪಳೂ, ಸಕಲ ಗುಣಗಳಿಗೆ ಆವಾಸಸ್ಥಾನಳೂ, ಸುರಾಂತಕಳೂ, ಆದ ದೇವಿ! ನಿನಗೆ ಜಯವಾಗಲಿ.

ಜಯ ಸಂಕಲ್ಪಸಂಸಿದ್ಧೇ ಜಯ ತ್ರೈಲೋಕ್ಯಸುಂದರಿ ।
ಜಯ ಶುಂಭನಿಶುಂಭಘ್ನೇ ಜಯ ಪದ್ಮೇಽದ್ರಿಸಂಭವೇ ॥ ೨೫ ॥
ಜಯ ಕೌಶಿಕಿ ಕೌಮಾರಿ ಜಯ ವಾರುಣಿ ಕಾಮದೇ ।
ನಮೋ ನಮಸ್ತೇ ಶರ್ವಾಣಿ ಭೂಯೋ ಭೂಯೋ ಜಯಾಂಬಿಕೇ ॥ ೨೬ ॥
ತ್ರಾಹಿ ನಸ್ತ್ರಾಹಿ ನೋ ದೇವಿ ಶರಣ್ಯೇ ಶರಣಾಗತಾನ್ ॥ ೨೭ ॥
ಸೈವಂ ಸ್ತುತಾ ಭಗವತೀ ದೇವೈಃ ಸರ್ವೈರ್ವರಾನನೇ ।
ಆತ್ಮಾನಂ ದರ್ಶಯಾಮಾಸ ಭಾಭಾಸಿತದಿಗಂತರಂ ॥ ೨೮ ॥
ನಮಸ್ಕೃತ್ಯ ತು ತಾಮೂಚುಃ ಸುರಾಸ್ತೇ ಭಯನಾಶಿನೀಂ ।
ಬಲಾತಿಬಲನಾಮಾನೌ ಹತ್ವಾ ದೈತ್ಯೌ ಮಹಾಬಲೌ ।
ತೇಷಾಂ ಚೈವ ಮಹತ್ಸೈನ್ಯಂ ಪಾಹ್ಯತೋ ಮಹತೋ ಭಯಾತ್ ॥ ೨೯ ॥
ತೇಷಾಂ ತದ್ವಚನಂ ಶ್ರುತ್ವಾ ದತ್ವಾ ತೇಭ್ಯೋಽಭಯಂ ತತಃ ।
ಬಭೂವಾದ್ಭುತರೂಪಾ ಸಾ ತ್ರಿನೇತ್ರಾ ಚೇಂದುಶೇಖರಾ ॥ ೩೦ ॥
ಸಿಂಹರೂಢಾ ಮಹಾದೇವಿ ನಾನಾಶಸ್ತ್ರಾಸ್ತ್ರಧಾರಿಣೀ ।
ಸುವಕ್ತ್ರಾ ವಿಂಶತಿಭುಜಾ ಸ್ಫೂರ್ಜದ್ವಿದ್ಯುಲ್ಲತೋಪಮಾ ॥ ೩೧ ॥

---

೨೫. ಸಂಕಲ್ಪವನ್ನು ನೆರವೇರಿಸುವವಳೂ, ಮೂರುಲೋಕಗಳಲ್ಲಿ ಸುಂದರಿಯೂ. ಶುಂಭನಿಶುಂಭರನ್ನು ಕೊಂದವಳೂ, ಹಿಮಾಲಯನಿಂದ ಜನಿಸಿದವಳೂ ಆದ ದೇವಿ ! ನಿನಗೆ ಜಯವಾಗಲಿ.

೨೬. ಕೌಶಿಕಿಯೂ, ಕೌಮಾರಿಯೂ, ವಾರುಣಿಯೂ. ಇಷ್ಟಾರ್ಥವನ್ನೀಯುವವಳೂ, ಶರ್ವನ ರಾಣಿಯೂ ಆದ ಅಂಬಿಕೆ! ನಿನಗೆ ಜಯವಾಗಲಿ

೨೭. ಶರಣಾಗತರನ್ನು ಪೊರೆಯುವ ಓ ಮಹಾದೇವಿ! ಮರೆಹೊಕ್ಕ ನಮ್ಮನ್ನು ಕಾಪಾಡು".

೨೮. ಸಕಲ ದೇವತೆಗಳು ಹೀಗೆ ಸ್ತುತಿಸಲು ಆ ದೇವಿಯು ಪ್ರಕಾಶಗೊಳಿಸಿದ ಸಮಸ್ತ ದಿಕ್ಕುಗಳುಳ್ಳವಳಾಗಿ ಪ್ರತ್ಯಕ್ಷಳಾದಳು.

೨೯. ಆಗ ದೇವತೆಗಳು ಅವಳಿಗೆ ವಂದಿಸಿ ಮಹೇಶ್ವರಿ! ಬಲಾತಿಬಲದೈತ್ಯರನ್ನೂ, ಅವರ ಮಹಾಸೈನ್ಯವನ್ನೂ ಸಂಹರಿಸಿ ನಮ್ಮನ್ನು ಭಯದಿಂದ ಕಾಪಾಡು ಎಂದರು.

೩೦-೩೧. ಅವಳು ಆ ದೇವತೆಗಳ ಮಾತನ್ನು ಕೇಳಿ ಅವರಿಗೆ ಅಭಯವನ್ನಿತ್ತು ತಾನು ಅದ್ಭುತಾಕಾರಳೂ, ಮೂರು ಕಣ್ಣುಗಳುಳ್ಳವಳೂ, ಚಂದ್ರಶೇಖರಳೂ, ಸಿಂಹವನ್ನೇರಿದವಳೂ, ಬಗೆ ಬಗೆಯ ಶಸ್ತ್ರಾಸ್ತ್ರಗಳನ್ನು ಧರಿಸಿದವಳೂ, ಸುಂದರ

ತತೋಂಬಿಕಾ ನಿನಾದೋಚ್ಚೈಃ ಸಾಟ್ಟಹಾಸಂ ಮುಹುರ್ಮುಹುಃ ॥ ೩೨ ॥
ತಸ್ಯಾ ನಾದೇನ ಘೋರೇಣ ಕೃತ್ಸ್ನಮಾಪೂರಿತಂ ನಭಃ ।
ಪ್ರಕಂಪಿತಾಖಿಲಾ ಚೋರ್ವೀ ಸರಿದ್ವಾರಿಧಿಮೇಖಲಾ ॥ ೩೩ ॥
ಶೈಲತುಂಗಸ್ತನೀ ರಮ್ಯಾ ಪ್ರಮದೇವ ಭಯಾತುರಾ ।
ತೇಽಪಿ ತತ್ರಾಸುರಾಃ ಪ್ರಾಪ್ತಾಶ್ಚತುರಂಗಬಲಾನ್ವಿತಾಃ ॥ ೩೪ ॥
ಸಮ್ಯಗ್ವಿದಿತವಿಕ್ರಾಂತಾಃ ಕಾಲಾಂತಕಯಮೋಪಮಾಃ ।
ರಕ್ಷೋದಾನವದೈತ್ಯಾಶ್ಚ ಪಾತಾಲೇ ಯೇಽಪಿ ಸಂಸ್ಥಿತಾಃ ॥ ೩೫ ॥
ತೇ ಸರ್ವ ಏವ ದೈತ್ಯೇಂದ್ರಾಃ ಕೋಟಿಶಃ ಸಮುಪಾಗತಾಃ ।
ತತೋಽಭವನ್ಮಹಾಯುದ್ಧಂ ದೇವ್ಯಾಸ್ತತ್ರಾಸುರೈಃ ಸಹ ॥ ೩೬ ॥
ಬಭೂವ ಸರ್ವಬ್ರಹ್ಮಾಂಡೇ ಹ್ಯಕಾಂಡಕ್ಷಯಕಾರಣಂ ।
ಅಕ್ಷೌಹಿಣೀಸಹಸ್ರಾಣಿ ತ್ರಯಸ್ತ್ರಿಂಶತ್ಸುರೇಶ್ವರಿ ॥ ೩೭ ॥
ಏಕವಿಂಶತ್ಸಹಸ್ರಾಣಿ ಶತಾನ್ಯಷ್ಟಾ ಚ ಸಪ್ತತಿಃ ।
ಸಾನುಗಾನಾಂ ಸಯೋಧಾನಾಂ ರಥಾನಾಂ ವಾತರಂಹಸಾಂ ॥ ೩೮ ॥
ಹತ್ವಾ ಸಾ ಲೀಲಯಾ ದೇವೀ ನಿನ್ಯೇ ಕ್ಷಯಮನಾಕುಲಾ ॥ ೩೯ ॥
ತತೋ ದೇವ್ಯಾ ಹತಾನಾಂ ಚ ದಾನವಾನಾಂ ಮಹೌಜಸಾಂ ।
ಗಜವಾಜಿರಥಾನಾಂ ಚ ಶರೀರೈರಾವೃತಾ ಮಹೀ ॥ ೪೦ ॥

ಮುಖಿಯೂ, ಇಪ್ಪತ್ತು ತೋಳುಗಳುಳ್ಳವಳೂ, ಹೊಳೆಯುವ ಮಿಂಚಿನಂತಿರುವವಳೂ ಆಗಿ ಗಟ್ಟಿಯಾಗಿ ಅಟ್ಟಹಾಸ ಮಾಡಿದಳು.

೩೩–೩೯. ಅವಳ ಘೋರನಾದವು ಆಕಾಶವೆಲ್ಲವನ್ನು ತುಂಬಿತು. ನದಿ ಸಮುದ್ರಗಳ ಒಡ್ಯಾಣವುಳ್ಳದ್ದೂ, ಪರ್ವತಸ್ತನವುಳ್ಳದ್ದೂ, ಆದ ಸಮಗ್ರಭೂಮಿಯು ಭಯಗೊಂಡ ಹೆಂಗಸಿನಂತೆ ನಡುಗಿತು. ಆಗ ಪ್ರಸಿದ್ಧವಾದ ಪರಾಕ್ರಮವುಳ್ಳವರೂ, ಪ್ರಳಯಕಾಲದ ಯಮನಂತಿರುವವರೂ, ಆದ ಪಾತಾಳದಲ್ಲಿರುವ ಸಕಲ ರಾಕ್ಷಸರೂ, ದಾನವರೂ, ದೈತ್ಯರೂ ಚತುರಂಗ ಬಲದೊಡನೆ ಕೋಟಿ ಕೋಟಿಯಾಗಿ ಅಲ್ಲಿಗೆ ಬಂದರು. ಅವರೊಡನೆ ದೇವಿಗೆ ಸಕಲ ಬ್ರಹ್ಮಾಂಡವನ್ನು ಅಕಾಲದಲ್ಲಿ ನಾಶಗೊಳಿಸುವ ಮಹಾಯುದ್ಧವು ನಡೆಯಿತು. ಆ ದೇವಿಯು ಅನಾಯಾಸವಾಗಿ ಮೂವತ್ತುಮೂರು ಸಾವಿರಸೈನ್ಯಗಳನ್ನೂ, ಅನುಯಾಯಿಗಳಿಂದಲೂ, ಭಟರಿಂದಲೂ ಸಹಿತವಾದ ಗಾಳಿಯಂತೆ ವೇಗವುಳ್ಳ ಇಪ್ಪತ್ತೊಂದು ಸಾವಿರದ ಎಂಟನೂರ ಎಪ್ಪತ್ತು ರಥಗಳನ್ನೂ ನಾಶಗೊಳಿಸಿದಳು.

೪೦. ಅನಂತರ ದೇವಿಯು ಕೊಂದ ಅತಿ ವೀರರಾದ ದಾನವರ ದೇಹಗಳಿಂದಲೂ ಆನೆ, ಕುದುರೆ, ರಥಗಳಿಂದಲೂ ಭೂಮಿಯು ಮುಚ್ಚಲ್ಪಟ್ಟಿತು.

ಕಬಂಧನೃತ್ಯಸಂಕುಲೇ ಸ್ರವದ್ವಸಾಸ್ಥಿಕರ್ದಮೇ ।
ರಣಾಜಿರೇ ನಿಶಾಚರಾಸ್ತತೋ ವಿಚೇರುರೂರ್ಜಿತಾಃ ॥ ೪೧ ॥
ಶೃಗಾಲಗೃಧ್ರವಾಯಸಾಃ ಪರಂ ಪ್ರಮೋದಮಾದಧುಃ ।
ಕ್ವಚಿತ್ಪರೇ ನಿಶಾಚರಾಃ ಪ್ರಪೀತಶೋಣಿತೋತ್ಕಟಾಃ ॥
ಪ್ರತರ್ಪ್ಯ ಚಾತ್ಮನಃ ಪಿತೄನ್ಸಮರ್ಚಯಂಸ್ತಥಾ ಋಷೀನ್ ॥ ೪೨ ॥
ಗಜಾನ್ನರಾಂಸ್ತುರಂಗಮಾನ್ ಬಭಕ್ಷಿರೇ ಸುನಿರ್ಘೃಣಾಃ ।
ರಥೋಡುಪೈಸ್ತಥಾ ಪರೇ ತರಂತಿ ಶೋಣಿತಾರ್ಣವಂ ॥ ೪೩ ॥
ಇತಿ ಪ್ರಗಾಢಸಂಗರೇ ಸುರಾರಿಸಂಘಸಂಕುಲೇ ।
ವಿರಾಜತೇಽಂಬಿಕಾ ಧನುಃ ಶರಾಸಿಶೂಲಧಾರಿಣೀ ॥ ೪೪ ॥
ಗಜೇಂದ್ರದರ್ಪಮರ್ದಿನೀ ತುರಂಗಯೂಥಪ್ರೋಥಿನೀ ।
ಸುರಾರಿಸೈನ್ಯನಾಶಿನೀ ಇತಸ್ತತಃ ಪ್ರಪಶ್ಯತೀ ॥ ೪೫ ॥
ಸಿಂಹಾಷ್ಟಕಯುಕ್ತೇ ಮಹಾಶ್ವೇತಕೇ ಭೂಧರಹಂಸಶುಭ್ರೋಜ್ಜ್ವಲ
ದ್ಭಾಸ್ವರಾಭೇ ವೃಷಭಸಮಾನೇ ಮಾನಿನೀಮಥೋ ತೇ
ವೀರಾಃ ಪಶ್ಯಂತಃ ಸಮುದ್ಭೂತರೋಷಾಸ್ತತೋಽಪಿದೈತ್ಯೇಂದ್ರ
ಜಗ್ಮುರ್ನದಂತೋ ರವಂತೋ ರವಂ ಮೇಘನಾದಾಃ ॥ ೪೬ ॥

---

೪೧. ಬಲಶಾಲಿಗಳಾದ ರಾಕ್ಷಸರು ಕುಣಿಯುತ್ತಿರುವ ಮುಂಡಗಳುಳ್ಳದೂ, ರಕ್ತ ಸುರಿಯುತ್ತಿರುವ ಕೊಬ್ಬು, ಮೂಳೆಗಳಿಂದ ಕೆಸರಾದುದೂ ಆಗಿರುವ ಯುದ್ಧಾಂಗಣದಲ್ಲಿ ಸಂಚರಿಸಿದರು.

೪೨. ನರಿ, ಹದ್ದು ಕಾಗೆಗಳು ಹೆಣಗಳ ಮೇಲೆ ಬಂದು ಕೂತುವು. ಕೆಲವೆಡೆಯಲ್ಲಿ ಇತರ ರಾಕ್ಷಸರು ರಕ್ತವನ್ನು ಕುಡಿದು ತಮ್ಮ ಪಿತೃಗಳಿಗೆ ತರ್ಪಣಮಾಡಿ ಋಷಿಗಳನ್ನು ಪೂಜಿಸಿದರು.

೪೩. ಇತರ ರಾಕ್ಷಸರು ದಯೆಯಿಲ್ಲದೆ ಆನೆ, ಕುದುರೆ ಮನುಷ್ಯರನ್ನು ಭಕ್ಷಿಸಿ ರಥವೆಂಬ ದೋಣಿಗಳಿಂದ ರಕ್ತಸಮುದ್ರವನ್ನು ದಾಟಿದರು.

೪೪–೪೫. ಹೀಗೆ ದಾನವರ ಗುಂಪುಳ್ಳ ಘೋರ ಯುದ್ಧದಲ್ಲಿ ಬಿಲ್ಲು, ಬಾಣ, ಕತ್ತಿ, ಶೂಲವನ್ನು ಧರಿಸಿದವಳೂ, ಆನೆಗಳ ಅಹಂಕಾರವನ್ನು ನಾಶಗೊಳಿಸಿದವಳೂ, ಕುದುರೆಗಳ ಹಿಂಡುಗಳನ್ನು ಕೊಂದವಳೂ ಆದ ದೇವಿಯು ಈಕಡೆ ಆಕಡೆ ನೋಡುತ್ತ ದಾನವ ಸೈನ್ಯವನ್ನು ಸಂಹರಿಸುತ್ತ ವಿರಾಜಿಸಿದಳು.

೪೬. ಬಳಿಕ ದಾನವರು ಎಂಟು ಸಿಂಹಗಳುಳ್ಳದೂ, ಮಹಾಶ್ವೇತ, ಹಂಸಗಳಂತೆ ಬೆಳ್ಳಗಿರುವುದೂ, ಪ್ರಕಾಶಿಸುವ ಸೂರ್ಯನಂತೆ ಕಾಂತಿಯುಳ್ಳದೂ, ವೃಷಭದಂತಿರುವುದೂ ಆದ ಆಸನದಲ್ಲಿ ಕುಳಿತಿರುವ ದೇವಿಯನ್ನು ನೋಡುತ್ತ ಕುಪಿತರಾಗಿ ಅಲ್ಲಿಂದ ಮೇಘದಂತೆ ಗರ್ಜಿಸುತ್ತ ಹೊರಟುಹೋದರು.

ಹಾಹಾಕಾರಂ ವಿಕುರ್ವಾಣಾ ಹನ್ಯಮಾನಾಸ್ತತೋಽಸುರಾಃ ।
ಕೇಚಿತ್ಸಮುದ್ರಂ ವಿವಿಶುರದ್ರೀನ್ ಕೇಚಿಚ್ಚ ದಾನವಾಃ ॥ ೪೭ ॥
ಕೇಚಿಲ್ಲುಂಚಿತಮೂರ್ಧಾನೋ ಜಾಲ್ಮಾ ಭೂತ್ವಾ ವನೇಽವಸನ್ ।
ದಯಾಧರ್ಮಂ ಬ್ರುವಾಣಾಶ್ಚ ನಿರ್ಗ್ರಂಥವ್ರತಮಾಸ್ಥಿತಾಃ ॥ ೪೮ ॥
ಕೇಚಿತ್ಪ್ರಾಣಪರಾ ಭೀತಾಃ ಪಾಖಂಡಾಶ್ರಮಮಾಸ್ಥಿತಾಃ ।
ಹೇತುವಾದಪರಾ ಮೂಢಾ ನಿಃಶೌಚಾ ನಿರಪೇಕ್ಷಕಾಃ ॥ ೪೯ ॥
ತೇ ಚಾದ್ಯಾಪೀಹ ದೃಶ್ಯಂತೇ ಲೋಕೇ ಕ್ಷಪಣಕಾಃ ಕಿಲ ।
ತಥೈವ ಭಿಂದಕಾಶ್ಚಾನ್ಯೇ ಶಿವಶಾಸ್ತ್ರಬಹಿಷ್ಕೃತಾಃ ॥ ೫೦ ॥
ಕೇಚಿತ್ಕೌಲವ್ರತಾ ಹ್ಯಸ್ಮಿನ್ ದೃಶ್ಯಂತೇ ಸಕಲೈರ್ಜನೈಃ ।
ಸುರಾಸ್ತ್ರೀಮಾಂಸಭೂಯಿಷ್ಠಾ ವಿಕರ್ಮಸ್ಥಾಶ್ಚ ಲಿಂಗಿನಃ ॥ ೫೧ ॥
ಪ್ರಾಯೋ ನೈಷ್ಕೃತಿಕಾಃ ಪಾಪಾ ಜಿಹ್ವೋಪಸ್ಥಪರಾಯಣಾಃ ।
ಏವಂ ದೇವ್ಯಾ ಹತಾಃ ಸರ್ವೇ ಬಲಾತಿಬಲಸಂಯುತಾಃ ॥ ೫೨ ॥
ಪ್ರಭಾಸಂ ಕ್ಷೇತ್ರಮಾಸಾದ್ಯ ಸಂಸ್ಥಿತಾ ಸಾ ತದಾಂಬಿಕಾ ।
ಯೋಗಿನೀನಾಂ ಚತುಃಷಷ್ಟ್ಯಾ ಸಂಯುತಾ ಪಾಪನಾಶಿನೀ ।
ಬಲಾತಿಬಲನಾಶೀತಿ ಪ್ರಭಾಸೇ ಪ್ರಥಿತಾ ಕ್ಷಿತೌ ॥ ೫೩ ॥

---

೪೭. ಕೆಲವು ದಾನವರು ಅವಳಿಂದ ಕೊಲ್ಲಲ್ಪಡುವವರಾಗಿ ಹಾಹಾಕಾರ ಮಾಡುತ್ತ ಸಮುದ್ರವನ್ನು ಹೊಕ್ಕರು. ಕೆಲವರು ಬೆಟ್ಟಗಳಲ್ಲಿ ಅವಿತುಕೊಂಡರು.

೪೮. ಇನ್ನು ಕೆಲವು ಮೂರ್ಖರು ತಲೆಗೂದಲುಗಳನ್ನು ಕತ್ತರಿಸಿಕೊಂಡು ಬೌದ್ಧಧರ್ಮವನ್ನವಲಂಬಿಸಿ ದಯೆಮಾಡುವುದೇ ಧರ್ಮವೆಂದು ಹೇಳುತ್ತ ಕಾಡಿನಲ್ಲಿ ವಾಸಿಸಿದರು.

೪೯. ಕೆಲವರು ಪ್ರಾಣರಕ್ಷಣೆಯಲ್ಲಿ ನಿರತರಾಗಿ ಭಯದಿಂದ ಹೇತುವಾದಪರರೂ, ಮೂಢರೂ, ಶೌಚವಿಲ್ಲದವರೂ ಆಗಿ ಪಾಖಂಡಾಶ್ರಮವನ್ನು ಹೊಂದಿದರು.

೫೦. ಅವರು ಈಗಲೂ ಲೋಕದಲ್ಲಿ ಬೌದ್ಧಸನ್ಯಾಸಿಗಳಾಗಿರುವರು. ಮತ್ತೆ ಕೆಲವರು ಶಿವಶಾಸ್ತ್ರಗಳಿಂದ ಬಹಿಷ್ಕೃತರಾಗಿರುವರು.

೫೧. ಕೆಲವರು ಭೂಮಿಯಲ್ಲಿ ನಾಸ್ತಿಕರಾಗಿಯೂ, ಮದ್ಯ, ಸ್ತ್ರೀ, ಮಾಂಸಗಳಲ್ಲಿ ಆಸಕ್ತರಾಗಿಯೂ, ದುಷ್ಕರ್ಮಿಗಳಾಗಿಯೂ ಸಕಲ ಜನರಿಂದ ಕಾಣಲ್ಪಡುವರು.

೫೨-೫೩. ಹೀಗೆ ದೇವಿಯು ಪ್ರಾಯಶ್ಚಿತ್ತವಿಲ್ಲದವರೂ, ಪಾಪಿಗಳೂ, ನಾಲಗೆ, ಗುಹ್ಯೇಂದ್ರಿಯಗಳಲ್ಲಿ ಆಸಕ್ತರೂ, ಆದ ದೈತ್ಯರನ್ನು ಬಲಾತಿಬಲದೈತ್ಯರೊಡನೆ ಕೊಂದು ಪ್ರಭಾಸಕ್ಷೇತ್ರಕ್ಕೆ ಬಂದು ಅರುವತ್ತನಾಲ್ಕು ಮಂದಿ ಯೋಗಿನಿಯರೊಡನೆ ನೆಲೆಸಿ ಬಲಾತಿಬಲನಾಶಿನೀ ಎಂದು ಪ್ರಸಿದ್ಧಳಾದಳು.

ದೇವ್ಯುವಾಚ :—

ಚತುಃಷಷ್ಟಿಸ್ತ್ವಯಾ ಪ್ರೋಕ್ತಾ ಯೋಗಿನ್ಯೋ ಯಾಃ ಸುರೇಶ್ವರ ।
ತಾಸಾಂ ನಾಮಾನಿ ಮೇ ಬ್ರೂಹಿ ಸರ್ವಪಾಪಹರಾಣಿ ಚ ॥ ೫೪ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಯೋಗಿನೀನಾಂ ಮಹೋದಯಂ ।
ಸರ್ವರಕ್ಷಾಕರಂ ದಿವ್ಯಂ ಮಹಾಭಯವಿನಾಶನಂ ॥ ೫೫ ॥
ಆದೌ ತತ್ರ ಮಹಾಲಕ್ಷ್ಮೀರ್ನಂದಾ ಕ್ಷೇಮಂಕರೀ ತಥಾ ।
ಶಿವದೂತೀ ಮಹಾಭದ್ರಾ ಭ್ರಾಮರೀ ಚಂದ್ರಮಂಡಲಾ ॥ ೫೬ ॥
ರೇವತೀ ಹರಸಿದ್ಧಿಶ್ಚ ದುರ್ಗಾ ವಿಷಮಲೋಚನಾ ।
ಸಹಜಾ ಕುಲಜಾ ಕುಬ್ಜಾ ಮಾಯಾವೀ ಶಾಂಭವೀ ಕ್ರಿಯಾ ॥ ೫೭ ॥
ಆದ್ಯಾ ಸರ್ವಗತಾ ಶುದ್ಧಾ ಭಾವಗಮ್ಯಾ ಮನೋತಿಗಾ ।
ವಿದ್ಯಾವಿದ್ಯಾ ಮಹಾಮಾಯಾ ಸುಷುಮ್ನಾ ಸರ್ವಮಂಗಳಾ ॥ ೫೮ ॥
ಓಂಕಾರಾತ್ಮಾ ಮಹಾದೇವಿ ವೇದಾರ್ಥಜನನೀ ಶಿವಾ ।
ಪುರಾಣಾನ್ವೀಕ್ಷಿಕೀ ದೀಕ್ಷಾ ಚಾಮುಂಡಾ ಶಂಕರಪ್ರಿಯಾ ॥ ೫೯ ॥

---

೫೪. ದೇವಿಯು ಹೇಳುತ್ತಾಳೆ :— ಸುರೇಶ್ವರ! ನೀನು ಹೇಳಿದ ಅರುವತ್ತನಾಲ್ಕು ಯೋಗಿನಿಯರ ಸಕಲ ಪಾಪಗಳನ್ನು ಪರಿಹರಿಸುವ ನಾಮಗಳನ್ನು ನನಗೆ ಹೇಳು.

೫೫. ಈಶ್ವರನು ಹೇಳುತ್ತಾನೆ :—ದೇವಿ ! ಆ ಯೋಗಿನಿಯರ ಸಮಸ್ತ ಭಯದಿಂದ ರಕ್ಷಿಸುವುದೂ, ಮಹಾಭಯವನ್ನು ಪರಿಹರಿಸುವುದೂ ಆದ ದಿವ್ಯ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೫೬—೬೯. ಮಹಾಲಕ್ಷ್ಮೀ, ನಂದಾ, ಕ್ಷೇಮಂಕರೀ, ಶಿವದೂತೀ, ಮಹಾಭದ್ರಾ, ಭ್ರಾಮರೀ, ಚಂದ್ರಮಂಡಲಾ, ರೇವತೀ, ಹರಸಿದ್ಧಿ, ದುರ್ಗಾ, ವಿಷಮಲೋಚನಾ, ಸಹಜಾ, ಕುಲಜಾ, ಕುಬ್ಜಾ, ಮಾಯಾವೀ, ಶಾಂಭವೀ, ಕ್ರಿಯಾ, ಆದ್ಯಾ, ಸರ್ವಗತಾ, ಶುದ್ಧಾ, ಭಾವಗಮ್ಯಾ, ಮನೋತಿಗಾ,. ವಿದ್ಯಾ, ಅವಿದ್ಯಾ, ಮಹಾಮಾಯಾ, ಸುಷುಮ್ನಾ, ಸರ್ವಮಂಗಲಾ, ಓಂಕಾರಾತ್ಮಾ, ವೇದಾರ್ಥಜನನೀ, ಶಿವಾ, ಪುರಾಣಾ, ಆನ್ವೀಕ್ಷಿಕೀ, ದೀಕ್ಷಾ, ಚಾಮುಂಡಾ, ಶಂಕರಪ್ರಿಯಾ, ಬ್ರಾಹ್ಮೀ. ಶಾಂತಿಕರೀ, ಗೌರೀ, ಬ್ರಹ್ಮಣ್ಯಾ, ಬ್ರಾಹ್ಮಣಪ್ರಿಯಾ. ಭದ್ರಾ, ಕೃಷ್ಣಾ, ಗ್ರಹನಕ್ಷತ್ರ ಮಾಲಿನೀ, ತ್ರಿಪುರಾ, ತ್ವರಿತಾ, ನಿತ್ಯಾ, ಸಾಂಖ್ಯಾ, ಕುಂಡಲಿನೀ. ಧ್ರುವಾ. ಕಲ್ಯಾಣೀ, ಶೋಭನಾ. ನಿತ್ಯಾ, ನಿಷ್ಕಲಾ, ಪರಮಾ, ಕಲಾ, ಯೋಗಿನೀ, ಯೋಗ ಸದ್ಭಾವಾ, ಯೋಗಗಮ್ಯಾ, ಗುಹಾಶಯಾ. ಕಾತ್ಯಾಯನೀ, ಉಮಾ, ಶರ್ವಾ,

ಬ್ರಾಹ್ಮೀ ಶಾಂತಿಕರೀ ಗೌರೀ ಬ್ರಹ್ಮಣ್ಯಾ ಬ್ರಾಹ್ಮಣಪ್ರಿಯಾ ।
ಭದ್ರಾ ಭಗವತೀ ಕೃಷ್ಣಾ ಗ್ರಹನಕ್ಷತ್ರಮಾಲಿನೀ ॥ ೬೦ ॥
ತ್ರಿಪುರಾ ತ್ವರಿತಾ ನಿತ್ಯಾ ಸಾಂಖ್ಯಾ ಕುಂಡಲಿನೀ ಧ್ರುವಾ ।
ಕಲ್ಯಾಣೀ ಶೋಭನಾ ನಿತ್ಯಾ ನಿಷ್ಕಲಾ ಪರಮಾ ಕಲಾ ॥ ೬೧ ॥
ಯೋಗಿನೀ ಯೋಗಸದ್ಭಾವಾ ಯೋಗಗಮ್ಯಾ ಗುಹಾಶಯಾ ।
ಕಾತ್ಯಾಯನೀ ಉಮಾ ಶರ್ವಾ ಹ್ಯಪರ್ಣೇತಿ ಪ್ರಕೀರ್ತಿತಾ ॥ ೬೨ ॥
ಚತುಃಷಷ್ಟಿರ್ಮಹಾದೇವಿ ಏವಂ ತೇ ಪರಿಕೀರ್ತಿತಾಃ ।
ಸ್ತೋತ್ರೇಣಾನೇನ ದಿವ್ಯೇನ ಭಕ್ತ್ಯಾ ಯಃ ಸ್ತೌತಿ ಚಂಡಿಕಾಂ ॥ ೬೩ ॥
ತಂ ಪುತ್ರಮಿವ ಶರ್ವಾಣೀ ಸರ್ವಾಪತ್ಸ್ವಭಿರಕ್ಷತಿ ।
ಚತುರ್ದಶ್ಯಾಮಥಾಷ್ಟಮ್ಯಾಂ ನವಮ್ಯಾಂ ಚ ವಿಶೇಷತಃ ॥ ೬೪ ॥
ಉಪವಾಸೈಕಭಕ್ತೇನ ತಥೈವಾಯಾಚಿತೇನ ಚ ।
ಗೃಹೀತನಿಯಮಾ ದೇವಿ ಯೇ ಜಪಂತಿ ಚ ಚಂಡಿಕಾಂ ॥ ೬೫ ॥
ವರ್ಷಾರ್ಧಂ ವರ್ಷಮೇಕಂ ವಾ ಸಿದ್ಧಾಸ್ತೇ ತತ್ತ್ವಚಾರಿಣಃ ।
ಆಶ್ವಯುಕ್ಛುಕ್ಲಪಕ್ಷೇ ಚ ಮನ್ವಾದಿಷ್ವಷ್ಟಕಾಸು ಚ ॥ ೬೬ ॥
ಕೃತ್ವಾ ಮಹೋತ್ಸವಂ ದೇವೀಂ ಯಜೇಚ್ಛ್ರೇಯೋಽಭಿವೃದ್ಧಯೇ ।
ಪಾದುಕೇ ಧಾರಯೇದ್ದೇವ್ಯಾ ದುರ್ಗಾಭಕ್ತೋ ಹಿರಣ್ಮಯೇ ॥ ೬೭ ॥
ಪ್ರಮಾದವಿಘ್ನಶಾಂತ್ಯರ್ಥಂ ಕ್ಷುರಿಕಾಂ ಚ ಸದಾ ಪುಮಾನ್ ।
ಪಶುಮಾಂಸಾಸವೈಶ್ಚೈವಮಾಸುರಂ ಭಾವಮಾಶ್ರಿತಾಃ ॥ ೬೮ ॥

ಅಪರ್ಣಾ ಎಂದು ಅರುವತ್ತನಾಲ್ಕು ಯೋಗಿನಿಯರ ನಾಮಗಳಾಗಿರುವುವು. ಈ ದಿವ್ಯಸ್ತೋತ್ರದಿಂದ ಚಂಡಿಕೆಯನ್ನು ಭಕ್ತಿಯಿಂದ ಸ್ತುತಿಸುವವನನ್ನು ಗೌರಿಯು ಸಮಸ್ತಾಪತ್ತುಗಳಲ್ಲಿ ಕಾಪಾಡುವಳು. ದೇವಿ ! ಚತುರ್ದಶೀ, ಅಷ್ಟಮೀ, ನವಮೀ ದಿನಗಳಲ್ಲಿ ನಿಯಮವನ್ನಾಶ್ರಯಿಸಿ ಉಪವಾಸದಿಂದಲೂ, ಏಕಭುಕ್ತದಿಂದಲೂ, ಯಾಚಿಸದೆ ಬಂದ ವಸ್ತುಗಳಿಂದಲೂ ಚಂಡಿಕೆಯನ್ನು (ಚಂಡಿಕಾಮಂತ್ರವನ್ನು) ಆರುತಿಂಗಳು, ಅಥವಾ ಒಂದುವರ್ಷದವರಿಗೆ ಜಪಿಸುವ ಮನುಷ್ಯರು ಸಿದ್ಧರಾಗುವರು. ಆಶ್ವಿನ ಶುಕ್ಲಪಕ್ಷದಲ್ಲಿಯೂ, ಮನ್ವಾದಿಗಳಲ್ಲಿಯೂ, ಅಷ್ಟಕಗಳಲ್ಲಿಯೂ, ಶ್ರೇಯಸ್ಸಿನ ಅಭಿವೃದ್ಧಿಗಾಗಿ ಮಹೋತ್ಸವವನ್ನು ಮಾಡಿ ದೇವಿಯನ್ನು ಪೂಜಿಸಬೇಕು. ದುರ್ಗಾ ಭಕ್ತನು ದೇವಿಯ ಚಿನ್ನದ ಪಾದುಕೆಗಳನ್ನೂ, ಚೂರಿಯನ್ನೂ ಪ್ರಮಾದ, ವಿಘ್ನಗಳ ಶಾಂತಿಗಾಗಿ ಯಾವಾಗಲೂ ಧರಿಸಬೇಕು. ಅಸುರಸ್ವಭಾವವನ್ನಾಶ್ರಯಿಸಿ ಪಶು ಮಾಂಸ, ಹೆಂಡಗಳಿಂದ ದೇವಿಯನ್ನು ಪೂಜಿಸುವವರು ಐಶ್ವರ್ಯವುಳ್ಳ ದೈತ್ಯರಾಗು

ಯೇ ಯಜಂತ್ಯಂಬಿಕಾಂ ತೇ ಸ್ಯುರ್ದೈತ್ಯಾ ಐಶ್ವರ್ಯಭೋಗಿನಃ ।
ದೇವತ್ವಂ ಸಾತ್ತ್ವಿಕಾ ಯಾಂತಿ ಸಾತ್ತ್ವಿಕೀಂ ಭಕ್ತಿಮಾಶ್ರಿತಾಃ ॥ ೬೯ ॥
ಏತತ್ತೇ ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ಬಲಾತಿಬಲನಾಶಿನ್ಯಾ ದೇವ್ಯಾಃ ಸರ್ವಾರ್ಥಸಾಧಕಂ ॥
ಪ್ರಭಾಸಕ್ಷೇತ್ರಸಂಸ್ಥಾಯಾಃ ಸಂಕ್ಷೇಪಾತ್ಕೀರ್ತಿವರ್ಧನಂ ॥ ೭೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬಲಾತಿಬಲದೈತ್ಯಘ್ನೀಮಾಹಾತ್ಮ್ಯವರ್ಣನಂ ನಾಮ
॥ ಏಕೋನವಿಂಶತ್ಯುತ್ತರಶತತಮೋಽಧ್ಯಾಯಃ ॥

ವರು. ಸಾತ್ವಿಕಭಕ್ತಿಯನ್ನಾಶ್ರಯಿಸಿ ದುರ್ಗೆಯನ್ನು ಪೂಜಿಸುವ ಸಾತ್ವಿಕರು ದೇವತ್ವವನ್ನು ಹೊಂದುವರು.

೭೦. ದೇವಿ ! ಪಾಪವನ್ನು ಪರಿಹರಿಸುವುದೂ, ಸಕಲೇಷ್ಟಾರ್ಥಗವನ್ನು ಸಾಧಿಸುವುದೂ, ಕೀರ್ತಿಯನ್ನು ಹೆಚ್ಚಿಸುವುದೂ ಆದ ಪ್ರಭಾಸಕ್ಷೇತ್ರವಾಸಿನಿಯಾದ ಬಲಾತಿಬಲನಾಶಿನಿಯ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬಲಾತಿಬಲದೈತ್ಯಘ್ನೀಮಾಹಾತ್ಮ್ಯವರ್ಣನವೆಂಬ
ನೂರಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ವಿಂಶತ್ಯುತ್ತರಶತತಮೋಽಧ್ಯಾಯಃ

ಗೋಪೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗೋಪೀಶ್ವರಮನುತ್ತಮಂ ।
ಬಲಾತಿಬಲದೈತ್ಯಘ್ನ್ಯಾ ಉತ್ತರೇ ಧನುಷಾಂ ತ್ರಯೇ ॥ ೧ ॥
ಸಂಸ್ಥಿತಂ ಪಾಪಶಮನಂ ಗೋಪೀಭಿಃ ಸಂಪ್ರತಿಷ್ಠಿತಂ ।
ಸಮಾರಾಧ್ಯ ಮಹಾದೇವಂ ಪುತ್ರಹೇತೋರ್ಮಹೇಶ್ವರಂ ॥
ಸರ್ವಕಾಮಪ್ರದಂ ನೃಣಾಂ ಪೂಜಿತಂ ಸಂತತಿಪ್ರದಂ ॥ ೨ ॥
ಚೈತ್ರಶುಕ್ಲತೃತೀಯಾಯಾಂ ಯಸ್ತಂ ಪೂಜಯತೇ ನರಃ ।
ಗಂಧಪುಷ್ಪೋಪಹಾರೈಶ್ಚ ಸ ಪ್ರಾಪ್ನೋತೀಪ್ಸಿತಂ ಫಲಂ ॥ ೩ ॥
ಏವಂ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಪಾಪನಾಶನಂ ।
ಗೋಪೀಶ್ವರಸ್ಯ ದೇವಸ್ಯ ಪ್ರಭಾಸಕ್ಷೇತ್ರವಾಸಿನಃ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೋಪೀಶ್ವರಮಾಹಾತ್ಮ್ಯವರ್ಣನಂ ನಾಮ
॥ ವಿಂಶತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಗೋಪೀಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಬಲಾತಿಬಲದೈತ್ಯಘ್ನಿಯ ಉತ್ತರದಲ್ಲಿ ಮೂರುಬಿಲ್ಲುಗಳ ದೂರದಲ್ಲಿ ಗೋಪಿಯರು ಸಂತತಿಗಾಗಿ ಮಹೇಶ್ವರನನ್ನಾರಾಧಿಸಿ ಪ್ರತಿಷ್ಠೆಮಾಡಿರುವುದೂ, ಪೂಜಿಸಿದ ಮನುಷ್ಯರಿಗೆ ಇಷ್ಟಾರ್ಥವನ್ನೂ, ಸಂತತಿಯನ್ನೂ ಕೊಡುವುದೂ ಆದ ಗೋಪೀಶ್ವರಲಿಂಗದೆಡೆಗೆ ಹೋಗಬೇಕು.

೩. ಚೈತ್ರಶುಕ್ಲತೃತೀಯಾದಿನ ಗಂಧ, ಪುಷ್ಪ, ಕಾಣಿಕೆಗಳಿಂದ ಆ ಗೋಪೀಶ್ವರನನ್ನು ಪೂಜಿಸಿದ ಮನುಷ್ಯನು ಇಷ್ಟಾರ್ಥವನ್ನು ಪಡೆಯುವನು.

೪. ಹೀಗೆ ಪಾಪವನ್ನು ನೀಗಿಸುವ ಪ್ರಭಾಸಕ್ಷೇತ್ರವಾಸಿಯಾದ ಗೋಪೀಶ್ವರನ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗೋಪೀಶ್ವರಮಾಹಾತ್ಮ್ಯವರ್ಣನವೆಂಬ
ನೂರಿಇಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕವಿಂಶತ್ಯುತ್ತರಶತತಮೋಽಧ್ಯಾಯಃ

ಜಾಮದಗ್ನ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ರಾಮೇಶ್ವರಮನುತ್ತಮಂ ।
ಜಾಮದಗ್ನ್ಯೇನ ರಾಮೇಣ ಸ್ವಯಂ ತತ್ರ ಪ್ರತಿಷ್ಠಿತಂ ॥ ೧ ॥
ಗೋಪೀಶ್ವರಾಚ್ಚ ವಾಯವ್ಯೇ ಧನುಷಾಂ ತ್ರಿಂಶಕೇಂತರೇ ।
ಸ್ಥಿತಂ ಮಹಾಪ್ರಭಾವಂ ಹಿ ಲಿಂಗಂ ಪಾತಕನಾಶನಂ ॥ ೨ ॥
ಯದಾ ರಾಮೇಣ ದೇವೇಶಿ ಜಮದಗ್ನಿಸುತೇನ ವೈ ।
ಕೃತೋ ಮಾತೃವಧೋ ಘೋರಃ ಪಿತುರಾಜ್ಞಾನುವರ್ತಿನಾ ॥ ೩ ॥
ತದಾ ಮನಸಿ ಸಂತಾಪಂ ಕೃತ್ವಾ ನಿರ್ವೇದಮಾಗತಃ ।
ತತಃ ಪ್ರಸನ್ನತಾಂ ಯಾತೋ ಜಮದಗ್ನಿರ್ಮಹಾತಪಾಃ ॥ ೪ ॥
ದದೌ ವರಂ ತತಸ್ತುಷ್ಟೋ ರೇಣುಕಾಯಾಶ್ಚ ಜೀವಿತಂ ।
ಏವಂ ಯದ್ಯಪಿ ಸಾ ತತ್ರ ಜೀವಿತಾ ವರವರ್ಣಿನೀ ॥ ೫ ॥

ಕನ್ನಡದ ಅನುವಾದ

ಜಾಮದಗ್ನ್ಯೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಗೋಪೀಶ್ವರನಿಗೆ ವಾಯವ್ಯದಿಕ್ಕಿನಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿರುವುದೂ ಅತಿಶಯವಾದ ಮಾಹಾತ್ಮ್ಯವುಳ್ಳುದೂ, ಪಾತಕಗಳನ್ನು ನೀಗಿಸುವುದೂ ಆದ ಜಮದಗ್ನಿಯಮಗನಾದ ಪರಶುರಾಮನು ಪ್ರತಿಷ್ಠೆಮಾಡಿರುವ ರಾಮೇಶ್ವರಲಿಂಗದೆಡೆಗೆ ಹೋಗಬೇಕು.

೩–೧೧. ದೇವೇಶಿ ! ಪರಶುರಾಮನು ತಂದೆಯ ಅಪ್ಪಣೆಯಂತೆ ತಾಯಿಯನ್ನು ವಧಿಸಿ ಮನಸ್ಸಿನಲ್ಲಿ ಅತ್ಯಂತ ಸಂತಾಪಗೊಂಡು ನಿರ್ವೇದವನ್ನು ಹೊಂದಿದನು. ಅನಂತರ ಮಹಾತಪಸ್ವಿಯಾದ ಜಮದಗ್ನಿಯು ಪ್ರಸನ್ನನಾಗಿ ರೇಣುಕೆಯು ಮರಳಿ ಬದುಕುವಂತೆ ವರವನ್ನಿತ್ತನು. ಆದರಂತೆ ರೇಣುಕೆಯು ಬದುಕಿದರೂ ಪರಶುರಾಮನು ದಯೆಗೊಂಡು ಪ್ರಭಾಸಕ್ಷೇತ್ರವನ್ನು ಸೇರಿ ಲೋಕಗಳಿಗೆ ಕಲ್ಯಾಣವನ್ನು

ತಥಾಪಿ ಸಘೃಣೋ ದೇವಿ ಜಾಮದಗ್ನ್ಯೋ ಮಹಾಪ್ರಭುಃ ।
ಪ್ರಭಾಸಂ ಕ್ಷೇತ್ರಮಾಗತ್ಯ ತಪಶ್ಚಕ್ರೇ ತತೋಽದ್ಭುತಂ ॥ ೬ ॥
ಪ್ರತಿಷ್ಠಾಪ್ಯ ಮಹಾದೇವಂ ಶಂಕರಂ ಲೋಕಶಂಕರಂ ।
ದಿವ್ಯಂ ವರ್ಷಶತಂ ಸಾಗ್ರಂ ತತಸ್ತುಷ್ಟೋ ಮಹೇಶ್ವರಃ ॥ ೭ ॥
ದದೌ ತಸ್ಯೇಪ್ಸಿತಂ ಸರ್ವಂ ಸ್ವಯಂ ತತ್ರೈವ ಸಂಸ್ಥಿತಃ ।
ತತಃ ಕೃತಾರ್ಥತಾಂ ಪ್ರಾಪ್ತೋ ಜಾಮದಗ್ನ್ಯೋ ಮಹಾಋಷಿಃ ॥ ೮ ॥
ತ್ರಿಃಸಪ್ತಕೃತ್ವಃ ಪೃಥಿವೀಂ ಜಿತ್ವಾ ಹತ್ವಾ ಚ ಕ್ಷತ್ರಿಯಾನ್ ।
ಕೃತ್ವಾ ಪಂಚನದಂ ತತ್ರ ಕುರುಕ್ಷೇತ್ರೇ ಮಹಾಮನಾಃ ॥ ೯ ॥
ರಕ್ತೈಃ ಸಂಪೂರ್ಣತಾಂ ನೀತ್ವಾ ಕ್ಷತ್ರಿಯಾಣಾಂ ವರಾನನೇ ।
ಆನೃಣ್ಯಂ ಸಮನುಪ್ರಾಪ್ತಃ ಪಿತೄಣಾಂ ಯೋ ಮಹಾಬಲಃ ॥ ೧೦ ॥
ಏವಂ ಕ್ಷತ್ರಾಂತಕಂ ಕೃತ್ವಾ ದತ್ವಾ ವಿಪ್ರೇಷು ಮೇದಿನೀಂ ।
ಕೃತಾರ್ಥತಾಮನುಪ್ರಾಪ್ತಸ್ತ್ರೈಲೋಕ್ಯೇ ಖ್ಯಾತಪೌರುಷಃ ॥ ೧೧ ॥
ತೇನ ತತ್ ಸ್ಥಾಪಿತಂ ಲಿಂಗಂ ಕ್ಷೇತ್ರೇ ಪ್ರಾಭಾಸಿಕೇ ಶುಭೇ ।
ಯಸ್ತಂ ಪೂಜಯತೇ ಭಕ್ತ್ಯಾ ಪಾಪಯುಕ್ತೋಽಪಿ ಮಾನವಃ ।
ಸ ಮುಕ್ತಃ ಪಾತಕೈಃ ಸರ್ವೈರ್ಯಾತಿ ಲೋಕಮುಮಾಪತೇಃ ॥ ೧೨ ॥

ದಯಪಾಲಿಸುವ ಮಹೇಶ್ವರನನ್ನು ಪ್ರತಿಷ್ಠೆಮಾಡಿ ನೂರು ದಿವ್ಯವರ್ಷಗಳಕಾಲ ಅದ್ಭುತ ತಪಸ್ಸನ್ನಾಚರಿಸಿದನು. ಬಳಿಕ ಅವನ ತಪಸ್ಸಿಗೆ ಮೆಚ್ಚಿದ ಮಹಾದೇವನು ಅವನ ಅಭೀಪ್ಸಿತವನ್ನೆಲ್ಲ ದಯಗೈದನು. ಪರುಶುರಾಮನು ಧನ್ಯನಾಗಿ ಅಲ್ಲಿಯೇ ವಾಸಿಸುತ್ತ ಇಪ್ಪತ್ತೊಂದುಸಾರಿ ಭೂಮಿಯನ್ನು ಜಯಿಸಿ ಕ್ಷತ್ರಿಯರನ್ನು ಕೊಂದು ಆ ಕುರುಕ್ಷೇತ್ರದಲ್ಲಿ ಐದು ನದಿಗಳನ್ನು ರಚಿಸಿ ಅವುಗಳನ್ನು ಕ್ಷತ್ರಿಯರ ರಕ್ತದಿಂದ ತುಂಬಿ ಪಿತೃತರ್ಪಣಮಾಡಿ ಪಿತೃಋಣದಿಂದ ಮುಕ್ತನಾದನು.

೧೧. ಹೀಗೆ ಕ್ಷತ್ರಿಯರನ್ನು ಸಂಹರಿಸಿ ಭೂಮಿಯನ್ನು ವಿಪ್ರರಿಗೆ ದಾನಗೈದು ಕೃತಕೃತ್ಯನಾಗಿ ಆ ಪರಶುರಾಮನು ಮೂರುಲೋಕಗಳಲ್ಲಿ ಪ್ರಖ್ಯಾತಪರಾಕ್ರಮವುಳ್ಳವನಾದನು.

೧೨. ಆದುದರಿಂದ ಆತ ಪ್ರಾಭಾಸಿಕಕ್ಷೇತ್ರದಲ್ಲಿ ಪ್ರತಿಷ್ಠೆಮಾಡಿದ ಆ ಶಿವಲಿಂಗವನ್ನು ಭಕ್ತಿಯಿಂದ ಪೂಜಿಸಿದ ಮಾನವನು ಪಾಪಿಯಾದರೂ ಸಕಲ ಪಾಪಮುಕ್ತನಾಗಿ ಶಿವಲೋಕವನ್ನು ಸೇರುವನು.

ಜ್ಯೇಷ್ಠಕೃಷ್ಣಚತುರ್ದಶ್ಯಾಂ ಜಾಗ್ರಯಾತ್ತತ್ರ ಯೋ ನರಃ ।
ಸೋಽಶ್ವಮೇಧಫಲಂ ಪ್ರಾಪ್ಯ ಮೋದತೇ ದಿವಿ ದೇವವತ್ ॥ ೧೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಾಮದಗ್ನ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
ಏಕವಿಂಶತ್ಯುತ್ತರಶತತಮೋಽಧ್ಯಾಯಃ

---

೧೩. ಜ್ಯೇಷ್ಠ ಕೃಷ್ಣ ಚತುರ್ದಶೀಯ ದಿನ ಅಲ್ಲಿ ಜಾಗರಣೆಮಾಡಿದ ಮನುಷ್ಯನು ಅಶ್ವಮೇಧಯಾಗದ ಫಲವನ್ನು ಹೊಂದಿ ದೇವಲೋಕದಲ್ಲಿ ದೇವತೆಗಳಂತೆ ಸಂತೋಷ ಪಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಾಮದಗ್ನ್ಯೇಶ್ವರಮಾಹಾತ್ಮ್ಯವರ್ಣನವೆಂಬ
ನೂರಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾವಿಂಶತ್ಯುತ್ತರಶತತಮೋಽಧ್ಯಾಯಃ

ಚಿತ್ರಾಂಗದೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಚಿತ್ರಾಂಗದೇಶ್ವರಂ ।
ತಸ್ಯೈವ ನೈರ್ಋತೇ ಭಾಗೇ ಧನುರ್ವಿಂಶತಿಭಿಃ ಸ್ಥಿತಂ ॥ ೧ ॥
ಚಿತ್ರಾಂಗದೇನ ದೇವೇಶಿ ಗಂಧರ್ವಪತಿನಾ ಪ್ರಿಯೇ ।
ಕ್ಷೇತ್ರಂ ಪವಿತ್ರಂ ಜ್ಞಾತ್ವಾ ವೈ ಲಿಂಗಂ ತತ್ರ ಪ್ರತಿಷ್ಠಿತಂ ।
ಕೃತ್ವಾ ತಪೋ ಮಹಾಘೋರಂ ಸಮಾರಾಧ್ಯ ಮಹೇಶ್ವರಂ ॥ ೨ ॥
ಅಥ ಯೋ ಭಾವಸಂಯುಕ್ತಸ್ತಲ್ಲಿಂಗಂ ಸಂಪ್ರಪೂಜಯೇತ್ ।
ಗಾಂಧರ್ವಲೋಕಮಾಪ್ನೋತಿ ಗಂಧರ್ವೈಃ ಸಹ ಮೋದತೇ ॥ ೩ ॥

ಕನ್ನಡದ ಅನುವಾದ

ಚಿತ್ರಾಂಗದೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಆ ಜಾಮದಗ್ನ್ಯೇಶ್ವರನ ನೈರ್ಋತ್ಯದಿಕ್ಕಿನಲ್ಲಿ ಇಪ್ಪತ್ತು ಬಿಲ್ಲುಗಳ ದೂರದಲ್ಲಿರುವ ಚಿತ್ರಾಂಗದೇಶ್ವರನೆಂಬ ಲಿಂಗದೆಡೆಗೆ ಹೋಗಬೇಕು.

೨. ದೇವೇಶಿ ! ಗಂಧರ್ವರಾಜನಾದ ಚಿತ್ರಾಂಗದನು ಆ ಪ್ರಭಾಸವನ್ನು ಪವಿತ್ರ ಕ್ಷೇತ್ರವೆಂದರಿತು ಘೋರತಪಸ್ಸಿನಿಂದ ಮಹೇಶ್ವರನನ್ನಾರಾಧಿಸಿ ಶಿವಲಿಂಗವನ್ನಲ್ಲಿ ಪ್ರತಿಷ್ಠೆಮಾಡಿದನು.

೩. ಆ ಲಿಂಗವನ್ನು ಭಕ್ತಿಯಿಂದ ಪೂಜಿಸಿದವನು ಗಂಧರ್ವಲೋಕವನ್ನು ಸೇರಿ ಗಂಧರ್ವರೊಡನೆ ಸಮಸಮವಾಗಿ ಆನಂದಪಡುವನು.

ತತ್ರ ಶುಕ್ಲತ್ರಯೋದಶ್ಯಾಂ ಸಂಸ್ನಾಪ್ಯ ವಿಧಿನಾ ಶಿವಂ ।
ಪೂಜಯೇದ್ವಿವಿಧೈಃ ಪುಷ್ಪೈರ್ಗಂಧಧೂಪೈರನುಕ್ರಮಾತ್ ।
ಸ ಪ್ರಾಪ್ನೋತ್ಯಖಿಲಂ ಕಾಮಂ ಮನಸಾ ಯದ್ಯದೀಪ್ಸಿತಂ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಿತ್ರಾಂಗದೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವಾಂಶತ್ಯುತ್ತರಶತತಮೋಽಧ್ಯಾಯಃ ॥

---

೪. ಅಲ್ಲಿ ಶುಕ್ಲತ್ರಯೋದಶಿಯ ದಿನ ಶಿವನನ್ನು ವಿಧಿಯಿಂದ ಅಭಿಷೇಕಮಾಡಿ ನಾನಾಬಗೆಯ ಪುಷ್ಪ, ಗಂಧ, ಧೂಪಗಳಿಂದ ಪೂಜಿಸಿದವನು ಸಕಲೇಷ್ಟಾರ್ಥಗಳನ್ನೂ ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಿತ್ರಾಂಗದೇಶ್ವರಮಾಹಾತ್ಮ್ಯವರ್ಣನವೆಂಬ
ನೂರಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯೋವಿಂಶತ್ಯುತ್ತರಶತತಮೋಽಧ್ಯಾಯಃ

ರಾವಣೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ರಾವಣೇಶ್ವರಮುತ್ತಮಂ ।
ತಸ್ಮಾದ್ದಕ್ಷಿಣನೈರ್ಋತ್ಯೇ ಧನುಷಾಂ ಷೋಡಶೇ ಸ್ಥಿತಂ ॥ ೧ ॥
ಪ್ರತಿಷ್ಠಿತಂ ದಶಾಸ್ಯೇನ ಸರ್ವಪಾತಕನಾಶನಂ ।
ಪೌಲಸ್ತ್ಯೋ ರಾವಣೋ ದೇವಿ ರಾಕ್ಷಸಸ್ತು ಸುದಾರುಣಃ ॥ ೨ ॥
ತ್ರೈಲೋಕ್ಯವಿಜಯಾಕಾಂಕ್ಷೀ ಪುಷ್ಪಕೇಣ ಚಚಾರ ಹ ।
ಕಸ್ಯಚಿತ್ತ್ವಥ ಕಾಲಸ್ಯ ವಿಮಾನಂ ತಸ್ಯ ಪುಷ್ಪಕಂ ॥ ೩ ॥
ವ್ರಜದ್ವೈ ವ್ಯೋಮಮಾರ್ಗೇಣ ನಿಶ್ಚಲಂ ಸಹಸಾಽಭವತ್ ।
ಸ್ತಂಭಿತಂ ಪುಷ್ಪಕಂ ದೃಷ್ಟ್ವಾ ರಾವಣೋ ವಿಸ್ಮಯಾನ್ವಿತಃ ॥ ೪ ॥
ಪ್ರಹಸ್ತಂ ಪ್ರೇಷಯಾಮಾಸ ಕಿಮಿದಂ ವ್ರಜ ಮೇದಿನೀಂ ।
ಅಹತಾಽಸ್ಯ ಗತಿರ್ಯಸ್ಮಾತ್ ತ್ರೈಲೋಕ್ಯೇ ಸಚರಾಚರೇ ॥ ೫ ॥
ತತ್ಕಸ್ಮಾನ್ನಿಶ್ಚಲಂ ಜಾತಂ ವಿಮಾನಂ ಪುಷ್ಪಕಂ ಮಮ ।
ಅಥಾಽಸೌ ಸತ್ವರೋ ದೇವಿ ಜಗಾಮ ವಸುಧಾತಲೇ ॥ ೬ ॥

ಕನ್ನಡದ ಅನುವಾದ

ರಾವಣೇಶ್ವರಮಾಹಾತ್ಮ್ಯವರ್ಣನ

೧-೬. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಚಿತ್ರಾಂಗದೇಶ್ವರನ ದಕ್ಷಿಣ ನೈರ್ಋತ್ಯದಿಕ್ಕಿನಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿ ರಾವಣನು ಪ್ರತಿಷ್ಠೆ ಮಾಡಿರುವ ಸಕಲ ಪಾಪಗಳನ್ನು ಪರಿಹರಿಸುವ ರಾವಣೇಶ್ವರನೆಡೆಗೆ ಹೋಗಬೇಕು. ಪುಲಸ್ತ್ಯನ ಮೊಮ್ಮಗನಾದ ರಾವಣನೆಂಬ ಕ್ರೂರ ರಾಕ್ಷಸನು ತ್ರೈಲೋಕವನ್ನು ಜಯಿಸಲಿಚ್ಛೆಯಿಂದ ಪುಷ್ಪಕವಿಮಾನದಿಂದ ಸಂಚರಿಸುತ್ತಿದ್ದನು. ಒಂದಾನೊಂದು ದಿನ ಆಕಾಶದಲ್ಲಿ ಸಂಚರಿಸುತ್ತಿದ್ದ ಆ ಪುಷ್ಪಕವಿಮಾನವು ಇದ್ದಕ್ಕಿದ್ದಂತೆ ಚಲಿಸದೆ ನಿಂತಿತು. ಆಗ ರಾವಣನು ಸ್ತಬ್ಧವಾದ ವಿಮಾನವನ್ನು ಕಂಡು ನನ್ನ ಈ ವಿಮಾನವು ಮೂರುಲೋಕದಲ್ಲಿ ತಡೆಯಿಲ್ಲದೆ ಸಂಚರಿಸತಕ್ಕದು. ಈಗ ಇದು ಯಾವ ಕಾರಣದಿಂದ ನಿಶ್ಚಲವಾಯಿತು ಎಂಬುದನ್ನು ತಿಳಿದುಕೊಂಡುಬಾ ಎಂದು ಹೇಳಿ ಪ್ರಹಸ್ತನನ್ನು ಭೂಮಿಗೆ ಕಳುಹಿಸಿದನು. ಆ ಪ್ರಹಸ್ತನು ಜಾಗ್ರತೆಯಾಗಿ ಭೂಮಿಗಿಳಿದುಬಂದನು.

ಅಪಶ್ಯದ್ದೇವದೇವೇಶಂ ಶ್ರೀಸೋಮೇಶಂ ಮಹಾಪ್ರಭಂ ।
ಸ್ತೂಯಮಾನಂ ಸುರಗಣೈಃ ಶತಶೋಽಥ ಸಹಸ್ರಶಃ ॥ ೭ ॥
ತಂ ದೃಷ್ಟ್ವಾ ರಾಕ್ಷಸೇಂದ್ರಾಯ ತತ್ಸರ್ವಂ ವಿಸ್ತರಾತ್ಪ್ರಿಯೇ ।
ಪ್ರಹಸ್ತಃ ಕಥಯಾಮಾಸ ಯದ್ದೃಷ್ಟಂ ಕ್ಷೇತ್ರಮಧ್ಯತಃ ॥ ೮ ॥
ಪ್ರಹಸ್ತ ಉವಾಚ :—
ರಾಕ್ಷಸೇಶ ಮಹಾಬಾಹೋ ಶಿವಕ್ಷೇತ್ರಂ ನಿಜಂ ಪ್ರಭೋ ।
ಪ್ರಭಾಸೇತಿ ಸಮಾಖ್ಯಾತಂ ಗಣಗಂಧರ್ವಸೇವಿತಂ ॥ ೯ ॥
ತತ್ರ ಸೋಮೇಶ್ವರೋ ದೇವಃ ಸ್ವಯಂ ತಿಷ್ಠತಿ ಶಂಕರಃ ।
ಅಬ್ಭಕ್ಷೈರ್ವಾಯುಭಕ್ಷೈಶ್ಚ ದಂತೋಲೂಖಲಿಭಿಸ್ತಥಾ ।
ಋಷಿಭಿರ್ವಾಲಖಿಲ್ಯೈಶ್ಚ ಪೂಜ್ಯಮಾನಃ ಸಮಂತತಃ ॥ ೧೦ ॥
ಪ್ರಭಾವಾತ್ತಸ್ಯ ದೇವಸ್ಯ ನೇದಂ ಗಚ್ಛತಿ ಪುಷ್ಪಕಂ ।
ನ ಸ ಪ್ರಾಲಂಘ್ಯತೇ ದೇವೋ ಹ್ಯಲಂಘ್ಯೋ ಯಃ ಸುರಾಸುರೈಃ ॥ ೧೧ ॥
ಈಶ್ವರ ಉವಾಚ :—
ತಸ್ಯ ತದ್ವಚನಂ ಶ್ರುತ್ವಾ ವಿಸ್ಮಯೋತ್ಫುಲ್ಲಲೋಚನಃ ।
ಅವತೀರ್ಯ ಧರಾಪೃಷ್ಠಂ ಸೋಮೇಶಂ ಸಮಪಶ್ಯತ ॥ ॥ ೧೨ ॥

---

೭. ಅವನು ಸಾವಿರಾರು ಮಂದಿ ದೇವತೆಗಳಿಂದ ಸ್ತುತಿಸಲ್ಪಡುತ್ತಿರುವ ಅತಿಶಯಕಾಂತಿಯುಳ್ಳ ಆ ಸೋಮೇಶ್ವರನನ್ನು ಕಂಡನು.

೮. ಆ ಪ್ರಹಸ್ತನು ಕ್ಷೇತ್ರಮಧ್ಯದಲ್ಲಿ ತಾನು ಕಂಡುದುದನ್ನೆಲ್ಲ ಸಂಪೂರ್ಣವಾಗಿ ರಾವಣನಿಗೆ ತಿಳಿಸಿದನು.

೯. ಪ್ರಹಸ್ತನು ಹೇಳುತ್ತಾನೆ :—ಆಜಾನುಬಾಹುವೂ, ರಾಕ್ಷಸರೊಡೆಯನೂ ಆದ ಎಲೈ ರಾವಣನೆ! ಇಲ್ಲಿ ಗಣಗಂಧರ್ವರು ಸೇವಿಸುತ್ತಿರುವಪ್ರಭಾಸಕ್ಷೇತ್ರವಿರುವುದು.

೧೦. ಈ ಕ್ಷೇತ್ರದಲ್ಲಿ ಜಲಾಹಾರಿಗಳೂ, ವಾಯುವನ್ನು ಭಕ್ಷಿಸುವವರೂ, ಹಲ್ಲೆ ಒರಳಾಗುಳ್ಳವರೂ ಆದ ಮುನಿಗಳಿಂದಲೂ, ವಾಲಖಿಲ್ಯರಿಂದಲೂ ಪೂಜಿಸಲ್ಪಡುತ್ತಿರುವ ಸೋಮೇಶ್ವರನು ನೆಲೆಸಿರುವನು.

೧೧. ಅವನ ಮಾಹಾತ್ಮ್ಯದಿಂದ ಈ ಪುಷ್ಪಕವಿಮಾನವು ಚಲಿಸುವುದಿಲ್ಲ. ದೇವದಾನವರಿಂದ ಅತಿಕ್ರಮಿಸಲಶಕ್ಯನಾದ ಅವನನ್ನು ಉಲ್ಲಂಘಿಸಬಾರದು.

೧೨. ಈಶ್ವರನು ಹೇಳುತ್ತಾನೆ :—ರಾವಣನು ಆ ಪ್ರಹಸ್ತನ ಮಾತನ್ನು ಕೇಳಿ ಆಶ್ಚರ್ಯದಿಂದ ಅರಳಿದ ಕಣ್ಣುಗಳುಳ್ಳವನಾಗಿ ಭೂಮಿಗೆ ಇಳಿದು ಬಂದು ಸೋಮೇಶನನ್ನು ಕಂಡನು.

ಪೂಜಯಾಮಾಸ ದೇವೇಶಿ ಭಕ್ತ್ಯಾ ಪರಮಯಾ ಯುತಃ ।
ರತ್ನೈರ್ಬಹುವಿಧೈರ್ವಸ್ತ್ರೈರ್ಗಂಧಪುಷ್ಪಾನುಲೇಪನೈಃ ॥ ೧೩ ॥
ಅಥ ಪೌರಜನಾ ದೃಷ್ಟ್ವಾ ರಾವಣಂ ರಾಕ್ಷಸೇಶ್ವರಂ ।
ಸರ್ವದಿಕ್ಷು ವರಾರೋಹೇ ಭಯಾದ್ಭೀತಾಃ ಪ್ರದುದ್ರುವುಃ ॥ ೧೪ ॥
ಶೂನ್ಯಂ ಸಮಭವತ್ಸರ್ವಂ ಯತ್ರ ದೇವೋ ವ್ಯವಸ್ಥಿತಃ ।
ಏತಸ್ಮಿನ್ನೇವ ಕಾಲೇ ತು ವಾಗುವಾಚಾಶರೀರಿಣೀ ॥ ೧೫ ॥
ದಶಗ್ರೀವ ಮಹಾಬಾಹೋ ಅಯನೇ ಚೋತ್ತರೇ ತಥಾ ।
ಯಾತ್ರಾಕಾಲೇ ತು ದೇವಸ್ಯ ಸರ್ವಪಾಪಪ್ರಣಾಶನೇ ॥ ೧೬ ॥
ದೂರತಃ ಸಮನುಪ್ರಾಪ್ತಾ ಭೂರಿಲೋಕಾ ದ್ವಿಜಾತಯಃ ।
ರಾಕ್ಷಸಾನಾಂ ಭಯಾದ್ಭೀತಾಃ ಪ್ರಯಾಂತಿ ಹಿ ದಿಶೋ ದಶ ॥ ೧೭ ॥
ಭಯಾನ್ಮಾ ತ್ವಂ ರಾಕ್ಷಸೇಂದ್ರ ಯಾತ್ರಾವಿಘ್ನಕರೋ ಭವ ।
ಬಾಲ್ಯೇ ವಯಸಿ ಯತ್ಪಾಪಂ ವಾರ್ಧಕ್ಯೇ ಯೌವನೇಽಪಿ ಚ ।
ತತ್ಸರ್ವಂ ಕ್ಷಾಲಯೇನ್ಮರ್ತ್ಯೋ ದೃಷ್ಟ್ವಾ ಸೋಮೇಶ್ವರಂ ಪ್ರಭುಂ ॥೧೮॥

---

೧೩. ಅವನು ಅತಿಶಯಭಕ್ತಿಯಿಂದ ಆ ಸೋಮೇಶನನ್ನು ಬಹುವಿಧ ರತ್ನಗಳಿಂದಲೂ, ವಸ್ತ್ರಗಳಿಂದಲೂ, ಗಂಧ, ಪುಷ್ಪಾದಿಗಳಿಂದಲೂ ಲೇಪನ ದ್ರವ್ಯಗಳಿಂದಲೂ ಪೂಜಿಸಿದನು.

೧೪. ಪ್ರಿಯಳೆ ! ಬಳಿಕ ಪಟ್ಟಣಿಗರು, ರಾಕ್ಷಸರಾಜನಾದ ರಾವಣನನ್ನು ಕಂಡು ಭಯದಿಂದ ನಾನಾದಿಕ್ಕುಗಳಿಗೆ ಓಡಿಹೋದರು.

೧೫. ಆಗ ಆ ಕ್ಷೇತ್ರವು ಬರಿದಾಗಿ ಸೋಮೇಶನೊಬ್ಬನು ಮಾತ್ರ ಉಳಿದನು. ಈ ಸಮಯದಲ್ಲಿ ಅಶರೀರವಾಣಿಯಾಯಿತು.

೧೬–೧೭. "ದಶಕಂಠ ! ಸಕಲ ಪಾಪಗಳನ್ನು ನಾಶಗೊಳಿಸುವ ಸೋಮೇಶ್ವರನ ಯಾತ್ರಾಸಮಯವಾದ ಈ ಉತ್ತರಾಯಣದಲ್ಲಿ ದೂರದೇಶದಿಂದ ಬಂದ ಅನೇಕ ಬ್ರಾಹ್ಮಣರು ರಾಕ್ಷಸರಿಂದ ಭಯಗೊಂಡು ಹತ್ತು ದಿಕ್ಕುಗಳಿಗೆ ಓಡುತ್ತಿದ್ದಾರೆ.

೧೮. ರಾಕ್ಷಸೇಶ್ವರ ! ನೀನು ಜನರ ಯಾತ್ರೆಗೆ ವಿಘ್ನವನ್ನುಂಟುಮಾಡಬೇಡ. ಜನರು ಬಾಲ್ಯ, ಯೌವನ, ವಾರ್ಧಕ್ಯಗಳಲ್ಲಿ ಸಗಿದ ಪಾಪವನ್ನು ಸೋಮೇಶ್ವರನ ದರ್ಶನದಿಂದ ಪರಿಹರಿಸಿಕೊಳ್ಳಲಿ."

ತತೋಽಸೌ ರಾಕ್ಷಸೇಂದ್ರಸ್ತು ಗತ್ವೈಕಾಂತೇ ಸುಗಹ್ವರೇ ।
ಲಿಂಗಂ ಚ ಸ್ಥಾಪಯಾಮಾಸ ಭಕ್ತ್ಯಾ ಪರಮಯಾ ಯುತಃ ॥ ೧೯ ॥
ತತಸ್ತನ್ನಿರತೋ ಭೂತ್ವಾ ಸರ್ವೈಸ್ತೈ ರಾಕ್ಷಸೇಶ್ವರಃ ।
ಪೂಜಯಾಮಾಸ ದೇವೇಶಿ ಉಪವಾಸಪರಾಯಣಃ ॥ ೨೦ ॥
ಚಕಾರ ಪುರತಸ್ತಸ್ಯ ಗೀತವಾದ್ಯೇನ ಜಾಗರಂ ।
ತತೋಽರ್ಧರಾತ್ರಸಮಯೇ ವಾಗುವಾಚಾಶರೀರಿಣೀ ॥ ೨೧ ॥
ದಶಗ್ರೀವ ಮಹಾಬಾಹೋ ಪರಿತುಷ್ಟೋಽಸ್ಮಿ ತೇಽನಘ ।
ಮಮ ಪ್ರಸಾದಾತ್ತ್ರೈಲೋಕ್ಯಂ ವಶಗಂ ತೇ ಭವಿಷ್ಯತಿ ॥
ಅತ್ರ ಸಂನಿಹಿತೋ ನಿತ್ಯಂ ಸ್ಥಾಸ್ಯಾಮ್ಯಹಮಸಂಶಯಂ ॥ ೨೨ ॥
ಯೇ ಚೈತತ್ಪೂಜಯಿಷ್ಯಂತಿ ಲಿಂಗಂ ಭಕ್ತಿಯುತಾ ನರಾಃ ।
ಅಜೇಯಾಸ್ತೇ ಭವಿಷ್ಯಂತಿ ಶತ್ರೂಣಾಂ ರಾಕ್ಷಸೇಶ್ವರ ॥ ೨೩ ॥
ಯಾಸ್ಯಂತಿ ಪರಮಾಂ ಸಿದ್ಧಿಂ ಮತ್ಪ್ರಸಾದಾದಸಂಶಯಂ ।
ಏವಮುಕ್ತ್ವಾ ವರಾರೋಹೇ ವಿರರಾಮ ವೃಷಧ್ವಜಃ ॥ ೨೪ ॥

---

೧೯. ಬಳಿಕ ರಾವಣನು ಅಲ್ಲಿಂದ ಹೊರಟು ರಹಸ್ಯವಾದೊಂದು ಗುಹೆಯಲ್ಲಿ ಅತಿಶಯವಾದ ಭಕ್ತಿಯಿಂದ ಶಿವಲಿಂಗವನ್ನು ಪ್ರತಿಷ್ಠೆಮಾಡಿದನು.

೨೦. ಅನಂತರ ಆತನೂ ಎಲ್ಲ ರಾಕ್ಷಸರೊಡನೆ ಆಸಕ್ತಿಯಿಂದ ಉಪವಾಸ ಮಾಡಿ ಆ ಲಿಂಗವನ್ನು ಪೂಜಿಸಿದನು.

೨೧. ಆ ಲಿಂಗದ ಮುಂದೆ ಗೀತವಾದ್ಯಗಳಿಂದ ಜಾಗರಣೆ ಮಾಡಿದನು. ಬಳಿಕ ಅರ್ಧರಾತ್ರಿ ಸಮಯದಲ್ಲಿ ಅಶರೀರವಾಣಿಯಾಯಿತು.

೨೨. "ದಶಕಂಠ! ನಾನು ನಿನಗೆ ಮೆಚ್ಚಿರುವೆನು. ನನ್ನ ಅನುಗ್ರಹದಿಂದ ನಿನಗೆ ಮೂರು ಲೋಕಗಳೂ ಅಧೀನವಾಗುವುವು. ನಾನು ನಿಶ್ಚಯವಾಗಿಯೂ ಈ ಲಿಂಗದಲ್ಲಿ ಯಾವಾಗಲೂ ಸನ್ನಿಹಿತನಾಗಿರುವೆನು.

೨೩–೨೪. ಭಕ್ತಿಯಿಂದ ಈ ಲಿಂಗವನ್ನು ಪೂಜಿಸಿದ ಮಾನವನು ಶತ್ರುಗಳಿಗೆ ಅಜೇಯರಾಗುವರು. ಅವರು ನನ್ನ ಅನುಗ್ರಹದಿಂದ ಉತ್ತಮ ಸಿದ್ಧಿಯನ್ನು ಪಡೆಯುವರು" ಹೀಗೆಂದು ನುಡಿದು ಮಹೇಶ್ವರನು ಸುಮ್ಮನಾದನು.

ರಾವಣೋಽಪಿ ಸು ಸಂತುಷ್ಟೋ ಭೂಯೋ ಭೂಯೋ ಮಹೇಶ್ವರಂ ।
ಪೂಜಯಿತ್ವಾ ಚ ತಲ್ಲಿಂಗಂ ಸಮಾರುಹ್ಯ ಚ ಪುಷ್ಪಕಂ ।
ತ್ರೈಲೋಕ್ಯವಿಜಯಾಕಾಂಕ್ಷೀ ಇಷ್ಟಂ ದೇಶಂ ಜಗಾಮ ಹ ॥ ೨೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರಾವಣೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಯೋವಿಂಶತ್ಯುತ್ತರಶತತಮೋಽಧ್ಯಾಯಃ ॥

---

೨೫. ರಾವಣನೂ ಸಂತುಷ್ಟನಾಗಿ ಪುನಃ ಪುನಃ ಆ ಲಿಂಗವನ್ನು ಪೂಜಿಸಿ ಪುಷ್ಪಕ ವಿಮಾನವನ್ನೇರಿ ಮೂರು ಲೋಕಗಳ ಜಯದ ಅಪೇಕ್ಷೆಯಿಂದ ತನಗಿಷ್ಟವಾದ ದೇಶಕ್ಕೆ ತೆರಳಿದನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ರಾವಣೇಶ್ವರಮಾಹಾತ್ಮ್ಯವರ್ಣನವೆಂಬ
ನೂರಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ವಿಂಶತ್ಯುತ್ತರಶತತಮೋಽಧ್ಯಾಯಃ

ಸೌಭಾಗ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗೌರೀಂ ಸೌಭಾಗ್ಯದಾಯಿನೀಂ ।
ಪಶ್ಚಿಮೇ ರಾವಣೇಶಸ್ಯ ಧನುಷಾಂ ಪಂಚಕೇ ಸ್ಥಿತಾಂ ॥ ೧ ॥
ಯತ್ರಾತಪ್ಯತ್ತಪೋ ಘೋರಂ ಸ್ವಯಂ ದೇವೀ ಹ್ಯರುಂಧತೀ ।
ಸೌಭಾಗ್ಯಂ ಕಾಂಕ್ಷಮಾಣಾ ಸಾ ಗೌರೀಪೂಜಾಪರಾಯಣಾ ॥ ೨ ॥
ಸಂಪ್ರಾಪ್ತಾ ಪರಮಾಂ ಸಿದ್ಧಿಂ ತಸ್ಯಾ ದೇವ್ಯಾ ಪ್ರಭಾವತಃ ।
ತೃತೀಯಾಯಾಂ ಶುಕ್ಲಪಕ್ಷೇ ಮಾಘೇ ಮಾಸಿ ವರಾನನೇ ॥ ೩ ॥
ಯಸ್ತಾಂ ಪೂಜಯತೇ ಭಕ್ತ್ಯಾ ಸ ಸೌಭಾಗ್ಯಮವಾಪ್ನುಯಾತ್ ।
ಅನ್ಯಜನ್ಮನಿ ದೇವೇಶಿ ನಾತ್ರ ಕಾರ್ಯಾ ವಿಚಾರಣಾ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಸೌಭಾಗ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುರ್ವಿಂಶತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಸೌಭಾಗ್ಯೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ರಾವಣೇಶ್ವರನ ಪಶ್ಚಿಮದಲ್ಲಿ ಐದು ಬಿಲ್ಲುಗಳ ದೂರದಲ್ಲಿರುವ ಸೌಭಾಗ್ಯಪ್ರದೆಯಾದ ಗೌರಿಯ ಸನ್ನಿಧಿಗೆ ಹೋಗಬೇಕು.

೨–೪. ಅಲ್ಲಿ ಅರುಂಧತೀ ದೇವಿಯು ಸೌಭಾಗ್ಯದ ಅಪೇಕ್ಷೆಯಿಂದ ಗೌರಿಯನ್ನು ಪೂಜಿಸುತ್ತ ಘೋರತಪಸ್ಸನ್ನಾಚರಿಸಿ ಆ ದೇವಿಯ ಪ್ರಭಾವದಿಂದ ಉತ್ತಮ ಸಿದ್ಧಿಯನ್ನು ಹೊಂದಿದಳು. ಪ್ರಿಯಳೆ! ಮಾಘಮಾಸದ ಶುಕ್ಲಪಕ್ಷದ ತದಿಗೆಯ ದಿನ ಭಕ್ತಿಯಿಂದ ಆ ಗೌರಿಯನ್ನರ್ಚಿಸಿದವನು ಈ ಜನ್ಮದಲ್ಲಿ ಸೌಭಾಗ್ಯವನ್ನು ಪಡೆಯುವನು. ಈ ವಿಷಯದಲ್ಲಿ ವಿಚಾರವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಸೌಭಾಗ್ಯೇಶ್ವರಮಾಹಾತ್ಮ್ಯವರ್ಣನವೆಂಬ ನೂರಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚವಿಂಶತ್ಯುತ್ತರಶತತಮೋಽಧ್ಯಾಯಃ

ಪೌಲೋಮೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾಲಿಂಗಂ ಮಹಾದೇವಿ ಸುರಪ್ರಿಯಂ ।
ರಾವಣೇಶ್ವರವಾಯವ್ಯೇ ಧನುಷಾಂ ತ್ರಿಂಶಕೇಽಂತರೇ ॥ ೧ ॥
ಸ್ಥಿತಂ ಕಾಮಪ್ರದಂ ಲಿಂಗಂ ಸರ್ವಪಾತಕನಾಶನಂ ।
ಪೌಲೋಮೀಶ್ವರನಾಮಾಢ್ಯಂ ಪೌಲೋಮ್ಯಾ ಸಂಪ್ರತಿಷ್ಠಿತಂ ॥ ೨ ॥
ತಾರಕೇಣ ಯದಾ ಧ್ವಸ್ತಾಸ್ತ್ರಿದಶಾಃ ಸಂಗರೇ ಸ್ಥಿತಾಃ ।
ತ್ರೈಲೋಕ್ಯಂ ವಿಹೃತಂ ಸರ್ವಂ ಸ್ವಯಮಿಂದ್ರತ್ವಮಾಗತಃ ॥ ೩ ॥
ತದಾ ಶಕ್ರಃ ಸುದುಃಖಾರ್ತೋ ಭಯೋದ್ವಿಗ್ನೋ ನನಾಶ ವೈ ।
ತದಾ ತದ್ಭಾರ್ಯಯಾ ದೇವಿ ಇಂದ್ರಾಣ್ಯಾ ಶೋಕಕರ್ಷಯಾ ॥ ೪ ॥
ಇಂದ್ರಸ್ಯ ಜಯಮಿಚ್ಛಂತ್ಯಾ ಶಂಭುರಾರಾಧಿತಸ್ತಯಾ ।
ತತಸ್ತುಷ್ಟೋ ಮಹಾದೇವಸ್ತಾಮುವಾಚ ಶುಭೇಕ್ಷಣಾಂ ॥ ೫ ॥

ಕನ್ನಡದ ಅನುವಾದ

ಪೌಲೋಮೀಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ರಾವಣೇಶ್ವರನ ವಾಯವ್ಯ ದಿಕ್ಕಿನಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿರುವ ಪೌಲೋಮಿಯು ಪ್ರತಿಷ್ಠೆ ಮಾಡಿರುವ ಸಕಲ ಪಾಪಗಳನ್ನು ಪರಿಹರಿಸುವ ಪೌಲೋಮೀಶ್ವರವೆಂಬ ಮಹಾಲಿಂಗ ದೆಡೆಗೆ ಹೋಗಬೇಕು.

೩. ತಾರಕಾಸುರನು ಸಮರದಲ್ಲಿ ದೇವತೆಗಳನ್ನು ಗೆದ್ದು ತಾನೇ ಇಂದ್ರನಾಗಿ ಮೂರು ಲೋಕಗಳಲ್ಲಿ ವಿಹರಿಸಿದನು.

೪–೫. ಆಗ ಇಂದ್ರನು ದುಃಖಗೊಂಡು ಭಯದಿಂದ ಅಡಗಿಹೋದನು. ಅವನ ಪತ್ನಿಯಾದ ಇಂದ್ರಾಣಿಯು ದುಃಖಗೊಂಡು ಕ್ಷೀಣಳಾಗಿ ಪತಿಗೆ ಜಯವನ್ನು ಇಚ್ಛಿಸುತ್ತ ಮಹೇಶ್ವರನನ್ನು ಪೂಜಿಸಿದಳು. ಅನಂತರ ಸಂತುಷ್ಟನಾದ ಮಹೇಶ್ವರನು ಅವಳನ್ನು ಕುರಿತು ಇಂತೆಂದನು.

ಭಗವಾನುವಾಚ :—

ಉತ್ಪತ್ಸ್ಯತಿ ಸುತೋಽಸ್ಮಾಕಂ ಷಣ್ಮುಖಸ್ತು ಮಹಾಬಲಃ ।
ತಾರಕಂ ದೈತ್ಯರಾಜಾನಂ ಸ ಚೈನಂ ಘಾತಯಿಷ್ಯತಿ ॥ ೬ ॥
ಗಚ್ಛ ತ್ವಂ ವಿಜ್ವರಾ ಭೂತ್ವಾ ಶೃಣು ಭೂಯೋ ವಚಶ್ಚ ಮೇ ॥ ೭ ॥
ಅತ್ರ ಸ್ಥಿತಮಿದಂ ಲಿಂಗಂ ಯೋಽಸ್ಮಾಕಂ ಪೂಜಯಿಷ್ಯತಿ ।
ಸ ನೂನಂ ಮೇ ಗಣೋ ಭೂತ್ವಾ ಮತ್ಸಕಾಶಮುಪೇಷ್ಯತಿ ॥ ೮ ॥
ಏವಮುಕ್ತ್ವಾ ಗತಾ ಸಾಧ್ವೀ ದೇವರಾಡ್ಯತ್ರ ಸಂಸ್ಥಿತಃ ।
ಸರ್ವದುಃಖವಿನಿರ್ಮುಕ್ತಾ ಸರ್ವದೈತ್ಯಭಯೋಜ್ಝಿತಾ ॥ ೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪೌಲೋಮೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚವಿಂಶತ್ಯುತ್ತರಶತತಮೋಽಧ್ಯಾಯಃ ॥

೬–೭. ಈಶ್ವರನು ಹೇಳುತ್ತಾನೆ :—ನಮಗೆ ಅತಿ ಬಲಿಷ್ಠನಾದ ಷಣ್ಮುಖನೆಂಬ ಪುತ್ರನು ಜನಿಸುವನು. ಅವನು ದೈತ್ಯರಾಜನಾದ ತಾರಕಾಸುರನನ್ನು ಕೊಲ್ಲುವನು. ನೀನು ವ್ಯಥೆಯಿಲ್ಲದವಳಾಗಿ ಹೋಗು. ಅಲ್ಲದೆ ನನ್ನೀ ಮಾತನ್ನು ಕೇಳು.

೮. ಇಲ್ಲಿರುವ ನನ್ನ ಲಿಂಗವನ್ನು ಪೂಜಿಸಿದವನು ನಿಶ್ಚಯವಾಗಿಯೂ, ಗಣನಾಗಿ ನನ್ನ ಸಾನ್ನಿಧ್ಯವವನ್ನು ಪಡೆಯುವನು.

೯. ಮಹೇಶ್ವರನು ಹೀಗೆನ್ನಲು ಪತಿವ್ರತೆಯಾದ ಶಚಿಯು ದುಃಖರಹಿತಳಾಗಿ, ದೈತ್ಯರ ಭಯವಿಲ್ಲದೆ ತನ್ನ ಪತಿಯಾದ, ದೇವೇಂದ್ರನೆಡೆಗೆ ಹೋದಳು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪೌಲೋಮೀಶ್ವರಮಾಹಾತ್ಮ್ಯವರ್ಣನವೆಂಬ
ನೂರಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.